
ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಅನುಶಾಸನಪರ್ವ
ಅಶ್ವಮೇಧಿಕ ಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೩೦

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 30

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

III

ವಿನಮ್ರವಚನಗಳು

ಪರಮಕಾರುಣಿಕನಾದ ಭಗವಂತನ ದಿವ್ಯಾನುಗ್ರಹದಿಂದಲೂ, ದಯಾಮಯನಾದ ಗುರುಭಗವಂತನ ದಿವ್ಯಾಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಪ್ರಕಟವಾಗುತ್ತಿರುವ ಶ್ರೀಮನ್ಮಹಾಭಾರತದ ಮೂವತ್ತನೆಯ ಸಂಪುಟರೂಪವಾದ ದಿವ್ಯ ಕುಸುಮವನ್ನು ಅವನ ಪಾದಾರವಿಂದಗಳಲ್ಲಿ ಅರ್ಪಿಸಿ ಪ್ರಸಾದರೂಪವಾದ ಇದನ್ನೇ ಪ್ರಿಯಗ್ರಾಹಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ.

ಮೂವತ್ತನೆಯ ಸಂಪುಟವು ಐತಿಹ್ಯವುಳ್ಳ ಸಂಪುಟ. ಅನೇಕ ಗ್ರಾಹಕರು ಈ ಮೂವತ್ತನೆಯ ಸಂಪುಟಕ್ಕೆ ಮಹಾಭಾರತವು ಮುಗಿಯುತ್ತ ದೆಂದೇ ಭಾವಿಸಿದ್ದಾರೆ. ಮೊದಲಿನಿಂದಲೂ 'ಮೂವತ್ತು ಸಂಪುಟಗಳಲ್ಲಿ ಶ್ರೀಮನ್ಮಹಾಭಾರತ'–ಎಂದು ಪ್ರಚಾರಮಾಡುತ್ತಲೇ ಇರುವುದರಿಂದ ಈ ಸಂಪುಟದಲ್ಲಿಯೇ ಮಹಾಭಾರತವು ಮುಗಿಯುವುದೆಂದು ಭಾವಿಸುವುದು ಸ್ವಾಭಾವಿಕವಾಗಿಯೇ ಇದೆ. ಇನ್ನೆರಡು ಸಂಪುಟಗಳಲ್ಲಿ ಮಹಾಭಾರತವು ಮುಗಿಯುತ್ತದೆ. ಈ ವಿಷಯವನ್ನು ಪ್ರಿಯವಾಚಕರು ಗಮನಿಸಬೇಕಾಗಿ ಪ್ರಾರ್ಥಿಸುತ್ತೇವೆ. ಮಹಾಭಾರತವನ್ನು ಪ್ರಾರಂಭಿಸುವಾಗ ಅನೇಕ ಗ್ರಾಹ ಕರು ಮೂವತ್ತು ಸಂಪುಟಗಳ ಪೂರ್ಣಮಾಲೆಯು ಮುಗಿಯುವುದೇ?- ಎಂದು ಭಾವಿಸಿದುದು ಉಂಟು. ಆ ಸಮಯದಲ್ಲಿ ಜನರಲ್ಲಿ ಒಂದು ವಿಧವಾದ ನಂಬಿಕೆಹುಟ್ಟಲು ನೆರವಾದವರೆಂದರೆ ಕೆನರಾಬ್ಯಾಂಕಿನವರು. ಆಗ ಜನರಲ್ ಮ್ಯಾನೇಜರ್ ಆಗಿದ್ದ ಶ್ರೀ ಯು. ಕೃಷ್ಣಕಿಣಿಯವರು ಇದಕ್ಕೊಂದು ಸಾಲದ ಯೋಜನೆಯನ್ನು ಸಿದ್ಧಗೊಳಿಸಿ ಕಾರ್ಯರೂಪಕ್ಕೆ ತಂದರು. ಕೆನರಾಬ್ಯಾಂಕಿನಲ್ಲಿಯೂ ಸಾಧ್ಯವಾದಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ಅನಂತರ ಸಿಂಡಿಕೇಟ್, ಕರ್ಣಾಟಕ, ಕಾರ್ಪೋರೇಷನ್, ನ್ಯಾಷನಲ್ ಕೋ-ಆಪರೇಟಿವ್, ಸರ್ ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕಿನವರೂ ಕೆನರಾ ಬ್ಯಾಂಕಿನ ಸಾಲದ ವ್ಯವಸ್ಥೆಯನ್ನೇ ಅನುಸರಿಸಿ ಸಾಲದ ಯೋಜನೆಯನ್ನು ಜಾರಿಗೆ ತಂದರು. ಮಹಾಭಾರತವನ್ನು ತೆಗೆದುಕೊಳ್ಳಲು ಇದರಿಂದ ಸಾವಿರಾರು ಮಂದಿಗೆ ಅನುಕೂಲವಾಯಿತು. ದಯಾಮಯನಾದ ಪರಮಾತ್ಮನ ದಯೆಯಿಂದ ಈ ಸಂಪುಟದೊಡನೆ ನಾವು ಬ್ಯಾಂಕಿ ನವರು ಜವಾಬ್ದಾರಿಯನ್ನು ಸುಮಾರು ಎಂಭತ್ತು ಪಾಲು ಕಡಿಮೆ ಮಾಡಿ

ದ್ದೇವೆ. ಇತ್ತೀಚೆಗೆ ಬ್ಯಾಂಕಿನಮೂಲಕ ಗ್ರಾಹಕರಾದವರಿಗೆ ಕೆಲವು ಸಂಪುಟ ಗಳನ್ನು ಕೊಡಬೇಕಾಗಿದೆ. ಪರಮಾತ್ಮನ ದಯೆಯಿಂದ ಅದೂ ಸಾಧ್ಯವಾಗು ವುದೆಂಬ ಭರವಸೆಯನ್ನು ಕೊಡುತ್ತೇವೆ. ಅವನ ಅಭಯಹಸ್ತವಿರುವುದ ರಿಂದಲೇ ಅನೇಕ ಎಡರು-ತೊಡರುಗಳನ್ನು ದಾಟಿ ಮುಂದುವರಿಯಲು ಸಾಧ್ಯವಾಗಿದೆ. ಈ ಸಮಯದಲ್ಲಿ ಎಲ್ಲ ಬ್ಯಾಂಕುಗಳ ಮುಖ್ಯಾಧಿಕಾರಿಗಳಿಗೂ ನಮ್ಮ ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಮುಂದೆಯೂ ಕೂಡ ಮಹಾಭಾರತಕ್ಕೆ ಶಾಶ್ವತವಾದ ಸಾಲದಯೋಜನೆಯೊಂದನ್ನು ಇಟ್ಟುಕೊಳ್ಳ ಬೇಕೆಂಬುದು ನಮ್ಮ ಪ್ರಾರ್ಥನೆಯಾಗಿದೆ. ಆ ಬಗ್ಗೆ ವ್ಯವಹರಿಸಲು ಆಲೋಚಿಸಿದ್ದೇವೆ. 31-12-1984 ಕ್ಕೆ ಈ ಸಾಲದಯೋಜನೆಯು ಬ್ಯಾಂಕುಗಳಲ್ಲಿ ಸ್ಥಗಿತಗೊಂಡಿದೆ. ನಾವು ಕೂಡ ಅನಿವಾರ್ಯವಾಗಿ ಪೂರ್ಣಮಾಲೆಯ ಚಂದಾಹಣವನ್ನು ಸ್ವಲ್ಪ ಹೆಚ್ಚಿಸಿದ್ದೇವೆ. ಬಿಡಿಪ್ರತಿಗಳ ಬೆಲೆಯನ್ನು ಒಂದು ರೂ. ನಂತೆ ಹೆಚ್ಚಿಸಿದ್ದರೂ ಪೂರ್ಣಮಾಲೆಯ ಚಂದಾ ಹಣವನ್ನು 1-1-81 ರಿಂದ ಹೆಚ್ಚಿಸಿಲ್ಲ. ಬಿಡಿ ಸಂಪುಟದಬೆಲೆ ಹದಿಮೂರು ರೂ.ಗಳಿದ್ದರೆ ಪೂರ್ಣಮಾಲೆಯ ಗ್ರಾಹಕರಿಗೆ ಒಂಬತ್ತು ರೂ.ಗಳಿಗೇ ಸಿಕ್ಕುತ್ತಿದ್ದಿತು. ಎಲ್ಲ ಪದಾರ್ಥಗಳ ಬೆಲೆಯೂ ಅಧಿಕವಾಗುತ್ತಲೇ ಇರುವುದ ರಿಂದ ಈ ಬೆಲೆಯಲ್ಲಿ ಪೂರ್ಣಮಾಲೆಯನ್ನು ಕೊಡುವುದು ದುಸ್ತರವಾಗಿಯೇ ಇದ್ದಿತು. ಆದರೆ ಜನಸಾಮಾನ್ಯರು ಮುಖ್ಯವಾಗಿ ಇದರ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂಬ ಕಾರಣದಿಂದ ಇದುವರೆಗೂ ನಾವು ಬೆಲೆಯನ್ನು ಹೆಚ್ಚಿಸಲಿಲ್ಲ. ಈಗ ಹೆಚ್ಚಿಸಿರುವ ಬೆಲೆಯು ಕೂಡ ಮಾರುಕಟ್ಟೆಗೆ ಬರುವ ಪುಸ್ತಕಗಳಿಗೆ ಹೋಲಿಸಿದರೆ ಅತ್ಯಲ್ಪವೇ ಸರಿ. ಮೂವತ್ತೆರಡು ಸಂಪುಟಗಳ ಪೂರ್ಣಮಾಲೆಗೆ ಈಗ 360/-ರೂ. ಇಡಲಾಗಿದೆ. ಒಂದು ಸಂಪುಟದ ಬೆಲೆ 11-25ರೂ. ಬಿದ್ದಂತಾಗುತ್ತದೆ. ಕ್ಯಾಲಿಕೋಪ್ರತಿಗಳ ಪೂರ್ಣಮಾಲೆಗೆ 440/-ರೂ.ಗಳನ್ನಿಡಲಾಗಿದೆ. ಪ್ರತಿ ಒಂದಕ್ಕೆ 13-75ರೂ. ಬಿದ್ದಂತಾಗುತ್ತದೆ. ಇದನ್ನು ಯಾರೂ ಹೆಚ್ಚೆಂದು ಭಾವಿಸಲಾರರೆಂಬುದು ನಮ್ಮ ಭಾವನೆಯಾಗಿದೆ. ಪೂರ್ಣಮಾಲೆಯ ಹಣವನ್ನು ಕಂತುಗಳಲ್ಲಿ ಪಡೆದುಕೊಳ್ಳುವ ಯೋಜನೆ ಯನ್ನು ಪರಿಶೀಲಿಸಲಾಗುತ್ತಿದೆ. ಇದರ ಬಗೆಗೆ ನಿರ್ಧಾರವನ್ನು ಸ್ವಲ್ಪದಿವಸ ಗಳಲ್ಲಿಯೇ ತೆಗೆದುಕೊಳ್ಳಲಾಗುವುದು. ವಾಲ್ಮೀಕಿರಾಮಾಯಣಕ್ಕೆ ಚಂದಾಹಣ ವನ್ನು (ಸಾಧಾರಣ 120/-ರೂ. ಕ್ಯಾಲಿಕೋ 150/-ರೂ) ಮೂರು ಕಂತುಗಳಲ್ಲಿ ಕೊಡಬಹುದು.

ಈ ಸಂಪುಟದ ಮತ್ತೊಂದು ಐತಿಹ್ಯವೆಂದರೆ ಭೀಷ್ಮನಿರ್ಯಾಣ. ಭೀಷ್ಮನು ಉತ್ತರಾಯಣಕ್ಕಾಗಿ ಕಾದಿದ್ದನು. ಆದುದರಿಂದ ಉತ್ತರಾಯಣಪುಣ್ಯಕಾಲದಂದೇ ಈ ಸಂಪುಟವನ್ನು ಪ್ರಕಾಶನ ಗೊಳಿಸುತ್ತಿದ್ದೇವೆ. ಆಧ್ಯಾತ್ಮದ ಸಾರಭೂತವಾದ ಅನುಗೀತೆಯೂ ಈ ಸಂಪುಟದಲ್ಲಿದೆ. ದಯಾಮಯನಾದ ಶ್ರೀಕೃಷ್ಣನು ಕುರುಸಂತಾನವನ್ನು ಉಜ್ಜೀವನಗೊಳಿಸಿದ ಸುಖಾಂತವಾದ ಕಥೆಯೊಡನೆ ಈ ಸಂಪುಟವು ಪೂರ್ಣಗೊಳ್ಳುತ್ತದೆ. ಮೂವತ್ತೆರಡನೆಯ ಸಂಪುಟದ ಪ್ರಕಾಶನ ಸಮಾರಂಭವನ್ನು ಉತ್ತರಾಯಣವು ಕಳೆಯುವುದರೊಳಗಾಗಿ (ಸುಮಾರು ಜುಲೈ ೧೪ರೊಳಗಾಗಿ) ಇಟ್ಟುಕೊಳ್ಳುವ ಆಶಯವಿದೆ. ಆ ಸಮಯದಲ್ಲಿ ಹನ್ನೆರಡು ದಿವಸಗಳ ಶಾಂತಿಕರ್ಮಗಳು ನಡೆಯಬೇಕಾಗಿದೆ. ಎಲ್ಲರ ಸಹಕಾರವೂ ಅವಶ್ಯವಾಗಿ ಬೇಕು. ಕಾರ್ಯಕ್ರಮದ ವಿವರಣೆಯನ್ನು ಗ್ರಾಹಕರಿಗೆ ಮುಂದಾಗಿ ತಿಳಿಸಲಾಗುವುದು.

ಶ್ರೀಮನ್ಮಹಾಭಾರತದ ೨೯ನೆಯ ಸಂಪುಟದ ಪ್ರಕಾಶನ ಸಮಾರಂಭವು ರಕ್ತಾಕ್ಷಿಯ ಶರನ್ನವರಾತ್ರಿ–ಸರಸ್ವತಿಯ ಆವಾಹನೆಯ ದಿನ, ದಿನಾಂಕ ೧-೧೦-೧೯೮೪ರ ಸೋಮವಾರದಂದು ಸಾಯಂಕಾಲ ನಿಜಗುಣಕ್ಷೇತ್ರದ ಸಭಾಂಗಣದಲ್ಲಿ ನೆರವೇರಿತು.

ವೇದವಿದ್ವಾಂಸರಿಂದ ವೇದಘೋಷವಾದ ಬಳಿಕ ಶ್ರೀಮತಿ ನಾಗವೇಣಿಯವರು ಸ್ವಾಗತಪದ್ಯಮಾಲಿಕೆಯನ್ನು ಹಾಡಿದರು. ಸರ್ವರನ್ನೂ ಸ್ವಾಗತಿಸುತ್ತಾ ವಿದ್ವಾನ್ ಹೆಚ್. ಎನ್. ರಂಗಸ್ವಾಮಿಯವರು ಕರ್ನಾಟಕ ರಾಜ್ಯದಲ್ಲಿನ ಎಲ್ಲ ಪ್ರೌಢಶಾಲೆಗಳಿಗೂ ಶ್ರೀಮನ್ಮಹಾಭಾರತದ ಎಲ್ಲ ಸಂಪುಟಗಳನ್ನೂ ಒದಗಿಸುವ ವ್ಯವಸ್ಥೆಯನ್ನು ರಾಜ್ಯಸರ್ಕಾರವು ಮಾಡಿಕೊಡಬೇಕೆಂಬ ನಮ್ಮ ಬೇಡಿಕೆಯನ್ನು ಮನ್ನಿಸುವುದಾಗಿ ಹಿಂದಿನ ಈರ್ವರು ರಾಜ್ಯಪಾಲರೂ ಹಾಗೂ ಮುಖ್ಯಮಂತ್ರಿಗಳೂ ಆಶ್ವಾಸನೆಯನ್ನು ನೀಡಿದ್ದರೂ ಕಾರ್ಯಗತವಾಗಲಿಲ್ಲ. ಬಹುಕಾಲದ ಈ ಪ್ರಾರ್ಥನೆಯನ್ನು ಈಗಿನ ಮುಖ್ಯಮಂತ್ರಿಗಳಾದರೂ ಈಡೇರಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಬಿನ್ನವಿಸಿಕೊಂಡರು. ಬಳಿಕ ಭಾರತಸರಸ್ವತಿಗೆ ಪೂಜೆಯನ್ನು ಸಲ್ಲಿಸಿ ತಮ್ಮ ಅಮೃತಹಸ್ತದಿಂದ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀರಾಮಕೃಷ್ಣ

ಹೆಗಡೆಯವರು ಶ್ರೀಮನ್ಮಹಾಭಾರತದ ೨೯ನೆಯ ಸಂಪುಟವನ್ನು ಬಿಡುಗಡೆಮಾಡಿದರು.

ಸಂಪುಟವನ್ನು ಪರಿಚಯಿಸುತ್ತಾ ಪ್ರಕಾಶನಾಧ್ಯಕ್ಷರಾದ ವೇ||ಬ್ರಂ||ಶ್ರೀ ವರದದೇಶಿಕಾಚಾರ್ಯ ರಂಗಪ್ರಿಯರು "ಮನಸ್ಸು ಮತ್ತು ಬುದ್ಧಿಗಳಿಗೆ ಶಾಂತಿ-ನೆಮ್ಮದಿಗಳನ್ನು ನೀಡುವಂತಹ ಶ್ರೀವಿಷ್ಣುಸಹಸ್ರನಾಮಸ್ತೋತ್ರಕ್ಕೆ ಪ್ರಾಚೀನ ಮತ್ತು ಅರ್ವಾಚೀನಗಳಾದ ಹದಿನೈದು ಭಾಷ್ಯಗಳಿವೆ. ಶ್ರೀವಿನೋಬಾಭಾವೆಯರು ಈ ಸ್ತೋತ್ರವನ್ನು ಸಮಸ್ತಧರ್ಮಗಳ ಸಾರ ವೆಂದೇ ಕೊಂಡಾಡಿದ್ದಾರೆ. ಅಂತಹ ಸ್ತೋತ್ರಕ್ಕೆ ಶ್ರೀ ಶಂಕರರು, ಶ್ರೀಪರಾಶರ ಭಟ್ಟರು ಹಾಗೂ ಶ್ರೀ ಸತ್ಯಸಂಧರು ನಮಗೆ ಅನುಗ್ರಸಿರುವ ಭಾಷ್ಯಗಳನ್ನು ಈ ಸಂಪುಟವು ಒಳಗೊಂಡಿದೆ. ಬೌದ್ಧ-ವೈದಿಕಪಂಥಗಳಿಗೆಲ್ಲಾ ಶ್ರೀವಿಷ್ಣುವೇ ಮೂಲನಾಗಿದ್ದಾನೆ. ಹೀಗಾಗಿ ವಿಷ್ಣುವಿಗೆ ಕೋಟಿಹೆಸರನ್ನು ಕೊಟ್ಟರೂ ಸಾಲದು. ಸಾವಿರ ಎಂಬುದು ಒಂದು ಗೂಢಸಂಖ್ಯೆ. ಭಾರತದರ್ಶನವನ್ನು ವಿಶ್ವಭಾರತಧರ್ಮವನ್ನಾಗಿಸಬೇಕು. ಇದು ಸಮಾಜದ ಕರ್ತವ್ಯವಾಗಿದೆ. ಈ ಗ್ರಂಥಕ್ಕೆ ನೀಡುವ ಪುರಸ್ಕಾರಗಳು ವಿಷ್ಣುಸಹಸ್ರನಾಮ ಸ್ತೋತ್ರಕ್ಕೆ ಸಂಬಂಧಿಸಿದ ಶ್ರೀಮಹಾವಿಷ್ಣುವಿಗೇ ಸೇರುವಂತಹುದು."– ಎಂದು ತಿಳಿಸಿದರು.

ಮುಖ್ಯಅತಿಥಿಗಳಾಗಿದ್ದ ಲೋಕಸಭಾಸದಸ್ಯರೂ ಹಾಗೂ ಸಮಾಜ ಸೇವಾಮುಖಂಡರೂ ಆಗಿರುವ ಶ್ರೀ ಟಿ. ಆರ್. ಶಾಮಣ್ಣನವರು ಮಾತನಾಡುತ್ತಾ–"ಹಿಂದೂ ಸಂಸ್ಕೃತಿಯನ್ನು ಬೆಳೆಸಿ-ಉಳಿಸುವಂತಹ ಗ್ರಂಥ ಗಳಾದ ರಾಮಾಯಣ-ಮಹಾಭಾರತಗಳನ್ನು ಸುಲಭಬೆಲೆಗೆ ಶ್ರೀಸಾಮಾನ್ಯರ ಕೈಗೆ ಮುಟ್ಟಿಸಬೇಕೆಂಬ ಏಕೈಕ ಉಚ್ಚಧ್ಯೇಯದಿಂದ ಪ್ರತಿಫಲವನ್ನಾಗಲೀ ಲಾಭವನ್ನಾಗಲೀ ಬಯಸದೇ ಮೌನಸೇವೆಯನ್ನು ಸಲ್ಲಿಸುತ್ತಿರುವ ಭಾರತ ದರ್ಶನಸಂಸ್ಥೆಯು ಅಭಿನಂದನಾರ್ಹ"–ಎಂದು ತಿಳಿಸಿದರು.

ಮಹಾಭಾರತಸಂಪುಟವೊಂದನ್ನು ಪ್ರಕಾಶನಗೊಳಿಸುವಂತಹ ಅತ್ಯಂತ ಸಂತೋಷಕರವಾದ ಕಾರ್ಯವನ್ನು ನೆರವೇರಿಸಲು ಸದವಕಾಶವನ್ನು ಕಲ್ಪಿಸಿ ಕೊಟ್ಟಂತಹ 'ಭಾರತದರ್ಶನ' ವನ್ನು ಅಭಿನಂದಿಸುತ್ತಾ ಮುಖ್ಯಮಂತ್ರಿಗಳಾದ ಶ್ರೀರಾಮಕೃಷ್ಣಹೆಗಡೆಯರು–"ಸರಳವೂ, ಸುಲಲಿತವೂ, ಜನಸಾಮಾನ್ಯ ರಿಗೂ ಗಮ್ಯವೂ ಆದ ಕನ್ನಡಮಹಾಭಾರತದ ಎಲ್ಲ ಸಂಪುಟಗಳನ್ನೂ–ಬಾಲ್ಯದಲ್ಲಿ ನಾನು ಮಹಾಭಾರತದ ಕಥೆಯನ್ನು

ಯಾರಿಂದ ಕಲಿತುಕೊಂಡೆನೋ–ಅಂತಹ ತಾಯಿಯವರಿಗಾಗಿ ತಂದು ಕೊಟ್ಟಿದ್ದೇನೆ. ಮಹಾಭಾರತವು ಕೇವಲ ಕಥೆಯಾಗಿರದೇ ತತ್ತ್ವಶಾಸ್ತ್ರ, ಜೀವನದ ಸಾರ-ಇತ್ಯಾದಿಗಳನ್ನೊಳಗೊಂಡಿದೆ. ಸಾವಿರಾರು ವರ್ಷಗಳ ಅನುಭವಧಾರೆಯು ಇದರಲ್ಲಿ ಇರುವುದರಿಂದ ಹೊಸದೃಷ್ಟಿ, ಹೊಸಪಾಠ, ಹಾಗೂ ನಾವೀನ್ಯವನ್ನು ಈ ಗ್ರಂಥದಿಂದ ಪಡೆದುಕೊಳ್ಳಬಹುದಾಗಿದೆ. ಆದರೆ ದುರ್ದೈವವೆಂದರೆ ಈ ದೇಶದಲ್ಲಿ ಈ ದೇಶದ ಸಂಸ್ಕೃತಿ-ಸಾಹಿತ್ಯಗಳನ್ನು ತೆಗಳುವುದೇ ಫ್ಯಾಶನ್ನಾಗಿದೆ. ಜ್ಞಾನವನ್ನೇ ಅರ್ಹತೆಯನ್ನಾಗಿಸಿಕೊಂಡು ಉನ್ನತಮೌಲ್ಯಗಳುಳ್ಳ ಸದ್ಗ್ರಂಥಗಳನ್ನು ಟೀಕಿಸುವುದು ಸಾಧುವಲ್ಲ. ಬೂಸಾಸಾಹಿತ್ಯವೆಂದು ನಮ್ಮಲ್ಲಿರುವ ಜನರು ಕರೆಯುವ ಗ್ರಂಥಗಳ ಗುಟ್ಟು ಹಾಗೂ ಶಕ್ತಿಯನ್ನು ಅರಿತುಕೊಳ್ಳಲು ಪಾಶ್ಚಾತ್ಯರು ನಿರಂತರ ಅಧ್ಯಯನ ಮಗ್ನರಾಗಿದ್ದಾರೆ. ನಾವು ಇನ್ನಾದರೂ ಇಂತಹ ಪ್ರಸಂಗಗಳಿಂದ ಪಾಠವನ್ನು ಕಲಿತುಕೊಳ್ಳೋಣ. ಭಾರತದರ್ಶನದ ಕಷ್ಟ ನನಗೆ ಅರಿವಾಗಿದೆ. ಅವರ ಸಾಹಸಪ್ರವೃತ್ತಿ-ಕಷ್ಟಪರಂಪರೆಗಳನ್ನು ನಾನು ಊಹಿಸಿಕೊಳ್ಳಬಲ್ಲೆನು. ಸರ್ಕಾರದ ವತಿಯಿಂದ ಈ ಸಂಸ್ಥೆಗೆ ಆಗಬೇಕಾಗಿರುವ ಸಹಾಯವನ್ನು ಮಾಡಿಯೇ ಮಾಡುತ್ತೇನೆ. ಇದರ ಜೊತೆಯಲ್ಲೇ ಜನರ ಬೆಂಬಲವೂ ಬೇಕು. ಬೇರೆ ಯಾವುದೇ ಪ್ರಕಾಶನಸಂಸ್ಥೆಯಾದರೂ ಅರ್ಥಮೂಲವಿಲ್ಲದೇ ಇಷ್ಟೊಂದು ಕಡಿಮೆಬೆಲೆಗೆ ಇಂತಹ ಉತ್ಕೃಷ್ಟಮಟ್ಟದ ಪುಸ್ತಕವನ್ನು ಕೊಡಲಾರರು'– ಎಂದು ತಿಳಿಸಿದರು. ತಮ್ಮ ವೈಯ್ಯಕ್ತಿಕದೇಣಿಗೆಯಾಗಿ ಎರಡೂವರೆ ಸಾವಿರ ರೂಪಾಯಿಗಳನ್ನೂ ಸಹ ನೀಡುವ ವಾಗ್ದಾನವನ್ನೂ ಮಾಡಿದರು.

ಶ್ರೀ ರಾಮಚಂದ್ರಾಪುರಮಠದ ಶ್ರೀಶ್ರೀ ರಾಘವೇಂದ್ರಭಾರತೀಸ್ವಾಮಿಗಳು ಕಳುಹಿಸಿದ್ದ ಸುವರ್ಣಮಂತ್ರಾಕ್ಷತೆಯನ್ನು ಸಂಪಾದಕಮಂಡಲಿಯ ಪಂಡಿತರಿಗೆ ನೀಡಿ ಗೌರವಿಸಲಾಯಿತು. ಕೋಲಾರದ ಶ್ರೀ ಟಿ.ಎನ್. ಪ್ರಭಾಕರ್‌ರವರು ವಂದನೆಗಳನ್ನು ಸಲ್ಲಿಸಿದರು. ಶ್ರೀ ಕೇಶವಸುಬ್ರಹ್ಮಣ್ಯ ಕೌಶಿಕರಿಂದ ನಿರ್ದೇಶಿತವಾದ ಈ ಕಾರ್ಯಕ್ರಮವು ಸಾಮೂಹಿಕ ಶಾಂತಿಪಾಠದೊಂದಿಗೆ ಮುಕ್ತಾಯವಾಯಿತು.

೨೯ನೆಯ ಸಂಪುಟದ ಪ್ರಕಾಶನವಾದನಂತರ ಕೆಲವು ಮಹನೀಯರು ಸ್ವಪ್ರೇರಣೆಯಿಂದ ಯಥಾಶಕ್ತಿ ಕೊಡುಗೆಯನ್ನು ಭಾರತದರ್ಶನ ಪ್ರಕಾಶನಕ್ಕೆ ಕಳುಹಿಸಿ ಉಪಕರಿಸಿರುತ್ತಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಸಂಪಾದಕಮಂಡಲಿಯ ವಿದ್ಯಾಂಸರು ಯಥಾಪೂರ್ವವಾಗಿ ನಿಃಸ್ಪೃಹತೆಯಿಂದ ಈ ಮಹಾಗ್ರಂಥವನ್ನು ಸಂಪಾದಿಸಿಕೊಡುತ್ತಿದ್ದಾರೆ. ಈ ಪವಿತ್ರ ಕಾರ್ಯದಲ್ಲಿ ಅವರು ಅಲಸಿಕೆಯೆಂಬುದನ್ನೇ ಕಾಣರು. ಇಂತಹ ಸಹೃದಯರಾದ ನಿಃಸ್ವಾರ್ಥಿಗಳಾದ ವಿದ್ವಾಂಸರ ಸಹಕಾರವನ್ನು ದಯಾಮಯನಾದ ಪರಮಾತ್ಮನು ಒದಗಿಸಿಕೊಡದಿದ್ದರೆ ಏನಾಗುತ್ತಿತ್ತೆಂಬುದನ್ನು ಊಹಿಸಲೂ ಶಕ್ಯವಿಲ್ಲ. ಅವನದೇ ಕೆಲಸವಾದುದರಿಂದ ಎಲ್ಲವನ್ನೂ ಯಥೋಚಿತವಾದ ರೀತಿಯಲ್ಲಿ ಒದಗಿಸಿಕೊಟ್ಟು ಈ ಮಹಾಕಾರ್ಯವನ್ನು ಆಗುಮಾಡಿಸುತ್ತಿದ್ದಾನೆ. ಅವನಿಗೆ ಅನಂತಾನಂತಪ್ರಣಾಮಗಳು. ಸಂಪಾದಕಮಂಡಲಿಯ ವಿದ್ಯಾಂಸರಿಗೆ ಕೃತಜ್ಞತಾಪೂರ್ವಕವಾದ ಅಭಿವಂದನೆಗಳು.

ಭಾರತದರ್ಶನಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಮಾರ್ಗದರ್ಶನವನ್ನು ಮಾಡುತ್ತಿದ್ದಾರೆ. ಇವರಿಗೂ ಕೃತಜ್ಞತಾಪೂರ್ವಕವಾದ ಅಭಿವಂದನೆಗಳನ್ನು ಅರ್ಪಿಸುತ್ತೇವೆ.

ಈ ಸಂಪುಟಕ್ಕೆ ನಮ್ಮ ಹಿತೈಷಿಗಳಾದ ಬೇಲೀಮಠದ ಶ್ರೀ ಶ್ರೀ ಶಿವರುದ್ರಮಹಾಸ್ವಾಮಿಗಳವರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ತೆರೆಯ ಹಿಂದೆ ಕೆಲಸಮಾಡುತ್ತಿರುವ ಮಹಾಭಾರತದ ಪ್ರಚಾರಕರ ವಿಷಯವಾಗಿ ಎಷ್ಟು ಹೇಳಿದರೂ ಸ್ವಲ್ಪವೇ. ಒಬ್ಬೊಬ್ಬರೂ ಹತ್ತು-ಇಪ್ಪತ್ತು-ಐವತ್ತು- ನೂರು-ನೂರೈವತ್ತು ಮಂದಿ ಗ್ರಾಹಕರನ್ನು ಮಾಡಿರುತ್ತಾರೆ. ಗ್ರಾಹಕರ ಸಂಖ್ಯೆಯೂ ಪ್ರಚಾರಕರ ಸಂಖ್ಯೆಯೂ ಬೆಳೆಯುತ್ತಲೇ ಇದೆ. ಇಂತಹ ನಿಃಸ್ವಾರ್ಥಿಗಳಾದ ನಮ್ಮ ಬಂಧುಗಳಿಗೆ ಅನಂತಾನಂತವಂದನೆಗಳು. ಆದರೆ ಮುಕ್ಕೋಟಿ ಕನ್ನಡಿಗರಿರುವ ನಮ್ಮ ಕರ್ಣಾಟಕದಲ್ಲಿ ಮಹಾಭಾರತಗ್ರಾಹಕರ ಸಂಖ್ಯೆ ಲೇಶಮಾತ್ರ. ಗ್ರಾಹಕರ ಸಂಖ್ಯೆಯನ್ನು ಹೆಚ್ಚಿಸಲು ಇನ್ನೂ ಕಾರ್ಯಮಾಡಬೇಕಾಗಿದೆ.ಪ್ರತಿಯೊಬ್ಬ ಕನ್ನಡಿಗನ ಮನೆಯಲ್ಲಿಯೂ ಪವಿತ್ರವಾದ ಈ ಮಹಾಭಾರತಗ್ರಂಥವಿರಲು ಸತತವಾಗಿ ಶ್ರಮಿಸಬೇಕಾಗಿದೆ. ಅಂತಹ ಉತ್ಸಾಹವನ್ನು ನಮ್ಮೆಲ್ಲರಿಗೂ ದಯಪಾಲಿಸಲೆಂದು ದಯಾಮಯನಾದ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಶಾನ್ತಿಃ ಪುಷ್ಟಿಸ್ತುಷ್ಟಿಶ್ಚಾಸ್ತು । ಸಮಸ್ತಸನ್ಮಙ್ಗಲಾನಿ ಭವನ್ತು ॥

–ಪ್ರಕಾಶಕರು

ಮುನ್ನುಡಿ

ಭಾರತಂ ಪಂಚಮೋ ವೇದಃ-ಎಂದು ದಾರ್ಶನಿಕರಿಂದ ಮನ್ನಣೆ ಪಡೆದ, ಪ್ರಪಂಚದ ಸಾಹಿತ್ಯರಾಶಿಯಲ್ಲಿ ಮಕುಟಮಣಿಯಂತೆ ರಾರಾಜಿಸುತ್ತಿರುವ ಭಗವದ್ಗೀತೆಯಂತಹ ಅನರ್ಘ್ಯರತ್ನವನ್ನೂ-ಅನೇಕ ಸ್ತೋತ್ರಗಳು ರಾಜನೀತಿ, ಧರ್ಮನೀತಿಗಳೇ ಮೊದಲಾದ ಮುತ್ತು-ಮಾಣಿಕ್ಯ ಗಳನ್ನೂ ಒಡಲಾಳದಲ್ಲಿ ಒಡಗೊಂಡು ಸಾಗರಸದೃಶ ಮಹಾಭಾರತಾಬ್ಧಿತರಣದಲ್ಲಿ ಭಾರತ ದರ್ಶನ ಪ್ರಕಾಶನದವರು ಭಗವತ್ಕೃಪೆಯಿಂದಲೂ, ಶ್ರದ್ಧಾ-ಭಕ್ತಿಗಳಿಂದಲೂ ಕೃತಕೃತ್ಯರಾಗುತ್ತಾ ಮತ್ತೊಂದು ಹೆಜ್ಜೆ ಮುನ್ನಡೆದಿದ್ದಾರೆ.

ಮಹಾಭಾರತ ಕೇವಲ ಪುರಾಣ-ಇತಿಹಾಸಗಳ ಸಮ್ಮಿಳನವಲ್ಲ. ಇದರಲ್ಲಿ ವಿಮರ್ಶಿತವಾಗುವ ವಿಚಾರಗಳು ಮಾನವನ ವಿಚಾರವಂತಿಕೆಗೆ ಜ್ಞಾನಕ್ಕೆ ಪೂರಕವಾದುವುಗಳು. ತ್ರಿಕಾಲಾಬಾಧಿತ ಸತ್ಯಪ್ರತಿಪಾದಕವಾದುವುಗಳು. ನಾಗರಿಕ ಪ್ರಪಂಚದಲ್ಲಿ ವಿಜ್ಞಾನದ ಪ್ರಭೆಯಲ್ಲಿ ಮೈಮರೆತಂತಿರುವ ಮನುಕುಲವನ್ನು ಇಂದಿಗೂ ಕಾಡುತ್ತಿರುವ ಪ್ರಶ್ನೆಗಳನ್ನು ಸೂಕ್ತಸಮಾಧಾನದೊಂದಿಗೆ ಚಿಂತನೆಗೆ ಗುರಿಮಾಡಿರುವ ಈ ಮಹಾಗ್ರಂಥ ಹಿಂದೆಯೂ ಮುಂದೆಯೂ ಎಂದೆಂದಿಗೂ ಸಹ ಮಾರ್ಗದರ್ಶಕವಾದುದಾಗಿ ಜಿಜ್ಞಾಸುಗಳನ್ನು ಕೈಹಿಡಿದು ನಡೆಸುವಲ್ಲಿ ಸಮರ್ಥವಾಗಿದೆ. ಈ ಕಾರಣದಿಂದಲೇ ಮಹಾಭಾರತ ಸರ್ವಜನಾದರಣೀಯ. ವೇದ-ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಅತಿಗಹನವಾದ ತಾತ್ತ್ವಿಕರಹಸ್ಯಗಳನ್ನು ಸುಲಭರೀತಿಯಲ್ಲಿ ಆಖ್ಯಾಯಿಕೆಗಳ ರೂಪದಲ್ಲಿ ಪಕ್ವಗೊಳಿಸಿ ತಿಳಿಸುವ ವೈಖರಿ ಮನೋಹರವಾದುದು. ಈ ಎಲ್ಲಾ ಕಾರಣಗಳಿಂದಾಗಿಯೇ ಸೀಮಾತೀತವಾದ ಜ್ಞಾನಸಾಗರಕ್ಕೆ ಹಿಡಿದ ಗಗನಗನ್ನಡಿಯಂತಿರುವ ಈ ಮಹಾಕೃತಿಯನ್ನು- 'ಇದರಲ್ಲಿ ಇಲ್ಲದ ವಿಷಯಗಳು ಬೇರೆಲ್ಲಿಯೂ ದೊರೆಯುವುದಿಲ್ಲ"–ಎಂಬ ಆಶ್ಚರ್ಯೋದ್ಗಾರಗಳಿಂದ ಬೆರಗುಗೊಂಡು ಪ್ರಶಂಸಿಸಲಾಗಿದೆ. ಈ ಮೇರುಕೃತಿಯ ಸಮಗ್ರ ಅನುವಾದ ಸಾಮಾನ್ಯವಾದುದಲ್ಲ. ಅಲ್ಲಲ್ಲಿ ಬರುವ ಮುಖ್ಯವಾದ ತಾತ್ತ್ವಿಕವಿಚಾರಗಳು, ಸ್ತೋತ್ರಗಳು, ನೀತಿಗಳು, ಗೀತೆ, ಅನುಗೀತೆ, ಪರಾಶರಗೀತೆ, ಸಹಸ್ರನಾಮಗಳೇ-

ಮೊದಲಾದುವುಗಳನ್ನು ಸವಿಸ್ತರವಾಗಿ ನಿರೂಪಿಸುತ್ತಾ ಅನ್ಯಾನ್ಯಗ್ರಂಥಗಳಲ್ಲಿರ ಬಹುದಾದ ಪಾಠಾಂತರಗಳ ಬಗೆಗೆ ನವಿರಾಗಿ ವಿಮರ್ಶಿಸುತ್ತಾ ಕಥಾಸರಣಿಗೆ ಭಂಗಬಾರದ ರೀತಿಯಲ್ಲಿ ತಿಳಿಗನ್ನಡದಲ್ಲಿ ಮಿಕ್ಕ ಭಾಗಗಳನ್ನು ಸಂಗ್ರಹಿಸುತ್ತಾ ಸಾಗಿಬಂದಿರುವ ಈ ಜ್ಞಾನಗಂಗಾ ಪ್ರವಾಹ ಕನ್ನಡ ವಾಙ್ಮಯದಲ್ಲಿನ ಭಾಷಾಂತರಕೃತಿಗಳಲ್ಲಿಯೇ ಅಸದೃಶಸ್ವಂತಿಕೆಯಿಂದ ಕೂಡಿ ನ ಭೂತೋ ನ ಭವಿಷ್ಯತಿ ಎಂಬಂತಿದೆ. ಅಭಿಮಾನೀ ಪೋಷಕಬಂಧುಗಳು ಚಾತಕಪಕ್ಷಿಗಳಂತೆ ಕಾತರದಿಂದ ಕಾಯುತ್ತಿರುವಂತೆಯೇ, ಎಷ್ಟೇ ಅಡ್ಡಿ-ಅಡಚಣೆಗಳುಂಟಾದರೂ ಸಹ ಒಂದು ಬಾರಿಯೂ ಓದುಗರನ್ನು ನಿರಾಶೆಗೊಳಿಸದೆ ಕಟ್ಟೆಚ್ಚರವಂತಿಕೆ ಭಾರತ ದರ್ಶನ ಪ್ರಕಾಶನದವರದು.

ಇದಕ್ಕಾಗಿ ವಾಙ್ಮಯಪ್ರಪಂಚದಲ್ಲಿ ಅವರ ಕರ್ತವ್ಯಪ್ರಜ್ಞೆ, ಶ್ರಮ ಸದಾ ಸ್ಮರಣೀಯ. ಓದುಗರೆಲ್ಲರೂ ಆಭಾರಿಗಳು.

ಈಗ ಪ್ರಕಾಶಿತವಾಗುತ್ತಿರುವ ಮೂವತ್ತನೆಯ ಸಂಪುಟದಲ್ಲಿ ಅನುಶಾಸನಪರ್ವದಲ್ಲಿ ದಾನಧರ್ಮಪರ್ವ ಪೂರ್ತಿಯಾಗಿ ಅಶ್ವಮೇಧಿಕ ಪರ್ವ ಪ್ರಾರಂಭವಾಗಿದೆ. ೨೯ನೇ ಸಂಪುಟದಲ್ಲಿ ಸವಿಸ್ತರವಾಗಿ ವಿಷ್ಣುಸಹಸ್ರ ನಾಮಸ್ತೋತ್ರವನ್ನು ಭೀಷ್ಮಮುಖದಿಂದ ಗ್ರಹಿಸಿದ ಯುಧಿಷ್ಠಿರನು ದಿನಂಪ್ರತಿ ಜಪಿಸಲಿಕ್ಕೆ ಯೋಗ್ಯವಾದ ದೇವತೆಗಳು-ಮಂತ್ರಗಳು, ಋಷಿಗಳು–ಇವರ ಬಗೆಗೆ ತಿಳಿಯಲು ಆಸಕ್ತನಾಗಿ ಭೀಷ್ಮನನ್ನು ಕೇಳುವುದರಿಂದ ಈ ಸಂಪುಟವು ಪ್ರಾರಂಭವಾಗಿದೆ. ಹಿಂದಿನ ಉಪದೇಶಗಳಲ್ಲಿ ಸವಿಸ್ತರವಾಗಿ ತಿಳಿಸಿದ ವಿಷಯಗಳನ್ನು ಉಪಸಂಹಾರರೂಪದಲ್ಲಿ ಸಂಗ್ರಹಿಸಿ ಭೀಷ್ಮರು ತಮ್ಮ ಉಪದೇಶಾಮೃತ ನೀಡುತ್ತಿದ್ದಾರೆ. ಗಾಯತ್ರೀ-ಸಾವಿತ್ರೀ ಮಂತ್ರಮಹಿಮೆ, ನಿರಂತರಪುನಶ್ಚರಣೆಯಿಂದ ಉಂಟಾಗುವ ಫಲಗಳು ಗಮನಾರ್ಹ ವಾದುವುಗಳು.

ಅಭ್ಯಾಸೇ ನಿತ್ಯಂ ದೇವಾನಾಂ ಸಪ್ತರ್ಷೀಣಾಂ ಧ್ರುವಸ್ಯ ಚ ।
ಮೋಕ್ಷಣಂ ಸರ್ವಕೃಚ್ಛ್ರಾಣಾಂ ಮೋಚಯತ್ಯಶುಭಾತ್ಸದಾ ॥
(ಪು.5470)

"ಪ್ರತಿದಿನವೂ ದೇವತೆಗಳ, ಸಪ್ತರ್ಷಿಗಳ ಮತ್ತು ಧ್ರುವನ ಸ್ಮರಣೆಯು

ಸಮಸ್ತವಾದ ಕಷ್ಟಗಳನ್ನೂ ಪರಿಹರಿಸುತ್ತದೆ. ಅವರ ನಾಮ ಸಂಕೀರ್ತನೆಯು ಅಮಂಗಳವನ್ನು ನಿವಾರಿಸುತ್ತದೆ"–ಈ ರೀತಿಯ ಆಶ್ವಾಸನೆ ಗಳು ಆರ್ತಜನಕ್ಕೆ ಅಮೃತಸೇಚನದಂತೆ ಪರಿಣಾಮಕಾರಿ ಯಾದುವುಗಳು. ಭೀಷ್ಮನಿಂದ ನಿರೂಪಿತವಾಗುವ ಭಗವಾನ್ ಕೃಷ್ಣಪರಮಾತ್ಮನ ಮಹಿಮೆ, ಪಿತಾಮಹನಿಂದ ಶ್ರೀಕೃಷ್ಣಚರಣಗಳಿಗೆ ಸಂದ ಭಕ್ತಿಕುಸುಮಾಂಜಲಿಯೇ ಆಗಿದೆ. ಕೃಷ್ಣಮಹಿಮೆಯ ನಿರೂಪಣೆಯೆಂದರೆ ಭೀಷ್ಮನಿಗೆ ಹಾಲ್ಜೇನು ಸವಿದಂತೆ. ರಾಜಸೂಯಪ್ರಸಂಗದಿಂದ ಇಲ್ಲಿನವರೆಗೆ ಹೊಗಳಲ್ಪಟ್ಟ ಕೃಷ್ಣ ಮಾಹಾತ್ಮ್ಯಕಥನಗಳೆಲ್ಲವೂ ಭೀಷ್ಮನ ಅಧ್ಯಾತ್ಮದ ಔನ್ನತ್ಯಕ್ಕೆ ಹಿಡಿದ ಕನ್ನಡಿಯಂತೆ. ಶ್ರೀಕೃಷ್ಣನಿಂದ ನಿರೂಪಿತವಾಗಿರುವ ಶಂಕರಮಾಹಾತ್ಮ್ಯ ವಂತೂ ಸತ್ತ್ವಯುತವಾದದ್ದು ಹಾಗೂ ಸ್ಮರಣೀಯವಾದದ್ದೂ ಆಗಿದೆ.

ಭೀಷ್ಮನು ಹೇಳಿದ:-

ಧರ್ಮಸ್ಯ ಹ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ ।
ಸಂಸ್ಥಾ ಯತ್ನೈರಪಿ ಕೃತಾ ಕಾಲೇನ ಪ್ರತಿಭಿದ್ಯತೇ ॥(ಪು.5549)

ಈ ಮಾತುಗಳು ಧರ್ಮದ ಬಗೆಗೆ ವಿಕೃತವ್ಯಾಖ್ಯಾನ ನೀಡುತ್ತಿರುವ ಪಂಡಿತಂಮನ್ಯರ ಬಗೆಗೇ ಗುರಿಹಿಡಿದಂತೆ ತೋರುತ್ತವೆ. ಈ ಬಗೆಯ ದುಷ್ಪ್ರಯತ್ನಗಳನ್ನು ಹಿಮ್ಮೆಟ್ಟಿಸಲು ಕೈಗೊಳ್ಳಬೇಕಾದ ಉಪಾಯಗಳು ಸಹ.

ಅತೃಪ್ಯನ್ತಸ್ತು ಸಾಧೂನಾಂ ಯ ಏವಾಗಮಬುದ್ಧಯಃ ।
ಪರಮಿತ್ಯೇವ ಸಂತುಷ್ಟಾಸ್ತಾನುಪಾಸ್ವ ಚ ಪೃಚ್ಛ ಚ ॥

ಕಾಮಾರ್ಥೌ ಪೃಷ್ಠತಃ ಕೃತ್ವಾ ಲೋಭಮೋಹಾನುಸಾರಿಣೌ ।
ಧರ್ಮ ಇತ್ಯೇವ ಸಂಬುದ್ಧಾಸ್ತಾನುಪಾಸ್ವ ಚ ಪೃಚ್ಛ ಚ ॥ (ಪು.5550)

"ದಾರಿತಪ್ಪಿಸುವ ಅಪವ್ಯಾಖ್ಯಾನಗಳಿಂದ ಸಂದೇಹಮೂಡಿದಾಗ-ಸಾಧುಗಳಿಗೆ ತೃಪ್ತಿಯುಂಟುಮಾಡುವ ವೇದೋಕ್ತಕರ್ಮಗಳನ್ನು ಆಚರಿಸಬೇಕೆಂಬ ಬುದ್ಧಿಯನ್ನು ಹೊಂದಿರುವ, ವೇದೋಕ್ತಪ್ರಮಾಣಗಳೇ ಶ್ರೇಷ್ಠವೆಂದು ಭಾವಿಸಿರುವ ನಿತ್ಯತೃಪ್ತರಾದ ವಿದ್ವಾಂಸರನ್ನು ಆಶ್ರಯಿಸು ಮತ್ತು ಧರ್ಮದ ವಿಷಯದಲ್ಲಿ ಅವರನ್ನು ಪ್ರಶ್ನಿಸು. ಲೋಭ-ಮೋಹಗಳನ್ನು ಅನುಸರಿಸಿ ಹೋಗುವ ಅರ್ಥ-ಕಾಮಗಳನ್ನು ಹಿಂದಕ್ಕಟ್ಟಿ ಧರ್ಮವೇ

ಪರಮಶ್ರೇಷ್ಠವೆಂದು ಭಾವಿಸುವ ವಿದ್ವಾಂಸರನ್ನು ಸೇವಿಸು ಮತ್ತು ಅವರನ್ನು ಧರ್ಮದ ವಿಷಯದಲ್ಲಿ ಪ್ರಶ್ನಿಸು."

ನಿತ್ಯಸ್ಮರಣೀಯರಾದ ದೇವತಾ-ಪರ್ವತ-ಋಷಿ-ರಾಜರ ನಾಮ ಸಂಕೀರ್ತನೆಯ ಮಹಿಮೆ, ವ್ಯಕ್ತಿಗತವಾದ ದೋಷಗಳ ನಿವಾರಣೆಯೊಂದಿಗೆ ಸಮಷ್ಟಿಹಿತಸಾಧಕರಾದ ತಪಸ್ವಿಗಳು, ಮನುಕುಲದೇಳಿಗೆಗೆ ದುಡಿದ ಮಹಾನುಭಾವರು–ಇವರ ನಾಮಸ್ಮರಣೆಯಿಂದ ನಮ್ಮ ಜೀವನದೃಷ್ಟಿಯನ್ನು ಉದಾತ್ತಗೊಳಿಸಿಕೊಳ್ಳುವತ್ತ ಮಾರ್ಗದರ್ಶಕವಾಗಿದೆ.

ಭೀಷ್ಮಸ್ವರ್ಗಾರೋಹಣಪರ್ವವು ಭೀಷ್ಮಭಾನುವಿನ ಅಸ್ತಮಾನದ ಜೀವಂತಚಿತ್ರಣದೊಡನೆ ಪಿತಾಮಹನ ಉತ್ತುಂಗವ್ಯಕ್ತಿತ್ತ್ವವನ್ನು ಸಮರ್ಥವಾಗಿ ಅಭಿವ್ಯಕ್ತಿಸಿದೆ. ಈ ರೀತಿ ಅನುಶಾಸನಪರ್ವವು ಭೀಷ್ಮ-ಧರ್ಮಜರ ಸಂವಾದರೂಪದಲ್ಲಿ ವಿಶ್ವದ ಮಾನವವರ್ಗಕ್ಕೇ ಧರ್ಮಾನುಶಾಸನ ಮಾಡಿ ಸಾರ್ಥಕನಾಮವೆನಿಸಿದೆ.

ಆಶ್ವಮೇಧಿಕಪರ್ವವು ಧರ್ಮರಾಯನ ಆಳ್ವಿಕೆಯ ಪ್ರಮುಖ ಘಟನೆಗಳ ಚಿತ್ರಣ. ಧರ್ಮಜನಿಗೆ ವ್ಯಾಸರು ಬೋಧಿಸಿದ ದುಃಖನಿವಾರಣೋಪಾಯ, ಶ್ರೇಯಃಪ್ರಾಪ್ತ್ಯರ್ಥವಾಗಿ ಅಶ್ವಮೇಧಯಾಗಕ್ಕೆ ಅನುಗೊಳಿಸುವುದು, ಮರುತ್ತನಿಂದ ಹಿಮಾಲಯದಲ್ಲಿ ನಿಕ್ಷೇಪಿಸಲ್ಪಟ್ಟ ಧನದ ಐತಿಹ್ಯ-ಇತ್ಯಾದಿಗಳು ಕಳೆದ ಎರಡು ಸಂಪಟಗಳಲ್ಲಿ ಸ್ಥಗಿತಗೊಂಡಿದ್ದ ಕಥಾಸರಣಿಗೆ ಚಾಲನೆಯಿತ್ತಿದೆ.

ಈ ಸಂಪುಟದಲ್ಲಿ ಗಮನಸೆಳೆಯುವ ಮತ್ತೊಂದು ವಿಶೇಷ– ಅನುಗೀತಾಪರ್ವ. ಭಗವಂತನಾದ ಶ್ರೀಕೃಷ್ಣನನ್ನು ಅರ್ಜುನನು– "ಯುದ್ಧಭೂಮಿಯಲ್ಲಿ ನಿನ್ನಿಂದ ಉಪದೇಶಿಸಲ್ಪಟ್ಟ ಗೀತೆಯನ್ನು ಆ ಸಮಯದಲ್ಲಿ ನಾನು ವಿಚಲಿತಚಿತ್ತನಾದ ಕಾರಣ ಮರೆತುಬಿಟ್ಟೆ. ಈ ವಿಷಯಗಳನ್ನು ಪುನಃ ಕೇಳಿ ಮನನಮಾಡಲಿಚ್ಛಿಸುತ್ತೇನೆ"–ಎಂದು ಕೇಳಿದಾಗ:

ಶ್ರಾವಿತಸ್ತ್ವಂ ಮಯಾ ಗುಹ್ಯಂ ಜ್ಞಾಪಿತಶ್ಚ ಸನಾತನಮ್ ।
ಧರ್ಮಂ ಸ್ವರೂಪಿಣಂ ಪಾರ್ಥ ಸರ್ವಲೋಕಾಂಶ್ಚ ಶಾಶ್ವತಾನ್॥
ಅಬುದ್ಧ್ಯಾ ನಾಗ್ರಹೀರ್ಯಸ್ತ್ವಂ ತನ್ಮೇ ಸುಮಹದಪ್ರಿಯಮ್।
ನ ಚ ಸಾಧ್ಯಪುನರ್ಭೂಯಃ ಸ್ಮೃತಿರ್ಮೇ ಸಂಭವಿಷ್ಯತಿ॥ (ಪು.5685)

"ಅರ್ಜುನ! ನಾನು ಆ ಸಮಯದಲ್ಲಿ ಅತ್ಯಂತರಹಸ್ಯವಾದ,

ಸನಾತನವಾದ ಜ್ಞಾನವನ್ನು ನಿನಗೆ ಉಪದೇಶಿಸಿದೆನು. ಧರ್ಮಸ್ವರೂಪಿಯಾದ ಪುರುಷೋತ್ತಮನ ತತ್ತ್ವವನ್ನೂ ಹೇಳಿದೆನು. ಶಾಶ್ವತಗಳಾದ ಸರ್ವಲೋಕಗಳ ವಿಷಯವಾಗಿಯೂ ಹೇಳಿದೆನು. ಆದರೆ ನೀನು ತಿಳಿಗೇಡಿತನದಿಂದ ಅಂತಹ ಪರತತ್ತ್ವವನ್ನು ಗ್ರಹಿಸದೇ ಇದ್ದುದು ನನಗೆ ಬಹಳ ಅಸಮಾಧಾನವಾಗಿದೆ. ಆ ಗೀತವು ನನಗೂ ಕೂಡ ಈಗ ಸ್ಮರಣೆಗೆ ಬರುತ್ತಿಲ್ಲ"–ಶ್ರೀಕೃಷ್ಣನು ಹೇಳಿದ ಈ ಮಾತುಗಳು ಮನನಾರ್ಹವಾದುವುಗಳು. ಗೀತೆ ವೇದದಂತೆಯೇ ವೇದದಷ್ಟೇ-ಮಹತಿಯುಳ್ಳದ್ದು. ಅಪೌರುಷೇಯವಾದುದೂ ಆಗಿದೆ. ಕೃಷ್ಣ-ಅರ್ಜುನ-ವ್ಯಾಸರು ಕೇವಲ ನಿಮಿತ್ತಮಾತ್ರರು. ಪರಮಾತ್ಮನ ಕೈಯೊಳಗಿನ ದರ್ವಿಯಂತೆ ಎಂಬ ಗೂಢಸತ್ಯ ಇಲ್ಲಿ ಹೊರಬಿದ್ದಿದೆ. ಆದರೂ ತಾತ್ತ್ವಿಕವಿಚಾರಗಳನ್ನು ಮಹತ್ಪ್ರಯತ್ನದಿಂದ ಬುದ್ಧಿಪೂರ್ವಕ ಸಂಗ್ರಹಣೆ-ಅನುಗೀತಾಪರ್ವದಲ್ಲಿ ತಿಳಿಸಲಾಗಿದೆ. ಭಗವದ್ಗೀತೆಯ ಅಧ್ಯಾಯಗಳಿಗೆ ಬರೆದ ಪರಿಶಿಷ್ಟದಂತಿರುವ ಈ ಭಾಗವೂ ಸಹ ಮುಮುಕ್ಷುಜನಪ್ರಿಯವಾದುದೇ ಆಗಿದೆ. ಆಶ್ವಮೇಧಿಕ ಪರ್ವದಲ್ಲಿ ಉತ್ತರೆಯ ಗರ್ಭದಲ್ಲಿ ಪರಿಕ್ಷಿತನ ಜನನದವರೆಗೆ ಸಾಗಿರುವ ಕಥಾನಕ ಮುಂದಿನ ಎರಡು ಸಂಪುಟಗಳಲ್ಲಿ ಪೂರ್ಣಗೊಳ್ಳಲಿದೆ. ಕಳೆದ ೧೪ ವರ್ಷಗಳಿಂದ ಸತತವಾಗಿ ಜ್ಞಾನಗಂಗಾವತರಣಕ್ಕೆ ಶ್ರಮಿಸಿದ ಭಗೀರಥರು-ಈ ಪ್ರಕಾಶನದವರು, ಸಾರ್ಥಕತೆಯತ್ತ ಸಾಗುತ್ತಿದ್ದಾರೆ. ಕನ್ನಡ ಕುಲಕೋಟಿ ಈ ಗಂಗಾವತರಣದ ಪ್ರಯೋಜನ ಪಡೆದು ಪುನೀತರಾಗುತ್ತಿದ್ದಾರೆ.

ಈ ಮಹಾಭಾರತಪ್ರಕಟಯಜ್ಞ, ವಿಶ್ವಕ್ಕೇ ಮಂಗಳವನ್ನುಂಟು ಮಾಡಲಿ. ನಾಡಿಗೆ ಏಳ್ಗೆಯಾಗಲಿ. ಈ ಸುಮಹತ್ಕಾರ್ಯದಲ್ಲಿ ಭಗವಂತನ ಕೈವಾರಿಗಳಾಗಿರುವ ಭಾರತದರ್ಶನ ಪ್ರಕಾಶನದ ಎಲ್ಲಾ ವಿದ್ವಾಂಸವೃಂದಕ್ಕೂ ಕಾರ್ಯಕರ್ತರಿಗೂ ಇತೋಪ್ಯತಿಶಯವಾದ ವೃದ್ಧಿಯಾಗಲೆಂದು ಹಾರೈಸುತ್ತಾ ವಿರಮಿಸುತ್ತೇವೆ.

ಇತಿ ಓಂ-ಶಂ. ಶ್ರೀ||ನಿ||ಪ್ರ|| ಶಿವಾನುಭವ ಚರಮೂರ್ತಿ

ಶ್ರೀ ಶ್ರೀ ಶಿವರುದ್ರಮಹಾಸ್ವಾಮಿಗಳು,

ಬೇಲಿಮಠ.೪-೧-೧೯೮೫

ಬೆಂಗಳೂರು-೫೩

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ರಾಮಚಂದ್ರಾಪುರಮಠಸ್ಥ ಶ್ರೀ ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತಪ್ರಿಯಶಿಷ್ಯ ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು, ಸಂಪಾದಕರು, ಭಾರತದರ್ಶನ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು-೨೮ ಇವರಿಗೆ

ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ ಸಂದೇಶಃ

ಅದಾಗಿ:- ಶ್ರೀ ವ್ಯಾಸಪ್ರಣೀತ ಸಂಸ್ಕೃತಭಾರತದ ಪ್ರತಿಶ್ಲೋಕಾರ್ಥವೂ ಇರುವಂತೆ ಸರಳ ಕನ್ನಡದಲ್ಲಿ ಭಾಷಾಂತರಿಸುತ್ತಾ ಬಂದು, ಇದೀಗ ಭೀಷ್ಮನಿರ್ಯಾಣ, ಅನುಗೀತೆ-ಇತ್ಯಾದಿ ಅಮೋಘವಿಷಯಗಳನ್ನೊಳಗೊಂಡಿರುವ ಮೂವತ್ತನೆಯ ಸಂಪುಟವನ್ನು ಹೊರತರುತ್ತಿರುವ ವಿಷಯ ವೇದ್ಯವಾಗಿ ಸಂತಸವಾಯಿತು.

ಮಾನವನ ಶ್ರೇಯಃಪ್ರೇಯಗಳಿಗೆ ಮುಖ್ಯಸಾಧನವಾದ ಈ ಮಹಾಗ್ರಂಥದ ಉತ್ಕೃಷ್ಟತೆಯನ್ನು ಎಷ್ಟು ವಿವರಿಸಿದರೂ ಕಡಿಮೆಯೇ ಸರಿ. ಕನ್ನಡಿಗರು ಈ ಮಹಾಗ್ರಂಥದ ಪೂರ್ಣಪ್ರಯೋಜನ ಪಡೆದುಕೊಂಡು ಸುಸಂಸ್ಕೃತರಾದ ಸತ್ಪ್ರಜೆಗಳಾಗಲೆಂದು ಆಶಿಸುತ್ತೇವೆ.

ಉತ್ತರಾಯಣದ ಮಕರಸಂಕ್ರಾಂತಿಯ ಈ ಶುಭದಿನದಂದು ಭೀಷ್ಮಸ್ವರ್ಗಾರೋಹಣವನ್ನೊಳಗೊಂಡಿರುವ ಈ ಸಂಪುಟವನ್ನು ನೀವು ಹೊರತರುತ್ತಿರುವುದು ಒಂದು ಐತಿಹ್ಯವಾಗಿದೆ.

ಸಂಪಾದಕಮಂಡಲಿಯ ವಿದ್ವಾಂಸರ ಸಹಕಾರದಿಂದ ನೀವು ಹೊರತರುತ್ತಿರುವ ಈ ಶ್ರೀಮನ್ಮಹಾಭಾರತವು ಮುಂದಿನ ಎರಡು ಸಂಪುಟಗಳಲ್ಲಿ ನಿರ್ವಿಘ್ನವಾಗಿ ಮುಗಿಯುವಂತಾಗಲೆಂದು ಶ್ರೀಸೀತಾರಾಮಚಂದ್ರ- ಚಂದ್ರಮೌಳೀಶ್ವರರ ಪರಮಪ್ರಸಾದ-ಸುವರ್ಣಮಂತ್ರಾಕ್ಷತೆಯೊಂದಿಗೆ ಹಾರೈಸುತ್ತೇವೆ.

ಇತಿ, ಶ್ರೀಮನ್ನಾರಾಯಣಸ್ಮೃತಯಃ

ಮತಿ:-ಶ್ರೀ ರಕ್ತಾಕ್ಷಿ ಸಂ॥ದ ಪುಷ್ಯ ಶುಕ್ಲ ತ್ರಯೋದಶೀ। ಯು (ತಾ॥ ೪-೧-೧೯೮೫ನೇ-ಭಾರ್ಗವವಾಸರೇ.)

ವಸತಿ:- ಶ್ರೀ ಬಿ.ಕೃಷ್ಣಭಟ್ಟರು, ವಿಶ್ವಭಾರತಿ ಗೃಹನಿರ್ಮಾಣ ಸಹಕಾರ ಸಂಘ (ರಿ.) ನಂ.೩೯, ಒಂದನೇ ಫೇಸ್, ಜೆ.ಪಿ. ರಸ್ತೆ, ಗಿರಿನಗರ, ಬೆಂಗಳೂರು-೮೫ ಇವರ ಗೃಹೇ.

XV

ಪರಿಶಿಷ್ಟ
ಭೀಷ್ಮನು ಗೃಹಸ್ಥನೇ?

ಮಹಾಭಾರತದ ಶ್ರೇಷ್ಠತಮಪಾತ್ರಗಳಲ್ಲಿ ಪರಿಗಣಿತನಾಗಿರುವ ಪುರುಷಶ್ರೇಷ್ಠ ಭೀಷ್ಮ, ಧರ್ಮಿಷ್ಠರಲ್ಲೂ, ಬ್ರಹ್ಮಿಷ್ಠರಲ್ಲೂ, ಭಕ್ತರಲ್ಲೂ, ಜ್ಞಾನಿಗಳಲ್ಲೂ, ಯುದ್ಧವೀರರಲ್ಲೂ, ಬಹುಶ್ರುತರಾದ ವಿದ್ಯಾವಿಶಾರದರಲ್ಲೂ, ಕರ್ಮಯೋಗಿಗಳಲ್ಲೂ ಅಗ್ರಗಣ್ಯನಾದವನು. ಜ್ಞಾನ-ಬಲ-ಐಶ್ವರ್ಯ, ವೀರ್ಯ-ಶಕ್ತಿ-ತೇಜಸ್ಸುಗಳಿಗೆ ನಿಧಿಯಾದ ಶ್ರೀಕೃಷ್ಣಪರಮಾತ್ಮನಿಂದಲೇ 'ಈತನು ಮೂರ್ತಿಮತ್ತಾದ ಧರ್ಮ, ಮೂರ್ತಿಮತ್ತಾದ ಶೌರ್ಯ ಮತ್ತು ವಿದ್ಯಾಮೂರ್ತಿ'-ಎಂದು ಪ್ರಶಸ್ತಿಯನ್ನು ಪಡೆದವನು. "ಒಳ ಮತ್ತು ಹೊರ ಶತ್ರುಗಳಿಬ್ಬರಿಗೂ ಭೀಕರನಾಗಿರುವ ಅನ್ವರ್ಥನಾಮಧೇಯದ ಮಹಾತ್ಮಾ ಈ ಭೀಷ್ಮ. ಮೋಕ್ಷಧರ್ಮಾದಿಗಳನ್ನು ಪ್ರವಚನಮಾಡಿದ ಸರ್ವಜ್ಞ"–ಎಂದು ವಿಷ್ಣುಸಹಸ್ರನಾಮದ ಪೀಠಿಕೆಯಲ್ಲಿ ಶ್ರೀಶಂಕರಭಗವತ್ಪಾದರ ಪ್ರಶಂಸೆಗೂ ಪಾತ್ರನಾಗಿರುವ ಮಹಾಪುರುಷ. ಇವನು ಭೀಷ್ಮಪ್ರತಿಜ್ಞೆಯನ್ನು ಮಾಡಿದ ಸನ್ನಿವೇಶವೂ ಸುಪ್ರಸಿದ್ಧವಾಗಿದೆ. "ಪೂರ್ಣವಿದ್ಯಾವಂತ; ಗುಣಶಾಲಿ; ರೂಪ-ಯೌವನಸಂಪನ್ನ; ಮಹಾವೀರ; ಕುರುಸಾಮ್ರಾಜ್ಯಕ್ಕೆ ಯುವರಾಜ. ವಿವಾಹಮಾಡಿಕೊಂಡು ಒಳ್ಳೆಯ ಪುತ್ರರನ್ನು ಪಡೆದು ಕುರುವಂಶೀಯ ಮಹಾಕ್ಷತ್ರಿಯರ ಪರಂಪರೆಯನ್ನು ಮುಂದುವರಿಸಲು ಇವನಿಗಿಂತಲೂ ಯೋಗ್ಯರು ಬೇರೆ ಯಾರಿದ್ದಾರೆ?"–ಎಂದು ಎಲ್ಲರೂ ಭಾವಿಸುತ್ತಿರುವ ಸಮಯದಲ್ಲೇ ಇದ್ದಕ್ಕಿದ್ದಂತೆ ತಂದೆಗೆ ಸಂತೋಷವನ್ನುಂಟುಮಾಡುವುದಕ್ಕೋಸ್ಕರ- "ನಾನು ಬ್ರಹ್ಮಚಾರಿಯಾಗಿಯೇ ಇದ್ದುಬಿಡುವೆನು. ಪುತ್ರರನ್ನು ಪಡೆಯುವ ಗೋಜಿಗೇ ಹೋಗುವುದಿಲ್ಲ. ಅಪುತ್ರನಾಗಿದ್ದರೂ ಯೋಗಬಲದಿಂದ ಅಕ್ಷಯದಿವ್ಯ ಲೋಕಗಳನ್ನು ಗಳಿಸುವೆನು"–ಎಂಬ ಭೀಕರ ಪ್ರತಿಜ್ಞೆಯನ್ನು ಎಲ್ಲರ ಸಮಕ್ಷಮದಲ್ಲೂ ಮಾಡಿದ. ಅತ್ಯಂತಕಠಿನವಾದ ಪರೀಕ್ಷಾಪ್ರಸಂಗದಲ್ಲೂ ವಿಕಾರಕ್ಕೆ ಒಳಗಾಗದೇ ತನ್ನ ದೃಢಸಂಕಲ್ಪವನ್ನೂ ಪ್ರತಿಜ್ಞೆಯನ್ನೂ ಉಳಿಸಿಕೊಂಡ ಮಹಾಧೀರ ಈತ. ವಿಕಾರಹೇತೌ ಸತಿ ವಿಕ್ರಿಯನ್ತೇ

ಯೇಷಾಂ ನ ಚೇತಾಂಸಿ ತ ಏವ ಧೀರಾಃ ।
ಮನಸೋ ನಿರ್ವಿಕಾರತ್ವಂ ಧೈರ್ಯಂ ಸತ್ಸ್ವಪಿ ಹೇತುಷು ॥

ಇವನು ಅವಿವಾಹಿತ ಮತ್ತು ಅಜೀವಬ್ರಹ್ಮಚಾರೀ ಎನ್ನುವುದು ಇತಿಹಾಸ-ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಆದರೆ ಶಾಸ್ತ್ರವಾಕ್ಯಗಳನ್ನು ವಿಚಾರಮಾಡಿರುವ ಕೆಲವು ವಿದ್ವಾಂಸರು–"ಭೀಷ್ಮನು ತನ್ನ ಪ್ರಸಿದ್ಧವಾದ ಪ್ರತಿಜ್ಞೆಮಾಡುವುದಕ್ಕೆ ಮೊದಲು ವಿವಾಹಿತನೇ ಆಗಿದ್ದ. ಪ್ರತಿಜ್ಞೆಮಾಡಿದ ನಂತರ ಅವನು ಬೇರೆ ವಿವಾಹಮಾಡಿಕೊಳ್ಳಲಿಲ್ಲ. ಸಂತಾನಾರ್ಥವಾಗಿ ಪತ್ನೀಸಂಬಂಧವನ್ನೂ ತೊರೆದುಬಿಟ್ಟ. ಆದುದರಿಂದ ಅವನು ತನ್ನ ಪ್ರತಿಜ್ಞೆಯ ಅನಂತರ ಬ್ರಹ್ಮಚಾರಿಯಾದವನು"-

ಎಂಬ ಅಭಿಪ್ರಾಯವನ್ನು ಮಂಡಿಸುತ್ತಾರೆ. ಅಭಿಪ್ರಾಯಕ್ಕೆ ಪೋಷಕವಾಗಿ ಅವರು ಈ ಕೆಳಗಿನ ವಾದಗಳನ್ನು ಮಂಡಿಸುತ್ತಾರೆ.

೧) ಭೀಷ್ಮನ ಆ ಪ್ರತಿಜ್ಞೆಯ ಶ್ಲೋಕಗಳ ಸಾಹಿತ್ಯ ಹೀಗಿದೆ:

ಅದ್ಯ ಪ್ರಭೃತಿ ಮೇ ದಾಶ ಬ್ರಹ್ಮಚರ್ಯಂ ಭವಿಷ್ಯತಿ ।
ಅಪುತ್ರಸ್ಯಾಪಿ ಮೇ ಲೋಕಾ ಭವಿಷ್ಯನ್ತ್ಯಕ್ಷಯಾ ದಿವಿ ॥೯೬॥

(ಪರಿತ್ಯಜಾಮ್ಯಹಂ ರಾಜ್ಯಂ ಮೈಥುನಂ ಚಾಪಿ ಸರ್ವಶಃ ।
ಊರ್ಧ್ವರೇತಾ ಭವಿಷ್ಯಾಮಿ ದಾಶ ಸತ್ಯಂ ಬ್ರವೀಮಿ ತೇ ॥)

ಆದಿಪರ್ವ, ಅಧ್ಯಾಯ ೧೦೦

"ಎಲೈ ಬೆಸ್ತನೇ! ಈ ದಿನ ಮೊದಲ್ಗೊಂಡು ನಾನು ಬ್ರಹ್ಮಚರ್ಯದಲ್ಲಿರುವೆನು. ನಾನು ಅಪುತ್ರನಾದರೂ ನನಗೆ ಸ್ವರ್ಗದಲ್ಲಿ ಅಕ್ಷಯವಾದ ಲೋಕಗಳು ದೊರೆಯುತ್ತವೆ. ರಾಜ್ಯವನ್ನೂ ಮತ್ತು ಸ್ತ್ರೀಸಂಗವನ್ನೂ ಸಂಪೂರ್ಣವಾಗಿ ತೊರೆದು ಊರ್ಧ್ವರೇತನಾಗಿಬಿಡುವೆನು. ಇದು ಸತ್ಯ"-ಎಂದು ಇದರ ಅಭಿಪ್ರಾಯ.

ಇಲ್ಲಿ 'ಈ ದಿನ ಮೊದಲುಗೊಂಡು' ನಾನು ಬ್ರಹ್ಮಚಾರಿಯಾಗುವೆನು ಎಂದು ಅವನು ಪ್ರತಿಜ್ಞೆಮಾಡಿದ್ದಾನೆ. ಆದುದರಿಂದ ಅದಕ್ಕೆ ಮೊದಲು ಅವನು ವಿವಾಹಮಾಡಿಕೊಂಡಿದ್ದ; ಪತ್ನೀವಂತನಾಗಿದ್ದ-ಎಂದೇ ಊಹೆಮಾಡಬೇಕಾಗುತ್ತದೆ.

೨) ತಮ್ಮನಾಗಿದ್ದ ವಿಚಿತ್ರವೀರ್ಯನಿಗೆ ಪುತ್ರನಿದ್ದುದರಿಂದ ಭೀಷ್ಮನಿಗೆ ಔರಸಪುತ್ರನಿಲ್ಲದಿದ್ದರೂ ಶಾಸ್ತ್ರೀಯವಾಗಿ ಅವನು ಪುತ್ರವಂತನೇ ಆಗಿದ್ದ. ಪಿತೃಋಣದಿಂದ ಮುಕ್ತನಾದ. ಯಜ್ಞಗಳನ್ನೂ ಮಾಡಿದ. ಆ ಯಜ್ಞಾಚರಣೆಗೋಸ್ಕರವೇ ಪತ್ನೀಸಂಬಂಧವನ್ನು ಹೊಂದಿದ್ದ. ಯಜ್ಞವನ್ನು ಮಾಡಿದ್ದರಿಂದ ಅವನಿಗೆ ಪತ್ನಿಯರು ಇದ್ದೇಇರಬೇಕು ಎಂಬುದು ಅರ್ಥಾಪತ್ತಿ ಪ್ರಮಾಣದಿಂದ ಸಿದ್ಧವಾಗುತ್ತದೆ.

ವಿಚಿತ್ರವೀರ್ಯಕ್ಷೇತ್ರಜಪುತ್ರಲಬ್ಧ ಪಿತೃಋಣಮುಕ್ತಃ ಕೇವಲ ಯಜ್ಞಾರ್ಥಂ ಪತ್ನೀಸಮ್ಬನ್ಧ ಆಸೀತ್ । ಎಂದು ಕುಮಾರಿಲಭಟ್ಟರು ತಂತ್ರವಾರ್ತಿಕದಲ್ಲಿ ಹೇಳುತ್ತಾರೆ.

೩) ವಿವಾಹಸಮಯದಲ್ಲಿ ಪತಿಯು ಪತ್ನಿಯನ್ನು ಧರ್ಮದಲ್ಲಿ ಅರ್ಥದಲ್ಲಿ ಮತ್ತು ಕಾಮದಲ್ಲಿ ಅತಿಕ್ರಮಿಸಬಾರದು. **ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಿತವ್ಯಾ**-ಎಂಬ ಅನುಶಾಸನವಿದೆ. (ಆಪಸ್ತಂಬಸೂತ್ರ). ಇದರ ಪ್ರಕಾರ ಕೇವಲ ಧರ್ಮಾಚರಣೆಗೊಸ್ಕರ, ಕೇವಲ ಅರ್ಥಸಂಪಾದನೆಗೋಸ್ಕರ ಅಥವಾ ಕೇವಲ ಕಾಮಪ್ರಾಪ್ತಿಗೋಸ್ಕರವೂ ವಿವಾಹಮಾಡಿಕೊಳ್ಳಬಹುದು. ಭೀಷ್ಮನು ಮೊದಲು ಧರ್ಮ ಮತ್ತು ಪ್ರಜಾಕಾಮನೆ ಈ ಎರಡು ಪ್ರಯೋಜನಗಳಿ ಗೋಸ್ಕರವೂ ವಿವಾಹಮಾಡಿಕೊಂಡಿದ್ದ. ಆದರೆ ಅನಂತರ ತಂದೆಯನ್ನು

ಸಂತೋಷಪಡಿಸುವುದಕ್ಕೋಸ್ಕರ ಸಂತಾನಪ್ರಾಪ್ತಿಯ ಉದ್ದೇಶವನ್ನು ತೊರೆದ. ಆದುದರಿಂದ ಅವನಿಗೆ ಕೇವಲ ಧರ್ಮಾರ್ಥವಾಗಿ ಪತ್ನಿಯರು ಇದ್ದರು. ಅವರ ಜೊತೆಯಲ್ಲಿ ಅವನು ಯಜ್ಞವನ್ನು ಆಚರಿಸಿದ.

೪) ಭೀಷ್ಮನು ಯಜ್ಞಗಳನ್ನು ಮಾಡಿದ. ತ್ರೇತಾಗ್ನಿಗಳನ್ನು ಹೊಂದಿದ್ದ. ಅವನಿಗೆ ಔರ್ಧ್ವದೈಹಿಕಸಂಸ್ಕಾರಗಳನ್ನು ಮಾಡುವ ಸಮಯದಲ್ಲಿ ಆ ಅಗ್ನಿಗಳನ್ನು ತರಲಾಯಿತು-ಎಂದು ಮಹಾಭಾರತದಲ್ಲಿ ಸ್ಪಷ್ಟವಾದ ಉಲ್ಲೇಖವಿದೆ.

ಸ್ತೂಯಮಾನೋ ಮಹಾತೇಜಾ ಭೀಷ್ಮಸ್ಯಾಗ್ನೀನನುವ್ರಜನ್ |
ಪ್ರಾಪ್ತೋऽಸ್ಮಿ ಸಮಯೇ ರಾಜನ್ನಗ್ನೀನಾದಾಯ ತೇ ವಿಭೋ ||೨೧||

ಅನುಶಾಸನಪರ್ವ ಅಧ್ಯಾಯ ೧೬೭

ಪತ್ನಿಯಿಲ್ಲದವನಿಗೆ ಯಜ್ಞದಲ್ಲಿ ಅಧಿಕಾರವಿಲ್ಲ.

ಅಯಜ್ಞೋ ವಾ ಏಷಃ ಯೋऽಪತ್ನೀಕಃ | ಧರ್ಮಲಬ್ಧೈರ್ಯುತೋ ದಾರೈಃ ಅಗ್ನೀನಾದೃತ್ಯ ಸುವ್ರತಃ | ಪತ್ನೀವದಗ್ನಿಹೋತ್ರಂ ಭವತಿ |

ಅವನು ಅಗ್ನಿಗಳನ್ನು ತಂದುದಾಗಿ ಹೇಳಿರುವುದರಿಂದ ಅವನು ಸಪತ್ನೀಕನೇ ಆಗಿದ್ದಿರಬೇಕು.

೫) "ಮಹಾಬಲಶಾಲಿ ಈತ. ದೇವಸದೃಶನಾದವನು. ತಂದೆಗೋಸ್ಕರ ಬ್ರಹ್ಮಚಾರಿಯಾದವನು. ಊರ್ಧ್ವರೇತಸ್ಕನಾಗಿದ್ದರೂ ಸಾವಿರಾರು ಸ್ತ್ರೀಯರಿಂದ ಪರಿವೃತನಾಗಿರುವಂತೆ ಈತನು ನನಗೆ ಕಾಣುತ್ತಾನೆ.

ಸ್ತ್ರೀಸಹಸ್ರೈಃ ಪರಿವೃತಂ ಪಶ್ಯಾಮೀವೋರ್ಧ್ವರೇತಸಮ್ ||೨೦||

ಶಾಂತಿಪರ್ವ ಅಧ್ಯಾಯ-೫೦

ಎಂದು ಶ್ರೀಕೃಷ್ಣನು ಭೀಷ್ಮನನ್ನು ಕೊಂಡಾಡುತ್ತಾನೆ. ಇಲ್ಲಿ ಭೀಷ್ಮನು ಸಾವಿರಾರು ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟಿದ್ದ-ಎಂದು ಸ್ಪಷ್ಟವಾಗಿ ಹೇಳಿದೆ. ಅವರು ಪತ್ನಿಯರೇ ಆಗಿರಬೇಕು.

ಭೀಷ್ಮನು ವಿವಾಹವಾಗಿದ್ದನೆಂಬುದಕ್ಕೆ ಪೋಷಕವಾದ ಮೇಲ್ಕಂಡ ಅಭಿಪ್ರಾಯಗಳು ತಂಜಾವೂರಿನಲ್ಲಿ ಹಲವಾರು ವರ್ಷಗಳ ಹಿಂದೆ ನಡೆದ ಪಂಡಿತ ಮಹಾಸಭೆಯಲ್ಲಿ ಮಂಡಿಸಲ್ಪಟ್ಟುವು. ಅದಕ್ಕೆ ಪ್ರತಿವಾದಗಳೂ ಪುಷ್ಕಳವಾಗಿ ಕೊಡಲ್ಪಟ್ಟುವು. ಆ ಅಭಿಪ್ರಾಯವು ಸರಿಯಲ್ಲವೆಂದು ಪಂಡಿತರ ಗೋಷ್ಠಿಯು ಸಿದ್ಧಾಂತಮಾಡಿತು.

ಅಲ್ಲಿ ಪ್ರತಿವಾದಿಗಳು ಕೊಟ್ಟ ಅಭಿಪ್ರಾಯ ಮತ್ತು ಯುಕ್ತಿಗಳನ್ನು ಹೀಗೆ ಸಂಕ್ಷೇಪಿಸಬಹುದು.

೧) ಭೀಷ್ಮನು ತಾನು ವೀರಪ್ರತಿಜ್ಞೆಯನ್ನು ಮಾಡುವುದಕ್ಕೆ ಮೊದಲು

ವಿವಾಹಮಾಡಿಕೊಂಡಿದ್ದ. ಅವನಿಗೆ ಪತ್ನಿಯಿದ್ದಳು-ಎಂದು ಮಹಾಭಾರತದಲ್ಲಿ ಎಲ್ಲಿಯೂ ಹೇಳಿಲ್ಲ. ಕೇವಲ ಅರ್ಥಾಪತ್ತಿಪ್ರಮಾಣದ ಆಧಾರದ ಮೇಲೆ ಅದನ್ನು ಊಹಿಸಬೇಕು. ಆದರೆ ಅದಕ್ಕೆ ವಿರುದ್ಧವಾಗಿ ಪ್ರಬಲವಾದ ಪ್ರತಿಯುಕ್ತಿಗಳೂ ಇವೆ.

೨) ಬ್ರಹ್ಮಚಾರಿಗಳಲ್ಲಿ ನೈಷ್ಠಿಕ ಮತ್ತು ಉಪಕುರ್ವಾಣ-ಎಂದು ಎರಡು ಭೇದಗಳುಂಟು. 'ವಿವಾಹವನ್ನು ಮಾಡಿಕೊಳ್ಳುವುದೇ ಇಲ್ಲ. ಗುರುಸೇವಾನಿಷ್ಠೆಯಲ್ಲಿಯೇ ಇರುವೆನು'-ಎಂದು ಪ್ರತಿಜ್ಞೆಮಾಡಿ ಅದರಂತೆ ನಡೆದುಕೊಳ್ಳುವವನು ನೈಷ್ಠಿಕ. ಬ್ರಹ್ಮಚರ್ಯಾಶ್ರಮದ ಅನಂತರ ವಿವಾಹಮಾಡಿಕೊಳ್ಳುವ ಬಯಕೆ ಇರುವವನು ಉಪಕುರ್ವಾಣ. ಪ್ರತಿಜ್ಞೆಮಾಡುವುದಕ್ಕೆ ಮೊದಲು ಭೀಷ್ಮನು ಉಪಕುರ್ವಾಣ ಎಂಬ ಹೆಸರಿನ ಬ್ರಹ್ಮಚಾರಿಯಾಗಿದ್ದ. ಮುಂದೆ ವಿವಾಹಮಾಡಿಕೊಳ್ಳುವ ಅಭಿಪ್ರಾಯವೂ ಅವನಿಗಿತ್ತು. ಆದರೆ ತಂದೆಯ ಸಂತೋಷಕ್ಕೋಸ್ಕ ವೀರಪ್ರತಿಜ್ಞೆಮಾಡಿದುದರಿಂದ ತಾನು ಅದು ಮೊದಲುಗೊಂಡು ನೈಷ್ಠಿಕಬ್ರಹ್ಮಚಾರಿಯಾಗಿರುವುದಾಗಿ ತೀರ್ಮಾನಿಸಿದ. ಅದ್ಯ ಪ್ರಭೃತಿ ಬ್ರಹ್ಮಚರ್ಯಂ ಮೇ ಭವಿಷ್ಯತಿ-ಎಂದರೆ ನೈಷ್ಠಿಕಬ್ರಹ್ಮಚಾರಿಯಾಗುವೆನು-ಎಂದೇ ಅಭಿಪ್ರಾಯ. ಇದಕ್ಕೆ ಮೊದಲು 'ಅವನು ವಿವಾಹಮಾಡಿಕೊಂಡಿದ್ದ' –ಎಂಬ ಅರ್ಥವು ಇಲ್ಲಿ ಏಳುವುದೇ ಇಲ್ಲ.

೩) ಕುಮಾರಿಲಭಟ್ಟರು ಮಹಾವಿದ್ವಾಂಸರು. ಮೀಮಾಂಸಶಾಸ್ತ್ರದಲ್ಲಿ ಅವರ ಅಭಿಪ್ರಾಯವನ್ನು ಪೂರ್ವಾಚಾರ್ಯರು ಮಾನ್ಯಮಾಡುತ್ತಾರೆ. ಆದರೆ ಅವರು ಇತಿಹಾಸ-ಪುರಾಣಗಳ ವ್ಯಾಖ್ಯಾನದಲ್ಲಿ ಕರ್ಮಪ್ರಕ್ರಿಯಾನಿಷ್ಠೆಯ ಹಠದಿಂದ ಅನೇಕ ಕಡೆ ಅತಿವಾದಗಳನ್ನು ಮಾಡುತ್ತಾರೆ. ಇವುಗಳು ಆಚಾರ್ಯರಿಗೆ ಮಾನ್ಯವಾಗಿಲ್ಲ. ಉದಾಹರಣೆಗೆ 'ಶ್ರೀರಾಮನು ಪತ್ನಿಯ ಪ್ರತಿನಿಧಿಯಾಗಿ ಸೀತೆಯ ಪ್ರತಿಮೆ ಯನ್ನಿಟ್ಟುಕೊಂಡು ಯಜ್ಞವನ್ನು ಮಾಡಿದ'–ಎಂದು ರಾಮಾಯಣದ ಉತ್ತರಕಾಂಡದಲ್ಲಿ ಹೇಳಿದೆ. ನಮ್ಮ ರಾಷ್ಟ್ರಕವಿಯಾದ ಕಾಳಿದಾಸನೂ ಇದನ್ನು ಮಾನ್ಯಮಾಡುತ್ತಾನೆ.

ಸೀತಾಂ ಹಿತ್ವಾ ದಶಮುಖರಿಪುಃ ನೋಪಯೇಮೇ ಯದನ್ಯಾಮ್ ।
ತಸ್ಯಾ ಏವ ಪ್ರತಿಕೃತಿಸಖೋ ಯತ್ಕ್ರತೂನಾಜಹಾರ ॥

ರಘುವಂಶ ಸರ್ಗ ೧೪

ಆದರೆ ಕುಮಾರಿಲಭಟ್ಟರು-'ಪತ್ನಿಯ ಸಾಕ್ಷಾತ್ಸಾನ್ನಿಧ್ಯವಿಲ್ಲದೇ ಯಜ್ಞವನ್ನು ಅವನು ಹೇಗೆ ಮಾಡಲಾದೀತು? ಸೀತೆಯ ಪ್ರತಿಮೆಯನ್ನಿಟ್ಟುಕೊಂಡು ಅವನು ಯಜ್ಞಮಾಡಿದ್ದು ಸುಳ್ಳು. ಬೇರೆ ವಿವಾಹಮಾಡಿಕೊಂಡು ಹೊಸ ಹೆಂಡತಿಯೊಡನೆ ಯಜ್ಞಮಾಡಿದ'-ಎಂದೇ ಹೇಳುತ್ತಾರೆ. ಹಾಗೆಯೇ 'ಮಹಾಭಾರತದಲ್ಲಿ ಐದು ಮಂದಿ ಪಾಂಡವರು ದ್ರೌಪದಿಯೊಬ್ಬಳನ್ನು ವಿವಾಹವಾದರು–ಎಂಬುದು ಸುಳ್ಳು.

ಆ ಐವರೂ ದ್ರುಪದರಾಜ್ಯಲಕ್ಷ್ಮಿಯನ್ನು ಹಂಚಿಕೊಂಡರು'-ಎಂದು ಅವರು ಆ ಪ್ರಸಂಗಕ್ಕೆ ವ್ಯಾಖ್ಯಾನಮಾಡುತ್ತಾರೆ. ಅವರ ಈ ಎರಡು ವ್ಯಾಖ್ಯಾನಗಳೂ ರಾಮಾಯಣ-ಮಹಾಭಾರತಗಳ ಕಥೆಗೂ ಪೂರ್ವಸೂರಿಗಳ ಅಭಿಪ್ರಾಯಕ್ಕೂ ವಿರುದ್ಧವಾಗಿವೆ. ಇದಕ್ಕೆಲ್ಲಾ ಕುಮಾರಿಲಭಟ್ಟರು ಕೊಡುವ ಪ್ರಮಾಣ ಅರ್ಥಾಪತ್ತಿಯೊಂದೇ. ಪ್ರಕೃತ ಭೀಷ್ಮನ ವಿಷಯದಲ್ಲಿ ಭೀಷ್ಮನು ವಿವಾಹಮಾಡಿಕೊಂಡಿದ್ದನೆಂಬ ಅವರ ಘೋಷಣೆಯಲ್ಲೂ ಈ ಅರ್ಥಾಪತ್ತಿಪ್ರಮಾಣದ ಚಮತ್ಕಾರವೇ ಕೆಲಸ ಮಾಡಿದೆ.

೪) ವಿವಾಹಸಂಸ್ಕಾರದಲ್ಲಿ -"ಧರ್ಮದಲ್ಲೂ, ಅರ್ಥದಲ್ಲೂ, ಕಾಮದಲ್ಲೂ-ಪತ್ನಿಯನ್ನು ಮೀರಬಾರದು"—ಎಂಬ ಅನುಶಾಸನವು ಬರುತ್ತದೆ. ಮೂರು ಪುರುಷಾರ್ಥಗಳಲ್ಲೂ ಅವಳನ್ನು ಮೀರಬಾರದು-ಎಂದು ಇದಕ್ಕೆ ಅರ್ಥವಾಗುತ್ತದೆಯೇ ಹೊರತು ಯಾವುದಾದರೂ ಒಂದೆರಡರಲ್ಲಿ ಅವಳನ್ನು ಮೀರಬಹುದು-ಎಂಬ ಅಭಿಪ್ರಾಯ ಬರುವುದಿಲ್ಲ. ಕೇವಲ ಧರ್ಮದ ಪತ್ನೀ, ಕೇವಲ ಅರ್ಥದ ಪತ್ನೀ, ಕೇವಲ ಕಾಮದ ಪತ್ನೀ-ಎಂಬ ವಿಭಾಗವು ಧರ್ಮಶಾಸ್ತ್ರಗಳಲ್ಲಿ ಕಂಡುಬರುವುದಿಲ್ಲ. ಅಂತಹ ಪತ್ನಿಯರಿಗೆ ಉದಾಹರಣೆಗಳೂ ಇಲ್ಲ. ಮೂರು ಪುರುಷಾರ್ಥಗಳಲ್ಲೂ ಆಕೆಗೆ ದ್ರೋಹಮಾಡುವುದಿಲ್ಲ; ಮೂರರಲ್ಲೂ ಆಕೆಯ ವಿಷಯದಲ್ಲಿ ಸರಿಯಾಗಿ ನಡೆದುಕೊಳ್ಳುತ್ತೇನೆ—ಎಂದು ವಿವಾಹಕಾಲದಲ್ಲಿ ಪ್ರತಿಜ್ಞೆಮಾಡಿ ಅನಂತರಕಾಲದಲ್ಲಿ ಆ ಪ್ರತಿಜ್ಞೆಯನ್ನು ಮುರಿದು ಯಾವುದಾದರೂ ಒಂದು ಪುರುಷಾರ್ಥಕ್ಕೆ ಮಾತ್ರ ಆ ಪತ್ನೀತ್ವವನ್ನು ಸೀಮಿತಗೊಳಿಸುವುದು ಧರ್ಮಕ್ಕೆ ವಿರುದ್ಧ; ಪ್ರಕೃತಿನಿಯಮಕ್ಕೂ ವಿರುದ್ಧ. ಭೀಷ್ಮನಿಗೆ ಪತ್ನಿಯರೇನಾದರೂ ಇದ್ದು ಭೀಷ್ಮನು ಆ ನೀತಿಯನ್ನು ಅನುಸರಿಸಿದ್ದರೆ ಆ ಪತ್ನಿಯರು ಅವನನ್ನು ಪ್ರತಿಭಟಿಸುತ್ತಿದ್ದರು. 'ಭೀಷ್ಮನು ತಮ್ಮೊಡನೆ ಕಾಮಸಂಬಂಧವನ್ನು ಸಂಪೂರ್ಣವಾಗಿ ತ್ಯಜಿಸಿದರೂ ಆತನೊಡನೆ ಧಾರ್ಮಿಕವಾಗಿ ಯಜ್ಞಕಾರ್ಯಗಳಲ್ಲಿ ಮಾತ್ರ ಹಾಜರಾಗಲು ಅವನ ಪತ್ನಿಯರು ಒಪ್ಪಿದರು'—ಎಂಬ ಯಾವ ಉಲ್ಲೇಖವೂ ಮಹಾಭಾರತದಲ್ಲಿ ಕಂಡುಬರುವುದಿಲ್ಲ. ಆ ಬಗೆಗೆ ಸೂಚನೆಯೂ ಇಲ್ಲ.

೫) 'ಸಂತಾನದ ಅಪೇಕ್ಷೆಯಿಲ್ಲ. ಆದರೆ ಯಜ್ಞಮಾಡದೇ ಇದ್ದರೆ ಅಧರ್ಮ. ಅದಕ್ಕೋಸ್ಕರ ಕೇವಲ ಯಜ್ಞಾರ್ಥವಾಗಿ ಪತ್ನಿಯನ್ನು ಇಟ್ಟುಕೊಳ್ಳುತ್ತೇನೆ'-ಎಂಬ ನೀತಿಯು ಶ್ರುತಿ-ಸ್ಮೃತಿಗಳಿಗೆ ವಿರುದ್ಧ. ಏಕೆಂದರೆ ಸಂತಾನಪಡೆಯದೇ ಇರುವ ಗೃಹಸ್ಥನೂ ಯಜ್ಞವಿಹೀನನೇ ಆಗುತ್ತಾನೆ. ಸಂತಾನಪಡೆಯುವುದೂ ಒಂದು ಯಜ್ಞವೇ. ಅದಕ್ಕೆ ರೇತೋಯಜ್ಞ ಎಂದು ಹೆಸರು.

೬) ಪತಿ-ಪತ್ನಿಯರು ಪರಸ್ಪರ ಒಡಂಬಡಿಕೆಯಿಂದ 'ಸಂತಾನಯಜ್ಞವನ್ನು

ತ್ಯಜಿಸಿ ಉಳಿದ ಯಜ್ಞಗ್ಗಳನ್ನು ಮಾಡಬಹುದಲ್ಲಾ!' ಎಂದರೆ–ಭೀಷ್ಮನು ಅಂತಹ ಒಡಂಬಡಿಕೆಯನ್ನು ಮಾಡಿಕೊಂಡ ಉಲ್ಲೇಖ ಮಹಾಭಾರತದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ.

೭) ಭೀಷ್ಮನು ಯಜ್ಞಗಳನ್ನು ಮಾಡಿದ್ದ ಎಂಬುದಕ್ಕೆ ಮಹಾಭಾರತದಲ್ಲಿ ಆಧಾರಗಳಿವೆ. ಆದರೆ ಸಪತ್ನೀಕನಾಗಿ ಯಜ್ಞಮಾಡಿದ ಎಂಬ ದಾಖಲೆ ಇಲ್ಲ. ಅಪತ್ನೀಕನಾದವನಿಗೆ ಯಜ್ಞಮಾಡಲು ಆಧಾರವೇ ಇಲ್ಲ–ಎಂದು ಶಾಸ್ತ್ರಗಳು ಹೇಳುತ್ತವೆಯಲ್ಲಾ–ಎಂದರೆ ಪತ್ನಿಯು ಯಜ್ಞಕ್ಕೆ ಒಂದು ಮುಖ್ಯವಾದ ಅಂಗ ಎಂಬುದಷ್ಟೇ ಶಾಸ್ತ್ರಗಳ ಅಭಿಪ್ರಾಯ.

೮) ಪತ್ನಿಯು ಇಲ್ಲದೆಯೇ ಯಜ್ಞಗ್ಗಳನ್ನು ಮಾಡುವುದಕ್ಕೆ ಶಾಸ್ತ್ರದಲ್ಲಿ ಅವಕಾಶವುಂಟು. ಹಾಗೆ ಯಜ್ಞಮಾಡಿದ ಮಹಾತ್ಮರ ಉದಾಹರಣೆಗಳೂ ಇವೆ-ಎಂದು ಶ್ರೌತಸೂತ್ರವ್ಯಾಖ್ಯಾನಕಾರರು ಹೇಳುತ್ತಾರೆ. ಉದಾಹರಣೆಗೆ: **ಯೋ ವಾ ಕಶ್ಚಿದವಿದ್ಯಮಾನಾಯಾಂ** ಎಂಬ ಆಪಸ್ತಂಬಶ್ರೌತಸೂತ್ರಕ್ಕೆ ಸೂತ್ರದೀಪಿಕಾವ್ಯಾಖ್ಯಾನವನ್ನು ಗಮನಿಸಬಹುದು. "**ಅಸನ್ನಿಹಿತಾಯಾಂ ಅಭಾವೇ ಚ ತಸ್ಯಾಃ–ಇತ್ಯರ್ಥಃ ಅವಿಶೇಷಾತ್ ।**" ಯಜ್ಞದಲ್ಲಿ ಪತ್ನಿಯು ಸಮೀಪದಲ್ಲಿ ಇಲ್ಲದಿದ್ದರೆ ಏನು ಮಾಡಬೇಕು? ಪತ್ನಿಯು ಇಲ್ಲದೆಯೇ ಇದ್ದರೆ ಏನು ಮಾಡಬೇಕು?-ಎಂಬ ಎರಡು ಕಲ್ಪಗಳೂ ಇಲ್ಲಿವೆ. ಅವುಗಳಲ್ಲಿ ಭೀಷ್ಮನದು ಎರಡನೆಯ ಕಲ್ಪ. ಅದರಂತೆ ಅವನು ಅವಿವಾಹಿತನಾಗಿದ್ದರೂ ಯಜ್ಞವನ್ನು ಆಚರಿಸಿದ.

೯) ಯಜ್ಞಕ್ಕೆ ಯಜಮಾನನೇ ಸ್ವಾಮಿಯು. **ಅಸ್ತ್ಯಗ್ನಿಹೋತ್ರಂ ಮೇ ಯಜ್ಞಂ ।** ಬತ್ತ, ಯವೆ, ಕಪಾಲ ಮತ್ತು ಪತ್ನೀ-ಇವರು ಯಜ್ಞದ ಪ್ರಸಿದ್ಧವಾದ ಅಂಗಗಳು ಮಾತ್ರ. ಕರ್ಮಚೋದನೆಯೂ ಕೂಡ ಯಜಮಾನನನ್ನೇ ಅಧಿಕರಿಸಿದೆ. ಪತ್ನಿಯನ್ನು ಅಧಿಕರಿಸಿಲ್ಲ. **ತಥಾ ಕರ್ಮಚೋದನಾ ಅಪಿ ಯಜಮಾನಮೇವ ಅಧಿಕುರ್ವನ್ತಿ। ನ ಪತ್ನೀಂ।** ಅಪತ್ನೀಕನು ಕೂಡ ಅಗ್ನಿಹೋತ್ರವನ್ನು ಮಾಡಬಹುದು-ಎಂದು ಬಹ್ವೃಚಬ್ರಾಹ್ಮಣವು ಹೇಳುತ್ತದೆ. **ಬಹ್ವೃಚಬ್ರಾಹ್ಮಣೇ ಚೋಕ್ತಂ ತಸ್ಮಾದಪತ್ನೀಕೋಽಪಿ ಅಗ್ನಿಹೋತ್ರಮಾಹರೇದಿತಿ।** ಜೈಮಿನೀಯತಲವಕಾರ ಕಲ್ಪದಲ್ಲಿಯೂ ಕೂಡ ಅಪತ್ನೀಕನಾದವನು ಅಗ್ನಿಯನ್ನು ಇಟ್ಟುಕೊಳ್ಳುವ ಕಲ್ಪವನ್ನು ಹೇಳಿದೆ. 'ಇದೆಲ್ಲಾ ಶಾಸ್ತ್ರವ್ಯಾಖ್ಯಾನದ ಕೌಶಲವಾಯಿತು. ಆದರೆ ಅವಿವಾಹಿತರಾಗಿದ್ದವರು ಮತ್ತು ಸಾಕ್ಷಾತ್ತಾಗಿ ಪತ್ನೀಸಾನ್ನಿಧ್ಯವಿಲ್ಲದವರು ಯಜ್ಞಗಳನ್ನು ಮಾಡಿದರು-ಎಂಬುದಕ್ಕೆ ಉದಾಹರಣೆ ಇದೆಯೇ?'-ಎಂದರೆ: ಸ್ಪಷ್ಟವಾಗಿದೆ. ಕಣ್ವ, ವಿಭಾಂಡಕ, ಭೀಷ್ಮ, ಶ್ರೀರಾಮ ಇತ್ಯಾದಿ ಮಹಾತ್ಮರು ಇದಕ್ಕೆ ಉದಾಹರಣೆ. **ಕಿಂ ಚಾಚಾರೋಽಪ್ಯತ್ರ ದೃಷ್ಟಃ ಶಿಷ್ಟತಮಾನಾಂ ಪೂರ್ವೇಷಾಂ**

ಯಥಾ ಕಣ್ವವಿಭಾಂಡಕಭೀಷ್ಮಾದೀನಾಂ ಯಥಾ ಚ ಭಗವತೋ ದಾಶರಥೇಃ |
ಆದುದರಿಂದ ಪತ್ನಿಯಿಲ್ಲದಿದ್ದರೂ ಯಜ್ಞಕರ್ಮವನ್ನು ನಿಲ್ಲಿಸಬೇಕಾಗಿಲ್ಲ.
ತಸ್ಮಾತ್ಸಿದ್ಧಂ ಅಭಾವೇ ಽಪಿ ಪತ್ನ್ಯಾಃ ನ ಕರ್ಮಣೋ ನಿವೃತ್ತಿಃ |

ಈ ವ್ಯಾಖ್ಯಾನದ ಪರಿಶೀಲನೆಯಿಂದ ಕಂಡುಬರುವುದೇನೆಂದರೆ: ಅವಿವಾಹಿತನೂ ಕೂಡ ಯಜ್ಞವನ್ನೂ ಮಾಡಲು ಅವಕಾಶವಿದೆ. ಹಾಗೆ ಮಾಡಿರುವ ಉದಾಹರಣೆಗಳೂ ಉಂಟು. ಭೀಷ್ಮನೂ ಈ ವರ್ಗಕ್ಕೆ ಸೇರಿದ್ದಾನೆ, ಎಂಬುದು. ಆದುದರಿಂದ 'ಭೀಷ್ಮನು ಯಜ್ಞಮಾಡಿದನು. ಅವನಿಗೆ ಪತ್ನಿಯು ಇದ್ದೇಇರಬೇಕು'–ಎಂದು ವಾದಮಾಡುವುದು ಕೇವಲ ಹಠವಾಗುತ್ತದೆ.

೧೦) ಭೀಷ್ಮನು ಅನಾಶ್ರಮೀ ಎಂಬ ಅಭಿಪ್ರಾಯವನ್ನು ಕೆಲವು ಆಚಾರ್ಯರು ಸೂಚಿಸುತ್ತಾರೆ. **ದೃಶ್ಯತೇ ಹಿ ರೈಕ್ವಭೀಷ್ಮಸಂವರ್ತಾದೀನಾಂ ಅನಾಶ್ರಮಿಣಾಮಪಿ ಬ್ರಹ್ಮವಿದ್ಯಾನಿಷ್ಠಾತ್ವಂ (ಶ್ರೀಭಾಷ್ಯಸೂತ್ರ ೪೫೪).** ಇಲ್ಲಿಯೂ ಕೂಡ ಭೀಷ್ಮನು ವಿವಾಹಿತನೆಂಬ ಸೂಚನೆ ಕಂಡುಬರುವುದಿಲ್ಲ. ಉಪಕುರ್ವಾಣಬ್ರಹ್ಮಚಾರಿಯ ಸಂಕಲ್ಪವನ್ನು ಮೊದಲು ಹೊಂದಿದ್ದು ವ್ರತಸಮಾವರ್ತನವನ್ನು ಮಾಡಿಕೊಂಡು ಅನಂತರ ಕಾರಣಾಂತರದಿಂದ ವಿವಾಹಮಾಡಿಕೊಳ್ಳದೇ ಇದ್ದುದರಿಂದ ಅವನು ಅನಾಶ್ರಮೀ ಎನಿಸುತ್ತಾನೆ.

೧೧) **ಸ್ತ್ರೀಸಹಸ್ರೈಃ ಪರಿವೃತಂ ಪಶ್ಯಾಮಿವೋರ್ಧ್ವರೇತಸಮ್ |** ಎಂಬ ಶ್ಲೋಕದಲ್ಲಿ ಭೀಷ್ಮನು ಸಾವಿರಾರು ಸ್ತ್ರೀಯರಿಂದ ಪರಿವೃತನಾಗಿರುವಂತೆ ಕಾಣುತ್ತಾನೆ ಎಂಬ ಅಭಿಪ್ರಾಯವೇ ಇದೆ. ಆದರೆ ಸ್ತ್ರೀಯರೆಲ್ಲಾ ಭೀಷ್ಮನ ಪತ್ನಿಯರು ಎಂದು ತೀರ್ಮಾನಿಸುವುದು ಶುದ್ಧಾಂಗವಾಗಿ ತಪ್ಪು. ಏಕೆಂದರೆ: ಭೀಷ್ಮನು ಜ್ಞಾನವೃದ್ಧ: ವಯೋವೃದ್ಧ. ಸ್ತ್ರೀಯರೂ ಪುರುಷರೂ ಆತನಿಗೆ ಯಥೋಚಿತವಾಗಿ ಸೇವೆಮಾಡಿ ಪುಣ್ಯಗಳಿಸುವ ಅಧಿಕಾರವಿತ್ತು. ಇದಲ್ಲದೇ ಆತ್ಮಾನಂದದಲ್ಲಿ ಉಳಿದ ಎಲ್ಲ ಆನಂದಗಳೂ ಸೇರಿಹೋಗುತ್ತವೆ. ಆದುದರಿಂದ ಭೀಷ್ಮನು ವೃದ್ಧನಾಗಿದ್ದರೂ ಬ್ರಹ್ಮಚಾರಿಯಾಗಿದ್ದರೂ ಸಾವಿರಾರು ಹೆಂಡತಿಯರ ಸೇವೆಯಿಂದ ಉಂಟಾಗುವ ಅಥವಾ ಅದಕ್ಕೂ ಮಿಗಿಲಾದ ಪರಮಾನಂದವನ್ನು ಅನುಭವಿಸುತ್ತಿದ್ದ ಎಂಬ ಅಭಿಪ್ರಾಯವೂ ಆ ಶ್ಲೋಕದ ಇವ–ಎಂಬ ಶಬ್ದದಿಂದ ಸೂಚಿತವಾಗುವ ಉತ್ಪ್ರೇಕ್ಷೆಯಲ್ಲಿ ಅಡಕವಾಗಿದೆಯೆಂದು ಹೇಳಬಹುದು.

ಭೀಷ್ಮನು ವಿವಾಹಿತನಾಗಿದ್ದ ಎಂಬ ಅಭಿಪ್ರಾಯವನ್ನು ಮೇಲ್ಕಂಡ ಪ್ರಬಲವಾದ ಯುಕ್ತಿಗಳಿಂದ ಸಭೆಯು ಖಂಡನೆಮಾಡಿತು.

ಇದಲ್ಲದೇ ಭೀಷ್ಮನು ಎಂದೂ ವಿವಾಹಿತನಾಗಿರಲಿಲ್ಲ-ಎಂಬುದನ್ನು ಸ್ಪಷ್ಟವಾಗಿ ಸೂಚಿಸುವ ಮಹಾಭಾರತಶ್ಲೋಕವನ್ನು ನೋಡುತ್ತೇವೆ.

XXII

ಸತ್ಯವತಿಯು ಭೀಷ್ಮನಿಗೆ–"ಅಪ್ಪ! ನೀನು ರಾಜ್ಯದಲ್ಲಿ ಅಭಿಷಿಕ್ತನಾಗಿ ಭರತಸಾಮ್ರಾಜ್ಯವನ್ನು ಆಳುವವನಾಗು. ಧಾರ್ಮಿಕರಾದ ಪತ್ನಿಯರನ್ನು ವಿವಾಹಮಾಡಿಕೊ. ಪಿತಾಮಹರನ್ನು ಮುಳುಗಿಸಬೇಡ.

ರಾಜ್ಯೇ ಚೈವಾಭಿಷಿಚ್ಯಸ್ವ ಭಾರತಾನನುಶಾಧಿ ಚ ।
ದಾರಾಂಶ್ಚ ಕುರು ಧರ್ಮೇಣ ಮಾ ನಿಮಜ್ಜೀಃ ಪಿತಾಮಹಾನ್ ॥

ಆದಿಪರ್ವ-ಅಧ್ಯಾಯ ೧೦೩

ಇದಕ್ಕೆ ಮೊದಲೇ ಭೀಷ್ಮನಿಗೆ ವಿವಾಹವಾಗಿದ್ದ ಪಕ್ಷದಲ್ಲಿ ಸತ್ಯವತಿಯು ಭೀಷ್ಮನಿಗೆ 'ಪತ್ನಿಯನ್ನು ಮಾಡಿಕೊ'–ಎಂದು ಉಪದೇಶಿಸುತ್ತಿರಲಿಲ್ಲ. 'ವಿವಾಹವಾಗಿರುವ ಪತ್ನಿಯರಲ್ಲಿ ಸಂತಾನವನ್ನು ಪಡೆ'–ಎಂದು ಮಾತ್ರವೇ ಉಪದೇಶಮಾಡಬೇಕಾಗಿದ್ದಿತು. ಕೊನೆಯದಾಗಿ-ಭೀಷ್ಮನು ನಿಜವಾಗಿಯೂ ಯಾವಾಗಲಾದರೂ ವಿವಾಹಿತನಾಗಿದ್ದ ಪಕ್ಷದಲ್ಲಿ ಮಹಾಭಾರತದಲ್ಲಿ ಎಲ್ಲಾದರೂ ಒಂದುಕಡೆ ಆ ವಿವಾಹದ ಉಲ್ಲೇಖವು ಬರುತ್ತಿದ್ದಿತು. ಯಾವುದಾದರೂ ಪತ್ನಿಯ ಹೆಸರು ಎಲ್ಲಾದರೂ ಕಂಡುಬರುತ್ತಿದ್ದಿತು. ಆದರೆ ಅವೆರಡೂ ಮಹಾಭಾರತದಲ್ಲಿ ಸಿಕ್ಕುವುದಿಲ್ಲ. ಭೀಷ್ಮನು ದೇಹತ್ಯಾಗಮಾಡಿದ ಸಮಯದಲ್ಲಿ ಕೂಡ ಆತನ ಯಾವ ಪತ್ನಿಯ ಹೆಸರೂ ಬರುವುದಿಲ್ಲ. 'ಭೀಷ್ಮನ ವಿವಾಹ ಅಷ್ಟೇನೂ ಮುಖ್ಯವಲ್ಲ. ಆದುದರಿಂದ ಆ ವಿವಾಹದ ಪ್ರಸ್ತಾಪವಾಗಲೀ, ಪತ್ನಿಯ ಹೆಸರಾಗಲೀ ಅಲ್ಲಿ ಬಂದಿಲ್ಲ.' ಎಂದು ವಾದಿಸುವುದು ಕೂಡ ಉಚಿತವಲ್ಲ. ಏಕೆಂದರೆ: ಕಥಾದೃಷ್ಟಿಯಿಂದ ಭೀಷ್ಮನಿಗಿಂತಲೂ ಗೌಣಪಾತ್ರವೆಂದು ಪರಿಗಣಿಸಬಹುದಾದ ಪಾತ್ರ ವಿದುರನದು. ಅವನ ವಿವಾಹ ಮತ್ತು ಹೆಂಡತಿಯ ಕುಲದ ವಿಷಯವನ್ನು ಕೂಡ ಮಹಾಭಾರತವು ಹೇಳುತ್ತದೆ. ಹೀಗಿರುವಾಗ ಪ್ರಮುಖಪಾತ್ರವಾದ ಭೀಷ್ಮನಿಗೆ ವಿವಾಹವಾಗಿದ್ದರೆ ಆ ವಿವಾಹದ ಪ್ರಸ್ತಾಪವನ್ನೂ ಪತ್ನಿಯ ನಾಮಧೇಯದ ಉಲ್ಲೇಖವನ್ನೂ ಮಹಾಭಾರತವು ಏಕೆ ಬಿಡುತ್ತಿತ್ತು?

ಹೀಗೆ ಎಲ್ಲ ವಾದಗಳನ್ನೂ ವಿಚಾರಪೂರ್ವಕವಾಗಿ ನೋಡಿದಾಗ ಭೀಷ್ಮನು ವಿವಾಹವನ್ನು ಎಂದಿಗೂ ಮಾಡಿಕೊಂಡಿರಲಿಲ್ಲ. ಅವನು ಅಜೀವಬ್ರಹ್ಮಚಾರೀ ಎಂಬ ಸಿದ್ಧಾಂತಗಳೇ ಉಳಿಯುತ್ತವೆ. ಬ್ರಹ್ಮಚಾರೀ ಭೀಷ್ಮನಿಗೆ ಕಲ್ಪಿತವಿವಾಹವನ್ನು ಕೂಡಿಸುವ ಪ್ರಯತ್ನವು ನ್ಯಾಯಸಂಗತವಾಗುವುದಿಲ್ಲ.

–ವರದದೇಶಿಕಾಚಾರ್ಯರಂಗಪ್ರಿಯ

ಮಹಾಭಾರತದ ಮೂವತ್ತನೆಯ ಸಂಪುಟದ ವಿಷಯಾನುಕ್ರಮಣಿಕೆ

ಅಶ್ವಮೇಧಿಕಪರ್ವ

ದ್ವಿತೀಯಮುದ್ರಣದ ಪ್ರಸ್ತಾವನೆ

ದಯಾಮಯನಾದ ಭಗವಂತನ ದಯೆಯಿಂದ DTP / /ಯಲ್ಲಿ ಈ ಸಂಪುಟದ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಇದು ಬಹಳ ಹಿಂದೆಯೇ ಹೊರಬರಬೇಕಾಗಿದ್ದಿತು. ಹಲವಾರು ಕಾರಣಗಳಿಂದಾಗಿ ಸಾವಕಾಶವಾಯಿತು. ಈ ಸಂಪುಟದ ಪ್ರಕಟಣೆಯಿಂದ ಸುಮಾರು ನಾಲ್ಕುನೂರು ಗ್ರಾಹಕರಿಗೆ ಮಹಾಭಾರತದ ಪೂರ್ಣಮಾಲೆಯು ಲಭಿಸಿದಂತಾಗುತ್ತದೆ. ಮುಂದೆ 31 ನೆಯ ಸಂಪುಟವನ್ನೂ DTPಮೂಲಕ ಸಿದ್ಧಗೊಳಿಸುವ ಪ್ರಯತ್ನವು ನಡೆಯುತ್ತಿದೆ. ಮೆ। ಲೇಸರ್ ಲೈನ್ ಗ್ರ್ಯಾಫಿಕ್ಸ್ ನವರು ಮತ್ತು ಮೆ. ಎಲಿಗೆಂಟ್ ಮುದ್ರಣಾಲಯದವರು ಈಗಿನಂತೆಯೇ ಸಹಕರಿಸಿ ಸಾಧ್ಯವಾದಷ್ಟು ಬೇಗ ಸಂಪುಟಗಳು ಹೊರಬರಲು ಸಹಕರಿಸುವರೆಂಬ ಭರವಸೆಯಿಂದಿರುತ್ತೇವೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಸಂಪಾದಕಮಂಡಲಿಯ ವಿದ್ವಾಂಸರು ಈ ಸಂಪುಟದ ತಪ್ಪು-ಒಪ್ಪುಗಳನ್ನು ನೋಡಿಕೊಟ್ಟು ಉಪಕರಿಸಿರುತ್ತಾರೆ. ಇವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಸರ್ವೇಜನಾಃ ಸುಖಿನೋಭವನ್ತು

–ಪ್ರಕಾಶಕರು.

ತೃತೀಯಮುದ್ರಣದ ಪ್ರಸ್ತಾವನೆ

ಕರುಣಾಮಯನಾದ ಭಗವಂತನ ದಿವ್ಯಾನುಗ್ರಹದಿಂದಲೂ ಸದ್ಗುರುವಿನ ಅಮೋಘವಾದ ಆಶೀರ್ವಾದಗಳಿಂದಲೂ ಹಿತೈಷಿಗಳ ಸಹಕಾರ-ಸದಾಶಯ ಗಳಿಂದಲೂ ಶ್ರೀಮನ್ಮಹಾಭಾರತದ 30ನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಮಹಾಭಾರತದ 9ನೇ ಸಂಪುಟವು ಈಗ ತಾನೆ ಮುಗಿದಿದ್ದು 30, 31,32 ಈ ಸಂಪುಟಗಳ ಪುನರ್ಮುದ್ರಣವಾದ ನಂತರ 9ನೇ ಸಂಪುಟವನ್ನು ಪುನರ್ಮುದ್ರಣಕ್ಕೆ ತೆಗೆದುಕೊಳ್ಳಲಾಗುವುದು. ಭಾಗವತದಲ್ಲಿಯೂ 5ನೇ ಸಂಪುಟವು ಮುಗಿದಿದ್ದು ಪುನರ್ಮುದ್ರಣಕ್ಕೆ ಸಿದ್ಧವಾಗುತ್ತಿದೆ. ಭಗವಂತನ ದಯೆಯಿಂದ ಈ ವರ್ಷದ ಕಡೆಗಾದರೂ ಭಾರತ ದರ್ಶನ ಪ್ರಕಾಶನದ 4 ಗ್ರಂಥರತ್ನಗಳನ್ನು ಸಿದ್ಧಗೊಳಿಸಿ ಪ್ರಿಯವಾಚಕರಿಗೆ ವಿಸ್ತರಿಸುವ ಭರವಸೆಯಿಂದಿರುತ್ತೇವೆ. ಪ್ರಚಾರ ಕಾರ್ಯದಲ್ಲಿ ನಮ್ಮ ಗ್ರಾಹಕರ ನೆರವನ್ನು ಬಯಸುತ್ತೇವೆ. ಒಬ್ಬೊಬ್ಬರು ಇಬ್ಬಿಬ್ಬರ ಗ್ರಾಹಕರನ್ನು ಒದಗಿಸಿಕೊಟ್ಟರೆ ತಮ್ಮ ತತ್ಸಂಕಲ್ಪವು ನೆರವೇರುತ್ತದೆ. ಧರ್ಮಗ್ರಂಥಗಳ ಪ್ರಚಾರಕಾರ್ಯದಲ್ಲಿ ದಯಮಾಡಿ ಸಹಕರಿಸಬೇಕು.

ಸರ್ವೇಜನಾಃ ಸುಖಿನೋಭವನ್ತು ಸಮಸ್ತಸನ್ಮಙ್ಗಲಾನಿ ಭವನ್ತು

–ಪ್ರಕಾಶಕರು.

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಮಹಾಭಾರತ-ಅನುಶಾಸನಪರ್ವ
ಮೂವತ್ತನೆಯ ಸಂಪುಟ

೧೫೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಜಪಕ್ಕೆ ಯೋಗ್ಯವಾದ ಮಂತ್ರಗಳು: ಬೆಳಿಗ್ಗೆ ಮತ್ತು ಸಂಜೆ ಪ್ರಾರ್ಥಿಸಬೇಕಾದ ದೇವತೆಗಳು: ಋಷಿಗಳ ಮತ್ತು ರಾಜರ ನಾಮಸಂಕೀರ್ತನದ ಮಹಿಮೆ: ಗಾಯತ್ರೀಜಪದ ಫಲ

ಯುಧಿಷ್ಠಿರನು ಹೇಳುತ್ತಾನೆ:

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಕಿಂ ಜಪ್ಯಂ ಜಪತೋ ನಿತ್ಯಂ ಭವೇದ್ಧರ್ಮಫಲಂ ಮಹತ್ ॥೧॥

"ಮಹಾಪ್ರಾಜ್ಞನೇ! ಸರ್ವಶಾಸ್ತ್ರವಿಶಾರದನೇ! ಪಿತಾಮಹನೇ! ಪ್ರತಿನಿತ್ಯವೂ ಯಾವ ಮಂತ್ರವನ್ನು ಅಥವಾ ಸ್ತೋತ್ರವನ್ನು ಜಪಿಸುವುದರಿಂದ ಧರ್ಮದ ಮಹಾಫಲವು ಲಭಿಸುತ್ತದೆ?

ಪ್ರಸ್ಥಾನೇ ವಾ ಪ್ರವೇಶೇ ವಾ ಪ್ರವೃತ್ತೇ ವಾಪಿ ಕರ್ಮಣಿ ।
ದೈವೇ ವಾ ಶ್ರಾದ್ಧಕಾಲೇ ವಾ ಕಿಂ ಜಪ್ಯಂ ಧರ್ಮಸಾಧನಮ್ ॥೨॥

ಯಾತ್ರೆಗೆ ಹೊರಡುವಾಗ, ಗೃಹಪ್ರವೇಶಕಾಲದಲ್ಲಿ, ಯಾವುದಾದರೂ ಕರ್ಮವನ್ನು ಪ್ರಾರಂಭಿಸುವಾಗ, ದೇವತಾಪೂಜೆಯ ಸಮಯದಲ್ಲಿ, ಶ್ರಾದ್ಧಕಾಲದಲ್ಲಿ ಯಾವ ಮಂತ್ರವನ್ನು ಜಪಿಸುವುದರಿಂದ ಕರ್ಮವು ಪರಿಪೂರ್ಣವಾಗುತ್ತದೆ?

ಶಾನ್ತಿಕಂ ಪೌಷ್ಟಿಕಂ ರಕ್ಷಾ ಶತ್ರುಘ್ನಂ ಭಯನಾಶನಮ್ ।
ಜಪ್ಯಂ ಯದ್ಬ್ರಹ್ಮಸಮಿತಂ ತದ್ಭವಾನ್ವಕ್ತುಮರ್ಹಸಿ ॥೩॥

ಶಾಂತಿ, ಪುಷ್ಟಿ, ರಕ್ಷಣೆ, ಶತ್ರುವಿನಾಶ, ಭಯನಿವಾರಣೆ–ಇವುಗಳನ್ನು ಸಾಧಿಸಬಲ್ಲ ವೇದಕ್ಕೆ ಸಮಾನವಾದ ಯಾವ ಮಂತ್ರವನ್ನು ಜಪಿಸಬೇಕು? ಈ ವಿಷಯವನ್ನು ಹೇಳುವ ಕೃಪೆಮಾಡು.

ಭೀಷ್ಮನು ಹೇಳುತ್ತಾನೆ:

ವ್ಯಾಸಪ್ರೋಕ್ತಮಿಮಂ ಮನ್ತ್ರಂ ಶೃಣುಷ್ವೈಕಮನಾ ನೃಪ ।
ಸಾವಿತ್ರ್ಯಾ ವಿಹಿತಂ ದಿವ್ಯಂ ಸದ್ಯಃ ಪಾಪವಿಮೋಚನಮ್ ॥೪॥

"ಯುಧಿಷ್ಠಿರಮಹಾರಾಜ! ವ್ಯಾಸರು ಹೇಳಿರುವ ಈ ಒಂದು ಮಂತ್ರವಿದೆ. ಅದನ್ನು ಏಕಾಗ್ರಚಿತ್ತನಾಗಿ ಕೇಳು. ಸಾವಿತ್ರೀದೇವಿಯಿಂದಲೇ ವಿಹಿತವಾದ ಈ ದಿವ್ಯಮಂತ್ರವು ಜಪಿಸಿದವರ ಪಾಪಗಳನ್ನು ಒಡನೆಯೇ ದೂರಮಾಡುತ್ತದೆ.

ಶೃಣು ಮನ್ತ್ರವಿಧಿಂ ಕೃತ್ಸ್ನಂ ಪ್ರೋಚ್ಯಮಾನಂ ಮಯಾನಘ ।
ಯಂ ಶ್ರುತ್ವಾ ಪಾಣ್ಡವಶ್ರೇಷ್ಠ ಸರ್ವಪಾಪೈಃ ಪ್ರಮುಚ್ಯತೇ ॥೫॥

ಪಾಂಡವಶ್ರೇಷ್ಠನೇ! ಅನಘನೇ! ನಾನು ಹೇಳಲಿರುವ ಯಾವುದನ್ನು ಕೇಳುವುದರಿಂದ ಮನುಷ್ಯನು ಸಮಸ್ತಪಾಪಗಳಿಂದಲೂ ಮುಕ್ತನಾಗುವನೋ–ಅಂತಹ ಈ ಮಹಾಮಂತ್ರದ ವಿಧಿಯನ್ನು ಸಮಗ್ರವಾಗಿ ಕೇಳು.

ರಾತ್ರಾವಹನಿ ಧರ್ಮಜ್ಞ ಜಪನ್ಪಾಪೈರ್ನಲಿಪ್ಯತೇ ।
ತತ್ತೇಽಹಂ ಸಮ್ಪ್ರವಕ್ಷ್ಯಾಮಿ ಶೃಣುಷ್ವೈಕಮನಾ ನೃಪ ॥೬॥

ಧರ್ಮಜ್ಞನೇ! ಹಗಲು ಮತ್ತು ರಾತ್ರಿಗಳಲ್ಲಿ ಈ ಮಂತ್ರವನ್ನು ಜಪಿಸುವವನು ಪಾಪಗಳಿಂದ ಲಿಪ್ತನಾಗುವುದಿಲ್ಲ. ಅಂತಹ ಒಂದು ದಿವ್ಯಮಂತ್ರವನ್ನು ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು:

ಆಯುಷ್ಮಾನ್ಭವತೇ ಚೈವ ಯಂ ಶ್ರುತ್ವಾ ಪಾರ್ಥಿವಾತ್ಮಜಃ ।
ಪುರುಷಸ್ತು ಸುಸಿದ್ಧಾರ್ಥಃ ಪ್ರೇತ್ಯ ಚೇಹ ಚ ಮೋದತೇ ॥೭॥

ರಾಜಕುಮಾರನೇ! ನಾನು ಹೇಳಲಿರುವ ಆ ಯಾವ ಮಹಾಮಂತ್ರವನ್ನು ಕೇಳುವುದರಿಂದ ಮನುಷ್ಯನು ದೀರ್ಘಾಯುವೂ ಸಫಲಮನೋ

ರಥನೂ ಆಗುವನೋ ಮತ್ತು ಇಹ-ಪರಗಳೆರಡರಲ್ಲಿಯೂ ಸಂತೋಷದಿಂದಿರುವನೋ ಅಂತಹ ದಿವ್ಯಮಂತ್ರವನ್ನು ಕೇಳು.

ಸೇವಿತಂ ಸತತಂ ರಾಜನ್ಪುರಾ ರಾಜರ್ಷಿಸತ್ತಮೈಃ ।
ಕ್ಷತ್ರಧರ್ಮಪರೈರ್ನಿತ್ಯಂ ಸತ್ಯವ್ರತಪರಾಯಣೈಃ ॥೮॥

ಹಿಂದೆ ಕ್ಷತ್ರಧರ್ಮವನ್ನು ಪರಿಪಾಲಿಸುತ್ತಿದ್ದವರೂ, ಸತ್ಯವ್ರತಪರಾಯಣರೂ ಆದ ರಾಜಶ್ರೇಷ್ಠರು ಈ ಮಹಾಮಂತ್ರವನ್ನು ಸದಾ ಜಪಿಸುತ್ತಿದ್ದರು.

ಇದಮಾಹ್ನಿಕಮವ್ಯಗ್ರಂ ಕುರ್ವದ್ಭಿರ್ನಿಯತೈಃ ಸದಾ ।
ನೃಪೈರ್ಭರತಶಾರ್ದೂಲ ಪ್ರಾಪ್ಯತೇ ಶ್ರೀರನುತ್ತಮಾ ॥೯॥

ಭರತಸಿಂಹನೇ! ನಿಯತೇಂದ್ರಿಯರಾದ ರಾಜರು ಏಕಾಗ್ರತೆಯಿಂದ ಈ ಮಂತ್ರವನ್ನು ಅನುದಿನವೂ ಜಪಿಸುತ್ತಿದ್ದರೆ ಸರ್ವೋತ್ತಮವಾದ ಸಂಪತ್ತನ್ನು ಹೊಂದುತ್ತಾರೆ. ಆ ಮಹಾಮಂತ್ರವು ಹೀಗೆ ಸ್ತೋತ್ರರೂಪದಲ್ಲಿದೆ.

ನಮೋ ವಸಿಷ್ಠಾಯ ಮಹಾವ್ರತಾಯ
ಪರಾಶರಂ ವೇದನಿಧಿಂ ನಮಸ್ಯೇ ।
ನಮೋಽಸ್ತ್ವನನ್ತಾಯ ಮಹೋರಗಾಯ
ನಮೋಽಸ್ತು ಸಿದ್ಧೇಭ್ಯ ಇಹಾಕ್ಷಯೇಭ್ಯಃ ॥೧೦॥
ನಮೋಽಸ್ತ್ವೃಷಿಭ್ಯಃ ಪರಮಂ ಪರೇಷಾಂ
ದೇವೇಷು ದೇವಂ ವರದಂ ವರಾಣಾಮ್ ।
ಸಹಸ್ರಶೀರ್ಷಾಯ ನಮಃ ಶಿವಾಯ
ಸಹಸ್ರನಾಮಾಯ ಜನಾರ್ದನಾಯ ॥೧೧॥

ಮಹಾವ್ರತರಾದ ವಸಿಷ್ಠರಿಗೆ ನಮಸ್ಕಾರವು. ವೇದನಿಧಿಗಳಾದ ಪರಾಶರರಿಗೆ ನಮಸ್ಕಾರವು. ಮಹಾಸರ್ಪನಾದ ಅನಂತನಿಗೆ (ಶೇಷನಾಗನಿಗೆ) ನಮಸ್ಕಾರವು. ಶಾಶ್ವತರಾದ ಸಿದ್ಧರಿಗೂ ನಮಸ್ಕಾರವು. ಋಷಿಗಳಿಗೂ ನಮಸ್ಕಾರವು. ಪರಾತ್ಪರನಾದ, ದೇವಾಧಿದೇವನಾದ, ವರಗಳ ದಾತೃವಾದ ಪರಮೇಶ್ವರನಿಗೂ ನಮಸ್ಕಾರವಿರಲಿ. ಸಾವಿರತಲೆಗಳನ್ನು ಹೊಂದಿರುವ

ಶಿವನಿಗೂ ಸಾವಿರನಾಮಗಳುಳ್ಳ ಜನಾರ್ದನನಿಗೂ ನಮಸ್ಕಾರ ಮಾಡುತ್ತೇನೆ.

ಅಜೈಕಪಾದಹಿರ್ಬುಧ್ನ್ಯಃ ಪಿನಾಕೀ ಚಾಪರಾಜಿತಃ।
ಋತಶ್ಚ ಪಿತೃರೂಪಶ್ಚ ತ್ರ್ಯಮ್ಬಕಶ್ಚ ಮಹೇಶ್ವರಃ ॥೧೨॥

ವೃಷಾಕಪಿಶ್ಚ ಶಮ್ಭುಶ್ಚ ಹವನೋಽಥೇಶ್ವರಸ್ತಥಾ।
ಏಕಾದಶೈತೇ ಪ್ರಥಿತಾ ರುದ್ರಾಸ್ತ್ರಿಭುವನೇಶ್ವರಾಃ ॥೧೩॥

ಅಜೈಕಪಾತ್, ಅಹಿರ್ಬುಧ್ನ್ಯ, ಪಿನಾಕೀ, ಅಪರಾಜಿತ, ಋತ, ಪಿತೃರೂಪನಾದ ತ್ರ್ಯಂಬಕ, ಮಹೇಶ್ವರ, ವೃಷಾಕಪಿ, ಶಂಭು, ಹವನ ಮತ್ತು ಈಶ್ವರ–ಇವರೇ ವಿಖ್ಯಾತರಾದ ಏಕಾದಶರುದ್ರರು.ಇವರೆಲ್ಲರೂ ಮೂರುಲೋಕಗಳಿಗೂ ಈಶ್ವರರಾಗಿರುತ್ತಾರೆ.

ಶತಮೇತತ್ಸಮಾಮ್ನಾತಂ ಶತರುದ್ರೇ ಮಹಾತ್ಮನಾಮ್।

ವೇದದಲ್ಲಿ ಬರುವ ಶತರುದ್ರೀಯದಲ್ಲಿ ಮಹಾತ್ಮರಾದ ಶತರುದ್ರರ ಶುಭನಾಮಗಳು ಹೇಳಲ್ಪಟ್ಟಿವೆ.

ಅಂಶೋ ಭಗಶ್ಚ ಮಿತ್ರಶ್ಚ ವರುಣಶ್ಚ ಜಲೇಶ್ವರಃ ॥೧೪॥
ತಥಾ ಧಾತಾರ್ಯಮಾ ಚೈವ ಜಯನ್ತೋ ಭಾಸ್ಕರಸ್ತಥಾ।
ತ್ವಷ್ಟಾ ಪೂಷಾ ತಥೈವೇನ್ದ್ರೋ ದ್ವಾದಶೋ ವಿಷ್ಣುರುಚ್ಯತೇ।
ಇತ್ಯೇತೇ ದ್ವಾದಶಾದಿತ್ಯಾಃ ಕಾಶ್ಯಪೇಯಾ ಇತಿ ಶ್ರುತಿಃ ॥೧೫॥

ಅಂಶ, ಭಗ, ಮಿತ್ರ, ಜಲೇಶ್ವರನಾದ ವರುಣ, ಧಾತಾ, ಅರ್ಯಮಾ, ಜಯಂತ, ಭಾಸ್ಕರ, ತ್ವಷ್ಟಾ, ಪೂಷಾ, ಇಂದ್ರ ಮತ್ತು ವಿಷ್ಣು–ಇವರನ್ನು ದ್ವಾದಶಾದಿತ್ಯರೆಂದು ಕರೆಯುತ್ತಾರೆ.ಇವರೆಲ್ಲರೂ ಕಶ್ಯಪನ ಮಕ್ಕಳು.

ಧರೋ ಧ್ರುವಶ್ಚ ಸೋಮಶ್ಚ ಸಾವಿತ್ರೋಽಥಾನಿಲೋಽನಲಃ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಽಷ್ಟೌ ಪ್ರಕೀರ್ತಿತಾಃ ॥೧೬॥

ಧರ, ಧ್ರುವ, ಸೋಮ, ಸಾವಿತ್ರ, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾಸ–ಇವರು ಅಷ್ಟವಸುಗಳೆಂದು ಹೇಳಲ್ಪಟ್ಟಿದ್ದಾರೆ.

ನಾಸತ್ಯಶ್ಚಾಪಿ ದಸ್ರಶ್ಚ ಸ್ಮೃತೌ ದ್ವಾವಶ್ವಿನಾವಪಿ ।
ಮಾರ್ತಾಣ್ಡಸ್ಯಾತ್ಮಜಾವೇತೌ ಸಂಜ್ಞಾನಾಸಾವಿನಿರ್ಗತೌ ॥೧೭॥

ನಾಸತ್ಯ ಮತ್ತು ದಸ್ರ–ಈ ಇಬ್ಬರು ಅಶ್ವಿನೀಕುಮಾರರೆಂದು ಪ್ರಸಿದ್ಧರಾಗಿರುವರು. ಇವರಿಬ್ಬರೂ ಸೂರ್ಯನ ಮಕ್ಕಳು. ಅಶ್ವರೂಪಧಾರಿಣಿಯಾದ ಸಂಜ್ಞಾ ಎಂಬ ದೇವತೆಯ ಮೂಗಿನ ಹೊಳ್ಳೆಗಳಿಂದ ಹೊರಬಂದವರು. (ಹೀಗೆ ಇವರು ಒಟ್ಟು ಮೂವತ್ತು ಮೂರು ದೇವತೆಗಳು.)

ಮುಂದೆ ನಾನು, ಜಗತ್ತಿನಲ್ಲಿ ನಡೆಯುವ ಕರ್ಮಗಳನ್ನು ಸಾಕ್ಷಿಸ್ವರೂಪರಾಗಿ ನೋಡುತ್ತಿರುವ ದೇವತೆಗಳು ಯಾರೆಂಬುದನ್ನು ಹೇಳುತ್ತೇನೆ:

ಅದೃಶ್ಯಾಃ ಸರ್ವಭೂತೇಷು ಪಶ್ಯನ್ತಿ ತ್ರಿದಶೇಶ್ವರಾಃ।
ಶುಭಾಶುಭಾನಿ ಕರ್ಮಾಣಿ ಮೃತ್ಯುಃ ಕಾಲಶ್ಚ ಸರ್ವಶಃ।
ವಿಶ್ವೇದೇವಾಃ ಪಿತೃಗಣಾ ಮೂರ್ತಿಮನ್ತಸ್ತಪೋಧನಾಃ ॥೨೦॥

ಮುನಯಶ್ಚೈವ ಸಿದ್ಧಾಶ್ಚ ತಪೋಮೋಕ್ಷಪರಾಯಣಾಃ ।
ಶುಚಿಸ್ಮಿತಾಃ ಕೀರ್ತಯತಾಂ ಪ್ರಯಚ್ಛನ್ತಿ ಶುಭಂ ನೃಣಾಮ್ ॥

ಯಜ್ಞ, ದಾನ ಮತ್ತು ಸುಕೃತಗಳನ್ನು ತಿಳಿದಿರುವ ದೇವತೆಗಳು ಅದೃಶ್ಯರಾಗಿಯೇ ಇದ್ದು ಸಮಸ್ತಪ್ರಾಣಿಗಳೂ ಮಾಡುವ ಶುಭಾಶುಭ ಕರ್ಮಗಳನ್ನು ನೋಡುತ್ತಿರುತ್ತಾರೆ. ಮೃತ್ಯು, ಕಾಲ, ವಿಶ್ವೇದೇವತೆಗಳು, ಮೂರ್ತಿಮಂತರಾದ ಪಿತೃಗಣಗಳು, ತಪೋಧನರು, ಮುನಿಗಳು, ತಪೋಮೋಕ್ಷಪರಾಯಣರಾದ ಸಿದ್ಧರು–ಇವರೆಲ್ಲರೂ ತಮ್ಮನ್ನು ಸ್ತೋತ್ರಮಾಡುವ ಮನುಷ್ಯರಿಗೆ, ಪರಿಶುದ್ಧವಾದ ಮಂದಹಾಸಯುಕ್ತರಾಗಿ ಶುಭಫಲಗಳನ್ನು ದಯಪಾಲಿಸುತ್ತಾರೆ.

ಪ್ರಜಾಪತಿಕೃತಾನೇತಾನ್ ಲೋಕಾನ್ದಿವ್ಯೇನ ತೇಜಸಾ ।
ವಸನ್ತಿ ಸರ್ವಲೋಕೇಷು ಪ್ರಯತಾಃ ಸರ್ವಕರ್ಮಸು ॥೨೨॥

ಪ್ರಜಾಪತಿಬ್ರಹ್ಮನು ಸೃಷ್ಟಿಸಿರುವ ಎಲ್ಲ ಲೋಕಗಳಲ್ಲಿಯೂ ಇವರು ತಮ್ಮ ತೇಜಸ್ಸಿನಿಂದ ವಾಸಮಾಡುತ್ತಾ ಶುದ್ಧಭಾವದಿಂದ ಎಲ್ಲರ ಕರ್ಮಗಳನ್ನೂ ವೀಕ್ಷಿಸುತ್ತಿರುತ್ತಾರೆ.

ಪ್ರಾಣಾನಾಮೀಶ್ವರಾನೇತಾನ್ಕೀರ್ತಯನ್ಪ್ರಯತೋ ನರಃ ।
ಧರ್ಮಾರ್ಥಕಾಮೈರ್ವಿಪುಲೈರ್ಯುಜ್ಯತೇ ಸಹ ನಿತ್ಯಶಃ ॥೨೩॥

ಎಲ್ಲಪ್ರಾಣಿಗಳಿಗೂ ಒಡೆಯರಾಗಿರುವ ಈ ದೇವತೆಗಳನ್ನು ಮನುಷ್ಯನು ಶುದ್ಧಭಾವದಿಂದ ವಿನೀತನಾಗಿ ಸ್ತೋತ್ರಮಾಡುತ್ತಿದ್ದರೆ, –ಆ ದೇವತೆಗಳ ಅನುಗ್ರಹದಿಂದ ವಿಪುಲವಾದ ಧರ್ಮಾರ್ಥ-ಕಾಮಗಳನ್ನು ಹೊಂದುತ್ತಾನೆ.

ಲೋಕಾಂಶ್ಚ ಲಭತೇ ಪುಣ್ಯಾನ್ವಿಶ್ವೇಶ್ವರಕೃತಾಞ್ಛುಭಾನ್ ।
ಏತೇ ದೇವಾಸ್ತ್ರಯಸ್ತ್ರಿಂಶತ್ಸರ್ವಭೂತಗಣೇಶ್ವರಾಃ ॥೨೪॥

ಅವನು ವಿಶ್ವೇಶ್ವರನು (ಪ್ರಜಾಪತಿಬ್ರಹ್ಮನು) ಸೃಷ್ಟಿಸಿರುವ ಶುಭಕರವಾದ ಪುಣ್ಯಲೋಕಗಳಿಗೂ ಹೋಗುತ್ತಾನೆ. ಈ ಮೂವತ್ತುಮೂರು ದೇವತೆಗಳೂ ಜಗತ್ತಿನ ಸಕಲಪ್ರಾಣಿಗಳಿಗೂ ಈಶ್ವರರಾಗಿದ್ದಾರೆ.

ನನ್ದೀಶ್ವರೋ ಮಹಾಕಾಯೋ ಗ್ರಾಮಣೀರ್ವೃಷಭಧ್ವಜಃ।
ಈಶ್ವರಾಃ ಸರ್ವಲೋಕಾನಾಂ ಗಣೇಶ್ವರವಿನಾಯಕಾಃ ॥೨೫॥

ಸೌಮ್ಯಾ ರೌದ್ರಾ ಗಣಾಶ್ಚೈವ ಯೋಗಭೂತಗಣಾಸ್ತಥಾ ।
ಜ್ಯೋತೀಂಷಿ ಸರಿತೋ ವ್ಯೋಮ ಸುಪರ್ಣಃ ಪತಗೇಶ್ವರಃ ॥೨೬॥

ಪೃಥಿವ್ಯಾಂ ತಪಸಾ ಸಿದ್ಧಾಃ ಸ್ಥಾವರಾಶ್ಚ ಚರಾಶ್ಚ ಹ ।
ಹಿಮವಾನ್ಗಿರಯಃ ಸರ್ವೇ ಚತ್ವಾರಶ್ಚ ಮಹಾರ್ಣವಾಃ ॥೨೭॥

ಭವಸ್ಯಾನುಚರಾಶ್ಚೈವ ಹರತುಲ್ಯಪರಾಕ್ರಮಾಃ।
ವಿಷ್ಣುರ್ದೇವೋಽಥ ಜಿಷ್ಣುಶ್ಚ ಸ್ಕನ್ದಶ್ಚಾಮ್ಬಿಕಯಾ ಸಹ ।
ಕೀರ್ತಯನ್ಪ್ರಯತಃ ಸರ್ವಾನ್ಸರ್ವಪಾಪೈಃ ಪ್ರಮುಚ್ಯತೇ ॥೨೮॥

ಹೀಗೆಯೇ ನಂದೀಶ್ವರ, ಮಹಾಕಾಯ, ಗ್ರಾಮಣೀ, ವೃಷಭಧ್ವಜ, ಎಲ್ಲ ಲೋಕಗಳಿಗೂ ಸ್ವಾಮಿಗಳಾಗಿರುವ ಗಣೇಶ-ವಿನಾಯಕರು, ಸೌಮ್ಯಗಣಗಳು, ರುದ್ರಗಣಗಳು, ಯೋಗಗಣಗಳು, ಭೂತಗಣಗಳು, ನಕ್ಷತ್ರಗಳು, ನದಿಗಳು, ಆಕಾಶ, ಪಕ್ಷಿರಾಜನಾದ ಗರುಡ, ಪೃಥ್ವಿಯಲ್ಲಿ ತಪಸ್ಸಿನಿಂದ ಸಿದ್ಧಿಯನ್ನು ಪಡೆದಿರುವ ಮಹಾತ್ಮರು, ಸ್ಥಾವರಗಳು, ಜಂಗಮಗಳು, ಹಿಮವಂತ, ಸಮಸ್ತಪರ್ವತಗಳು, ನಾಲ್ಕು ಮಹಾಸಮುದ್ರಗಳು, ಶಂಕರನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವನ್ನು

ಹೊಂದಿರುವ ಶಿವನ ಅನುಚರರು, ವಿಷ್ಣುದೇವ, ಜಿಷ್ಣು, ಸ್ಕಂದ ಮತ್ತು ಅಂಬಿಕೆ–ಈ ಎಲ್ಲರ ಶುಭನಾಮಗಳನ್ನೂ ಶುದ್ಧಭಾವದಿಂದ ಕೀರ್ತನ ಮಾಡುವ ಮನುಷ್ಯನು ಎಲ್ಲ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಯುಧಿಷ್ಠಿರ! ಇನ್ನು ಮುಂದೆ ನಾನು ಶ್ರೇಷ್ಠರಾದ ಮಹರ್ಷಿಗಳ ಶುಭನಾಮಗಳನ್ನು ಹೇಳುತ್ತೇನೆ.

ಯವಕ್ರೀತಶ್ಚ ರೈಭ್ಯಶ್ಚ ಅರ್ವಾವಸುಪರಾವಸೂ।
ಔಶಿಜಶ್ಚೈವ ಕಕ್ಷೀವಾನ್ಬಲಶ್ಚಾಙ್ಗಿರಸಃ ಸುತಃ ॥೩೦॥

ಋಷಿರ್ಮೇಧಾತಿಥೇಃ ಪುತ್ರಃ ಕಣ್ವೋ ಬರ್ಹಿಷದಸ್ತಥಾ।
ಬ್ರಹ್ಮತೇಜೋಮಯಾಃ ಸರ್ವೇ ಕೀರ್ತಿತಾ ಲೋಕಭಾವನಾಃ ॥೩೧॥

ಯವಕ್ರೀತ, ರೈಭ್ಯ, ಅರ್ವಾವಸು, ಪರಾವಸು, ಉಷಿಜನ ಮಗ ಕಕ್ಷೀವಂತ, ಅಂಗಿರಸನ ಮಗ ಬಲ ಮತ್ತು ಮೇಧಾತಿಥಿಯ ಮಗ ಕಣ್ವ–ಬ್ರಹ್ಮತೇಜಸ್ಸಿನಿಂದ ವಿಶಿಷ್ಟರಾದ ಪವಿತ್ರಪಾಣಿಗಳಾದ ಇವರೆಲ್ಲರೂ ಲೋಕಹಿತೈಷಿಗಳೆಂದು ಹೇಳಲ್ಪಟ್ಟಿದ್ದಾರೆ.

ಲಭನ್ತೇ ಹಿ ಶುಭಂ ಸರ್ವೇ ರುದ್ರಾನಲವಸುಪ್ರಭಾಃ।
ಭುವಿ ಕೃತ್ವಾ ಶುಭಂ ಕರ್ಮ ಮೋದನ್ತೇ ದಿವಿ ದೈವತೈಃ ॥೩೨॥

ರುದ್ರ, ಅಗ್ನಿ ಮತ್ತು ವಸುಗಳ ತೇಜಸ್ಸುಗಳಿಗೆ ಸಮಾನವಾದ ತೇಜಸ್ಸಿನಿಂದ ಯುಕ್ತರಾಗಿರುವ ಈ ಎಲ್ಲ ಋಷಿಶ್ರೇಷ್ಠರೂ ಭೂಮಿಯಲ್ಲಿ ಪ್ರಜಾಹಿತವಾದ ಶುಭಕರ್ಮಗಳನ್ನು ಮಾಡಿ ಸ್ವರ್ಗದಲ್ಲಿ ದೇವತೆಗಳೊಡನೆ ಆನಂದಿಸುತ್ತಿದ್ದಾರೆ.

ಮಹೇನ್ದ್ರಗುರವಃ ಸಪ್ತ ಪ್ರಾಚೀಂ ವೈ ದಿಶಮಾಶ್ರಿತಾಃ।
ಪ್ರಯತಃ ಕೀರ್ತಯೇದೇತಾಞ್ಶಕ್ರಲೋಕೇ ಮಹೀಯತೇ ॥೩೩॥

ಮಹೇಂದ್ರನ ಗುರುಗಳಾದ ಸಪ್ತರ್ಷಿಗಳು ಪೂರ್ವದಿಕ್ಕನ್ನು ಆಶ್ರಯಿಸಿರುತ್ತಾರೆ. ಯಾವಾತನು ಈ ಸಪ್ತರ್ಷಿಗಳನ್ನು ಶುದ್ಧವಾದ ಮನಸ್ಸಿನಿಂದ ಪ್ರಾರ್ಥಿಸುವನೋ–ಅವನು ಇಂದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಉನ್ಮುಚುಃ ಪ್ರಮುಚುಶ್ಚೈವ ಸ್ವಸ್ತ್ಯಾತ್ರೇಯಶ್ಚ ವೀರ್ಯವಾನ್।

ದೃಢವ್ಯಶ್ಚೋರ್ಧ್ವಬಾಹುಶ್ಚ ತೃಣಸೋಮಾಙ್ಗಿರಾಸ್ತಥಾ ॥೩೪॥

ಮಿತ್ರಾವರುಣಯೋಃ ಪುತ್ರಸ್ತಥಾಗಸ್ತ್ಯಃ ಪ್ರತಾಪವಾನ್ ।
ಧರ್ಮರಾಜರ್ತ್ವಿಜಃ ಸಪ್ತ ದಕ್ಷಿಣಾಂ ದಿಶಮಾಶ್ರಿತಾಃ ॥೩೫॥

ಉನ್ಮುಚು, ಪ್ರಮುಚು, ಶಕ್ತಿಶಾಲಿಯಾದ ಸ್ವಸ್ತ್ಯಾತ್ರೇಯ, ದೃಢವ್ಯ, ಊರ್ಧ್ವಬಾಹು, ತೃಣಸೋಮಾಂಗಿರಸ ಮತ್ತು ಮೈತ್ರಾವರುಣರ ಪುತ್ರನಾದ ಮಹಾಪ್ರತಾಪಶಾಲಿಯಾದ ಅಗಸ್ತ್ಯ–ಈ ಸಪ್ತರ್ಷಿಗಳು ಯಮರಾಜನ ಋತ್ವಿಜರು. ಇವರೆಲ್ಲರೂ ದಕ್ಷಿಣದಿಕ್ಕಿನಲ್ಲಿ ವಾಸಮಾಡಿಕೊಂಡಿದ್ದಾರೆ.

ದೃಢೇಯುಶ್ಚ ಋತೇಯುಶ್ಚ ಪರಿವ್ಯಾಧಶ್ಚ ಕೀರ್ತಿಮಾನ್ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚಾದಿತ್ಯಸಂನಿಭಾಃ ॥೩೬॥

ಅತ್ರೇಃ ಪುತ್ರಶ್ಚ ಧರ್ಮಾತ್ಮಾ ಋಷಿಃ ಸಾರಸ್ವತಸ್ತಥಾ ।
ವರುಣಸ್ಯರ್ತ್ವಿಜಃ ಸಪ್ತ ಪಶ್ಚಿಮಾಂ ದಿಶಮಾಶ್ರಿತಾಃ ॥೩೭॥

ದೃಢೇಯು, ಋತೇಯು, ಕೀರ್ತಿಮಂತನಾದ ಪರಿವ್ಯಾಧ, ಸೂರ್ಯಸದೃಶತೇಜಸ್ವಿಗಳಾದ ಏಕತ-ದ್ವಿತ-ತ್ರಿತರು, ಅತ್ರಿಯ ಮಗನಾದ ಧರ್ಮಾತ್ಮನಾದ ಸಾರಸ್ವತ–ಈ ಸಪ್ತರ್ಷಿಗಳು ವರುಣನ ಋತ್ವಿಜರು. ಇವರೆಲ್ಲರೂ ಪಶ್ಚಿಮದಿಕ್ಕನ್ನು ಆಶ್ರಯಿಸಿರುತ್ತಾರೆ.

ಅತ್ರಿರ್ವಸಿಷ್ಠೋ ಭಗವಾನ್ಕಶ್ಯಪಶ್ಚ ಮಹಾನೃಷಿಃ ।
ಗೌತಮಶ್ಚ ಭರದ್ವಾಜೋ ವಿಶ್ವಾಮಿತ್ರೋಽಥ ಕೌಶಿಕಃ ॥೩೮॥

ಋಚೀಕತನಯಶ್ಚೋಗ್ರೋ ಜಮದಗ್ನಿಃ ಪ್ರತಾಪವಾನ್ ।
ಧನೇಶ್ವರಸ್ಯ ಗುರವಃ ಸಪ್ತೈತೇ ಉತ್ತರಾಶ್ರಿತಾಃ ॥೩೯॥

ಅತ್ರಿ, ಪೂಜ್ಯನಾದ ವಸಿಷ್ಠ, ಕಶ್ಯಪಮಹರ್ಷಿ, ಗೌತಮ, ಭರದ್ವಾಜ, ಕುಶಿಕವಂಶದ ವಿಶ್ವಾಮಿತ್ರ, ಋಚೀಕನ ಮಗನಾದ, ಪ್ರತಾಪವಂತನಾದ, ಉಗ್ರಸ್ವಭಾವದವನಾದ ಜಮದಗ್ನಿ–ಈ ಸಪ್ತರ್ಷಿಗಳು ಕುಬೇರನ ಗುರುಗಳು. (ಋತ್ವಿಜರು.) ಇವರೆಲ್ಲರೂ ಉತ್ತರದಿಕ್ಕನ್ನು ಆಶ್ರಯಿಸಿದ್ದಾರೆ.

ಅಪರೇ ಮುನಯಃ ಸಪ್ತ ದಿಕ್ಷು ಸರ್ವಾಸ್ವಧಿಷ್ಠಿತಾಃ ।
ಕೀರ್ತಿಸ್ವಸ್ತಿಕರಾ ನೃಣಾಂ ಕೀರ್ತಿತಾ ಲೋಕಭಾವನಾಃ ॥೪೦॥

ಇವರುಗಳಲ್ಲದೇ ಇನ್ನೂ ಏಳು ಮುನಿಗಳಿದ್ದಾರೆ. ಅವರು ಎಲ್ಲ ದಿಕ್ಕುಗಳಲ್ಲಿಯೂ ವಾಸಮಾಡುತ್ತಿದ್ದಾರೆ. ಲೋಕಗಳ ಹಿತಚಿಂತಕರಾದ ಅವರು ತಮ್ಮನ್ನು ಪ್ರಾರ್ಥಿಸುವ ಮನುಷ್ಯರಿಗೆ ಕೀರ್ತಿಯನ್ನೂ ಶುಭವನ್ನೂ ಅನುಗ್ರಹಿಸುತ್ತಾರೆ.

ಧರ್ಮಃ ಕಾಮಶ್ಚ ಕಾಲಶ್ಚ ವಸುರ್ವಾಸುಕಿರೇವ ಚ ।
ಅನನ್ತಃ ಕಪಿಲಶ್ಚೈವ ಸಪ್ತೈತೇ ಧರಣೀಧರಾಃ ॥೪೧॥

ಧರ್ಮ, ಕಾಮ, ಕಾಲ, ವಸು, ವಾಸುಕಿ, ಅನಂತ ಮತ್ತು ಕಪಿಲ–ಈ ಸಪ್ತನಾಗಗಳು ಭೂಮಿಯನ್ನು ಹೊತ್ತಿವೆ.

ರಾಮೋ ವ್ಯಾಸಸ್ತಥಾ ದ್ರೌಣಿರಶ್ವತ್ಥಾಮಾ ಚ ಲೋಮಶಃ ।
ಇತ್ಯೇತೇ ಮುನಯೋ ದಿವ್ಯಾ ಏಕೈಕಃ ಸಪ್ತ ಸಪ್ತಧಾ ॥೪೨॥

ಪರಶುರಾಮ, ವ್ಯಾಸ, ದ್ರೋಣರ ಮಗನಾದ ಅಶ್ವತ್ಥಾಮಾ ಮತ್ತು ಲೋಮಶ–ಈ ನಾಲ್ವರೂ ದಿವ್ಯಮುನಿಗಳು. ಇವರಲ್ಲಿ ಒಬ್ಬೊಬ್ಬ ಮುನಿಗಳೂ ಏಳೇಳು ಪ್ರಕಾರವಾಗಿದ್ದಾರೆ. (ಏಳು ಋಷಿಗಳಿಗೆ ಸಮಾನರಾಗಿದ್ದಾರೆ.)

ಶಾನ್ತಿ ಸ್ವಸ್ತಿಕರಾ ಲೋಕೇ ದಿಶಾಂಪಾಲಾಃ ಪ್ರಕೀರ್ತಿತಾಃ ।
ಯಸ್ಯಾಂ ಯಸ್ಯಾಂ ದಿಶಿ ಹ್ಯೇತೇ ತನ್ಮುಖಃ ಶರಣಂ ವ್ರಜೇತ್ ।
ಸ್ರಷ್ಟಾರಃ ಸರ್ವಭೂತಾನಾಂ ಕೀರ್ತಿತಾ ಲೋಕಪಾವನಾಃ ॥೪೩॥

ಈ ಎಲ್ಲ ಋಷಿಗಳೂ ಲೋಕದಲ್ಲಿ ಶಾಂತಿಯನ್ನೂ ಕಲ್ಯಾಣವನ್ನೂ ಉಂಟುಮಾಡುವವರಾಗಿದ್ದಾರೆ. ದಿಕ್ಪಾಲರೆಂದೂ ಕೀರ್ತಿತರಾಗಿದ್ದಾರೆ. ಈ ಋಷಿಗಳು ಯಾವ ಯಾವ ದಿಕ್ಕಿನಲ್ಲಿ ವಾಸಮಾಡುವರೋ–ಆಯಾಯಾ ದಿಕ್ಕಿಗೆ ತಿರುಗಿಕೊಂಡು ಅವರನ್ನು ಶರಣುಹೊಂದಬೇಕು. ಇವರೆಲ್ಲರೂ ಎಲ್ಲ ಪ್ರಾಣಿಗಳನ್ನೂ ಸೃಷ್ಟಿಸಿದವರೆಂದೂ, ಲೋಕಪಾವನರೆಂದೂ ಕೀರ್ತಿತರಾಗಿದ್ದಾರೆ.

ಸಂವರ್ತೋ ಮೇರುಸಾವರ್ಣೋ ಮಾರ್ಕಣ್ಡೇಯಶ್ಚ ಧಾರ್ಮಿಕಃ ॥

ಸಾಂಖ್ಯಯೋಗೌ ನಾರದಶ್ಚ ದುರ್ವಾಸಾಶ್ಚ ಮಹಾನೃಷಿಃ ।
ಅತ್ಯನ್ತತಪಸೋ ದಾನ್ತಾಸ್ತ್ರಿಷು ಲೋಕೇಷು ವಿಶ್ರುತಾಃ ॥೪೫॥

ಸಂವರ್ತ, ಮೇರುಸಾವರ್ಣಿ, ಧರ್ಮಾತ್ಮನಾದ ಮಾರ್ಕಂಡೇಯ,

ಸಾಂಖ್ಯ, ಯೋಗ, ನಾರದ, ದುರ್ವಾಸ–ಇವರೆಲ್ಲರೂ ಅತ್ಯಂತತಪಸ್ವಿಗಳೆಂದೂ ಜಿತೇಂದ್ರಿಯರೆಂದೂ ಮೂರು ಲೋಕಗಳಲ್ಲಿಯೂ ವಿಖ್ಯಾತರಾದವರು.

ಅಪರೇ ರುದ್ರಸಂಕಾಶಾಃ ಕೀರ್ತಿತಾ ಬ್ರಹ್ಮಲೌಕಿಕಾಃ।
ಅಪುತ್ರೋ ಲಭತೇ ಪುತ್ರಂ ದರಿದ್ರೋ ಲಭತೇ ಧನಮ್।
ತಥಾ ಧರ್ಮಾರ್ಥಕಾಮೇಷು ಸಿದ್ಧಿಂ ಚ ಲಭತೇ ನರಃ ॥೪೬॥

ಇವರೇ ಅಲ್ಲದೇ ರುದ್ರಸದೃಶರಾದ ಬೇರೆಯ ಋಷಿಗಳು ಬ್ರಹ್ಮಲೋಕದಲ್ಲಿದ್ದಾರೆ. ಅವರನ್ನು ಪ್ರಾರ್ಥಿಸಿದರೆ ಪುತ್ರನಿಲ್ಲದವನು ಪುತ್ರರನ್ನೂ, ದರಿದ್ರನು ಧನವನ್ನೂ ಹೊಂದುತ್ತಾನೆ. ಹಾಗೆಯೇ ಧರ್ಮಾರ್ಥ ಕಾಮಗಳಲ್ಲಿಯೂ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ.

ಪೃಥುಂ ವೈನ್ಯಂ ನೃಪವರಂ ಪೃಥ್ವೀ ಯಸ್ಯಾಭವತ್ಸುತಾ।
ಪ್ರಜಾಪತಿಂ ಸಾರ್ವಭೌಮಂ ಕೀರ್ತಯೇದ್ವಸುಧಾಧಿಪಮ್ ॥೪೭॥

ವೇನನ ಮಗನಾದ, ನೃಪಶ್ರೇಷ್ಠನಾದ, ಭೂದೇವಿಯ ತಂದೆಯಾದ, ಪ್ರಜಾಪತಿಯಾದ, ಸಾರ್ವಭೌಮನಾದ, ವಸುಧಾಧಿಪನಾದ ಪೃಥುವನ್ನು ಸ್ತೋತ್ರಮಾಡಬೇಕು.

ಆದಿತ್ಯವಂಶಪ್ರಭವಂ ಮಹೇನ್ದ್ರಸಮವಿಕ್ರಮಮ್ ॥೪೮॥
ಪುರೂರವಸಮೈಲಂ ಚ ತ್ರಿಷು ಲೋಕೇಷು ವಿಶ್ರುತಮ್।
ಬುಧಸ್ಯದಯಿತಂ ಪುತ್ರಂ ಕೀರ್ತಯೇದ್ವಸುಧಾಧಿಪಮ್ ॥೪೯॥

ಸೂರ್ಯವಂಶಜನಾದ, ಇಂದ್ರಸಮಾನವಿಕ್ರಮನಾದ, ಇಲಾ-ಬುಧರ ಪ್ರಿಯಪುತ್ರನಾದ, ಮೂರು ಲೋಕಗಳಲ್ಲಿಯೂ ವಿಖ್ಯಾತನಾದ ಪುರೂರವಸನ ಶುಭನಾಮವನ್ನು ಸಂಕೀರ್ತನಮಾಡಬೇಕು.

ತ್ರಿಲೋಕವಿಶ್ರುತಂ ವೀರಂ ಭರತಂ ಚ ಪ್ರಕೀರ್ತಯೇತ್।
ಗವಾಮಯೇನ ಯಜ್ಞೇನ ಯೇನೇಷ್ಟಂ ವೈ ಕೃತೇ ಯುಗೇ ॥೫೦॥
ರನ್ತಿದೇವಂ ಮಹಾದೇವಂ ಕೀರ್ತಯೇತ್ಪರಮದ್ಯುತಿಮ್।
ವಿಶ್ವಜಿತ್ತಪಸೋಪೇತಂ ಲಕ್ಷಣ್ಯಂ ಲೋಕಪೂಜಿತಮ್ ॥೫೧॥

ಕೃತಯುಗದಲ್ಲಿ ಗವಾಮಯಯಜ್ಞವನ್ನು ಮಾಡಿದ, ತ್ರಿಲೋಕ ವಿಖ್ಯಾತನಾದ ಭರತನ ಶುಭನಾಮವನ್ನು ಸಂಕೀರ್ತನಮಾಡಬೇಕು.

ವಿಶ್ವವಿಜಯಿಯಾದ, ಶುಭಲಕ್ಷಣಸಂಪನ್ನನಾದ, ಲೋಕಪೂಜಿತನಾದ, ಪರಮತೇಜಸ್ವಿಯಾದ ರಂತಿದೇವನ ಶುಭನಾಮವನ್ನು ಸಂಕೀರ್ತನ ಮಾಡಬೇಕು.

ತಥಾ ಶ್ವೇತಂ ಚ ರಾಜರ್ಷಿಂ ಕೀರ್ತಯೇತ್ಪರಮದ್ಯುತಿಮ್ ।

ಮಹಾತೇಜಸ್ವಿಯಾದ, ರಾಜರ್ಷಿಯಾದ ಶ್ವೇತನ ಶುಭನಾಮವನ್ನು ಸ್ಮರಣೆಮಾಡಬೇಕು.

ಸಗರಸ್ಯಾತ್ಮಜಾ ಯೇನ ಪ್ಲಾವಿತಾಸ್ತಾರಿತಾಸ್ತಥಾ ॥೫೨॥

ಭಸ್ಮೀಭೂತರಾಗಿದ್ದ ಸಗರನ ಮಕ್ಕಳ ಮೇಲೆ ಗಂಗೆಯನ್ನು ಹರಿಸಿ ಅವರನ್ನು ಉದ್ಧರಿಸಿದ ಭಗೀರಥನ ಶುಭನಾಮವನ್ನು ಸ್ಮರಿಸಬೇಕು.

ಹುತಾಶನಸಮಾನೇತಾನ್ಮಹಾರೂಪಾನ್ಮಹೌಜಸಃ ।
ಉಗ್ರಕಾಯಾನ್ಮಹಾಸತ್ತ್ವಾನ್ಕೀರ್ತಯೇತ್ಕೀರ್ತಿವರ್ಧನಾನ್ ॥೫೩॥

ಯಾವ ರಾಜರು ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿರುವರೋ, ಮಹಾರೂಪವಂತರೂ, ಬಲಸಂಪನ್ನರೂ, ಭಯಂಕರವಾದ ಶರೀರವುಳ್ಳವರೂ, ಮಹಾಸತ್ವರೂ, ಸ್ವಕುಲಕೀರ್ತಿ ವರ್ಧಕರೂ ಆಗಿರುವರೋ–ಅಂತಹ ರಾಜರ ಶುಭನಾಮವನ್ನು ಅನುದಿನವೂ ಸಂಕೀರ್ತನಮಾಡಬೇಕು.

ದೇವಾನೃಷಿಗಣಾಂಶ್ಚೈವ ನೃಪಾಂಶ್ಚ ಜಗತೀಶ್ವರಾನ್ ।
ಸಾಂಖ್ಯಂ ಯೋಗಂ ಚ ಪರಮಂ ಹವ್ಯಂ ಕವ್ಯಂ ತಥೈವ ಚ ॥೫೪॥

ಕೀರ್ತಿತಂ ಪರಮಂ ಬ್ರಹ್ಮ ಸರ್ವಶ್ರುತಿಪರಾಯಣಮ್ ।
ಮಙ್ಗಲ್ಯಂ ಸರ್ವಭೂತಾನಾಂ ಪವಿತ್ರಂ ಬಹುಕೀರ್ತಿತಮ್ ॥೫೫॥

ವ್ಯಾಧಿಪ್ರಶಮನಂ ಶ್ರೇಷ್ಠಂ ಪೌಷ್ಟಿಕಂ ಸರ್ವಕರ್ಮಣಾಮ್ ।
ಪ್ರಯತಃ ಕೀರ್ತಯೇಚ್ಚೈತಾನ್ಕಲ್ಯಂ ಸಾಯಂ ಚ ಭಾರತ ॥೫೬॥

ದೇವತೆಗಳನ್ನೂ, ಋಷಿಗಳನ್ನೂ, ರಾಜರನ್ನೂ, ಚಕ್ರವರ್ತಿಗಳನ್ನೂ ಅನುದಿನವೂ ಸಂಕೀರ್ತನಮಾಡಬೇಕು. ಸಾಂಖ್ಯ-ಯೋಗಗಳ ಹವ್ಯ-ಕವ್ಯ ಗಳ ಪರಮಧ್ಯೇಯನಾದ, ಸರ್ವಶ್ರುತಿಗಳಿಗೂ ಆಶ್ರಯಭೂತನಾದ ಪರಬ್ರಹ್ಮಪರಮಾತ್ಮನನ್ನು ಸಂಕೀರ್ತನಮಾಡುವುದರಿಂದ ಸರ್ವಪ್ರಾಣಿ

ಗಳಿಗೂ ಮಂಗಳವುಂಟಾಗುತ್ತದೆ. ಪರಬ್ರಹ್ಮಪರಮಾತ್ಮನನ್ನು ಸದಾ ಸಂಕೀರ್ತನಮಾಡುವುದರಿಂದ ರೋಗಶಮನವಾಗುತ್ತದೆ. ಎಲ್ಲ ಕರ್ಮಗಳಿಗೂ ಶಾಂತಿಯೂ ಪುಷ್ಟಿಯೂ ಉಂಟಾಗುತ್ತದೆ. ಸಾಯಂಕಾಲ-ಪ್ರಾತಃಕಾಲಗಳಲ್ಲಿ ಶುದ್ಧಚಿತ್ತನಾಗಿ ದೇವರ್ಷಿ-ರಾಜರ ಶುಭನಾಮಗಳನ್ನು ಸಂಕೀರ್ತನಮಾಡಬೇಕು.

ಏತೇ ವೈ ಪಾನ್ತಿ ವರ್ಷನ್ತಿ ಭಾನ್ತಿ ವಾನ್ತಿ ಸೃಜನ್ತಿ ಚ ।
ಏತೇ ವಿನಾಯಕಾಃ ಶ್ರೇಷ್ಠಾಃ ದಕ್ಷಾಃ ಶಾನ್ತಾ ಜಿತೇನ್ದ್ರಿಯಾಃ ॥೫೭॥

ಈ ದೇವರ್ಷಿರಾಜರು ಲೋಕಗಳನ್ನು ರಕ್ಷಿಸುತ್ತಾರೆ. ಮಳೆಗರೆಯುತ್ತಾರೆ. ಪ್ರಕಾಶಗೊಳಿಸುತ್ತಾರೆ. ಗಾಳಿಯು ಬೀಸುವಂತೆ ಮಾಡುತ್ತಾರೆ. ಪ್ರಜೆಗಳನ್ನು ಸೃಷ್ಟಿಸುತ್ತಾರೆ. ಇವರು ವಿಶ್ವಕ್ಕೇ ನಾಯಕರು. ಶ್ರೇಷ್ಠರು, ದಕ್ಷರು, ಕ್ಷಮಾಶೀಲರು ಮತ್ತು ಜಿತೇಂದ್ರಿಯರು.

ನರಾಣಾಮಶುಭಂ ಸರ್ವೇ ವ್ಯಪೋಹನ್ತಿ ಪ್ರಕೀರ್ತಿತಾಃ ।
ಸಾಕ್ಷಿಭೂತಾ ಮಹಾತ್ಮಾನಃ ಪಾಪಸ್ಯ ಸುಕೃತಸ್ಯ ಚ ॥೫೮॥

ಈ ಮಹಾತ್ಮರು ಮಾನವರ ಶುಭಾಶುಭಕರ್ಮಗಳಿಗೆ ಸಾಕ್ಷೀಭೂತರು. ಇವರ ಶುಭನಾಮಗಳನ್ನು ಸಂಕೀರ್ತನಮಾಡಿದರೆ ಮನುಷ್ಯರ (ಅಶುಭವನ್ನು) ಪಾಪವನ್ನು ಹೋಗಲಾಡಿಸುತ್ತಾರೆ.

ಏತಾನ್ವೈ ಕಲ್ಯಮುತ್ಥಾಯ ಕೀರ್ತಯಞ್ಶುಭಮಶ್ನುತೇ ।
ನಾಗ್ನಿಚೌರಭಯಂ ತಸ್ಯ ನ ಮಾರ್ಗಪ್ರತಿರೋಧನಮ್ ॥೫೯॥

ಬೆಳಗಾಗಿ ಎದ್ದೊಡನೆಯೇ ಈ ಮಹಾತ್ಮರ ಶುಭನಾಮಗಳ ಸಂಕೀರ್ತನಮಾಡುವುದರಿಂದ ಮನುಷ್ಯನು ಶುಭವನ್ನು ಹೊಂದುತ್ತಾನೆ. ಅವನಿಗೆ ಅಗ್ನಿಯಿಂದಾಗಲೀ, ಕಳ್ಳರಿಂದಾಗಲೀ ಭಯವಿರುವುದಿಲ್ಲ. ಹಾದಿಯಲ್ಲಿ ಯಾರೂ ಅವನನ್ನು ತಡೆಯುವುದಿಲ್ಲ.

ಏತಾನ್ ಕೀರ್ತಯತಾಂ ನಿತ್ಯಂ ದುಃಸ್ವಪ್ನೋ ನಶ್ಯತೇ ನೃಣಾಮ್ ।
ಮುಚ್ಯತೇ ಸರ್ವಪಾಪೇಭ್ಯಃ ಸ್ವಸ್ತಿಮಾಂಶ್ಚ ಗೃಹಾನ್ವ್ರಜೇತ್ ॥೬೦॥

ಈ ದೇವರ್ಷಿ-ರಾಜರ ಶುಭನಾಮಗಳನ್ನು ಅನುದಿನವೂ ಸಂಕೀರ್ತನ ಮಾಡುತ್ತಿದ್ದರೆ ಮಾನವರಿಗೆ ಕೆಟ್ಟಸ್ವಪ್ನಗಳು ನಾಶವಾಗುತ್ತವೆ. ಅವರು ಎಲ್ಲ

ಪಾಪಗಳಿಂದಲೂ ವಿಮುಕ್ತರಾಗುತ್ತಾರೆ. ಯಾತ್ರೆಹೊರಟವರು ಕುಶಲಿಗಳಾಗಿ ಮನೆಯನ್ನು ಸೇರುತ್ತಾರೆ.

ದೀಕ್ಷಾಕಾಲೇಷು ಸರ್ವೇಷು ಯಃ ಪಠೇನ್ನಿಯತೋ ದ್ವಿಜಃ ।
ನ್ಯಾಯವಾನಾತ್ಮನಿರತಃ ಕ್ಷಾನ್ತೋ ದಾನ್ತೋಽನಸೂಯಕಃ ॥೬೧॥

ಎಲ್ಲ ವ್ರತಗಳ ದೀಕ್ಷಾಕಾಲಗಳಲ್ಲಿಯೂ ನಿಯಮಾನುಷ್ಠಾನಪರನಾಗಿ ಯಾವ ಮನುಷ್ಯನು ಈ ಮಹಾತ್ಮರ ಸಂಕೀರ್ತನವನ್ನು ಮಾಡುವನೋ (ಈ ಅಧ್ಯಾಯವನ್ನು ಪಠಿಸುವನೋ)–ಅವನು ನ್ಯಾಯಶೀಲನೂ, ಆತ್ಮನಿಷ್ಠನೂ, ಕ್ಷಮಾವಂತನೂ, ಜಿತೇಂದ್ರಿಯನೂ ದೋಷದೃಷ್ಟಿಯಿಲ್ಲದವನೂ ಆಗುತ್ತಾನೆ.

ರೋಗಾರ್ತೋ ವ್ಯಾಧಿಯುಕ್ತೋ ವಾ ಪಠನ್ಪಾಪಾತ್ಪ್ರಮುಚ್ಯತೇ ।
ವಾಸ್ತುಮಧ್ಯೇ ತು ಪಠತಃ ಕುಲೇ ಸ್ವಸ್ತ್ಯಯನಂ ಭವೇತ್ ॥೬೨॥

ರೋಗ-ವ್ಯಾಧಿಗಳಿಂದ ಪೀಡಿತನಾದವನು ಈ ಪ್ರಕರಣವನ್ನು ಪಾರಾಯಣಮಾಡಿದರೆ ನೀರೋಗಿಯೂ ನಿಷ್ಪಾಪನೂ ಆಗುತ್ತಾನೆ. ನಡುಮನೆಯಲ್ಲಿ ಪಾರಾಯಣಮಾಡಿದರೆ ಅವನ ಕುಲದಲ್ಲಿ ಮಂಗಳಕಾರ್ಯಗಳು ನಡೆಯುತ್ತವೆ.

ಕ್ಷೇತ್ರಮಧ್ಯೇ ತು ಪಠತಃ ಸರ್ವಂ ಸಸ್ಯಂ ಪ್ರರೋಹತಿ ।
ಗಚ್ಛತಃ ಕ್ಷೇಮಮಧ್ವಾನಂ ಗ್ರಾಮಾನ್ತರಗತಃ ಪಠನ್ ॥೬೩॥

ತೋಟ-ಹೊಲ-ಗದ್ದೆಗಳ ಮಧ್ಯದಲ್ಲಿ ಪಠನಮಾಡಿದರೆ ಅಲ್ಲಿ ಸಮಸ್ತವಾದ ಸಸ್ಯಗಳೂ ಹುಲುಸಾಗಿ ಬೆಳೆಯುತ್ತವೆ. ಅವನು ಯಾತ್ರೆಹೋಗುವಾಗ ಗ್ರಾಮದ ಮಧ್ಯದಲ್ಲಿ ಈ ಶುಭನಾಮಗಳನ್ನು ಸಂಕೀರ್ತನ ಮಾಡಿದರೆ ಮಾರ್ಗವು ಕ್ಷೇಮಕರವಾಗಿರುತ್ತದೆ.

ಆತ್ಮನಶ್ಚ ಸುತಾನಾಂ ಚ ದಾರಾಣಾಂ ಚ ಧನಸ್ಯ ಚ ।
ಬೀಜಾನಾಮೋಷಧೀನಾಂ ಚ ರಕ್ಷಾಮೇತಾಂ ಪ್ರಯೋಜಯೇತ್ ॥

ತನ್ನ, ಪುತ್ರರ, ಪತ್ನಿಯ, ಧನದ, ಬೀಜಗಳ ಮತ್ತು ಓಷಧಿಗಳ (ಪೈರು-ಪಚ್ಚೆಗಳ) ರಕ್ಷಣೆಗಾಗಿ ಈ ನಾಮಾವಳಿಯನ್ನು ಪಾರಾಯಣ ಮಾಡಬೇಕು.

ಏಚಾನ್ಸಂಗ್ರಾಮಕಾಲೇ ತು ಪಠತಃ ಕ್ಷತ್ರಯಸ್ಯ ತು ।
ವ್ರಜನ್ತಿ ರಿಪವೋ ನಾಶಂ ಕ್ಷೇಮಂ ಚ ಪರಿವರ್ತತೇ ॥೬೫॥

ಈ ನಾಮಾವಳಿಯನ್ನು ಯುದ್ಧಕಾಲದಲ್ಲಿ ಪಾರಾಯಣಮಾಡುವ ಕ್ಷತ್ರಿಯನ ಶತ್ರುಗಳು ನಾಶಹೊಂದುತ್ತಾರೆ ಮತ್ತು ಅವನಿಗೆ ಕ್ಷೇಮವುಂಟಾಗುತ್ತದೆ.

ಏತಾನ್ದೈವೇ ಚ ಪಿತ್ರೇ ಚ ಪಠತಃ ಪುರುಷಸ್ಯ ಹಿ ।
ಭುಞ್ಜತೇ ಪಿತರಃ ಕವ್ಯಂ ಹವ್ಯಂ ಚ ತ್ರಿದಿವೌಕಸಃ ॥೬೬॥

ಶ್ರಾದ್ಧಾದಿ ಪಿತೃಕರ್ಮಗಳಲ್ಲಿ ಈ ನಾಮಾವಳಿಗಳನ್ನು ಪಾರಾಯಣ ಮಾಡುವ ಮನುಷ್ಯನ ಪಿತೃಗಳು ಬಹಳ ಪ್ರೀತಿಯಿಂದ ಕವ್ಯವನ್ನು ಭುಂಜಿಸುತ್ತಾರೆ. ಪೂಜಾದಿ ಕ್ರಿಯೆಗಳಲ್ಲಿ ದೇವತೆಗಳು ಬಹಳ ಪ್ರೀತಿಯಿಂದ ಹವಿಸ್ಸನ್ನು ಭುಂಜಿಸುತ್ತಾರೆ.

ನ ವ್ಯಾಧಿಶ್ವಾಪದಭಯಂ ನ ದ್ವಿಪಾನ್ನ ಹಿ ತಸ್ಕರಾತ್ ।
ಕಶ್ಮಲಂ ಲಘುತಾಂ ಯಾತಿ ಪಾಪ್ಮನಾ ಚ ಪ್ರಮುಚ್ಯತೇ ॥೬೭॥

ಈ ನಾಮಾವಳಿಗಳನ್ನು ಪಾರಾಯಣಮಾಡುವವನಿಗೆ ವ್ಯಾಧಿ ಗಳಿಂದಾಗಲೀ, ಹಿಂಸ್ರಪ್ರಾಣಿಗಳಿಂದಾಗಲೀ, ಆನೆಯಿಂದಾಗಲೀ, ಕಳ್ಳ ರಿಂದಾಗಲೀ ಭಯವಿರುವುದಿಲ್ಲ. ಶೋಕವು ಕಡಿಮೆಯಾಗುತ್ತದೆ. ಪಾಪದ ನಿರಸನವಾಗುತ್ತದೆ.

ಯಾನಪಾತ್ರೇ ಚ ಯಾನೇ ಚ ಪ್ರವಾಸೇ ರಾಜವೇಶ್ಮನಿ ।
ಪರಾಂ ಸಿದ್ಧಿಮವಾಪ್ನೋತಿ ಸಾವಿತ್ರೀಂ ಹ್ಯುತ್ತಮಾಂ ಪಠನ್ ॥೬೮॥

ಮನುಷ್ಯನು ಹಡಗಿನಲ್ಲಿ ಅಥವಾ ಯಾವುದಾದರೂ ಯಾನದಲ್ಲಿ ಪ್ರಯಾಣಮಾಡುವಾಗ, ಪ್ರವಾಸಮಾಡುವಾಗ, ರಾಜನ ಅರಮನೆ ಯಲ್ಲಿರುವಾಗ ಉತ್ತಮೋತ್ತಮವಾದ ಗಾಯತ್ರೀಮಂತ್ರವನ್ನು ಜಪಿಸುತ್ತಿದ್ದರೆ ಅವನಿಗೆ ಮಹಾಸಿದ್ಧಿಯುಂಟಾಗುತ್ತದೆ.

ನ ಚ ರಾಜಭಯಂ ತೇಷಾಂ ನ ಪಿಶಾಚಾನ್ನ ರಾಕ್ಷಸಾತ್ ।
ನಾಗ್ನ್ಯಮ್ಬುಪವನವ್ಯಾಲಾದ್ಭಯಂ ತಸ್ಯೋಪಜಾಯತೇ ॥೬೯॥

ಗಾಯತ್ರೀಮಂತ್ರವನ್ನು ಜಪಿಸುವವನಿಗೆ–ರಾಜರ, ಪಿಶಾಚಗಳ,

ರಾಕ್ಷಸರ, ಅಗ್ನಿಯ, ನೀರಿನ, ವಾಯುವಿನ, ವಿಷಜಂತುಗಳ ಭಯವಿರುವುದಿಲ್ಲ.

ಚತುರ್ಣಾಮಪಿ ವರ್ಣಾನಾಮಾಶ್ರಮಸ್ಯ ವಿಶೇಷತಃ।
ಕರೋತಿ ಸತತಂ ಶಾನ್ತಿಂ ಸಾವಿತ್ರೀಮುತ್ತಮಾಂ ಪಠನ್ ॥೭೦॥

ಪರಿಶುದ್ಧನಾಗಿ ಸಾವಿತ್ರೀಮಂತ್ರವನ್ನು ಶ್ರದ್ಧೆಯಿಂದ ಜಪಿಸುವವನು, ನಾಲ್ಕು ವರ್ಣಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ನಾಲ್ಕು ಆಶ್ರಮಗಳಲ್ಲಿ ಶಾಶ್ವತವಾದ ಶಾಂತಿಯನ್ನು ಸ್ಥಾಪಿಸುತ್ತಾನೆ.

ನಾಗ್ನಿರ್ದಹತಿ ಕಾಷ್ಠಾನಿ ಸಾವಿತ್ರೀ ಯತ್ರ ಪಠ್ಯತೇ।
ನ ತತ್ರ ಬಾಲೋ ಮ್ರಿಯತೇ ನ ಚ ತಿಷ್ಠನ್ತಿ ಪನ್ನಗಾಃ ॥೭೧॥

ಗಾಯತ್ರೀಮಂತ್ರವನ್ನು ಶ್ರದ್ಧೆಯಿಂದ ಜಪಿಸುತ್ತಿರುವವರ ಮನೆಯಲ್ಲಿ ಬೆಂಕಿಯು ಹೊತ್ತಿಕೊಳ್ಳುವುದಿಲ್ಲ. (ಅಗ್ನಿಯ ಭಯವಿರುವುದಿಲ್ಲ.) ಬಾಲಕನು ಸಾಯುವುದಿಲ್ಲ. ಸರ್ಪಗಳು ಇರುವುದಿಲ್ಲ.

ನ ತೇಷಾಂ ವಿದ್ಯತೇ ದುಃಖಂ ಗಚ್ಛನ್ತಿ ಪರಮಾಂ ಗತಿಮ್।
ಯೇ ಶೃಣ್ವನ್ತಿ ಮಹದ್ಬ್ರಹ್ಮ ಸಾವಿತ್ರೀಗುಣಕೀರ್ತನಮ್ ॥೭೨॥

ಸಾವಿತ್ರಿಯ (ಸಾವಿತ್ರೀದೇವತೆಯ) ಗುಣಸಂಕೀರ್ತನಮಾಡುವ ಗಾಯತ್ರೀಮಹಾಮಂತ್ರವನ್ನು ಯಾರು ಕೇಳುವರೋ–ಅವರಿಗೆ ದುಃಖವೆಂಬುದೇ ಇರುವುದಿಲ್ಲ. ಅವರು ಪರಮಗತಿಯನ್ನು ಹೊಂದುತ್ತಾರೆ.

ಗವಾಂ ಮಧ್ಯೇತು ಪಠತೋ ಗಾವೋಽಸ್ಯ ಬಹುವತ್ಸಲಾಃ।
ಪ್ರಸ್ಥಾನೇ ವಾ ಪ್ರವಾಸೇ ವಾ ಸರ್ವಾವಸ್ಥಾಂ ಗತಃ ಪಠೇತ್ ॥೭೩॥

ಹಸುಗಳ ಮಧ್ಯದಲ್ಲಿ ಗಾಯತ್ರೀಮಂತ್ರವನ್ನು ಜಪಿಸಿದರೆ ಗೋವುಗಳು ಅವನ ವಿಷಯದಲ್ಲಿ ವಾತ್ಸಲ್ಯವನ್ನು ಹೊಂದುತ್ತವೆ. ಪ್ರಯಾಣಕಾಲದಲ್ಲಿ ಅಥವಾ ಪ್ರವಾಸಮಾಡುತ್ತಿರುವಾಗ ಎಲ್ಲ ಅವಸ್ಥೆಗಳಲ್ಲಿಯೂ ಶುಭಕಾಮನಾದ ಮನುಷ್ಯನು ಈ ಮಂತ್ರವನ್ನು ಪಠಿಸಬೇಕು.

ಜಪತಾಂ ಜುಹ್ವತಾಂ ಚೈವ ನಿತ್ಯಂ ಚ ಪ್ರಯತಾತ್ಮನಾಮ್।
ಋಷೀಣಾಂ ಪರಮಂ ಜಪ್ಯಂ ಗುಹ್ಯಮೇತನ್ನರಾಧಿಪ ॥೭೪॥

ನರಾಧಿಪನೇ! ಶುದ್ಧಚಿತ್ತರಾಗಿ ಜಪಿಸುವ ಮತ್ತು ಹೋಮಮಾಡುವ ಋಷಿಗಳಿಗೆ ಈ ಸಾವಿತ್ರೀಮಂತ್ರವು ಶ್ರೇಷ್ಠವಾದ ಮತ್ತು ಗೋಪನೀಯವಾದ ಜಪಮಂತ್ರವಾಗಿದೆ.

ಯಾಥಾತಥ್ಯೇನ ಸಿದ್ಧಸ್ಯ ಇತಿಹಾಸಂ ಪುರಾತನಮ್ ।
ಪರಾಶರಮತಂ ದಿವ್ಯಂ ಶಕ್ರಾಯ ಕಥಿತಂ ಪುರಾ ॥೭೫॥

ಈ ಮಂತ್ರದ ಪುನಶ್ಚರಣೆಯಿಂದ ಸಿದ್ಧಿಯನ್ನು ಪಡೆದ ವೇದವ್ಯಾಸರಿಂದ ಇಂದ್ರನಿಗೆ ಯಥಾವತ್ತಾಗಿ ಹೇಳಲ್ಪಟ್ಟ ಪ್ರಾಚೀನವಾದ, ದಿವ್ಯವಾದ ಇತಿಹಾಸವಿದು. ಇದು ಪರಾಶರ ಮುನಿಯ ಅಭಿಮತವಾಗಿದೆ.

ಈ ಸಾವಿತ್ರೀಮಂತ್ರದ ವಿಷಯವಾಗಿ ಎಲ್ಲವನ್ನೂ ನಿನಗೆ ಹೇಳಿದ್ದೇನೆ. ಈ ಗಾಯತ್ರೀಮಂತ್ರವು ಸತ್ಯಸ್ವರೂಪವು; ಸನಾತನಬ್ರಹ್ಮರೂಪವು. ಸಮಸ್ತಪ್ರಾಣಿಗಳಿಗೂ ಇದು ಹೃದಯರೂಪವಾಗಿದೆ ಮತ್ತು ಸನಾತನ ಶ್ರುತಿಯಾಗಿದೆ.

ಸೋಮವಂಶ ಮತ್ತು ಸೂರ್ಯವಂಶಗಳಲ್ಲಿ ಹುಟ್ಟಿರುವ ಎಲ್ಲ ರಘುವಂಶದ ರಾಜರೂ ಮತ್ತು ಕುರುವಂಶದ ರಾಜರೂ ಪರಿಶುದ್ಧರಾಗಿ ಪ್ರಾಣಿಗಳಿಗೆ ಪರಮಗತಿಯಾದ ಈ ಗಾಯತ್ರೀಮಂತ್ರವನ್ನು ಜಪಿಸುತ್ತಿದ್ದಾರೆ.

ಅಭ್ಯಾಸೇ ನಿತ್ಯಂ ದೇವಾನಾಂ ಸಪ್ತರ್ಷೀಣಾಂ ಧ್ರುವಸ್ಯ ಚ ।
ಮೋಕ್ಷಣಂ ಸರ್ವಕೃಚ್ಛ್ರಾಣಾಂ ಮೋಚಯತ್ಯಶುಭಾತ್ಸದಾ ॥೭೮॥

ಪ್ರತಿದಿನವೂ ದೇವತೆಗಳ, ಸಪ್ತರ್ಷಿಗಳ ಮತ್ತು ಧ್ರುವನ ಸ್ಮರಣೆಯು ಸಮಸ್ತವಾದ ಕಷ್ಟಗಳನ್ನೂ ಪರಿಹರಿಸುತ್ತದೆ. ಅವರ ನಾಮಸಂಕೀರ್ತನವು ಅಮಂಗಳವನ್ನು ತೊಡೆದುಹಾಕುತ್ತದೆ.

ವೃದ್ಧೈಃ ಕಾಶ್ಯಪಗೌತಮಪ್ರಭೃತಿಭಿರ್ಭೃಗ್ವಙ್ಗಿರೋತ್ರ್ಯಾದಿಭಿಃ
ಶುಕ್ರಾಗಸ್ತ್ಯಬೃಹಸ್ಪತಿಪ್ರಭೃತಿಭಿರ್ಬ್ರಹ್ಮರ್ಷಿಭಿಃ ಸೇವಿತಮ್ ।

ಭಾರದ್ವಾಜಮತಂ ಋಚೀಕತನಯೈಃ ಪ್ರಾಪ್ತಂ ವಸಿಷ್ಠಾತ್ಪುನಃ
ಸಾವಿತ್ರೀಮಧಿಗಮ್ಯ ಶಕ್ರವಸುಭಿಃ ಕೃತ್ಸ್ನಾ ಜಿತಾ ದಾನವಾಃ ॥೭೯॥

ಕಾಶ್ಯಪ, ಗೌತಮ, ಭೃಗು, ಅಂಗಿರಸ, ಅತ್ರಿ, ಶುಕ್ರ, ಅಗಸ್ತ್ಯ, ಬೃಹಸ್ಪತಿ–ಇವರೇ ಮೊದಲಾದ ವೃದ್ಧರಾದ ಬ್ರಹ್ಮರ್ಷಿಗಳು ಸದಾ ಸಾವಿತ್ರೀ ಮಂತ್ರವನ್ನು ಸೇವಿಸುತ್ತಿರುತ್ತಾರೆ.(ಜಪಿಸುತ್ತಿರುತ್ತಾರೆ.) ಭಾರದ್ವಾಜರಿಗೆ ಅಭಿಮತವಾದ ಗಾಯತ್ರೀಮಂತ್ರವನ್ನು ಋಚೀಕನ ಮಕ್ಕಳು ಭಾರದ್ವಾಜರಿಂದ ಪಡೆದುಕೊಂಡರು. ಆ ಮಹಾಮಂತ್ರವನ್ನೇ ಪುನಃ ವಸಿಷ್ಠರಿಂದ ಇಂದ್ರ ಮತ್ತು ವಸುಗಳು ಪಡೆದುಕೊಂಡು ಸಮಸ್ತದಾನವರನ್ನೂ ಜಯಿಸಿದರು.

ಯೋ ಗೋಶತಂ ಕನಕಶೃಙ್ಗಮಯಂ ದದಾತಿ
ವಿಪ್ರಾಯ ವೇದವಿದುಷೇ ಚ ಬಹುಶ್ರುತಾಯ।
ದಿವ್ಯಾಂ ಚ ಭಾರತಕಥಾಂ ಕಥಯೇಚ್ಚ ನಿತ್ಯಂ
ತುಲ್ಯಂ ಫಲಂ ಭವತಿ ತಸ್ಯ ಚ ತಸ್ಯ ಚೈವ ॥೮೦॥

ಸಕಲಶಾಸ್ತ್ರಗಳನ್ನೂ ತಿಳಿದಿರುವ ವೇದವಿದನಾದ ಬ್ರಾಹ್ಮಣನಿಗೆ ಸುವರ್ಣಮಯವಾದ ಕೊಂಬುಗಳಿಂದ ಕೂಡಿದ ನೂರು ಹಸುಗಳನ್ನು ಪ್ರತಿದಿನವೂ ದಾನಮಾಡುವವನಿಗೂ, ದಿವ್ಯವಾದ ಮಹಾಭಾರತಕಥೆಯನ್ನು ಪಠಿಸುವವನಿಗೂ ಸಮಾನವಾದ ಫಲವೇ ಲಭಿಸುತ್ತದೆ.

ಧರ್ಮೋ ವಿವರ್ಧತಿ ಭೃಗೋಃ ಪರಿಕೀರ್ತನೇನ
ವೀರ್ಯಂ ವಿವರ್ಧತಿ ವಸಿಷ್ಠನಮೋ ನತೇನ।
ಸಂಗ್ರಾಮಜಿದ್ಭವತಿ ಚೈವ ರಘುಂ ನಮಸ್ಯ-
ನ್ಸ್ಯಾದಶ್ವಿನೌ ಚ ಪರಿಕೀರ್ತಯತೋ ನ ರೋಗಃ ॥೮೧॥

ಭೃಗುವಿನ ಶುಭನಾಮವನ್ನು ಕೀರ್ತನಮಾಡುತ್ತಿದ್ದರೆ ಧರ್ಮವು ವೃದ್ಧಿಯಾಗುತ್ತದೆ. ವಸಿಷ್ಠರನ್ನು ನಮಸ್ಕರಿಸುತ್ತಿದ್ದರೆ ವೀರ್ಯವು ವೃದ್ಧಿಸುತ್ತದೆ. ರಘುಮಹಾರಾಜನನ್ನು ನಮಸ್ಕರಿಸುತ್ತಿರುವ ಕ್ಷತ್ರಿಯನು ಯುದ್ಧದಲ್ಲಿ ಜಯವನ್ನು ಗಳಿಸುತ್ತಾನೆ. ಅಶ್ವಿನೀದೇವತೆಗಳ ಶುಭನಾಮಗಳನ್ನು ಸಂಕೀರ್ತನಮಾಡುತ್ತಿದ್ದರೆ ರೋಗದ ಭಯವಿರುವುದಿಲ್ಲ.

ಯುಧಿಷ್ಠಿರ! ಸನಾತನಬ್ರಹ್ಮರೂಪವಾದ ಗಾಯತ್ರೀಮಂತ್ರದ

ಮಹಿಮೆಯನ್ನು ನಿನಗೆ ಹೇಳಿದ್ದೇನೆ. ಬೇರೇನನ್ನಾದರೂ ಕೇಳಲು ಬಯಸಿದ್ದರೆ ಕೇಳು. ಅದನ್ನೂ ಹೇಳುತ್ತೇನೆ." *

೧೫೦ನೆಯ ಅಧ್ಯಾಯವು ಮುಗಿಯಿತು.

೧೫೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರ ಮಹಿಮಾವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕೇ ಪೂಜ್ಯಾಃ ಕೇ ನಮಸ್ಕಾರ್ಯಾಃ ಕಥಂ ವರ್ತೇತ ಕೇಷು ಚ ।
ಕಿಮಾಚಾರಃ ಕೀದೃಶೇಷು ಪಿತಾಮಹ ನ ರಿಷ್ಯತೇ ॥೧॥

"ಪಿತಾಮಹನೇ! ಪ್ರಪಂಚದಲ್ಲಿ ಪೂಜ್ಯರು ಯಾರು? ನಮಸ್ಕರಿಸಲು ಯೋಗ್ಯರಾದವರು ಯಾರು? ಎಂತಹವರಲ್ಲಿ ಹೇಗೆ ವ್ಯಹರಿಸುವುದರಿಂದ ಹಾನಿಯುಂಟಾಗುವುದಿಲ್ಲ? ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಬ್ರಾಹ್ಮಣಾನಾಂ ಪರಿಭವಃ ಸಾದಯೇದಪಿ ದೇವತಾಃ ।
ಬ್ರಹ್ಮಣಾಂಸ್ತು ನಮಸ್ಕೃತ್ಯ ಯುಧಿಷ್ಠಿರ ನರಿಷ್ಯತೇ ॥೨॥

"ಯುಧಿಷ್ಠಿರ! ಬ್ರಾಹ್ಮಣರಿಗೆ ಮಾಡುವ ಅವಮಾನವು ದೇವತೆಗಳನ್ನೂ ವಿನಾಶಗೊಳಿಸುತ್ತದೆ. ಆದರೆ ಬ್ರಾಹ್ಮಣರನ್ನು ನಮಸ್ಕರಿಸುತ್ತಾ ಅವರೊಡನೆ ವಿನಯಪೂರ್ವಕವಾಗಿ ನಡೆದುಕೊಂಡರೆ ಯಾವ ಹಾನಿಯೂ ಉಂಟಾಗುವುದಿಲ್ಲ.

ತೇ ಪೂಜ್ಯಾಸ್ತೇ ನಮಸ್ಕಾರ್ಯಾ ವರ್ತೇಥಾಸ್ತೇಷು ಪುತ್ರವತ್ ।
ತೇ ಹಿ ಲೋಕಾನಿಮಾನ್ಸರ್ವಾನ್ಧಾರಯನ್ತಿ ಮನೀಷಿಣಃ ॥೩॥

ಬ್ರಾಹ್ಮಣರು ಪೂಜ್ಯರು. ನಮಸ್ಕಾರಮಾಡಲು ಯೋಗ್ಯರಾದವರು. ಯೋಗ್ಯನಾದ ಮಗನು ತಂದೆಯ ವಿಷಯದಲ್ಲಿ ವ್ಯವಹರಿಸುವಂತೆ ನೀನು

---

* ಈ ಅಧ್ಯಾಯವು ಭಂ.ರಿ.ಇನ್ಸ್‌ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ಕಂಡುಬರುವುದಿಲ್ಲ.

ಅವರಲ್ಲಿ ವ್ಯವಹರಿಸಬೇಕು. ವಿದ್ವಾಂಸರಾದ ಅವರು ಈ ಎಲ್ಲ ಲೋಕಗಳನ್ನೂ (ತಮ್ಮ ತಪೋಬಲದಿಂದ) ಧಾರಣೆಮಾಡಿರುತ್ತಾರೆ.

ಬ್ರಾಹ್ಮಣಾಃ ಸರ್ವಲೋಕಾನಾಂ ಮಹಾನ್ತೋ ಧರ್ಮಸೇತವಃ।
ಧನತ್ಯಾಗಾಭಿರಾಮಾಶ್ಚ ವಾಕ್ಸಂಯಮರತಾಶ್ಚ ಯೇ ॥೪॥

ಬ್ರಾಹ್ಮಣರು ಸಮಸ್ತಪ್ರಜೆಗಳಿಗೂ ದೊಡ್ಡವರು. ಧರ್ಮ ಮರ್ಯಾದೆಯ ಸಂರಕ್ಷಣೆಯಲ್ಲಿ ಸೇತುವೆಯಂತಿದ್ದಾರೆ. ಇವರು ಐಶ್ವರ್ಯತ್ಯಾಗದಲ್ಲಿ ಪ್ರಸನ್ನರೂ ಮಾತಿನಲ್ಲಿ ಸಂಯಮಿಗಳೂ (ಮಿತಭಾಷಿಗಳೂ) ಆಗಿರುವರು.

ರಮಣೀಯಾಶ್ಚ ಭೂತಾನಾಂ ನಿಧಾನಂ ಚ ಧೃತವ್ರತಾಃ।
ಪ್ರಣೇತಾರಶ್ಚ ಲೋಕಾನಾಂ ಶಾಸ್ತ್ರಾಣಾಂ ಚ ಯಶಸ್ವಿನಃ ॥೫॥

ದೃಢವ್ರತರಾದ ಬ್ರಾಹ್ಮಣರು ಎಲ್ಲ ಪ್ರಾಣಿಗಳಿಗೂ ರಮಣೀಯರೂ, ಆನಂದವನ್ನುಂಟುಮಾಡುವವರೂ, ಆಶ್ರಯಭೂತರೂ ಆಗಿದ್ದಾರೆ. ಯಶೋವಂತರೂ, ಲೋಕನಾಯಕರೂ, ಶಾಸ್ತ್ರಗಳನ್ನು ರಚಿಸುವವರೂ ಆಗಿದ್ದಾರೆ.

ತಪೋ ಯೇಷಾಂ ಧನಂ ನಿತ್ಯಂ ವಾಕ್ಚೈವ ವಿಪುಲಂ ಬಲಮ್।
ಪ್ರಭವಶ್ಚೈವ ಧರ್ಮಾಣಾಂ ಧರ್ಮಜ್ಞಾಃ ಸೂಕ್ಷ್ಮದರ್ಶಿನಃ ॥೬॥

ನಿತ್ಯವೂ ಮಾಡುವ ತಪಶ್ಚರಣೆಯೇ ಅವರ ಧನವಾಗಿರುತ್ತದೆ. ವಾಣಿಯೇ ಅವರಿಗೆ ಮಹಾಬಲವಾಗಿರುತ್ತದೆ. ಧರ್ಮಜ್ಞರಾದ ಮತ್ತು ಸೂಕ್ಷ್ಮದರ್ಶಿಗಳಾದ ಬ್ರಾಹ್ಮಣರೇ ನಾನಾಪ್ರಕಾರವಾದ ಧರ್ಮಗಳಿಗೆ ಪ್ರಭುಗಳಾಗಿದ್ದಾರೆ.

ಧರ್ಮಕಾಮಾಃ ಸ್ಥಿತಾ ಧರ್ಮೇ ಸುಕೃತೈರ್ಧರ್ಮಸೇತವಃ।
ಯಾನ್ಸಮಾಶ್ರಿತ್ಯ ಜೀವನ್ತಿ ಪ್ರಜಾಃ ಸರ್ವಾಶ್ಚತುರ್ವಿಧಾಃ ॥೭॥

ಧರ್ಮಕಾಮರಾದ, ಪುಣ್ಯಕರ್ಮಗಳ ಮೂಲಕವಾಗಿ ಧರ್ಮದಲ್ಲಿಯೇ ಸುಪ್ರತಿಷ್ಠಿತರಾಗಿರುವ, ಧರ್ಮಕ್ಕೆ ಸೇತುವೆಗಳ ರೂಪದಲ್ಲಿರುವ ಇವರನ್ನು ಆಶ್ರಯಿಸಿಯೇ ನಾಲ್ಕು ವಿಧವಾದ ಪ್ರಜೆಗಳೂ ಜೀವಿಸುತ್ತಿದ್ದಾರೆ.

ಪನ್ಥಾನಃ ಸರ್ವನೇತಾರೋ ಯಜ್ಞವಾಹಾಃ ಸನಾತನಾಃ।
ಪಿತೃಪೈತಾಮಹೀಂ ಗುರ್ವೀಮುದ್ವಹನ್ತಿ ಧುರಂ ಸದಾ।
ಧುರಿ ಯೇ ನಾವಸೀದನ್ತಿ ವಿಷಯೇ ಸದ್ಗವಾ ಇವ ॥೮॥

ಬ್ರಾಹ್ಮಣರು ಎಲ್ಲರಿಗೂ ಮಾರ್ಗದರ್ಶಕರೂ, ಎಲ್ಲರ ನಾಯಕರೂ ಆಗಿದ್ದಾರೆ. ಸನಾತನರಾದ ಇವರು ಯಜ್ಞನಿರ್ವಾಹಕರು. ತಾತ-ಮುತ್ತಾತಂದಿರ ಕಾಲದಿಂದಲೂ ಬಂದಿರುವ ಅತ್ಯಂತ ಭಾರವಾದ ಧರ್ಮ ಮರ್ಯಾದೆಯ ಭಾರವನ್ನು ಸದಾ ಹೊತ್ತಿರುತ್ತಾರೆ. ಒಳ್ಳೆಯ ಹೋರಿಗಳು ಭಾರವನ್ನು ಹೊರುವಾಗ ಶೈಥಿಲ್ಯವನ್ನು ಹೊಂದದಂತೆ– ಧರ್ಮದ ಹೊರೆಯನ್ನು ಹೊತ್ತಿರುವ ಬ್ರಾಹ್ಮಣರು ಶೈಥಿಲ್ಯವನ್ನು ಹೊಂದುವುದಿಲ್ಲ.

ಪಿತೃದೇವಾತಿಥಿಮುಖಾ ಹವ್ಯಕವ್ಯಾಗ್ರಭೋಜಿನಃ ॥೯॥

ಪಿತೃಗಳಿಗೂ, ದೇವತೆಗಳಿಗೂ ಮತ್ತು ಅತಿಥಿಗಳಿಗೂ ಅವರು ಮುಖಪ್ರಾಯರು. ಆದುದರಿಂದಲೇ ಹವ್ಯ-ಕವ್ಯಗಳಲ್ಲಿ ಅವರು ಅಗ್ರಭೋಜನಕ್ಕೆ ಯೋಗ್ಯರಾಗಿರುತ್ತಾರೆ.

ಭೋಜನಾದೇವ ಲೋಕಾಂಸ್ತ್ರೀಂಸ್ತ್ರಾಯನ್ತೇ ಮಹತೋ ಭಯಾತ್।
ದೀಪಃ ಸರ್ವಸ್ಯ ಲೋಕಸ್ಯ ಚಕ್ಷುಶ್ಚಕ್ಷುಷ್ಮತಾಮಪಿ ॥೧೦॥

ಬ್ರಾಹ್ಮಣರು ಭೋಜನಮಾತ್ರದಿಂದ ಮೂರು ಲೋಕಗಳನ್ನೂ ಮಹಾಭಯದಿಂದ ಪಾರುಮಾಡುತ್ತಾರೆ. ಲೋಕಕ್ಕೆ ದೀಪದಂತೆ ಮಾರ್ಗದರ್ಶಕರು. ಕಣ್ಣಿರುವವರಿಗೂ (ವಿವೇಕಿಗಳಿಗೂ) ಕಣ್ಣಾದವರು. (ವಿವೇಕವನ್ನು ಹೇಳತಕ್ಕವರು.)

ಸರ್ವಶಿಕ್ಷಾಃ ಶ್ರುತಿಧನಾ ನಿಪುಣಾ ಮೋಕ್ಷದರ್ಶಿನಃ।
ಗತಿಜ್ಞಾಃ ಸರ್ವಭೂತಾನಾಮಧ್ಯಾತ್ಮಗತಿಚಿನ್ತಕಾಃ ॥೧೧॥

ಬ್ರಾಹ್ಮಣರು ಎಲ್ಲರನ್ನೂ ಸುಶಿಕ್ಷಿತರನ್ನಾಗಿ ಮಾಡುತ್ತಾರೆ. ಅವರು ವೇದವನ್ನೇ ಧನವನ್ನಾಗಿ ಉಳ್ಳವರು. ಶಾಸ್ತ್ರಜ್ಞಾನದಲ್ಲಿ ಕುಶಲರು. ಮೋಕ್ಷಮಾರ್ಗವನ್ನು ಚೆನ್ನಾಗಿ ಕಂಡುಕೊಂಡವರು. ಸರ್ವಪ್ರಾಣಿಗಳ ಗತಿಗಳನ್ನೂ ತಿಳಿದವರು. ಯಾವಾಗಲೂ ಅಧ್ಯಾತ್ಮತತ್ತ್ವವನ್ನೇ ಚಿಂತಿಸುವವರು.

ಆದಿಮಧ್ಯಾವಸಾನಾನಾಂ ಜ್ಞಾತಾರಶ್ಛಿನ್ನಸಂಶಯಾಃ।
ಪರಾವರವಿಶೇಷಜ್ಞಾ ಗನ್ತಾರಃ ಪರಮಾಂ ಗತಿಮ್ ॥೧೨॥

ಬ್ರಾಹ್ಮಣರು ಆದಿ, ಮಧ್ಯ ಮತ್ತು ಅಂತಗಳನ್ನು ತಿಳಿದವರಾಗಿದ್ದಾರೆ. ಸಂಶಯರಹಿತರು. ಪರತತ್ತ್ವವಾದ ಪರಮಾತ್ಮಾ ಮತ್ತು ಅದಕ್ಕೆ ಕೆಳಗಿನ ಇತರ ತತ್ತ್ವಗಳ ವಿಶೇಷಜ್ಞಾನವಿರತಕ್ಕವರು. ಪರಮಗತಿಯನ್ನು ಹೊಂದತಕ್ಕವರು.

ವಿಮುಕ್ತಾ ಧೂತಪಾಪ್ಮಾನೋ ನಿರ್ದ್ವನ್ದ್ವಾ ನಿಷ್ಪರಿಗ್ರಹಾಃ।
ಮಾನಾರ್ಹಾ ಮಾನಿತಾ ನಿತ್ಯಂ ಜ್ಞಾನವದ್ಭಿರ್ಮಹಾತ್ಮಭಿಃ ॥೧೩॥

ಶ್ರೇಷ್ಠರಾದ ಬ್ರಾಹ್ಮಣರು ಸಕಲಬಂಧನಗಳಿಂದಲೂ ಮುಕ್ತರಾಗಿರುತ್ತಾರೆ. ಎಲ್ಲ ಪಾಪಗಳನ್ನೂ ಕಳೆದುಕೊಂಡಿರುತ್ತಾರೆ. ಶೀತೋಷ್ಣ- ಸುಖ-ದುಃಖಾದಿ ದ್ವಂದ್ವಗಳಿಂದ ರಹಿತರಾಗಿರುತ್ತಾರೆ. ಪರಿಗ್ರಹವನ್ನು ಮಾಡುವುದಿಲ್ಲ. ಸಮ್ಮಾನಕ್ಕೆ ಯೋಗ್ಯರಾಗಿ ಮಹಾತ್ಮರಾದ ಜ್ಞಾನಿಗಳಿಂದ ನಿತ್ಯವೂ ಸಮ್ಮಾನಿಸಲ್ಪಡುತ್ತಾರೆ.

ಚನ್ದನೇ ಮಲಪಙ್ಕೇ ಚ ಭೋಜನೇಽಭೋಜನೇ ಸಮಾಃ।
ಸಮಂ ಯೇಷಾಂ ದುಕೂಲಂ ಚ ತಥಾ ಕ್ಷೌಮಾಜಿನಾನಿ ಚ ॥೧೪॥

ಗಂಧ-ಕೆಸರು, ಭೋಜನ-ಉಪವಾಸ ಇವುಗಳಲ್ಲಿ ಸಮಾನವಾದ ದೃಷ್ಟಿಯುಳ್ಳವರಾಗಿರುತ್ತಾರೆ. ಇವರಿಗೆ ಹತ್ತಿಯ ಬಟ್ಟೆ ರೇಷ್ಮೆಯ ವಸ್ತ್ರ ಮತ್ತು ಕೃಷ್ಣಾಜಿನ ಇವುಗಳು ಸಮಾನವಾಗಿರುತ್ತವೆ.

ತಿಷ್ಠೇಯುರಪ್ಯಭುಞ್ಜಾನಾ ಬಹೂನಿ ದಿವಸಾನ್ಯಪಿ।
ಶೋಷಯೇಯುಶ್ಚ ಗಾತ್ರಾಣಿ ಸ್ವಾಧ್ಯಾಯೈಃ ಸಂಯತೇನ್ದ್ರಿಯಾಃ ॥೧೫॥

ಬ್ರಾಹ್ಮಣರು ಅನೇಕದಿವಸಗಳವರೆಗೆ ಊಟಮಾಡದೆಯೇ ಇರಬಲ್ಲರು. ಜಿತೇಂದ್ರಿಯರಾದ ಅವರು ಅಧ್ಯಯನ ಅಧ್ಯಾಪನಗಳನ್ನು ಮಾಡುತ್ತಾ ತಮ್ಮ ಶರೀರಗಳನ್ನು ಶೋಷಿಸಬಲ್ಲರು.

ಅದೈವಂ ದೈವತಂ ಕುರ್ಯುರ್ದೈವತಂ ಚಾಪ್ಯದೈವತಮ್।
ಲೋಕಾನನ್ಯಾನ್ಸೃಜೇಯುಸ್ತೇ ಲೋಕಪಾಲಾಂಶ್ಚ ಕೋಪಿತಾಃ ॥೧೬॥

ಬ್ರಾಹ್ಮಣರು ತಮ್ಮ ತಪೋಬಲದಿಂದ ದೇವನಲ್ಲದವನನ್ನು ದೇವತೆಯನ್ನಾಗಿ ಮಾಡಬಲ್ಲರು. ದೇವತೆಯನ್ನು ದೇವತ್ವದಿಂದ ಭ್ರಷ್ಟನನ್ನಾಗಿ

ಮಾಡಬಲ್ಲರು. ಕೋಪಗೊಳಿಸಲ್ಪಟ್ಟರೆ ಹೊಸ-ಹೊಸಲೋಕಗಳನ್ನೂ ಲೋಕಪಾಲರನ್ನೂ ಸೃಷ್ಟಿಸಬಲ್ಲರು.

ಅಪೇಯಃ ಸಾಗರೋ ಯೇಷಾಮತಿಶಾಪಾನ್ಮಹಾತ್ಮನಾಮ್।
ಯೇಷಾಂ ಕೋಪಾಗ್ನಿರದ್ಯಾಪಿ ದಣ್ಡಕೇ ನೋಪಶಾಮ್ಯತಿ ॥೧೭॥

ಮಹಾತ್ಮರಾದ ಬ್ರಾಹ್ಮಣರ ಶಾಪದಿಂದ ಸಮುದ್ರದ ನೀರು ಕುಡಿಯಲು ಅಯೋಗ್ಯವಾಯಿತು.ಅವರ ಕ್ರೋಧಾಗ್ನಿಯು ದಂಡಕಾರಣ್ಯದಲ್ಲಿ ಈಗಲೂ ಶಾಂತವಾಗಿಯೇ ಇಲ್ಲ.

ದೇವಾನಾಮಪಿ ಯೇ ದೇವಾಃ ಕಾರಣಂ ಕಾರಣಸ್ಯ ಚ।
ಪ್ರಮಾಣಸ್ಯ ಪ್ರಮಾಣಂ ಚ ಕಸ್ತಾನಭಿಭವೇದ್ಬುಧಃ ॥೧೮॥

ದೇವತೆಗಳಿಗೂ ಯಾರು ದೇವತೆಗಳಾಗಿರುವರೋ ಕಾರಣಕ್ಕೂ ಕಾರಣರಾಗಿರುವರೋ, ಪ್ರಮಾಣಕ್ಕೂ ಪ್ರಮಾಣಭೂತರಾಗಿರುವರೋ–ಅಂತಹ ಬ್ರಾಹ್ಮಣರನ್ನು ಯಾವ ಪಂಡಿತನು ತಾನೇ ಅವಮಾನಿಸುವನು?

ಯೇಷಾಂ ವೃದ್ಧಶ್ಚ ಬಾಲಶ್ಚ ಸರ್ವಃ ಸಮ್ಮಾನಮರ್ಹತಿ ।
ತಪೋವಿದ್ಯಾವಿಶೇಷಾತ್ತು ಮಾನಯನ್ತಿ ಪರಸ್ಪರಮ್ ॥೧೯॥

ಬ್ರಾಹ್ಮಣರಲ್ಲಿ ವೃದ್ಧನಾಗಲೀ, ಬಾಲಕನಾಗಲೀ–ಸಮ್ಮಾನಕ್ಕೆ ಯೋಗ್ಯನೇ ಸರಿ. ಬ್ರಾಹ್ಮಣರು ತಮ್ಮಲ್ಲಿಯೇ ಇರುವ ವಿದ್ಯಾವಿಶೇಷವನ್ನೂ ತಪೋವಿಶೇಷವನ್ನೂ ಪರಿಗಣಿಸಿ ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ಸಮ್ಮಾನಿಸುತ್ತಾರೆ.

ಅವಿದ್ವಾನ್ಬ್ರಾಹ್ಮಣೋ ದೇವಃ ಪಾತ್ರಂ ವೈ ಪಾವನಂ ಮಹತ್।
ವಿದ್ವಾನ್ಭೂಯಸ್ತರೋ ದೇವಃ ಪೂರ್ಣಸಾಗರಸನ್ನಿಭಃ ॥೨೦॥

ಬ್ರಾಹ್ಮಣನು ಅವಿದ್ಯಾವಂತನಾಗಿದ್ದರೂ ದೇವಸಮಾನನೇ ಸರಿ. ಪರಮಪವಿತ್ರನೂ ದಾನಕ್ಕೆ ಸತ್ಪಾತ್ರನೂ ಆಗುತ್ತಾನೆ. ಹೀಗಿರುವಾಗ ವಿದ್ಯಾವಂತನಾದ ಬ್ರಾಹ್ಮಣನ ವಿಷಯದಲ್ಲಿ ಹೇಳುವುದೇನಿದೆ? ತುಂಬಿದ ಸಮುದ್ರದಂತೆ ವಿದ್ಯೆಯಿಂದ ಪರಿಪೂರ್ಣನಾದ ಬ್ರಾಹ್ಮಣನು ದೇವತೆಗಿಂತಲೂ ಮಿಗಿಲಾದವನು.

ಅವಿದ್ವಾಂಶ್ಚೈವ ವಿದ್ವಾಂಶ್ಚ ಬ್ರಾಹ್ಮಣೋ ದೈವತಂ ಮಹತ್ ।
ಪ್ರಣೀತಶ್ಚಾಪ್ರಣೀತಶ್ಚ ಯಥಾಗ್ನಿರ್ದೈವತಂ ಮಹತ್ ॥೨೧॥

ಅಗ್ನಿಯು ಮಂತ್ರದಿಂದ ಸಂಸ್ಕರಿಸಲ್ಪಟ್ಟಿರಲಿ ಅಸಂಸ್ಕೃವಾಗಿಯೇ ಇರಲಿ ಮಹಾದೇವತೆಯೆಂದು ಪರಿಗಣಿತನಾಗುವಂತೆ –ವಿದ್ವಾಂಸನಾಗಿರಲಿ ಅವಿದ್ವಾಂಸನಾಗಿರಲಿ ಬ್ರಾಹ್ಮಣನು ಪರದೇವತೆಯೇ ಸರಿ.

ಶ್ಮಶಾನೇ ಹ್ಯಪಿ ತೇಜಸ್ವೀ ಪಾವಕೋ ನೈವ ದುಷ್ಯತಿ ।
ಹವಿರ್ಯಜ್ಞೇ ಚ ವಿಧಿವದ್ಗೃಹ ಏವಾತಿಶೋಭತೇ ॥೨೨॥

ತೇಜಸ್ವಿಯಾದ ಅಗ್ನಿದೇವನು ಶ್ಮಶಾನದಲ್ಲಿದ್ದರೂ ದೂಷ್ಯನಲ್ಲ. ಅದೇ ಅಗ್ನಿಯು ವಿಧಿವತ್ತಾದ ಹವಿಸ್ಸಿನಿಂದ ಸಂಪಾದಿತವಾದ ಯಜ್ಞದಲ್ಲಿಯೂ ಮನೆಯಲ್ಲಿಯೂ ಹೆಚ್ಚಾಗಿ ಶೋಭಿಸುತ್ತಾನೆ.

ಏವಂ ಯದ್ಯಪ್ಯನಿಷ್ಟೇಷು ವರ್ತತೇ ಸರ್ವಕರ್ಮಸು ।
ಸರ್ವಥಾ ಬ್ರಾಹ್ಮಣೋ ಮಾನ್ಯೋ ದೈವತಂ ವಿದ್ಧಿ ತತ್ಪರಮ್ ॥೨೩॥

ಅದರಂತೆಯೇ ಬ್ರಾಹ್ಮಣನು (ಅನಿವಾರ್ಯವಾದ ಕಾರಣಗಳಿಂದ) ಎಲ್ಲ ವಿಧವಾದ ಅನಿಷ್ಟಕರ್ಮಗಳಲ್ಲಿ ತೊಡಗಿದ್ದರೂ ಅವನು ನಿಂದ್ಯನಾಗುವುದಿಲ್ಲ. ಸರ್ವಥಾ ಅವನು ಮಾನ್ಯನೇ ಸರಿ. ಯುಧಿಷ್ಠಿರ! ನೀನು ಬ್ರಾಹ್ಮಣರನ್ನು ಪರದೇವತೆಯೇಂದೇ ಭಾವಿಸು."

ದಿ೫೧ನೆಯ ಅಧ್ಯಾಯವು ಮುಗಿಯಿತು.

ಕಾರ್ತವೀರ್ಯಾರ್ಜುನನು ದತ್ತಾತ್ರೇಯನಿಂದ ನಾಲ್ಕು ವರಗಳನ್ನು ಪಡೆದು ಅದರಿಂದ ಗರ್ವಿಷ್ಠನಾದುದು: ಬ್ರಾಹ್ಮಣರ ಮಹಿಮೆಯ ವಿಷಯದಲ್ಲಿ ಕಾರ್ತವೀರ್ಯಾರ್ಜುನ ಮತ್ತು ವಾಯುದೇವರ ಸಂವಾದ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕಾಂ ತು ಬ್ರಾಹ್ಮಣಪೂಜಾಯಾಂ ವ್ಯುಷ್ಟಿಂ ದೃಷ್ಟ್ವಾ ಜನಾಧಿಪ ।
ಕಂ ವಾ ಕರ್ಮೋದಯಂ ಮತ್ವಾ ತಾನರ್ಚಸಿ ಮಹಾಮತೇ ॥೧॥

"ಜನೇಶ್ವರನೇ! ಬ್ರಾಹ್ಮಣಪೂಜೆಯಲ್ಲಿ ಯಾವ ಪ್ರಯೋಜನವನ್ನು ಕಂಡು ನೀನು ಅವರನ್ನು ಪೂಜಿಸುವೆ? ಅಥವಾ ಯಾವ ಕರ್ಮದ ಅಭ್ಯುದಯವಾಗುವುದೆಂದು ಭಾವಿಸಿ ನೀನು ಅವರನ್ನು ಸತ್ಕರಿಸುವೆ?"

ಭೀಷ್ಮನು ಹೇಳುತ್ತಾನೆ:

"ಭಾರತನೇ! ಈ ವಿಷಯದಲ್ಲಿ ಹಿಂದೆ ವಾಯುದೇವನಿಗೂ ಕಾರ್ತ ವೀರ್ಯಾರ್ಜುನನಿಗೂ ನಡೆದ ಪುರಾತನವಾದ ಐತಿಹಾಸಿಕಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ಹೇಳುವೆನು; ಕೇಳು:

ಹಿಂದೆ ಮಾಹಿಷ್ಮತೀನಗರದಲ್ಲಿ ಸಾವಿರ ತೋಳುಗಳನ್ನು ಧರಿಸಿದ್ದ, ಕಾಂತಿಮಂತನಾದ, ಹೈಹಯವಂಶಜನಾದ, ಮಹಾಬಲನಾದ ಕಾರ್ತ ವೀರ್ಯನೆಂಬ ರಾಜನಿದ್ದನು. ಅವನು ಸಮಗ್ರವಾದ ಈ ಭೂಮಂಡಲಕ್ಕೇ ಪ್ರಭುವಾಗಿದ್ದನು. ಸತ್ಯಪರಾಕ್ರಮನಾಗಿದ್ದ ಅವನು ಸಾಗರವೇ ಅಂಬರ ವಾಗಿರುವ, ಅನೇಕದ್ವೀಪಗಳಿಂದ ಯುಕ್ತವಾಗಿರುವ, ಅನೇಕ ರತ್ನಗಳನ್ನು ಗರ್ಭದಲ್ಲಿ ಧರಿಸಿರುವ ಸಮಗ್ರವಾದ ಭೂಮಂಡಲವನ್ನೂ ಆಳುತ್ತಿದ್ದನು. ಒಮ್ಮೆ ಕೃತವೀರ್ಯನ ಮಗನಾದ ಆ ಅರ್ಜುನನು ಕ್ಷತ್ರಧರ್ಮವನ್ನೂ, ವಿನಯವನ್ನೂ, ಶಾಸ್ತ್ರಜ್ಞಾನವನ್ನೂ ಪುರಸ್ಕರಿಸಿ (ಕ್ಷತ್ರಧರ್ಮಾನುಸಾರವಾಗಿ ನಡೆಯುತ್ತಾ ವಿನಯಾನ್ವಿತನಾಗಿ ಶಾಸ್ತ್ರಾನುಸಾರವಾಗಿ) ಮುನಿಶ್ರೇಷ್ಠ ನಾದ ದತ್ತಾತ್ರೇಯನನ್ನು ಬಹಳ ದಿವಸಗಳವರೆಗೆ ಆರಾಧಿಸಿದನು. ಯಾವುದೋ ಕಾರಣದಿಂದಾಗಿ (ದತ್ತಾತ್ರೇಯನನ್ನು ಒಲಿಸಿಕೊಳ್ಳುವ

ಸಲುವಾಗಿ) ತನ್ನ ಅತುಲವಾದ ಐಶ್ವರ್ಯವನ್ನೂ ದತ್ತಾತ್ರೇಯನ ಸೇವೆಗಾಗಿಯೇ ವ್ಯಯಿಸಿದನು. ಅದರಿಂದ ವಿಪ್ರಶ್ರೇಷ್ಠನಾದ ದತ್ತಾತ್ರೇಯನು ಸಂತುಷ್ಟನಾಗಿ ಮೂರು ವರಗಳನ್ನು ಕೇಳಿಕೊಳ್ಳುವಂತೆ ಕಾರ್ತವೀರ್ಯನಿಗೆ ಆದೇಶಿಸಿದನು. ದತ್ತಾತ್ರೇಯನು ಹೀಗೆ ಆಜ್ಞಾಪಿಸುತ್ತಲೇ ರಾಜನು ಹೇಳಿದನು:

ಸಹಸ್ರಬಾಹುರ್ಭೂಯಾಂ ವೈ ಚಮೂಮಧ್ಯೇ ಗೃಹೇಽನ್ಯಥಾ ।
ಮಮ ಬಾಹುಸಹಸ್ರಂ ತು ಪಶ್ಯತಾಂ ಸೈನಿಕಾ ರಣೇ ॥೭॥

ವಿಕ್ರಮೇಣ ಮಹೀಂ ಕೃತ್ಸ್ನಾಂ ಜಯೇಯಂ ಸಂಶಿತವ್ರತ ।
ತಾಂ ಚ ಧರ್ಮೇಣ ಸಂಪ್ರಾಪ್ಯ ಪಾಲಯೇಯಮತನ್ದ್ರಿತಃ ॥೮॥

"ಕಠೋರವ್ರತನಿಷ್ಠನೇ! ನಾನು ಯುದ್ಧದ ಸಮಯದಲ್ಲಿ ಸಾವಿರ ತೋಳುಗಳಿಂದ ಯುಕ್ತನಾಗಿರಬೇಕು.ಮನೆಯಲ್ಲಿ ಮಾತ್ರ ದ್ವಿಬಾಹುವಾಗಿಯೇ ಇರಬೇಕು. ನನ್ನ ಸಾವಿರ ತೋಳುಗಳನ್ನೂ ರಣರಂಗದಲ್ಲಿ ಸೈನಿಕರು ನೋಡುವಂತಾಗಲಿ. ಭುಜಬಲ-ಪರಾಕ್ರಮಗಳಿಂದ ಸಮಗ್ರವಾದ ಈ ಭೂಮಂಡಲವನ್ನೂ ನಾನು ಜಯಿಸುವಂತಾಗಲಿ. ನಾನು ಧರ್ಮದಿಂದ ಲಭಿಸುವ ಈ ಭೂಮಂಡಲವನ್ನು ಆಲಸಿಕೆಯಿಲ್ಲದೇ ಧರ್ಮದಿಂದ ಪರಿಪಾಲಿಸುವಂತಾಗಲಿ.

ದ್ವಿಜಶ್ರೇಷ್ಠನೇ! ಈ ಮೂರು ವರಗಳೇ ಅಲ್ಲದೇ ನಾಲ್ಕನೆಯ ವರವನ್ನೂ ಯಾಚಿಸುತ್ತೇನೆ. ಅನಿಂದಿತನೇ! ನನ್ನನ್ನು ಅನುಗ್ರಹಿಸುವ ಸಲುವಾಗಿ ಆ ನಾಲ್ಕನೆಯ ವರವನ್ನೂ ನನಗೆ ದಯಪಾಲಿಸು.

ಅನುಶಾಸನ್ತು ಮಾಂ ಸನ್ತೋ ಮಿಥ್ಯೋದ್ವೃತ್ತಂ ತ್ವದಾಶ್ರಯಮ್ ।

ನಿನ್ನನ್ನೇ ಆಶ್ರಯಿಸಿರುವ ನಾನೇನಾದರೂ ಉದ್ಧತನಾಗಿ ಸನ್ಮಾರ್ಗವನ್ನು ಪರಿತ್ಯಜಿಸಿ ಅಸತ್ಯ (ಅಧರ್ಮ) ಮಾರ್ಗವನ್ನು ಆಶ್ರಯಿಸಿದ್ದೇ ಆದರೆ ಆಗ ಸತ್ಪುರುಷರು ನನ್ನನ್ನು ಅನುಶಾಸನಮಾಡಲಿ. (ನನ್ನನ್ನು ಶಿಕ್ಷಿಸಿ ಸನ್ಮಾರ್ಗಪ್ರವೃತ್ತಕನನ್ನಾಗಿ ಮಾಡಲಿ.)"

ಯುಧಿಷ್ಠಿರ! ರಾಜನು ಹೀಗೆ ಪ್ರಾರ್ಥಿಸಿದನಂತರ ವಿಪ್ರಶ್ರೇಷ್ಠನಾದ ದತ್ತಾತ್ರೇಯನು ರಾಜನಿಗೆ 'ತಥಾಸ್ತು'-'ಹಾಗೆಯೇ ಆಗಲಿ'-ಎಂದು ಹೇಳಿದನು. ಹೀಗೆ ಪ್ರದೀಪ್ತವಾದ ತೇಜಸ್ಸಿನಿಂದ ಕೂಡಿದ್ದ ಕಾರ್ತವೀರ್ಯಾರ್ಜುನನಿಗೆ ನಾಲ್ಕು ವರಗಳು ಲಭಿಸಿದುವು.

ಅನಂತರ ಅವನು ಅಗ್ನಿ-ಸೂರ್ಯರ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ರಥದಲ್ಲಿ ಕುಳಿತು ಬಲದ ಅಭಿಮಾನದಿಂದ ವಿಮೋಹಿತನಾಗಿ ಉದ್ಘೋಷಿಸಿದನು:

.... ಕೋ ವಾಸ್ತಿ ಸದೃಶೋ ಮಮ ।
ಧೈರ್ಯೇರ್ವೀರ್ಯೇರ್ಯಶಃಶೌರ್ಯೇರ್ವಿಕ್ರಮೇಣೌಜಸಾಪಿ ವಾ॥

"ಧೈರ್ಯ, ವೀರ್ಯ, ಯಶಸ್ಸು, ಶೌರ್ಯ, ಪರಾಕ್ರಮ ಮತ್ತು ಓಜಸ್ಸುಗಳಲ್ಲಿ ನನಗೆ ಸಮಾನನಾದವನು ಯಾವನಿದ್ದಾನೆ?"

ಕಾರ್ತವೀರ್ಯನು ಆ ಮಾತನ್ನು ಮುಗಿಸುವುದರೊಳಗಾಗಿಯೇ ಅಂತರಿಕ್ಷದಲ್ಲಿ ಅಶರೀರವಾಣಿಯು ಹೀಗೆ ಹೇಳಿತು:

ನ ತ್ವಂ ಮೂಢ ವಿಜಾನೀಷೇ ಬ್ರಾಹ್ಮಣಂ ಕ್ಷತ್ರಿಯಾದ್ವರಮ್ ।
ಸಹಿತೋ ಬ್ರಾಹ್ಮಣೇನೇಹ ಕ್ಷತ್ರಿಯಃ ಶಾಸ್ತಿ ವೈ ಪ್ರಜಾಃ ॥೧೪॥

"ಮೂರ್ಖನೇ! ಕ್ಷತ್ರಿಯನಿಗಿಂತಲೂ ಬ್ರಾಹ್ಮಣನು ಶ್ರೇಷ್ಠನೆಂಬ ವಿಷಯವು ನಿನಗೆ ತಿಳಿಯದು. ಬ್ರಾಹ್ಮಣನ ಜೊತೆಗೂಡಿಯೇ ಕ್ಷತ್ರಿಯನು ಪ್ರಜೆಗಳನ್ನು ಶಾಸನಮಾಡುತ್ತಾನೆ."

ಅರ್ಜುನನು ಪ್ರತ್ಯುತ್ತರಿಸುತ್ತಾನೆ:

ಕುರ್ಯಾಂ ಭೂತಾನಿ ತುಷ್ಟೋಽಹಂ ಕ್ರುದ್ಧೋ ನಾಶಂ ತಥಾನಯೇ ।
ಕರ್ಮಣಾ ಮನಸಾ ವಾಚಾ ನ ಮತ್ತೋಽಸ್ತಿ ವರೋ ದ್ವಿಜಃ ॥೧೫॥

"ನಾನು ಪ್ರಸನ್ನನಾದರೆ ಪ್ರಾಣಿಗಳನ್ನು ಸೃಷ್ಟಿಸಬಲ್ಲೆನು. ಹಾಗೆಯೇ ಕ್ರುದ್ಧನಾದರೆ ಸಮಸ್ತಪ್ರಾಣಿಗಳನ್ನೂ ವಿನಾಶಗೊಳಿಸಬಲ್ಲೆನು. ಕಾರ್ಯದಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ ಬ್ರಾಹ್ಮಣನು ನನಗಿಂತಲೂ ಶ್ರೇಷ್ಠನಲ್ಲ.

ಪೂರ್ವೋ ಬ್ರಹ್ಮೋತ್ತರೋ ವಾದೋ ದ್ವಿತೀಯಃ ಕ್ಷತ್ರಿಯೋತ್ತರಃ ।
ತ್ವಯೋಕ್ತೌ ಹೇತು ಯುಕ್ತೌ ತೌ ವಿಶೇಷಸ್ತತ್ರ ದೃಶ್ಯತೇ ॥೧೬॥

ಈ ಜಗತ್ತಿನಲ್ಲಿ 'ಬ್ರಾಹ್ಮಣನೇ ಶ್ರೇಷ್ಠನು'–ಎಂಬ ವಾದವು ಪೂರ್ವಪಕ್ಷವಾಗಿದೆ. 'ಕ್ಷತ್ರಿಯನು ಶ್ರೇಷ್ಠನು'–ಎಂಬುದು ಸಿದ್ಧಾಂತವಾಗಿದೆ.

ನೀನು ಬ್ರಾಹ್ಮಣ-ಕ್ಷತ್ರಿಯರಿಬ್ಬರೂ ಪ್ರಜಾಪಾಲನರೂಪವಾದ ಧರ್ಮದಲ್ಲಿ ಸೇರುವರೆಂದು ಹೇಳುತ್ತಿರುವೆ. ಆದರೆ ಇದರಲ್ಲಿ ಈ ಒಂದು ವಿಶೇಷವು ಕಂಡುಬರುತ್ತದೆ.

ಬ್ರಾಹ್ಮಣಾಃ ಸಂಶ್ರಿತಾಃ ಕ್ಷತ್ರಂ ನ ಕ್ಷತ್ರಂ ಬ್ರಾಹ್ಮಣಾಶ್ರಿತಮ್ ।
ಶ್ರಿತಾ ಬ್ರಹ್ಮೋಪದಾ ವಿಪ್ರಾಃ ಖಾದನ್ತಿ ಕ್ಷತ್ರಯಾನ್ಭುವಿ ॥೧೭॥

ಬ್ರಾಹ್ಮಣರು ಕ್ಷತ್ರಿಯರನ್ನು ಆಶ್ರಯಿಸಿ ಜೀವನವನ್ನು ನಡೆಸುತ್ತಾರೆ. ಆದರೆ ಕ್ಷತ್ರಿಯರೆಂದಿಗೂ ಬ್ರಾಹ್ಮಣರನ್ನು ಆಶ್ರಯಿಸಿ ಜೀವಿಕೆಯನ್ನು ನಡೆಸುವುದಿಲ್ಲ. ವೇದಗಳ ಅಧ್ಯಯನ-ಅಧ್ಯಾಪನಗಳ ವ್ಯಾಜವನ್ನು ಆಶ್ರಯಿಸಿರುವ ಬ್ರಾಹ್ಮಣರು ನಿಶ್ಚಯವಾಗಿಯೂ ಈ ಪ್ರಪಂಚದಲ್ಲಿ ಕ್ಷತ್ರಿಯರ ಅನ್ನವನ್ನೇ ತಿಂದು ಜೀವಿಸುತ್ತಾರೆ.

ಕ್ಷತ್ರಿಯೇಷ್ವಾಶ್ರಿತೋ ಧರ್ಮಃ ಪ್ರಜಾನಾಂ ಪರಿಪಾಲನಮ್ ।
ಕ್ಷತ್ರಾದ್ವೃತ್ತಿರ್ಬ್ರಾಹ್ಮಣಾನಾಂ ತೈಃ ಕಥಂ ಬ್ರಾಹ್ಮಣೋ ವರಃ ॥೧೮॥

ಪ್ರಜಾಪಾಲನಧರ್ಮವು ಕ್ಷತ್ರಿಯರನ್ನೇ ಅವಲಂಬಿಸಿದೆ. ಬ್ರಾಹ್ಮಣರಿಗೆ ಜೀವಿಕೆಯ ವೃತ್ತಿಯು ಲಭಿಸುವುದು ಕ್ಷತ್ರಿಯರಿಂದಲೇ. ಹೀಗಿರುವಾಗ ಕ್ಷತ್ರಿಯರಿಗಿಂತಲೂ ಬ್ರಾಹ್ಮಣನು ಹೇಗೆ ಶ್ರೇಷ್ಠನಾಗುತ್ತಾನೆ?

ಸರ್ವಭೂತಪ್ರಧಾನಾಂಸ್ತಾನ್ಭೈಕ್ಷವೃತ್ತೀನಹಂ ಸದಾ ।
ಆತ್ಮಸಂಭಾವಿತಾನ್ವಿಪ್ರಾನ್ಸ್ಥಾಪಯಾಮ್ಯಾತ್ಮನೋ ವಶೇ ॥೧೯॥

ಇಂದಿನಿಂದಲೇ ನಾನು–ಸರ್ವಪ್ರಾಣಿಗಳಿಗೂ ಪ್ರಧಾನರೆಂದು ಹೇಳಿಕೊಳ್ಳುವ, ಸರ್ವಕಾಲದಲ್ಲಿಯೂ ಭಿಕ್ಷಾಟನೆಯಿಂದಲೇ ಜೀವನವನ್ನು ನಿರ್ವಹಿಸುತ್ತಿರುವ, ಎಲ್ಲರಿಗಿಂತಲೂ ತಾವೇ ಉತ್ತಮರೆಂದು ಭಾವಿಸಿಕೊಂಡಿರುವ ಬ್ರಾಹ್ಮಣರನ್ನು ನನ್ನ ಅಧೀನದಲ್ಲಿಟ್ಟುಕೊಳ್ಳುತ್ತೇನೆ.

ಕಥಿತಂ ತ್ವನಯಾಸತ್ಯಂ ಗಾಯತ್ರ್ಯಾ ಕನ್ಯಯಾ ದಿವಿ ।
ವಿಜೇಷ್ಯಾಮ್ಯವಶಾನ್ಸರ್ವಾನ್ಬ್ರಾಹ್ಮಣಾಂಶ್ಚರ್ಮವಾಸಸಃ ॥೨೦॥

ನ ಚ ಮಾಂ ಚ್ಯಾವಯೇದ್ರಾಷ್ಟ್ರಾತ್ತ್ರಿಷು ಲೋಕೇಷು ಕಶ್ಚನ ।
ದೇವೋ ವಾ ಮಾನುಷೋ ವಾಪಿ ತಸ್ಮಾಜ್ಜ್ಯೇಷ್ಠೋ ದ್ವಿಜಾದಹಮ್ ॥

ಕನ್ಯೆಯಾದ ಗಾಯತ್ರೀದೇವಿಯು ಆಕಾಶದಲ್ಲಿ ಹೇಳುತ್ತಿರುವುದು ಸುಳ್ಳು. ಮೃಗಚರ್ಮಧಾರಿಗಳಾದ, ಇದುವರೆಗೂ ಅಧೀನರಾಗದೇ ಇರುವ ಎಲ್ಲ ಬ್ರಾಹ್ಮಣರನ್ನೂ ನಾನು ಜಯಿಸುತ್ತೇನೆ. ಮೂರು ಲೋಕಗಳಲ್ಲಿ ಯಾವನೊಬ್ಬನೂ–ಅವನು ದೇವತೆಯೇ ಆಗಿರಲಿ; ಮನುಷ್ಯನೇ ಆಗಿರಲಿ–ನನ್ನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಲಾರನು. ಈ ಕಾರಣದಿಂದಲೇ ನಾನು ಬ್ರಾಹ್ಮಣನಿಗಿಂತಲೂ ಶ್ರೇಷ್ಠನಾಗಿದ್ದೇನೆ.

ಅದ್ಯ ಬ್ರಹ್ಮೋತ್ತರಂ ಲೋಕಂ ಕರಿಷ್ಯೇ ಕ್ಷತ್ರಯೋತ್ತರಮ್ ।
ನ ಹಿ ಮೇ ಸಂಯುಗೇ ಕಶ್ಚಿತ್ಸೋಢುಮುತ್ಸಹತೇ ಬಲಮ್ ॥೨೨॥

ಪ್ರಪಂಚದಲ್ಲಿ ಇದುವರೆಗೂ ಬ್ರಾಹ್ಮಣನೇ ಶ್ರೇಷ್ಠನೆಂಬ ಭಾವನೆಯಿದೆ. ಇನ್ನು ಮುಂದೆ ನಾನು ಕ್ಷತ್ರಿಯನೇ ಶ್ರೇಷ್ಠನೆಂಬುವುದನ್ನು ಸ್ಥಿರಪಡಿಸುತ್ತೇನೆ. ಯುದ್ಧದಲ್ಲಿ ಯಾವನೇ ಆಗಲೀ ನನ್ನ ಬಲವನ್ನು ಸಹಿಸುವ ಉತ್ಸಾಹವನ್ನು ಹೊಂದಲಾರನು. (ಯುದ್ಧದಲ್ಲಿ ನನ್ನನ್ನೆದುರಿಸಿ ಯಾವನೂ ನಿಲ್ಲಲಾರನು.)"

ಅರ್ಜುನನ ಈ ಮಾತನ್ನು ಕೇಳಿ ನಿಶಾಚರಿಯು (ಆಕಾಶವಾಣಿಯು) ಭಯಗ್ರಸ್ತಳಾದಳು. ಬಳಿಕ ಅಂತರಿಕ್ಷದಲ್ಲಿದ್ದ ವಾಯುದೇವನು ಅರ್ಜುನನಿಗೆ ಹೇಳಿದನು:

ತ್ಯಜೈನಂ ಕಲುಷಂ ಭಾವಂ ಬ್ರಾಹ್ಮಣೇಭ್ಯೋ ನಮಸ್ಕುರು ।
ಏತೇಷಾಂ ಕುರ್ವತಃ ಪಾಪಂ ರಾಷ್ಟ್ರಕ್ಷೋಭೋ ಭವಿಷ್ಯತಿ ॥೨೪॥

"ಕಾರ್ತವೀರ್ಯನೇ! ಬ್ರಾಹ್ಮಣರ ವಿಷಯದಲ್ಲಿ ನಿನಗಿರುವ ಈ ಕಲುಷಿತವಾದ ಭಾವವನ್ನು ತ್ಯಜಿಸು. ಬ್ರಾಹ್ಮಣರನ್ನು ನಮಸ್ಕರಿಸು. ಅವರ ವಿಷಯದಲ್ಲಿ ಕೆಟ್ಟುದನ್ನು ಮಾಡಿದರೆ ರಾಷ್ಟ್ರದಲ್ಲಿ ಕ್ಷೋಭೆಯುಂಟಾಗುತ್ತದೆ.

ಅಥವಾ ತ್ವಾಂ ಮಹೀಪಾಲ ಶಮಯಿಷ್ಯನ್ತಿ ವೈ ದ್ವಿಜಾಃ ।
ನಿರಸಿಷ್ಯನ್ತಿ ತೇ ರಾಷ್ಟ್ರಾದ್ಧತೋತ್ಸಾಹಾ ಮಹಾಬಲಾಃ ॥೨೫॥

ಒಂದು ವೇಳೆ ನೀನು ಅವರ ವಿಷಯದಲ್ಲಿರುವ ಕಾಲುಷ್ಯವನ್ನು ತೊಡೆದುಹಾಕದಿದ್ದರೆ ಶಕ್ತಿಶಾಲಿಗಳಾದ ಬ್ರಾಹ್ಮಣರು ನಿನ್ನನ್ನು (ನಿನ್ನ ಗರ್ವವನ್ನು) ಉಪಶಮನಗೊಳಿಸುತ್ತಾರೆ. ಮಹಾಬಲಶಾಲಿಗಳಾದ ಅವರು ಹತೋತ್ಸಾಹಿಗಳಾಗಿ ನಿನ್ನ ರಾಷ್ಟ್ರವನ್ನೇ ಬಿಟ್ಟುಹೋಗುತ್ತಾರೆ."

ವಾಯುದೇವನ ಮಾತನ್ನು ಕೇಳಿ ಅರ್ಜುನನು ಅವನನ್ನು ನೀನಾರೆಂದು ಪ್ರಶ್ನಿಸಿದನು. ಇದಕ್ಕೆ ಉತ್ತರವಾಗಿ ವಾಯುದೇವನು:

ವಾಯುರ್ವೈ ದೇವದೂತೋಽಸ್ಮಿ ಹಿತಂ ತ್ವಾಂ ಪ್ರಬ್ರವೀಮ್ಯಹಮ್॥

"ಮಹಾರಾಜ! ನಾನು ದೇವದೂತನಾದ ವಾಯುವಾಗಿದ್ದೇನೆ. ನಿನಗೆ ಹಿತಕರವಾದ ಮಾತನ್ನೇ ಹೇಳುತ್ತೇನೆ"–ಎಂದು ಹೇಳಿದನು.

ಅರ್ಜುನನು ಹೇಳುತ್ತಾನೆ:

ಅಹೋ ತ್ವಯಾಹಂ ವಿಪ್ರೇಷು ಭಕ್ತಿರಾಗಃ ಪ್ರದರ್ಶಿತಃ।
ಯಾದೃಶಂ ಪೃಥಿವೀಭೂತಂ ತಾದೃಶಂ ಬ್ರೂಹಿ ಮೇ ದ್ವಿಜಮ್॥

"ವಾಯುದೇವನೇ! ಆಶ್ಚರ್ಯವೇ ಸರಿ. ನೀನು ಬ್ರಾಹ್ಮಣರ ವಿಷಯದಲ್ಲಿ ಭಕ್ತಿಭಾವವನ್ನು ಪ್ರದರ್ಶಿಸುತ್ತಿರುವೆ. ಪೃಥ್ವಿಗೆ ಸಮಾನವಾದ ಕ್ಷಮಾಗುಣವುಳ್ಳ ಬ್ರಾಹ್ಮಣನೇನಾದರೂ ನಿನಗೆ ತಿಳಿದಿದ್ದರೆ–ಅಂತಹ ಬ್ರಾಹ್ಮಣನು ಯಾರೆಂಬುದನ್ನು ಹೇಳು.

ವಾಯೋರ್ವಾ ಸದೃಶಂ ಕಿಂಚಿದ್ಬ್ರೂಹಿ ತ್ವಂ ಬ್ರಾಹ್ಮಣೋತ್ತಮಮ್।
ಅಪಾಂ ವೈ ಸದೃಶಂ ವಹ್ನೇಃ ಸೂರ್ಯಸ್ಯ ನಭಸೋಽಪಿ ವಾ ॥೨೮॥

ಅಥವಾ ವಾಯು, ಜಲ, ಅಗ್ನಿ, ಸೂರ್ಯ, ಆಕಾಶ–ಇವುಗಳ ಗುಣಗಳಿಗೆ ಸಮಾನವಾದ ಗುಣಗಳನ್ನು ಹೊಂದಿರುವ ಯಾವನಾದರೂ ಬ್ರಾಹ್ಮಣಶ್ರೇಷ್ಠನಿರುವನೆಂಬುದನ್ನಾದರೂ ಹೇಳು."

೧೫೨ನೆಯ ಅಧ್ಯಾಯವು ಮುಗಿಯಿತು.

ವಾಯುವು ದೃಷ್ಟಾಂತಗಳೊಡನೆ ಬ್ರಾಹ್ಮಣರ ಮಹತ್ತ್ವವನ್ನು ಪ್ರತಿಪಾದಿಸಿದುದು

ವಾಯುವು ಹೇಳುತ್ತಾನೆ:

ಶೃಣು ಮೂಢ ಗುಣಾನ್ಕಾಂಶ್ಚಿದ್ಬ್ರಾಹ್ಮಣಾನಾಂ ಮಹಾತ್ಮನಾಮ್ ।
ಯೇ ತ್ವಯಾ ಕೀರ್ತಿತಾ ರಾಜಂಸ್ತೇಭ್ಯೋಽಥ ಬ್ರಾಹ್ಮಣೋ ವರಃ ॥

"ಮೂರ್ಖನೇ! ಕೇಳು. ನಾನು ಮಹಾತ್ಮರಾದ ಬ್ರಾಹ್ಮಣರ ಕೆಲವೇ ಗುಣಗಳನ್ನು ಹೇಳುತ್ತೇನೆ. ನೀನು ಪೃಥ್ವಿಯೇ ಮೊದಲಾದ ಯಾವುಗಳನ್ನು ಶ್ರೇಷ್ಠವಾದುವುಗಳೆಂದು ಹೇಳಿದೆಯೋ–ಅವೆಲ್ಲಕ್ಕಿಂತಲೂ ಬ್ರಾಹ್ಮಣನು ಶ್ರೇಷ್ಠನು.

ತ್ಯಕ್ತ್ವಾ ಮಹೀತ್ವಂ ಭೂಮಿಸ್ತು ಸ್ಪರ್ಧಯಾಙ್ಗನೃಪಸ್ಯ ಹ ।
ನಾಶಂ ಜಗಾಮ ತಾಂ ವಿಪ್ರೋ ವ್ಯಸ್ತಮ್ಭಯತ ಕಶ್ಯಪಃ ॥೨॥

ಹಿಂದೊಮ್ಮೆ ಅಂಗರಾಜನೊಡನೆ ಸ್ಪರ್ಧಿಸಲು ಹೋಗಿದ್ದ ಭೂದೇವಿಯು ಸೋತುಹೋದಕಾರಣ ಧಾರಣಶಕ್ತಿಯನ್ನೇ ಪರಿತ್ಯಾಗ ಮಾಡಿಬಿಟ್ಟಳು. ಆ ಸಮಯದಲ್ಲಿ ಕುಸಿದು ಬೀಳುವುದರಲ್ಲಿದ್ದ ಈ ಅಖಂಡಭೂಮಂಡಲವನ್ನೂ ವಿಪ್ರಶ್ರೇಷ್ಠನಾದ ಕಶ್ಯಪನು ತನ್ನ ತಪೋಬಲದಿಂದ ಹಾಗೆಯೇ ನಿಲ್ಲಿಸಿದನು.

ಅಜೇಯಾ ಬ್ರಾಹ್ಮಣಾ ರಾಜನ್ದಿವಿ ಚೇಹ ಚ ನಿತ್ಯದಾ।
ಅಪಿಬತ್ತೇಜಸಾ ಹ್ಯಾಪಃ ಸ್ವಯಮೇವಾಙ್ಗಿರಾಃ ಪುರಾ ॥೩॥

ಸ ತಾಃ ಪಿಬನ್ಕ್ಷೀರಮಿವ ನಾತೃಪ್ಯತ ಮಹಾಮನಾಃ।
ಅಪೂರಯನ್ಮಹೌಘೇನ ಮಹೀಂ ಸರ್ವಾಂ ಚ ಪಾರ್ಥಿವ ॥೪॥

ಮಹಾರಾಜ! ಮರ್ತ್ಯಲೋಕದಲ್ಲಾಗಲೀ, ಸ್ವರ್ಗಲೋಕದಲ್ಲಾಗಲೀ ಬ್ರಾಹ್ಮಣರು ಅಜೇಯರು. ಹಿಂದೊಮ್ಮೆ ಮಹಾತ್ಮನಾದ ಅಂಗಿರಸನು ತನ್ನ ತೇಜಸ್ಸಿನಿಂದ ಭೂಮಿಯ ಮೇಲಿದ್ದ ನೀರನ್ನು ಹಾಲಿನಂತೆಯೇ ಸಂಪೂರ್ಣವಾಗಿ ಕುಡಿದುಬಿಟ್ಟನು. ಆದರೂ ಅವನಿಗೆ ತೃಪ್ತಿಯುಂಟಾಗಲಿಲ್ಲ. ಅನಂತರ ಅವನು ನೀರಿನ ಮಹಾಪ್ರವಾಹವನ್ನೇ ಸೃಷ್ಟಿಸಿ ಅದರಿಂದ ಪ್ರಪಂಚವನ್ನೇ ತುಂಬಿಬಿಟ್ಟನು.

ತಸ್ಮಿನ್ನಹಂ ಚ ಕ್ರುದ್ಧೇ ವೈ ಜಗತ್ಯಕ್ತ್ವಾ ತತೋ ಗತಃ ।
ವ್ಯತಿಷ್ಠಮಗ್ನಿಹೋತ್ರೇ ಚ ಚಿರಮಙ್ಗಿರಸೋ ಭಯಾತ್ ॥೫॥

ಮಹಾತ್ಮನಾದ ಆ ಅಂಗಿರಸಮುನಿಯು ಒಮ್ಮೆ ನನ್ನ ವಿಷಯದಲ್ಲಿಯೇ ಕೋಪಗೊಂಡನು. ಆ ಸಮಯದಲ್ಲಿ ನಾನು ಅವನಿಗೆ ಭಯಪಟ್ಟು ಪ್ರಪಂಚವನ್ನೇ ಪರಿತ್ಯಜಿಸಿ ಅಗ್ನಿಹೋತ್ರಾಗ್ನಿಯಲ್ಲಿ ನಿವಾಸಮಾಡಿಕೊಂಡಿದ್ದೆನು.

ಅಥ ಶಪ್ತಶ್ಚ ಭಗವಾನ್ಗೌತಮೇನ ಪುರನ್ದರಃ।
ಅಹಲ್ಯಾಂ ಕಾಮಯಾನೋ ವೈ ಧರ್ಮಾರ್ಥಂ ಚ ನ ಹಿಂಸಿತಃ ॥೬॥

ಪೂಜ್ಯನಾದ ಗೌತಮನು ತನ್ನ ಪತ್ನಿಯಾದ ಅಹಲ್ಯೆಯಲ್ಲಿ ಕಾಮಾಸಕ್ತನಾಗಿದ್ದ ಇಂದ್ರನನ್ನು ಶಪಿಸಿದನು. ಧರ್ಮದ ರಕ್ಷಣಾರ್ಥವಾಗಿ ಗೌತಮಬ್ರಾಹ್ಮಣನು ಇಂದ್ರನನ್ನು ವಿನಾಶಗೊಳಿಸಲಿಲ್ಲ.

ತಥಾ ಸಮುದ್ರೋ ನೃಪತೇ ಪೂರ್ಣೋ ಮೃಷ್ಟಸ್ಯ ವಾರಿಣಃ।
ಬ್ರಾಹ್ಮಣೈರಭಿಶಪ್ತಶ್ಚ ಬಭೂವ ಲವಣೋದಕಃ ॥೭॥

ಸಮುದ್ರವು ಮೊದಲು ಸಿಹಿನೀರಿನಿಂದಲೇ ತುಂಬಿದ್ದಿತು. ಬ್ರಾಹ್ಮಣನ ಶಾಪದಿಂದಲೇ ಸಮುದ್ರದ ನೀರು ಉಪ್ಪಾಯಿತು.

ಸುವರ್ಣವರ್ಣೋ ನಿರ್ಧೂಮಃ ಸಙ್ಗತೋರ್ಧ್ವಶಿಖಃ ಕವಿಃ।
ಕ್ರುದ್ಧೇನಾಙ್ಗಿರಸಾ ಶಪ್ತೋ ಗುಣೈರೇತೈರ್ವಿವರ್ಜಿತಃ ॥೮॥

ಅಗ್ನಿದೇವನು ಹಿಂದೆ ಚಿನ್ನದ ಬಣ್ಣದಂತೆ ಪ್ರಕಾಶಿಸುತ್ತಿದ್ದನು. ಅವನಲ್ಲಿ ಹೊಗೆಯೆಂಬುದೇ ಇರಲಿಲ್ಲ. ಯಾವಾಗಲೂ ಮೇಲ್ಮುಖನಾಗಿಯೇ ಉರಿಯುತ್ತಿದ್ದನು. ಕ್ರುದ್ಧನಾದ ಅಂಗಿರಸನಿಂದ ಶಪ್ತನಾಗಿ, ಮೇಲೆ ಹೇಳಿದ ಗುಣಗಳನ್ನು ಕಳೆದುಕೊಂಡನು.

ಮಹತಶ್ಚೂರ್ಣಿತಾನ್ಪಶ್ಯ ಯೇ ಹಾಸನ್ತ ಮಹೋದಧಿಮ್।
ಸುವರ್ಣಧಾರಿಣಾ ನಿತ್ಯಮವಶಪ್ತಾ ದ್ವಿಜಾತಿನಾ ॥೯॥

ಸಗರನ ಸಾವಿರ ಮಕ್ಕಳು ಯಜ್ಞಾಶ್ವವನ್ನು ಹುಡುಕುವ ಸಲುವಾಗಿ ಸಮುದ್ರದ ಬಳಿಗೆ ಹೋದರು. ಆ ಸಮಯದಲ್ಲಿ ದ್ವಿಜಶ್ರೇಷ್ಠನಾದ ಸುಂದರವಾದ ಬಣ್ಣದಿಂದ ಕೂಡಿದ್ದ ಕಪಿಲಮಹರ್ಷಿಯು ಅಲ್ಲಿಯೇ

ತಪಸ್ಸು ಮಾಡುತ್ತಿದ್ದನು. ಸಗರನ ಮಕ್ಕಳ ಉಪಟಳವನ್ನು ತಾಳಲಾರದೇ ಒಮ್ಮೆ ಕಣ್ತೆರೆದು ನೋಡಿದನು.ಅವರೆಲ್ಲರೂ ಕ್ಷಣಮಾತ್ರದಲ್ಲಿ ಭಸ್ಮೀಭೂತರಾಗಿ ಹೋದರು.

ಸಮೋ ನ ತ್ವಂ ದ್ವಿಜಾತಿಭ್ಯಃ ಶ್ರೇಯೋ ವಿದ್ಧಿ ನರಾಧಿಪ।
ಗರ್ಭಸ್ಥಾನ್ಬ್ರಾಹ್ಮಣಾನ್ಸಮ್ಯಙ್ನಮಸ್ಯತಿ ಕಿಲ ಪ್ರಭುಃ ॥೧೦॥

ಮಹಾರಾಜ! ನೀನು ಬ್ರಾಹ್ಮಣರಿಗೆ ಸಮಾನನೆಂದೂ ಆಗಲಾರೆ. ನಿನಗೆ ಶ್ರೇಯಸ್ಸು ಹೇಗುಂಟಾಗುವುದೆಂಬುದನ್ನು ತಿಳಿದುಕೊ. ಶ್ರೇಯಸ್ಕಾಮನಾದ ರಾಜನು ಗರ್ಭದಲ್ಲಿರುವ ಬ್ರಾಹ್ಮಣರಿಗೂ ಶ್ರದ್ಧೆಯಿಂದ ನಮಸ್ಕಾರಮಾಡುತ್ತಾನೆ.

ದಣ್ಡಕಾನಾಂ ಮಹದ್ರಾಜ್ಯಂ ಬ್ರಾಹ್ಮಣೇನ ವಿನಾಶಿತಮ್।
ತಾಲಜಙ್ಘಂ ಮಹಾಕ್ಷೇತ್ರಮೌರ್ವೇಣೈಕೇನ ನಾಶಿತಮ್ ॥೧೧॥

ದಂಡಕರ ಮಹಾಸಾಮ್ರಾಜ್ಯವು ಬ್ರಾಹ್ಮಣನೊಬ್ಬನಿಂದಲೇ ವಿನಾಶಮಾಡಲ್ಪಟ್ಟಿತು. (ಆದುದರಿಂದಲೇ ಈಗದು ದಂಡಕಾರಣ್ಯವಾಗಿದೆ.) ತಾಲಜಂಘವೆಂಬ ಹೆಸರಿನ ಮಹಾಕ್ಷತ್ರಿಯವಂಶವನ್ನು ಔರ್ವನೆಂಬ ಬ್ರಾಹ್ಮಣನೊಬ್ಬನೇ ವಿನಾಶಗೊಳಿಸಿದನು.

ತ್ವಯಾ ಚ ವಿಪುಲಂ ರಾಜ್ಯಂ ಬಲಂ ಧರ್ಮಂ ಶ್ರುತಂ ತಥಾ।
ದತ್ತಾತ್ರೇಯಪ್ರಸಾದೇನ ಪ್ರಾಪ್ತಂ ಪರಮದುರ್ಲಭಮ್ ॥೧೨॥

ನೀನು ಕೂಡ ಅತ್ಯಂತ ದುರ್ಲಭವಾದ ವಿಶಾಲವಾದ ರಾಜ್ಯ, ಬಲ, ಧರ್ಮ, ಶಾಸ್ತ್ರಜ್ಞಾನ–ಈ ಎಲ್ಲವನ್ನೂ ಪಡೆದುಕೊಂಡಿರುವುದು ವಿಪ್ರಶ್ರೇಷ್ಠನಾದ ದತ್ತಾತ್ರೇಯನ ಪರಮಾನುಗ್ರಹದಿಂದಲೇ ಅಲ್ಲವೇ?

ಅಗ್ನಿಂ ತ್ವಂ ಯಜಸೇ ನಿತ್ಯಂ ಕಸ್ಮಾದ್ಬ್ರಾಹ್ಮಣಮರ್ಜುನ।
ನ ಹಿ ಸರ್ವಸ್ಯ ಲೋಕಸ್ಯ ಹವ್ಯವಾಟ್ ಕಿಂ ನ ವೇತ್ಸಿ ತಮ್ ॥೧೩॥

ಅರ್ಜುನ! ಅಗ್ನಿಯೂ ಬ್ರಾಹ್ಮಣನೇ ಆಗಿದ್ದಾನೆ. ನೀನು ಪ್ರತಿನಿತ್ಯವೂ ಅವನನ್ನೇಕೆ ಪೂಜಿಸುತ್ತಿರುವೆ? ಅವನೇ ಎಲ್ಲ ಲೋಕಗಳಿಗೂ ಹವಿಸ್ಸನ್ನು ಒಯ್ಯುವನೆಂಬುದನ್ನು ನೀನು ತಿಳಿದಿಲ್ಲವೇ?

ಅಥವಾ ಬ್ರಾಹ್ಮಣಶ್ರೇಷ್ಠಮನುಭೂತಾನುಪಾಲಕಮ್।
ಕರ್ತಾರಂ ಜೀವಲೋಕಸ್ಯ ಕಸ್ಮಾಜ್ಜಾನನ್ವಿಮುಹ್ಯಸೇ ॥೧೪॥

ಬ್ರಾಹ್ಮಣಶ್ರೇಷ್ಠನು ಹುಟ್ಟಿದ ಎಲ್ಲ ಪ್ರಾಣಿಗಳನ್ನೂ ಸಂರಕ್ಷಿಸುವವನೆಂಬುದನ್ನೂ ಜೀವಲೋಕದ ಕರ್ತೃವೆಂಬುದನ್ನೂ ತಿಳಿದಿದ್ದರೂ ಯಾವ ಕಾರಣದಿಂದ ವಿಮೋಹಗೊಂಡಿರುವೆ?

ತಥಾ ಪ್ರಜಾಪತಿರ್ಬ್ರಹ್ಮಾ ಅವ್ಯಕ್ತಃ ಪ್ರಭುರವ್ಯಯಃ।
ಯೇನೇದಂ ನಿಖಿಲಂ ವಿಶ್ವಂ ಜನಿತಂ ಸ್ಥಾವರಂ ಚರಮ್ ॥೧೫॥

ಯಾವನು ಈ ಸಮಗ್ರವಾದ ಚರಾಚರಪ್ರಾಣಿಗಳಿಂದ ಕೂಡಿರುವ ವಿಶ್ವವನ್ನು ಸೃಷ್ಟಿಸಿರುವನೋ, ಅವ್ಯಕ್ತನೋ, ಪ್ರಭುವೋ ಅವಿನಾಶಿಯೋ– ಅಂತಹ ಪ್ರಜಾಪತಿಬ್ರಹ್ಮನೂ ಬ್ರಾಹ್ಮಣನೇ ಆಗಿರುವನು.

ಅಣ್ಡಜಾತಂ ತು ಬ್ರಹ್ಮಾಣಂ ಕೇಚಿದಿಚ್ಛನ್ತ್ಯಪಣ್ಡಿತಾಃ।
ಅಣ್ಡಾದ್ಭಿನ್ನಾದ್ಬಭುಃ ಶೈಲಾ ದಿಶೋಽಮ್ಭಃ ಪೃಥಿವೀ ದಿವಮ್ ॥೧೬॥

ಬ್ರಹ್ಮನನ್ನು ಅಂಡದಲ್ಲಿ (ಮೊಟ್ಟೆಯಲ್ಲಿ) ಹುಟ್ಟಿದವನೆಂದು ಕೆಲವರು ಮೂರ್ಖರು ಹೇಳುತ್ತಾರೆ. ಒಡೆದುಹೋದ ಅಂಡದಿಂದ ಪರ್ವತ, ದಿಕ್ಕುಗಳು, ಜಲ, ಪೃಥ್ವಿ, ಸ್ವರ್ಗ–ಇವುಗಳು ಹೇಗೆ ಹುಟ್ಟಿಯಾವು?

ದ್ರಷ್ಟವ್ಯಂ ನೈತದೇವಂ ಹಿ ಕಥಂ ಜಾಯೇದಜೋ ಹಿ ಸಃ।
ಸ್ಮೃತಮಾಕಾಶಮಣ್ಡಂ ತು ತಸ್ಮಾಜ್ಜಾತಃ ಪಿತಾಮಹಃ ॥೧೭॥

ಆದರೆ ನಾವು ಹಾಗೆ ಭಾವಿಸಬಾರದು. ಏಕೆಂದರೆ: ಅಜನಾಗಿರುವವನು (ಹುಟ್ಟೇ ಇಲ್ಲದವನು) ಹುಟ್ಟುವುದಾದರೂ ಹೇಗೆ ಸಾಧ್ಯ? ಪ್ರಜಾಪತಿಬ್ರಹ್ಮನನ್ನು ಅಂಡಜ ಎಂದು ಕರೆಯುವುದಕ್ಕೆ ಕಾರಣವನ್ನು ಹೀಗೆ ಹೇಳಬಹುದಾಗಿದೆ. ಮಹಾಕಾಶವೇ ಅಂಡಸ್ವರೂಪವಾಗಿದೆ. ಅಲ್ಲಿಂದ ಪಿತಾಮಹನು ಹುಟ್ಟಿದ್ದಾನೆ. ಆದುದರಿಂದ ಅವನು ಅಂಡಜನಾಗಿದ್ದಾನೆ.

ತಿಷ್ಠೇತ್ಕಥಮಿತಿ ಬ್ರೂಹಿ ನ ಕಿಂಚಿದ್ಧಿ ತದಾ ಭವೇತ್।
ಅಹಙ್ಕಾರ ಇತಿ ಪ್ರೋಕ್ತಃ ಸರ್ವತೇಜೋ ಗತಃ ಪ್ರಭುಃ ॥೧೮॥

ಬ್ರಹ್ಮನು ಆಕಾಶದಲ್ಲಿ ಹುಟ್ಟಿದವನಾದರೆ ಅವನಲ್ಲಿ ನಿಂತುದು ಹೇಗೆ?

ಎಂದು ಪ್ರಶ್ನಿಸಬಹುದು. ಏಕೆಂದರೆ: ಆ ಸಮಯದಲ್ಲಿ ಆಕಾಶದಲ್ಲಿ ನಿಲ್ಲಲು ಯಾವ ಆಧಾರವೂ ಇರಲಿಲ್ಲ. ಈ ನಿನ್ನ ಪ್ರಶ್ನೆಗೆ ಇದೇ ಉತ್ತರವಾಗಿದೆ. ಅವನು ಅಲ್ಲಿ ಅಹಂಕಾರರೂಪನಾಗಿದ್ದನು. ಅಹಂಕಾರಸ್ವರೂಪನಾಗಿದ್ದ ಆ ಪ್ರಭುವು ಎಲ್ಲ ತೇಜಸ್ಸುಗಳಲ್ಲಿಯೂ ಆವರಿಸಿಕೊಂಡಿದ್ದನು.

ನಾಸ್ತ್ಯಣ್ಡಮಸ್ತಿ ತು ಬ್ರಹ್ಮಾ ಸ ರಾಜಾ ಲೋಕಭಾವನಃ।

ಮಹಾರಾಜ! ವಾಸ್ತವವಾಗಿ ಅಂಡವೆಂಬ ಯಾವ ವಸ್ತುವೂ ಇಲ್ಲ. ಆ ಬ್ರಹ್ಮನೇ ಲೋಕವನ್ನು ಸೃಷ್ಟಿಸಿರುವನು.” ವಾಯುದೇವನು ಹೀಗೆ ಹೇಳಿದನಂತರ ಕಾರ್ತವೀರ್ಯಾರ್ಜುನನು ಯಾವ ಮಾತನ್ನೂ ಆಡದೇ ಮೌನಿಯಾಗಿದ್ದನು. ಪುನಃ ವಾಯುವೇ ಹೇಳತೊಡಗಿದನು.

೧೫೩ನೆಯ ಅಧ್ಯಾಯವು ಮುಗಿಯಿತು.

೧೫೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಉತಥ್ಯನ ಪ್ರಭಾವದ ವರ್ಣನೆ

ವಾಯುವು ಹೇಳುತ್ತಾನೆ:

ಇಮಾಂ ಭೂಮಿಂ ದ್ವಿಜಾತಿಭ್ಯೋ ದಿತ್ಸುರ್ವೈ ದಕ್ಷಿಣಾಂ ಪುರಾ।
ಅಙ್ಗೋ ನಾಮ ನೃಪೋ ರಾಜಂಸ್ತತಶ್ಚಿನ್ತಾಂ ಮಹೀ ಯಯೌ ॥೧॥

“ಅರ್ಜುನ! ಹಿಂದೊಮ್ಮೆ ಅಂಗನೆಂಬ ಹೆಸರಿನ ರಾಜನು ಈ ಭೂಮಂಡಲವನ್ನು ಬ್ರಾಹ್ಮಣರಿಗೆ ದಕ್ಷಿಣಾರೂಪದಲ್ಲಿ ಕೊಡಲು ಬಯಸಿದನು. ಆ ಸಮಯದಲ್ಲಿ ಭೂದೇವಿಯು ಚಿಂತಾಕ್ರಾಂತಳಾದಳು.

ಧಾರಿಣೀಂ ಸರ್ವಭೂತಾನಾಮಯಂ ಪ್ರಾಪ್ಯವರೋ ನೃಪಃ।
ಕಥಮಿಚ್ಛತಿ ಮಾಂ ದಾತುಂ ದ್ವಿಜೇಭ್ಯೋ ಬ್ರಹ್ಮಣಃ ಸುತಾಮ್ ॥೨॥

ಭೂದೇವಿಯು ಹೀಗೆ ಯೋಚಿಸತೊಡಗಿದಳು: ‘ನಾನು ಎಲ್ಲ ಪ್ರಾಣಿಗಳನ್ನೂ ಧಾರಣೆಮಾಡಿಕೊಂಡಿದ್ದೇನೆ. ಬ್ರಹ್ಮನ ಮಗಳೂ ಆಗಿದ್ದೇನೆ. ನನ್ನನ್ನು ಪಡೆದುಕೊಂಡಿರುವ ಈ ಶ್ರೇಷ್ಠನಾದ ರಾಜನು ನನ್ನನ್ನು ಬ್ರಾಹ್ಮಣರಿಗೇಕೆ ಕೊಡಲು ಇಚ್ಛಿಸುತ್ತಿದ್ದಾನೆ?

ಸಾಹಂ ತ್ಯಕ್ತ್ವಾ ಗಮಿಷ್ಯಾಮಿ ಭೂಮಿತ್ವಂ ಬ್ರಹ್ಮಣಃ ಪದಮ್।
ಅಯಂ ಸರಾಷ್ಟ್ರೋ ನೃಪತಿರ್ಮಾ ಭೂದಿತಿ ತತೋಽಗಮತ್ ॥೩॥

ಈ ರಾಜನು ನನ್ನನ್ನು ದಾನಮಾಡಲು ನಿಶ್ಚಯಿಸಿದ್ದೇ ಆದರೆ ನಾನು ಇವನನ್ನು ಪರಿತ್ಯಜಿಸಿ ಭೂಮಿತ್ವವನ್ನು (ಲೋಕಧಾರಣರೂಪವಾದ ಧರ್ಮವನ್ನು) ಬಿಟ್ಟು ಬ್ರಹ್ಮಲೋಕಕ್ಕೆ ಹೋಗಿಬಿಡುತ್ತೇನೆ. ಈ ರಾಜನೂ ರಾಷ್ಟ್ರದಿಂದ ಭ್ರಷ್ಟನಾಗಲಿ'–ಹೀಗೆ ನಿಶ್ಚಯಿಸಿ ಭೂದೇವಿಯು ಹೊರಟೇಹೋದಳು.

ಹೀಗೆ ಹೊರಟುಹೋಗುತ್ತಿರುವ ಪೃಥ್ವೀದೇವಿಯನ್ನು ಕಶ್ಯಪನು ನೋಡಿ ಯೋಗವನ್ನು ಆಶ್ರಯಿಸಿ ತನ್ನ ಶರೀರವನ್ನು ಪರಿತ್ಯಜಿಸಿ ಏಕಾಗ್ರಚಿತ್ತನಾಗಿ ಭೂಮಿಯಲ್ಲಿ ಪ್ರವೇಶಿಸಿದನು. ಹೀಗೆ ಕಶ್ಯಪನು ಭೂಮಂಡಲವನ್ನು ಪ್ರವೇಶಿಸಿದುದರಿಂದ ಪೃಥ್ವಿಯು ಹಿಂದಿಗಿಂತಲೂ ಸಮೃದ್ಧಶಾಲಿಯಾಯಿತು. ಎಲ್ಲ ಕಡೆಗಳಲ್ಲಿಯೂ ಪೈರು-ಪಚ್ಚೆಗಳು ಹುಲುಸಾಗಿ ಬೆಳೆಯತೊಡಗಿದುವು. ಭೂಮಿಯು ತೃಣ-ಕಾಷ್ಠಾದಿಗಳಿಂದಲೂ ಧಾನ್ಯಗಳಿಂದಲೂ ಸಮೃದ್ಧ ವಾಯಿತು. ಧರ್ಮಕಾರ್ಯಗಳೂ ಹೆಚ್ಚು-ಹೆಚ್ಚಾಗಿ ನಡೆಯತೊಡಗಿದುವು. ಪ್ರಜೆಗಳಿಗಾಗಲೀ ರಾಜರಿಗಾಗಲೀ ಭಯವೆಂಬುದೇ ಇರಲಿಲ್ಲ.

ಹೀಗೆ ಆಲಸ್ಯಶೂನ್ಯನಾದ ಮಹಾವ್ರತನಿಷ್ಠನಾದ ಕಶ್ಯಪನು ಮೂವತ್ತು ಸಾವಿರ ದಿವ್ಯವರ್ಷಗಳ ಕಾಲ ಭೂಮಿಯ ರೂಪದಲ್ಲಿಯೇ ಇದ್ದುಬಿಟ್ಟನು. ಅನಂತರ ಭೂದೇವಿಯು ಬ್ರಹ್ಮಲೋಕದಿಂದ ಹಿಂದಿರುಗಿ ಬಂದು ಕಶ್ಯಪನಿಗೆ ನಮಸ್ಕರಿಸಿ ಅವನ ಮಗಳಾಗಿ ಹಿಂದಿನಂತೆಯೇ ಸ್ವಸ್ಥಾನದಲ್ಲಿ ಇರತೊಡಗಿ ದಳು. ಅಂದಿನಿಂದ ಅವಳು ಕಾಶ್ಯಪೀ ಎಂಬ ಹೆಸರನ್ನು ಪಡೆದಳು.

ಅರ್ಜುನ! ಕಶ್ಯಪನು ಬ್ರಾಹ್ಮಣನು. ಆದರೆ ಅವನಲ್ಲಿ ಅಂತಹ ಅತುಲವಾದ ಪ್ರಭಾವವಿದ್ದಿತು. ಹೀಗೆ ಮೂವತ್ತು ಸಾವಿರ ದಿವ್ಯವರ್ಷಗಳ ಕಾಲ ಭೂಮಿಯ ಭಾವವನ್ನು ಹೊಂದಿ ಸಕಲಚರಾಚರಪ್ರಾಣಿಗಳನ್ನೂ ಧರಿಸಿದ್ದ ಕಶ್ಯಪನಿಗಿಂತಲೂ ಶ್ರೇಷ್ಠನಾದ ಕ್ಷತ್ರಿಯನು ಯಾವನಾದರೂ ಇದ್ದರೆ ಹೇಳು.”

ಅರ್ಜುನನು ವಾಯುವಿನ ಮಾತಿಗೆ ಉತ್ತರಿಸದೇ ಸುಮ್ಮನೆ ಇದ್ದುಬಿಟ್ಟನು. ವಾಯುವು ಪುನಃ ಹೇಳತೊಡಗಿದನು:

“ಕಾರ್ತವೀರ್ಯಾರ್ಜುನ! ಅಂಗಿರಸನ ಕುಲದಲ್ಲಿ ಹುಟ್ಟಿದ ಉತಥ್ಯನ ವೃತ್ತಾಂತವನ್ನು ಕೇಳು. ಸೋಮನಿಗೆ ಭದ್ರಾ ಎಂಬ ಹೆಸರಿನ ಅಪ್ರತಿಮ ರೂಪವತಿಯಾದ ಕನ್ಯೆಯಿದ್ದಳು. ಅಂಗೀರಸವಂಶೋದ್ಭವನಾದ ಉತಥ್ಯನೇ ಭದ್ರೆಗೆ ಅನುರೂಪನಾದ ವರನೆಂದು ಸೋಮನು ಭಾವಿಸಿದನು. ಸುಂದರಾಂಗಿಯಾದ, ಮಹಾಭಾಗ್ಯಶಾಲಿನಿಯಾದ, ಯಶೋವತಿಯಾದ ಭದ್ರೆಯು ಉತಥ್ಯನನ್ನೇ ಹೊಂದಲು ನಿಯಮಾನುಷ್ಠಾನಪರಳಾಗಿ ಕಠೋರ ವಾದ ತಪಸ್ಸನ್ನೇ ಮಾಡಿದಳು. ಕೆಲವು ದಿವಸಗಳು ಕಳೆದನಂತರ ಸೋಮನ ತಂದೆಯಾದ ಅತ್ರಿಯು ಉತಥ್ಯನನ್ನು ಆಹ್ವಾನಿಸಿ ತನ್ನ ಮೊಮ್ಮಗಳಾದ ಭದ್ರೆಯನ್ನು ಅವನಿಗೆ ಪಾಣಿಗ್ರಹಣಮಾಡಿಕೊಟ್ಟನು. ಭೂರಿದಕ್ಷಿಣನಾದ (ಯಜ್ಞದಲ್ಲಿ ಬ್ರಾಹ್ಮಣರಿಗೆ ಹೇರಳವಾಗಿ ದಕ್ಷಿಣೆಯನ್ನು ಕೊಡುತ್ತಿದ್ದ) ಉತಥ್ಯನು ಭದ್ರೆಯನ್ನು ಪತ್ನಿಯನ್ನಾಗಿ ಪರಿಗ್ರಹಿಸಲು ವಿಧಿಪೂರ್ವಕವಾಗಿ ವೈವಾಹಿಕಕರ್ಮಗಳನ್ನು ಮಾಡಿದನು. ಆದರೆ ಶ್ರೀಮಂತನಾದ ವರುಣ ದೇವನು ಭದ್ರೆಯನ್ನು ಆ ಮೊದಲೇ ಕಾಮಿಸಿದ್ದನು. ಉತಥ್ಯನು ಭದ್ರೆಯನ್ನು ವಿವಾಹಮಾಡಿಕೊಂಡು ತೆರಳಿದ ಸ್ವಲ್ಪದಿವಸಗಳಲ್ಲಿಯೇ ಯಮುನಾನದಿಗೆ ಸ್ನಾನಕ್ಕಾಗಿ ಹೋಗಿದ್ದ ಭದ್ರೆಯನ್ನು ವರುಣನು ಅಪಹರಿಸಿದನು. ಭದ್ರೆಯನ್ನು ಅಪಹರಿಸಿದನಂತರ ವರುಣನು ಅವಳನ್ನು ಪರಮಾದ್ಭುತವಾಗಿ ಕಾಣುತ್ತಿದ್ದ ಆರು ಸಾವಿರ ಮಿಂಚುಗಳ ಪ್ರಕಾಶದಿಂದ ಬೆಳಗುತ್ತಿದ್ದ ತನ್ನ ಪಟ್ಟಣಕ್ಕೆ ಒಯ್ದನು. ಪ್ರಾಸಾದಗಳಿಂದಲೂ, ಅಪ್ಸರೆಯ ರಿಂದಲೂ ಮತ್ತು ದಿವ್ಯ ಭೋಗಗಳಿಂದಲೂ, ಯುಕ್ತವಾಗಿದ್ದ ಆ ವರುಣನ ನಗರಿಗೆ ಸಮಾನವಾದ ಮತ್ತು ರಮ್ಯತರವಾದ ಬೇರೆ ಯಾವ ನಗರಿಯೂ ಇರಲಿಲ್ಲ. ಅಂತಹ ರಮಣೀಯವಾದ ನಗರಿಯಲ್ಲಿ ಜಲೇಶ್ವರನಾದ ವರುಣನು ಭದ್ರೆಯೊಡನೆ ರಮಿಸತೊಡಗಿದನು. ಭದ್ರೆಯನ್ನು ವರುಣನು ಅಪಹರಿಸಿದ ವಿಷಯವನ್ನೂ ಮತ್ತು ಅವಳನ್ನು ಸತೀತ್ವದಿಂದ ಭ್ರಷ್ಟಳನ್ನಾಗಿ ಮಾಡಿದ ವಿಷಯವನ್ನೂ ನಾರದರು ಉತಥ್ಯನಿಗೆ ಹೇಳಿದರು. ಉತಥ್ಯನು ನಾರದರಿಂದ ಎಲ್ಲ ವಿಷಯಗಳನ್ನೂ ಕೇಳಿದ ನಂತರ ನಾರದರಿಗೆ ಹೇಳಿದನು: ‘ಗಚ್ಛ ಬ್ರೂಹಿ ತ್ವಂ ವರುಣಂ ಪರುಷಂ ವಚಃ’–‘ನಾರದರೇ! ನೀವೇ ವರುಣನಲ್ಲಿಗೆ ಹೋಗಿರಿ. ಕಠೋರವಾದ ಈ ಸಂದೇಶವನ್ನು ವರುಣನಿಗೆ ತಿಳಿಯಪಡಿಸಿರಿ:

ಮದ್ವಾಕ್ಯಾನ್ಮುಞ್ಚ ಮೇ ಭಾರ್ಯಾಂ ಕಸ್ಮಾತ್ತಾಂ ಹೃತವಾನಸಿ।
ಲೋಕಪಾಲೋಽಸಿ ಲೋಕಾನಾಂ ನ ಲೋಕಸ್ಯ ವಿಲೋಪಕಃ।
ಸೋಮೇನ ದತ್ತಾ ಭಾರ್ಯಾ ಮೇ ತ್ವಯಾ ಚಾಪಹೃತಾದ್ಯ ವೈ॥

"ವರುಣದೇವನೇ! ನನ್ನ ಭಾರ್ಯೆಯನ್ನು ನೀನು ಏಕೆ ಅಪಹರಿಸಿರುವೆ? ನನ್ನ ಮಾತಿನಂತೆ ಈಗಲೇ ಅವಳನ್ನು ಬಿಟ್ಟುಬಿಡು. ನೀನು ಎಲ್ಲ ಲೋಕಗಳ ಪಾಲಕನಾಗಿರುವೆ. ಲೋಕವಿನಾಶಕನಲ್ಲ. ಅವಳನ್ನು ಸೋಮನು ವಿಧಿವತ್ತಾಗಿ ಕನ್ಯಾದಾನದ ಮೂಲಕವಾಗಿ ನನಗೆ ವಿವಾಹಮಾಡಿಕೊಟ್ಟಿದ್ದನು. ಅಂತಹ ನಿಜಭಾರ್ಯೆಯನ್ನು ನೀನೀಗ ಅಪಹರಿಸಿರುವೆ. ಸಾವಕಾಶಮಾಡದೇ ಕಳುಹಿಸಿಕೊಡು."

ಉತಥ್ಯನ ಮಾತಿನಂತೆ ನಾರದರು ವರುಣನ ಬಳಿಗೆ ಹೋಗಿ ಉತಥ್ಯನು ಹೇಳಿದ್ದ ಮಾತುಗಳನ್ನೇ ವರುಣನಿಗೆ ಯಥಾವತ್ತಾಗಿ ಹೇಳಿದರು ಮತ್ತು ತಮ್ಮ ಅಭಿಪ್ರಾಯವನ್ನೂ ಸ್ಪಷ್ಟಪಡಿಸಿದರು.

ಮುಞ್ಚ ಭಾರ್ಯಾಮುತಥ್ಯಸ್ಯ ಕಸ್ಮಾತ್ತ್ವಂ ಹೃತವಾನಸಿ ॥೧೯॥

"ವರುಣ! ಯಾವ ಕಾರಣದಿಂದ ನೀನು ಉತಥ್ಯನ ಪತ್ನಿಯನ್ನು ಅಪಹರಿಸಿದೆ? ಈಗಲೇ ಅವಳನ್ನು ಬಿಟ್ಟುಬಿಡು."

ನಾರದರ ಮಾತನ್ನು ಕೇಳಿ ವರುಣನು ಹೇಳಿದನು:

ಮಮೈಷಾ ಸುಪ್ರಿಯಾ ಭಾರ್ಯಾ ನೈನಾಮುತ್ಸ್ರಷ್ಟುಮುತ್ಸಹೇ ॥೨೦॥

"ನಾರದರೇ! ಭದ್ರೆಯು ನನ್ನ ಪ್ರಿಯಭಾರ್ಯೆಯಾಗಿದ್ದಾಳೆ. ಆದುದರಿಂದ ನಾನಿವಳನ್ನು ಬಿಟ್ಟುಕೊಡಲಾರೆನು."

ವರುಣನು ಹೀಗೆ ಹೇಳಿದನಂತರ ಖಿನ್ನಮನಸ್ಕರಾದ ನಾರದರು ಉತಥ್ಯಮುನಿಯ ಬಳಿಗೆ ಹೋಗಿ ಹೇಳಿದರು:

ಗಲೇ ಗೃಹೀತ್ವಾ ಕ್ಷಿಪ್ತೋಽಸ್ಮಿ ವರುಣೇನ ಮಹಾಮುನೇ।
ನ ಪ್ರಯಚ್ಛತಿ ತೇ ಭಾರ್ಯಾಂ ಯತ್ತೇ ಕಾರ್ಯಂ ಕುರುಷ್ವ ತತ್ ॥

"ಮಹಾಮುನಿಯೇ! ನಿನ್ನ ಮಾತಿನಂತೆ ಭದ್ರೆಯನ್ನು ಬಿಟ್ಟುಬಿಡು ವಂತೆ ಹೇಳಿದ ನನ್ನನ್ನು ವರುಣನು ಕತ್ತುಹಿಡಿದು ಹೊರಕ್ಕೆ ನೂಕಿಬಿಟ್ಟನು.

ಅವನು ನಿನ್ನ ಪತ್ನಿಯನ್ನು ಖಂಡಿತವಾಗಿಯೂ ಬಿಟ್ಟುಕೊಡುವುದಿಲ್ಲ. ನಿನ್ನ ಭಾರ್ಯೆಯನ್ನು ಪಡೆದುಕೊಳ್ಳಲು ಬೇರೆ ಯಾವುದಾದರೂ ಕಾರ್ಯವಿದ್ದರೆ (ಉಪಾಯವಿದ್ದರೆ) ಅದನ್ನು ಕೂಡಲೇ ಮಾಡು."

ನಾರದರ ಆ ಮಾತನ್ನು ಕೇಳಿದೊಡನೆಯೇ ಉತಥ್ಯನು ಕೋಪದಿಂದ ಉರಿದುಹೋದನು. ಮಹಾತಪಸ್ವಿಯಾದ ಅವನು ನೀರನ್ನು ಸ್ತಂಭಿಸಿ ತನ್ನ ತೇಜಸ್ಸಿನಿಂದ ಸ್ತಂಭನಗೊಳಿಸಿದ್ದ ಜಲರಾಶಿಯನ್ನೇ ಕುಡಿದುಬಿಡಲು ಉಪಕ್ರಮಿಸಿದನು. ಪೃಥ್ವಿಯಲ್ಲಿದ್ದ ಜಲರಾಶಿಯನ್ನೇ ಉತಥ್ಯನು ಕುಡಿದು ಮುಗಿಸುತ್ತಿದ್ದರೂ– ಸುಹೃದರು, ನೀರಿಲ್ಲದೇ ಸಂಭವಿಸುವ ಅನಾಹುತವನ್ನು ತಪ್ಪಿಸುವ ಸಲುವಾಗಿ ವರುಣದೇವನಿಗೆ ಭದ್ರೆಯನ್ನು ಬಿಟ್ಟುಕೊಡುವಂತೆ ಬೇಡಿಕೊಳ್ಳುತ್ತಿದ್ದರೂ ವರುಣನು ಭದ್ರೆಯನ್ನು ಬಿಡಲೇ ಇಲ್ಲ.

ಬಳಿಕ ಬ್ರಾಹ್ಮಣಶ್ರೇಷ್ಠನಾದ ಉತಥ್ಯನು ಅತ್ಯಂತ ಕ್ರುದ್ಧನಾಗಿ ಭೂದೇವಿಗೆ ಹೇಳಿದನು:

ದರ್ಶಯಸ್ವ ಸ್ಥಲಂ ಭದ್ರೇ ಷಟ್ಸಹಸ್ರಶತಹ್ರದಮ್ ॥೨೫॥

'ಮಂಗಳಮಯಿಯಾದ ಭೂದೇವಿಯೇ! ಆರುಸಾವಿರ ಮಿಂಚುಗಳ ಕಾಂತಿಯಿಂದ ಯುಕ್ತವಾಗಿರುವ ವರುಣನ ಆ ನಗರಿಯು ಎಲ್ಲಿರುವುದೆಂಬುದನ್ನು ತೋರಿಸು."

ಭೂದೇವಿಯು, ಭದ್ರೆಯು ಇರುವ ಸ್ಥಳವನ್ನು ತಿಳಿಸಿದಳು. ಅವಳನ್ನು ಕರೆತರುವ ಸಲುವಾಗಿ ಉತಥ್ಯನು ಸಮುದ್ರದ ಬಳಿಗೆ ಹೋಗುತ್ತಲೇ ಆ ಪ್ರದೇಶವೆಲ್ಲವೂ ಊಷರಭೂಮಿಯಾಗಿ ಪರಿವರ್ತನೆ ಹೊಂದಿತು. ಅಲ್ಲಿಯೇ ಹರಿಯುತ್ತಿದ್ದ ನದಿಯನ್ನು ಕುರಿತು ದ್ವಿಜಶ್ರೇಷ್ಠನಾದ ಉತಥ್ಯನು ಹೇಳಿದನು:

ಅದೃಶ್ಯಾ ಗಚ್ಛ ಭೀರು ತ್ವಂ ಸರಸ್ವತಿ ಮುರೂನ್ಪ್ರತಿ ।
ಅಪುಣ್ಯ ಏಷ ಭವತು ದೇಶಸ್ತ್ಯಕ್ತಸ್ತ್ವಯಾ ಶುಭೇ ॥೨೭॥

"ಸರಸ್ವತೀದೇವಿಯೇ! ನೀನು ಅದೃಶ್ಯಳಾಗಿ ಮರುಪ್ರದೇಶಕ್ಕೆ ಹೊರಟು ಹೋಗು. ನಿನ್ನಿಂದ ಪರಿತ್ಯಕ್ತವಾದ ಈ ಪ್ರದೇಶವು ಅಪವಿತ್ರವಾಗಲಿ."

ಯಾವಾಗ ವರುಣನ ಎದುರಿನಲ್ಲಿಯೇ ಎಲ್ಲ ಪ್ರದೇಶವೂ ಒಣಗಿಹೋಯಿತೋ–ಆಗ ಭಯಭ್ರಾಂತನಾದ ವರುಣನು ಉತಥ್ಯನಿಗೆ ಶರಣಾಗಿ ಭದ್ರೆಯನ್ನು ಮಹಾಮುನಿಯಾದ ಆಂಗಿರಸನಿಗೆ ಒಪ್ಪಿಸಿದನು.

ತನ್ನ ಭಾರ್ಯೆಯಾದ ಭದ್ರೆಯನ್ನು ಪಡೆದುಕೊಂಡು ಉತಥ್ಯನು ಪ್ರಸನ್ನಚಿತ್ತನಾದನು. ವರುಣನನ್ನೂ ಮತ್ತು ಅಖಿಲಜಗತ್ತನ್ನೂ ದುಃಖದಿಂದ ಬಿಡುಗಡೆಮಾಡಿದನು. ಧರ್ಮವಿದನಾದ ಮಹಾತೇಜಸ್ವಿಯಾದ ಉತಥ್ಯನು ಹೀಗೆ ಭಾರ್ಯೆಯನ್ನು ತನ್ನ ತಪಃಪ್ರಭಾವದಿಂದ ಹಿಂದಕ್ಕೆ ಪಡೆದುಕೊಂಡು ವರುಣನಿಗೆ ಹೇಳಿದನು:

ಮಯೈಷಾ ತಪಸಾ ಪ್ರಾಪ್ತಾ ಕ್ರೋಶತಸ್ತೇ ಜಲಾಧಿಪ ||೩೧||

“ಜಲಾಧಿಪನೇ! ನೀನು ಭದ್ರೆಯನ್ನು ಬಿಡುವುದಿಲ್ಲವೆಂದು ಕಿರುಚಿ ಕೊಳ್ಳುತ್ತಿದ್ದರೂ ನನ್ನ ತಪಃಪ್ರಭಾವದಿಂದ ನೀನಾಗಿಯೇ ತಂದೊಪ್ಪಿಸುವಂತೆ ಮಾಡಿ ನಾನಿವಳನ್ನು ಪಡೆದುಕೊಂಡೆನು.”

ಉತಥ್ಯನು ಹೀಗೆ ಹೇಳಿ ಭದ್ರೆಯನ್ನು ಕರೆದುಕೊಂಡು ತನ್ನ ಆಶ್ರಮಕ್ಕೆ ಹೊರಟುಹೋದನು.ಕಾರ್ತವೀರ್ಯ! ಬ್ರಾಹ್ಮಣಶ್ರೇಷ್ಠನಾದ ಉತಥ್ಯನು ಎಂತಹ ಪ್ರಭಾವಶಾಲಿಯೆಂಬುದನ್ನು ನಾನು ಹೇಳಿದ್ದೇನೆ. ಬ್ರಾಹ್ಮಣನಾದ ಈ ಉತಥ್ಯನಿಗಿಂತಲೂ ಶ್ರೇಷ್ಠನಾದ ಕ್ಷತ್ರಿಯನು ಯಾವನಾದರೂ ಇದ್ದರೆ ಹೇಳು.

೧೫೪ನೆಯ ಅಧ್ಯಾಯವು ಮುಗಿಯಿತು.

೧೫೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮರ್ಷಿಗಳಾದ ವಸಿಷ್ಠ ಮತ್ತು ಅಗಸ್ತ್ಯರ ಪ್ರಭಾವವರ್ಣನೆ

ಭೀಷ್ಮನು ಹೇಳುತ್ತಾನೆ:

ಇತ್ಯುಕ್ತಃ ಸ ನೃಪಸ್ತೂಷ್ಣೀಮಭೂದ್ವಾಯುಸ್ತತೋಽಬ್ರವೀತ್ ।
ಶೃಣು ರಾಜನ್ನಗಸ್ತ್ಯಸ್ಯ ಮಾಹಾತ್ಮ್ಯಂ ಬ್ರಾಹ್ಮಣಸ್ಯ ಹ ||೧||

“ಯುಧಿಷ್ಠಿರ! ವಾಯುವು ಹೀಗೆ ಹೇಳಲಾಗಿ ರಾಜನು ಯಾವ ಮಾತನ್ನೂ ಆಡದೆ ಸುಮ್ಮನಿದ್ದನು. ಪುನಃ ವಾಯುವು ರಾಜನಿಗೆ ಹೇಳಿದನು:

"ಅರ್ಜುನ! ಬ್ರಾಹ್ಮಣನಾದ ಅಗಸ್ತ್ಯನ ಮಹಿಮೆಯನ್ನು ಕೇಳು:

ಹಿಂದೊಮ್ಮೆ ದೇವತೆಗಳು ಅಸುರರಿಂದ ಪರಾಜಿತರಾಗಿ ನಿರುತ್ಸಾಹಿಗಳಾದರು. ದಾನವರು ದೇವತೆಗಳಿಗೆ ಸಂಬಂಧಿಸಿದ ಯಜ್ಞಗಳನ್ನೂ ಪಿತೃದೇವತೆಗಳಿಗೆ ಸಂಬಂಧಿಸಿದ ಶ್ರಾದ್ಧಾದಿಗಳನ್ನೂ, ಮಾನವರ ಕರ್ಮಾನುಷ್ಠಾನಗಳನ್ನೂ ಲುಪ್ತಗೊಳಿಸಿದರು. (ಯಜ್ಞಗಳಾಗಲೀ ಶ್ರಾದ್ಧಾದಿಗಳಾಗಲೀ ಅಗ್ನಿಹೋತ್ರಾದಿಗಳಾಗಲೀ ನಡೆಯದಂತೆ ಮಾಡಿದರು.) ಐಶ್ವರ್ಯದಿಂದ ಭ್ರಷ್ಟರಾದ ದೇವತೆಗಳು ಭೂಮಿಯಲ್ಲಿ ಅಲೆದಾಡುತ್ತಿದ್ದರೆಂದು ಕೇಳಿದ್ದೇವೆ. ಆಗೊಮ್ಮೆ ಅವರು ಸೂರ್ಯನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ, ದೇದೀಪ್ಯಮಾನನಾಗಿದ್ದ, ಮಹಾವ್ರತನಿಷ್ಠನಾಗಿದ್ದ ತೇಜಸ್ವಿಯಾಗಿದ್ದ ಅಗಸ್ತ್ಯನನ್ನು ನೋಡಿದರು. ಒಡನೆಯೇ ಅವರೆಲ್ಲರೂ ಆ ಮಹಾಮುನಿಗೆ ನಮಸ್ಕಾರಮಾಡಿ ಅವನ ಕುಶಲವನ್ನು ಕೇಳಿ ಸಮಯವರಿತು ಮಹಾತ್ಮನಾದ ಅಗಸ್ತ್ಯನನ್ನು ಕುರಿತು ಹೇಳಿದರು:

ದಾನವೈರ್ಯುಧಿ ಭಗ್ನಾಃ ಸ್ಮ ತಥೈಶ್ವರ್ಯಾಚ್ಚ ಭ್ರಂಶಿತಾಃ ।
ತದಸ್ಮಾನ್ನೋ ಭಯಾತ್ತೀವ್ರಾತ್ತ್ರಾಹಿ ತ್ವಂ ಮುನಿಪುಙ್ಗವ ॥೬॥

"ಮುನಿಶ್ರೇಷ್ಠನೇ! ಯುದ್ಧದಲ್ಲಿ ನಾವು ದಾನವರಿಂದ ಪರಾಜಿತರಾದೆವು. ಐಶ್ವರ್ಯಗಳಿಂದಲೂ ವಂಚಿತರಾದೆವು. ಈಗ ನಮಗೆ ಮಹಾಭಯವುಂಟಾಗಿದೆ. ಈ ಭಯದಿಂದ ನಮ್ಮನ್ನು ಸಂರಕ್ಷಿಸು."

ದೇವತೆಗಳು ಹೀಗೆಹೇಳಿದೊಡನೆಯೇ ಅಗಸ್ತ್ಯನು ಕೋಪಗೊಂಡನು. ಯುಗಾಂತದಲ್ಲಿ ಹುಟ್ಟಿಕೊಳ್ಳುವ ಕಾಲಾಗ್ನಿಯಂತೆ ತೇಜಸ್ವಿಯಾದ ಅಗಸ್ತ್ಯನು ಕೋಪದಿಂದ ಧಗ-ಧಗಿಸುತ್ತಿದ್ದನು. ಅವನ ಪ್ರದೀಪ್ತವಾದ ಕಿರಣಗಳ ಸ್ಪರ್ಶದಿಂದಲೇ ದಾನವರು ಸುಟ್ಟುಹೋಗಿ ಸಾವಿರಾರು ಸಂಖ್ಯೆಯಲ್ಲಿ ಆಕಾಶದಿಂದ ಕೆಳಕ್ಕೆ ಬಿದ್ದರು. ಅಗಸ್ತ್ಯನ ಪ್ರಖರವಾದ ತೇಜಸ್ಸಿನಿಂದ ದಹಿಸಲ್ಪಡುತ್ತಿದ್ದ ಆ ದಾನವರು ಎರಡು ಲೋಕಗಳನ್ನೂ ಪರಿತ್ಯಜಿಸಿ ದಕ್ಷಿಣದಿಕ್ಕಿಗೆ ಓಡಿಹೋದರು. ಆ ಸಮಯದಲ್ಲಿ ಬಲಿ ಚಕ್ರವರ್ತಿಯು ಭೂಮಿಗೆ ಬಂದು ಅಶ್ವಮೇಧಯಾಗವನ್ನು ಮಾಡುತ್ತಿದ್ದನು.

ಆ ಸಮಯದಲ್ಲಿ ಯಾವ ದಾನವರು ಬಲಿಯ ಜೊತೆಯಲ್ಲಿದ್ದರೋ ಮತ್ತು ಪಾತಾಳದಲ್ಲಿ ಅಡಗಿಕೊಂಡಿದ್ದರೋ–ಅಂತಹವರು ಮಾತ್ರ ಅಗಸ್ತ್ಯನ ಪ್ರಖರಕಿರಣಗಳ ಸ್ಪರ್ಶದಿಂದ ಸುಟ್ಟುಹೋಗಲಿಲ್ಲ. ಅದರಿಂದ ದೇವತೆಗಳ ಭಯವು ಶಾಂತವಾಯಿತು. ಅವರು ತಮ್ಮ-ತಮ್ಮಲೋಕಗಳನ್ನು ಪುನಃ ಪಡೆದುಕೊಂಡರು. ಸ್ವಲ್ಪಕಾಲಾನಂತರ ದೇವತೆಗಳು ಪುನಃ ಅಗಸ್ತ್ಯರ ಸಮೀಪಕ್ಕೆ ಬಂದು 'ಭೂಮಿಷ್ಠಾನಸುರಾಞ್ಜಹಿ' 'ಭೂಮಿಯ ಮೇಲಿರುವ ಅಸುರರನ್ನೂ ಸಂಹರಿಸು'–ಎಂದು ಪ್ರಾರ್ಥಿಸಿದರು.

ದೇವತೆಗಳು ಹೀಗೆ ಪ್ರಾರ್ಥಿಸಲಾಗಿ ಅಗಸ್ತ್ಯನು ಭೂಮಿಯಲ್ಲಿರುವ ದಾನವರನ್ನು ಸುಡಲು ತನಗೆ ಶಕ್ತಿಯಿಲ್ಲವೆಂದೂ (ಇಚ್ಛೆಯಿಲ್ಲವೆಂದೂ), ಹಾಗೇನಾದರೂ ದಹಿಸಲು ಹೋದರೆ ತನ್ನ ತಪಸ್ಸು ಕ್ಷಯಿಸುವುದೆಂದೂ ಆದುದರಿಂದ ಆ ಕಾರ್ಯವು ತನಗೆ ಶಕ್ಯವಿಲ್ಲವೆಂದೂ ಹೇಳಿಬಿಟ್ಟನು.

ಹೀಗೆ ತಪಸ್ವಿಯಾದ ಶುದ್ಧಾಂತಃಕರಣನಾದ, ಪೂಜ್ಯನಾದ ಅಗಸ್ತ್ಯನು ತನ್ನ ತೇಜಸ್ಸಿನಿಂದ ದಾನವರನ್ನು ದಹಿಸಿಬಿಟ್ಟನು. ಅರ್ಜುನ! ಬ್ರಾಹ್ಮಣನಾದ ಅಗಸ್ತ್ಯನು ಎಂತಹ ಪ್ರಭಾವಶಾಲಿಯೆಂಬುದನ್ನು ಹೇಳಿದ್ದೇನೆ. ಮುಂದೆಯೂ ಇಂತಹುದೇ ಪ್ರಸಂಗಗಳನ್ನು ಹೇಳುತ್ತೇನೆ. ನೀನೀಗ ಬ್ರಾಹ್ಮಣನಾದ ಅಗಸ್ತ್ಯನಿಗಿಂತಲೂ ಶ್ರೇಷ್ಠನಾಗಿರುವ ಕ್ಷತ್ರಿಯನೇನಾದರೂ ನಿನಗೆ ತಿಳಿದಿದ್ದರೆ ಅವನು ಯಾರೆಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಯುಧಿಷ್ಠಿರ! ವಾಯುದೇವನು ಹೀಗೆ ಹೇಳಲಾಗಿ ಕಾರ್ತವೀರ್ಯನು ಯಾವ ಮಾತನ್ನೂ ಆಡದೆ ಸುಮ್ಮನಿದ್ದನು. ಬಳಿಕ ವಾಯುವು ಪುನಃ ಬ್ರಾಹ್ಮಣ್ಯದ ಮಾಹಾತ್ಮ್ಯವನ್ನು ಹೇಳತೊಡಗಿದನು:

"ಅರ್ಜುನ! ಬ್ರಾಹ್ಮಣಶ್ರೇಷ್ಠರಾದ ಯಶೋವಂತರಾದ ವಸಿಷ್ಠರ ಶ್ರೇಷ್ಠಕರ್ಮಗಳನ್ನು ಲಾಲಿಸು. ಒಮ್ಮೆ ದೇವತೆಗಳು ವಸಿಷ್ಠಮಹರ್ಷಿಗಳ ಗಣ್ಯತೆಯನ್ನು ತಿಳಿದು ಮನಸ್ಸಿನಿಂದಲೇ ಅವರನ್ನು ಶರಣುಹೊಂದಿ ಮಾನಸಸರೋವರದ ದಡದಲ್ಲಿ ಯಜ್ಞವೊಂದನ್ನು ಆರಂಭಿಸಿದರು. ಸಮಸ್ತದೇವತೆಗಳೂ ಯಜ್ಞದೀಕ್ಷೆಯನ್ನು ಕೈಗೊಂಡು ದುರ್ಬಲ ರಾಗಿರುವುದನ್ನು ನೋಡಿ ಪರ್ವತೋಪಮರಾದ ಖಲಿಗಳೆಂಬ ದಾನವರು ಆ

ದೇವತೆಗಳೆಲ್ಲರನ್ನೂ ಸಂಹರಿಸಲು ಬಯಸಿದರು. ದೇವ-ದಾನವರಿಗೆ ಯುದ್ಧವು ಪ್ರಾರಂಭವಾಯಿತು. ಆ ರಣರಂಗದ ಸಮೀಪದಲ್ಲಿಯೇ ಬ್ರಹ್ಮನ ವರವನ್ನು ಪಡೆದಿದ್ದ ಸರೋವರವಿದ್ದಿತು. ಯುದ್ಧದಲ್ಲಿ ದಾನವರು ಸತ್ತಾಗ ಸತ್ತವರನ್ನು ಆ ಸರೋವರದಲ್ಲಿ ಹಾಕಿಬಿಟ್ಟರೆ ಸತ್ತವರು ಪುನಃ ಜೀವಂತರಾಗಿ ಮೇಲೆದ್ದು ಬರುತ್ತಿದ್ದರು. ಅಂತಹ ಅಮೋಘವಾದ ವರವನ್ನು ಬ್ರಹ್ಮನು ದೈತ್ಯರಿಗೂ ಮತ್ತು ಆ ಸರೋವರಕ್ಕೂ ದಯಪಾಲಿಸಿದ್ದನು. ಖಲಿಗಳೆಂಬ ದಾನವರೂ ಸೈನಿಕರಿಂದೊಡಗೂಡಿ ದೇವತೆಗಳೊಡನೆ ಯುದ್ಧ ಮಾಡುತ್ತಿದ್ದಾಗಲೂ ದಾನವ ನಾಯಕರು ಹಾಗೇ ಮಾಡುತ್ತಿದ್ದರು. ಯುದ್ಧದಲ್ಲಿ ಮಡಿದವನನ್ನು ಸರೋವರದಲ್ಲಿ ಮುಳುಗಿಸುತ್ತಿದ್ದರು. ಮರುಕ್ಷಣದಲ್ಲಿಯೇ ಸತ್ತಿದ್ದವನು ಜೀವಂತನಾಗಿ ಹೊರಬರುತ್ತಿದ್ದನು. ಹಾಗೆ ಮೇಲೆದ್ದು ಬರುತ್ತಿದ್ದ ದಾನವರು ನೂರು ಯೋಜನದಷ್ಟು ವಿಸ್ತೀರ್ಣವಿದ್ದ ಆ ಜಲರಾಶಿಯನ್ನು ಅಲ್ಲೋಲ-ಕಲ್ಲೋಲಮಾಡುತ್ತಿದ್ದರು. ಹತ್ತು ಸಾವಿರ ದಾನವರು ಭಯಂಕರವಾದ ಪರ್ವತಶಿಖರಗಳನ್ನೂ, ಪರಿಘಾಯುಧ ಗಳನ್ನೂ, ವೃಕ್ಷಗಳನ್ನೂ ಹಿಡಿದು ದೇವತೆಗಳನ್ನು ಅಟ್ಟಿಸಿಕೊಂಡುಹೋದರು. ಹೀಗೆ ದಾನವರಿಂದ ಹಿಂಸಿಸಲ್ಪಟ್ಟ ದೇವತೆಗಳು ಇಂದ್ರನನ್ನು ಶರಣು ಹೊಂದಿದರು. ದೇವತೆಗಳ ರಕ್ಷಣೆಗಾಗಿ ಇಂದ್ರನು ದಾನವರೊಡನೆ ಯುದ್ಧಕ್ಕೆ ಹೋದನು. ಬಲಿಷ್ಠರಾದ ಆ ಖಲಿಗಳೆಂಬ ದಾನವರು ಇಂದ್ರನನ್ನೂ ಪರಾಜಯಗೊಳಿಸಿ ವ್ಯತಿಥನನ್ನಾಗಿ ಮಾಡಿದರು. ಪರಮದಯಾಳುಗಳಾದ ವಸಿಷ್ಠರು, ಇಂದ್ರಪ್ರಮುಖರಾದ ದೇವತೆಗಳೆಲ್ಲರೂ ದುಃಖಸಂತಪ್ತ ರಾಗಿರುವುದನ್ನು ತಿಳಿದು ಹೆಚ್ಚಿನ ಪ್ರಯತ್ನವೇ ಇಲ್ಲದೇ ತಮ್ಮ ದಿವ್ಯತೇಜಸ್ಸಿ ನಿಂದ ಖಲಿಗಳೆಂಬ ದಾನವರನ್ನು ಸಂಪೂರ್ಣವಾಗಿ ದಹಿಸಿಬಿಟ್ಟರು. ಮಹಾತಪಸ್ವಿಗಳಾದ ವಸಿಷ್ಠರು ಕೈಲಾಸದ ಕಡೆಗೆ ಹೋಗುತ್ತಿದ್ದ ಗಂಗಾದೇವಿಯನ್ನು ಆ ಸರೋವರದ ಬಳಿಗೆ ಕರೆತಂದರು. ಗಂಗಾನದಿಯು ಋಷಿಗಳ ಆಜ್ಞೆಯಂತೆ ಆ ಸರೋವರವನ್ನು ಪ್ರವೇಶಿಸುತ್ತಲೇ ಅದು ಎರಡಾಗಿ ಒಡೆದು ಹೋಯಿತು.

ಸರೋ ಭಿನ್ನಂ ತಯಾ ನದ್ಯಾ ಸರಯೂಃ ಸಾ ತತೋಽಭವತ್ ।
ಹತಾಶ್ಚ ಖಲಿನೋ ಯತ್ರ ಸ ದೇಶಃ ಖಲಿನೋಽಭವತ್ ॥೨೪॥

ಗಂಗಾನದಿಯಿಂದ ಆ ಸರೋವರವು ಭಿನ್ನವಾದ ಕಾರಣ ಮುಂದಕ್ಕೆ ಹರಿದುಬಂದ ಪ್ರವಾಹವು 'ಸರಯೂ' ಎಂಬ ಹೆಸರಿನಿಂದಲೇ ಪ್ರಸಿದ್ಧವಾಯಿತು. ವಸಿಷ್ಠರ ದಿವ್ಯತೇಜಸ್ಸಿನಿಂದ ಬಲಿರಾಕ್ಷಸರು ಹತರಾದ ಪ್ರದೇಶವು ಖಲಿನದೇಶ–ಎಂಬ ಹೆಸರನ್ನೇ ಪಡೆಯಿತು.

ಹೀಗೆ ಇಂದ್ರಪ್ರಮುಖರಾದ ದೇವತೆಗಳು ವಸಿಷ್ಠರಿಂದ ರಕ್ಷಿಸಲ್ಪಟ್ಟರು. ಬ್ರಹ್ಮನೇ ವರವನ್ನು ದಯಪಾಲಿಸಿದ್ದರೂ ದೈತ್ಯರು ವಸಿಷ್ಠರಿಂದ ದಗ್ಧರಾಗಿ ಹೋದರು. ನಿಷ್ಪಾಪನಾದ ನರೇಶನೇ! ವಸಿಷ್ಠರು ಮಾಡಿದ ಅದ್ಭುತವಾದ ಕಾರ್ಯವನ್ನು ನಿನಗೆ ಹೇಳಿರುವೆನು. ಈ ಎಲ್ಲ ಕಾರಣಗಳಿಂದಲೂ ನಾನು ಬ್ರಾಹ್ಮಣರೇ ಎಲ್ಲರಿಗಿಂತಲೂ ಶ್ರೇಷ್ಠರೆಂದು ಹೇಳುತ್ತೇನೆ. ನೀನೇನಾದರೂ ಬ್ರಾಹ್ಮಣರಿಗಿಂತಲೂ ಕ್ಷತ್ರಿಯರೇ ಶ್ರೇಷ್ಠರು ಎನ್ನುವುದಾದರೆ ವಸಿಷ್ಠರಿಗಿಂತಲೂ ಶ್ರೇಷ್ಠನಾದ ಕ್ಷತ್ರಿಯನನ್ನು ಹೆಸರಿಸು."

ಗ೫೫ನೆಯ ಅಧ್ಯಾಯವು ಮುಗಿಯಿತು.

ಗ೫೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಅತ್ರಿ ಮತ್ತು ಚ್ಯವನರ ಪ್ರಭಾವವರ್ಣನೆ

ಭೀಷ್ಮನು ಹೇಳುತ್ತಾನೆ:

ಇತ್ಯುಕ್ತಸ್ತ್ವರ್ಜುನಸ್ತೂಷ್ಣೀಮಭೂದ್ವಾಯುಸ್ತಮಬ್ರವೀತ್ ।
ಶೃಣು ಮೇ ಹೈಹಯಶ್ರೇಷ್ಠ ಕರ್ಮಾತ್ರೇಃ ಸುಮಹಾತ್ಮನಃ ॥೧॥

"ಯುಧಿಷ್ಠಿರ! ವಾಯುದೇವನು ಇಷ್ಟು ಹೇಳಿದರೂ ಕಾರ್ತವೀರ್ಯನು ಯಾವ ಮಾತನ್ನೂ ಆಡಲಿಲ್ಲ. ಸುಮ್ಮನಿದ್ದನು. ವಾಯುವು ಪುನಃ ಹೇಳತೊಡಗಿದನು:

"ಹೈಹಯಶ್ರೇಷ್ಠನೇ! ಮಹಾತ್ಮನಾದ ಅತ್ರಿಯು ಮಾಡಿದ ಮಹಾಕಾರ್ಯಗಳು ಯಾವುವೆಂಬುದನ್ನು ಹೇಳುವೆನು ಕೇಳು:

ಹಿಂದೊಮ್ಮೆ ದೇವ-ದಾನವನು ಘೋರವಾದ ಅಂಧಕಾರದಲ್ಲಿಯೇ ಪರಸ್ಪರವಾಗಿ ಯುದ್ಧಮಾಡುತ್ತಿದ್ದರು. (ಅಂತಹ ಅಂಧಕಾರಕ್ಕೆ ಕಾರಣ ವೇನೆಂದರೆ) ಯುದ್ಧದಲ್ಲಿ ರಾಹುವು ಸೋಮ-ಸೂರ್ಯರಿಬ್ಬರನ್ನೂ ತೀಕ್ಷ್ಣವಾದ ಬಾಣಗಳಿಂದ ಗಾಯಗೊಳಿಸಿದ್ದನು. ಕತ್ತಲೆಯಿಂದ ಆವೃತರಾಗಿದ್ದ ದೇವತೆಗಳನ್ನು ಬಲಿಷ್ಠರಾಗಿದ್ದ ದಾನವರು ಅಪಾರಸಂಖ್ಯೆಯಲ್ಲಿ ಸಂಹರಿಸುತ್ತಿದ್ದರು. ಹೀಗೆ ದಾನವರಿಂದ ಸತತವಾಗಿ ಪ್ರಹರಿಸಲ್ಪಡುತ್ತಿದ್ದ ದೇವತೆಗಳು ಕ್ಷೀಣವಾದ ಶಕ್ತಿಯಿಂದ ಕೂಡಿದವರಾಗಿ ತಪೋಧನನಾದ ಮತ್ತು ತಪಸ್ಸನ್ನು ಮಾಡುತ್ತಿದ್ದ ವಿಪ್ರಶ್ರೇಷ್ಠನಾದ ಅತ್ರಿಯನ್ನು ನೋಡಿದರು. ಶಾಂತವಾದ ಕೋಪವುಳ್ಳವನಾಗಿದ್ದ, ಜಿತೇಂದ್ರಿಯನಾದ ಅತ್ರಿಯನ್ನು ಕುರಿತು ದೇವತೆಗಳು ಹೇಳಿದರು:

"ದ್ವಿಜಶ್ರೇಷ್ಠನೇ! ಪ್ರಭುವೇ! ನಮಗೂ ದಾನವರಿಗೂ ಯುದ್ಧವು ನಡೆಯುತ್ತಿದ್ದಾಗ ಚಂದ್ರಾದಿತ್ಯರನ್ನು ಅಸುರರು ತೀಕ್ಷ್ಣವಾದ ಬಾಣಗಳಿಂದ ಗಾಯಗೊಳಿಸಿದರು. ಇದರಿಂದಾಗಿ ಲೋಕವು ಅಂಧಕಾರಮಯವಾಗಿದೆ. ಗಾಢಾಂಧಾಕಾರದಿಂದ ಅವೃತರಾಗಿರುವ ನಾವೆಲ್ಲರೂ ಶತ್ರುಗಳಿಂದ ಪ್ರಹರಿಸಲ್ಪಡುತ್ತಿದ್ದೇವೆ. ನಮಗೆ ಶಾಂತಿಯೆಂಬುದೇ ಇಲ್ಲವಾಗಿದೆ. ಆದುದರಿಂದ ನಮ್ಮನ್ನು ಈ ಭಯದಿಂದ ರಕ್ಷಿಸುವ ಕೃಪೆಮಾಡು."

ದೇವತೆಗಳ ಆ ಮಾತನ್ನು ಕೇಳಿ ಅತ್ರಿಯು ಪ್ರಶ್ನಿಸಿದನು:

'ಕಥಂ ರಕ್ಷಾಮಿ ಭವತಃ'-'ನಿಮ್ಮನ್ನು ನಾನು ಹೇಗೆ ರಕ್ಷಿಸಲಿ?'

ದೇವತೆಗಳು ಉತ್ತರಿಸಿದರು:

'ತಿಮಿರಘ್ನಃ ಚಂದ್ರಮಾ ಭವ। ಸವಿತಾ ಭವ। ದಸ್ಯುಹನ್ತಾ ಚ ನೋ ಭವ।

'ಕತ್ತಲೆಯನ್ನು ಹೋಗಲಾಡಿಸುವಾಗ ಚಂದ್ರನಾಗು; ಸೂರ್ಯನಾಗು; ಮತ್ತು ನಮ್ಮ ಶತ್ರುಗಳ ವಿನಾಶಕನಾಗು.'

ಅರ್ಜುನ! ದೇವತೆಗಳು ಹೀಗೆ ಹೇಳಲಾಗಿ ಅತ್ರಿಯು ಮಂದಪ್ರಭರಾಗಿದ್ದ ಸೂರ್ಯ-ಚಂದ್ರರನ್ನು ನೋಡಿ ಅಂಧಕಾರವನ್ನು ದೂರಮಾಡುವ ಚಂದ್ರನ ರೂಪವನ್ನು ಧರಿಸಿದನು. ಚಂದ್ರನಂತೆ ಪ್ರಿಯದರ್ಶನನೂ

ಆದನು. ಅನಂತರ ತನ್ನ ತಪಃಪ್ರಭಾವದಿಂದ ಯುದ್ಧಭೂಮಿಯಲ್ಲಿ ಪ್ರಕಾಶವನ್ನುಂಟುಮಾಡಿದನು. ಸಂಪೂರ್ಣವಾದ ಜಗತ್ತನ್ನೂ ಅಂಧಕಾರ ದಿಂದ ಶೂನ್ಯವನ್ನಾಗಿಯೂ ಪ್ರದೀಪ್ತವನ್ನಾಗಿಯೂ ಮಾಡಿದನು.

ಅತ್ರಿಯು ತನ್ನ ಮಹಾತೇಜಸ್ಸಿನಿಂದ ದೇವತೆಗಳ ಶತ್ರುಗಳಾದ ದಾನವರನ್ನು ಪರಾಜಯಗೊಳಿಸಿದನು. ಅತ್ರಿಯಿಂದ ದಹಿಸಲ್ಪಡುತ್ತಿದ್ದ ಮಹಾಸುರನನ್ನು ನೋಡಿ ದೇವತೆಗಳು ಅತ್ರಿಯಿಂದ ರಕ್ಷಿಸಲ್ಪಟ್ಟವರಾಗಿ ತಮ್ಮ ಪರಾಕ್ರಮಗಳಿಂದಲೂ ದಾನವರನ್ನು ಸಂಹರಿಸಿದರು. ಅತ್ರಿಯು ತನ್ನ ತಪಸ್ಸಿನ ಬಲದಿಂದ ಸೂರ್ಯನನ್ನು ಹಿಂದಿನಂತೆಯೇ ತೇಜೋವಿಶಿಷ್ಟನನ್ನಾಗಿ ಮಾಡಿದನು. ಹೀಗೆ ಅವನು ದೇವತೆಗಳನ್ನು ರಕ್ಷಿಸಿದನು. ಅಸುರರನ್ನು ವಿನಾಶಗೊಳಿಸಿದನು. ಮಹಾತೇಜಸ್ವಿಯಾದ ಅತ್ರಿಯು ಸಾಮರ್ಥ್ಯದ ಕಾರ್ಯವನ್ನೇ ಮಾಡಿದನು. ಅತ್ರಿಯು ಬ್ರಾಹ್ಮಣನು; ಅಗ್ನಿಹೋತ್ರಿಯು; ಗಾಯತ್ರೀಜಪದಲ್ಲಿಯೇ ನಿರತನಾಗಿದ್ದನು. ಕೃಷ್ಣಾಜಿನವನ್ನೇ ಉಡುತ್ತಿದ್ದನು. ಕಂದ-ಮೂಲ-ಫಲಗಳನ್ನೇ ತಿನ್ನುತ್ತಿದ್ದನು. ರಾಜರ್ಷಿಯೇ! ಅಂತಹವನು ಎಂತಹ ಅದ್ಭುತವಾದ ಕಾರ್ಯವನ್ನು ಮಾಡಿದನೆಂಬುದನ್ನು ನೀನೇ ಗಮನಿಸು. ಮಾಹಾತ್ಮನಾದ ಅತ್ರಿಯು ಮಾಡಿದ ಕಾರ್ಯವನ್ನು ವಿಸ್ತಾರವಾಗಿ ಹೇಳಿದ್ದೇನೆ. ಆದುದರಿಂದ ನಾನು ಎಲ್ಲರಿಗಿಂತಲೂ ಬ್ರಾಹ್ಮಣನೇ ಶ್ರೇಷ್ಠನೆಂದು ಹೇಳುತ್ತೇನೆ. ಅತ್ರಿಗಿಂತಲೂ ಶ್ರೇಷ್ಠನಾದ ಕ್ಷತ್ರಿಯನಿದ್ದರೆ ಅವನು ಯಾರೆಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಯುಧಿಷ್ಠಿರ! ವಾಯುದೇವನು ಹೀಗೆ ಹೇಳಿದರೂ ಅರ್ಜುನನು ಯಾವ ಮಾತನ್ನೂ ಆಡದೆ ಸುಮ್ಮನಿದ್ದನು. ವಾಯುವು ಪುನಃ ಹೇಳತೊಡಗಿದನು:

"ಅರ್ಜುನ! ಮಹಾತ್ಮನಾದ ಚ್ಯವನನು ಮಾಡಿದ ಮಹಾಕರ್ಮವನ್ನು ಕೇಳು. ಹಿಂದೊಮ್ಮೆ ಚ್ಯವನನು ಅಶ್ವಿನೀದೇವತೆಗಳು ತನಗೆ ಮಾಡಿದ ಉಪಕಾರಕ್ಕಾಗಿ ಇಂದ್ರಾದಿದೇವತೆಗಳೊಡನೆ ಸೋಮಪಾನವನ್ನು ಮಾಡಿಸುವೆನೆಂದು ಪ್ರತಿಜ್ಞೆಮಾಡಿದನು. ಅನಂತರ ಚ್ಯವನನು ಇಂದ್ರನನ್ನು ಸಂಧಿಸಿ ಹೇಳಿದನು:

'ದೇವೈಃ ಸಹಿತಃ ಸೋಮಪಾವಶ್ವಿನೌ ಕುರು'–'ದೇವತೆಗಳಿಂದ ಯುಕ್ತನಾಗಿ ನೀನು ಅಶ್ವಿನೀದೇವತೆಗಳನ್ನೂ ಸೋಮಪಾನಮಾಡುವವರನ್ನಾಗಿ ಮಾಡು.'

ಇಂದ್ರನು ಹೇಳುತ್ತಾನೆ:

ಅಸ್ಮಾಭಿರ್ನಿನ್ದಿತಾವೇತೌ ಭವೇತಾಂ ಸೋಮಪೌ ಕಥಮ್।
ದೇವೈರ್ನ ಸಮ್ಮಿತಾವೇತೌ ತಸ್ಮಾನ್ಮೈವಂ ವದಸ್ವ ನಃ ॥೧೭॥

"ವಿಪ್ರಶ್ರೇಷ್ಠನೇ! ಈ ಅಶ್ವಿನೀಕುಮಾರರು (ಅವರ ಕರ್ಮಗಳಿಂದ) ನಮ್ಮ ನಿಂದೆಗೆ ಪಾತ್ರರಾಗಿದ್ದಾರೆ. ಅಂತಹವರು ಸೋಮಪರು ಹೇಗಾಗುತ್ತಾರೆ? ಇವರು ದೇವತೆಗಳೊಡನೆ ಸಮಾನರೀತಿಯಲ್ಲಿ ಸೇರಲಾರರು. ಆದುದರಿಂದ ಇಂತಹ ವಿಷಯವನ್ನು ನಮಗೆ ಹೇಳಬೇಡ.

ಅಶ್ವಿಭ್ಯಾಂ ಸಹ ನೇಚ್ಛಾಮಃ ಸೋಮಂ ಪಾತುಂ ಮಹಾವ್ರತ।
ಯದನ್ಯದ್ವಕ್ಷ್ಯಸೇ ವಿಪ್ರ ತತ್ಕರಿಷ್ಯಾಮಿ ತೇ ವಚಃ ॥೧೮॥

ಮಹಾವ್ರತನೇ! ಅಶ್ವಿನೀದೇವತೆಗಳ ಜೊತೆಯಲ್ಲಿ ಸೋಮಪಾನ ಮಾಡಲು ನಾವು ಇಚ್ಛಿಪಡುವುದಿಲ್ಲ. ಬೇರೇನಾದರೂ ನೀನು ಹೇಳಿದರೆ ಆ ನಿನ್ನ ಮಾತನ್ನು ನಡೆಸಿಕೊಡುತ್ತೇನೆ."

ಚ್ಯವನನು ಹೇಳುತ್ತಾನೆ:

ಪಿಬೇತಾಮಶ್ವಿನೌ ಸೋಮಂ ಭವದ್ಭಿಃ ಸಹಿತಾವಿಮೌ।
ಉಭಾವೇತಾವಪಿ ಸುರೌ ಸೂರ್ಯಪುತ್ರೌ ಸುರೇಶ್ವರ ॥೧೯॥

"ಸುರೇಶ್ವರನೇ! ನಿಮ್ಮ ಜೊತೆಯಲ್ಲಿಯೇ ಈ ಅಶ್ವಿನೀಕುಮಾರರು ಸೋಮರಸವನ್ನು ಪಾನಮಾಡಲಿ. ಸೂರ್ಯನ ಮಕ್ಕಳಾದ ಇವರಿಬ್ಬರೂ ದೇವತೆಗಳೇ ಆಗಿದ್ದಾರೆ.

ಕ್ರಿಯತಾಂ ಮದ್ವಚೋ ದೇವಾ ಯಥಾ ವೈ ಸಮುದಾಹೃತಮ್।
ಏತದ್ವಃ ಕುರ್ವತಾಂ ಶ್ರೇಯೋ ಭವೇನ್ನೈತದಕುರ್ವತಾಮ್ ॥೨೦॥

ದೇವತೆಗಳೇ! ನಾನು ಹೇಗೆ ಹೇಳಿರುವೆನೋ ಅದೇ ರೀತಿಯಲ್ಲಿ ನೀವು ನಡೆದುಕೊಳ್ಳಿರಿ. ಹೀಗೆ ಮಾಡುವುದರಿಂದ ನಿಮಗೆ ಶ್ರೇಯಸ್ಸುಂಟಾಗುತ್ತದೆ. ನಾನು ಹೇಳಿದಂತೆ ನಡೆದುಕೊಳ್ಳದಿದ್ದರೆ ನಿಮಗೆ ಶ್ರೇಯಸ್ಸುಂಟಾಗುವುದಿಲ್ಲ. (ಕೇಡುಂಟಾಗುತ್ತದೆ.)"

ಇಂದ್ರನು ಹೇಳುತ್ತಾನೆ:

ಅಶ್విಭ್ಯಾಂ ಸಹ ಸೋಮಂ ವೈ ನ ಪಾಸ್ಯಾಮಿ ದ್ವಿಜೋತ್ತಮ।
ಪಿಬನ್ತ್ವನ್ಯೇ ಯಥಾಕಾಮಂ ನಾಹಂ ಪಾತುಮಿಹೋತ್ಸಹೇ ॥೨೧॥

"ದ್ವಿಜಶ್ರೇಷ್ಠನೇ! ಅಶ್ವಿನೀದೇವತೆಗಳೊಡನೆ ನಾನು ಖಂಡಿತವಾಗಿಯೂ ಸೋಮಪಾನಮಾಡುವುದಿಲ್ಲ. ಇತರ ದೇವತೆಗಳಿಗೆ ಅವರೊಡನೆ ಸೋಮಪಾನಮಾಡುವ ಇಚ್ಛೆಯಿದ್ದರೆ ಹಾಗೆಯೇ ಮಾಡಲಿ. ಆದರೆ ನಾನು ಮಾತ್ರ ಅವರೊಡನೆ ಸೋಮಪಾನಮಾಡಲಾರೆನು."

ಚ್ಯವನನು ಹೇಳುತ್ತಾನೆ:

ನ ಚೇತ್ಕರಿಷ್ಯಸಿ ವಚೋ ಮಯೋಕ್ತಂ ಬಲಸೂದನ।
ಮಯಾ ಪ್ರಮಥಿತಃ ಸದ್ಯಃ ಸೋಮಂ ಪಿಬಸಿ ವೈ ಮಖೇ ॥೨೨॥

"ಬಲಸೂದನನೇ! ನನ್ನ ಮಾತಿನಂತೆ ನೀನೇನಾದರೂ ಅಶ್ವಿನೀ ದೇವತೆಗಳೊಡನೆ ಸೋಮಪಾನಮಾಡದಿದ್ದರೆ ಯಜ್ಞದಲ್ಲಿ ನನ್ನಿಂದ ಪೀಡಿಸಲ್ಪಟ್ಟು ಒಡನೆಯೇ ಅಶ್ವಿನೀದೇವತೆಗಳೊಡನೆ ಸೋಮಪಾನ ಮಾಡು."

ಅರ್ಜುನ! ಚ್ಯವನನು ಅಶ್ವಿನೀದೇವತೆಗಳ ಹಿತಾರ್ಥವಾಗಿ ಒಡನೆಯೇ ಯಜ್ಞಕರ್ಮವನ್ನು ಆರಂಭಿಸಿಯೇ ಬಿಟ್ಟನು. ಚ್ಯವನನ ಮಂತ್ರ ಬಲದಿಂದ ಎಲ್ಲ ದೇವತೆಗಳೂ ಅಭಿಭೂತರಾದರು. (ಬಲಾತ್ಕಾರ ಪೂರ್ವಕವಾಗಿ ಅವರು ಅಶ್ವಿನೀದೇವತೆಗಳೊಡನೆ ಸೋಮರಸವನ್ನು ಕುಡಿಯಲೇಬೇಕಾಯಿತು.) ಇಂತಹ ಯಜ್ಞಕರ್ಮವನ್ನು ಪ್ರಾರಂಭಿಸಿದುದನ್ನು ಕಂಡು ಕ್ರೋಧಮೂರ್ಛಿತನಾದ ಇಂದ್ರನು ದೊಡ್ಡದಾದೊಂದು ಪರ್ವತವನ್ನೆತ್ತಿಕೊಂಡು ಚ್ಯವನನ ಕಡೆಗೆ ಧಾವಿಸಿದನು. ಕೋಪದಿಂದ ಸಮಾಕುಲವಾದ ಕಣ್ಣುಗಳಿಂದ ಕೂಡಿದ್ದ ಪೂಜ್ಯನಾದ ಇಂದ್ರನು ವಜ್ರಾಯುಧದಿಂದಲೂ ಚ್ಯವನನನ್ನು ಪ್ರಹರಿಸಲು ಮುನ್ನುಗ್ಗಿದನು. ಇಂದ್ರನು ಶೈಲವನ್ನೂ ವಜ್ರಾಯುಧವನ್ನೂ ಹಿಡಿದು ತನ್ನ ಮೇಲೆ ಬೀಳುತ್ತಿರುವುದನ್ನು ನೋಡಿದೊಡನೆಯೇ, ತಪೋನಿಧಿಯಾದ ಚ್ಯವನನು ನೀರನ್ನು ಚುಮುಕಿಸಿ ವಜ್ರಾಯುಧದಿಂದಲೂ ಮತ್ತು ಪರ್ವತದಿಂದಲೂ ಯುಕ್ತನಾಗಿದ್ದ ಇಂದ್ರನನ್ನು ಸ್ತಂಭನಗೊಳಿಸಿದನು. ಅನಂತರ ಮಹಾಮುನಿಯಾದ

ಚ್ಯವನನು ಅಗ್ನಿಯಲ್ಲಿ ಆಹುತಿಯೊಂದನ್ನು ಅರ್ಪಿಸಿ ಮಹಾಘೋರ ನಾದ ಅಗಲವಾಗಿ ಬಾಯ್ತೆರೆದಿದ್ದ ಮದನೆಂಬ ಹೆಸರಿನ ಇಂದ್ರಶತ್ರುವನ್ನು ಸೃಷ್ಟಿಸಿದನು. ಆ ಮದರಾಕ್ಷಸನ ದವಡೆಯ ಕೆಳಭಾಗವು ಭೂಮಿಯನ್ನೂ, ಮೇಲ್ಭಾಗವು ಆಕಾಶವನ್ನೂ ಸ್ಪರ್ಶಿಸಿದ್ದಿತು. ಅವನ ಆ ಬಾಯಲ್ಲಿ ಸಾವಿರ ಹಲ್ಲುಗಳಿದ್ದು ಹಲ್ಲುಗಳ ಸಾಲು ನೂರು ಯೋಜನಗಳಷ್ಟಿದ್ದಿತು. ಮಹಾಭಯಂಕರವಾಗಿ ಕಾಣುತ್ತಿದ್ದ ಅವನ ಕೋರೆದವಡೆಗಳು ಇನ್ನೂರು ಯೋಜನಗಳಷ್ಟು ಉದ್ದವಾಗಿದ್ದುವು. ಮಹಾಸಮುದ್ರದಲ್ಲಿ ಮೀನುಗಳು ತಿಮಿಯ ಬಾಯನ್ನು ಹೋಗುವಂತೆ ಇಂದ್ರಸಹಿತರಾದ ಎಲ್ಲ ದೇವತೆಗಳೂ ಮದರಾಕ್ಷಸನ ಗಂಟಲಿನಲ್ಲಿದ್ದರು. ಬಳಿಕ ಮದರಾಕ್ಷಸನ ಬಾಯಲ್ಲಿ ಸಿಕ್ಕಿಹಾಕಿಕೊಂಡಿದ್ದ ದೇವತೆಗಳು ಪರಸ್ಪರವಾಗಿ ಸಮಾಲೋಚಿಸಿ ನಿರ್ಣಯಕ್ಕೆ ಬಂದು ಎಲ್ಲರೂ ಸೇರಿ ಇಂದ್ರನಿಗೆ ಹೇಳಿದರು:

"ಮಹೇಂದ್ರ! ಬ್ರಾಹ್ಮಣನಾದ ಈ ಚ್ಯವನನಿಗೆ ನಮಸ್ಕರಿಸು. ನಾವು ನಿಶ್ಚಿಂತರಾಗಿ ಅಶ್ವಿನೀದೇವತೆಗಳೊಡನೆ ಸೋಮರಸವನ್ನು ಪಾನ ಮಾಡೋಣ."

ಇಂದ್ರನು ದೇವತೆಗಳು ಹೇಳಿದಂತೆ ಚ್ಯವನನಿಗೆ ನಮಸ್ಕರಿಸಿ, ಅವನು ಹೇಳಿದಂತೆ ಅಶ್ವಿನೀದೇವತೆಗಳೊಡನೆ ಸೋಮರಸವನ್ನು ಪಾನಮಾಡಿದನು. ಹೀಗೆ ಚ್ಯವನನು ಅಶ್ವಿನೀದೇವತೆಗಳನ್ನು ಸೋಮಪರನ್ನಾಗಿ ಮಾಡಿದನು ಮತ್ತು ತಾನು ಪ್ರಾರಂಭಿಸಿದ್ದ ಯಜ್ಞವನ್ನು ಸಮಾಪ್ತಿಗೊಳಿಸಿದನು. ಬಳಿಕ ವೀರ್ಯವಂತನಾದ ಚ್ಯವನನೇ ತಾನು ಸೃಷ್ಟಿಸಿದ್ದ ಮದರಾಕ್ಷಸನನ್ನು ಜೂಜು, ಬೇಟೆ, ಮದಿರೆ ಮತ್ತು ಸ್ತ್ರೀಲಂಪಟತ್ವ– ಇವುಗಳಲ್ಲಿ ಹಂಚಿಬಿಟ್ಟನು.

ಏತೈರ್ದೋಷೈರ್ನರಾ ರಾಜನ್ಕ್ಷಯಂ ಯಾನ್ತಿ ನ ಸಂಶಯಃ ।
ತಸ್ಮಾದೇತಾನ್ನರೋ ನಿತ್ಯಂ ದೂರತಃ ಪರಿವರ್ಜಯೇತ್ ॥೩೪॥

ಜೂಜು, ಬೇಟೆ, ಮದ್ಯಪಾನ, ಸ್ತ್ರೀಲಂಪಟತ್ವ–ಇವುಗಳಲ್ಲಿ ಆಸಕ್ತರಾದ ಮನುಷ್ಯರು ಖಂಡಿತವಾಗಿಯೂ ನಾಶಹೊಂದುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಈ ನಾಲ್ಕು ದೋಷಗಳನ್ನೂ ಮನುಷ್ಯನು ದೂರದಿಂದಲೇ ತ್ಯಾಗಮಾಡಬೇಕು.

ಅರ್ಜುನ! ನಿನಗೆ ಬ್ರಾಹ್ಮಣನಾದ ಚ್ಯವನನ ಮಹಾಕಾರ್ಯವನ್ನೂ ಹೇಳಿದ್ದೇನೆ. ಈ ಕಾರಣಗಳಿಂದಲೇ ನಾನು ಬ್ರಾಹ್ಮಣರು ಎಲ್ಲರಿಗಿಂತಲೂ ಶ್ರೇಷ್ಠರೆಂದು ಹೇಳುತ್ತಿದ್ದೇನೆ. ಬ್ರಾಹ್ಮಣನಾದ ಚ್ಯವನನಿಗಿಂತಲೂ ಶ್ರೇಷ್ಠನಾದ ಕ್ಷತ್ರಿಯನು ಯಾವನಾದರೂ ಇದ್ದರೆ ಹೇಳು."

೧೫೬ನೆಯ ಅಧ್ಯಾಯವು ಮುಗಿಯಿತು.

೧೫೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕಪರೆಂಬ ದಾನವರು ಸ್ವರ್ಗವನ್ನು ಆಕ್ರಮಿಸಿದುದು:ಬ್ರಾಹ್ಮಣರು ಕಪದಾನವರನ್ನು ಭಸ್ಮಮಾಡಿದುದು: ವಾಯು ಮತ್ತು ಕಾರ್ತವೀರ್ಯಾರ್ಜುನರ ಸಂವಾದದ ಉಪಸಂಹಾರ

ಭೀಷ್ಮನು ಹೇಳುತ್ತಾನೆ:

ತೂಷ್ಣೀಮಾಸೀದರ್ಜುನಸ್ತು ಪವನಸ್ತ್ವಬ್ರವೀತ್ಪುನಃ ।
ಶೃಣು ಮೇ ಬ್ರಾಹ್ಮಣೇಷ್ವೇವ ಮುಖ್ಯಂ ಕರ್ಮ ಜನಾಧಿಪ ॥೧॥

"ಯುಧಿಷ್ಠಿರ! ಚ್ಯವನನಿಗಿಂತಲೂ ಶ್ರೇಷ್ಠನಾದ ಕ್ಷತ್ರಿಯನು ಯಾವನಿರುವನೆಂಬ ವಾಯುವಿನ ಈ ಪ್ರಶ್ನೆಗೂ ಕಾರ್ತವೀರ್ಯನು ಉತ್ತರನೀಡಲಿಲ್ಲ. ಸುಮ್ಮನಿದ್ದನು. ಪುನಃ ವಾಯುವೇ ಹೇಳಲು ಉಪಕ್ರಮಿಸಿದನು. ಜನಾಧಿಪನೇ! ಬ್ರಾಹ್ಮಣರಲ್ಲಿ ಇನ್ನೂ ಎಂತಹ ಪರಮಾದ್ಭುತವಾದ ಕರ್ಮವಿರುವುದೆಂಬುದನ್ನು ಹೇಳುವೆನು; ಕೇಳು.

ಚ್ಯವನನು ಮದನೆಂಬ ರಾಕ್ಷಸನನ್ನು ಸೃಷ್ಟಿಸಿದ ಸಮಯದಲ್ಲಿ ಒಂದು ವೃತ್ತಾಂತವು ನಡೆಯಿತು. ಯಾವಾಗ ಇಂದ್ರಾದಿದೇವತೆಗಳು ಮದರಾಕ್ಷಸನ ಬಾಯಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟರೋ–ಆಗ ಚ್ಯವನನು ಅವರ ಅಧಿಕಾರದಲ್ಲಿದ್ದ ಭೂಮಂಡಲವನ್ನು ಸ್ವಾಧೀನಪಡಿಸಿಕೊಂಡನು. ಅದೇ ಸಮಯದಲ್ಲಿಯೇ ಕಪರೆಂಬ ದಾನವರು ಸ್ವರ್ಗಲೋಕವನ್ನೂ ಆಕ್ರಮಿಸಿದರು. ದೇವತೆಗಳು ಉಭಯಭ್ರಷ್ಟರಾದರು. ಚ್ಯವನನು ಭೂಲೋಕವನ್ನೂ–ಕಪರು ಸ್ವರ್ಗಲೋಕವನ್ನೂ ಅಪಹರಿಸಿದುದಕ್ಕಾಗಿ

ದೇವತೆಗಳು ಬಹಳ ದುಃಖಿತರಾದರು. ಶೋಕಾರ್ತರಾಗಿದ್ದ ಅವರು ಬ್ರಹ್ಮನ ಬಳಿಗೆ ಹೋಗಿ ಶರಣಾಗತರಾಗಿ ಹೇಳಿದರು:

ಮದಾಸ್ಯವ್ಯತಿಷಕ್ತಾನಾಮಸ್ಮಾಕಂ ಲೋಕಪೂಜಿತ |
ಚ್ಯವನೇನ ಹೃತಾ ಭೂಮಿಃ ಕಪೈಶ್ಚೈವ ದಿವಂ ಪ್ರಭೋ ||೪||

'ಲೋಕಪೂಜಿತನೇ! ಪ್ರಭುವೇ! ನಾವು ಮದರಾಕ್ಷಸನ ಮುಖದಲ್ಲಿ ಸಿಕ್ಕಿಬಿದ್ದ ಸಮಯದಲ್ಲಿ ಚ್ಯವನನು ನಮ್ಮ ಸ್ವಾಧೀನದಲ್ಲಿದ್ದ ಭೂಮಂಡಲವನ್ನು ಅಪಹರಿಸಿದನು. ಅದೇ ಸಮಯದಲ್ಲಿ ಕಪರೆಂಬ ದಾನವರು ಸ್ವರ್ಗವನ್ನೂ ಆಕ್ರಮಿಸಿಬಿಟ್ಟರು'.

ದೇವತೆಗಳನ್ನು ಸಂತೈಸುತ್ತಾ ಬ್ರಹ್ಮನು ಹೇಳುತ್ತಾನೆ:

ಗಚ್ಛಧ್ವಂ ಶರಣಂ ವಿಪ್ರಾನಾಶು ಸೇಂದ್ರಾ ದಿವೌಕಸಃ |
ಪ್ರಸಾದ್ಯ ತಾನುಭೌ ಲೋಕಾವವಾಪ್ಸ್ಯಥ ಯಥಾ ಪುರಾ ||೫||

"ಇಂದ್ರಪ್ರಮುಖರಾದ ದೇವತೆಗಳೇ! ನೀವೀಗಲೇ ಬ್ರಾಹ್ಮಣರನ್ನು ಶರಣುಹೊಂದಿರಿ. ಅವರನ್ನು ಪ್ರಸನ್ನಗೊಳಿಸಿದರೆ ಹಿಂದಿನಂತೆಯೇ ಎರಡುಲೋಕಗಳನ್ನೂ ಪುನಃ ಪಡೆದುಕೊಳ್ಳುವಿರಿ."

ಬ್ರಹ್ಮನ ಆಜ್ಞೆಯಂತೆ ದೇವತೆಗಳು ಬ್ರಾಹ್ಮಣರನ್ನು ಶರಣುಹೊಂದಿದರು. ಪ್ರಸನ್ನರಾದ ಬ್ರಾಹ್ಮಣರು ಪ್ರಶ್ನಿಸಿದರು: 'ಕಾನ್ ಜಯಾಮಹೇ' 'ದೇವತೆಗಳೇ! ನಿಮ್ಮ ಸಲುವಾಗಿ ನಾವು ಯಾರನ್ನು ಜಯಿಸಬೇಕು?'

ದೇವತೆಗಳು ಹೇಳಿದರು: 'ಜಯತೇಹ ಕಪಾನ್' - 'ಕಪದಾನವರನ್ನು ಜಯಿಸಿರಿ'. ಬ್ರಾಹ್ಮಣರು ಹೇಳಿದರು: 'ಭೂಗತಾನ್ ಹಿ ವಿಜೇತಾರೋ ವಯಂ'-'ಭೂಗತರಾದ ರಾಕ್ಷಸರನ್ನು ನಾವು ಜಯಿಸುತ್ತೇವೆ.' (ಕಪರನ್ನು ಭೂಮಿಗೆ ಸೆಳೆದುತಂದು ಇಲ್ಲಿ ಅವರನ್ನು ಪರಾಜಯಗೊಳಿಸುತ್ತೇವೆ.)– ಎಂದು ಹೇಳಿ ಬ್ರಾಹ್ಮಣರು ಕಪರನ್ನು ವಿನಾಶಗೊಳಿಸುವ ಕರ್ಮವನ್ನು ಪ್ರಾರಂಭಿಸಿದರು.

ಬ್ರಾಹ್ಮಣರು ತಮ್ಮನ್ನು ಪರಾಜಯಗೊಳಿಸಲು ಯಜ್ಞಕರ್ಮವನ್ನು

ಮಾಡುತ್ತಿದ್ದಾರೆಂಬುದನ್ನು ತಿಳಿದು ಕಪರು 'ಧನೀ' ಎಂಬ ಹೆಸರಿನ ದೂತನನ್ನು ಬ್ರಾಹ್ಮಣರ ಬಳಿಗೆ ಕಳುಹಿಸಿಕೊಟ್ಟರು. ಧನಿಯು ಬ್ರಾಹ್ಮಣರ ಬಳಿಗೆ ಬಂದು ಕಪರು ಹೇಳಿಕಳುಹಿಸಿದ್ದ ಮಾತುಗಳನ್ನು ಯಥಾವತ್ತಾಗಿ ಹೇಳಿದನು:

ಭವದ್ಭಿಃ ಸದೃಶಾಃ ಸರ್ವೇ ಕಪಾಃ ಕಿಮಿಹ ವರ್ತತೇ ।
ಸರ್ವೇ ವೇದವಿದಃ ಪ್ರಾಜ್ಞಾಃ ಸರ್ವೇ ಚ ಕ್ರತುಯಾಜಿನಃ ॥೯॥

ಸರ್ವೇ ಸತ್ಯವ್ರತಾಶ್ಚೈವ ಸರ್ವೇ ತುಲ್ಯಾ ಮಹರ್ಷಿಭಿಃ ।
ಶ್ರೀಶ್ಚೈವ ರಮತೇ ತೇಷು ಧಾರಯನ್ತಿ ಶ್ರಿಯಂ ಚ ತೇ ॥೧೦॥

"ಬ್ರಾಹ್ಮಣಶ್ರೇಷ್ಠರೇ! ಸಮಸ್ತಕಪದಾನವರೂ ನಿಮಗೆ ಸಮಾನರೇ ಆಗಿದ್ದಾರೆ. ಅವರಿಗೆ ಕೇಡಾಗುವ ಯಾವ ಕರ್ಮವನ್ನು ನೀವೀಗ ಮಾಡುತ್ತಿರುವಿರಿ? ಕಪರೆಲ್ಲರೂ ವೇದಗಳನ್ನು ತಿಳಿದವರು. ಪ್ರಾಜ್ಞರು. ಯಜ್ಞಾನುಷ್ಠಾನಗಳನ್ನು ಮಾಡುವವರು. ಸತ್ಯಪ್ರತಿಜ್ಞರು. ಎಲ್ಲರೂ ಮಹರ್ಷಿಸದೃಶರು. ಅವರ ಮನೆಗಳಲ್ಲಿ ಲಕ್ಷ್ಮಿಯು ಯಾವಾಗಲೂ ರಮಿಸುತ್ತಿರುತ್ತಾಳೆ. ಶ್ರೀಯನ್ನು ಅವರು ಧಾರಣೆಮಾಡಿದ್ದಾರೆ.

ವೃಥಾದಾರಾನ್ನ ಗಚ್ಛನ್ತಿ ವೃಥಾಮಾಂಸಂ ನ ಭುಞ್ಜತೇ ।
ದೀಪ್ತಮಗ್ನಿಂ ಜುಹ್ವತೇ ಚ ಗುರೂಣಾಂ ವಚನೇ ಸ್ಥಿತಾಃ ॥೧೧॥

ಋತುಸಮಯವಲ್ಲದೇ ಬೇರೆಯ ಸಮಯಗಳಲ್ಲಿ ವ್ಯರ್ಥವಾಗಿ ಅವರು ಪತ್ನಿಯರೊಡನೆ ಸಮಾಗಮಮಾಡುವುದಿಲ್ಲ. ನಿಷ್ಕಾರಣವಾಗಿ ಮಾಂಸವನ್ನು ಭಕ್ಷಿಸುವುದಿಲ್ಲ. ಪ್ರಜ್ವಲಿಸುವ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಗುರುಜನರ ಆಜ್ಞೆಯನ್ನು ಪರಿಪಾಲಿಸುತ್ತಾರೆ.

ಸರ್ವೇ ಚ ನಿಯತಾತ್ಮಾನೋ ಬಾಲಾನಾಂ ಸಂವಿಭಾಗಿನಃ ।
ಉಪೇತ್ಯ ಶನಕೈರ್ಯಾನ್ತಿ ನ ಸೇವನ್ತಿ ರಜಸ್ವಲಾಮ್ ।
ಸ್ವರ್ಗತಿಂ ಚೈವ ಗಚ್ಛನ್ತಿ ತಥೈವ ಶುಭಕರ್ಮಿಣಃ ॥೧೨॥

ಕಪದಾನವರೆಲ್ಲರೂ ತಮ್ಮ ಮನಸ್ಸನ್ನು ಸಂಯಮದಲ್ಲಿಟ್ಟುಕೊಂಡಿರುತ್ತಾರೆ. ಬಾಲಕರಿಗೆ ಯಥಾಯೋಗ್ಯವಾಗಿ (ಐಶ್ವರ್ಯವನ್ನು) ವಿಭಾಗ

ಮಾಡಿಕೊಡುತ್ತಾರೆ. ಯಾರ ಬಳಿಗಾದರೂ ಹೋಗಬೇಕಾದರೆ ಗಂಭೀರವಾಗಿ (ವಿನಯವಾಗಿ) ಹೋಗುತ್ತಾರೆ. ಯಾವಾಗಲೂ ರಜಸ್ವಲೆಯಾದವಳೊಡನೆ ಸಮಾಗಮಮಾಡುವುದಿಲ್ಲ. ಶುಭಕರ್ಮಗಳನ್ನು ಮಾಡುತ್ತಾ ಸ್ವರ್ಗಲೋಕಕ್ಕೆ ಹೋಗುತ್ತಾರೆ.

ಅಭುಕ್ತವತ್ಸು ನಾಶ್ನಂತಿ ಗರ್ಭಿಣೀವೃದ್ಧಕಾದಿಷು ।
ಪೂರ್ವಾಹ್ಣೇಷು ನ ದೀವ್ಯಂತಿ ದಿವಾ ಚೈವ ನ ಶೇರತೇ ॥೧೩॥

ಗರ್ಭಿಣಿಯರಾದ ಸ್ತ್ರೀಯರೂ ಮತ್ತು ವೃದ್ಧರೂ ಊಟಮಾಡುವ ಮೊದಲು ಊಟಮಾಡುವುದಿಲ್ಲ. ಪೂರ್ವಾಹ್ಣದಲ್ಲಿ ಆಟವಾಡುವುದಿಲ್ಲ. ಹಗಲಿನಲ್ಲಿ ನಿದ್ರಿಸುವುದಿಲ್ಲ.

ಏತೈಶ್ಚಾನ್ಯೈಶ್ಚ ಬಹುಭಿರ್ಗುಣೈರ್ಯುಕ್ತಾನ್ಕಥಂ ಕಪಾನ್ ।
ವಿಜೇಷ್ಯಥ ನಿವರ್ತಧ್ವಂ ನಿವೃತ್ತಾನಾಂ ಸುಖಂ ಹಿ ವಃ ॥೧೪॥

ಇವಲ್ಲದೇ ಇನ್ನೂ ಅನೇಕಸದ್ಗುಣಗಳಿಂದ ಸಂಪನ್ನರಾಗಿರುವ ಕಪದಾನವರನ್ನು ನೀವು ಹೇಗೆ ಜಯಿಸುವಿರಿ? ನಿಷ್ಪ್ರಯೋಜಕವಾದ ಈ ಕಾರ್ಯದಿಂದ ಹಿಂದಿರುಗಿರಿ. ಹಿಂದಿರುಗುವುದರಿಂದಲೇ ನಿಮಗೆ ಸುಖವುಂಟು."

ಬ್ರಾಹ್ಮಣರು ಹೇಳುತ್ತಾರೆ:

ಕಪಾನ್ವಯಂ ವಿಜೇಷ್ಯಾಮೋ ಯೇ ದೇವಾಸ್ತೇ ವಯಂ ಸ್ಮೃತಾಃ ।
ತಸ್ಮಾದ್ವಧ್ಯಾಃ ಕಪಾಸ್ಮಾಕಂ ಧನಿನ್ಯಾಹಿ ಯಥಾಗತಮ್ ॥೧೫॥

"ನಾವು ಕಪರನ್ನು ಜಯಿಸುತ್ತೇವೆ. ಯಾರನ್ನು ದೇವತೆಗಳೆಂದು ಕರೆಯುವರೋ ಅಂತಹ ದೇವತೆಗಳು ನಾವೇ ಆಗಿದ್ದೇವೆ. (ದೇವತೆಗಳು ನಮ್ಮವರೇ ಆಗಿದ್ದಾರೆ.) ಆದುದರಿಂದ ದೇವದ್ರೋಹಿಗಳಾದ ಕಪರು ನಮ್ಮಿಂದ ವಧಿಸಲ್ಪಡತಕ್ಕವರಾಗಿದ್ದಾರೆ. ಧನಿಯೇ! ನೀನು ಬಂದ ಮಾರ್ಗವನ್ನು ಹಿಡಿದು ಹಿಂದಿರುಗು." ಬ್ರಾಹ್ಮಣರ ಆ ಮಾತುಗಳನ್ನು ಕೇಳಿ ಧನಿಯು ಕಪರ ಬಳಿಗೆ ಹೋಗಿ 'ನ ವೋ ವಿಪ್ರಾಃ ಪ್ರಿಯಂಕರಾಃ'-'ನಿಮಗೆ ಬ್ರಾಹ್ಮಣರು ಪ್ರಿಯವನ್ನುಂಟುಮಾಡುವವರಾಗಿಲ್ಲ'– ಎಂದು ಹೇಳಿದನು.

ಧನಿಯಿಂದ ಆ ಮಾತನ್ನು ಕೇಳಿದೊಡನೆಯೇ ಕಪರು ಶಸ್ತ್ರಾಸ್ತ್ರಗಳನ್ನು ಹಿಡಿದು ಬ್ರಾಹ್ಮಣರನ್ನು ಆಕ್ರಮಿಸಿದರು. ಎತ್ತರವಾದ ಧ್ವಜದಂಡಗಳನ್ನು ಹಿಡಿದಿದ್ದ ಕಪರನ್ನು ನೋಡಿ ಎಲ್ಲ ಬ್ರಾಹ್ಮಣರೂ ಕಪರ ಪ್ರಾಣಗಳನ್ನು ನಾಶಗೊಳಿಸುವ ಪ್ರಜ್ವಲಿಸುತ್ತಿದ್ದ ಅಗ್ನಿಗಳನ್ನು ಕಪರ ಮೇಲೆ ವಿಸರ್ಜಿಸಿದರು. ಬ್ರಾಹ್ಮಣರಿಂದ ಸೃಷ್ಟಿಸಲ್ಪಟ್ಟ ಸನಾತನವಾದ ಅಗ್ನಿಗಳು ಕಪರೆಲ್ಲರನ್ನೂ ಸಂಹರಿಸಿ ಆಕಾಶದಲ್ಲಿರುವ ಮೋಡಗಳಂತೆ ರಾರಾಜಿಸಿದುವು. ಇತ್ತಲಾಗಿ ದೇವತೆಗಳೂ ಸಂಘಟಿತರಾಗಿ ಅದೇ ದಾನವರನ್ನು ಸಂಹರಿಸಿದರು. ದೇವತೆಗಳಿಗೆ ಬ್ರಾಹ್ಮಣರಿಂದ ಕಪರು ನಾಶರಾದರೆಂಬ ವಿಷಯವು ತಿಳಿದಿರಲಿಲ್ಲ. ಮಹಾತೇಜಸ್ವಿಗಳಾದ ನಾರದರು ಆಗಮಿಸಿ ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರ ತೇಜಸ್ಸಿನಿಂದಲೇ ಕಪರು ಹತರಾದರೆಂಬ ವಿಷಯವನ್ನು ಅವರಿಗೆ ತಿಳಿಸಿದರು. ನಾರದರ ಮಾತನ್ನು ಕೇಳಿ ಎಲ್ಲ ದೇವತೆಗಳೂ ಸುಪ್ರೀತರಾಗಿ ಯಶೋವಂತರಾದ ಬ್ರಾಹ್ಮಣರನ್ನು ಬಹಳವಾಗಿ ಪ್ರಶಂಸಿಸಿದರು. ಅನಂತರ ದೇವತೆಗಳ ವೀರ್ಯ-ಪರಾಕ್ರಮಗಳು ವೃದ್ಧಿಹೊಂದತೊಡಗಿದುವು. ದೇವತೆಗಳು ಮೂರು ಲೋಕಗಳಲ್ಲಿಯೂ ಸಮ್ಮಾನಿತರಾಗಿ ಅಮರತ್ವವನ್ನೂ ಪಡೆದುಕೊಂಡರು."

ಮಹಾಬಾಹುವೇ! ಯುಧಿಷ್ಠಿರ! ವಾಯುದೇವನು ಹೀಗೆ ಹೇಳಿದ ನಂತರ ಕಾರ್ತವೀರ್ಯಾರ್ಜುನನು ವಾಯುವನ್ನು ಪುರಸ್ಕರಿಸುತ್ತಾ ಹೀಗೆ ಹೇಳಿದನು:

ಜೀವಾಮ್ಯಹಂ ಬ್ರಾಹ್ಮಣಾರ್ಥಂ ಸರ್ವಥಾ ಸತತಂ ಪ್ರಭೋ।
ಬ್ರಹ್ಮಣ್ಯೋ ಬ್ರಾಹ್ಮಣೇಭ್ಯಶ್ಚ ಪ್ರಣಮಾಮಿ ಚ ನಿತ್ಯಶಃ ॥೨೪॥

"ವಾಯುದೇವನೇ! ನಾನು ಸರ್ವಪ್ರಕಾರಗಳಿಂದಲೂ ಸತತವಾಗಿ ಬ್ರಾಹ್ಮಣರ ಸಲುವಾಗಿಯೇ ಜೀವಿಸುತ್ತೇನೆ. ಬ್ರಾಹ್ಮಣರ ಭಕ್ತನಾಗುತ್ತೇನೆ. ಬ್ರಾಹ್ಮಣರಿಗೆ ಅನುದಿನವೂ ನಮಸ್ಕರಿಸುತ್ತೇನೆ.

ದತ್ತಾತ್ರೇಯಪ್ರಸಾದಾಚ್ಚ ಮಯಾ ಪ್ರಾಪ್ತಮಿದಂ ಬಲಮ್।
ಲೋಕೇ ಚ ಪರಮಾ ಕೀರ್ತಿರ್ಧರ್ಮಶ್ಚಾಚರಿತೋ ಮಹಾನ್ ॥೨೫॥

ವಿಪ್ರಶ್ರೇಷ್ಠನಾದ ದತ್ತಾತ್ರೇಯನ ಅನುಗ್ರಹದಿಂದಲೇ ನಾನು ಈ ಮಹಾಬಲವನ್ನೂ ಲೋಕದಲ್ಲಿ ಶ್ರೇಷ್ಠವಾದ ಕೀರ್ತಿಯನ್ನೂ ಪಡೆದಿರುತ್ತೇನೆ. ಸದ್ಧರ್ಮಗಳನ್ನು ಆಚರಿಸುತ್ತಿದ್ದೇನೆ.

ವಾಯುದೇವನೇ! ಸಮಗ್ರವಾಗಿ ಯಥಾವತ್ತಾಗಿ ನೀನು ಹೇಳಿದ ಬ್ರಾಹ್ಮಣಕರ್ಮಗಳನ್ನು ವಿನಮ್ರಭಾವದಿಂದ ಕೇಳಿದ್ದೇನೆ."

ವಾಯುವು ಹೇಳುತ್ತಾನೆ:

"ಅರ್ಜುನ! ಕ್ಷತ್ರಧರ್ಮಾನುಸಾರವಾಗಿ ನೀನು ಬ್ರಾಹ್ಮಣರನ್ನು ಪರಿಪಾಲಿಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸು. ಮುಂದೆ ಭೃಗುವಂಶೀಯರಾದ ಬ್ರಾಹ್ಮಣರಿಂದ ಘೋರವಾದ ಭಯವಿದೆ. ಆದರೆ ಅದು ಬಹಳ ಕಾಲಾನಂತರ ಉಂಟಾಗುತ್ತದೆ."

೧೫೭ನೆಯ ಅಧ್ಯಾಯವು ಮುಗಿಯಿತು.

೧೫೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭೀಷ್ಮನಿಂದ ಶ್ರೀಕೃಷ್ಣನ ಮಹಿಮೆಯ ವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಬ್ರಾಹ್ಮಣಾನರ್ಚಸೇ ರಾಜನ್ಸತತಂ ಸಂಶಿತವ್ರತಾನ್ ।
ಕಂ ತು ಕರ್ಮೋದಯಂ ದೃಷ್ಟ್ವಾ ತಾನರ್ಚಸಿ ಜನಾಧಿಪ ॥೧॥

"ಪಿತಾಮಹನೇ! ನೀನು ಯಾವಾಗಲೂ ಕಠೋರವ್ರತನಿಷ್ಠರಾದ ಬ್ರಾಹ್ಮಣರನ್ನು ಸತ್ಕರಿಸುವೆ. ನೀನು ಯಾವ ಫಲೋದಯವನ್ನು ನಿರೀಕ್ಷಿಸಿ ಅವರನ್ನು ಪೂಜಿಸುವೆ?

ಕಾಂ ವಾ ಬ್ರಾಹ್ಮಣಪೂಜಾಯಾಂ ವ್ಯುಷ್ಟಿಂ ದೃಷ್ಟ್ವಾ ಮಹಾವ್ರತ ।
ತಾನರ್ಚಸಿ ಮಹಾಬಾಹೋ ಸರ್ವಮೇತದ್ವದಸ್ವ ಮೇ ॥೨॥

ಮಹಾವ್ರತನೇ! ಮಹಾಬಾಹುವೇ! ಭೀಷ್ಮಪಿತಾಮಹನೇ! ಬ್ರಾಹ್ಮಣರ ಪೂಜೆಯಲ್ಲಿ ಯಾವ ಫಲಸಮೃದ್ಧಿಯನ್ನು ನಿರೀಕ್ಷಿಸಿ ಅವರನ್ನು ಸತ್ಕರಿಸಿವೆ? ಈ ಎಲ್ಲ ವಿಷಯಗಳನ್ನೂ ನನಗೆ ಹೇಳು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಮಹಾಬುದ್ಧಿವಂತನಾದ, ಮಹಾವ್ರತನಾದ, ಬ್ರಾಹ್ಮಣನ ಪೂಜೆಯಿಂದ ಲಭಿಸುವ ಫಲಸಮೃದ್ಧಿಯನ್ನು ಕಂಡಿರುವ ಈ

ಕೇಶವನು ನಿನಗೆ ಬ್ರಾಹ್ಮಣರ ಪೂಜೆಯಿಂದ ಲಭಿಸುವ ಫಲಸಮೃದ್ಧಿಯ ವಿಷಯವಾಗಿ ಹೇಳುತ್ತಾನೆ.

ಬಲಂ ಶ್ರೋತ್ರೇ ವಾಙ್ಮನಶ್ಚಕ್ಷುಷೀ ಚ
ಜ್ಞಾನಂ ತಥಾ ನ ವಿಶುದ್ಧಂ ಮಮಾದ್ಯ ।
ದೇಹನ್ಯಾಸೋ ನಾತಿಚಿರಾನ್ಮತೋ ಮೇ
ನ ಚಾತಿ ತೂರ್ಣಂ ಸವಿತಾದ್ಯ ಯಾತಿ ॥೪॥

ಈಗ ನನ್ನ ಬಲ, ಕಿವಿಗಳು, ಮಾತು, ಮನಸ್ಸು, ಕಣ್ಣುಗಳು, ಜ್ಞಾನ–ಇವು ಶುದ್ಧವಾಗಿಲ್ಲ. ಎಲ್ಲವೂ ಮಸುಕಾಗಿವೆ. ನನ್ನ ದೇಹನ್ಯಾಸಕ್ಕೆ (ಅವಸಾನಕ್ಕೆ) ಹೆಚ್ಚು ಕಾಲ ಉಳಿದಿಲ್ಲವೆಂದು ಭಾವಿಸುತ್ತೇನೆ. ಸೂರ್ಯನೂ ಮಂದಗತಿಯಲ್ಲಿ ಹೋಗುತ್ತಿರುವಂತೆ ಭಾಸವಾಗುತ್ತಿದೆ. (ಹಗಲು ಕಳೆಯುತ್ತಲೇ ಇಲ್ಲ.)

ಉಕ್ತಾ ಧರ್ಮಾ ಯೇ ಪುರಾಣೇ ಮಹಾನ್ತೋ
ರಾಜನ್ವಿಪ್ರಾಣಾಂ ಕ್ಷತ್ರಿಯಾಣಾಂ ವಿಶಾಂ ಚ ।
ತಥಾ ಶೂದ್ರಾಣಾಂ ಧರ್ಮಮುಪಾಸತೇ ಚ
ಶೇಷಂ ಕೃಷ್ಣಾದುಪಶಿಕ್ಷಸ್ವ ಪಾರ್ಥ ॥೫॥

ಪಾರ್ಥನೇ! ಪುರಾಣಗಳಲ್ಲಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಯಾವ ಮಹಾಧರ್ಮಗಳು ಉಕ್ತವಾಗಿವೆಯೋ ಮತ್ತು ಯಾವ ಯಾವ ವರ್ಣದವರು ಯಾವ ಯಾವ ಧರ್ಮಗಳನ್ನು ಉಪಾಸಿಸುವರೋ–ಆ ಎಲ್ಲ ವಿಷಯಗಳನ್ನೂ ನಾನು ನಿನಗೆ ಸಮಗ್ರವಾಗಿ ಹೇಳಿದ್ದೇನೆ. ಶೇಷಧರ್ಮಗಳೇನಾದರೂ ಉಳಿದಿದ್ದಲ್ಲಿ ಅವುಗಳನ್ನು ಶ್ರೀಕೃಷ್ಣನಿಂದ ತಿಳಿದುಕೋ.

ಅಹಂ ಹ್ಯೇನಂ ವೇದ್ಮಿ ತತ್ತ್ವೇನ ಕೃಷ್ಣಂ
ಯೋಽಯಂ ಹಿ ಯಚ್ಚಾಸ್ಯ ಬಲಂ ಪುರಾಣಮ್ ।
ಅಮೇಯಾತ್ಮಾ ಕೇಶವಃ ಕೌರವೇನ್ದ್ರ
ಸೋಽಯಂ ಧರ್ಮಂ ವಕ್ಷ್ಯತಿ ಸಂಶಯೇಷು ॥೬॥

ಶ್ರೀಕೃಷ್ಣನನ್ನು ನಾನು ಯಥಾವತ್ತಾಗಿ ತಿಳಿದಿದ್ದೇನೆ. ಪುರಾಣಪುರುಷನಾದ ಇವನು ಯಾರು? ಇವನ ಸ್ವರೂಪವೇನು? ಇವನ ಬಲವೆಷ್ಟು?–ಈ ಎಲ್ಲವನ್ನೂ ನಾನು ತಿಳಿದಿರುತ್ತೇನೆ. ಕೌರವರಾಜನೇ! ಪೂಜ್ಯನಾದ ಕೇಶವನು ಮಹಾತ್ಮನು. ಧರ್ಮದ ವಿಷಯದಲ್ಲಿ ಸಂಶಯಗಳು ಮೂಡಿದಾಗ ಇವನು ನಿನಗೆ ಧರ್ಮದ ನಿರ್ಣಯವನ್ನು ಹೇಳುತ್ತಾನೆ.

ಕೃಷ್ಣಃ ಪೃಥ್ವೀಮಸೃಜತ್ಖಂ ದಿವಂ ಚ
ಕೃಷ್ಣಸ್ಯ ದೇಹಾನ್ಮೇದಿನೀ ಸಮ್ಬಭೂವ।
ವರಾಹೋಽಯಂ ಭೀಮಬಲಃ ಪುರಾಣಃ
ಸ ಪರ್ವತಾನ್ವ್ಯಸೃಜದ್ವೈ ದಿಶಶ್ಚ ॥೭॥

ಶ್ರೀಕೃಷ್ಣನೇ ಪೃಥ್ವೀ, ಆಕಾಶ ಮತ್ತು ಸ್ವರ್ಗಗಳನ್ನು ಸೃಷ್ಟಿಸಿದನು. ಇವನ ಶರೀರದಿಂದಲೇ ಪೃಥ್ವಿಯು ಪ್ರಾದುರ್ಭವಿಸಿತು. ಭಯಂಕರಬಲನಾದ ಮಹಾವರಾಹಸ್ವಾಮಿಯೂ ಇವನೇ. ಪುರಾಣಪುರುಷನಾದ ಇವನೇ ಪರ್ವತಗಳನ್ನೂ, ದಿಕ್ಕುಗಳನ್ನೂ ಸೃಷ್ಟಿಸಿದನು.

ಅಸ್ಯ ಚಾಧೋಽಥಾನ್ತರಿಕ್ಷಂ ದಿವಂ ಚ
ದಿಶಶ್ಚತಸ್ರೋ ವಿದಿಶಶ್ಚತಸ್ರಃ।
ಸೃಷ್ಟಿಸ್ತಥೈವೇಯಮನುಪ್ರಸೂತಾ
ಸ ನಿರ್ಮಮೇ ವಿಶ್ವಮಿದಂ ಪುರಾಣಮ್ ॥೮॥

ಪಾತಾಳಲೋಕ, ಅಂತರಿಕ್ಷ, ಸ್ವರ್ಗ, ನಾಲ್ಕು ದಿಕ್ಕುಗಳು, ನಾಲ್ಕು ಉಪದಿಕ್ಕುಗಳು-ಇವೆಲ್ಲವೂ ಶ್ರೀಕೃಷ್ಣನದೇ ಆಗಿವೆ. ಇವನಿಂದಲೇ ಸೃಷ್ಟಿಯಪರಂಪರೆಯು ನಡೆಯುತ್ತಾ ಬಂದಿದೆ. ಪುರಾತನವಾದ ಈ ವಿಶ್ವವನ್ನು ಇವನೇ ನಿರ್ಮಾಣಮಾಡಿರುವನು.

ಅಸ್ಯ ನಾಭ್ಯಾಂ ಪುಷ್ಕರಂ ಸಮ್ಪ್ರಸೂತಂ
ಯತ್ರೋತ್ಪನ್ನಃ ಸ್ವಯಮೇವಾಮಿತೌಜಾಃ ।
ತೇನಾಚ್ಛಿನ್ನಂ ತತ್ತಮಃ ಪಾರ್ಥ ಘೋರಂ
ಯತ್ತತ್ತಿಷ್ಠತ್ಯರ್ಣವಂ ತರ್ಜಯಾನಮ್ ॥೯॥

ಯುಧಿಷ್ಠಿರ! ಸೃಷ್ಟಿಯ ಆರಂಭದಲ್ಲಿ ಈ ಶ್ರೀಕೃಷ್ಣನ ನಾಭಿಯಲ್ಲಿ ಕಮಲವೊಂದು ಹುಟ್ಟಿತು. ಆ ಕಮಲದಲ್ಲಿ ಮಹಾತೇಜಸ್ವಿಯಾದ ತಾನೇ ಬ್ರಹ್ಮನಾಗಿ ಪ್ರಕಟಗೊಂಡನು. ಸಮುದ್ರದಂತೆ ಆಗಾಧವಾಗಿದ್ದ, ಭಯವನ್ನುಂಟುಮಾಡುತ್ತಿದ್ದ ಘೋರವಾದ ಕತ್ತಲೆಯನ್ನು ಶ್ರೀಕೃಷ್ಣನೇ ಸಂಪೂರ್ಣವಾಗಿ ಹೋಗಲಾಡಿಸಿದನು.

ಕೃತೇ ಯುಗೇ ಧರ್ಮ ಆಸೀತ್ಸಮಗ್ರ
ಸ್ತ್ರೇತಾಕಾಲೇ ಜ್ಞಾನಮನುಪ್ರಪನ್ನಃ ।
ಬಲಂ ತ್ವಾಸೀದ್ವಾಪರೇ ಪಾರ್ಥ ಕೃಷ್ಣಃ
ಕಲೌ ತ್ವಧರ್ಮಃ ಕ್ಷಿತಿಮೇವಾಜಗಾಮ ॥೧೦॥

ಕೃತಯುಗದಲ್ಲಿ ಶ್ರೀಕೃಷ್ಣನು ಸಮಗ್ರವಾದ ಧರ್ಮರೂಪದಲ್ಲಿ ವಿರಾಜಿಸುತ್ತಿದ್ದನು. ತ್ರೇತಾಯುಗದಲ್ಲಿ ಪೂರ್ಣಜ್ಞಾನರೂಪನಾಗಿದ್ದನು. ದ್ವಾಪರಯುಗದಲ್ಲಿ ಬಲರೂಪನಾಗಿದ್ದನು. ಮುಂದೆ ಬರುವ ಕಲಿಯುಗದಲ್ಲಿ ಅಧರ್ಮವೇ ಭೂಮಿಗೆ ಬರುವುದು.

ಸ ಏವ ಪೂರ್ವಂ ನಿಜಘಾನ ದೈತ್ಯಾ-
ನ್ಸ ಪೂರ್ವದೇವಶ್ಚ ಬಭೂವ ಸಮ್ರಾಟ್ ।
ಸ ಭೂತಾನಾಂ ಭಾವನೋ ಭೂತಭವ್ಯಃ
ಸ ವಿಶ್ವಸ್ಯಾಸ್ಯ ಜಗತಶ್ಚಾಭಿಗೋಪ್ತಾ ॥೧೧॥

ಈ ಶ್ರೀಕೃಷ್ಣನೇ ಹಿಂದೆ ನಾನಾವತಾರಗಳನ್ನು ಧರಿಸಿ ದೈತ್ಯರನ್ನು ಸಂಹರಿಸಿದನು. ದಾನವರೂಪವನ್ನು ತಾಳಿ ದೈತ್ಯರ ಚಕ್ರವರ್ತಿಯಾದ ಬಲಿಯಾದನು. ಪ್ರಾಣಿಗಳ ಧ್ಯಾನಕ್ಕೆ ಲಕ್ಷ್ಯನಾದ ಅವನು ಭೂತ-ಭವಿಷ್ಯದ್ವರ್ತಮಾನಸ್ವರೂಪನೂ ಆಗಿದ್ದಾನೆ. ಅವನು ಈ ಸಂಪೂರ್ಣಜಗತ್ತನ್ನೂ ರಕ್ಷಿಸುವವನೂ ಆಗಿದ್ದಾನೆ. ಅವನು ಈ ಸಂಪೂರ್ಣಜಗತ್ತನ್ನೂ ರಕ್ಷಿಸುವವನೂ ಆಗಿದ್ದಾನೆ.

ಯದಾ ಧರ್ಮೋ ಗ್ಲಾತಿ ವಂಶೇ ಸುರಾಣಾಂ
ತದಾ ಕೃಷ್ಣೋ ಜಾಯತೇ ಮಾನುಷೇಷು ।

ಧರ್ಮೇ ಸ್ಥಿತ್ವಾ ಸ ತು ವೈ ಭಾವಿತಾತ್ಮಾ
ಪರಾಂಶ್ಚ ಲೋಕಾನಪರಾಂಶ್ಚ ಪಾತಿ ॥೧೨॥

ಯಾವಾಗ ಧರ್ಮಕ್ಕೆ ಹಾನಿಯುಂಟಾಗುವುದೋ ಆಗ ಶ್ರೀಕೃಷ್ಣನು ಮನುಷ್ಯರ ವಂಶದಲ್ಲಾಗಲೀ ದೇವತೆಗಳ ವಂಶದಲ್ಲಾಗಲೀ ಅವತರಿಸುತ್ತಾನೆ. ಶುದ್ಧಭಾವದಿಂದ ಕೂಡಿರುವ ಇವನು ಧರ್ಮಮಾರ್ಗದಲ್ಲಿಯೇ ಇರುತ್ತಾ ಪರಾಪರಾಲೋಕಗಳನ್ನೂ ರಕ್ಷಿಸುತ್ತಾನೆ.

ತ್ಯಾಜ್ಯಂ ತ್ಯಕ್ತ್ವಾ ಚಾಸುರಾಣಾಂ ವಧಾಯ
ಕಾರ್ಯಾಕಾರ್ಯೇ ಕಾರಣಂ ಚೈವ ಪಾರ್ಥ ।
ಕೃತಂ ಕರಿಷ್ಯತ್ಕ್ರಿಯತೇ ಚ ದೇವೋ
ರಾಹುಂ ಸೋಮಂ ವಿದ್ಧಿ ಚ ಶಕ್ರಮೇನಮ್ ॥೧೩॥

ರಾಕ್ಷಸರನ್ನು ವಧೆಮಾಡುವ ಸಲುವಾಗಿ ತ್ಯಾಜ್ಯವಾದ ವಸ್ತುಗಳನ್ನು ಬಿಟ್ಟು ನಿಯಮವ್ರತಾನುಷ್ಠಾನವುಳ್ಳವನಾಗಿರುತ್ತಾನೆ. ಕಾರ್ಯ, ಅಕಾರ್ಯ ಮತ್ತು ಕಾರಣ–ಈ ಮೂರು ಶ್ರೀಕೃಷ್ಣನೇ ಆಗಿದ್ದಾನೆ. ಹಿಂದೆ ನಡೆದಿದ್ದು, ಹಿಂದೆ ಮಾಡಿದ್ದು, ಈಗ ಮಾಡುತ್ತಿರುವುದು ಮತ್ತು ಮುಂದೆ ಮಾಡುವುದು–ಭೂತ-ವರ್ತಮಾನ-ಭವಿಷ್ಯದ್ರೂಪವಾದ ಈ ಮೂರು ವಿಧವಾದ ಕಾರ್ಯಗಳಿಗೂ ಇವನೇ ಕಾರಣನಾಗಿದ್ದಾನೆ. ಈ ಶ್ರೀಕೃಷ್ಣನನ್ನೇ ನೀನು ಇಂದ್ರ-ಚಂದ್ರ-ರಾಹುಗಳೆಂದು ತಿಳಿ.

ಸ ವಿಶ್ವಕರ್ಮಾ ಸಹಿ ವಿಶ್ವರೂಪಃ
ಸ ವಿಶ್ವಭುಗ್ವಿಶ್ವಸೃಗ್ವಿಶ್ವಜಿಚ್ಚ ।
ಸ ಶೂಲಭೃಚ್ಛೋಣಿತಭೃತ್ಕರಾಲ-
ಸ್ತಂ ಕರ್ಮಭಿರ್ವಿದಿತಂ ವೈ ಸ್ತುವನ್ತಿ ॥೧೪॥

ಶ್ರೀಕೃಷ್ಣನೇ ವಿಶ್ವಕರ್ಮನು. (ದೇವಶಿಲ್ಪಿಯಾದ ವಿಶ್ವಕರ್ಮ ಸ್ವರೂಪನು.) ಜಗತ್ತೇ ಕರ್ಮವಾಗಿ ಅಥವಾ ವ್ಯಾಪಾರವಾಗಿ ಉಳ್ಳವನು. ವಿಶ್ವರೂಪನೂ (ನಾನಾರೂಪಗಳಿಂದ ಎಲ್ಲ ಕಡೆಗಳಲ್ಲಿಯೂ ಇರುವವನೂ) ವಿಶ್ವಭುಜನೂ (ಜಗತ್ತೆಲ್ಲವನ್ನೂ ಅನುಭವಿಸುವವನೂ) ವಿಶ್ವ

ಸೃಜನೂ (ಜಗತ್ತನ್ನು ಸೃಷ್ಟಿಸಿದವನೂ) ವಿಶ್ವಜಿತನೂ (ಜಗತ್ತನ್ನು ಜಯಿಸಿದವನೂ) ಆಗಿದ್ದಾನೆ. ಒಂದು ಕೈಯಲ್ಲಿ ಶೂಲವನ್ನೂ ಮತ್ತೊಂದು ಕೈಯಲ್ಲಿ ಕಪಾಲದಲ್ಲಿ ರಕ್ತವನ್ನೂ ಹಿಡಿದು ಕರಾಳರೂಪಿಯಾಗುತ್ತಾನೆ. ನಾನಾವಿಧವಾದ ಅದ್ಭುತಕರ್ಮಗಳಿಂದ ವಿಖ್ಯಾತನಾಗಿರುವ ಶ್ರೀಕೃಷ್ಣನನ್ನು ಎಲ್ಲರೂ ಸ್ತೋತ್ರಮಾಡುತ್ತಾರೆ

ತಂ ಗನ್ಧರ್ವಾಣಾಮಪ್ಸರಸಾಂ ಚ ನಿತ್ಯ
ಮುಪತಿಷ್ಠನ್ತೇ ವಿಬುಧಾನಾಂ ಶತಾನಿ ।
ತಂ ರಾಕ್ಷಸಾಶ್ಚ ಪರಿಸಂವದನ್ತಿ
ರಾಯಸ್ಪೋಷಃ ಸ ವಿಜಿಗೀಷುರೇಕಃ ॥೧೫॥

ನೂರಾರು ಗಂಧರ್ವರೂ, ಅಪ್ಸರೆಯರೂ, ದೇವತೆಗಳೂ ಅನುದಿನವೂ ಈ ಶ್ರೀಕೃಷ್ಣನ ಸೇವೆಯಲ್ಲಿ ನಿರತರಾಗಿರುತ್ತಾರೆ. ರಾಕ್ಷಸರು ಕೂಡ ಶ್ರೀಕೃಷ್ಣನನ್ನು ಕುರಿತು ಒಳ್ಳೆಯ ಮಾತುಗಳನ್ನೇ ಆಡುತ್ತಾರೆ. ಅವನೊಬ್ಬನೇ ಐಶ್ವರ್ಯದ ರಕ್ಷಕನೂ-ವಿಜಯಾಭಿಲಾಷಿಯೂ ಆಗಿದ್ದಾನೆ.

ತಮಧ್ವರೇ ಶಂಸಿತಾರಃ ಸ್ತುವನ್ತಿ
ರಥನ್ತರೇ ಸಾಮಗಾಶ್ಚ ಸ್ತುವನ್ತಿ ।
ತಂ ಬ್ರಾಹ್ಮಣಾ ಬ್ರಹ್ಮಮನ್ತ್ರೈಃಸ್ತುವನ್ತಿ
ತಸ್ಮೈ ಹವಿರಧ್ವರ್ಯವಃ ಕಲ್ಪಯನ್ತಿ ॥೧೬॥

ಯಜ್ಞದ ಸಮಯದಲ್ಲಿ ಹೋತೃವರ್ಗದವರು ಶಸ್ತ್ರಗಳಿಂದ (ಋಕ್ಕುಗಳಿಂದ) ಅವನನ್ನು ಸ್ತೋತ್ರಮಾಡುತ್ತಾರೆ. ಸಾಮವೇದಿಗಳು ರಥಂತರ ಸಾಮದಲ್ಲಿ ಇವನನ್ನು ಸ್ತೋತ್ರಮಾಡುತ್ತಾರೆ. ವೇದವಿದರಾದ ಬ್ರಾಹ್ಮಣರು ವೇದಮಂತ್ರಗಳ ಮೂಲಕವಾಗಿ ಈ ಶ್ರೀಕೃಷ್ಣನನ್ನು ಸ್ತೋತ್ರಮಾಡುತ್ತಾರೆ. ಯಜ್ಞದಲ್ಲಿ ಅಧ್ವರ್ಯುಗಳು ಇವನಿಗೆ ಹವಿರ್ಭಾಗವನ್ನು ಕಲ್ಪಿಸುತ್ತಾರೆ.

ಸ ಪೌರಾಣೀಂ ಬ್ರಹ್ಮಗುಹಾಂ ಪ್ರವಿಷ್ಟೋ
ಮಹೀಸತ್ರಂ ಭಾರತಾಗ್ರೇ ದದರ್ಶ ।
ಸ ಚೈವ ಗಾಮುದ್ದಧಾರಾಗ್ರ್ಯಕರ್ಮಾ
ವಿಕ್ಷೋಭ್ಯ ದೈತ್ಯಾನುರಗಾನ್ದಾನವಾಂಶ್ಚ ॥೧೭॥

ಇವನು ಪುರಾತನವಾದ ಬ್ರಹ್ಮಗುಹೆಯನ್ನು ಪ್ರವೇಶಿಸಿ (ಬ್ರಹ್ಮಭಾವ

ವನ್ನು ಹೊಂದಿ) ಪ್ರಳಯಕಾಲದಲ್ಲಿ ಭೂಮಿಯು ನೀರಿನಿಂದ ಮುಚ್ಚಿಹೋಗುವುದನ್ನು ಅದು ಆಗುವ ಮೊದಲೇ ಕಂಡುಕೊಂಡನು. ಸೃಷ್ಟಿಕರ್ತನಾದ ಶ್ರೀಕೃಷ್ಣನೇ ದೈತ್ಯರನ್ನೂ, ದಾನವರನ್ನೂ, ಉರಗಗಳನ್ನೂ, ಕ್ಷೋಭೆಗೊಳಿಸಿ, ಭೂಮಿಯನ್ನು ಪಾತಾಳದಿಂದ ಮೇಲೆತ್ತಿದ್ದನು.

ತಂ ಘೋಷಾರ್ಥೇ ಗೀರ್ಭಿರಿನ್ದ್ರಾಃ ಸ್ತುವನ್ತಿ
ಸ ಚಾಪೀಶೋ ಭಾರತೈಕಃ ಪಶೂನಾಮ್ ।
ತಸ್ಯ ಭಕ್ಷಾನ್ವಿವಿಧಾನ್ವೇದಯನ್ತಿ
ತಮೇವಾಜೌ ವಾಹನಂ ವೇದಯನ್ತಿ ॥೧೮॥

ಗೋಕುಲವನ್ನು ರಕ್ಷಿಸುವ ಸಲುವಾಗಿ ಇಂದ್ರಾದಿ ದೇವತೆಗಳೆಲ್ಲರೂ ಈ ಶ್ರೀಕೃಷ್ಣನನ್ನು ಸುಮಧುರವಾದ ವಾಣಿಗಳಿಂದ ಸ್ತೋತ್ರಮಾಡುತ್ತಾರೆ. ಇವನೊಬ್ಬನೇ ಎಲ್ಲ ಪಶುಗಳಿಗೂ (ಜೀವರುಗಳಿಗೂ) ಈಶನಾಗಿದ್ದಾನೆ. ಭಕ್ತರು ಇವನಿಗೆ ನಾನಾವಿಧವಾದ ಭಕ್ಷ್ಯಗಳನ್ನು ನಿವೇದನಮಾಡುತ್ತಾರೆ. ಯುದ್ಧದಲ್ಲಿ ಇವನನ್ನೇ ಜನರು ಜಯಪ್ರಾಪಕನೆಂದು ತಿಳಿಯುತ್ತಾರೆ.

ತಸ್ಯಾನ್ತರಿಕ್ಷಂ ಪೃಥಿವೀ ದಿವಂ ಚ
ಸರ್ವಂ ವಶೇ ತಿಷ್ಠತಿ ಶಾಶ್ವತಸ್ಯ ।
ಸ ಕುಮ್ಭೇ ರೇತಃ ಸಸೃಜೇ ಸುರಾಣಾಂ
ಯತ್ರೋತ್ಪನ್ನಮೃಷಿಮಾಹುರ್ವಸಿಷ್ಠಮ್ ॥೧೯॥

ಪೃಥ್ವೀ, ಆಕಾಶ, ಸ್ವರ್ಗ-ಈ ಎಲ್ಲವೂ ಸನಾತನವಾದ ಶ್ರೀಕೃಷ್ಣನ ಅಧೀನದಲ್ಲಿಯೇ ಇವೆ. ಶ್ರೀಕೃಷ್ಣನು ದೇವತೆಗಳ (ಮಿತ್ರಾವರುಣರ) ರೇತಸ್ಸನ್ನು ಕುಂಭದಲ್ಲಿರಿಸಿ ಒಬ್ಬ ಮಹಾಪುರುಷನನ್ನೂ ಸೃಷ್ಟಿಸಿದನು. ಹಾಗೆ ಹುಟ್ಟಿದವನೇ ಮಹರ್ಷಿಯಾದ ವಸಿಷ್ಠನೆಂದು ಹೇಳುತ್ತಾರೆ.

ಸ ಮಾತರಿಶ್ವಾ ವಿಭುರಶ್ವವಾಜೀ
ಸ ರಶ್ಮಿವಾನ್ಸವಿತಾ ಚಾದಿದೇವಃ ।
ತೇನಾಸುರಾ ವಿಜಿತಾಃ ಸರ್ವ ಏವ
ತದ್ವಿಕ್ರಾನ್ತೈರ್ವಿಜಿತಾನೀಹ ತ್ರೀಣಿ ॥೨೦॥

ಸರ್ವತ್ರವ್ಯಾಪಿಸಿರುವ ವಾಯುವೂ ಈ ಶ್ರೀಕೃಷ್ಣನೇ ಆಗಿದ್ದಾನೆ. ಇವನೇ ತೀವ್ರಗಾಮಿಯಾದ ಅಶ್ವವಾಗಿದ್ದಾನೆ. ಅಂಶುಮಾಲಿಯಾದ

ಸೂರ್ಯನು ಇವನೇ ಆಗಿದ್ದಾನೆ. ಇವನೇ ಆದಿದೇವನು. ಇವನಿಂದಲೇ ಎಲ್ಲ ಅಸುರರೂ ಪರಾಜಿತರಾದರು. ಇವನು ತನ್ನ ಮೂರು ಪಾದಗಳಿಂದ ಮೂರು ಲೋಕಗಳನ್ನೂ ಅಳೆದು ವಿಶ್ವವನ್ನೇ ಗೆದ್ದಿರುವನು.

ಸ ದೇವಾನಾಂ ಮಾನುಷಾಣಾಂ ಪಿತ್ರೄಣಾಂ
ತಮೇವಾಹುರ್ಯಜ್ಞವಿದಾಂ ವಿತಾನಮ್ ।
ಸ ಏವ ಕಾಲಂ ವಿಭಜನ್ನುದೇತಿ
ತಸ್ಯೋತ್ತರಂ ದಕ್ಷಿಣಂ ಚಾಯನೇ ದ್ವೇ ॥೨೧॥

ಈ ಶ್ರೀಕೃಷ್ಣನೇ ದೇವತೆಗಳಿಗೂ, ಮನುಷ್ಯರಿಗೂ ಮತ್ತು ಪಿತೃಗಳಿಗೂ ಆತ್ಮಸ್ವರೂಪನಾಗಿದ್ದಾನೆ. ಯಜ್ಞವನ್ನು ತಿಳಿದವರಿಗೆ ಇವನೇ ಛಾವಣಿ ಯಂತಿರುವನೆಂದು (ಪರಮಾಶ್ರಯನೆಂದು) ವಿದ್ವಾಂಸರು ಹೇಳುತ್ತಾರೆ. ರಾತ್ರಿ ಮತ್ತು ಹಗಲುಗಳನ್ನು ಇವನೇ ವಿಭಾಗಿಸಿಕೊಂಡು ಬೆಳಗಾಗುತ್ತಲೇ ಸೂರ್ಯನ ರೂಪದಲ್ಲಿ ಹುಟ್ಟುತ್ತಾನೆ. ಇವನಿಗೆ ದಕ್ಷಿಣಾಯನ ಮತ್ತು ಉತ್ತರಾಯಣಗಳೆಂಬ ಎರಡು ಮಾರ್ಗಗಳಿವೆ.

ತಸ್ಯೈವೋರ್ಧ್ವಂ ತಿರ್ಯಗಧಶ್ಚರನ್ತಿ
ಗಭಸ್ತಯೋ ಮೇದಿನೀಂ ಭಾಸಯನ್ತಃ ।
ತಂ ಬ್ರಾಹ್ಮಣಾ ವೇದವಿದೋ ಜುಷನ್ತಿ
ತಸ್ಯಾದಿತ್ಯೋ ಭಾಮುಪಯುಜ್ಯ ಭಾತಿ ॥೨೨॥

ಇವನ ಜಾಜ್ವಲ್ಯಮಾನವಾದ ಕಿರಣಗಳು ಭೂಮಿಯನ್ನು ಪ್ರಕಾಶಗೊಳಿಸುತ್ತಾ ಮೇಲಕ್ಕೂ, ಕೆಳಕ್ಕೂ, ಅಕ್ಕ-ಪಕ್ಕಗಳಿಗೂ ಪ್ರಸರಿಸು ತ್ತವೆ. ವೇದವಿದರಾದ ಬ್ರಾಹ್ಮಣರು ಸದಾ ಅವನ ಸೇವೆಯಲ್ಲಿಯೇ ನಿರತರಾಗಿರುವರು. ಸೂರ್ಯನು ಶ್ರೀಕೃಷ್ಣನ ಕಿರಣಗಳನ್ನೇ ಆಶ್ರಯಿಸಿ ಪ್ರಕಾಶಿಸುತ್ತಾನೆ.

ಸ ಮಾಸಿ ಮಾಸ್ಯಧ್ವರಕೃದ್ವಿಧತ್ತೇ
ತಮಧ್ವರೇ ವೇದವಿದಃ ಪಠನ್ತಿ ।
ಸ ಏವೋಕ್ತಶ್ಚಕ್ರಮಿದಂ ತ್ರಿನಾಭಿ
ಸಪ್ತಾಶ್ವಯುಕ್ತಂ ವಹತೇ ವೈ ತ್ರಿಧಾಮ ॥೨೩॥

ಯಜ್ಞಕರ್ತೃವಾದ ಶ್ರೀಕೃಷ್ಣನು ಪ್ರತಿಮಾಸದಲ್ಲಿಯೂ ಯಜ್ಞಗಳನ್ನು ಮಾಡುತ್ತಿರುತ್ತಾನೆ. ಆ ಯಜ್ಞಸಮಯದಲ್ಲಿ ವೇದವಿದ್ವಾಂಸರು ಇವನನ್ನು ಸ್ತೋತ್ರಮಾಡುತ್ತಿರುತ್ತಾರೆ. ಮೂರು ನಾಭಿಗಳಿಂದಲೂ* ಮೂರು ಧಾಮಗಳಿಂದಲೂ* ಮತ್ತು ಏಳು ಕುದುರೆಗಳಿಂದಲೂ ಯುಕ್ತವಾಗಿರುವ ಈ ಸಂವತ್ಸರ ಚಕ್ರವನ್ನು ಇವನೇ ಧಾರಣಮಾಡಿದ್ದಾನೆ.

ಮಹಾತೇಜಾಃ ಸರ್ವಗಃ ಸರ್ವಸಿಂಹಃ
ಕೃಷ್ಣೋ ಲೋಕಾನ್ಧಾರಯತೇ ಯಥೈಕಃ ।
ಹಂಸಂ ತಮೋಘ್ನಂ ಚ ತಮೇವ ವೀರ
ಕೃಷ್ಣಂ ಸದಾ ಪಾರ್ಥ ಕರ್ತಾರಮೇಹಿ ॥೨೪॥

ಮಹಾತೇಜಸ್ವಿಯಾದ, ಸರ್ವವ್ಯಾಪಕನಾದ, ಸರ್ವಶ್ರೇಷ್ಠನಾದ ಶ್ರೀಕೃಷ್ಣನು ಏಕಾಕಿಯಾಗಿಯೇ ಎಲ್ಲ ಲೋಕಗಳನ್ನೂ ಧಾರಣೆಮಾಡಿದ್ದಾನೆ. ಯುಧಿಷ್ಠಿರ! ನೀನು ಈ ಶ್ರೀಕೃಷ್ಣನನ್ನು, ಕತ್ತಲೆಯನ್ನು ಹೋಗಲಾಡಿಸುವ ಸೂರ್ಯನೆಂದೂ, ಸಮಸ್ತಕಾರ್ಯಗಳ ಕರ್ತಾರನೆಂದೂ ತಿಳಿ.

ಸ ಏಕದಾ ಕಕ್ಷಗತೋ ಮಹಾತ್ಮಾ
ತುಷ್ಟೋ ವಿಭುಃ ಖಾಣ್ಡವೇ ಧೂಮಕೇತುಃ ।
ಸ ರಾಕ್ಷಸಾನುರಗಾಂಶ್ಚಾವಜಿತ್ಯ
ಸರ್ವತ್ರಗಃ ಸರ್ವಮಗ್ನೌ ಜುಹೋತಿ ॥೨೫॥

ಮಹಾತ್ಮನಾದ ಈ ವಾಸುದೇವನೊಮ್ಮೆ ಅಗ್ನಿಯ ರೂಪವನ್ನು ಹೊಂದಿ ಖಾಂಡವವನದಲ್ಲಿದ್ದ ಒಣಗಿದ ಹುಲ್ಲಿನಲ್ಲಿ ವ್ಯಾಪ್ತನಾಗಿ ತನ್ನ ಜ್ವಾಲೆಗಳಿಂದ ಖಾಂಡವವನವನ್ನೇ ಸಂಪೂರ್ಣವಾಗಿ ಭಕ್ಷಿಸಿ ತುಷ್ಟನಾದನು. ಸರ್ವವ್ಯಾಪಿಯಾದ ಈ ಶ್ರೀಕೃಷ್ಣನೇ ರಾಕ್ಷಸರನ್ನೂ ಉರಗಗಳನ್ನೂ ಜಯಿಸಿ ಎಲ್ಲರನ್ನೂ ಅಗ್ನಿಯಲ್ಲಿ ಹೋಮಮಾಡುತ್ತಾನೆ.

---

*ತ್ರಿನಾಭಿ-ಎಂಬುದಕ್ಕೆ ಶೀತೋಷ್ಣ, ವೃಷ್ಟಿ, ಕಾಲಗರ್ಭಗಳೆಂದೂ, ತ್ರಿಧಾಮ-ಎಂಬುದಕ್ಕೆ ವರ್ಷ-ವಾತೋಷ್ಣಪ್ರಕಾರಗಳೆಂದೂ ವ್ಯಾಖ್ಯಾನಕಾರರು ವ್ಯಾಖ್ಯಾನಿಸಿದ್ದಾರೆ.

ಸ ಏವ ಪಾರ್ಥಾಯ ಶ್ವೇತಮಶ್ವಂ ಪ್ರಾಯಚ್ಛ-
ತ್ಸ ಏವಾಶ್ವಾನಥ ಸರ್ವಾಂಶ್ಚಕಾರ ।
ಸ ಬನ್ಧುರಸ್ತಸ್ಯ ರಥಸ್ತ್ರಿಚಕ್ರ
ಸ್ತ್ರಿವೃಚ್ಛಿರಾಶ್ಚತುರಶ್ವಸ್ತ್ರಿನಾಭಿಃ ॥೨೬॥

ಇವನೇ ಅರ್ಜುನನಿಗೆ ಬಿಳಿಯಕುದುರೆಗಳನ್ನು ಪ್ರಾದಾನಮಾಡಿದನು. ಎಲ್ಲ ಕುದುರೆಗಳನ್ನೂ ಸೃಷ್ಟಿಮಾಡಿರುವವನು ಈ ಶ್ರೀಕೃಷ್ಣನೇ ಆಗಿದ್ದಾನೆ. ಸಂಸಾರವೆಂಬ ರಥಕ್ಕೆ ಇವನೇ ಮೂಕಿಕಂಬವಾಗಿದ್ದಾನೆ. ಸತ್ತ್ವ-ರಜಸ್ಸು-ತಮಸ್ಸುಗಳೆಂಬ ಮೂರುಗುಣಗಳೇ ಆ ರಥಕ್ಕೆ ಚಕ್ರಗಳಾಗಿವೆ. ಮೇಲೆ, ಮಧ್ಯೆ ಮತ್ತು ಕೆಳಗೆ ಈ ಮೂರು ಮಾರ್ಗಗಳಲ್ಲಿಯೂ ಆ ರಥವು ಸಂಚರಿಸುತ್ತದೆ. ಕಾಲ, ಅದೃಷ್ಟ, ಇಚ್ಛೆ ಮತ್ತು ಸಂಕಲ್ಪ– ಈ ನಾಲ್ಕೂ ಆ ರಥಕ್ಕೆ ಕಟ್ಟಿರುವ ಕುದುರೆಗಳಾಗಿವೆ. ಶುಕ್ಲ, ಕೃಷ್ಣ, ಮತ್ತು ಶುಕ್ಲ-ಕೃಷ್ಣಗಳೆಂಬ ಮೂರು ಕರ್ಮಗರ್ಭಗಳೇ ಆ ರಥದ ಗುಂಭಗಳಾಗಿವೆ. ಇಂತಹ ಸಂಸಾರರಥವು ಶ್ರೀಕೃಷ್ಣನ ಅಧೀನದಲ್ಲಿದೆ.

ಸ ವಿಹಾಯೋ ವ್ಯದಧಾತ್ಪಞ್ಚನಾಭಿಃ
ಸ ನಿರ್ಮಮೇ ಗಾಂ ದಿವಮನ್ತರಿಕ್ಷಮ್ ।
ಸೋಽರಣ್ಯಾನಿ ವ್ಯಸೃಜತ್ಪರ್ವತಾಂಶ್ಚ
ಹೃಷೀಕೇಶೋಽಮಿತದೀಪ್ತಾಗ್ನಿತೇಜಾಃ ॥೨೭॥

ಪಂಚಭೂತಗಳಿಗೂ ಆಶ್ರಯನಾದ ಶ್ರೀಕೃಷ್ಣನೇ ಆಕಾಶವನ್ನು ಸೃಷ್ಟಿಸಿದನು. ಭೂಮ್ಯಂತರಿಕ್ಷಗಳನ್ನೂ, ಸ್ವರ್ಗವನ್ನೂ ಸೃಷ್ಟಿಸಿದನು. ಅಪಾರವಾದ ಮತ್ತು ಪ್ರದೀಪ್ತವಾದ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ಹೃಷೀಕೇಶನು ಅರಣ್ಯಗಳನ್ನೂ-ಪರ್ವತಗಳನ್ನೂ ಸೃಷ್ಟಿಸಿದನು.

ಅಲಂಘಯದ್ವೈ ಸರಿತೋ ಜಿಘಾಂಸ-
ಞ್ಛಕ್ರಂ ವಜ್ರಂ ಪ್ರಹರನ್ತಂ ನಿರಾಸ ।
ಸ ಮಹೇನ್ದ್ರಃ ಸ್ತೂಯತೇ ವೈ ಮಹಾಧ್ವರೇ
ವಿಪ್ರೈರೇಕೋ ಋಕ್ಸಹಸ್ರೈಃ ಪುರಾಣೈಃ ॥೨೮॥

ಇಂದ್ರನನ್ನು ಕೊಲ್ಲುವ ಸಲುವಾಗಿ ವೃತ್ರಾಸುರನು ಅನೇಕನದಿಗಳನ್ನು ದಾಟಿಕೊಂಡು ಬಂದನು. ವಜ್ರಾಯುಧಪಾಣಿಯಾದ ಇಂದ್ರನನ್ನು ಪ್ರಹರಿ

ಸುತ್ತಿದ್ದ ವೃತ್ರನನ್ನು ಈ ಶ್ರೀಕೃಷ್ಣನೇ ಪರಾಜಯಗೊಳಿಸಿದನು. ಆದುದರಿಂದ ಇವನನ್ನು ಮಹೇಂದ್ರನೆಂದೂ ಕರೆಯುತ್ತಾರೆ. ಮಹಾಯಜ್ಞದಲ್ಲಿ ಬ್ರಾಹ್ಮಣರು ಇವನನ್ನು ಪುರಾತನವಾದ ಸಾವಿರಾರು ಋಕ್ಕುಗಳಿಂದ ಸ್ತೋತ್ರಮಾಡುತ್ತಾರೆ.

ದುರ್ವಾಸಾ ವೈ ತೇನ ನಾನ್ಯೇನ ಶಕ್ಯೋ
ಗೃಹೇ ರಾಜಾನ್ವಾಸಯಿತುಂ ಮಹೌಜಾಃ ।
ತಮೇವಾಹುರ್ಋಷಿಮೇಕಂ ಪುರಾಣಂ
ಸ ವಿಶ್ವಕೃದ್ವಿದಧಾತ್ಯಾತ್ಮಭಾವಾನ್ ॥೨೯॥

ಈ ಶ್ರೀಕೃಷ್ಣನ ಹೊರತಾಗಿ ಬೇರೆ ಯಾರೂ ಮಹಾತೇಜಸ್ವಿಯಾದ ದುರ್ವಾಸನನ್ನು ಮನೆಯಲ್ಲಿಟ್ಟುಕೊಂಡು ಉಪಚರಿಸಲಾರರು. ಇವನನ್ನು ಅದ್ವಿತೀಯನಾದ ಪುರಾತನನಾದ ಋಷಿಯೆಂದೂ ಹೇಳುತ್ತಾರೆ. ಇವನೇ ವಿಶ್ವವನ್ನು ಸೃಷ್ಟಿಸಿದವನು. ತನ್ನ ಸ್ವರೂಪದಿಂದಲೇ ಅನೇಕವಸ್ತುಗಳನ್ನು ಸೃಷ್ಟಿಸುತ್ತಾನೆ.

ವೇದಾಂಶ್ಚ ಯೋ ವೇದಯತೇಽಧಿದೇವೋ
ವಿಧೀಂಶ್ಚ ಯಶ್ಚಾಶ್ರಯತೇ ಪುರಾಣಾನ್ ।
ಕಾಮೇ ವೇದೇ ಲೌಕಿಕೇ ಯತ್ಫಲಂ ಚ
ವಿಷ್ವಕ್ಸೇನಃ ಸರ್ವಮೇತತ್ಪ್ರತೀಹಿ ॥೩೦॥

ದೇವತೆಗಳಿಗೆ ದೇವನಾಗಿದ್ದರೂ ಶ್ರೀಕೃಷ್ಣನು ವೇದಗಳ ಅಧ್ಯಯನವನ್ನು ಮಾಡುತ್ತಾನೆ ಮತ್ತು ಪುರಾತನವಾದ ವಿಧಿನಿಯಮಗಳನ್ನು ಆಶ್ರಯಿಸುತ್ತಾನೆ. ಲೌಕಿಕ-ವೈದಿಕಕರ್ಮಗಳಿಗೆ ಯಾವ ಫಲವಿರುವುದೋ-ಆ ಎಲ್ಲ ಫಲವೂ ವಿಷ್ವಕ್ಸೇನನೇ ಎಂದು ತಿಳಿ. (ಎಲ್ಲ ಕರ್ಮಗಳಿಗೂ ಶ್ರೀಕೃಷ್ಣನೇ ಫಲಸ್ವರೂಪನಾಗಿರುವನು.)

ಜ್ಯೋತೀಂಷಿ ಶುಕ್ಲಾನಿ ಹಿ ಸರ್ವಲೋಕೇ
ತ್ರಯೋ ಲೋಕಾ ಲೋಕಪಾಲಾಸ್ತ್ರಯಶ್ಚ ।
ತ್ರಯೋಽಗ್ನಯೋ ವ್ಯಾಹೃತಯಶ್ಚ ತಿಸ್ರಃ
ಸರ್ವೇ ದೇವಾ ದೇವಕೀಪುತ್ರ ಏವ ॥೩೧॥

ಶ್ರೀಕೃಷ್ಣನೇ ಎಲ್ಲ ಲೋಕಗಳಲ್ಲಿಯೂ ಶುಕ್ಲಜ್ಯೋತಿಗಳ ರೂಪದಲ್ಲಿದ್ದಾನೆ. ಮೂರು ಲೋಕಗಳು, . ಮೂರು ಲೋಕಪಾಲಕರು, ಮೂರು ಅಗ್ನಿಗಳು, ಮೂರು ವ್ಯಾಹೃತಿಗಳು, ಸಕಲದೇವತೆಗಳು–ಎಲ್ಲವೂ ದೇವಕೀಪುತ್ರನಾದ ಶ್ರೀಕೃಷ್ಣನೇ. (ಇವೆಲ್ಲವೂ ಶ್ರೀಕೃಷ್ಣನ ಸ್ವರೂಪಗಳೇ ಆಗಿವೆ.)

ಸ ವತ್ಸರಃ ಸ ಋತುಃ ಸೋಽರ್ಧಮಾಸಃ
ಸೋಽಹೋರಾತ್ರಃ ಸ ಕಲಾ ವೈ ಸ ಕಾಷ್ಠಾಃ ।
ಮಾತ್ರಾ ಮುಹೂರ್ತಾಶ್ಚ ಲವಾಃ ಕ್ಷಣಾಶ್ಚ
ವಿಷ್ವಕ್ಸೇನಃ ಸರ್ವಮೇತತ್ಪ್ರತೀಹಿ ॥೩೨॥

ಸಂವತ್ಸರ, ಋತು, ಪಕ್ಷ, ಹಗಲು-ರಾತ್ರಿಗಳು, ಕಲೆಗಳು, ಕಾಷ್ಠೆಗಳು, ಮಾತ್ರೆಗಳು, ಮುಹೂರ್ತಗಳು, ಲವಗಳು ಮತ್ತು ಕ್ಷಣಗಳು–ಇವೆಲ್ಲವೂ ವಿಷ್ವಕ್ಸೇನನ ಅಥವಾ ಶ್ರೀಕೃಷ್ಣನ ಸ್ವರೂಪಗಳೇ ಎಂದು ತಿಳಿ.

ಚನ್ದ್ರಾದಿತ್ಯೌ ಗ್ರಹನಕ್ಷತ್ರತಾರಾಃ
ಸರ್ವಾಣಿ ದರ್ಶಾನ್ಯಥ ಪೌರ್ಣಮಾಸಮ್ ।
ನಕ್ಷತ್ರಯೋಗಾ ಋತವಶ್ಚ ಪಾರ್ಥ
ವಿಷ್ವಕ್ಸೇನಾತ್ಸರ್ವಮೇತತ್ಪ್ರಸೂತಮ್ ॥೩೩॥

ಚಂದ್ರ, ಸೂರ್ಯ, ಗ್ರಹಗಳು, ನಕ್ಷತ್ರಗಳು, ತಾರೆಗಳು, ಎಲ್ಲ ಅಮಾವಾಸ್ಯೆಗಳು, ಪೌರ್ಣಮಾಸಿಗಳು, ನಕ್ಷತ್ರಯೋಗಗಳು ಮತ್ತು ಋತುಗಳು–ಇವೆಲ್ಲವೂ ವಿಷ್ವಕ್ಸೇನನಿಂದಲೇ ಹುಟ್ಟಿವೆ.

ರುದ್ರಾದಿತ್ಯಾ ವಸವೋಽಥಾಶ್ವಿನೌ ಚ
ಸಾಧ್ಯಾಶ್ಚ ವಿಶ್ವೇ ಮರುತಾಂ ಗಣಾಶ್ಚ ।
ಪ್ರಜಾಪತಿರ್ದೇವಮಾತಾದಿತಿಶ್ಚ
ಸರ್ವೇ ಕೃಷ್ಣಾದೃಷಯಶ್ಚೈವ ಸಪ್ತ ॥೩೪॥

ರುದ್ರರು, ಆದಿತ್ಯರು, ವಸುಗಳು, ಅಶ್ವಿನೀಕುಮಾರರು, ಸಾಧ್ಯರು, ವಿಶ್ವೇದೇವತೆಗಳು, ಮರುದ್ಗಣಗಳು, ಪ್ರಜಾಪತಿ, ದೇವಮಾತೆಯಾದ

ಅದಿತಿ ಮತ್ತು ಸಪ್ತರ್ಷಿಗಳು–ಇವರೆಲ್ಲರೂ ಶ್ರೀಕೃಷ್ಣನಿಂದಲೇ ಹುಟ್ಟಿದವರು.

ವಾಯುರ್ಭೂತ್ವಾ ವಿಕ್ಷಿಪತೇ ಚ ವಿಶ್ವ-
ಮಗ್ನಿರ್ಭೂತ್ವಾ ದಹತೇ ವಿಶ್ವರೂಪಃ ।
ಆಪೋ ಭೂತ್ವಾ ಮಜ್ಜಯತೇ ಚ ಸರ್ವಂ
ಬ್ರಹ್ಮಾ ಭೂತ್ವಾ ಸೃಜತೇ ವಿಶ್ವಸಂಘಾನ್ ॥೩೫॥

ವಿಶ್ವರೂಪನಾದ ಶ್ರೀಕೃಷ್ಣನೇ ಪ್ರಳಯಕಾಲದಲ್ಲಿ ವಾಯುವಿನ ರೂಪವನ್ನು ಧರಿಸಿ ವಿಶ್ವವನ್ನು ಕ್ಷೋಭೆಗೊಳಿಸುತ್ತಾನೆ. ಅಗ್ನಿಯ ರೂಪವನ್ನು ಧರಿಸಿ ಸುಡುತ್ತಾನೆ. ನೀರಿನ ರೂಪವನ್ನು ಧರಿಸಿ ಮುಳುಗಿಸುತ್ತಾನೆ. ಪುನಃ ತಾನೇ ಬ್ರಹ್ಮನಾಗಿ ಎಲ್ಲ ವಿಶ್ವಗಳನ್ನೂ ಸೃಷ್ಟಿಸುತ್ತಾನೆ.

ವೇದ್ಯಂ ಚ ಯದ್ವೇದಯತೇ ಚ ವೇದ್ಯಂ
ವಿಧಿಶ್ಚ ಯಶ್ಚ ಶ್ರಯತೇ ವಿಧೇಯಮ್ ।
ಧರ್ಮೇ ಚ ವೇದೇ ಚ ಬಲೇ ಚ ಸರ್ವಂ
ಚರಾಚರಂ ಕೇಶವಂ ತ್ವಂ ಪ್ರತೀಹಿ ॥೩೬॥

ತಾನೇ ವೇದ್ಯನಾಗಿದ್ದರೂ (ತಿಳಿಯಲ್ಪಡತಕ್ಕವನಾಗಿದ್ದರೂ) ವೇದದಿಂದ ತಿಳಿಯಲ್ಪಡುವ ಪರತತ್ತ್ವವನ್ನು ತಿಳಿಯುವವನಾಗಿದ್ದಾನೆ. (ತಿಳಿಯ ಬೇಕಾದುದೂ ತಿಳಿಯತಕ್ಕವನೂ ತಾನೇ ಆಗಿದ್ದಾನೆ.) ತಾನೇ ವಿಧಿ ಸ್ವರೂಪನಾಗಿದ್ದರೂ ವಿಹಿತವಾದ ಕರ್ಮಗಳ ಆಶ್ರಯವನ್ನು ಪಡೆಯುತ್ತಾನೆ. (ವಿಧಿಯೂ ವಿಧಿವಿಹಿತವಾದ ಕರ್ಮವೂ ತಾನೇ ಆಗಿದ್ದಾನೆ.) ಧರ್ಮದಲ್ಲಿಯೂ, ವೇದದಲ್ಲಿಯೂ, ಬಲದಲ್ಲಿಯೂ ಇವನೇ ಇದ್ದಾನೆ. ಸಕಲ ಚರಾಚರಗಳೂ ಕೇಶವನ ಸ್ವರೂಪಗಳೇ ಎಂದು ತಿಳಿ.

ಜ್ಯೋತಿರ್ಭೂತಃ ಪರಮೋಽಸೌ ಪುರಸ್ತಾ-
ತ್ಪ್ರಕಾಶತೇ ಯತ್ಪ್ರಭಯಾ ವಿಶ್ವರೂಪಃ ।
ಅಪಃ ಸೃಷ್ಟ್ವಾ ಸರ್ವಭೂತಾತ್ಮಯೋನಿಃ
ಪುರಾಕರೋತ್ಸರ್ವಮೇವಾಥ ವಿಶ್ವಮ್ ॥೩೭॥

ಶ್ರೇಷ್ಠಜ್ಯೋತಿಸ್ವರೂಪನಾದ, ವಿಶ್ವರೂಪನಾದ ಈ ಸೂರ್ಯನು ಕೇಶವನ ಪ್ರಭೆಯಿಂದಲೇ ಪೂರ್ವದಿಕ್ಕಿನಲ್ಲಿ ಪ್ರಕಾಶಿಸುತ್ತಾನೆ. ಇವನ ಪ್ರಭೆಯಿಂದ ವಿಶ್ವವೇ ಬೆಳಗುತ್ತದೆ. ಸಮಸ್ತಪ್ರಾಣಿಗಳಿಗೂ ಉತ್ಪತ್ತಿಸ್ಥಾನನಾಗಿರುತ್ತಾನೆ. ಶ್ರೀಕೃಷ್ಣನು ಮೊದಲು ಜಲವನ್ನು ಸೃಷ್ಟಿಸಿ ಅನಂತರ ಸಂಪೂರ್ಣವಿಶ್ವವನ್ನೂ ಸೃಷ್ಟಿಸಿದನು.

ಋತೂನುತ್ಪಾತಾನ್ವಿವಿಧಾನ್ಯದ್ಭುತಾನಿ
ಮೇಘಾನ್ವಿದ್ಯುತ್ಸರ್ವಮೈರಾವತಂ ಚ ।
ಸರ್ವಂ ಕೃಷ್ಣಾತ್ಸ್ಥಾವರಂ ಜಙ್ಗಮಂ ಚ
ವಿಶ್ವಾತ್ಮಾನಂ ವಿಷ್ಣುಮೇನಂ ಪ್ರತೀಹಿ ॥೩೮॥

ಋತುಗಳು, ನಾನಾಪ್ರಕಾರವಾದ ಉತ್ಪಾತಗಳು, ವಿಧ-ವಿಧವಾದ ಅದ್ಭುತಪದಾರ್ಥಗಳು, ಮೇಘಗಳು, ಮಿಂಚುಗಳು, ಐರಾವತ, ಸಂಪೂರ್ಣವಾದ ಜಂಗಮ-ಸ್ಥಾವರಪ್ರಾಣಿಗಳು–ಎಲ್ಲವೂ ಶ್ರೀಕೃಷ್ಣನಿಂದಲೇ ಹುಟ್ಟಿವೆ. ಇವನನ್ನು ವಿಶ್ವಸ್ವರೂಪನಾದ ವಿಷ್ಣುವೆಂದು ತಿಳಿ.

ವಿಶ್ವಾವಾಸಂ ನಿರ್ಗುಣಂ ವಾಸುದೇವಂ
ಸಂಕರ್ಷಣಂ ಜೀವಭೂತಂ ವದನ್ತಿ ।
ತತಃ ಪ್ರದ್ಯುಮ್ನಮನಿರುದ್ಧಂ ಚತುರ್ಥ-
ಮಾಜ್ಞಾಪಯತ್ಯಾತ್ಮಯೋನಿರ್ಮಹಾತ್ಮಾ ॥೩೯॥

ನಿರ್ಗುಣನಾದ ಈ ಶ್ರೀಕೃಷ್ಣನು ವಿಶ್ವಕ್ಕೇ ನಿವಾಸಸ್ಥಾನನಾಗಿದ್ದಾನೆ. ಶ್ರೀಕೃಷ್ಣನನ್ನು ವಾಸುದೇವ, ಜೀವಭೂತನಾದ ಸಂಕರ್ಷಣ, ಪ್ರದ್ಯುಮ್ನ ಮತ್ತು ನಾಲ್ಕನೆಯವನಾದ ಅನಿರುದ್ಧ–ಈ ಹೆಸರುಗಳಿಂದಲೂ ಕರೆಯುತ್ತಾರೆ. (ಇದಕ್ಕೆ ಚತುರ್ವ್ಯೂಹವೆಂದೂ ಕರೆಯುತ್ತಾರೆ.) ಆತ್ಮಯೋನಿಯಾದ ಪರಮಾತ್ಮನಾದ ಶ್ರೀಕೃಷ್ಣನು ವಿಶ್ವಕ್ಕೇ ಆಜ್ಞೆಮಾಡುವವನಾಗಿದ್ದಾನೆ.

ಸ ಪಞ್ಚಧಾ ಪಞ್ಚಜನೋಪಪನ್ನಂ
ಸಂಚೋದಯನ್ವಿಶ್ವಮಿದಂ ಸಿಸೃಕ್ಷುಃ ।
ತತಶ್ಚಕಾರಾವನಿಮಾರುತೌ ಚ
ಖಂ ಜ್ಯೋತಿರಮ್ಭಶ್ಚ ತಥೈವ ಪಾರ್ಥ ॥೪೦॥

ಯುಧಿಷ್ಠಿರ! ಶ್ರೀಕೃಷ್ಣನು–ದೇವತೆಗಳು, ಅಸುರರು, ಮನುಷ್ಯರು, ಪಿತೃಗಳು ಮತ್ತು ತಿರ್ಯಗ್ಜಂತುಗಳು–ಈ ಐದು ಪ್ರಕಾರವಾದ ಪ್ರಾಣಿಗಳಿಂದ ಕೂಡಿದ ಈ ವಿಶ್ವವನ್ನು ಸೃಷ್ಟಿಸಲು ಇಚ್ಛಿಸಿದವನಾಗಿ ಪೃಥ್ವೀ, ಜಲ, ತೇಜಸ್ಸು, ವಾಯು ಮತ್ತು ಆಕಾಶ–ಈ ಪಂಚಭೂತಗಳನ್ನು ಮೊದಲು ಸೃಷ್ಟಿಸಿದನು.

ಸ ಸ್ಥಾವರಂ ಜಙ್ಗಮಂ ಚೈವಮೇತ-
ಚ್ಚತುರ್ವಿಧಂ ಲೋಕಮಿಮಂ ಚ ಕೃತ್ವಾ ।
ತತೋ ಭೂಮಿಂ ವ್ಯದಧಾತ್ಪಞ್ಚಬೀಜಾಂ
ದ್ಯೌಃ ಪೃಥಿವ್ಯಾಂ ಧಾಸ್ಯತಿ ಭೂರಿ ವಾರಿ ॥೪೧॥

ಇವನು ಜರಾಯುಜಾದಿ ನಾಲ್ಕು ಪ್ರಕಾರವಾದ ಪ್ರಾಣಿಗಳಿಂದ ಯುಕ್ತವಾದ ಚರಾಚರಜಗತ್ತನ್ನು ಸೃಷ್ಟಿಸಲು ಸಂಕಲ್ಪಿಸಿ, ಚತುರ್ವಿಧ ಪ್ರಾಣಿಸಮುದಾಯಗಳು ಮತ್ತು ಕರ್ಮ–ಈ ಐದಕ್ಕೆ ಬೀಜರೂಪವಾದ ಭೂಮಿಯನ್ನು ಸೃಷ್ಟಿಸಿದನು. ಈ ಶ್ರೀಕೃಷ್ಣನೇ ಆಕಾಶಸ್ವರೂಪನಾಗಿ ಭೂಮಿಯಮೇಲೆ ಪ್ರಚುರವಾದ ಮಳೆಗರೆಯುತ್ತಾನೆ.

ತೇನ ವಿಶ್ವಂ ಕೃತಮೇತದ್ಧಿ ರಾಜ-
ನ್ಸ ಜೀವಾತ್ಯಾತ್ಮನೈವಾತ್ಮಯೋನಿಃ ।
ತತೋ ದೇವಾನಸುರಾನ್ಮಾನವಾಂಶ್ಚ
ಲೋಕಾನೃಷೀಂಶ್ಚಾಪಿ ಪಿತೃನ್ಪ್ರಜಾಶ್ಚ।
ಸಮಾಸೇನ ವಿಧಿವತ್ಪ್ರಾಣಿಲೋಕಾ-
ನ್ಸರ್ವಾನ್ಸದಾ ಭೂತಪತಿಃ ಸಿಸೃಕ್ಷುಃ ॥೪೨॥

ಯುಧಿಷ್ಠಿರ! ಶ್ರೀಕೃಷ್ಣನೇ ಈ ಸೃಷ್ಟಿಯನ್ನು ಸೃಷ್ಟಿಸಿದ್ದಾನೆ. ಆತ್ಮ ಯೋನಿಯಾದ ಇವನೇ ತನ್ನ ಶಕ್ತಿಯಿಂದ ಎಲ್ಲ ಪ್ರಾಣಿಗಳನ್ನೂ ಜೀವಿಸಿರು ವಂತೆ ಮಾಡಿದ್ದಾನೆ.(ಎಲ್ಲ ಪ್ರಾಣಿಗಳನ್ನೂ ಕಾಪಾಡುತ್ತಿದ್ದಾನೆ) ದೇವತೆ ಗಳನ್ನೂ, ಅಸುರರನ್ನೂ, ಮನುಷ್ಯರನ್ನೂ, ಲೋಕಗಳನ್ನೂ, ಋಷಿ ಗಳನ್ನೂ, ಪಿತೃಗಳನ್ನೂ, ಪ್ರಜೆಗಳನ್ನೂ ಸಂಕ್ಷೇಪವಾಗಿ ಹೇಳುವು ದಾದರೆ ವಿಧ-ವಿಧವಾದ ಸಮಸ್ತಪ್ರಾಣಿಗಳ ಲೋಕಗಳನ್ನೂ ಭೂತಪತಿ

ಯಾದ ಶ್ರೀಕೃಷ್ಣನು ಸರ್ವಕಾಲದಲ್ಲಿಯೂ ಸೃಷ್ಟಿಮಾಡುವ ಅಪೇಕ್ಷೆಯುಳ್ಳವನಾಗಿದ್ದಾನೆ.

ಶುಭಾಶುಭಂ ಸ್ಥಾವರಂ ಜಙ್ಗಮಂ ಚ
ವಿಷ್ವಕ್ಸೇನಾತ್ಸರ್ವಮೇತತ್ಪ್ರತೀಹಿ ।
ಯದ್ವರ್ತತೇ ಯಚ್ಚ ಭವಿಷ್ಯತೀಹ
ಸರ್ವಂ ಹ್ಯೇತತ್ಕೇಶವಂ ತ್ವಂ ಪ್ರತೀಹಿ ॥೪೩॥

ಯುಧಿಷ್ಠಿರ! ಶುಭಾಶುಭಕರ್ಮಗಳು, ಸ್ಥಾವರ-ಜಂಗಮಗಳು– ಈ ಎಲ್ಲವೂ ವಿಷ್ವಕ್ಸೇನನಿಂದಲೇ ಹುಟ್ಟಿವೆ–ಎಂದು ತಿಳಿದುಕೊ. ಭೂತ, ಭವಿಷ್ಯ ಮತ್ತು ವರ್ತಮಾನ–ಈ ಮೂರೂ ಕೇಶವನ ಸ್ವರೂಪಗಳೇ ಆಗಿವೆ ಎಂಬುದನ್ನು ತಿಳಿ.

ಮೃತ್ಯುಶ್ಚೈವ ಪ್ರಾಣಿನಾಮನ್ತಕಾಲೇ
ಸಾಕ್ಷಾತ್ಕೃಷ್ಣಃ ಶಾಶ್ವತೋ ಧರ್ಮವಾಹಃ ।
ಭೂತಂ ಚ ಯಚ್ಚೇಹ ನ ವಿದ್ಮ ಕಿಂಚಿ-
ದ್ವಿಷ್ವಕ್ಸೇನಾತ್ಸರ್ವಮೇತತ್ಪ್ರತೀಹಿ ॥೪೪॥

ಪ್ರಾಣಿಗಳ ಅಂತ್ಯಕಾಲವು ಸಮೀಪಿಸಿದಾಗ ಧರ್ಮರಕ್ಷಕನಾದ ಸನಾತನನಾದ ಶ್ರೀಕೃಷ್ಣನೇ ಸಾಕ್ಷಾತ್ ಮೃತ್ಯುಸ್ವರೂಪನಾಗಿರುತ್ತಾನೆ.ಹಿಂದೆ ಪ್ರಪಂಚದಲ್ಲಿ ಏನು ನಡೆಯಿತು ಎಂಬುದೂ, ಈಗ ಏನು ನಡೆಯುತ್ತಿದೆ ಎಂಬುದೂ ನಮಗೆ ತಿಳಿಯದು.ಆದರೆ ವಿಷ್ವಕ್ಸೇನನಿಂದಲೇ ಈ ಎಲ್ಲ ಕಾರ್ಯಗಳೂ ನಡೆಯುತ್ತಿವೆಯೆಂಬುದನ್ನು ತಿಳಿದುಕೊ.

ಯತ್ಪ್ರಶಸ್ತಂ ಚ ಲೋಕೇಷು ಪುಣ್ಯಂ ಯಚ್ಚ ಶುಭಾಶುಭಮ್ ।
ತತ್ಸರ್ವಂ ಕೇಶವೋಽಚಿನ್ತ್ಯೋ ವಿಪರೀತಮತಃ ಪರಮ್ ॥೪೫॥

ಮೂರು ಲೋಕಗಳಲ್ಲಿಯೂ ಯಾವುದು ಪ್ರಶಸ್ತವಾಗಿರುವುದೋ, ಪವಿತ್ರವಾಗಿರುವುದೋ, ಶುಭವಾಗಿರುವುದೋ, ಅಶುಭವಾಗಿರುವುದೋ–ಆ ಎಲ್ಲವೂ ಅಚಿಂತ್ಯನಾದ ಶ್ರೀಕೃಷ್ಣನೇ ಆಗಿದ್ದಾನೆ. ಶ್ರೀಕೃಷ್ಣನಿಗಿಂತಲೂ ವಿಭಿನ್ನವಾದ ವಸ್ತುವಿರುವುದೆಂದು ಭಾವಿಸುವುದೇ ವಿಪರೀತಬುದ್ಧಿಯಾಗುತ್ತದೆ. (ಅವಿವೇಕವಾಗುತ್ತದೆ.)

ಏತಾದೃಶಃ ಕೇಶವೋಽತಶ್ಚ ಭೂಯೋ
ನಾರಾಯಣಃ ಪರಮಶ್ಚಾವ್ಯಯಶ್ಚ।
ಮಧ್ಯಾದ್ಯನ್ತಸ್ಯ ಜಗತಸ್ತಸ್ಥುಷಶ್ಚ
ಬುಭೂಷತಾಂ ಪ್ರಭವಶ್ಚಾವ್ಯಯಶ್ಚ ॥೪೬॥

ಭಗವಾನ್ ಶ್ರೀಕೃಷ್ಣನು ಇಂತಹ ಅಪಾರಮಹಿಮೆಯುಳ್ಳವನು. ಪರಮಪುರುಷನೂ ಅವಿನಾಶಿಯೂ ಆದ ಈ ನಾರಾಯಣನು ಹಿಂದೆ ಹೇಳಿರುವುದಕ್ಕಿಂತಲೂ ಅಧಿಕಮಹಿಮೆಯುಳ್ಳವನು. ಇವನೇ ಸ್ಥಾವರ-ಜಂಗಮರೂಪವಾದ ಜಗತ್ತಿಗೆ ಆದಿ-ಮಧ್ಯಾಂತನೂ ಆಗಿದ್ದಾನೆ. ಪ್ರಪಂಚದಲ್ಲಿ ಜನ್ಮವನ್ನು ತಾಳಲು ಇಚ್ಛಿಸುವ ಪ್ರಾಣಿಗಳ ಉತ್ಪತ್ತಿಗೆ ಕಾರಣನಾದ ಅವಿನಾಶಿಯಾದ ಪರಮಾತ್ಮನೂ ಇವನೇ ಆಗಿದ್ದಾನೆ."

ಇಳಿಲನೆಯ ಅಧ್ಯಾಯವು ಮುಗಿಯಿತು.

ಇರ್೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನು ಪ್ರದ್ಯುಮ್ನನಿಗೆ ಬ್ರಾಹ್ಮಣರ ಮಹಿಮೆಯನ್ನು ಹೇಳುತ್ತಾ ದುರ್ವಾಸರ ಚರಿತ್ರೆಯನ್ನು ಉಲ್ಲೇಖಿಸಿದುದು

ಯುಧಿಷ್ಠಿರನು ಭೀಷ್ಮನನ್ನು ಪ್ರಶ್ನಿಸಿದಂತೆಯೇ ಶ್ರೀಕೃಷ್ಣನನ್ನೂ ಪ್ರಶ್ನಿಸುತ್ತಾನೆ:

ಬ್ರೂಹಿ ಬ್ರಾಹ್ಮಣಪೂಜಾಯಾಂ ವ್ಯುಷ್ಟಿಂ ತ್ವಂ ಮಧುಸೂದನ।
ವೇತ್ತಾ ತ್ವಮಸ್ಯ ಚಾರ್ಥಸ್ಯ ವೇದ ತ್ವಾಂ ಹಿ ಪಿತಾಮಹಃ ॥೧॥

"ಮಧುಸೂದನನೇ! ಬ್ರಾಹ್ಮಣರನ್ನು ಸತ್ಕರಿಸುವುದರಿಂದ ಯಾವ ಫಲವು ಪ್ರಾಪ್ತವಾಗುವುದೆಂಬುದನ್ನು ಹೇಳು.ನೀನು ಈ ವಿಷಯವನ್ನು ಚೆನ್ನಾಗಿ ತಿಳಿದಿರುವೆ.ನಿನಗೆ ಈ ವಿಷಯವು ಚೆನ್ನಾಗಿ ತಿಳಿದಿರುವುದೆಂಬುದು ಪಿತಾಮಹನಿಗೂ ತಿಳಿದಿದೆ."

ವಾಸುದೇವನು ಹೇಳುತ್ತಾನೆ:

"ಕುರುಶ್ರೇಷ್ಠನೇ! ಭರತರ್ಷಭನೇ! ಪೂಜಾರ್ಹರಾದ ಬ್ರಾಹ್ಮಣರಲ್ಲಿರುವ ಗುಣಗಳನ್ನು ಯಥಾವತ್ತಾಗಿ ಹೇಳುತ್ತೇನೆ. ಅನನ್ಯಚಿತ್ತನಾಗಿ ಕೇಳು:

ಹಿಂದೊಮ್ಮೆ ನಾನು ದ್ವಾರಾವತಿಯ ಅರಮನೆಯಲ್ಲಿ ಸುಖಾಸೀನನಾಗಿದ್ದಾಗ ಬ್ರಾಹ್ಮಣರಿಂದ ಕೋಪಗೊಳಿಸಲ್ಪಟ್ಟ ಪ್ರದ್ಯುಮ್ನನು ನನ್ನ ಬಳಿಗೆ ಬಂದು ಪ್ರಶ್ನಿಸಿದನು:

ಕಿಂ ಫಲಂ ಬ್ರಾಹ್ಮಣೇಷ್ವಸ್ತಿ ಪೂಜಾಯಾಂ ಮಧುಸೂದನ ।
ಈಶ್ವರತ್ವಂ ಕುತಸ್ತೇಷಾಮಿಹೈವ ಚ ಪರತ್ರ ಚ ॥೪॥

"ತಂದೆಯೇ! ಬ್ರಾಹ್ಮಣರನ್ನು ಪೂಜಿಸುವುದರಿಂದ ಯಾವ ಫಲವು ಲಭಿಸುತ್ತದೆ? ಇಹಲೋಕ-ಪರಲೋಕಗಳಲ್ಲಿ ಅವರಿಗೆ ಈಶ್ವರತ್ವವು ಹೇಗೆ ಲಭಿಸಿತು?

ಮಾನದನೇ! ಸದಾ ಬ್ರಾಹ್ಮಣರನ್ನು ಪೂಜಿಸುವುದರಿಂದ ಯಾವ ಫಲವು ಪ್ರಾಪ್ತವಾಗುತ್ತದೆ? ಈ ವಿಷಯದಲ್ಲಿ ನನಗೆ ದೊಡ್ಡ ಸಂದೇಹವೇ ಉಂಟಾಗಿದೆ.ಆದುದರಿಂದ ಇದನ್ನು ಸ್ಪಷ್ಟವಾಗಿ ಹೇಳು."

ಯುಧಿಷ್ಠಿರ! ಪ್ರದ್ಯುಮ್ನನು ಹೀಗೆ ಪ್ರಶ್ನಿಸಲಾಗಿ ನಾನವನಿಗೆ ಏನು ಹೇಳಿದೆನೆಂಬುದನ್ನು ಏಕಾಗ್ರಚಿತ್ತನಾಗಿ ಕೇಳು:

"ರುಕ್ಮಿಣೀಪುತ್ರನೇ! ಬ್ರಾಹ್ಮಣರ ಪೂಜೆಯಿಂದ ಲಭಿಸುವ ಫಲವೇನೆಂಬದನ್ನು ಹೇಳುವೆನು; ಕೇಳು.ಬ್ರಾಹ್ಮಣರು ಸೋಮನನ್ನೇ ರಾಜನನ್ನಾಗಿ ಹೊಂದಿರತಕ್ಕವರು.ಇಹದಲ್ಲಾಗಲೀ ಪರದಲ್ಲಾಗಲೀ ಪ್ರಾಣಿಗಳ ಸುಖ-ದುಃಖಗಳಿಗೆ ಅವರೇ ಈಶ್ವರರಾಗಿದ್ದಾರೆ. (ಸುಖ-ದುಃಖ ಗಳನ್ನುಂಟುಮಾಡಲು ಸಮರ್ಥರಾಗಿದ್ದಾರೆ.)

ಬ್ರಾಹ್ಮಣಪ್ರಮುಖಂ ಸೌಮ್ಯಂ ನ ಮೇಽತ್ರಾಸ್ತಿ ವಿಚಾರಣಾ ॥೮॥
ಬ್ರಾಹ್ಮಣಪ್ರತಿಪೂಜಾಯಾಮಾಯುಃ ಕೀರ್ತಿರ್ಯಶೋ ಬಲಮ್ ।
ಲೋಕಾ ಲೋಕೇಶ್ವರಾಶ್ಚೈವ ಸರ್ವೇ ಬ್ರಾಹ್ಮಣಪೂಜಕಾಃ ॥೯॥

ಸೋಮಯಾಗಾದಿ ವೇದವಿಹಿತಕರ್ಮಗಳಲ್ಲಿ ಬ್ರಾಹ್ಮಣರೇ ಮುಖ್ಯ ರಾಗಿದ್ದಾರೆ. ಈ ವಿಷಯವನ್ನು ನಾನು ಪುನಃ ಪುನಃ ವಿಚಾರಮಾಡಬೇಕಾದ ಆವಶ್ಯಕತೆಯೇ ಇಲ್ಲ. ಬ್ರಾಹ್ಮಣರನ್ನು ಸತ್ಕರಿಸುವುದರಿಂದ ಆಯುಸ್ಸು, ಕೀರ್ತಿ, ಯಶಸ್ಸು ಮತ್ತು ಬಲಗಳು ಪ್ರಾಪ್ತವಾಗುತ್ತವೆ. ಸಮಸ್ತಲೋಕದವರೂ ಮತ್ತು ಲೋಕೇಶ್ವರರೂ ಬ್ರಾಹ್ಮಣಪೂಜಕರೇ ಆಗಿದ್ದಾರೆ.

ತ್ರಿವರ್ಗೇ ಚಾಪವರ್ಗೇ ಚ ಯಶಃಶ್ರೀರೋಗಶಾನ್ತಿಷು ।
ದೇವತಾಪಿತೃಪೂಜಾಸು ಸಂತೋಷ್ಯಾಶ್ಚೈವ ನೋ ದ್ವಿಜಾಃ ॥೧೦॥

ಧರ್ಮಕಾಮಾರ್ಥಗಳ ಸಿದ್ಧಿಗಾಗಿ, ಮೋಕ್ಷಸಿದ್ಧಿಗಾಗಿ, ಯಶಸ್ಸು-ಸಂಪತ್ತು ಮತ್ತು ಆರೋಗ್ಯಗಳ ಪ್ರಾಪ್ತಿಗಾಗಿ, ದೇವ-ಪಿತೃಗಳ ಪೂಜಾಸಮಯದಲ್ಲಿ ನಾವು ಬ್ರಾಹ್ಮಣರನ್ನು ಸತ್ಕಾರಾದಿಗಳಿಂದ ಸಂತೋಷಗೊಳಿಸಬೇಕು.

ತತ್ಕಥಂ ವೈ ನಾದ್ರಿಯೇಯಮೀಶ್ವರೋಽಸ್ಮೀತಿ ಪುತ್ರಕ ।
ಮಾ ತೇ ಮನ್ಯುರ್ಮಹಾಬಾಹೋ ಭವತ್ವತ್ರ ದ್ವಿಜಾನ್ಪ್ರತಿ ॥೧೧॥

ಮಗು! ಇಂತಹ ಮಹಾತ್ಮರಾದ ಬ್ರಾಹ್ಮಣರನ್ನು ನಾನು ಹೇಗೆತಾನೇ ಆದರಿಸದೇ ಇರಲಿ? 'ನಾನು ಈಶ್ವರನಾಗಿದ್ದೇನೆ. ಏನು ಮಾಡಲೂ ಸಮರ್ಥನಾಗಿದ್ದೇನೆ'–ಎಂಬ ಭಾವನೆಯಿಂದ ನಿನಗೆ ಬ್ರಾಹ್ಮಣರ ವಿಷಯದಲ್ಲಿ ಕೋಪವುಂಟಾಗದಿರಲಿ.

ಬ್ರಾಹ್ಮಣಾ ಹಿ ಮಹದ್ಭೂತಮಸ್ಮಿಲ್ಲೋಕೇ ಪರತ್ರ ಚ ।
ಭಸ್ಮ ಕುರ್ಯುರ್ಜಗದಿದಂ ಕ್ರುದ್ಧಾಃ ಪ್ರತ್ಯಕ್ಷದರ್ಶಿನಃ ॥೧೨॥

ಇಹ-ಪರಗಳೆರಡರಲ್ಲಿಯೂ ಬ್ರಾಹ್ಮಣರು ಮಹಾಪುರುಷರೆಂದು ಹೇಳಲ್ಪಟ್ಟಿದ್ದಾರೆ.ಅವರು ವಿಶ್ವದಲ್ಲಾಗುವುದೆಲ್ಲವನ್ನೂ ಪ್ರತ್ಯಕ್ಷವಾಗಿ (ಅಂತರ್ದೃಷ್ಟಿಯಿಂದ) ನೋಡತಕ್ಕವರು. ಕೋಪಗೊಂಡರೆಂದರೆ ಈ ಜಗತ್ತನ್ನೇ ಭಸ್ಮಮಾಡಿಬಿಡಬಲ್ಲರು.

ಅನ್ಯಾನಪಿ ಸೃಜೇಯುಶ್ಚ ಲೋಕಾನ್ ಲೋಕೇಶ್ವರಾಂಸ್ತಥಾ ।
ಕಥಂ ತೇಷು ನ ವರ್ತೇರನ್ಸಮ್ಯಜ್ಞಾನಾತ್ಸುತೇಜಸಃ ॥೧೩॥

ಅವರೇನಾದರೂ ಬಯಸಿದರೆ ಅನ್ಯಲೋಕಗಳನ್ನೂ ಲೋಕಪಾಲಕರನ್ನೂ ಸೃಷ್ಟಿಸಬಲ್ಲರು.ಆದುದರಿಂದ ತೇಜಸ್ವಿಗಳಾದವರು ಬ್ರಾಹ್ಮಣರಲ್ಲಿರುವ ಮಹತ್ತ್ವವನ್ನು ಚೆನ್ನಾಗಿ ತಿಳಿದೂ ಅವರ ವಿಷಯದಲ್ಲಿ ಒಳ್ಳೆಯ ರೀತಿಯಿಂದ ವರ್ತಿಸದೇ ಹೇಗೆ ತಾನೇ ಇರುವರು? (ಬ್ರಾಹ್ಮಣರ ಮಾಹಾತ್ಮ್ಯೆಯನ್ನು ತಿಳಿದವರು ಅವರ ವಿಷಯದಲ್ಲಿ ಒಳ್ಳೆಯತನದಿಂದ ವ್ಯವಹರಿಸುತ್ತಾರೆ.)

ಅವಸನ್ಮದ್ಗೃಹೇ ತಾತ ಬ್ರಾಹ್ಮಣೋ ಹರಿಪಿಙ್ಗಲಃ ।
ಚೀರವಾಸಾ ಬಿಲ್ವದಣ್ಡೀ ದೀರ್ಘಶ್ಮಶ್ರುಃ ಕೃಶೋ ಮಹಾನ್ ॥೧೪॥

ಹಿಂದೊಮ್ಮೆ ನನ್ನ ಮನೆಯಲ್ಲಿ ಕಂದು-ಹಳದೀಬಣ್ಣದ ಬ್ರಾಹ್ಮಣನೊಬ್ಬನು ವಾಸವಾಗಿದ್ದನು. ಅವನು ನಾರುಬಟ್ಟೆಯನ್ನುಟ್ಟಿದ್ದನು. ಬಿಲ್ವವೃಕ್ಷದ ದಂಡವನ್ನು ಹಿಡಿದಿದ್ದನು. ಅವನ ಮೀಸೇ-ಗಡ್ಡಗಳು ನೀಳವಾಗಿ ಬೆಳೆದಿದ್ದುವು.ಅವನು ಅತ್ಯಂತಕೃಶನಾಗಿದ್ದನು.

ದೀರ್ಘೇಭ್ಯಶ್ಚ ಮನುಷ್ಯೇಭ್ಯಃ ಪ್ರಮಾಣಾದಧಿಕೋ ಭುವಿ ।
ಸ ಸ್ವೈರಂ ಚರತೇ ಲೋಕಾನ್ಯೇ ದಿವ್ಯಾ ಯೇ ಚ ಮಾನುಷಾಃ ॥೧೫॥

ಮನುಷ್ಯರಲ್ಲಿ ಎತ್ತರವಾಗಿರುವ ಜನರಿಗಿಂತಲೂ ಅವನು ಎತ್ತರದಲ್ಲಿ ಅಧಿಕನಾಗಿದ್ದನು.ಸ್ವೇಚ್ಛೆಯಿಂದ ದೇವ-ಮನುಷ್ಯಲೋಕಗಳಲ್ಲಿ ತಿರುಗುತ್ತಿದ್ದನು. ನಾಲ್ಕು ಬೀದಿಗಳು ಕೂಡಿದ ಚೌಕಗಳಲ್ಲಿಯೂ ಸಭೆಗಳಲ್ಲಿಯೂ ಈ ಶ್ಲೋಕವನ್ನು ಹೇಳುತ್ತಿದ್ದನು:

ದುರ್ವಾಸಸಂ ವಾಸಯೇತ್ಕೋ ಬ್ರಾಹ್ಮಣಂ ಸತ್ಕೃತಂ ಗೃಹೇ ॥೧೬॥

"ಬ್ರಾಹ್ಮಣನಾದ ಈ ದುರ್ವಾಸನನ್ನು ಸತ್ಕರಿಸುತ್ತಾ ಮನೆಯಲ್ಲಿ ಇಟ್ಟುಕೊಳ್ಳುವವನು ಯಾವನಿದ್ದಾನೆ?

ರೋಷಣಃ ಸರ್ವಭೂತಾನಾಂ ಸೂಕ್ಷ್ಮೇಽಪ್ಯಪಕೃತೇ ಕೃತೇ ।
ಪರಿಭಾಷಾಂ ಚ ಮೇ ಶ್ರುತ್ವಾ ಕೋ ನು ದದ್ಯಾತ್ಪ್ರತಿಶ್ರಯಮ್ ।
ಯೋ ಮಾಂ ಕಶ್ಚಿದ್ವಾಸಯೀತ ನ ಸ ಮಾಂ ಕೋಪಯೇದಿತಿ ॥೧೭॥

ನನಗೆ ಸ್ವಲ್ಪವಾದರೂ ಅಪರಾಧಮಾಡಿದ್ದೇ ಆದರೆ ನಾನು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಬಹಳವಾಗಿ ಕೋಪಗೊಳ್ಳುತ್ತೇನೆ. ನನ್ನ ಈ ಮಾತನ್ನು ಕೇಳಿದ ಮೇಲೂ ಯಾವನು ತಾನೇ ನನಗೆ ಆಶ್ರಯವನ್ನಿತ್ತಾನು? ಯಾವನು ನನಗೆ ತಂಗಲು ಮನೆಯಲ್ಲಿ ಅವಕಾಶವನ್ನೀಯುವನೋ–ಅವನು ನನಗೆ ಕೋಪಬರುವಂತೆ ನಡೆದುಕೊಳ್ಳಬಾರದು."

ಪ್ರದ್ಯುಮ್ನ! ಹೀಗೆ ಆ ದುರ್ವಾಸಬ್ರಾಹ್ಮಣನು ಹೇಳಿಕೊಂಡು ತಿರುಗುತ್ತಿದ್ದನು.ಅವನ ಮಾತನ್ನು ಕೇಳಿದ ಯಾರೂ ಅವನಿಗೆ ತಮ್ಮ ಮನೆಯಲ್ಲಿ ಆಶ್ರಯವನ್ನು ಕೊಡಲು ಮುಂದೆ ಬರುತ್ತಿರಲಿಲ್ಲ. ಆಗ ನಾನೇ ಹೋಗಿ ಆ ಮಹರ್ಷಿಯನ್ನು ಮನೆಗೆ ಕರೆತಂದು ಸತ್ಕರಿಸಿದೆನು.

ಸ ಸಮ್ಭುಙ್ಕ್ತೇ ಸಹಸ್ರಾಣಾಂ ಬಹೂನಾಮನ್ನಮೇಕದಾ ।
ಏಕದಾ ಸ್ತೋಽಲ್ಪಕಂ ಭುಙ್ಕ್ತೇ ನ ಚೈವೈತಿ ಪುನರ್ಗೃಹಾನ್ ॥೧೯॥

ಆ ದುರ್ವಾಸಬ್ರಾಹ್ಮಣನೊಮ್ಮೆ ಅನೇಕ ಸಹಸ್ರಜನರು ತಿನ್ನುವಷ್ಟು ಅನ್ನವನ್ನು ಒಬ್ಬನೇ ತಿಂದುಬಿಡುತ್ತಿದ್ದನು.ಮತ್ತೊಮ್ಮೆ ಅತ್ಯಲ್ಪವಾದ ಅನ್ನವನ್ನು ತಿನ್ನುತ್ತಿದ್ದನು. ಒಮ್ಮೆ ಮನೆಯನ್ನು ಬಿಟ್ಟುಹೋದನೆಂದರೆ ಪುನಃ ಅನೇಕದಿವಸಗಳವರೆಗೆ ಮನೆಗೆ ಹಿಂದಿರುಗುತ್ತಲೇ ಇರಲಿಲ್ಲ.

ಅಕಸ್ಮಾಚ್ಚ ಪ್ರಹಸತಿ ತಥಾಕಸ್ಮಾತ್ಪ್ರರೋದಿತಿ ।
ನ ಚಾಸ್ಯ ವಯಸಾ ತುಲ್ಯಃ ಪೃಥಿವ್ಯಾಮಭವತ್ತದಾ ॥೨೦॥

ಒಮ್ಮೆ ಆ ಬ್ರಾಹ್ಮಣನು ಗಟ್ಟಿಯಾಗಿ ಗಹಗಹಿಸಿ ನಗುತ್ತಿದ್ದನು. ಮತ್ತೊಮ್ಮೆ ಗಟ್ಟಿಯಾಗಿ ಬಿಕ್ಕಿ-ಬಿಕ್ಕಿ ಅಳುತ್ತಿದ್ದನು.ಆ ಸಮಯದಲ್ಲಿ ಪೃಥ್ವಿಯಲ್ಲಿ ಅವನ ಸಮವಯಸ್ಕರು ಯಾರೂ ಇರಲಿಲ್ಲ.

ಅಥ ಸ್ವಾವಸಥಂ ಗತ್ವಾ ಸ ಶಯ್ಯಾಸ್ತರಣಾನಿ ಚ ।
ಕನ್ಯಾಶ್ಚಾಲಂಕೃತಾ ದಗ್ಧ್ವಾ ತತೋ ವ್ಯಪಗತಃ ಪುನಃ ॥೨೧॥

ಅನೇಕದಿವಸಗಳವರೆಗೆ ಹೊರಹೋಗಿದ್ದ ಆ ಬ್ರಾಹ್ಮಣನು ಒಂದು ದಿನ, ನಾನು ಅವನಿಗಾಗಿ ಸಿದ್ಧಗೊಳಿಸಿದ್ದ ಬಿಡಾರಕ್ಕೆ ಹೋಗಿ, ಅಲ್ಲಿದ್ದ ಹಾಸಿಗೆಯನ್ನೂ ಮತ್ತು ಹಾಸಿಗೆಯ ಮೇಲೆ ಹೊದ್ದಿಸಿದ್ದ ಹಚ್ಚಡವನ್ನೂ, ಆಭರಣಗಳಿಂದ ಅಲಂಕೃತೆಯರಾಗಿದ್ದ, ಅವನ ಶುಶ್ರೂಷೆಗೆ ಸಿದ್ಧರಾಗಿದ್ದ ಕನ್ಯೆಯರನ್ನೂ ಸುಟ್ಟು ಭಸ್ಮಮಾಡಿ ಪುನಃ ಹೊರಟುಹೋದನು. ಮತ್ತೊಮ್ಮೆ ನನ್ನ ಬಳಿಗೆ ಬಂದು ಕಠೋರವ್ರತನಿಷ್ಠನಾದ ಆ ಮುನಿಯು ಹೇಳಿದನು:

ಕೃಷ್ಣ ಪಾಯಸಮಿಚ್ಛಾಮಿ ಭೋಕ್ತುಮಿತ್ಯೇವ ಸತ್ವರಃ ॥೨೨॥

"ಕೃಷ್ಣ! ನಾನು ಈ ಕೂಡಲೇ ಪಾಯಸವನ್ನು ಕುಡಿಯಲು ಬಯಸಿದ್ದೇನೆ. "

ನಾನು ಮುನಿಯ ಮನಸ್ಸನ್ನು ತಿಳಿದಿದ್ದ ಕಾರಣ ನನ್ನ ಮನೆಯ ಜನರಿಗೆ ಸಕಲವಿಧವಾದ ಅನ್ನಗಳನ್ನೂ, ಪಾನಗಳನ್ನೂ, ವಿಧ-ವಿಧವಾದ ಭಕ್ಷ್ಯಗಳನ್ನೂ ಆದರದಿಂದ ಸಿದ್ಧಪಡಿಸಿರಬೇಕೆಂದು ಆಜ್ಞಾಪಿಸಿದ್ದೆನು. ನಾನು ಹೇಳಿದ್ದಂತೆಯೇ ಎಲ್ಲ ಭೋಜ್ಯವಸ್ತುಗಳೂ ಸಿದ್ಧವಾಗಿಯೇ ಇದ್ದುವು. ಆದುದರಿಂದ ಮುನಿಯು, ಪಾಯಸವು ಬೇಕೆಂದು ಹೇಳಿದೊಡನೆಯೇ ಬಿಸಿಯಾಗಿದ್ದ ಪಾಯಸವನ್ನೇ ಅವನಿಗೆ ಅರ್ಪಿಸಿದೆನು.

ಮುನಿಯು ನಾನು ಕೊಟ್ಟ ಪಾಯಸವನ್ನು ಶೀಘ್ರವಾಗಿ ಕುಡಿದು ಪುನಃ ಹೇಳಿದನು:

ಕ್ಷಿಪ್ರಮಙ್ಗಾನಿ ಲಿಮ್ಪಸ್ವ ಪಾಯಸೇನೇತಿ ಸ ಸ್ಮ ಹ ॥೨೫॥

'ಮಿಕ್ಕ ಈ ಪಾಯಸವನ್ನು ಬೇಗ ನಿನ್ನ ಎಲ್ಲ ಅಂಗಾಂಗಗಳಿಗೂ ಲೇಪಿಸಿಕೋ.'

ನನ್ನ ಶರೀರಕ್ಕೆಲ್ಲಾ ಮಿಕ್ಕ ಪಾಯಸವನ್ನು ಬಳಿದುಕೊಳ್ಳಬಹುದೇ? ಬಳಿದುಕೊಳ್ಳಬಾರದೇ–ಎಂಬುದನ್ನೂ ವಿವೇಚಿಸದೇ ಅವನು ಕುಡಿದು ಮಿಕ್ಕಿದ್ದ ಪಾಯಸದಿಂದ ನನ್ನ ತಲೆಯನ್ನೂ ಅಂಗಾಂಗಗಳನ್ನೂ ಲೇಪಿಸಿಬಿಟ್ಟೆನು. ಆ ವೇಳೆಗೆ ಸರಿಯಾಗಿ ಅನತಿದೂರದಲ್ಲಿಯೇ ನಿಂತಿದ್ದ ಶುಭವದನೆಯಾದ ನಿನ್ನ ತಾಯಿಯನ್ನು (ರುಕ್ಮಿಣಿಯನ್ನು) ದುರ್ವಾಸನು ನೋಡಿದನು. ಅವಳ ಶರೀರಕ್ಕೂ ಪಾಯಸವನ್ನು ಲೇಪಿಸುವಂತೆ ಮಹರ್ಷಿಯು ಆಜ್ಞಾಪಿಸಿದನು. ಅವನ ಆಜ್ಞಾನುಸಾರವಾಗಿ ನಗು-ನಗುತ್ತಿದ್ದ ನಿನ್ನ ತಾಯಿಯ ಶರೀರಕ್ಕೂ ಕುಡಿದು ಮಿಕ್ಕಿದ್ದ ಆ ಪಾಯಸವನ್ನು ಬಳಿದೆನು. ಪಾಯಸದಿಂದಲೇ ಸಂಪೂರ್ಣವಾಗಿ ನೆನೆದುಹೋಗಿದ್ದ ರುಕ್ಮಿಣೀದೇವಿಯನ್ನು ದುರ್ವಾಸಮುನಿಯು ಬಹಳ ಶೀಘ್ರವಾಗಿ ರಥದ ಮೂಕಿಗೆ ಬಿಗಿದನು. ಆ ರಥದ ಮೇಲೆಯೇ ಅವನು ಕುಳಿತು ನನ್ನ ಮನೆಯಿಂದ ಹೊರಬಿದ್ದನು. ಬುದ್ಧಿವಂತನಾದ, ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ದುರ್ವಾಸನು ರಥಕ್ಕೆ ಕಟ್ಟಿದ್ದ ಕುದುರೆಯನ್ನು ಚಾವಟಿಯಿಂದ ಪ್ರಹರಿಸುವಂತೆ ನಾನು ನೋಡುತ್ತಿದ್ದಂತೆಯೇ ಬಾಲೆಯಾದ ರುಕ್ಮಿಣಿಯನ್ನು ಚಾವಟಿಯಿಂದ ಪ್ರಹರಿಸುತ್ತಿದ್ದನು.

ಆ ಸಮಯದಲ್ಲಿ ನನಗೆ ಸ್ವಲ್ಪವಾದರೂ ಈರ್ಷ್ಯೆಯಾಗಲೀ,

ದುಃಖವಾಗಲೀ ಉಂಟಾಗಲಿಲ್ಲ. ಹಾಗೆಯೇ ಅವನು ಅರಮನೆಯ ಆವರಣದಿಂದ ಹೊರಬಂದು ರಥದಲ್ಲಿ ಕುಳಿತು ದೊಡ್ಡದಾದ ರಾಜಮಾರ್ಗದಲ್ಲಿ ಹೊರಟನು.

ದುರ್ವಾಸನು ರಥದಲ್ಲಿ ಕುಳಿತಿರುವ ಮತ್ತು ರುಕ್ಮಿಣಿಯು ರಥವನ್ನು ಕುದುರೆಯಂತೆ ಎಳೆಯುತ್ತಿರುವ ಮಹಾಶ್ಚರ್ಯಕರವಾದ ದೃಶ್ಯವನ್ನು ನೋಡಿ ದಶಾರ್ಹವಂಶೀಯರಿಗೆ ಮಹಾಕ್ರೋಧವೇ ಉಂಟಾಯಿತು. ಅವರಲ್ಲಿ ಕೆಲವರು ತಮ್ಮ-ತಮ್ಮಲ್ಲಿಯೇ ಮಾತನಾಡಿಕೊಂಡು ಹೀಗೆ ಹೇಳಿದರು:

ಬ್ರಾಹ್ಮಣಾ ಏವ ಜಾಯೇರನ್ನಾನ್ಯೋ ವರ್ಣಃ ಕಥಂಚನ ।
ಕೋ ಹ್ಯೇನಂ ರಥಮಾಸ್ಥಾಯ ಜೀವೇದನ್ಯಃ ಪುಮಾನಿಹ ॥೩೨॥

“ಈ ಪ್ರಪಂಚದಲ್ಲಿ ಬ್ರಾಹ್ಮಣರೊಬ್ಬರೇ ಹುಟ್ಟಬೇಕು. ಬೇರೆ ಯಾರೂ ಯಾವ ಕಾರಣದಿಂದಲೂ ಹುಟ್ಟಲೇಬಾರದು. ಈ ಬ್ರಾಹ್ಮಣನನ್ನು ಬಿಟ್ಟು ಬೇರೆ ಯಾವನು ತಾನೇ ರುಕ್ಮಿಣಿಯು ಎಳೆಯುತ್ತಿರುವ ಈ ರಥದಲ್ಲಿ ಕುಳಿತು ಜೀವಂತನಾಗಿರಲು ಸಾಧ್ಯವಾಗುತ್ತಿದ್ದಿತು? (ಬೇರೆ ಯಾವನಾದರೂ ಹೀಗೆ ಮಾಡಿದ್ದಿದ್ದರೆ ಅವನು ಜೀವಂತನಾಗಿ ಉಳಿಯುತ್ತಿರಲಿಲ್ಲ.)

ಆಶೀವಿಷವಿಷಂ ತೀಕ್ಷ್ಣಂ ತತಸ್ತೀಕ್ಷ್ಣತರೋ ದ್ವಿಜಃ ।
ಬ್ರಹ್ಮಾಶೀವಿಷದಗ್ಧಸ್ಯ ನಾಸ್ತಿ ಕಶ್ಚಿಚ್ಚಿಕಿತ್ಸಕಃ ॥೩೩॥

ಸರ್ಪದ ವಿಷವು ತೀಕ್ಷ್ಣವಾದುದೆಂದು ಹೇಳುತ್ತಾರೆ. ಸರ್ಪದವಿಷಕ್ಕಿಂತಲೂ ಬ್ರಾಹ್ಮಣನು ಅತಿತೀಕ್ಷ್ಣನು. ಬ್ರಾಹ್ಮಣರೂಪಿಯಾದ ವಿಷಸರ್ಪದಿಂದ ಸುಡಲ್ಪಟ್ಟವನಿಗೆ ಈ ಪ್ರಪಂಚದಲ್ಲಿ ಯಾವ ವೈದ್ಯನೂ ಇಲ್ಲ.”

ಪ್ರದ್ಯುಮ್ನ! ಎದುರಿಸಲು ಅಸಾಧ್ಯನಾದ ದುರ್ವಾಸಮುನಿಯು ಹೀಗೆ ರಥದಲ್ಲಿ ಹೋಗುತ್ತಿರುವಾಗ ರಥವನ್ನೆಳೆಯುತ್ತಿದ್ದ ರುಕ್ಮಿಣಿಯೊಮ್ಮೆ ತತ್ತರಿಸಿದಳು. ಅದನ್ನು ಮಹರ್ಷಿಯು ಸಹಿಸಲಿಲ್ಲ. ಜಾರಿಬಿದ್ದ ಕುದುರೆಯನ್ನು ಚಾವಟಿಯಿಂದ ಪ್ರಹರಿಸಿ ಮೇಲಕ್ಕೆಬ್ಬಿಸುವಂತೆ ಶ್ರೀಮಂತನಾದ ದುರ್ವಾಸನು ಒಡನೆಯೇ ರುಕ್ಮಿಣಿಯನ್ನು ಚಾವಟಿಯಿಂದ ಪ್ರಹರಿಸಿ

ಮುಂದೆ ನಡೆಯುವಂತೆ ಪ್ರಚೋದಿಸುತ್ತಿದ್ದನು. ಆದರೆ ಇಂತಹ ಶ್ರಮವನ್ನು ಅರಿಯದ ರುಕ್ಮಿಣಿಗೆ ಎದ್ದುನಿಂತು ಪುನಃ ರಥವನ್ನು ಎಳೆದುಕೊಂಡು ಹೋಗಲು ಸಾಧ್ಯವಾಗಲೇ ಇಲ್ಲ. ಕ್ಷಣ-ಕ್ಷಣಕ್ಕೂ ತತ್ತರಿಸುತ್ತಲೇ ಇದ್ದಳು. ಅದರಿಂದ ಪರಮಕ್ರುದ್ಧನಾದ ದುರ್ವಾಸನು ರಥದಿಂದ ಕೆಳಕ್ಕೆ ಧುಮುಕಿ, ರಾಜಮಾರ್ಗವನ್ನು ಬಿಟ್ಟು ದಕ್ಷಿಣಕ್ಕೆ ತಿರುಗಿ ತಪ್ಪುದಾರಿಯಲ್ಲಿ ಬರಿಗಾಲಿನಿಂದಲೇ ಓಡತೊಡಗಿದನು. ಪಾಯಸದಿಂದ ನೆನೆದಿದ್ದ ಶರೀರದಿಂದ ಕೂಡಿದ್ದ ನಾನು ಕೂಡ ತಪ್ಪುದಾರಿಯಲ್ಲಿ ಓಡಿಹೋಗುತ್ತಿದ್ದ ದ್ವಿಜಶ್ರೇಷ್ಠನಾದ ದುರ್ವಾಸನನ್ನು ಹಿಂಬಾಲಿಸಿ ಹೋಗಿ - 'ಪ್ರಸೀದ ಭಗವನ್! ಪೂಜ್ಯನೇ! ಪ್ರಸನ್ನನಾಗು'—ಎಂದು ಪ್ರಾರ್ಥಿಸಿದೆನು. ಬಳಿಕ ತೇಜಸ್ವಿಯಾದ ಆ ಬ್ರಾಹ್ಮಣನು ನನ್ನನ್ನು ನೋಡಿ ಹೇಳಿದನು:

ಜಿತಃ ಕ್ರೋಧಸ್ತ್ವಯಾ ಕೃಷ್ಣ ಪ್ರಕೃತ್ಯೈವ ಮಹಾಭುಜ ॥೩೭॥
ನ ತೇಽಪರಾಧಮಿಹ ವೈ ದೃಷ್ಟವಾನಸ್ಮಿ ಸುವ್ರತ ।
ಪ್ರೀತೋಽಸ್ಮಿ ತವ ಗೋವಿನ್ದ ವೃಣು ಕಾಮಾನ್ಯಥೇಪ್ಸಿತಾನ್ ॥೩೮॥

"ಮಹಾಭುಜನೇ! ಶ್ರೀಕೃಷ್ಣ! ನೀನು ಸ್ವಭಾವದಿಂದಲೇ ಕೋಪವನ್ನು ಜಯಿಸಿರುವೆ. ಸುವ್ರತನೇ! ನಿನ್ನಲ್ಲಿ ನಾನು ಯಾವ ಅಪರಾಧವನ್ನೂ ಕಾಣಲಿಲ್ಲ. ಗೋವಿಂದನೇ! ನಿನ್ನ ವಿಷಯದಲ್ಲಿ ನಾನು ಸುಪ್ರೀತನಾಗಿದ್ದೇನೆ. ಮನೋವಾಂಛಿತವಾದ ಕಾಮನೆಗಳನ್ನು ಕೇಳಿಕೊ.

ಪ್ರಸನ್ನಸ್ಯ ಚ ಮೇ ತಾತ ಪಶ್ಯ ವ್ಯುಷ್ಟಿಂ ಯಥಾವಿಧಿ ।
ಯಾವದೇವ ಮನುಷ್ಯಾಣಾಮನ್ನೇ ಭಾವೋ ಭವಿಷ್ಯತಿ ॥೩೯॥
ಯಥೈವಾನ್ನೇ ತಥಾ ತೇಷಾಂ ತ್ವಯಿ ಭಾವೋ ಭವಿಷ್ಯತಿ ॥೪೦॥

ಮಗು! ನಾನು ಪ್ರಸನ್ನನಾಗಿರುವುದರಿಂದ ನಿನಗೆ ಎಂತಹ ಫಲವು ಪ್ರಾಪ್ತವಾಗುವುದೆಂಬುದನ್ನು ವಿಧಿಪೂರ್ವಕವಾಗಿ ಕೇಳು. ಎಂದಿನವರೆಗೆ ಮನುಷ್ಯರಿಗೆ ಅನ್ನದ ಮೇಲೆ ಪ್ರೀತಿಯಿರುವುದೋ—ಅಂದಿನವರೆಗೂ ಅನ್ನದ ಮೇಲಿರುವ ಪ್ರೀತಿಯಂತೆಯೇ ನಿನ್ನ ಮೇಲೂ ಮನುಷ್ಯರಿಗೆ ಪ್ರೀತಿಯಿರುತ್ತದೆ.

ಯಾವಚ್ಚ ಪುಣ್ಯಾ ಲೋಕೇಷು ತ್ವಯಿ ಕೀರ್ತಿರ್ಭವಿಷ್ಯತಿ ।
ತ್ರಿಷು ಲೋಕೇಷು ತಾವಚ್ಚ ವೈಶಿಷ್ಟ್ಯಂ ಪ್ರತಿಪತ್ಸ್ಯಸೇ ।
ಸುಪ್ರಿಯಃ ಸರ್ವಲೋಕಸ್ಯ ಭವಿಷ್ಯಸಿ ಜನಾರ್ದನ ॥೪೧॥

ಜನಾರ್ದನನೇ! ಎಲ್ಲಿಯವರೆಗೆ ಮೂರು ಲೋಕಗಳಲ್ಲಿಯೂ ಪುಣ್ಯಮಯವಾದ ನಿನ್ನ ಕೀರ್ತಿಯು ಹರಡಿರುವುದೋ-ಅಲ್ಲಿಯವರೆಗೆ ಮೂರು ಲೋಕಗಳಲ್ಲಿಯೂ ನೀನು ವೈಶಿಷ್ಟ್ಯವನ್ನು (ಪ್ರಾಧಾನ್ಯವನ್ನು) ಹೊಂದುವೆ. ನೀನು ಎಲ್ಲ ಜನರಿಗೂ ಪರಮಪ್ರಿಯನಾಗುವೆ.

ಯತ್ತೇ ಭಿನ್ನಂ ಚ ದಗ್ಧಂ ಚ ಯಚ್ಚ ಕಿಂಚಿದ್ವಿನಾಶಿತಮ್ ।
ಸರ್ವಂ ತಥೈವ ದ್ರಷ್ಟಾಸಿ ವಿಶಿಷ್ಟಂ ವಾ ಜನಾರ್ದನ ॥೪೨॥

ಜನಾರ್ದನನೇ! ನನ್ನಿಂದ ನಿನ್ನ ಯಾವ ವಸ್ತುಗಳು ಒಡೆಯಲ್ಪಟ್ಟಿವೆಯೋ, ಸುಡಲ್ಪಟ್ಟಿವೆಯೋ, ವಿನಾಶಗೊಳಿಸಲ್ಪಟ್ಟಿವೆಯೋ– ಆ ಎಲ್ಲ ವಸ್ತುಗಳೂ ಹಿಂದಿನಂತೆಯೇ ಸ್ವಸ್ಥಾನದಲ್ಲಿರುವುದನ್ನು ನೀನು ಕಾಣುವೆ. ಆ ವಸ್ತುಗಳಿಗೆ ಹಿಂದಿಗಿಂತಲೂ ಹೆಚ್ಚಿನ ವೈಶಿಷ್ಟ್ಯವೂ ಉಂಟಾಗಿರುತ್ತದೆ.

ಯಾವದೇತತ್ಪ್ರಲಿಪ್ತಂ ತೇ ಗಾತ್ರೇಷು ಮಧುಸೂದನ ।
ಅತೋ ಮೃತ್ಯುಭಯಂ ನಾಸ್ತಿ ಯಾವದಿಚ್ಛಸಿ ಚಾಚ್ಯುತ ॥೪೩॥

ಮಧುಸೂದನನೇ! ನಿನ್ನ ಅಂಗಾಂಗಗಳಲ್ಲಿ ಉಚ್ಛಿಷ್ಟವಾದ ಪಾಯಸ ವನ್ನು ಲೇಪಿಸಿಕೊಂಡಿರುವೆ. ಈ ಕಾರಣದಿಂದಲೇ ನೀನು ಅಪೇಕ್ಷಿಸು ವವರೆಗೂ ನಿನಗೆ ಮೃತ್ಯುಭಯವಿರುವುದಿಲ್ಲ. (ನೀನು ಇಚ್ಛಾಮರಣಿಯಾಗುವೆ.)

ನ ತು ಪಾದತಲೇ ಲಿಪ್ತೇ ಕಸ್ಮಾತ್ತೇ ಪುತ್ರಕಾದ್ಯ ವೈ ।
ನೈತನ್ಮೇ ಪ್ರಿಯಮಿತ್ಯೇವಂ ಸ ಮಾಂ ಪ್ರೀತೋಽಬ್ರವೀತ್ತದಾ ॥೪೪॥

ಆದರೆ, ಮಗು! ಕೃಷ್ಣ! ನೀನು ಪಾಯಸವನ್ನು ನಿನ್ನ ಅಂಗಾಲುಗಳಿಗೆ ಏಕೆ ಲೇಪಿಸಿಕೊಳ್ಳಲಿಲ್ಲ? ಹೀಗೆ ಮಾಡಿದುದು ನನಗೆ ಪ್ರಿಯವಾಗಲಿಲ್ಲ"– ಎಂದು ಪ್ರೀತಿಪೂರ್ವಕವಾಗಿ ದುರ್ವಾಸನು ನನ್ನೊಡನೆ ಹೇಳಿದ ಮರುಕ್ಷಣದಲ್ಲಿಯೇ ನನ್ನ ಶರೀರವು ಅತ್ಯಂತಕಾಂತಿಯುಕ್ತವಾಗಿದ್ದುದನ್ನು ನಾನು ಕಂಡುಕೊಂಡೆನು. ಅನಂತರ ಆ ಬ್ರಾಹ್ಮಣನು ರುಕ್ಮಿಣಿಗೆ ಪ್ರಸನ್ನತಾಪೂರ್ವಕವಾಗಿ ಹೇಳಿದನು:

"ಶೋಭನಳೇ! ನೀನು ಲೋಕದಲ್ಲಿರುವ ಎಲ್ಲ ಸ್ತ್ರೀಯರಿಗಿಂತಲೂ ಶ್ರೇಷ್ಠವಾದ ಯಶಸ್ಸನ್ನೂ ಉತ್ತಮೋತ್ತಮವಾದ ಕೀರ್ತಿಯನ್ನೂ ಹೊಂದುವೆ. ಮುಪ್ಪಾಗಲೀ, ರೋಗವಾಗಲೀ, ವೈವರ್ಣ್ಯವಾಗಲೀ (ಕಾಂತಿಹೀನತ್ವ ವಾಗಲೀ) ನಿನ್ನ ಬಳಿಗೆ ಬರುವುದಿಲ್ಲ. ನೀನು ಪುಣ್ಯಗಂಧಗಳಿಂದ ಸುವಾಸಿತಳಾಗಿ ಶ್ರೀಕೃಷ್ಣನನ್ನು ಸರ್ವದಾ ಆರಾಧಿಸುವೆ.

ಷೋಡಶಾನಾಂ ಸಹಸ್ರಾಣಾಂ ವಧೂನಾಂ ಕೇಶವಸ್ಯ ಹ ।
ವರಿಷ್ಠಾ ಚ ಸಲೋಕ್ಯಾ ಚ ಕೇಶವಸ್ಯ ಭವಿಷ್ಯಸಿ ॥೪೭॥

ಶ್ರೀಕೃಷ್ಣನ ಹದಿನಾರು ಸಾವಿರ ಪತ್ನಿಯರಲ್ಲಿ ನೀನು ಶ್ರೇಷ್ಠಳೂ, ಕೇಶವನಿಗೆ ಸಾಲೋಕ್ಯಳೂ (ಸುದರ್ಶನಳೂ) ಆಗುವೆ."

ಪ್ರದ್ಯುಮ್ನ! ನಿನ್ನ ತಾಯಿಯೊಡನೆ ಹೀಗೆ ಹೇಳಿ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಮಹಾತೇಜಸ್ವಿಯಾದ ದುರ್ವಾಸಬ್ರಾಹ್ಮಣನು ಮನೆಯಿಂದ ಹೊರಡುವ ಸಮಯದಲ್ಲಿ ನನ್ನೊಡನೆ ಹೇಳಿದನು:

ಏಷೈವ ತೇ ಬುದ್ಧಿರಸ್ತು ಬ್ರಾಹ್ಮಣಾನ್ಪ್ರತಿ ಕೇಶವ ॥೪೯॥

"ಕೇಶವನೇ! ಬ್ರಾಹ್ಮಣರ ವಿಷಯದಲ್ಲಿ ನಿನಗೆ ಇದೇ ರೀತಿಯ ಬುದ್ಧಿಯಿರಲಿ."

ಕುಮಾರ! ಹೀಗೆ ಹೇಳಿ ಆ ಮುನಿಯು ಅಲ್ಲಿಯೇ ಮಾಯವಾದನು.ಅಂದಿನಿಂದಲೇ ನಾನು ರಹಸ್ಯವಾಗಿ ಈ ವ್ರತವನ್ನು ಕೈಗೊಂಡೆನು. 'ಯತ್ಕಿಂಚಿದ್ಬ್ರಾಹ್ಮಣೋ ಬ್ರೂಯಾತ್ಸರ್ವಂ ಕುರ್ಯಾಂ-ಯಾವನೇ ಬ್ರಾಹ್ಮಣನು ಏನೇ ಹೇಳಿದರೂ ಅ ಎಲ್ಲ ಕಾರ್ಯಗಳನ್ನೂ ಹಿಂದು-ಮುಂದು ನೋಡದೇ ಮಾಡುತ್ತೇನೆ'–ಎಂಬುದೇ ಆ ರಹಸ್ಯದ ಪ್ರತಿಜ್ಞೆಯಾಗಿದೆ. ಈ ವ್ರತವನ್ನು ಕೈಗೊಂಡು ಪ್ರಹೃಷ್ಟಾತ್ಮನಾಗಿ ನಿನ್ನ ತಾಯಿಯೊಡನೆ ನಾನು ಅರಮನೆಗೆ ಹೋದೆನು. ನಾನು ಅರಮನೆಯನ್ನು ಪ್ರವೇಶಿಸುತ್ತಲೇ ಆ ಬ್ರಾಹ್ಮಣನು ಒಡೆದುಹಾಕಿದ್ದ, ಸುಟ್ಟುಹಾಕಿದ್ದ ಮತ್ತು

ವಿನಾಶಗೊಳಿಸಿದ್ದ ಪದಾರ್ಥಗಳೆಲ್ಲವೂ ಹೊಚ್ಚಹೊಸದಾಗಿದ್ದುದನ್ನು ಕಂಡೆನು. ಎಲ್ಲ ಪದಾರ್ಥಗಳೂ ಹೊಸದಾಗಿದ್ದುದನ್ನೂ ದೃಢವಾಗಿದ್ದುದನ್ನೂ ನೋಡಿ ನಾನು ಅತ್ಯಂತ ವಿಸ್ಮಯಗೊಂಡೆನು. ಅಂದಿನಿಂದ ನಾನು ಬ್ರಾಹ್ಮಣರನ್ನು ಸರ್ವಕಾಲದಲ್ಲಿಯೂ ಮನಸ್ಸಿನಿಂದಲೇ ಪೂಜಿಸುತ್ತಿದ್ದೇನೆ.”

ಯುಧಿಷ್ಠಿರ! ಹೀಗೆ ಪ್ರದ್ಯುಮ್ನನು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ದ್ವಿಜಮುಖ್ಯನಾದ ದುರ್ವಾಸನ ಸಮಗ್ರವಾದ ಮಾಹಾತ್ಮ್ಯೆಯನ್ನು ನಾನು ಹೇಳಿದೆನು. ಕೌಂತೇಯನನೇ! ನೀನು ಕೂಡ ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರನ್ನು ಮಧುರವಾದ ಮಾತುಗಳಿಂದಲೂ ದಾನಗಳಿಂದಲೂ ಸತತವಾಗಿ ಆರಾಧಿಸು.ಬ್ರಾಹ್ಮಣನ ಅನುಗ್ರಹದಿಂದಾಗಿ ನಾನು ಈ ಫಲವನ್ನು ಪಡೆದುಕೊಂಡೆನು. ಭೀಷ್ಮನು ನನ್ನ ವಿಷಯವಾಗಿ ಏನು ಹೇಳಿರುವನೋ ಅದು ಸತ್ಯವೇ ಆಗಿದೆ.”

೧೫೯ನೆಯ ಅಧ್ಯಾಯವು ಮುಗಿಯಿತು.

೧೬೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನಿಂದ ಶಂಕರನ ಮಾಹಾತ್ಮ್ಯಕಥನ

ಯುದಿಷ್ಠಿರನು ಹೇಳುತ್ತಾನೆ:

ದುರ್ವಾಸಸಃ ಪ್ರಸಾದಾತ್ತೇ ಯತ್ತದಾ ಮಧುಸೂದನ।
ಅವಾಪ್ತಮಿವ ವಿಜ್ಞಾನಂ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

ಮಧುಸೂದನನೇ! ಆ ಸಮಯದಲ್ಲಿ ದುರ್ವಾಸಮಹರ್ಷಿಯಿಂದ ಯಾವ ವಿಶೇಷವಾದ ಜ್ಞಾನವು ಪ್ರಾಪ್ತವಾಯಿತೋ–ಅದನ್ನು ನನಗೆ ವಿವರಿಸಿ ಹೇಳುವ ಕೃಪೆಮಾಡು.

ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಕೃಷ್ಣ! ಮಹಾತ್ಮನಾದ ದುರ್ವಾಸ ಮುನಿಯ ಮಹಾಸೌಭಾಗ್ಯವನ್ನೂ ಮತ್ತು ಅವನ ಶುಭನಾಮಗಳನ್ನೂ ನಿನ್ನಿಂದ ಯಥಾವತ್ತಾಗಿ ತಿಳಿಯಲು ಬಯಸಿದ್ದೇನೆ.”

*ಶ್ರೀಕೃಷ್ಣನು ಹೇಳುತ್ತಾನೆ:

"ಯುಧಿಷ್ಠಿರ! ಜಟಾಜೂಟಧರನಾದ ಶಂಕರನಿಗೆ ನಮಸ್ಕರಿಸಿ ಮಹರ್ಷಿಯಿಂದ ನಾನು ಎಂತಹ ಅಮೋಘವಾದ ಶ್ರೇಯಸ್ಸನ್ನೂ ಮತ್ತು ಯಶಸ್ಸನ್ನೂ ಪಡೆದುಕೊಂಡೆನೆಂಬುದನ್ನು ಸಂತೋಷದಿಂದ ಹೇಳುತ್ತೇನೆ.

ಪ್ರಜಾನಾಥನೇ! ನಾನು ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಎದ್ದು ಇಂದ್ರಿಯಗಳನ್ನು ಸಂಯಮಿಸಿ ಕೈಜೋಡಿಸಿಕೊಂಡು ಯಾವ ಶತರುದ್ರೀಯ ವನ್ನು ಪಾರಾಯಣಮಾಡುವೆನೋ ಅದನ್ನು ಹೇಳುವೆನು ಕೇಳು:

ಮಹಾತಪಸ್ವಿಯಾದ ಪ್ರಜಾಪತಿಯು ತಪಸ್ಸಿನ ಕಡೆಯಲ್ಲಿ ಈ ಶತರುದ್ರೀಯವನ್ನು ಸೃಷ್ಟಿಸಿದನು ಮತ್ತು ಶಂಕರನು ಸಮಸ್ತಚರಾಚರ ಪ್ರಾಣಿಗಳನ್ನೂ ಸೃಷ್ಟಿಸಿದನು.

ಮಹಾದೇವನಿಗಿಂತಲೂ ಅಧಿಕನಾದ ದೇವನು ಮೂರು ಲೋಕ ಗಳಲ್ಲಿಯೂ ಯಾವೊಬ್ಬನೂ ಇರುವುದಿಲ್ಲ. ಏಕೆಂದರೆ: ಅವನೇ ಎಲ್ಲ ಪ್ರಾಣಿಗಳ ಉತ್ಪತ್ತಿಗೂ ಕಾರಣನಾಗಿರುತ್ತಾನೆ. ಮಹಾತ್ಮನಾದ ಶಂಕರನ ಮುಂಭಾಗದಲ್ಲಿ ನಿಲ್ಲಲು ಕೂಡ ಯಾವನೂ ಸಮರ್ಥನಲ್ಲ. ಮೂರು ಲೋಕಗಳಲ್ಲಿ ಅವನಿಗೆ ಸಮಾನವಾದ ಯಾವ ಪ್ರಾಣಿಯೂ ಇರುವುದಿಲ್ಲ. ಯುದ್ಧಸಮಯದಲ್ಲಿ ಅವನು ಕೋಪಗೊಂಡಿರುವಾಗ ಶತ್ರುಗಳು ಅವನ ವಾಸನೆಯಿಂದಲೇ ಮೂರ್ಛಿತರಾಗುತ್ತಾರೆ; ಮೃತಪ್ರಾಯರಾಗುತ್ತಾರೆ; ಗಡ-ಗಡನೆ ನಡುಗುತ್ತಾರೆ; ತೊಪ-ತೊಪನೆ ಕೆಳಕ್ಕೆ ಬೀಳುತ್ತಾರೆ. ಯುದ್ಧ ದಲ್ಲಿ ಮೇಘಗರ್ಜನೆಗೆ ಸಮಾನವಾದ ಅವನ ಘೋರನಿನಾದವನ್ನು ಕೇಳಿ ದೇವತೆಗಳ ಹೃದಯಗಳೂ ಸೀಳಿಹೋಗುತ್ತವೆ. ಘೋರವಾದ ರೂಪದಿಂದ ಯುಕ್ತನಾದ ರುದ್ರನು ಕ್ರುದ್ಧನಾಗಿ ಯಾರನ್ನು ನೋಡುವನೋ–ಅಂತಹ ವರ ಹೃದಯವು ಸೀಳಿಹೋಗುತ್ತದೆ. ಪರಶಿವನು ಕುಪಿತನಾದನೆಂದರೆ ದೇವತೆಗಳಾಗಲೀ, ಅಸುರರಾಗಲೀ, ಗಂಧರ್ವರಾಗಲೀ, ಪನ್ನಗ ರಾಗಲೀ–ಗುಹೆಯಲ್ಲಿ ಅಡಗಿಕೊಂಡರೂ ಸುಖವನ್ನು ಹೊಂದಲಾರರು. ದಕ್ಷಪ್ರಜಾಪತಿಯು ವಿಸ್ತಾರವಾದ ಯಜ್ಞವನ್ನು ಮಾಡುತ್ತಿದ್ದಾಗ

*ದುರ್ವಾಸರು ಶಂಕರನ ಅವತಾರವೆಂದು ಪ್ರಸಿದ್ಧಿ. ಶಂಕರನ ಮಹಿಮೆಯ ಕೀರ್ತನೆಯು ದುರ್ವಾಸರ ಮಹಿಮೆಯ ಕೀರ್ತನೆಯೆಂದೇ ತಿಳಿಯಬೇಕು.

ಕುಪಿತನಾದ ಭಗವಾನ್ ಶಂಕರನು ನಿರ್ಭಯವಾಗಿ ಯಜ್ಞವನ್ನು ಧ್ವಂಸಮಾಡಿದನು. ಧನುಸ್ಸಿನಿಂದ ಬಾಣವನ್ನು ಬಿಟ್ಟು ಗಂಭೀರವಾದ ಸ್ವರದಿಂದ ಸಿಂಹನಾದಮಾಡಿದನು. ದೇವತೆಗಳು ದುಃಖಿತರಾದರು. ಮನಶ್ಶಾಂತಿಯಾದರೂ ಅವರಿಗೆ ಎಲ್ಲಿ ಸಿಕ್ಕೀತು? ದಕ್ಷಯಜ್ಞವು ನಾಶಹೊಂದಿ ಮಹೇಶ್ವರನು ಕೋಪಗೊಂಡಿರಲು ದೇವತೆಗಳೆಲ್ಲರೂ ವಿಷಾದಿಸ ತೊಡಗಿದರು. ಪರಶಿವನು ಮಾಡಿದ ಧನುಷ್ಟಂಕಾರದಿಂದ ಎಲ್ಲ ಲೋಕಗಳೂ ವ್ಯಾಕುಲಗೊಂಡುವು. ಮತ್ತು ದುಃಖಪರವಶವಾದುವು. ದೇವತೆಗಳೂ ಮತ್ತು ಅಸುರರೂ ವಿಷಾದಿಸತೊಡಗಿದರು. ಸಮುದ್ರವೇ ಮೊದಲಾದುವುಗಳಲ್ಲಿದ್ದ ನೀರು ಅಲ್ಲೋಲ-ಕಲ್ಲೋಲವಾಯಿತು.ಭೂಮಿಯು ನಡುಗತೊಡಗಿತು. ಆಕಾಶದ ಎಲ್ಲ ಕಡೆಗಳಲ್ಲಿಯೂ ಬಿರುಕುಬಿಟ್ಟುಕೊಂಡಿತು. ಎಲ್ಲ ಲೋಕಗಳೂ ಗಾಢವಾದ ಅಂಧಕಾರದಲ್ಲಿ ಮುಳುಗಿಹೋಗಿದ್ದುದರಿಂದ ಸೂರ್ಯನೂ ಪ್ರಕಾಶಿಸುತ್ತಿರಲಿಲ್ಲ. ಗ್ರಹಗಳ ಮತ್ತು ನಕ್ಷತ್ರಗಳ ಪ್ರಕಾಶಗಳು ಸೂರ್ಯನ ಜೊತೆಯಲ್ಲಿಯೇ ನಷ್ಟವಾಗಿ ಹೋದುವು.ಶಿವನ ಕೋಪವನ್ನು ಕಂಡು ಭೀತರಾದ ಮಹರ್ಷಿಗಳು ಎಲ್ಲ ಪ್ರಾಣಿಗಳಿಗೂ ಮತ್ತು ತಮಗೂ ಹಿತವನ್ನು ಬಯಸಿ ಶಾಂತಿಕರ್ಮಗಳನ್ನೂ ಮತ್ತು ಸ್ವಸ್ತಿವಾಚನಗಳನ್ನೂ ಮಾಡಿದರು.

ಬಳಿಕ ಭಯಂಕರಪರಾಕ್ರಮನಾದ ರುದ್ರನು ದೇವತೆಗಳನ್ನು ಅಟ್ಟಿಸಿಕೊಂಡು ಓಡಿದನು. ಕ್ರುದ್ಧನಾಗಿದ್ದ ಶಂಕರನು ಕೈಗೆ ಸಿಕ್ಕಿದ ಭಗದೇವತೆಯ ಕಣ್ಣುಗಳನ್ನೇ ಕಿತ್ತುಹಾಕಿದನು. ಕೋಪಪರೀತನಾಗಿದ್ದ ಮಹಾದೇವನು ಪುರೋಡಾಶವನ್ನು ತಿನ್ನುತ್ತಿದ್ದ ಪೂಷನನ್ನು ಕಾಲ್ನಡಿಗೆಯಿಂದಲೇ ಅಟ್ಟಿಸಿಕೊಂಡು ಹೋಗಿ ಅತ್ಯಲ್ಪಸಮಯದಲ್ಲಿಯೇ ಅವನನ್ನು ಹಿಡಿದು ಹಲ್ಲುಗಳನ್ನು ಉದುರಿಸಿದನು. ದೇವತೆಗಳೆಲ್ಲರೂ ನಡುಗುತ್ತಾ ಶಂಕರನಿಗೆ ಪ್ರಣಾಮಮಾಡತೊಡಗಿದರು. ಪುನಃ ರುದ್ರನು ಪ್ರದೀಪ್ತವಾದ ಮತ್ತು ತೀಕ್ಷ್ಣವಾದ ಬಾಣವನ್ನು ಧನುಸ್ಸಿನಲ್ಲಿ ಹೂಡಿದನು. ಋಷಿಗಳಿಂದ ಕೂಡಿದ ದೇವತೆಗಳು ರುದ್ರನ ಪರಾಕ್ರಮವನ್ನು ನೋಡಿ ಬಹಳವಾಗಿ ಹೆದರಿದರು. ಆಗ ಶ್ರೇಷ್ಠರಾದ ದೇವತೆಗಳೆಲ್ಲರೂ ಸೇರಿ ಶರ್ವ ನನ್ನು ಪ್ರಸನ್ನಗೊಳಿಸಿದರು. ಎಲ್ಲ ದೇವತೆಗಳೂ ಕೈಜೋಡಿಸಿಕೊಂಡು ಶತ

ರುದ್ರೀಯವನ್ನು ಜಪಿಸಿದರು.ಹೀಗೆ ದೇವತೆಗಳಿಂದ ಶತರುದ್ರೀಯದ ಮೂಲಕವಾಗಿ ಸಂಸ್ತುತನಾದ ಮಹೇಶ್ವರನು ಪ್ರಸನ್ನನಾದನು. ಭಯದಿಂದ ದೇವತೆಗಳು ರುದ್ರನನ್ನು ಶರಣುಹೊಂದಿದರು. ಅನಂತರ ಯಜ್ಞದಲ್ಲಿ ರುದ್ರನಿಗೆ ವಿಶಿಷ್ಟವಾದ ಹವಿರ್ಭಾಗವನ್ನು ಕಲ್ಪಿಸಿದರು. ದೇವತೆಗಳು ಹೀಗೆ ಮಾಡಿದುದರಿಂದ ಶಂಕರನು ತುಷ್ಟನಾದನು. ದಕ್ಷನು ಆರಂಭಿಸಿದ್ದ ಯಜ್ಞವೂ ಪೂರ್ಣವಾಯಿತು.ಯಜ್ಞಕ್ಕೆ ಸಂಬಂಧಿಸಿದ್ದ ಯಾವ-ಯಾವ ಸಾಮಗ್ರಿಗಳನ್ನು ರುದ್ರನು ಅಪಹರಿಸಿದ್ದನೋ (ಧ್ವಂಸಮಾಡಿದ್ದನೋ) ಆಯಾ ಸಾಮಗ್ರಿಗಳನ್ನು ಅವನು ಅವು ಹಿಂದಿನ ರೂಪದಲ್ಲಿಯೇ ಕಾಣಿಸಿಕೊಳ್ಳುವಂತೆ ಮಾಡಿದನು.

ಹಿಂದೆ ವೀರ್ಯವಂತರಾದ ಅಸುರರಿಗೆ ಆಕಾಶದಲ್ಲಿ ಸಂಚರಿಸುವ ಮೂರು ಪುರಗಳು (ವಿಮಾನಗಳು) ಇದ್ದುವು. ಅದರಲ್ಲಿ ಒಂದು ಕಬ್ಬಿಣದ್ದೂ ಮತ್ತೊಂದು ಬೆಳ್ಳಿಯದೂ ಮೂರನೆಯದು ಚಿನ್ನದ್ದೂ ಆಗಿದ್ದಿತು.ಸಕಲವಿಧವಾದ ಆಯುಧಗಳನ್ನು ಪ್ರಯೋಗಿಸಿದರೂ ಇಂದ್ರನಿಗೆ ಆ ಮೂರು ಪುರಗಳನ್ನು ಜಯಿಸಲು ಸಾಧ್ಯವಾಗಲಿಲ್ಲ. ಆಗ ತ್ರಿಪುರಗಳಲ್ಲಿದ್ದ ದೈತ್ಯರಿಂದ ಪೀಡಿತರಾದ ಎಲ್ಲ ದೇವತೆಗಳೂ ರುದ್ರನನ್ನೇ ಶರಣು ಹೊಂದಿದರು. ರುದ್ರನ ಬಳಿಗೆ ಬಂದ ಮಹಾತ್ಮರಾದ ಎಲ್ಲ ದೇವತೆಗಳೂ ಒಕ್ಕೊರಳಿನಿಂದ ಹೇಳಿದರು:

ರುದ್ರ ರೌದ್ರಾ ಭವಿಷ್ಯನ್ತಿ ಪಶವಃ ಸರ್ವಕರ್ಮಸು ।
ಜಹಿ ದೈತ್ಯಾನ್ಸಹ ಪುರೈರ್ಲೋಕಾಂಸ್ತ್ರಾಯಸ್ವ ಮಾನದ ॥೨೭॥

"ರುದ್ರನೇ! ಆ ದೈತ್ಯರು ನಮ್ಮ ಎಲ್ಲ ಕರ್ಮಗಳಲ್ಲಿಯೂ ಪಶುಗಳಂತೆ ಭಯೋತ್ಪಾದಕರಾಗಿದ್ದಾರೆ.ಆದುದರಿಂದ ಪಟ್ಟಣಗಳ (ವಿಮಾನಗಳ) ಸಹಿತವಾಗಿ ಅವರನ್ನು ಸಂಹರಿಸು. ಮಾನದನೇ! ಮೂರು ಲೋಕಗಳನ್ನೂ ಕಾಪಾಡು."

ಯುಧಿಷ್ಠಿರ! ಶಿವನು ಹಾಗೆಯೇ ಆಗಲೆಂದು ದೇವತೆಗಳಿಗೆ ಅಭಯ ವನ್ನಿತ್ತು ಮಹಾವಿಷ್ಣುವನ್ನೇ ಶ್ರೇಷ್ಠವಾದ ಬಾಣವನ್ನಾಗಿ ಮಾಡಿಕೊಂಡು, ಅಗ್ನಿಯನ್ನು ಆ ಬಾಣದ ಶಲ್ಯ (ಚೂಪಾದ ತುದಿ) ವನ್ನಾಗಿಯೂ, ವೈವಸ್ವತಯಮನನ್ನು ಆ ಬಾಣಕ್ಕೆ ರೆಕ್ಕೆಯನ್ನಾಗಿಯೂ ಮಾಡಿಕೊಂಡನು.

ಸರ್ವವೇದಗಳನ್ನೂ ಧನುಸ್ಸನ್ನಾಗಿಯೂ, ಗಾಯತ್ರಿಯನ್ನು ಉತ್ತಮವಾದ ಶಿಂಜಿನಿಯನ್ನಾಗಿಯೂ ಮಾಡಿಕೊಂಡನು. ಬ್ರಹ್ಮನನ್ನೇ ತನ್ನ ರಥಕ್ಕೆ ಸಾರಥಿಯನ್ನಾಗಿ ಮಾಡಿಕೊಂಡು ಎಲ್ಲರನ್ನೂ ಅವರವರಿಗೆ ಯೋಗ್ಯವಾದ ಕಾರ್ಯಗಳಲ್ಲಿ ನೇಮಿಸಿ, ಮೂರು ಗಿಣ್ಣುಗಳುಳ್ಳ ಮೂರು ಅಗ್ನಿಗಳ ರೂಪವಾದ ಶಲ್ಯಗಳಿಂದ ಕೂಡಿದ ವಿಷ್ಣುರೂಪವಾದ ಆ ಬಾಣದಿಂದ ಆ ಮೂರು ಪುರಗಳನ್ನೂ ಭೇದಿಸಿದನು. ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯಿಂದ ಯುಕ್ತವಾಗಿದ್ದ, ಪ್ರಳಯಕಾಲಾಗ್ನಿಯ ತೇಜಸ್ಸಿಗೆ ಸಮಾನ ವಾದ ತೇಜಸ್ಸಿನಿಂದ ಕೂಡಿದ್ದ ಆ ಬಾಣದಿಂದ ರುದ್ರನು ಮೂರು ಪುರಗಳೊಡನೆ ಅಸುರರೆಲ್ಲರನ್ನೂ ಭಸ್ಮಮಾಡಿದನು. ಹೀಗೆ ತ್ರಿಪುರಾಸುರರನ್ನು ಸಂಹರಿಸಿದನಂತರ ಪಂಚಶಿಖೆಗಳನ್ನು ಧರಿಸಿದ್ದ ಬಾಲಕನ ರೂಪವನ್ನು ಧರಿಸಿದನು.ತನ್ನ ತೊಡೆಯ ಮೇಲೆ ಕುಳಿತ ಆ ಬಾಲಕನನ್ನು ನೋಡಿ ಉಮಾದೇವಿಯು ಇವನಾರೆಂದು ಜಿಜ್ಞಾಸೆಮಾಡುತ್ತಾ ದೇವತೆಗಳನ್ನು ಕೇಳಿದಳು. ಅನುಪಮವಾದ ಕಾಂತಿಯಿಂದ ಕೂಡಿದ್ದ ಆ ಬಾಲಕನನ್ನು ನೋಡಿ ಇಂದ್ರನಿಗೆ ಅಸೂಯೆಯುಂಟಾಯಿತು. ಒಡನೆಯೇ ಅವನು ಆ ಶಿಶುವನ್ನು ಕೊಲ್ಲುವ ಅಪೇಕ್ಷೆಯಿಂದ ವಜ್ರಾಯುಧವನ್ನು ಪ್ರಯೋಗಿಸಿದನು. ಉಮಾದೇವಿಯ ತೊಡೆಯಮೇಲಿದ್ದ ಆ ಶಿಶುವು ವಜ್ರಾಯುಧವನ್ನು ಮಾತ್ರ ವಲ್ಲದೇ ಪರಿಘದಂತಿದ್ದ ಇಂದ್ರನ ತೋಳುಗಳನ್ನೂ ಸ್ತಂಭನಗೊಳಿಸಿತು. ಪ್ರಜಾಪತಿಯೇ ಮುಂತಾದ ದೇವತೆಗಳಾರೂ ಉಮಾದೇವಿಯ ತೊಡೆಯಲ್ಲಿ ಪವಡಿಸಿರುವ ಪಂಚಶಿಖನೇ ಪರಮೇಶ್ವರನೆಂಬುದನ್ನು ಅರಿಯಲಿಲ್ಲ. ಮಹೇಶ್ವರನ ವಿಷಯದಲ್ಲಿ ಎಲ್ಲರೂ ವಿಮೋಹಿತರಾದರು.ಆ ಸಮಯದಲ್ಲಿ ಬ್ರಹ್ಮನು ಧ್ಯಾನಮಗ್ನನಾಗಿ ಉಮಾದೇವಿಯ ತೊಡೆಯ ಮೇಲಿರುವವನು ಮಹಾತೇಜಸ್ವಿಯಾದ ಉಮಾಪತಿಯೇ ಎಂಬುದನ್ನು ತಿಳಿದು ಇವನೇ ಶ್ರೇಷ್ಠನಾದ ದೇವತೆಯೆಂದು ಭಾವಿಸಿ ಪಂಚಶಿಖನ ರೂಪದಲ್ಲಿದ್ದ ಉಮಾಪತಿಗೆ ನಮಸ್ಕಾರಮಾಡಿದನು. ಅನಂತರ ಇಂದ್ರಪ್ರಮುಖರಾದ ದೇವತೆಗಳೆಲ್ಲರೂ ಉಮಾದೇವಿಯನ್ನೂ ರುದ್ರನನ್ನೂ ನಾನಾಪ್ರಕಾರವಾದ ಸ್ತೋತ್ರಗಳಿಂದ ಪ್ರಸನ್ನಗೊಳಿಸಿದರು. ಆಗ ಶಂಕರನ ಅನುಗ್ರಹದಿಂದ ಬಲಹಂತಕನಾದ ಇಂದ್ರನ ತೋಳು ಪೂರ್ವಸ್ಥಿತಿಗೆ ಬಂದಿತು.

ಪರಾಕ್ರಮಿಯಾದ ಆ ಮಹಾದೇವನೇ ದುರ್ವಾಸನೆಂಬ ಬ್ರಾಹ್ಮಣ

ನಾಗಿ ಅವತರಿಸಿ ದ್ವಾರವತಿಯಲ್ಲಿದ್ದ ನನ್ನ ಅರಮನೆಯಲ್ಲಿ ಬಹಳ ಕಾಲದವರೆಗೂ ವಾಸವಾಗಿದ್ದನು.ಅವನು ನನ್ನ ಮನೆಯಲ್ಲಿ ವಾಸ ಮಾಡುತ್ತಿದ್ದಾಗ ನನಗೆ ವಿರುದ್ಧವಾದ, ತಡೆದುಕೊಳ್ಳಲು ಅಸಾಧ್ಯವಾಗಿದ್ದ ಅನೇಕ ಅಪ್ರಿಯಕಾರ್ಯಗಳನ್ನೇ ಮಾಡಿದನು. ಅವೆಲ್ಲವನ್ನೂ ನಾನು ಉದಾರತೆಯಿಂದ ಸಹಿಸಿಕೊಂಡೆನು.

ಸ ವೈ ರುದ್ರಃ ಸ ಚ ಶಿವಃ ಸೋಽಗ್ನಿಃ ಸರ್ವಃ ಸ ಸರ್ವಜಿತ್ ।
ಸ ಚೈವೇನ್ದ್ರಶ್ಚ ವಾಯುಶ್ಚ ಸೋಽಶ್ವಿನೌ ಸ ಚ ವಿದ್ಯುತಃ ॥೬೯॥

ಅವನೇ ರುದ್ರನು; ಅವನೇ ಶಿವನು; ಅವನೇ ಅಗ್ನಿಯು; ಅವನೇ ಸರ್ವನು; ಸರ್ವವನ್ನೂ ಜಯಿಸುವವನೂ ಅವನೇ ಆಗಿದ್ದಾನೆ.ಅವನೇ ಇಂದ್ರನು; ಅವನೇ ವಾಯುವು; ಅಶ್ವಿನೀಕುಮಾರರ ರೂಪದಲ್ಲಿರುವವನೂ ಅವನೇ; ಅವನೇ ವಿದ್ಯುತ್(ಮಿಂಚು.)

ಸ ಚನ್ದ್ರಮಾಃ ಸ ಚೇಶಾನಃ ಸ ಸೂರ್ಯೋ ವರುಣಶ್ಚ ಸಃ ।
ಸ ಕಾಲಃ ಸೋಽನ್ತಕೋ ಮೃತ್ಯುಃ ಸ ಯಮೋ ರಾತ್ರ್ಯಹಾನಿ ಚ ॥

ಅವನೇ ಚಂದ್ರನು; ಅವನೇ ಈಶಾನನು; ಅವನೇ ಸೂರ್ಯನು; ಅವನೇ ವರುಣನು; ಅವನೇ ಕಾಲನು; ಅವನೇ ಅಂತಕನು; ಅವನೇ ಮೃತ್ಯುವು; ಅವನೇ ಯಮನು; ಅವನೇ ಹಗಲು-ರಾತ್ರಿಗಳ ರೂಪದಲ್ಲಿಯೂ ಇರುವವನು.

ಮಾಸಾರ್ಧಮಾಸಾ ಋತವಃ ಸಂಧ್ಯೇ ಸಂವತ್ಸರಶ್ಚ ಸಃ ।
ಸ ಧಾತಾ ಸ ವಿಧಾತಾ ಚ ವಿಶ್ವಕರ್ಮಾ ಸ ಸರ್ವವಿತ್ ॥೪೧॥

ಮಾಸ, ಪಕ್ಷ, ಋತು, ಸಂಧ್ಯಾಕಾಲಗಳು, ಸಂವತ್ಸರ–ಈ ಎಲ್ಲವೂ ಅವನೇ ಆಗಿದ್ದಾನೆ.ಅವನೇ ಧಾತೃವು; ಅವನೇ ವಿಧಾತೃವು; ಅವನೇ ವಿಶ್ವಕರ್ಮನು; ಸರ್ವಜ್ಞನೂ ಅವನೇ ಆಗಿದ್ದಾನೆ.

ನಕ್ಷತ್ರಾಣಿ ಗ್ರಹಾಶ್ಚೈವ ದಿಶೋಽಥ ಪ್ರದಿಶಸ್ತಥಾ ।
ವಿಶ್ವಮೂರ್ತಿರಮೇಯಾತ್ಮಾ ಭಗವಾನ್ಪರಮದ್ಯುತಿಃ ॥೪೨॥

ನಕ್ಷತ್ರಗಳು, ಗ್ರಹಗಳು, ದಿಕ್ಕುಗಳು, ಉಪದಿಕ್ಕುಗಳು–ಎಲ್ಲವೂ

ಅವನೇ ಆಗಿದ್ದಾನೆ. ವಿಶ್ವಮೂರ್ತಿಯೂ, ಅಪ್ರಮೇಯಾತ್ಮನೂ, ಷಡೈಶ್ವರ್ಯಸಂಪನ್ನನಾದ ಭಗವಂತನೂ ಪರಮತೇಜಸ್ವಿಯಾದ ಅವನೇ ಆಗಿದ್ದಾನೆ.

ಏಕಧಾ ಚ ದ್ವಿಧಾ ಚೈವ ಬಹುಧಾ ಚ ಸ ಏವ ಹಿ ।
ಶತಧಾ ಸಹಸ್ರಧಾ ಚೈವ ತಥಾ ಶತಸಹಸ್ರಧಾ ॥೪೩॥

ಅವನೇ ಏಕರೂಪನಾಗಿದ್ದಾನೆ; ಎರಡು ರೂಪದಲ್ಲಿದ್ದಾನೆ; ಬಹುರೂಪನಾಗಿದ್ದಾನೆ; ನೂರು ರೂಪಗಳಲ್ಲಿದ್ದಾನೆ; ಸಾವಿರ ರೂಪಗಳಲ್ಲಿದ್ದಾನೆ; ಲಕ್ಷ (ಅಸಂಖ್ಯಾತ) ರೂಪದಲ್ಲಿದ್ದಾನೆ.

ಈದೃಶಃ ಸ ಮಹಾದೇವೋ ಭೂಯಶ್ಚ ಭಗವಾನತಃ ।
ನ ಹಿ ಶಕ್ಯಾ ಗುಣಾ ವಕ್ತುಮಪಿ ವರ್ಷಶತೈರಪಿ ॥೪೪॥

ಯುಧಿಷ್ಠಿರ! ಮಹಾದೇವನು ಇಂತಹ ಪ್ರಭಾವಶಾಲಿಯು. ಹಾಗೂ ಇಲ್ಲಿ ನಾನೀಗ ಹೇಳುವುದಕ್ಕಿಂತಲೂ ಹೆಚ್ಚಿನ ಪ್ರಭಾವಶಾಲಿಯು. ಎಡೆಬಿಡದೇ ನೂರು ವರ್ಷಗಳವರೆಗೆ ಹೇಳುತ್ತಿದ್ದರೂ ಅವನ ಗುಣಗಳನ್ನು ವರ್ಣಿಸಲು ಸಾಧ್ಯವಾಗುವುದಿಲ್ಲ."

ಇದು ೧೬೦ನೆಯ ಅಧ್ಯಾಯವು ಮುಗಿಯಿತು.

೧೬೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭಗವಾನ್ ಶಂಕರನ ಮಹಿಮೆ

ವಾಸುದೇವನು ಹೇಳುತ್ತಾನೆ:

ಯುಧಿಷ್ಠಿರ ಮಹಾಬಾಹೋ ಮಹಾಭಾಗ್ಯಂ ಮಹಾತ್ಮನಃ ।
ರುದ್ರಾಯ ಬಹುರೂಪಾಯ ಬಹುನಾಮ್ನೇ ನಿಬೋಧ ಮೇ ॥೧॥

"ಮಹಾಬಾಹುವೇ! ಯುಧಿಷ್ಠಿರ! ಬಹುರೂಪನಾದ, ಬಹುನಾಮಕನಾದ ರುದ್ರನಿಗೆ ನಮಸ್ಕರಿಸುತ್ತೇನೆ.ಮಹಾತ್ಮನಾದ ರುದ್ರನ ಮಹಾಭಾಗ್ಯವನ್ನು (ಮಹಾಮಹಿಮೆಯನ್ನು) ಹೇಳುವೆನು ಕೇಳು:

ವದನ್ತ್ಯಗ್ನಿಂ ಮಹಾದೇವಂ ತಥಾ ಸ್ಥಾಣುಂ ಮಹೇಶ್ವರಮ್ ।
ಏಕಾಕ್ಷಂ ತ್ರ್ಯಮ್ಬಕಂ ಚೈವ ವಿಶ್ವರೂಪಂ ಶಿವಂ ತಥಾ ॥೨॥

ವಿದ್ವಾಂಸರು ಈ ಮಹಾದೇವನನ್ನು ಅಗ್ನಿಯೆಂದೂ, ಸ್ಥಾಣುವೆಂದೂ, ಮಹೇಶ್ವರನೆಂದೂ, ಒಕ್ಕಣ್ಣನೆಂದೂ, ಮುಕ್ಕಣ್ಣನೆಂದೂ, ವಿಶ್ವರೂಪನೆಂದೂ ಕರೆಯುತ್ತಾರೆ.

ದ್ವೇ ತನೂ ಯಸ್ಯ ದೇವಸ್ಯ ವೇದಜ್ಞಾ ಬ್ರಾಹ್ಮಣಾ ವಿದುಃ ।
ಘೋರಾಮನ್ಯಾಂ ಶಿವಾಮನ್ಯಾಂ ತೇ ತನೂ ಬಹುಧಾ ಪುನಃ ॥೩॥

ವೇದಜ್ಞರಾದ ಬ್ರಾಹ್ಮಣರು ಆ ಮಹಾದೇವನಿಗೆ ಎರಡು ಶರೀರಗಳಿವೆಯೆಂದು ಹೇಳುತ್ತಾರೆ.ಅವುಗಳಲ್ಲೊಂದು' ಶಿವಾ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.ಮತ್ತೊಂದು 'ಘೋರಾ'ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.ಈ ಎರಡು ರೂಪಗಳಲ್ಲಿಯೂ ನಾನಾಭೇದಗಳಿವೆ.

ಉಗ್ರಾ ಘೋರಾ ತನೂರ್ಯಸ್ಯ ಸೋಽಗ್ನಿರ್ವಿದ್ಯುತ್ಸಭಾಸ್ಕರಃ ।
ಶಿವಾ ಸೌಮ್ಯಾ ಚ ಯಾ ತ್ವಸ್ಯ ಧರ್ಮಸ್ತ್ವಾಪೋಽಥ ಚನ್ದ್ರಮಾಃ ॥೪॥

ಅವನ ಘೋರಶರೀರವು ಬಹಳ ಉಗ್ರವಾದುದು. ಉಗ್ರವಾದ ಆ ಘೋರಶರೀರವೇ ಅಗ್ನಿ, ವಿದ್ಯುತ್ ಮತ್ತು ಸೂರ್ಯರ ರೂಪಗಳಲ್ಲಿವೆ. ಶಿವಾ ಎಂಬ ಶರೀರವು ಸೌಮ್ಯವಾದುದು.ಆ ಸೌಮ್ಯಶರೀರವೇ ಧರ್ಮ, ಜಲ ಮತ್ತು ಚಂದ್ರರ ರೂಪಗಳಲ್ಲಿದೆ.

ಆತ್ಮನೋಽರ್ಧಂ ತು ತಸ್ಯಾಗ್ನಿಃ ಸೋಮೋಽರ್ಧಂ ಪುನರುಚ್ಯತೇ।
ಬ್ರಹ್ಮಚರ್ಯಂ ಚರತ್ಯೇಕಾ ಶಿವಾ ಚಾಸ್ಯ ತನುಸ್ತಥಾ ॥೫॥
ಯಾಸ್ಯ ಘೋರತಮಾ ಮೂರ್ತಿರ್ಜಗತ್ಸಂಹರತೇ ತಥಾ ।
ಈಶ್ವರತ್ವಾನ್ಮಹತ್ತ್ವಾಚ್ಚ ಮಹೇಶ್ವರ ಇತಿ ಸ್ಮೃತಃ ॥೬॥

ಮಹಾದೇವನ ಶರೀರದ ಒಂದು ಅರ್ಧವನ್ನು ಅಗ್ನಿಯೆಂದೂ ಮತ್ತೊಂದು ಅರ್ಧವನ್ನು ಸೋಮನೆಂದೂ ಕರೆಯುತ್ತಾರೆ.ಅವನ 'ಶಿವಾ' ಎಂಬ ಮೂರ್ತಿಯು ಏಕಾಕಿಯಾಗಿ ಬ್ರಹ್ಮಚರ್ಯವನ್ನು ಪಾಲಿಸುತ್ತಿರುತ್ತದೆ. ಘೋರಮೂರ್ತಿಯು ಜಗತ್ತನ್ನು ಸಂಹರಿಸುತ್ತಿರುತ್ತದೆ. ಅವನಿಗೆ

ಮಹತ್ತ್ವವೂ ಈಶ್ವರತ್ವವೂ ಇರುವುದರಿಂದ ಅವನನ್ನು ಮಹೇಶ್ವರನೆಂದೂ ಕರೆಯುತ್ತಾರೆ.

ಯನ್ನಿರ್ದಹತಿ ಯತ್ತೀಕ್ಷ್ಣೋ ಯದುಗ್ರೋ ಯತ್ಪ್ರತಾಪವಾನ್।
ಮಾಂಸಶೋಣಿತಮಜ್ಜಾದೋ ಯತ್ತತೋ ರುದ್ರ ಉಚ್ಯತೇ ॥೭॥

ಎಲ್ಲವನ್ನೂ ದಹಿಸುವುದರಿಂದಲೂ, ತೀಕ್ಷ್ಣವಾಗಿರುವುದರಿಂದಲೂ, ಉಗ್ರವಾಗಿರುವುದರಿಂದಲೂ, ಪ್ರತಾಪಶಾಲಿಯಾಗಿರುವುದರಿಂದಲೂ, ಪ್ರಳಯಾಗ್ನಿರೂಪದಿಂದ ರಕ್ತ-ಮಾಂಸ-ಮಜ್ಜೆಗಳನ್ನು ತಿನ್ನುವುದರಿಂದಲೂ– ಆ ಮೂರ್ತಿಯನ್ನು ರುದ್ರ ಎಂಬ ಹೆಸರಿನಿಂದ ಕರೆಯುತ್ತಾರೆ.

ದೇವಾನಾಂ ಸುಮಹಾನ್ಯಶ್ಚ ಯಚ್ಚಾಸ್ಯ ವಿಷಯೋ ಮಹಾನ್।
ಯಚ್ಚ ವಿಶ್ವಂ ಮಹತ್ಪಾತಿ ಮಹಾದೇವಸ್ತತಸ್ಮೃತಃ ॥೮॥

ದೇವತೆಗಳಲ್ಲಿಯೇ ಹೆಚ್ಚು ದೊಡ್ಡವನಾಗಿರುವುದರಿಂದಲೂ, ಮಹತ್ವದ ವಿಷಯವನ್ನು ಹೊಂದಿರುವುದರಿಂದಲೂ, ಮಹಾವಿಶ್ವವನ್ನು ಸಂರಕ್ಷಿಸುತ್ತಿರುವುದರಿಂದಲೂ ಅವನನ್ನು ಮಹಾದೇವಮೂರ್ತಿಯೆಂದು ಕರೆಯುತ್ತಾರೆ.

ಧೂಮ್ರರೂಪಂ ಚ ಯತ್ತಸ್ಯ ಧೂರ್ಜಟೀತ್ಯತ ಉಚ್ಯತೇ।
ಸಮೇಧಯತಿ ಯನ್ನಿತ್ಯಂ ಸರ್ವಾನ್ವೈ ಸರ್ವಕರ್ಮಭಿಃ।
ಶಿವಮಿಚ್ಛನ್ಮನುಷ್ಯಾಣಾಂ ತಸ್ಮಾದೇಷ ಶಿವಸ್ಮೃತಃ ॥೯॥

ಅವನ ಜಡೆಯು ಧೂಮ್ರವರ್ಣವಾಗಿರುವುದರಿಂದ ಅವನನ್ನು 'ಧೂರ್ಜಟೀ' ಎಂದು ಕರೆಯುತ್ತಾರೆ.ಲೋಕದ ಎಲ್ಲ ಜನರನ್ನೂ ಎಲ್ಲ ವಿಧವಾದ ಕರ್ಮಗಳಿಂದಲೂ ನಿತ್ಯವೂ ಅಭಿವೃದ್ಧಿಗೊಳಿಸುತ್ತಿರುತ್ತಾನೆ. ಎಲ್ಲರಿಗೂ ಕಲ್ಯಾಣವನ್ನು ಬಯಸುತ್ತಾನೆ.ಆದುದರಿಂದ ಅವನನ್ನು ಶಿವನೆಂದು ಕರೆಯುತ್ತಾರೆ.

ದಹತ್ಯೂರ್ಧ್ವಂ ಸ್ಥಿತೋ ಯಚ್ಚ ಪ್ರಾಣಾನ್ನೃಣಾಂ ಸ್ಥಿರಶ್ಚ ಯತ್।
ಸ್ಥಿರಲಿಙ್ಗಶ್ಚ ಯನ್ನಿತ್ಯಂ ತಸ್ಮಾತ್ಸ್ಥಾಣುರಿತಿ ಸ್ಮೃತಃ ॥೧೦॥

ಊರ್ಧ್ವಭಾಗದಲ್ಲಿದ್ದುಕೊಂಡು ದೇಹಧಾರಿಗಳ ಪ್ರಾಣಗಳನ್ನು ನಾಶ

ಮಾಡುವುದರಿಂದಲೂ, ಸದಾ ಸ್ಥಿರನಾಗಿರುವುದರಿಂದಲೂ, ಲಿಂಗ ವಿಗ್ರಹರೂಪದಲ್ಲಿ ಸ್ಥಿರನಾಗಿರುವುದರಿಂದಲೂ ಮಹಾದೇವನು ಸ್ಥಾಣುವೆಂದೂ ಕರೆಯಲ್ಪಡುತ್ತಾನೆ.

ಯದಸ್ಯ ಬಹುಧಾ ರೂಪಂ ಭೂತಂ ಭವ್ಯಂ ಭವತ್ತಥಾ ।
ಸ್ಥಾವರಂ ಜಙ್ಗಮಂ ಚೈವ ಬಹುರೂಪಸ್ತತಃ ಸ್ಮೃತಃ ॥೧೧॥

ಭೂತ-ಭವಿಷ್ಯದ್ವರ್ತಮಾನಕಾಲಗಳಲ್ಲಿ ಸ್ಥಾವರ-ಜಂಗಮಪ್ರಾಣಿಗಳ ಆಕಾರಗಳಲ್ಲಿ ಬಹುರೂಪಗಳಲ್ಲಿ ಪ್ರಕಟವಾಗುವುದರಿಂದ ಮಹಾದೇವನನ್ನು ಬಹುರೂಪನೆಂದೂ ಕರೆಯುತ್ತಾರೆ.

ವಿಶ್ವೇ ದೇವಾಶ್ಚ ಯತ್ತಸ್ಮಿನ್ವಿಶ್ವರೂಪಸ್ತತಃ ಸ್ಮೃತಃ ॥೧೨॥

ಸಮಸ್ತದೇವತೆಗಳೂ ಮಹಾದೇವನಲ್ಲಿ ವಾಸಮಾಡುವುದರಿಂದ ಅವನನ್ನು ವಿಶ್ವರೂಪನೆಂದೂ ಕರೆಯುತ್ತಾರೆ.

ಸಹಸ್ರಾಕ್ಷೋಽಯುತಾಕ್ಷೋ ವಾ ಸರ್ವತೋಽಕ್ಷಿಮಯೋಽಪಿ ವಾ ।
ಚಕ್ಷುಷಃ ಪ್ರಭವೇತ್ತೇಜೋ ನಾಸ್ತ್ಯನ್ತೋಽಥಾಸ್ಯ ಚಕ್ಷುಷಾಮ್ ॥೧೩॥

ಮಹಾದೇವನ ಕಣ್ಣುಗಳಿಂದ ತೇಜಸ್ಸು ಹೊರಹೊಮ್ಮುತ್ತಿರುತ್ತದೆ. ಅವನ ಕಣ್ಣುಗಳಿಗೆ ಕೊನೆಯೇ ಇಲ್ಲ. ಆದುದರಿಂದ ಮಹಾದೇವನನ್ನು ಸಹಸ್ರಾಕ್ಷ, ಅಯುತಾಕ್ಷ ಮತ್ತು ಸರ್ವತೋಕ್ಷಿಮಯ–ಎಂಬ ನಾಮ ಗಳಿಂದಲೂ ಕರೆಯುತ್ತಾರೆ.

ಸರ್ವಥಾ ಯತ್ಪಶೂನ್ಪಾತಿ ತೈಶ್ಚ ಯದ್ರಮತೇ ಸಹ ।
ತೇಷಾಮಧಿಪತಿರ್ಯಚ್ಚ ತಸ್ಮಾತ್ಪಶುಪತಿಃ ಸ್ಮೃತಃ ॥೧೪॥

ಸರ್ವಪ್ರಕಾರದಿಂದಲೂ ಪಶುಗಳನ್ನು ಪಾಲಿಸುವುದರಿಂದಲೂ, ಪಶುಗಳೊಡನೆ ಕ್ರೀಡಿಸುವುದರಿಂದಲೂ, ಪಶುಗಳಿಗೆ ಅಧಿಪತಿ ಯಾಗಿರುವುದರಿಂದಲೂ ಮಹಾದೇವನನ್ನು ಪಶುಪತಿಯೆಂದೂ ಕರೆಯುತ್ತಾರೆ.

ನಿತ್ಯೇನ ಬ್ರಹ್ಮಚರ್ಯೇಣ ಲಿಙ್ಗಮಸ್ಯ ಯದಾ ಸ್ಥಿತಮ್ ।
ಮಹಯತ್ಯಸ್ಯ ಲೋಕಶ್ಚ ಪ್ರಿಯಂ ಹ್ಯೇತನ್ಮಹಾತ್ಮನಃ ॥೧೫॥

ನಿತ್ಯಬ್ರಹ್ಮಚರ್ಯೆಯಲ್ಲಿರುವ ಮನುಷ್ಯನು ಸುಸ್ಥಿರವಾಗಿರುವ ಶಿವನ ಲಿಂಗವನ್ನು ಅನುದಿನವೂ ಪೂಜೆಮಾಡುತ್ತಿದ್ದರೆ ಶಂಕರನು ಸುಪ್ರೀತನಾಗುತ್ತಾನೆ.(ಹಾಗೆ ಲಿಂಗದ ಪ್ರತೀಕದಲ್ಲಿ ಮಾಡುವ ಪೂಜೆಯು ಮಹಾದೇವನಿಗೆ ಅತ್ಯಂತ ಪ್ರಿಯವಾದುದು.)

ವಿಗ್ರಹಂ ಪೂಜಯೇದ್ಯೋ ವೈ ಲಿಙ್ಗಂ ವಾಪಿ ಮಹಾತ್ಮನಃ ।
ಲಿಙ್ಗಂ ಪೂಜಯಿತಾ ನಿತ್ಯಂ ಮಹತೀಂ ಶ್ರಿಯಮಶ್ನುತೇ ॥೧೬॥

ಯಾವನು ಶಿವನ ವಿಗ್ರಹವನ್ನು ಪೂಜಿಸುತ್ತಾನೆಯೋ, ಯಾವನು ಲಿಂಗರೂಪೀ ಶಿವನನ್ನಾಗಲೀ ಪೂಜಿಸುತ್ತಾನೆಯೋ ಅವರಿಬ್ಬರಲ್ಲಿ ಲಿಂಗವನ್ನು ಪೂಜಿಸುವವನು ಮಹಾಸಂಪತ್ತನ್ನು ಉಪಭೋಗಿಸುತ್ತಾನೆ.

ಋಷಯಶ್ಚಾಪಿ ದೇವಾಶ್ಚ ಗನ್ಧರ್ವಾಪ್ಸರಸಸ್ತಥಾ ।
ಲಿಙ್ಗಮೇವಾರ್ಚಯನ್ತಿ ಸ್ಮ ಯತ್ತದೂರ್ಧ್ವಂ ಸಮಾಸ್ಥಿತಮ್ ॥೧೭॥

ಪೂಜ್ಯಮಾನೇ ತತಸ್ತಸ್ಮಿನ್ಮೋದತೇ ಸ ಮಹೇಶ್ವರಃ ।
ಸುಖಂ ದದಾತಿ ಪ್ರೀತಾತ್ಮಾ ಭಕ್ತಾನಾಂ ಭಕ್ತವತ್ಸಲಃ ॥೧೮॥

ಋಷಿಗಳೂ, ದೇವತೆಗಳೂ, ಅಪ್ಸರೆಯರೂ ಮತ್ತು ಗಂಧರ್ವರೂ ಊರ್ಧ್ವಲೋಕದಲ್ಲಿರುವ (ಊರ್ಧ್ವಮುಖನಾಗಿರುವ) ಲಿಂಗವನ್ನೇ ಪೂಜಿಸುತ್ತಾರೆ. ಹೀಗೆ ಶಿವಲಿಂಗದ ಪೂಜೆಯಿಂದ ಭಕ್ತವತ್ಸಲನಾದ ಮಹೇಶ್ವರನು ಸುಪ್ರೀತನಾಗುತ್ತಾನೆ. ಪ್ರೀತಾತ್ಮನಾದ ಮಹಾದೇವನು ತನ್ನ ಭಕ್ತರಿಗೆ ಸುಖವನ್ನು ದಯಪಾಲಿಸುತ್ತಾನೆ.

ಏಷ ಏವ ಶ್ಮಶಾನೇಷು ದೇವೋ ವಸತಿ ನಿರ್ದಹನ್ ।
ಯಜನ್ತೇ ತೇ ಜನಾಸ್ತತ್ರ ವೀರಸ್ಥಾನನಿಷೇವಿಣಃ ॥೧೯॥

ಘೋರರೂಪಿಯಾದ ಶಂಕರನೇ ಶ್ಮಶಾನಗಳಲ್ಲಿ ಅಗ್ನಿರೂಪನಾಗಿದ್ದು ಶವಗಳನ್ನು ದಹಿಸುತ್ತಿರುತ್ತಾನೆ.ಯಾರು ಶ್ಮಶಾನದಲ್ಲಿ ಅವನನ್ನು ಆರಾಧಿಸುವರೋ–ಅವರು ವೀರರಿಗೆ ಪ್ರಾಪ್ತವಾಗುವ ಉತ್ತಮಲೋಕಗಳನ್ನು ಪಡೆಯುತ್ತಾರೆ.

ವಿಷಯಸ್ಥಃ ಶರೀರೇಷು ಸ ಮೃತ್ಯುಃ ಪ್ರಾಣಿನಾಮಿಹ ।
ಸ ಚ ವಾಯುಃ ಶರೀರೇಷು ಪ್ರಾಣಾಪಾನಶರೀರಿಣಾಮ್ ॥೨೦॥

ಮಹಾದೇವನು ಪ್ರಾಣಿಗಳ ಶರೀರಗಳಲ್ಲಿ ವಿಷಯಸ್ಥನಾಗಿಯೂ ಮೃತ್ಯುವಾಗಿಯೂ ಇರುತ್ತಾನೆ.ಮನುಷ್ಯರ ಶರೀರಗಳಲ್ಲಿ ಮಹಾದೇವನು ಪ್ರಾಣಾಪಾನಾದಿ ವಾಯುರೂಪನಾಗಿರುತ್ತಾನೆ.

ತಸ್ಯ ಘೋರಾಣಿ ರೂಪಾಣಿ ದೀಪ್ತಾನಿ ಚ ಬಹೂನಿ ಚ ।
ಲೋಕೇ ಯಾನ್ಯಸ್ಯ ಪೂಜ್ಯನ್ತೇ ವಿಪ್ರಾಸ್ತಾನಿ ವಿದುರ್ಬುಧಾಃ ॥೨೧॥

ಮಹಾದೇವನಿಗೆ ಭಯಂಕರವಾದ ಮತ್ತು ಪ್ರದೀಪ್ತವಾದ ಅನೇಕ ರೂಪಗಳಿವೆ. ಆ ಎಲ್ಲ ರೂಪಗಳಲ್ಲಿಯೂ ಜನರು ಮಹಾದೇವನನ್ನು ಪೂಜಿಸುತ್ತಾರೆ.ವಿದ್ವಾಂಸರಾದ ಬ್ರಾಹ್ಮಣರು ಆ ಎಲ್ಲ ರೂಪಗಳನ್ನೂ ಯಥಾವತ್ತಾಗಿ ತಿಳಿದಿರುತ್ತಾರೆ.

ನಾಮಧೇಯಾನಿ ದೇವೇಷು ಬಹೂನ್ಯಸ್ಯ ಯಥಾರ್ಥವತ್ ।
ನಿರುಚ್ಯನ್ತೇ ಮಹತ್ತ್ವಾಚ್ಚ ವಿಭುತ್ವಾತ್ಕರ್ಮಭಿಸ್ತಥಾ ॥೨೨॥

ಮಹಾದೇವನ ಮಹತ್ತ್ವದಿಂದಲೂ, ವ್ಯಾಪಕತೆಯಿಂದಲೂ ಮತ್ತು ಅವನು ಮಾಡಿರುವ ಕರ್ಮಗಳಿಂದಲೂ ಅವನ ಅನೇಕ ಅನ್ವರ್ಥನಾಮಗಳು ದೇವತೆಗಳಲ್ಲಿ ಪ್ರಚಲಿತವಾಗಿವೆ.

ವೇದೇ ಚಾಸ್ಯ ವಿದುರ್ವಿಪ್ರಾಃ ಶತರುದ್ರೀಯಮುತ್ತಮಮ್ ।
ವ್ಯಾಸೇನೋಕ್ತಂ ಚ ಯಚ್ಚಾಪಿ ಉಪಸ್ಥಾನಂ ಮಹಾತ್ಮನಃ ॥೨೩॥

ವೇದದಲ್ಲಿ ಶತರುದ್ರೀಯದ ಪ್ರಕರಣದಲ್ಲಿರುವ ಉತ್ತಮವಾದ ನೂರಾರು ಶುಭನಾಮಗಳನ್ನು ವೇದವಿದರಾದ ವಿದ್ವಾಂಸರು ತಿಳಿದಿರುತ್ತಾರೆ.ಮಹರ್ಷಿಗಳಾದ ವ್ಯಾಸರು ಕೂಡ ಮಹಾತ್ಮನಾದ ಶಿವನ ಸ್ತೋತ್ರವನ್ನು ಹೇಳಿದ್ದಾರೆ.

ಪ್ರದಾತಾ ಸರ್ವಲೋಕಾನಾಂ ವಿಶ್ವಂ ಚಾಪ್ಯುಚ್ಯತೇ ಮಹತ್ ।
ಜ್ಯೇಷ್ಠಭೂತಂ ವದನ್ತ್ಯೇನಂ ಬ್ರಾಹ್ಮಣಾ ಋಷಯೋಽಪರೇ ॥೨೪॥

ಮಹಾದೇವನು ಎಲ್ಲ ಲೋಕಗಳಲ್ಲಿರುವ ಜನರಿಗೂ ಅವರವರ ಅಭೀಷ್ಟಗಳನ್ನು ಕೊಡುವವನಾಗಿದ್ದಾನೆ. ಈ ಮಹಾವಿಶ್ವವು ಅವನ

ಸ್ವರೂಪವೆಂದೇ ಹೇಳುತ್ತಾರೆ. ಶ್ರೇಷ್ಠರಾದ ಬ್ರಾಹ್ಮಣರೂ ಮತ್ತು ಋಷಿಗಳೂ ಅವನನ್ನು ಎಲ್ಲರಿಗಿಂತಲೂ ಜ್ಯೇಷ್ಠನೆಂದು ಹೇಳುತ್ತಾರೆ.

ಪ್ರಥಮೋ ಹ್ಯೇಷ ದೇವಾನಾಂ ಮುಖಾದಗ್ನಿಮಜೀಜನತ್ ।
ಗ್ರಹೈರ್ಬಹುವಿಧೈಃ ಪ್ರಾಣಾನ್ಸಂರುದ್ಧಾನುತ್ಸೃಜತ್ಯಪಿ ॥೨೫॥

ಮಹಾದೇವನು ದೇವತೆಗಳಲ್ಲಿ ಮೊದಲಿಗನಾಗಿದ್ದಾನೆ. ಅವನು ತನ್ನ ಮುಖದಿಂದ ಅಗ್ನಿಯನ್ನು ಸೃಷ್ಟಿಸಿರುವನು. ಮಹಾದೇವನು ನಾನಾವಿಧವಾದ ಗ್ರಹಬಾಧೆಗಳಿಂದ ಆಕ್ರಮಿಸಲ್ಪಟ್ಟಿರುವ ಪ್ರಾಣಿಗಳನ್ನು ದುಃಖದಿಂದ ಪಾರುಮಾಡುತ್ತಾನೆ.

ವಿಮುಞ್ಚತಿ ನ ಪುಣ್ಯಾತ್ಮಾ ಶರಣ್ಯಃ ಶರಣಾಗತಾನ್ ।
ಆಯುರಾರೋಗ್ಯಮೈಶ್ವರ್ಯಂ ವಿತ್ತಂ ಕಾಮಾಂಶ್ಚ ಪುಷ್ಕಲಾನ್ ।
ಸ ದದಾತಿ ಮನುಷ್ಯೇಭ್ಯಃ ಸ ಏವಾಕ್ಷಿಪತೇ ಪುನಃ ॥೨೬॥

ಪುಣ್ಯಾತ್ಮನಾದ ಮತ್ತು ಶರಣಾಗತವತ್ಸಲನಾದ ಮಹಾದೇವನು ಶರಣಾಗತರಾದವರನ್ನು ಎಂದಿಗೂ ಬಿಡುವುದಿಲ್ಲ.ಹಾಗೆ ಅನನ್ಯಶರಣರಾದ ಮನುಷ್ಯರಿಗೆ ಆಯುಸ್ಸು, ಆರೋಗ್ಯ, ಐಶ್ವರ್ಯ, ಧನ ಮತ್ತು ಪರಿಪೂರ್ಣವಾದ ಕಾಮನೆಗಳನ್ನೂ ದಯಪಾಲಿಸುತ್ತಾನೆ.ಪುನಃ ಅವನೇ ಎಲ್ಲವನ್ನೂ ಹಿಂತೆಗೆದುಕೊಳ್ಳುತ್ತಾನೆ.

ಶಕ್ರಾದಿಷು ಚ ದೇವೇಷು ತಸ್ಯೈಶ್ವರ್ಯಮಿಹೋಚ್ಯತೇ ।
ಸ ಏವ ವ್ಯಾಪೃತೋ ನಿತ್ಯಂ ತ್ರೈಲೋಕ್ಯಸ್ಯ ಶುಭಾಶುಭೇ ॥೨೭॥

ಇಂದ್ರಾದಿಗಳಲ್ಲಿರುವ ಐಶ್ವರ್ಯವೂ ಮಹೇಶ್ವರನದೇ ಎಂದು ಹೇಳುತ್ತಾರೆ. ಮೂರು ಲೋಕಗಳ ಶುಭಾಶುಭಕರ್ಮಗಳಿಗೆ ಫಲವನ್ನು ನೀಡಲು ಸದಾಶಿವನು ಯಾವಾಗಲೂ ತತ್ಪರನಾಗಿರುತ್ತಾನೆ.

ಐಶ್ವರ್ಯಾಚ್ಚೈವ ಕಾಮಾನಾಮೀಶ್ವರಃ ಪುನರುಚ್ಯತೇ ।
ಮಹೇಶ್ವರಶ್ಚ ಲೋಕಾನಾಂ ಮಹತಾಮೀಶ್ವರಶ್ಚ ಸಃ ॥೨೮॥

ಸಮಸ್ತವಾದ ಕಾಮನೆಗಳಿಗೂ ಅಧೀಶ್ವರನಾದುದರಿಂದ ಮಹಾದೇವ

ನನ್ನು ಈಶ್ವರನೆಂದು ಕರೆಯುತ್ತಾರೆ.ಮಹಾಲೋಕಗಳಿಗೂ ಈಶ್ವರನಾದುದರಿಂದ ಅವನು ಮಹೇಶ್ವರನೂ ಆಗಿದ್ದಾನೆ.

ಬಹುಭಿರ್ವಿವಿಧೈ ರೂಪೈರ್ವಿಶ್ವಂ ವ್ಯಾಪ್ತಮಿದಂ ಜಗತ್ ।
ತಸ್ಯ ದೇವಸ್ಯ ಯದ್ವಕ್ತ್ರಂ ಸಮುದ್ರೇ ವಡವಾಮುಖಮ್ ॥೨೯॥

ಅನೇಕಪ್ರಕಾರವಾದ ಮತ್ತು ವಿಧ-ವಿಧವಾದ ಮಹಾದೇವನ ರೂಪಗಳಿಂದ ಈ ಜಗತ್ತು ವ್ಯಾಪ್ತವಾಗಿದೆ.ಸಮುದ್ರದಲ್ಲಿರುವ ವಡವಾನಲವೇ ಮಹಾದೇವನ ಮುಖವಾಗಿದೆ.”

೧೬೧ನೆಯ ಅಧ್ಯಾಯವು ಮುಗಿಯಿತು.

೧೬೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಧರ್ಮದ ವಿಷಯದಲ್ಲಿ ವೇದಪ್ರಾಮಾಣ್ಯಕ್ಕೆ ಶ್ರೇಷ್ಠತೆ: ಧರ್ಮಾಧರ್ಮಗಳ ಫಲ: ಸಾಧುಗಳ ಮತ್ತು ಅಸಾಧುಗಳ ಲಕ್ಷಣಗಳು: ಶಿಷ್ಟಾಚಾರದ ನಿರೂಪಣೆ

ವೈಶಂಪಾಯನರು ಹೇಳುತ್ತಾರೆ:

ಇತ್ಯುಕ್ತವತಿ ವಾಕ್ಯಂ ತು ಕೃಷ್ಣೇ ದೇವಕಿನನ್ದನೇ ।
ಭೀಷ್ಮಂ ಶಾನ್ತನವಂ ಭೂಯಃ ಪರ್ಯಪೃಚ್ಛದ್ಯುಧಿಷ್ಠಿರಃ ॥೧॥

“ಜನಮೇಜಯ! ದೇವಕಿಯ ಮಗನಾದ ಶ್ರೀಕೃಷ್ಣನು ಹೀಗೆ ಹೇಳಿದನಂತರ ಯುಧಿಷ್ಠಿರನು ಶಾಂತನುವಿನ ಮಗನಾದ ಭೀಷ್ಮನನ್ನು ಪುನಃ ಪ್ರಶ್ನಿಸಿದನು:

ನಿರ್ಣಯೇ ವಾ ಮಹಾಬುದ್ಧೇ ಸರ್ವಧರ್ಮವಿದಾಂ ವರ ।
ಪ್ರತ್ಯಕ್ಷಮಾಗಮೋ ವೇತ್ತಿ ಕಿಂ ತಯೋಃ ಕಾರಣಂ ಭವೇತ್ ॥೨॥

“ಸರ್ವಧರ್ಮಗಳನ್ನೂ ತಿಳಿದಿರುವವರಲ್ಲಿ ಶ್ರೇಷ್ಠನಾದ ಪಿತಾಮಹನೇ! ಧಾರ್ಮಿಕವಿಷಯಗಳಲ್ಲಿ ಉಂಟಾಗುವ ಸಂದೇಹಗಳನ್ನು ನಿವಾರಿಸಿಕೊಳ್ಳಬೇಕಾದಾಗ ಪ್ರತ್ಯಕ್ಷಪ್ರಮಾಣವನ್ನು ಆಶ್ರಯಿಸಬೇಕೇ

ಅಥವಾ ಆಗಮ (ವೇದ) ಪ್ರಮಾಣವನ್ನು ಆಶ್ರಯಿಸಬೇಕೇ? ಪ್ರತ್ಯಕ್ಷಪ್ರಮಾಣ ಮತ್ತು ಆಗಮಪ್ರಮಾಣ ಈ ಎರಡರಲ್ಲಿ ಯಾವ ಪ್ರಮಾಣವು ಸಿದ್ಧಾಂತದ ನಿರ್ಣಯಗಳಲ್ಲಿ ಮುಖ್ಯಕಾರಣವಾಗುತ್ತದೆ?"

ಭೀಷ್ಮನು ಹೇಳುತ್ತಾನೆ:

"ಪ್ರಾಜ್ಞನೇ! ನೀನು ತುಂಬಾ ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ಅದಕ್ಕೆ ಉತ್ತರವನ್ನು ಹೇಳುವೆನು: ಕೇಳು. ನನ್ನ ಬುದ್ಧಿಗೆ ತೋರುವಂತೆ ಈ ವಿಷಯ ದಲ್ಲಿ ಸಂಶಯಕ್ಕೆ ಅವಕಾಶವು ಕಿಂಚಿತ್ತಾದರೂ ಇರುವುದಿಲ್ಲ. ಧರ್ಮದ ವಿಷಯದಲ್ಲಿ ಸಂದೇಹವು ಬಹಳ ಸುಲಭವಾಗಿಯೇ ಉಂಟಾಗುತ್ತದೆ. ಅದನ್ನು ನಿರ್ಣಯಿಸುವುದು ಅತಿ ದುಸ್ತರವೇ ಸರಿ. ಪ್ರತ್ಯಕ್ಷಪ್ರಮಾಣ ಮತ್ತು ಆಗಮಪ್ರಮಾಣ–ಇವೆರಡಕ್ಕೂ ಕೊನೆಯೆಂಬುದೇ ಇಲ್ಲ. ಎರಡರಲ್ಲಿಯೂ ಸಂದೇಹಕ್ಕೆಡೆಗೊಡುವ ವಿಷಯಗಳಿರುತ್ತವೆ. ತಾವೇ ಮಹಾಪ್ರಾಜ್ಞರೆಂದು ಭಾವಿಸಿಕೊಳ್ಳುವ ಹೇತುವಾದಿಗಳು ಪ್ರತ್ಯಕ್ಷವಾದ ಪ್ರಮಾಣವನ್ನೇ ಮುಖ್ಯ ವಾಗಿಟ್ಟುಕೊಂಡು ಪರೋಕ್ಷವಾದುದು ಯಾವುದೂ ಇಲ್ಲವೆಂದು ಸಿದ್ಧಾಂತ ಮಾಡಿಬಿಡುತ್ತಾರೆ. ಆಗಮಗಳಿಂದ ಪ್ರಮಾಣೀಕರಿಸಿದ್ದು ಸತ್ಯವೇ ಆದರೂ ಅದರ ಅಸ್ತಿತ್ವದಲ್ಲಿ ಅವರು ಸಂದೇಹಪಡುತ್ತಾರೆ. ತಾವೇ ಮಹಾಪಂಡಿತ ರೆಂದು ಭಾವಿಸಿಕೊಳ್ಳುವ ಅಂತಹ ಮೂರ್ಖರು ಪ್ರತ್ಯಕ್ಷವಾದುದೇ ಪ್ರಮಾಣ: ಅಪ್ರತ್ಯಕ್ಷವಾದುದು ಪ್ರಮಾಣವಲ್ಲ ಎಂದು ಸಿದ್ಧಾಂತಿಸುವುದು ಯುಕ್ತವಲ್ಲ. (ಆಕಾಶವನ್ನು ನೋಡಿದರೆ ಅದು ನೀಲಿಯ ಬಣ್ಣದಂತೆ ಕಾಣುತ್ತದೆ. ವಸ್ತುತಃ ಆಕಾಶಕ್ಕೆ ಬಣ್ಣವಾಗಲೀ ಆಕಾರವಾಗಲೀ ಇಲ್ಲ. ಆದುದರಿಂದ ಪ್ರತ್ಯಕ್ಷ ಪ್ರಮಾಣದಿಂದಲೇ ಸತ್ಯದ ನಿರ್ಣಯವಾಗುವುದಿಲ್ಲ. ಧರ್ಮ, ಈಶ್ವರ ಮತ್ತು ಪರಲೋಕಾದಿಗಳ ವಿಷಯದಲ್ಲಿ ಆಗಮ ಪ್ರಮಾಣವೇ ಮುಖ್ಯವಾದುದು. ಏಕೆಂದರೆ: ಇತರ ಪ್ರಮಾಣಗಳಿಗೆ ಅಲ್ಲಿಯವರೆಗೆ ಹೋಗುವ ಸಾಧ್ಯತೆಯೇ ಇಲ್ಲ.) 'ಹಾಗಾದರೆ ಅಪ್ರತ್ಯಕ್ಷವಾದ ಏಕಮಾತ್ರ ಬ್ರಹ್ಮವಸ್ತುವು ಎಲ್ಲಕ್ಕೂ ಕಾರಣವೆಂದು ಹೇಗೆ ತಾನೇ ಹೇಳಲು ಸಾಧ್ಯ?'–ಎಂದು ಕೇಳಿದರೆ ಅದಕ್ಕೆ ಉತ್ತರವು ಹೀಗಿದೆ: ಆಗಮವು ಪ್ರಮಾಣೀಕರಿಸಿರುವ ಬ್ರಹ್ಮವಸ್ತುವೇ ಎಲ್ಲಕ್ಕೂ ಮೂಲಕಾರಣವೆಂಬ ತತ್ತ್ವವನ್ನು ಅರಿಯಬೇಕಾದರೆ ಮನುಷ್ಯನು ಆಲಸ್ಯವನ್ನು ತೊರೆದು ಬಹಳಕಾಲದವರೆಗೆ ಯೋಗಯುಕ್ತ

ನಾಗಿರಬೇಕು. ಅನೇಕಪ್ರಕಾರವಾದ ಶ್ವಾಸ ಮತ್ತು ಉಚ್ಛ್ವಾಸರೂಪವಾದ ಪ್ರಾಣದ ವ್ಯಾಪಾರದಲ್ಲಿ ತೊಡಗಿರುವ ಮನುಷ್ಯನು ತತ್ಪರನಾಗಿದ್ದರೆ ಮಾತ್ರವೇ ತತ್ತ್ವದ ದರ್ಶನವಾಗುತ್ತದೆ. ಬೇರೆ ಯಾವ ರೀತಿಯಿಂದಲೂ ಆ ತತ್ತ್ವದ ದರ್ಶನವಾಗುವುದಿಲ್ಲ.

ಹೇತೂನಾಮನ್ತಮಾಸಾದ್ಯ ವಿಪುಲಂ ಜ್ಞಾನಮುತ್ತಮಮ್ ।
ಜ್ಯೋತಿಃ ಸರ್ವಸ್ಯ ಲೋಕಸ್ಯ ವಿಪುಲಂ ಪ್ರತಿಪದ್ಯತೇ ॥೮॥

ನ ತ್ವೇವ ಗಮನಂ ರಾಜನ್ಹೇತುತೋ ಗಮನಂ ತಥಾ ।
ಅಗ್ರಾಹ್ಯಮನಿಬದ್ಧಂ ಚ ವಾಚಾ ಸಮ್ಪರಿವರ್ಜಯೇತ್ ॥೯॥

ಸಮಸ್ತವಾದ ಈ ತರ್ಕದ ಕಡೆಯನ್ನು ಹೊಂದಿದನಂತರ (ತರ್ಕವನ್ನು ಅತಿಕ್ರಮಿಸಿ ಹೋದನಂತರ) ಉತ್ತಮೋತ್ತಮವಾದ ಮತ್ತು ವಿಪುಲವಾದ ಜ್ಞಾನವು ಪ್ರಾಪ್ತವಾಗುತ್ತದೆ. ಆ ಜ್ಞಾನವೇ ಸಂಪೂರ್ಣಜಗತ್ತಿಗೂ ವಿಪುಲವಾದ ಜ್ಯೋತಿಯಾಗಿದೆ. ತರ್ಕದಿಂದ ಯಾವ ಜ್ಞಾನವು ಪ್ರಾಪ್ತವಾಗುವುದೋ ಅದು ನಿಶ್ಚಯವಾಗಿಯೂ ಜ್ಞಾನವೇ ಅಲ್ಲ. ಆದುದರಿಂದ ತರ್ಕಗಮ್ಯವಾದ ಜ್ಞಾನವನ್ನು ಮಾನ್ಯಮಾಡಬಾರದು. ವೇದಗಳಿಂದ ಯಾವುದು ಪ್ರತಿಪಾದ್ಯ ವಾಗಿರುವುದಿಲ್ಲವೋ–ಅಂತಹುದನ್ನು ಪರಿತ್ಯಜಿಸಬೇಕು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಪ್ರತ್ಯಕ್ಷಂ ಲೋಕತಃ ಸಿದ್ಧಿರ್ಲೋಕಶ್ಚಾಗಮಪೂರ್ವಕಃ ।
ಶಿಷ್ಟಾಚಾರೋ ಬಹುವಿಧಸ್ತನ್ಮೇ ಬ್ರೂಹಿ ಪಿತಾಮಹ ॥೧೦॥

"ಪಿತಾಮಹನೇ! ಜನರ ದೃಷ್ಟಿಯಿಂದ ಪ್ರತ್ಯಕ್ಷಪ್ರಮಾಣವೆಂಬುದು ಪ್ರಸಿದ್ಧವಾಗಿದೆ. ಅನುಮಾನ, ಆಗಮ ಮತ್ತು ಶಿಷ್ಟಾಚಾರ–ಇತ್ಯಾದಿ ಬಹುವಿಧವಾದ ಪ್ರಮಾಣಗಳೂ ಇವೆ. ಇವುಗಳಲ್ಲಿ ಯಾವುದು ಪ್ರಬಲವಾದುದು? ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಧರ್ಮಸ್ಯ ಹ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ ।
ಸಂಸ್ಥಾ ಯತ್ನೈರಪಿ ಕೃತಾ ಕಾಲೇನ ಪ್ರತಿಭಿದ್ಯತೇ ॥೧೧॥

"ಯುಧಿಷ್ಠಿರ! ಬಲಿಷ್ಠರಾದ ದುರಾತ್ಮರು ಧರ್ಮಕ್ಕೆ ಹಾನಿಯನ್ನುಂಟುಮಾಡಲು ತೊಡಗಿದರೆ ಸಾಧಾರಣರಾದವರು ಧರ್ಮವನ್ನು ರಕ್ಷಿಸಲು ಮಾಡುವ ಪ್ರಯತ್ನಗಳೆಲ್ಲವೂ ಸ್ವಲ್ಪಕಾಲದಲ್ಲಿಯೇ ವಿಫಲಗೊಳ್ಳುತ್ತವೆ.

ಅಧರ್ಮೋ ಧರ್ಮರೂಪೇಣ ತೃಣೈಃ ಕೂಪ ಇವಾವೃತಃ।
ತತಸ್ತೈರ್ಭಿದ್ಯತೇ ವೃತ್ತಂ ಶೃಣು ಚೈವ ಯುಧಿಷ್ಠಿರ ॥೧೨॥

ಹುಲ್ಲಿನಿಂದ ಮುಚ್ಚಲ್ಪಟ್ಟಿರುವ ಬಾವಿಯಂತೆ-ಅಧರ್ಮವು ಧರ್ಮದ ಹೊದ್ದಿಕೆಯನ್ನು ಹೊದೆದುಕೊಂಡಿರುತ್ತದೆ. ಆ ಸಮಯದಲ್ಲಿ ದುರಾಚಾರಿಗಳಾದ ಮನುಷ್ಯರು ಶಿಷ್ಟಾಚಾರಗಳನ್ನು ಭಗ್ನಗೊಳಿಸುತ್ತಾರೆ. ಈ ವಿಷಯವಾಗಿ ಇನ್ನೂ ಹೇಳುವೆನು; ಕೇಳು.

ಅವೃತ್ತಾ ಯೇ ತು ಭಿನ್ದನ್ತಿ ಶ್ರುತಿತ್ಯಾಗಪರಾಯಣಾಃ।
ಧರ್ಮವಿದ್ವೇಷಿಣೋ ಮನ್ದಾ ಇತ್ಯುಕ್ತಸ್ತೇಷು ಸಂಶಯಃ ॥೧೩॥

ಯಾರು ಆಚಾರಹೀನರಾಗಿರುವರೋ, ವೇದ-ಶಾಸ್ತ್ರಗಳನ್ನು ತ್ಯಾಗ ಮಾಡಿರುವರೋ–ಅಂತಹ ಧರ್ಮದ್ವೇಷಿಗಳಾದ ಮೂರ್ಖರು ಸಜ್ಜನರಿಂದ ಅನುಸರಿಸಲ್ಪಡುತ್ತಿದ್ದ ಧರ್ಮಗಳನ್ನೂ ಶಿಷ್ಟಾಚಾರಗಳನ್ನೂ ಭಗ್ನಗೊಳಿಸುತ್ತಾರೆ. (ಆದುದರಿಂದ ಪ್ರತ್ಯಕ್ಷ, ಅನುಮಾನ ಮತ್ತು ಶಿಷ್ಟಾಚಾರ ಪ್ರಮಾಣಗಳಲ್ಲಿ ನಮಗೆ ಸಹಜವಾಗಿಯೇ ಸಂದೇಹವುಂಟಾಗುತ್ತದೆ .)

ಅತೃಪ್ಯನ್ತಸ್ತು ಸಾಧೂನಾಂ ಯ ಏವಾಗಮಬುದ್ಧಯಃ।
ಪರಮಿತ್ಯೇವ ಸಂತುಷ್ಟಾಸ್ತಾಮುಪಾಸ್ವ ಚ ಪೃಚ್ಛ ಚ ॥೧೪॥

ಕಾಮಾರ್ಥೌ ಪೃಷ್ಠತಃ ಕೃತ್ವಾ ಲೋಭಮೋಹಾನುಸಾರಿಣೌ।
ಧರ್ಮ ಇತ್ಯೇವ ಸಮ್ಬುದ್ಧಾಸ್ತಾನುಪಾಸ್ವ ಚ ಪೃಚ್ಛ ಚ ॥೧೫॥

ಅಂತಹ ಸಮಯದಲ್ಲಿ ಸಾಧುಗಳಿಗೆ ತೃಪ್ತಿಯನ್ನುಂಟುಮಾಡುವ, ವೇದೋಕ್ತಕರ್ಮಗಳನ್ನು ಆಚರಿಸಬೇಕೆಂಬ ಬುದ್ಧಿಯನ್ನು ಹೊಂದಿರುವ, ವೇದೋಕ್ತಪ್ರಮಾಣವೇ ಶ್ರೇಷ್ಠವೆಂದು ಭಾವಿಸಿರುವ, ನಿತ್ಯತೃಪ್ತರಾದ ವಿದ್ವಾಂಸರ ಉಪಾಸನೆಯನ್ನು ಮಾಡು ಮತ್ತು ಧರ್ಮದ ವಿಷಯದಲ್ಲಿ

ಅವರನ್ನು ಪ್ರಶ್ನಿಸು. ಲೋಭ-ಮೋಹಗಳನ್ನು ಅನುಸರಿಸಿ ಹೋಗುವ ಅರ್ಥ-ಕಾಮಗಳನ್ನು ಹಿಂದಕ್ಕಟ್ಟಿ ಧರ್ಮವೇ ಪರಮಶ್ರೇಷ್ಠವೆಂದು ಭಾವಿಸಿರುವ ವಿದ್ವಾಂಸರನ್ನು ಸೇವಿಸು ಮತ್ತು ಅವರನ್ನು ಧರ್ಮದ ವಿಷಯವಾಗಿ ಪ್ರಶ್ನಿಸು.

ನ ತೇಷಾಂ ಭಿದ್ಯತೇ ವೃತ್ತಂ ಯಜ್ಞಾಃ ಸ್ವಾಧ್ಯಾಯಕರ್ಮ ಚ ।
ಆಚಾರಃ ಕಾರಣಂ ಚೈವ ಧರ್ಮಶ್ಚೈಕಸ್ತ್ರಯಂ ಪುನಃ ॥೧೬॥

ಅಂತಹ ಸತ್ಪುರುಷರ ಸದಾಚಾರವಾಗಲೀ, ಯಜ್ಞ-ಸ್ವಾಧ್ಯಾಯಾದಿ ಶುಭಕರ್ಮಗಳ ಆಚರಣೆಗಳಾಗಲೀ ನಾಶಹೊಂದುವುದಿಲ್ಲ. ಅವರ ಆಚಾರ, ಆಚಾರವನ್ನು ತಿಳಿಸಿಕೊಡುವ ಆಗಮ ಮತ್ತು ಧರ್ಮ–ಈ ಮೂರೂ ಏಕತ್ವವನ್ನೇ ಹೊಂದುತ್ತವೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಪುನರೇವ ಹಿ ಮೇ ಬುದ್ಧಿಃ ಸಂಶಯೇ ಪರಿಮುಹ್ಯತಿ ।
ಅಪಾರೇ ಮಾರ್ಗಮಾಣಸ್ಯ ಪರಂ ತೀರಮಪಶ್ಯತಃ ॥೧೭॥

"ಪಿತಾಮಹನೇ! ನೀನು ಇಷ್ಟು ವಿವರಿಸಿ ಹೇಳಿದರೂ ನನ್ನ ಬುದ್ಧಿಯು ಅಪಾರವಾದ ಸಂಶಯಸಾಗರದಲ್ಲಿ ಮುಳುಗಿ ವಿಮೋಹಗೊಂಡಿದೆ. ನಾನು ಈ ಸಂಶಯಸಮುದ್ರದ ಪಾರವನ್ನು ಕಾಣಬೇಕೆಂಬ ಆಶಯದಿಂದಿರುವೆನು. ಎಷ್ಟೇ ಪ್ರಯತ್ನಿಸಿದರೂ ನಾನು ಅದರ ಪಾರವನ್ನು ಕಾಣದವನಾಗಿದ್ದೇನೆ.

ವೇದಃ ಪ್ರತ್ಯಕ್ಷಮಾಚಾರಃ ಪ್ರಮಾಣಂ ತತ್ತ್ರಯಂ ಯದಿ ।
ಪೃಥಕ್ತ್ವಂ ಲಭ್ಯತೇ ಚೈಷಾಂ ಧರ್ಮಶ್ಚೈಕಸ್ತ್ರಯಂ ಕಥಮ್ ॥೧೮॥

ಒಂದು ವೇಳೆ ವೇದ, ಪ್ರತ್ಯಕ್ಷ ಮತ್ತು ಸದಾಚಾರ–ಇವು ಮೂರೂ ಧರ್ಮಕ್ಕೆ ಪ್ರಮಾಣಗಳಾದರೆ–ಧರ್ಮವೂ ಅವುಗಳಿಗೆ ತಕ್ಕಂತೆ ಬೇರೆ ಬೇರೆಯಾಗಬೇಕಾಗುತ್ತದೆ. ಆದರೆ 'ಧರ್ಮ' ಎಂಬುದು ಒಂದೇ. ಅದು ಹೇಗೆ ಬೇರೆ-ಬೇರೆಯಾಗಿ ಮೂರಾಗುತ್ತದೆ?"

ಭೀಷ್ಮನು ಹೇಳುತ್ತಾನೆ:

ಧರ್ಮಸ್ಯ ಹ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ ।
ಯದ್ಯೇವಂ ಮನ್ಯಸೇ ರಾಜಂಸ್ತ್ರಿಧಾ ಧರ್ಮವಿಚಾರಣಾ ॥೧೯॥

"ಯುಧಿಷ್ಠಿರ! ಪ್ರಬಲರಾದ ದುರಾಚಾರಿಗಳಿಂದ ಧರ್ಮದ ಹಾನಿಯಾಗುತ್ತಿರುವಾಗ ಹೀಗೆ ಧರ್ಮಸ್ವರೂಪವು ಪ್ರಮಾಣಭೇದದಿಂದ ಮೂರು ಪ್ರಕಾರವಾಗಿರುವುದೆಂದು ನೀನು ಭಾವಿಸುವುದಾದರೆ ಅದು ಸರಿಯಲ್ಲ. ವಾಸ್ತವವಾಗಿ ಧರ್ಮವೆಂಬುದು ಒಂದೇ. ಆದರೆ ಮೂರು ಪ್ರಕಾರವಾಗಿ ಅಥವಾ ಮೂರು ವಿಧವಾದ ಪ್ರಮಾಣಗಳ ಮೂಲಕವಾಗಿ ಧರ್ಮವನ್ನು ಪರಿಶೀಲಿಸಬೇಕಾಗುತ್ತದೆ.

ಏಕ ಏವೇತಿ ಜಾನೀಹಿ ತ್ರಿಧಾ ಧರ್ಮಸ್ಯ ದರ್ಶನಮ್ ।
ಪೃಥಕ್ತ್ವೇ ಚ ನ ಮೇ ಬುದ್ಧಿಸ್ತ್ರಯಾಣಾಮಪಿ ವೈ ತಥಾ ॥೨೦॥

ಯುಧಿಷ್ಠಿರ! ಧರ್ಮವು ಒಂದೇ ಎಂದು ಸ್ಪಷ್ಟವಾಗಿ ತಿಳಿ. ಮೂರು ಪ್ರಮಾಣಗಳ ಮೂಲಕವಾಗಿ ಆ ಒಂದೇ ಧರ್ಮದ ಸಮ್ಯಗ್ದರ್ಶನವಾಗುತ್ತದೆ. ಆ ಮೂರು ಪ್ರಮಾಣಗಳೂ ಪ್ರತ್ಯೇಕ-ಪ್ರತ್ಯೇಕವಾದ ಮೂರು ಧರ್ಮಗಳನ್ನು ಪ್ರತಿಪಾದಿಸುವುದೆಂದು ನಾನು ಭಾವಿಸುವುದಿಲ್ಲ.

ಉಕ್ತೋ ಮಾರ್ಗಸ್ತ್ರಯಾಣಾಂ ಚ ತತ್ತಥೈವ ಸಮಾಚರ ।
ಜಿಜ್ಞಾಸಾ ನ ತು ಕರ್ತವ್ಯಾ ಧರ್ಮಸ್ಯ ಪರಿತರ್ಕಣಾತ್ ॥೨೧॥

ಮೂರು ಪ್ರಮಾಣಗಳ ಮೂಲಕವಾಗಿ ಯಾವ ಧರ್ಮದ ಮಾರ್ಗವು ಪ್ರತಿಪಾದಿತವಾಗಿರುವುದೋ–ಆ ಧರ್ಮಮಾರ್ಗವನ್ನೇ ಅನುಸರಿಸು. ತರ್ಕವನ್ನು ಆಶ್ರಯಿಸಿ ಧರ್ಮವನ್ನು ಜಿಜ್ಞಾಸೆಮಾಡುವುದು ಉಚಿತವಲ್ಲ.

ಸದೈವ ಭರತಶ್ರೇಷ್ಠ ಮಾ ತೇ ಭೂದತ್ರ ಸಂಶಯಃ ।
ಅನ್ಧೋ ಜಡ ಇವಾಶಙ್ಕೋ ಯದ್ಬ್ರವೀಮಿ ತದಾಚರ ॥೨೨॥

ಭರತಶ್ರೇಷ್ಠನೇ! ನನ್ನ ಈ ಮಾತಿನಲ್ಲಿ ನಿನಗೆ ಸ್ವಲ್ಪವೂ ಸಂಶಯವುಂಟಾಗದಿರಲಿ. ನಾನು ಏನು ಹೇಳುವೆನೋ ಅದನ್ನು ಕುರುಡನಂತೆ ಮತ್ತು ಜಡನಂತೆ ಯಾವ ಶಂಕೆಯೂ ಇಲ್ಲದೇ ಆಚರಿಸು.

ಅಹಿಂಸಾ ಸತ್ಯಮಕ್ರೋಧೋ ದಾನಮೇತಚ್ಚತುಷ್ಟಯಮ್ ।
ಅಜಾತಶತ್ರೋ ಸೇವಸ್ವ ಧರ್ಮ ಏಷ ಸನಾತನಃ ॥೨೩॥

ಅಜಾತಶತ್ರುವೇ! ಅಹಿಂಸೆ, ಸತ್ಯ, ಅಕ್ರೋಧ ಮತ್ತು ದಾನ- ಈ ನಾಲ್ಕನ್ನೂ ಸದಾ ಸೇವಿಸುತ್ತಿರು. ಯಾರಿಗೂ ಹಿಂಸೆಮಾಡಬೇಡ. ಸತ್ಯನಿಷ್ಠನಾಗಿರು. ಕೋಪವನ್ನು ತೊರೆ. ಯಥಾಶಕ್ತಿ ದಾನಮಾಡು. ಇದೇ ಸನಾತನಧರ್ಮವಾಗಿದೆ.

ಬ್ರಾಹ್ಮಣೇಷು ಚ ವೃತ್ತಿರ್ಯಾ ಪಿತೃಪೈತಾಮಹೋಚಿತಾ ।
ತಾಮನ್ವೇಹಿ ಮಹಾಬಾಹೋ ಧರ್ಮಸ್ಯೈತೇ ಹಿ ದೇಶಿಕಾಃ ॥೨೪॥

ನಿನ್ನ ತಾತ-ಮುತ್ತಾತಂದಿರು ಬ್ರಾಹ್ಮಣರ ವಿಷಯದಲ್ಲಿ ಯಾವ ವಿಧವಾದ ಸದ್ವ್ಯವಹಾರವನ್ನಿಟ್ಟುಕೊಂಡಿದ್ದರೋ ಹಾಗೆಯೇ ನೀನೂ ಕೂಡ ಅವರ ವಿಷಯದಲ್ಲಿ ವ್ಯವಹರಿಸು. ಏಕೆಂದರೆ: ಬ್ರಾಹ್ಮಣರೇ ಧರ್ಮೋಪದೇಶಕರು.

ಪ್ರಮಾಣಮಪ್ರಮಾಣಂ ವೈ ಯಃ ಕುರ್ಯಾದಬುಧೋ ಜನಃ ।
ನ ಸ ಪ್ರಮಾಣತಾಮರ್ಹೋ ವಿವಾದಜನನೋ ಹಿ ಸಃ ॥೨೫॥

ಯಾವ ಮೂರ್ಖಮನುಷ್ಯನು ಪ್ರಮಾಣವನ್ನು ಅಪ್ರಮಾಣವೆಂದು ತರ್ಕದ ಆಶ್ರಯದಿಂದ ಸಾಧಿಸುವನೋ–ಅಂತಹವನ ಮಾತಿನಲ್ಲಿ ವಿಶ್ವಾಸವನ್ನಿಡಬಾರದು. ಏಕೆಂದರೆ: ಅವನು ಯಾವಾಗಲೂ ವಿವಾದವನ್ನೇ ಉಂಟುಮಾಡುವನು.

ಬ್ರಾಹ್ಮಣಾನೇವ ಸೇವಸ್ವ ಸತ್ಕೃತ್ಯ ಬಹುಮನ್ಯ ಚ ।
ಏತೇಷ್ವೇವ ತ್ವಿಮೇ ಲೋಕಾಃ ಕೃತ್ಸ್ನಾ ಇತಿ ನಿಬೋಧ ತಾನ್ ॥೨೬॥

ನೀನು ಬ್ರಾಹ್ಮಣರನ್ನೇ ವಿಶೇಷವಾಗಿ ಗೌರವಿಸಿ ಸತ್ಕರಿಸುತ್ತಾ ಅವರ ಸೇವೆಯಲ್ಲಿಯೇ ನಿರತನಾಗಿರು. ಅವರಲ್ಲಿಯೇ ಸಮಗ್ರವಾದ ಈ ಲೋಕಗಳೆಲ್ಲವೂ ಪ್ರತಿಷ್ಠಿತವಾಗಿವೆಯೆಂದು ತಿಳಿ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಯೇ ಚ ಧರ್ಮಮಸೂಯನ್ತೇ ಯೇ ಚೈನಂ ಪರ್ಯುಪಾಸತೇ ।
ಬ್ರವೀತು ಮೇ ಭವಾನೇತತ್ಕ್ವ ತೇ ಗಚ್ಛನ್ತಿ ತಾದೃಶಾಃ ॥೨೭॥

“ಪಿತಾಮಹನೇ! ಧರ್ಮವನ್ನು ನಿಂದಿಸುವ ಜನರು ಯಾವ ಲೋಕಕ್ಕೆ ಹೋಗುತ್ತಾರೆ? ಧರ್ಮವನ್ನು ಆಚರಿಸುವ ಜನರು ಯಾವ ಲೋಕಕ್ಕೆ ಹೋಗುತ್ತಾರೆ? ಈ ವಿಷಯವನ್ನು ಹೇಳು.”

ಭೀಷ್ಮನು ಹೇಳುತ್ತಾನೆ:

ರಜಸಾ ತಮಸಾ ಚೈವ ಸಮವಸ್ತೀರ್ಣಚೇತಸಃ ।
ನರಕಂ ಪ್ರತಿಪದ್ಯನ್ತೇ ಧರ್ಮವಿದ್ವೇಷಿಣೋ ಜನಾಃ ॥೨೮॥

“ಯುಧಿಷ್ಠಿರ! ಯಾವ ಮನುಷ್ಯರು ರಜೋಗುಣ-ತಮೋಗುಣಗಳಿಂದ ಮಲಿನವಾದ ಮನಸ್ಸಿನಿಂದ ಕೂಡಿದವರಾಗಿ ಧರ್ಮವನ್ನು ದ್ವೇಷಿಸುವರೋ ಅವರು ನರಕವನ್ನು ಹೊಂದುತ್ತಾರೆ.

ಯೇ ತು ಧರ್ಮಂ ಮಹಾರಾಜ ಸತತಂ ಪರ್ಯುಪಾಸತೇ ।
ಸತ್ಯಾರ್ಜವಪರಾಃ ಸನ್ತಸ್ತೇ ವೈ ಸ್ವರ್ಗಭುಜೋ ನರಾಃ ॥೨೯॥

ಯಾವ ಸತ್ಪುರುಷರು ಸತ್ಯ ಮತ್ತು ಸರಳತೆಗಳಲ್ಲಿ ತತ್ಪರರಾಗಿರುತ್ತಾ ಸತತವಾಗಿ ಧರ್ಮವನ್ನು ಪರಿಪಾಲಿಸುವರೋ–ಅವರು ಸ್ವರ್ಗಲೋಕದಲ್ಲಿ ಸುಖವನ್ನು ಅನುಭವಿಸುತ್ತಾರೆ.

ಧರ್ಮ ಏವ ಗತಿಸ್ತೇಷಾಮಾಚಾರ್ಯೋಪಾಸನಾದ್ಭವೇತ್ ।
ದೇವಲೋಕಂ ಪ್ರಪದ್ಯನ್ತೇ ಯೇ ಧರ್ಮಂ ಪರ್ಯುಪಾಸತೇ ॥೩೦॥

ಆಚಾರ್ಯರ ಸೇವೆಯನ್ನು ಮಾಡುವುದರಿಂದ ಮನುಷ್ಯರಿಗೆ ಧರ್ಮದ ಮೇಲೆಯೇ ಹೆಚ್ಚಿನ ಆಸಕ್ತಿಯುಂಟಾಗುತ್ತದೆ. ಧರ್ಮವನ್ನು ಆಚರಿಸುವವರು ದೇವಲೋಕಕ್ಕೆ ಹೋಗುತ್ತಾರೆ.

ಮನುಷ್ಯಾ ಯದಿ ವಾ ದೇವಾಃ ಶರೀರಮುಪತಾಪ್ಯ ವೈ ।
ಧರ್ಮಿಣಃ ಸುಖಮೇಧನ್ತೇ ಲೋಭದ್ವೇಷವಿವರ್ಜಿತಾಃ ॥೩೧॥

ಮನುಷ್ಯರೇ ಆಗಲೀ, ದೇವತೆಗಳೇ ಆಗಲೀ ಶರೀರವನ್ನು ಪರಿತಾಪಗೊಳಿಸುವುದರಿಂದಲೇ (ಕಷ್ಟಪಟ್ಟು ತಪಸ್ಸುಮಾಡುವುದರಿಂದಲೇ)

ಧರ್ಮಿಷ್ಠರಾಗುತ್ತಾರೆ. ಲೋಭ-ದ್ವೇಷಗಳನ್ನು ಬಿಟ್ಟಿರುವ ಅವರು ಸ್ವರ್ಗದಲ್ಲಿ ಸುಖವನ್ನು ಹೊಂದುತ್ತಾರೆ.

ಪ್ರಥಮಂ ಬ್ರಹ್ಮಣಃ ಪುತ್ರಂ ಧರ್ಮಮಾಹುರ್ಮನೀಷಿಣಃ ।
ಧರ್ಮಿಣಃ ಪರ್ಯುಪಾಸನ್ತೇ ಫಲಂ ಪಕ್ವಮಿವಾಶಯಃ ॥೩೨॥

ವಿದ್ವಾಂಸರು ಧರ್ಮವನ್ನು ಬ್ರಹ್ಮನ ಹಿರಿಯಮಗನೆಂದೇ ಹೇಳುತ್ತಾರೆ.ತಿನ್ನಲು ಬಯಸುವವರು ಪಕ್ವವಾದ ಹಣ್ಣನ್ನೇ ತಿನ್ನಲು ಅಪೇಕ್ಷಿಸುವಂತೇ–ಧಾರ್ಮಿಕರು ಧರ್ಮವನ್ನೇ ಉಪಾಸನೆಮಾಡುತ್ತಾರೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಅಸತಾಂ ಕೀದೃಶಂ ರೂಪಂ ಸಾಧವಃ ಕಿಂ ಚ ಕುರ್ವತೇ ।
ಬ್ರವೀತು ಮೇ ಭವಾನೇತತ್ಸನ್ತೋಽಸನ್ತಶ್ಚ ಕೀದೃಶಾಃ ॥೩೩॥

"ಪಿತಾಮಹನೇ! ಅಸತ್ಪುರುಷರ ರೂಪವು ಹೇಗಿರುವುದು? ಸತ್ಪುರುಷರು ಯಾವ ಕರ್ಮಗಳನ್ನು ಮಾಡುತ್ತಾರೆ? ಸತ್ಪುರುಷರು ಮತ್ತು ಅಸತ್ಪುರುಷರು ಯಾವ ರೀತಿಯಲ್ಲಿರುವರು?–ಈ ವಿಷಯವನ್ನು ನನಗೆ ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ:

ದುರಾಚಾರಾಶ್ಚ ದುರ್ಧರ್ಷಾ ದುರ್ಮುಖಾಶ್ಚಾಪ್ಯಸಾಧವಃ ।
ಸಾಧವಃ ಶೀಲಸಂಪನ್ನಾಃ ಶಿಷ್ಟಾಚಾರಸ್ಯ ಲಕ್ಷಣಮ್ ॥೩೪॥

"ಯುಧಿಷ್ಠಿರ! ಅಸತ್ಪುರುಷರು–ದುರಾಚಾರಿಗಳೂ, ಉದ್ದತರೂ, ದುರ್ಮುಖರೂ (ಮುಖವನ್ನು ಯಾವಾಗಲೂ ಗಂಟಿಕ್ಕಿಕೊಂಡಿರುವವರೂ ಅಥವಾ ಕೆಟ್ಟಮಾತುಗಳನ್ನಾಡುವವರೂ) ಆಗಿರುತ್ತಾರೆ. ಸತ್ಪುರುಷರು ಒಳ್ಳೆಯ ಗುಣಶೀಲಗಳಿಂದ ಸಂಪನ್ನರಾಗಿರುತ್ತಾರೆ. ನಾನು ಇನ್ನು ಮುಂದೆ ಶಿಷ್ಟಾಚಾರದ ಲಕ್ಷಣಗಳನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ರಾಜಮಾರ್ಗೇ ಗವಾಂ ಮಧ್ಯೇ ಧಾನ್ಯಮಧ್ಯೇ ಚ ಧರ್ಮಿಣಃ ।
ನೋಪಸೇವನ್ತಿ ರಾಜೇನ್ದ್ರ ಸರ್ಗಂ ಮೂತ್ರಪುರೀಷಯೋಃ ॥೩೫॥

ಧರ್ಮಾತ್ಮರಾದ ಸತ್ಪುರುಷರು ರಾಜಮಾರ್ಗದಲ್ಲಾಗಲೀ, ಹಸುಗಳ ಮಧ್ಯದಲ್ಲಾಗಲೀ, ಕಣದಲ್ಲಿ ಒಕ್ಕಲು ಹಾಕಿರುವ ಧಾನ್ಯದ ಮಧ್ಯದಲ್ಲಾಗಲೀ ಮಲ-ಮೂತ್ರಗಳನ್ನು ವಿಸರ್ಜಿಸುವುದಿಲ್ಲ.

ಪಞ್ಚಾನಾಮಶನಂ ದತ್ವಾ ಶೇಷಮಶ್ನನ್ತಿ ಸಾಧವಃ ।
ನ ಜಲ್ಪನ್ತಿ ಚ ಭುಞ್ಜಾನಾ ನ ನಿದ್ರಾನ್ತ್ಯಾರ್ದ್ರಪಾಣಯಃ ॥೩೬॥

ಸತ್ಪುರುಷರು–ದೇವತೆಗಳು, ಪಿತೃಗಳು, ಋಷಿಗಳು, ಅತಿಥಿಗಳು ಮತ್ತು ಭೂತಗಳು–ಇವರನ್ನು ತೃಪ್ತಿಪಡಿಸಿದನಂತರ (ಪಂಚಮಹಾಯಜ್ಞಗಳನ್ನು ಮಾಡಿದನಂತರ) ಉಳಿದ ಅನ್ನವನ್ನು ತಿನ್ನುತ್ತಾರೆ. ಊಟಮಾಡುವಾಗ ಹರಟುವುದಿಲ್ಲ. ಕೈಗಳು ಒದ್ದೆಯಾಗಿರುವಾಗ ಮಲಗುವುದಿಲ್ಲ.

ಚಿತ್ರಭಾನುಮನಡ್ವಾಹಂ ದೇವಂ ಗೋಷ್ಠಂ ಚತುಷ್ಪಥಮ್ ।
ಬ್ರಾಹ್ಮಣಂ ಧಾರ್ಮಿಕಂ ವೃದ್ಧಂ ಯೇ ಕುರ್ವನ್ತಿ ಪ್ರದಕ್ಷಿಣಮ್ ॥
ವೃದ್ಧಾನಾಂ ಭಾರತಪ್ತಾನಾಂ ಸ್ತ್ರೀಣಾಂ ಚಕ್ರಧರಸ್ಯ ಚ ।
ಬ್ರಾಹ್ಮಣಾನಾಂ ಗವಾಂ ರಾಜ್ಞಾಂ ಪನ್ಥಾನಂ ದದತೇ ಚ ಯೇ ॥೩೮॥

ಯಾರು ಅಗ್ನಿಯನ್ನೂ, ಎತ್ತನ್ನೂ, ದೇವತೆಯನ್ನೂ, ಕೊಟ್ಟಿಗೆಯನ್ನೂ, ನಾಲ್ಕು ಹಾದಿಗಳು ಸೇರುವ ಚೌಕಿಯನ್ನೂ, ಬ್ರಾಹ್ಮಣನನ್ನೂ, ಧಾರ್ಮಿಕನನ್ನೂ, ವೃದ್ಧನನ್ನೂ ಬಲಕ್ಕೆ ಬಿಟ್ಟುಕೊಂಡು ಹೋಗುವರೋ–ಅವರು ಸತ್ಪುರುಷರು. ವೃದ್ಧರಿಗೂ, ಹೊರೆಯನ್ನು ಹೊತ್ತು ಬಳಲಿರುವವರಿಗೂ, ಸ್ತ್ರೀಯರಿಗೂ, ಬಹುಗ್ರಾಮಗಳ ಅಧಿಪತಿಗೂ, ಬ್ರಾಹ್ಮಣರಿಗೂ, ಹಸುಗಳಿಗೂ, ರಾಜರಿಗೂ ಮುಂದೆ ಹೋಗಲು ಅವಕಾಶವನ್ನು ಮಾಡಿಕೊಟ್ಟು ಅವರು ಹೋದನಂತರ ಪ್ರಯಾಣಮಾಡುವವರು ಸತ್ಪುರುಷರು.

ಅತಿಥೀನಾಂ ಚ ಸರ್ವೇಷಾಂ ಪ್ರೇಷ್ಯಾಣಾಂ ಸ್ವಜನಸ್ಯ ಚ ।
ತಥಾ ಶರಣಕಾಮಾನಾಂ ಗೋಪ್ತಾ ಸ್ಯಾತ್ಸ್ವಾಗತಪ್ರದಃ ॥೩೯॥

ಸಾಯಂ ಪ್ರಾತರ್ಮನುಷ್ಯಾಣಾಮಶನಂ ದೇವನಿರ್ಮಿತಮ್ ।
ನಾನ್ತರಾ ಭೋಜನಂ ದೃಷ್ಟಮುಪವಾಸವಿಧಿರ್ಹಿ ಸಃ ॥೪೦॥

ಸತ್ಪುರುಷನಾದವನು–ಎಲ್ಲ ಅತಿಥಿಗಳಿಗೂ, ಸೇವಕರಿಗೂ, ಬಂಧುವರ್ಗದವರಿಗೂ, ರಕ್ಷಣೆಯನ್ನು ಅಪೇಕ್ಷಿಸಿ ಬಂದವರಿಗೂ ರಕ್ಷಕನೂ ಸ್ವಾಗತವನ್ನು ಬಯಸುವವನೂ ಆಗಿರುತ್ತಾನೆ. ಮನುಷ್ಯರು ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಭೋಜನಮಾಡಬೇಕೆಂಬ ನಿಯಮವು ದೇವಕಲ್ಪಿತವಾದುದು. ಈ ಎರಡು ಭೋಜನಗಳ ಮಧ್ಯೇ ಊಟಮಾಡ ಬಾರದು. ಈ ಆಹಾರನಿಯಮವನ್ನು ಉಪವಾಸವಿಧಿಯೆಂದೂ ಹೇಳುತ್ತಾರೆ. ಈ ನಿಯಮದಿಂದಿದ್ದರೆ ಉಪವಾಸಮಾಡಿದ ಫಲವೇ ಲಭಿಸುತ್ತದೆ.

ಹೋಮಕಾಲೇ ಯಥಾ ವಹ್ನಿಃ ಕಾಲಮೇವ ಪ್ರತೀಕ್ಷತೇ ।
ಋತುಕಾಲೇ ತಥಾ ನಾರೀ ಋತುಮೇವ ಪ್ರತೀಕ್ಷತೇ ॥೪೧॥

ಯಾವ ರೀತಿಯಲ್ಲಿ ಅಗ್ನಿದೇವನು ಹೋಮಕಾಲವು ಪ್ರಾಪ್ತವಾದೊಡನೆಯೇ ಹೋಮವನ್ನು ಪ್ರತೀಕ್ಷಿಸುವನೋ–ಹಾಗೆಯೇ ಋತುಕಾಲದಲ್ಲಿ ನಾರಿಯು ಪತಿಸಮಾಗಮವನ್ನು (ಗರ್ಭಧಾರಣೆಯನ್ನು) ಪ್ರತೀಕ್ಷಿಸುತ್ತಾಳೆ.

ನಾನ್ಯದಾ ಗಚ್ಛತೇ ಯಸ್ತು ಬ್ರಹ್ಮಚರ್ಯಂ ಚ ತತ್ಸ್ಮೃತಮ್ ।
ಅಮೃತಂ ಬ್ರಾಹ್ಮಣಾ ಗಾವ ಇತ್ಯೇತತ್ತ್ರಯಮೇಕತಃ ।
ತಸ್ಮಾದ್ಗೋಬ್ರಾಹ್ಮಣಂ ನಿತ್ಯಮರ್ಚಯೇತ ಯಥಾವಿಧಿ ॥೪೨॥

ಪತ್ನಿಯ ಋತುಕಾಲದಲ್ಲಿ ಹೊರತಾಗಿ ಬೇರೆಯ ಕಾಲದಲ್ಲಿ ಪತ್ನೀಸಮಾಗಮಮಾಡದಿದ್ದರೆ ಅದನ್ನು ಬ್ರಹ್ಮಚರ್ಯವೆನ್ನುತ್ತಾರೆ. ಅಮೃತ, ಬ್ರಾಹ್ಮಣರು ಮತ್ತು ಗೋವುಗಳು–ಈ ಮೂರೂ ಒಂದೇ ಸ್ಥಾನದಿಂದ ಪ್ರಕಟಗೊಂಡಿವೆ.ಆದುದರಿಂದ ಗೋ-ಬ್ರಾಹ್ಮಣರನ್ನು ಯಥಾವಿಧಿಯಾಗಿ ನಿತ್ಯವೂ ಪೂಜಿಸಬೇಕು.

ಸ್ವದೇಶೇ ಪರದೇಶೇ ವಾಪ್ಯತಿಥಿಂ ನೋಪವಾಸಯೇತ್ ।
ಕರ್ಮ ವೈ ಸಫಲಂ ಕೃತ್ವಾ ಗುರೂಣಾಂ ಪ್ರತಿಪಾದಯೇತ್ ॥೪೩॥

ಸ್ವದೇಶದಲ್ಲಾಗಲೀ ಪರದೇಶದಲ್ಲಾಗಲೀ ಅತಿಥಿಯನ್ನು ಉಪವಾಸ

ಕೆಡಹಬಾರದು. ಗುರುಗಳು ಯಾವ ಕಾರ್ಯವನ್ನು ಮಾಡಲು ಆಜ್ಞೆ ಮಾಡಿರುವರೋ–ಆ ಕಾರ್ಯವನ್ನು ಸಫಲವನ್ನಾಗಿ ಮಾಡಿ ಅವರಿಗೆ ತಿಳಿಸಬೇಕು.

ಗುರುಭ್ಯಸ್ತ್ವಾಸನಂ ದೇಯಮಭಿವಾದ್ಯಾಭಿಪೂಜ್ಯ ಚ ।
ಗುರುಮಭ್ಯರ್ಚ್ಯ ವರ್ಧನ್ತೇ ಆಯುಷಾ ಯಶಸಾ ಶ್ರಿಯಾ ॥೪೪॥

ಗುರುಗಳು ಆಗಮಿಸಿದೊಡನೆಯೇ ಅವರಿಗೆ ಅಭಿವಾದನಪೂರ್ವಕ ವಾಗಿ ನಮಸ್ಕಾರಮಾಡಿ, ವಿಧಿವತ್ತಾಗಿ ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿ ಕುಳಿತುಕೊಳ್ಳಲು ಆಸನವನ್ನು ಕೊಡಬೇಕು. ಗುರುಗಳನ್ನು ಶ್ರದ್ಧಾ-ಭಕ್ತಿಗಳಿಂದ ಪೂಜಿಸುವವನು ಆಯುಷ್ಯದಿಂದಲೂ, ಯಶಸ್ಸಿನಿಂದಲೂ, ಸಂಪತ್ತಿ ನಿಂದಲೂ ಅಭ್ಯುದಯವನ್ನು ಹೊಂದುತ್ತಾನೆ.

ವೃದ್ಧಾನ್ನಾಭಿಭವೇಜ್ಜಾತು ನ ಚೈತಾನ್ಪ್ರೇಷಯೇದಿತಿ ।
ನಾಸೀನಃ ಸ್ಯಾತ್ಸ್ಥಿತೇಷ್ವೇವಮಾಯುರಸ್ಯ ನ ರಿಷ್ಯತೇ ॥೪೫॥

ಮುದುಕರನ್ನು ಯಾವಾಗಲೂ ತಿರಸ್ಕರಿಸಬಾರದು. ಯಾವ ಕೆಲಸಕ್ಕೂ ಅವರನ್ನು ಕಳುಹಿಸಬಾರದು. ಅವರು ನಿಂತಿರುವಾಗ ತಾನು ಕುಳಿತುಕೊಳ್ಳಬಾರದು. ಹೀಗೆ ಮಾಡುವವನ ಆಯುಷ್ಯವು ಕ್ಷೀಣಿಸುವುದಿಲ್ಲ.

ನ ನಗ್ನಾಮೀಕ್ಷತೇ ನಾರೀಂ ನ ನಗ್ನಾನ್ಪುರುಷಾನಪಿ ।
ಮೈಥುನಂ ಸತತಂ ಗುಪ್ತಮಾಹಾರಂ ಚ ಸಮಾಚರೇತ್ ॥೪೬॥

ಬೆತ್ತಲೆಯಾಗಿರುವ ಹೆಂಗಸಿನ ಕಡೆಗೆ ನೋಡಬಾರದು. ಬೆತ್ತಲಾಗಿರುವ ಗಂಡಸರನ್ನೂ ನೋಡಬಾರದು. ಮೈಥುನವನ್ನಾಗಲೀ ಭೋಜನವನ್ನಾಗಲೀ ಏಕಾಂತಸ್ಥಳದಲ್ಲಿ ಮಾಡಬೇಕು.

ತೀರ್ಥಾನಾಂ ಗುರವಸ್ತೀರ್ಥಂ ಚೋಕ್ಷಾಣಾಂ ಹೃದಯಂ ಶುಚಿ ।
ದರ್ಶನಾನಾಂ ಪರಂ ಜ್ಞಾನಂ ಸಂತೋಷಃ ಪರಮಂ ಸುಖಮ್ ॥೪೭॥

ತೀರ್ಥಗಳಲ್ಲಿ ಗುರುಜನರೇ ಸರ್ವೋತ್ತಮವಾದ ತೀರ್ಥಸ್ವರೂಪರು. (ಗುರುಜನರನ್ನು ಸಂದರ್ಶಿಸಿ ಸೇವಿಸಿದರೆ ತೀರ್ಥಗಳಲ್ಲಿ ಸ್ನಾನಮಾಡುವುದಕ್ಕಿಂತಲೂ ಅಧಿಕವಾದ ಫಲವು ಲಭಿಸುತ್ತದೆ.) ಪವಿತ್ರವಾದ

ವಸ್ತುಗಳಲ್ಲಿ ಶುದ್ಧವಾದ ಹೃದಯವೇ ಅತ್ಯಂತಪವಿತ್ರವಾದ ವಸ್ತುವಾಗಿದೆ. ದರ್ಶನಗಳಲ್ಲಿ (ಜ್ಞಾನಗಳಲ್ಲಿ) ಪರಮಾರ್ಥತತ್ತ್ವಜ್ಞಾನವೇ ಶ್ರೇಷ್ಠವಾದ ಜ್ಞಾನವಾಗಿದೆ. ಸಂತೋಷವೆಂಬುದೇ ಸರ್ವೋತ್ತಮವಾದ ಸುಖವಾಗಿದೆ.

ಸಾಯಂ ಪ್ರಾತಶ್ಚ ವೃದ್ಧಾನಾಂ ಶೃಣುಯಾತ್ಪುಷ್ಕಲಾ ಗಿರಃ ।
ಶ್ರುತಮಾಪ್ನೋತಿ ಹಿ ನರಃ ಸತತಂ ವೃದ್ಧಸೇವಯಾ ॥೪೮॥

ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಮನುಷ್ಯನು ವೃದ್ಧರು ಹೇಳುವ ಶ್ರೇಷ್ಠವಾದ ಮಾತುಗಳನ್ನು ಕೇಳುತ್ತಲೇ ಇರಬೇಕು. ಸತತವಾಗಿ ವೃದ್ಧರನ್ನು ಸೇವಿಸುತ್ತಾ ಅವರ ಹಿತೋಪದೇಶಗಳನ್ನು ಕೇಳುವುದರಿಂದ ಮನುಷ್ಯರಿಗೆ ಶಾಸ್ತ್ರಜ್ಞಾನವುಂಟಾಗುತ್ತದೆ.

ಸ್ವಾಧ್ಯಾಯೇ ಭೋಜನೇ ಚೈವ ದಕ್ಷಿಣಂ ಪಾಣಿಮುದ್ಧರೇತ್ ।
ಯಚ್ಛೇದ್ವಾಙ್ಮನಸೀ ನಿತ್ಯಮಿನ್ದ್ರಿಯಾಣಿ ತಥೈವ ಚ ॥೪೯॥

ಅಧ್ಯಯನಮಾಡುವಾಗಲೂ ಭೋಜನಮಾಡುವಾಗಲೂ ಬಲಗೈಯನ್ನು ಎತ್ತಿಕೊಂಡಿರಬೇಕು. (ಯಜ್ಞೋಪವೀತಿಯಾಗಿರಬೇಕು.) ಮಾತನ್ನೂ, ಮನಸ್ಸನ್ನೂ, ಇಂದ್ರಿಯಗಳನ್ನೂ ಮನುಷ್ಯನು ಸದಾ ತನ್ನ ಅಧೀನದಲ್ಲಿಟ್ಟುಕೊಂಡಿರಬೇಕು.

ಸಂಸ್ಕೃತಂ ಪಾಯಸಂ ನಿತ್ಯಂ ಯವಾಗೂಂ ಕೃಸರಂ ಹವಿಃ ।
ಅಷ್ಟಕಾಃ ಪಿತೃದೈವತ್ಯಾ ಗ್ರಹಾಣಾಮಭಿಪೂಜನಮ್ ॥೫೦॥

ಚೆನ್ನಾಗಿ ಮಾಡಿದ ಪಾಯಸವನ್ನೂ, ಗಂಜಿಯನ್ನೂ, ತಿಲಾನ್ನವನ್ನೂ, ಹವಿಸ್ಸನ್ನೂ ಯಾವಾಗಲೂ ಸಿದ್ಧಪಡಿಸಿರಬೇಕು. *ಅಷ್ಟಕಾಶ್ರಾದ್ಧಗಳ ಮೂಲಕವಾಗಿ ಪಿತೃದೇವತೆಗಳಿಗೆ ಅರ್ಪಿಸಬೇಕು. ನವಗ್ರಹಗಳ ಪೂಜೆಯನ್ನು ಮಾಡಬೇಕು.

---

*ಅಷ್ಟಕಾಶ್ರಾದ್ಧ: ಅಷ್ಟಕಾ ಎಂದರೆ ಮಾರ್ಗಶೀರ್ಷ ಮೊದಲು ನಾಲ್ಕು ತಿಂಗಳುಗಳ (ಮಾರ್ಗಶೀರ್ಷ-ಪುಷ್ಯ-ಮಾಘ-ಫಾಲ್ಗುಣ) ಕೃಷ್ಣಪಕ್ಷದ ಸಪ್ತಮೀ, ಅಷ್ಟಮೀ ಮತ್ತು ನವಮೀ–ಈ ತಿಥಿತ್ರಯಗಳು. ಈ ಮೂರು ತಿಥಿಗಳಲ್ಲಿ ಮಾಡುವ ಶ್ರಾದ್ಧಕ್ಕೆ ಅಷ್ಟಕಾ ಶ್ರಾದ್ಧವೆಂದು ಹೆಸರು.

ಶ್ಮಶ್ರುಕರ್ಮಣಿ ಮಙ್ಗಲ್ಯಂ ಕ್ಷುತಾನಾಮಭಿನನ್ದನಮ್ ।
ವ್ಯಾಧಿತಾನಾಂ ಚ ಸರ್ವೇಷಾಮಾಯುಷಾಮಭಿನನ್ದನಮ್ ॥೫೧॥

ಕ್ಷುರಕರ್ಮವು ನಡೆಯುವಾಗ ಮಂಗಳಕರಸೂಚಕವಾದ ಶಬ್ದಗಳನ್ನು ಹೇಳಬೇಕು. ಸೀನುಬಂದಾಗ ಆಶೀರ್ವದಿಸಬೇಕು. (ಸೀನುಬಂದಾಗ ಶತಾಯುಸ್ಸು-ದೀರ್ಘಾಯುಸ್ಸು–ಎಂದು ಹೇಳುವುದು ಈಗಲೂ ರೂಢಿಯಲ್ಲಿದೆ.) ವ್ಯಾಧಿಗ್ರಸ್ತರಾಗಿರುವ ಎಲ್ಲರನ್ನೂ ದೀರ್ಘಾಯುಗಳಾಗಲೆಂದು ಆಶೀರ್ವದಿಸಬೇಕು.

ನ ಜಾತು ತ್ವಮಿತಿ ಬ್ರೂಯಾದಾಪನ್ನೋಽಪಿ ಮಹತ್ತರಮ್ ।
ತ್ವಂಕಾರೋ ವಾ ವಧೋ ವೇತಿ ವಿದ್ವತ್ಸು ನ ವಿಶಿಷ್ಯತೇ ।
ಅವರಾಣಾಂ ಸಮಾನಾನಾಂ ಶಿಷ್ಯಾಣಾಂ ಚ ಸಮಾಚರೇತ್ ॥೫೨॥

ಯಾವುದೇ ಮಹಾಕಷ್ಟದಲ್ಲಿದ್ದರೂ ಗುರುಜನರ ವಿಷಯದಲ್ಲಿ 'ತ್ವಂ' 'ನೀನು'–ಎಂಬ ಶಬ್ದವನ್ನೂ ಪ್ರಯೋಗಮಾಡಲೇಬಾರದು. ಗುರುಜನರನ್ನು ಕುರಿತು-'ತ್ವಂ' 'ನೀನು'–ಎಂದು ಏಕವಚನದಲ್ಲಿ ಹೇಳುವುದು ಅಥವಾ ಅವರ ವಧೆಮಾಡುವುದು ಈ ಎರಡರಲ್ಲಿ ಭೇದವಿರುವುದೆಂದು ವಿದ್ವಾಂಸರು ಭಾವಿಸುವುದಿಲ್ಲ. (ಗುರುಜನರನ್ನು ನೀನು ಎಂದು ಸಂಬೋಧಿಸಿದರೆ ಅವರನ್ನು ಕೊಲೆಮಾಡಿದಂತೆಯೇ.) ತನಗೆ ಸಮಾನರಾದವರ, ಚಿಕ್ಕವರ ಮತ್ತು ಶಿಷ್ಯರ ವಿಷಯದಲ್ಲಿ 'ತ್ವಂ' 'ನೀನು'–ಎಂಬ ಶಬ್ದವನ್ನು ಪ್ರಯೋಗಿಸಬಹುದು.

ಪಾಪಮಾಚಕ್ಷತೇ ನಿತ್ಯಂ ಹೃದಯಂ ಪಾಪಕರ್ಮಿಣಃ ।

ಪಾಪಕರ್ಮಗಳನ್ನು ಮಾಡುವವನ ಹೃದಯವು ಅವನು ಮಾಡಿದ ಪಾಪಕರ್ಮಗಳ ವಿಷಯವಾಗಿ ಅನುದಿನವೂ ಹೇಳುತ್ತಲೇ ಇರುತ್ತದೆ.

ಜ್ಞಾನಪೂರ್ವಕೃತಂ ಕರ್ಮ ಚ್ಛಾದಯನ್ತೇ ಹ್ಯಸಾಧವಃ ।
ಜ್ಞಾನಪೂರ್ವಂ ವಿನಶ್ಯನ್ತಿ ಗೂಹಮಾನಾ ಮಹಾಜನೇ ।
ನ ಮಾಂ ಮನುಷ್ಯಾಃ ಪಶ್ಯನ್ತಿ ನ ಮಾಂ ಪಶ್ಯನ್ತಿ ದೇವತಾಃ ॥೫೪॥

ದುಷ್ಟರು ತಿಳಿದೂ ತಿಳಿದೂ ಮಾಡಿದ ಪಾಪಕರ್ಮಗಳನ್ನು ಇತರರಿಂದ ಮುಚ್ಚಿಡಲು ಪ್ರಯತ್ನಿಸುತ್ತಾರೆ. 'ಪಾಪಕರ್ಮವನ್ನು ಮಾಡುತ್ತಿರುವವನನ್ನು ಮನುಷ್ಯರೂ ನೋಡುವುದಿಲ್ಲ; ದೇವತೆಗಳೂ ನೋಡುವುದಿಲ್ಲ'–ಹೀಗೆ ಭಾವಿಸಿಕೊಂಡು ಮಹಾಪುರುಷರ ಮುಂದೆ ಜ್ಞಾನಪೂರ್ವಕವಾಗಿಯೇ ತಾವು ಮಾಡಿದ ಪಾಪಕರ್ಮಗಳನ್ನು ಗುಟ್ಟಾಗಿಟ್ಟುಕೊಳ್ಳುವುದರಿಂದ ಅವರು ವಿನಾಶಹೊಂದುತ್ತಾರೆ. (ಪಾಪಕರ್ಮಗಳನ್ನು ಮಾಡಬಾರದು. ತಾನು ಮಾಡುತ್ತಿರುವುದು ಪಾಪಕರ್ಮ ವೆಂಬುದು ಚೆನ್ನಾಗಿ ತಿಳಿದಿದ್ದರೂ ಮಾಡುವುದು ಇನ್ನೂ ಹೆಚ್ಚಿನ ಅಪರಾಧ. ಯಾವುದೇ ಅಪರಾಧವನ್ನಾದರೂ ಮಹಾಪುರುಷರ ಸನ್ನಿಧಿಯಲ್ಲಿ ಹೇಳಿಕೊಂಡರೆ ಪಾಪದ ದುಷ್ಫಲವು ಕಡಿಮೆಯಾಗುತ್ತದೆ. ಮಹಾಪುರುಷರ ಅನುಗ್ರಹದಿಂದ ಪಾಪದ ನಿರಸನವೂ ಆಗಬಹುದು. ಅವರ ಸನ್ನಿಧಿಯಲ್ಲಿ ತಾನು ಮಾಡಿದ ಅಪರಾಧವನ್ನು ಮುಚ್ಚಿಟ್ಟರೆ ಅಪರಾಧಕ್ಕೆ ಸಂಬಂಧಿಸಿದಂತೆ ಪಾಪಸಂಘಟನೆಯಾಗುವುದಲ್ಲದೆ ಮಹಾಪುರುಷರ ಸನ್ನಿಧಿಯಲ್ಲಿ ಸುಳ್ಳುಹೇಳಿದ ಪಾಪವೂ ಸೇರಿಕೊಂಡು ಶೀಘ್ರಾತಿಶೀಘ್ರವಾಗಿ ಅವನ ಅಧಃಪತನಕ್ಕೆ ಕಾರಣವಾಗುತ್ತದೆ.)

ಪಾಪೇನಾಪಿಹಿತಃ ಪಾಪಃ ಪಾಪಮೇವಾಭಿಜಾಯತೇ ।
ಯಥಾ ವಾರ್ಧುಷಿಕೋ ವೃದ್ಧಿಂ ದಿನಭೇದೇ ಪ್ರತೀಕ್ಷತೇ ॥೫೫॥

ಯಾವ ರೀತಿಯಲ್ಲಿ ಬಡ್ಡಿಹಣದಿಂದ ಜೀವಿಸುವವನು ದಿನವುರುಳುತ್ತಲೇ ಬಡ್ಡಿಹಣದ ಹೆಚ್ಚಳವನ್ನು ಪ್ರತೀಕ್ಷಿಸುವನೋ–ಅದೇ ರೀತಿಯಲ್ಲಿ ಪಾಪದಲ್ಲಿಯೇ ಮುಚ್ಚಿಹೋಗಿರುವ ಮನುಷ್ಯನು ಪುನಃ ಪುನಃ ಪಾಪಕರ್ಮಗಳನ್ನೇ ಮಾಡುತ್ತಿರುತ್ತಾನೆ.

ಧರ್ಮೇಣ ಪಿಹಿತಂ ಪಾಪಂ ಧರ್ಮಮೇವಾಭಿವರ್ಧಯೇತ್ ।

ಆದರೆ ಧರ್ಮಕಾರ್ಯಗಳನ್ನೇ ಹೆಚ್ಚು-ಹೆಚ್ಚು ಮಾಡುತ್ತಿದ್ದರೆ ಅದರಿಂದ ಮುಚ್ಚಲ್ಪಟ್ಟ ಪಾಪವು ವಿನಾಶವನ್ನು ಹೊಂದಿ ಧರ್ಮವನ್ನೇ ಅಭಿವೃದ್ಧಿಗೊಳಿಸುತ್ತದೆ.

ಯಥಾ ಲವಣಮಮ್ಭೋಭಿರಾಪ್ಲುತಂ ಪ್ರವಿಲೀಯತೇ ।
ಪ್ರಾಯಶ್ಚಿತ್ತಹತಂ ಪಾಪಂ ತಥಾ ಸದ್ಯಃ ಪ್ರಣಶ್ಯತಿ ॥೫೭॥

ನೀರಿನಲ್ಲಿ ಹಾಕಿದ ಉಪ್ಪು ಒಡನೆಯೇ ಕರಗಿಹೋಗುವಂತೆ-ಪ್ರಾಯಶ್ಚಿತ್ತಾದಿಗಳಿಂದ ಪ್ರತಿಹತವಾದ ಪಾಪವು ಒಡನೆಯೇ ವಿನಾಶಹೊಂದುತ್ತದೆ.

ತಸ್ಮಾತ್ಪಾಪಂ ನ ಗೂಹೇತ ಗೂಹಮಾನಂ ವಿವರ್ಧಯೇತ್ ।
ಕೃತ್ವಾ ತತ್ಸಾಧುಷ್ವಾಖ್ಯೇಯಂ ತೇ ತತ್ಪ್ರಶಮಯನ್ತ್ಯುತ ॥೫೮॥

ಆದುದರಿಂದ ಯಾವುದೇ ಕಾರಣದಿಂದಲೂ ಮಾಡಿದ ಪಾಪವನ್ನು ಮುಚ್ಚಿಟ್ಟುಕೊಳ್ಳಬಾರದು. ಹಾಗೆ ಮುಚ್ಚಿಟ್ಟುಕೊಂಡರೆ ಅದು ದಿನ-ದಿನಕ್ಕೂ ಹೆಚ್ಚುತ್ತಲೇ ಹೋಗುತ್ತದೆ. ಅನಿವಾರ್ಯವಾಗಿ ಯಾವುದಾದರೂ ಪಾಪಕರ್ಮವನ್ನು ಮಾಡಿದ್ದರೆ ಸತ್ಪುರುಷರೊಡನೆ ಅದನ್ನು ಹೇಳಿಬಿಡಬೇಕು. ಅವರು ಆ ಪಾಪವನ್ನು ಪ್ರಶಮನಗೊಳಿಸುತ್ತಾರೆ.

ಆಶಯಾ ಸಂಚಿತಂ ದ್ರವ್ಯಂ ಕಾಲೇನೈವೋಪಭುಜ್ಯತೇ ।
ಅನ್ಯೇ ಚೈತತ್ಪ್ರಪದ್ಯನ್ತೇ ವಿಯೋಗೇ ತಸ್ಯ ದೇಹಿನಃ ॥೫೯॥

ಒಬ್ಬ ಮನುಷ್ಯನು ಆಶೆಯಿಂದ ಸಂಗ್ರಹಿಸಿದ ಧನವನ್ನು ಒಂದೇ ಬಾರಿಗೆ ಉಪಭೋಗಿಸಲು ಸಾಧ್ಯವಾಗುವುದಿಲ್ಲ. ಕಾಲಾನುಕ್ರಮವಾಗಿ ಅದನ್ನು ಉಪಭೋಗಿಸಬೇಕಾಗುತ್ತದೆ. ಆದರೆ ಸಂಪಾದಿಸಿದ ಧನವು ಮುಗಿಯುವವರೆಗೂ ಸಂಪಾದಿಸಿದವನೇ ಬದುಕಿರುತ್ತಾನೆಂದು ಹೇಳಲಾಗುವುದಿಲ್ಲ. ಅವನು ಅವಸಾನಹೊಂದಿದನಂತರ ಅವನು ಕೂಡಿಟ್ಟಹಣವನ್ನು ಬೇರೆಯವರು ಪಡೆದುಕೊಳ್ಳುತ್ತಾರೆ.

ಮಾನಸಂ ಸರ್ವಭೂತಾನಾಂ ಧರ್ಮಮಾಹುರ್ಮನೀಷಿಣಃ ।
ತಸ್ಮಾತ್ಸರ್ವಾಣಿ ಭೂತಾನಿ ಧರ್ಮಮೇವ ಸಮಾಸತೇ ॥೬೦॥

ವಿದ್ವಾಂಸರು ಧರ್ಮವನ್ನು ಎಲ್ಲ ಪ್ರಾಣಿಗಳ ಅಂತಃಕರಣವೆಂದು ಹೇಳುತ್ತಾರೆ. ಆದುದರಿಂದ ಎಲ್ಲ ಪ್ರಾಣಿಗಳೂ ಧರ್ಮವನ್ನೇ ಅವಲಂಬಿಸಿವೆ.

ಏಕ ಏವ ಚರೇದ್ಧರ್ಮಂ ನ ಧರ್ಮಧ್ವಜಿಕೋ ಭವೇತ್ ।
ಧರ್ಮವಾಣಿಜಕಾ ಹ್ಯೇತೇ ಯೇ ಧರ್ಮಮುಪಭುಞ್ಜತೇ ॥೬೧॥

ಮನುಷ್ಯನು ಏಕಾಕಿಯಾಗಿಯೇ ಧರ್ಮವನ್ನು ಆಚರಿಸಬೇಕು. (ಅದನ್ನು ಇತರರ ತೋರಿಕೆಗಾಗಿ ಮಾಡಬಾರದು.) ಧರ್ಮಧ್ವಜಿಯಾಗಬಾರದು. ಧರ್ಮಕಾರ್ಯಗಳ ಮೂಲಕವಾಗಿ ಯಾರು ಜೀವನವನ್ನು ನಡೆಸುವರೋ–ಅವರು ಧರ್ಮದ ವ್ಯಾಪಾರಿಗಳೆನಿಸುತ್ತಾರೆ.

ಅರ್ಚೇದ್ದೇವಾನದಮ್ಭೇನ ಸೇವೇತಾಮಾಯಯಾ ಗುರೂನ್।
ನಿಧಿಂ ನಿದಧ್ಯಾತ್ಪಾರತ್ರ್ಯಂ ಯಾತ್ರಾರ್ಥಂ ದಾನಶಬ್ದಿತಮ್ ॥೬೨॥

ದಾಂಭಿಕತೆಯಿಲ್ಲದೇ ದೇವತೆಗಳನ್ನು ಪೂಜಿಸಬೇಕು. ಕಪಟವಿಲ್ಲದೇ ಗುರುಜನರ ಸೇವೆಯನ್ನು ಮಾಡಬೇಕು. ಪರಲೋಕದ ಯಾತ್ರೆಗಾಗಿ ದಾನವೆಂಬ ಹೆಸರಿನ (ದಾನಕ್ಕಾಗಿಯೇ ಮೀಸಲಾಗಿರುವ) ನಿಧಿಯನ್ನು ಸಂಗ್ರಹಿಸಬೇಕು. ಪರಲೋಕಪ್ರಾಪ್ತಿಗಾಗಿ ಸಂಗ್ರಹಿಸಿದ ಧನವೆಲ್ಲವನ್ನೂ ಮುಕ್ತಹಸ್ತದಿಂದ ದಾನಮಾಡಬೇಕು."

೧೬೨ನೆಯ ಅಧ್ಯಾಯವು ಮುಗಿಯಿತು.

೧೬೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಿದ್ಯೆ-ಬಲ-ಬುದ್ಧಿಗಳಿಗಿಂತಲೂ ಸೌಭಾಗ್ಯಕ್ಕೇ ಪ್ರಾಧಾನ್ಯವೆಂಬ ಯುಧಿಷ್ಠಿರನ ಶಂಕೆಗೆ ಭೀಷ್ಮನ ಉತ್ತರ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ನಾಭಾಗಧೇಯಃ ಪ್ರಾಪ್ನೋತಿ ಧನಂ ಸುಬಲವಾನಪಿ।
ಭಾಗಧೇಯಾನ್ವಿತಸ್ತ್ವರ್ಥಾನ್ಕೃಶೋ ಬಾಲಶ್ಚ ವಿನ್ದತಿ ॥೧॥

"ಪಿತಾಮಹನೇ! ನಿರ್ಭಾಗ್ಯನಾದ ಮನುಷ್ಯನು ಬಲಿಷ್ಠನಾಗಿದ್ದರೂ ಧನವನ್ನು ಪಡೆಯುವುದಿಲ್ಲ. ಭಾಗ್ಯಶಾಲಿಯಾದವನು ದುರ್ಬಲನಾಗಿದ್ದರೂ ಮೂರ್ಖನಾಗಿದ್ದರೂ ವಿಪುಲವಾದ ಧನವನ್ನು ಹೊಂದುತ್ತಾನೆ.

ನಾಲಾಭಕಾಲೇ ಲಭತೇ ಪ್ರಯತ್ನೇಽಪಿ ಕೃತೇ ಸತಿ।
ಲಾಭಕಾಲೇಽಪ್ರಯತ್ನೇನ ಲಭತೇ ವಿಪುಲಂ ಧನಮ್ ॥೨॥

ಹಣದೊರೆಯುವ ಕಾಲವಲ್ಲದಿದ್ದರೆ ಬಹಳವಾಗಿ ಪ್ರಯತ್ನಿಸಿದರೂ ಮನುಷ್ಯನು ಧನವನ್ನು ಹೊಂದುವುದಿಲ್ಲ. ಹಣಬರುವ ಸಮಯವು ಬಂದರೆ ಪ್ರಯತ್ನವೇ ಇಲ್ಲದೆ ಹೇರಳವಾದ ಹಣವನ್ನು ಹೊಂದುತ್ತಾನೆ.

ಕೃತಯತ್ನಾಫಲಾಶ್ಚೈವ ದೃಶ್ಯನ್ತೇ ಶತಶೋ ನರಾಃ।
ಅಯತ್ನೇನೈಧಮಾನಾಶ್ಚ ದೃಶ್ಯನ್ತೇ ಬಹವೋ ಜನಾಃ ॥೩॥

ಬಹಳವಾಗಿ ಪ್ರಯತ್ನಿಸಿಯೂ ಫಲವನ್ನೇ ಹೊಂದದಿರುವ ನೂರಾರು ಜನರು ನಮ್ಮ ಕಣ್ಣಿಗೆ ಕಾಣುತ್ತಿದ್ದಾರೆ. ಹಾಗೆಯೇ ಪ್ರಯತ್ನವಿಲ್ಲದೆಯೇ ಅಭಿವೃದ್ಧಿಯನ್ನು ಹೊಂದುತ್ತಿರುವ ಬಹಳ ಮಂದಿಯೂ ನಮ್ಮ ಕಣ್ಣಿಗೆ ಬೀಳುತ್ತಿದ್ದಾರೆ.

ಯದಿ ಯತ್ನೋ ಭವೇನ್ಮರ್ತ್ಯಃ ಸ ಸರ್ವಂ ಫಲಮಾಪ್ನುಯಾತ್ ।
ನಾಲಭ್ಯಂ ಚೋಪಲಭ್ಯೇತ ನೃಣಾಂ ಭರತಸತ್ತಮ ॥೪॥

ಪ್ರಯತ್ನಮಾತ್ರದಿಂದಲೇ ಎಲ್ಲವೂ ಫಲಿಸುವುದಾಗಿದ್ದರೆ ಅಥವಾ ಪ್ರಯತ್ನಕ್ಕೆ ಫಲವು ಅನಿವಾರ್ಯವಾಗಿದ್ದರೆ–ಮನುಷ್ಯನು ಎಲ್ಲ ಫಲಗಳನ್ನೂ ಪಡೆದುಕೊಂಡೇ ಬಿಡುತ್ತಿದ್ದನು. ಆದರೆ ಮನುಷ್ಯನಿಗೆ ಪ್ರಾರಬ್ಧವಶದಿಂದ ಯಾವ ವಸ್ತುವು ಅಲಭ್ಯವೋ–ಅದು ಬಹಳ ಪ್ರಯತ್ನಗಳಿಂದಲೂ ಲಭಿಸುವುದೇ ಇಲ್ಲ.

ಪ್ರಯತ್ನಂ ಕೃತವನ್ತೋಽಪಿ ದೃಶ್ಯನ್ತೇ ಹ್ಯಫಲಾ ನರಾಃ ।
ಮಾರ್ಗತ್ಯಾಯುಶತೈರರ್ಥಾನಮಾರ್ಗಶ್ಚಾಪರಃ ಸುಖೀ ॥೫॥

ಪ್ರಯತ್ನಮಾಡಿದರೂ ಅನೇಕ ಜನರು ಫಲವನ್ನು ಹೊಂದುವುದರಲ್ಲಿ ವಿಫಲರಾಗಿರುವುದು ಕಂಡುಬರುತ್ತಿದೆ. ಒಬ್ಬನು ನೂರಾರು ಉಪಾಯಗಳಿಂದ ಧನಸಂಗ್ರಹಕ್ಕಾಗಿ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾನೆ. ಮತ್ತೊಬ್ಬನು ಧನವನ್ನು ಹುಡುಕದಿದ್ದರೂ ಅದೃಷ್ಟದಿಂದ ಧನವನ್ನು ಸಂಗ್ರಹಿಸಿ ಸುಖವಾಗಿಯೇ ಇರುತ್ತಾನೆ.

ಅಕಾರ್ಯಮಸಕೃತ್ಕೃತ್ವಾ ದೃಶ್ಯನ್ತೇ ಹ್ಯಧನಾ ನರಾಃ ।
ಧನಯುಕ್ತಾಃ ಸ್ವಕರ್ಮಸ್ಥಾ ದೃಶ್ಯನ್ತೇ ಚಾಪರೇಽಧನಾಃ ॥೬॥

ಕೆಲವರು ಹಲವು ಬಾರಿ ಧನಸಂಪಾದನೆಗಾಗಿ ಕುತ್ಸಿತವಾದ ಕರ್ಮಗಳನ್ನು ಮಾಡಿಯೂ ನಿರ್ಧನರಾಗಿರುವುದನ್ನು ನಾವು ಕಾಣುತ್ತೇವೆ. ಸ್ವಕರ್ಮಾನುಷ್ಠಾನಗಳನ್ನು ಮಾಡುತ್ತಿರುವವರಲ್ಲಿ ಮತ್ತು ಧರ್ಮಾಚರಣೆಯನ್ನು ಮಾಡುತ್ತಿರುವವರಲ್ಲಿ ಕೆಲವರು ಧನವಂತರಾಗಿರುವುದನ್ನೂ ಕೆಲವರು ನಿರ್ಧನರಾಗಿರುವುದನ್ನೂ ನಾವು ಕಾಣುತ್ತಿದ್ದೇವೆ.

ಅಧೀತ್ಯ ನೀತಿಶಾಸ್ತ್ರಾಣಿ ನೀತಿಯುಕ್ತೋ ನ ದೃಶ್ಯತೇ ।
ಅನಭಿಜ್ಞಶ್ಚ ಸಾಚಿವ್ಯಂ ಗಮಿತಃ ಕೇನ ಹೇತುನಾ ॥೭॥

ಒಬ್ಬನು ನೀತಿಶಾಸ್ತ್ರದಲ್ಲಿ ಪಾಂಡಿತ್ಯವುಳ್ಳವನಾಗಿದ್ದರೂ ಅವನ ನಡವಳಿಕೆಯು ನೀತಿಯುಕ್ತವಾಗಿರುವುದಿಲ್ಲ. ಅಂತಹವನನ್ನು ನಾವು ಕಾಣುತ್ತಿದ್ದೇವೆ. ಮತ್ತೊಬ್ಬನು ನೀತಿಶಾಸ್ತ್ರದಲ್ಲಿ ತಿಳುವಳಿಕೆಯೇ ಇಲ್ಲದಿದ್ದರೂ ಮಂತ್ರಿಪದವಿಯನ್ನು ಹೊಂದುತ್ತಾನೆ. ಪಿತಾಮಹನೇ! ಇಂತಹ ವಿಪರ್ಯಾಸಗಳಿಗೆ ಕಾರಣವೇನು?

ವಿದ್ಯಾಯುಕ್ತೋ ಹ್ಯವಿದ್ಯಶ್ಚ ಧನವಾನ್ದುರ್ಮತಿಸ್ತಥಾ ।
ಯದಿ ವಿದ್ಯಾಮುಪಾಶ್ರಿತ್ಯ ನರಃ ಸುಖಮವಾಪ್ನುಯಾತ್ ॥
ನ ವಿದ್ವಾನ್ವಿದ್ಯಯಾ ಹೀನಂ ವೃತ್ತ್ಯರ್ಥಮುಪಸಂಶ್ರಯೇತ್ ॥೮॥

ಕೆಲವೆಡೆಗಳಲ್ಲಿ ವಿದ್ಯಾವಂತರೂ, ಅವಿದ್ಯಾವಂತರೂ ಮತ್ತು ಕೆಟ್ಟಬುದ್ಧಿಯುಳ್ಳವರೂ ಧನವಂತರಾಗಿರುವುದನ್ನು ನಾವು ಕಾಣುತ್ತೇವೆ. ಒಂದು ವೇಳೆ ವಿದ್ಯೆಯನ್ನು ಆಶ್ರಯಿಸಿದವನು ಅಥವಾ ವಿದ್ಯಾವಂತನಾದವನು ಸುಖವನ್ನು ಹೊಂದಿಯೇ ಹೊಂದುತ್ತಾನೆಂಬ ನಿಶ್ಚಯವಿದ್ದರೆ-ವಿದ್ಯಾವಂತನಾದವನು ಜೀವಿಕೆಗಾಗಿ ಅವಿದ್ಯಾವಂತನನ್ನು ಆಶ್ರಯಿಸಬೇಕಾದ ಪ್ರಸಂಗವೇ ಇರುತ್ತಿರಲಿಲ್ಲ. ಆದರೆ ಅದು ಹಾಗಿಲ್ಲ. ಅನೇಕ ವಿದ್ವಾಂಸರು ದರಿದ್ರರಾಗಿರುತ್ತಾರೆ. ಜೀವಿಕೆಗಾಗಿ ಧನಿಕನಾದ ಅವಿದ್ಯಾವಂತನನ್ನು ಆಶ್ರಯಿಸಿರುತ್ತಾರೆ.

ಯಥಾ ಪಿಪಾಸಾಂ ಜಯತಿ ಪುರುಷಃ ಪ್ರಾಪ್ಯ ವೈ ಜಲಮ್ ।
ಇಷ್ಟಾರ್ಥೋ ವಿದ್ಯಯಾ ಹ್ಯೇವ ನ ವಿದ್ಯಾಂ ಪ್ರಜಹೇನ್ನರಃ ॥೯॥

ಯಾವ ರೀತಿಯಲ್ಲಿ ಮನುಷ್ಯನು ನೀರು ಕುಡಿಯುವುದರಿಂದ ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳುವನೋ–ಅದೇ ರೀತಿಯಲ್ಲಿ ವಿದ್ಯೆಯಿಂದಲೇ ಇಷ್ಟಾರ್ಥಗಳೆಲ್ಲವನ್ನೂ ಅನಿವಾರ್ಯವಾಗಿ ಪಡೆಯ ಬಹುದಾಗಿದ್ದರೆ ಮನುಷ್ಯನು ಯಾವಾಗಲೂ ವಿದ್ಯೆಯನ್ನು ಉಪೇಕ್ಷಿಸುತ್ತಲೇ ಇರಲಿಲ್ಲ.

ನಾಪ್ರಾಪ್ತಕಾಲೋ ಮ್ರಿಯತೇ ವಿದ್ಧಃ ಶರಶತೈರಪಿ ।
ತೃಣಾಗ್ರೇಣಾಪಿ ಸಂಸ್ಪೃಷ್ಟಃ ಪ್ರಾಪ್ತಕಾಲೋ ನ ಜೀವತಿ ॥೧೦॥

ಅವಸಾನಕಾಲವು ಹತ್ತಿರಬಂದಿರದಿದ್ದರೆ ಮನುಷ್ಯನು ನೂರು ಬಾಣಗಳಿಂದ ಹೊಡೆಯಲ್ಪಟ್ಟರೂ ಸಾಯುವುದೇ ಇಲ್ಲ. ಅವಸಾನಕಾಲವು ಹತ್ತಿರ ಬಂತೆಂದರೆ ಹುಲ್ಲುಕೊನೆಯ ಸ್ಪರ್ಶಮಾತ್ರದಿಂದಲೇ ಸತ್ತು ಹೋಗುತ್ತಾನೆ.”

ಭೀಷ್ಮನು ಹೇಳುತ್ತಾನೆ:

ಈಹಮಾನಃ ಸಮಾರಮ್ಭಾನ್ಯದಿ ನಾಸಾದಯೇದ್ಧನಮ್ ।
ಉಗ್ರಂ ತಪಃ ಸಮಾರೋಹೇನ್ನ ಹ್ಯನುಪ್ತಂ ಪ್ರರೋಹತಿ ॥೧೧॥

“ಯುಧಿಷ್ಠಿರ! ಧನವನ್ನಪೇಕ್ಷಿಸಿ ನಾನಾಪ್ರಕಾರವಾದ ಕಾರ್ಯವನ್ನು ಮಾಡಿಯೂ ಧನವನ್ನು ಪಡೆಯಲಾಗದಿದ್ದರೆ -ಉಗ್ರವಾದ ತಪಸ್ಸನ್ನಾದರೂ ಮಾಡಬೇಕು. ಬೀಜವನ್ನು ಬಿತ್ತದೆ ಮೊಳಕೆಯಾಗುವುದಿಲ್ಲವಷ್ಟೇ!

ದಾನೇನ ಭೋಗೀ ಭವತಿ ಮೇಧಾವೀ ವೃದ್ಧಸೇವಯಾ ।
ಅಹಿಂಸಯಾ ಚ ದೀರ್ಘಾಯುರಿತಿ ಪ್ರಾಹುರ್ಮನೀಷಿಣಃ ॥೧೨॥

ಯಥೇಚ್ಛವಾಗಿ ದಾನಮಾಡುವುದರಿಂದ ಮರುಹುಟ್ಟಿನಲ್ಲಿ ಭೋಗಿಯಾಗುವನೆಂದೂ, ವೃದ್ಧರನ್ನು ಸೇವಿಸುತ್ತಿದ್ದರೆ ಮೇಧಾವಿಯಾಗುವನೆಂದೂ, ಯಾವ ಪ್ರಾಣಿಯನ್ನೂ ಹಿಂಸಿಸದಿದ್ದರೆ ದೀರ್ಘಾಯುವಾಗಿ ಬಾಳುವನೆಂದೂ ವಿದ್ವಾಂಸರು ಹೇಳುತ್ತಾರೆ.

ತಸ್ಮಾದ್ದದ್ಯಾನ್ನ ಯಾಚೇತ ಪೂಜಯೇದ್ಧಾರ್ಮಿಕಾನಪಿ ।
ಸುಭಾಷೀ ಪ್ರಿಯಕೃಚ್ಛಾನ್ತಃ ಸರ್ವಸತ್ತ್ವಾವಿಹಿಂಸಕಃ ॥೧೩॥

ಆದುದರಿಂದ ಮನುಷ್ಯನು ಯಾವಾಗಲೂ ದಾನಮಾಡುತ್ತಿರಬೇಕು. ಯಾರನ್ನೂ ಯಾಚಿಸಬಾರದು. ಧಾರ್ಮಿಕರನ್ನು ಪೂಜಿಸಬೇಕು. ಎಲ್ಲರೊಡನೆಯೂ ಒಳ್ಳೆಯ ಮಾತುಗಳನ್ನಾಡಬೇಕು. ಇತರರಿಗೆ ಪ್ರಿಯವಾಗುವುದನ್ನೇ ಮಾಡಬೇಕು. ಶಾಂತನಾಗಿರಬೇಕು. ಯಾವುದೇ ಪ್ರಾಣಿಯನ್ನಾಗಲೀ ಹಿಂಸಿಸಬಾರದು.

ಯದಾ ಪ್ರಮಾಣಂ ಪ್ರಸವಃ ಸ್ವಭಾವಶ್ಚ ಸುಖಾಸುಖೇ ।
ದಂಶಕೀಟಪಿಪೀಲಾನಾಂ ಸ್ಥಿರೋ ಭವ ಯುಧಿಷ್ಠಿರ ॥೧೪॥

ನೊಣ, ಕೀಟ, ಇರುವೆ–ಇವೇ ಮುಂತಾದ ಪ್ರಾಣಿಗಳೆಲ್ಲಕ್ಕೂ ಅವುಗಳ ಹುಟ್ಟು, ಸ್ವಭಾವ ಮತ್ತು ಸುಖ-ದುಃಖಗಳೇ ಅವುಗಳ ಕರ್ಮಾನುಸಾರವಾಗಿ ಪ್ರಮಾಣಭೂತವಾಗಿರುವಾಗ ನೀನೇಕೆ ಆ ಬಗೆಗೆ ಹೆಚ್ಚು ಯೋಚಿಸುವೆ? (ಸುಖ-ದುಃಖ, ಐಶ್ವರ್ಯ-ದಾರಿದ್ರ್ಯ-ಇವೆಲ್ಲವೂ ಹಿಂದಿನ ಕರ್ಮಾನುಸಾರವಾಗಿ ಬಂದುವುಗಳೆಂದು ತಿಳಿ.) ಸ್ಥಿರಬುದ್ಧಿಯುಳ್ಳವನಾಗು."

ನೂರತೊಂಬತ್ತನೆಯ ಅಧ್ಯಾಯವು ಮುಗಿಯಿತು.

೧೬೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶುಭಾಶುಭಕರ್ಮಗಳೇ ಸುಖ–ದುಃಖಗಳಿಗೆ ಮೂಲಕಾರಣಗಳು–ಎಂಬುದರ ನಿರೂಪಣೆ

ಭೀಷ್ಮನು ಹೇಳುತ್ತಾನೆ:

ಕಾರ್ಯತೇ ಯಚ್ಚ ಕ್ರಿಯತೇ ಸಚ್ಚಾಸಚ್ಚ ಕೃತಾಕೃತಮ್ ।
ತತ್ರಾಶ್ವಸೀತ ಸತ್ಕೃತ್ವಾ ಅಸತ್ಕೃತ್ವಾ ನ ವಿಶ್ವಸೇತ್ ॥೧॥

"ಯುಧಿಷ್ಠಿರ! ಮನುಷ್ಯನು ಯಾವುದಾದರೂ ಸತ್ಕಾರ್ಯವನ್ನೋ, ಅಸತ್ಕಾರ್ಯವನ್ನೋ ಮಾಡಲಿ ಅಥವಾ ಮಾಡಿಸಲಿ–ಒಳ್ಳೆಯ ಕಾರ್ಯ ಮಾಡಿದುದರಿಂದ ಒಳ್ಳೆಯದಾಗುವುದೆಂಬ ವಿಶ್ವಾಸವನ್ನಿಟ್ಟುಕೊಳ್ಳಬೇಕು. ಆದರೆ ಕೆಟ್ಟ ಕೆಲಸವನ್ನು ಮಾಡಿ ಕೇಡಾಗುವುದಿಲ್ಲವೆಂಬ ನಂಬಿಕೆಯನ್ನಿಟ್ಟುಕೊಳ್ಳಬಾರದು.

ಕಾಲ ಏವಾತ್ರ ಕಾಲೇನ ನಿಗ್ರಹಾನುಗ್ರಹೌ ದದತ್ ।
ಬುದ್ಧಿಮಾವಿಶ್ಯ ಭೂತಾನಾಂ ಧರ್ಮಾರ್ಥೇಷು ಪ್ರವರ್ತತೇ ॥೨॥

ಸಮಯವು ಪ್ರಾಪ್ತವಾದಾಗ ಕಾಲವೇ ಪ್ರಾಣಿಗಳಿಗೆ ನಿಗ್ರಹಾನು ಗ್ರಹಗಳನ್ನು ಉಂಟುಮಾಡುತ್ತಾ ಪ್ರಾಣಿಗಳ ಬುದ್ಧಿಯನ್ನು ಪ್ರವೇಶಿಸಿ ಧರ್ಮಾರ್ಥಸಾಧನೆಗಳಲ್ಲಿ ಪ್ರವರ್ತಿಸುತ್ತದೆ.

ಯದಾ ತ್ವಸ್ಯ ಭವೇದ್ಬುದ್ಧಿರ್ಧರ್ಮ್ಯಾಚಾರ್ಥಪ್ರದರ್ಶಿನೀ ।
ತದಾಶ್ವಸೀತ ಧರ್ಮಾತ್ಮಾ ದೃಢಬುದ್ಧಿರ್ನ ವಿಶ್ವಸೇತ್ ॥೩॥

ಯಾವಾಗ ಮನುಷ್ಯನ ಬುದ್ಧಿಯು ಧರ್ಮಾನುಸಾರಿಯಾಗಿಯೂ ಅರ್ಥಾನುಸಾರಿಯಾಗಿಯೂ ಇರುತ್ತದೆಯೋ ಆಗ ಅವನು ಹಿಂದಿನ ಜನ್ಮದಲ್ಲಿ ಧರ್ಮಾತ್ಮನಾಗಿದ್ದನೆಂದು ತಿಳಿಯಬೇಕು. ದೃಢಬುದ್ಧಿಯಿಲ್ಲದೇ ತೋರಿದಂತೆ ನಡೆಯುವವನನ್ನು ಧರ್ಮಾತ್ಮನೆಂದು ನಂಬಬಾರದು.

ಏತಾವನ್ಮಾತ್ರಮೇತದ್ಧಿ ಭೂತಾನಾಂ ಪ್ರಾಜ್ಞಲಕ್ಷಣಮ್ ।
ಕಾಲಯುಕ್ತೋಽಪ್ಯುಭಯವಿಚ್ಛೇಷಂ ಯುಕ್ತಂ ಸಮಾಚರೇತ್ ॥೪॥

ಧರ್ಮದ ಮೇಲೆ ವಿಶ್ವಾಸವನ್ನಿಟ್ಟು ಅದನ್ನು ಆಚರಿಸುವುದೇ ಪ್ರಾಣಿಗಳ ಬುದ್ಧಿಮತ್ತೆಯ ಲಕ್ಷಣವಾಗಿದೆ. ಧರ್ಮಾಧರ್ಮಗಳ ಫಲವನ್ನು ತಿಳಿದವನು ಕಾಲಯುಕ್ತನಾಗಿದ್ದರೂ (ಪ್ರಾರಬ್ಧಕರ್ಮದಿಂದ ಯುಕ್ತನಾಗಿ ಕಷ್ಟವನ್ನೇ ಅನುಭವಿಸುತ್ತಿದ್ದರೂ) ಯಥಾಯೋಗ್ಯವಾದ ರೀತಿಯಲ್ಲಿ ಆಚರಿಸಲು ಯುಕ್ತವಾದ ಧರ್ಮವನ್ನೇ ಆಚರಿಸಬೇಕು.

ಯಥಾ ಹ್ಯುಪಸ್ಥಿತೈಶ್ವರ್ಯಾಃ ಪ್ರಜಾಯನ್ತೇ ನ ರಾಜಸಾಃ ।
ಏವಮೇವಾತ್ಮನಾತ್ಮಾನಂ ಪೂಜಯನ್ತೀಹ ಧಾರ್ಮಿಕಾಃ ॥೫॥

ಧರ್ಮಾತ್ಮರಾದವರು ಅತುಲೈಶ್ವರ್ಯದಿಂದ ಸಂಪನ್ನರಾಗಿದ್ದರೂ ಮರುಹುಟ್ಟಿನಲ್ಲಿ ರಜೋಗುಣಯುಕ್ತರಾಗಿ ಹುಟ್ಟುವುದಿಲ್ಲ. ಹೀಗೆ ಧಾರ್ಮಿಕರಾದವರು ತಮ್ಮ ಪ್ರಯತ್ನದಿಂದಲೇ ತಮ್ಮನ್ನು ಉದ್ಧರಿಸಿ ಕೊಳ್ಳುತ್ತಾರೆ.

ನ ಹ್ಯಧರ್ಮತಯಾ ಧರ್ಮಂ ದದ್ಯಾತ್ಕಾಲಃ ಕಥಂಚನ।
ತಸ್ಮಾದ್ವಿಶುದ್ಧಮಾತ್ಮಾನಂ ಜಾನೀಯಾದ್ಧರ್ಮಚಾರಿಣಮ್ ॥೬॥

ಕಾಲವು ಯಾವುದೇ ಕಾರಣದಿಂದಲೂ ಅಧರ್ಮಿಗೆ ಧರ್ಮಫಲವನ್ನು ಕೊಟ್ಟುಬಿಡುವುದಿಲ್ಲ. ಧರ್ಮಕಾರ್ಯವನ್ನು ಮಾಡುತ್ತಿರುವವನಿಗೆ ಧರ್ಮಾಚರಣೆಯನ್ನು ಮಾಡಬೇಕೆಂಬ ಮನಸ್ಸನ್ನು ಮರುಹುಟ್ಟಿನಲ್ಲಿಯೂ ಕಾಲವು ಕೊಡುತ್ತದೆ. ಆದುದರಿಂದ ಧರ್ಮಾಚರಣೆಯನ್ನು ಮಾಡುತ್ತಿರುವವನನ್ನು ಶುದ್ಧಾತ್ಮನೆಂದೇ ತಿಳಿಯಬೇಕು.

ಸ್ಪ್ರಷ್ಟುಮಪ್ಯಸಮರ್ಥೋ ಹಿ ಜ್ವಲನ್ತಮಿವ ಪಾವಕಮ್।
ಅಧರ್ಮಃ ಸಂತತೋ ಧರ್ಮಂ ಕಾಲೇನ ಪರಿರಕ್ಷಿತಮ್ ॥೭॥

ಪ್ರಜ್ವಲಿಸುತ್ತಿರುವ ಅಗ್ನಿಗೆ ಸಮಾನವಾಗಿರುವ, ಕಾಲನಿಂದಲೇ ರಕ್ಷಿಸಲ್ಪಡುತ್ತಿರುವ ಧರ್ಮವನ್ನು ಅಧರ್ಮವು ಮುಟ್ಟಲು ಕೂಡ ಅಸಮರ್ಥವಾಗಿದೆ.

ಕಾರ್ಯಾವೇತೌ ಹಿ ಧರ್ಮೇಣ ಧರ್ಮೋ ಹಿ ವಿಜಯಾವಹಃ।
ತ್ರಯಾಣಾಮಪಿ ಲೋಕಾನಾಮಾಲೋಕಃ ಕಾರಣಂ ಭವೇತ್ ॥೮॥

ಕಾಲನಿಂದ ಸಂರಕ್ಷಿತವಾದ ಧರ್ಮವು ಈ ಎರಡು ಕಾರ್ಯಗಳನ್ನೂ ಮಾಡುತ್ತದೆ. ಧರ್ಮವು ವಿಜಯಪ್ರದವಾದುದು. ಮೂರು ಲೋಕಗಳಲ್ಲಿಯೂ ಧರ್ಮವೇ ಬೆಳಕಾಗಿದೆ. ಧರ್ಮವೇ ಎಲ್ಲಕ್ಕೂ ಕಾರಣವಾಗಿದೆ.

ನ ತು ಕಶ್ಚಿನ್ನಯೇತ್ಪ್ರಾಜ್ಞೋ ಗೃಹೀತ್ವೈವ ಕರೇ ನರಮ್।
ಉಚ್ಯಮಾನಸ್ತು ಧರ್ಮೇಣ ಧರ್ಮಲೋಕಭಯಚ್ಛಲೇ ॥೯॥

ಆದರೆ ಯಾವನೇ ಪ್ರಾಜ್ಞನಾಗಲೀ, ಮನುಷ್ಯನ ಕೈಯನ್ನು ಹಿಡಿದುಕೊಂಡು ಧರ್ಮಮಾರ್ಗಕ್ಕೆ ಒಯ್ಯಲಾರನು. ಧರ್ಮವನ್ನು ಉಲ್ಲಂಘಿಸುವುದರಿಂದ ಆಗುವ ಭಯ ಮತ್ತು ಧರ್ಮದ ಉಲ್ಲಂಘನೆಯಿಂದ ಲೋಕದಲ್ಲಿ ಉಂಟಾಗುವ ಭಯ-ಇವುಗಳನ್ನು ವ್ಯಾಜವನ್ನಾಗಿ ಮಾಡಿಕೊಂಡು ಧರ್ಮಮಾರ್ಗವನ್ನು ತಿಳಿಯಹೇಳಿದರೆ ಆಗ ಮನುಷ್ಯನು ಧರ್ಮಮಾರ್ಗಕ್ಕೆ ತಿರುಗಬಹುದು.

ಶೂದ್ರೋಽಹಂ ನಾಧಿಕಾರೋ ಮೇ ಚಾತುರಾಶ್ರಮ್ಯಸೇವನೇ ।
ಇತಿ ವಿಜ್ಞಾನಮಪರೇ ನಾತ್ಮನ್ಯುಪದಧತ್ಯುತ ॥೧೦॥

'ನಾನು ಶೂದ್ರನಾಗಿದ್ದೇನೆ. ನನಗೆ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳ ಆಚರಣೆಗೆ ಅಧಿಕಾರವಿಲ್ಲ'–ಎಂಬುದಾಗಿ ಕೆಲವರು ಭಾವಿಸಿ ಶಾಸ್ತ್ರಜ್ಞಾನವನ್ನು ತಮ್ಮಲ್ಲಿ ಧಾರಣೆಮಾಡಿಕೊಳ್ಳುವುದಿಲ್ಲ. (ಶಾಸ್ತ್ರಗಳ ಅಧ್ಯಯನವನ್ನು ಮಾಡುವುದಿಲ್ಲ.)

ಯುಧಿಷ್ಠಿರ! ಈಗ ನಾನು ಚಾತುರ್ವರ್ಣ್ಯದ ಲಕ್ಷಣವನ್ನು ವಿಶೇಷವಾದ ರೀತಿಯಲ್ಲಿ ಹೇಳುತ್ತೇನೆ.

ಪಞ್ಚಭೂತಶರೀರಾಣಾಂ ಸರ್ವೇಷಾಂ ಸದೃಶಾತ್ಮನಾಮ್ ॥೧೧॥
ಲೋಕಧರ್ಮೇ ಚ ಧರ್ಮೇ ಚ ವಿಶೇಷಕರಣಂ ಕೃತಮ್ ।
ಯಥೈಕತ್ವಂ ಪುನರ್ಯಾನ್ತಿ ಪ್ರಾಣಿನಸ್ತತ್ರ ವಿಸ್ತರಃ ॥೧೨॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ–ಈ ನಾಲ್ಕು ವರ್ಣದವರ ಶರೀರಗಳೂ ಪಂಚಭೂತಾತ್ಮಕವಾಗಿಯೇ ಇವೆ. ಈ ನಾಲ್ಕು ವರ್ಣದವರಿಗೂ ಸದೃಶವಾದ ಆತ್ಮವೇ ಇದೆ. ಆದರೂ ಈ ನಾಲ್ಕು ವರ್ಣದವರ ಲೋಕಧರ್ಮಗಳಲ್ಲಿಯೂ ಮತ್ತು ವಿಶೇಷಧರ್ಮಗಳಲ್ಲಿಯೂ ವಿಶೇಷವಾದ ಭಿನ್ನತೆಯಿದೆ. ಅವರವರ ಪ್ರಾರಬ್ಧಕರ್ಮಗಳಿಗೆ ಅನುಸಾರವಾಗಿ ಪಡೆದಿರುವ ವರ್ಣಗಳಲ್ಲಿ ಎಲ್ಲರೂ ತಮ್ಮ-ತಮ್ಮ ವರ್ಣೋಚಿತವಾದ ಧರ್ಮಗಳನ್ನು ಆಚರಿಸುತ್ತಾ ಏಕತ್ವವನ್ನು ಹೊಂದಬೇಕೆಂಬುದೇ ಭಿನ್ನ-ಭಿನ್ನ ಧರ್ಮಗಳನ್ನು ನಿರೂಪಿಸಿರುವುದರ ಆಶಯವಾಗಿದೆ. ಈ ವಿಷಯದಲ್ಲಿ ಶಾಸ್ತ್ರಗಳಲ್ಲಿ ವಿಸ್ತೃತವಾದ ಉಲ್ಲೇಖಗಳಿವೆ.

ಅಧ್ರುವೋ ಹಿ ಕಥಂ ಲೋಕಃ ಸ್ಮೃತೋ ಧರ್ಮಃ ಕಥಂ ಧ್ರುವಃ ।
ಯತ್ರ ಕಾಲೋ ಧ್ರುವಸ್ತಾತ ತತ್ರ ಧರ್ಮಃ ಸನಾತನಃ ॥೧೩॥

ಮಗು! ಯುಧಿಷ್ಠಿರ! ಧರ್ಮವು ನಿತ್ಯವೆನ್ನುವುದಾದರೆ ಅದರ ಆಚರಣೆಯಿಂದ ಸ್ವರ್ಗಾದಿ ಅನಿತ್ಯಲೋಕಗಳು ಹೇಗೆ ಪ್ರಾಪ್ತವಾಗುತ್ತವೆ? ಅನಿತ್ಯವಾದ ಸ್ವರ್ಗಾದಿಗಳು ಧರ್ಮಾಚರಣೆಯಿಂದ ಪ್ರಾಪ್ತವಾಗುವು

ದಾದರೆ–ಅಂತಹ ಧರ್ಮವು ಹೇಗೆ ನಿತ್ಯವಾಗುತ್ತದೆ? ಇದಕ್ಕೆ ಸಮಾಧಾನವು ಹೀಗಿದೆ: ಎಲ್ಲಿ ಧರ್ಮಾಚರಣೆಯ ಸಂಕಲ್ಪವು ಶಾಶ್ವತವಾದ ಪರಬ್ರಹ್ಮವಸ್ತುವಿಗೆ ಸಂಬಂಧಿಸಿದ್ದಾಗಿರುವುದೋ (ನಿಷ್ಕಾಮವಾಗಿರುವುದೋ) ಅಲ್ಲಿ ಆ ಧರ್ಮವೂ ಶಾಶ್ವತವಾದುದೇ ಆಗಿರುತ್ತದೆ.

ಸರ್ವೇಷಾಂ ತುಲ್ಯದೇಹಾನಾಂ ಸರ್ವೇಷಾಂ ಸದೃಶಾತ್ಮನಾಮ್ ।
ಕಾಲೋ ಧರ್ಮೇಣ ಸಂಯುಕ್ತಃ ಶೇಷ ಏವ ಸ್ವಯಂ ಗುರುಃ ॥

ಸಮಾನವಾದ ದೇಹವುಳ್ಳ ಮತ್ತು ಸಮಾನವಾದ ಆತ್ಮವುಳ್ಳ ಎಲ್ಲ ಪ್ರಾಣಿಗಳಲ್ಲಿಯೂ ನಿತ್ಯಾನಿತ್ಯಸಂಕಲ್ಪಗಳೇ ಶೇಷವಾಗಿ ಉಳಿಯುತ್ತವೆ. (ಅವುಗಳಿಂದಲೇ ಪ್ರತಿಯೊಂದು ಪ್ರಾಣಿಯಲ್ಲಿಯೂ ಭಿನ್ನತೆಯು ಕಾಣುತ್ತದೆ.) ಪ್ರಾಣಿಗಳ ಸಂಕಲ್ಪಾತ್ಮಕವಾದ ಕಾಲವೇ ಸ್ವಯಂ ಗುರುವೂ ಆಗಿದೆ.

ಏವಂ ಸತಿ ನ ದೋಷೋಽಸ್ತಿ ಭೂತಾನಾಂ ಧರ್ಮಸೇವನೇ ।
ತಿರ್ಯಗ್ಯೋನಾವಪಿ ಸತಾಂ ಲೋಕ ಏವ ಮತೋ ಗುರುಃ ॥೧೫॥

ಹೀಗಿರುವಾಗ ಪ್ರಾಣಿಗಳು ಬೇರೆ-ಬೇರೆಯ ಧರ್ಮಗಳನ್ನು ಆಶ್ರಯಿಸುವುದರಲ್ಲಿ ಯಾವ ದೋಷವೂ ಇಲ್ಲ. ತಿರ್ಯಕ್ಪ್ರಾಣಿಗಳಲ್ಲಿ ಜನಿಸಿರುವ ಸತ್ತ್ವಗಳ ಒಳ್ಳೆಯ ಅಥವಾ ಕೆಟ್ಟಪ್ರವೃತ್ತಿಗಳಿಗೂ ವಿಧಿ ನಿಯಂತ್ರಿತವಾದ ಲೋಕವೇ ಗುರುವಾಗಿದೆ.(ಕರ್ತವ್ಯಾಕರ್ತವ್ಯಗಳ ನಿದರ್ಶಕವಾಗಿದೆ.)"

ಇ೬೪ನೆಯ ಅಧ್ಯಾಯವು ಮುಗಿಯಿತು.

೧೬೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ನಿತ್ಯಸ್ಮರಣೀಯರಾದ ದೇವತಾ-ಪರ್ವತ-ಋಷಿ-ರಾಜರ ನಾಮಸಂಕೀರ್ತನೆಯ ಮಹಿಮೆ

ವೈಶಂಪಾಯನರು ಹೇಳುತ್ತಾರೆ:

ಶರತಲ್ಪಗತಂ ಭೀಷ್ಮಂ ಪಾಣ್ಡವೋಽಥ ಕುರೂದ್ವಹಃ ।
ಯುಧಿಷ್ಠಿರೋ ಹಿತಂ ಪ್ರೇಪ್ಸುರಪೃಚ್ಛತ್ಕಲ್ಮಷಾಪಹಮ್ ॥೧॥

"ಜನಮೇಜಯ! ಬಳಿಕ ಕುರುಕುಲಶ್ರೇಷ್ಠನಾದ ಯುಧಿಷ್ಠಿರನು ತನ್ನ

ಹಿತವನ್ನು ಬಯಸುತ್ತಾ ಶರತಲ್ಪದಲ್ಲಿ ಮಲಗಿದ್ದ ಭೀಷ್ಮನನ್ನು ಕುರಿತು ಪಾಪನಿವಾರಕವಾದ ಈ ವಿಷಯವನ್ನು ಪ್ರಶ್ನಿಸಿದನು:

ಯುಧಿಷ್ಠಿರನು ಹೇಳುತ್ತಾನೆ:

ಕಿಂ ಶ್ರೇಯಃ ಪುರುಷಸ್ಯೇಹ ಕಿಂ ಕುರ್ವನ್ಸುಖಮೇಧತೇ ।
ವಿಪಾಪ್ಮಾ ಸ ಭವೇತ್ಕೇನ ಕಿಂ ವಾ ಕಲ್ಮಶನಾಶನಮ್ ॥೨॥

"ಪಿತಾಮಹನೇ! ಈ ಲೋಕದಲ್ಲಿ ಪುರುಷನಿಗೆ ಯಾವುದು ಶ್ರೇಯಸ್ಕರವಾದುದು? ಯಾವುದನ್ನು ಮಾಡುವುದರಿಂದ ಮನುಷ್ಯನು ಸುಖವನ್ನು ಹೊಂದುತ್ತಾನೆ? ಯಾವ ಕರ್ಮಾನುಷ್ಠಾನದಿಂದ ಪಾಪರಹಿತ ನಾಗುತ್ತಾನೆ? ಪಾಪವನ್ನು ತೊಳೆದುಹಾಕುವ ಕರ್ಮವು ಯಾವುದು?"

ವೈಶಂಪಾಯನರು ಹೇಳುತ್ತಾರೆ:

"ಪುರುಷರ್ಷಭನೇ! ಕಲ್ಮಶನಾಶಕವಾದ ವಿಷಯವನ್ನು ಕೇಳಲು ಬಯಸಿದ ಯುಧಿಷ್ಠಿರನಿಗೆ ಶಾಂತನುವಿನ ಮಗನಾದ ಭೀಷ್ಮನು ಪುನಃ ಪಾಪಹಾರಕವಾದ ದೇವತೆಗಳ ವಂಶಾವಳಿಯನ್ನು ಯಥಾನುಕ್ರಮವಾಗಿ ಹೇಳತೊಡಗಿದನು:

ಅಯಂ ದೇವತವಂಶೋ ವೈ ಋಷಿವಂಶಸಮನ್ವಿತಃ ।
ತ್ರಿಸಂಧ್ಯಂ ಪಠತಃ ಪುತ್ರ ಕಲ್ಮಷಾಪಹರಃ ಪರಃ ॥೪॥

ಯದಹ್ನಾ ಕುರುತೇ ಪಾಪಮಿನ್ದ್ರಿಯೈಃ ಪುರುಷಶ್ಚರನ್ ।
ಬುದ್ಧಿಪೂರ್ವಮಬುದ್ಧಿರ್ವಾ ರಾತ್ರೌ ಯಚ್ಚಾಪಿ ಸಂಧ್ಯಯೋಃ ॥

ಮುಚ್ಯತೇ ಸರ್ವಪಾಪೇಭ್ಯಃ ಕೀರ್ತಯನ್ವೈ ಶುಚಿಃ ಸದಾ ।
ನಾನ್ಧೋ ನ ಬಧಿರಃ ಕಾಲೇ ಕುರುತೇ ಸ್ವಸ್ತಿಮಾನ್ಸದಾ ॥೬॥

"ಯುಧಿಷ್ಠಿರ! ಮನುಷ್ಯನು ಮೂರು ಸಂಧ್ಯೆಗಳಲ್ಲಿಯೂ ಋಷಿವಂಶಾವಳಿಯಿಂದ ಕೂಡಿರುವ ದೇವವಂಶಾವಳಿಯನ್ನು ಪಠಿಸಿದರೆ ಹಗಲು-ರಾತ್ರಿಗಳಲ್ಲಿಯೂ, ಬೆಳಿಗ್ಗೆ-ಸಾಯಂಕಾಲಗಳಲ್ಲಿಯೂ ತನ್ನ ಇಂದ್ರಿಯಗಳ ಮೂಲಕವಾಗಿ ತಿಳಿದೋ ತಿಳಿಯದೆಯೋ ಮಾಡಿದ ಸಕಲಪಾಪಗಳಿಂದಲೂ ಮುಕ್ತನಾಗುತ್ತಾನೆ. ಅವನು ಯಾವಾಗಲೂ

ಪವಿತ್ರನಾಗಿರುತ್ತಾನೆ. ಇದನ್ನು ಪಠಿಸುವ ಮನುಷ್ಯನು ಯಾವಾಗಲೂ ಕುರುಡನಾಗಲೀ ಕಿವುಡನಾಗಲೀ ಆಗುವುದಿಲ್ಲ.ಸದಾ ಕಲ್ಯಾಣವನ್ನು ಹೊಂದುತ್ತಾನೆ.

ತಿರ್ಯಗ್ಯೋನಿಂ ನ ಗಚ್ಛೇಚ್ಚ ನರಕಂ ಸಂಕರಾಣಿ ಚ ।
ನ ಚ ದುಃಖಭಯಂ ತಸ್ಯ ಮರಣೇ ನ ಸ ಮುಹ್ಯತಿ ॥೭॥

ದೇವತೆಗಳ ವಂಶಾವಳಿಯನ್ನು ಪಾರಾಯಣಮಾಡುವವನು ತಿರ್ಯಗ್ಯೋನಿಗಳಲ್ಲಾಗಲೀ ನರಕದಲ್ಲಾಗಲೀ ಬೀಳುವುದಿಲ್ಲ. ಅವನಿಗೆ ದುಃಖಭಯವಿರುವುದಿಲ್ಲ. ಮರಣಕಾಲದಲ್ಲಿಯೂ ಅವನು ವಿಮೋಹಿತ(ವ್ಯಾಕುಲ) ನಾಗುವುದಿಲ್ಲ.

ದೇವಾಸುರಗುರುರ್ದೇವಃ ಸರ್ವಭೂತನಮಸ್ಕೃತಃ ।
ಅಚಿನ್ತ್ಯೋಽಥಾಪ್ಯನಿರ್ದೇಶ್ಯಃ ಸರ್ವಪ್ರಾಣೋ ಹ್ಯಯೋನಿಜಃ ॥೮॥

ಪಿತಾಮಹೋ ಜಗನ್ನಾಥಃ ಸಾವಿತ್ರೀ ಬ್ರಹ್ಮಣಃ ಸತೀ ।
ವೇದಭೂರಥ ಕರ್ತಾ ಚ ವಿಷ್ಣುರ್ನಾರಾಯಣಃ ಪ್ರಭುಃ ॥೯॥
ಉಮಾಪತಿರ್ವಿರೂಪಾಕ್ಷಃ ಸ್ಕನ್ದಃ ಸೇನಾಪತಿಸ್ತಥಾ ।
ವಿಶಾಖೋ ಹುತಭುಗ್ವಾಯುಶ್ಚನ್ದ್ರಸೂರ್ಯೌ ಪ್ರಭಾಕರೌ ॥೧೦॥

ಶಕ್ರಃ ಶಚೀಪತಿರ್ದೇವೋ ಯಮೋ ಧೂಮೋರ್ಣಯಾ ಸಹ ।
ವರುಣಃ ಸಹ ಗೌರ್ಯಾ ಚ ಸಹ ಋದ್ಧ್ಯಾ ಧನೇಶ್ವರಃ ॥೧೧॥

ಸೌಮ್ಯಾ ಗೌಃ ಸುರಭಿರ್ದೇವೀ ವಿಶ್ರವಾಶ್ಚ ಮಹಾನೃಷಿಃ ।
ಸಂಕಲ್ಪಃ ಸಾಗರೋ ಗಙ್ಗಾ ಸ್ರವನ್ತ್ಯೋಽಥ ಮರುದ್ಗಣಃ ॥೧೨॥

ವಾಲಖಿಲ್ಯಾಸ್ತಪಃ ಸಿದ್ಧಃ ಕೃಷ್ಣದ್ವೈಪಾಯನಸ್ತಥಾ ।
ನಾರದಃ ಪರ್ವತಶ್ಚೈವ ವಿಶ್ವಾವಸುರ್ಹಾಹಾಹುಹೂಃ ॥೧೩॥
ತುಮ್ಬುರುಶ್ಚಿತ್ರಸೇನಶ್ಚ ದೇವದೂತಶ್ಚ ವಿಶ್ರುತಃ ।
ದೇವಕನ್ಯಾ ಮಹಾಭಾಗಾ ದಿವ್ಯಾಶ್ಚಾಪ್ಸರಸಾಂ ಗಣಾಃ ॥೧೪॥

ಉರ್ವಶೀ ಮೇನಕಾ ರಮ್ಭಾ ಮಿಶ್ರಕೇಶೀ ಹ್ಯಲಮ್ಬುಷಾ ।
ವಿಶ್ವಾಚೀ ಚ ಘೃತಾಚೀ ಚ ಪಞ್ಚಚೂಡಾ ತಿಲೋತ್ತಮಾ ॥೧೫॥

ಆದಿತ್ಯಾ ವಸವೋ ರುದ್ರಾಃ ಸಾಶ್ವಿನಾಃ ಪಿತರೋಽಪಿ ಚ ।
ಧರ್ಮಃ ಶ್ರುತಂ ತಪೋ ದೀಕ್ಷಾ ವ್ಯವಸಾಯಃ ಪಿತಾಮಹಃ ॥೧೬॥

ಶರ್ವರ್ಯೋ ದಿವಸಾಶ್ಚೈವ ಮಾರೀಚಃ ಕಶ್ಯಪಸ್ತಥಾ ।
ಶುಕ್ರೋ ಬೃಹಸ್ಪತಿರ್ಭೌಮೋ ಬುಧೋ ರಾಹುಃ ಶನೈಶ್ಚರಃ ॥೧೭॥

ನಕ್ಷತ್ರಾಣ್ಯೃತವಶ್ಚೈವ ಮಾಸಾಃ ಪಕ್ಷಾಃ ಸವತ್ಸರಾಃ ।
ವೈನತೇಯಾಃ ಸಮುದ್ರಾಶ್ಚ ಕದ್ರುಜಾಃ ಪನ್ನಗಾಸ್ತಥಾ ॥೧೮॥

ಶತದ್ರುಶ್ಚ ವಿಪಾಶಾ ಚ ಚನ್ದ್ರಭಾಗಾ ಸರಸ್ವತೀ ।
ಸಿನ್ಧುಶ್ಚ ದೇವಿಕಾ ಚೈವ ಪ್ರಭಾಸಂ ಪುಷ್ಕರಾಣಿ ಚ ॥೧೯॥

ಗಙ್ಗಾ ಮಹಾನದೀ ವೇಣಾ ಕಾವೇರೀ ನರ್ಮದಾ ತಥಾ ।
ಕುಲಮ್ಪುನಾ ವಿಶಲ್ಯಾ ಚ ಕರತೋಯಾಮ್ಬುವಾಹಿನೀ ॥೨೦॥

ಸರಯೂರ್ಗಣ್ಡಕೀ ಚೈವ ಲೋಹಿತಶ್ಚ ಮಹಾನದಃ ।
ತಾಮ್ರಾರುಣಾ ವೇತ್ರವತೀ ಪರ್ಣಾಶಾ ಗೌತಮೀ ತಥಾ ॥೨೧॥

ಗೋದಾವರೀ ಚ ವೇಣ್ಯಾ ಚ ಕೃಷ್ಣವೇಣಾ ತಥಾದ್ರಿಜಾ ।
ದೃಷದ್ವತೀ ಚ ಕಾವೇರೀ ಚಕ್ಷುರ್ಮನ್ದಾಕಿನೀ ತಥಾ ॥೨೨॥

ಪ್ರಯಾಗಂ ಚ ಪ್ರಭಾಸಂ ಚ ಪುಣ್ಯಂ ನೈಮಿಷಮೇವ ಚ ।
ತಚ್ಚ ವಿಶ್ವೇಶ್ವರಸ್ಥಾನಂ ಯತ್ರ ತದ್ವಿಮಲಂ ಸರಃ ॥೨೩॥

ಪುಣ್ಯತೀರ್ಥಂ ಸುಸಲಿಲಂ ಕುರುಕ್ಷೇತ್ರಂ ಪ್ರಕೀರ್ತಿತಮ್ ।
ಸಿಂಧೂತ್ತಮಂ ತಪೋದಾನಂ ಜಮ್ಬೂಮಾರ್ಗಮಥಾಪಿ ಚ ॥೨೪॥

ಹಿರಣ್ವತೀ ವಿತಸ್ತಾ ಚ ತಥಾ ಪ್ಲಕ್ಷವತೀ ನದೀ ।
ವೇದಸ್ಮೃತಿರ್ವೇದವತೀ ಮಾಲವಾಥಾಶ್ವವತ್ಯಪಿ ॥೨೫॥

ಭೂಮಿಭಾಗಾಸ್ತಥಾ ಪುಣ್ಯಾ ಗಙ್ಗಾದ್ವಾರಮಥಾಪಿ ಚ।
ಋಷಿಕುಲ್ಯಾಸ್ತಥಾ ಮೇಧ್ಯಾ ನದ್ಯಃ ಸಿಂಧುವಹಾಸ್ತಥಾ ॥೨೬॥

ಚರ್ಮಣ್ವತೀ ನದೀ ಪುಣ್ಯಾ ಕೌಶಿಕೀ ಯಮುನಾ ತಥಾ ।
ನದೀ ಭೀಮರಥೀ ಚೈವ ಬಾಹುದಾ ಚ ಮಹಾನದೀ ॥೨೭॥

ಮಾಹೇನ್ದ್ರವಾಣೀ ತ್ರಿದಿವಾ ನೀಲಿಕಾ ಚ ಸರಸ್ವತೀ ।
ನನ್ದಾ ಚಾಪರನನ್ದಾ ಚ ತಥಾ ತೀರ್ಥಮಹಾಹ್ರದಃ ॥೨೮॥

ಗಯಾಥ ಫಲ್ಗುತೀರ್ಥಂ ಚ ಧರ್ಮಾರಣ್ಯಂ ಸುರೈರ್ವೃತಮ್ ।
ತಥಾ ದೇವನದೀ ಪುಣ್ಯಾ ಸರಶ್ಚ ಬ್ರಹ್ಮನಿರ್ಮಿತಮ್ ॥೨೯॥

ಪುಣ್ಯಂ ತ್ರಿಲೋಕವಿಖ್ಯಾತಂ ಸರ್ವಪಾಪಹರಂ ಶಿವಮ್ ।
ಹಿಮವಾನ್ಪರ್ವತಶ್ಚೈವ ದಿವ್ಯೌಷಧಿಸಮನ್ವಿತಃ ॥೩೦॥

ವಿನ್ಧ್ಯೋ ಧಾತುವಿಚಿತ್ರಾಙ್ಗಸ್ತೀರ್ಥವಾನೌಷಧಾನ್ವಿತಃ ।
ಮೇರುರ್ಮಹೇನ್ದ್ರೋ ಮಲಯಃ ಶ್ವೇತಶ್ಚ ರಜತಾವೃತಃ ॥೩೧॥

ಶೃಙ್ಗವಾನ್ಮನ್ದರೋ ನೀಲೋ ನಿಷಧೋ ದರ್ದುರಸ್ತಥಾ।
ಚಿತ್ರಕೂಟೋಽಜನಾಭಶ್ಚ ಪರ್ವತೋ ಗನ್ಧಮಾದನಃ ॥೩೨॥

ಪುಣ್ಯಃ ಸೋಮಗಿರಿಶ್ಚೈವ ತಥೈವಾನ್ಯೇ ಮಹೀಧರಾಃ ।
ದಿಶಶ್ಚ ವಿದಿಶಶ್ಚೈವ ಕ್ಷಿತಿಃ ಸರ್ವೇ ಮಹೀರುಹಾಃ ॥೩೩॥

ವಿಶ್ವೇದೇವಾ ನಭಶ್ಚೈವ ನಕ್ಷತ್ರಾಣಿ ಗ್ರಹಾಸ್ತಥಾ ।
ಪಾನ್ತು ನಃ ಸತತಂ ದೇವಾಃ ಕೀರ್ತಿತಾಽಕೀರ್ತಿತಾ ಮಯಾ ॥೩೪॥

ಸರ್ವಪ್ರಾಣಿಗಳಿಂದಲೂ ನಮಸ್ಕೃತನಾದ, ದೇವಾಸುರರಿಗೂ ಗುರುವಾದ, ಅಚಿಂತ್ಯನಾದ, ನಿರ್ದೇಶ್ಯನಾದ, ಸರ್ವರಿಗೂ ಪ್ರಾಣಸ್ವರೂಪನಾದ, ಅಯೋನಿಜನಾದ, ಜಗದೀಶ್ವರನಾದ, ಪಿತಾಮಹನಾದ, ಜಗತ್ತಿಗೇ ನಾಥನಾದ ಬ್ರಹ್ಮನೂ ಅವನ ಪತ್ನಿಯಾದ ಸಾವಿತ್ರೀದೇವಿಯೂ ಸತತವಾಗಿ ನಮ್ಮನ್ನು ರಕ್ಷಿಸಲಿ. ವೇದಗಳ ಉತ್ಪತ್ತಿಸ್ಥಾನನಾದ, ಜಗತ್ಕರ್ತೃವಾದ, ವ್ಯಾಪಕನಾದ, ಪ್ರಭುವಾದ ನಾರಾಯಣನು ನಮ್ಮನ್ನು ರಕ್ಷಿಸಲಿ. ಮುಕ್ಕಣ್ಣನಾದ, ಉಮಾಪತಿಯಾದ ಮಹದೇವನೂ, ದೇವಸೇನಾಪತಿಯಾದ ಸ್ಕಂದನೂ, ವಿಶಾಖನೂ ನಮ್ಮನ್ನು ರಕ್ಷಿಸಲಿ. ಅಗ್ನಿಯೂ, ವಾಯುವೂ, ಪ್ರಭೆಯನ್ನುಂಟು ಮಾಡುವ ಚಂದ್ರ-ಸೂರ್ಯರೂ, ಶಚೀಪತಿಯಾದ ಇಂದ್ರನೂ, ಯಮರಾಜನೂ, ಅವನ ಪತ್ನಿಯಾದ ಧೂಮೋರ್ಣೆಯೂ, ಗೌರೀಸಮೇತನಾದ ವರುಣನೂ, ಋದ್ಧಿ ಎಂಬ ಪತ್ನಿಯೊಡನಿರುವ ಕುಬೇರನೂ ನಮ್ಮನ್ನು ರಕ್ಷಿಸಲಿ. ಸೌಮ್ಯಭಾವದವಳಾದ, ಗೋಮಾತೆಯಾದ ಸುರಭೀದೇವಿಯೂ, ಮಹರ್ಷಿ

ಯಾದ ವಿಶ್ರವಸನೂ, ಸಂಕಲ್ಪನೂ, ಸಾಗರನೂ, ಗಂಗೆಯೇ ಮೊದಲಾದ ನದಿಗಳೂ, ಮರುದ್ಗಣಗಳೂ, ತಪಃಸಿದ್ಧರಾದ ವಾಲಖಿಲ್ಯರೂ, ಕೃಷ್ಣ ದ್ವೈಪಾಯನ ವ್ಯಾಸರೂ, ನಾರದ-ಪರ್ವತರೂ ನಮ್ಮನ್ನು ರಕ್ಷಿಸಲಿ. ವಿಶ್ವಾ ವಸುವೂ ಹಹಾ-ಹುಹೂಗಳೂ, ತುಂಬುರು-ಚಿತ್ರಸೇನರೂ, ವಿಖ್ಯಾತನಾದ ದೇವದೂತನೂ, ಮಹಾಸೌಭಾಗ್ಯಶಾಲಿನಿಯರಾದ ದೇವಕನ್ಯೆ ಯರೂ ನಮ್ಮನ್ನು ರಕ್ಷಿಸಲಿ. ಊರ್ವಶೀ, ಮೇನಕೆ, ರಂಭೆ, ಮಿಶ್ರಕೇಶಿ, ಅಲಂಬುಷೇ, ವಿಶ್ವಾಚೀ, ಘೃತಾಚೀ, ಪಂಚಚೂಡೆ, ತಿಲೋತ್ತಮೆ–ಇವರೇ ಮೊದಲಾದ ಅಪ್ಸರೆಯರೂ ನಮ್ಮನ್ನು ರಕ್ಷಿಸಲಿ. ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶರುದ್ರರೂ, ಅಶ್ವಿನೀಕುಮಾರರೂ, ಪಿತೃಗಳೂ, ಧರ್ಮದೇವತೆಯೂ, ಶಾಸ್ತ್ರಜ್ಞಾನಾಧಿದೇವತೆಗಳೂ, ತಪಸ್ಸು-ದೀಕ್ಷಾ- ವ್ಯವಸಾಯಗಳೂ, ಪಿತಾ ಮಹನೂ, ಹಗಲು-ರಾತ್ರಿಗಳೂ, ಮರೀಚಿಯ ಮಗನಾದ ಕಶ್ಯಪನೂ, ಶುಕ್ರ-ಬೃಹಸ್ಪತಿಗಳೂ, ಮಂಗಳ-ಬುಧ-ರಾಹುಗಳೂ, ಶನೈಶ್ಚರನೂ, ನಕ್ಷತ್ರ-ಋತು-ಮಾಸ-ಪಕ್ಷ-ಸಂವತ್ಸರಗಳೂ ನಮ್ಮನ್ನು ರಕ್ಷಿಸಲಿ. ವಿನತೆಯ ಮಗ ನಾದ ಗರುಡನೂ, ಸಮುದ್ರನೂ, ಕದ್ರುವಿನ ಮಕ್ಕಳಾದ ಸರ್ಪಗಳೂ, ಶತದ್ರು, ವಿಪಾಶಾ, ಚಂದ್ರಭಾಗಾ, ಸರಸ್ವತೀ, ಸಿಂಧು, ದೇವಿಕಾ ನದಿಗಳೂ, ಪ್ರಭಾಸ-ಪುಷ್ಕರತೀರ್ಥಗಳೂ, ಗಂಗಾ, ಮಹಾನದೀ, ವೇಣಾ, ಕಾವೇರೀ, ನರ್ಮದಾ, ಕುಲಂಪುನಾ, ವಿಶಲ್ಯಾ, ಕರತೋಯಾ, ಅಂಬು ವಾಹಿನೀ, ಸರಯೂ, ಗಂಡಕಿ, ಕೆಂಪುನೀರಿನ ಮಹಾನದವಾದ ಶೋಣ ಭದ್ರ, ತಾಮ್ರಾ, ಅರುಣಾ, ವೇತ್ರವತೀ, ಪರ್ಣಾಶಾ, ಗೌತಮೀ, ಗೋದಾವರೀ, ವೇಣ್ಯಾ, ಕೃಷ್ಣವೇಣೀ, ಅದ್ರಿಜಾ, ದೃಷದ್ವತೀ, ಕಾವೇರಿ, ಚಕ್ಷು, ಮಂದಾಕಿನೀ–ಇವೇ ಮುಂತಾದ ನದಿಗಳೂ ನಮ್ಮನ್ನು ರಕ್ಷಿಸಲಿ. ಪ್ರಯಾಗ, ಪ್ರಭಾಸ, ಪುಣ್ಯಮಯ ವಾದ ನೈಮಿಷಾರಣ್ಯ, ವಿಶ್ವೇಶ್ವರನ ಸ್ಥಾನವಾದ ವಿಮಲಸರೋವರ, ಸ್ವಚ್ಛವಾದ ನೀರಿನಿಂದ ಕೂಡಿರುವ ಪುಣ್ಯತೀರ್ಥವಾದ ಕುರುಕ್ಷೇತ್ರ, ಉತ್ತಮ ವಾದ ಸಮುದ್ರ, ತಪೋದಾನ, ಜಂಬೂಮಾರ್ಗ–ಇವೇ ಮುಂತಾದ ಪವಿತ್ರ ಸ್ಥಳಗಳೂ ನಮ್ಮನ್ನು ಕಾಪಾಡಲಿ. ಹಿರಣ್ವತೀ, ವಿತಸ್ತಾ, ಪ್ಲಕ್ಷವತೀ, ವೇದ ಸ್ಮೃತಿ, ವೇದವತೀ, ಮಾಲವಾ, ಅಶ್ವವತೀ–ಇವೇ ಮುಂತಾದ ಪುಣ್ಯನದಿ ಗಳೂ ನಮ್ಮನ್ನು ರಕ್ಷಿಸಲಿ. ಪವಿತ್ರಭೂಭಾಗವಾದ ಗಂಗಾದ್ವಾರವೂ, ಋಷಿತೀರ್ಥಗಳೂ, ಪವಿತ್ರವಾದ ಸಮುದ್ರಗಾಮಿನಿಗಳಾದ ನದಿಗಳೂ,

ಪುಣ್ಯಸಲಿಲಯುಕ್ತವಾದ ಚರ್ಮಣ್ವತೀ, ಕೌಶಿಕೀ, ಯಮುನಾ, ಭೀಮರಥೀ, ಮಹಾನದೀ, ಬಾಹುದಾ, ಮಹೇಂದ್ರವಾಣೀ, ತ್ರಿದಿವಾ, ನೀಲಿಕಾ, ಸರಸ್ವತೀ, ನಂದಾ, ಅಪರನಂದಾ–ಇವೇ ಮುಂತಾದ ಪುಣ್ಯ ನದಿಗಳೂ ನಮ್ಮನ್ನು ರಕ್ಷಿಸಲಿ. ತೀರ್ಥಭೂತವಾದ ಮಹಾಹ್ರದವೂ, ಗಯಾ, ಫಲ್ಗುತೀರ್ಥ, ದೇವತೆಗಳಿಂದ ಯುಕ್ತವಾದ ಧರ್ಮಾರಣ್ಯ, ಪವಿತ್ರವಾದ ದೇವನದೀ, ಮೂರು ಲೋಕಗಳಲ್ಲಿಯೂ ವಿಖ್ಯಾತವಾದ, ಪವಿತ್ರವಾದ ಸರ್ವಪಾಪನಾಶಕವಾದ, ಕಲ್ಯಾಣಮಯವಾದ, ಬ್ರಹ್ಮನಿರ್ಮಿತವಾದ ಸರೋವರ (ಪುಷ್ಕರತೀರ್ಥ), ದಿವ್ಯೌಷಧಿಗಳಿಂದ ಯುಕ್ತವಾದ ಹಿಮವತ್ಪರ್ವತ, ನಾನಾಪ್ರಕಾರವಾದ ಧಾತುಗಳು, ತೀರ್ಥಗಳು ಮತ್ತು ಔಷಧಗಳಿಂದ ಸುಶೋಭಿತವಾದ ವಿಂಧ್ಯಪರ್ವತ, ಮೇರು, ಮಹೇಂದ್ರ, ಮಲಯ, ಬೆಳ್ಳಿಯಿಂದ ಯುಕ್ತವಾದ ಶ್ವೇತಪರ್ವತ, ಶೃಂಗವಂತ, ಮಂದರ, ನೀಲ, ನಿಷಧ, ದುರ್ದರ, ಚಿತ್ರಕೂಟ, ಅಜನಾಭ, ಗಂಧಮಾದನ, ಪವಿತ್ರವಾದ ಸೋಮಗಿರಿ–ಇವೇ ಮೊದಲಾದ ಪರ್ವತಕ್ಷೇತ್ರಗಳೂ, ದಿಕ್ಕುಗಳೂ, ಉಪದಿಕ್ಕುಗಳೂ, ಭೂಮಿಯೂ, ವೃಕ್ಷಗಳೂ, ವಿಶ್ವೇ ದೇವತೆಗಳೂ, ಆಕಾಶ-ನಕ್ಷತ್ರ-ಗ್ರಹಗಣಗಳೂ, ಇಲ್ಲಿ ಕೀರ್ತಿತವಾಗಿರುವ ಮತ್ತು ಕೀರ್ತಿತವಾಗದಿರುವ ದೇವ-ಗಂಧರ್ವ-ನದೀ-ಪರ್ವತಕ್ಷೇತ್ರಾದಿಗಳೆಲ್ಲವೂ ಸತತವಾಗಿ ನಮ್ಮನ್ನು ರಕ್ಷಿಸಲಿ.

ಕೀರ್ತಯಾನೋ ನರೋ ಹ್ಯೇತಾನ್ಮುಚ್ಯತೇ ಸರ್ವಕಿಲ್ಬಿಷೈಃ ।
ಸ್ತುವಂಶ್ಚ ಪ್ರತಿನನ್ದಂಶ್ಚ ಮುಚ್ಯತೇ ಸರ್ವತೋ ಭಯಾತ್।
ಸರ್ವಸಂಕರಪಾಪೇಭ್ಯೋ ದೇವತಾಸ್ತವನನ್ದಕಃ ॥೩೫॥

ಯಾವ ಮನುಷ್ಯನು ದೇವತೆಗಳೇ ಮೊದಲಾದವರ ಈ ಕೀರ್ತನೆಯನ್ನು ಮಾಡುವನೋ, ಸ್ತೋತ್ರಮಾಡುವನೋ ಮತ್ತು ನಮಸ್ಕರಿಸುವನೋ–ಅವನು ಸರ್ವಪ್ರಕಾರವಾದ ಭಯಗಳಿಂದಲೂ ಮತ್ತು ಪಾಪಗಳಿಂದಲೂ ಮುಕ್ತನಾಗುತ್ತಾನೆ. ದೇವತೆಗಳನ್ನು ಸ್ತೋತ್ರಮಾಡುವ ಮತ್ತು ನಮಸ್ಕರಿಸುವ ಪುರುಷನು ಸಮಸ್ತವಾದ ಸಂಕರಪಾಪಗಳಿಂದಲೂ ಮುಕ್ತನಾಗುತ್ತಾನೆ.

ಯುಧಿಷ್ಠಿರ! ದೇವಾದಿಗಳ ಕೀರ್ತನವಾದನಂತರ ಈಗ ನಾನು ಸಮಸ್ತಪಾಪಗಳಿಂದಲೂ ಮುಕ್ತಗೊಳಿಸುವ ದೊಡ್ಡ-ದೊಡ್ಡ ತಪಸ್ಸಿದ್ಧರ ಮತ್ತು ಬ್ರಹ್ಮರ್ಷಿಗಳ ಪ್ರಖ್ಯಾತನಾಮಗಳನ್ನು ಹೇಳುತ್ತೇನೆ.

ಯವಕ್ರೀತೋಽಥ ರೈಭ್ಯಶ್ಚ ಕಕ್ಷೀವಾನೌಶಿಜಸ್ತಥಾ ।
ಭೃಗ್ವಙ್ಗಿರಾಸ್ತಥಾ ಕಣ್ವೋ ಮೇಧಾತಿಥಿರಥ ಪ್ರಭುಃ ॥೩೭॥
ಬರ್ಹೀ ಚ ಗುಣಸಮ್ಪನ್ನಃ ಪ್ರಾಚೀಂ ದಿಶಮುಪಾಶ್ರಿತಾಃ ।
ಭದ್ರಾಂ ದಿಶಂ ಮಹಾಭಾಗಾ ಉಲ್ಮುಚುಃ ಪ್ರಮುಚುಸ್ತಥಾ ॥೩೮॥
ಮುಮುಚುಶ್ಚ ಮಹಾಭಾಗಃ ಸ್ವಸ್ತ್ಯಾತ್ರೇಯಶ್ಚ ವೀರ್ಯವಾನ್ ।
ಮಿತ್ರಾವರುಣಯೋಃ ಪುತ್ರಸ್ತಥಾಗಸ್ತ್ಯಃ ಪ್ರತಾಪವಾನ್ ॥೩೯॥
ದೃಢಾಯುಶ್ಚೋರ್ಧ್ವಬಾಹುಶ್ಚ ವಿಶ್ರುತಾವೃಷಿಸತ್ತಮೌ ॥೪೦॥

ಯವಕ್ರೀತ, ರೈಭ್ಯ, ಕಕ್ಷೀವಂತ, ಔಶಿಜ, ಭೃಗು, ಅಂಗಿರಸ, ಕಣ್ವ, ಪ್ರಭಾವಶಾಲಿಯಾದ ಮೇಧಾತಿಥಿ, ಸರ್ವಗುಣಸಂಪನ್ನನಾದ ಬರ್ಹಿ–ಇವರೆಲ್ಲರೂ ಪೂರ್ವದಿಕ್ಕನ್ನು ಆಶ್ರಯಿಸಿದ್ದಾರೆ. ಉಲ್ಮುಚ, ಪ್ರಮುಚ, ಮುಮುಚ, ಶಕ್ತಿಶಾಲಿಯಾದ ಸ್ವಸ್ತ್ಯಾತ್ರೇಯ, ಮಿತ್ರಾವರುಣನ ಮಗನಾದ ಪ್ರತಾಪಶಾಲಿಯಾದ ಅಗಸ್ತ್ಯ, ಪರಮಪ್ರಸಿದ್ಧನಾದ ಋಷಿಶ್ರೇಷ್ಠನಾದ ದೃಢಾಯು ಮತ್ತು ಊರ್ಧ್ವಬಾಹು–ಇವರೆಲ್ಲರೂ ದಕ್ಷಿಣದಿಕ್ಕನ್ನು ಆಶ್ರಯಿಸಿದ್ದಾರೆ. ಪಶ್ಚಿಮದಿಕ್ಕನ್ನಾಶ್ರಯಿಸಿ ಯಾರು ಅಭ್ಯುದಯವನ್ನು ಹೊಂದುತ್ತಿರುವರೆಂಬುದನ್ನು ಹೇಳುವೆನು; ಕೇಳು:

ಉಷಙ್ಗುಃ ಸಹ ಸೋದರ್ಯೈಃ ಪರಿವ್ಯಾಧಶ್ಚ ವೀರ್ಯವಾನ್ ।
ಋಷಿರ್ದೀರ್ಘತಮಾಶ್ಚೈವ ಗೌತಮಃ ಕಾಶ್ಯಪಸ್ತಥಾ ॥೪೧॥

ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹಾನೃಷಿಃ ।
ಅತ್ರೇಃ ಪುತ್ರಶ್ಚ ಧರ್ಮಾತ್ಮಾ ತಥಾ ಸಾರಸ್ವತಃ ಪ್ರಭುಃ ॥೪೨॥

ಸಹೋದರರಿಂದ ಯುಕ್ತನಾದ ಉಷಂಗು, ಶಕ್ತಿಶಾಲಿಯಾದ ಪರಿವ್ಯಾಧ, ದೀರ್ಘತಮಸ್ಸು, ಗೌತಮ, ಕಾಶ್ಯಪ, ಏಕತ, ದ್ವಿತ, ತ್ರಿತ, ಅತ್ರಿಯ ಮಗನಾದ, ಧರ್ಮಾತ್ಮನಾದ ದುರ್ವಾಸ ಮತ್ತು ಪ್ರಭಾವಶಾಲಿಯಾದ ಸಾರಸ್ವತ–ಇವರೆಲ್ಲರೂ ಪಶ್ಚಿಮದಿಕ್ಕನ್ನು ಆಶ್ರಯಿಸಿರುತ್ತಾರೆ. ಉತ್ತರದಿಕ್ಕನ್ನು ಆಶ್ರಯಿಸಿ ಯಾವ ಋಷಿಗಳು ಅಭಿವೃದ್ಧಿ ಹೊಂದುತ್ತಿರುವರೆಂಬುದನ್ನು ಹೇಳುವೆನು; ಕೇಳು:

ಅತ್ರಿರ್ವಸಿಷ್ಠಃ ಶಕ್ತಿಶ್ಚ ಪಾರಾಶರ್ಯಶ್ಚ ವೀರ್ಯವಾನ್ ।
ವಿಶ್ವಾಮಿತ್ರೋ ಭರದ್ವಾಜೋ ಜಮದಗ್ನಿಸ್ತಥೈವ ಚ ॥೪೪॥

ಋಚೀಕಪುತ್ರೋ ರಾಮಶ್ಚ ಋಷಿರೌದ್ದಾಲಕಿಸ್ತಥಾ ।
ಶ್ವೇತಕೇತುಃ ಕೋಹಲಶ್ಚ ವಿಪುಲೋ ದೇವಲಸ್ತಥಾ ॥೪೫॥

ದೇವಶರ್ಮಾ ಚ ಧೌಮ್ಯಶ್ಚ ಹಸ್ತಿಕಾಶ್ಯಪ ಏವ ಚ ।
ಲೋಮಶೋ ನಾಚಿಕೇತಶ್ಚ ಲೋಮಹರ್ಷಣ ಏವ ಚ ॥೪೬॥

ಋಷಿರುಗ್ರಶ್ರವಾಶ್ಚೈವ ಭಾರ್ಗವಶ್ಚ್ಯವನಸ್ತಥಾ ।
ಏಷ ವೈ ಸಮವಾಯಶ್ಚ ಋಷಿದೇವಸಮನ್ವಿತಃ ।
ಆದ್ಯಃ ಪ್ರಕೀರ್ತಿತೋ ರಾಜನ್ಸರ್ವಪಾಪಪ್ರಮೋಚನಃ ॥೪೭॥

ಅತ್ರಿ, ವಸಿಷ್ಠ, ಶಕ್ತಿ, ಪರಾಶರನ ಮಗನಾದ ಶಕ್ತಿಶಾಲಿಯಾದ ವ್ಯಾಸ, ವಿಶ್ವಾಮಿತ್ರ, ಭರದ್ವಾಜ, ಋಚೀಕನ ಮಗನಾದ ಜಮದಗ್ನಿ, ಪರಶುರಾಮ, ಉದ್ದಾಲಕನ ಮಗನಾದ ಶ್ವೇತಕೇತು, ಕೋಹಲ, ವಿಪುಲ, ದೇವಲ, ದೇವಶರ್ಮಾ. ಧೌಮ್ಯ, ಹಸ್ತಿಕಾಶ್ಯಪ, ಲೋಮಶ, ನಾಚಿಕೇತ, ಲೋಮಹರ್ಷಣ, ಉಗ್ರಶ್ರವಸ, ಭೃಗುವಿನ ಮಗನಾದ ಚ್ಯವನ–ಇವರೆಲ್ಲರೂ ಉತ್ತರ ದಿಕ್ಕನ್ನು ಆಶ್ರಯಿಸಿ ಅಭ್ಯುದಯವನ್ನು ಹೊಂದುತ್ತಿದ್ದಾರೆ. ಸೃಷ್ಟಿಯ ಆದಿಯಲ್ಲಿ ಪ್ರಾದುರ್ಭೂತರಾದ ಈ ದೇವತೆಗಳ ಮತ್ತು ಋಷಿಗಳ ಸಮುದಾಯವು ಇದಾಗಿದೆ. ಈ ಶುಭನಾಮಗಳು ಸ್ತೋತ್ರಮಾಡಿದವರನ್ನು ಸಕಲಪಾಪಗಳಿಂದಲೂ ವಿಮೋಚನೆಗೊಳಿಸುತ್ತವೆ.

ನೃಗೋ ಯಯಾತಿರ್ನಹುಷೋ ಯದುಃ ಪೂರುಶ್ಚ ವೀರ್ಯವಾನ್ ।
ಧುನ್ಧುಮಾರೋ ದಿಲೀಪಶ್ಚ ಸಗರಶ್ಚ ಪ್ರತಾಪವಾನ್ ॥೪೮॥

ಕೃಶಾಶ್ವೋ ಯೌವನಾಶ್ವಶ್ಚ ಚಿತ್ರಾಶ್ವಃ ಸತ್ಯವಾಂಸ್ತಥಾ ।
ದುಷ್ಯನ್ತೋ ಭರತಶ್ಚೈವ ಚಕ್ರವರ್ತೀ ಮಹಾಯಶಾಃ ॥೪೯॥

ಪವನೋ ಜನಕಶ್ಚೈವ ತಥಾ ದೃಷ್ಟರಥೋ ನೃಪಃ ।
ರಘುರ್ನರವರಶ್ಚೈವ ತಥಾ ದಶರಥೋ ನೃಪಃ ॥೫೦॥

ರಾಮೋ ರಾಕ್ಷಸಹಾ ವೀರಃ ಶಶಬಿನ್ದುರ್ಭಗೀರಥಃ ।
ಹರಿಶ್ಚನ್ದ್ರೋ ಮರುತ್ತಶ್ಚ ತಥಾ ದೃಢರಥೋ ನೃಪಃ ॥೫೧॥

ಮಹೋದಯೋ ಹ್ಯಲರ್ಕಶ್ಚ ಐಲಶ್ಚೈವ ನರಾಧಿಪಃ ।
ಕರನ್ಧಮೋ ನರಶ್ರೇಷ್ಠಃ ಕಧ್ಮೋರಶ್ಚ ನರಾಧಿಪಃ ॥೫೨॥

ದಕ್ಷೋಽಮ್ಬರೀಷಃ ಕುಕುರೋ ರೈವತಶ್ಚ ಮಹಾಯಶಾಃ ।
ಕುರುಃ ಸಂವರಣಶ್ಚೈವ ಮಾನ್ಧಾತಾ ಸತ್ಯವಿಕ್ರಮಃ ॥೫೩॥

ಮುಚುಕುನ್ದಶ್ಚ ರಾಜರ್ಷಿರ್ಜಹ್ನುರ್ಜಾಹ್ನವಿಸೇವಿತಃ ।
ಆದಿರಾಜಃ ಪೃಥುರ್ವೈನ್ಯೋ ಮಿತ್ರಭಾನುಃ ಪ್ರಿಯಂಕರಃ ॥೫೪॥

ತ್ರಸದಸ್ಯುಸ್ತಥಾ ರಾಜಾ ಶ್ವೇತೋ ರಾಜರ್ಷಿಸತ್ತಮಃ ।
ಮಹಾಭಿಷಶ್ಚ ವಿಖ್ಯಾತೋ ನಿಮಿರಾಜಸ್ತಥಾಷ್ಟಕಃ ॥೫೫॥

ಆಯುಃ ಕ್ಷುಪಶ್ಚ ರಾಜರ್ಷಿಃ ಕಕ್ಷೇಯುಶ್ಚ ನರಾಧಿಪಃ ।
ಪ್ರತರ್ದನೋ ದಿವೋದಾಸಃ ಸುದಾಸಃ ಕೋಸಲೇಶ್ವರಃ ॥೫೬॥

ಐಲೋ ನಲಶ್ಚ ರಾಜರ್ಷಿರ್ಮನುಶ್ಚೈವ ಪ್ರಜಾಪತಿಃ ।
ಹವಿಧ್ರಶ್ಚ ಪೃಷಧ್ರಶ್ಚ ಪ್ರತೀಪಃ ಶಾನ್ತನುಸ್ತಥಾ ॥೫೭॥
ಅಜಃ ಪ್ರಾಚೀನಬರ್ಹಿಶ್ಚ ತಥೇಕ್ಷ್ವಾಕುರ್ಮಹಾಯಶಾಃ ।
ಅನರಣ್ಯೋ ನರಪತಿರ್ಜಾನುಜಂಘಸ್ತಥೈವ ಚ ॥೫೮॥
ಕಕ್ಷಸೇನಶ್ಚ ರಾಜರ್ಷಿರ್ಯೇಚಾನ್ಯೇ ಚಾನುಕೀರ್ತಿತಾಃ ।
ಕಲ್ಯಮುತ್ಥಾಯ ಯೋ ನಿತ್ಯಂ ಸಂಧ್ಯೇದ್ವೇಽಸ್ತಮಯೋದಯೇ ॥
ಪಠೇಚ್ಛುಚಿರನಾವೃತ್ತಃ ಸ ಧರ್ಮಫಲಭಾಗ್ಭವೇತ್ ॥೬೦॥

ನೃಗ, ಯಯಾತಿ, ನಹುಷ, ಯದು, ಶಕ್ತಿಶಾಲಿಯಾದ ಪುರು, ಧುಂಧುಮಾರ, ದಿಲೀಪ, ಪ್ರತಾಪಿಯಾದ ಸಗರ, ಕೃಶಾಶ್ವ, ಯೌವನಾಶ್ವ, ಚಿತ್ರಾಶ್ವ, ಸತ್ಯವಂತ, ದುಷ್ಯಂತ, ಮಹಾಯಶೋವಂತನಾದ, ಚಕ್ರವರ್ತಿಯಾದ ಭರತ, ಪವನ, ಜನಕ, ದೃಷ್ಟರಥ, ನರಶ್ರೇಷ್ಠನಾದ ರಘು, ದಶರಥರಾಜ, ರಾಕ್ಷಸಹಂತಕನಾದ, ವೀರಶ್ರೇಷ್ಠನಾದ ಶ್ರೀರಾಮ, ಶಶಬಿಂದು, ಭಗೀರಥ, ಹರಿಶ್ಚಂದ್ರ, ಮರುತ್ತ, ದೃಢರಥ, ಮಹೋದರ್ಯ,

ಅಲರ್ಕ, ನರಾಧಿಪನಾದ ಐಲ (ಪುರೂರವಸ), ನರಶ್ರೇಷ್ಠನಾದ ಕರಂಧಮ, ಕಧ್ಮೋರ, ದಕ್ಷ, ಅಂಬರೀಷ, ಕುಕುರ, ಮಹಾಯಶೋವಂತನಾದ ರೈವತ, ಕುರು, ಸಂವರಣ, ಸತ್ಯಪರಾಕ್ರಮನಾದ ಮಾಂಧಾತಾ, ರಾಜರ್ಷಿಯಾದ ಮುಚುಕುಂದ, ಗಂಗೆಯಿಂದ ಸೇವಿತನಾದ ಜಹ್ನು, ಆದಿರಾಜನಾದ, ವೇನನ ಮಗನಾದ ಪೃಥು, ಎಲ್ಲರಿಗೂ ಪ್ರಿಯಕರನಾದ ಮಿತ್ರಭಾನು, ತ್ರಸದಸ್ಯು, ರಾಜರ್ಷಿಶ್ರೇಷ್ಠನಾದ ಶ್ವೇತ, ಪ್ರಸಿದ್ಧನಾದ ಮಹಾಭಿಷ, ನಿಮಿರಾಜ, ಅಷ್ಟಕ, ಆಯು, ರಾಜರ್ಷಿಯಾದ ಕ್ಷುಪ, ಕಕ್ಷೇಯು, ಪ್ರತರ್ದನ, ದಿವೋದಾಸ, ಕೋಸಲನರೇಶನಾದ ಸುದಾಸ, ಪುರೂರವಸ, ರಾಜರ್ಷಿಯಾದ ನಲ, ಮನುಪ್ರಜಾಪತಿ, ಹವಿಧ್ರ, ಪೃಹಧ್ರ, ಪ್ರತೀಪ, ಶಾಂತನು, ಅಜ, ಪ್ರಾಚೀನಬರ್ಹಿ, ಮಹಾಯಶೋವಂತನಾದ ಇಕ್ಷ್ವಾಕು, ಅನರಣ್ಯ, ಜಾನುಜಂಘ, ರಾಜರ್ಷಿಯಾದ ಕಕ್ಷಸೇನ–ಇವರೇ ಅಲ್ಲದೇ ಪುರಾಣಪ್ರಸಿದ್ಧರಾದ, ಪುಣ್ಯಾತ್ಮರಾದ, ಇನ್ನೂ ಅನೇಕ ರಾಜರ ಸ್ಮರಣೆಮಾಡುವುದು ಯೋಗ್ಯವಾಗಿದೆ. ಯಾವ ಮನುಷ್ಯನು ಪ್ರತಿದಿನವೂ ಬೆಳಿಗ್ಗೆ ಎದ್ದು ಸ್ನಾನಾದಿಗಳನ್ನು ಮಾಡಿ ಪರಿಶುದ್ಧನಾಗಿ ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಈ ಶುಭನಾಮಗಳನ್ನು ಪಾರಾಯಣಮಾಡುವನೋ ಅವನು ಧರ್ಮಫಲಕ್ಕೆ ಭಾಗಿಯಾಗುತ್ತಾನೆ. ನಿತ್ಯವೂ ಸ್ತುತಿಸಲ್ಪಡುವ ಸರ್ವೇಶ್ವರರಾದ ದೇವತೆಗಳೂ, ದೇವರ್ಷಿಗಳೂ, ಮತ್ತು ರಾಜರ್ಷಿಗಳೂ ನನಗೆ ಪುಷ್ಟಿಯನ್ನೂ, ಆಯುಷ್ಯವನ್ನೂ, ಯಶಸ್ಸನ್ನೂ ಮತ್ತು ಸ್ವರ್ಗವನ್ನೂ ದಯಪಾಲಿಸುತ್ತಾರೆ.

ಮಾ ವಿಘ್ನಂ ಮಾ ಚ ಮೇ ಪಾಪಂ ಮಾ ಚ ಮೇ ಪರಿಪನ್ಥಿನಃ ।
ಧ್ರುವೋ ಜಯೋ ಮೇ ನಿತ್ಯಃ ಸ್ಯಾತ್ಪರತ್ರ ಚ ಶುಭಾ ಗತಿಃ ॥೬೨॥

ಈ ಮಹಾತ್ಮರನ್ನು ಸ್ಮರಿಸುವುದರಿಂದ ನನ್ನ ಕಾರ್ಯಗಳಲ್ಲಿ ವಿಘ್ನವುಂಟಾಗದಿರಲಿ; ಪಾಪವುಂಟಾಗದಿರಲಿ; ಶತ್ರುಗಳಿಲ್ಲದಿರಲಿ; ನನಗೆ ಅನುದಿನವೂ ಶಾಶ್ವತವಾದ ವಿಜಯವು ಲಭಿಸಲಿ; ಪರಲೋಕದಲ್ಲಿಯೂ ನನಗೆ ಸದ್ಗತಿಯುಂಟಾಗಲಿ.”

ಗ೬೫ನೆಯ ಅಧ್ಯಾಯವು ಮುಗಿಯಿತು.

೧೬೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭೀಷ್ಮನ ಅನುಮತಿಯನ್ನು ಪಡೆದು ಯುಧಿಷ್ಠಿರನು ಪರಿವಾರದೊಡನೆ ಹಸ್ತಿನೆಗೆ ಹೋದುದು

ಜನಮೇಜಯನು ಪ್ರಶ್ನಿಸುತ್ತಾನೆ:

ಶರತಲ್ಪಗತೇ ಭೀಷ್ಮೇ ಕೌರವಾಣಾಂ ಧುರನ್ಧರೇ।
ಶಯಾನೇ ವೀರಶಯನೇ ಪಾಣ್ಡವೈಃ ಸಮುಪಸ್ಥಿತೇ ॥೧॥

ಯುಧಿಷ್ಠಿರೋ ಮಹಾಪ್ರಾಜ್ಞೋ ಮಮ ಪೂರ್ವಪಿತಾಮಹಃ।
ಧರ್ಮಾಣಾಮಾಗಮಂ ಶ್ರುತ್ವಾ ವಿದಿತ್ವಾ ಸರ್ವಸಂಶಯಾನ್ ॥೨॥

ದಾನಾನಾಂ ಚ ವಿಧಿಂ ಶ್ರುತ್ವಾ ಚ್ಛಿನ್ನಧರ್ಮಾರ್ಥಸಂಶಯಃ।
ಯದನ್ಯದಕರೋದ್ವಿಪ್ರ ತನ್ಮೇ ಶಂಸಿತುಮರ್ಹಸಿ ॥೩॥

"ವಿಪ್ರಶ್ರೇಷ್ಠರೇ! ವೈಶಂಪಾಯನರೇ! ಕೌರವಕುಲಧುರಂಧರನಾದ ಭೀಷ್ಮನು ವೀರರಾದವರಿಗೆ ಮಾತ್ರವೇ ಮಲಗಲು ಯೋಗ್ಯವಾದ ಶರತಲ್ಪದಲ್ಲಿ ಮಲಗಿದ್ದನು. ಪಾಂಡವರು ಅವನ ಸೇವೆಯಲ್ಲಿ ಉಪಸ್ಥಿತ ರಾಗಿದ್ದರು. ನನ್ನ ಪ್ರಪಿತಾಮಹನಾದ ಮಹಾಪ್ರಾಜ್ಞನಾದ ಯುಧಿಷ್ಠಿರನು ಭೀಷ್ಮನ ಮುಖಾರವಿಂದದಿಂದ ಧರ್ಮೋಪದೇಶವನ್ನು ಕೇಳಿದನು. ಅವುಗಳಲ್ಲಿ ತನಗುಂಟಾದ ಸಂಶಯಗಳನ್ನೆಲ್ಲಾ ಪರಿಪ್ರಶ್ನೆಗಳಿಂದ ನಿವಾರಿಸಿಕೊಂಡ ಬಳಿಕ ದಾನಗಳ ವಿಧಿಯನ್ನು ಕೇಳಿದನು. ಧರ್ಮಾರ್ಥಗಳಲ್ಲಿ ಅವನಿಗಿದ್ದ ಸಂಶಯಗಳೆಲ್ಲವನ್ನೂ ಪರಿಹರಿಸಿಕೊಂಡನಂತರ ಮುಂದೇನು ಮಾಡಿದನೆಂಬುದನ್ನು ಹೇಳುವ ಕೃಪೆಮಾಡಿರಿ."

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಧರ್ಮೋಪದೇಶಮಾಡಿದನಂತರ ಭೀಷ್ಮನು ಸುಮ್ಮನಾಗಲಾಗಿ ಮುಹೂರ್ತಪರ್ಯಂತವಾಗಿ ರಾಜರ ಸಮೂಹವು ಪಟದಲ್ಲಿರುವ ಚಿತ್ರದಂತೆ ಸ್ತಬ್ಧವಾಗಿ ಕುಳಿತುಬಿಟ್ಟಿತು. ಮುಹೂರ್ತಕಾಲ ಧ್ಯಾನಪರರಾಗಿದ್ದ ಸತ್ಯವತಿಯ ಮಕ್ಕಳಾದ ವ್ಯಾಸರು ಶರತಲ್ಪದಲ್ಲಿ ಮಲಗಿದ್ದ ಗಂಗಾಪುತ್ರನಾದ ಭೀಷ್ಮನಿಗೆ ಹೇಳಿದರು:

“ನರಶ್ರೇಷ್ಠನೇ! ಕುರುರಾಜನಾದ ಯುಧಿಷ್ಠಿರನೀಗ ಕ್ಷತ್ರಿಯಸಹಜವಾದ ಗುಣವನ್ನು (ತನ್ನ ಸ್ವಾಭಾವಿಕಗುಣವನ್ನು) ಹೊಂದಿರುತ್ತಾನೆ. (ಶಾಂತನೂ-ಸಂದೇಹರಹಿತನೂ ಆಗಿರುವನು.) ತನ್ನ ಎಲ್ಲ ಸಹೋದರರೊಡನೆಯೂ, ಅನುಯಾಯಿಗಳಾದ ರಾಜರೊಡನೆಯೂ, ಧೀಮಂತನಾದ ಶ್ರೀಕೃಷ್ಣನೊಡನೆಯೂ ನಿನ್ನ ಸೇವೆಯನ್ನು ಮಾಡುತ್ತಿದ್ದಾನೆ. ಈಗ ನೀನು ಇವನಿಗೆ ಪಟ್ಟಣಕ್ಕೆ ಹೋಗಲು ಅನುಮತಿಯನ್ನು ದಯಪಾಲಿಸು.”

ಜನಮೇಜಯ! ಪೂಜ್ಯರಾದ ವ್ಯಾಸರು ಹೀಗೆ ಹೇಳಿದನಂತರ ಪೃಥಿವೀಪತಿಯಾದ, ಗಂಗಾಪುತ್ರನಾದ ಭೀಷ್ಮನು ಮಂತ್ರಿಸಹಿತನಾಗಿ ಪಟ್ಟಣಕ್ಕೆ ಹೋಗಲು ಯುಧಿಷ್ಠಿರನಿಗೆ ಅನುಮತಿಯನ್ನಿತ್ತನು. ಶಾಂತನುವಿನ ಮಗನಾದ ಭೀಷ್ಮನು ಮಧುರವಾದ ವಾಣಿಯಿಂದ ಯುಧಿಷ್ಠಿರನಿಗೆ ಹೇಳಿದನು:

ಪ್ರವಿಶಸ್ವ ಪುರೀಂ ರಾಜನ್ವ್ಯೇತು ತೇ ಮಾನಸೋ ಜ್ವರಃ ॥೯॥
ಯಜಸ್ವ ವಿವಿಧೈರ್ಯಜ್ಞೈರ್ಬಹ್ವನ್ನೈಃ ಸ್ವಾಪ್ತದಕ್ಷಿಣೈಃ ।
ಯಯಾತಿರಿವ ರಾಜೇನ್ದ್ರ ಶ್ರದ್ಧಾದಮಪುರಃಸರಃ ॥೧೦॥

“ರಾಜೇಂದ್ರನೇ! ನೀನಿನ್ನು ಪಟ್ಟಣವನ್ನು ಪ್ರವೇಶಿಸು. ನಿನ್ನ ಮನಸ್ಸಿನ ಆತಂಕವು ದೂರವಾಗಲಿ. ನೀನು ರಾಜನಾದ ಯಯಾತಿಯಂತೆ ಶ್ರದ್ಧಾವಂತನಾಗಿ ಜಿತೇಂದ್ರಿಯನಾಗಿ ಅನ್ನಸಮೃದ್ಧಿಯಿಂದಲೂ ದಕ್ಷಿಣಾ ಸಮೃದ್ಧಿಯಿಂದಲೂ ಕೂಡಿರುವ ವಿಧ-ವಿಧವಾದ ಯಜ್ಞಗಳಿಂದ ದೇವತೆಗಳನ್ನು ಆರಾಧಿಸು.

ಕ್ಷತ್ರಧರ್ಮರತಃ ಪಾರ್ಥ ಪಿತೄನ್ದೇವಾಂಶ್ಚ ತರ್ಪಯ ।
ಶ್ರೇಯಸಾ ಯೋಕ್ಷ್ಯಸೇ ಚೈವ ವ್ಯೇತು ತೇ ಮಾನಸೋ ಜ್ವರಃ ॥೧೧॥

ಪಾರ್ಥನೇ! ಕ್ಷತ್ರಿಯಧರ್ಮದಲ್ಲಿಯೇ ನಿರತನಾಗಿರುತ್ತಾ ದೇವತೆಗಳನ್ನೂ, ಪಿತೃಗಳನ್ನೂ ತೃಪ್ತಿಗೊಳಿಸು. ನೀನು ಹೀಗೆ ಮಾಡುವುದರಿಂದ ಶ್ರೇಯಸ್ಸನ್ನು ಹೊಂದುವೆ. ಮಾನಸಿಕವಾದ ನಿನ್ನ ವ್ಯಾಕುಲವು ದೂರವಾಗಲಿ.

ರಞ್ಜಯಸ್ವ ಪ್ರಜಾಃ ಸರ್ವಾಃ ಪ್ರಕೃತೀಃ ಪರಿಸಾನ್ತ್ವಯ ।
ಸುಹೃದಃ ಫಲಸತ್ಕಾರೈರರ್ಚಯಸ್ವ ಯಥಾರ್ಹತಃ ॥೧೨॥

ಸಮಸ್ತಪ್ರಜೆಗಳನ್ನೂ ಧರ್ಮಯುಕ್ತವಾದ ರಾಜ್ಯಾಡಳಿತದ ಮೂಲಕವಾಗಿ ಅನುರಂಜಿಸು. ಮಂತ್ರಿಗಳೇ ಮೊದಲಾದವರನ್ನು ಸಂತೈಸು. ಸುಹೃದರನ್ನು ಯಥೋಚಿತವಾದ ಫಲ-ಸತ್ಕಾರಗಳಿಂದ ಸಮ್ಮಾನಿಸು.

ಅನು ತ್ವಾಂ ತಾತ ಜೀವನ್ತು ಮಿತ್ರಾಣಿ ಸುಹೃದಸ್ತಥಾ ।
ಚೈತ್ಯಸ್ಥಾನೇ ಸ್ಥಿತಂ ವೃಕ್ಷಂ ಫಲವನ್ತಮಿವ ದ್ವಿಜಾಃ ॥೧೩॥

ದೇವಮಂದಿರದ ಬಳಿ ಇರುವ ಫಲಭರಿತವಾದ ವೃಕ್ಷವನ್ನು ಪಕ್ಷಿಗಳು ಆಶ್ರಯಿಸಿರುವಂತೆ–ನಿನ್ನ ಮಿತ್ರರೂ ಮತ್ತು ಸುಹೃದರೂ ನಿನ್ನನ್ನೇ ಅನುಸರಿಸಿ ಜೀವಿಸಲಿ.

ಆಗನ್ತವ್ಯಂ ಚ ಭವತಾ ಸಮಯೇ ಮಮ ಪಾರ್ಥಿವ ।
ವಿನಿವೃತ್ತೇ ದಿನಕರೇ ಪ್ರವೃತ್ತೇ ಚೋತ್ತರಾಯಣೇ ॥೧೪॥

ಪೃಥ್ವೀನಾಥನೇ! ಸೂರ್ಯನು ದಕ್ಷಿಣಾಯನದಿಂದ ಹಿಂದಿರುಗಿ ಉತ್ತರಾಯಣವನ್ನು ಪ್ರವೇಶಿಸುವ ಸಮಯದಲ್ಲಿ ನೀನು ಪುನಃ ನನ್ನ ಸಮೀಪಕ್ಕೆ ಬರಬೇಕು.”

ಜನಮೇಜಯ! ಭೀಷ್ಮನ ಆ ಮಾತಿಗೆ ಯುಧಿಷ್ಠಿರನು ‘ಹಾಗೆಯೇ ಆಗಲಿ’–ಎಂದು ಹೇಳಿ, ಅವನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ಪರಿವಾರದೊಡನೆ ಹಸ್ತಿನಾಪುರಕ್ಕೆ ಪ್ರಯಾಣಮಾಡಿದನು. ಕುರುಶ್ರೇಷ್ಠನಾದ ಯುಧಿಷ್ಠಿರನು ಧೃತರಾಷ್ಟ್ರನನ್ನೂ ಪತಿವ್ರತೆಯಾದ ಗಾಂಧಾರಿಯನ್ನೂ ಮುಂದೆಮಾಡಿಕೊಂಡು ಭೀಷ್ಮನ ಪ್ರವಚನವನ್ನು ಕೇಳಲು ಆಗಮಿಸಿದ್ದ ಋಷಿಗಳು, ಸಹೋದರರು, ಶ್ರೀಕೃಷ್ಣ, ಪಟ್ಟಣಿಗರು, ದೇಶೀಯಜನರು, ಮಂತ್ರಿಗಳು ಮತ್ತು ವೃದ್ಧರು–ಇವರೆಲ್ಲರೊಡನೆ ಹಸ್ತಿನಾಪುರವನ್ನು ಪ್ರವೇಶಿಸಿದನು.”

೧೬೬ನೆಯ ಅಧ್ಯಾಯವು ಮುಗಿಯಿತು.

ಯುಧಿಷ್ಠಿರನು ಭೀಷ್ಮನ ಅಂತ್ಯೇಷ್ಟಿಗೆ ಬೇಕಾದ ಸಾಮಗ್ರಿಗಳನ್ನು ತೆಗೆದುಕೊಂಡು ಭೀಷ್ಮನ ಬಳಿಗೆ ಹೋದುದು:

ಭೀಷ್ಮನು ಶ್ರೀಕೃಷ್ಣನೇ ಮೊದಲಾದವರಿಂದ ದೇಹತ್ಯಾಗಕ್ಕೆ ಅನುಮತಿಯನ್ನು ಪಡೆದು ಧೃತರಾಷ್ಟ್ರ-ಯುಧಿಷ್ಠಿರರಿಗೆ ಕರ್ತವ್ಯದ ವಿಷಯವಾಗಿ ಉಪದೇಶಿಸಿದುದು.

ವೈಶಂಪಾಯನರು ಹೇಳುತ್ತಾರೆ:

ತತಃ ಕುನ್ತೀಸುತೋ ರಾಜಾ ಪೌರಜಾನಪದಂ ಜನಮ್ ।
ಪೂಜಯಿತ್ವಾ ಯಥಾನ್ಯಾಯಮನುಜಜ್ಞೇ ಗೃಹಾನ್ಪ್ರತಿ ॥೧॥

"ಜನಮೇಜಯ! ಹಸ್ತಿನಾಪುರಕ್ಕೆ ಹೋದನಂತರ ಕುಂತೀಪುತ್ರನಾದ ಯುಧಿಷ್ಠಿರನು ಪಟ್ಟಣಿಗರನ್ನೂ, ದೇಶೀಯರನ್ನೂ ಯಥೋಚಿತವಾಗಿ ಸಮ್ಮಾನಿಸಿ ಅವರೆಲ್ಲರಿಗೂ ತಮ್ಮ-ತಮ್ಮ ಮನೆಗಳಿಗೆ ಹೋಗಲು ಅನುಮತಿಯನ್ನಿತ್ತನು.

ಬಳಿಕ ಪತಿಗಳನ್ನೂ, ಪುತ್ರರನ್ನೂ ಕಳೆದುಕೊಂಡಿದ್ದ ಸ್ತ್ರೀಯರೆಲ್ಲರಿಗೂ ಅಪಾರವಾದ ಐಶ್ವರ್ಯವನ್ನು ದಾನಮಾಡಿ ಸಂತೈಸಿದನು. ಮಹಾಜ್ಞಾನಿಯಾದ, ಧರ್ಮಾತ್ಮರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ರಾಜ್ಯವನ್ನು ಪಡೆದು ಅಭಿಷಿಕ್ತನಾದನಂತರ ಮಂತ್ರಿಗಳೇ ಮೊದಲಾದ ಸಮಸ್ತಪ್ರಕೃತಿಗಳನ್ನೂ ಅವರವರ ಸ್ಥಾನದಲ್ಲಿ ನಿಯೋಜಿಸಿ, ವೇದವಿದರಾದ ಮತ್ತು ಗುಣವಂತರಾದ ಬ್ರಾಹ್ಮಣರಿಂದ ಶ್ರೇಷ್ಠವಾದ ಆಶೀರ್ವಾದಗಳನ್ನು ಪಡೆದನು. ಶ್ರೀಮಂತನಾದ, ಪುರುಷಶ್ರೇಷ್ಠನಾದ ಯುಧಿಷ್ಠಿರನು ಉತ್ತಮವಾದ ಹಸ್ತಿನಾಪುರದಲ್ಲಿ ಐವತ್ತು ರಾತ್ರಿಗಳ ಪರ್ಯಂತವಾಗಿ ವಾಸವಾಗಿದ್ದು ಅನಂತರ ಕೌರವಶ್ರೇಷ್ಠನಾದ ಮತ್ತು ಪುರುಷಸಿಂಹನಾದ ಭೀಷ್ಮನನ್ನು ಸ್ಮರಿಸಿಕೊಂಡನು. ಸೂರ್ಯನು ದಕ್ಷಿಣಾಯನದಿಂದ ಹಿಂದಿರುಗಿ ಉತ್ತರಾಯಣವನ್ನು ಪ್ರವೇಶಿಸುತ್ತಿರುವುದನ್ನು ನೋಡಿ ಯುಧಿಷ್ಠಿರನು ಯಾಜಕರಿಂದ ಪರಿವೃತನಾಗಿ ಹಸ್ತಿನಾಪುರದಿಂದ ಭೀಷ್ಮನಿದ್ದೆಡೆಗೆ ಪ್ರಯಾಣಮಾಡಿದನು. ಅದಕ್ಕೆ ಹಿಂದೆಯೇ ಯುಧಿಷ್ಠಿರನು ಭೀಷ್ಮನ

ದಹನಸಂಸ್ಕಾರದ ಸಲುವಾಗಿ ತುಪ್ಪ, ಮಾಲೆಗಳು, ಗಂಧ, ಪಟ್ಟವಸ್ತ್ರಗಳು, ಚಂದನ, ಅಗುರು, ಕೃಷ್ಣಚಂದನ ಶ್ರೇಷ್ಠಪುರುಷರು ಧರಿಸಲು ಯೋಗ್ಯವಾದ ಮಾಲೆಗಳು ವಿಧ-ವಿಧವಾದ ರತ್ನಗಳು–ಇವೆಲ್ಲವನ್ನೂ ಭೀಷ್ಮನಿದ್ದೆಡೆಗೆ ಕಳುಹಿಸಿಕೊಟ್ಟಿದ್ದನು. ಬುದ್ಧಿವಂತನಾದ ಯುಧಿಷ್ಠಿರನು ಧೃತರಾಷ್ಟ್ರರಾಜನನ್ನೂ, ಯಶಸ್ವಿನಿಯಾದ ಗಾಂಧಾರೀದೇವಿಯನ್ನೂ, ತಾಯಿಯಾದ ಕುಂತಿಯನ್ನೂ, ಪುರುಷಶ್ರೇಷ್ಠರಾದ ಅನುಜರನ್ನೂ ಮುಂದೆಮಾಡಿಕೊಂಡು–ಜನಾರ್ದನ, ಧೀಮಂತನಾದ ವಿದುರ, ಯುಯುತ್ಸು ಮತ್ತು ಸಾತ್ಯಕಿ–ಇವರನ್ನೂ ತನ್ನ ಜೊತೆಯಲ್ಲಿ ಕರೆದುಕೊಂಡು ಭೀಷ್ಮನಿದ್ದೆಡೆಗೆ ಹೊರಟನು. ಆ ಸಮಯದಲ್ಲಿ ಮಹಾತೇಜಸ್ವಿಯಾದ ಯುಧಿಷ್ಠಿರನು ರಾಜನ ಉಪಭೋಗಕ್ಕೆ ಯೋಗ್ಯವಾದ ಛತ್ರ-ಚಾಮರಾದಿ ವೈಭವಗಳಿಂದ ಕೂಡಿದವನಾಗಿ ವಂದಿ-ಮಾಗಧರಿಂದ ಸ್ತುತಿಸಲ್ಪಡುತ್ತಾ ಭೀಷ್ಮನಿಗೆ ಸಂಬಂಧಿಸಿದ ಮೂರು ಅಗ್ನಿಗಳ ಹಿಂದೆ ಹೋಗುತ್ತಿದ್ದನು.

ದೇವರಾಜನಾದ ಇಂದ್ರನು ಅಮರಾವತಿಯಿಂದ ಹೊರಡುವಂತೆ–ಯುಧಿಷ್ಠಿರನು ಹಸ್ತಿನಾಪುರದಿಂದ ಹೊರಟು ಸ್ವಲ್ಪಹೊತ್ತಿನಲ್ಲಿಯೇ ಕುರುಕ್ಷೇತ್ರದಲ್ಲಿದ್ದ ಭೀಷ್ಮನ ಸಮೀಪವನ್ನು ಸೇರಿದನು. ಆ ಸಮಯದಲ್ಲಿ ಪರಾಶರರ ಮಕ್ಕಳಾದ, ಧೀಮಂತರಾದ ವ್ಯಾಸರೂ, ನಾರದರೂ, ಅಸಿತ-ದೇವಲರೂ, ಶರತಲ್ಪದಲ್ಲಿ ಮಲಗಿದ್ದ ಭೀಷ್ಮನ ಸಮೀಪದಲ್ಲಿದ್ದರು. ನಾನಾದೇಶಗಳಿಂದ ಬಂದಿದ್ದ ಅನೇಕಾನೇಕ ರಾಜರಲ್ಲಿ ಅವಸಾನಹೊಂದಿದೇ ಉಳಿದಿದ್ದ ರಾಜರು ಭೀಷ್ಮನ ರಕ್ಷಣೆಯ ಭಾರವನ್ನು ವಹಿಸಿಕೊಂಡು ಸುತ್ತಲೂ ನಿಂತು ಅವನನ್ನು ರಕ್ಷಿಸುತ್ತಿದ್ದರು. ವೀರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನನ್ನು ನೋಡಿದಕೂಡಲೇ ಯುಧಿಷ್ಠಿರನು ತಮ್ಮಂದಿರೊಡನೆ ರಥದಿಂದಿಳಿದು ಸಮೀಪಕ್ಕೆ ಹೋಗಿ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಬಳಿಕ ವ್ಯಾಸರೇ ಮೊದಲಾದ ವಿಪ್ರರಿಗೂ ನಮಸ್ಕರಿಸಿದನು. ಪ್ರತಿಯಾಗಿ ಅವರೂ ಧರ್ಮರಾಜನನ್ನು ಅಭಿನಂದಿಸಿದರು. ಬಳಿಕ ಧರ್ಮರಾಜನು ಬ್ರಹ್ಮಸದೃಶರಾಗಿದ್ದ ಋತ್ವಿಜರೊಡನೆಯೂ ಅನುಜರೊಡನೆಯೂ ಕೂಡಿ ಋಷಿಗಳಿಂದ ಪರಿವೃತನಾಗಿದ್ದ ಮತ್ತು ಶರತಲ್ಪದಲ್ಲಿ ಮಲಗಿದ್ದ ಗಂಗೆಯ ಮಗನಾದ ಭೀಷ್ಮನಿಗೆ ಹೇಳಿದನು:

"ಗಂಗಾಪುತ್ರನೇ! ನರೇಶ್ವರನೇ! ಮಹಾಬಾಹುವೇ! ಯುಧಿಷ್ಠಿರ

ನಾದ ನಾನು ನಿನಗೆ ನಮಸ್ಕಾರಮಾಡುತ್ತೇನೆ. ನನ್ನ ಮಾತು ನಿನಗೆ ಕೇಳಿಸುತ್ತಿರುವುದಾದರೆ–ಈಗ ನಾನೇನು ಮಾಡಬೇಕೆಂಬುದನ್ನು ಆಜ್ಞಾಪಿಸು.

ನೀನು ಹೇಳಿದ್ದ ಸಮಯಕ್ಕೆ ಸರಿಯಾಗಿ ನಿನ್ನ ಅಗ್ನಿಗಳನ್ನು ತೆಗೆದುಕೊಂಡು ಆಚಾರ್ಯರನ್ನೂ, ಬ್ರಾಹ್ಮಣರನ್ನೂ, ಋತ್ವಿಜರನ್ನೂ, ಅನುಜರನ್ನೂ ಕರೆದುಕೊಂಡು ಬಂದಿರುತ್ತೇನೆ.

ಮಹಾತೇಜಸ್ವಿಯಾದ, ಜನೇಶ್ವರನಾದ ನಿನ್ನ ಮಗನಾದ ಧೃತರಾಷ್ಟ್ರನೂ ಮಂತ್ರಿಗಳ ಸಂಗಡ ಬಂದಿರುವನು. ವೀರ್ಯವಂತನಾದ ವಾಸುದೇವನೂ ಬಂದಿರುವನು.

ಯುದ್ಧದಲ್ಲಿ ಅಳಿದುಳಿದ ರಾಜರೂ ಕುರುಜಾಂಗಲದೇಶದ ಎಲ್ಲ ಪ್ರಜೆಗಳೂ ಆಗಮಿಸಿದ್ದಾರೆ. ನರಶ್ರೇಷ್ಠನೇ! ಕಣ್ಣುಗಳನ್ನು ತೆರೆದು ಇವರೆಲ್ಲರನ್ನೂ ನೋಡು. ನಿನ್ನ ಆಜ್ಞಾನುಸಾರವಾಗಿ ನಾನು ಮಾಡಬೇಕಾದ ಕರ್ತವ್ಯವೇನಿದ್ದಿತೋ–ಅದೆಲ್ಲವನ್ನೂ ಮಾಡಿದ್ದೇನೆ. ಈ ಸಮಯಕ್ಕೆ ಬೇಕಾಗುವ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿಕೊಂಡು ಬಂದಿರುತ್ತೇನೆ. ನೀನು ಹೇಳಿದ್ದಂತೆಯೇ ಎಲ್ಲವನ್ನೂ ಸಿದ್ಧಮಾಡಲಾಗಿದೆ."

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಕುಂತಿಯ ಮಗನಾದ ಯುಧಿಷ್ಠಿರನು ಹೀಗೆ ಹೇಳಿದನಂತರ ಗಂಗಾಪುತ್ರನಾದ ಭೀಷ್ಮನು ಕಣ್ಣುಗಳನ್ನು ತೆರೆದು ತನ್ನ ಸುತ್ತಲೂ ನಿಂತಿದ್ದ ಭಾರತರೆಲ್ಲರನ್ನೂ ನೋಡಿದನು. ಬಳಿಕ ಪ್ರವಚನಕುಶಲನಾದ ಬಲಿಷ್ಠನಾದ ಭೀಷ್ಮನು ತನ್ನ ನೀಳವಾದ ತೋಳನ್ನು ಮೇಲೆತ್ತಿ ಮೇಘದ ಶಬ್ದಕ್ಕೆ ಸಮಾನವಾದ ಗಂಭೀರವಾದ ಸ್ವರದಿಂದ ಕೂಡಿದ ಸಮಯೋಚಿತವಾದ ಈ ಮಾತನ್ನು ಹೇಳಿದನು:

ದಿಷ್ಟ್ಯಾ ಪ್ರಾಪ್ತೋಽಸಿ ಕೌನ್ತೇಯ ಸಹಮಾತ್ಯೋ ಯುಧಿಷ್ಠಿರ ।
ಪರಿವೃತ್ತೋ ಹಿ ಭಗವಾನ್ಸಹಸ್ರಾಂಶುರ್ದಿವಾಕರಃ ॥೨೬॥

"ಕೌಂತೇಯನೇ! ಯುಧಿಷ್ಠಿರ! ಸೌಭಾಗ್ಯವಶದಿಂದ ನೀನು ಅಮಾತ್ಯರ ಸಹಿತವಾಗಿ ಇಲ್ಲಿಗೆ ಆಗಮಿಸಿರುವೆ. ಸಾವಿರ ಕಿರಣಗಳುಳ್ಳ

ಭಗವಾನ್ ದಿವಾಕರನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ತಿರುಗಿದ್ದಾನೆ.

ಅಷ್ಟಪಞ್ಚಾಶತಂ ರಾತ್ರ್ಯಃ ಶಯಾನಸ್ಯಾದ್ಯ ಮೇ ಗತಾಃ ।
ಶರೇಷು ನಿಶಿತಾಗ್ರೇಷು ಯಥಾ ವರ್ಷಶತಂ ತಥಾ ॥೨೮॥

ತೀಕ್ಷ್ಣವಾದ ಅಗ್ರಭಾಗಗಳುಳ್ಳ ಈ ಶರತಲ್ಪದ ಮೇಲೆ ಮಲಗಿರುವ ನನಗೆ ಇಂದಿಗೆ ಐವತ್ತೆಂಟು ರಾತ್ರಿಗಳು ಕಳೆದಿವೆ. ಆದರೆ ಈ ಐವತ್ತೆಂಟು ರಾತ್ರಿಗಳನ್ನೂ ಕಳೆದಿರುವುದು ನೂರು ವರ್ಷಗಳನ್ನು ಕಳೆದಂತಾಗಿದೆ.

ಮಾಘೋಽಯಂ ಸಮನುಪ್ರಾಪ್ತೋ ಮಾಸಃ ಸೌಮ್ಯೋ ಯುಧಿಷ್ಠಿರ ।
ತ್ರಿಭಾಗಶೇಷಃ ಪಕ್ಷೋಽಯಂ ಶುಕ್ಲೋ ಭವಿತುಮರ್ಹತಿ ॥೨೯॥

ಯುಧಿಷ್ಠಿರ! ಈ ಸಮಯವು ಚಾಂದ್ರಮಾನಾನುಸಾರವಾಗಿ ಮಾಘಮಾಸವಾಗಿದೆ. ಈ ಮಾಸದಲ್ಲಿ ಮೂರು ಭಾಗಗಳು ಉಳಿದಿರುವುದರಿಂದ ಇದು ಶುಕ್ಲಪಕ್ಷವಾಗಿರಬೇಕು. (ಮಾಸದಲ್ಲಿ ನಾಲ್ಕನೆಯ ಒಂದು ಭಾಗವು ಕಳೆದಿರುವುದರಿಂದ ಶುಕ್ಲಪಕ್ಷದ ಅಷ್ಟಮಿಯಾಗಿರಬೇಕು.)"

ಜನಮೇಜಯ! ಭೀಷ್ಮನು ಧರ್ಮಪುತ್ರನಾದ ಯುಧಿಷ್ಠಿರನಿಗೆ ಹೀಗೆ ಹೇಳಿ, ಧೃತರಾಷ್ಟ್ರನನ್ನು ಹತ್ತಿರಕ್ಕೆ ಕರೆದು ಸಮಯೋಚಿತವಾದ ಈ ಮಾತುಗಳನ್ನು ಹೇಳಿದನು:

" ಧೃತರಾಷ್ಟ್ರರಾಜನೇ! ನೀನು ಧರ್ಮವನ್ನು ಚೆನ್ನಾಗಿ ತಿಳಿದಿರುವೆ. ಅರ್ಥಶಾಸ್ತ್ರದ ಸಂಶಯಗಳನ್ನು ಚೆನ್ನಾಗಿ ನಿರ್ಣಯಿಸಿಕೊಂಡಿರುವೆ. ಯಾವುದೇ ಶಾಸ್ತ್ರದ ವಿಷಯದಲ್ಲಿಯೂ ಈಗ ನಿನಗೆ ಸಂಶಯವೆಂಬುದೇ ಇಲ್ಲ. ಅನೇಕ ಶಾಸ್ತ್ರಗಳನ್ನು ತಿಳಿದಿರುವ ಅನೇಕ ಬ್ರಾಹ್ಮಣರನ್ನು ನೀನು ಸೇವಿಸಿರುವೆ. ನಾಲ್ಕು ವೇದಗಳನ್ನೂ ಎಲ್ಲ ಶಾಸ್ತ್ರಗಳನ್ನೂ ಮತ್ತು ಎಲ್ಲ ಧರ್ಮಗಳನ್ನೂ ಸಂಪೂರ್ಣವಾಗಿ ತಿಳಿದುಕೊಂಡಿರುವೆ. ಮಕ್ಕಳ ವಿಷಯವಾಗಿ ನೀನು ಶೋಕಪಡಕೂಡದು. ಅದು ಹೇಗೆ ಆಗಬೇಕಾಗಿದ್ದಿತೋ–ಹಾಗೆಯೇ ಆಗಿಹೋಯಿತು. ಮೇಲಾಗಿ ನೀನು ದೇವರಹಸ್ಯ ವನ್ನು ಕೃಷ್ಣದ್ವೈಪಾಯನರಿಂದಲೂ ಕೇಳಿ ತಿಳಿದುಕೊಂಡಿರುವೆ. ಯುಧಿಷ್ಠಿರಾದಿಗಳು ಪಾಂಡುವಿಗೆ ಹೇಗೆ ಮಕ್ಕಳೋ ಹಾಗೆಯೇ ನನಗೂ

ಧರ್ಮದ ದೃಷ್ಟಿಯಿಂದ ಮಕ್ಕಳಾಗಿರುತ್ತಾರೆ. ಗುರುಜನರ ಶುಶ್ರೂಷೆಯಲ್ಲಿ ನಿರತರಾದ ಅವರನ್ನು ನೀನು ಧರ್ಮದಲ್ಲಿಯೇ ಸ್ಥಿರನಾಗಿದ್ದು ನಿನ್ನ ಮಕ್ಕಳಂತೆಯೇ ಪರಿಪಾಲಿಸು. ಶುದ್ಧಾತ್ಮನಾದ ಧರ್ಮರಾಜನು ನಿರಂತರವಾಗಿ ನಿನ್ನ ಆಜ್ಞಾನುಧಾರಕನಾಗಿಯೇ ಇರುವನು. ಇವನನ್ನು ಕ್ರೂರನಲ್ಲದವನೆಂದೂ (ದಯಾಪರನೆಂದೂ) ಗುರುವತ್ಸಲನೆಂದೂ ತಿಳಿದಿರುತ್ತೇನೆ. ನಿನ್ನ ಮಕ್ಕಳೆಲ್ಲರೂ ದುರಾತ್ಮರೂ, ಕ್ರೋಧ-ಲೋಭಗಳನ್ನೇ ಆಶ್ರಯಿಸಿದವರೂ, ಅಸೂಯಾಪರರೂ, ದುರಾಚಾರಿಗಳೂ ಆಗಿದ್ದರು. ಅಂತಹವರ ವಿಷಯದಲ್ಲಿ ನೀನು ಶೋಕಿಸುವುದು ಯೋಗ್ಯವಲ್ಲ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಭೀಷ್ಮನು ವಿದ್ವಾಂಸನಾದ ಧೃತರಾಷ್ಟ್ರನಿಗೆ ಇಷ್ಟುಮಾತ್ರ ಹೇಳಿ ಮಹಾಬಾಹುವಾದ ವಾಸುದೇವನೊಡನೆ ಮಾತನಾಡಿದನು:

ಭಗವನ್ದೇವದೇವೇಶ ಸುರಾಸುರನಮಸ್ಕೃತ ।
ತ್ರಿವಿಕ್ರಮ ನಮಸ್ತುಭ್ಯಂ ಶಙ್ಖಚಕ್ರಗದಾಧರ ॥೩೭॥

"ಪೂಜ್ಯನೇ! ದೇವತೆಗಳ ದೇವನಾದ ಇಂದ್ರನಿಗೂ ಈಶನಾದವನೇ! ಸುರರಿಂದಲೂ ಅಸುರರಿಂದಲೂ ನಮಸ್ಕರಿಸಲ್ಪಡುವವನೇ! ತ್ರಿವಿಕ್ರಮನೇ! ಶಂಖ-ಚಕ್ರ-ಗದಾಧರನೇ! ನಿನಗೆ ನಮಸ್ಕಾರ ಮಾಡುತ್ತೇನೆ.

ವಾಸುದೇವೋ ಹಿರಣ್ಯಾತ್ಮಾ ಪುರುಷಃ ಸವಿತಾ ವಿರಾಟ್ ।
ಜೀವಭೂತೋಽನುರೂಪಸ್ತ್ವಂ ಪರಮಾತ್ಮಾ ಸನಾತನಃ ॥೩೮॥

ನೀನೇ ವಾಸುದೇವನು; ಹಿರಣ್ಯಾತ್ಮನು; ಪರಮಪುರುಷನು; ಸವಿತೃವು; ವಿರಾಟ್ ಸ್ವರೂಪನು; ಅನುರೂಪನು; ಆತ್ಮನು; ಸನಾತನನಾದ ಪರಮಾತ್ಮನೂ ನೀನೇ ಆಗಿರುವೆ.

ತ್ರಾಯಸ್ವ ಪುಣ್ಡರೀಕಾಕ್ಷ ಪುರುಷೋತ್ತಮ ನಿತ್ಯಶಃ ।
ಅನುಜಾನೀಹಿ ಮಾಂ ಕೃಷ್ಣ ವೈಕುಣ್ಠ ಪುರುಷೋತ್ತಮ ॥೩೯॥

ಪುಂಡರೀಕಾಕ್ಷನೇ! ಪುರುಷೋತ್ತಮನೇ! ವೈಕುಂಠನೇ! ನಿರಂತರವಾಗಿ ನನ್ನನ್ನು ಕಾಪಾಡು. ಕೃಷ್ಣನೇ! ಪರಲೋಕಕ್ಕೆ ಹೋಗಲು ಅನುಜ್ಞೆಯನ್ನು ದಯಪಾಲಿಸು.

ಯಾವ ಪಾಂಡವರಿಗೆ ನೀನು ಆಶ್ರಯನಾಗಿರುವೆಯೋ–ಅವರನ್ನು ನೀನು ಸರ್ವಕಾಲದಲ್ಲಿಯೂ ರಕ್ಷಿಸಬೇಕು. ದುರ್ಬುದ್ಧಿಯವನಾದ, ಮೂರ್ಖನಾದ ದುರ್ಯೋಧನನಿಗೆ ನಾನು ಬಾರಿ-ಬಾರಿಗೂ ಹೇಳುತ್ತಲೇ ಇದ್ದೆನು.

'ದುರ್ಯೋಧನ! **ಯತಃ ಕೃಷ್ಣಸ್ತತೋ ಧರ್ಮಃ ಯತೋ ಧರ್ಮಸ್ತತೋ ಜಯಃ ।** ಎಲ್ಲಿ ಕೃಷ್ಣನಿರುವನೋ ಅಲ್ಲಿ ಧರ್ಮವಿರುತ್ತದೆ. (ಶ್ರೀಕೃಷ್ಣನೇ ಧರ್ಮಸ್ವರೂಪನು.) ಎಲ್ಲಿ ಧರ್ಮವಿರುವುದೋ ಅಲ್ಲಿ ಜಯವಿರುತ್ತದೆ. ಪೂಜ್ಯನಾದ ವಾಸುದೇವನ ಸಹಾಯವನ್ನು ಪಡೆದು ಪಾಂಡವರೊಡನೆ ಸಂಧಿಯನ್ನು ಮಾಡಿಕೋ. ಇದು ಸಂಧಿಯನ್ನು ಮಾಡಿಕೊಳ್ಳಲು ಶ್ರೇಷ್ಠವಾದ ಸಮಯವಾಗಿದೆ'–ಎಂಬುದಾಗಿ ಪುನಃ ಪುನಃ ಹೇಳುತ್ತಲೇ ಇದ್ದೆನು. ಆದರೆ ಮೂಢನಾದ, ಅತ್ಯಂತಮಂದಬುದ್ಧಿಯವನಾದ ದುರ್ಯೋಧನನು ನನ್ನ ಮಾತನ್ನು ಕೇಳಲೇ ಇಲ್ಲ. ಪೃಥ್ವಿಯಲ್ಲಿದ್ದ ವೀರರನ್ನು ನಾಶಗೊಳಿಸಿ ತಾನೂ ನಿಧನಹೊಂದಿದನು.

ತ್ವಾಂ ತು ಜಾನಾಮ್ಯಹಂ ದೇವಂ ಪುರಾಣಮೃಷಿಸತ್ತಮಮ್ ।
ನರೇಣ ಸಹಿತಂ ದೇವ ಬದರ್ಯಾಂ ಸುಚಿರೋಷಿತಮ್ ॥೪೩॥

ವಾಸುದೇವನೇ! ದೇವನಾದ ನಿನ್ನನ್ನು, ಬದರಿಯಲ್ಲಿ ಬಹುಕಾಲ ನರನೊಡನೆ ವಾಸವಾಗಿದ್ದ, ಮುನಿಯಾದ ನಾರಾಯಣನೆಂಬುದನ್ನು ನಾನು ತಿಳಿದಿರುತ್ತೇನೆ.

ತಥಾ ಮೇ ನಾರದಃ ಪ್ರಾಹ ವ್ಯಾಸಶ್ಚ ಸುಮಹಾತಪಾಃ ।
ನರನಾರಾಯಣಾವೇತೌ ಸಮ್ಭೂತೌ ಮನುಜೇಷ್ವಿತಿ ॥೪೪॥

ಪ್ರಾಚೀನಮಹರ್ಷಿಗಳಾದ, ಬದರಿಕಾಶ್ರಮದಲ್ಲಿ ವಾಸಮಾಡುತ್ತಿದ್ದ ನರ-ನಾರಾಯಣರೇ ಕೃಷ್ಣಾರ್ಜುನರಾಗಿ ಮನುಷ್ಯಜನ್ಮದಲ್ಲಿ ಅವತರಿಸಿರುವರೆಂದು ನಾರದರೂ ಮಹಾತಪಸ್ವಿಗಳಾದ ವ್ಯಾಸರೂ ನನಗೆ ಹೇಳಿರುವರು.

ಕೃಷ್ಣ! ಅಂತಹ ನೀನು ನನಗೀಗ ಅನುಜ್ಞೆಯನ್ನು ನೀಡು. ನಾನೀಗ

ನನ್ನ ಈ ದೇಹವನ್ನು ಪರಿತ್ಯಜಿಸುತ್ತೇನೆ. ನಿನ್ನ ಅನುಮತಿಯನ್ನು ಪಡೆದು ನಾನು ಈ ದೇಹವನ್ನು ಪರಿತ್ಯಜಿಸಿದೆನಾದರೆ ನಿಶ್ಚಯವಾಗಿಯೂ ಶ್ರೇಷ್ಠವಾದ ಗತಿಯನ್ನು ಹೊಂದುವೆನು."

ಶ್ರೀಕೃಷ್ಣನು ಹೇಳುತ್ತಾನೆ:

ಅನುಜಾನಾಮಿ ಭೀಷ್ಮ ತ್ವಾಂ ವಸೂನ್ಪ್ರಾಪ್ನುಹಿ ಪಾರ್ಥಿವ।
ನ ತೇಽಸ್ತಿ ವೃಜಿನಂ ಕಿಂಚಿದಿಹಲೋಕೇ ಮಹಾದ್ಯುತೇ ॥೪೬॥

"ಮಹಾದ್ಯುತಿಮಂತನಾದ ಭೀಷ್ಮನೇ! ನಿನಗೆ ದೇಹಪರಿತ್ಯಾಗಮಾಡಲು ಸಂತೋಷವಾಗಿ ಅನುಜ್ಞೆಯನ್ನು ನೀಡುವೆನು. ನೀನು ಈ ದೇಹವನ್ನು ತ್ಯಾಗಮಾಡಿದನಂತರ ವಸುಗಳನ್ನು ಸೇರುವೆ. ನಿನಗೆ ಈ ಲೋಕದಲ್ಲಿ ಅಣುಮಾತ್ರವಾದ ಪಾಪವೂ ಉಂಟಾಗಿರುವುದಿಲ್ಲ.

ಪಿತೃಭಕ್ತೋಽಸಿ ರಾಜರ್ಷೇ ಮಾರ್ಕಣ್ಡೇಯ ಇವಾಪರಃ।
ತೇನ ಮೃತ್ಯುಸ್ತವ ವಶೇ ಸ್ಥಿತೋ ಭೃತ್ಯ ಇವಾನತಃ ॥೪೭॥

ರಾಜರ್ಷಿಯೇ! ನೀನೂ ಮಾರ್ಕಣ್ಡೇಯನಂತೆ ಪಿತೃಭಕ್ತನಾಗಿರುವೆ. ಆದುದರಿಂದಲೇ ಮೃತ್ಯುವು ವಿನೀತನಾದ ಸೇವಕನಂತೆ ನಿನ್ನ ವಶದಲ್ಲಿದೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಶ್ರೀಕೃಷ್ಣನು ಹೀಗೆ ಹೇಳಿದನಂತರ ಗಂಗಾಪುತ್ರನಾದ ಭೀಷ್ಮನು ಪಾಂಡವರನ್ನೂ ಧೃತರಾಷ್ಟ್ರಪ್ರಮುಖರಾದ ಬಂಧುಗಳನ್ನೂ ಮತ್ತು ಎಲ್ಲ ಸುಹೃದರನ್ನೂ ಉದ್ದೇಶಿಸಿ ಹೇಳಿದನು:

ಪ್ರಾಣಾನುತ್ಸ್ರಷ್ಟುಮಿಚ್ಛಾಮಿ ತತ್ರಾನುಜ್ಞಾತುಮರ್ಹಥ।
ಸತ್ಯೇಷು ಯತಿತವ್ಯಂ ವಃ ಸತ್ಯಂ ಹಿ ಪರಮಂ ಬಲಮ್ ॥೪೮॥

"ಪ್ರಿಯಬಂಧುಗಳೇ! ನಾನೀಗ ಪ್ರಾಣಪರಿತ್ಯಾಗಮಾಡಲು ಬಯಸಿದ್ದೇನೆ. ನೀವೆಲ್ಲರೂ ಅನುಜ್ಞೆಯನ್ನು ನೀಡುವುದು ಯೋಗ್ಯವಾಗಿದೆ. ನೀವು ಯಾವಾಗಲೂ ಸತ್ಯವನ್ನು ಪಾಲಿಸಲು ಪ್ರಯತ್ನಿಸಬೇಕು. ಏಕೆಂದರೆ ಸತ್ಯವೇ ಪರಮಶ್ರೇಷ್ಠವಾದ ಬಲವು.

ಆನೃಶಂಸ್ಯಪರೈರ್ಭಾವ್ಯಂ ಸದೈವ ನಿಯತಾತ್ಮಭಿಃ ।
ಬ್ರಹ್ಮಣ್ಯೈರ್ಧರ್ಮಶೀಲೈಶ್ಚ ತಪೋನಿತ್ಯೈಶ್ಚ ಭಾರತಾಃ ॥೫೦॥

ಭಾರತರೇ! ನೀವು ಎಲ್ಲರ ವಿಷಯದಲ್ಲಿಯೂ ದಯಾಪೂರ್ಣರಾಗಿರಬೇಕು. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರಬೇಕು. ಬ್ರಾಹ್ಮಣಭಕ್ತರಾಗಿರಬೇಕು. ಧರ್ಮನಿಷ್ಠರಾಗಿರಬೇಕು ಮತ್ತು ನಿತ್ಯತಪಸ್ವಿಗಳಾಗಿರಬೇಕು. ”

ಜನಮೇಜಯ! ಭೀಷ್ಮನು ಎಲ್ಲ ಸುಹೃದರಿಗೂ ಹೀಗೆ ಹೇಳಿ ಅವರೆಲ್ಲರನ್ನೂ ಆಲಿಂಗನೆಮಾಡಿಕೊಂಡು ಪುನಃ ಧೀಮಂತನಾದ ಯುಧಿಷ್ಠಿರನಿಗೆ ಈ ಮಾತನ್ನು ಹೇಳಿದನು:

ಬ್ರಾಹ್ಮಣಾಶ್ಚೈವ ತೇ ನಿತ್ಯಂ ಪ್ರಾಜ್ಞಾಶ್ಚೈವ ವಿಶೇಷತಃ ।
ಆಚಾರ್ಯಾ ಋತ್ವಿಜಶ್ಚೈವ ಪೂಜನೀಯಾ ಜನಾಧಿಪ ॥೫೧॥

“ಜನೇಶ್ವರನೇ! ಬ್ರಾಹ್ಮಣರನ್ನೂ ಅದರಲ್ಲಿಯೂ ವಿಶೇಷವಾಗಿ ಪ್ರಾಜ್ಞರಾದ ಬ್ರಾಹ್ಮಣರನ್ನೂ, ಆಚಾರ್ಯರನ್ನೂ, ಋತ್ವಿಜರನ್ನೂ ನಿತ್ಯವೂ ಪೂಜಿಸಿ ಗೌರವಿಸುತ್ತಿರಬೇಕು.”

೧೬೭ನೆಯ ಅಧ್ಯಾಯವು ಮುಗಿಯಿತು.

೧೬೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭೀಷ್ಮನ ದೇಹತ್ಯಾಗ: ಧೃತರಾಷ್ಟ್ರನೇ ಮೊದಲಾದವರಿಂದ ಅವನ ದೇಹಸಂಸ್ಕಾರ: ಕೌರವರಿಂದ ಗಂಗಾನದಿಯಲ್ಲಿ ಭೀಷ್ಮನಿಗೆ ಜಲಪ್ರದಾನ: ಪುತ್ರನ ಮರಣಕ್ಕಾಗಿ ಗಂಗೆಯ ಶೋಕ: ಶ್ರೀಕೃಷ್ಣನಿಂದ ಸಮಾಧಾನ

ವೈಶಂಪಾಯನರು ಹೇಳುತ್ತಾರೆ:

ಏವಮುಕ್ತ್ವಾ ಕುರೂನ್ಸರ್ವಾನ್ಭೀಷ್ಮಃ ಶಾನ್ತನವಸ್ತದಾ ।
ತೂಷ್ಣೀಂ ಬಭೂವ ಕೌರವ್ಯಃ ಸ ಮುಹೂರ್ತಮರಿಂದಮ ॥೧॥

ಶತ್ರುದಮನನೇ! ಜನಮೇಜಯ! ಶಾಂತನುವಿನ ಮಗನಾದ

ಕುರುಕುಲಾವತಂಸನಾದ ಭೀಷ್ಮನು ಎಲ್ಲ ಕುರುಗಳೊಡನೆ ಹೀಗೆ ಹೇಳಿ ಮಹೂರ್ತಕಾಲ ಸುಮ್ಮನಿದ್ದನು.

ಧಾರಯಾಮಾಸ ಚಾತ್ಮಾನಂ ಧಾರಣಾಸು ಯಥಾಕ್ರಮಮ್ ।
ತಸ್ಯೋರ್ಧ್ವಮಗಮನ್ಪ್ರಾಣಾಃ ಸಂನಿರುದ್ಧಾ ಮಹಾತ್ಮನಃ ॥೨॥

ಬಳಿಕ ಭೀಷ್ಮನು ಮನಸ್ಸಿನಿಂದ ಯುಕ್ತವಾದ ಪ್ರಾಣವಾಯುವನ್ನು ಅನುಕ್ರಮವಾಗಿ ಭಿನ್ನ-ಭಿನ್ನವಾದ ಧಾರಣೆ*ಗಳಲ್ಲಿ ಸ್ಥಾಪಿಸತೊಡಗಿದನು. ಹೀಗೆ ಯೌಗಿಕಕ್ರಿಯೆಯಿಂದ ನಿರುದ್ಧವಾದ ಮಹಾತ್ಮನಾದ ಭೀಷ್ಮನ ಪ್ರಾಣಗಳು ಊರ್ಧ್ವಮುಖವಾಗಿ ಹೋಗತೊಡಗಿದುವು.

ಇದಮಾಶ್ಚರ್ಯಮಾಸೀಚ್ಚ ಮಧ್ಯೇ ತೇಷಾಂ ಮಹಾತ್ಮನಾಮ್ ।
ಸಹಿತೈರ್ಋಷಿಭಿಃ ಸರ್ವೈಸ್ತದಾ ವ್ಯಾಸಾದಿಭಿಃ ಪ್ರಭೋ ॥೩॥

ಯದ್ಯನ್ಮುಞ್ಚತಿ ಗಾತ್ರಂ ಹಿ ಸ ಶಾನ್ತನುಸುತಸ್ತದಾ ।
ತತ್ತದ್ವಿಶಲ್ಯಂ ಭವತಿ ಯೋಗಯುಕ್ತಸ್ಯ ತಸ್ಯ ವೈ ॥೪॥

ಆ ಸಮಯದಲ್ಲಿ ಅಲ್ಲಿ ಸೇರಿದ್ದ ಮಹಾತ್ಮರ ಮಧ್ಯದಲ್ಲಿ ಒಂದು ಆಶ್ಚರ್ಯಕರವಾದ ಘಟನೆಯು ನಡೆಯಿತು. ವ್ಯಾಸರೇ ಮೊದಲಾದವರು ಎಲ್ಲ ಋಷಿಗಳಿಂದಲೂ ಕೂಡಿಕೊಂಡು ಆಶ್ಚರ್ಯಕರವಾದ ಆ ಘಟನೆಯನ್ನು ನೋಡಿದರು.

ಶಾಂತನುವಿನ ಮಗನಾದ ಭೀಷ್ಮನು ಯೋಗಶಕ್ತಿಯಿಂದ ತನ್ನ ಪ್ರಾಣಗಳನ್ನು ಯಾವ-ಯಾವ ಅವಯವಗಳಿಂದ ಮೇಲಕ್ಕೆಳೆದುಕೊಳ್ಳುತ್ತಿದ್ದನೋ ಯೋಗಯುಕ್ತನಾದ ಭೀಷ್ಮನ ಆಯಾ ಅವಯವಗಳು ವಿಶಲ್ಯ

*ಧಾರಣಾ: ಇದು ಎಂಟು ವಿಧವಾದ ಯೋಗಗಳಲ್ಲಿ ಒಂದು. ಪರಮಾತ್ಮನಲ್ಲಿ ಮನಸ್ಸನ್ನು ದೃಢವಾಗಿ ನಿಲ್ಲಿಸುವುದು. ಧಾರಣಾಃ-ಮನಸ್ಸನ್ನು ಸ್ಥಿರಗೊಳಿಸುವ ಸ್ಥಳಗಳು. **ಯಮಾದಿ ಗುಣಯುಕ್ತಸ್ಯ ಮನಸಃ ಸ್ಥಿತಿರಾತ್ಮನಿ । ಧಾರಣೇತ್ಯುಚತೇ ಸದ್ಭಿಃ ಯೋಗಶಾಸ್ತ್ರ ವಿಶಾರದೈಃ ॥ ನಾಭಿಚಕ್ರೇ ಹೃದಯಪುಣ್ಡರೀಕೇ ಮೂರ್ಧ್ನಿಜ್ಯೋತಿಷಿ ನಾಸಾಗ್ರೇ ಜಿಹ್ವಾಗ್ರೇ ಇತ್ಯೇವಮಾದಿಷು । ಬಾಹ್ಯೇ ವಾ ವಿಷಯೇ ಚಿತ್ತಸ್ಯ ವೃತ್ತಿಮಾತ್ರೇಣ ಬನ್ಧಃ.॥** ನಾಭಿಚಕ್ರ, ಹೃದಯ, ನಾಲಿಗೆಯ ತುದಿ, ಶಿರಸ್ಸು ಮೊದಲಾದ ಶರೀರದ ಅವಯವಗಳಲ್ಲಿ ಅಥವಾ ಹೊರಗಿನ ಶುಭವಾದ ವಸ್ತುಗಳಲ್ಲಿ ಚಿತ್ತವನ್ನು ಸ್ಥಿರವಾಗಿ ನಿಲ್ಲಿಸುವ ಅಭ್ಯಾಸವೇ ಧಾರಣೆ.

ವಾಗುತ್ತಿದ್ದುವು. (ಬಾಣಗಳು ಆಯಾ ಅವಯವಗಳಿಂದ ಹೊರಬರುತ್ತಿದ್ದುವು.)

ಕ್ಷಣೇನ ಪ್ರೇಕ್ಷತಾಂ ತೇಷಾಂ ವಿಶಲ್ಯಃ ಸೋ ಭವತ್ತದಾ ।
ತದ್ದೃಷ್ಟ್ವಾ ವಿಸ್ಮಿತಾಃ ಸರ್ವೇ ವಾಸುದೇವಪುರೋಗಮಾಃ।
ಸಹ ತೈರ್ಮುನಿಭಿಃ ಸರ್ವೈಸ್ತದಾ ವ್ಯಾಸಾದಿಭಿರ್ನೃಪ ॥೫॥

ಅವರೆಲ್ಲರೂ ನೋಡುತ್ತಿದ್ದಂತೆಯೇ ಕ್ಷಣಮಾತ್ರದಲ್ಲಿ ಅವನ ಶರೀರವು ಬಾಣಗಳಿಂದ ಪ್ರತ್ಯೇಕಿಸಲ್ಪಟ್ಟಿತು. ಅದನ್ನು ನೋಡಿ ಶ್ರೀಕೃಷ್ಣನೇ ಮೊದಲಾದವರೆಲ್ಲರೂ ವಿಸ್ಮಿತರಾದರು. ಋಷಿಗಳಿಂದ ಕೂಡಿದ ವ್ಯಾಸರೇ ಮೊದಲಾದವರೆಲ್ಲರೂ ಆ ಅದ್ಭುತವನ್ನು ನೋಡಿ ಅಚ್ಚರಿಗೊಂಡರು.

ಸಂನಿರುದ್ಧಸ್ತು ತೇನಾತ್ಮಾ ಸರ್ವೇಷ್ವಾಯತನೇಷು ಚ ।
ಜಗಾಮ ಭಿತ್ತ್ವಾ ಮೂರ್ಧಾನಂ ದಿವಮಭ್ಯುತ್ಪಪಾತ ಹ ॥೬॥

ಭೀಷ್ಮನಿಂದ ಎಲ್ಲ ದ್ವಾರಗಳಲ್ಲಿಯೂ ತಡೆಯಲ್ಪಟ್ಟ ಪ್ರಾಣವಾಯುವು ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ಸ್ವರ್ಗಕ್ಕೆ ಹೊರಟುಹೋಯಿತು.

ದೇವದುನ್ದುಭಿನಾದಶ್ಚ ಪುಷ್ಪವರ್ಷೈಃ ಸಹಾಭವತ್ ।
ಸಿದ್ಧಾ ಬ್ರಹ್ಮರ್ಷಯಶ್ಚೈವ ಸಾಧು ಸಾಧ್ವಿತಿ ಹರ್ಷಿತಾಃ ॥೭॥

ಆ ಸಮಯದಲ್ಲಿ ಪುಷ್ಪವೃಷ್ಟಿಯೊಡನೆ ದೇವದುಂದುಭಿಗಳು ಮೊಳಗಿದುವು. ಸಿದ್ಧರೂ, ಬ್ರಹ್ಮರ್ಷಿಗಳೂ ಪರಮಹರ್ಷಿತರಾಗಿ 'ಸಾಧು! ಭೀಷ್ಮ! ಸಾಧು! ' ಎಂದು ಉದ್ಘೋಷಿಸಿದರು.

ಮಹೋಲ್ಕೇವ ಚ ಭೀಷ್ಮಸ್ಯ ಮೂರ್ಧದೇಶಾಜ್ಜನಾಧಿಪ ।
ನಿಃಸೃತ್ಯಾಕಾಶಮಾವಿಶ್ಯ ಕ್ಷಣೇನಾನ್ತರಧೀಯತ ॥೮॥

ಜನಮೇಜಯ! ಭೀಷ್ಮನ ಪ್ರಾಣವು ಬ್ರಹ್ಮರಂಧ್ರದಿಂದ ಹೊರಟು ದೊಡ್ಡದಾದೊಂದು ಉಲ್ಕೆಯೋಪಾದಿಯಲ್ಲಿ ಪ್ರಜ್ವಲಿಸುತ್ತಾ ಆಕಾಶವನ್ನು ಪ್ರವೇಶಿಸಿ ಕ್ಷಣಮಾತ್ರದಲ್ಲಿ ಅಂತರ್ಹಿತವಾಯಿತು. (ಮಾಯವಾಯಿತು.)

ಜನಮೇಜಯ! ಹೀಗೆ ಶಾಂತನುವಿನ ಮಗನಾದ, ರಾಜಸಿಂಹನಾದ, ಭರತಕುಲಾವತಂಸನಾದ, ಧೀಮಂತನಾದ ಭೀಷ್ಮನು ಕಾಲವಶ

ನಾದನು. ಬಳಿಕ ಮಹಾತ್ಮರಾದ ಪಾಂಡವರು, ವಿದುರ, ಯುಯುತ್ಸು-ಇವರೆಲ್ಲರೂ ಸೇರಿ ಕಟ್ಟಿಗೆಗಳನ್ನೂ ವಿಧ-ವಿಧವಾದ, ಹೇರಳವಾದ ಸುಗಂಧದ್ರವ್ಯಗಳನ್ನೂ ತಂದು ಚಿತೆಯನ್ನು ಸಿದ್ಧಗೊಳಿಸಿದರು. ಉಳಿದವರೆಲ್ಲರೂ ಪ್ರೇಕ್ಷಕರಾಗಿದ್ದರು.



ಯುಧಿಷ್ಠಿರನೂ ಮತ್ತು ಮಹಾಮತಿಯಾದ ವಿದುರನೂ ರೇಷ್ಮೆಯ ವಸ್ತ್ರಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ಗಂಗಾಪುತ್ರನಾದ ಭೀಷ್ಮನನ್ನು ಆಚ್ಛಾದಿಸಿ ಶರೀರವನ್ನು ಚಿತೆಯ ಮೇಲಿರಿಸಿದರು. ಯುಯುತ್ಸುವು ಅವನ ಮೇಲೆ ಶ್ರೇಷ್ಠವಾದ ಶ್ವೇತಚ್ಛತ್ರವನ್ನು ಹಿಡಿದನು. ಭೀಮಾರ್ಜುನರು

ಬಿಳಿಯ ಚಾಮರವನ್ನೂ, ಬೀಸಣಿಗೆಯನ್ನೂ ಬೀಸುತ್ತಿದ್ದರು. ಮಾದ್ರಿಯ ಮಕ್ಕಳಾದ ನಕುಲ-ಸಹದೇವರು ಕಿರೀಟವನ್ನೆತ್ತಿಕೊಂಡು ಭೀಷ್ಮನ ತಲೆಯ ಕಡೆ ಇಟ್ಟರು. ಕೌರವರಾಜನ ರಾಣೀವಾಸದ ಸ್ತ್ರೀಯರು ತಾಲಪತ್ರದ ಬೀಸಣಿಗೆಗಳನ್ನು ಹಿಡಿದುಕೊಂಡು ಕುರುಕುಲಾವತಂಸನಾದ ಭೀಷ್ಮನ ಸುತ್ತಲೂ ಬೀಸತೊಡಗಿದರು. ಬಳಿಕ ಪಾಂಡವರು ಮಹಾತ್ಮನಾದ ಭೀಷ್ಮನಿಗೆ ಪಿತೃಮೇಧಸಂಸ್ಕಾರವನ್ನು ವಿಧಿವತ್ತಾಗಿ ನಡೆಸಿದರು. ಅಗ್ನಿಯಲ್ಲಿ ಅನೇಕವಾದ ಆಹುತಿಗಳನ್ನು ಅರ್ಪಿಸಿದರು. ಸಾಮಗರು ತತ್ಕಾಲೋಚಿತವಾದ ಸಾಮಗಳನ್ನು ಗಾನಮಾಡಿದರು. ಅನಂತರ ಧೃತರಾಷ್ಟ್ರಪ್ರಮುಖರಾದ ರಾಜಕುಮಾರರು ಚಂದನಕಾಷ್ಠಗಳಿಂದಲೂ, ಕೃಷ್ಣಚಂದನ ಕಾಷ್ಠಗಳಿಂದಲೂ, ಕಾಲಾಗುರುವೇ ಮೊದಲಾದ ನಾನಾವಿಧವಾದ ಸುಗಂಧದ್ರವ್ಯಗಳಿಂದಲೂ ಭೀಷ್ಮನನ್ನು ಮುಚ್ಚಿ ಚಿತೆಯನ್ನು ಹೊತ್ತಿಸಿ ಅಪ್ರದಕ್ಷಿಣವಾಗಿ ಚಿತೆಯನ್ನು ಸುತ್ತಿದರು. ಹೀಗೆ ಧೃತರಾಷ್ಟ್ರಾದಿ ಕುರುಶ್ರೇಷ್ಠರು ಭೀಷ್ಮನ ದಹನಸಂಸ್ಕಾರವನ್ನು ಮಾಡಿ ವ್ಯಾಸ-ನಾರದ-ಕೃಷ್ಣರಿಂದಲೂ ಭರತಕುಲದ ಸ್ತ್ರೀಯರಿಂದಲೂ ಅನುಸೃತರಾಗಿ ಋಷಿಗಳಿಂದ ಆಶ್ರಯಿಸಲ್ಪಡುವ ಪರಮಪವಿತ್ರವಾದ ಗಂಗಾನದಿಗೆ ಹೋದರು. ಪಟ್ಟಣಿಗರೂ ಅಲ್ಲಿಗೆ ಆಗಮಿಸಿದರು. ಎಲ್ಲ ಕ್ಷತ್ರಿಯಶ್ರೇಷ್ಠರೂ ಮತ್ತು ಎಲ್ಲ ಜನರೂ ಮಹಾತ್ಮನಾದ ಗಾಂಗೇಯನಿಗೆ ಪವಿತ್ರವಾದ ಗಂಗಾನದಿಯಲ್ಲಿ ವಿಧಿವತ್ತಾಗಿ ಜಲತರ್ಪಣವನ್ನಿತ್ತರು.

ಕೌರವರೆಲ್ಲರೂ ತನ್ನ ಮಗನಾದ ಭೀಷ್ಮನಿಗೆ ಜಲತರ್ಪಣವನ್ನು ಮಾಡಿದನಂತರ ಶೋಕಾಕುಲಳಾದ ಭಾಗೀರಥಿಯು ಸಶರೀರಳಾಗಿ ನೀರಿನಿಂದ ಮೇಲಕ್ಕೆ ಬಂದು ರೋದನಮಾಡುತ್ತಾ ಕೌರವರನ್ನು ಕುರಿತು ಹೇಳಿದಳು:

"ನಿಷ್ಪಾಪರೇ! ನಾನು ಹೇಳುವುದನ್ನು ಯಥಾವತ್ತಾಗಿ ಕೇಳಿರಿ. ನನ್ನ ಮಗನಾದ ಭೀಷ್ಮನು ರಾಜೋಚಿತವಾದ ಸದಾಚಾರಗಳಿಂದ ಸಂಪನ್ನನಾಗಿದ್ದನು. ಪ್ರಜ್ಞಾವಂತನಾಗಿದ್ದನು. ಶ್ರೇಷ್ಠವಾದ ಕುಲದಲ್ಲಿ ಹುಟ್ಟಿದ್ದನು. ಮಹಾವ್ರತನಾದ ಭೀಷ್ಮನು ಕುರುಕುಲದ ವೃದ್ಧರನ್ನು ಯಥೋಚಿತವಾಗಿ ಸತ್ಕರಿಸುತ್ತಿದ್ದನು. ತಂದೆಯಲ್ಲಿ ಅಪಾರವಾದ ಭಕ್ತಿಯುಳ್ಳವನಾಗಿದ್ದನು. ಮಹಾವೀರ್ಯನಾದ ಭೀಷ್ಮನು ಹಿಂದೆ ಜಮದಗ್ನಿಯ ಮಗನಾದ ಪರಶುರಾಮನು ಪ್ರಯೋಗಿಸಿದ ದಿವ್ಯವಾದ ಮಹಾಸ್ತ್ರಗಳಿಂದಲೂ ಪರಾಜಿತ

ನಾಗಲಿಲ್ಲ. ಅವನೀಗ ಶಿಖಂಡಿಯಿಂದ ಹತನಾದನು. ಎಂತಹ ಸಂಕಟದ ವಾರ್ತೆಯಿದು!

ಪಾರ್ಥಿವರೇ! ನಿಶ್ಚಯವಾಗಿಯೂ ನನ್ನ ಹೃದಯವು ಲೋಹದಿಂದ (ಕಬ್ಬಿಣದಿಂದ) ಮಾಡಲ್ಪಟ್ಟಿದೆ. ಏಕೆಂದರೆ: ನನ್ನ ಪ್ರಿಯಪುತ್ರನನ್ನು ಕಳೆದುಕೊಂಡ ನನ್ನ ಹೃದಯವು ಸೀಳಿಹೋಗದೆ ಹಾಗೆಯೇ ಉಳಿದಿದೆ. ಕಾಶೀಪಟ್ಟಣದಲ್ಲಿ ನಡೆದ ಸ್ವಯಂವರಸಮಾರಂಭದಲ್ಲಿ ಭೂಮಂಡಲದ ಕ್ಷತ್ರಿಯರೆಲ್ಲರೂ ಭಾಗವಹಿಸಿದ್ದರು. ಏಕಮಾತ್ರರಥದ ಸಹಾಯದಿಂದ ನನ್ನ ಮಗನಾದ ಭೀಷ್ಮನು ಆ ಎಲ್ಲ ರಾಜರನ್ನೂ ಜಯಿಸಿ ಮೂವರು ಕನ್ಯೆಯರನ್ನೂ ಅಪಹರಿಸಿಕೊಂಡು ಬಂದನು. ಯಾವ ನನ್ನ ಮಗನ ಬಲಕ್ಕೆ ಸಮಾನವಾದ ಬಲವುಳ್ಳವನು ಈ ಭೂಮಂಡಲದಲ್ಲೇ ಯಾರೂ ಇಲ್ಲವೋ–ಅಂತಹ ನನ್ನ ಮಗನು ಶಿಖಂಡಿಯಿಂದ ಹತನಾದನೆಂಬುದನ್ನು ಕೇಳಿಯೂ ನನ್ನ ಹೃದಯವು ಸೀಳಿಹೋಗಲಿಲ್ಲ. ಕುರುಕ್ಷೇತ್ರದಲ್ಲಿ ಮಹಾತ್ಮನಾದ ಯಾವ ನನ್ನ ಮಗನು ಮಹಾಪರಾಕ್ರಮಶಾಲಿಯಾದ ಪರಶುರಾಮನನ್ನು ಹೆಚ್ಚಿನ ಪ್ರಯತ್ನವೇ ಇಲ್ಲದೇ ಪೀಡಿಸಿದನೋ (ಘಾಸಿಪಡಿಸಿದನೋ)–ಅಂತಹ ನನ್ನ ಪ್ರಿಯಪುತ್ರ ನಿಂದು ಶಿಖಂಡಿಯಿಂದ ಹತನಾದನು. (ಎಂತಹ ವಿಪರ್ಯಾಸ?)”

ಜನಮೇಜಯ! ಇವೇ ಮುಂತಾಗಿ ಬಹುವಿಧವಾಗಿ ಹೇಳಿಕೊಂಡು ವಿಲಪಿಸುತ್ತಿದ್ದ ಮಹಾನದಿಯಾದ ಗಂಗೆಯನ್ನು ವಿಭುವಾದ ಶ್ರೀಕೃಷ್ಣನು ಸಂತೈಸಿದನು:

ಸಮಾಶ್ವಸಿಹಿ ಭದ್ರೇ ತ್ವಂ ಮಾ ಶುಚಃ ಶುಭದರ್ಶನೇ ।
ಗತಃ ಸ ಪರಮಂ ಲೋಕಂ ತವ ಪುತ್ರೋ ನ ಸಂಶಯಃ ॥೩೦॥

“ಶುಭದರ್ಶನಳೇ! ಗಂಗಾದೇವಿಯೇ! ನಿನಗೆ ಮಂಗಳವಾಗಲಿ. ಸಮಾಧಾನವನ್ನು ತಂದುಕೊ. ಶೋಕಿಸಬೇಡ. ನಿನ್ನ ಮಗನು ಪರಮಶ್ರೇಷ್ಠವಾದ ಲೋಕಕ್ಕೆ ಹೋಗಿದ್ದಾನೆ. ಇದರಲ್ಲಿ ಸಂದೇಹವೇ ಇಲ್ಲ.

ವಸುರೇಷ ಮಹಾತೇಜಾಃ ಶಾಪದೋಷೇಣ ಶೋಭನೇ ।
ಮಾನುಷತ್ವಮನುಪ್ರಾಪ್ತೋ ನೈನಂ ಶೋಚಿತುಮರ್ಹಸಿ ॥೩೧॥

ಶೋಭನಳೇ! ನಿನ್ನ ಮಗನಾಗಿ ಹುಟ್ಟಿದ್ದ ಭೀಷ್ಮನು ಮಹಾತೇಜಸ್ವಿಯಾದ ವಸುವು. (ಅಷ್ಟವಸುಗಳಲ್ಲೊಬ್ಬನು.) ವಸಿಷ್ಠರ ಶಾಪದಿಂದ

ಮನುಷ್ಯಯೋನಿಯಲ್ಲಿ ಹುಟ್ಟಿದನು. ಅವನ ವಿಚಾರವಾಗಿ ನೀನು ಶೋಕಪಡುವುದು ಉಚಿತವಲ್ಲ.

ಸ ಏಷ ಕ್ಷತ್ರಧರ್ಮೇಣ ಅಯುಧ್ಯತ ರಣಾಜಿರೇ।
ಧನಂಜಯೇನ ನಿಹತೋ ನೈಷ ದೇವಿ ಶಿಖಣ್ಡಿನಾ ॥೩೨॥



ದೇವಿ! ಈ ನಿನ್ನ ಮಗನಾದ ಭೀಷ್ಮನು ರಣರಂಗದಲ್ಲಿ ಕ್ಷತ್ರಿಯಧರ್ಮಕ್ಕೆ ಅನುಸಾರವಾಗಿಯೇ ಯುದ್ಧಮಾಡಿದನು. ಹಾಗೆ ಯುದ್ಧಮಾಡುತ್ತಿದ್ದಾಗ ಅರ್ಜುನನಿಂದ ಕೊಲ್ಲಲ್ಪಟ್ಟನು. ಶಿಖಂಡಿಯಿಂದಲ್ಲ.

ಭೀಷ್ಮಂ ಹಿ ಕುರುಶಾರ್ದೂಲಮುದ್ಯತೇಷುಂ ಮಹಾರಣೇ ।
ನ ಶಕ್ತಃ ಸಂಯುಗೇ ಹನ್ತುಂ ಸಾಕ್ಷಾದಪಿ ಶತಕ್ರತುಃ ॥೩೩॥

ಸ್ವಚ್ಛನ್ದತಸ್ತವ ಸುತೋ ಗತಃ ಸ್ವರ್ಗಂ ಶುಭಾನನೇ ॥೩೪॥

ಶುಭಾನನೆಯೇ! ನಿನ್ನ ಪುತ್ರನಾದ, ಕುರುಶ್ರೇಷ್ಠನಾದ ಭೀಷ್ಮನು ಯುದ್ಧದಲ್ಲಿ ಧನುರ್ಬಾಣಗಳನ್ನು ಹಿಡಿದು ನಿಂತನೆಂದರೆ ಸಾಕ್ಷಾತ್ ಇಂದ್ರನೂ ಅವನನ್ನು ಸಂಹರಿಸಲು ಶಕ್ತನಾಗಿರಲಿಲ್ಲ. (ಹೀಗಿರುವಾಗ ಶಿಖಂಡಿಯ ವಿಷಯವಾಗಿ ಹೇಳುವುದೇನಿದೆ?) ನಿನ್ನ ಮಗನು ಸ್ವೇಚ್ಛೆಯಿಂದಲೇ ದೇಹತ್ಯಾಗಮಾಡಿ ಸ್ವರ್ಗಕ್ಕೆ ಹೋಗಿರುವನು.

ನ ಶಕ್ತಾ ವಿನಿಹನ್ತುಂ ಹಿ ರಣೇ ತಂ ಸರ್ವದೇವತಾಃ ।
ತಸ್ಮಾನ್ಮಾ ತ್ವಂ ಸರಿಚ್ಛ್ರೇಷ್ಠೇ ಶೋಚಸ್ವ ಕುರುನನ್ದನಮ್ ।
ವಸೂನೇಷ ಗತೋ ದೇವಿ ಪುತ್ರಸ್ತೇ ವಿಜ್ವರಾ ಭವ ॥೩೫॥

ದೇವಿ! ಯುದ್ಧದಲ್ಲಿ ನಿನ್ನ ಮಗನನ್ನು ಸಂಹರಿಸಲು ಸರ್ವದೇವತೆಗಳೂ ಒಟ್ಟಿಗೆ ಸೇರಿದರೂ ಅಶಕ್ತರೇ ಸರಿ. ಆದುದರಿಂದ ಕುರುನಂದನನಾದ ಆ ಭೀಷ್ಮನನ್ನು ಕುರಿತು ಶೋಕಿಸಬೇಡ. ನಿನ್ನ ಮಗನು ವಸುಗಳ ಸ್ಥಾನಕ್ಕೆ ಹೊರಟುಹೋದನು. ವಸುಗಳ ಲೋಕಕ್ಕೆ ಹೋಗಿ ವಿರಾಜಿಸುತ್ತಿದ್ದಾನೆ. ವ್ಯಾಕುಲತೆಯನ್ನು ಬಿಡು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಶ್ರೀಕೃಷ್ಣನೂ ಮತ್ತು ವ್ಯಾಸರೂ ಹೀಗೆ ಹೇಳಿದನಂತರ ನದಿಗಳಲ್ಲಿ ಶ್ರೇಷ್ಠಳಾದ ಗಂಗಾದೇವಿಯು ಶೋಕವನ್ನು ತ್ಯಜಿಸಿ ತನ್ನ ನೀರಿನಲ್ಲಿ ಸೇರಿಹೋದಳು. ಶ್ರೀಕೃಷ್ಣನೇ ಮೊದಲಾದ ರಾಜರೆಲ್ಲರೂ ಗಂಗಾಮಾತೆಯನ್ನು ಸತ್ಕರಿಸಿ ಅವಳ ಅನುಜ್ಞೆಯನ್ನು ಪಡೆದು ಪಟ್ಟಣಕ್ಕೆ ಹಿಂದಿರುಗಿದರು."

ಗ೬೮ನೆಯ ಅಧ್ಯಾಯವು ಮುಗಿಯಿತು.

ಅನುಶಾಸನಪರ್ವವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ॥
ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥
ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ॥
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತುತೇ ॥

ಹರಿಃ ಓಂ । ಓಂ ತತ್ಸತ್

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

ಅನುಶಾಸನಪರ್ವಸಂಗ್ರಹ

ಅತ ಊರ್ಧ್ವಂ ಚ ವಿಜ್ಞೇಯಮನುಶಾಸನಮುತ್ತಮಮ್ ।
ಯತ್ರ ಪ್ರಕೃತಿಮಾಪನ್ನಃ ಶ್ರುತ್ವಾ ಧರ್ಮವಿನಿಶ್ಚಯಮ್ ।
ಭೀಷ್ಮಾದ್ಭಾಗೀರಥೀಪುತ್ರಾತ್ಕುರುರಾಜೋ ಯುಧಿಷ್ಠಿರಃ ॥೩೩೨॥
ವ್ಯವಹಾರೋಽತ್ರ ಕಾರ್ತ್ಸ್ನ್ಯೇನ ಧರ್ಮಾರ್ಥೀಯಃ ಪ್ರಕೀರ್ತಿತಃ ।
ವಿವಿಧಾನಾಂ ಚ ದಾನಾನಾಂ ಫಲಯೋಗಾಃ ಪ್ರಕೀರ್ತಿತಾಃ ॥೩೩೩॥

ತಥಾ ಪಾತ್ರವಿಶೇಷಾಶ್ಚ ದಾನಾನಾಂ ಚ ಪರೋ ವಿಧಿಃ।
ಆಚಾರವಿಧಿಯೋಗಶ್ಚ ಸತ್ಯಶ್ಚ ಚ ಪರಾ ಗತಿಃ ॥೩೩೪॥

ಮಹಾಭಾಗ್ಯಂ ಗವಾಂ ಚೈವ ಬ್ರಾಹ್ಮಣಾನಾಂ ತಥೈವ ಚ।
ರಹಸ್ಯಂ ಚೈವ ಧರ್ಮಾಣಾಂ ದೇಶಕಾಲೋಪಸಂಹಿತಮ್ ॥೩೩೫॥

ಏತತ್ಸುಬಹುವೃತ್ತಾಂತಮುತ್ತಮಂ ಚಾನುಶಾಸನಮ್।
ಭೀಷ್ಮ ಸ್ಯಾತ್ರೈವ ಸಮ್ಪ್ರಾಪ್ತಿಃ ಸ್ವರ್ಗಸ್ಯ ಪರಿಕೀರ್ತಿತಾ ॥೩೩೬॥

ಏತತ್ತ್ರಯೋದಶಂ ಪರ್ವ ಧರ್ಮನಿಶ್ಚಯಕಾರಕಮ್।
ಅಧ್ಯಾಯಾನಾಂ ಶತಂ ತ್ವತ್ರ ಷಟ್ ಚತ್ವಾರಿಂಶದೇವತು।
ಶ್ಲೋಕಾನಾಂ ತು ಸಹಸ್ರಾಣಿ ಪ್ರೋಕ್ತಾನ್ಯಷ್ಟೌ ಪ್ರಸಂಖ್ಯಯಾ॥

ಪರ್ವಸಂಗ್ರಹಪರ್ವದಲ್ಲಿರುವ ಪ್ರಕಾರ ಈ ಅನುಶಾಸನಪರ್ವದಲ್ಲಿರುವ ಅಧ್ಯಾಯಗಳು ೧೪೬. ಶ್ಲೋಕಗಳು ೮೦೦೦.

ನಾವು ಅನುವಾದಿಸಿರುವ ಪುಸ್ತಗದಲ್ಲಿ ೧೬೮ ಅಧ್ಯಾಯಗಳೂ, ೭೮೪೦ಶ್ಲೋಕಗಳು ಇವೆ.

ಭಂ. ರಿ. ಇನ್ಸಟಿಟ್ಯೂಟ್ ನವರು ಪ್ರಕಟಿಸಿರುವ ಪುಸ್ತಕದಲ್ಲಿ ೧೫೪ ಅಧ್ಯಾಯಗಳೂ ೬೫೩೫ ಶ್ಲೋಕಗಳು ಇವೆ.

*

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇನಮಃ

ॐ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್॥

ಮಹಾಭಾರತ-ಆಶ್ವಮೇಧಿಕಪರ್ವ

೧ನೆಯ ಅಧ್ಯಾಯ ಅಶ್ವಮೇಧಪರ್ವ

ಯುಧಿಷ್ಠಿರನು ಶೋಕಮಗ್ನನಾಗಿ ಕುಸಿದು ಬಿದ್ದುದು: ಧೃತರಾಷ್ಟ್ರನ ಸಾಂತ್ವನ

ವೈಶಂಪಾಯನರು ಹೇಳುತ್ತಾರೆ:

ಕೃತೋದಕಂ ತು ರಾಜಾನಂ ಧೃತರಾಷ್ಟ್ರಂ ಯುಧಿಷ್ಠಿರಃ ।
ಪುರಸ್ಕೃತ್ಯ ಮಹಾಬಾಹುರುತ್ತತಾರಾಕುಲೇನ್ದ್ರಿಯಃ ॥೨॥

“ಜನಮೇಜಯ! ಮಹಾಬಾಹುವಾದ ಯುಧಿಷ್ಠಿರನು ಭೀಷ್ಮನಿಗೆ ಜಲಾಂಜಲಿಯನ್ನಿತ್ತು ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ವ್ಯಾಕುಲಗೊಂಡ ಮನಸ್ಸಿನಿಂದ ಗಂಗಾನದಿಯಿಂದ ಮೇಲಕ್ಕೆ ಬಂದೊಡನೆಯೇ ಕಂಬನಿದುಂಬಿದ ಮತ್ತು ಕಳವಳಗೊಂಡ ಕಣ್ಣುಗಳಿಂದ ಕೂಡಿದವನಾಗಿ–ವ್ಯಾಧನಿಂದ ಹೊಡೆಯಲ್ಪಟ್ಟ ಆನೆಯೋಪಾದಿಯಲ್ಲಿ–ದೊಪ್ಪನೆ ಕುಸಿದು ಬಿದ್ದನು. ಭೀಮಸೇನನು ಶ್ರೀಕೃಷ್ಣನಿಂದ ಪ್ರೇರಿತನಾಗಿ ಕುಸಿದು ಬೀಳುತ್ತಿದ್ದ ಯುಧಿಷ್ಠಿರನನ್ನು ಹಿಡಿದುಕೊಂಡನು. ಶತ್ರುಸೇನೆಯನ್ನು ಮರ್ದನಮಾಡುವ ಶ್ರೀಕೃಷ್ಣನು ಯುಧಿಷ್ಠಿರನನ್ನು ಕುರಿತು– ‘ಮೈವಂ ಯುಧಿಷ್ಠಿರ!’ ‘ಯುಧಿಷ್ಠಿರ! ಹೀಗೆ ನೀನು ಅಧೀರನಾಗಬಾರದು’– ಎಂದು ಹೇಳಿದನು. ನೆಲದ ಮೇಲೆ ಬಿದ್ದಿದ್ದ, ಆರ್ತನಾದ, ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಿದ್ದ, ಧರ್ಮಪುತ್ರನಾದ ಯುಧಿಷ್ಠಿರನನ್ನು ಎಲ್ಲ ರಾಜರೂ ನೋಡಿದರು. ದೀನವಾದ ಮನಸ್ಸಿನಿಂದ ಕೂಡಿದ್ದ, ಸತ್ತ್ವಹೀನನಾಗಿದ್ದ ಆ

ನರೇಶ್ವರನನ್ನು ನೋಡಿ ಪಾಂಡವರು ಪುನಃ ಶೋಕಾಕುಲರಾಗಿ ಅವನ ಬಳಿಯಲ್ಲಿಯೇ ಕುಳಿತರು. ಪುತ್ರಶೋಕದಿಂದ ಪೀಡಿತನಾಗಿದ್ದ, ಪ್ರಜ್ಞಾಚಕ್ಷುವಾದ, ಮಹಾಬುದ್ಧಿಶಾಲಿಯಾದ ಧೃತರಾಷ್ಟ್ರರಾಜನು ಯುಧಿಷ್ಠಿರನೊಡನೆ ಹೇಳಿದನು:

“ಕುರುಕುಲಸಿಂಹನೇ! ಮೇಲೇಳು. ಮುಂದೆ ಮಾಡಬೇಕಾಗಿರುವ ಕಾರ್ಯವನ್ನು ಮಾಡು. ಕ್ಷತ್ರಧರ್ಮಕ್ಕೆ ಅನುಸಾರವಾಗಿ ನೀನು ಈ ಭೂ ಮಂಡಲವನ್ನು ಗೆದ್ದುಕೊಂಡಿರುವೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ನೀನು ನಿನ್ನ ಅನುಜರೊಡನೆಯೂ ಮತ್ತು ಸ್ನೇಹಿತರೊಡನೆಯೂ ಕೂಡಿಕೊಂಡು ಮನೋವಾಂಛಿತವಾದ ಭೋಗಗಳನ್ನು ಉಪಭೋಗಿಸು. ನೀನು ಈ ಸಮಯದಲ್ಲಿ ಶೋಕಪಡಲು ಯಾವ ಕಾರಣವನ್ನೂ ನಾನು ಕಾಣುತ್ತಿಲ್ಲ. ಒಂದು ವೇಳೆ ಶೋಕಪಡಬೇಕಾಗಿದ್ದರೆ ನಾನು ಮತ್ತು ಗಾಂಧಾರಿಯೂ ಶೋಕಪಡಬೇಕು. ಸ್ವಪ್ನದಲ್ಲಿ ಸಿಕ್ಕಿದ ಐಶ್ವರ್ಯವು ನಷ್ಟವಾಗುವಂತೆ ನಮ್ಮ ನೂರು ಮಂದಿ ಮಕ್ಕಳೂ ಸತ್ತುಹೋದರು. ಹಿತಕಾಮನಾದ, ಮಹಾತ್ಮನಾದ ವಿದುರನ ಅರ್ಥಯುಕ್ತವಾಗಿದ್ದ ಮಹಾ ವಾಕ್ಯಗಳನ್ನು ಆಗ ಕೇಳದಿದ್ದುದಕ್ಕೆ ಮೂರ್ಖನಾದ ನಾನು ಈಗ ಅದಕ್ಕಾಗಿ ದುಃಖಪಡುತ್ತಿದ್ದೇನೆ. ದುರ್ಯೋಧನನ ಅಪರಾಧದಿಂದ ನಿನ್ನ ಕುಲವೇ ನಾಶವಾಗಿಹೋಗುವುದೆಂದು ಬಹಳ ಹಿಂದೆಯೇ ದಿವ್ಯದೃಷ್ಟಿಯುಳ್ಳ ಧರ್ಮಾತ್ಮನಾದ ವಿದುರನು ನನ್ನೊಡನೆ ಹೇಳಿದ್ದನು. ಕುಲಕ್ಕೆ ಒಳ್ಳೆಯ ದನ್ನು ಬಯಸುವುದಾಗಿದ್ದರೆ ದುಷ್ಟಾತ್ಮನಾದ, ಮಂದಬುದ್ಧಿಯವನಾದ ದುರ್ಯೋಧನನನ್ನು ಕೊಂದುಬಿಡಬೇಕೆಂದೂ ಹೇಳಿದ್ದನು. (ಒಂದು ವೇಳೆ ದುರ್ಯೋಧನನನ್ನು ಉಳಿಸಿಕೊಳ್ಳುವ ಇಚ್ಛೆಯಿದ್ದರೆ) ಕರ್ಣ-ಶಕುನಿಗಳಾದರೂ ದುರ್ಯೋಧನನನ್ನು ಒಮ್ಮೆಯೂ ನೋಡದಂತೆ ಮಾಡು. ಕೌರವ-ಪಾಂಡವರು ಜೂಜಾಡಲು ಸೇರುವುದನ್ನಾದರೂ ತಡೆದುಬಿಡು’– ಎಂದೂ ನನಗೆ ವಿದುರನು ಹೇಳಿದ್ದನು.

‘ಧರ್ಮಾತ್ಮನಾದ ಯುಧಿಷ್ಠಿರನಿಗೆ ಪಟ್ಟಾಭಿಷೇಕವನ್ನು ಮಾಡು.

ಅವನು ಜಿತೇಂದ್ರಿಯನಾಗಿ ಧರ್ಮದಿಂದ ಈ ಭೂಮಂಡಲವನ್ನು ಪರಿಪಾಲಿಸುತ್ತಾನೆ. ಒಂದು ವೇಳೆ ನಿನಗೆ ಕುಂತಿಯ ಮಗನಾದ ಯುಧಿಷ್ಠಿರನಿಗೆ ಪಟ್ಟಾಭಿಷೇಕಮಾಡಲು ಇಚ್ಛೆಯಿಲ್ಲದಿದ್ದರೆ ಮೇಟಿಯ ಕಂಬದಂತೆ ನಿಂತು ನೀನೇ ರಾಜ್ಯಭಾರವನ್ನು ಮಾಡು. ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಮಾನವಾದ ವ್ಯವಹಾರವುಳ್ಳ ನಿನ್ನನ್ನು ಜ್ಞಾತಿಗಳೂ, ಅಣ್ಣ- ತಮ್ಮಂದಿರೂ, ಬಂಧುಗಳೂ ಅನುಸರಿಸಿಕೊಂಡಿದ್ದು ಜೀವನವನ್ನು ನಿರ್ವಹಿಸಲಿ'–ಎಂದೂ ವಿದುರನು ಹೇಳಿದ್ದನು. ಆದರೆ, ಯುಧಿಷ್ಠಿರ! ದೀರ್ಘದರ್ಶಿಯಾದ ವಿದುರನು ಹೀಗೆ ಪದೇ ಪದೇ ಹೇಳುತ್ತಿದ್ದರೂ ವ್ಯರ್ಥವಾದ ಬುದ್ಧಿಯನ್ನು ಹೊಂದಿದ್ದ ನಾನು ಪಾಪಿಷ್ಠನಾದ ದುರ್ಯೋಧನನನ್ನೇ ಅನುಸರಿಸಿ ಹೋದೆನು. ಧೀರನಾದ ವಿದುರನ ಸುಮಧುರವಾದ ಮತ್ತು ಹಿತಕರವಾದ ಮಾತುಗಳನ್ನೂ ಕೇಳದೇ ಅದರ ಫಲವಾಗಿ ಈ ಮಹಾದುಃಖವನ್ನು ಹೊಂದಿ ಶೋಕಸಮುದ್ರದಲ್ಲಿಯೇ ಮುಳುಗಿಹೋದೆನು. ವೃದ್ಧರಾಗಿರುವ ಮತ್ತು ಅತಿದುಃಖಿತರಾಗಿರುವ ನಿನ್ನ ಈ ತಾಯಿ-ತಂದೆಗಳನ್ನೂ ನೋಡು. ಈ ಸಮಯದಲ್ಲಿ ನೀನು ಖಂಡಿತವಾಗಿಯೂ ದುಃಖಪಡಬಾರದು. ಜನಾಧಿಪನೇ! ನಿನ್ನ ಈ ದುಃಖಕ್ಕೆ ಕಾರಣವೇನೆಂಬುದೇ ನನಗೆ ತಿಳಿಯದಾಗಿದೆ."

೧ನೆಯ ಅಧ್ಯಾಯವು ಮುಗಿಯಿತು.

೨ನೆಯ ಅಧ್ಯಾಯ ಅಶ್ವಮೇಧಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನೂ ಮತ್ತು ವ್ಯಾಸರೂ ಯುಧಿಷ್ಠಿರನನ್ನು ಸಮಾಧಾನಗೊಳಿಸಿದುದು.

ವೈಶಂಪಾಯನರು ಹೇಳುತ್ತಾರೆ:

ಏವಮುಕ್ತಸ್ತು ರಾಜ್ಞಾ ಸ ಧೃತರಾಷ್ಟ್ರೇಣ ಧೀಮತಾ ।
ತೂಷ್ಣೀಂ ಬಭೂವ ಮೇಧಾವೀ ತಮುವಾಚಾಥ ಕೇಶವಃ ॥೧॥

ಜನಮೇಜಯ! ಧೀಮಂತನಾದ ಧೃತರಾಷ್ಟ್ರನು ಹೀಗೆ ಹೇಳಿದ ಮೇಲೆಯೂ ಮೇಧಾವಿಯಾದ ಯುಧಿಷ್ಠಿರನು ಯಾವ ಮಾತನ್ನೂ ಆಡದೇ ಸುಮ್ಮನೆ ಕುಳಿತಿದ್ದನು. ಆ ಸಮಯದಲ್ಲಿ ಶ್ರೀಕೃಷ್ಣನು ಯುಧಿಷ್ಠಿರನೊಡನೆ ಹೇಳಿದನು:

ಅತೀವ ಮನಸಾ ಶೋಕಃ ಕ್ರಿಯಮಾಣೋ ಜನಾಧಿಪ ।
ಸನ್ತಾಪಯತಿ ಚೈತಸ್ಯ ಪೂರ್ವಪ್ರೇತಾನ್ಪಿತಾಮಹಾನ್ ॥೨॥



"ಜನೇಶ್ವರನೇ! ಸತ್ತುಹೋದವರ ವಿಷಯದಲ್ಲಿ ಮಾಡುವ ಅತಿಯಾದ ಶೋಕವು ಮೊದಲೇ ಮರಣಹೊಂದಿರುವ ಅವರ ಪಿತಾಮಹರಿಗೆ ಬಹಳವಾದ ಸಂತಾಪವನ್ನುಂಟುಮಾಡುತ್ತದೆ.

ಆದುದರಿಂದ ಹೆಚ್ಚು ಶೋಕಿಸಬೇಡ. ಬಹುದಕ್ಷಿಣೆಗಳುಳ್ಳ ನಾನಾ ಪ್ರಕಾರವಾದ ಯಜ್ಞಗಳನ್ನು ಮಾಡು. ಸೋಮರಸದ ಮೂಲಕವಾಗಿ

ದೇವತೆಗಳನ್ನೂ-ಸ್ವಧಾರಸದ ಮೂಲಕವಾಗಿ ಪಿತೃಗಳನ್ನೂ ತೃಪ್ತಿಗೊಳಿಸು. ಅತಿಥಿಗಳನ್ನು ಅನ್ನ-ಪಾನಗಳಿಂದಲೂ, ದರಿದ್ರರನ್ನು ಅವರಿಗೆ ಬೇಕಾದ ವಸ್ತುಗಳನ್ನು ಕೊಡುವುದರಿಂದಲೂ ತೃಪ್ತಿಗೊಳಿಸು. ತಿಳಿಯಬೇಕಾದುದೆಲ್ಲವನ್ನೂ ನೀನು ತಿಳಿದುಕೊಂಡಿರುವೆ. ಮಾಡಬೇಕಾದ ಕರ್ತವ್ಯವನ್ನೂ ಮಾಡಿರುವೆ. ಭಾಗೀರಥಿಯ ಮಗನಾದ ಭೀಷ್ಮನಿಂದಲೂ, ಕೃಷ್ಣದ್ವೈಪಾಯನರಿಂದಲೂ, ನಾರದರಿಂದಲೂ, ವಿದುರನಿಂದಲೂ ನೀನು ರಾಜಧರ್ಮಗಳನ್ನು ಕೇಳಿರುವೆ. ಇಂತಹ ನೀನು ಮೂಢರಂತೆ ವ್ಯವಹರಿಸುವುದು ಯೋಗ್ಯವಲ್ಲ. ನಿನ್ನ ತಾತ-ಮುತ್ತಾತಂದಿರು ಆಶ್ರಯಿಸಿದ ಕ್ಷತ್ರವೃತ್ತಿಯನ್ನೇ ನೀನು ಆಶ್ರಯಿಸಿ ರಾಜ್ಯಭಾರವನ್ನು ವಹಿಸಿಕೋ.

ಯುಕ್ತಂ ಹಿ ಯಶಸಾ ಕ್ಷಾತ್ರಂ ಸ್ವರ್ಗಂ ಪ್ರಾಪ್ತುಮಸಂಶಯಮ್ ।
ನ ಹಿ ಕಶ್ಚಿದ್ಧಿ ಶೂರಾಣಾಂ ನಿಹತೋಽತ್ರ ಪರಾಙ್ಮುಖಃ ॥೭॥

ಕ್ಷತ್ರಿಯಸಮುದಾಯವು ಯುದ್ಧದಲ್ಲಿ ಪಡೆಯುವ ಯಶಸ್ಸಿನಿಂದ ಸ್ವರ್ಗವನ್ನು ಹೊಂದಲು ಬಯಸುವುದು ಯುಕ್ತವಾಗಿಯೇ ಇದೆ. ಇದರಲ್ಲಿ ಸಂದೇಹವೇ ಇಲ್ಲ. ಇಷ್ಟು ಮಂದಿ ಶೂರರಲ್ಲಿ ಯಾವ ಒಬ್ಬನೂ ಯುದ್ಧದಿಂದ ಪರಾಙ್ಮುಖನಾಗಿ ಕೊಲ್ಲಲ್ಪಟ್ಟಿರುವುದಿಲ್ಲ. (ಎಲ್ಲರೂ ವೀರಸ್ವರ್ಗವನ್ನು ಹೊಂದಿರುತ್ತಾರೆ.)

ತ್ಯಜ ಶೋಕಂ ಮಹಾರಾಜ ಭವಿತವ್ಯಂ ಹಿ ತತ್ತಥಾ ।
ನ ಶಕ್ಯಾಸ್ತೇ ಪುನರ್ದ್ರಷ್ಟುಂ ತ್ವಯಾ ಯೇಽಸ್ಮಿನ್ರಣೇ ಹತಾಃ ॥೮॥

ಮಹಾರಾಜ! ಶೋಕವನ್ನು ಬಿಡು. ಈಗ ಏನಾಗಿದೆಯೋ ಅದು ಹಾಗೆಯೇ ಆಗಬೇಕಾಗಿದ್ದಿತು. ನೀನೆಷ್ಟು ದುಃಖಪಟ್ಟರೂ ಈ ಯುದ್ಧದಲ್ಲಿ ಹತರಾದವರನ್ನು ಪುನಃ ನೀನು ನೋಡಲಾರೆ. ಆದುದರಿಂದ ದುಃಖವನ್ನು ನಿಲ್ಲಿಸು. ಮುಂದಿನ ಕರ್ತವ್ಯವನ್ನು ಮಾಡು."

ಜನಮೇಜಯ! ಧರ್ಮರಾಜನಾದ ಯುಧಿಷ್ಠಿರನಿಗೆ ಮಹಾತೇಜಸ್ವಿಯಾದ ಶ್ರೀಕೃಷ್ಣನು ಇಷ್ಟು ಹೇಳಿ ಸುಮ್ಮನಾದನು.

ಬಳಿಕ ಯುಧಿಷ್ಠಿರನು ಮೌನವನ್ನು ಮುರಿದು ಶ್ರೀಕೃಷ್ಣನಿಗೆ ಹೇಳಿದನು:

“ಗೋವಿಂದನೇ! ನಿನಗೆ ನನ್ನ ಮೇಲೆ ಯಾವ ವಿಧವಾದ ಪ್ರೀತಿಯಿದೆಯೆಂಬುದು ನನಗೆ ತಿಳಿದಿದೆ. ಸೌಹಾರ್ದದಿಂದಲೂ ಮತ್ತು ಪ್ರೇಮದಿಂದಲೂ ನೀನು ನನ್ನ ವಿಷಯದಲ್ಲಿ ಯಾವಾಗಲೂ ಕೃಪಾವಿಷ್ಟ ನಾಗಿಯೇ ಇರುವೆ. ಚಕ್ರಗದಾಧರನೇ! ಶ್ರೀಮಂತನೇ! ಯಾದವ ನಂದನನೇ! ನೀನೇನಾದರೂ ಪ್ರಸನ್ನವಾದ ಮನಸ್ಸಿನಿಂದ ನನಗೆ ಅರಣ್ಯಕ್ಕೆ ಹೋಗಲು ಅನುಮತಿಯನ್ನಿತ್ತಿದ್ದರೆ ನನಗೆ ಅತ್ಯಂತ ಪ್ರಿಯವನ್ನು ಮಾಡಿ ದಂತಾಗುತ್ತಿತ್ತು. ಪಿತಾಮಹನಾದ ಭೀಷ್ಮನನ್ನೂ, ಯುದ್ಧಗಳಲ್ಲಿ ಯಾವಾಗಲೂ ಬೆನ್ನು ತಿರುಗಿಸಿಕೊಂಡು ಪಲಾಯನಮಾಡದಿದ್ದ ಪುರುಷ ಸಿಂಹನಾದ ಕರ್ಣನನ್ನೂ ಸಂಹರಿಸಿದನಂತರ ನನ್ನ ಮನಸ್ಸಿಗೆ ಶಾಂತಿ ಯೆಂಬುದೇ ಇಲ್ಲವಾಗಿದೆ. ಅರಿಂದಮನೇ! ಈಗ ಯಾವ ಕರ್ಮವನ್ನು ಮಾಡಿದರೆ ಕ್ರೌರ್ಯದಿಂದ ಮಾಡಿದ ಈ ಪಾಪದಿಂದ ವಿಮುಕ್ತನಾಗುವೆನೋ ಮತ್ತು ನನ್ನ ಮನಸ್ಸೂ ಶುದ್ಧಿಗೊಳ್ಳುವುದೋ–ಅಂತಹ ಕರ್ಮವನ್ನು ನಿರ್ದೇಶಿಸು.”

ಜನಮೇಜಯ! ಶ್ರೀಕೃಷ್ಣನೊಡನೆ ಹೀಗೆ ಮಾತನಾಡುತ್ತಿದ್ದ ಯುಧಿಷ್ಠಿರನನ್ನು ಧರ್ಮವಿದರಾದ ಮಹಾತೇಜಸ್ವಿಗಳಾದ ವ್ಯಾಸರು ಸಾಂತ್ವನಗೊಳಿಸುತ್ತಾ ಅರ್ಥವತ್ತಾದ ಈ ಮಾತನ್ನು ಹೇಳಿದರು:

“ಮಗು! ಯುಧಿಷ್ಠಿರ! ನಿಶ್ಚಯವಾಗಿಯೂ ನಿನ್ನ ಬುದ್ಧಿಯು ಇನ್ನೂ ಪರಿಪಕ್ವತೆಯನ್ನು ಹೊಂದಿಲ್ಲ. ಪುನಃ ನೀನು ಬಾಲ್ಯೋಚಿತವಾದ ಅವಿವೇಕದಿಂದಲೇ ವಿಮೋಹಗೊಳ್ಳುತ್ತಿರುವೆ. ನಮ್ಮ ಸ್ವರೂಪವಾದರೂ (ಮರ್ಯಾದೆಯಾದರೂ) ಏನಾಯಿತು? ನಾವು ಪುನಃ ಪುನಃ ನಿನ್ನ ಮುಂದೆ ವ್ಯರ್ಥವಾಗಿ ಪ್ರಲಪಿಸುತ್ತಲೇ ಇದ್ದೇವೆ. ಯಾರಿಗೆ ಯುದ್ಧದಿಂದಲೇ ಜೀವಿಕೆಯೋ–ಅಂತಹ ಕ್ಷತ್ರಿಯರ ಧರ್ಮಗಳೆಲ್ಲವೂ ನಿನಗೆ ಸಂಪೂರ್ಣವಾಗಿ ತಿಳಿದಿದೆ. ಹಾಗೆ ಕ್ಷತ್ರಿಯಧರ್ಮಾನುಸಾರವಾಗಿ ವ್ಯವಹರಿಸುವ ರಾಜನು ಎಂದಿಗೂ ಮಾನಸಿಕಚಿಂತೆಗೆ ಈಡಾಗುವುದಿಲ್ಲ. ನಿನ್ನ ಇಷ್ಟಾನುಸಾರವಾಗಿ ಕೇಳಿದ ಸಂದೇಹಗಳೆಲ್ಲವನ್ನೂ ನಾನು ಹಲವು ಬಾರಿ ಪರಿಹರಿಸಿರುತ್ತೇನೆ. ಆದರೆ ನೀನು ದುರ್ಬುದ್ಧಿಯವನಾದ ಕಾರಣ ನನ್ನ ಮಾತಿನಲ್ಲಿ ನಿನಗೆ ಶ್ರದ್ಧೆಯೇ ಇಲ್ಲವಾಗಿದೆ. ಅಥವಾ ನಿನ್ನ ಸ್ಮರಣಶಕ್ತಿಯಾದರೂ ಲುಪ್ತವಾಗಿ ಹೋಗಿದೆ. ಇದು ನಿಜ.

ಯುಧಿಷ್ಠಿರ! ಹೀಗೆಂದೂ ಆಡಬೇಡ. (ಸ್ವಧರ್ಮಕ್ಕೆ ವಿರುದ್ಧವಾಗಿ ವ್ಯವಹರಿಸಬೇಡ) ಈ ವಿಧವಾದ ಅಜ್ಞಾನವನ್ನಾಶ್ರಯಿಸುವುದು ನಿನಗೆ ಯುಕ್ತವಲ್ಲ. ನಿಷ್ಪಾಪನೇ! ಸಕಲವಿಧವಾದ ಪ್ರಾಯಶ್ಚಿತ್ತಗಳನ್ನೂ ನೀನು ತಿಳಿದುಕೊಂಡಿರುವೆ. ಎಲ್ಲ ರಾಜಧರ್ಮಗಳೂ ಮತ್ತು ದಾನ-ಧರ್ಮಗಳೂ ನಿನಗೆ ತಿಳಿದಿವೆ. ಭಾರತನೇ! ಹೀಗೆ ನೀನು ಸರ್ವಧರ್ಮಗಳನ್ನೂ ತಿಳಿದವನಾಗಿದ್ದರೂ, ಸರ್ವಶಾಸ್ತ್ರಗಳಲ್ಲಿ ವಿಶಾರದನಾಗಿದ್ದರೂ ಪುನಃ ಅಜ್ಞಾನಕ್ಕೆ ವಶನಾಗಿ ಏಕೆ ವಿಮೋಹಗೊಳ್ಳುತ್ತಿರುವೆ?"

೨ನೆಯ ಅಧ್ಯಾಯವು ಮುಗಿಯಿತು.

೩ನೆಯ ಅಧ್ಯಾಯ ಅಶ್ವಮೇಧಪರ್ವ (ಮುಂದುವರಿದಿದೆ.)

ವ್ಯಾಸರು ಯುಧಿಷ್ಠಿರನಿಗೆ ಅಶ್ವಮೇಧಯಾಗಕ್ಕಾಗಿ ಧನವನ್ನು ಸಂಗ್ರಹಿಸುವ ಉಪಾಯವನ್ನು ಹೇಳುತ್ತಾ ಸಂವರ್ತ ಮತ್ತು ಮರುತ್ತರ ಪ್ರಸಂಗವನ್ನು ಹೇಳಿದುದು.

ವ್ಯಾಸರು ಮುಂದುವರಿದು ಹೇಳುತ್ತಾರೆ:

ಯುಧಿಷ್ಠಿರ ತವ ಪ್ರಜ್ಞಾ ನ ಸಮ್ಯಗಿತಿ ಮೇ ಮತಿಃ ।
ನಹಿ ಕಶ್ಚಿತ್ಸ್ವಯಂ ಮರ್ತ್ಯಃ ಸ್ವವಶಃ ಕುರುತೇ ಕ್ರಿಯಾಮ್ ॥೧॥

"ಯುಧಿಷ್ಠಿರ! ನಿನ್ನ ಪ್ರಜ್ಞೆಯು ಸರಿಯಲ್ಲವೆಂದೇ ನನ್ನ ಅಭಿಪ್ರಾಯವಾಗಿದೆ. ಯಾವ ಮನುಷ್ಯನೇ ಆಗಲಿ–ತಾನಾಗಿ ಯಾವ ಕಾರ್ಯವನ್ನೂ ಮಾಡುವುದಿಲ್ಲ.

ಈಶ್ವರೇಣ ಚ ಯುಕ್ತೋಽಯಂ ಸಾಧ್ವಸಾಧು ಚ ಮಾನವಃ ।
ಕರೋತಿ ಪುರುಷಃ ಕರ್ಮ ತತ್ರ ಕಾ ಪರಿದೇವನಾ ॥೨॥

ಈಶ್ವರನಿಂದ (ವಿಧಿಯಿಂದ) ಪ್ರೇರಿತನಾದ ಈ ಮನುಷ್ಯನು ಒಳ್ಳೆಯದು ಮತ್ತು ಕೆಟ್ಟುದು–ಎಂಬ ಎರಡು ವಿಧವಾದ ಕರ್ಮಗಳನ್ನೂ ಮಾಡುತ್ತಾನೆ. ಈಶ್ವರಪ್ರೇರಿತವಾಗಿಯೇ ನಡೆದಿರುವ ಈ ಸಂಹಾರವಿಷಯದಲ್ಲಿ ಶೋಕಕ್ಕೆ ಕಾರಣವೇನಿದೆ?

ಆತ್ಮಾನಂ ಮನ್ಯಸೇ ಚಾಥಾ ಪಾಪಕರ್ಮಾಣಮನ್ತತಃ ।
ಶೃಣು ತತ್ರ ಯಥಾಪಾಪಮಪಕೃಷ್ಯೇತ ಭಾರತ ॥೩॥

ಇಷ್ಟಾದರೂ ಕೊನೆಗೂ ನೀನು ನಿನ್ನನ್ನು ಪಾಪಕರ್ಮನೆಂದೂ ಯುದ್ಧರೂಪವಾದ ಈ ಪಾಪಕರ್ಮಕ್ಕೆ ಕಾರಣನೆಂದೂ ಭಾವಿಸುವೆಯಾದರೆ ಅಂತಹ ಪಾಪವನ್ನು ಕೂಡ ಯಾವ ರೀತಿಯಲ್ಲಿ ಕಳೆದುಕೊಳ್ಳಲು ಸಾಧ್ಯವಾಗುವುದೆಂಬುದನ್ನು ಹೇಳುವೆನು; ಕೇಳು.

ತಪೋಭಿಃ ಕ್ರತುಭಿಶ್ಚೈವ ದಾನೇನ ಚ ಯುಧಿಷ್ಠಿರ ।
ತರನ್ತಿ ನಿತ್ಯಂ ಪುರುಷಾ ಯೇ ಸ್ಮ ಪಾಪಾನಿ ಕುರ್ವತೇ ॥೪॥

ಪಾಪಗಳನ್ನು ಮಾಡುವವರು ಯಾವಾಗಲೂ ತಪಸ್ಸುಗಳಿಂದಲೂ, ಯಜ್ಞಗಳಿಂದಲೂ ಮತ್ತು ದಾನದಿಂದಲೂ ಪಾಪರಾಶಿಯನ್ನು ದಾಟುತ್ತಾರೆ.

ಯಜ್ಞೇನ ತಪಸಾ ಚೈವ ದಾನೇನ ಚ ನರಾಧಿಪ ।
ಪೂಯನ್ತೇ ನರಶಾರ್ದೂಲ ನರಾ ದುಷ್ಕೃತಕಾರಿಣಃ ॥೫॥

ನರಾಧಿಪನೇ! ಪಾಪಾಚಾರಿಗಳಾದ ಮನುಷ್ಯರು ಯಜ್ಞದಿಂದಲೂ ತಪಸ್ಸಿನಿಂದಲೂ ಮತ್ತು ದಾನದಿಂದಲೂ ಪರಿಶುದ್ಧರಾಗುತ್ತಾರೆ.

ಅಸುರಾಶ್ಚ ಸುರಾಶ್ಚೈವ ಪುಣ್ಯಹೇತೋರ್ಮಖಕ್ರಿಯಾಮ್ ।
ಪ್ರಯತನ್ತೇ ಮಹಾತ್ಮಾನಸ್ತಸ್ಮಾದ್ಯಜ್ಞಾಃ ಪರಾಯಣಮ್ ॥೬॥

ಮಹಾತ್ಮರಾದ ದೇವತೆಗಳೂ ಮತ್ತು ದೈತ್ಯರೂ ಪುಣ್ಯಸಂಪಾದನೆಗಾಗಿ ಯಜ್ಞಮಾಡಲು ಪ್ರಯತ್ನಿಸುತ್ತಾರೆ. ಆದುದರಿಂದ ಪಾಪಗಳನ್ನು ಕಳೆದುಕೊಳ್ಳುವುದಕ್ಕೂ ಮತ್ತು ಪುಣ್ಯಸಂಪಾದನೆಗೂ ಯಜ್ಞವೇ ಪರಮಾಶ್ರಯವಾಗಿದೆ.

ಯಜ್ಞೈರೇವ ಮಹಾತ್ಮಾನೋ ಬಭೂವುರಧಿಕಾಃ ಸುರಾಃ ।
ತತೋ ದೇವಾಃ ಕ್ರಿಯಾವನ್ತೋ ದಾನವಾನಭ್ಯಧರ್ಷಯನ್ ॥೭॥

ಯಜ್ಞಗಳಿಂದಲೇ ಮಹಾತ್ಮರಾದ ದೇವತೆಗಳು ಹೆಚ್ಚು ಬಲಶಾಲಿಗಳಾದರು. ಯಜ್ಞಕ್ರಿಯೆಯಲ್ಲಿ ನಿಷ್ಠರಾಗಿದ್ದುದರಿಂದಲೇ ಅವರು ದಾನವರನ್ನು ಪರಾಜಯಗೊಳಿಸಿದರು.

ಭಾರತನೇ! ಆದುದರಿಂದ, ನೀನೂ ಕೂಡ ರಾಜಸೂಯ, ಅಶ್ವಮೇಧ, ಸರ್ವಮೇಧ ಮತ್ತು ನರಮೇಧಗಳನ್ನು ಮಾಡು. ಬಹುದಕ್ಷಿಣೆಯುಳ್ಳ, ಮನೋವಾಂಛಿತವಾದ ಪದಾರ್ಥಗಳಿಂದಲೂ ಅನ್ನದಿಂದಲೂ ಸಂಪನ್ನವಾದ ಅಶ್ವಮೇಧಯಾಗವನ್ನು ದಶರಥನ ಮಗನಾದ ಶ್ರೀರಾಮನು ಮಾಡಿದಂತೆ ವಿಧಿವತ್ತಾಗಿ ಮಾಡು. ನಿನ್ನ ಪೂರ್ವಪಿತಾಮಹನಾದ, ಮಹಾಪರಾಕ್ರಮಿಯಾದ, ದುಷ್ಯಂತನ ಮಗನಾದ, ಶಕುಂತಲಾನಂದನನಾದ ಭರತಚಕ್ರವರ್ತಿಯು ಅಶ್ವಮೇಧಯಾಗವನ್ನು ಮಾಡಿದಂತೆ ನೀನೂ ಆ ಮಹಾಯಾಗವನ್ನು ಮಾಡು."

ಯುಧಿಷ್ಠಿರನು ಹೇಳುತ್ತಾನೆ:

"ವಿಪ್ರಶ್ರೇಷ್ಠರೇ! ನೀವು ಹೇಳಿದಂತೆ ಅಶ್ವಮೇಧಯಾಗವು ಅಖಂಡಭೂಮಂಡಲವನ್ನೂ ಪವಿತ್ರಗೊಳಿಸುತ್ತದೆ. ಇದರಲ್ಲಿ ಸಂಶಯವಿಲ್ಲ. ಈ ವಿಷಯದಲ್ಲಿ ನನ್ನದೊಂದು ಅಭಿಪ್ರಾಯವಿದೆ. ಅದನ್ನು ನೀವು ಕೇಳುವ ಕೃಪೆಮಾಡಿರಿ. ಜ್ಞಾತಿಗಳ ಮಹತ್ತರವಾದ ಈ ಸಂಹಾರವನ್ನು ಮಾಡಿರುವ ನಾನೀಗ ಅತ್ಯಲ್ಪವಾದ ದಾನಮಾಡಲು ಕೂಡ ಅಸಮರ್ಥನಾಗಿದ್ದೇನೆ. ಈಗ ನನ್ನ ಬಳಿಯಲ್ಲಿ ಐಶ್ವರ್ಯವೇ ಇಲ್ಲವಾಗಿದೆ. ಬಾಲರೂ ದೀನರೂ ಆಗಿರುವ ಈ ರಾಜಕುಮಾರರಿಂದ ಹಣವನ್ನು ಯಾಚಿಸುವ ಉತ್ಸಾಹವು ನನಗಿಲ್ಲ. ಹಾಗೆಯೇ ಗಾಯಗಳಿನ್ನೂ ಮಾಯದೆಯೇ ಇರುವ, ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುವ ರಾಜಪುತ್ರರಿಂದಲೂ ನಾನು ಐಶ್ವರ್ಯವನ್ನೂ ಯಾಚಿಸಲಾರೆನು. ಯುದ್ಧದ ಮೂಲಕವಾಗಿ ಈ ಭೂಮಂಡಲವೆಲ್ಲವನ್ನೂ ನಾನೇ ವಿನಾಶಗೊಳಿಸಿರುವಾಗ ಕಪ್ಪ-ಕಾಣಿಕೆಗಳನ್ನು ಹೇಗೆ ಸಂಗ್ರಹಿಸಲಿ? ಮುನಿಶ್ರೇಷ್ಠರೇ! ದುರ್ಯೋಧನನ ಅಪರಾಧದಿಂದ ಭೂಮಂಡಲವು ವಿನಾಶವಾಯಿತು. ಭೂಮಂಡಲದ ರಾಜರೂ ನಾಶವಾದರು. ಅವನು ಮಾಡಿದ ಅಪರಾಧವು ನಮ್ಮನ್ನು ಅಪಕೀರ್ತಿಗೆ ಈಡುಮಾಡಿತು. ದುರ್ಯೋಧನನು ಐಶ್ವರ್ಯದ ಲೋಭದಿಂದಲೇ ಪೃಥ್ವಿಯನ್ನು ಶೋಷಿಸಿಬಿಟ್ಟನು. ಹಾಗೆ ಪೃಥ್ವಿಯನ್ನೂ

ಶೋಷಿಸಿ ಧನವನ್ನು ಸಂಗ್ರಹಿಸಿದ್ದರೂ ಇಂದು ದುರ್ಮತಿಯಾದ ಅವನ ಭಂಡಾರವು ಬರಿದಾಗಿ ಹೋಗಿದೆ. ಅಶ್ವಮೇಧಯಾಗದಲ್ಲಿ ಪೃಥ್ವಿಯನ್ನೇ ದಕ್ಷಿಣೆಯ ರೂಪದಲ್ಲಿ ಕೊಡುವುದು ಮುಖ್ಯಕಲ್ಪವೆಂಬುದು ವಿದ್ವಾಂಸರಿಂದ ಚೆನ್ನಾಗಿ ಯೋಚಿಸಿ ನಿರ್ಣಯಿಸಲ್ಪಟ್ಟ ವಿಧಿಯಾಗಿದೆ. ಇದನ್ನು ಬಿಟ್ಟು ಅನ್ಯವಿಧಿಯನ್ನು ಆಶ್ರಯಿಸುವುದು ವಿಧಿಗೆ ವ್ಯತ್ಯಾಸವಾಗುತ್ತದೆ. ಪ್ರಾಚೀನವಿಧಿಗೆ ವಿರುದ್ಧವಾಗಿ ನಡೆದಂತಾಗುತ್ತದೆ. ಭೂರೂಪವಾದ ದಕ್ಷಿಣೆಗೆ ಬದಲಾಗಿ ಬೇರೆಯ ದಕ್ಷಿಣೆಯನ್ನು ಕೊಡಲು ನಾನು ಇಷ್ಟಪಡುವುದಿಲ್ಲ. ಈ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದರ ಬಗೆಗೆ ಉಚಿತವಾದ ಸಲಹೆಯನ್ನು ನೀಡುವ ಕೃಪೆಮಾಡಿರಿ."

ಜನಮೇಜಯ! ಯುಧಿಷ್ಠಿರನು ಹೀಗೆ ಹೇಳಿದನಂತರ ಕೃಷ್ಣದ್ವೈಪಾಯನರು ಸ್ವಲ್ಪಹೊತ್ತು ಯೋಚಿಸುತ್ತಿದ್ದು ಅನಂತರ ಧರ್ಮರಾಜನಿಗೆ ಹೇಳಿದರು: "ಯುಧಿಷ್ಠಿರ! ನೀನು ನಿನ್ನ ಭಂಡಾರದ ವಿಷಯವಾಗಿ ಯೋಚಿಸಬೇಕಾದ ಕಾರಣವಿಲ್ಲ. ಇಂದು ಅದು ಬರಿದಾಗಿರುವುದು ನಿಜ. ಆದರೆ ಶೀಘ್ರವಾಗಿಯೇ ತುಂಬುತ್ತದೆ. ಮಹಾತ್ಮನಾದ ಮರುತ್ತನ ಯಜ್ಞದಲ್ಲಿ ಬ್ರಾಹ್ಮಣರಿಂದ ಹೊರಲಾಗದೇ ವಿಸರ್ಜಿಸಲ್ಪಟ್ಟ ಐಶ್ವರ್ಯವು ಈಗಲೂ ಹಿಮವತ್ಪರ್ವತದ ತಪ್ಪಲಿನಲ್ಲಿ ಇದೆ. ಆ ಐಶ್ವರ್ಯವನ್ನು ತೆಗೆದುಕೊಂಡು ಬಾ. ಅದು ನೀನು ಮಾಡಲಿರುವ ಅಶ್ವಮೇಧಕ್ಕೆ ಸಾಕಾಗುತ್ತದೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

"ವಾಗ್ಮಿಗಳಲ್ಲಿ ಶ್ರೇಷ್ಠರಾದವರೇ! ಮರುತ್ತನು ಯಾವ ಕಾಲದಲ್ಲಿದ್ದನು? ಯಜ್ಞದಲ್ಲಿ ಅಷ್ಟು ಐಶ್ವರ್ಯವು ಹೇಗೆ ಸಂಗ್ರಹವಾಯಿತು? ಇದನ್ನು ದಯಮಾಡಿ ಹೇಳಿರಿ."

ವ್ಯಾಸರು ಹೇಳುತ್ತಾರೆ:

"ಯುಧಿಷ್ಠಿರ! ನಿನಗೆ ಕೇಳುವ ಅಪೇಕ್ಷೆಯಿದ್ದರೆ ಕರಂಧಮನ

ಮೊಮ್ಮಗನಾದ ಮರುತ್ತನ ವೃತ್ತಾಂತವನ್ನು ಹೇಳುವೆನು; ಕೇಳು. ಮಹಾಧನಿಯೂ ಮತ್ತು ಮಹಾಪರಾಕ್ರಮಿಯೂ ಆಗಿದ್ದ ಆ ರಾಜನು ಯಾವ ಕಾಲದಲ್ಲಿ ಇದ್ದನೆಂಬುದನ್ನೂ ಹೇಳುವೆನು."

೩ನೆಯ ಅಧ್ಯಾಯವು ಮುಗಿಯಿತು.

೪ನೆಯ ಅಧ್ಯಾಯ ಅಶ್ವಮೇಧಪರ್ವ(ಮುಂದುವರಿದಿದೆ.)

ಮರುತ್ತನ ಪೂರ್ವಜರ ಪರಿಚಯಮಾಡಿಕೊಡುತ್ತಾ ವ್ಯಾಸರು ಅವನ ಗುಣ, ಪ್ರಭಾವ ಮತ್ತು ಅವನು ಮಾಡಿದ ಯಜ್ಞ-ಇವುಗಳ ವಿಷಯವಾಗಿ ಹೇಳಿದುದು.

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಶುಶ್ರೂಷೇ ತಸ್ಯ ಧರ್ಮಜ್ಞ ರಾಜರ್ಷೇಃ ಪರಿಕೀರ್ತನಮ್ ।
ದ್ವೈಪಾಯನ ಮರುತ್ತಸ್ಯ ಕಥಾಂ ಪ್ರಬ್ರೂಹಿ ಮೇಽನಘ ॥೧॥

"ಧರ್ಮಜ್ಞರೇ! ನಿಷ್ಪಾಪರೇ! ದ್ವೈಪಾಯನವ್ಯಾಸಮಹಾಮುನಿಗಳೇ! ರಾಜರ್ಷಿಯಾದ ಮರುತ್ತನ ಕಥೆಯನ್ನೂ ಮತ್ತು ಅವನ ಅನೇಕ ಕಲ್ಯಾಣಗುಣಗಳನ್ನೂ ಕೇಳಲು ನನಗೆ ಬಹಳ ಆಸಕ್ತಿಯುಂಟಾಗಿದೆ. ದಯಮಾಡಿ ಅವನ ಕಥೆಯನ್ನು ವಿಸ್ತಾರವಾಗಿಯೇ ಹೇಳುವ ಕೃಪೆಮಾಡಿರಿ."

ವ್ಯಾಸರು ಹೇಳುತ್ತಾರೆ:

"ಮಗು! ಕೃತಯುಗದಲ್ಲಿ ರಾಜದಂಡವನ್ನು ಧರಿಸಿದ್ದ, ಶಕ್ತಿಶಾಲಿಯಾದ ಮನುವೆಂಬ ರಾಜನಿದ್ದನು. ಅವನ ಮಗನು ಮಹಾಬಾಹುವಾದ ಪ್ರಸಂಧಿಯೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಪ್ರಸಂಧಿಗೆ ಕ್ಷುಪನೆಂಬ ಹೆಸರಿನ ವಿಖ್ಯಾತನಾಗಿದ್ದ ಮಗನಿದ್ದನು. ಕ್ಷುಪನ ಅನಂತರ ಅವನ ಮಗನಾದ ಶಕ್ತಿಶಾಲಿಯಾದ ಇಕ್ಷ್ವಾಕುವು ಭೂಮಂಡಲಕ್ಕೆ ರಾಜನಾದನು. ಇಕ್ಷ್ವಾಕುವಿಗೆ ಪರಮಧಾರ್ಮಿಕರಾದ ನೂರು ಮಕ್ಕಳಿದ್ದರು. ಪ್ರಭಾವಶಾಲಿಯಾದ ಇಕ್ಷ್ವಾಕುವು ಅವರೆಲ್ಲರನ್ನೂ ಮಹೀಪತಿಗಳನ್ನಾಗಿ ಮಾಡಿದನು. (ತನ್ನ ರಾಜ್ಯವನ್ನು ತನ್ನ ನೂರು ಮಂದಿ ಮಕ್ಕಳಿಗೂ ಹಂಚಿಕೊಟ್ಟನು.) ಇಕ್ಷ್ವಾಕುವಿನ ನೂರು ಮಕ್ಕಳಲ್ಲಿ ಹಿರಿಯನಾದ

ವಿಂಶನೆಂಬುವನು ಧನುರ್ಧಾರಿಗಳಲ್ಲಿಯೇ ಆದರ್ಶನಾಗಿದ್ದನು. ವಿಂಶನಿಗೆ ಮಂಗಳಕರನಾದ ಪುತ್ರನಾಗಿ ವಿವಿಂಶ ಎಂಬುವನು ಹುಟ್ಟಿದನು. ವಿವಿಂಶನಿಗೆ ಹದಿನೈದು ಮಂದಿ ಮಕ್ಕಳು ಹುಟ್ಟಿದರು. ಅವರೆಲ್ಲರೂ ಧನುರ್ಯುದ್ಧದಲ್ಲಿ ಅತುಲವಾದ ಪರಾಕ್ರಮವುಳ್ಳವರಾಗಿದ್ದರು. ಬ್ರಾಹ್ಮಣಪ್ರಿಯರಾಗಿದ್ದರು. ಸತ್ಯವಾದಿಗಳಾಗಿದ್ದರು. ದಾನ- ಧರ್ಮಗಳಲ್ಲಿ ಸದಾ ನಿರತರಾಗಿರುತ್ತಿದ್ದರು. ಶಾಂತಸ್ವಭಾವದವರಾಗಿದ್ದರು. ಯಾವಾಗಲೂ ಪ್ರಿಯವಾದ ಮಾತುಗಳನ್ನೇ ಹೇಳುತ್ತಿದ್ದರು. ಅವರಲ್ಲಿ ಹಿರಿಯನಾದ ಖನೀನೇತ್ರನು ತನ್ನ ತಮ್ಮಂದಿರನ್ನು ಬಹಳವಾಗಿ ಪೀಡಿಸುತ್ತಿದ್ದನು. ಮಹಾಪರಾಕ್ರಮಿಯಾಗಿದ್ದ ಖನೀನೇತ್ರನು ರಾಜ್ಯವನ್ನು ಗೆದ್ದು ನಿಷ್ಕಂಟಕವನ್ನಾಗಿ (ಶತ್ರುರಹಿತವನ್ನಾಗಿ) ಮಾಡಿಕೊಂಡಿದ್ದರೂ ಆ ರಾಜ್ಯವನ್ನು ರಕ್ಷಿಸಲು ಅವನಿಗೆ ಸಾಧ್ಯವಾಗಲಿಲ್ಲ. ಏಕೆಂದರೆ: ಪ್ರಜೆಗಳು ಅವನ ವಿಷಯದಲ್ಲಿ ಅನುರಾಗದಿಂದಿರಲಿಲ್ಲ. ಆ ಕಾರಣದಿಂದ ಪ್ರಜೆಗಳೆಲ್ಲರೂ ಖನೀನೇತ್ರರಾಜನನ್ನು ರಾಜ್ಯದಿಂದ ಓಡಿಸಿ ಅವನ ಮಗನಾದ ಸುವರ್ಚಸನನ್ನು ರಾಜ್ಯಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದರು. ಅದರಿಂದ ಪ್ರಜೆಗಳಿಗೆ ಅತ್ಯಾನಂದವಾಯಿತು. ಸುವರ್ಚಸನು ತನ್ನ ತಂದೆಯು ಮಾಡಿದ ದುಷ್ಟಕ್ರಿಯೆಗಳು ಮತ್ತು ಅದೇ ಕಾರಣದಿಂದ ಪ್ರಜೆಗಳು ಅವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿದುದು—ಈ ಎಲ್ಲವನ್ನೂ ಗಮನಿಸಿ ಪ್ರಜೆಗಳಿಗೆ ಹಿತವನ್ನುಂಟುಮಾಡುವ ಇಚ್ಛೆಯಿಂದ ನಿಯತನಾಗಿ ವ್ಯವಹರಿಸಲು (ನಿಯಮಪೂರ್ವಕವಾಗಿ ಪ್ರಜೆಗಳೊಡನೆ ವ್ಯವಹರಿಸಲು) ಪ್ರಾರಂಭಿಸಿದನು. ಸುವರ್ಚಸನು ಬ್ರಾಹ್ಮಣಪ್ರಿಯನಾಗಿದ್ದನು. ಸತ್ಯನಿಷ್ಠನಾಗಿದ್ದನು. ಶುಚಿಯಾಗಿದ್ದನು. ಶಮ-ದಮಾದಿಗುಣಗಳಿಂದ ಕೂಡಿದ್ದನು. (ಜಿತೇಂದ್ರಿಯನಾಗಿದ್ದನು.) ಅಂತಹ ಧರ್ಮನಿತ್ಯನಾಗಿದ್ದ ಮತ್ತು ಸ್ಥಿರಚಿತ್ತನಾಗಿದ್ದ ಸುವರ್ಚಸನನ್ನು ಪ್ರಜೆಗಳೆಲ್ಲರೂ ಬಹಳವಾಗಿ ಪ್ರೀತಿಸತೊಡಗಿದರು.

ಆದರೆ ಯಾವಾಗಲೂ ದಾನ-ಧರ್ಮಗಳಲ್ಲಿಯೇ ತೊಡಗಿದ್ದ ಸುವರ್ಚಸರಾಜನ ಭಂಡಾರವು ಬರಿದಾಗಿಹೋಯಿತು. ವ್ಯವಸ್ಥಿತವಾದ ಉಪಚಾರವಿಲ್ಲದ ಕಾರಣ ಆನೆ-ಕುದುರೆ ಮುಂತಾದ ವಾಹನಗಳೂ ನಷ್ಟವಾಗಿ ಹೋದುವು. ಸುವರ್ಚಸನ ಭಂಡಾರವು ಬರಿದಾದುದನ್ನು

ತಿಳಿದು ಅವನ ಸಾಮಂತರಾಜರು ಎಲ್ಲ ಕಡೆಗಳಿಂದಲೂ ದಾಳಿಯನ್ನು ಮಾಡತೊಡಗಿದರು. ಹಣವನ್ನೂ ವಾಹನಗಳನ್ನೂ ಕಳೆದುಕೊಂಡಿದ್ದ ಸುವರ್ಚಸನು ಸಾಮಂತರಾಜರ ದಾಳಿಗೆ ತುತ್ತಾಗಿ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡನು. ಅವನಂತೆಯೇ ಅವನ ಸೇವಕರೂ ಮತ್ತು ಪ್ರಜೆಗಳೂ ಅತಿಕಷ್ಟಕ್ಕೀಡಾದರು. ಸುವರ್ಚಸನು ಧರ್ಮಪರಾಯಣನೂ ಸದಾಚಾರಿಯೂ ಆಗಿದ್ದುದರಿಂದ ಅವನ ಸೈನ್ಯವು ಸಂಪೂರ್ಣವಾಗಿ ನಾಶಹೊಂದಿದ್ದರೂ ಶತ್ರುಗಳು ರಾಜನನ್ನು ಸಂಹರಿಸಲು ಅಸಮರ್ಥರಾದರು. ಪುರವಾಸಿಗಳಿಂದ ಸಮೇತನಾಗಿ, ಅತ್ಯಂತಕಷ್ಟದಲ್ಲಿದ್ದ ಆ ಸಮಯದಲ್ಲಿ ಸುವರ್ಚಸರಾಜನು ಕೈಯ್ಯನ್ನೇ ಶಂಖವನ್ನಾಗಿ ಮಾಡಿಕೊಂಡು ಗಟ್ಟಿಯಾಗಿ ಊದಿದನು. ಒಡನೆಯೇ ದೊಡ್ಡದಾದ ಸೈನ್ಯವೇ ಪ್ರಕಟವಾಯಿತು. ಆ ಸೈನ್ಯದ ಸಹಾಯದಿಂದ ಸುವರ್ಚಸನು, ತನ್ನ ರಾಜ್ಯದ ಗಡಿಯಲ್ಲಿ ವಾಸಮಾಡಿಕೊಂಡಿದ್ದ, ತನ್ನ ಮೇಲೆ ಆಕ್ರಮಣಮಾಡಿದ್ದ ಎಲ್ಲ ರಾಜರನ್ನೂ ಪರಾಜಯಗೊಳಿಸಿ ಓಡಿಸಿದನು. ಆ ಕಾರಣದಿಂದಲೇ ಅವನು ಮುಂದೆ 'ಕರಂಧಮ' (ಕೈಯಿಂದ ಶಬ್ದಮಾಡಿದವನು.)–ಎಂಬ ಹೆಸರಿನಿಂದಲೇ ಪ್ರಸಿದ್ಧನಾದನು.

ತ್ರೇತಾಯುಗದ ಪ್ರಾರಂಭದಲ್ಲಿ ಕರಂಧಮನಿಗೆ ಕಾರಂಧಮ (ಅವಿಕ್ಷಿತ) ನೆಂಬ ಮಗನು ಹುಟ್ಟಿದನು. ಅಮೋಘವಾದ ಕಾಂತಿಯಿಂದ ಬೆಳಗುತ್ತಿದ್ದ ಕಾರಂಧಮನು ಇಂದ್ರನಿಗೆ ಯಾವುದರಲ್ಲಿಯೂ ಕಡಿಮೆಯಾಗಿರಲಿಲ್ಲ. ದೇವತೆಗಳಿಂದಲೂ ಜಯಿಸಲು ಅಸಾಧ್ಯನಾಗಿದ್ದನು. ಆ ಸಮಯದಲ್ಲಿ ಭೂಮಂಡಲದಲ್ಲಿದ್ದ ಎಲ್ಲ ರಾಜರೂ ಅವನಿಗೆ ಅಧೀನರಾಗಿದ್ದರು. ಸದಾಚಾರದಿಂದಲೂ ಮತ್ತು ಬಲದಿಂದಲೂ ಕಾರಂಧಮನು ಅವರೆಲ್ಲರಿಗೂ ಚಕ್ರವರ್ತಿಯಾಗಿದ್ದನು. ಅವಿಕ್ಷಿತನು ಧರ್ಮಾತ್ಮನಾಗಿದ್ದನು. ಶೌರ್ಯದಲ್ಲಿ ಇಂದ್ರನಿಗೆ ಸಮಾನನಾಗಿದ್ದನು. ಯಜ್ಞಶೀಲನಾಗಿದ್ದನು. ಧರ್ಮದಲ್ಲಿಯೇ ಆಸಕ್ತನಾಗಿದ್ದನು. ಧೈರ್ಯವಂತನೂ, ಜಿತೇಂದ್ರಿಯನೂ ಆಗಿದ್ದನು. ತೇಜಸ್ಸಿನಲ್ಲಿ ಸೂರ್ಯಸದೃಶನೂ, ಕ್ಷಮೆಯಲ್ಲಿ ಪೃಥ್ವೀಸದೃಶನೂ, ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನೂ, ಸ್ಥಿರತೆಯಲ್ಲಿ ಹಿಮವಂತನಿಗೆ ಸದೃಶನೂ ಆಗಿದ್ದನು. ಮಹೀಪತಿಯಾದ ಅವಿಕ್ಷಿತನು

ಇಂದ್ರಿಯಸಂಯಮದಿಂದಲೂ ಮನೋನಿಗ್ರಹದಿಂದಲೂ ಕೂಡಿದವನಾಗಿ, ಕರ್ಮದಿಂದಲೂ ಮನಸ್ಸಿನಿಂದಲೂ ಮಾತಿನಿಂದಲೂ ಪ್ರಜೆಗಳ ಮನಸ್ಸನ್ನು ಸಂತೋಷಗೊಳಿಸುತ್ತಿದ್ದನು. ಅತ್ಯಂತ ಪ್ರಭಾವಶಾಲಿಯಾಗಿದ್ದ ಆ ಭೂಪತಿಯು ವಿಧಿಪೂರ್ವಕವಾಗಿ ನೂರು ಅಶ್ವಮೇಧಯಾಗಗಳನ್ನು ಮಾಡಿದನು. ಮಹಾವಿದ್ವಾಂಸನಾದ, ಪ್ರಭುವಾದ ಅಂಗಿರಸಮುನಿಯೇ ರಾಜನಿಂದ ಆ ಯಾಗಗಳನ್ನು ಮಾಡಿಸಿದನು. ಅವಿಕ್ಷಿತನಿಗೆ ಮರುತ್ತನೆಂಬ ಮಗನು ಹುಟ್ಟಿದನು. ಅವನು ಮಹಾ ಯಶೋವಂತನೂ, ಧರ್ಮಜ್ಞನೂ, ಚಕ್ರವರ್ತಿಯೂ ಆಗಿದ್ದನು. ಮರುತ್ತನು ಸದ್ಗುಣಸಂಪನ್ನತೆಯಿಂದ ತನ್ನ ತಂದೆಯನ್ನೂ ಮೀರಿಸಿದ್ದನು. ಹತ್ತು ಸಾವಿರ ಆನೆಗಳ ಬಲದಿಂದ ಕೂಡಿದ್ದ ಮರುತ್ತನು ಮತ್ತೊಬ್ಬ ಸಾಕ್ಷಾದ್ವಿಷ್ಣುವೋ ಎಂಬಂತೆ ಕಾಣುತ್ತಿದ್ದನು. ಧರ್ಮಾತ್ಮನಾದ ಮರುತ್ತನು ಯಜ್ಞಮಾಡುವಾಗ ಶುಭ್ರವಾದ, ಸುವರ್ಣಮಯವಾದ ಸಾವಿರಾರು ಯಜ್ಞಪಾತ್ರೆಗಳನ್ನು ಮಾಡಿಸಿದನು. ಮರುತ್ತನು ಯಜ್ಞಮಾಡುವ ಸಲುವಾಗಿ ಹಿಮವತ್ಪರ್ವತದ ಉತ್ತರಭಾಗದಲ್ಲಿರುವ ಮೇರುಪರ್ವತಕ್ಕೆ ಹೋದನು. ಅದರ ಸಮೀಪದಲ್ಲಿಯೇ ಒಂದು ದೊಡ್ಡ ಸುವರ್ಣಪರ್ವತವೂ ಇದೆ. ಅಲ್ಲವನು ಯಜ್ಞಶಾಲೆಯನ್ನು ನಿರ್ಮಿಸಿ ಯಜ್ಞಕರ್ಮವನ್ನು ಪ್ರಾರಂಭಿಸಿದನು. ಮರುತ್ತನ ಆಜ್ಞೆಯಂತೆ ಅನೇಕ ಅಕ್ಕಸಾಲಿಗರು ಯಜ್ಞದ ಸಲುವಾಗಿ ಸುವರ್ಣಕುಂಡಗಳನ್ನೂ, ಸುವರ್ಣದ ಪಾತ್ರೆಗಳನ್ನೂ, ಅನ್ನವನ್ನು ಬೇಯಿಸುವ ಸುವರ್ಣದ ತಪ್ಪಲೆಗಳನ್ನೂ, ಆಸನಗಳನ್ನೂ ಸಿದ್ಧಗೊಳಿಸಿದರು. ಅವರು ಎಷ್ಟು ವಸ್ತುಗಳನ್ನು ತಯಾರಿಸಿದರೆಂಬುದನ್ನು ಎಣಿಕೆ ಮಾಡುವ ಸಾಧ್ಯತೆಯೇ ಇರಲಿಲ್ಲ. ಸುವರ್ಣಮಯವಾದ ಆ ಯಜ್ಞಸಾಮಗ್ರಿಗಳು ಅಸಂಖ್ಯಾತವಾಗಿದ್ದುವು. ಆ ಯಜ್ಞಪಾತ್ರೆಗಳೆಲ್ಲವೂ ಸಿದ್ಧವಾದನಂತರ ಮೇರುಪರ್ವತದ ತಪ್ಪಲಿನಲ್ಲಿ ಧರ್ಮಾತ್ಮನಾದ, ಚಕ್ರವರ್ತಿಯಾದ ಮರುತ್ತನು ಇತರ ಸಾಮಂತರಾಜರೊಡನೆ ವಿಧಿಪೂರ್ವಕವಾಗಿ ಯಜ್ಞವನ್ನು ಮಾಡಿದನು."

ೞನೆಯ ಅಧ್ಯಾಯವು ಮುಗಿಯಿತು.

೫ನೆಯ ಅಧ್ಯಾಯ ಅಶ್ವಮೇಧಪರ್ವ(ಮುಂದುವರಿದಿದೆ.)

ಇಂದ್ರನ ಪ್ರೇರಣೆಯಿಂದ ಬೃಹಸ್ಪತಿಯು ಮಾನವರಿಗೆ ಯಜ್ಞವನ್ನು ಮಾಡಿಸುವುದಿಲ್ಲವೆಂದು ಪ್ರತಿಜ್ಞೆಮಾಡಿದುದು.

ಯುಧಿಷ್ಠಿರನು ಹೇಳುತ್ತಾನೆ:

ಕಥಂ ವೀರ್ಯಃ ಸಮಭವತ್ಸ ರಾಜಾ ವದತಾಂ ವರ ।
ಕಥಂ ಚ ಜಾತರೂಪೇಣ ಸಮಯುಜ್ಯತ ಸ ದ್ವಿಜ ॥೧॥



"ವಾಗ್ಮಿಗಳಲ್ಲಿ ಶ್ರೇಷ್ಠರಾದವರೇ! ಬ್ರಾಹ್ಮಣೋತ್ತಮರೇ! ಮರುತ್ತ ರಾಜನು ಎಂತಹ ಪರಾಕ್ರಮವುಳ್ಳವನಾಗಿದ್ದನು? ಸುವರ್ಣದೊಡನೆ ಅವನ

ಸಂಬಂಧವು ಹೇಗೆ ಬೆಳೆಯಿತು? (ಅವನಿಗೆ ಸುವರ್ಣವು ಹೇಗೆ ಸಿಕ್ಕಿತು?) ಪೂಜ್ಯರೇ! ಈಗ ಆ ದ್ರವ್ಯವು ಎಲ್ಲಿದೆ? ತಪೋಧನರೇ! ಅದನ್ನು ನಾವು ಪಡೆದುಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಈ ಎಲ್ಲ ವಿಷಯಗಳನ್ನೂ ದಯಮಾಡಿ ಹೇಳಿರಿ."

ವ್ಯಾಸರು ಹೇಳುತ್ತಾರೆ:

"ಯುಧಿಷ್ಠಿರ! ದಕ್ಷಪ್ರಜಾಪತಿಗೆ ದೇವತೆಗಳು ಮತ್ತು ಅಸುರರೆಂಬ ಅಪಾರವಾದ ಸಂತಾನವಿದ್ದಿತು. ಒಬ್ಬನೇ ತಂದೆಯ ಮಕ್ಕಳಾದರೂ ಆ ದೇವಾಸುರರು ಪರಸ್ಪರವಾಗಿ ಸ್ಪರ್ಧಿಸುತ್ತಿದ್ದರು. ಅದೇ ರೀತಿಯಲ್ಲಿ ಅಂಗಿರಸನಿಗೆ ಸಮಾನವ್ರತನಿಷ್ಠರಾದ ಇಬ್ಬರು ಮಕ್ಕಳಿದ್ದರು. ಅವರೂ ಪರಸ್ಪರವಾಗಿ ಸ್ಪರ್ಧಿಸುತ್ತಿದ್ದರು. ಅವರಲ್ಲೊಬ್ಬನಾದ ಬೃಹಸ್ಪತಿಯು ಮಹಾ ತೇಜಸ್ವಿಯಾಗಿದ್ದನು. ಮತ್ತೊಬ್ಬನಾದ ಸಂವರ್ತನು ತಪೋಧನನಾಗಿದ್ದನು. 'ನಾನು ಹೆಚ್ಚು ತಾನು ಹೆಚ್ಚು'–ಎಂದು ಪರಸ್ಪರವಾಗಿ ಸ್ಪರ್ಧಿಸುತ್ತಿದ್ದ ಬೃಹಸ್ಪತಿ-ಸಂವರ್ತರು ಬೇರೆ-ಬೇರೆಯಾಗಿಯೇ ಇದ್ದುಬಿಟ್ಟರು. ಆದರೂ ಬೃಹಸ್ಪತಿಯು ಸಂವರ್ತನನ್ನು ಪುನಃ ಪುನಃ ಪೀಡಿಸುತ್ತಿದ್ದನು. ತನ್ನ ಹಿರಿಯಣ್ಣನಾದ ಬೃಹಸ್ಪತಿಯಿಂದ ಬಾರಿ-ಬಾರಿಗೂ ಪೀಡಿಸಲ್ಪಡುತ್ತಿದ್ದ ಸಂವರ್ತನು ಬೇಸತ್ತು ಐಶ್ವರ್ಯವೆಲ್ಲವನ್ನೂ ಪರಿತ್ಯಜಿಸಿ ದಿಗಂಬರನಾಗಿ ಅರಣ್ಯದಲ್ಲಿಯೇ ವಾಸವಾಗಿರಲು ನಿಶ್ಚಯಿಸಿದನು. ಇಂದ್ರನು ಸಮಸ್ತದಾನವರನ್ನೂ ಜಯಿಸಿ ಎಲ್ಲರನ್ನೂ ಸಂಹರಿಸಿ ಮೂರು ಲೋಕಗಳ ಇಂದ್ರಪದವಿಯನ್ನು ಪಡೆದು ಅಂಗಿರಸನ ಜ್ಯೇಷ್ಠಪುತ್ರನಾದ ಬೃಹಸ್ಪತಿಯನ್ನು ಪುರೋಹಿತನನ್ನಾಗಿ ಮಾಡಿಕೊಂಡನು.

ಅದಕ್ಕೆ ಮೊದಲು ಕರಂಧಮನೆಂಬ ರಾಜನು ಅಂಗಿರಸನಿಗೆ ಯಾಜ್ಯ ನಾಗಿದ್ದನು. (ಅಂಗಿರಸನು ಕರಂಧಮನ ಯಜ್ಞಾದಿಗಳಿಗೆ ಪುರೋಹಿತ ನಾಗಿದ್ದನು.) ಕರಂಧಮರಾಜನು ವೀರ್ಯದಿಂದಲೂ, ಸದಾಚಾರ ದಿಂದಲೂ ಮತ್ತು ಬಲದಿಂದಲೂ ಲೋಕದಲ್ಲಿ ಅಪ್ರತಿಮನಾಗಿದ್ದನು. ಅವನಿಗೆ ಸಮಾನರಾದವರು ಯಾರೂ ಇರಲಿಲ್ಲ. ಇಂದ್ರನಂತೆ ತೇಜಸ್ವಿಯಾಗಿದ್ದನು. ಧರ್ಮಾತ್ಮನೂ ಕಠೋರವ್ರತನಿಷ್ಠನೂ ಆಗಿದ್ದನು. ವಾಹನಗಳು, ಯೋಧರು, ಮಿತ್ರರು, ವಿಧ-ವಿಧವಾದ ಬಹುಮೂಲ್ಯವಾದ ಮುಖ್ಯವಾದ ಹಾಸಿಗೆಗಳು-ಈ ಎಲ್ಲವೂ ಕರಂಧಮರಾಜನು ನೆನೆದೊಡನೆಯೇ

ಅವನ ಮುಖದ ಮೂಲಕವಾಗಿ ಹೊರಡುತ್ತಿದ್ದ ಗಾಳಿಯಿಂದ ಪ್ರಾದುರ್ಭವಿಸುತ್ತಿದ್ದುವು. ನರಾಧಿಪನಾದ ಆ ಕರಂಧಮರಾಜನು ತನ್ನ ಕಲ್ಯಾಣಗುಣಗಳಿಂದ ಭೂಮಂಡಲದ ಎಲ್ಲ ರಾಜರನ್ನೂ ವಶವರ್ತಿಗಳನ್ನಾಗಿ ಮಾಡಿಕೊಂಡಿದ್ದನು. ತನಗೆ ಇಷ್ಟವಾದಷ್ಟು ಕಾಲ ಭೂಮಿಯಲ್ಲಿ ಜೀವಿಸಿದ್ದು ಅನಂತರ ಸಶರೀರನಾಗಿಯೇ ಸ್ವರ್ಗಕ್ಕೆ ಹೋದನು. ಅವಿಕ್ಷಿತನೆಂಬ ಅವನ ಮಗನೂ ಯಯಾತಿಯಂತೆ ಸಕಲಧರ್ಮಗಳನ್ನೂ ತಿಳಿದವನಾಗಿದ್ದನು. ಸ್ವಭುಜಬಲ-ಪರಾಕ್ರಮಗಳಿಂದಲೂ ಕಲ್ಯಾಣಗುಣಗಳಿಂದಲೂ ಸಕಲಶತ್ರುಗಳನ್ನೂ ಜಯಿಸಿ ಭೂಮಂಡಲವನ್ನು ಸ್ವಾಧೀನಪಡಿಸಿಕೊಂಡನು. ಪ್ರಜೆಗಳಿಗೆ ತಂದೆಯಂತೆಯೇ ಇದ್ದನು.

ಮರುತ್ತನೆಂಬುವನು ಅವಿಕ್ಷಿತನ ಮಗನು. ಅವನು ಇಂದ್ರನಿಗೆ ಸಮಾನನಾಗಿದ್ದು ಮಹಾವೀರ್ಯವಂತನಾಗಿದ್ದನು. ಸಾಗರವನ್ನೇ ವಸ್ತ್ರವನ್ನಾಗಿ ಹೊಂದಿರುವ ಪೃಥ್ವಿಯು (ಪೃಥ್ವಿಯ ಪ್ರಜೆಗಳು) ಅವನಲ್ಲಿಯೇ ಅನುರಕ್ತಳಾದಳು.

ಯುಧಿಷ್ಠಿರ! ಮರುತ್ತನು ಇಂದ್ರನೊಡನೆ ಯಾವಾಗಲೂ ಸ್ಪರ್ಧಿಸುತ್ತಲೇ ಇದ್ದನು. ಅಂತೆಯೇ ಇಂದ್ರನು ಕೂಡ ಮರುತ್ತನೊಡನೆ ಸ್ಪರ್ಧಿಸುತ್ತಿದ್ದನು. ಪೃಥಿವೀವಲ್ಲಭನಾದ ಮರುತ್ತನು ಶುಚಿಯಾಗಿಯೂ ಗುಣವಂತನಾಗಿಯೂ ಇದ್ದನು. ಈ ಕಾರಣದಿಂದ ಇಂದ್ರನು ಸತತವಾಗಿ ಪ್ರಯತ್ನಿಸುತ್ತಲೇ ಇದ್ದರೂ ಮರುತ್ತನಿಗಿಂತಲೂ ಅಧಿಕನಾಗಲು ಅವನಿಗೆ ಸಾಧ್ಯವಾಗಲೇ ಇಲ್ಲ. ಮರುತ್ತನನ್ನು ಮೀರಿಸಲು ಅಸಮರ್ಥನಾದ ಇಂದ್ರನು ಬೃಹಸ್ಪತಿಯನ್ನು ಅರಮನೆಗೆ ಕರೆಸಿಕೊಂಡು ದೇವತೆಗಳೊಡನೆ ಕೂಡಿಕೊಂಡು ಬೃಹಸ್ಪತಿಯೊಡನೆ ಹೇಳಿದನು:

ಬೃಹಸ್ಪತೇ ಮರುತ್ತಸ್ಯ ಮಾ ಸ್ಮ ಕಾರ್ಷೀಃ ಕಥಂಚನ ।
ದೈವಂ ಕರ್ಮಾಥ ಪಿತ್ರ್ಯಂ ವಾ ಕರ್ತಾಸಿ ಮಮ ಚೇತ್ಪ್ರಿಯಮ್ ॥

"ಬೃಹಸ್ಪತಿಯೇ! ನನಗೇನಾದರೂ ನೀನು ಪ್ರಿಯವನ್ನುಂಟು ಮಾಡುವವನಾಗಿದ್ದರೆ ಮರುತ್ತನಿಗೆ ಯಾವುದೇ ಕಾರಣದಿಂದಲೂ ದೈವಕರ್ಮಗಳನ್ನಾಗಲೀ (ಯಜ್ಞ-ಯಾಗಾದಿಗಳನ್ನಾಗಲೀ) ಪಿತೃಕರ್ಮಗಳನ್ನಾಗಲೀ (ಶ್ರಾದ್ಧಾ-ತರ್ಪಣಗಳನ್ನಾಗಲೀ) ಮಾಡಿಸಬಾರದು.

ಅಹಂ ಹಿ ತ್ರಿಷು ಲೋಕೇಷು ಸುರಾಣಾಂ ಚ ಬೃಹಸ್ಪತೇ ।
ಇನ್ದ್ರತ್ವಂ ಪ್ರಾಪ್ತವಾನೇಕೋ ಮರುತ್ತಸ್ತು ಮಹೀಪತಿಃ ॥೧೯॥

ಬೃಹಸ್ಪತಿಯೇ! ನಾನು ಮೂರುಲೋಕಗಳಿಗೂ ಏಕಮಾತ್ರ ಸ್ವಾಮಿಯಾಗಿದ್ದೇನೆ. ದೇವತೆಗಳ ಇಂದ್ರತ್ವವನ್ನು (ಆಧಿಪತ್ಯವನ್ನು) ಪಡೆದಿರುತ್ತೇನೆ. ಮರುತ್ತನಾದರೋ ಪೃಥ್ವಿಗೆ ಮಾತ್ರವೇ ರಾಜನಾಗಿದ್ದಾನೆ.

ಕಥಂ ಹ್ಯಮರ್ತ್ಯಂ ಬ್ರಹ್ಮಂಸ್ತ್ವಂ ಯಾಜಯಿತ್ವಾ ಸುರಾಧಿಪಮ್ ।
ಯಾಜಯೇರ್ಮೃತ್ಯುಸಂಯುಕ್ತಂ ಮರುತ್ತಮವಿಶಙ್ಕಯಾ ॥೨೦॥

ಬ್ರಾಹ್ಮಣಶ್ರೇಷ್ಠನೇ! ನೀನು ಅಮರನಾದ ದೇವರಾಜನಿಗೆ ಯಜ್ಞವನ್ನು ಮಾಡಿಸುವ ಪುರೋಹಿತನಾಗಿದ್ದು ಮರಣಧರ್ಮವುಳ್ಳ ಮರುತ್ತನಿಗೆ ಯಾವ ವಿಧವಾದ ಸಂಕೋಚವೂ ಇಲ್ಲದೇ ಹೇಗೆ ಯಜ್ಞಮಾಡಿಸುವೆ?

ಮಾಂ ವಾ ವೃಣೀಷ್ವ ಭದ್ರಂ ತೇ ಮರುತ್ತಂ ವಾ ಮಹೀಪತಿಮ್।
ಪರಿತ್ಯಜ್ಯ ಮರುತ್ತಂ ವಾ ಯಥಾಜೋಷಂ ಭಜಸ್ವ ಮಾಮ್ ॥೨೧॥

ಬೃಹಸ್ಪತಿಯೇ! ನಿನಗೆ ಮಂಗಳವಾಗಲಿ. ನೀನು ನನ್ನನ್ನಾದರೂ ಯಜಮಾನನನ್ನಾಗಿ ಪರಿಗ್ರಹಿಸು. ಮರುತ್ತನನ್ನಾದರೂ ಪರಿಗ್ರಹಿಸು. ಅಥವಾ ಮರುತ್ತನನ್ನು ತ್ಯಜಿಸಿ ನನ್ನನ್ನಾಶ್ರಯಿಸಿಕೊಂಡು ಸುಖವಾಗಿರು."

ಯುಧಿಷ್ಠಿರ! ದೇವರಾಜನಾದ ಇಂದ್ರನು ಬೃಹಸ್ಪತಿಗೆ ಹೀಗೆ ಹೇಳಲಾಗಿ, ಬೃಹಸ್ಪತಿಯು ಸ್ವಲ್ಪಕಾಲದವರೆಗೆ ಚಿಂತಿಸುತ್ತಿದ್ದು ಬಳಿಕ ದೇವರಾಜನೊಡನೆ ಹೇಳಿದನು:

ತ್ವಂ ಭೂತಾನಾಮಧಿಪತಿಸ್ತ್ವಯಿ ಲೋಕಾಃ ಪ್ರತಿಷ್ಠಿತಾಃ ।
ನಮುಚೇರ್ವಿಶ್ವರೂಪಸ್ಯ ನಿಹನ್ತಾ ತ್ವಂ ಬಲಸ್ಯ ಚ ॥೨೨॥

"ದೇವರಾಜನೇ! ನೀನು ಸಕಲಪ್ರಾಣಿಗಳಿಗೂ ಸ್ವಾಮಿಯಾಗಿರುವೆ. ನಿನ್ನಲ್ಲಿಯೇ ಎಲ್ಲ ಲೋಕಗಳೂ ಪ್ರತಿಷ್ಠಿತವಾಗಿವೆ. ನಮುಚಿ, ವಿಶ್ವರೂಪ ಮತ್ತು ಬಲ–ಇವರ ಸಂಹಾರಕನೂ ನೀನೇ ಆಗಿರುವೆ.

ತ್ವಮಾಜಹರ್ಥ ದೇವಾನಾಮೇಕೋ ವೀರಶ್ರಿಯಂ ಪರಾಮ್ ।
ತ್ವಂ ಬಿಭರ್ಷಿ ಭುವಂ ದ್ಯಾಂ ಚ ಸದೈವ ಬಲಸೂದನ ॥೨೪॥

ಬಲಸೂದನನೇ! ನೀನೊಬ್ಬನೇ ಸಕಲದೇವತೆಗಳ ಶ್ರೇಷ್ಠವಾದ ವೀರ್ಯ-ಸಂಪತ್ತುಗಳನ್ನೂ ರಾಕ್ಷಸರಿಂದ ಹಿಂದಿರುಗಿ ಪಡೆದುಕೊಂಡಿರುವೆ. ನೀನು ಸತತವಾಗಿ ಭೂಲೋಕ-ಸ್ವರ್ಗಲೋಕಗಳ ಭರಣ-ಪೋಷಣಗಳನ್ನೂ ಮಾಡುತ್ತಿರುವೆ.

ಪೌರೋಹಿತ್ಯಂ ಕಥಂ ಕೃತ್ವಾ ತವ ದೇವಗಣೇಶ್ವರ ।
ಯಾಜಯೇಯಮಹಂ ಮರ್ತ್ಯಂ ಮರುತ್ತಂ ಪಾಕಶಾಸನ ॥೨೫॥

ದೇವಗಣೇಶ್ವರನೇ! ಪಾಕಶಾಸನನೇ! ಅಂತಹ ನಿನಗೆ ಪೌರೋಹಿತ್ಯವನ್ನು ಮಾಡಿಸಿ ಮರಣಧರ್ಮವುಳ್ಳ ಮರುತ್ತನಿಗೆ ನಾನು ಹೇಗೆ ತಾನೇ ಯಜ್ಞವನ್ನು ಮಾಡಿಸುವೆನು?

ಸಮಾಶ್ವಸಿಹಿ ದೇವೇನ್ದ್ರ ನಾಹಂ ಮರ್ತ್ಯಸ್ಯ ಕರ್ಹಿಚಿತ್ ।
ಗ್ರಹೀಷ್ಯಾಮಿ ಸ್ರುವಂ ಯಜ್ಞೇ ಶೃಣು ಚೇದಂ ವಚೋ ಮಮ ॥

ದೇವೇಂದ್ರನೇ! ಸಮಾಧಾನವನ್ನು ತಂದುಕೊ. ನಾನು ಇನ್ನು ಮುಂದೆ ಎಂದಿಗೂ ಯಾವುದೇ ಮನುಷ್ಯನ ಸಲುವಾಗಿ ಯಜ್ಞದಲ್ಲಿ ಸ್ರುವವನ್ನು ಹಿಡಿಯುವುದಿಲ್ಲ. ಇಷ್ಟುಮಾತ್ರವಲ್ಲ. ನನ್ನ ಈ ಮಾತನ್ನೂ ಕೇಳು:

ಹಿರಣ್ಯರೇತಾ ನೋಷ್ಣಃ ಸ್ಯಾತ್ಪರಿವರ್ತೇತ ಮೇದಿನೀ ।
ಭಾಸಂ ತು ನ ರವಿಃ ಕುರ್ಯಾನ್ನ ತು ಸತ್ಯಂ ಚಲೇನ್ಮಯಿ ॥೨೭॥

ಮಹೇಂದ್ರ! ಬೆಂಕಿಯು ತಣ್ಣಗಾಗಿಬಿಡಬಹುದು. ಭೂಮಿಯು ತಲೆಕೆಳಗಾಗಬಹುದು. ಸೂರ್ಯನು ಪ್ರಕಾಶವನ್ನು ಕೊಡದೆಯೂ ಇರಬಹುದು. ಆದರೆ ನನ್ನ ಈ ಸತ್ಯಪ್ರತಿಜ್ಞೆಯು ಮಾತ್ರ ವ್ಯತ್ಯಾಸವಾಗುವುದಿಲ್ಲ.'

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಇಂದ್ರನು ಬೃಹಸ್ಪತಿಯ ಆ ಪ್ರತಿಜ್ಞೆಯನ್ನು ಕೇಳಿ ಮಾತ್ಸರ್ಯರಹಿತನಾಗಿ ಬೃಹಸ್ಪತಿಯನ್ನು ಬಹಳವಾಗಿ ಪ್ರಶಂಸೆಮಾಡಿ ತನ್ನ ಅರಮನೆಗೆ ತೆರಳಿದನು.

ಐನೆಯ ಅಧ್ಯಾಯವು ಮುಗಿಯಿತು.

ನಾರದರ ಆಜ್ಞೆಯಂತೆ ಮರುತ್ತನು ಸಂವರ್ತನನ್ನು ಸಂಧಿಸಿದುದು

ಜನಮೇಜಯ! ವ್ಯಾಸರು ಹೇಳುತ್ತಾರೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ಬೃಹಸ್ಪತೇಶ್ಚ ಸಂವಾದಂ ಮರುತ್ತಸ್ಯ ಚ ಧೀಮತಃ ॥೧॥

“ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಬೃಹಸ್ಪತಿಗೂ ಮತ್ತು ಧೀಮಂತನಾದ ಮರುತ್ತನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಅಂಗಿರಸರ ಮಗನಾದ ಬೃಹಸ್ಪತಿಯು ಮನುಷ್ಯರಿಗೆ ಯಜ್ಞಮಾಡಿಸುವುದಿಲ್ಲವೆಂದು ದೇವರಾಜನಿಗೆ ಪ್ರತಿಜ್ಞೆ ಮಾಡಿಕೊಟ್ಟುದನ್ನು ಮರುತ್ತರಾಜನು ಕೇಳಿದೊಡನೆಯೇ ಒಂದು ಶ್ರೇಷ್ಠವಾದ ಮಹಾಯಜ್ಞವನ್ನು ಮಾಡಲು ಸಂಕಲ್ಪಿಸಿದನು. ಕರಂಧಮನ ಪೌತ್ರನಾದ ಮತ್ತು ವಾಗ್ಮಿಯಾದ ಮರುತ್ತನು ಮಹಾಯಜ್ಞವೊಂದನ್ನು ಮಾಡಲು ಮನಸ್ಸಿನಲ್ಲಿ ಸಂಕಲ್ಪಿಸಿ ಬೃಹಸ್ಪತಿಯ ಬಳಿಗೆ ಹೋಗಿ ಹೇಳಿದನು:

ಭಗವನ್ಯನ್ಮಯಾ ಪೂರ್ವಮಭಿಗಮ್ಯ ತಪೋಧನ ।
ಕೃತೋಽಭಿಸಂಧಿರ್ಯಜ್ಞಸ್ಯ ಭವತೋ ವಚನಾದ್ಗುರೋ ॥೪॥

ತಮಹಂ ಯಷ್ಟುಮಿಚ್ಛಾಮಿ ಸಮ್ಭಾರಾಃ ಸಮ್ಭೃತಾಶ್ಚ ಮೇ ।
ಯಾಜ್ಯೋಽಸ್ಮಿ ಭವತಃ ಸಾಧೋ ತತ್ಪ್ರಾಪ್ನುಹಿ ವಿಧತ್ಸ್ವ ಚ ॥೫॥

“ಪೂಜ್ಯನೇ! ತಪೋಧನನೇ! ಗುರುದೇವನೇ! ನಾನು ಹಿಂದೊಮ್ಮೆ ಬಂದು ಯಜ್ಞದ ವಿಷಯದಲ್ಲಿ ನಿನ್ನ ಸಲಹೆಯನ್ನು ಕೇಳಿದ್ದೆನು. ಅಂದು ನೀನು ಹೇಳಿದ್ದಂತೆ ಈಗ ನಾನು ಆ ಯಜ್ಞವನ್ನು ಪ್ರಾರಂಭಿಸಬೇಕೆಂದಿರುವೆನು. ನೀನು ಹೇಳಿದ್ದಂತೆಯೇ ಆ ಯಜ್ಞದ ಸಲುವಾಗಿ ಸಾಮಗ್ರಿಗಳೆಲ್ಲವನ್ನೂ ಸಂಗ್ರಹಿಸಿರುವೆನು. ಸತ್ಪುರುಷನೇ! ನಾನು ಹಿಂದಿನಿಂದಲೂ ನಿನ್ನ ಯಾಜ್ಯನಾಗಿದ್ದೇನೆ. (ನಿನ್ನಿಂದ ಯಾಗಮಾಡಿ

ಸಲ್ಪಡುವವನಾಗಿದ್ದೇನೆ.) ಆದುದರಿಂದ ಈಗಲೇ ನನ್ನ ಯಜ್ಞಶಾಲೆಗೆ ಬರುವವನಾಗು. ನಾನು ಸಂಕಲ್ಪಿಸಿರುವ ಯಜ್ಞವನ್ನು ಮಾಡಿಸು."

ಬೃಹಸ್ಪತಿಯು ಉತ್ತರಿಸುತ್ತಾನೆ:

ನ ಕಾಮಯೇ ಯಾಜಯಿತುಂ ತ್ವಾಮಹಂ ಪೃಥಿವೀಪತೇ ।
ವೃತೋಽಸ್ಮಿ ದೇವರಾಜೇನ ಪ್ರತಿಜ್ಞಾತಂ ಚ ತಸ್ಯ ಮೇ ॥೬॥

"ಪೃಥಿವೀವಲ್ಲಭನೇ! ನಾನು ನಿನಗೆ ಯಜ್ಞವನ್ನು ಮಾಡಿಸಲು ಇಚ್ಛಿಸುವುದಿಲ್ಲ. ದೇವರಾಜನಾದ ಇಂದ್ರನು ನನ್ನನ್ನು ತನ್ನ ಪುರೋಹಿತನನ್ನಾಗಿ ಮಾಡಿಕೊಂಡಿರುವನು. ಅವನನ್ನು ಬಿಟ್ಟು ಮನುಷ್ಯರಿಗೆ ನಾನು ಯಜ್ಞವನ್ನು ಮಾಡಿಸುವುದಿಲ್ಲವೆಂದು ದೇವೇಂದ್ರನಿಗೆ ಪ್ರತಿಜ್ಞೆಯನ್ನೂ ಮಾಡಿ ಕೊಟ್ಟಿರುವೆನು. ಈ ಕಾರಣಗಳಿಂದ ನಾನು ನಿನಗೆ ಯಜ್ಞವನ್ನು ಮಾಡಿಸುವುದಿಲ್ಲ."

ಮರುತ್ತನು ಹೇಳುತ್ತಾನೆ:

ಪಿತ್ರ್ಯಮಸ್ಮಿ ತವ ಕ್ಷೇತ್ರಂ ಬಹು ಮನ್ಯೇ ಚ ತೇ ಭೃಶಮ್ ।
ತವಾಸ್ಮಿ ಯಾಜ್ಯತಾಂ ಪ್ರಾಪ್ತೋ ಭಜಮಾನಂ ಭಜಸ್ವ ಮಾಮ್ ॥೭॥

"ವಿಪ್ರಶ್ರೇಷ್ಠನೇ! ನಾನು ನಿನ್ನ ಪಿತೃ-ಪಿತಾಮಹರ ಕಾಲದಿಂದಲೂ ನಿನ್ನ ವಂಶದವರ ಯಾಜ್ಯವರ್ಗಕ್ಕೆ ಸೇರಿದ ವಂಶದವನಾಗಿದ್ದೇನೆ. ಅಂತೆಯೇ ನಿನ್ನನ್ನು ವಿಶೇಷಮರ್ಯಾದೆಯಿಂದ ಕಾಣುತ್ತಿದ್ದೇನೆ. ನಾನು ನಿನ್ನ ಯಾಜ್ಯನಾಗಿದ್ದೇನೆ. ನಿನ್ನ ಸೇವೆಯಲ್ಲಿಯೇ ತತ್ಪರನಾಗಿರುವ ನನ್ನನ್ನು ಅನುಗ್ರಹಿಸು."

ಬೃಹಸ್ಪತಿಯು ಹೇಳುತ್ತಾನೆ:

ಅಮರ್ತ್ಯಂ ಯಾಜಯಿತ್ವಾಹಂ ಯಾಜಯಿಷ್ಯೇ ಕಥಂ ನರಮ್ ।
ಮರುತ್ತ ಗಚ್ಛ ವಾ ಮಾ ವಾ ನಿವೃತ್ತೋಽಸ್ಮ್ಯದ್ಯ ಯಾಜನಾತ್ ॥೮॥

"ಮೃತ್ಯುಧರ್ಮವಿಲ್ಲದವರಿಗೆ ಯಜ್ಞಮಾಡಿಸುವ ನಾನು ಮೃತ್ಯುಧರ್ಮವಿರುವ ಮನುಷ್ಯರಿಗೆ ಹೇಗೆ ತಾನೇ ಯಜ್ಞವನ್ನು ಮಾಡಿಸಲಿ? ನೀನು ಮತ್ತೆಲ್ಲಿಗಾದರೂ ಹೋಗಬಹುದು ಅಥವಾ ಇಲ್ಲಿಯೇ ಇರಬಹುದು.

ನಾನು ಮಾತ್ರ ಮನುಷ್ಯರಿಗೆ ಯಜ್ಞಮಾಡಿಸುವಿಕೆಯಿಂದ ನಿವೃತ್ತನಾಗಿದ್ದೇನೆ. (ಮನುಷ್ಯರಿಗೆ ಯಾಜಕನಾಗುವುದಿಲ್ಲ.)

ನ ತ್ವಾಂ ಯಾಜಯಿತಾಸ್ಮ್ಯದ್ಯ ವೃಣು ಯಂ ತ್ವಮಿಹೇಚ್ಛಸಿ ।
ಉಪಾಧ್ಯಾಯಂ ಮಹಾಬಾಹೋ ಯಸ್ತೇ ಯಜ್ಞಂ ಕರಿಷ್ಯತಿ ॥೯॥

ಮಹಾಬಾಹುವೇ! ನಾನಂತೂ ನಿನಗೆ ಯಜ್ಞವನ್ನು ಮಾಡಿಸುವುದಿಲ್ಲ. ನಿನಗೆ ಯಾರು ಯಜ್ಞವನ್ನು ಮಾಡಿಸುವರೋ–ನೀನು ಯಾರಿಂದ ಯಜ್ಞವನ್ನು ಮಾಡಿಸಿಕೊಳ್ಳಲು ಇಚ್ಛಿಸುವೆಯೋ–ಅವನನ್ನೇ ನೀನು ಉಪಾಧ್ಯಾಯನನ್ನಾಗಿ ಪ್ರತಿಗ್ರಹಿಸು."

ವ್ಯಾಸರು ಹೇಳುತ್ತಾರೆ:

"ಯುಧಿಷ್ಠಿರ! ಬೃಹಸ್ಪತಿಯು ಹೀಗೆ ಹೇಳಲಾಗಿ, ಮರುತ್ತರಾಜನು ಬಹಳವಾಗಿ ನಾಚಿಕೆಗೊಂಡನು. ಬಹಳ ಖಿನ್ನಮನಸ್ಕನಾಗಿ ತನ್ನ ದೇಶಕ್ಕೆ ಹಿಂದಿರುಗುತ್ತಿದ್ದಾಗ ಹಾದಿಯಲ್ಲಿ ನಾರದರನ್ನು ಕಂಡನು. ದೇವರ್ಷಿಗಳನ್ನು ಸಂಧಿಸಿದೊಡನೆಯೇ ಮರುತ್ತರಾಜನು ಯಥಾವಿಧಿಯಾಗಿ ಅವರನ್ನು ಸತ್ಕರಿಸಿ ಬದ್ಧಾಂಜಲಿಯಾಗಿ ನಿಂತುಕೊಂಡನು. ಬಳಿಕ ನಾರದರೇ ಮರುತ್ತನನ್ನು ಪ್ರಶ್ನಿಸಿದರು:

ರಾಜರ್ಷೇ ನಾತಿಹೃಷ್ಟೋಽಸಿ ಕಚ್ಚಿತ್ಕ್ಷೇಮಂ ತವಾನಘ ।
ಕ್ವ ಗತೋಽಸಿ ಕುತಶ್ಚೇದಮಪ್ರೀತಿಸ್ಥಾನಮಾಗತಮ್ ॥೧೨॥

"ರಾಜರ್ಷಿಯೇ! ನೀನು ಎಂದಿನಂತೆ ಅತಿಪ್ರಸನ್ನನಾಗಿರುವಂತೆ ಕಾಣುತ್ತಿಲ್ಲ. ನಿಷ್ಪಾಪನೇ! ನೀನು ಕುಶಲಿಯಾಗಿರುವೆಯಷ್ಟೇ? ಈಗ ಎಲ್ಲಿಗೆ ಹೋಗಿದ್ದೆ? ಯಾವ ಕಾರಣದಿಂದ ಮತ್ತು ಎಲ್ಲಿ ನಿನಗೆ ಇಂತಹ ಖೇದವುಂಟಾಯಿತು?

ಶ್ರೋತವ್ಯಂ ಚೇನ್ಮಯಾ ರಾಜನ್ಬ್ರೂಹಿ ಮೇ ಪಾರ್ಥಿವರ್ಷಭ ।
ವ್ಯಪನೇಷ್ಯಾಮಿ ತೇ ಮನ್ಯುಂ ಸರ್ವಯತ್ನೈರ್ನರಾಧಿಪ ॥೧೩॥

ಪಾರ್ಥಿವಶ್ರೇಷ್ಠನೇ! ನರಾಧಿಪನೇ! ಮಹಾರಾಜ! ನಿನ್ನ ಖೇದದ ಕಾರಣವನ್ನು ನಾನು ಕೇಳಬಹುದಾಗಿದ್ದರೆ ಹೇಳು. ನಾನು

ಸರ್ವಪ್ರಯತ್ನದಿಂದಲೂ ಈಗ ನಿನಗುಂಟಾಗಿರುವ ದುಃಖವನ್ನು ಹೋಗಲಾಡಿಸುವೆನು."

ಯುಧಿಷ್ಠಿರ! ಮಹರ್ಷಿಗಳಾದ ನಾರದರು ಹೀಗೆ ಮರುತ್ತನಿಗೆ ಅಭಯವನ್ನೀಯಲಾಗಿ ಮರುತ್ತನು ಉಪಾಧ್ಯಾಯನಾದ ಬೃಹಸ್ಪತಿಯು ಮಾಡಿದ ವಂಚನೆಯನ್ನೂ ಮತ್ತು ಅದಕ್ಕೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನೂ ಹೇಳಿದನು:

"ನಾರದರೇ! ಯಜ್ಞದ ಸಲುವಾಗಿ ಆರ್ತ್ವಿಜ್ಯವನ್ನು ವಹಿಸುವಂತೆ ಕೇಳಿಕೊಳ್ಳಲು ಅಂಗಿರಸನ ಮಗನಾದ, ದೇವತೆಗಳ ಗುರುವಾದ ಬೃಹಸ್ಪತಿಯನ್ನು ನೋಡಲು ಹೋಗಿದ್ದೆನು. ಆದರೆ ಅವನು ನನ್ನ ಪ್ರಾರ್ಥನೆಯನ್ನು ಮಾನ್ಯಮಾಡಲಿಲ್ಲ. ಅವನು ನನ್ನನ್ನು ತಿರಸ್ಕರಿಸಿದನಲ್ಲದೇ ಮರಣಧರ್ಮವಿರುವವನೆಂದೂ ದೂಷಿಸಿ ಪರಿತ್ಯಜಿಸಿಯೂ ಬಿಟ್ಟನು. ಆದುದರಿಂದ ಈಗ ನನಗೆ ಜೀವಿಸಿರುವುದೇ ಬೇಡವಾಗಿದೆ."

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ! ಮರುತ್ತನು ಹೀಗೆ ಹೇಳಿದನಂತರ ದೇವರ್ಷಿಗಳಾದ ನಾರದರು ತಮ್ಮ ಅಮೃತಮಯವಾದ ಮಾತಿನ ಮೂಲಕ ಅವಿಕ್ಷಿತನ ಮಗನಾದ ಮರುತ್ತನನ್ನು ಪುನರುಜ್ಜೀವನಗೊಳಿಸುತ್ತಿರುವರೋ ಎಂಬಂತೆ ಮಾತನಾಡಿದರು:

"ಮಹಾರಾಜ! ಅಂಗಿರಸನ ಮತ್ತೊಬ್ಬ ಮಗನಾದ ಧಾರ್ಮಿಕನಾದ ಸಂವರ್ತನೆಂಬ ಹೆಸರಿನ ಮಹರ್ಷಿಯಿದ್ದಾನೆ. ದಿಗಂಬರನಾಗಿರುವ ಅವನು ಪ್ರಜೆಗಳೆಲ್ಲರನ್ನೂ ಭ್ರಾಂತಿಗೊಳಿಸುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಸುತ್ತುತ್ತಿರುತ್ತಾನೆ. ಬೃಹಸ್ಪತಿಯು ನಿನ್ನನ್ನು ಯಾಜ್ಯನನ್ನಾಗಿ ಪ್ರತಿಗ್ರಹಿಸಲು ಇಚ್ಛಿಸದಿದ್ದರೆ ನೀನು ಆ ಸಂವರ್ತನ ಬಳಿಗೆ ಹೋಗು. ಮಹಾತೇಜಸ್ವಿಯಾದ ಸಂವರ್ತನು ಪ್ರಸನ್ನನಾಗಿ ನಿನಗೆ ಯಾಗವನ್ನು ಮಾಡಿಸುತ್ತಾನೆ."

ಮರುತ್ತನು ಹೇಳುತ್ತಾನೆ:

"ನಾರದರೇ! ತಮ್ಮ ಈ ಮಾತಿನಿಂದ ನನಗೆ ಪುನಃ ಜೀವ ಬಂದಂತಾಗಿದೆ. ವಾಗ್ಮಿಗಳಲ್ಲಿ ಶ್ರೇಷ್ಠರಾದವರೇ! ನಾನು ಸಂವರ್ತನನ್ನು ಎಲ್ಲಿ ನೋಡಬೇಕೆಂಬುದನ್ನು ಹೇಳಿರಿ. ಅವನು ನನ್ನನ್ನು ತಿರಸ್ಕಾರಮಾಡದಂತೆ ಅವನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನೂ ಹೇಳಿರಿ. ಏಕೆಂದರೆ ಅವನಿಂದಲೂ ನಾನು ತಿರಸ್ಕೃತನಾದರೆ ಮುಂದೆ ನಾನು ಜೀವಿಸಿರಲಾರೆನು."



ನಾರದರು ಹೇಳುತ್ತಾರೆ:

"ಮಹಾರಾಜ! ಸಂವರ್ತನು ಉನ್ಮತ್ತನ ವೇಷವನ್ನು ಧರಿಸಿ

ವಾರಣಾಸಿಯಲ್ಲಿ ಮಹೇಶ್ವರನನ್ನು ಸಂದರ್ಶಿಸುವ ಇಚ್ಛೆಯಿಂದ ನಿಶ್ಚಿಂತನಾಗಿ ಸಂಚರಿಸುತ್ತಿರುತ್ತಾನೆ. ನೀನು ವಾರಣಾಸಿಗೆ ಹೋಗಿ ಆ ಪಟ್ಟಣದ ಮಹಾದ್ವಾರದಲ್ಲಿ ಒಂದು ಹೆಣವನ್ನಿಟ್ಟು ಹಾದಿಹೋಕರ ಪ್ರತಿಕ್ರಿಯೆಯನ್ನು ಗಮನಿಸುತ್ತಿರು. ಆ ಹೆಣವನ್ನು ನೋಡಿದೊಡನೆಯೇ ಯಾವನು ತಾನು ಬಂದ ಹಾದಿಯನ್ನೇ ಹಿಡಿದು ಹಿಂದಿರುಗುವನೋ–ಅವನನ್ನೇ ನೀನು ಸಂವರ್ತನೆಂದು ತಿಳಿ. ವೀರ್ಯವಂತನಾದ ಆ ಸಂವರ್ತನು ಯಾವ ಯಾವ ಕಡೆಗೆ ಓಡುವನೋ ನೀನೂ ಕೂಡ ಎಲ್ಲೆಡೆಗಳಿಗೂ ಅವನನ್ನು ಹಿಂಬಾಲಿಸಿಕೊಂಡೇ ಹೋಗು. ಹಾಗೆ ಅವನು ಓಡುವಾಗ ಏಕಾಂತಸ್ಥಳಕ್ಕೆ ಹೋದೊಡನೆಯೇ ಅವನನ್ನು ಸಂಧಿಸಿ ಬದ್ಧಾಂಜಲಿಯಾಗಿ ಶರಣುಹೊಂದು. ಅವನೇನಾದರೂ ತನ್ನ ಪರಿಚಯವನ್ನು ಯಾರು ಮಾಡಿಕೊಟ್ಟರೆಂದು ಕೇಳಿದರೆ ನಾರದರೇ ಗುರುತನ್ನು ಹೇಳಿದರೆಂದು ಹೇಳು. ಸಂವರ್ತನೇನಾದರೂ ನನ್ನ ಸಮೀಪಕ್ಕೆ ಬರುವ ಇಚ್ಛೆಯಿಂದ ನಾರದರು ಎಲ್ಲಿದ್ದಾರೆಂದು ಕೇಳಿದರೆ–ನೀನವನಿಗೆ ನಾರದರು ಬೆಂಕಿಯಲ್ಲಿ ಸೇರಿಹೋದರೆಂದು ನಿಃಶಂಕನಾಗಿ ಹೇಳು."

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ! ನಾರದರ ಆ ಮಾತನ್ನು ಕೇಳಿ ರಾಜರ್ಷಿಯಾದ ಮರುತ್ತನು ಹಾಗೆಯೇ ಆಗಲೆಂದು ಹೇಳಿ, ಅವರನ್ನು ಯಥೋಚಿತವಾಗಿ ಸತ್ಕರಿಸಿ ಅವರ ಅಪ್ಪಣೆಯನ್ನು ಪಡೆದು ವಾರಾಣಸೀಪಟ್ಟಣಕ್ಕೆ ಪ್ರಯಾಣ ಮಾಡಿದನು.

ಮಹಾಯಶೋವಂತನಾದ ಮರುತ್ತನು ವಾರಾಣಸಿಗೆ ಹೋಗಿ ನಾರದರ ಮಾತನ್ನು ಜ್ಞಾಪಿಸಿಕೊಂಡು ಅವರು ಹೇಳಿದಂತೆ ಆ ಪಟ್ಟಣದ ಮಹಾದ್ವಾರದಲ್ಲಿ ಶವವೊಂದನ್ನು ಇಟ್ಟನು. ಆ ಸಮಯಕ್ಕೆ ಸರಿಯಾಗಿ ಸಂವರ್ತನೂ ಪಟ್ಟಣದ ಮಹಾದ್ವಾರದ ಬಳಿಗೆ ಬಂದನು. ಮರುತ್ತನಿಟ್ಟಿದ್ದ ಆ ಹೆಣವನ್ನು ನೋಡಿದೊಡನೆಯೇ ಸಂವರ್ತನು ರಭಸದಿಂದ ಹಿಂದಿರುಗಿದನು. ನಾರದರು ಹೇಳಿದ್ದಂತೆ ಅವನೇ ಸಂವರ್ತನೆಂದು ನಿಶ್ಚಯಿಸಿ ಮಹೀಪಾಲನಾದ, ಅವಿಕ್ಷಿತನ ಮಗನಾದ ಮರುತ್ತನು ಸಂವರ್ತನ ಶಿಷ್ಯನಾಗುವುದಕ್ಕಾಗಿ ಕೈಗಳನ್ನು ಜೋಡಿಸಿಕೊಂಡು ಅವನ ಹಿಂದೆಯೇ ಓಡಿದನು. ಓಡುತ್ತೋಡುತ್ತಾ ಸಂವರ್ತನು ನಿರ್ಜನವಾದ ಸ್ಥಳಕ್ಕೆ ಹೋದನು.

ಮರುತ್ತನೂ ಹಿಂಬಾಲಿಸುತ್ತಾ ಅಲ್ಲಿಗೂ ಹೋಗಲು ಸಂವರ್ತನು ರಾಜನನ್ನು ಧೂಳಿನಿಂದಲೂ, ಕೆಸರಿನಿಂದಲೂ, ಕಫದಿಂದಲೂ, ಉಗುಳಿನಿಂದಲೂ ಮುಚ್ಚಿಬಿಟ್ಟನು. ಸಂವರ್ತನು ಹೀಗೆ ಬಾಧೆಪಡಿಸಿದರೂ ಅದನ್ನು ಲೆಕ್ಕಿಸದೇ ಮರುತ್ತನು ಕೈಜೋಡಿಸಿಕೊಂಡು ಸಂವರ್ತನನ್ನು ಪ್ರಸನ್ನಗೊಳಿಸುತ್ತಾ ಹಿಂದೆಯೇ ಹೋದನು. ಅನಂತರ ಓಡಿಯೋಡಿ ಆಯಾಸಗೊಂಡಿದ್ದ ಸಂವರ್ತನು ಹಿಂದಿರುಗಿ ಹಲವಾರು ರೆಂಬೆಗಳಿಂದ ಯುಕ್ತವಾಗಿದ್ದ ಆಲದ ಮರದ ತಂಪಾದ ನೆಳಲಿನಲ್ಲಿ ಕುಳಿತುಕೊಂಡನು."

೬ನೆಯ ಅಧ್ಯಾಯವು ಮುಗಿಯಿತು.

೭ನೆಯ ಅಧ್ಯಾಯ ಅಶ್ವಮೇಧಪರ್ವ(ಮುಂದುವರಿದಿದೆ.)

ಸಂವರ್ತ-ಮರುತ್ತರ ಸಂಭಾಷಣೆ: ಸಂವರ್ತನು ಮರುತ್ತನಿಗೆ ಯಜ್ಞವನ್ನು ಮಾಡಿಸಲು ಸಮ್ಮತಿಸಿದುದು.

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ! ಸಂವರ್ತನು ಹೇಳುತ್ತಾನೆ:

ಕಥಮಸ್ಮಿ ತ್ವಯಾ ಜ್ಞಾತಃ ಕೇನ ವಾ ಕಥಿತೋಽಸ್ಮಿ ತೇ ।
ಏತದಾಚಕ್ಷ್ವ ಮೇ ತತ್ತ್ವಮಿಚ್ಛಸೇ ಚೇನ್ಮಮ ಪ್ರಿಯಮ್ ॥೧॥

"ಮಹಾರಾಜ! ನಾನಿಲ್ಲಿರುವುದು ನಿನಗೆ ಹೇಗೆ ತಿಳಿಯಿತು? ನನ್ನ ವಿಷಯವಾಗಿ ಯಾರು ನಿನಗೆ ಹೇಳಿದರು? ನನ್ನ ಅನುಗ್ರಹವನ್ನು ಇಚ್ಛಿಸುವೆಯಾದರೆ ಈ ವಿಷಯವನ್ನು ನನಗೆ ಯಥಾವತ್ತಾಗಿ ಹೇಳು.

ಸತ್ಯಂ ತೇ ಬ್ರುವತಃ ಸರ್ವೇ ಸಮ್ಪತ್ಸ್ಯನ್ತೇ ಮನೋರಥಾಃ ।
ಮಿಥ್ಯಾ ಚ ಬ್ರುವತೋ ಮೂರ್ಧಾ ಶತಧಾ ತೇ ಸ್ಫುಟಿಷ್ಯತಿ ॥೨॥

ನೀನು ಸತ್ಯಸಂಗತಿಯನ್ನೇ ಹೇಳಿದರೆ ನಿನ್ನ ಸಕಲಮನೋರಥಗಳೂ ಪೂರ್ಣವಾಗುತ್ತವೆ. ಸುಳ್ಳನ್ನೇನಾದರೂ ಹೇಳಿದರೆ ನಿನ್ನ ತಲೆಯು ನೂರು ಹೋಳುಗಳಾಗಿ ಒಡೆದು ಹೋಗುತ್ತದೆ."

ಮರುತ್ತನು ಹೇಳುತ್ತಾನೆ:

"ಮಹರ್ಷಿಗಳೇ! ನಾನು ಹಾದಿಯಲ್ಲಿ ಅಲೆದಾಡುತ್ತಿದ್ದಾಗ

ಮಹರ್ಷಿಗಳಾದ ನಾರದರೇ ನಿಮ್ಮ ವಿಷಯವಾಗಿ ಹೇಳಿದರು. ಅವರಿಂದಲೇ ನೀವು ನನ್ನ ಗುರುಗಳಾದ ಅಂಗಿರಸರ ಮಕ್ಕಳೆಂಬುದು ನನಗೆ ತಿಳಿಯಿತು. ಅದರಿಂದ ನನಗೆ ಅಪಾರವಾದ ಸಂತೋಷವೂ ಆಯಿತು."

ಸಂವರ್ತನು ಹೇಳುತ್ತಾನೆ:

"ಮಹಾರಾಜ! ನೀನು ಸತ್ಯವನ್ನೇ ಹೇಳಿರುವೆ. ನಾನು ಯಜ್ಞವನ್ನು ಮಾಡಿಸಬಲ್ಲನೆಂಬುದು ನಾರದರಿಗೆ ತಿಳಿದಿದೆ. ಈಗ ನಾರದರು ಎಲ್ಲಿದ್ದಾರೆಂಬುದನ್ನು ಹೇಳು."

ಮರುತ್ತನು ಹೇಳುತ್ತಾನೆ:

"ಮಹಾಮುನಿಗಳೇ! ದೇವಶ್ರೇಷ್ಠರಾದ ನಾರದರು ನನಗೆ ನೀವಿರುವ ಸ್ಥಳವನ್ನೂ–ನಿಮ್ಮನ್ನು ಗುರುತಿಸುವ ವಿಧಾನವನ್ನೂ ಹೇಳಿ ನಿಮ್ಮನ್ನು ಕಾಣಲು ನನಗೆ ಅನುಮತಿಯನ್ನಿತ್ತು ಕೂಡಲೇ ಅಗ್ನಿಪ್ರವೇಶಮಾಡಿದರು."

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ! ಮರುತ್ತರಾಜನ ಆ ಮಾತನ್ನು ಕೇಳಿ ಸಂವರ್ತನು ಪ್ರಮುದಿತನಾದನು. 'ಇಷ್ಟೇ ಆದರೆ ಅದನ್ನು ನಾನೂ ಮಾಡಲು ಸಮರ್ಥನಾಗಿದ್ದೇನೆ'–ಎಂದೂ ಹೇಳಿದನು. ಮರುಕ್ಷಣದಲ್ಲಿಯೇ ಹುಚ್ಚನ ವೇಷವನ್ನು ಧರಿಸಿದ್ದ ಆ ಬ್ರಾಹ್ಮಣನು ಕಠಿನವಾದ ಮಾತುಗಳಿಂದ ಮರುತ್ತನನ್ನು ಭಯಪಡಿಸುತ್ತಿರುವನೋ ಎಂಬಂತೆ ಪುನಃ ಪುನಃ ಈ ಮಾತುಗಳನ್ನು ಹೇಳಿದನು:

"ಮಹಾರಾಜ! ನಾನೊಬ್ಬ ವಾತರೋಗಪೀಡಿತನಾದ ಹುಚ್ಚನು. ನನ್ನ ಮನಸ್ಸಿಗೆ ಅಧೀನನಾಗಿ ನಡೆಯತಕ್ಕವನು. ನೀನು ನೋಡುತ್ತಿರುವಂತೆ ವಿಕಾರವಾದ ರೂಪವುಳ್ಳವನು. ಇಂತಹವನಿಂದ ನೀನು ಯಜ್ಞವನ್ನು ಮಾಡಿಸಿಕೊಳ್ಳಲು ಇಚ್ಛಿಸುತ್ತಿರುವೆಯೇಕೆ? ನನ್ನ ಅಣ್ಣನಾದ ಬೃಹಸ್ಪತಿಯಾದರೋ ಯಜ್ಞವನ್ನು ಮಾಡಿಸುವುದರಲ್ಲಿ ಸಮರ್ಥನು. ದೇವತೆಗಳಿಗೆ ಒಡೆಯನಾದ ಇಂದ್ರನೊಡನೆಯೂ ಅವನಿಗೆ ಒಡನಾಟವಿದೆ. ಮೇಲಾಗಿ ಅವನು ಯಾವಾಗಲೂ ನಾನಾವಿಧವಾದ ಯಜ್ಞಗಳನ್ನು

ಮಾಡಿಸುತ್ತಲೇ ಇರುವನು. ಆದುದರಿಂದ ಅವನಿಂದಲೇ ನೀನು ಈ ಯಜ್ಞಕರ್ಮವನ್ನು ಮಾಡಿಸು.

ಗೃಹಕೃತ್ಯದ ನನ್ನ ಎಲ್ಲ ಸಂಭಾರಗಳು, ಯಜ್ಞದೀಕ್ಷಿತರು, ಎಲ್ಲ ಗೃಹದೇವತೆಗಳು-ಈ ಎಲ್ಲವೂ ನನ್ನ ಅಣ್ಣನಾದ ಬೃಹಸ್ಪತಿಯಿಂದ ಹಿಂದೆಯೇ ಅಪಹೃತವಾದುವು. ಈಗ ನನ್ನ ಬಳಿಯಲ್ಲಿ ಈ ಶರೀರವೊಂದೇ ಉಳಿದಿದೆ. ಅವಿಕ್ಷಿತನೇ! ನಾನು ಅವನ ಅನುಜ್ಞೆಯನ್ನು ಪಡೆದುಕೊಳ್ಳದೇ ನಿನಗೆ ಯಾವುದೇ ಕಾರಣದಿಂದಲೂ ಯಾವಾಗಲೂ ಯಜ್ಞವನ್ನು ಮಾಡಿಸುವುದಿಲ್ಲ. ಏಕೆಂದರೆ: ಅವನು ನನಗೆ ಪರಮಪೂಜ್ಯನಾದ ಜ್ಯೇಷ್ಠಸಹೋದರನು. ನೀನು ಯಜ್ಞಮಾಡುವ ಇಚ್ಛೆಯುಳ್ಳವನಾಗಿದ್ದರೆ ನೀನೀಗಲೇ ನನ್ನ ಅಣ್ಣನಾದ ಬೃಹಸ್ಪತಿಯ ಬಳಿಗೆ ಹೋಗು. ಅವನ ಅನುಜ್ಞೆಯನ್ನು ಪಡೆದುಕೊಂಡು ಬಾ. ಅನಂತರ ನಾನು ನಿನಗೆ ಯಜ್ಞವನ್ನು ಮಾಡಿಸುತ್ತೇನೆ."

ಮರುತ್ತನು ಹೇಳುತ್ತಾನೆ:

"ಪೂಜ್ಯರೇ! ನಾನು ಮೊದಲು ಬೃಹಸ್ಪತಿಯ ಬಳಿಗೆ ಹೋಗಿದ್ದೆನು. ಅಲ್ಲೇನಾಯಿತೆಂಬುದನ್ನು ಹೇಳುವೆನು; ಕೇಳಿರಿ. ಇಂದ್ರನಿಗೆ ಯಾಜಕನಾಗಿರಬೇಕೆಂಬ ಇಚ್ಛೆಯಿಂದಾಗಿ ಬೃಹಸ್ಪತಿಯು ನನ್ನನ್ನು ಯಾಜ್ಯನನ್ನಾಗಿ ಪರಿಗ್ರಹಿಸಲು ಇಚ್ಛೆಪಡಲಿಲ್ಲ. '**ಅಮರಂ ಯಾಜ್ಯಮಾಸಾದ್ಯ ಯಾಜಯಿಷ್ಯೇ ನ ಮಾನುಷಮ್। ಶಕ್ರೇಣ ಪ್ರತಿಷಿದ್ಧೋಽಹಂ**' 'ದೇವತೆಯನ್ನು ಯಾಜ್ಯನನ್ನಾಗಿ ಮಾಡಿಕೊಂಡನಂತರ ನಾನು ಮನುಷ್ಯನಿಗೆ ಯಜ್ಞವನ್ನು ಮಾಡಿಸುವುದಿಲ್ಲ. ಮೇಲಾಗಿ ಇಂದ್ರನಿಂದಲೂ ನಾನು ಮನುಷ್ಯರಿಗೆ ಯಜ್ಞವನ್ನು ಮಾಡಿಸಬಾರದೆಂದು ತಡೆಯಲ್ಪಟ್ಟಿದ್ದೇನೆ'–ಎಂದೇ ಬೃಹಸ್ಪತಿಯು ನನ್ನೊಡನೆ ಹೇಳಿದನು. ಇಂದ್ರನು ನಿಮ್ಮಣ್ಣನಿಗೆ '**ಮರುತ್ತಂ ಮಾ ಸ್ಮ ಯಾಜಯೇಃ। ಸ್ಪರ್ಧತೇ ಹಿ ಮಯಾ ವಿಪ್ರ ಸದಾ ಹಿ ಸ ತು ಪಾರ್ಥಿವಃ**' 'ಮರುತ್ತನಿಗೆ ನೀನು ಯಜ್ಞವನ್ನು ಮಾಡಿಸಲೇಬಾರದು. ಆ ರಾಜನು ಯಾವಾಗಲೂ ನನ್ನೊಡನೆ ಸ್ಪರ್ಧಿಸುತ್ತಲೇ ಇರುವನು'–ಎಂದು ಹೇಳಿದುದಕ್ಕೆ ನಿಮ್ಮಣ್ಣನು-'ಹಾಗೆಯೇ ಆಗಲಿ'-ಎಂದು ಇಂದ್ರನಿಗೆ ಪ್ರತಿವಚನವನ್ನಿತ್ತಿರುವನು. ಮುನಿಶ್ರೇಷ್ಠರೇ!

ನಾನು ಅತ್ಯಂತ ಪ್ರೇಮದಿಂದ ಬೃಹಸ್ಪತಿಯ ಬಳಿಗೆ ಹೋಗಿ ಯಜ್ಞವನ್ನು ಮಾಡಿಸುವಂತೆ ಪ್ರಾರ್ಥಿಸಿದೆನು. ಆದರೆ ಅವನು ನನ್ನನ್ನು ತಿರಸ್ಕರಿಸಿದನು. ಇದು ಸತ್ಯವಾದ ಸಂಗತಿ. ನನ್ನ ಸರ್ವಸ್ವಪರಿತ್ಯಾಗದಿಂದಲಾದರೂ ನಿಮ್ಮಿಂದ ಯಜ್ಞವನ್ನು ಮಾಡಿಸಿಕೊಳ್ಳಲು ಇಚ್ಛಿಸಿದ್ದೇನೆ. ನಿಮ್ಮನ್ನು ಯಾಜಕನನ್ನಾಗಿ ಪಡೆದು ಸಂಪಾದಿಸಿದ ಗುಣಗಳ ಪ್ರಭಾವದಿಂದ ಇಂದ್ರನನ್ನು ಮೀರಿಸಲು ಬಯಸುತ್ತೇನೆ. ಯಾವುದೇ ಅಪರಾಧವನ್ನು ಮಾಡದಿದ್ದರೂ ನಿಮ್ಮಣ್ಣನಿಂದ ನಾನು ತಿರಸ್ಕೃತನಾಗಿದ್ದೇನೆ. ಆದುದರಿಂದ ಪುನಃ ಬೃಹಸ್ಪತಿಯ ಬಳಿಗೆ ಹೋಗಲು ನನ್ನ ಬುದ್ಧಿಯು ಒಪ್ಪುತ್ತಿಲ್ಲ."

ಸಂವರ್ತನು ಹೇಳುತ್ತಾನೆ:

"ಪಾರ್ಥಿವನೇ! ನೀನು ನನ್ನ ಅಭಿಪ್ರಾಯಕ್ಕೆ ಅನುಸಾರವಾಗಿ ಎಲ್ಲ ಕಾರ್ಯಗಳನ್ನೂ ಮಾಡಿದ್ದೇ ಆದರೆ–ನೀನು ಏನನ್ನು ಅಪೇಕ್ಷಿಸುವೆಯೋ ಅದು ಸಿದ್ಧಿಸಿಯೇ ತೀರುತ್ತದೆ. ಇದು ನಿಜ. ನಾನು ನಿನ್ನಿಂದ ಯಜ್ಞವನ್ನು ಮಾಡಿಸಲು ಪ್ರಾರಂಭಿಸಿದೊಡನೆಯೇ ಬೃಹಸ್ಪತಿ-ಪುರಂದರರಿಬ್ಬರೂ ಕ್ರುದ್ಧರಾಗಿ ನಿನ್ನನ್ನು ದ್ವೇಷಿಸುತ್ತಾರೆ. ಆ ಸಮಯದಲ್ಲಿ ನೀನು ನನ್ನ ಪಕ್ಷವನ್ನು ಸಮರ್ಥಿಸಿ ಕೊಳ್ಳಬೇಕು. (ಹೆದರಿ ನನ್ನನ್ನು ಪರಿತ್ಯಜಿಸಬಾರದು.)

ಬೃಹಸ್ಪತಿ-ಪುರಂದರರು ನನ್ನನ್ನು ದ್ವೇಷಿಸಿದರೂ ನನಗೆ ಸ್ಥೈರ್ಯವುಂಟಾಗುವ ರೀತಿಯಲ್ಲಿ ಸಂದೇಹಕ್ಕೆ ಎಡೆಯಿಲ್ಲದಂತೆ ನೀನು ಕಾರ್ಯಮಾಡಬೇಕು. ಹಾಗೆ ಮಾಡದಿದ್ದರೆ ನಾನು ಕ್ರುದ್ಧನಾಗಿ ಬಂಧುಗಳ ಸಹಿತ ನಿನ್ನನ್ನೀಗಲೇ ಭಸ್ಮಮಾಡಿಬಿಡುತ್ತೇನೆ."

"ಪೂಜ್ಯರೇ! ನಾನೇನಾದರೂ ನಿಮ್ಮನ್ನು ಪರಿತ್ಯಜಿಸಿದರೆ ಈ ವಿಶ್ವದಲ್ಲಿ ಸೂರ್ಯನು ಬೆಳಗುತ್ತಿರುವವರೆಗೂ-ಪರ್ವತಗಳು ಸ್ಥಿರವಾಗಿರುವವರೆಗೂ ನನಗೆ ಉತ್ತಮಲೋಕಗಳು ಲಭಿಸದಿರಲಿ.

ನಾನೇನಾದರೂ ನಿಮ್ಮ ಸಾಂಗತ್ಯವನ್ನು ತೊರೆದರೆ ಪ್ರಪಂಚದಲ್ಲಿ ನನಗೆ ಯಾವಾಗಲೂ ಶುಭಬುದ್ಧಿಯಿಲ್ಲದಿರಲಿ. ವಿಷಯಗಳಲ್ಲಿ ಲಂಪಟತ್ವ ವುಂಟಾಗಲಿ."

ಸಂವರ್ತನು ಹೇಳುತ್ತಾನೆ:

"ಅವಿಕ್ಷಿತನೇ! ನೀನು ಮಾಡುವ ಕರ್ಮಗಳಲ್ಲಿ ಯಾವಾಗಲೂ ನಿನಗೆ ಶುಭಾವಹವಾದ ಬುದ್ಧಿಯೇ ಇರಲಿ. ನನ್ನ ಮನಸ್ಸಿನಲ್ಲಿಯೂ ನಿನಗೆ ಯಜ್ಞವನ್ನು ಮಾಡಿಸಬೇಕೆನ್ನುವ ಅಪೇಕ್ಷೆಯುಂಟಾಗಿದೆ. ಇದಕ್ಕಾಗಿಯೇ ನಾನು ನಿನಗೆ ಅಕ್ಷಯವಾದ ಮತ್ತು ಶ್ರೇಷ್ಠವಾದ ದ್ರವ್ಯವನ್ನು ಪಡೆಯುವ ಉಪಾಯವನ್ನು ಹೇಳುತ್ತೇನೆ. ಅಂತಹ ಶ್ರೇಷ್ಠವಾದ ದ್ರವ್ಯದಿಂದ ನೀನು ಗಂಧರ್ವಸಹಿತರಾದ ದೇವತೆಗಳನ್ನೂ ಮತ್ತು ಇಂದ್ರನನ್ನೂ ಧಿಕ್ಕರಿಸುವೆ.

ನನಗೆ ಯಾಜ್ಯರನ್ನು ಮತ್ತು ಧನವನ್ನು ಸಂಗ್ರಹಿಸುವುದರಲ್ಲಿ ಮನಸ್ಸಿಲ್ಲ. ಆದರೆ ಈಗ ಮಾತ್ರ ನಿನ್ನನ್ನು ಯಾಜ್ಯನನ್ನಾಗಿ ಪರಿಗ್ರಹಿಸಿ ಇಂದ್ರ-ಬೃಹಸ್ಪತಿಗಳಿಬ್ಬರಿಗೂ ಪ್ರಿಯವಲ್ಲದ ಕಾರ್ಯವನ್ನು ಮಾಡುವೆನು.

ಗಮಯಿಷ್ಯಾಮಿ ಶಕ್ರೇಣ ಸಮತಾಮಪಿ ತೇ ಧ್ರುವಮ್ ।
ಪ್ರಿಯಂ ಚ ತೇ ಕರಿಷ್ಯಾಮಿ ಸತ್ಯಮೇತದ್ಬ್ರವೀಮಿ ತೇ ॥೨೭॥

ನಿಶ್ಚಯವಾಗಿಯೂ ನಾನು ನಿನ್ನನ್ನು ಇಂದ್ರನಿಗೆ ಸಮಾನನನ್ನಾಗಿ ಮಾಡುವೆನು ಮತ್ತು ನಿನಗೆ ಪ್ರಿಯವಾಗುವುದನ್ನೂ ಮಾಡುವೆನು. ಈ ಸತ್ಯವಚನವನ್ನು ನಿನ್ನೊಡನೆ ಹೇಳುತ್ತಿದ್ದೇನೆ."

೭ನೆಯ ಅಧ್ಯಾಯವು ಮುಗಿಯಿತು

೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸಂವರ್ತನು ಸುವರ್ಣಪ್ರಾಪ್ತಿಗಾಗಿ ಮರುತ್ತನಿಗೆ ಮಹಾದೇವನ ಸ್ತೋತ್ರವನ್ನು ಉಪದೇಶಿಸಿದುದು: ಧನದ ಪ್ರಾಪ್ತಿ: ಮರುತ್ತನ ಐಶ್ವರ್ಯವನ್ನು ಕಂಡು ಬೃಹಸ್ಪತಿಯ ಚಿಂತೆ

ಸಂವರ್ತನು ಹೇಳುತ್ತಾನೆ:

ಗಿರೇರ್ಹಿಮವತಃ ಪೃಷ್ಠೇ ಮುಂಜವಾನ್ನಾಮ ಪರ್ವತಃ ।
ತಪ್ಯತೇ ಯತ್ರ ಭಗವಾಂಸ್ತಪೋ ನಿತ್ಯಮುಮಾಪತಿಃ ॥೧॥

"ಮರುತ್ತನೇ! ಹಿಮವತ್ಪರ್ವತದ ಹಿಂಭಾಗದಲ್ಲಿ ಮುಂಜವಂತ

ವೆಂಬ ಹೆಸರಿನ ಪರ್ವತವಿದೆ. ಅಲ್ಲಿ ಪೂಜ್ಯನಾದ, ಉಮಾಪತಿಯಾದ ಶಿವನು ಸತತವಾಗಿ ತಪಸ್ಸುಮಾಡುತ್ತಿರುವನು.

ಅಲ್ಲಿ ವನಸ್ಪತಿಗಳ (ವೃಕ್ಷಗಳ) ಬುಡಗಳಲ್ಲಿಯೂ, ಹಳ್ಳ-ತಿಟ್ಟುಗಳಿಂದ ಕೂಡಿದ ಶಿಖರಗಳಲ್ಲಿಯೂ, ಶೈಲರಾಜನಾದ ಹಿಮವಂತನ ಗುಹೆಗಳಲ್ಲಿಯೂ ಮಹಾತೇಜಸ್ವಿಯಾದ, ಶೂಲಪಾಣಿಯಾದ, ನಾನಾ ವಿಧವಾದ ಭೂತಗಣಗಳಿಂದ ಪರಿವೃತನಾದ ಭಗವಾನ್ ಮಹೇಶ್ವರನು ಉಮೆಯೊಡನೆ ಯಥೇಚ್ಛವಾಗಿ ಸುಖದಿಂದ ಉಪಸ್ಥಿತನಾಗಿರುವನು. ಆ ಸ್ಥಳದಲ್ಲಿ ಏಕಾದಶರುದ್ರರೂ, ಸಾಧ್ಯರೂ, ವಿಶ್ವೇದೇವತೆಗಳೂ, ವಸು ಗಳೂ, ಯಮ-ವರುಣ-ಕುಬೇರರೂ, ಭೂತಗಣಗಳೂ, ಪಿಶಾಚಗಣ ಗಳೂ, ಅಶ್ವಿನೀಕುಮಾರರೂ, ಗಂಧರ್ವರೂ, ಅಪ್ಸರೆಯರೂ, ಯಕ್ಷರೂ, ದೇವರ್ಷಿಗಳೂ, ದ್ವಾದಶಾದಿತ್ಯರೂ, ಸಪ್ತಮರುತ್ತುಗಳೂ, ಯಾತುಧಾನರೂ ಎಲ್ಲ ಪ್ರಕಾರಗಳಿಂದಲೂ ಮಹಾತ್ಮನಾದ ಉಮಾಪತಿ ಯಾದ ಪರಮೇಶ್ವರನನ್ನು ಉಪಾಸನೆಮಾಡುತ್ತಿರುತ್ತಾರೆ. ಭಯಂಕರರಾದ ಮತ್ತು ಭಯಂಕರವಾದ ಆಕಾರಗಳನ್ನು ಹೊಂದಿರುವ, ನಾನಾವಿಧವಾದ ಕ್ರೀಡಾವಿನೋದಗಳಲ್ಲಿ ತೊಡಗಿರುವ ಕುಬೇರನ ಸೇವಕರೊಡನೆ ಪೂಜ್ಯನಾದ ಶಿವನು ಆನಂದದಿಂದಿರುತ್ತಾನೆ.ಅವನ ಶ್ರೀವಿಗ್ರಹವು ಪ್ರಾತಃಕಾಲದ ಸೂರ್ಯನ ಕಾಂತಿಯಂತೆ ಕಾಂತಿಯುಕ್ತವಾಗಿ ಪ್ರಕಾಶಿಸುತ್ತಿರುತ್ತದೆ. ಪ್ರಪಂಚದಲ್ಲಿರುವ ಪ್ರಾಣಿಗಳು ತಮ್ಮ ಮಾಂಸಮಯವಾದ ಕಣ್ಣುಗಳಿಂದ ಮಹಾನುಭಾವನಾದ ಪರಶಿವನ ರೂಪವನ್ನಾಗಲೀ ಆಕಾರವನ್ನಾಗಲೀ ಕಾಣಲಾರರು.

ನೋಷ್ಣಂ ಚ ಶಿಶಿರಂ ತತ್ರ ನ ವಾಯುರ್ನ ಚ ಭಾಸ್ಕರಃ ।
ನ ಜರಾ ಕ್ಷುತ್ಪಿಪಾಸೇ ವಾ ನ ಮೃತ್ಯುರ್ನ ಭಯಂ ನೃಪ ॥೯॥

ಮಹಾರಾಜ! ಪರಶಿವನಿರುವ ಆ ಸ್ಥಳದಲ್ಲಿ ಶೀತೋಷ್ಣಗಳ ಬಾಧೆ ಯಿರುವುದಿಲ್ಲ. ವಾಯುವಿನ ಪ್ರಕೋಪವಾಗಲೀ, ಸೂರ್ಯನ ಪ್ರಚಂಡ ವಾದ ತಾಪವಾಗಲೀ ಇರುವುದಿಲ್ಲ. ಮುಪ್ಪಾಗಲೀ, ಹಸಿವು-ಬಾಯಾರಿಕೆ ಗಳಾಲೀ ಇರುವುದಿಲ್ಲ. ಮೃತ್ಯುವಾಗಲೀ, ಭಯವಾಗಲೀ ಅಲ್ಲಿರುವುದಿಲ್ಲ.

ವಿಜಯಿಗಳಲ್ಲಿ ಶ್ರೇಷ್ಠನಾದವನೇ! ಆ ಪರ್ವತದ ನಾಲ್ಕು

ಕಡೆಗಳಲ್ಲಿಯೂ ಸೂರ್ಯನ ಕಿರಣಗಳಿಗೆ ಸಮಾನವಾಗಿ ಫಳ-ಫಳಿಸುವ ಸುವರ್ಣದ ಗಣೆಗಳಿವೆ. ಆ ಗಣೆಗಳು ಮಹಾತ್ಮನಾದ ಕುಬೇರನಿಗೆ ಪ್ರಿಯವನ್ನುಂಟುಮಾಡಲು ಬಯಸುವ, ಆಯುಧಗಳನ್ನೆತ್ತಿಹಿಡಿದಿರುವ ಕುಬೇರನ ಸೇವಕರಿಂದ ಸೇವಿಸಲ್ಪಡುತ್ತಿವೆ. ನೀನು ಅಲ್ಲಿಗೆ ಹೋಗಿ ಜಗತ್ತಿನ ಸೃಷ್ಟಿಗೆ ಕಾರಣನಾದ ಪೂಜ್ಯನಾದ ಶರ್ವನಿಗೆ ನಮಸ್ಕರಿಸಿ ನಾನು ಮುಂದೆ ಹೇಳಲಿರುವ ನಾಮಗಳಿಂದ ಸ್ತುತಿಸು.

ರುದ್ರಾಯ ಶಿತಿಕಣ್ಠಾಯ ಪುರುಷಾಯ ಸುವರ್ಚಸೇ ।
ಕಪರ್ದಿನೇ ಕರಾಲಾಯ ಹರ್ಯಕ್ಷ್ಣೇ ವರದಾಯ ಚ ॥೧೩॥

ತ್ರ್ಯಕ್ಷ್ಣೇ ಪೂಷ್ಣೋ ದನ್ತಭಿದೇ ವಾಮನಾಯ ಶಿವಾಯ ಚ ।
ಯಾಮ್ಯಾಯಾವ್ಯಕ್ತರೂಪಾಯ ಸದ್ವೃತ್ತೇ ಶಙ್ಕರಾಯ ಚ ॥೧೪॥

ಕ್ಷೇಮ್ಯಾಯ ಹರಿಕೇಶಾಯ ಸ್ಥಾಣವೇ ಪುರುಷಾಯ ಚ ।
ಹರಿನೇತ್ರಾಯ ಮುಣ್ಡಾಯ ಕ್ರುದ್ಧಾಯೋತ್ತರಣಾಯ ಚ ॥೧೫॥

ಭಾಸ್ಕರಾಯ ಸುತೀರ್ಥಾಯ ದೇವದೇವಾಯ ರಂಹಸೇ।
ಉಷ್ಣೀಷಿಣೇ ಸುವಕ್ತ್ರಾಯ ಸಹಸ್ರಾಕ್ಷಾಯ ಮೀಢುಷೇ ॥೧೬॥

ಗಿರಿಶಾಯ ಪ್ರಶಾನ್ತಾಯ ಯತಯೇ ಚೀರವಾಸಸೇ ।
ಬಿಲ್ವದಣ್ಡಾಯ ಸಿದ್ಧಾಯ ಸರ್ವದಣ್ಡಧರಾಯ ಚ ॥೧೭॥
ಮೃಗವ್ಯಾಧಾಯ ಮಹತೇ ಧನ್ವಿನೇಽಥ ಭವಾಯ ಚ ।
ವರಾಯ ಸೋಮವಕ್ತ್ರಾಯ ಸಿದ್ಧಮನ್ತ್ರಾಯ ಚಕ್ಷುಷೇ ॥೧೮॥

ಹಿರಣ್ಯಬಾಹವೇ ರಾಜನ್ನುಗ್ರಾಯ ಪತಯೇ ದಿಶಾಮ್ ।
ಲೇಲಿಹಾನಾಯ ಗೋಷ್ಠಾಯ ಸಿದ್ಧಮನ್ತ್ರಾಯ ವೃಷ್ಣಯೇ ॥೧೯॥

ಪಶೂನಾಂ ಪತಯೇ ಚೈವ ಭೂತಾನಾಂ ಪತಯೇ ನಮಃ ।
ವೃಷಾಯ ಮಾತೃಭಕ್ತಾಯ ಸೇನಾನ್ಯೇ ಮಧ್ಯಮಾಯ ಚ ॥೨೦॥

ಸ್ರುವಹಸ್ತಾಯ ಪತಯೇ ಧನ್ವಿನೇ ಭಾರ್ಗವಾಯ ಚ ।
ಅಜಾಯ ಕೃಷ್ಣನೇತ್ರಾಯ ವಿರೂಪಾಕ್ಷಾಯ ಚೈವ ಹ ॥೨೧॥

ತೀಕ್ಷ್ಣದಂಷ್ಟ್ರಾಯ ತೀಕ್ಷ್ಣಾಯ ವೈಶ್ವಾನರಮುಖಾಯ ಚ ।
ಮಹಾದ್ಯುತಯೇಽನಜ್ಗಾಯ ಸರ್ವಾಯ ಪತಯೇ ವಿಶಾಮ್ ॥೨೨॥
ವಿಲೋಹಿತಾಯ ದೀಪ್ತಾಯ ದೀಪ್ತಾಕ್ಷಾಯ ಮಹೌಜಸೇ ।
ವಸುರೇತಃ ಸುವಪುಷೇ ಪೃಥವೇ ಕೃತ್ತಿವಾಸಸೇ ॥೨೩॥
ಕಪಾಲಮಾಲಿನೇ ಚೈವ ಸುವರ್ಣಮುಕುಟಾಯ ಚ ।
ಮಹಾದೇವಾಯ ಕೃಷ್ಣಾಯ ತ್ರ್ಯಮ್ಬಕಾಯಾನಘಾಯ ಚ ॥೨೪॥
ಕ್ರೋಧನಾಯಾನೃಶಂಸಾಯ ಮೃದವೇ ಬಾಹುಶಾಲಿನೇ ।
ದಣ್ಡಿನೇ ತಪ್ತತಪಸೇ ತಥೈವಾಕ್ರೂರಕರ್ಮಿಣೇ ॥೨೫॥
ಸಹಸ್ರಶಿರಸೇ ಚೈವ ಸಹಸ್ರಚರಣಾಯ ಚ ।
ನಮಃ ಸ್ವಧಾಸ್ವರೂಪಾಯ ಬಹುರೂಪಾಯ ದಂಷ್ಟ್ರಿಣೇ ॥೨೬॥

ದುಃಖದ ಕಾರಣವನ್ನು ದೂರಗೊಳಿಸುವವನೂ, ಕಂಠದಲ್ಲಿ ನೀಲ ಚಿಹ್ನೆಯುಳ್ಳವನೂ, ಅಂತರ್ಯಾಮಿಯಾಗಿರುವವನೂ, ಮಹಾತೇಜಸ್ವಿಯೂ, ಜಟೆಯನ್ನು ಧರಿಸಿರುವವನೂ, ಭಯಂಕರವಾದ ರೂಪವುಳ್ಳವನೂ, ಹೊಂಬಣ್ಣದ ಕಣ್ಣುಗಳನ್ನು ಹೊಂದಿರುವವನೂ, ಭಕ್ತರ ಅಭೀಷ್ಟವನ್ನು ದಯಪಾಲಿಸುವವನೂ, ಮೂರು ಕಣ್ಣುಗಳನ್ನು ಹೊಂದಿರುವವನೂ, ಪೂಷನ ಹಲ್ಲುಗಳನ್ನು ಮುರಿದವನೂ, ವಾಮನನೂ, ಮಂಗಳಸ್ವರೂಪನೂ ಆಗಿರುವ ನಿನಗೆ ನಮಸ್ಕಾರವು. ಯಮರಾಜನ ಗಣಸ್ವರೂಪನೂ, ಅವ್ಯಕ್ತವಾದ ರೂಪವುಳ್ಳವನೂ, ಸದಾಚಾರವುಳ್ಳವನೂ, ಶುಭಕರನೂ, ಕಲ್ಯಾಣಕರನೂ, ಹೊಂಬಣ್ಣದ ತಲೆಗೂದಲನ್ನು ಹೊಂದಿರುವವನೂ, ಸ್ಥಿರನೂ, ಪುರುಷನೂ, ಹರಿದ್ವರ್ಣದ ಕಣ್ಣುಗಳುಳ್ಳವನೂ, ಸಂನ್ಯಾಸಿ ಸ್ವರೂಪನೂ, ಕೋಪಗೊಳ್ಳುವವನೂ, ಸಂಸಾರಸಾಗರದಿಂದ ಭಕ್ತರನ್ನು ಉದ್ಧರಿಸುವವನೂ, ಸೂರ್ಯರೂಪಿಯೂ, ಪವಿತ್ರತೀರ್ಥಸ್ವರೂಪನೂ, ದೇವತೆಗಳಿಗೂ ದೇವನಾದವನೂ, ವೇಗವಂತನೂ ಆಗಿರುವ ನಿನಗೆ ನಮಸ್ಕಾರವು. ತಲೆಯಲ್ಲಿ ಉಷ್ಣೀಷ (ಕಿರೀಟ)ವನ್ನು ಧರಿಸಿರುವವನೂ, ಸುಂದರವಾದ ಮುಖವುಳ್ಳವನೂ, ಸಾವಿರ ಕಣ್ಣುಗಳುಳ್ಳವನೂ, ಕಾಮ ಪೂರಕನೂ, ಪರ್ವತದ ಮೇಲೆ ಮಲಗಿರುವವನೂ, ಪ್ರಶಾಂತನಾಗಿರು ವವನೂ, ಯತಿಸ್ವರೂಪನೂ, ನಾರುಮಡಿಯನ್ನುಟ್ಟಿರುವವನೂ, ಬಿಲ್ವಮರದ

ದಂಡವನ್ನು ಧರಿಸಿರುವವನೂ, ಸಿದ್ಧನೂ, ಸಕಲವಿಧವಾದ ದಂಡಗಳನ್ನೂ ಧರಿಸಿರುವವನೂ, ಮೃಗವ್ಯಾಧನೂ (ಆರ್ದ್ರಾನಕ್ಷತ್ರ ಸ್ವರೂಪನೂ), ಮಹಾಂತನೂ, ಪಿನಾಕಧನುಸ್ಸನ್ನು ಧರಿಸಿರುವವನೂ, ಸಂಸಾರಸ್ವರೂಪನೂ, ಶ್ರೇಷ್ಠನಾದವನೂ, ಚಂದ್ರನಿಗೆ ಸಮಾನವಾದ ಮುಖವುಳ್ಳವನೂ, ಮಂತ್ರಸಿದ್ಧಿಯನ್ನು ಹೊಂದಿರುವವನೂ, ನೇತ್ರ ಸ್ವರೂಪಿಯೂ, ಸುವರ್ಣಸದೃಶವಾದ ತೋಳುಗಳುಳ್ಳವನೂ, ಭಯಂಕರ ನಾದವನೂ, ದಿಕ್ಪಾಲಕಸ್ವರೂಪನೂ, ಅಗ್ನಿಯ ರೂಪದಿಂದ ಹವಿಸ್ಸನ್ನು ಆಸ್ವಾದಿಸುವವನೂ, ವಾಣಿಗೆ ನಿವಾಸಸ್ಥಾನನೂ, ಮಂತ್ರಸಿದ್ಧನೂ, ಭಕ್ತರ ಕಾಮನೆಗಳನ್ನು ಸುರಿಸುವವನೂ, ಅಥವಾ ವೃಷ್ಣಿವಂಶಸಂಭೂತನಾದ ಶ್ರೀಕೃಷ್ಣಸ್ವರೂಪಿಯೂ, ಪಶುಗಳ ನಾಯಕನೂ, ಭೂತಗಣಗಳ ನಾಯಕನೂ, ಧರ್ಮಸ್ವರೂಪನೂ, ಮಾತೃಭಕ್ತನೂ, ಕಾರ್ತಿಕೇಯ ಸ್ವರೂಪನೂ, ಹರಿ-ಹರ-ಬ್ರಹ್ಮರಲ್ಲಿ ಮಧ್ಯಮನಾಗಿರುವವನೂ, ಕೈಯಲ್ಲಿ ಸ್ರುವವನ್ನು ಹಿಡಿದಿರುವ ಋತ್ವಿಕ್ ಸ್ವರೂಪನೂ, ಎಲ್ಲರನ್ನೂ ಪರಿಪಾಲಿಸುವವನೂ, ಧನುರ್ಧರನೂ, ಪರಶುರಾಮಸ್ವರೂಪಿಯೂ, ಜನ್ಮರಹಿತನೂ, ಕಪ್ಪಾದ ಕಣ್ಣುಗಳುಳ್ಳವನೂ, ವಿರೂಪವಾದ ಕಣ್ಣುಗಳುಳ್ಳವನೂ, ತೀಕ್ಷ್ಣವಾದ ಕೋರೆದಾಡೆಗಳಿರುವವನೂ, ತೀಕ್ಷ್ಣವಾದ ಸ್ವಭಾವವಿರುವವನೂ, ಅಗ್ನಿಯ ಮುಖವನ್ನು ಹೊಂದಿರುವವನೂ, ಮಹಾಕಾಂತಿಯುಳ್ಳವನೂ, ನಿರಾಕಾರನೂ, ಸರ್ವನೂ, ವಿಶಾಂಪತಿಯೂ (ಪ್ರಜೆಗಳಿಗೆ ಒಡೆಯನೂ), ರಕ್ತವರ್ಣನೂ, ದೀಪ್ತಿಮಂತನೂ, ದೇದೀಪ್ಯಮಾನವಾದ ಕಣ್ಣುಗಳುಳ್ಳವನೂ, ಮಹಾಬಲನೂ, ಹಿರಣ್ಯವೀರ್ಯನಾದ ಅಗ್ನಿ ಸ್ವರೂಪನೂ, ಸುಂದರವಾದ ಶರೀರವುಳ್ಳವನೂ, ಸ್ಥೂಲನೂ, ಮೃಗಚರ್ಮವನ್ನು ಧರಿಸಿರುವವನೂ, ರುಂಡಗಳ ಮಾಲೆಯನ್ನು ಧರಿಸಿರುವವನೂ, ಸುವರ್ಣದ ಕಿರೀಟವನ್ನು ಧರಿಸಿರುವವನೂ, ಮಹಾದೇವನೂ, ಶ್ರೀಕೃಷ್ಣಸ್ವರೂಪಿಯೂ, ತ್ರ್ಯಂಬಕನೂ, ಪಾಪರಹಿತನೂ, ದುಷ್ಟರ ವಿಷಯದಲ್ಲಿ ಕೋಪಗೊಳ್ಳುವವನೂ, ಶಿಷ್ಟರ ವಿಷಯದಲ್ಲಿ ಕೋಮಲವಾದ

ಸ್ವಭಾವವಿರುವವನೂ, ಮೃದುಸ್ವಭಾವದವನೂ, ದೀರ್ಘವಾದ ಬಾಹುಗಳನ್ನು ಹೊಂದಿರುವವನೂ, ದಂಡಧರನೂ, ತಪೋನಿಷ್ಠನೂ, ಕೋಮಲವಾದ ಕರ್ಮವನ್ನು ಮಾಡುವವನೂ, ಸಾವಿರ ತಲೆಗಳುಳ್ಳವನೂ, ಸಾವಿರ ಕಾಲುಗಳುಳ್ಳವನೂ, ಸ್ವಧಾಸ್ವರೂಪನೂ, ಬಹುರೂಪನೂ, ದಂಷ್ಟ್ರೀಎಂಬ (ಕೋರೆದಾಡೆಗಳುಳ್ಳವನೆಂಬ) ಹೆಸರನ್ನು ಹೊಂದಿರುವವನೂ ಆಗಿರುವ ನಿನಗೆ ನಮಸ್ಕಾರವು.

ಪಿನಾಕಿನಂ ಮಹಾದೇವಂ ಮಹಾಯೋಗಿನಮವ್ಯಯಮ್ ।
ತ್ರಿಶೂಲಹಸ್ತಂ ವರದಂ ತ್ರ್ಯಮ್ಬಕಂ ಭುವನೇಶ್ವರಮ್ ॥೨೭॥
ತ್ರಿಪುರಘ್ನಂ ತ್ರಿನಯನಂ ತ್ರಿಲೋಕೇಶಂ ಮಹೌಜಸಮ್ ।
ಪ್ರಭವಂ ಸರ್ವಭೂತಾನಾಂ ಧಾರಣಂ ಧರಣೀಧರಮ್ ॥೨೮॥

ಈಶಾನಂ ಶಙ್ಕರಂ ಸರ್ವಂ ಶಿವಂ ವಿಶ್ವೇಶ್ವರಂ ಭವಮ್ ।
ಉಮಾಪತಿಂ ಪಶುಪತಿಂ ವಿಶ್ವರೂಪಂ ಮಹೇಶ್ವರಮ್ ॥೨೯॥
ವಿರೂಪಾಕ್ಷಂ ದಶಭುಜಂ ದಿವ್ಯಗೋವೃಷಭಧ್ವಜಮ್ ।
ಉಗ್ರಂ ಸ್ಥಾಣುಂ ಶಿವಂ ರುದ್ರಂ ಶರ್ವಂ ಗೌರೀಶಮೀಶ್ವರಮ್ ॥

ಶಿತಿಕಂಠಮಜಂ ಶುಕ್ರಂ ಪೃಥುಂ ಪೃಥುಹರಂ ವರಮ್ ।
ವಿಶ್ವರೂಪಂ ವಿರೂಪಾಕ್ಷಂ ಬಹುರೂಪಮುಮಾಪತಿಮ್ ॥೩೦॥

ಪ್ರಣಮ್ಯ ಶಿರಸಾ ದೇವಮನಙ್ಗಾಙ್ಗಹರಂ ಹರಮ್ ।
ಶರಣ್ಯಂ ಶರಣಂ ಯಾಹಿ ಮಹಾದೇವಂ ಚತುರ್ಮುಖಮ್ ॥೩೧॥

ಹೀಗೆ ಪಿನಾಕಪಾಣಿಯಾದ, ಮಹಾದೇವನಾದ, ಮಹಾಯೋಗಿಯಾದ, ಅವಿನಾಶಿಯಾದ, ಕೈಯಲ್ಲಿ ತ್ರಿಶೂಲವನ್ನು ಹಿಡಿದಿರುವ, ವರದನಾದ, ಮುಕ್ಕಣ್ಣನಾದ, ಭುವನೇಶ್ವರನಾದ, ತ್ರಿಪುರಸಂಹಾರಕನಾದ, ತ್ರಿನಯನನಾದ, ಮೂರು ಲೋಕಗಳಿಗೂ ಒಡೆಯನಾದ, ಮಹಾಬಲನಾದ, ಸರ್ವಪ್ರಾಣಿಗಳ ಉತ್ಪತ್ತಿಗೆ ಕಾರಣನಾದ, ಸರ್ವಪ್ರಾಣಿ ಗಳನ್ನೂ ಧರಿಸಿರುವ, ಧರಣೀಧರನಾದ, ಜಗತ್ತಿನ ಶಾಸಕನಾದ, ಕಲ್ಯಾಣಕರನಾದ, ಎಲ್ಲವನ್ನೂ ಯಾವಾಗಲೂ ಅರಿಯುತ್ತಿರುವ, ಮಂಗಳಕರನಾದ, ವಿಶ್ವಕ್ಕೇ ಈಶ್ವರನಾದ, ಸಂಸಾರರೂಪಿಯಾದ, ಪಾರ್ವತಿಯ ಪತಿಯಾದ, ಪಶುಗಳ ಪಾಲಕನಾದ, ಅನಂತರೂಪನಾದ, ಮಹೇಶ್ವರನಾದ, ವಿರೂಪವಾದ

ಕಣ್ಣುಗಳನ್ನು ಹೊಂದಿರುವ, ಧ್ವಜದಲ್ಲಿ ದಿವ್ಯವಾದ ವೃಷಭನ ಚಿಹ್ನೆಯನ್ನು ಹೊಂದಿರುವ, ಉಗ್ರನಾದ, ಸ್ಥಿರನಾದ, (ಮಂಗಳಸ್ವರೂಪನಾದ) ಎಲ್ಲ ಪ್ರಾಣಿಗಳನ್ನೂ ಪ್ರಳಯಕಾಲದಲ್ಲಿ ಸಂಹರಿಸುವ, ಗೌರೀಪತಿಯಾದ, ಈಶ್ವರನಾದ, ಕೃಷ್ಣಕಂಠನಾದ, ಹುಟ್ಟಿಲ್ಲದ, ಶುಕ್ರಸ್ವರೂಪನಾದ, ಪ್ರಪಂಚರೂಪದಿಂದ ವಿಸ್ತಾರಗೊಂಡಿರುವ, ಪೃಥುವೆಂಬ ರಾಕ್ಷಸನನ್ನು ಸಂಹರಿಸಿದ, ವಿಶ್ವರೂಪನಾದ, ವಿರೂಪಾಕ್ಷನಾದ, ಬಹುರೂಪನಾದ, ಕಾಮನನ್ನು ದಹಿಸಿದ, ಹರನಾದ, ರಕ್ಷಕಶ್ರೇಷ್ಠನಾದ, ನಾಲ್ಕು ಮುಖಗಳುಳ್ಳ ಮಹಾದೇವನನ್ನು ಶರಣುಹೊಂದು.

ಪೃಥಿವೀನಾಥನೇ! ಹೀಗೆ ಪರಶಿವನ ನಾಮಾವಳಿಗಳನ್ನು ಹೇಳಿಕೊಂಡು ವೇಗವಂತನಾದ, ಮಹಾತ್ಮನಾದ ಮಹಾದೇವನಿಗೆ ನಮಸ್ಕಾರವನ್ನು ಮಾಡಿದನಂತರ ಅವನ ಅನುಗ್ರಹದಿಂದ ಆ ಸುವರ್ಣರಾಶಿಯನ್ನು ಪಡೆದುಕೊಳ್ಳುವೆ. ನೀನು ಸುವರ್ಣರಾಶಿಯನ್ನು ಪಡೆದುಕೊಂಡನಂತರ ಅದನ್ನು ತರಲು ನಿನ್ನ ಸೇವಕರು ಅಲ್ಲಿಗೆ ಹೋಗಲಿ."

ಸಂವರ್ತನು ಹೀಗೆ ಹೇಳಿದನಂತರ ಮರುತ್ತನು ಹಿಮವತ್ಪರ್ವತಕ್ಕೆ ಹೋಗಿ ಸಂವರ್ತನು ಉಪದೇಶಿಸಿದ ಶಿವನ ನಾಮಾವಳಿಗಳನ್ನು ಪಠಿಸಿ ಗಂಗಾಧರನನ್ನು ನಮಸ್ಕರಿಸಿ, ಮಹಾದೇವನ ಅನುಗ್ರಹದಿಂದ ಸುವರ್ಣ ರಾಶಿಯನ್ನು ಪಡೆದುಕೊಂಡನು. ಮರುತ್ತನ ಸೇವಕರು ಆ ಸುವರ್ಣದ ರಾಶಿಯನ್ನು ಯಜ್ಞಭೂಮಿಗೆ ತಂದರು. ಅನಂತರ ಮರುತ್ತನು ಮನುಷ್ಯರ ಶಕ್ತಿಯನ್ನೂ ಮೀರಿಸಿ ಯಜ್ಞದ ಸಿದ್ಧತೆಯನ್ನು ಮಾಡಿದನು. ಸ್ವರ್ಣಕಾರರು ಯಜ್ಞಕ್ಕೆ ಸಂಬಂಧಿಸಿದ ಪಾತ್ರೆಗಳೆಲ್ಲವನ್ನೂ ಚಿನ್ನದಿಂದಲೇ ತಯಾರಿಸಿದರು. ಮಹೀಪತಿಯಾದ ಮರುತ್ತನು ದೇವತೆಗಳನ್ನೂ ಮೀರಿಸಿದ ಸಂಪತ್ತನ್ನು ಪಡೆದುಕೊಂಡಿರುವುದನ್ನು ಕೇಳಿ ಬೃಹಸ್ಪತಿಗೆ ಅತಿಯಾದ ದುಃಖವುಂಟಾಯಿತು. ಅಂತಹ ಮಹೈಶ್ವರ್ಯಸಂಪನ್ನನಾದ ಮರುತ್ತನಿಗೆ ತನ್ನ ತಮ್ಮನಾದ ಮತ್ತು ಶತ್ರುವಾದ ಸಂವರ್ತನು ಯಜ್ಞಮಾಡಿಸುವುದರಿಂದ ಅವನು ಐಶ್ವರ್ಯಸಂಪನ್ನನಾಗುವನೆಂದು ಬೃಹಸ್ಪತಿಯು ಪರಿತಪಿಸುತ್ತಾ ಕುಂದಿದ ಮುಖವುಳ್ಳವನಾಗಿ, ದಿನ-ದಿನಕ್ಕೂ ಅತ್ಯಂತ ಕೃಶನೂ ಆದನು. ದೇವರಾಜನಾದ ಇಂದ್ರನು, ಬೃಹಸ್ಪತಿಯು

ಮರುತ್ತನ ಐಶ್ವರ್ಯಸಂಪನ್ನತೆಯನ್ನು ಕೇಳಿ ಪರಿತಪಿಸುತ್ತಿರುವ ನೆಂಬುದನ್ನೂ ಮತ್ತು ದಿನ-ದಿನಕ್ಕೂ ಕೃಶನಾಗುತ್ತಿರುವನೆಂಬುದನ್ನೂ ಕೇಳಿ ದೇವತೆಗಳ ಸಮೇತನಾಗಿ ಬೃಹಸ್ಪತಿಯ ಬಳಿಗೆ ಬಂದು ಹೇಳಿದನು."

೮ನೆಯ ಅಧ್ಯಾಯವು ಮುಗಿಯಿತು.

೯ನೆಯ ಅಧ್ಯಾಯ ಅಶ್ವಮೇಧಪರ್ವ(ಮುಂದುವರಿದಿದೆ.)

ಬೃಹಸ್ಪತಿಯು ಇಂದ್ರನಿಗೆ ತನ್ನ ಚಿಂತೆಗೆ ಕಾರಣವನ್ನು ತಿಳಿಸಿದುದು: ಇಂದ್ರನ ಆಜ್ಞೆಯಂತೆ ಅಗ್ನಿದೇವನು ಇಂದ್ರನ ಸಂದೇಶದೊಡನೆ ಮರುತ್ತನ ಬಳಿಗೆ ಹೋದುದು: ಪುರೋಹಿತನಾಗಿದ್ದ ಸಂವರ್ತನನ್ನು ನೋಡಿದೊಡನೆಯೇ ಅಗ್ನಿಯು ಹೆದರಿ ಇಂದ್ರನ ಬಳಿಗೆ ಹಿಂದಿರುಗಿ ಬ್ರಹ್ಮಬಲದ ಶ್ರೇಷ್ಠತೆಯನ್ನು ಹೇಳಿದುದು

ಇಂದ್ರನು ಬೃಹಸ್ಪತಿಯನ್ನು ಪ್ರಶ್ನಿಸುತ್ತಾನೆ:

ಕಚ್ಚಿತ್ಸುಖಂ ಸ್ವಪಿಷಿ ತ್ವಂ ಬೃಹಸ್ಪತೇ
ಕಚ್ಚಿನ್ಮನೋಜ್ಞಾಃ ಪರಿಚಾರಕಾಸ್ತೇ ।
ಕಚ್ಚಿದ್ದೇವಾನಾಂ ಸುಖಕಾಮೋಽಸಿ ವಿಪ್ರ
ಕಚ್ಚಿದ್ದೇವಾಸ್ತ್ವಾಂ ಪರಿಪಾಲಯನ್ತಿ ॥೧॥

"ಬೃಹಸ್ಪತಿಯೇ! ನೀನು ಯಾವ ವಿಧವಾದ ಯೋಚನೆಯೂ ಇಲ್ಲದೇ ಸುಖವಾಗಿ ನಿದ್ರಿಸುತ್ತಿರುವೆಯಲ್ಲವೇ? ನಿನ್ನ ಸೇವಕರು ನಿನ್ನ ಮನಸ್ಸನ್ನು ತಿಳಿದು ಸೇವೆಮಾಡುತ್ತಿರುವರಲ್ಲವೇ? ವಿಪ್ರನೇ! ಹಿಂದಿನಂತೆಯೇ ನೀನು ದೇವತೆಗಳಿಗೆ ಸುಖವನ್ನು ಬಯಸುತ್ತಿರುವೆಯಲ್ಲವೇ? ದೇವತೆಗಳು ನಿನ್ನನ್ನು ಸಂಪೂರ್ಣವಾಗಿ ರಕ್ಷಿಸುತ್ತಿರುವರಲ್ಲವೇ?"

ಬೃಹಸ್ಪತಿಯು ಉತ್ತರಿಸುತ್ತಾನೆ:

"ದೇವರಾಜನೇ! ಹಾಸಿಗೆಯಲ್ಲಿ ಸುಖವಾಗಿ ಮಲಗುವೆನು. ಪರಿಚಾರಕರು ನಾನು ಹೇಳದೇ ಇದ್ದರೂ ನನ್ನ ಮನಸ್ಸಿನಲ್ಲಿರುವುದನ್ನು ತಿಳಿದುಕೊಂಡು ನನಗೆ ಇಷ್ಟವಾದ ಕಾರ್ಯಗಳನ್ನೇ ಮಾಡುತ್ತಿರುತ್ತಾರೆ.

ನಾನು ದೇವತೆಗಳಿಗೆ ನಿತ್ಯವೂ ಸುಖವನ್ನೇ ಬಯಸುವವನಾಗಿದ್ದೇನೆ. ದೇವತೆಗಳೂ ನನ್ನನ್ನು ಚೆನ್ನಾಗಿ ಪಾಲನೆಮಾಡುತ್ತಿದ್ದಾರೆ."

ಇಂದ್ರ:

"ವಿಪ್ರಶ್ರೇಷ್ಠನೇ! ನಿನ್ನ ದೇಹವು ಬಿಳಚಿಕೊಂಡಿದೆ ಮತ್ತು ಬಾಡಿ ಹೋಗಿದೆ. ಇದಕ್ಕೆ ಕಾರಣವಾದ ದುಃಖವು ನಿನಗೆ ಹೇಗೆ ಪ್ರಾಪ್ತವಾಯಿತು? ಅದೇನು ಮಾನಸಿಕದುಃಖವೇ ಅಥವಾ ಶಾರೀರಕವಾದ ದುಃಖವೇ? ಬ್ರಾಹ್ಮಣೋತ್ತಮನೇ! ಈ ನಿನ್ನ ದುಃಖಕ್ಕೆ ಕಾರಣರಾರೆಂಬುದನ್ನು ಹೇಳು. ನಿನ್ನ ದುಃಖಕ್ಕೆ ಕಾರಣರಾದ ಸಮಸ್ತರನ್ನೂ ಧ್ವಂಸಮಾಡಿಬಿಡುವೆನು."

ಬೃಹಸ್ಪತಿ:

"ಮಘವಂತನೇ! ಉತ್ತಮವಾದ (ಅಪಾರವಾದ) ದಕ್ಷಿಣೆಯಿಂದ ಕೂಡಿದ ಮಹಾಯಜ್ಞವೊಂದನ್ನು ಮರುತ್ತನು ಮಾಡುತ್ತಿರುವನೆಂದು ಜನರು ಹೇಳುತ್ತಿದ್ದಾರೆ. ನನ್ನ ತಮ್ಮನಾದ ಸಂವರ್ತನೇ ಆ ಯಜ್ಞವನ್ನು ಮಾಡಿಸುತ್ತಿರುವನೆಂದೂ ಕೇಳಿದೆನು. ಸಂವರ್ತನು ಮರುತ್ತನಿಂದ ಆ ಮಹಾಯಜ್ಞವನ್ನು ಮಾಡಿಸಬಾರದೆಂಬುದೇ ನನ್ನ ಅಪೇಕ್ಷೆಯಾಗಿದೆ. "

ಇಂದ್ರ:

"ವಿಪ್ರಶ್ರೇಷ್ಠನೇ! ನೀನು ದೇವತೆಗಳಿಗೆ ಮಂತ್ರಜ್ಞನಾದ ಪುರೋಹಿತನಾಗಿರುವುದರಿಂದ ಸಂಪೂರ್ಣವಾದ ಮನೋವಾಂಛಿತಭೋಗಗಳೆಲ್ಲವನ್ನೂ ನೀನು ಹೊಂದಿರುವೆ. ಮುಪ್ಪು-ಸಾವುಗಳೂ ನಿನ್ನನ್ನು ಬಿಟ್ಟು ಹೊರಟು ಹೋಗಿವೆ. ಹೀಗಿರುವಾಗ ನಿನಗೆ ಸಂವರ್ತನು ಏನುತಾನೇ ಮಾಡಿಯಾನು?"

ಬೃಹಸ್ಪತಿ:

"ದೇವರಾಜನೇ! ನೀನು ಯಾವ-ಯಾವ ಅಸುರರನ್ನು ಸಮೃದ್ಧಶಾಲಿಗಳೆಂದು ಕಾಣುವೆಯೋ–ಅವರನ್ನು ಅಲ್ಲಲ್ಲಿಯೇ ದೇವತೆಗಳೊಡನೆ ಹೋಗಿ ಆಕ್ರಮಿಸಿ ಬಂಧುಗಳ ಸಮೇತವಾಗಿ ಸಂಹರಿಸುವೆ. ಇದಕ್ಕೆ ಕಾರಣವಿಷ್ಟೇ. ದುಃಖಂ ಸಪತ್ನೇಷು ಸಮೃದ್ಧಭಾವಃ-ಶತ್ರುಗಳ ಸಮೃದ್ಧಿಯು ದುಃಖಕ್ಕೆ ಕಾರಣವಾಗುತ್ತದೆ. ದೇವೇಂದ್ರನೇ! ಈ ಕಾರಣದಿಂದಲೇ ನಾನು

ವಿವರ್ಣರೂಪನಾಗಿದ್ದೇನೆ. ನನ್ನ ಶತ್ರುವು ಸಮೃದ್ಧನಾಗುತ್ತಿರುವನೆಂಬುದನ್ನು ಕೇಳಿ ನನಗೆ ಅಪಾರವಾದ ಚಿಂತೆಯುಂಟಾಗಿದೆ. ಆದುದರಿಂದ ನೀನು ಸರ್ವೋಪಾಯಗಳಿಂದಲೂ ಮರುತ್ತನು ಯಜ್ಞಮಾಡುವುದನ್ನಾದರೂ ನಿಲ್ಲಿಸು ಅಥವಾ ಸಂವರ್ತನು ಯಜ್ಞಮಾಡಿಸುವುದನ್ನಾದರೂ ನಿಲ್ಲಿಸು."

ಒಡನೆಯೇ ಇಂದ್ರನು ಅಗ್ನಿದೇವನನ್ನು ಕರೆದು ಹೇಳಿದನು:

"ಅಗ್ನಿದೇವನೇ! ಇತ್ತ ಬಾ. ನನ್ನ ಸಂದೇಶದೊಡನೆ ಮರುತ್ತನ ಬಳಿಗೆ ಹೋಗು. ಬೃಹಸ್ಪತಿಯನ್ನು ಮರುತ್ತನ ಬಳಿಗೆ ಕಳುಹಿಸಿಕೊಡುವ ಸಲುವಾಗಿ ಅವನೊಡನೆ ಹೀಗೆ ಹೇಳಬೇಕು:

ಅಯಂ ವೈ ತ್ವಾಂ ಯಾಜಯಿತಾ ಬೃಹಸ್ಪತಿ-
ಸ್ತಥಾಮರಂ ಚೈವ ಕರಿಷ್ಯತೀತಿ ॥೮॥

"ಮರುತ್ತನೇ! ದೇವಗುರುವಾದ ಈ ಬೃಹಸ್ಪತಿಯೇ ನಿನಗೆ ಯಜ್ಞವನ್ನು ಮಾಡಿಸುತ್ತಾನೆ ಮತ್ತು ನಿನ್ನನ್ನು ಅಮರನನ್ನಾಗಿಯೂ ಮಾಡುತ್ತಾನೆ."

ಇಂದ್ರನ ಮಾತನ್ನು ಕೇಳಿ ಅಗ್ನಿಯು ಹೇಳುತ್ತಾನೆ:

"ದೇವೇಂದ್ರನೇ! ಬೃಹಸ್ಪತಿಯನ್ನು ಮರುತ್ತನಿಗೆ ಒಪ್ಪಿಸಿಕೊಡುವ ಆಶಯದಿಂದಲೂ, ಇಂದ್ರನ (ನಿನ್ನ) ವಾಣಿಯನ್ನು ಸತ್ಯವಾಣಿಯನ್ನಾಗಿ ಮಾಡುವ ಇಚ್ಛೆಯಿಂದಲೂ, ಈ ಮೂಲಕ ಬೃಹಸ್ಪತಿಯನ್ನು ಗೌರವಿಸುವ ಇಚ್ಛೆಯಿಂದಲೂ ಈಗಲೇ ನಾನು ನಿನ್ನ ದೂತನಾಗಿ ಮರುತ್ತನ ಬಳಿಗೆ ಹೋಗುವೆನು. "

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ! ಮಹಾತ್ಮನಾದ, ಧೂಮಧ್ವಜನಾದ ಅಗ್ನಿದೇವನು ಹೀಗೆ ಹೇಳಿ ವನಸ್ಪತಿಗಳನ್ನೂ, ಬಳ್ಳಿಗಳನ್ನೂ ಧ್ವಂಸಮಾಡುತ್ತಾ-ಶೀತಕಾಲಾನಂತರ ಸ್ವೇಚ್ಛೆಯಿಂದ ಬೀಸುವ ದಿಗಂತವ್ಯಾಪಿಯಾದ ವಾಯುವಿನಂತೆ ಗರ್ಜನೆಮಾಡುತ್ತಾ-ಅಲ್ಲಿಂದ ಹೊರಟು ಮರುತ್ತನ ಯಜ್ಞಶಾಲೆಗೆ ಹೋದನು. ಅಗ್ನಿಯು ಆಗಮಿಸಿದುದನ್ನು ನೋಡಿದೊಡನೆಯೇ ಮರುತ್ತನು ಹೇಳಿದನು:

“ನಾನೀಗ ಆಶ್ಚರ್ಯಕರವಾದ ದೃಶ್ಯವೊಂದನ್ನು ಕಾಣುತ್ತಿದ್ದೇನೆ. ಅಗ್ನಿದೇವನು ಮೂರ್ತಿಮತ್ತಾಗಿಯೇ ಇಲ್ಲಿಗೆ ಆಗಮಿಸಿದ್ದಾನೆ. ಮಹಾಮುನಿಗಳೇ! ಆಗಮಿಸಿರುವ ಅತಿಥಿಯ ಸತ್ಕಾರಕ್ಕಾಗಿ ಆಸನ-ಪಾದ್ಯ-ಅರ್ಘ್ಯ ಮತ್ತು ಗೋವು ಇವುಗಳನ್ನು ತರೋಣವಾಗಲಿ.”

ಅಗ್ನಿಯು ಹೇಳುತ್ತಾನೆ:

“ಅನಘನೇ! ನೀನು ನನ್ನನ್ನು ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಲು ಇಚ್ಛಿಸಿರುವುದಕ್ಕಾಗಿ ನಿನ್ನನ್ನು ಅಭಿನಂದಿಸುತ್ತೇನೆ. ಆದರೆ ನಾನು ಇಂದ್ರನ ಸಂದೇಶವನ್ನು ಹೊತ್ತು ನಿನ್ನ ಬಳಿಗೆ ಆಗಮಿಸಿರುವ ದೂತನೆಂಬುದನ್ನು ತಿಳಿದುಕೋ.”

ಮರುತ್ತನು ಹೇಳುತ್ತಾನೆ:

“ಧೂಮಕೇತುವೇ! ಶ್ರೀಮಂತನಾದ ಇಂದ್ರನು ಸುಖಿಯಾಗಿರುವನೇ? ನಮ್ಮ ವಿಷಯದಲ್ಲಿ ಅವನು ಪ್ರಸನ್ನತೆಯಿಂದ ಇರುವನೇ? ದೇವತೆಗಳೆಲ್ಲರೂ ಅವನ ಆಜ್ಞಾಧಾರಕರಾಗಿರುವರೇ? ಈ ವಿಷಯವನ್ನು ನೀನು ಯಥಾವತ್ತಾಗಿ ಸಮಗ್ರವಾಗಿ ಹೇಳು.”

ಅಗ್ನಿಯು ಹೇಳುತ್ತಾನೆ:

“ಪಾರ್ಥಿವೇಂದ್ರನೇ! ಶಕ್ರನು ಈಗ ಅತ್ಯಂತಸುಖದಲ್ಲಿದ್ದಾನೆ. ನಿನ್ನೊಡನೆ ಶಾಶ್ವತವಾದ ಮೈತ್ರಿಯನ್ನು ಬೆಳೆಸಲು ಇಚ್ಛಿಸಿದ್ದಾನೆ. ದೇವತೆಗಳೆಲ್ಲರೂ ಅವನ ಅಧೀನದಲ್ಲೇ ಇದ್ದಾರೆ. ಈಗ ನೀನು ದೇವರಾಜನ ಈ ಸಂದೇಶವನ್ನು ಕೇಳು. ಅವನು ಯಾವ ಕಾರ್ಯಾರ್ಥವಾಗಿ ನನ್ನನ್ನು ನಿನ್ನ ಬಳಿಗೆ ಕಳುಹಿಸಿರುವನೆಂಬುದನ್ನು ಕೇಳು. ಇಂದ್ರನು ನನ್ನ ಮೂಲಕವಾಗಿ ಬೃಹಸ್ಪತಿಯನ್ನು ನಿನ್ನ ಬಳಿಗೆ ಕಳುಹಿಸಲು ಇಚ್ಛಿಸಿದ್ದಾನೆ. ಇದಕ್ಕಾಗಿ ಅವನು ಕಳುಹಿಸಿರುವ ಸಂದೇಶವು ಹೀಗಿದೆ.

ಅಯಂ ಗುರುರ್ಯಾಜಯತಾಂ ನೃಪ ತ್ವಾಂ
ಮರ್ತ್ಯಂ ಸನ್ತಮಮರಂ ತ್ವಾಂ ಕರೋತು ॥೧೫॥

‘ಮೊದಲಿನಿಂದಲೂ ಈ ಬೃಹಸ್ಪತಿಯೇ ನಿನ್ನ ಗುರುವಾಗಿದ್ದಾನೆ. ಅವನೇ ಈಗ ನಿನ್ನಿಂದ ಯಜ್ಞವನ್ನು ಮಾಡಿಸಲಿ. ಈಗ ನೀನು ಮರಣ

ಧರ್ಮವುಳ್ಳ ಮನುಷ್ಯನಾಗಿರುವೆ. ಬೃಹಸ್ಪತಿಯು ತನ್ನ ಪ್ರಭಾವದಿಂದ ನಿನ್ನನ್ನು ಅಮರನನ್ನಾಗಿ ಮಾಡಲಿ.'

ಮರುತ್ತನು ಹೇಳುತ್ತಾನೆ:

ಸಂವರ್ತೋಽಯಂ ಯಾಜಯಿತಾ ದ್ವಿಜೋ ಮಾಂ
ಬೃಹಸ್ಪತೇರಞ್ಜಲಿರೇಷ ತಸ್ಯ ।
ನ ಚೈವಾಸೌ ಯಾಜಯಿತ್ವಾ ಮಹೇನ್ದ್ರಂ
ಮರ್ತ್ಯಂ ಸನ್ತಂ ಯಾಜಯನ್ನದ್ಯ ಶೋಭೇತ್ ॥೧೬॥

"ಅಗ್ನಿದೇವನೇ! ನನ್ನ ಯಜ್ಞವನ್ನು ಈ ವಿಪ್ರಶ್ರೇಷ್ಠನಾದ ಸಂವರ್ತನೇ ಮಾಡಿಸುತ್ತಾನೆ. ಬೃಹಸ್ಪತಿಗೆ ನನ್ನ ನಮನಗಳಿರಲಿ. ಅಮರನಾದ ಮಹೇಂದ್ರನಿಗೆ ಯಜ್ಞವನ್ನು ಮಾಡಿಸುವ ಅವನಿಗೆ ನನ್ನಂತಹ ಮರಣಧರ್ಮವಿರುವ ಮನುಷ್ಯನಿಂದ ಯಜ್ಞವನ್ನು ಮಾಡಿಸುವುದು ಖಂಡಿತವಾಗಿಯೂ ಶೋಭಿಸುವುದಿಲ್ಲ."

ಅಗ್ನಿಯು ಹೇಳುತ್ತಾನೆ:

ಯೇ ವೈ ಲೋಕಾ ದೇವಲೋಕೇ ಮಹಾನ್ತಃ
ಸಮ್ಪ್ರಾಪ್ಸ್ಯಸೇ ತಾನ್ದೇವರಾಜಪ್ರಸಾದಾತ್ ।
ತ್ವಾಂ ಚೇದಸೌ ಯಾಜಯೇದ್ವೈ ಬೃಹಸ್ಪತಿ-
ರ್ನೂನಂ ಸ್ವರ್ಗಂ ತ್ವಂ ಜಯೇಃ ಕೀರ್ತಿಯುಕ್ತಃ ॥೧೭॥
ತಥಾ ಲೋಕಾ ಮಾನುಷಾ ಯೇ ಚ ದಿವ್ಯಾಃ
ಪ್ರಜಾಪತೇಶ್ಚಾಪಿ ಯೇ ವೈ ಮಹಾನ್ತಃ ।
ತೇ ತೇ ಜಿತ್ವಾ ದೇವರಾಜ್ಯಂ ಚ ಕೃತ್ಸ್ನಂ
ಬೃಹಸ್ಪತಿರ್ಯಾಜಯೇಚ್ಚೇನ್ನರೇನ್ದ್ರ ॥೧೮॥

"ನರೇಂದ್ರನೇ! ಬೃಹಸ್ಪತಿಯೇ ನಿನ್ನ ಯಜ್ಞವನ್ನು ಮಾಡಿಸಿದ್ದೇ ಆದರೆ ದೇವರಾಜನಾದ ಇಂದ್ರನ ಪ್ರಸನ್ನತೆಯಿಂದ ನೀನು ದೇವಲೋಕಗಳಲ್ಲಿರುವ ದೊಡ್ಡ-ದೊಡ್ಡಪುಣ್ಯಲೋಕಗಳನ್ನು ಪಡೆಯುವೆ. ನೀನು ಯಶೋವಂತನಾಗುವುದಲ್ಲದೇ ಸ್ವರ್ಗವನ್ನೂ ಜಯಿಸುವೆ. ಇಷ್ಟು ಮಾತ್ರ

ವಲ್ಲ; ಎಷ್ಟು ಮನುಷ್ಯಲೋಕಗಳಿವೆಯೋ, ಎಷ್ಟು ದೇವಲೋಕ ಗಳಿವೆಯೋ, ಪ್ರಜಾಪತಿಯ ಎಷ್ಟು ಮಹತ್ತರವಾದ ಲೋಕಗಳಿವೆಯೋ ಅವೆಲ್ಲವನ್ನೂ ನೀನು ಜಯಿಸುವೆ. ಹೆಚ್ಚೇನು ಹೇಳಲಿ? ಸಮಗ್ರವಾದ ದೇವರಾಜ್ಯವೇ ನಿನ್ನ ಅಧೀನವಾಗುತ್ತದೆ. ಆದುದರಿಂದ ಬೃಹಸ್ಪತಿಯ ಪೌರೋಹಿತ್ಯದಲ್ಲಿ ನೀನು ಈ ಯಜ್ಞವನ್ನು ಮಾಡು."

ಅಗ್ನಿಯ ಮಾತನ್ನು ಕೇಳಿ ಸಂವರ್ತನು ಹೇಳುತ್ತಾನೆ:

ಮಾ ಸ್ಮೈವ ತ್ವಂ ಪುನರಾಗಾಃ ಕಥಂಚಿ-
ದ್ಬೃಹಸ್ಪತಿಂ ಪರಿದಾತುಂ ಮರುತ್ತೇ ।
ಮಾ ತ್ವಾಂ ಧಕ್ಷ್ಯೇ ಚಕ್ಷುಷಾ ದಾರುಣೇನ
ಸಂಕ್ರುದ್ಧೋಽಹಂ ಪಾವಕ ತ್ವಂ ನಿಬೋಧ ॥೧೯॥

"ಅಗ್ನಿದೇವನೇ! ನಾನು ಹೇಳುವುದನ್ನು ಕೇಳು. ಇನ್ನು ಮೇಲೆ ನೀನು ಬೃಹಸ್ಪತಿಯನ್ನು ಮರುತ್ತನಿಗೆ ಒಪ್ಪಿಸಿಕೊಡುವ ಕಾರ್ಯಕ್ಕಾಗಿ ಇಲ್ಲಿಗೆ ಯಾವುದೇ ಕಾರಣದಿಂದಲೂ ಬರಕೂಡದು. ಈ ಕಾರ್ಯಕ್ಕಾಗಿ ಪುನಃ ನೀನೇನಾದರೂ ಬಂದೆಯಾದರೆ–ಅದರಿಂದ ಕೋಪಗೊಳ್ಳುವ ನಾನು ದಾರುಣವಾದ ನನ್ನ ದೃಷ್ಟಿಯಿಂದ ನಿನ್ನನ್ನು ಸುಟ್ಟುಬಿಡುವೆನು."

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ! ಸಂವರ್ತನು ಸುಟ್ಟುಬಿಟ್ಟಾನೆಂಬ ಭಯದಿಂದ ವ್ಯಥಿತನಾದ ಅಗ್ನಿಯು ಅರಳಿಯ ಎಲೆಯಂತೆ ತರ-ತರನೆ ನಡುಗುತ್ತಾ ದೇವತೆಗಳ ಬಳಿಗೆ ಹಿಂದಿರುಗಿದನು. ಭೀತನಾಗಿದ್ದ ಹವ್ಯವಾಹನನನ್ನು ನೋಡಿ ಮಹಾತ್ಮನಾದ ಇಂದ್ರನು ಬೃಹಸ್ಪತಿಯ ಸನ್ನಿಧಿಯಲ್ಲಿ ಹೇಳಿದನು:

"ಜಾತವೇದಸನೇ! ಬೃಹಸ್ಪತಿಯನ್ನು ಮರುತ್ತನಿಗೆ ಒಪ್ಪಿಸುವ ಕಾರ್ಯವನ್ನು ಸಾಧಿಸುವ ಸಲುವಾಗಿ ನನ್ನಿಂದ ಕಳುಹಿಸಲ್ಪಟ್ಟ ನೀನು ಮರುತ್ತನ ಬಳಿಗೆ ಹೋಗಿದ್ದುದು ಸರಿಯಷ್ಟೇ. ಯಜ್ಞಮಾಡಲು ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದ ಮರುತ್ತನು ನನ್ನ ಸಂದೇಶವನ್ನು ಕೇಳಿ ಏನೆಂದು ಹೇಳಿದನು? ಅವನು ನನ್ನ ಮಾತನ್ನು ಅಂಗೀಕರಿಸಿದನೇ?"

ಅಗ್ನಿಯು ಹೇಳುತ್ತಾನೆ:

“ದೇವರಾಜನೇ! ಮರುತ್ತನಿಗೆ ನೀನು ಕಳುಹಿಸಿದ ಸಂದೇಶವು ರುಚಿಸಲಿಲ್ಲ. ಬೃಹಸ್ಪತಿಗೆ ಕೈಜೋಡಿಸಿ ನಮನಗಳನ್ನು ನನ್ನ ಮೂಲಕ ಕಳುಹಿಸಿರುವನು. ನಾನು ಮತ್ತೆ-ಮತ್ತೆ ಬೃಹಸ್ಪತಿಯನ್ನು ಯಜ್ಞಕಾರ್ಯದಲ್ಲಿ ನಿಯೋಜಿಸಿಕೊಳ್ಳುವಂತೆ ಹೇಳಿದರೂ ಮರುತ್ತನು-‘ಸಂವರ್ತೋ ಮಾಂ ಯಾಜಯಿತಾ’ ‘ಸಂವರ್ತನೇ ನನಗೆ ಯಜ್ಞವನ್ನು ಮಾಡಿಸುತ್ತಾನೆ’–ಎಂದೇ ಹೇಳಿಬಿಟ್ಟನು.

ಇಂದ್ರನೊಡನೆ ಸ್ನೇಹಮಾಡಿಕೊಂಡು ಅವನ ಸಂದೇಶದಂತೆ ಬೃಹಸ್ಪತಿಯನ್ನು ಪುರೋಹಿತನನ್ನಾಗಿ ಮಾಡಿಕೊಂಡರೆ–ಎಷ್ಟು ಮನುಷ್ಯ ಲೋಕಗಳಿಯೋ, ಎಷ್ಟು ದೇವಲೋಕಗಳಿವೆಯೋ, ಪ್ರಜಾಪತಿಯ ಎಷ್ಟು ಮಹತ್ತರವಾದ ಲೋಕಗಳಿವೆಯೋ–ಅವೆಲ್ಲವನ್ನೂ ಪಡೆದುಕೊಳ್ಳಬಹುದೆಂದೂ ನಾನು ಮರುತ್ತನಿಗೆ ಹೇಳಿದೆನು.ಇಷ್ಟು ಹೇಳಿದರೂ ಯಶೋವಂತನಾದ ಆ ಮರುತ್ತನು ‘ನೇಚ್ಛೇಯಂ’ ‘ಬೃಹಸ್ಪತಿಯನ್ನು ಪುರೋಹಿತನನ್ನಾಗಿ ಅಂಗೀಕರಿಸಲು ಇಚ್ಛಿಸುವುದಿಲ್ಲ.’– ಎಂದೇ ಹೇಳಿಬಿಟ್ಟನು.”

ಇಂದ್ರನು ಹೇಳುತ್ತಾನೆ:

“ಅಗ್ನಿದೇವನೇ! ನೀನು ಪುನಃ ಹೋಗಿ ರಾಜನನ್ನು ಸಂಧಿಸಿ ನನ್ನ ಅರ್ಥಯುಕ್ತವಾದ ಈ ಸಂದೇಶವನ್ನು ಅವನಿಗೆ ತಲುಪಿಸು. ಎರಡನೆಯ ಬಾರಿಗೆ ಹೇಳಿಕಳುಹಿಸಿದರೂ ಅವನು ನನ್ನ ಮಾತಿನಂತೆ ನಡೆದುಕೊಳ್ಳದಿದ್ದರೆ ಅವನ ಮೇಲೆ ವಜ್ರಾಯುಧವನ್ನೇ ಪ್ರಯೋಗಿಸಿಬಿಡುತ್ತೇನೆ.”

ಅಗ್ನಿಯು ಹೇಳುತ್ತಾನೆ:

“ದೇವರಾಜನೇ! ಈ ಗಂಧರ್ವರಾಜನು ಮರುತ್ತನ ಬಳಿಗೆ ದೂತನಾಗಿ ಹೋಗಲಿ. ಏಕೆಂದರೆ: ನಾನು ಎರಡನೆಯ ಬಾರಿಗೆ ಅಲ್ಲಿಗೆ ಹೋಗಲು ಭಯಪಡುತ್ತೇನೆ. ಬ್ರಹ್ಮಚರ್ಯವ್ರತನಿಷ್ಠನಾದ, ತೀಕ್ಷ್ಣವಾದ ರೋಷವುಳ್ಳ ಸಂವರ್ತನು ನನ್ನ ಮಾತನ್ನು ಕೇಳಿ ಕ್ರುದ್ಧನಾಗಿ ಈ ಮಾತನ್ನು ಹೇಳಿದನು:

'ಅಗ್ನಿಯೇ! ಮುಂದೆ ಯಾವಾಗಲಾದರೂ ನೀನು ಪುನಃ ಬೃಹಸ್ಪತಿಯನ್ನು ಮರುತ್ತನಿಗೆ ಒಪ್ಪಿಸಿಕೊಡುವ ಕಾರ್ಯದ ಸಾಧನೆಗಾಗಿ ಬಂದುದೇ ಆದರೆ ಪರಮಕ್ರುದ್ಧನಾದ ನಾನು ದಾರುಣವಾದ ನನ್ನ ಕಣ್ಣಿನಿಂದಲೇ ನಿನ್ನನ್ನು ಸುಟ್ಟುಬಿಡುತ್ತೇನೆ.' ಇಂದ್ರದೇವ! ಅವನು ಹೇಳಿರುವ ಈ ಮಾತನ್ನು ಗಮನಿಸು."

ಇಂದ್ರ:

ತ್ವಮೇವಾನ್ಯಾನ್ದಹಸೇ ಜಾತವೇದೋ
ನ ಹಿ ತ್ವದನ್ಯೋ ವಿದ್ಯತೇ ಭಸ್ಮಕರ್ತಾ ।
ತ್ವತ್ಸಂಸ್ಪರ್ಶಾತ್ಸರ್ವಲೋಕೋ ಬಿಭೇತಿ
ಅಶ್ರದ್ಧೇಯಂ ವದಸೇ ಹವ್ಯವಾಹ ॥೨೭॥

"ಹವಿಸ್ಸನ್ನೊಯ್ಯುವವನೇ! ಅಗ್ನಿದೇವನೇ! ವಿಶ್ವಾಸಕ್ಕೆ ಅಥವಾ ನಂಬಿಕೆಗೆ ಅರ್ಹವಲ್ಲದ ಮಾತುಗಳನ್ನು ನೀನು ಆಡುತ್ತಿರುವೆ. ಏಕೆಂದರೆ: ನೀನೇ ಇತರರನ್ನು ದಹಿಸುವೆ. ಪ್ರಪಂಚದಲ್ಲಿರುವ ಯಾವುದೇ ವಸ್ತುವನ್ನಾದರೂ ಭಸ್ಮಮಾಡತಕ್ಕವನು ನಿನ್ನೊಬ್ಬನ ಹೊರತಾಗಿ ಬೇರೆ ಯಾರೂ ಇರುವುದಿಲ್ಲ. ನಿನ್ನ ಸ್ಪರ್ಶಮಾತ್ರದಿಂದಲೇ ಎಲ್ಲ ಲೋಕಗಳೂ ಭಯಪಡುತ್ತವೆ. ಆದುದರಿಂದ ಸಂವರ್ತನು ನಿನ್ನನ್ನು ಭಸ್ಮಮಾಡಲಾರನು. ಅವನು ಹೇಳಿದುದಕ್ಕಾಗಿ ನೀನು ಭಯಪಡಬೇಕಾಗಿಯೂ ಇಲ್ಲ."

ಅಗ್ನಿ:

ದಿವಂ ದೇವೇನ್ದ್ರ ಪೃಥಿವೀಂ ಚ ಸರ್ವಾಂ
ಸಂವೇಷ್ಟಯೇಸ್ತ್ವಂ ಸ್ವಬಲೇನೈವ ಶಕ್ರ ।
ಏವಂ ವಿಧಸ್ಯೇಹ ಸತಸ್ತವಾಸೌ
ಕಥಂ ವೃತ್ರಸ್ತ್ರಿದಿವಂ ಪ್ರಾಗ್ಜಹಾರ ॥೨೮॥

"ದೇವೇಂದ್ರನೇ! ನೀನು ನಿನ್ನ ಬಲದಿಂದ ಸಮಸ್ತಭೂಮಂಡಲ ವನ್ನೂ ಮತ್ತು ಸ್ವರ್ಗವನ್ನೂ ಚಾಪೆಯಂತೆ ಚೆನ್ನಾಗಿ ಸುತ್ತಿಕೊಂಡಿರುವೆ. ಇಂತಹ ಸತ್ವಶಾಲಿಯಾದ ಇಂದ್ರನಿಂದಲೂ (ನಿನ್ನಿಂದಲೂ) ಹಿಂದೆ ವೃತ್ರಾ

ಸುರನು ಹೇಗೆ ಸ್ವರ್ಗವನ್ನು ಕಸಿದುಕೊಂಡನು? (ಆದುದರಿಂದ ಬ್ರಾಹ್ಮಣನ ವಿಷಯದಲ್ಲಿ ನಾನು ಭಯಪಡುವುದು ಸಹಜವಾಗಿಯೇ ಇದೆ.)"

ಇಂದ್ರ:

ನ ಗಣ್ಡಿಕಾಕಾರಯೋಗಂ ಕರೇಽಣುಂ
ನ ಚಾರಿಸೋಮಂ ಪ್ರಪಿಬಾಮಿ ವಹ್ನೇ ।
ನ ಕ್ಷೀಣಶಕ್ತೌ ಪ್ರಹರಾಮಿ ವಜ್ರಂ
ಕೋ ಮೇಽಸುಖಾಯ ಪ್ರಹರೇತ ಮರ್ತ್ಯಃ ॥೨೯॥

"ಅಗ್ನಿದೇವನೇ! ನಾನು ಪರ್ವತವನ್ನೂ ನೊಣದಂತೆ ಸೂಕ್ಷ್ಮಗೊಳಿಸಿಯೇನು. ಆದರೆ ಶತ್ರುವು ಯಜ್ಞದಮೂಲಕವಾಗಿ ಕೊಡುವ ಸೋಮರಸವನ್ನು ಪಾನಮಾಡುವುದಿಲ್ಲ. ಬಲಹೀನನ ಮೇಲೆ ವಜ್ರಾಯುಧವನ್ನು ಪ್ರಯೋಗಿಸುವುದಿಲ್ಲ. ನನಗೆ ಅಸುಖವನ್ನುಂಟುಮಾಡಲು ನನ್ನನ್ನು ಪ್ರಹರಿಸುವ ಮನುಷ್ಯನು ಯಾವನಿದ್ದಾನೆ?

ಪ್ರವ್ರಾಜಯೇಯಂ ಕಾಲಕೇಯಾನ್ಪೃಥಿವ್ಯಾ-
ಮಪಾಕರ್ಷನ್ದಾನವಾನನ್ತರಿಕ್ಷಾತ್ ।
ದಿವಃ ಪ್ರಹ್ಲಾದಮವಸಾನಮಾನಯಂ
ಕೋ ಮೇಽಸುಖಾಯ ಪ್ರಹರೇತ ಮಾನವಃ ॥೩೦॥

ಕಾಲಕೇಯಾದಿ ರಾಕ್ಷಸರನ್ನು ಆಕಾಶದಿಂದ ಸೆಳೆದು ಭೂಮಿಯಮೇಲೆ ಹಾಕಿದೆನು. ಪ್ರಹ್ಲಾದನಿಗೆ ಸ್ವರ್ಗದ ಮೇಲಿದ್ದ ಪ್ರಭುತ್ವವನ್ನು ಸಮಾಪ್ತಿಗೊಳಿಸಿದೆನು. ಇಂತಹ ನನಗೆ ಅಸುಖವನ್ನುಂಟುಮಾಡಲು ನನ್ನನ್ನು ಪ್ರಹರಿಸುವ ಮನುಷ್ಯನು ಯಾವನಿದ್ದಾನೆ?"

ಅಗ್ನಿ:

ಯತ್ರ ಶರ್ಯಾತಿಂ ಚ್ಯವನೋ ಯಾಜಯಿಷ್ಯ-
ನ್ಸಹಾಶ್ವಿಭ್ಯಾಂ ಸೋಮಮಗೃಹ್ಣಾದೇಕಃ।
ತಂ ತ್ವಂ ಕ್ರುದ್ಧಃ ಪ್ರತಿಷೇಧೀಃ ಪುರಸ್ತಾ-
ಚ್ಛರ್ಯಾತಿಯಜ್ಞಂ ಸ್ಮರ ತಂ ಮಹೇನ್ದ್ರ ॥೩೧॥

“ಮಹೇಂದ್ರನೇ! ಶರ್ಯಾತಿಯ ಯಜ್ಞವನ್ನು ಜ್ಞಾಪಿಸಿಕೊ. ಚ್ಯವನನು ಶರ್ಯಾತಿಗೆ ಯಜ್ಞವನ್ನು ಮಾಡಿಸುತ್ತಿದ್ದನು. ನೀನು ಮೊದಲು ಪರಮಕ್ರುದ್ಧನಾಗಿ ಅಶ್ವಿನೀದೇವತೆಗಳಿಗೆ ದೇವತೆಗಳೊಡನೆ ಸೋಮರಸವನ್ನು ಅರ್ಪಿಸಬಾರದೆಂದು ಪ್ರತಿಷೇಧಿಸಿದೆ. ಅನಂತರ ಚ್ಯವನನ ಪ್ರಭಾವದಿಂದ ಅಶ್ವಿನೀದೇವತೆಗಳೊಡನೆ ನೀನು ಸೋಮಪಾನಮಾಡಬೇಕಾಯಿತು.

ವಜ್ರಂ ಗೃಹೀತ್ವಾ ಚ ಪುರನ್ದರ ತ್ವಂ
ಸಮ್ಪ್ರಾಹಾರ್ಷೀಶ್ಚ್ಯವನಸ್ಯಾತಿಘೋರಮ್।
ಸ ತೇ ವಿಪ್ರಃ ಸಹ ವಜ್ರೇಣ ಬಾಹು-
ಮಪಾಗೃಹ್ಣಾತ್ತಪಸಾ ಜಾತಮನ್ಯುಃ ॥೩೨॥

ಪುರಂದರನೇ! ನೀನು ಆ ಸಮಯದಲ್ಲಿ ಪರಮಕ್ರುದ್ಧನಾಗಿ ಮಹಾಘೋರವಾದ ವಜ್ರಾಯುಧವನ್ನೆತ್ತಿ ಚ್ಯವನನನ್ನು ಪ್ರಹರಿಸಲು ಉದ್ಯುಕ್ತನಾದೆ. ಆದರೆ ಆ ಬ್ರಹ್ಮರ್ಷಿಯು ಕುಪಿತನಾಗಿ ತನ್ನ ತಪೋಬಲದಿಂದ ವಜ್ರಾಯುಧದೊಡನೆ ನಿನ್ನ ತೋಳನ್ನೂ ಭದ್ರವಾಗಿ ಹಿಡಿದುಬಿಟ್ಟನು. (ಸ್ತಂಭಿಸಿಬಿಟ್ಟನು.)

ತತೋ ರೋಷಾತ್ಸರ್ವತೋ ಘೋರರೂಪಂ
ಸಪತ್ನಂ ತೇ ಜನಯಾಮಾಸ ಭೂಯಃ।
ಮದಂ ನಾಮಾಸುರಂ ವಿಶ್ವರೂಪಂ
ಯಂ ತ್ವಂ ದೃಷ್ಟ್ವಾ ಚಕ್ಷುಷೀ ಸಂನ್ಯಮೀಲಃ ॥೩೩॥

ಅನಂತರ ಚ್ಯವನನು ರೋಷದಿಂದ ಎಲ್ಲೆಡೆಯಲ್ಲೂ ಘೋರರೂಪನಾಗಿ ಕಾಣುತ್ತಿದ್ದ ಮದನೆಂಬ ಹೆಸರಿನ ನಿನ್ನ ಶತ್ರುವನ್ನು ಸೃಷ್ಟಿಸಿದನು. ಆ ಮದನನ್ನು ನೋಡಿದೊಡನೆಯೇ ನೀನು ಕಣ್ಣುಗಳನ್ನು ಮುಚ್ಚಿಕೊಂಡೆ.

ಹನುರೇಕಾ ಜಗತೀಸ್ಥಾ ತಥೈಕಾ
ದಿವಂ ಗತಾ ಮಹತೋ ದಾನವಸ್ಯ।
ಸಹಸ್ರಂ ದನ್ತಾನಾಂ ಶತಯೋಜನಾನಾಂ
ಸುತೀಕ್ಷ್ಣಾನಾಂ ಘೋರರೂಪಂ ಬಭೂವ ॥೩೪॥

ಆ ಮದರಾಕ್ಷಸನ ಒಂದು ದವಡೆಯು ಭೂಮಿಯಲ್ಲಿದ್ದಿತು. ಮತ್ತೊಂದು ಸ್ವರ್ಗದಲ್ಲಿದ್ದಿತು. ಆ ರಾಕ್ಷಸನಿಗೆ ಮೂರು ಯೋಜನಗಳಷ್ಟು ಉದ್ದವಾದ ಅತ್ಯಂತ ತೀಕ್ಷ್ಣವಾದ ಹಲ್ಲುಗಳಿದ್ದುವು. ಅದರಿಂದಾಗಿ ರಾಕ್ಷಸನ ರೂಪವು ಮತ್ತೂ ಭಯಂಕರವಾಗಿ ಕಾಣುತ್ತಿದ್ದಿತು.

ವೃತ್ತಾಃ ಸ್ಥೂಲಾ ರಜತಸ್ತಮ್ಭವರ್ಣಾ
ದಂಷ್ಟ್ರಾಶ್ಚತಸ್ರೋ ದ್ವೇ ಶತೇ ಯೋಜನಾನಾಮ್ ।
ಸ ತ್ವಾಂ ದನ್ತಾನ್ವಿದಶನ್ನಭ್ಯಧಾವ-
ಜ್ಜಿಘಾಂಸಯಾ ಶೂಲಮುದ್ಯಮ್ಯ ಘೋರಮ್ ॥೩೫॥

ಆ ಮದರಾಕ್ಷಸನ ನಾಲ್ಕು ಕೋರೆಹಲ್ಲುಗಳು ದುಂಡಾಗಿಯೂ ಬೆಳ್ಳಿಯ ಕಂಬದಂತೆ ಪ್ರಕಾಶಮಾನವಾಗಿಯೂ ಇದ್ದುವು. ಅವು ಇನ್ನೂರು ಯೋಜನಗಳಷ್ಟು ಉದ್ದವಾಗಿದ್ದುವು. ಆ ಮದರಾಕ್ಷಸನು ಭಯಂಕರವಾದ ತ್ರಿಶೂಲವನ್ನು ಹಿಡಿದು ನಿನ್ನನ್ನು ಸಂಹರಿಸುವ ಇಚ್ಛೆಯಿಂದ ಹಲ್ಲುಕಡಿಯುತ್ತಾ ಹಿಂಬಾಲಿಸಿದನು.

ಅಪಶ್ಯಸ್ತ್ವಂ ತಂ ತದಾ ಘೋರರೂಪಂ
ಸರ್ವೇ ವೈ ತ್ವಾಂ ದದೃಶುರ್ದರ್ಶನೀಯಮ್ ।
ಯಸ್ಮಾದ್ಭೀತಃ ಪ್ರಾಞ್ಜಲಿಸ್ತ್ವಂ ಮಹರ್ಷಿ-
ಮಾಗಚ್ಛೇಥಾಃ ಶರಣಂ ದಾನವಘ್ನ ॥೩೬॥

ದಾನವಾಂತಕನೇ! ಆಗ ನೀನು ಆ ಘೋರರೂಪಿಯಾದ ರಾಕ್ಷಸನನ್ನು ನೋಡಿದೆ. ಆ ಸಮಯದಲ್ಲಿ ದರ್ಶನೀಯನಾದ ನಿನ್ನನ್ನು ಎಲ್ಲರೂ ನೋಡುತ್ತಲೇ ಇದ್ದರು. ಆ ಮದರಾಕ್ಷಸನಿಂದ ಭಯಗೊಳಿಸಲ್ಪಟ್ಟ ನೀನು ಕೈಜೋಡಿಸಿಕೊಂಡು ಚ್ಯವನಮಹರ್ಷಿಗೆ ಶರಣು ಹೋದೆ.

ಕ್ಷಾತ್ರಾದ್ಬಲಾದ್ಬ್ರಹ್ಮಬಲಂ ಗರೀಯೋ
ನ ಬ್ರಹ್ಮತಃ ಕಿಂಚಿದನ್ಯದ್ಗರೀಯಃ ।
ಸೋಽಹಂ ಜಾನನ್ಬ್ರಹ್ಮತೇಜೋ ಯಥಾವ-
ನ್ನ ಸಂವರ್ತಂ ಜೇತುಮಿಚ್ಛಾಮಿ ಶಕ್ರ ॥೩೭॥

ಕ್ಷಾತ್ರಬಲಕ್ಕಿಂತಲೂ ಬ್ರಹ್ಮಬಲವು ಶ್ರೇಷ್ಠತಮವಾದುದು. ಬ್ರಹ್ಮಶಕ್ತಿಗಿಂತಲೂ ಮಿಗಿಲಾದ ಶಕ್ತಿಯೇ ಬೇರೊಂದಿಲ್ಲ. ಬ್ರಹ್ಮತೇಜಸ್ಸಿನ ಶಕ್ತಿಯನ್ನು ಯಥಾವತ್ತಾಗಿ ತಿಳಿದಿರುವ ನಾನು ಸಂವರ್ತನನ್ನು ಜಯಿಸಲು ಬಯಸುವುದಿಲ್ಲ."

೯ನೆಯ ಅಧ್ಯಾಯವು ಮುಗಿಯಿತು.

೧೦ನೆಯ ಅಧ್ಯಾಯ ಅಶ್ವಮೇಧಪರ್ವ (ಮುಂದುವರಿದಿದೆ.)

ಇಂದ್ರನು ಗಂಧರ್ವರಾಜನನ್ನು ಕಳುಹಿಸಿ ಮರುತ್ತನನ್ನು ಭಯಪಡಿಸಿದುದು: ಸಂವರ್ತನು ಮಂತ್ರಬಲದಿಂದ ಇಂದ್ರಸಹಿತರಾದ ದೇವತೆಗಳನ್ನು ಕರೆಯಿಸಿ ಯಜ್ಞವನ್ನು ಪೂರ್ಣಗೊಳಿಸಿದುದು

ಇಂದ್ರನು ಹೇಳುತ್ತಾನೆ:

ಏವಮೇತದ್ಬ್ರಹ್ಮಬಲಂ ಗರೀಯೋ
ನ ಬ್ರಾಹ್ಮಣಾತ್ಕಿಂಚಿದನ್ಯದ್ಗರೀಯಃ ।
ಅವಿಕ್ಷಿತಸ್ಯ ತು ಬಲಂ ನ ಮೃಷ್ಯೇ
ವಜ್ರಮಸ್ಮೈ ಪ್ರಹರಿಷ್ಯಾಮಿ ಘೋರಮ್ ॥೧॥

"ಅಗ್ನಿದೇವನೇ! ನೀನು ಹೇಳಿದುದು ನಿಜ. ಬ್ರಹ್ಮಬಲವೇ ಎಲ್ಲ ಬಲಗಳಿಗಿಂತಲೂ ಮಿಗಿಲಾದುದು. ಬ್ರಾಹ್ಮಣನಿಗಿಂತಲೂ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ. ಆದರೆ ಅವಿಕ್ಷಿತನ ಮಗನಾದ ಮರುತ್ತನ ಬಲವನ್ನು (ಬಲದ ಪ್ರದರ್ಶನವನ್ನು) ನಾನಂತೂ ಸಹಿಸಲಾರೆನು. ಆದುದರಿಂದ ಅವನ ಮೇಲೆ ಘೋರವಾದ ಈ ವಜ್ರಾಯುಧವನ್ನು ಪ್ರಯೋಗಿಸುತ್ತೇನೆ."

ಇಂದ್ರನು ಹೀಗೆ ಹೇಳಿ ತನ್ನ ಬಳಿಯಲ್ಲಿಯೇ ಇದ್ದ ಧೃತರಾಷ್ಟ್ರನೆಂಬ ಗಂಧರ್ವನಿಗೆ ಹೇಳಿದನು:

"ಧೃತರಾಷ್ಟ್ರ! ನನ್ನಿಂದ ಕಳುಹಿಸಲ್ಪಡುವ ನೀನು ಈಗಲೇ

ಮರುತ್ತನ ಯಾಗಮಂಟಪಕ್ಕೆ ಹೋಗು. ಸಂವರ್ತನ ಜೊತೆಯಲ್ಲಿರುವ ಮರುತ್ತನನ್ನು ಕುರಿತು ನಾನು ಹೇಳಲಿರುವ ಈ ಮಾತನ್ನು ಹೇಳು:

ಬೃಹಸ್ಪತಿಂ ತ್ವಮುಪಶಿಕ್ಷಸ್ವ ರಾಜ-
ನ್ವಜ್ರಂ ವಾ ತೇ ಪ್ರಹರಿಷ್ಯಾಮಿ ಘೋರಮ್ ॥೨॥

"ಮಹಾರಾಜ! ಬೃಹಸ್ಪತಿಯನ್ನು ಉಪಾಧ್ಯಾಯನನ್ನಾಗಿ ಮಾಡಿಕೊಂಡು ಯಜ್ಞಕರ್ಮದಲ್ಲಿ ದೀಕ್ಷಿತನಾಗು. ಹಾಗೆ ಮಾಡದಿದ್ದರೆ ನಿನ್ನ ಮೇಲೆ ವಜ್ರಾಯುಧವನ್ನು ಪ್ರಯೋಗಿಸುತ್ತೇನೆ."

ವ್ಯಾಸರು ಹೇಳುತ್ತಾರೆ:

ಧರ್ಮಜ! ಇಂದ್ರನ ಮಾತಿನಂತೆ ಧೃತರಾಷ್ಟ್ರನು ಮರುತ್ತನ ಬಳಿಗೆ ಹೋಗಿ ವಾಸವನು ಹೇಳಿದ್ದ ಮಾತುಗಳನ್ನು ಹೇಳಿದನು:

"ಮರುತ್ತರಾಜನೇ! ನನ್ನನ್ನು ಧೃತರಾಷ್ಟ್ರನೆಂಬ ಹೆಸರಿನ ಗಂಧರ್ವನೆಂದು ತಿಳಿ. ನಿನಗೆ ಒಂದು ವಿಷಯವನ್ನು ತಿಳಿಸುವ ಇಚ್ಛೆಯಿಂದ ನಿನ್ನ ಬಳಿಗೆ ಬಂದಿರುವೆನು. ಲೋಕಾಧಿಪತಿಯಾದ, ಮಹಾತ್ಮನಾದ ಇಂದ್ರನು ಯಾವ ಮಾತನ್ನು ನನ್ನೊಡನೆ ಹೇಳಿಕಳುಹಿಸಿರುವನೋ–ಆ ಮಾತನ್ನೇ ನಿನಗೆ ಹೇಳುತ್ತೇನೆ. ಅವಧರಿಸು:

ಬೃಹಸ್ಪತಿಂ ಯಾಜಕಂ ತ್ವಂ ವೃಣೀಷ್ವ
ವಜ್ರಂ ವಾ ತೇ ಪ್ರಹರಿಷ್ಯಾಮಿ ಘೋರಮ್ ।
ವಚಶ್ಚೇದೇತನ್ನ ಕರಿಷ್ಯಸೇ ಮೇ
ಪ್ರಾಹೈತದೇತಾವದಚಿನ್ತ್ಯಕರ್ಮಾ ॥೩॥

ಸಾಧಾರಣಮನುಷ್ಯರಿಂದ ಯೋಚಿಸಲು ಕೂಡ ಸಾಧ್ಯವಾಗದ ಕಾರ್ಯವನ್ನು ಮಾಡುವ ಇಂದ್ರನು ಹೀಗೆ ಹೇಳಿರುವನು:

'ಮರುತ್ತನೇ! ನೀನು ಬೃಹಸ್ಪತಿಯನ್ನು ಯಾಜಕನನ್ನಾಗಿ ವರಿಸು. ನನ್ನ ಈ ಮಾತನ್ನು ಕೇಳದಿದ್ದರೆ ಘೋರವಾದ ವಜ್ರಾಯುಧವನ್ನು ನಿನ್ನ ಮೇಲೆ ಪ್ರಯೋಗಿಸುತ್ತೇನೆ.'

ಮರುತ್ತನು ಹೇಳುತ್ತಾನೆ:

ತ್ವಂ ಚೈವೈತದ್ವೇತ್ಥ ಪುರನ್ದರಶ್ಚ
ವಿಶ್ವೇದೇವಾ ವಸವಶ್ಚಾಶ್ವಿನೌ ಚ ।
ಮಿತ್ರದ್ರೋಹೇ ನಿಷ್ಕೃತಿರ್ನಾಸ್ತಿ ಲೋಕೇ
ಮಹತ್ಪಾಪಂ ಬ್ರಹ್ಮಹತ್ಯಾಸಮಂ ತತ್ ॥೬॥

"ಧೃತರಾಷ್ಟ್ರನೇ! ಮಿತ್ರನಿಗೆ ದ್ರೋಹವನ್ನೆಸಗಿದ್ದೇ ಆದರೆ ಲೋಕದಲ್ಲಿ ಆ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಮಿತ್ರದ್ರೋಹವೆಂಬುದು ಬ್ರಹ್ಮಹತ್ಯಾಪಾಪಕ್ಕೆ ಸಮಾನವಾದ ಮಹಾಪಾತಕವಾಗಿದೆ. ಈ ವಿಷಯವನ್ನು ನೀನೂ ತಿಳಿದಿರುವೆ. ಪುರಂದರ, ವಿಶ್ವೇದೇವತೆಗಳು, ವಸುಗಳು ಮತ್ತು ಅಶ್ವಿನೀದೇವತೆಗಳು–ಇವರೆಲ್ಲರಿಗೂ ಇದು ತಿಳಿದಿದೆ.

ಬೃಹಸ್ಪತಿರ್ಯಾಜಯತಾಂ ಮಹೇನ್ದ್ರಂ
ದೇವಶ್ರೇಷ್ಠಂ ವಜ್ರಭೃತಾಂ ವರಿಷ್ಠಮ್ ।
ಸಂವರ್ತೋ ಮಾಂ ಯಾಜಯಿತಾದ್ಯ ರಾಜ-
ನ್ನ ತೇ ವಾಕ್ಯಂ ತಸ್ಯ ವಾ ರೋಚಯಾಮಿ ॥೭॥

ದೇವಶ್ರೇಷ್ಠನಾದ, ವಜ್ರಧಾರಿಗಳಲ್ಲಿ ವರಿಷ್ಠನಾದ ಮಹೇಂದ್ರನಿಗೆ ಬೃಹಸ್ಪತಿಯು ಯಜ್ಞವನ್ನು ಮಾಡಿಸಲಿ. ಈಗ ಸಂವರ್ತನು ನನಗೆ ಯಜ್ಞವನ್ನು ಮಾಡಿಸುತ್ತಾನೆ. ಇದು ಹೊರತಾಗಿ ನಿನ್ನ ಮಾತಾಗಲೀ ದೇವೇಂದ್ರನ ಮಾತಾಗಲೀ ನನಗೆ ರುಚಿಸುವುದಿಲ್ಲ."

ಗಂಧರ್ವನು ಹೇಳುತ್ತಾನೆ:

ಘೋರೋ ನಾದಃ ಶ್ರೂಯತಾಂ ವಾಸವಸ್ಯ
ನಭಸ್ತಲೇ ಗರ್ಜತೋ ರಾಜಸಿಂಹ ।
ವ್ಯಕ್ತಂ ವಜ್ರಂ ಮೋಕ್ಷ್ಯತೇ ತೇ ಮಹೇನ್ದ್ರಃ
ಕ್ಷೇಮಂ ರಾಜಂಶ್ಚಿನ್ತ್ಯತಾಮೇಷ ಕಾಲಃ ॥೮॥

"ರಾಜಸಿಂಹನೇ! ಆಕಾಶದಲ್ಲಿ ಗರ್ಜಿಸುತ್ತಿರುವ ವಾಸವನ ಘೋರನಿನಾದವನ್ನು ಕೇಳು. ಮಹೇಂದ್ರನು ನಿನ್ನ ಮೇಲೆ ವಜ್ರಾಯುಧವನ್ನು

ಪ್ರಹರಿಸುವುದು ವ್ಯಕ್ತವಾಗಿ ಕಾಣುತ್ತಿದೆ. ನಿನ್ನ ಕ್ಷೇಮವು ಹೇಗಾಗುವುದೆಂಬು ದನ್ನು ಯೋಚಿಸು. ಯೋಚಿಸಿ ಕೆಲಸಮಾಡಲು ಇದು ಸಕಾಲವಾಗಿದೆ."

ವ್ಯಾಸರು ಹೇಳುತ್ತಾರೆ:

"ಯುಧಿಷ್ಠಿರ! ಧೃತರಾಷ್ಟ್ರನು ಹೀಗೆ ಹೇಳುತ್ತಿದ್ದಂತೆಯೇ ಮರುತ್ತನು ವಾಸವನ ಗರ್ಜನೆಯ ಶಬ್ದವನ್ನು ಕೇಳಿ ತಪೋನಿಷ್ಠನಾದ, ಧರ್ಮವಿದರಲ್ಲಿ ಶ್ರೇಷ್ಠನಾದ ಸಂವರ್ತನಿಗೆ ಆ ಸಮಯದಲ್ಲಿ ಮಾಡಬೇಕಾದ ಕಾರ್ಯವನ್ನು ವಿಜ್ಞಾಪಿಸಿಕೊಂಡನು."

ಮರುತ್ತನು ಹೇಳುತ್ತಾನೆ:

ಇಮಮಾತ್ಮಾನಂ ಪ್ಲವಮಾನಮಾರಾ-
ದಧ್ವಾ ದೂರಂ ತೇನ ನ ದೃಶ್ಯತೇಽದ್ಯ ।
ಪ್ರಪದ್ಯೇಽಹಂ ಶರ್ಮ ವಿಪ್ರೇನ್ದ್ರ ತ್ವತ್ತಃ
ಪ್ರಯಚ್ಛ ತಸ್ಮಾದಭಯಂ ವಿಪ್ರಮುಖ್ಯ ॥೧೦॥
ಅಯಮಾಯಾತಿ ವೈ ವಜ್ರೀ ದಿಶೋ ವಿದ್ಯೋತಯನ್ದಶ ।
ಅಮಾನುಷೇಣ ಘೋರೇಣ ಸದಸ್ಯಾಸ್ತ್ರಾಸಿತಾ ಹಿ ನಃ ॥೧೧॥

"ವಿಪ್ರಶ್ರೇಷ್ಠನೇ! ದೇವರಾಜನೀಗ ಮತ್ತೊಂದು ವಿಧದಲ್ಲಿ ನನ್ನನ್ನು ಭಯಪಡಿಸುತ್ತಿದ್ದಾನೆ. ಇಂದ್ರನು ಆಕಾಶದಲ್ಲಿ ಅತಿದೂರದಲ್ಲಿ ತೇಲಿ ಬರುತ್ತಿದ್ದಾನೆ. ಆದುದರಿಂದ ಈಗ ಅವನು ನಮಗೆ ಕಾಣಿಸುತ್ತಿಲ್ಲ. ವಿಪ್ರೇಂದ್ರನೇ! ನಾನು ನಿನ್ನಿಂದ ಸುಖವನ್ನು ಪ್ರಾರ್ಥಿಸುತ್ತಿದ್ದೇನೆ. ಆದುದರಿಂದ, ವಿಪ್ರಶ್ರೇಷ್ಠನೇ! ನನಗೆ ಅಭಯಪ್ರದಾನಮಾಡು. ಹತ್ತು ದಿಕ್ಕುಗಳನ್ನೂ ಪ್ರಕಾಶಗೊಳಿಸುತ್ತಾ ವಾಸವನು ವಜ್ರಾಯುಧಧಾರಿಯಾಗಿ ಬರುತ್ತಿದ್ದಾನೆ. ಅವನ ಅಮಾನುಷವಾದ ಮತ್ತು ಘೋರವಾದ ನಿನಾದದಿಂದ ನಮ್ಮ ಯಜ್ಞದ ಸದಸ್ಯರೆಲ್ಲರೂ ಭಯಗೊಂಡಿದ್ದಾರೆ."

ಸಂವರ್ತನು ಹೇಳುತ್ತಾನೆ:

ಭಯಂ ಶಕ್ರಾದ್ವ್ಯೇತು ತೇ ರಾಜಸಿಂಹ
ಪ್ರಣೋತ್ಸ್ಯೇಽಹಂ ಭಯಮೇತತ್ಸುಘೋರಮ್।

ಸಂಸ್ತಮ್ಭಿನ್ಯಾ ವಿದ್ಯಯಾ ಕ್ಷಿಪ್ರಮೇವ
ಮಾ ಭೈಸ್ತ್ವಮಸ್ಯಾಭಿಭವಾತ್ಪ್ರತೀತಃ ॥೧೨॥

“ರಾಜಸಿಂಹನೇ! ಇಂದ್ರನಿಂದ ಉಂಟಾಗಿರುವ ನಿನ್ನ ಭಯವು ದೂರವಾಗಲಿ. ಸಂಸ್ತಂಭಿನೀ ವಿದ್ಯೆಯಿಂದ ಈ ಕ್ಷಣದಲ್ಲಿಯೇ ಸುಘೋರವಾದ ಈ ಭಯವನ್ನು ನಿವಾರಿಸುತ್ತೇನೆ. ನನ್ನ ಮೇಲೆ ವಿಶ್ವಾಸವಿಡು. ಇಂದ್ರನಿಂದ ಪರಾಭವಹೊಂದುವೆನೆಂದು ಭಯಪಡಬೇಡ.



ಅಹಂ ಸಂಸ್ತಮ್ಭಯಿಷ್ಯಾಮಿ ಮಾ ಭೈಸ್ತ್ವಂ ಶಕ್ರತೋ ನೃಪ ।
ಸರ್ವೇಷಾಮೇವ ದೇವಾನಾಂ ಕ್ಷಯಿತಾನ್ಯಾಯುಧಾನಿ ಮೇ ॥೧೩॥

ದಿಶೋ ವಜ್ರಂ ವ್ರಜತಾಂ ವಾಯುರೇತು
ವರ್ಷಂ ಭೂತ್ವಾ ವರ್ಷತಾಂ ಕಾನನೇಷು ।
ಆಪಃ ಪ್ಲವನ್ತ್ಯನ್ತರಿಕ್ಷೇ ವೃಥಾ ಚ
ಸೌದಾಮಿನೀ ದೃಶ್ಯತೇ ಮಾಪಿ ಭೈಸ್ತ್ವಮ್ ॥೧೪॥

ನರೇಶ್ವರನೇ! ನಾನು ಇಂದ್ರನನ್ನು ಸ್ತಂಭನಗೊಳಿಸುತ್ತೇನೆ. ಆದುದರಿಂದ ಶಕ್ರನಿಗೆ ನೀನು ಭಯಪಡಬೇಕಾಗಿಲ್ಲ. ನಾನು ಎಲ್ಲ ದೇವತೆಗಳ ಆಯುಧಗಳನ್ನೂ ಕ್ಷೀಣಗೊಳಿಸಿದ್ದೇನೆ. (ಶಕ್ತಿರಹಿತವನ್ನಾಗಿ ಮಾಡಿದ್ದೇನೆ.) ವಜ್ರಾಯುಧವು ಎಲ್ಲ ದಿಕ್ಕುಗಳಿಗೂ ಹೋಗಲಿ. ಗಾಳಿಯು ಬೀಸಲಿ. ಇಂದ್ರನೇ ವೃಷ್ಟಿರೂಪನಾಗಿ ಅರಣ್ಯಗಳಲ್ಲಿ ನಿರಂತರವಾಗಿ ಮಳೆಯನ್ನು ಸುರಿಸಲಿ. ಅಂತರಿಕ್ಷದಲ್ಲಿ ವ್ಯರ್ಥವಾಗಿ ನೀರು ತುಂಬಿಕೊಳ್ಳಲಿ. ಇವುಗಳ ಜೊತೆಗೆ ಮಿಂಚೂ ಕಾಣಿಸಿಕೊಳ್ಳುತ್ತದೆ. ಆದರೂ ನೀನು ಭಯಪಡಬೇಡ.

ವಹ್ನಿರ್ದೇವಸ್ತ್ರಾತು ವಾ ಸರ್ವತಸ್ತೇ
ಕಾಮಾನ್ಸರ್ವಾನ್ವರ್ಷತು ವಾಸವೋ ವಾ ।
ವಜ್ರಂ ತಥಾ ಸ್ಥಾಪಯತಾಂ ವಧಾಯ
ಮಹಾಘೋರಂ ಪ್ಲವಮಾನಂ ಜಲೌಘೈಃ ॥೧೫॥

ನಿನ್ನನ್ನು ಎಲ್ಲ ಕಡೆಗಳಿಂದಲೂ ಅಗ್ನಿಯೇ ರಕ್ಷಿಸಲಿ. ನಿನ್ನ ಸರ್ವಕಾಮನೆಗಳನ್ನೂ ಇಂದ್ರನಾದರೂ ಮಳೆಯಂತೆ ಸುರಿಸಲಿ. ಜಲರಾಶಿಯೊಡನೆ ತೇಲಿಕೊಂಡುಹೋಗುತ್ತಿರುವ, ನಿನ್ನ ವಧೆಗಾಗಿ ಉದ್ಯತವಾಗಿರುವ, ಮಹಾಘೋರವಾದ ವಜ್ರಾಯುಧವನ್ನು ದೇವೇಂದ್ರನು ತನ್ನ ಕೈಯಲ್ಲಿಯೇ ಸ್ಥಿರವಾಗಿ ಇಟ್ಟುಕೊಳ್ಳಲಿ."

ಮರುತ್ತನು ಹೇಳುತ್ತಾನೆ:

ಘೋರಃ ಶಬ್ದಃ ಶ್ರೂಯತೇ ವೈ ಮಹಾಸ್ವನೋ
ವಜ್ರಸ್ಯೈಷ ಸಹಿತೋ ಮಾರುತೇನ ।
ಆತ್ಮಾ ಹಿ ಮೇ ಪ್ರವ್ಯಥತೇ ಮುಹುರ್ಮುಹು-
ರ್ನ ಮೇ ಸ್ವಾಸ್ಥ್ಯಂ ಜಾಯತೇ ಚಾದ್ಯ ವಿಪ್ರ ॥೧೬॥

“ವಿಪ್ರಶ್ರೇಷ್ಠನೇ! ಬಿರುಗಾಳಿಯೊಡನೆ ವಜ್ರಾಯುಧದ ಘೋರವಾದ ಮತ್ತು ಮಹತ್ತರವಾದ ಶಬ್ದವು ಕೇಳಿಬರುತ್ತಿದೆ. ಈ ಶಬ್ದವನ್ನು ಕೇಳಿ ನನ್ನ ಹೃದಯವು ಬಾರಿ-ಬಾರಿಗೂ ಹೆಚ್ಚು-ಹೆಚ್ಚು ವ್ಯಥೆಗೊಳ್ಳುತ್ತಿದೆ. ಈಗ ನನ್ನ ಮನಸ್ಸಿಗೆ ಸ್ವಲ್ಪವಾದರೂ ಶಾಂತಿಯೇ ಇಲ್ಲವಾಗಿದೆ.”

ಸಂವರ್ತನು ಹೇಳುತ್ತಾನೆ:

ವಜ್ರಾದುಗ್ರಾದ್ವ್ಯೇತು ಭಯಂ ತವಾದ್ಯ
ವಾತೋ ಭೂತ್ವಾ ಹನ್ಮಿ ನರೇನ್ದ್ರ ವಜ್ರಮ್ ।
ಭಯಂ ತ್ಯಕ್ತ್ವಾ ವರಮನ್ಯಂ ವೃಣೀಷ್ವ
ಕಂ ತೇ ಕಾಮಂ ಮನಸಾ ಸಾಧಯಾಮಿ ॥೧೭॥

“ರಾಜೇಂದ್ರನೇ! ಭಯಂಕರವಾದ ವಜ್ರಾಯುಧದಿಂದ ಉಂಟಾಗಿರುವ ನಿನ್ನ ಭಯವು ಈಗಲೇ ಹೊರಟುಹೋಗಲಿ. ನಾನು ಗಾಳಿಯರೂಪನಾಗಿ ಈಗಲೇ ಆ ವಜ್ರಾಯುಧವನ್ನು ವಿನಾಶಗೊಳಿಸುತ್ತೇನೆ. ನೀನು ಭಯವನ್ನು ಸಂಪೂರ್ಣವಾಗಿ ತ್ಯಜಿಸಿ ಬೇರೆ ಯಾವುದಾದರೂ ವರವನ್ನು ಕೇಳು. ನಿನ್ನ ಯಾವ ಇಚ್ಛೆಯನ್ನು ನನ್ನ ಮನಸ್ಸಂಕಲ್ಪದಿಂದಲೇ ಸಾಧಿಸಿಕೊಡಲಿ?–ಎಂಬುದನ್ನು ಹೇಳು.”


ಮರುತ್ತನು ಹೇಳುತ್ತಾನೆ:

ಇನ್ದ್ರಃ ಸಾಕ್ಷಾತ್ಸಹಸಾಭ್ಯೇತು ವಿಪ್ರ
ಹವಿರ್ಯಜ್ಞೇ ಪ್ರತಿಗೃಹ್ಣಾತು ಚೈವ ।
ಸ್ವಂ ಸ್ವಂ ಧಿಷ್ಣ್ಯಂ ಚೈವ ಜುಷನ್ತು ದೇವಾ
ಹುತಂ ಸೋಮಂ ಪ್ರತಿಗೃಹ್ಣನ್ತು ಚೈವ ॥೧೮॥

“ಬ್ರಹ್ಮರ್ಷಿಯೇ! ಇಂದ್ರನೇ ಸಾಕ್ಷಾತ್ತಾಗಿ ಒಡನೆಯೇ ಇಲ್ಲಿಗೆ ಆಗಮಿಸಿ ನಾನು ಮಾಡುತ್ತಿರುವ ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸಲಿ. ದೇವತೆಗಳೆಲ್ಲರೂ ಅವರವರ ಸ್ಥಾನಗಳಲ್ಲಿ ಕುಳಿತುಕೊಳ್ಳಲಿ. ಆಹುತಿರೂಪದಲ್ಲಿ ಕೊಡಲ್ಪಡುವ ಸೋಮರಸವನ್ನು ಪಾನಮಾಡಲಿ.”

ಮರುತ್ತನು ಹೀಗೆ ಹೇಳಿದನಂತರ ಸಂವರ್ತನು ತನ್ನ ಮಂತ್ರಬಲದಿಂದ ಸಕಲದೇವತೆಗಳನ್ನೂ ಆವಾಹಿಸುತ್ತಾ ಹೇಳಿದನು:

ಅಯಮಿನ್ದ್ರೋ ಹರಿಭಿರಾಯಾತಿ ರಾಜ-
ನ್ದೇವೈಃ ಸರ್ವೈಸ್ತ್ವರಿತೈಃ ಸ್ತೂಯಮಾನಃ ।
ಮನ್ತ್ರಾಹೂತೋ ಯಜ್ಞಮಿಮಂ ಮಯಾದ್ಯ
ಪಶ್ಯಸ್ವೈನಂ ಮನ್ತ್ರವಿಸ್ರಸ್ತಕಾಯಮ್ ॥೧೯॥



“ಮಹಾರಾಜ! ಇಂದ್ರನು ಸಕಲದೇವತೆಗಳಿಂದಲೂ ಸ್ತುತಿಸಲ್ಪಡುತ್ತಾ ಶೀಘ್ರಗಾಮಿಗಳಾದ ಕುದುರೆಗಳಿಂದ ಯುಕ್ತವಾದ ರಥದಲ್ಲಿ ಕುಳಿತು ಬರುತ್ತಿದ್ದಾನೆ. ನನ್ನಿಂದ ಮಂತ್ರಗಳ ಮೂಲಕವಾಗಿ ಆಹ್ವಾನಿತನಾದ

ಇಂದ್ರನು ಈಗಲೇ ಈ ಯಜ್ಞವನ್ನು ಸಮೀಪಿಸಲಿದ್ದಾನೆ. ಮಂತ್ರದಿಂದ ಭಯಗೊಂಡಿರುವ ಶರೀರದಿಂದ ಕೂಡಿರುವ ಇಂದ್ರನನ್ನು ನೋಡು."

ವ್ಯಾಸರು ಹೇಳುತ್ತಾರೆ:

"ಧರ್ಮಜ! ಬಳಿಕ ದೇವತೆಗಳಿಂದ ಯುಕ್ತನಾದ ದೇವರಾಜನು ತನ್ನ ರಥಕ್ಕೆ ಹೊಂಬಣ್ಣದ ಶ್ರೇಷ್ಠವಾದ ಕುದುರೆಗಳನ್ನು ಹೂಡಿಕೊಂಡು ಅವಿಕ್ಷಿತನ ಮಗನಾದ, ಅಪ್ರಮೇಯನಾದ ಮರುತ್ತರಾಜನ ಯಜ್ಞಕ್ಕೆ ಸಂಬಂಧಿಸಿದ ಸೋಮರಸವನ್ನು ಪಾನಮಾಡಲು ಯಜ್ಞಶಾಲೆಗೆ ಆಗಮಿಸಿದನು. ಹಾಗೆ ದೇವತೆಗಳ ಸಮೂಹಗಳಿಂದ ಯುಕ್ತನಾಗಿ ಆಗಮಿಸಿದ ಇಂದ್ರನನ್ನು ಪುರೋಹಿತನಿಂದ ಯುಕ್ತನಾದ ಮರುತ್ತನು ಮುಂದೆ ಹೋಗಿ ಸ್ವಾಗತಿಸಿದನು. ಅನಂತರ ಮರುತ್ತನು ಅತ್ಯಂತಪ್ರಸನ್ನತೆಯಿಂದ ಶಾಸ್ತ್ರಾನುಸಾರವಾಗಿ ವಿಧಿವತ್ತಾಗಿ ದೇವರಾಜನಿಗೆ ಶ್ರೇಷ್ಠವಾದ ಪೂಜೆಯನ್ನು ಸಲ್ಲಿಸಿದನು. ಬಳಿಕ ಸಂವರ್ತನು ಇಂದ್ರನನ್ನು ಕುರಿತು ಹೇಳಿದನು:

ಸ್ವಾಗತಂ ತೇ ಪುರುಹೂತೇಹ ವಿದ್ವ-
ನ್ಯಜ್ಞೋಽಪ್ಯಯಂ ಸಂನಿಹಿತೇ ತ್ವಯೀನ್ದ್ರ ।
ಶೋಶುಭ್ಯತೇ ಬಲವೃತ್ರಘ್ನ ಭೂಯಃ
ಪಿಬಸ್ವ ಸೋಮಂ ಸುತಮುದ್ಯತಂ ಮಯಾ ॥೨೨॥

"ಪುರುಹೂತನೇ! ವಿದ್ವಾಂಸನೇ! ನಿನಗೆ ಸ್ವಾಗತವು. ಇಂದ್ರನೇ! ನಿನ್ನ ಸಾನ್ನಿಧ್ಯದಿಂದಾಗಿ ಈ ಯಜ್ಞವು ಬಹಳವಾಗಿ ಶೋಭಿಸುತ್ತಿದೆ. ಬಲವೃತ್ರಘ್ನನೇ! ನನ್ನಿಂದ ಸಂಸ್ಕರಿಸಲ್ಪಟ್ಟಿರುವ ಸೋಮರಸವು ಸಿದ್ಧವಾಗಿದೆ. ಪಾನಮಾಡು."

ಮರುತ್ತನು ಹೇಳುತ್ತಾನೆ:

ಶಿವೇನ ಮಾಂ ಪಶ್ಯ ನಮಶ್ಚ ತೇಽಸ್ತು
ಪ್ರಾಪ್ತೋ ಯಜ್ಞಃ ಸಫಲಂ ಜೀವಿತಂ ಮೇ ।
ಅಯಂ ಯಜ್ಞಂ ಕುರುತೇ ಮೇ ಸುರೇನ್ದ್ರ
ಬೃಹಸ್ಪತೇರವರಜೋ ವಿಪ್ರಮುಖ್ಯಃ ॥೨೩॥

"ಸುರೇಂದ್ರನೇ! ನಿನಗೆ ನಮಸ್ಕಾರವಿರಲಿ. ಕಲ್ಯಾಣಮಯವಾದ

ದೃಷ್ಟಿಯಿಂದ ನನ್ನನ್ನು ನೋಡು. ನೀನು ಯಜ್ಞಭೂಮಿಗೆ ಆಗಮಿಸಿರುವುದರಿಂದಲೇ ನನ್ನ ಜೀವಿತವೂ ಮತ್ತು ಯಜ್ಞವೂ ಸಫಲವಾದುವು. ಸುರೇಂದ್ರನೇ! ಈ ನನ್ನ ಯಜ್ಞವನ್ನು ಬೃಹಸ್ಪತಿಯ ತಮ್ಮನಾದ ವಿಪ್ರಶ್ರೇಷ್ಠನಾದ ಸಂವರ್ತನು ಮಾಡಿಸುತ್ತಿದ್ದಾನೆ.”

ಇಂದ್ರನು ಹೇಳುತ್ತಾನೆ:

ಜಾನಾಮಿ ತೇ ಗುರುಮೇನಂ ತಪೋಧನಂ
ಬೃಹಸ್ಪತೇರನುಜಂ ತಿಗ್ಮತೇಜಸಮ್ ।
ಯಸ್ಯಾಹ್ವಾನಾದಾಗತೋಽಹಂ ನರೇನ್ದ್ರ
ಪ್ರೀತಿರ್ಮೇಽದ್ಯ ತ್ವಯಿ ಮನ್ಯುಃ ಪ್ರಣಷ್ಟಃ ॥೨೪॥

“ನರೇಂದ್ರನೇ! ಬೃಹಸ್ಪತಿಯ ತಮ್ಮನಾದ, ತೀಕ್ಷ್ಣವಾದ ತೇಜಸ್ಸಿನಿಂದ ಕೂಡಿರುವ, ತಪೋಧನನಾದ ನಿನ್ನ ಗುರುವಾದ ಈ ಸಂವರ್ತನನ್ನು ನಾನು ಬಲ್ಲೆನು. ಇವನ ಮಂತ್ರಮೂಲವಾದ ಆಹ್ವಾನದಿಂದಲೇ ನಾನು ಇಲ್ಲಿಗೆ ಆಗಮಿಸಿರುವೆನು. ನನ್ನ ಕೋಪವು ನಷ್ಟವಾಗಿ ಹೋಗಿದೆ. ನಿನ್ನ ವಿಷಯದಲ್ಲೀಗ ನನಗೆ ಪ್ರೀತಿಯುಂಟಾಗಿದೆ.”

ಸಂವರ್ತನು ಹೇಳುತ್ತಾನೆ:

ಯದಿ ಪ್ರೀತಸ್ತ್ವಮಸಿ ವೈ ದೇವರಾಜ
ತಸ್ಮಾತ್ಸ್ವಯಂ ಶಾಧಿ ಯಜ್ಞೇ ವಿಧಾನಮ್ ।
ಸ್ವಯಂ ಸರ್ವಾನ್ಕುರು ಭಾಗಾನ್ಸುರೇನ್ದ್ರ
ಜಾನಾತ್ವಯಂ ಸರ್ವಲೋಕಶ್ಚ ದೇವ ॥೨೫॥

“ದೇವರಾಜನೇ! ನೀನು ನಿಶ್ಚಯವಾಗಿಯೂ ನಮ್ಮ ವಿಷಯದಲ್ಲಿ ಪ್ರಸನ್ನನಾಗಿರುವುದಾದರೆ ಯಜ್ಞದಲ್ಲಿನ ವಿಧಾನಗಳನ್ನು ನೀನೇ ಅನುಶಾಸನಮಾಡು. ಸುರೇಂದ್ರನೇ! ದೇವತೆಗಳ ಎಲ್ಲ ಹವಿರ್ಭಾಗಗಳನ್ನೂ ನೀನೇ ನಿಶ್ಚಯಿಸು. ಇಲ್ಲಿ ಆಗಮಿಸಿರುವ ಎಲ್ಲರಿಗೂ ನಿನ್ನ ಪ್ರಸನ್ನತೆಯ ಅನುಭವವು ಪ್ರತ್ಯಕ್ಷವಾಗಿಯೇ ಆಗಲಿ.”

ವ್ಯಾಸರು ಹೇಳುತ್ತಾರೆ:

ಯುಧಿಷ್ಠಿರ! ಅಂಗಿರಸನ ಮಗನಾದ ಸಂವರ್ತನಿಂದ ಹೀಗೆ ಪ್ರಾರ್ಥಿತನಾದ ಶಕ್ರನು ತಾನೇ ದೇವತೆಗಳಿಗೆ 'ಚಿತ್ರ-ವಿಚಿತ್ರವಾಗಿರುವ, ಸಕಲವಿಧವಾದ ಸಾಮಗ್ರಿಗಳಿಂದಲೂ ಸಮೃದ್ಧವಾಗಿರುವ, ಸಾವಿರಾರು ಸಭಾಭವನಗಳನ್ನು ನಿರ್ಮಿಸಿರಿ'–ಎಂದು ಆಜ್ಞಾಪಿಸಿದನು.

ಕ್ಲೃಪ್ತಾಃ ಸ್ಥೂಣಾಃ ಕುರುತಾರೋಹಣಾನಿ
ಗನ್ಧರ್ವಾಣಾಮಪ್ಸರಸಾಂ ಚ ಶೀಘ್ರಮ್ ।
ಯತ್ರ ನೃತ್ಯೇರನ್ನಪ್ಸರಸಃ ಸಮಸ್ತಾಃ
ಸ್ವರ್ಗೋಪಮಃ ಕ್ರಿಯತಾಂ ಯಜ್ಞವಾಟಃ ॥೨೭॥

"ನೀವೆಲ್ಲರೂ ಸೇರಿ ಗಂಧರ್ವರಿಗೂ ಮತ್ತು ಅಪ್ಸರೆಯರಿಗೂ ಒಂದು ರಂಗಮಂಟಪವನ್ನು ಶೀಘ್ರವಾಗಿ ನಿರ್ಮಿಸಬೇಕು. ಅದರಲ್ಲಿ ನಿರ್ದಿಷ್ಟ ಸಂಖ್ಯೆಯ ಕಂಬಗಳಿರಬೇಕು. ಹತ್ತಿಹೋಗಲು ಸುಂದರವಾದ ಮೆಟ್ಟಲುಗಳಿರಬೇಕು. ಆ ರಂಗಮಂಟಪದಲ್ಲಿ ಎಲ್ಲ ಅಪ್ಸರೆಯರೂ ನೃತ್ಯ ಮಾಡುತ್ತಿರಬೇಕು. ಯಜ್ಞಮಂಟಪವನ್ನು ಸ್ವರ್ಗದೋಪಾದಿಯಲ್ಲಿ ನಿರ್ಮಿಸಬೇಕು."

ದೇವರಾಜನು ಹೀಗೆ ಹೇಳಿದೊಡನೆಯೇ ಎಲ್ಲ ದೇವತೆಗಳೂ ಸಂತುಷ್ಟರಾಗಿ ಶಕ್ರನ ಆಜ್ಞೆಯಂತೆ ಎಲ್ಲವನ್ನೂ ಮಾಡಿದರು. ಅನಂತರ ಸುಪ್ರೀತನಾದ ಇಂದ್ರನು ಮರುತ್ತರಾಜನನ್ನು ಯಥೋಚಿತವಾಗಿ ಸಂಪೂಜಿಸುತ್ತಾ ಹೇಳಿದನು:

ಏಷ ತ್ವಯಾಹಮಿಹ ರಾಜನ್ಸಮೇತ್ಯ
ಯೇ ಚಾಪ್ಯನ್ಯೇ ತವ ಪೂರ್ವೇ ನರೇನ್ದ್ರ।
ಸರ್ವಾಶ್ಚಾನ್ಯಾ ದೇವತಾಃ ಪ್ರೀಯಮಾಣಾ
ಹವಿಸ್ತುಭ್ಯಂ ಪ್ರತಿಗೃಹ್ಣನ್ತು ರಾಜನ್ ॥೨೮॥

"ಮರುತ್ತರಾಜನೇ! ನಾನು ಇಲ್ಲಿಗೆ ಬಂದು ನಿನ್ನೊಡನೆಯೇ ಇರುವೆನು. ನಿನ್ನ ಪೂರ್ವಜರು ಯಾರಿರುವರೋ ಅವರೆಲ್ಲರೂ ಇಲ್ಲಿಗೆ ಬಂದಿರುವರು. ಇತರ ದೇವತೆಗಳೂ ಬಂದಿರುವರು. ಇವರೆಲ್ಲರೂ ಸುಪ್ರೀತರಾಗಿ ನೀನು ಅರ್ಪಿಸಲಿರುವ ಹವಿಸ್ಸನ್ನು ಸ್ವೀಕರಿಸಲಿ.

ಆಗ್ನೇಯಂ ವೈ ಲೋಹಿತಮಾಲಭನ್ತಾಂ
ವೈಶ್ವದೇವಂ ಬಹುರೂಪಂ ಹಿ ರಾಜನ್ ।
ನೀಲಂ ಚೋಕ್ಷಾಣಂ ಮೇಧ್ಯಮಪ್ಯಾಲಭನ್ತಾಂ
ಚಲಚ್ಛಿಶ್ನಂ ಸಮ್ಪ್ರದಿಷ್ಟಂ ದ್ವಿಜಾಗ್ರ್ಯಾಃ ॥೩೦॥

ಮರುತ್ತನೇ! ಹವಿಸ್ಸಿಗಾಗಿ ಅಗ್ನಿದೇವತಾಕವಾದ ಲೋಹಿತ ಜಾತಿಯ ಜಿಂಕೆಯನ್ನು ಆಲಂಭಿಸಲಿ. ವಿಶ್ವೇದೇವತೆಗಳ ಹವಿಸ್ಸಿಗಾಗಿ ಬಹುರೂಪವಿರುವ ಜಿಂಕೆಯನ್ನು ಆಲಂಭಿಸಲಿ. ಇಲ್ಲಿರುವ ಬ್ರಾಹ್ಮಣಶ್ರೇಷ್ಠರು ಯಾಗಕ್ಕೆ ಅರ್ಹವಾದ ಚಂಚಲವಾದ ಶಿಶ್ನವುಳ್ಳ ನೀಲಿಯ ಬಣ್ಣದ ಎತ್ತನ್ನು ನನ್ನ ನಿರ್ದೇಶನದಂತೆ ಆಲಂಭಿಸಲಿ."

ವ್ಯಾಸರು ಹೇಳುತ್ತಾರೆ:

"ಯುಧಿಷ್ಠಿರ! ಬಳಿಕ ಮರುತ್ತರಾಜನ ಯಜ್ಞಕಾರ್ಯವು ಸಾಂಗವಾಗಿ ಮುಂದುವರಿಯಿತು. ದೇವತೆಗಳು ತಾವಾಗಿಯೇ ಹವಿಸ್ಸುಗಳನ್ನು ತೆಗೆದುಕೊಂಡರು. ಹರಿದ್ವರ್ಣದ ಕುದುರೆಗಳಿಂದ ಕೂಡಿ ದೇವರಾಜನಾದ ಇಂದ್ರನು ಬ್ರಾಹ್ಮಣರಿಂದ ಪೂಜಿಸಲ್ಪಟ್ಟವನಾಗಿ ಆ ಯಜ್ಞದ ಸದಸ್ಯ ನಾದನು. ಅನಂತರ ಎರಡನೆಯ ಯಜ್ಞೇಶ್ವರನಂತೆಯೇ ಉಜ್ವಲವಾದ ತೇಜಸ್ಸಿನಿಂದ ವಿರಾಜಿಸುತ್ತಿದ್ದ ಮಹಾತ್ಮನಾದ ಸಂವರ್ತನು, ಯಜ್ಞಮಂಟಪವನ್ನು ಪ್ರವೇಶಿಸಿ ಅತ್ಯಂತಪ್ರಸನ್ನನಾಗಿ ದೇವತೆಗಳ ಸಮೂಹಗಳನ್ನು ಗಟ್ಟಿಯಾದ ಧ್ವನಿಯಿಂದ ಆಹ್ವಾನಿಸುತ್ತಾ ಮಂತ್ರೋಚ್ಚಾರಣೆಯ ಮೂಲಕವಾಗಿ ಹವಿಸ್ಸನ್ನು ಅಗ್ನಿಯಲ್ಲಿ ಹೋಮಮಾಡಿದನು. ಬಳಿಕ ಇಂದ್ರನೂ ಮತ್ತು ಸೋಮಪಾನಕ್ಕೆ ಅಧಿಕಾರಿಗಳಾದ ಇತರ ದೇವತೆಗಳೂ ಮಂತ್ರಪೂತವಾದ ಶ್ರೇಷ್ಠವಾದ ಸೋಮರಸವನ್ನು ಪಾನಮಾಡಿದರು. ಸಂತೃಪ್ತರಾದ ದೇವತೆಗಳೆಲ್ಲರೂ ಪ್ರಸನ್ನಚಿತ್ತರಾಗಿ ಮರುತ್ತರಾಜನ ಅನುಮತಿಯನ್ನು ಪಡೆದು ತಮ್ಮ-ತಮ್ಮ ಸ್ಥಾನಗಳಿಗೆ ಪ್ರಯಾಣಮಾಡಿದರು. ಅನಂತರ ಅಂತಹ ಅದ್ಭುತವಾದ ಯಜ್ಞವನ್ನು ಮಾಡಿ ಬಹಳವಾಗಿ ಸಂತೋಷಗೊಂಡ ಮರುತ್ತರಾಜನು ಐಶ್ವರ್ಯವನ್ನು (ಸುವರ್ಣರಾಶಿಗಳನ್ನು) ಬ್ರಾಹ್ಮಣರಿಗೆ ದಾನಮಾಡಿದನು. ಆ ಸಮಯದಲ್ಲಿ ಶತ್ರುಹಂತಕನಾದ ಮರುತ್ತರಾಜನು ಧನಾಧ್ಯಕ್ಷನಾದ ಕುಬೇರನಂತೆಯೇ ಕಂಗೊಳಿಸಿದನು. ಅಮಿತವಾದ ಉತ್ಸಾಹದೊಡನೆ

ಬ್ರಾಹ್ಮಣರಿಗೆ ಅನೇಕ ಸುವರ್ಣರಾಶಿಗಳನ್ನೂ ದಾನಮಾಡಿದನಂತರ ಮರುತ್ತನು ದಾನಮಾಡಿ ಉಳಿದಿದ್ದ ವಿಧ-ವಿಧವಾದ ಐಶ್ವರ್ಯವೆಲ್ಲವನ್ನೂ ಒಂದೆಡೆಯಲ್ಲಿ ಸೇರಿಸಿಟ್ಟು ಅದನ್ನು ಭದ್ರವಾಗಿಡಲು ಒಂದು ಭಾಂಡಾಗಾರವನ್ನು ಮಾಡಿಸಿದನು. ಗುರುವಾದ ಸಂವರ್ತನ ಅನುಮತಿ ಯನ್ನು ಪಡೆದು ರಾಜಧಾನಿಗೆ ಹಿಂದಿರುಗಿ ಸಾಗರಾಂತವಾದ ಭೂಮಿಯನ್ನು ಧರ್ಮದಿಂದ ಪರಿಪಾಲಿಸತೊಡಗಿದನು. ಯುಧಿಷ್ಠಿರ! ಮರುತ್ತರಾಜನು ಇಂತಹ ಪ್ರಭಾವಶಾಲಿಯಾಗಿದ್ದನು. ಅವನ ಯಜ್ಞದಲ್ಲಿ ಹೇರಳವಾದ ಸುವರ್ಣವಿದ್ದಿತು. ನೀನೂ ಕೂಡ ಮರುತ್ತನು ಶೇಖರಿಸಿಟ್ಟಿರುವ ಸುವರ್ಣವನ್ನು ತಂದು ಹವಿರ್ಭಾಗಗಳಿಂದ ದೇವತೆಗಳನ್ನು ತೃಪ್ತಿಗೊಳಿಸುತ್ತಾ ಯಜ್ಞಗಳನ್ನು ಮಾಡು.”

ವೈಶಂಪಾಯನರು ಹೇಳುತ್ತಾರೆ:

“ಜನಮೇಜಯ! ಸತ್ಯವತಿಯ ಪುತ್ರರಾದ ವ್ಯಾಸರ ಮಾತನ್ನು ಕೇಳಿ ಪಾಂಡವಜ್ಯೇಷ್ಠನಾದ ಯುಧಿಷ್ಠಿರನು ಅತ್ಯಂತಪ್ರಸನ್ನನಾದನು. ವ್ಯಾಸರು ಹೇಳಿದಂತೆ ಹಿಮವತ್ಪರ್ವತದ ತಪ್ಪಲಿನಿಂದ ಸುವರ್ಣವನ್ನು ತಂದು ಅದರಿಂದಲೇ ಯಜ್ಞಮಾಡಲು ಮನಸ್ಸುಮಾಡಿದನು. ಹಾಗೂ ಮಂತ್ರಿಗಳೊಡನೆ ಅದೇ ವಿಷಯವಾಗಿ ಪುನಃ ಪುನಃ ಸಮಾಲೋಚನೆಗಳನ್ನು ಮಾಡಿದನು.”

೧೦ನೆಯ ಅಧ್ಯಾಯವು ಮುಗಿಯಿತು.

೧೧ನೆಯ ಅಧ್ಯಾಯ ಅಶ್ವಮೇಧಪರ್ವ (ಮುಂದುವರಿದಿದೆ.)

ಇಂದ್ರನು ಶರೀರಸ್ಥನಾಗಿದ್ದ ವೃತ್ರಾಸುರನನ್ನು ಸಂಹರಿಸಿದ ಇತಿಹಾಸವನ್ನು ಶ್ರೀಕೃಷ್ಣನು ಯುಧಿಷ್ಠಿರನಿಗೆ ಹೇಳಿದುದು

ವೈಶಂಪಾಯನರು ಹೇಳುತ್ತಾರೆ:

ಇತ್ಯುಕ್ತೇ ನೃಪತೌ ತಸ್ಮಿನ್ವ್ಯಾಸೇನಾದ್ಭುತಕರ್ಮಣಾ ।
ವಾಸುದೇವೋ ಮಹಾತೇಜಾಸ್ತತೋ ವಚನಮಾದದೇ ॥೧॥

ಜನಮೇಜಯ! ಅದ್ಭುತಕರ್ಮರಾದ ವ್ಯಾಸರು ಹೀಗೆ ಹೇಳಿದ ನಂತರ ಮಹಾತೇಜಸ್ವಿಯಾದ ವಾಸುದೇವನು ಯುಧಿಷ್ಠಿರನೊಡನೆ ಈ ಮಾತನ್ನು ಹೇಳಿದನು:

ವ್ಯಾಸರು ಸಮಾಧಾನವನ್ನು ಹೇಳಿದನಂತರವೂ ಯುಧಿಷ್ಠಿರನ ಮನಸ್ಸು ಖಿನ್ನವಾಗಿಯೇ ಇದ್ದಿತು. ದೀನಮನಸ್ಕನಾಗಿದ್ದ, ಜ್ಞಾತಿಗಳನ್ನು ಕಳೆದುಕೊಂಡಿದ್ದ–ರಾಹುಗ್ರಸ್ತನಾದ ಸೂರ್ಯನಂತೆಯೂ–ಹೊಗೆಯಿಂದ ಕೂಡಿರುವ ಯಜ್ಞೇಶ್ವರನಂತೆಯೂ ಕಾಂತಿಹೀನನಾಗಿದ್ದ ಯುಧಿಷ್ಠಿರನು ಖೇದಗೊಂಡ ಮನಸ್ಸಿನಿಂದ ಕೂಡಿರುವನೆಂಬುದನ್ನು ವೃಷ್ಣಿಕುಲಾವತಂಸನಾದ ಶ್ರೀಕೃಷ್ಣನು ತಿಳಿದುಕೊಂಡು, ಆ ಧರ್ಮಸುತನನ್ನು ಬಾರಿ-ಬಾರಿಗೂ ಸಂತೈಸುತ್ತಾ ಸಮಾಧಾನಕರವಾದ ಮಾತುಗಳನ್ನಾಡಲು ಉಪಕ್ರಮಿಸಿದನು.

ಸರ್ವಂ ಜಿಹ್ಮಂ ಮೃತ್ಯುಪದಮಾರ್ಜವಂ ಬ್ರಹ್ಮಣಃ ಪದಮ್ ।
ಏತಾವಾನ್ ಜ್ಞಾನವಿಷಯಃ ಕಿಂ ಪ್ರಲಾಪಃ ಕರಿಷ್ಯತಿ ॥೪॥

"ಯುಧಿಷ್ಠಿರ! ಕುಟಿಲತೆಯು ಮೃತ್ಯುವಿನ ಸ್ಥಾನವಾಗಿದೆ. ಸರಳತೆಯು ಬ್ರಹ್ಮಪ್ರಾಪ್ತಿಗೆ ಸಾಧನವಾಗಿದೆ. ತಿಳಿದುಕೊಳ್ಳಬೇಕಾದ ವಿಷಯವು ಇಷ್ಟು ಮಾತ್ರ. ವ್ಯರ್ಥವಾದ ಪ್ರಲಾಪವು ಏನನ್ನು ಸಾಧಿಸುತ್ತದೆ?

ನೈವ ತೇ ನಿಷ್ಠಿತಂ ಕರ್ಮ ನೈವ ತೇ ಶತ್ರವೋ ಜಿತಾಃ ।
ಕಥಂ ಶತ್ರುಂ ಶರೀರಸ್ಥಮಾತ್ಮನೋ ನಾವಬುಧ್ಯಸೇ ॥೫॥

ನೀನು ಮಾಡಬೇಕಾಗಿರುವ ಕರ್ತವ್ಯವನ್ನು ಇನ್ನೂ ಮಾಡಿರುವುದಿಲ್ಲ. ನೀನಿನ್ನೂ ಶತ್ರುಗಳನ್ನು ಸಂಪೂರ್ಣವಾಗಿ ಜಯಿಸಿರುವುದಿಲ್ಲ. ನಿನ್ನ ಶತ್ರುವು ನಿನ್ನ ಶರೀರದಲ್ಲಿಯೇ ಅಡಗಿ ಕುಳಿತಿರುವನು. ಅಂತಹ ಶತ್ರುವನ್ನೇ ನೀನೇಕಿನ್ನೂ ತಿಳಿದುಕೊಂಡಿಲ್ಲ?

ಇಂದ್ರನೊಡನೆ ವೃತ್ರನಿಗೆ ಧರ್ಮಾನುಸಾರವಾಗಿ ಯುದ್ಧವು ನಡೆದಬಗೆಯನ್ನು ನಾನು ಕೇಳಿರುವಂತೆಯೇ ನಿನಗೂ ಹೇಳುವೆನು; ಕೇಳು:

ನರಾಧಿಪನೇ! ಹಿಂದೊಮ್ಮೆ ವೃತ್ರಾಸುರನಿಂದಲೇ ಸಂಪೂರ್ಣವಾದ ಪೃಥ್ವಿಯು ವ್ಯಾಪ್ತವಾಗಿಬಿಟ್ಟಿತು. ಶತಕ್ರತುವು, ಪೃಥ್ವಿಯು ವೃತ್ರನಿಂದ ವ್ಯಾಪ್ತವಾಗಿರುವುದನ್ನೂ ಅದರೊಂದಿಗೆ ಪೃಥ್ವಿಯಲ್ಲಿನ ಗಂಧವೂ ಅಪಹೃತವಾಗಿರುವುದನ್ನೂ ತಿಳಿದನು. ಪೃಥ್ವಿಯ ಅಂಶವಾದ ಗಂಧವೇ ವೃತ್ರನಿಂದ ಅಪಹರಿಸಲ್ಪಟ್ಟುದರಿಂದ ಸರ್ವತ್ರ ದುರ್ಗಂಧವೇ ವ್ಯಾಪಿಸಿತು.

ಆದುದರಿಂದ ಇಂದ್ರನು ಬಹಳವಾಗಿ ಕೋಪಗೊಂಡನು. ವೃತ್ರಾಸುರನ ವಿಷಯದಲ್ಲಿ ಕ್ರುದ್ಧನಾದ ಇಂದ್ರನು ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು. ಮಹಾತೇಜಸ್ಸಿನಿಂದ ಕೂಡಿದ್ದ ಇಂದ್ರನ ವಜ್ರದಿಂದ ಪ್ರಹೃತನಾದ ವೃತ್ರನು ಒಡನೆಯೇ ನೀರೊಳಗೆ ಪ್ರವೇಶಿಸಿ ನೀರಿನ ವಿಷಯಭೂತವಾದ ರಸವನ್ನು ಅಪಹರಿಸಿಬಿಟ್ಟನು. ನೀರು ವೃತ್ರನಿಂದ ವ್ಯಾಪ್ತವಾಗಿ ನೀರಿನ ವಿಷಯಭೂತವಾದ ರಸವು ಅಪಹೃತವಾಗಲಾಗಿ ಇಂದ್ರನು ಕ್ರುದ್ಧನಾಗಿ ನೀರಿನಲ್ಲಿದ್ದ ವೃತ್ರನ ಮೇಲೆಯೇ ವಜ್ರಾಯುಧವನ್ನು ಪ್ರಯೋಗಿಸಿದನು. ಅಮಿತವಾದ ತೇಜಸ್ಸಿನಿಂದ ಕೂಡಿದ ವಜ್ರಾಯುಧದಿಂದ ಪ್ರಹೃತನಾದ ವೃತ್ರನು ಒಡನೆಯೇ ತೇಜಸ್ಸನ್ನು ಪ್ರವೇಶಿಸಿ ಅದರ ವಿಷಯವಾದ ರೂಪವನ್ನು ಅಪಹರಿಸಿಬಿಟ್ಟನು. ತೇಜಸ್ಸು ವೃತ್ರನಿಂದ ವ್ಯಾಪ್ತವಾಗಿ ಅದರ ವಿಷಯವಾದ ರೂಪವು ಅಪಹರಿಸಲ್ಪಡಲಾಗಿ ಅತ್ಯಂತಕ್ರುದ್ಧನಾದ ಶತಕ್ರತುವು ಜ್ಯೋತಿಯಲ್ಲಿ ಸೇರಿಕೊಂಡಿದ್ದ ವೃತ್ರನ ಮೇಲೆ ಪುನಃ ವಜ್ರಾಯುಧವನ್ನು ಪ್ರಯೋಗಿಸಿದನು. ತೇಜಸ್ಸಿನಲ್ಲಿ ಸೇರಿಕೊಂಡಿದ್ದ ವೃತ್ರನು ಅಮಿತವಾದ ತೇಜಸ್ಸಿನಿಂದ ಕೂಡಿದ್ದ ವಜ್ರಾಯುಧದಿಂದ ಪ್ರಹೃತನಾಗಿ ಒಡನೆಯೇ ಜ್ಯೋತಿಯನ್ನು ಬಿಟ್ಟು ವಾಯುವನ್ನು ವ್ಯಾಪಿಸಿ ಅದರ ವಿಷಯವಾದ ಸ್ಪರ್ಶವನ್ನು ಅಪಹರಿಸಿಬಿಟ್ಟನು. ವೃತ್ರನು ವಾಯುವನ್ನು ವ್ಯಾಪಿಸಿ ವಾಯುವಿನ ವಿಷಯವಾದ ಸ್ಪರ್ಶವನ್ನು ಅಪಹರಿಸಿದನಂತರ ಪರಮಕ್ರುದ್ಧನಾದ ಇಂದ್ರನು ವಾಯುವಿನಲ್ಲಿ ಅಂತರ್ಗತನಾಗಿದ್ದ ವೃತ್ರನ ಮೇಲೆ ಪುನಃ ವಜ್ರಾಯುಧವನ್ನು ಪ್ರಯೋಗಿಸಿದನು. ಅಮಿತವಾದ ತೇಜಸ್ಸಿನಿಂದ ಕೂಡಿದ್ದ ವಜ್ರಾಯುಧದಿಂದ ಪೃಹೃತನಾದ ವೃತ್ರನು ಒಡನೆಯೇ ಆಕಾಶದ ಕಡೆಗೆ ಓಡಿಹೋಗಿ ಅದನ್ನು ಸಂಪೂರ್ಣವಾಗಿ ವ್ಯಾಪಿಸಿ ಆಕಾಶದ ವಿಷಯವಾದ ಶಬ್ದವನ್ನು ಅಪಹರಿಸಿಬಿಟ್ಟನು. ಹೀಗೆ ಆಕಾಶವು ವೃತ್ರನಿಂದ ವ್ಯಾಪ್ತವಾಗಿ ಅದರ ವಿಷಯವಾದ ಶಬ್ದವು ಅಪಹೃತವಾಗಲಾಗಿ ಅದರಿಂದ ಬಹಳವಾಗಿ ಕೋಪಗೊಂಡ ಇಂದ್ರನು ಆಕಾಶಾಂತರ್ಗತನಾಗಿದ್ದ ವೃತ್ರನ ಮೇಲೆ ಪುನಃ ವಜ್ರಾಯುಧವನ್ನು ಪ್ರಯೋಗಿಸಿದನು. ಅಮಿತವಾದ ತೇಜಸ್ಸಿನಿಂದ ಕೂಡಿದ ವಜ್ರಾಯುಧದಿಂದ ಪ್ರಹೃತನಾದ ವೃತ್ರನು ಒಡನೆಯೇ ಇಂದ್ರನನ್ನೇ ಪ್ರವೇಶಿಸಿ ಅವನ ವಿಷಯವನ್ನೇ (ವೀರ್ಯ-ಶೌರ್ಯಾದಿ ಗುಣ

ಗಳನ್ನೇ) ಅಪಹರಿಸಿಬಿಟ್ಟನು. ವೃತ್ರಾಸುರನಿಂದ ವ್ಯಾಪ್ತನಾದ ಇಂದ್ರನನ್ನು ಮಹಾಮೋಹವು ಆವರಿಸಿತು. ಆ ಸಮಯದಲ್ಲಿ ವಸಿಷ್ಠಮಹರ್ಷಿಗಳು ರಥಂತರಸಾಮದ ಮೂಲಕವಾಗಿ ಇಂದ್ರನಲ್ಲಿದ್ದ ಮೋಹವನ್ನು ಹೋಗಲಾಡಿಸಿ ಅವನನ್ನು ಎಚ್ಚರಗೊಳಿಸಿದರು. ಬಳಿಕ ಶತಕ್ರತುವು ತನ್ನ ಶರೀರವನ್ನೇ ವ್ಯಾಪಿಸಿದ್ದ ವೃತ್ರಾಸುರನನ್ನು ಅದೃಶ್ಯವಾದ ವಜ್ರಾಯುಧ ದಿಂದಲೇ ಸಂಹರಿಸಿದನೆಂಬ ವಿಷಯವನ್ನು ನಾವು ಕೇಳಿದ್ದೇವೆ. ಜನಾಧಿಪನೇ! ಧರ್ಮಕ್ಕೆ ಸಂಬಂಧಿಸಿದ ಈ ರಹಸ್ಯವಿಷಯವನ್ನು ಇಂದ್ರನೇ ಮಹರ್ಷಿಗಳಿಗೆ ಹೇಳಿದನು. ಮಹರ್ಷಿಗಳು ಅದನ್ನು ನನಗೆ ಹೇಳಿದರು. ನಾನು ಕೇಳಿದ ಆ ರಹಸ್ಯವಿಷಯವನ್ನೇ ನಿನಗೂ ಹೇಳಿರುವೆನು. ನೀನು ಇದನ್ನು ಚೆನ್ನಾಗಿ ಮನನಮಾಡು."

೧೧ನೆಯ ಅಧ್ಯಾಯವು ಮುಗಿಯಿತು.

೧೨ನೆಯ ಅಧ್ಯಾಯ — ಅಶ್ವಮೇಧಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನು ಯುಧಿಷ್ಠಿರನಿಗೆ ಮನಸ್ಸನ್ನು ಜಯಿಸುವಂತೆ ಉಪದೇಶಿಸಿದುದು

ವಾಸುದೇವನು ಹೇಳುತ್ತಾನೆ:

ದ್ವಿವಿಧೋ ಜಾಯತೇ ವ್ಯಾಧಿಃ ಶಾರೀರೋ ಮಾನಸಸ್ತಥಾ ।
ಪರಸ್ಪರಂ ತಯೋರ್ಜನ್ಮ ನಿರ್ದ್ವನ್ದ್ವಂ ನೋಪಪದ್ಯತೇ ॥೧॥

"ಯುಧಿಷ್ಠಿರ! ವ್ಯಾಧಿಯು ಶಾರೀರಿಕ ಮತ್ತು ಮಾನಸಿಕ ಎಂದು ಎರಡು ಪ್ರಕಾರಗಳಾಗಿರುತ್ತದೆ. ಅವೆರಡೂ ಪರಸ್ಪರ ಸಹಯೋಗದಿಂದ ಹುಟ್ಟುತ್ತವೆ. (ಶಾರೀರಕವ್ಯಾಧಿಯಿಂದ ಮಾನಸಿಕವ್ಯಾಧಿಯೂ ಹುಟ್ಟುತ್ತದೆ. ಮಾನಸಿಕವಾದ ವ್ಯಾಧಿಯಿಂದ ಶಾರೀರಕವ್ಯಾಧಿಯೂ ಹುಟ್ಟುತ್ತದೆ.) ಪರಸ್ಪರ ಸಹಯೋಗವಿಲ್ಲದೇ ಇವುಗಳ ಉತ್ಪತ್ತಿಯು ಸಾಧ್ಯವೇ ಇಲ್ಲ.

ಶರೀರೇ ಜಾಯತೇ ವ್ಯಾಧಿಃ ಶಾರೀರಃ ಸ ನಿಗದ್ಯತೇ ।
ಮಾನಸೇ ಜಾಯತೇ ವ್ಯಾಧಿರ್ಮಾನಸಸ್ತು ನಿಗದ್ಯತೇ ॥೨॥

ಶರೀರದಲ್ಲಿ ಹುಟ್ಟುವ ವ್ಯಾಧಿಯು ಶಾರೀರಕವ್ಯಾಧಿಯೆಂದು ಹೇಳಲ್ಪಡುತ್ತದೆ. ಮನಸ್ಸಿನಲ್ಲಿ ಹುಟ್ಟುವ ವ್ಯಾಧಿಯನ್ನು ಮಾನಸಿಕವ್ಯಾಧಿ ಯೆನ್ನುತ್ತಾರೆ.

ಶೀತೋಷ್ಣೇ ಚೈವ ವಾಯುಶ್ಚ ಗುಣಾ ರಾಜಞ್ಶರೀರಜಾಃ ।
ತೇಷಾಂ ಗುಣಾನಾಂ ಸಾಮ್ಯಂ ಚೇತ್ತದಾಹುಃ ಸ್ವಸ್ಥಲಕ್ಷಣಮ್ ।
ಉಷ್ಣೇನ ಬಾಧ್ಯತೇ ಶೀತಂ ಶೀತೇನೋಷ್ಣಂ ಚ ಬಾಧ್ಯತೇ ॥೩॥

ಶೀತ, ಉಷ್ಣ ಮತ್ತು ವಾಯು (ಕಫ-ಪಿತ್ತ-ವಾತ)–ಇವು ಮೂರೂ ಶರೀರದ ಗುಣಗಳಾಗಿವೆ. ಶರೀರದಲ್ಲಿ ಈ ಮೂರೂ ಸಮಾನಸ್ಥಿತಿ ಯಲ್ಲಿರುವುದೇ ಮನುಷ್ಯನು ಸ್ವಾಸ್ಥ್ಯದಿಂದಿರುವುದರ ಲಕ್ಷಣವಾಗಿದೆಯೆಂದು ಹೇಳುತ್ತಾರೆ.

(ಶೀತವನ್ನು ಉಷ್ಣವು ಬಾಧಿಸುತ್ತದೆ. ಉಷ್ಣವನ್ನು ಶೀತವು ಬಾಧಿಸುತ್ತದೆ. ಹೀಗೆ ಪರಸ್ಪರ ವಿನಿಮಯವ್ಯಾಪಾರದಿಂದ ಮನುಷ್ಯನ ಶರೀರವು ಸಮಶೀತೋಷ್ಣವಾಗಿದ್ದು ಸ್ವಸ್ಥತೆಯಿಂದಿರುತ್ತದೆ.)

ಸತ್ತ್ವಂ ರಜಸ್ತಮಶ್ಚೇತಿ ತ್ರಯ ಆತ್ಮಗುಣಾಃ ಸ್ಮೃತಾಃ ।
ತೇಷಾಂ ಗುಣಾನಾಂ ಸಾಮ್ಯಂ ಚೇತ್ತದಾಹುಃ ಸ್ವಸ್ಥಲಕ್ಷಣಮ್ ॥೪॥

ಸತ್ತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಈ ಮೂರೂ ಆತ್ಮಗುಣಗಳೆಂದು ಹೇಳಲ್ಪಟ್ಟಿವೆ. ಈ ಮೂರು ಗುಣಗಳೂ ಸಮಾನವಾಗಿದ್ದರೆ ಅದನ್ನು ಮನುಷ್ಯನ ಮನಸ್ಸಿನ ಸ್ವಾಸ್ಥ್ಯದ ಲಕ್ಷಣವೆನ್ನುತ್ತಾರೆ.

ತೇಷಾಮನ್ಯತಮೋತ್ಸೇಕೇ ವಿಧಾನಮುಪದಿಶ್ಯತೇ ।
ಹರ್ಷೇಣ ಬಾಧ್ಯತೇ ಶೋಕೋ ಹರ್ಷಃ ಶೋಕೇನ ಬಾಧ್ಯತೇ ॥೫॥

ಕಶ್ಚಿದ್ದುಃಖೇ ವರ್ತಮಾನಃ ಸುಖಸ್ಯ ಸ್ಮರ್ತುಮಿಚ್ಛತಿ ।
ಕಶ್ಚಿತ್ಸುಖೇ ವರ್ತಮಾನೋ ದುಃಖಸ್ಯ ಸ್ಮರ್ತುಮಿಚ್ಛತಿ ॥೬॥

ಈ ಸತ್ತ್ವ-ರಜಸ್ತಮೋಗುಣಗಳಲ್ಲಿ ಯಾವುದಾದರೂ ಒಂದು ಗುಣವು ಅಧಿಕವಾದರೆ ಅದನ್ನು ಮತ್ತೊಂದು ಗುಣದೊಡನೆ ಸಮೀಕರಿಸಲು ಮಹರ್ಷಿಗಳು ಉಪದೇಶಿಸಿದ್ದಾರೆ. ತಮೋಗುಣಸ್ವರೂಪದ ಶೋಕವು ರಜೋಗುಣಸ್ವರೂಪದ ಹರ್ಷದಿಂದ ಬಾಧಿತವಾಗುತ್ತದೆ. (ನಿರಸನ ವಾಗುತ್ತದೆ.) ಹಾಗೆಯೇ ರಜೋಗುಣಸ್ವರೂಪದ ಹರ್ಷವು ತಮೋಗುಣಸ್ವರೂಪದ ಶೋಕದಿಂದ ಬಾಧಿತವಾಗುತ್ತದೆ. ದುಃಖಿಯಾಗಿ ರುವವನೊಬ್ಬನು ಸುಖವನ್ನು ಸ್ಮರಿಸಲು ಇಚ್ಛಿಸುತ್ತಾನೆ. ಅಂತೆಯೇ

ಸುಖವಾಗಿರುವವನೊಬ್ಬನು ತನ್ನ ಹಿಂದಿನ ದುಃಖವನ್ನು ಸ್ಮರಿಸಲು ಇಚ್ಛಿಪಡುತ್ತಾನೆ.

ಸ ತ್ವಂ ನ ದುಃಖೀ ದುಃಖಸ್ಯ ನ ಸುಖೀ ಸುಸುಖಸ್ಯ ಚ।

ಸ್ಮರ್ತುಮಿಚ್ಛಸಿ ಕೌನ್ತೇಯ ಕಿಮನ್ಯದ್ದುಃಖವಿಭ್ರಮಾತ್।
ಅಥವಾ ತೇ ಸ್ವಭಾವೋಽಯಂ ಯೇನ ಪಾರ್ಥಾವಕೃಷ್ಯಸೇ ॥೭॥

ಆದರೆ ನೀನು ದುಃಖಿಯಾಗಿದ್ದುಕೊಂಡು ದುಃಖದ ನಿವಾರಣೆಗಾಗಿ ಸುಖವನ್ನು ಸ್ಮರಿಸುತ್ತಿಲ್ಲ. ಸುಖಿಯಾಗಿದ್ದುಕೊಂಡು ಆ ಸುಖವನ್ನು ಸಮನ್ವಯಗೊಳಿಸುವ ಸಲುವಾಗಿ ದುಃಖವನ್ನೂ ಸ್ಮರಿಸುತ್ತಿಲ್ಲ. ನಿನ್ನದು ದುಃಖದ ಭ್ರಾಂತಿಯಲ್ಲದೇ ಬೇರೆ ಯಾವುದೂ ಅಲ್ಲ. ಅಥವಾ ನಿನ್ನ ಸ್ವಭಾವವೇ ಹೀಗಿರಬಹುದು. ಆ ಸ್ವಭಾವದಿಂದಲೇ ನೀನು ಪೀಡಿಸಲ್ಪಡುತ್ತಿರುವೆ.

ದೃಷ್ಟ್ವಾ ಸಭಾಗತಾಂ ಕೃಷ್ಣಾಮೇಕವಸ್ತ್ರಾಂ ರಜಸ್ವಲಾಮ್।
ಮಿಷತಾಂ ಪಾಣ್ಡವೇಯಾನಾಂ ನ ತಸ್ಯ ಸ್ಮರ್ತುಮಿಚ್ಛಸಿ ॥೮॥

ಐವರು ಪಾಂಡವರೂ ನೋಡುತ್ತಿದ್ದಂತೆಯೇ ಸಭೆಗೆ ಸೆಳೆದು ತರಲ್ಪಟ್ಟ ರಜಸ್ವಲೆಯಾಗಿದ್ದ ಮತ್ತು ಒಂದೇ ವಸ್ತ್ರವನ್ನುಟ್ಟಿದ್ದ ದ್ರೌಪದಿಯನ್ನು ನೀನು ಪ್ರತ್ಯಕ್ಷವಾಗಿಯೇ ನೋಡಿರುವೆ. ಆದರೆ ಅದನ್ನು ನೀನೀಗ ಸ್ಮರಿಸಿಕೊಳ್ಳುತ್ತಿಲ್ಲ. (ಅದನ್ನು ಸ್ಮರಿಸಿಕೊಂಡಿದ್ದರೆ ಜ್ಞಾತಿ-ಬಾಂಧವರನ್ನು ಸಂಹರಿಸಿದ ಶೋಕವು ನಿನಗೆ ಉಂಟಾಗುತ್ತಿರಲಿಲ್ಲ.)

ಪ್ರವ್ರಾಜನಂ ಚ ನಗರಾದಜಿನೈಶ್ಚ ವಿವಾಸನಮ್।
ಮಹಾರಣ್ಯನಿವಾಸಶ್ಚ ನ ತಸ್ಯ ಸ್ಮರ್ತುಮಿಚ್ಛಸಿ ॥೯॥

ಕಪಟದ್ಯೂತವಾಡಿ ನಿಮ್ಮೆಲ್ಲರನ್ನೂ ನಗರದಿಂದ ಹೊರಕ್ಕೆ ಅಟ್ಟಿದ್ದುದು, ನೀವು ಮೃಗಚರ್ಮಗಳನ್ನು ಹೊದ್ದು ಅರಣ್ಯಕ್ಕೆ ಹೊರಟಿದ್ದು ಮತ್ತು ಘೋರಾರಣ್ಯದಲ್ಲಿ ಬಹಳ ಕಷ್ಟದಿಂದ ಹನ್ನೆರಡು ವರ್ಷಗಳಕಾಲ ವಾಸ ಮಾಡಿದುದು ಈ ಎಲ್ಲವನ್ನೂ ನೀನೀಗ ಜ್ಞಾಪಿಸಿಕೊಳ್ಳಲು ಇಷ್ಟಪಡುತ್ತಿಲ್ಲ.

ಜಟಾಸುರಾತ್ಪರಿಕ್ಲೇಶಶ್ಚಿತ್ರಸೇನೇನ ಚಾಹವಃ।
ಸೈನ್ಧವಾಚ್ಚ ಪರಿಕ್ಲೇಶೋ ನ ತಸ್ಯ ಸ್ಮರ್ತುಮಿಚ್ಛಸಿ ॥೧೦॥

ಜಟಾಸುರನಿಂದಲೂ ಸೈಂಧವನಿಂದಲೂ ಕ್ಲೇಶಗಳನ್ನು ಅನುಭವಿಸಿದುದು, ದುರ್ಯೋಧನನನ್ನು ಬಿಡಿಸಿಕೊಳ್ಳಲು ಚಿತ್ರಸೇನನೊಡನೆ ಯುದ್ಧಮಾಡಿದುದು, ಆ ಉಪಕಾರಕ್ಕಾಗಿ ದುರ್ಯೋಧನನ ಪ್ರತಿಕ್ರಿಯೆ–ಇವೆಲ್ಲವನ್ನೂ ನೀನು ಸ್ಮರಿಸಿಕೊಳ್ಳಲು ಇಚ್ಛಿಪಡುತ್ತಿಲ್ಲ.

ಪುನರಜ್ಞಾತಚರ್ಯಾಯಾಂ ಕೀಚಕೇನ ಪದಾ ವಧಃ ।
ಯಾಜ್ಞಸೇನ್ಯಾಸ್ತಥಾ ಪಾರ್ಥ ನ ತಸ್ಯ ಸ್ಮರ್ತುಮಿಚ್ಛಸಿ ॥೧೧॥

ಕುಂತೀಪುತ್ರನೇ! ಅಜ್ಞಾತವಾಸದ ಸಮಯದಲ್ಲಿ ಕೀಚಕನು ದ್ರೌಪದಿಯನ್ನು ಕಾಲಿನಿಂದಲೇ ಒದೆದನು. ಅದನ್ನು ಕೂಡ ನೀನು ಸ್ಮರಿಸಲು ಇಚ್ಛಿಪಡುತ್ತಿಲ್ಲ.

ಯಚ್ಚ ತೇ ದ್ರೋಣಭೀಷ್ಮಾಭ್ಯಾಂ ಯುದ್ಧಮಾಸೀದರಿಂದಮ ।
ಮನಸೈಕೇನ ಯೋದ್ಧವ್ಯಂ ತತ್ತೇ ಯುದ್ಧಮುಪಸ್ಥಿತಮ್ ॥೧೨॥

ಭೀಷ್ಮ-ದ್ರೋಣರೊಡನೆ ನೀನು ಎಂತಹ ಭಯಂಕರವಾದ ಯುದ್ಧವನ್ನು ಮಾಡಿದೆಯೋ–ಆ ಯುದ್ಧದ ದೃಶ್ಯವು ನಿನ್ನ ಮುಂದೆಯೇ ಈಗಲೂ ಇದೆ. ಅಂತಹುದೇ ಯುದ್ಧವನ್ನು ನೀನು ನಿನ್ನ ಮನಸ್ಸಿನೊಡನೆಯೇ ಈಗ ಮಾಡಬೇಕಾಗಿದೆ.

ತಸ್ಮಾದಭ್ಯುಪಗನ್ತವ್ಯಂ ಯುದ್ಧಾಯ ಭರತರ್ಷಭ ।
ಪರಮವ್ಯಕ್ತರೂಪಸ್ಯ ಪಾರಂ ಯುಕ್ತ್ವಾ ಸ್ವಕರ್ಮಭಿಃ ॥೧೩॥

ಆದುದರಿಂದ ಮನಸ್ಸಿನೊಡನೆ ಮಾಡಬೇಕಾಗಿರುವ ಯುದ್ಧಕ್ಕೆ ನೀನು ಸಿದ್ಧನಾಗಿರಬೇಕು. ನಿನ್ನ ವರ್ಣಾಶ್ರಮೋಕ್ತವಾದ ಕರ್ಮಗಳಿಂದ ಮನಸ್ಸನ್ನು ವಶಪಡಿಸಿಕೊಂಡು ಮಾಯೆಯಿಂದ ಆಚೆಯಲ್ಲಿರುವ ಪರಬ್ರಹ್ಮನೊಡನೆ ಮನಸ್ಸನ್ನು ಲೀನಗೊಳಿಸಿ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕು.

ಯತ್ರ ನೈವ ಶರೈಃ ಕಾರ್ಯಂ ನ ಭೃತ್ಯೈರ್ನ ಚ ಬನ್ಧುಭಿಃ ।
ಆತ್ಮನೈಕೇನ ಯೋದ್ಧವ್ಯಂ ತತ್ತೇ ಯುದ್ಧಮುಪಸ್ಥಿತಮ್ ॥೧೪॥

ಮನಸ್ಸಿನೊಡನೆ ಮಾಡಬೇಕಾಗಿರುವ ಈ ಯುದ್ಧದಲ್ಲಿ ಬಾಣಗಳಿಂದ ಆಗಬೇಕಾದುದೇನೂ ಇಲ್ಲ. ಸೇವಕರಿಂದಾಗಲೀ ಬಂಧುಗಳಿಂದಾಗಲೀ ಈ

ಯುದ್ಧಕ್ಕೆ ಸಹಕಾರವು ಸಿಕ್ಕುವುದಿಲ್ಲ. ನೀನೊಬ್ಬನೇ ನಿನ್ನ ಆತ್ಮಬಲದಿಂದ ಯುದ್ಧಮಾಡಬೇಕು. ಅಂತಹ ಯುದ್ಧವು ಈಗ ಸನ್ನಿಹಿತವಾಗಿದೆ.

ತಸ್ಮಿನ್ನನಿರ್ಜಿತೇ ಯುದ್ಧೇ ಕಾಮವಸ್ಥಾಂ ಗಮಿಷ್ಯಸಿ ।
ಏತಜ್ಜ್ಞಾತ್ವಾ ತು ಕೌನ್ತೇಯ ಕೃತಕೃತ್ಯೋ ಭವಿಷ್ಯಸಿ ॥೧೫॥

ಮನಸ್ಸಿನೊಡನೆ ಮಾಡಲಿರುವ ಈ ಯುದ್ಧದಲ್ಲಿ ನೀನೇನಾದರೂ ಜಯಗಳಿಸದಿದ್ದರೆ ಎಂತಹ ಅವಸ್ಥೆಯನ್ನು ಹೊಂದುವೆಯೆಂಬುದನ್ನೇ ನಾದರೂ ನೀನು ತಿಳಿದುಕೊಂಡರೆ ನೀನು ಕೃತಕೃತ್ಯನಾಗಿಬಿಡುವೆ.

ಏತಾಂ ಬುದ್ಧಿಂ ವಿನಿಶ್ಚಿತ್ಯ ಭೂತಾನಾಮಾಗತಿಂ ಗತಿಮ್ ।
ಪಿತೃಪೈತಾಮಹೇ ವೃತ್ತೇ ಶಾಧಿ ರಾಜ್ಯಂ ಯಥೋಚಿತಮ್ ॥೧೬॥

ಪ್ರಾಣಿಗಳ ಉತ್ಪತ್ತಿ-ಲಯಗಳು ಮಾಯಾಮಾತ್ರವೆಂಬ ಬುದ್ಧಿಯನ್ನು ನಿಶ್ಚಯಗೊಳಿಸಿ ನಿನ್ನ ತಾತ-ಮುತ್ತಾತಂದಿರ ನಡವಳಿಕೆಯಲ್ಲಿಯೇ ಬುದ್ಧಿಯನ್ನು ಇಟ್ಟುಕೊಂಡು ಯಥೋಚಿತವಾಗಿ ರಾಜ್ಯವನ್ನು ಪರಿಪಾಲಿಸು."

೧೩ನೆಯ ಅಧ್ಯಾಯವು ಮುಗಿಯಿತು.

(ಈ ಅಧ್ಯಾಯವು ಧರ್ಮ್ಯವೂ ಮತ್ತು ರಹಸ್ಯಪೂರ್ಣವೂ ಆಗಿರುತ್ತದೆ. ಇಲ್ಲಿ ವೃತ್ರನೆಂದರೆ ಮನಸ್ಸು. ಪ್ರಪಂಚದಲ್ಲಿರುವ ಸಕಲಪ್ರಾಣಿಗಳ ಮನಸ್ಸೂ ಶಬ್ದ-ಸ್ಪರ್ಶಾದಿ ಯಾವುದಾದರೂ ಒಂದು ವಿಷಯದಲ್ಲಿ ಆಸಕ್ತವಾಗಿರುತ್ತದೆ. ಮನಸ್ಸೆಂಬ ವೃತ್ರಾಸುರನು ಗಂಧವೆಂಬ ವಿಷಯ ವಾಸನೆಯಲ್ಲಿ ಆಸಕ್ತನಾಗಿದ್ದರೆ ವಜ್ರವೆಂಬ ವಿವೇಕವು ಅದನ್ನು ಧ್ವಂಸಮಾಡು ತ್ತದೆ. ಅರ್ಥಾತ್ ಗಂಧವೆಂಬ ವಿಷಯವಾಸನೆಯಿಂದ ಮನಸ್ಸನ್ನು ಹಿಂದಿರುಗಿಸುತ್ತದೆ. ಹೀಗೆಯೇ ವಜ್ರವೆಂಬ ವಿವೇಕವು ಮನಸ್ಸೆಂಬ ವೃತ್ರಾ ಸುರನನ್ನು ರಸ, ರೂಪ, ಸ್ಪರ್ಶ, ಶಬ್ದ–ಈ ವಿಷಯಗಳಿಂದಲೂ ವಿಮುಖಗೊಳಿಸುತ್ತದೆ. ಆಗ ಮನಸ್ಸು ಅನಿವಾರ್ಯವಾಗಿ ಆತ್ಮಕಾಮವಾಗು ತ್ತದೆ. ಆದರೆ ಕೇವಲ ಆತ್ಮಕಾಮನಾಗುವುದರಿಂದ ಆತ್ಮಸಾಕ್ಷಾತ್ಕಾರವಾಗಿ ಬಿಡುವುದಿಲ್ಲ. ಗುರುಗಳು ದಾರಿಯನ್ನು ತೋರಬೇಕು. ಬ್ರಹ್ಮರ್ಷಿಗಳಾದ ವಸಿಷ್ಠರೇ ಅಂತಹ ಮಹಾಗುರುಗಳು. ವಶವತಾಂ = ವಶಿನಾಂ ಶ್ರೇಷ್ಠಃ ಜಿತೇಂದ್ರಿಯರಲ್ಲಿ ಶ್ರೇಷ್ಠರಾದವರು ವಸಿಷ್ಠರು. ರಥಂತರ ಸಾಮದ

ಮೂಲಕವಾಗಿ ಮೋಹಗೊಂಡಿರುವ ಮನಸ್ಸನ್ನು ಎಚ್ಚರಗೊಳಿಸುತ್ತಾರೆ. **ರಥೋ ಮಾಯಾರೂಪೋ ವಿಗ್ರಹಃ**=ರಥವೆಂದರೆ ಮಾಯಾರೂಪವಾದ ವಿಗ್ರಹ. **ತಂ ತರತ್ಯನೇನ ತದ್ರಥನ್ತರಮ್**=ಅದನ್ನು ಇದರಿಂದ ದಾಟುತ್ತಾನೆ. ಆದುದರಿಂದ ಅದು ರಥಂತರ. ಅಹಂ ಬ್ರಹ್ಮಾಸ್ಮಿ ಎಂಬುದೇ ಆ ರಥಂತರ. ಆ ಮಹಾಮಂತ್ರವನ್ನು ವಸಿಷ್ಠರು ಉಪದೇಶಿಸಿ ಮನಸ್ಸನ್ನು ಎಚ್ಚರಗೊಳಿಸುತ್ತಾರೆ. ಪುನಃ ವಿವೇಕವೆಂಬ ಅದೃಶ್ಯವಾದ ವಜ್ರಾಯುಧವು ಶರೀರಸ್ಥನಾಗಿರುವ ವೃತ್ರರೂಪಿಯಾದ ಮನಸ್ಸನ್ನು ಸಂಹರಿಸಿಬಿಡುತ್ತದೆ. ಅರ್ಥಾತ್ ಮನಸ್ಸು ಆತ್ಮನಲ್ಲಿ ಸೇರಿಹೋಗುತ್ತದೆ. ಇದೇರಹಸ್ಯವಾದ ಧರ್ಮವಾಗಿದೆ.)

೧೩ನೆಯ ಅಧ್ಯಾಯ — ಅಶ್ವಮೇಧಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನಿಂದ ಮಮತಾತ್ಯಾಗದ ಮಹತ್ತ್ವದ ಕಥನ: ಕಾಮಗೀತೆಯ ಉಲ್ಲೇಖ: ಯಜ್ಞಮಾಡಲು ಯುಧಿಷ್ಠಿರನಿಗೆ ಪ್ರೇರಣೆ

ಶ್ರೀಕೃಷ್ಣನು ಹೇಳುತ್ತಾನೆ:

ನ ಬಾಹ್ಯಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ಭಾರತ ।
ಶರೀರಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ವಾ ನ ವಾ ॥೧॥

"ಯುಧಿಷ್ಠಿರ! ಬಾಹ್ಯದ್ರವ್ಯಗಳನ್ನು (ರಾಜ್ಯ-ಕೋಶಾದಿಗಳನ್ನು) ಪರಿತ್ಯಾಗಮಾಡುವುದರಿಂದಲೇ ಆತ್ಮಜ್ಞಾನವು ಸಿದ್ಧಿಸುವುದಿಲ್ಲ. ಶಾರೀರ ದ್ರವ್ಯವನ್ನು (ಶಬ್ದ-ಸ್ಪರ್ಶ-ರೂಪ-ರಸ-ಗಂಧಾದಿಗಳನ್ನು) ಪರಿತ್ಯಾಗಮಾಡುವುದರಿಂದ ಆತ್ಮಸಿದ್ಧಿಯು ಆದರೂ ಆಗಬಹುದು; ಆಗದೆಯೂ ಇರಬಹುದು.

ಬಾಹ್ಯದ್ರವ್ಯವಿಮುಕ್ತಸ್ಯ ಶಾರೀರೇಷು ಚ ಗೃಧ್ಯತಃ ।
ಯೋ ಧರ್ಮೋ ಯತ್ಸುಖಂ ಚೈವ ದ್ವಿಷತಾಮಸ್ತು ತತ್ತಥಾ ॥೨॥

ಬಾಹ್ಯದ್ರವ್ಯಗಳಿಂದ (ರಾಜ್ಯ-ಕೋಶಾದಿಗಳಿಂದ) ವಿಮುಕ್ತನಾಗಿದ್ದರೂ ಶರೀರಕ್ಕೆ ಸಂಬಂಧಿಸಿದ ಕಾಮೋಪಭೋಗಗಳಲ್ಲಿ ಆಸಕ್ತಿಯಿರುವವನಿಗೆ

ಯಾವ ಧರ್ಮವಿರುವುದೋ ಮತ್ತು ಯಾವ ಸುಖವಿರುವುದೋ–ಆ ಧರ್ಮವೂ ಮತ್ತು ಆ ಸುಖವೂ ನಿನ್ನ ಶತ್ರುಗಳಲ್ಲಿ ಮಾತ್ರವೇ ಇರಲಿ. (ನಿನಗದು ಬೇಡ.)

ದ್ವ್ಯಕ್ಷರಸ್ತು ಭವೇನ್ಮೃತ್ಯುಸ್ತ್ರ್ಯಕ್ಷರಂ ಬ್ರಹ್ಮ ಶಾಶ್ವತಮ್ ।
ಮಮೇತಿ ಚ ಭವೇನ್ಮೃತ್ಯುರ್ನ ಮಮೇತಿ ಚ ಶಾಶ್ವತಮ್ ॥೩॥

ಎರಡು ಅಕ್ಷರಗಳ ಶಬ್ದವನ್ನು ಅನುಸಂಧಾನಮಾಡುವುದರಿಂದ ಮೃತ್ಯುವು ಸಂಭವಿಸುತ್ತದೆ. ಮೂರು ಅಕ್ಷರಗಳ ಶಬ್ದವನ್ನು ಅನುಸಂಧಾನಮಾಡುವುದರಿಂದ ಶಾಶ್ವತವಾದ ಬ್ರಹ್ಮಭಾವವುಂಟಾಗುತ್ತದೆ. ಅರ್ಥಾತ್ ‘ಮಮ’ ‘ನನ್ನದು’-ಎಂಬ ದ್ವ್ಯಕ್ಷರಪದದ ಅನುಸಂಧಾನದಿಂದ (ಅಹಂಕಾರಭಾವದಿಂದ) ಮೃತ್ಯುವುಂಟಾಗುತ್ತದೆ. ‘ನ ಮಮ’ ‘ನನ್ನದಲ್ಲ’–ಎಂಬ ತ್ರ್ಯಕ್ಷರದ ಪದವನ್ನು ಅನುಸಂಧಾನಮಾಡುವುದರಿಂದ (ನಿರಹಂಕಾರಭಾವದಿಂದ) ಶಾಶ್ವತವಾದ ಅಮೃತತ್ತ್ವವುಂಟಾಗುತ್ತದೆ.

ಬ್ರಹ್ಮಮೃತ್ಯೂ ತತೋ ರಾಜನ್ನಾತ್ಮನ್ಯೇವ ವ್ಯವಸ್ಥಿತೌ ।
ಅದೃಶ್ಯಮಾನೌ ಭೂತಾನಿ ಯೋಧಯೇತಾಮಸಂಶಯಮ್ ॥೪॥

ಮಹಾರಾಜ! ಹೀಗೆ ಬ್ರಹ್ಮ ಮತ್ತು ಮೃತ್ಯು–ಇವೆರಡೂ ಶರೀರದಲ್ಲಿಯೇ ಇವೆ. ಈ ಎರಡು ಭಾವಗಳೂ ಅದೃಶ್ಯವಾಗಿಯೇ ಇದ್ದುಕೊಂಡು ಪ್ರಾಣಿಗಳೊಡನೆ ಯುದ್ಧಮಾಡುತ್ತಿರುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಅವಿನಾಶೋಽಸ್ಯ ಸತ್ತ್ವಸ್ಯ ನಿಯತೋ ಯದಿ ಭಾರತ ।
ಭಿತ್ತ್ವಾ ಶರೀರಂ ಭೂತಾನಾಮಹಿಂಸಾಂ ಪ್ರತಿಪದ್ಯತೇ ॥೫॥

ಜೀವಕ್ಕೆ ಅಮೃತತತ್ವವು ಪ್ರಾಪ್ತವಾದರೆ (ಜೀವವು ಬ್ರಹ್ಮದೊಡನೆ ಐಕ್ಯಹೊಂದಿದರೆ) ಅಂತಹ ಸತ್ತ್ವಯುಕ್ತನಾದ ಮನುಷ್ಯನು ಪ್ರಾಣಿಗಳ ಶರೀರವನ್ನು ಭೇದಿಸಿಯೂ ಅಹಿಂಸಾತ್ವವನ್ನೇ ಹೊಂದುತ್ತಾನೆ. (ಜೀವಕ್ಕೆ ಅಮೃತತ್ವವು ಲಭಿಸಬೇಕಾದರೆ ಮಮತ್ವದ ನಾಶವಾಗಬೇಕು. ಮಮತ್ವದ ನಾಶವಾದರೆ ಜೀವಕ್ಕೆ ಅವಿನಾಶಿತ್ವವುಂಟಾಗುತ್ತದೆ. ಮಮತ್ವಬುದ್ಧಿಯಿಲ್ಲದವನು ಪ್ರಾಣಿಯೊಂದನ್ನು ಕೊಂದರೂ ಪ್ರಾಣಿಹಿಂಸೆಯ ಪಾಪದಿಂದ ಲಿಪ್ತನಾಗುವುದಿಲ್ಲ.)

ಲಬ್ಧ್ವಾಪಿ ಹಿ ಪೃಥಿವೀಂ ಕೃತ್ಸ್ನಾಂ ಸಹ ಸ್ಥಾವರಜಙ್ಗಮಾಮ್ ।
ಮಮತ್ವಂ ಯಸ್ಯ ನೈವ ಸ್ಯಾತ್ಕಿಂ ತಯಾ ನ ಕರಿಷ್ಯತಿ ॥೬॥

ಚರಾಚರಪ್ರಾಣಿಗಳಿಂದ ಯುಕ್ತವಾದ ಸಮಗ್ರವಾದ ಭೂಮಂಡಲವನ್ನು ಪಡೆದೂ ಅವನಿಗೆ ಮಮತ್ವವೇ ಇಲ್ಲದಿದ್ದರೆ–ಅವನು ಆ ಭೂಮಂಡಲದಿಂದ ಏನು ಮಾಡಬಲ್ಲನು? ಅಂತಹ ಅಪಾರವಾದ ಸಂಪತ್ತಿದ್ದರೂ ಅದರಿಂದ ಅವನಿಗೆ ಯಾವ ಅನರ್ಥವೂ ಆಗಲಾರದು. (ಸ್ವಭಾವಾನುಗುಣವಾಗಿ ಒಬ್ಬನು ಅಪಾರವಾದ ಐಶ್ವರ್ಯವನ್ನೇ ಸಂಪಾದಿಸಿರಬಹುದು. ಆದರೆ ಆ ಐಶ್ವರ್ಯವು 'ನನ್ನದಲ್ಲ' ಎಂಬ ಭಾವನೆಯು ಅವನಲ್ಲಿ ರೂಢಮೂಲವಾಗಿ ಬಿಟ್ಟರೆ ಆ ಐಶ್ವರ್ಯರಾಶಿಯನ್ನು ನೋಡಿ ಅವನು ಹಿಗ್ಗುವುದೂ ಇಲ್ಲ. ಕಾರಣಾಂತರಗಳಿಂದ ಐಶ್ವರ್ಯವೆಲ್ಲವೂ ನಷ್ಟವಾಗಿಹೋದರೆ ಕುಗ್ಗುವುದೂ ಇಲ್ಲ. ಆದುದರಿಂದ ಮನುಷ್ಯನ ಸುಖ-ದುಃಖಗಳಿಗೆ 'ನಾನು-ನನ್ನದು'-ಎಂಬ ಭಾವನೆಗಳೇ ಕಾರಣಗಳಾಗಿರುತ್ತವೆ.)

ಅಥವಾ ವಸತಃ ಪಾರ್ಥ ವನೇ ವನ್ಯೇನ ಜೀವತಃ ।
ಮಮತಾ ಯಸ್ಯ ದ್ರವ್ಯೇಷು ಮೃತ್ಯೋರಾಸ್ಯೇ ಸ ವರ್ತತೇ ॥೭॥

ಬಾಹ್ಯಾನ್ತರಾಣಾಂ ಶತ್ರೂಣಾಂ ಸ್ವಭಾವಂ ಪಶ್ಯ ಭಾರತ ।
ಯನ್ನ ಪಶ್ಯತಿ ತದ್ಭೂತಂ ಮುಚ್ಯತೇ ಸ ಮಹಾಭಯಾತ್ ॥೮॥

ಕಾಮಾತ್ಮಾನಂ ನ ಪ್ರಶಂಸನ್ತಿ ಲೋಕೇ
ನೇಹಾಕಾಮಾ ಕಾಚಿದಸ್ತಿ ಪ್ರವೃತ್ತಿಃ ।
ಸರ್ವೇ ಕಾಮಾ ಮನಸೋಽಙ್ಗಪ್ರಭೂತಾ
ಯಾನ್ಪಣ್ಡಿತಃ ಸಂಹರತೇ ವಿಚಿನ್ತ್ಯ ॥೯॥

ಯುಧಿಷ್ಠಿರ! ಅರಣ್ಯದಲ್ಲಿಯೇ ವಾಸಮಾಡುತ್ತಿದ್ದು, ಅರಣ್ಯದಲ್ಲಿ ಸಿಕ್ಕಿದ ಫಲ-ಮೂಲಾದಿಗಳನ್ನೇ ತಿಂದು ಜೀವಿಸುವ ಮನುಷ್ಯನಿಗೆ ದ್ರವ್ಯಗಳಲ್ಲಿ ಮಮತೆಯಿರುವುದಾದರೆ–ಅವನು ಮೃತ್ಯುವಿನ ಬಾಯಲ್ಲಿ ಇರುವನೆಂದೇ ಭಾವಿಸಬೇಕು. 'ನಾನು-ನನ್ನದು' ಎಂಬುದನ್ನು ಬಿಡದವನಿಗೆ, ನನ್ನದು–ಎಂಬ ಅಭಿಮಾನದಿಂದ ಬಾಹ್ಯದ್ರವ್ಯಗಳಲ್ಲಿಯೇ ಆಸಕ್ತನಾದವನಿಗೆ ಅರಣ್ಯವಾಸದಿಂದ ಯಾವ ಪ್ರಯೋಜನವೂ ಇಲ್ಲ. ಕೇವಲ ಅರಣ್ಯ

ವಾಸದಿಂದಾಗಲೀ, ಋಷಿಯೋಗ್ಯವಾದ ಗೆಡ್ಡೆ-ಗೆಣಸುಗಳನ್ನೇ ತಿನ್ನುವುದರಿಂದಾಗಲೀ ಅಮೃತತ್ವವು ಪ್ರಾಪ್ತವಾಗುವುದಿಲ್ಲ.ಅರಣ್ಯದಲ್ಲೇ ಇರಲಿ ನಗರದಲ್ಲೇ ಇರಲಿ, ನಾನು ನನ್ನದು ಎಂಬುದನ್ನು ಮನಸ್ಸಿನಿಂದ ಸಂಪೂರ್ಣವಾಗಿ ತೊಡೆದುಹಾಕಬೇಕು. ಮನಸ್ಸು ನಿರ್ವಿಷಯವಾಗಬೇಕು. ಆಗಲೇ ಅಮೃತತ್ವದ ಸಿದ್ಧಿಯಾಗುತ್ತದೆ.

ಭಾರತನೇ! ಹೊರಗಿನ ಮತ್ತು ಒಳಗಿನ ಶತ್ರುಗಳ ಸ್ವಭಾವವನ್ನು ನೋಡಿ ತಿಳಿದುಕೊ. ಪಂಚಭೂತಾತ್ಮಕವಾದ ಈ ಶರೀರವನ್ನು ಯಾವನು ಮಮತ್ವದೃಷ್ಟಿಯಿಂದ ಕಾಣುವುದಿಲ್ಲವೋ–ಅವನು ಸಂಸಾರವೆಂಬ ಮಹಾಭಯದಿಂದ ವಿಮುಕ್ತನಾಗುತ್ತಾನೆ. ಯಾವನು ಅಶಾಶ್ವತವಾದ ಮತ್ತು ಅಂಗಿಯಂತಿರುವ ಶರೀರವನ್ನು ನನ್ನದು ಎಂದು ಭಾವಿಸಿ ಭ್ರಾಂತನಾಗುವುದಿಲ್ಲವೋ–ಅವನಿಗೆ ಸಂಸಾರದ ಭಯವಿರುವುದಿಲ್ಲ. (ಸಂಸಾರದ ಉಗಮಸ್ಥಾನವೇ ನಾನು-ನನ್ನದು ಎಂಬ ಭಾವನೆ.)

ಯಾವನ ಮನಸ್ಸು ಕಾಮನೆಗಳಲ್ಲಿಯೇ ಆಸಕ್ತವಾಗಿರುವುದೋ–ಅವನನ್ನು ಜನರು ಪ್ರಶಂಸಿಸುವುದಿಲ್ಲ. ಆದರೆ ಅಕಾಮನೆಯಿಂದ ಯಾವ ವಿಧವಾದ ಪ್ರವೃತ್ತಿಗೂ ಅವಕಾಶವೇ ಇರುವುದಿಲ್ಲ. ಯಾವ ಕಾರ್ಯದಲ್ಲಿಯೂ ಪ್ರವೃತ್ತಿಯಿಲ್ಲದಿರುವುದೇ ಅಕಾಮನೆಯ ಅಥವಾ ನಿಷ್ಕಾಮದ ಪರಿಣಾಮವಾಗಿರುತ್ತದೆ. ಸಮಸ್ತಕಾಮನೆಗಳೂ ಮನಸ್ಸಿನಿಂದಲೇ ಪ್ರಕಟವಾಗುತ್ತವೆ. ಕಾಮನೆಗಳಿಗೆ ಮನಸ್ಸೇ ಉಗಮಸ್ಥಾನವಾಗಿದೆ. ಪಂಡಿತನಾದವನು ಕಾಮನೆಗಳೆಲ್ಲವೂ ದುಃಖಕ್ಕೆ ಕಾರಣಗಳಾಗುವುವೆಂದು ನಿಶ್ಚಯಿಸಿ ಅಂತಹ ಕಾಮನೆಗಳನ್ನು ಪರಿತ್ಯಾಗಮಾಡುತ್ತಾನೆ.

ಭೂಯೋ ಭೂಯೋ ಜನ್ಮನೋಽಭ್ಯಾಸಯೋಗಾ-
ದ್ಯೋಗೀ ಯೋಗಂ ಸಾರಮಾರ್ಗಂ ವಿಚಿನ್ತ್ಯ।
ದಾನಂ ಚ ವೇದಾಧ್ಯಯನಂ ತಪಶ್ಚ
ಕಾಮ್ಯಾನಿ ಕರ್ಮಾಣಿ ಚ ವೈದಿಕಾನಿ ॥೧೦॥
ವ್ರತಂ ಯಜ್ಞಾನ್ನಿಯಮಾನ್ಧ್ಯಾನಯೋಗಾ-
ನ್ಕಾಮೇನ ಯೋ ನಾರಭತೇ ವಿದಿತ್ವಾ ।

ಯದ್ಯಚ್ಚಾಯಂ ಕಾಮಯತೇ ಸ ಧರ್ಮೋ
ನ ಯೋ ಧರ್ಮೋ ನಿಯಮಸ್ತಸ್ಯ ಮೂಲಮ್ ॥೧೧॥

ಯೋಗಿಯಾದವನು ಅನೇಕ ಜನ್ಮಗಳ ಅಭ್ಯಾಸಬಲದಿಂದ ಆತ್ಮಸಾಕ್ಷಾತ್ಕಾರಕ್ಕೆ ಯೋಗಮಾರ್ಗವೇ ಸಾಧನವೆಂಬುದನ್ನು ನಿಶ್ಚಯಿಸಿ ದಾನ, ವೇದಾಧ್ಯಯನ, ತಪಸ್ಸು, ವೈದಿಕವಾದ ಕಾಮ್ಯಕರ್ಮಗಳು, ವ್ರತ, ಯಜ್ಞ ಗಳು, ನಿಯಮಾನುಷ್ಠಾನಗಳು, ಧ್ಯಾನಯೋಗಗಳು–ಇವುಗಳನ್ನು ಕಾಮನಾಪೂರ್ವಕವಾಗಿ ಅನುಷ್ಠಾನಮಾಡುವುದಿಲ್ಲ. ಕರ್ಮಗಳಿಂದ ಮನುಷ್ಯನು ಕಾಮನೆಗಳನ್ನು ಅಪೇಕ್ಷಿಸುವುದು ಧರ್ಮವಲ್ಲ. ಕಾಮನೆಗಳನ್ನು ನಿಗ್ರಹಿಸುವುದೇ ಧರ್ಮವಾಗಿರುತ್ತದೆ. ಅದೇ ಮೋಕ್ಷಕ್ಕೆ ಬೀಜರೂಪವೂ ಆಗಿರುತ್ತದೆ.

ಯುಧಿಷ್ಠಿರ! ಈ ವಿಷಯದಲ್ಲಿ ಹಿಂದಿನ ವೃತ್ತಾಂತವನ್ನು ತಿಳಿದಿರುವ ವಿದ್ವಾಂಸರು ಕೆಲವು ಶ್ಲೋಕಗಳನ್ನು ಹೇಳುತ್ತಾರೆ. ಆ ಶ್ಲೋಕಗಳು ಕಾಮವೇ ಹೇಳಿರುವ ಗೀತೆಗಳಾಗಿವೆ. ಕಾಮವು ಹೇಳಿರುವ ಆ ಎಲ್ಲ ಶ್ಲೋಕಗಳನ್ನೂ ಸಂಕೀರ್ತನಮಾಡುವೆನು. ಏಕಾಗ್ರಚಿತ್ತನಾಗಿ ಕೇಳು.

ಕಾಮಗೀತೇ

ನಾಹಂ ಶಕ್ಯೋಽನುಪಾಯೇನ ಹನ್ತುಂ ಭೂತೇನ ಕೇನಚಿತ್ ।
ಯೋ ಮಾಂ ಪ್ರಯತತೇ ಹನ್ತುಂ ಜ್ಞಾತ್ವಾ ಪ್ರಹರಣೇ ಬಲಮ್ ।
ತಸ್ಯ ತಸ್ಮಿನ್ಪ್ರಹರಣೇ ಪುನಃ ಪ್ರಾದುರ್ಭವಾಮ್ಯಹಮ್ ॥೧೩॥

ಕಾಮವು ಹೇಳುತ್ತದೆ:

“ಯಾವುದೇ ಪ್ರಾಣಿಯಾಗಲೀ ನಿರ್ಮಮತೆ, ಯೋಗಾಭ್ಯಾಸ– ಇವೇ ಮೊದಲಾದ ಉಪಾಯಗಳನ್ನು ಆಶ್ರಯಿಸದೇ ನನ್ನನ್ನು ಸಂಹರಿಸಲು ಸಮರ್ಥವಾಗುವುದಿಲ್ಲ. ಯಾವನಾದರೂ ಒಬ್ಬ ಮನುಷ್ಯನು ತಾನು ಅಸ್ತ್ರಪ್ರಹಾರದಲ್ಲಿ ಕುಶಲನೆಂದು ಭಾವಿಸಿಕೊಂಡು ನನ್ನನ್ನು ಸಂಹರಿಸಲು ಪ್ರಯತ್ನಿಸಿದರೆ ನಾನು ಆ ಆಯುಧದಲ್ಲಿಯೇ ಪುನಃ ಹುಟ್ಟಿಕೊಳ್ಳುತ್ತೇನೆ. (‘ನಾನು ಕಾಮನನ್ನು ಪ್ರಹರಿಸುತ್ತೇನೆ; ನಾನು ಕಾಮನನ್ನು ವಿನಾಶಗೊಳಿಸುತ್ತೇನೆ’–ಎಂಬ ಆತ್ಮಾಭಿಮಾನವೇ ನನ್ನ ಪ್ರಾದುರ್ಭಾವಕ್ಕೆ ಒಳ್ಳೆಯ ಸ್ಥಾನವಾಗುತ್ತದೆ.)

ಯೋ ಮಾಂ ಪ್ರಯತತೇ ಹನ್ತುಂ ಯಜ್ಞೈರ್ವಿವಿಧದಕ್ಷಿಣೈಃ ।
ಜಙ್ಗಮೇಷ್ವಿವ ಧರ್ಮಾತ್ಮಾ ಪುನಃ ಪ್ರಾದುರ್ಭವಾಮ್ಯಹಮ್॥



ವಿಧ-ವಿಧವಾದ ದಕ್ಷಿಣೆಗಳನ್ನೊಳಗೊಂಡ ಯಜ್ಞಗಳ ಮೂಲಕವಾಗಿ ಯಾವನು ನನ್ನನ್ನು ಸಂಹರಿಸಲು ಪ್ರಯತ್ನಿಸುವನೋ–ಅಂತಹವನಲ್ಲಿಯೂ ನಾನು ಜಂಗಮಯೋನಿಗಳಲ್ಲಿ ಧರ್ಮಾತ್ಮನು ಹುಟ್ಟುವಂತೆ ಪ್ರಾದುರ್ಭವಿಸುತ್ತೇನೆ. (ದಂಭವೆಂಬ ಅಭಿಮಾನರೂಪದಲ್ಲಿ ಹುಟ್ಟಿಕೊಳ್ಳುತ್ತೇನೆ.)

ಯೋ ಮಾಂ ಪ್ರಯತತೇ ನಿತ್ಯಂ ವೇದೈರ್ವೇದಾನ್ತಸಾಧನೈಃ ।
ಸ್ಥಾವರೇಷ್ವಿವ ಭೂತಾತ್ಮಾ ತಸ್ಯ ಪ್ರಾದುರ್ಭವಾಮ್ಯಹಮ್ ॥೧೫॥

ಯಾರು ವೇದ ಮತ್ತು ವೇದಾಂತಗಳ ಅಧ್ಯಯನರೂಪವಾದ ಸಾಧನೆಗಳ ಮೂಲಕವಾಗಿ ನನ್ನನ್ನು ಕ್ಷೀಣಗೊಳಿಸಲು ಪ್ರಯತ್ನಿಸುವರೋ–ಅವರಲ್ಲಿಯೂ ನಾನು ಸ್ಥಾವರಪ್ರಾಣಿಗಳಲ್ಲಿ ಜೀವಾತ್ಮನಿರುವಂತೆ ಪ್ರಕಟವಾಗುತ್ತೇನೆ. (ವೇದ-ವೇದಾಂತಪಂಡಿತರಲ್ಲಿಯೂ ಸ್ಥಾವರದಲ್ಲಿರುವ ಜೀವಾತ್ಮನಂತೆ ಅಲ್ಪವಾಗಿಯೇ ಆದರೂ ಕಾಮನೆಯೆಂಬುದು ಇದ್ದೇ ಇರುತ್ತದೆ.)

ಯೋ ಮಾಂ ಪ್ರಯತತೇ ಹನ್ತುಂ ಧೃತ್ಯಾ ಸತ್ಯಪರಾಕ್ರಮಃ ।
ಭಾವೋ ಭವಾಮಿ ತಸ್ಯಾಹಂ ಸ ಚ ಮಾಂ ನಾವಬುಧ್ಯತೇ ॥೧೬॥

ಯಾವನು ಸತ್ಯಪರಾಕ್ರಮನಾಗಿ (ಸತ್ಯನಿಷ್ಠನಾಗಿ) ಧೈರ್ಯದಿಂದ ನನ್ನನ್ನು ವಿನಾಶಗೊಳಿಸಲು ಪ್ರಯತ್ನಿಸುವನೋ–ಅಂತಹವನ ಮಾನಸಿಕಭಾವನೆಗಳೊಡನೆಯೇ ನಾನು ಸೇರಿಕೊಂಡುಬಿಟ್ಟಿರುತ್ತೇನೆ. ಆದರೆ ನಾನು ಅವನ ಮನಸ್ಸಿನ ಭಾವನೆಗಳಲ್ಲಿಯೇ ಅಂತರ್ಗತನಾಗಿರುವೆನೆಂಬ ವಿಷಯವನ್ನು ಅವನು ತಿಳಿಯುವುದಿಲ್ಲ.

ಯೋ ಮಾಂ ಪ್ರಯತತೇ ಹನ್ತುಂ ತಪಸಾ ಸಂಶ್ರಿತವ್ರತಃ ।
ತತಸ್ತಪಸಿ ತಸ್ಯಾಥ ಪುನಃ ಪ್ರಾದುರ್ಭವಾಮ್ಯಹಮ್ ॥೧೭॥

ಕಠೋರವ್ರತನಿಷ್ಠನಾದ ಯಾವನು ನನ್ನನ್ನು ತಪಸ್ಸಿನಿಂದ ವಿನಾಶಗೊಳಿಸಲು ಪ್ರಯತ್ನಿಸುವನೋ–ಅಂತಹವನ ತಪಸ್ಸಿನಲ್ಲಿಯೇ ನಾನು ಪ್ರಕಟವಾಗುತ್ತೇನೆ.

ಯೋ ಮಾಂ ಪ್ರಯತತೇ ಹನ್ತುಂ ಮೋಕ್ಷಮಾಸ್ಥಾಯ ಪಣ್ಡಿತಃ ।
ತಸ್ಯ ಮೋಕ್ಷರತಿಸ್ಥಸ್ಯ ನೃತ್ಯಾಮಿ ಚ ಹಸಾಮಿ ಚ ।
ಅವಧ್ಯಃ ಸರ್ವಭೂತಾನಾಮಹಮೇಕಃ ಸನಾತನಃ ॥೧೮॥

ಯಾವ ವಿದ್ವಾಂಸನು ಮೋಕ್ಷವನ್ನಾಶ್ರಯಿಸಿ ನನ್ನನ್ನು ಸಂಹರಿಸಲು ಇಚ್ಛಿಸುವನೋ–ಮೋಕ್ಷದಲ್ಲಿಯೇ ಆಸಕ್ತನಾಗಿರುವ ಅವನಲ್ಲಿಯೂ ನಾನು ಸೇರಿಕೊಂಡು ನರ್ತನಮಾಡುತ್ತೇನೆ ಮತ್ತು ನಗುತ್ತೇನೆ. ಎಲ್ಲ ಪ್ರಾಣಿಗಳಲ್ಲಿಯೂ ಅವಧ್ಯನೂ ಸರ್ವಕಾಲದಲ್ಲಿಯೂ ಇರುವವನೂ ನಾನೊಬ್ಬನೇ."

(ಮೋಕ್ಷವೆಂಬುದೂ ಒಂದು ಕಾಮನೆಯೇ ಸರಿ. ಕಾಮನೆಯಿಲ್ಲದಿದ್ದರೆ ಅಥವಾ ಮೋಕ್ಷದಲ್ಲಿ ಆಸಕ್ತಿಯಿಲ್ಲದಿದ್ದರೆ ಅವನಿಗೆ ಮುಕ್ತಿಯು

ಲಭಿಸುವುದಿಲ್ಲ. ಆದುದರಿಂದ ಕಾಮನೆಯೆಂಬುದು ಎಲ್ಲರಲ್ಲಿಯೂ ಯಾವುದಾದರೂ ಒಂದು ರೂಪದಲ್ಲಿ ಇದ್ದೇ ಇರುತ್ತದೆ.)

ತಸ್ಮಾತ್ತ್ವಮಪಿ ತಂ ಕಾಮಂ ಯಜ್ಞೈರ್ವಿವಿಧದಕ್ಷಿಣೈಃ ।
ಧರ್ಮೇ ಕುರು ಮಹಾರಾಜ ತತ್ರ ತೇ ಸ ಭವಿಷ್ಯತಿ ॥೧೯॥

ಯುಧಿಷ್ಠಿರ! ನೀನು ಕೂಡ ವಿಧ-ವಿಧವಾದ ದಕ್ಷಿಣೆಗಳನ್ನೊಳಗೊಂಡ ಯಜ್ಞಗಳಿಂದ ಸಮಸ್ತರಲ್ಲಿಯೂ ಇರುವ ಆ ಕಾಮನೆಯನ್ನು ಧರ್ಮದಲ್ಲಿರುವಂತೆ ಮಾಡು. ಧರ್ಮಮೂಲವಾದ ಆ ಕಾಮನೆಯು ನಿನಗೆ ಫಲದಾಯಕವಾಗುತ್ತದೆ.

ಯಜಸ್ವ ವಾಜಿಮೇಧೇನ ವಿಧಿವದ್ದಕ್ಷಿಣಾವತಾ ।
ಅನ್ಯೈಶ್ಚ ವಿವಿಧೈರ್ಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ ॥೨೦॥

ಮಾ ತೇ ವ್ಯಥಾಸ್ತು ನಿಹತಾನ್ಬಂಧೂನ್ವೀಕ್ಷ್ಯ ಪುನಃ ಪುನಃ ।
ನ ಶಕ್ಯಾಸ್ತೇ ಪುನರ್ದ್ರಷ್ಟುಂ ಯೇ ಹತಾಸ್ಮಿನ್ರಣಾಜಿರೇ ॥೨೧॥

ದಕ್ಷಿಣಾಯುಕ್ತವಾದ ಅಶ್ವಮೇಧಯಜ್ಞವನ್ನು ವಿಧಿವತ್ತಾಗಿ ಮಾಡು. ಸಮೃದ್ಧವಾದ ಮತ್ತು ಪರ್ಯಾಪ್ತವಾದ ದಕ್ಷಿಣೆಗಳಿಂದ ಕೂಡಿದ ಬೇರೆ-ಬೇರೆಯ ವಿಧ-ವಿಧವಾದ ಯಜ್ಞಗಳಿಂದ ದೇವತೆಗಳನ್ನು ತೃಪ್ತಿಗೊಳಿಸು. ಯುದ್ಧದಲ್ಲಿ ಅಸುನೀಗಿದ ಬಂಧುಗಳ ವಿಷಯವಾಗಿ ನೀನು ಪುನಃ ಪುನಃ ದುಃಖಿಸುತ್ತಿರಬೇಡ. ನೀನೆಷ್ಟೇ ದುಃಖಿಸಿದರೂ ಈ ರಣರಂಗದಲ್ಲಿ ಹತರಾಗಿರುವವರನ್ನು ಪುನಃ ನೋಡಲು ಶಕ್ಯವಿಲ್ಲ.

ಸ ತ್ವಮಿಷ್ಟ್ವಾ ಮಹಾಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ ।
ಕೀರ್ತಿಂ ಲೋಕೇ ಪರಾಂ ಪ್ರಾಪ್ಯ ಗತಿಮಗ್ರ್ಯಾಂ ಗಮಿಷ್ಯಸಿ ॥೨೨॥

ಸಮೃದ್ಧವಾದ ಮತ್ತು ಪರ್ಯಾಪ್ತವಾದ ದಕ್ಷಿಣೆಗಳಿಂದ ಕೂಡಿದ ಮಹಾಯಜ್ಞಗಳಿಂದ ನೀನು ದೇವತೆಗಳನ್ನು ಆರಾಧಿಸುವುದರಿಂದ ಈ ಲೋಕದಲ್ಲಿ ಅಪಾರವಾದ ಕೀರ್ತಿಯನ್ನು ಗಳಿಸುವೆಯಲ್ಲದೇ ಪರಲೋಕದಲ್ಲಿ ಶ್ರೇಷ್ಠವಾದ ಸದ್ಗತಿಯನ್ನೂ ಪಡೆಯುವೆ."

೧೩ನೆಯ ಅಧ್ಯಾಯವು ಮುಗಿಯಿತು.

೧೪ನೆಯ ಅಧ್ಯಾಯ ಆಶ್ವಮೇಧಪರ್ವ (ಮುಂದುವರಿದಿದೆ.)

ಋಷಿಗಳ ಅಂತರ್ಧಾನ: ಭೀಷ್ಮನೇ ಮೊದಲಾದವರ ಶ್ರಾದ್ಧಕ್ರಿಯೆಗಳನ್ನು ಮುಗಿಸಿ ಯುಧಿಷ್ಠಿರಾದಿಗಳ ಹಸ್ತಿನಾಪುರಪ್ರವೇಶ

ವೈಶಂಪಾಯನರು ಹೇಳುತ್ತಾರೆ:

ಏವಂ ಬಹುವಿಧೈರ್ವಾಕ್ಯೈರ್ಮುನಿಭಿಸ್ತೈಸ್ತಪೋಧನೈಃ ।
ಸಮಾಶ್ವಸ್ಯತ ರಾಜರ್ಷಿರ್ಹತಬನ್ಧುರ್ಯುಧಿಷ್ಠಿರಃ ॥೧॥

"ಪಾರಿಕ್ಷಿತ! ಹೀಗೆ ತಪೋಧನರಾದ ಮಹರ್ಷಿಗಳು ನಾನಾಪ್ರಕಾರವಾದ ಮಾತುಗಳಿಂದ ರಾಜರ್ಷಿಯಾದ, ಬಂಧುಗಳನ್ನು ಯುದ್ಧದಲ್ಲಿ ಕಳೆದುಕೊಂಡಿದ್ದ ಯುಧಿಷ್ಠಿರನನ್ನು ಸಂತೈಸಿದರು.

ವ್ಯಾಸರು, ಶ್ರೀಕೃಷ್ಣ, ದೇವಸ್ಥಾನರು, ನಾರದರು, ಭೀಮಸೇನ, ನಕುಲ, ದ್ರೌಪದೀ, ಸಹದೇವ, ಬುದ್ಧಿವಂತನಾದ ಅರ್ಜುನ, ಇತರ ಅನೇಕ ಶ್ರೇಷ್ಠಪುರುಷರು, ಶಾಸ್ತ್ರದೃಷ್ಟಿಯುಳ್ಳ ಬ್ರಾಹ್ಮಣರು–ಇವರೆಲ್ಲರ ಆಪ್ತವಾಕ್ಯಗಳಿಂದ ಸಾಂತ್ವನಗೊಳಿಸಲ್ಪಟ್ಟ ಯುಧಿಷ್ಠಿರನು ಬಂಧುವಿನಾಶ ಶೋಕದಿಂದ ಉಂಟಾದ ದುಃಖವನ್ನೂ ಮಾನಸಿಕವಾದ ಸಂತಾಪವನ್ನೂ ತೊರೆದನು. ಬಳಿಕ ಯುಧಿಷ್ಠಿರನು ದೇವತೆಗಳನ್ನೂ ಬ್ರಾಹ್ಮಣರನ್ನೂ ಪೂಜಿಸಿದನು. ಧರ್ಮಾತ್ಮನಾದ ಆ ಯುಧಿಷ್ಠಿರನು ಬಂಧುಗಳ ಪ್ರೇತ ಕಾರ್ಯಗಳನ್ನು ಯಥಾವಿಧಿಯಾಗಿ ಮಾಡಿ ಸಮುದ್ರಪರ್ಯಂತವಾದ ಪೃಥ್ವಿಯನ್ನು ಆಳತೊಡಗಿದನು. ಕುರುವಂಶದ ನರೇಶನಾದ ಯುಧಿಷ್ಠಿರನು ಸ್ವರಾಜ್ಯವನ್ನು ಪಡೆದುಕೊಂಡು ಪ್ರಶಾಂತವಾದ ಮನಸ್ಸಿನಿಂದ ಕೂಡಿದವನಾಗಿ ವ್ಯಾಸರನ್ನೂ, ನಾರದರನ್ನೂ ಮತ್ತು ಅಲ್ಲಿ ಉಪಸ್ಥಿತರಾಗಿದ್ದ ಇತರ ಋಷಿ-ಮುನಿಗಳನ್ನೂ ಕುರಿತು ಹೇಳಿದನು.

"ಮಹಾನುಭಾವರೇ! ಮುನಿಶ್ರೇಷ್ಠರಾದ ಮತ್ತು ಜ್ಞಾನವೃದ್ಧರಾದ ನೀವು ನನ್ನನ್ನು ಸಾಂತ್ವನಗೊಳಿಸಿರುವಿರಿ. ಈಗ ನನ್ನ ಮನಸ್ಸಿನಲ್ಲಿ ಸೂಕ್ಷ್ಮಾತಿ ಸೂಕ್ಷ್ಮವಾದ (ಅಣುವಿನಷ್ಟು) ದುಃಖವೂ ಉಳಿದಿಲ್ಲ. ನಿಮ್ಮ ಮಾತಿನಂತೆ ಹಿಮವತ್ಪರ್ವತದ ತಪ್ಪಲಿನಲ್ಲಿ ಅಪಾರವಾದ ಐಶ್ವರ್ಯವು ಲಭ್ಯವಾಗಲಿದೆ.

ಆ ಐಶ್ವರ್ಯದಿಂದ ನಾನು ದೇವತೆಗಳನ್ನು ಆರಾಧಿಸುತ್ತೇನೆ. ನಿಮ್ಮೆಲ್ಲರನ್ನೂ ಮುಂದೆಮಾಡಿಕೊಂಡು ಹಿಮವತ್ಪರ್ವತದ ತಪ್ಪಲಿಗೆ ಹೋಗಲು ನಿಶ್ಚಯಿಸಿದ್ದೇನೆ. ನಾವೆಲ್ಲರೂ ಸೇರಿ ಆ ಮಹೈಶ್ವರ್ಯವನ್ನು ಯಜ್ಞಶಾಲೆಗೆ ತೆಗೆದುಕೊಂಡು ಬರೋಣ.

ದ್ವಿಜಶ್ರೇಷ್ಠರೇ! ಪಿತಾಮಹರೇ! ನಿಮ್ಮಿಂದ ರಕ್ಷಿಸಲ್ಪಟ್ಟವರಾಗಿ ನಾವೆಲ್ಲರೂ ಹಿಮವತ್ಪರ್ವತಕ್ಕೆ ಹೋಗೋಣ. ಆ ಪ್ರದೇಶವು ಅನೇಕವಿಧವಾದ ಆಶ್ಚರ್ಯಜನಕವಾದ ದೃಶ್ಯಗಳಿಂದ ಕೂಡಿರುವುದೆಂದು ನಾವು ಕೇಳಿದ್ದೇವೆ. ಪೂಜ್ಯರಾದ ನೀವೂ, ದೇವರ್ಷಿಗಳಾದ ನಾರದರೂ, ಮುನಿಶ್ರೇಷ್ಠರಾದ ದೇವಸ್ಥಾನರೂ ಅದ್ಭುತವಾದ ಮತ್ತು ಕಲ್ಯಾಣಕರವಾದ ಅನೇಕಮಾತನ್ನು ಹೇಳಿರುವಿರಿ.

ನಾಭಾಗಧೇಯಃ ಪುರುಷಃ ಕಶ್ಚಿದೇವಂವಿಧಾನ್ಗುರೂನ್ ।
ಲಭತೇ ವ್ಯಸನಂ ಪ್ರಾಪ್ಯ ಸುಹೃದಃ ಸಾಧುಸಮ್ಮತಾನ್ ॥೧೧॥

ಸೌಭಾಗ್ಯಶಾಲಿಯಲ್ಲದ ಯಾವ ಪುರುಷನೂ ಕಷ್ಟಸಮಯದಲ್ಲಿ ಇಂತಹ ಸಾಧುಸಮ್ಮತರಾದ, ಹಿತೈಷಿಗಳಾದ ಗುರುಗಳನ್ನು ಪಡೆದುಕೊಳ್ಳಲಾರನು.”

ಜನಮೇಜಯ! ಧರ್ಮರಾಜನು ಹೀಗೆ ಹೇಳಿದನಂತರ ಎಲ್ಲ ಮಹರ್ಷಿಗಳೂ ಯುಧಿಷ್ಠಿರನಿಂದಲೂ ಮತ್ತು ಕೃಷ್ಣಾರ್ಜುನರಿಂದಲೂ ಅನುಮತಿಯನ್ನು ಪಡೆದು ಎಲ್ಲರೂ ನೋಡುತ್ತಿರುವಂತೆಯೇ ಅದೃಶ್ಯ ರಾದರು. ಋಷಿಗಳು ಅದೃಶ್ಯರಾದನಂತರವೂ ಪ್ರಭುವಾದ ಧರ್ಮರಾಜನು ಅಲ್ಲಿಯೇ ಕುಳಿತಿದ್ದನು. ಭೀಷ್ಮನ ಅವಸಾನವಾದನಂತರ ಅವನ ಶೌಚ (ಅಪರ) ಕಾರ್ಯಗಳನ್ನು ಮಾಡುವುದರಲ್ಲಿ ಪಾಂಡವರು ಸ್ವಲ್ಪಕಾಲವನ್ನು ಕಳೆದರು. ಧೃತರಾಷ್ಟ್ರಸಹಿತನಾದ ಯುಧಿಷ್ಠಿರನು ಭೀಷ್ಮ-ಕರ್ಣರೇ ಮೊದ ಲಾದ ಕುರುಶ್ರೇಷ್ಠರಿಗೆ ಔರ್ಧ್ವದೈಹಿಕಕ್ರಿಯೆಗಳನ್ನು ಮುಗಿಸಿ ಬ್ರಾಹ್ಮಣರಿಗೆ ಮಹಾದಾನಗಳನ್ನು ಮಾಡಿದನು. ಪಾಂಡವಶ್ರೇಷ್ಠನಾದ ಆ ಯುಧಿಷ್ಠಿರನು ಮಹಾದಾನಗಳ ಮೂಲಕವಾಗಿ ಬ್ರಾಹ್ಮಣರಿಗೆ ಅಪಾರವಾದ ಧನವನ್ನು ಕೊಟ್ಟು ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ಹಸ್ತಿನಾಪಟ್ಟಣವನ್ನು ಪ್ರವೇಶಿಸಿದನು. ಧರ್ಮಾತ್ಮನಾದ ಯುಧಿಷ್ಠಿರನು ಪ್ರಜ್ಞಾಚಕ್ಷುವಾದ,

ಪ್ರಭುವಾದ ಮತ್ತು ತಂದೆಯಾದ ಧೃತರಾಷ್ಟ್ರನನ್ನು ಸಮಾಧಾನಗೊಳಿಸುತ್ತಾ ಅನುಜರೊಡನೆ ಧರ್ಮದಿಂದ ರಾಜ್ಯವನ್ನು ಆಳತೊಡಗಿದನು."

೧೪ನೆಯ ಅಧ್ಯಾಯವು ಮುಗಿಯಿತು.

೧೫ನೆಯ ಅಧ್ಯಾಯ ಅಶ್ವಮೇಧಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನು ಅರ್ಜುನನೊಡನೆ ದ್ವಾರಕೆಗೆ ಹೋಗುವ ವಿಷಯವನ್ನು ಪ್ರಸ್ತಾಪಿಸಿದುದು

ಜನಮೇಜಯನು ಹೇಳುತ್ತಾನೆ:

ವಿಜಿತೇ ಪಾಣ್ಡವೇಯೈಸ್ತು ಪ್ರಶಾನ್ತೇ ಚ ದ್ವಿಜೋತ್ತಮ ।
ರಾಷ್ಟ್ರೇ ಕಿಂ ಚಕ್ರತುರ್ವೀರೌ ವಾಸುದೇವಧನಂಜಯೌ ॥೧॥

"ದ್ವಿಜಶ್ರೇಷ್ಠರೇ! ಪಾಂಡವರು ವಿಜಯಗಳಿಸಿದನಂತರ, ರಾಷ್ಟ್ರದಲ್ಲಿ ಸರ್ವತ್ರ ಪ್ರಶಾಂತವಾದ ವಾತಾವರಣವು ಮೂಡಿದಬಳಿಕ ಶ್ರೀಕೃಷ್ಣ-ಧನಂಜಯರು ಏನು ಮಾಡಿದರೆಂಬ ವಿಷಯವನ್ನು ಹೇಳಿರಿ."

ವೈಶಂಪಾಯನರು ಹೇಳುತ್ತಾರೆ:

"ಪ್ರಜಾನಾಥನೇ! ಪಾಂಡವರು ವಿಜಯಶಾಲಿಗಳಾಗಲಾಗಿ, ರಾಷ್ಟ್ರದಲ್ಲಿ ಸರ್ವತ್ರ ಪ್ರಶಾಂತವಾದ ವಾತಾವರಣವು ಮೂಡಿಬರಲಾಗಿ ವಾಸುದೇವ-ಧನಂಜಯರು ಪರಮಹೃಷ್ಟರಾಗಿದ್ದರು. ಸ್ವರ್ಗಲೋಕದಲ್ಲಿ ವಿಹರಿಸುವ ಇಬ್ಬರು ದೇವೇಶ್ವರರಂತೆ ವಿಜಯ-ಕೃಷ್ಣರು ಸಂತೋಷ ಭರಿತರಾಗಿ ವಿಚಿತ್ರವಾದ ಅರಣ್ಯಗಳಲ್ಲಿಯೂ, ಪರ್ವತಗಳ ಸುರಮ್ಯವಾದ ಶಿಖರಗಳಲ್ಲಿಯೂ ಸಂಚರಿಸುತ್ತಿದ್ದರು. ಪವಿತ್ರವಾದ ತೀರ್ಥಗಳಲ್ಲಿಯೂ, ನದೀತೀರಗಳಲ್ಲಿಯೂ ಸಂಚರಿಸುತ್ತಾ ನಂದನವನದಲ್ಲಿ ವಿಹರಿಸುವ ಅಶ್ವಿನೀದೇವತೆಗಳಂತೆ ಆನಂದತುಂದಿಲರಾಗಿರುತ್ತಿದ್ದರು. ಮಹಾತ್ಮರಾದ ಕೃಷ್ಣಾರ್ಜುನರು ಪಾಂಡವರ ಹಿಂದಿನ ರಾಜಧಾನಿಯಾಗಿದ್ದ ಇಂದ್ರಪ್ರಸ್ಥಕ್ಕೆ ಹೋಗಿ ಮಯನಿಂದ ನಿರ್ಮಿಸಲ್ಪಟ್ಟಿದ್ದ ರಮ್ಯವಾದ ಸಭಾಭವನವನ್ನು ಪ್ರವೇಶಿಸಿ ವಿನೋದವಾಗಿ ಮಾತುಗಳನ್ನಾಡುತ್ತಾ ಕಾಲಕಳೆಯುತ್ತಿದ್ದರು. ಮಹಾತ್ಮರಾದ ಕೃಷ್ಣಾರ್ಜುನರು ಪುರಾತನಮುನಿಶ್ರೇಷ್ಠರಾದ ನರ-ನಾರಾಯಣರೇ ಆಗಿದ್ದರು. ಅವರಿಬ್ಬರೂ ಪರಸ್ಪರವಾಗಿ ಪ್ರೀತಿಯುಳ್ಳವರಾಗಿದ್ದರು.

ಮಯನಿರ್ಮಿತವಾದ ಸಭಾಭವನದಲ್ಲಿ ಕುಳಿತು ಚಿತ್ರ-ವಿಚಿತ್ರವಾದ ಯುದ್ಧಗಳ ಕಥೆಗಳನ್ನೂ, ಆ ಸಮಯದಲ್ಲಿ ತಾವೂ ಮತ್ತು ತಮ್ಮ ಅನುಯಾಯಿಗಳೂ ಅನುಭವಿಸಿದ ಕ್ಲೇಶಗಳನ್ನೂ, ಋಷಿಗಳ ಮತ್ತು ದೇವತೆಗಳ ವಂಶಗಳ ವಿಚಾರಗಳನ್ನೂ, ಪ್ರತಿಯೊಂದು ಕಥಾಪ್ರಸಂಗ ಗಳಲ್ಲಿಯೂ ಪರಸ್ಪರವಾಗಿ ಹೇಳಿಕೊಳ್ಳುತ್ತಿದ್ದರು. ಸಕಲವಿಧವಾದ ಸಿದ್ಧಾಂತ ಗಳನ್ನೂ ತಿಳಿದಿದ್ದ ಶ್ರೀಕೃಷ್ಣನು ಅರ್ಜುನನಿಗೆ ವಿಚಿತ್ರವಾದ ಪದಗಳಿಂದಲೂ ಅರ್ಥ ಮತ್ತು ಸಿದ್ಧಾಂತಗಳಿಂದಲೂ ಯುಕ್ತವಾದ ಮಧುರವಾದ ಅನೇಕ ಕಥೆಗಳನ್ನು ಹೇಳುತ್ತಿದ್ದನು.

ವಸುದೇವನ ಮಗನಾದ ಶ್ರೀಕೃಷ್ಣನು ಪುತ್ರಶೋಕದಿಂದಲೂ ಸಾವಿರಾರು ಜ್ಞಾತಿ-ಬಾಂಧವರ ಮರಣದಿಂದಲೂ ಪರಿತಪಿಸುತ್ತಿದ್ದ ಅರ್ಜುನನನ್ನು ಅನೇಕ ಪ್ರಕಾರವಾದ ವಿಚಿತ್ರವಾದ ಮತ್ತು ಅದ್ಭುತವಾದ ಕಥೆಗಳಿಂದ ಸಮಾಧಾನಗೊಳಿಸಿದನು. ಮಹಾತಪಸ್ವಿಯಾದ, ಜ್ಞಾನ-ವಿಜ್ಞಾನಗಳನ್ನು ತಿಳಿದಿದ್ದ, ಸಾತ್ವತಶ್ರೇಷ್ಠನಾದ ಶ್ರೀಕೃಷ್ಣನು ವಿಧಿವತ್ತಾಗಿ (ಶಾಸ್ತ್ರವಾಕ್ಯಗಳನ್ನು ಅಡಿಗಡಿಗೂ ನಿರೂಪಿಸುತ್ತಾ) ಅರ್ಜುನನನ್ನು ಸಮಾಧಾನ ಗೊಳಿಸಿ ಮನಸ್ಸಿನ ಭಾರವನ್ನು ಕಳೆದುಕೊಂಡು ವಿಶ್ರಮಿಸಿಕೊಳ್ಳುತ್ತಿರುವನೋ ಎಂಬಂತೆ ಕಾಣುತ್ತಿದ್ದನು. ಮಾತಿನ ಕಡೆಯಲ್ಲಿ ಗೋವಿಂದನು ಅರ್ಜುನನಿಗೆ ಸಾಂತ್ವನಯುಕ್ತವಾದ ಮತ್ತು ಸುಮಧುರವಾದ ವಾಕ್ಯದಿಂದ ಕೂಡಿದ ಯುಕ್ತಿಯುಕ್ತವಾದ ಈ ಮಾತನ್ನು ಹೇಳಿದನು:

"ಶತ್ರುಗಳಿಗೆ ತಾಪವನ್ನುಂಟುಮಾಡುವವನೇ! ಸವ್ಯಸಾಚಿಯೇ! ನಿನ್ನ ಬಾಹುಬಲವನ್ನಾಶ್ರಯಿಸಿ ಯಮಧರ್ಮನ ಮಗನಾದ ಯುಧಿಷ್ಠಿರನು ಸಮಗ್ರವಾದ ಈ ಭೂಮಂಡಲವನ್ನೂ ಜಯಿಸಿದ್ದಾನೆ. ಭೀಮಸೇನನ ಮತ್ತು ನಕುಲ-ಸಹದೇವರ ಪ್ರಭಾವದಿಂದ ಧರ್ಮರಾಜನಾದ ಯುಧಿಷ್ಠಿರನು ನಿಷ್ಕಂಟಕವಾದ ಈ ಭೂಮಂಡಲವನ್ನು ಉಪಭೋಗಿಸುತ್ತಾನೆ. ನಿಷ್ಕಟಂಕ ವಾದ ಈ ರಾಜ್ಯವು ಧರ್ಮಜನಿಗೆ ಧರ್ಮದ ಬಲದಿಂದಲೇ ಬಂದಿದೆ. ದುರ್ಯೋಧನರಾಜನೂ ಯುದ್ಧದಲ್ಲಿ ಧರ್ಮ ದಿಂದಲೇ ಕೊಲ್ಲಲ್ಪಟ್ಟಿದ್ದಾನೆ.

ಅಧರ್ಮರುಚಯೋ ಲುಬ್ಧಾಃ ಸದಾ ಚಾಪ್ರಿಯವಾದಿನಃ ।
ಧಾರ್ತರಾಷ್ಟ್ರಾ ದುರಾತ್ಮಾನಃ ಸಾನುಬನ್ಧಾ ನಿಪಾತಿತಾಃ ॥೧೫॥

ಧೃತರಾಷ್ಟ್ರನ ಮಕ್ಕಳು ಅಧರ್ಮದಲ್ಲಿಯೇ ಆಸಕ್ತಿಯುಳ್ಳವರಾಗಿದ್ದರು. ಕೃಪಣರಾಗಿದ್ದರು. ಯಾವಾಗಲೂ ಅಪ್ರಿಯವಾದುದನ್ನೇ ಹೇಳುತ್ತಿದ್ದರು. ಅಂತಹ ದುರಾತ್ಮರಾದ ಧೃತರಾಷ್ಟ್ರನ ಮಕ್ಕಳು ಬಂಧುಗಳ ಸಮೇತರಾಗಿ ಹತರಾದರು.

ಕುರುಕುಲಶ್ರೇಷ್ಠನೇ! ಧರ್ಮಪುತ್ರನಾದ, ಪೃಥಿವೀಪತಿಯಾದ ಯುಧಿಷ್ಠಿರರಾಜನು ನಿನ್ನಿಂದ ರಕ್ಷಿಸಲ್ಪಡುತ್ತಾ ಸರ್ವಥಾ ಪ್ರಶಾಂತವಾಗಿರುವ ಸಮಗ್ರಭೂಮಂಡಲವನ್ನೂ ಚೆನ್ನಾಗಿ ಉಪಭೋಗಿಸುತ್ತಾನೆ. ಶತ್ರುಗಳನ್ನು ವಿನಾಶಗೊಳಿಸುವವನೇ! ಪಾಂಡವ! ನಿನ್ನೊಡನೆ ನಾನು ನಿರ್ಜನವಾದ ಅರಣ್ಯದಲ್ಲಾದರೂ ಆನಂದವಾಗಿಯೇ ಇರುತ್ತೇನೆ. ಹೀಗಿರುವಾಗ ಇಲ್ಲಿ ಪ್ರಿಯಜನರೂ ಮತ್ತು ಕುಂತಿಯೂ ಇರುವಾಗ ಹೇಳುವುದೇನಿದೆ? ಎಲ್ಲಿ ಧರ್ಮರಾಜನ ಮಗನಾದ ಯುಧಿಷ್ಠಿರನಿರುವನೋ, ಮಹಾಬಲನಾದ ಭೀಮಸೇನನಿರುವನೋ, ಮಾದ್ರಿಯ ಮಕ್ಕಳಾದ ನಕುಲ-ಸಹದೇವರಿರುವರೋ–ಅಲ್ಲಿ ನನಗೆ ಪರಮಾನಂದವುಂಟಾಗುತ್ತದೆ.

ನಿಷ್ಪಾಪನಾದ ಕುರುನಂದನನೇ! ಈ ಸಭಾಭವನದ ರಮಣೀಯವಾದ ಮತ್ತು ಪವಿತ್ರವಾದ ಸ್ಥಾನಗಳು ಸ್ವರ್ಗಸದೃಶವಾಗಿವೆ. ಇಂತಹ ಆನಂದದಾಯಕವಾದ ಸ್ಥಳಗಳಲ್ಲಿ ನಾನು ನಿನ್ನೊಡನೆ ಬಹಳ ದಿವಸಗಳನ್ನೇ ಕಳೆದಿರುವೆನು. ನನ್ನ ತಂದೆಯಾದ ವಸುದೇವನನ್ನು ನಾನು ಇತ್ತೀಚೆಗೆ ನೋಡಿಯೇ ಇಲ್ಲ. ಹಾಗೆಯೇ ಬಲದೇವನನ್ನೂ ಇತರ ವೃಷ್ಣಿಶ್ರೇಷ್ಠರನ್ನೂ ನೋಡಿ ಬಹಳ ದಿವಸಗಳಾದುವು. ಆದುದರಿಂದ ನಾನೀಗ ದ್ವಾರಕಾ ಪಟ್ಟಣಕ್ಕೆ ಹೋಗಬೇಕೆಂದಿದ್ದೇನೆ. ಪುರುಷರ್ಷಭನೇ! ನನ್ನ ಈ ಪ್ರಯಾಣ ವಾರ್ತೆಯು ನಿನಗೂ ಸಂತಸವನ್ನುಂಟುಮಾಡಲಿ. ಶೋಕದಿಂದುಂಟಾದ ಮನುಷ್ಯನ ದುಃಖವನ್ನು ದೂರಮಾಡುವ ಸಲುವಾಗಿ ತತ್ಕಾಲದಲ್ಲಿ ಉಪದೇಶ ಮಾಡಲು ಯೋಗ್ಯವೆನಿಸುವ ವಿವೇಕದ ಮಾತುಗಳನ್ನು ಆಯಾ ಸಮಯ ಗಳಲ್ಲಿ, ಶೋಕಾವಿಷ್ಟನಾಗಿದ್ದ ಯುಧಿಷ್ಠಿರನಿಗೆ ಭೀಷ್ಮನೂ ಹೇಳಿದ್ದಾನೆ. ನಾವೂ ಹೇಳಿದ್ದೇವೆ. ಯದ್ಯಪಿ ಪಾಂಡುಪುತ್ರನಾದ

ಯುಧಿಷ್ಠಿರನು ನಮ್ಮೆಲ್ಲರಿಗೂ ಶಾಸಕ (ರಾಜ) ನಾಗಿದ್ದರೂ ಮಹಾತ್ಮನಾದ ಅವನು ನಮ್ಮಿಂದ ಶಾಸನಮಾಡಲ್ಪಟ್ಟನು.

ಧರ್ಮಪುತ್ರೇ ಹಿ ಧರ್ಮಜ್ಞೇ ಕೃತಜ್ಞೇ ಸತ್ಯವಾದಿನಿ ।
ಸತ್ಯಂ ಧರ್ಮೋ ಮತಿಶ್ಚಾಗ್ರ್ಯಾ ಸ್ಥಿತಿಶ್ಚ ಸತತಂ ಸ್ಥಿರಾ ॥೨೪॥

ಧರ್ಮಜ್ಞನಾದ, ಕೃತಜ್ಞನಾದ, ಸತ್ಯವಾದಿಯಾದ ಧರ್ಮಪುತ್ರನಲ್ಲಿ ಸತ್ಯ, ಧರ್ಮ, ಉತ್ತಮವಾದ ಬುದ್ಧಿ ಮತ್ತು ಔನ್ನತ್ಯ ಇವು ಸ್ಥಿರವಾಗಿವೆ. ಅರ್ಜುನ! ನಿನಗೆ ಉಚಿತವೆನಿಸಿದರೆ ನೀನೀಗಲೇ ಮಹಾತ್ಮನಾದ ಜನಾಧಿಪನಾದ ಯುಧಿಷ್ಠಿರನ ಬಳಿಗೆ ಹೋಗಿ ನಾನು ದ್ವಾರಕೆಗೆ ಪ್ರಯಾಣಮಾಡಲಿರುವ ವಾರ್ತೆಯನ್ನು ಅವನಿಗೆ ಹೇಳು.

ನ ಹಿ ತಸ್ಯಾಪ್ರಿಯಂ ಕುರ್ಯಾಂ ಪ್ರಾಣತ್ಯಾಗೇಽಪ್ಯುಪಸ್ಥಿತೇ ।
ಕುತೋ ಗನ್ತುಂ ಮಹಾಬಾಹೋ ಪುರೀಂ ದ್ವಾರಾವತೀಂ ಪ್ರತಿ ॥೨೬॥

ಮಹಾಬಾಹುವೇ! ನನಗೆ ಪ್ರಾಣಸಂಕಟವೇ ಒದಗಿಬಂದರೂ ಧರ್ಮರಾಜನಿಗೆ ಮಾತ್ರ ನಾನು ಅಪ್ರಿಯವಾಗುವುದನ್ನು ಮಾಡುವುದಿಲ್ಲ. ಹೀಗಿರುವಾಗ ಅವನಿಗೆ ಒಪ್ಪಿಗೆಯಾಗದಿದ್ದರೆ ನಾನು ದ್ವಾರಾವತಿಗೆ ಹೋಗಲು ಹೇಗೆ ತಾನೇ ಸಾಧ್ಯವಾಗುವುದು?

ಪಾರ್ಥನೇ! ನಾನು ಈ ಎಲ್ಲ ವಿಷಯಗಳನ್ನೂ ನಿನಗೆ ಪ್ರಿಯವುಂಟಾಗಲೆಂಬ ಆಶಯದಿಂದ ಹೇಳುತ್ತಿದ್ದೇನೆ. ನಾನು ನಿನ್ನೊಡನೆ ಯಾವಾಗಲೂ ಸತ್ಯವನ್ನೇ ಹೇಳುತ್ತೇನೆ. ಸುಳ್ಳನ್ನೆಂದಿಗೂ ಹೇಳುವುದಿಲ್ಲ. ಅರ್ಜುನ! ನಾನು ಇಲ್ಲಿ ವಾಸಮಾಡಬೇಕಾಗಿದ್ದುದರ ಪ್ರಯೋಜನವೂ ಪೂರ್ಣವಾಯಿತು. ಧೃತರಾಷ್ಟ್ರನ ಮಗನಾದ ದುರ್ಯೋಧನನು ಸೇನೆಯೊಡನೆಯೂ ಸೇವಕರೊಡನೆಯೂ ವಿನಾಶಹೊಂದಿದನು. ನಾನಾವಿಧವಾದ ರತ್ನಗಳ ಸಂಗ್ರಹದಿಂದ ಸಂಪನ್ನವಾಗಿರುವ ಸಮುದ್ರದಿಂದ ಸುತ್ತುವರಿಯಲ್ಪಟ್ಟಿರುವ, ಪರ್ವತ-ವನ-ಕಾನನಗಳಿಂದ ಸಮೃದ್ಧವಾಗಿರುವ ಭೂಮಂಡಲವು ಬುದ್ಧಿವಂತನಾದ ಕುರುರಾಜನಾದ ಯುಧಿಷ್ಠಿರನ ವಶವಾಗಿದೆ. ಧರ್ಮಜ್ಞನಾದ ಯುಧಿಷ್ಠಿರನು ಮಹಾತ್ಮರಾದ ಅನೇಕ ಸಿದ್ಧರಿಂದ ಉಪಾಸಿಸಲ್ಪಡುತ್ತಾ, ವಂದಿ-ಮಾಗಧರಿಂದ ಸ್ತುತಿಸಲ್ಪಡುತ್ತಾ, ಸಮಗ್ರವಾದ ಭೂಮಿಯನ್ನು ಧರ್ಮದಿಂದ ಪರಿಪಾಲಿಸಲಿ. ಈಗ ನೀನು

ನನ್ನೊಡನೆ ರಾಜನ ಬಳಿಗೆ ಬಂದು ಅವನನ್ನು ಅಭಿನಂದಿಸಿ ನಾನು ದ್ವಾರಕೆಗೆ ಹೊರಡುವ ವಿಷಯವನ್ನು ಅವನೊಡನೆ ಹೇಳಿ ನನಗೆ ಪ್ರಯಾಣಮಾಡಲು ಅನುಮತಿಯನ್ನು ಕೊಡಿಸು.

ಇದಂ ಶರೀರಂ ವಸು ಯಚ್ಚ ಮೇ ಗೃಹೇ
ನಿವೇದಿತಂ ಪಾರ್ಥ ಸದಾ ಯುಧಿಷ್ಠಿರೇ ।
ಪ್ರಿಯಶ್ಚ ಮಾನ್ಯಶ್ಚ ಹಿ ಮೇ ಯುಧಿಷ್ಠಿರಃ
ಸದಾ ಕುರೂಣಾಮಧಿಪೋ ಮಹಾಮತಿಃ ॥೩೩॥

ಈ ನನ್ನ ಶರೀರ, ನನ್ನ ಮನೆಯಲ್ಲಿ ಯಾವ ಐಶ್ವರ್ಯವಿರುವುದೋ ಆ ಐಶ್ವರ್ಯ–ಇವೆಲ್ಲವೂ ನನ್ನಿಂದ ಸಂಪೂರ್ಣವಾಗಿ ಯುಧಿಷ್ಠಿರನಿಗೆ ಅರ್ಪಿಸಲ್ಪಟ್ಟಿದೆ. ಕುರುಗಳ ಅಧಿಪತಿಯಾದ, ಮಹಾಬುದ್ಧಿಶಾಲಿಯಾದ ಯುಧಿಷ್ಠಿರನು ನನಗೆ ಸದಾ ಪ್ರಿಯನೂ ಮಾನ್ಯನೂ ಆಗಿರುವನು.

ಪ್ರಯೋಜನಂ ಚಾಪಿ ನಿವಾಸಕಾರಣೇ
ನ ವಿದ್ಯತೇ ಮೇ ತ್ವದೃತೇ ನೃಪಾತ್ಮಜ ।
ಸ್ಥಿತಾ ಹಿ ಪೃಥ್ವೀ ತವ ಪಾರ್ಥ ಶಾಸನೇ
ಗುರೋಃ ಸುವೃತ್ತಸ್ಯ ಯುಧಿಷ್ಠಿರಸ್ಯ ಚ ॥೩೪॥

ಅರ್ಜುನ! ನಿನ್ನೊಡನೆ ವಿನೋದದಿಂದ ಕಾಲಕಳೆಯುವುದರ ಹೊರತಾಗಿ (ನಿನ್ನ ಸಹವಾಸಸುಖದ ಹೊರತಾಗಿ) ನಾನು ಇಲ್ಲಿ ಇನ್ನೂ ಹೆಚ್ಚುಕಾಲ ಇರುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಪಾರ್ಥ! ಈ ಅಖಂಡಭೂಮಂಡಲವೂ ನಿನ್ನ ಮತ್ತು ಸಚ್ಚರಿತ್ರನಾದ, ಗುರುವಾದ ಯುಧಿಷ್ಠಿರನ ಶಾಸನಕ್ಕೊಳಪಟ್ಟಿದೆ."

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಮಹಾತ್ಮನಾದ ಜನಾರ್ದನನಿಂದ ಹೀಗೆ ಹೇಳಲ್ಪಟ್ಟ ಮಹಾಪರಾಕ್ರಮಿಯಾದ ಅರ್ಜುನನು ಜನಾರ್ದನನನ್ನು ಸಮಾದರಿಸುತ್ತಾ ದುಃಖದಿಂದಲೇ 'ಹಾಗೆಯೇ ಆಗಲಿ'–ಎಂದು ಹೇಳಿದನು."

೧೫ನೆಯ ಅಧ್ಯಾಯವು ಮುಗಿಯಿತು.

ಅರ್ಜುನನು ಶ್ರೀಕೃಷ್ಣನಿಂದ ಗೀತೆಯ ವಿಷಯವಾಗಿ ಕೇಳಿದುದು: ಶ್ರೀಕೃಷ್ಣನು ಸಿದ್ಧರು ಮತ್ತು ಮಹರ್ಷಿ ಕಾಶ್ಯಪನ ಸಂವಾದವನ್ನು ಉದಾಹರಿಸಿದುದು

ಜನಮೇಜಯನು ಪ್ರಶ್ನಿಸುತ್ತಾನೆ:

ಸಭಾಯಾಂ ವಸತೋಸ್ತತ್ರ ನಿಹತ್ಯಾರೀನ್ಮಹಾತ್ಮನೋಃ ।
ಕೇಶವಾರ್ಜುನಯೋಃ ಕಾ ನು ಕಥಾ ಸಮಭವದ್ದ್ವಿಜ ॥೧॥

"ದ್ವಿಜಶ್ರೇಷ್ಠನೇ! ಶತ್ರುಗಳನ್ನು ವಿನಾಶಗೊಳಿಸಿದನಂತರ ಮಹಾತ್ಮರಾದ ಕೇಶವ-ಪಾರ್ಥರು ಇಂದ್ರಪ್ರಸ್ಥದ ಆ ದಿವ್ಯಸಭಾಭವನದಲ್ಲಿ ಇದ್ದಾಗ ಪ್ರಸಂಗವಶದಿಂದ ಯಾವ ಯಾವ ಮಾತು-ಕತೆಗಳು ನಡೆದುವು?"

ವೈಶಂಪಾಯನರು ಹೇಳುತ್ತಾರೆ:

"ಜನಮೇಜಯ! ಸಮಸ್ತಶತ್ರುಗಳನ್ನೂ ಗೆದ್ದು ಯುಧಿಷ್ಠಿರನು ತನ್ನ ಅಖಂಡಸಾಮ್ರಾಜ್ಯವನ್ನೂ ಪಡೆದುಕೊಂಡನಂತರ ಅರ್ಜುನನು ಕೃಷ್ಣನೊಡನೆ ದಿವ್ಯವಾದ ಆ ಸಭಾಮಂಟಪದಲ್ಲಿ ಅತ್ಯಂತಸಂತೋಷದಿಂದ ವಿಹರಿಸುತ್ತಿದ್ದನು. ಹೀಗಿರಲೊಂದುದಿನ ಅವರಿಬ್ಬರೂ ಸ್ವಜನರಿಂದ ಸುತ್ತುವರಿಯಲ್ಪಟ್ಟು ಸಂತುಷ್ಟರಾಗಿ ಸ್ವೇಚ್ಛೆಯಿಂದ ತಿರುಗಾಡುತ್ತಾ ಸ್ವರ್ಗಸದೃಶವಾಗಿದ್ದ ಒಂದು ಸಭಾಸ್ಥಳಕ್ಕೆ ಹೋದರು. ಕೃಷ್ಣನೊಡನಿದ್ದ ಪಾಂಡವಮಧ್ಯಮನಾದ ಅರ್ಜುನನು ಅತಿರಮ್ಯವಾಗಿದ್ದ ಆ ಸಭಾಭವನವನ್ನು ನೋಡಿ ಹರ್ಷಗೊಂಡವನಾಗಿ ಈ ಮಾತನ್ನು ಹೇಳಿದನು:

"ಮಹಾಬಾಹುವೇ! ದೇವಕೀನಂದನನೇ! ಯುದ್ಧವು ಸನ್ನಿಹಿತವಾಗಿದ್ದಾಗ ನಾನು ನಿನ್ನ ಮಹಿಮೆಯನ್ನೂ ಈಶ್ವರೀಯಸ್ವರೂಪವನ್ನೂ ಕಂಡುಕೊಂಡೆನು. ಪುರುಷಸಿಂಹನೇ! ಕೇಶವನೇ! ಆಗ ಪೂಜ್ಯನಾದ ನೀನು ಸ್ನೇಹಭಾವದಿಂದ ಕೂಡಿದವನಾಗಿ ಯಾವುದನ್ನು ಉಪದೇಶಿಸಿದೆಯೋ–ಆ ಎಲ್ಲವನ್ನೂ ನಾನು ವಿಚಲಿತಚಿತ್ತನಾದ ಕಾರಣ ಮರೆತುಬಿಟ್ಟೆನು. ಆ ವಿಷಯಗಳನ್ನು ಪುನಃ ಕೇಳಿ ಮನನಮಾಡಬೇಕೆಂದು ನನಗೆ

ಕೌತೂಹಲವುಂಟಾಗಿದೆ. ನೀನಾದರೋ ಅತ್ಯಲ್ಪಕಾಲದಲ್ಲಿಯೇ ದ್ವಾರಕೆಗೆ ಹೋಗಲಿರುವೆ. ಆದುದರಿಂದ ದಯಮಾಡಿ ಯುದ್ಧಕ್ಕೆ ಮೊದಲು ನೀನು ಹೇಳಿದ ವಿಷಯಗಳೆಲ್ಲವನ್ನೂ ಪುನಃ ಹೇಳುವ ಕೃಪೆಮಾಡು.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಅರ್ಜುನನು ಹೀಗೆ ಹೇಳಲು ಮಹಾತೇಜಸ್ವಿಯಾದ, ವಾಗ್ಮಿಗಳಲ್ಲಿ ಶ್ರೇಷ್ಠನಾದ ಶ್ರೀಕೃಷ್ಣನು ಅರ್ಜುನನನ್ನು ಆಲಿಂಗನ ಮಾಡಿಕೊಂಡು ಹೇಳಿದನು:

ಶ್ರಾವಿತಸ್ತ್ವಂ ಮಯಾ ಗುಹ್ಯಂ ಜ್ಞಾಪಿತಶ್ಚ ಸನಾತನಮ್ ।
ಧರ್ಮಂ ಸ್ವರೂಪಿಣಂ ಪಾರ್ಥ ಸರ್ವಲೋಕಾಂಶ್ಚ ಶಾಶ್ವತಾನ್ ॥೯॥

ಅಬುದ್ಧ್ಯಾ ನಾಗ್ರಹೀರ್ಯಸ್ತ್ವಂ ತನ್ಮೇ ಸುಮಹದಪ್ರಿಯಮ್ ।
ನ ಚ ಸಾದ್ಯ ಪುನರ್ಭೂಯಃ ಸ್ಮೃತಿರ್ಮೇ ಸಮ್ಭವಿಷ್ಯತಿ ॥೧೦॥

“ಅರ್ಜುನ! ನಾನು ಆ ಸಮಯದಲ್ಲಿ ಅತ್ಯಂತರಹಸ್ಯವಾದ, ಸನಾತನವಾದ ಜ್ಞಾನವನ್ನು ನಿನಗೆ ಉಪದೇಶಿಸಿದೆನು. ಧರ್ಮಸ್ವರೂಪಿಯಾದ ಪುರುಷೋತ್ತಮನ ತತ್ತ್ವವನ್ನೂ ಹೇಳಿದೆನು. ಶಾಶ್ವತಗಳಾದ ಸರ್ವಲೋಕಗಳ ವಿಷಯವಾಗಿಯೂ ಹೇಳಿದೆನು. ಆದರೆ ನೀನು ತಿಳಿಗೇಡಿತನದಿಂದ ಅಂತಹ ಪರತತ್ತ್ವವನ್ನು ಗ್ರಹಿಸದೇ ಇದ್ದುದು ನನಗೆ ಬಹಳ ಅಸಮಾಧಾನವಾಗಿದೆ. ಆ ಗೀತವು ನನಗೂ ಕೂಡ ಈಗ ಸಮಗ್ರವಾಗಿ ಜ್ಞಾಪಕಕ್ಕೆ ಬರುತ್ತಿಲ್ಲ.

ನೂನಮಶ್ರದ್ದಧಾನೋಽಸಿ ದುರ್ಮೇಧಾ ಹ್ಯಸಿ ಪಾಣ್ಡವ ।
ನ ಚ ಶಕ್ಯಂ ಪುನರ್ವಕ್ತುಮಶೇಷೇಣ ಧನಂಜಯ ॥೧೧॥

ಧನಂಜಯ! ನಿಶ್ಚಯವಾಗಿಯೂ ನೀನು ಶ್ರದ್ಧಾಹೀನನಾಗಿರುವೆ. ಮಂದಬುದ್ಧಿಯವನಾಗಿರುವೆ. ಹಿಂದೆ ಹೇಳಿದ ಆ ತತ್ತ್ವವನ್ನೇ ಸಂಪೂರ್ಣವಾಗಿ ಪುನಃ ಹೇಳಲು ಶಕ್ಯವಿಲ್ಲ.

ಸ ಹಿ ಧರ್ಮಃ ಸುಪರ್ಯಾಪ್ತೋ ಬ್ರಹ್ಮಣಃ ಪದವೇದನೇ ।
ನ ಶಕ್ಯಂ ತನ್ಮಯಾ ಭೂಯಸ್ತಥಾ ವಕ್ತುಮಶೇಷತಃ ॥೧೨॥

ಏಕೆಂದರೆ: ಆಗ ನಾನು ಹೇಳಿದ್ದ ಗೀತಾಧರ್ಮವು ಬ್ರಹ್ಮಪದವನ್ನು ಹೊಂದುವ ವಿಷಯದಲ್ಲಿ ಪರ್ಯಾಪ್ತವಾಗಿದ್ದಿತು. ನಾನು ಹಿಂದೆ ಹೇಳಿದ್ದಂತೆಯೇ ಯಥಾವತ್ತಾಗಿ ಬ್ರಹ್ಮಪದಪ್ರಾಪ್ತಿಗೆ ಸಾಧಕವಾದ ಆ ಗೀತಾಧರ್ಮವನ್ನು ಪುನಃ ಸಂಪೂರ್ಣವಾಗಿ ಹೇಳಲು ನನ್ನಿಂದ ಶಕ್ಯವಿಲ್ಲ.

ಆ ಸಮಯದಲ್ಲಿ ಯೋಗಯುಕ್ತನಾಗಿದ್ದ ನಾನು ಪರಬ್ರಹ್ಮತತ್ತ್ವವನ್ನು ವಿವರಿಸಿ ಹೇಳಿದೆನು. ಆದರೆ ಅದೇ ಪರತತ್ತ್ವದ ತಿಳಿವಳಿಕೆಗಾಗಿ ಪುರಾತನವಾದ ಒಂದು ಇತಿಹಾಸವನ್ನು ಹೇಳುತ್ತೇನೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದ ಅರ್ಜುನನೇ! ಯಾವ ರೀತಿಯಲ್ಲಿ ಅಂತಹ ಉತ್ತಮೋತ್ತಮ ವಾದ ಸಮತ್ವಬುದ್ಧಿಯನ್ನಾಶ್ರಯಿಸಿ ಶ್ರೇಷ್ಠವಾದ ಸದ್ಗತಿಯನ್ನು ಹೊಂದುವೆ ಯೆಂಬುದನ್ನು ಹೇಳುತ್ತೇನೆ; ಕೇಳು. ಈ ವಿಷಯದಲ್ಲಿ ನಾನು ಹೇಳುವುದೆಲ್ಲವನ್ನೂ ಏಕಾಗ್ರಚಿತ್ತನಾಗಿ ಕೇಳು. ಶತ್ರುಗಳನ್ನು ದಮನ ಮಾಡುವವನೇ! ಹಿಂದೊಮ್ಮೆ ಎದುರಿಸಲು ಅಸಾಧ್ಯವಾದ ತೇಜಸ್ಸಿನಿಂದ ಕೂಡಿದ್ದ ಬ್ರಾಹ್ಮಣನೊಬ್ಬನು ಬ್ರಹ್ಮಲೋಕದಿಂದ ಸ್ವರ್ಗಲೋಕಕ್ಕೂ- ಅಲ್ಲಿಂದ ಭೂಮಿಗೂ ಇಳಿದುಬಂದನು. ಹಾಗೆ ಭೂಲೋಕಕ್ಕೆ ಬಂದ ಆ ಬ್ರಾಹ್ಮಣನು ನಮ್ಮ ಅರಮನೆಗೂ ಆಗಮಿಸಿದ್ದನು. ನಾವೆಲ್ಲರೂ ಅವನನ್ನು ಯಥೋಕ್ತವಾಗಿ ಸ್ವಾಗತಿಸಿ ಸತ್ಕರಿಸಿದೆವು. ಅನಂತರ ನಾವು ಮೋಕ್ಷಧರ್ಮದ ವಿಷಯವಾಗಿ ಪ್ರಶ್ನೆಗಳನ್ನು ಕೇಳಿದೆವು. ಆ ನಮ್ಮ ಪ್ರಶ್ನೆಗಳಿಗೆ ಬ್ರಾಹ್ಮಣನು ದಿವ್ಯವಾದ ವಿಧಾನದಿಂದ ಉತ್ತರಿಸಿದನು. ಅದನ್ನೇ ನಿನಗೂ ಹೇಳುವೆನು. ನಿನ್ನ ಮನಸ್ಸಿನಲ್ಲಿ ಬೇರೆ ಯಾವುದೇ ವಿಚಾರಕ್ಕೂ ಅವಕಾಶವನ್ನೀಯದೆ ಏಕಾಗ್ರತೆಯಿಂದ ಆ ಬ್ರಾಹ್ಮಣನ ವಚನಗಳನ್ನು ಕೇಳು.

ಆ ಬ್ರಾಹ್ಮಣನು ನನ್ನನ್ನು ಕುರಿತು ಹೀಗೆ ಹೇಳಿದನು:

“ವಿಭುವೇ! ಶ್ರೀಕೃಷ್ಣ! ಮೋಹವನ್ನು ವಿಚ್ಛೇದನಗೊಳಿಸುವ ಮೋಕ್ಷಧರ್ಮದ ಸಂಬಂಧವಾಗಿ ನೀನು ಯಾವ ಪ್ರಶ್ನೆಯನ್ನು ಕೇಳಿರುವೆಯೋ–ಆ ಪ್ರಶ್ನೆಗೆ ಪ್ರಾಣಿಗಳ ಮೇಲಿನ ಅನುಕಂಪದಿಂದ ಯಥಾವತ್ತಾಗಿ ಉತ್ತರವನ್ನು ಹೇಳುವೆನು. ಮಾಧವ! ನಾನು ಹೇಳುವುದನ್ನು ಅನನ್ಯಚಿತ್ತನಾಗಿ ಕೇಳು:

ಹಿಂದೊಮ್ಮೆ ಕಾಶ್ಯಪನೆಂಬ ಹೆಸರಿನ ಧರ್ಮಜ್ಞನಾದ ಮತ್ತು ತಪಸ್ವಿಯಾದ ಬ್ರಾಹ್ಮಣನು ಧರ್ಮಗಳ ವಿಷಯದಲ್ಲಿ ಶಾಸ್ತ್ರಗಳಲ್ಲಿನ ಸಂಪೂರ್ಣರಹಸ್ಯವನ್ನೂ ತಿಳಿದಿದ್ದ, ಹಿಂದಾದುದನ್ನೂ ಮುಂದಾಗು ವುದನ್ನೂ ತಿಳಿದಿದ್ದ, ಜ್ಞಾನ-ವಿಜ್ಞಾನಗಳೆರಡಲ್ಲಿಯೂ ಪ್ರವೀಣನಾಗಿದ್ದ, ಲೋಕತತ್ತ್ವದ ಜ್ಞಾನದಲ್ಲಿ ಕುಶಲನಾಗಿದ್ದ, ಸುಖ-ದುಃಖಗಳ ರಹಸ್ಯ ವನ್ನೂ ಹುಟ್ಟು-ಸಾವುಗಳ ರಹಸ್ಯವನ್ನೂ ತಿಳಿದಿದ್ದ, ಪಾಪ-ಪುಣ್ಯಕರ್ಮ ಗಳ ವಿವೇಚನೆಯಲ್ಲಿ ವಿದ್ವಾಂಸನಾಗಿದ್ದ, ಉಚ್ಚ-ನೀಚಪ್ರಾಣಿಗಳು ಕರ್ಮಾನುಸಾರವಾಗಿ ಹೊಂದುವ ಗತಿಯನ್ನು ತಿಳಿದಿದ್ದ ಒಬ್ಬ ಬ್ರಾಹ್ಮಣ ಶ್ರೇಷ್ಠನನ್ನು ಸಂಧಿಸಿದನು. ಸಂಸಾರದಿಂದ ಮುಕ್ತನಾದವನಂತೆ ಸರ್ವತ್ರ ಸಂಚರಿಸುತ್ತಿದ್ದ, ಜಿತೇಂದ್ರಿಯನಾಗಿದ್ದ, ಬ್ರಹ್ಮತೇಜಸ್ಸಿನಿಂದ ದೇದೀಪ್ಯ ಮಾನನಾಗಿದ್ದ, ಎಲ್ಲಕಡೆಗಳಲ್ಲಿಯೂ ತಿರುಗಾಡುತ್ತಿದ್ದ, ಅಂತರ್ಧಾನ ವಿದ್ಯೆಯನ್ನೂ ತಿಳಿದಿದ್ದ, ಅದೃಶ್ಯರಾಗಿರುವ ಚಕ್ರಧಾರಿಗಳಾದ ಸಿದ್ಧರೊಡನೆ ಪ್ರಯಾಣಮಾಡುತ್ತಾ ಅವರೊಡನೆ ಕುಳಿತು ಏಕಾಂತದಲ್ಲಿ ಸಂಭಾಷಣೆ ಮಾಡುತ್ತಿದ್ದ, ಸ್ವೇಚ್ಛೆಯಿಂದ ಸಂಚರಿಸುತ್ತಿದ್ದ, ಗಾಳಿಯಂತೆ ನಿರ್ಲಿಪ್ತ ನಾಗಿದ್ದ ಸಿದ್ಧಪುರುಷನನ್ನು ಕಾಶ್ಯಪನು ನೋಡಿದನು. ಮೇಧಾವಿಯಾದ, ದ್ವಿಜಶ್ರೇಷ್ಠನಾದ, ಧರ್ಮಕಾಮನಾದ, ತಪಸ್ವಿಯಾದ ಆ ಕಾಶ್ಯಪನು ಸಿದ್ಧಪುರುಷನ ಬಳಿಗೆ ಹೋಗಿ ಏಕಾಗ್ರಚಿತ್ತನಾಗಿ ಯಥಾವಿಧಿಯಾಗಿ ಅವನ ಕಾಲುಗಳನ್ನು ಹಿಡಿದುಕೊಂಡನು. (ಅಭಿವಾದನಪೂರ್ವಕವಾಗಿ ನಮಸ್ಕರಿಸಿ ದನು.) ಬ್ರಾಹ್ಮಣಶ್ರೇಷ್ಠನಾದ ಆ ಸಿದ್ಧಪುರುಷನು ಪರಮಾದ್ಭುತವಾದ ತೇಜಸ್ಸಿ ನಿಂದ ಕೂಡಿದ ಸಂತನಾಗಿದ್ದನು. ಸರ್ವಗುಣಗಳಿಂದಲೂ ಪರಿಪೂರ್ಣನಾಗಿ ದ್ದನು. ವಿದ್ಯೆಯಿಂದಲೂ ಚಾರಿತ್ರದಿಂದಲೂ ಸಂಪನ್ನನಾಗಿದ್ದನು. ಆ ಸಿದ್ಧಪುರುಷನ ದರ್ಶನಮಾತ್ರ ದಿಂದಲೇ ಕಾಶ್ಯಪನಿಗೆ ವಿಸ್ಮಯವುಂಟಾಯಿತು. ಅವನನ್ನೇ ಗುರುವನ್ನಾಗಿ ಮಾಡಿಕೊಂಡು ಅವನ ಸೇವೆಯಲ್ಲಿಯೇ ಕಾಶ್ಯಪನೂ ನಿರತನಾದನು. ತನ್ನ ಶುಶ್ರೂಷೆಯಿಂದಲೂ, ಗುರುಭಕ್ತಿಯಿಂದಲೂ ಪರಮತಪಸ್ವಿಯಾದ ಕಾಶ್ಯಪನು ಸಿದ್ಧಪುರುಷನನ್ನು ಸಂತೋಷಗೊಳಿಸಿದನು. ಜನಾರ್ದನ! ಕಾಶ್ಯಪನ ವಿಷಯದಲ್ಲಿ ಸಂತುಷ್ಟನಾದ ಸಿದ್ಧಪುರುಷನು ಶಿಷ್ಯನಿಗೆ ಪರಾಸಿದ್ಧಿಯ ವಿಷಯವಾಗಿ ಉಪದೇಶಮಾಡಿದುದನ್ನೇ ನಿನಗೂ ಹೇಳುವೆನು; ಕೇಳು:

ವಿವಿಧೈಃ ಕರ್ಮಭಿಸ್ತಾತ ಪುಣ್ಯಯೋಗೈಶ್ಚ ಕೇವಲೈಃ ।
ಗಚ್ಛನ್ತೀಹ ಗತಿಂ ಮರ್ತ್ಯಾ ದೇವಲೋಕೇ ಚ ಸಂಸ್ಥಿತಿಮ್ ॥೨೯॥

"ಮಗು! ಕಾಶ್ಯಪ! ಮನುಷ್ಯರು ನಾನಾವಿಧವಾದ ಶುಭಕರ್ಮಗಳನ್ನು ಅನುಷ್ಠಾನಮಾಡಿ ಸಂಗ್ರಹಿಸಿದ ಮಹಾಪುಣ್ಯದಿಂದಲೇ ಈ ಲೋಕದಲ್ಲಿ ಉತ್ತಮಫಲವನ್ನೂ ಮತ್ತು ದೇವಲೋಕದಲ್ಲಿ ಸ್ಥಾನವನ್ನೂ ಪಡೆದುಕೊಳ್ಳುತ್ತಾರೆ.

ನ ಕ್ವಚಿತ್ಸುಖಮತ್ಯನ್ತಂ ನ ಕ್ವಚಿಚ್ಛಾಶ್ವತೀ ಸ್ಥಿತಿಃ ।
ಸ್ಥಾನಾಚ್ಚ ಮಹತೋ ಭ್ರಂಶೋ ದುಃಖಲಬ್ಧಾತ್ಪುನಃ ಪುನಃ ॥೩೦॥

ಜೀವನಿಗೆ ಎಲ್ಲಿಯೂ ಅತ್ಯಂತಸುಖವು ಸಿಕ್ಕುವುದಿಲ್ಲ. ಯಾವ ಲೋಕದಲ್ಲಿಯೇ ಆಗಲೀ ಆ ಜೀವನು ಶಾಶ್ವತವಾಗಿ ಇರಲೂ ಸಾಧ್ಯವಿಲ್ಲ. ಬಹಳ ಕಷ್ಟಪಟ್ಟು ತಪಸ್ಸುಮಾಡಿ ಸಂಪಾದಿಸಿದ ಉನ್ನತೋನ್ನತ ಸ್ಥಾನದಿಂದಲೂ ಜೀವನು ಪುನಃ ಪುನಃ ಕೆಳಗಿಳಿಯುತ್ತಲೇ ಇರುತ್ತಾನೆ.

ಅಶುಭಾ ಗತಯಃ ಪ್ರಾಪ್ತಾಃ ಕಷ್ಟಾ ಮೇ ಪಾಪಸೇವನಾತ್ ।
ಕಾಮಮನ್ಯುಪರೀತೇನ ತೃಷ್ಣಯಾ ಮೋಹಿತೇನ ಚ ॥೩೧॥

ಕಾಮ-ಕ್ರೋಧಗಳಿಂದ ಯುಕ್ತನಾದ ಮತ್ತು ಆಸೆಯಿಂದ ವಿಮೋಹಿತನಾದ ನನಗೆ ಪಾಪಕರ್ಮಗಳನ್ನೇ ಆಶ್ರಯಿಸಿದ ಕಾರಣದಿಂದ ಅಶುಭವಾದ ಮತ್ತು ಕಷ್ಟಕರವಾದ ಗತಿಗಳು ಪ್ರಾಪ್ತವಾದುವು.

ಪುನಃ ಪುನಶ್ಚ ಮರಣಂ ಜನ್ಮ ಚೈವ ಪುನಃ ಪುನಃ ।
ಆಹಾರಾ ವಿವಿಧಾ ಭುಕ್ತಾಃ ಪೀತಾ ನಾನಾವಿಧಾಃ ಸ್ತನಾಃ ॥೩೨॥

ಅಂತಹ ದುರ್ಗತಿಗಳಿಂದ ನಾನು ಪುನಃ ಪುನಃ ಜನನ-ಮರಣಗಳನ್ನು ಹೊಂದುತ್ತಲೇ ಇದ್ದೆನು. ವಿಧ-ವಿಧಜನ್ಮಗಳಲ್ಲಿ ವಿಧ-ವಿಧವಾದ ಆಹಾರ ಗಳನ್ನು ಸೇವಿಸುತ್ತಿದ್ದೆನು. ನಾನಾಸ್ತ್ರೀಯರ ಸ್ತನ್ಯಗಳನ್ನು ಪಾನಮಾಡುತ್ತಿದ್ದೆನು.

ಮಾತರೋ ವಿವಿಧಾ ದೃಷ್ಟಾಃ ಪಿತರಶ್ಚ ಪೃಥಗ್ವಿಧಾಃ ।
ಸುಖಾನಿ ಚ ವಿಚಿತ್ರಾಣಿ ದುಃಖಾನಿ ಚ ಮಯಾನಘ ॥೩೩॥

ಅನಘನೇ! ಇದುವರೆಗೆ ನಾನು ಅನೇಕ ತಾಯಂದಿರನ್ನೂ ನೋಡಿದೆನು. ನಾನಾಪ್ರಕಾರವಾದ ವಿಧ-ವಿಧವಾದ ಸ್ವಭಾವಗಳಿಂದ ಕೂಡಿದ್ದ ತಂದೆಗಳನ್ನೂ ನೋಡಿದೆನು. ವಿಚಿತ್ರವಾದ ಸುಖ-ದುಃಖಗಳನ್ನೂ ಅನುಭವಿಸಿದೆನು.

ಪ್ರಿಯೈರ್ವಿವಾಸೋ ಬಹುಶಃ ಸಂವಾಸಾಶ್ಚಾಪ್ರಿಯೈಃ ಸಹ ।
ಧನನಾಶಶ್ಚ ಸಮ್ಪ್ರಾಪ್ತೋ ಲಬ್ಧ್ವಾ ದುಃಖೇನ ತದ್ಧನಮ್ ॥೩೪॥

ನಾನಾಪ್ರಕಾರವಾದ ನನ್ನ ಜನ್ಮಗಳಲ್ಲಿ ಹಲವಾರು ಬಾರಿ ಪ್ರಿಯರಾದವರ ವಿಯೋಗವನ್ನು ಹೊಂದಿದ್ದೆನು. ಅಪ್ರಿಯರಾದವರೊಡನೆ ಸಹವಾಸವನ್ನೂ ಮಾಡಿದ್ದೆನು. ಬಹಳ ದುಃಖದಿಂದ (ಕಷ್ಟದಿಂದ) ನಾನು ಸಂಪಾದಿಸಿದ್ದ ಧನದ ನಾಶವೂ ನನ್ನ ಕಣ್ಣಮುಂದೆಯೇ ಆಯಿತು.

ಅವಮಾನಾಃ ಸುಕಷ್ಟಾಶ್ಚ ರಾಜತಃ ಸ್ವಜನಾತ್ತಥಾ ।
ಶಾರೀರಾ ಮಾನಸಾ ವಾಪಿ ವೇದನಾ ಭೃಶದಾರುಣಾಃ ॥೩೫॥

ರಾಜನಿಂದಲೂ ಮತ್ತು ಸ್ವಜನರಿಂದಲೂ ನನಗೆ ಹಲವಾರು ಬಾರಿ ಅತ್ಯಂತಕಷ್ಟವೂ ಪ್ರಾಪ್ತವಾಯಿತು. ಅವಮಾನವೂ ಆಯಿತು. ಈ ಕಾರಣದಿಂದ ನನ್ನ ಶರೀರಕ್ಕೂ ಮತ್ತು ಮನಸ್ಸಿಗೂ ಅತಿದಾರುಣವಾದ ವೇದನೆಗಳೂ ಆದುವು.

ಪ್ರಾಪ್ತಾ ವಿಮಾನನಾಶ್ಚೋಗ್ರಾ ವಧಬನ್ಧಾಶ್ಚ ದಾರುಣಾಃ ।
ಪತನಂ ನಿರಯೇ ಚೈವ ಯಾತನಾಶ್ಚ ಯಮಕ್ಷಯೇ ॥೩೬॥

ನನ್ನ ಹಲವಾರು ಜನ್ಮಗಳಲ್ಲಿ ನಾನು ಎಷ್ಟೋಬಾರಿ ಅವಮಾನವನ್ನೂ ಹೊಂದಿದ್ದೇನೆ. ಪ್ರಾಣದಂಡಕ್ಕೆ (ಗಲ್ಲುಶಿಕ್ಷೆಗೆ) ಒಳಗಾಗಿದ್ದೇನೆ. ದಾರುಣವಾದ ಬಂಧನಗಳಿಗೂ ಒಳಗಾಗಿದ್ದೇನೆ. ನರಕದಲ್ಲೂ ಬಿದ್ದಿದ್ದೇನೆ. ಯಮನ ಅರಮನೆಯಲ್ಲಿ ಅನೇಕವಿಧವಾದ ಯಾತನೆಗಳನ್ನೂ ಅನುಭವಿಸಿದ್ದೇನೆ.

ಜರಾ ರೋಗಾಶ್ಚ ಸತತಂ ವ್ಯಸನಾನಿ ಚ ಭೂರಿಶಃ ।
ಲೋಕೇಽಸ್ಮಿನ್ನನುಭೂತಾನಿ ದ್ವನ್ದ್ವಜಾನಿ ಭೃಶಂ ಮಯಾ ॥೩೭॥

ಅನೇಕಜನ್ಮಗಳನ್ನು ತಾಳಿದ ನಾನು ಸತತವಾಗಿ ಮುಪ್ಪಿನಿಂದಲೂ ರೋಗಗಳಿಂದಲೂ ಪೀಡಿಸಲ್ಪಡುತ್ತಿದ್ದೆನು. ಬಹಳವಾದ ವ್ಯಸನಗಳನ್ನೂ ಅನುಭವಿಸಿದೆನು. ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳನ್ನೂ ಬಹಳವಾಗಿ ಅನುಭವಿಸಿದೆನು.

ತತಃ ಕದಾಚಿನ್ನಿರ್ವೇದಾನ್ನಿರಾಕಾರಾಶ್ರಿತೇನ ಚ ।
ಲೋಕತನ್ತ್ರಂ ಪರಿತ್ಯಕ್ತಂ ದುಃಖಾರ್ತೇನ ಭೃಶಂ ಮಯಾ ॥೩೮॥

ಹೀಗೆಯೇ ಇರುತ್ತಿರುವಾಗ ಒಮ್ಮೆ ನಾನು ಅತ್ಯಂತನಿರಾಶೆಯನ್ನು ಹೊಂದಿ ನಿರಾಕಾರನಾದ ಪರಮಾತ್ಮನನ್ನು ಆಶ್ರಯಿಸಿದೆನು. ಅತ್ಯಂತದುಃಖ ಪೀಡಿತನಾಗಿದ್ದ ನಾನು ಲೋಕವ್ಯವಹಾರವನ್ನೇ ಸಂಪೂರ್ಣವಾಗಿ ತ್ಯಜಿಸಿಬಿಟ್ಟೆನು.

ಲೋಕೇಽಸ್ಮಿನ್ನನುಭೂಯಾಹಮಿಮಂ ಮಾರ್ಗಮನುಷ್ಠಿತಃ ।
ತತಃ ಸಿದ್ಧಿರಿಯಂ ಪ್ರಾಪ್ತಾ ಪ್ರಸಾದಾದಾತ್ಮನೋ ಮಯಾ ॥೩೯॥

ಈ ಲೋಕದಲ್ಲಿ ಅನುಭವಿಸಬೇಕಾದ ಕಷ್ಟ-ಸುಖಗಳೆಲ್ಲವನ್ನೂ ಅನುಭವಿಸಿದನಂತರ ಈ ಬ್ರಹ್ಮತತ್ತ್ವಮಾರ್ಗವನ್ನಾಶ್ರಯಿಸಿ ಪರಮಾತ್ಮನ ಕೃಪೆಯಿಂದಾಗಿ ಈ ಸಿದ್ಧಿಯನ್ನು ಪಡೆದುಕೊಂಡೆನು.

ನಾಹಂ ಪುನರಿಹಾಗನ್ತಾ ಲೋಕಾನಾಲೋಕಯಾಮ್ಯಹಮ್ ।
ಆಸಿದ್ಧೇರಾಪ್ರಜಾಸರ್ಗಾದಾತ್ಮನೋಽಪಿ ಗತೀಃ ಶುಭಾಃ ॥೪೦॥

ನಾನು ಪುನಃ ಈ ಸಂಸಾರಕ್ಕೆ ಬರುವವನಾಗಿಲ್ಲ. ಎಲ್ಲಿಯವರೆಗೆ ಈ ಸೃಷ್ಟಿಕಾರ್ಯವು ನಡೆಯುತ್ತಲೇ ಇರುವುದೋ–ಅಲ್ಲಿಯವರೆಗೂ ನಾನು ನನ್ನ ಮತ್ತು ಇತರ ಪ್ರಾಣಿಗಳ ಶುಭಗತಿಯನ್ನು ನೋಡುತ್ತಲೇ ಇರುತ್ತೇನೆ.

ಉಪಲಬ್ಧಾ ದ್ವಿಜಶ್ರೇಷ್ಠ ತಥೇಯಂ ಸಿದ್ಧಿರುತ್ತಮಾ ।
ಇತಃ ಪರಂ ಗಮಿಷ್ಯಾಮಿ ತತಃ ಪರತರಂ ಪುನಃ ॥೪೧॥

ಬ್ರಹ್ಮಣಃ ಪದಮವ್ಯಕ್ತಂ ಮಾ ತೇಽಭೂದತ್ರ ಸಂಶಯಃ ।
ನಾಹಂ ಪುನರಿಹಾಗನ್ತಾ ಮರ್ತ್ಯಲೋಕಂ ಪರಂತಪ ॥೪೨॥

ಕಾಮ-ಕ್ರೋಧಾದಿ ಶತ್ರುಗಳನ್ನು ಪರಿತಾಪಗೊಳಿಸುವ ಕಾಶ್ಯಪನೇ!

ಹೀಗೆ ನನಗೆ ಈ ಉತ್ತಮಸಿದ್ಧಿಯು ಪ್ರಾಪ್ತವಾಗಿದೆ. ಈ ಲೋಕದಯಾತ್ರೆಯನ್ನು ಮುಗಿಸಿ ಇದಕ್ಕಿಂತಲೂ ಉತ್ತಮವಾದ ಲೋಕಕ್ಕೆ ಹೋಗುತ್ತೇನೆ. ಆದರೆ ಆ ಲೋಕದಲ್ಲಿಯೂ ನಾನು ನಿಲ್ಲುವುದಿಲ್ಲ. ಆ ಸ್ವರ್ಗಲೋಕಕ್ಕಿಂತಲೂ ಉತ್ತಮವಾದ ಸತ್ಯಲೋಕಕ್ಕೆ ಹೋಗುತ್ತೇನೆ. ಅಲ್ಲಿಂದಲೂ ನಾನು ಹೊರಟು ಸತ್ಯಲೋಕಕ್ಕಿಂತಲೂ ಉತ್ಕೃಷ್ಟವಾದ ಅವ್ಯಕ್ತಪರಬ್ರಹ್ಮದ ಸ್ಥಾನಕ್ಕೆ ಹೋಗುತ್ತೇನೆ. ಈ ವಿಷಯದಲ್ಲಿ ನಿನಗೆ ಸಂಶಯವುಂಟಾಗದಿರಲಿ. ನಾನು ಪರಬ್ರಹ್ಮತತ್ತ್ವದೊಳಗೆ ಲೀನನಾದನಂತರ ಪುನಃ ನಾನು ಈ ಮರ್ತ್ಯಲೋಕಕ್ಕೆ ಬರುವುದಿಲ್ಲ.

ಪ್ರೀತೋಽಸ್ಮಿ ತೇ ಮಹಾಪ್ರಾಜ್ಞ ಬ್ರೂಹಿ ಕಿಂ ಕರವಾಣಿ ತೇ ।
ಯದೀಪ್ಸುರುಪಪನ್ನಸ್ತ್ವಂ ತಸ್ಯ ಕಾಲೋಽಯಮಾಗತಃ ॥೪೩॥

ಮಹಾಪ್ರಾಜ್ಞನೇ! ನಾನು ನಿನ್ನ ವಿಷಯದಲ್ಲಿ ಪ್ರಸನ್ನನಾಗಿದ್ದೇನೆ. ನಿನಗೆ ಯಾವ ಪ್ರಿಯವಾದ ಕಾರ್ಯವನ್ನು ಮಾಡಿಕೊಡಲಿ? ನೀನು ಯಾವ ವಸ್ತುವನ್ನು ಹೊಂದಲು ಅಪೇಕ್ಷಿಸಿ ನನ್ನ ಬಳಿಗೆ ಬಂದಿರುವೆಯೋ–ಆ ವಸ್ತುವನ್ನು ಪಡೆದುಕೊಳ್ಳಲು ಇದು ಸಕಾಲವಾಗಿದೆ.

ಅಭಿಜಾನೇ ಚ ತದಹಂ ಯದರ್ಥಂ ಮಾಮುಪಾಗತಃ ।
ಅಚಿರಾತ್ತು ಗಮಿಷ್ಯಾಮಿ ತೇನಾಹಂ ತ್ವಾಮಚೂಚುದಮ್ ॥೪೪॥

ನೀನು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರುವೆಯೆಂಬುದನ್ನು ನಾನು ಬಲ್ಲೆನು. ನಾನು ಇಲ್ಲಿಂದ ಅತ್ಯಲ್ಪಕಾಲದಲ್ಲಿಯೇ ಹೊರಟುಹೋಗುತ್ತೇನೆ. ಆದುದರಿಂದ ಬೇಕಾದುದನ್ನು ಪ್ರಾರ್ಥಿಸಲು ನಿನ್ನನ್ನು ಪ್ರೇರಿಸುತ್ತಿದ್ದೇನೆ.

ಭೃಶಂ ಪ್ರೀತೋಽಸ್ಮಿ ಭವತಶ್ಚಾರಿತ್ರೇಣ ವಿಚಕ್ಷಣ ।
ಪರಿಪೃಚ್ಛಸ್ವ ಕುಶಲಂ ಭಾಷೇಯಂ ಯತ್ತವೇಪ್ಸಿತಮ್ ॥೪೫॥

ವಿದ್ವಾಂಸನೇ! ನಿನ್ನ ಉತ್ತಮವಾದ ಆಚರಣೆಯಿಂದ ನನಗೆ ಬಹಳ ಸಂತೋಷವಾಗಿದೆ. ನಿನ್ನ ಕಲ್ಯಾಣದ ವಿಷಯವಾಗಿ ಕೇಳು. ಅಭೀಷ್ಟವಾದ ಈ ನಿನ್ನ ಪ್ರಶ್ನೆಗೆ ಉತ್ತರಿಸುತ್ತೇನೆ.

ಬಹು ಮನ್ಯೇ ಚ ತೇ ಬುದ್ಧಿಂ ಭೃಶಂ ಸಂಪೂಜಯಾಮಿ ಚ ।
ಯೇನಾಹಂ ಭವತಾ ಬುದ್ಧೋ ಮೇಧಾವೀ ಹ್ಯಸಿ ಕಾಶ್ಯಪ ॥೪೬॥

ಕಾಶ್ಯಪನೇ! ನಾನು ನಿನ್ನ ಬುದ್ಧಿಯನ್ನು ಬಹುಮಾನಿಸುತ್ತೇನೆ. ಆದುದರಿಂದ ನಿನ್ನ ಬುದ್ಧಿಯನ್ನು ಗೌರವಿಸುತ್ತೇನೆ. ನಾನೆಷ್ಟೇ ನಿಗೂಢನಾಗಿದ್ದರೂ ನನ್ನನ್ನು ನೀನು ಗುರುತಿಸಿರುವೆ. ನಿಶ್ಚಯವಾಗಿಯೂ ನೀನು ಮೇಧಾವಿಯಾಗಿರುವೆ."

೧೬ನೆಯ ಅಧ್ಯಾಯವು ಮುಗಿಯಿತು.

೧೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಸಿದ್ಧಪುರುಷನು ಕಾಶ್ಯಪನ ಪ್ರಶ್ನೆಗಳಿಗೆ ಅನುಗುಣವಾಗಿ ಜೀವನ ವಿವಿಧಗತಿಗಳನ್ನು ವರ್ಣಿಸಿದುದು

ಜನಮೇಜಯ! ವಾಸುದೇವನು ಹೇಳುತ್ತಾನೆ:

ತತಸ್ತಸ್ಯೋಪಸಂಗೃಹ್ಯ ಪಾದೌ ಪ್ರಶ್ನಾನ್ಸುದುರ್ವಚಾನ್ ।
ಪಪ್ರಚ್ಛ ತಾಂಶ್ಚ ಧರ್ಮಾನ್ಸ ಪ್ರಾಹ ಧರ್ಮಭೃತಾಂ ವರಃ ॥೧॥

"ಅರ್ಜುನ! ಸಿದ್ಧಪುರುಷನು ಹೀಗೆ ಹೇಳಿದನಂತರ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಕಾಶ್ಯಪನು ಸಿದ್ಧಪುರುಷನ ಎರಡು ಕಾಲುಗಳನ್ನೂ ಹಿಡಿದು ನಮಸ್ಕರಿಸಿ ಉತ್ತರಿಸಲು ಅತ್ಯಂತ ಕಠಿನವಾದ ಧರ್ಮಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದನು. ಬುದ್ಧಿವಂತನಾದ ಸಿದ್ಧಪುರುಷನು ಆ ಪ್ರಶ್ನೆಗಳಿಗೆ ಉತ್ತರಿಸಿದನು.

ಕಾಶ್ಯಪನ ಪ್ರಶ್ನೆಗಳು ಹೀಗಿದ್ದುವು:

ಕಥಂ ಶರೀರಂ ಚ್ಯವತೇ ಕಥಂ ಚೈವೋಪಪದ್ಯತೇ ।
ಕಥಂ ಕಷ್ಟಾಚ್ಚ ಸಂಸಾರಾತ್ಸಂಸರನ್ಪರಿಮುಚ್ಯತೇ ॥೨॥

"ಮಹಾತ್ಮನೇ! ಈ ಶರೀರವು ಹೇಗೆ ಬಿದ್ದುಹೋಗುತ್ತದೆ? ಬಿದ್ದುಹೋದ ಶರೀರಾಂತರ್ಗತನಾದ ಜೀವನು ಮತ್ತೊಂದು ಶರೀರವನ್ನು ಹೇಗೆ ಪಡೆದುಕೊಳ್ಳುತ್ತಾನೆ? ಸಂಸಾರಿಯಾದ ಜೀವನು ದುಃಖಮಯವಾದ ಈ ಸಂಸಾರದಿಂದ ಯಾವ ರೀತಿಯಲ್ಲಿ ವಿಮುಕ್ತನಾಗುತ್ತಾನೆ?

ಆತ್ಮಾ ಚ ಪ್ರಕೃತಿಂ ಮುಕ್ತ್ವಾ ತಚ್ಛರೀರಂ ವಿಮುಞ್ಚತಿ ।
ಶರೀರತಶ್ಚ ನಿರ್ಮುಕ್ತಃ ಕಥಮನ್ಯತ್ಪ್ರಪದ್ಯತೇ ॥೩॥

ಜೀವಾತ್ಮನು ಮೂಲಪ್ರಕೃತಿಯನ್ನೂ ಮತ್ತು ಅದರಿಂದಲೇ ಪ್ರಾದುರ್ಭೂತವಾದ ಆ ಶರೀರವನ್ನೂ ಹೇಗೆ ಬಿಟ್ಟು ಹೋಗುತ್ತಾನೆ? ಶರೀರದಿಂದ ಮುಕ್ತನಾದ ಜೀವನು ಹೇಗೆ ಮತ್ತೊಂದು ಶರೀರವನ್ನು ಹೊಂದುತ್ತಾನೆ?

ಕಥಂ ಶುಭಾಶುಭೇ ಚಾಯಂ ಕರ್ಮಣೀ ಸ್ವಕೃತೇ ನರಃ ।
ಉಪಭುಙ್ಕ್ತೇ ಕ್ವ ವಾ ಕರ್ಮ ವಿದೇಹಸ್ಯಾವತಿಷ್ಠತೇ ॥೪॥

ಮನುಷ್ಯನು ತಾನು ಮಾಡಿದ ಶುಭಾಶುಭಕರ್ಮಗಳನ್ನು ಹೇಗೆ ಅನುಭವಿಸುತ್ತಾನೆ? ದೇಹತ್ಯಾಗಮಾಡಿದನಂತರ ವಿದೇಹನಾಗುವ (ಶರೀರರಹಿತನಾಗುವ) ಜೀವನ ಕರ್ಮವು ಎಲ್ಲಿರುತ್ತದೆ?"

ಏವಂ ಸಂಚೋದಿತಃ ಸಿದ್ಧಃ ಪ್ರಶ್ನಾಂಸ್ತಾನ್ಪ್ರತ್ಯಭಾಷತ ।
ಆನುಪೂರ್ವ್ಯೇಣ ವಾರ್ಷ್ಣೇಯ ತನ್ಮೇ ನಿಗದತಃ ಶೃಣು ॥೫॥

ವಾರ್ಷ್ಣೇಯನೇ! ಕಾಶ್ಯಪನು ಹೀಗೆ ಪ್ರಶ್ನಿಸಲಾಗಿ ಸಿದ್ಧಪುರುಷನು ಆ ಪ್ರಶ್ನೆಗಳಿಗೆ ಅನುಕ್ರಮವಾಗಿ ಉತ್ತರಿಸಿದನು. ಅದನ್ನೇ ನಿನಗೂ ಹೇಳುವೆನು; ಕೇಳು:

ಆಯುಃಕೀರ್ತಿಕರಾಣೀಹ ಯಾನಿ ಕೃತ್ಯಾನಿ ಸೇವತೇ ।
ಶರೀರಗ್ರಹಣೇ ಯಸ್ಮಿಂಸ್ತೇಷು ಕ್ಷೀಣೇಷು ಸರ್ವಶಃ ॥೬॥

ಆಯುಃಕ್ಷಯಪರೀತಾತ್ಮಾ ವಿಪರೀತಾನಿ ಸೇವತೇ ।
ಬುದ್ಧಿರ್ವ್ಯಾವರ್ತತೇ ಚಾಸ್ಯ ವಿನಾಶೇ ಪ್ರತ್ಯುಪಸ್ಥಿತೇ ॥೭॥

ಕಾಶ್ಯಪನೇ! ಮನುಷ್ಯನು ಈ ಲೋಕದಲ್ಲಿ ದೀರ್ಘಾಯುಷ್ಯವನ್ನೂ ಮತ್ತು ಕೀರ್ತಿಯನ್ನೂ ಉಂಟುಮಾಡುವ ಯಾವ-ಯಾವ ಶುಭಕರ್ಮಗಳನ್ನು ಮಾಡುವನೋ–ಆ ಕರ್ಮಗಳೆಲ್ಲವೂ ಮತ್ತೊಂದು ಶರೀರದ ಪ್ರಾಪ್ತಿಗೆ ಕಾರಣವಾಗುತ್ತವೆ. ಮತ್ತೊಂದು ಶರೀರವನ್ನು ಹೊಂದಿದನಂತರ ಅಂತಹ ಶುಭಕರ್ಮಗಳು ಫಲವನ್ನು ಕೊಟ್ಟು ಕ್ಷೀಣಿಸಲಾಗಿ ಅವನ ಆಯುಷ್ಯವೂ ಕ್ಷೀಣಿಸುತ್ತದೆ. ಅಂತಹ ಅವಸ್ಥೆಯಲ್ಲಿ ವಿಪರೀತವಾದ (ಧರ್ಮಕ್ಕೆ ವಿರುದ್ಧವಾದ) ಕರ್ಮಗಳನ್ನೇ ಮಾಡುತ್ತಾನೆ. ವಿನಾಶಕಾಲವು ಸಮೀಪಿಸಿದಾಗ ಅವನ ಬುದ್ಧಿಯೂ ವ್ಯತ್ಯಾಸಹೊಂದುತ್ತದೆ.

ಸತ್ತ್ವಂ ಬಲಂ ಚ ಕಾಲಂ ಚ ವಿದಿತ್ವಾ ಚಾತ್ಮನಸ್ತಥಾ ।
ಅತಿವೇಲಮುಪಾಶ್ನಾತಿ ಸ್ವವಿರುದ್ಧಾನ್ಯನಾತ್ಮವಾನ್ ॥೮॥

ಅವನು ತನ್ನ ಸತ್ತ್ವವನ್ನೂ, ಬಲವನ್ನೂ ಮತ್ತು ಕಾಲವನ್ನೂ ತಿಳಿದವನಾಗಿದ್ದರೂ ಮನೋನಿಗ್ರಹವಿಲ್ಲದ ಕಾರಣ ತನ್ನ ಪ್ರಕೃತಿಗೆ ವಿರುದ್ಧವಾದ ಆಹಾರವನ್ನೇ (ವಿಷಯಗಳನ್ನೇ) ಅಧಿಕವಾಗಿ (ಅಸಮಯದಲ್ಲಿ) ತಿನ್ನುತ್ತಾನೆ. (ಅನುಭವಿಸುತ್ತಾನೆ.)

ಯದಾಯಮತಿಕಷ್ಟಾನಿ ಸರ್ವಾಣ್ಯುಪನಿಷೇವತೇ ।
ಅತ್ಯರ್ಥಮಪಿ ವಾ ಭುಙ್ಕ್ತೇ ನ ವಾ ಭುಙ್ಕ್ತೇ ಕದಾಚನ ॥೯॥

ಮನೋನಿಗ್ರಹವಿಲ್ಲದವನು ಶರೀರಕ್ಕೆ ಅತ್ಯಂತಹಾನಿಕರವಾದ ಎಲ್ಲ ಪದಾರ್ಥಗಳನ್ನೂ ಸೇವಿಸುತ್ತಿರುತ್ತಾನೆ. ಕೆಲವೊಮ್ಮೆ ತುಂಬಾ ಹೆಚ್ಚಾಗಿ ತಿನ್ನುತ್ತಾನೆ. ಕೆಲವು ಸಮಯಗಳಲ್ಲಿ ಏನನ್ನೂ ತಿನ್ನುವುದೇ ಇಲ್ಲ.

ದುಷ್ಟಾನ್ನಾಮಿಷಪಾನಂ ಚ ಯದನ್ಯೋನ್ಯವಿರೋಧಿ ಚ ।
ಗುರು ಚಾಪ್ಯಮಿತಂ ಭುಙ್ಕ್ತೇ ನಾತಿಜೀರ್ಣೇಽಪಿ ವಾ ಪುನಃ ॥೧೦॥

ಕೆಲವೊಮ್ಮೆ ದೂಷಿತವಾದ ಅನ್ನಪಾನಗಳನ್ನು (ಮಾಂಸ-ಮದ್ಯಾದಿ ಗಳನ್ನು) ಸೇವಿಸುತ್ತಾನೆ. ಕೆಲವೊಮ್ಮೆ ಒಂದಕ್ಕೊಂದಕ್ಕೆ ವಿರುದ್ಧಗುಣಗಳಿರುವ ಆಹಾರವನ್ನು ಸೇವಿಸುತ್ತಾನೆ. ಕೆಲವೊಮ್ಮೆ ಭಾರವಾದ (ಜೀರ್ಣವಾಗದಿರುವ) ವಸ್ತುವನ್ನು ಅತಿಯಾಗಿ ತಿನ್ನುತ್ತಾನೆ. ಮತ್ತೊಮ್ಮೆ ತಿಂದ ಅನ್ನವು ಜೀರ್ಣವಾಗುವ ಮೊದಲೇ ಪುನಃ ಭೋಜನಮಾಡುತ್ತಾನೆ.

ವ್ಯಾಯಾಮಮತಿಮಾತ್ರಂ ಚ ವ್ಯವಾಯಂ ಚೋಪಸೇವತೇ ।
ಸತತಂ ಕರ್ಮಲೋಭಾದ್ವಾ ಪ್ರಾಪ್ತಂ ವೇಗಂ ವಿಧಾರಯೇತ್ ॥೧೧॥

ಮಿತಿಮೀರಿ ವ್ಯಾಯಾಮವನ್ನು ಮಾಡುತ್ತಾನೆ. ಮಿತಿಮೀರಿ ಸ್ತ್ರೀಸಂಭೋಗವನ್ನು ಮಾಡುತ್ತಾನೆ. ಸತತವಾಗಿ ಕೆಲಸಮಾಡಬೇಕೆಂಬ ದುರಾಸೆಯಿಂದಾಗಿ ಮಧ್ಯದಲ್ಲಿ ಪ್ರಾಪ್ತವಾಗುವ ಮಲ-ಮೂತ್ರೋತ್ಸರ್ಜನದ ವೇಗವನ್ನು ನಿರೋಧಿಸುತ್ತಾನೆ. (ತಡೆದುಕೊಳ್ಳುತ್ತಾನೆ.)

ರಸಾಭಿಯುಕ್ತಮನ್ನಂ ವಾ ದಿವಾ ಸ್ವಪ್ನಂ ಚ ಸೇವತೇ।
ಅಪಕ್ವಾನಾಗತೇ ಕಾಲೇ ಸ್ವಯಂ ದೋಷಾನ್ಪ್ರಕೋಪಯೇತ್ ॥೧೨॥

ಅತ್ಯಂತರಸಭರಿತವಾದ ಅನ್ನವನ್ನು ತಿನ್ನುತ್ತಾನೆ. ಹಗಲು ಮಲಗುತ್ತಾನೆ. ಭೋಜನಕ್ಕೆ ಸಮಯವಲ್ಲದ ಸಮಯದಲ್ಲಿ ಚೆನ್ನಾಗಿ ಪಕ್ವವಾಗದಿರುವ ಆಹಾರವನ್ನು ತಿಂದು ಶರೀರದಲ್ಲಿರುವ ವಾತ-ಪಿತ್ತಾದಿ ದೋಷಗಳು ಕೆರಳುವಂತೆ ಮಾಡುತ್ತಾನೆ.

ಸ್ವದೋಷಕೋಪನಾದ್ರೋಗಂ ಲಭತೇ ಮರಣಾನ್ತಿಕಮ್।
ಅಪಿ ವೋದ್ಬನ್ಧನಾದೀನಿ ಪರೀತಾನಿ ವ್ಯವಸ್ಯತಿ ॥೧೩॥

ಕೆಟ್ಟುದಾದ ಆಹಾರಸೇವನೆಯಿಂದ ಕಫ-ವಾತ-ಪಿತ್ತಗಳು ಕೆರಳುವಂತೆ ಮಾಡಿ ಮನುಷ್ಯನು ಮರಣಾಂತಿಕವಾದ ರೋಗಕ್ಕೆ ತುತ್ತಾಗುತ್ತಾನೆ. ಅಥವಾ ನೇಣುಹಾಕಿಕೊಳ್ಳುವುದು, ನೀರಿನಲ್ಲಿ ಮುಳುಗುವುದು–ಇವುಗಳೇ ಮೊದಲಾದ ಶಾಸ್ತ್ರವಿರುದ್ಧವಾದ ಮಾರ್ಗವನ್ನಾದರೂ ಆಶ್ರಯಿಸಿ ಅತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ.

ತಸ್ಯ ತೈಃ ಕಾರಣೈರ್ಜನ್ತೋಃ ಶರೀರಂ ಚ್ಯವತೇ ತದಾ।
ಜೀವಿತಂ ಪ್ರೋಚ್ಯಮಾನಂ ತದ್ಯಥಾವದುಪಧಾರಯ ॥೧೪॥

ಇಂತಹ ಅನೇಕಕಾರಣಗಳಿಂದ ಜೀವನ ಶರೀರವು ನಷ್ಟವಾಗಿ ಹೋಗುತ್ತದೆ. ಹೀಗೆ ಜೀವನ ಜೀವಿತವೆಂದು ಯಾವುದು ಹೇಳಲ್ಪಟ್ಟಿರುವುದೋ ಅದನ್ನು ಚೆನ್ನಾಗಿ ತಿಳಿದುಕೊ.

ಊಷ್ಮಾ ಪ್ರಕುಪಿತಃ ಕಾಯೇ ತೀವ್ರವಾಯುಸಮೀರಿತಃ।
ಶರೀರಮನುಪರ್ಯೇತ್ಯ ಸರ್ವಾನ್ಪ್ರಾಣಾನ್ರುಣದ್ಧಿ ವೈ ॥೧೫॥

ಶರೀರದಲ್ಲಿ ತೀವ್ರವಾದ ವಾಯುವಿನಿಂದ (ವಾತದಿಂದ) ಪ್ರೇರಿತವಾಗಿ ಪಿತ್ತವು ಕೆರಳುತ್ತದೆ. ಅಂತಹ ಪ್ರಕುಪಿತವಾದ ಪಿತ್ತವು ಶರೀರವೆಲ್ಲವನ್ನೂ ವ್ಯಾಪಿಸಿ ಎಲ್ಲ ಪ್ರಾಣಗಳನ್ನೂ (ಪ್ರಾಣಗಳ ಕ್ರಿಯೆಗಳನ್ನೂ) ತಡೆದುಬಿಡುತ್ತದೆ.

ಅತ್ಯರ್ಥಂ ಬಲವಾನೂಷ್ಮಾ ಶರೀರೇ ಪರಿಕೋಪಿತಃ।
ಭಿನತ್ತಿ ಜೀವಸ್ಥಾನಾನಿ ಮರ್ಮಾಣಿ ವಿದ್ಧಿ ತತ್ತ್ವತಃ ॥೧೬॥

ಈ ಶರೀರದಲ್ಲಿರುವ ಅತ್ಯಂತ ಬಲಿಷ್ಠವಾದ ಪಿತ್ತವು ಪ್ರಕುಪಿತವಾದರೆ ಜೀವನ ಮರ್ಮಸ್ಥಳಗಳನ್ನೇ ಸೀಳಿಹಾಕಿಬಿಡುತ್ತದೆ. ಈ ವಿಷಯವನ್ನು ಯಥಾವತ್ತಾಗಿ ತಿಳಿದುಕೊ.

ತತಃ ಸವೇದನಃ ಸದ್ಯೋ ಜೀವಃ ಪ್ರಚ್ಯವತೇ ಕ್ಷರಾತ್।
ಶರೀರಂ ತ್ಯಜತೇ ಜನ್ತುಶ್ಛಿದ್ಯಮಾನೇಷು ಮರ್ಮಸು ॥೧೭॥

ವೇದನಾಭಿಃ ಪರೀತಾತ್ಮಾ ತದ್ವಿದ್ಧಿ ದ್ವಿಜಸತ್ತಮ ।
ಜಾತೀಮರಣಸಂವಿಗ್ನಾಃ ಸತತಂ ಸರ್ವಜನ್ತವಃ ॥೧೮॥

ದ್ವಿಜಶ್ರೇಷ್ಠನೇ! ಪ್ರಕುಪಿತವಾದ ಪಿತ್ತದಿಂದ ಜೀವನ ಮರ್ಮಸ್ಥಾನಗಳು ಭಿನ್ನ-ಭಿನ್ನವಾದನಂತರ ವೇದನಾಯುಕ್ತವಾದ ಜೀವವು ಕ್ಷರರೂಪವಾದ ಈ ಶರೀರದಿಂದ ಹೊರಟು ದೇಹವನ್ನು ಸಂಪೂರ್ಣವಾಗಿ ತ್ಯಜಿಸಿಬಿಡುತ್ತದೆ. ಮೃತ್ಯುಕಾಲದಲ್ಲಿ ಜೀವವು ವೇದನಾದಿಗಳಿಂದ ವ್ಯಥೆಪಡುತ್ತಿರುತ್ತದೆಂಬುದನ್ನು ಚೆನ್ನಾಗಿ ತಿಳಿದುಕೊ. ಹೀಗೆ ಈ ಪ್ರಪಂಚದಲ್ಲಿ ಎಲ್ಲ ಪ್ರಾಣಿಗಳೂ ಸರ್ವಕಾಲದಲ್ಲಿಯೂ ಜನನ-ಮರಣದುಃಖದಿಂದ ಉದ್ವಿಗ್ನವಾಗಿರುತ್ತವೆ.

ದೃಶ್ಯನ್ತೇ ಸನ್ತ್ಯಜನ್ತಶ್ಚ ಶರೀರಾಣಿ ದ್ವಿಜರ್ಷಭ।
ಗರ್ಭಸಂಕ್ರಮಣೇ ಚಾಪಿ ಮರ್ಮಣಾಮತಿಸರ್ಪಣೇ ॥೧೯॥

ತಾದೃಶೀಮೇವ ಲಭತೇ ವೇದನಾಂ ಮಾನವಃ ಪುನಃ।
ಭಿನ್ನಸಂಧಿರಥ ಕ್ಲೇದಮದ್ಭಿಃ ಸ ಲಭತೇ ನರಃ ॥೨೦॥

ಎಲ್ಲ ಜೀವಗಳೂ ಶರೀರವನ್ನು ಬಿಟ್ಟುಹೋಗುವಾಗಲೂ, ಗರ್ಭವನ್ನು ಪ್ರವೇಶಿಸುವಾಗಲೂ ಮತ್ತು ಗರ್ಭದಿಂದ ಹೊರಕ್ಕೆ ಬರುವಾಗಲೂ ಒಂದೇ ವಿಧವಾದ ವೇದನೆಯನ್ನು ಅನುಭವಿಸುವುದು ಕಂಡುಬರುತ್ತದೆ. ಮರಣಕಾಲ ದಲ್ಲಿ ಶರೀರದಲ್ಲಿರುವ ಸಂಧಿಗಳು ಒಡೆದು ಹೋಗುತ್ತಿರುವಂತೆ ವೇದನೆ ಯಾಗುತ್ತದೆ. ಜನನಸಮಯದಲ್ಲಿ ಗರ್ಭಸ್ಥವಾದ ನೀರಿನಿಂದ ಉಪದ್ರವವನ್ನು ಹೊಂದುತ್ತಾನೆ.

ಯಥಾ ಪಞ್ಚಸು ಭೂತೇಷು ಸಮ್ಭೂತತ್ವಂ ನಿಯಚ್ಛತಿ ।
ಶೈತ್ಯಾತ್ಪ್ರಕುಪಿತಃ ಕಾಯೇ ತೀವ್ರವಾಯುಸಮೀರಿತಃ ॥೨೧॥

ಯಃ ಸ ಪಞ್ಚಸು ಭೂತೇಷು ಪ್ರಾಣಾಪಾನೇ ವ್ಯವಸ್ಥಿತಃ ।
ಸ ಗಚ್ಛತ್ಯೂರ್ಧ್ವಗೋ ವಾಯುಃ ಕೃಚ್ಛ್ರಾನ್ಮುಕ್ತ್ವಾ ಶರೀರಿಣಃ ॥೨೨॥

ಮತ್ತೊಂದು ಪ್ರಕಾರವಾಗಿ ತೀವ್ರವಾದ ವಾಯುವಿನಿಂದ (ವಾತದಿಂದ) ಪ್ರಚೋದಿತವಾದ, ಶ್ಲೇಷ್ಮದಿಂದ ಪ್ರಕುಪಿತವಾದ ಪ್ರಾಣವಾಯುವು ಶರೀರದಲ್ಲಿರುವ ಪಂಚಭೂತಗಳಲ್ಲಿ ಪರಸ್ಪರ ಸೇರುವಿಕೆಯನ್ನು ತೊಡೆದುಹಾಕುತ್ತದೆ. ಅನಂತರ ಅದೇ ಪ್ರಾಣವಾಯುವು ಬಹಳ ಕಷ್ಟದಿಂದ ಶರೀರಿಗಳ ಶರೀರಗಳನ್ನು ಪರಿತ್ಯಜಿಸಿ ಮೇಲಕ್ಕೆ ಹೊರಟುಹೋಗುತ್ತದೆ.

ಶರೀರಂ ಚ ಜಹಾತ್ಯೇವಂ ನಿರುಚ್ಛ್ವಾಸಶ್ಚ ದೃಶ್ಯತೇ ।
ಸ ನಿರೂಷ್ಮಾ ನಿರುಚ್ಛ್ವಾಸೋ ನಿಃಶ್ರೀಕೋ ಹತಚೇತನಃ ।
ಬ್ರಹ್ಮಣಾ ಸಮ್ಪರಿತ್ಯಕ್ತೋ ಮೃತ ಇತ್ಯುಚ್ಯತೇ ನರೈಃ ॥೨೩॥

ಜೀವವು ಶರೀರವನ್ನು ಪರಿತ್ಯಜಿಸಿದನಂತರ ಆ ಶರೀರವು ಉಚ್ಛ್ವಾಸರಹಿತವಾಗುತ್ತದೆ. ಅನಂತರ ಆ ಶರೀರವು ಉಷ್ಣದಿಂದಲೂ, ಉಚ್ಛ್ವಾಸದಿಂದಲೂ, ಕಾಂತಿಯಿಂದಲೂ ಚೇತನದಿಂದಲೂ ವಿಹೀನ ವಾಗುತ್ತದೆ. ಹೀಗೆ ಜೀವಾತ್ಮದಿಂದ ಪರಿತ್ಯಕ್ತವಾದ ಆ ಶರೀರವನ್ನು ಜನರು ಮೃತಶರೀರವೆಂದು ಹೇಳುತ್ತಾರೆ.

ಸ್ರೋತೋಭಿರ್ಯೈರ್ವಿಜಾನಾತಿ ಇನ್ದ್ರಿಯಾರ್ಥಾಞ್ಶರೀರಭೃತ್ ।
ತೈರೇವ ನ ವಿಜಾನಾತಿ ಪ್ರಾಣಾನಾಹಾರಸಮ್ಭವಾನ್ ।
ತತ್ರೈವ ಕುರುತೇ ಕಾಯೇ ಯಃ ಸಜೀವಃ ಸನಾತನಃ ॥೨೪॥

ದೇಹಧಾರಿಯಾದ ಜೀವನು ಇಂದ್ರಿಯಗಳ ಮೂಲಕವಾಗಿ ರೂಪ-ರಸ-ಗಂಧಾದಿ ವಿಷಯಗಳನ್ನು ಅನುಭವಿಸುವನು. ಆದರೆ ಅದೇ ಇಂದ್ರಿಯಗಳ ಮೂಲಕವಾಗಿಯೇ ಆಹಾರಸೇವನೆಯಿಂದ ಪರಿತುಷ್ಟವಾಗುವ ಪ್ರಾಣಗಳನ್ನು ಜೀವನು ತಿಳಿದಿರುವುದಿಲ್ಲ. ಅಂತಹ ಶರೀರದಲ್ಲಿಯೇ ಇದ್ದುಕೊಂಡು ಕರ್ಮಗಳನ್ನು ಮಾಡುವವನೇ ಸನಾತನನಾದ ಜೀವನಾಗಿದ್ದಾನೆ.

ತಥಾ ಯದ್ಯದ್ಭವೇದ್ಯುಕ್ತಂ ಸಂನಿಪಾತೇ ಕ್ವಚಿತ್ಕ್ವಚಿತ್ ।
ತತ್ತನ್ಮರ್ಮ ವಿಜಾನೀಹಿ ಶಾಸ್ತ್ರದೃಷ್ಟಂ ಹಿ ತತ್ತಥಾ ॥೨೬॥

ಕೆಲ-ಕೆಲವು ಸಂಧಿಸ್ಥಾನಗಳಲ್ಲಿ ಯಾವ ಯಾವ ಅಂಗಗಳು ಕೂಡಿವೆಯೋ-ಆಯಾ ಅಂಗಗಳ ಸಂಧಿಸ್ಥಾನಗಳು ಮರ್ಮಸ್ಥಾನಗಳೆಂದು ತಿಳಿ. ಮರ್ಮಸ್ಥಾನಗಳ ಈ ಲಕ್ಷಣವು ಶಾಸ್ತ್ರಗಳಲ್ಲಿ ಕಂಡುಬರುತ್ತದೆ.

ತೇಷು ಮರ್ಮಸು ಭಿನ್ನೇಷು ತತಃ ಸ ಸಮುದೀರಯನ್ ।
ಆವಿಶ್ಯ ಹೃದಯಂ ಜನ್ತೋಃ ಸತ್ತ್ವಂ ಚಾಶು ರುಣದ್ಧಿ ವೈ ॥೨೭॥

ಆ ಮರ್ಮಸ್ಥಾನಗಳು (ಸಂಧಿಗಳು) ಭಿನ್ನವಾದನಂತರ ವಾಯುವು ಮೇಲಕ್ಕೇರುತ್ತಾ ಪ್ರಾಣಿಯ ಹೃದಯವನ್ನು ಹೊಕ್ಕು ಒಡನೆಯೇ ಆ ಪ್ರಾಣಿಯ ಬುದ್ಧಿಯನ್ನೇ ತಡೆದುಬಿಡುತ್ತದೆ.

ತತಃ ಸಚೇತನೋ ಜನ್ತುರ್ನಾಭಿಜಾನಾತಿ ಕಿಂಚನ ।
ತಮಸಾ ಸಂವೃತಜ್ಞಾನಃ ಸಂವೃತೇಷ್ವೇವ ಮರ್ಮಸು ।
ಸ ಜೀವೋ ನಿರಧಿಷ್ಠಾನಶ್ಚಾಲ್ಯತೇ ಮಾತರಿಶ್ವನಾ ॥೨೮॥

ಅಂತಕಾಲವು ಸನ್ನಿಹಿತವಾದಾಗ ಶರೀರವು ಚೇತನದಿಂದ ಯುಕ್ತವಾಗಿದ್ದರೂ ಆ ಸಮಯದಲ್ಲಿ ಆ ಚೇತನಕ್ಕೆ ಯಾವುದೊಂದೂ ತಿಳಿಯುವುದಿಲ್ಲ. ಏಕೆಂದರೆ: ಆ ಜೀವದ ಜ್ಞಾನಶಕ್ತಿಯೂ ತಮಸ್ಸಿನಿಂದ (ಅವಿದ್ಯೆಯಿಂದ) ಆವೃತವಾಗಿರುತ್ತದೆ. ಮರ್ಮಸ್ಥಾನಗಳೂ ಮುಚ್ಚಿಹೋಗಿರುತ್ತವೆ. ಅಂತಹ ಅವಸ್ಥೆಯಲ್ಲಿ ಶರೀರದಿಂದ ಹೊರಬರುವ ಜೀವನು ಆಶ್ರಯರಹಿತನಾಗಿ ವಾಯುವಿನ ಮೂಲಕ ವಿಚಲಿತನಾಗುತ್ತಾನೆ. (ಗಾಳಿಯು ಜೀವನನ್ನು ಒಯ್ಯುತ್ತದೆ.)

ತತಃ ಸ ತಂ ಮಹೋಚ್ಛ್ವಾಸಂ ಭೃಶಮುಚ್ಛ್ವಸ್ಯ ದಾರುಣಮ್ ।
ನಿಷ್ಕ್ರಾಮನ್ಕಮ್ಪಯತ್ಯಾಶು ತಚ್ಛರೀರಮಚೇತನಮ್ ॥೨೯॥

ಬಳಿಕ ಜೀವಾತ್ಮನು ಬಾರಿಬಾರಿಗೂ ಭಯಂಕರವಾದ ಮತ್ತು ಗಟ್ಟಿಯಾಗಿ ಉಚ್ಛ್ವಾಸವನ್ನು ಬಿಡುತ್ತಾ ದೇಹದಿಂದ ಹೊರಬರುತ್ತಿರುತ್ತಾನೆ. ಆಗ ಚೇತನಾರಹಿತವಾದ ಆ ಶರೀರವನ್ನು (ಜಡಶರೀರವನ್ನು) ಬಹಳವಾಗಿ ಅಳ್ಲಾಡಿಸಿಬಿಡುತ್ತದೆ.

ಸ ಜೀವಃ ಪ್ರಚ್ಯುತಃ ಕಾಯಾತ್ಕರ್ಮಭಿಃ ಸ್ವೈಃ ಸಮಾವೃತಃ ।
ಅಭಿತಃ ಸ್ವೈಃ ಶುಭೈಃ ಪುಣ್ಯೈಃ ಪಾಪೈರ್ವಾಪ್ಯುಪಪದ್ಯತೇ ॥೩೦॥

ಶರೀರದಿಂದ ಪ್ರತ್ಯೇಕವಾದನಂತರ ಆ ಜೀವವು ತಾನೇ ಮಾಡಿದ ಕರ್ಮಗಳಿಂದ ಆವರಿಸಲ್ಪಟ್ಟಿರುತ್ತದೆ. ಜೀವವು ತನ್ನ ಸುತ್ತಲೂ ಶುಭಕರವಾದ ಪುಣ್ಯಗಳಿಂದಲೋ ಅಶುಭಕರವಾದ ಪಾಪಗಳಿಂದಲೋ ಕೂಡಿರುತ್ತದೆ. (ಶುಭಾಶುಭಕರ್ಮಗಳ ಫಲವು ಜೀವನನ್ನು ಸೇರಿಕೊಂಡೇ ಇರುತ್ತದೆ.)

ಬ್ರಾಹ್ಮಣಾ ಜ್ಞಾನಸಮ್ಪನ್ನಾ ಯಥಾವಚ್ಛ್ರುತನಿಶ್ಚಯಾಃ ।
ಇತರಂ ಕೃತಪುಣ್ಯಂ ವಾ ತಂ ವಿಜಾನನ್ತಿ ಲಕ್ಷಣೈಃ ॥೩೧॥

ವೇದ-ಶಾಸ್ತ್ರಗಳ ಸಿದ್ಧಾಂತವನ್ನು ಯಥಾವತ್ತಾಗಿ ಅಧ್ಯಯನ ಮಾಡಿರುವ ಜ್ಞಾನಸಂಪನ್ನರಾದ ಬ್ರಾಹ್ಮಣರು, ಪ್ರಾಣೋತ್ಕ್ರಮಣಕಾಲದ ಲಕ್ಷಣಗಳಿಂದ ಪುಣ್ಯಾತ್ಮಜೀವನಾರೆಂಬುದನ್ನೂ ಪಾಪಾತ್ಮಜೀವನಾರೆಂಬುದನ್ನೂ ತಿಳಿಯುತ್ತಾರೆ.

ಯಥಾನ್ಧಕಾರೇ ಖದ್ಯೋತಂ ಲೀಯಮಾನಂ ತತಸ್ತತಃ ।
ಚಕ್ಷುಷ್ಮನ್ತಃ ಪ್ರಪಶ್ಯನ್ತಿ ತಥಾ ಚ ಜ್ಞಾನಚಕ್ಷುಷಃ ॥೩೨॥

ಪಶ್ಯನ್ತ್ಯೇವಂವಿಧಂ ಸಿದ್ಧಾ ಜೀವಂ ದಿವ್ಯೇನ ಚಕ್ಷುಷಾ ।
ಚ್ಯವನ್ತಂ ಜಾಯಮಾನಂ ಚ ಯೋನಿಂ ಚಾನುಪ್ರವೇಶಿತಮ್ ॥೩೩॥

ಯಾವ ರೀತಿಯಲ್ಲಿ ಕಣ್ಣಿರುವ ಮನುಷ್ಯರು ಕತ್ತಲು ಕವಿದಿರುವಾಗ ಅಲ್ಲಲ್ಲಿ ಹೋಗಿ ಕುಳಿತುಕೊಳ್ಳುವ ಮಿಂಚುಹುಳುವನ್ನು ನೋಡುವರೋ– ಹಾಗೆಯೇ ಜ್ಞಾನದೃಷ್ಟಿಯನ್ನು ಹೊಂದಿರುವ ಸಿದ್ಧರು ತಮ್ಮ ದಿವ್ಯದೃಷ್ಟಿಯಿಂದ ಒಂದು ಶರೀರದಿಂದ ಹೊರಬರುತ್ತಿರುವ, ಹುಟ್ಟುತ್ತಿರುವ ಮತ್ತು ಗರ್ಭವನ್ನು ಪ್ರವೇಶಿಸುತ್ತಿರುವ ಜೀವನನ್ನು ತಿಳಿಯುತ್ತಾರೆ.

ತಸ್ಯ ಸ್ಥಾನಾನಿ ದೃಷ್ಟಾನಿ ತ್ರಿವಿಧಾನೀಹ ಶಾಸ್ತ್ರತಃ ।
ಕರ್ಮಭೂಮಿರಿಯಂ ಭೂಮಿರ್ಯತ್ರ ತಿಷ್ಠನ್ತಿ ಜನ್ತವಃ ॥೩೪॥

ಶಾಸ್ತ್ರಪ್ರಕಾರವಾಗಿ ಜೀವಕ್ಕೆ ಸ್ವರ್ಗ-ಮರ್ತ್ಯ ಮತ್ತು ನರಕಗಳೆಂಬ ಮೂರು ಸ್ಥಾನಗಳಿವೆ. ಸಕಲಪ್ರಾಣಿಗಳೂ ವಾಸಮಾಡುತ್ತಿರುವ ಈ ಮರ್ತ್ಯಲೋಕವನ್ನು ಕರ್ಮಭೂಮಿಯೆಂದು ಕರೆಯುತ್ತಾರೆ.

ತತಃ ಶುಭಾಶುಭಂ ಕೃತ್ವಾ ಲಭನ್ತೇ ಸರ್ವದೇಹಿನಃ ।
ಇಹೈವೋಚ್ಚಾವಚಾನ್ಭೋಗಾನ್ಪ್ರಾಪ್ನುವನ್ತಿ ಸ್ವಕರ್ಮಭಿಃ ॥೩೫॥

ಇದು ಕರ್ಮಭೂಮಿಯಾದುದರಿಂದ ಎಲ್ಲ ಶರೀರಗಳೂ ಇಲ್ಲಿಯೇ ಪುಣ್ಯಕರವಾದ ಅಥವಾ ಪಾಪಕರವಾದ ಕರ್ಮಗಳನ್ನು ಮಾಡಿ ತಾವು ಮಾಡಿದ ಕರ್ಮಕ್ಕೆ ಅನುಸಾರವಾಗಿ ಬಗೆ-ಬಗೆಯ ಸುಖ-ದುಃಖ ಭೋಗಗಳನ್ನು ಇಲ್ಲಿಯೇ ಅನುಭವಿಸುತ್ತಾರೆ.

ಇಹೈವಾಶುಭಕರ್ಮಾಣಃ ಕರ್ಮಭಿರ್ನಿರಯಂ ಗತಾಃ ।
ಅವಾಗ್ಗತಿರಿಯಂ ಕಷ್ಟಾ ಯತ್ರ ಪಚ್ಯನ್ತಿ ಮಾನವಾಃ ।
ತಸ್ಮಾತ್ಸುದುರ್ಲಭೋ ಮೋಕ್ಷೋ ರಕ್ಷ್ಯಶ್ಚಾತ್ಮಾ ತತೋ ಭೃಶಮ್ ॥

ಇಲ್ಲಿ ಪಾಪಕರ್ಮಗಳನ್ನು ಮಾಡುವ ಮನುಷ್ಯರು ತಾವು ಮಾಡಿದ ಪಾಪಕರ್ಮಗಳಿಗೆ ಅನುಸಾರವಾಗಿ ನರಕಕ್ಕೆ ಹೋಗುತ್ತಾರೆ. ಪಾಪಕರ್ಮಗಳ ಫಲದಿಂದ ಜೀವಕ್ಕೆ ಲಭಿಸುವ ಅಧೋಗತಿಯು ಅತ್ಯಂತಕಷ್ಟಕರವಾದುದು. ಪಾಪಿಷ್ಠರಾದ ಮನುಷ್ಯನನ್ನು ನರಕದಲ್ಲಿ ಬೇಯಿಸಿಬಿಡುತ್ತಾರೆ. ಆದುದರಿಂದ ಮೋಕ್ಷವೆಂಬುದು ಬಹಳ ಕಷ್ಟದಿಂದ ಲಭಿಸತಕ್ಕದ್ದಾಗಿದೆ. ಮನುಷ್ಯನು ಅಧೋಗತಿಗೆ ಹೋಗದ ರೀತಿಯಲ್ಲಿ ತನ್ನನ್ನು ವಿಶೇಷವಾದ ಪ್ರಯತ್ನದಿಂದ ರಕ್ಷಿಸಿಕೊಳ್ಳಬೇಕು.

ಊರ್ಧ್ವಂ ತು ಜನ್ತವೋ ಗತ್ವಾ ಯೇಷು ಸ್ಥಾನೇಷ್ವವಸ್ಥಿತಾಃ ।
ಕೀರ್ತ್ಯಮಾನಾನಿ ತಾನೀಹ ತತ್ತ್ವತಃ ಸಂನಿಬೋಧ ಮೇ ॥೩೭॥

ಸ್ವರ್ಗವೇ ಮೊದಲಾದ ಊರ್ಧ್ವಲೋಕಗಳಿಗೆ ಹೋಗುವ ಜೀವರು ಯಾವ ಯಾವ ಸ್ಥಾನಗಳಲ್ಲಿರುವರೆಂಬುದನ್ನು ಯಥಾವತ್ತಾಗಿ ತಿಳಿಸುವೆನು. ಈ ವಿಷಯವನ್ನು ಚೆನ್ನಾಗಿ ಮನಸ್ಸಿಟ್ಟು ಕೇಳು.

ತಚ್ಛ್ರುತ್ವಾ ನೈಷ್ಠಿಕೀಂ ಬುದ್ಧಿಂ ಬುದ್ಧ್ಯೇಥಾಃ ಕರ್ಮನಿಶ್ಚಯಮ್ ।
ತಾರಾರೂಪಾಣಿ ಸರ್ವಾಣಿ ಯತ್ರೈತಚ್ಚನ್ದ್ರಮಣ್ಡಲಮ್ ॥೩೮॥

ಯತ್ರ ವಿಭ್ರಾಜತೇ ಲೋಕೇ ಸ್ವಭಾಸಾ ಸೂರ್ಯಮಣ್ಡಲಮ್ ।
ಸ್ಥಾನಾನ್ಯೇತಾನಿ ಜಾನೀಹಿ ಜನಾನಾಂ ಪುಣ್ಯಕರ್ಮಣಾಮ್ ॥೩೯॥

ಇದನ್ನು ಕೇಳುವುದರಿಂದ ಕರ್ಮಗಳ ನಿಶ್ಚಯಗತಿಯನ್ನು ತಿಳಿಯುವೆ. ಮತ್ತು ನಿನಗೆ ಸತ್ಕರ್ಮನಿಷ್ಠವಾದ ಬುದ್ಧಿಯುಂಟಾಗುತ್ತದೆ. ಎಲ್ಲಿ ಸಮಸ್ತತಾರೆಗಳೂ, ಚಂದ್ರಮಂಡಲವೂ ಪ್ರಕಾಶಿಸುತ್ತಿದೆಯೋ ಮತ್ತು ಎಲ್ಲಿ ಸೂರ್ಯಮಂಡಲವು ತನ್ನಪ್ರಭೆಯಿಂದ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿರುವುದೋ–ಆ ಎಲ್ಲ ಸ್ಥಾನಗಳೂ ಪುಣ್ಯಕರ್ಮಿಗಳಾದವರಿಗೆ ಲಭಿಸತಕ್ಕ ಸ್ಥಾನಗಳಾಗಿವೆ. ಪುಣ್ಯಾತ್ಮರಾದ ಮನುಷ್ಯರು ಅಂತಹ ಪುಣ್ಯಲೋಕಗಳಿಗೆ ಹೋಗಿ ಪುಣ್ಯಫಲವನ್ನು ಅನುಭವಿಸುತ್ತಾರೆಂಬುದನ್ನು ತಿಳಿ.

ಕರ್ಮಕ್ಷಯಾಚ್ಚ ತೇ ಸರ್ವೇ ಚ್ಯವನ್ತೇ ವೈ ಪುನಃ ಪುನಃ ।
ತತ್ರಾಪಿ ಚ ವಿಶೇಷೋಽಸ್ತಿ ದಿವಿ ನೀಚೋಚ್ಚಮಧ್ಯಮಾಃ ॥೪೦॥

ಜೀವಿಗಳ ಪುಣ್ಯಫಲವು ಮುಗಿದೊಡನೆಯೇ ಆ ಪುಣ್ಯಲೋಕಗಳಿಂದ ಅವರು ಕೆಳಕ್ಕೆ ಜಾರುತ್ತಾರೆ. ಹೀಗೆ ಜೀವನಿಗೆ ಗಮನಾಗಮನಗಳು ಪುನಃ ಪುನಃ ಆಗುತ್ತಲೇ ಇರುತ್ತವೆ. ಸ್ವರ್ಗದಲ್ಲಿ ಕೂಡ ಎಲ್ಲರಿಗೂ ಸಮಾನವಾದ ಸ್ಥಾನವಿರುವುದಿಲ್ಲ. ಅವರವರ ಪುಣ್ಯಫಲಗಳಿಗೆ ತಕ್ಕುದಾದ ಉತ್ತಮ, ಮಧ್ಯಮ ಮತ್ತು ನೀಚಸ್ಥಾನಗಳಿರುತ್ತವೆ.

ನ ಚ ತತ್ರಾಪಿ ಸಂತೋಷೋ ದೃಷ್ಟ್ವಾ ದೀಪ್ತತರಾಂ ಶ್ರಿಯಮ್ ।

ಅಲ್ಲಿಯೂ ಕೂಡ ತನಗಿಂತಲೂ ಇತರರಲ್ಲಿರಬಹುದಾದ ಅತ್ಯಂತದೀಪ್ಯಮಾನವಾದ ಐಶ್ವರ್ಯವನ್ನು ನೋಡಿ ಅಲ್ಲಿ ಹೋಗುವ ಜೀವನಿಗೆ ಸಂತೋಷವೇನೂ ಉಂಟಾಗುವುದಿಲ್ಲ. ಅದು ತನಗಿಲ್ಲವಲ್ಲಾ ಎಂಬ ದುಃಖವೇ ಉಂಟಾಗಬಹುದು.

ಬ್ರಾಹ್ಮಣೋತ್ತಮನೇ! ಹೀಗೆ ನಾನು ನಿನಗೆ ಜೀವಿಗಳ ಎಲ್ಲ ಗತಿಗಳನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಹೇಳಿದ್ದೇನೆ. ಇನ್ನು ಮುಂದೆ ನಾನು ನಿನಗೆ ಯಾವ ರೀತಿಯಲ್ಲಿ ಜೀವನು ಗರ್ಭದಲ್ಲಿ ಪ್ರವೇಶಿಸಿ ಜನ್ಮವನ್ನು ಪಡೆಯುವನೆಂಬುದನ್ನು ಹೇಳುವೆನು. ಏಕಾಗ್ರಚಿತ್ತನಾಗಿ ಕೇಳು."

೧೭ನೆಯ ಅಧ್ಯಾಯವು ಮುಗಿಯಿತು.

ಜೀವನ ಗರ್ಭಪ್ರವೇಶ: ಕರ್ಮಫಲದ ಅನಿವಾರ್ಯತೆ: ಸಂಸಾರವನ್ನು ದಾಟುವ ಉಪಾಯ

ಸಿದ್ಧಪುರುಷನು ಹೇಳುತ್ತಾನೆ:

ಶುಭಾನಾಮಶುಭಾನಾಂ ಚ ನೇಹ ನಾಶೋಽಸ್ತಿ ಕರ್ಮಣಾಮ್ ।
ಪ್ರಾಪ್ಯ ಪ್ರಾಪ್ಯಾನುಪಚ್ಯನ್ತೇ ಕ್ಷೇತ್ರಂ ಕ್ಷೇತ್ರಂ ತಥಾ ತಥಾ ॥೧॥

“ಕಾಶ್ಯಪನೇ! ಈ ಲೋಕದಲ್ಲಿ ಮಾಡುವ ಪಾಪ-ಪುಣ್ಯಗಳ ಫಲಗಳನ್ನು ಅನುಭವಿಸಿಯೇ ತೀರಬೇಕು. ಆ ಫಲಗಳು ಹಾಗೆಯೇ ವಿನಾಶಹೊಂದುವುದಿಲ್ಲ. ಆ ಕರ್ಮಫಲಗಳು ಜೀವನನ್ನು ಯಥಾಯೋಗ್ಯ ಯೋನಿಗಳಲ್ಲಿ ಹುಟ್ಟುವಂತೆ ಮಾಡಿ ತಮ್ಮ ಹಿಡಿತಕ್ಕೆ ತೆಗೆದುಕೊಂಡು ಬೇಯಿಸಿಬಿಡುತ್ತವೆ. (ಜೀವನು ಯಾವಾಗಲೂ ಕರ್ಮಗಳಿಗೆ ಅಧೀನನಾಗಿರುತ್ತಾನೆ. ಆ ಕರ್ಮಫಲವೇ ಅವನನ್ನು ಒಳ್ಳೆಯ ಅಥವಾ ಕೆಟ್ಟಯೋನಿಗಳಲ್ಲಿ ಹುಟ್ಟುವಂತೆ ಮಾಡುತ್ತದೆ. ಹುಟ್ಟಿದನಂತರ ಆ ಕರ್ಮಫಲಗಳೇ ಅವನ ಸ್ವಭಾವ, ಬುದ್ಧಿ, ಐಶ್ವರ್ಯ–ಮುಂತಾದುವುಗಳಿಗೆ ಕಾರಣಗಳಾಗಿರುತ್ತವೆ. ಜೀವನು ಕರ್ಮಗಳಿಗೆ ಅಥವಾ ಕರ್ಮಫಲಗಳಿಗೆ ಅಧೀನನೋ ಅಥವಾ ಕರ್ಮಗಳು ಜೀವನಿಗೆ ಅಧೀನವೋ–ಎಂಬುದನ್ನು ನಿರ್ಧರಿಸುವುದು ಕಷ್ಟ. ಏಕೆಂದರೆ: ಸತ್ಕಾರ್ಯವನ್ನು ಮಾಡಬೇಕಾದರೂ ಪೂರ್ವಪುಣ್ಯವಿರಬೇಕು ಎನ್ನುತ್ತಾರೆ ವಿದ್ವಾಂಸರು. ಆದರೆ ಜೀವನಿಗೆ ಆತ್ಮಸ್ವಾತಂತ್ರ್ಯವಿರುವುದರಿಂದ ತನ್ನದೇ ಆದ ಕರ್ಮಫಲಗಳಿಂದ ಬಿಡಿಸಿಕೊಳ್ಳಲೂ ಸಮರ್ಥನಾಗುತ್ತಾನೆ. ಉದ್ಧರೇದಾತ್ಮನಾತ್ಮಾನಮ್- ಎಂದು ಶ್ರೀಗೀತೆಯಲ್ಲಿ ಹೇಳಿದೆ. ಆದುದರಿಂದ ಜೀವ-ಕರ್ಮಗಳೆರಡೂ ಬೇರ್ಪಡಿಸಲಾಗದ ಎರಡು ಸತ್ತ್ವಗಳು. ಇವುಗಳ ಪರಸ್ಪರಸಮಾವೇಶದಿಂದ ಸೃಷ್ಟಿಕಾರ್ಯವು ಮುಂದುವರಿಯುತ್ತಿದೆಯೆಂದು ತಾತ್ಪರ್ಯವಾಗಿ ಹೇಳಬಹುದು.)

ಯಥಾ ಪ್ರಸೂಯಮಾನಸ್ತು ಫಲೀ ದದ್ಯಾತ್ಫಲಂ ಬಹು ।
ತಥಾ ಸ್ಯಾದ್ವಿಪುಲಂ ಪುಣ್ಯಂ ಶುದ್ಧೇನ ಮನಸಾ ಕೃತಮ್ ॥೨॥

ಯಾವ ರೀತಿಯಲ್ಲಿ ಫಲಕೊಡುವ ವೃಕ್ಷವು ಫಲಿಸುವ ಕಾಲವು ಬಂದಾಗ ಅಪಾರವಾದ ಫಲವನ್ನು ಕೊಡುವುದೋ–ಹಾಗೆಯೇ ಶುದ್ಧವಾದ

ಹೃದಯದಿಂದ ಮಾಡಿದ ಪುಣ್ಯಕಾರ್ಯವು ಫಲಿಸುವ ಕಾಲವು ಬಂದಾಗ ಅತ್ಯಧಿಕವಾದ ಫಲವನ್ನೇ ಕೊಡುತ್ತದೆ.

ಪಾಪಂ ಚಾಪಿ ತಥೈವ ಸ್ಯಾತ್ಪಾಪೇನ ಮನಸಾ ಕೃತಮ್ ।
ಪುರೋಧಾಯ ಮನೋ ಹೀದಂ ಕರ್ಮಣ್ಯಾತ್ಮಾ ಪ್ರವರ್ತತೇ ॥೩॥

ಹಾಗೆಯೇ ಕಲುಷಿತವಾದ ಮನಸ್ಸಿನಿಂದ ಮಾಡಿದ ಪಾಪಕರ್ಮವು ಫಲಿಸುವ ಕಾಲದಲ್ಲಿ ಅತ್ಯಧಿಕವಾದ ಪಾಪಫಲವನ್ನೇ ಕೊಡುತ್ತದೆ. ಜೀವಾತ್ಮನು ಮನಸ್ಸನ್ನೇ ಮುಂದೆಮಾಡಿಕೊಂಡು ಶುಭಕಾರ್ಯ ಅಥವಾ ದುಷ್ಕಾರ್ಯಗಳಲ್ಲಿ ಪ್ರವೃತ್ತನಾಗುತ್ತಾನೆ.

ಯಥಾ ಕರ್ಮಸಮಾವಿಷ್ಟಃ ಕಾಮಮನ್ಯುಸಮಾವೃತಃ ।
ನರೋ ಗರ್ಭಂ ಪ್ರವಿಶತಿ ತಚ್ಚಾಪಿ ಶೃಣು ಚೋತ್ತರಮ್ ॥೪॥

ಕಾಮ-ಕ್ರೋಧಗಳಿಂದ ಸಮಾವಿಷ್ಟನಾದ ಮನುಷ್ಯನು ಯಾವ ರೀತಿಯಲ್ಲಿ ಕರ್ಮವೆಂಬ ಬಲೆಯಿಂದ ಬಂಧಿಸಲ್ಪಟ್ಟವನಾಗಿ ಪಾಪಕರ್ಮ ಫಲಕ್ಕೆ ಅನುಗುಣವಾದ ಯೋನಿಯಲ್ಲಿ ಪ್ರವೇಶಿಸುವನೆಂಬುದನ್ನು ಹೇಳುವೆನು; ಕೇಳು:

ಶುಕ್ರಂ ಶೋಣಿತಸಂಸೃಷ್ಟಂ ಸ್ತ್ರಿಯಾ ಗರ್ಭಾಶಯಂ ಗತಮ್ ।
ಕ್ಷೇತ್ರಂ ಕರ್ಮಜಮಾಪ್ನೋತಿ ಶುಭಂ ವಾ ಯದಿ ವಾಶುಭಮ್ ॥೫॥

ಜೀವನು ಮೊದಲು ಪುರುಷನ ವೀರ್ಯವನ್ನು ಪ್ರವೇಶಿಸುತ್ತಾನೆ. ಅನಂತರ ಸ್ತ್ರೀಯ ರಜಸ್ಸಿನೊಡನೆ ಬೆರೆತು ಗರ್ಭಾಶಯವನ್ನು ಸೇರುತ್ತಾನೆ. ಗರ್ಭಾಶಯವನ್ನು ಸೇರಿ ಜೀವನು ಪಡೆಯುವ ಕ್ಷೇತ್ರವು ಶುಭವಾದದ್ದಾಗಿರಲಿ (ಉಚ್ಚವಾಗಿರಲಿ) ಅಶುಭವಾದುದ್ದಾಗಿರಲಿ (ನೀಚವಾಗಿರಲಿ) ಕರ್ಮಾನುಗುಣ ವಾಗಿಯೇ ಸಿಕ್ಕುತ್ತದೆ.

ಸೌಕ್ಷ್ಮ್ಯಾದವ್ಯಕ್ತಭಾವಾಚ್ಚ ನ ಚ ಕ್ವಚನ ಸಜ್ಜತಿ ।
ಸಮ್ಪ್ರಾಪ್ಯ ಬ್ರಾಹ್ಮಣಃ ಕಾಮಂ ತಸ್ಮಾತ್ತದ್ಬ್ರಹ್ಮ ಶಾಶ್ವತಮ್ ॥೬॥

ಜೀವನು ಸೂಕ್ಷ್ಮನಾಗಿರುವುದರಿಂದಲೂ ಅವ್ಯಕ್ತನಾಗಿರುವುದ ರಿಂದಲೂ ತದ್ರೂಪವೇ ಆಗಿರುವ ಪರಬ್ರಹ್ಮವಸ್ತುವಿನಲ್ಲಿ ಸೇರಿಕೊಂಡ

ನಂತರ ಪುನಃ ಶರೀರಗಳಲ್ಲಿ ಸೇರಿಕೊಳ್ಳಲು ಆಸಕ್ತನಾಗುವುದಿಲ್ಲ. ಈ ಕಾರಣದಿಂದಲೇ ಪರಬ್ರಹ್ಮವಸ್ತುವು ಶಾಶ್ವತವಾದುದು.

ತದ್ಬೀಜಂ ಸರ್ವಭೂತಾನಾಂ ತೇನ ಜೀವನ್ತಿ ಜನ್ತವಃ ।
ಸ ಜೀವಃ ಸರ್ವಗಾತ್ರಾಣಿ ಗರ್ಭಸ್ಯಾವಿಶ್ಯ ಭಾಗಶಃ ॥೭॥

ದಧಾತಿ ಚೇತಸಾ ಸದ್ಯಃ ಪ್ರಾಣಸ್ಥಾನೇಷ್ವವಸ್ಥಿತಃ ।
ತತಃ ಸ್ಪನ್ದಯತೇಽಙ್ಗಾನಿ ಸ ಗರ್ಭಶ್ಚೇತನಾನ್ವಿತಃ ॥೮॥

ಆ ಜೀವಾತ್ಮನು ಎಲ್ಲ ಪ್ರಾಣಿಗಳ ಅಸ್ತಿತ್ವಕ್ಕೂ ಮೂಲಕಾರಣನಾಗಿದ್ದಾನೆ. ಆ ಜೀವಾತ್ಮನಿಂದಲೇ ಪ್ರಾಣಿಗಳೂ ಜೀವಿಸಿರುತ್ತವೆ. (ಜೀವನಿರುವುದರಿಂದಲೇ ಜೀವಿಸಿವೆ.) ಆ ಜೀವಾತ್ಮನು ಗರ್ಭದ ಸರ್ವಾವಯವಗಳನ್ನೂ ಭಾಗಶಃ ಆವರಿಸಿ ಪ್ರಾಣಸ್ಥಾನಗಳಲ್ಲಿದ್ದುಕೊಂಡು (ಹೃದಯದಲ್ಲಿದ್ದುಕೊಂಡು) ಚೇತಸ್ಸಿನ ಮೂಲಕವಾಗಿ ಒಡನೆಯೇ ಎಲ್ಲವನ್ನೂ ಧರಿಸುತ್ತಾನೆ. ಅನಂತರ ಚೇತನಾಯುಕ್ತವಾದ ಗರ್ಭವು ಎಲ್ಲ ಅವಯವಗಳನ್ನೂ ಸಂಚಾಲನಗೊಳಿಸುತ್ತದೆ.

ಯಥಾ ಲೋಹಸ್ಯ ನಿಃಸ್ಯನ್ದೋ ನಿಷಿಕ್ತೋ ಬಿಮ್ಬವಿಗ್ರಹಮ್ ।
ಉಪೈತಿ ತದ್ವಿಜಾನೀಹಿ ಗರ್ಭೇ ಜೀವಪ್ರವೇಶನಮ್ ॥೯॥

ಯಾವ ರೀತಿಯಲ್ಲಿ ಕಾಯಿಸಿದ ಲೋಹದ ದ್ರವವು ಎರಕದ ಅಚ್ಚನ್ನು ಪ್ರವೇಶಿಸಿ ಬಿಂಬದ ರೂಪವನ್ನು ಹೊಂದುವುದೋ–ಹಾಗೆಯೇ ಸೂಕ್ಷ್ಮರೂಪಿಯಾದ ಮತ್ತು ಅವ್ಯಕ್ತನಾದ ಜೀವನು ರೇತಸ್ಸಿನ ರೂಪವಾಗಿ ಗರ್ಭವನ್ನು ಪ್ರವೇಶಿಸಿ ಯೋನಿಗೆ ಅನುಗುಣವಾದ ಆಕಾರವನ್ನು ಪಡೆಯುತ್ತಾನೆ.

ಲೋಹಪಿಣ್ಡಂ ಯಥಾ ವಹ್ನಿಃ ಪ್ರವಿಶ್ಯ ಹ್ಯತಿತಾಪಯೇತ್ ।
ತಥಾ ತ್ವಮಪಿ ಜಾನೀಹಿ ಗರ್ಭೇ ಜೀವೋಪಪಾದನಮ್ ॥೧೦॥

ಯಾವ ರೀತಿಯಲ್ಲಿ ಬೆಂಕಿಯು ಕಬ್ಬಿಣದ ಗುಂಡಿನಲ್ಲಿ ಪ್ರವೇಶಿಸಿ ಆ ಗುಂಡನ್ನು ಹೆಚ್ಚು ತಾಪಯುಕ್ತವನ್ನಾಗಿ ಮಾಡುವುದೋ–ಅದೇ ರೀತಿಯಲ್ಲಿ ಜೀವನು ಗರ್ಭಪಿಂಡದಲ್ಲಿ ಪ್ರವೇಶಿಸಿ ಅದನ್ನು ಚೇತನಗೊಳಿಸುತ್ತಾನೆ.

ಯಥಾ ಚ ದೀಪಃ ಶರಣೇ ದೀಪ್ಯಮಾನಃ ಪ್ರಕಾಶತೇ।
ಏವಮೇವ ಶರೀರಾಣಿ ಪ್ರಕಾಶಯತಿ ಚೇತನಾ ॥೧೧॥

ಹಚ್ಚಿಟ್ಟ ದೀಪವು ಹೇಗೆ ಮನೆಯನ್ನು ಬೆಳಗುವುದೋ–ಹಾಗೆಯೇ ಚೇತನವು ಶರೀರಗಳನ್ನು ಪ್ರಕಾಶಗೊಳಿಸುತ್ತದೆ.

ಯದ್ಯಚ್ಚ ಕುರುತೇ ಕರ್ಮ ಶುಭಂ ವಾ ಯದಿ ವಾಶುಭಮ್।
ಪೂರ್ವದೇಹಕೃತಂ ಸರ್ವಮವಶ್ಯಮುಪಭುಜ್ಯತೇ ॥೧೨॥

ಪುಣ್ಯಕರ್ಮವಾಗಲೀ, ಪಾಪಕರ್ಮವಾಗಲೀ–ಮನುಷ್ಯನು ತನ್ನ ಹಿಂದಿನ ಜನ್ಮದಲ್ಲಿ ಯಾವ ಯಾವ ಕರ್ಮಗಳನ್ನು ಮಾಡಿದ್ದನೋ–ಆ ಎಲ್ಲ ಕರ್ಮಗಳ ಫಲವನ್ನೂ ಅವಶ್ಯವಾಗಿ ಅನುಭವಿಸಿಯೇ ತೀರುತ್ತಾನೆ.

ತತಸ್ತು ಕ್ಷೀಯತೇ ಚೈವ ಪುನಶ್ಚಾನ್ಯತ್ಪ್ರಚೀಯತೇ।
ಯಾವತ್ತನ್ಮೋಕ್ಷಯೋಗಸ್ಥಂ ಧರ್ಮಂ ನೈವಾವಬುಧ್ಯತೇ ॥೧೩॥

ಪಾಪಕರ್ಮಗಳ ಫಲವಾಗಲೀ, ಪುಣ್ಯಕರ್ಮಗಳ ಫಲವಾಗಲೀ–ಉಪಭೋಗಿಸುತ್ತಿದ್ದಂತೆ ಕ್ಷೀಣಿಸುತ್ತಿರುತ್ತದೆ. ಆದರೆ ಮನುಷ್ಯನು ಈ ಜನ್ಮದಲ್ಲಿ ಮಾಡುವ ಕರ್ಮಫಲಗಳ ಸಂಚಯವೂ ಆಗುತ್ತಲೇ ಇರುತ್ತದೆ. ಆದುದರಿಂದ ಮನುಷ್ಯನು ಎಲ್ಲಿಯವರೆಗೆ ಮೋಕ್ಷಪ್ರಾಪ್ತಿಗೆ ಸಹಾಯಕವಾದ ಧರ್ಮವನ್ನು ತಿಳಿದುಕೊಳ್ಳುವುದಿಲ್ಲವೋ–ಅಲ್ಲಿಯವರೆಗೆ ಈ ಕರ್ಮಚಕ್ರದಿಂದ ಹೊರಬರುವ ಸಾಧ್ಯತೆಯೇ ಇಲ್ಲ.

ತತ್ರ ಕರ್ಮ ಪ್ರವಕ್ಷ್ಯಾಮಿ ಸುಖೀ ಭವತಿ ತೇನ ವೈ।
ಆವರ್ತಮಾನೋ ಜಾತೀಷು ಯಥಾನ್ಯೋನ್ಯಾಸು ಸತ್ತಮ ॥೧೪॥

ಕಾಶ್ಯಪನೇ! ಹೀಗೆ ಭಿನ್ನ-ಭಿನ್ನವಾದ ಯೋನಿಗಳಲ್ಲಿ ಹುಟ್ಟಿ ಸಾಯುವ ಮನುಷ್ಯನು ಯಾವ ಕರ್ಮಗಳ ಅನುಷ್ಠಾನದಿಂದ ಸುಖಿಯಾಗುವನೆಂಬುದನ್ನು ಹೇಳುವೆನು; ಕೇಳು:

ದಾನಂ ವ್ರತಂ ಬ್ರಹ್ಮಚರ್ಯಂ ಯಥೋಕ್ತಂ ಬ್ರಹ್ಮಧಾರಣಮ್।
ದಮಃ ಪ್ರಶಾನ್ತತಾ ಚೈವ ಭೂತಾನಾಂ ಚಾನುಕಮ್ಪನಮ್ ॥೧೫॥
ಸಂಯಮಶ್ಚಾನೃಶಂಸ್ಯಂ ಚ ಪರಸ್ವಾದಾನವರ್ಜನಮ್।
ವ್ಯಲೀಕಾನಾಮಕರಣಂ ಭೂತಾನಾಂ ಮನಸಾ ಭುವಿ ॥೧೬॥

ಮಾತಾಪಿತ್ರೋಶ್ಚ ಶುಶ್ರೂಷಾ ದೇವತಾತಿಥಿ ಪೂಜನಮ್ ।
ಗುರುಪೂಜಾ ಘೃಣಾ ಶೌಚಂ ನಿತ್ಯಮಿನ್ದ್ರಿಯಸಂಯಮಃ ॥೧೭॥
ಪ್ರವರ್ತನಂ ಶುಭಾನಾಂ ಚ ತತ್ಸತಾಂ ವೃತ್ತಮುಚ್ಯತೇ ।
ತತೋ ಧರ್ಮಃ ಪ್ರಭವತಿ ಯಃ ಪ್ರಜಾಃ ಪಾತಿ ಶಾಶ್ವತೀಃ ॥೧೮॥

ದಾನ, ವ್ರತ, ಬ್ರಹ್ಮಚರ್ಯ, ಶಾಸ್ತ್ರೋಕ್ತವಾದ ರೀತಿಯಲ್ಲಿ ವೇದಾಧ್ಯಯನ, ಇಂದ್ರಿಯನಿಗ್ರಹ, ಪ್ರಶಾಂತತೆ, ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ಅನುಕಂಪ, ಚಿತ್ತಸಂಯಮ, ದಯಾಪರತೆ, ಇತರರ ಸಂಪತ್ತನ್ನು ಅಪಹರಿಸದೇ ಇರುವುದು, ಪ್ರಪಂಚದಲ್ಲಿರುವ ಪ್ರಾಣಿಗಳ ವಿಷಯದಲ್ಲಿ ಮನಸ್ಸಿನಿಂದಲಾದರೂ ಅಹಿತವನ್ನು ಬಯಸದೇ ಇರುವುದು, ಮಾತಾ-ಪಿತೃಗಳ ಶುಶ್ರೂಷೆ, ದೇವತಾಪೂಜೆ, ಅತಿಥಿಸತ್ಕಾರ, ಗುರುಜನರ ಸತ್ಕಾರ, ದಯೆ, ಶುಚಿಯಾಗಿರುವುದು, ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು, ಇತರರನ್ನು ಶುಭಕರ್ಮಗಳಲ್ಲಿ ತೊಡಗಿಸುವುದು–ಇವುಗಳು ಸತ್ಪುರುಷರ ಆಚರಣೆಗಳೆಂದು ಹೇಳುತ್ತಾರೆ. ಇವುಗಳ ಅನುಷ್ಠಾನದಿಂದ ಧರ್ಮವು ಪ್ರಾದುರ್ಭವಿಸುತ್ತದೆ. ಆ ಧರ್ಮವೇ ಪ್ರಜೆಗಳನ್ನು ಸದಾ ರಕ್ಷಿಸುತ್ತದೆ.

ಏವಂ ಸತ್ಸು ಸದಾ ಪಶ್ಯೇತ್ತತ್ರಾಪ್ಯೇಷಾ ಧ್ರುವಾ ಸ್ಥಿತಿಃ ।
ಆಚಾರೋ ಧರ್ಮಮಾಚಷ್ಟೇ ಯಸ್ಮಿಞ್ಶಾನ್ತಾ ವ್ಯವಸ್ಥಿತಾಃ ॥೧೯॥

ಸತ್ಪುರುಷರಲ್ಲಿ ಇಂತಹ ಸದಾಚಾರಗಳನ್ನು ನಾವು ಯಾವಾಗಲೂ ಕಾಣಬಹುದಾಗಿದೆ. ಅವರಲ್ಲಿ ಈ ಧರ್ಮಗಳು ಶಾಶ್ವತವಾಗಿರುತ್ತವೆ. ಸದಾಚಾರವೇ ಧರ್ಮದ ಪರಿಚಯವನ್ನು ಮಾಡಿಕೊಡುತ್ತದೆ. ಶಾಂತಚಿತ್ತರಾದ ಮಹಾತ್ಮರು ಸದಾಚಾರಗಳಲ್ಲಿಯೇ ತತ್ಪರರಾಗಿರುತ್ತಾರೆ.

ತೇಷು ತತ್ಕರ್ಮ ನಿಕ್ಷಿಪ್ತಂ ಯಃ ಸ ಧರ್ಮಃ ಸನಾತನಃ ।
ಯಸ್ತಂ ಸಮಭಿಪದ್ಯೇತ ನ ಸ ದುರ್ಗತಿಮಾಪ್ನುಯಾತ್ ॥೨೦॥

ಅಂತಹ ಸತ್ಪುರುಷರಲ್ಲಿಯೇ ಹಿಂದೆ ಹೇಳಿದ ದಾನ-ವ್ರತ-ಬ್ರಹ್ಮಚರ್ಯಾದಿ ಸದಾಚಾರಗಳು ಇಡಲ್ಪಟ್ಟಿವೆ. ಅಂತಹ ಸದಾಚಾರಗಳನ್ನೊಳಗೊಂಡಿರುವುದೇ ಸನಾತನಧರ್ಮವೆಂದು ಪ್ರಸಿದ್ಧವಾಗಿದೆ. ಯಾವನು ಆ ಸನಾತನಧರ್ಮವನ್ನು ಆಶ್ರಯಿಸುವನೋ–ಅವನು ಯಾವಾಗಲೂ ದುರ್ಗತಿಯನ್ನು ಹೊಂದುವುದಿಲ್ಲ.

ಅತೋ ನಿಯಮ್ಯತೇ ಲೋಕಃ ಪ್ರಚ್ಯವನ್ಧರ್ಮವರ್ತ್ಮಸು ।
ಯಶ್ಚ ಯೋಗೀ ಚ ಮುಕ್ತಶ್ಚ ಸ ಏತೇಭ್ಯೋ ವಿಶಿಷ್ಯತೇ ॥೨೧॥

ಮನುಷ್ಯನು ಧರ್ಮಮಾರ್ಗಗಳಿಂದ ಜಾರಿಹೋಗುತ್ತಿರುವಾಗ ಈ ಸನಾತನಧರ್ಮವು ಅಥವಾ ಸತ್ಕರ್ಮಗಳ ಅನುಷ್ಠಾನವು ಅವನನ್ನು ಧರ್ಮಭ್ರಷ್ಟನಾಗದಂತೆ ತಡೆಯುತ್ತದೆ. ಯಾವನು ಯೋಗಿಯೋ ಮತ್ತು ಮುಕ್ತನೋ–ಅವನು ಅನುಷ್ಠಾನಪರರಾದ ಸದಾಚಾರಿಗಳಿಗಿಂತಲೂ ಶ್ರೇಷ್ಠನು.

ವರ್ತಮಾನಸ್ಯ ಧರ್ಮೇಣ ಶುಭಂ ಯತ್ರ ಯಥಾ ತಥಾ ।
ಸಂಸಾರತಾರಣಂ ಹ್ಯಸ್ಯ ಕಾಲೇನ ಮಹತಾ ಭವೇತ್ ॥೨೨॥

ಯಾವನು ಯಾವಾಗಲೂ ಧರ್ಮಾನುಸಾರವಾಗಿ ವ್ಯವಹರಿಸುವನೋ ಅವನು ಯಾವುದೇ ಸ್ಥಿತಿಯಲ್ಲಿದ್ದರೂ ಶುಭಫಲಗಳನ್ನೇ ಹೊಂದುತ್ತಾನೆ. ಆದರೆ ಬಹಳ ಕಾಲಾನಂತರ ಅವನು ಭವಬಂಧನದಿಂದ ಮುಕ್ತನಾಗುತ್ತಾನೆ.

ಏವಂ ಪೂರ್ವಕೃತಂ ಕರ್ಮ ನಿತ್ಯಂ ಜನ್ತುಃ ಪ್ರಪದ್ಯತೇ ।
ಸರ್ವಂ ತತ್ಕಾರಣಂ ಯೇನ ವಿಕೃತೋಽಯಮಿಹಾಗತಃ ॥೨೩॥

ಹೀಗೆ ಪ್ರಾಣಿಯು ಯಾವಾಗಲೂ ತಾನು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಫಲವನ್ನೇ ಅನುಭವಿಸುತ್ತದೆ. ಜೀವನು ನಿರ್ವಿಕಾರ ಪರಬ್ರಹ್ಮಸ್ವರೂಪನೇ ಆಗಿದ್ದರೂ ವಿಕಾರವನ್ನು ಹೊಂದಿ ಈ ಜಗತ್ತಿನಲ್ಲಿ ಹುಟ್ಟಲು ಕಾರಣವು ಕರ್ಮವೇ ಆಗಿದೆ.

ಶರೀರಗ್ರಹಣಂ ಚಾಸ್ಯ ಕೇನ ಪೂರ್ವಂ ಪ್ರಕಲ್ಪಿತಮ್ ।
ಇತ್ಯೇವಂ ಸಂಶಯೋ ಲೋಕೇ ತಚ್ಚ ವಕ್ಷ್ಯಾಮ್ಯತಃ ಪರಮ್ ॥೨೪॥

ನಿರ್ವಿಕಾರನಾದ ಆತ್ಮನಿಗೆ ಶರೀರವು ಹೇಗೆ ಬಂದಿತು? ಇದನ್ನು ಮೊದಲು ಕಲ್ಪಿಸಿದವನು ಯಾರು?–ಈ ವಿಧವಾದ ಸಂಶಯವು ಲೋಕದಲ್ಲುಂಟಾಗುವುದು (ಜನರ ಮನಸ್ಸಿನಲ್ಲಿ ಮೂಡುವುದು) ಸ್ವಾಭಾವಿಕವಾಗಿಯೇ ಇದೆ. ಇನ್ನು ಮುಂದೆ ಈ ಸಂಶಯವನ್ನು ನಿವಾರಣೆ ಮಾಡುತ್ತೇನೆ.

ಶರೀರಮಾತ್ಮನಃ ಕೃತ್ವಾ ಸರ್ವಲೋಕಪಿತಾಮಹಃ ।
ತ್ರೈಲೋಕ್ಯಮಸೃಜದ್ಬ್ರಹ್ಮಾ ಕೃತ್ಸ್ನಂ ಸ್ಥಾವರಜಙ್ಗಮಮ್ ॥೨೫॥

ಸಕಲಲೋಕಗಳಿಗೂ ಪಿತಾಮಹನಾದ ಬ್ರಹ್ಮನು ಎಲ್ಲರಿಗಿಂತಲೂ ಮೊದಲು ತನ್ನ ಆತ್ಮವನ್ನೇ ಶರೀರವನ್ನಾಗಿ ಪರಿವರ್ತಿಸಿಕೊಂಡು ಸಮಗ್ರವಾದ ಚರಾಚರವಸ್ತುಗಳನ್ನೂ ಮೂರು ಲೋಕಗಳನ್ನೂ ಸೃಷ್ಟಿಸಿದನು.

ತತಃ ಪ್ರಧಾನಮಸೃಜತ್ಪ್ರಕೃತಿಂ ಸ ಶರೀರಿಣಾಮ್ ।
ಯಯಾ ಸರ್ವಮಿದಂ ವ್ಯಾಪ್ತಂ ಯಾಂ ಲೋಕೇ ಪರಮಾಂ ವಿದುಃ ॥

ಅನಂತರ ಬ್ರಹ್ಮನು ಪ್ರಧಾನವೆಂಬ ತತ್ತ್ವವನ್ನು ಸೃಷ್ಟಿಸಿದನು. ಅದನ್ನೇ ಶರೀರಗಳ ಪ್ರಕೃತಿಯೆಂದು ಕರೆಯುತ್ತಾರೆ. ಆ ಪ್ರಕೃತಿಯಿಂದಲೇ ಈ ಎಲ್ಲ ಜಗತ್ತೂ ವ್ಯಾಪ್ತವಾಗಿದೆ. ಅದನ್ನೇ ಲೋಕದಲ್ಲಿ ಪರಾಪ್ರಕೃತಿ ಅಥವಾ ಮೂಲಪ್ರಕೃತಿ ಎಂದೂ ಹೇಳುತ್ತಾರೆ.

ಇದಂ ತತ್ಕ್ಷರಮಿತ್ಯುಕ್ತಂ ಪರಂ ತ್ವಮೃತಮಕ್ಷರಮ್ ।
ತ್ರಯಾಣಾಂ ಮಿಥುನಂ ಸರ್ವಮೇಕೈಕಸ್ಯ ಪೃಥಕ್ಪೃಥಕ್ ॥೨೭॥

ಈ ಪ್ರಾಕೃತವಾದ ಜಗತ್ತು ಕ್ಷರವೆಂದು ಹೇಳಲ್ಪಡುತ್ತದೆ. ಇದಕ್ಕಿಂತಲೂ ಭಿನ್ನವಾದ ಅವಿನಾಶಿಯಾದ ಜೀವಾತ್ಮನೇ ಅಕ್ಷರನು. ಶುದ್ಧಪರಬ್ರಹ್ಮತತ್ತ್ವವು ಕ್ಷರ ಮತ್ತು ಅಕ್ಷರಗಳಿಗಿಂತಲೂ ವಿಲಕ್ಷಣವಾದುದು. ಕ್ಷರ-ಅಕ್ಷರ ಮತ್ತು ಶುದ್ಧಬ್ರಹ್ಮತತ್ತ್ವ–ಈ ಮೂರರಲ್ಲಿ ಕ್ಷರ-ಅಕ್ಷರಗಳ ಮಿಥುನವು ವಿಶ್ವದ ಎಲ್ಲ ಜೀವಜಂತುಗಳಲ್ಲಿಯೂ ಪ್ರತ್ಯೇಕ-ಪ್ರತ್ಯೇಕವಾಗಿಯೇ ಇದೆ.

ಅಸೃಜತ್ಸರ್ವಭೂತಾನಿ ಪೂರ್ವದೃಷ್ಟಃ ಪ್ರಜಾಪತಿಃ ।
ಸ್ಥಾವರಾಣಿ ಚ ಭೂತಾನಿ ಇತ್ಯೇಷಾ ಪೌರ್ವಿಕೀ ಶ್ರುತಿಃ ॥೨೮॥

ಸೃಷ್ಟಿಯ ಆರಂಭದಲ್ಲಿ ಯಾವನು ಸತ್ಸ್ವರೂಪನೆಂದು ನಿರ್ದಿಷ್ಟನಾಗಿದ್ದನೋ ಆ ಪ್ರಜಾಪತಿಯೇ ಸಮಸ್ತವಾದ ಸ್ಥಾವರ-ಜಂಗಮಾತ್ಮಕವಾದ ಪ್ರಾಣಿಗಳನ್ನು ಸೃಷ್ಟಿಸಿದನು–ಎಂಬುದಾಗಿ ಪುರಾತನಶ್ರುತಿಯು ಹೇಳುತ್ತದೆ.

ತಸ್ಯ ಕಾಲಪರೀಮಾಣಮಕರೋತ್ಸ ಪಿತಾಮಹಃ ।
ಭೂತೇಷು ಪರಿವೃತ್ತಿಂ ಚ ಪುನರಾವೃತ್ತಿಮೇವ ಚ ॥೨೯॥

ಪಿತಾಮಹನು ಜೀವಗಳಿಗೆ ನಿಯತವಾದ ಕಾಲದವರೆಗೆ ಶರೀರವನ್ನು ಧಾರಣೆಮಾಡಿಕೊಂಡಿರುವುದಕ್ಕೂ, ಭಿನ್ನ-ಭಿನ್ನಯೋನಿಗಳಲ್ಲಿ ಹುಟ್ಟುವುದಕ್ಕೂ, ಪರಲೋಕಕ್ಕೆ ಹೋಗಿ ಪುನಃ ಈ ಲೋಕಕ್ಕೆ ಹಿಂದಿರುಗುವುದಕ್ಕೂ ವ್ಯವಸ್ಥೆಮಾಡಿದನು.

ಯಥಾತ್ರ ಕಶ್ಚಿನ್ಮೇಧಾವೀ ದೃಷ್ಟಾತ್ಮಾ ಪೂರ್ವಜನ್ಮನಿ ।
ಯತ್ಪ್ರವಕ್ಷ್ಯಾಮಿ ತತ್ಸರ್ವಂ ಯಥಾವದುಪಪದ್ಯತೇ ॥೩೦॥

ಹಿಂದಿನ ಜನ್ಮದಲ್ಲಿ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡ ಒಬ್ಬಾನೊಬ್ಬ ಮೇಧಾವಿಯು ಸಂಸಾರದ ಅನಿತ್ಯತೆಯ ವಿಷಯದಲ್ಲಿ ಯಾವ ಮಾತನ್ನು ಹೇಳಿರುವನೋ–ಅದನ್ನೇ ನಾನು ಹೇಳುತ್ತೇನೆ. ನಾನು ಹೇಳಲಿರುವ ಆ ಎಲ್ಲ ಮಾತೂ ಯಥಾರ್ಥವಾಗಿಯೂ ಸಂಗತವಾಗಿಯೂ ಇರುವುದು.

ಸುಖದುಃಖೇ ಯಥಾ ಸಮ್ಯಗನಿತ್ಯೇ ಯಃ ಪ್ರಪಶ್ಯತಿ ।
ಕಾಯಂ ಚಾಮೇಧ್ಯಂ ಸಂಘಾತಂ ವಿನಾಶಂ ಕರ್ಮಸಂಹಿತಮ್ ॥೩೧॥

ಯಚ್ಚ ಕಿಂಚಿತ್ಸುಖಂ ತಚ್ಚ ದುಃಖಂ ಸರ್ವಮಿತಿ ಸ್ಮರನ್ ।
ಸಂಸಾರಸಾಗರಂ ಘೋರಂ ತರಿಷ್ಯತಿ ಸುದುಸ್ತರಮ್ ॥೩೨॥

ಯಾವ ಮನುಷ್ಯನು ಸುಖ-ದುಃಖಗಳೆರಡನ್ನೂ ಅನಿತ್ಯವೆಂದು ತಿಳಿಯುವನೋ, ಶರೀರವನ್ನು ಅಮೇಧ್ಯಾದಿ ಹೊಲಸು ವಸ್ತುಗಳ ಸಂಘಾತವೆಂದು ತಿಳಿಯುವನೋ, ಫಲಕಾಮನೆಯ ಕರ್ಮಯೋಗವನ್ನು ಮೃತ್ಯುವೆಂದು ಭಾವಿಸುವನೋ, ಸುಖದಂತೆ ಕಾಣುವುದು ಯಾವುದಾದರೂ ಇದ್ದರೆ ಅದೆಲ್ಲವೂ ದುಃಖವೆಂದೇ ಭಾವಿಸುವನೋ–ಅಂತಹ ಮನುಷ್ಯನು ಸಾಮಾನ್ಯರಿಂದ ದಾಟಲು ಅಸಾಧ್ಯವಾದ ಘೋರವಾದ ಸಂಸಾರಸಾಗರವನ್ನು ದಾಟುತ್ತಾನೆ.

ಜಾತೀಮರಣರೋಗೈಶ್ಚ ಸಮಾವಿಷ್ಟಃ ಪ್ರಧಾನವಿತ್ ।
ಚೇತನಾವತ್ಸು ಚೈತನ್ಯಂ ಸಮಂ ಭೂತೇಷು ಪಶ್ಯತಿ ॥೩೩॥

ನಿರ್ವಿದ್ಯತೇ ತತಃ ಕೃತ್ಸ್ನಂ ಮಾರ್ಗಮಾಣಃ ಪರಂ ಪದಮ್ ।
ತಸ್ಯೋಪದೇಶಂ ವಕ್ಷ್ಯಾಮಿ ಯಾಥಾತಥ್ಯೇನ ಸತ್ತಮ ॥೩೪॥

ಬ್ರಾಹ್ಮಣಶ್ರೇಷ್ಠನೇ! ಜನನ-ಮರಣ-ರೋಗಗಳಿಂದ ವ್ಯಾಪ್ತನಾದ ಪುರುಷನು ಪ್ರಧಾನತತ್ತ್ವವನ್ನು (ಮೂಲಪ್ರಕೃತಿಯ ಸ್ವರೂಪವನ್ನು) ತಿಳಿದವನಾಗಿ ಚೈತನ್ಯದಿಂದ ಯುಕ್ತವಾದ ಎಲ್ಲ ಪ್ರಾಣಿಗಳಲ್ಲಿಯೂ ಇರುವ ಚೇತನವು ಒಂದೇ ಎಂಬುದನ್ನು ಕಂಡುಕೊಳ್ಳುವನೋ–ಪರಮಪದ ಪ್ರಾಪ್ತಿಯ ಅನುಸಂಧಾನದಲ್ಲಿ ತೊಡಗಿ ಪ್ರಾಪಂಚಿಕವಾದ ಸುಖೋಪಭೋಗ ಗಳಿಂದ ವಿರತನಾಗಿರುವನೋ–ಅಂತಹ ಜ್ಞಾನಿಯ ಉಪದೇಶವನ್ನು ಯಥಾವತ್ತಾಗಿ ಹೇಳುವೆನು; ಕೇಳು:

ಶಾಶ್ವತಸ್ಯಾವ್ಯಯಸ್ಯಾಥ ಯದಸ್ಯ ಜ್ಞಾನಮುತ್ತಮಮ್ ।
ಪ್ರೋಚ್ಯಮಾನಂ ಮಯಾ ವಿಪ್ರ ನಿಬೋಧೇದಮಶೇಷತಃ ॥೩೫॥

ಅಂತಹ ಜ್ಞಾನಿಗೆ ಯಾವ ಸನಾತನನಾದ, ಅವಿನಾಶಿಯಾದ ಪರಮಾತ್ಮನ ಉತ್ತಮಜ್ಞಾನವು ಇಷ್ಟವಾಗಿದೆಯೋ–ಅಂತಹ ಜ್ಞಾನವನ್ನೇ ನಾನೂ ಹೇಳುತ್ತೇನೆ. ನಾನು ಹೇಳಲಿರುವ ಜ್ಞಾನೋಪದೇಶವನ್ನು ಏಕಾಗ್ರತೆಯಿಂದ ಸಮಗ್ರವಾಗಿ ಕೇಳು.”

೧೮ನೆಯ ಅಧ್ಯಾಯವು ಮುಗಿಯಿತು.

೧೯ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಗುರು-ಶಿಷ್ಯರ ಸಂವಾದದಲ್ಲಿ ಮೋಕ್ಷಪ್ರಾಪ್ತಿಯ ವರ್ಣನೆ

ಸಿದ್ಧಪುರುಷನು ಹೇಳುತ್ತಾನೆ:

ಯಃ ಸ್ಯಾದೇಕಾಯನೇ ಲೀನಸ್ತೂಷ್ಣೀಂ ಕಿಂಚಿದಚಿನ್ತಯನ್ ।
ಪೂರ್ವಂ ಪೂರ್ವಂ ಪರಿತ್ಯಜ್ಯ ಸ ತೀರ್ಣೋ ಬನ್ಧನಾದ್ಭವೇತ್ ॥೧॥

ಕಾಶ್ಯಪನೇ! ಯಾವ ಮನುಷ್ಯನು ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳಲ್ಲಿ ಮೊದಲು-ಮೊದಲನೆಯದರ ಮೇಲಿನ ಅಭಿಮಾನವನ್ನು ಪರಿತ್ಯಜಿಸಿ, ಪ್ರಾಪಂಚಿಕವಾದ ಯಾವ ವಿಷಯವನ್ನೂ ಚಿಂತಿಸದೇ ಮೌನಭಾವದಲ್ಲಿದ್ದುಕೊಂಡು, ಎಲ್ಲರಿಗೂ ಏಕಮಾತ್ರ ಆಶ್ರಯವಾದ ಪರಬ್ರಹ್ಮಪರಮಾತ್ಮನಲ್ಲಿ ಮನಸ್ಸನ್ನು ಲೀನಗೊಳಿಸುವನೋ–ಅಂತಹವನು ಸಂಸಾರಬಂಧನದಿಂದ ಮುಕ್ತನಾಗುತ್ತಾನೆ.

ಸರ್ವಮಿತ್ರಃ ಸರ್ವಸಹಃ ಶಮೇ ರಕ್ತೋ ಜಿತೇನ್ದ್ರಿಯಃ ।
ವ್ಯಪೇತಭಯಮನ್ಯುಶ್ಚ ಆತ್ಮವಾನ್ಮುಚ್ಯತೇ ನರಃ ॥೨॥

ಯಾವನಿಗೆ ಎಲ್ಲರೂ ಮಿತ್ರರೋ, ಯಾವನು ಎಲ್ಲವನ್ನೂ ಸಹಿಸಿಕೊಳ್ಳುವನೋ, ಮನೋನಿಗ್ರಹದಲ್ಲಿ ಆಸಕ್ತನಾಗಿರುವನೋ, ಇಂದ್ರಿಯಗಳನ್ನು ಜಯಿಸಿರುವನೋ, ಭಯ-ಕ್ರೋಧರಹಿತನೋ ಮತ್ತು ಆತ್ಮಜ್ಞಾನಿಯೋ–ಅಂತಹವನು ಸಂಸಾರಬಂಧನದಿಂದ ಮುಕ್ತನಾಗುತ್ತಾನೆ.

ಆತ್ಮವತ್ಸರ್ವಭೂತೇಷು ಯಶ್ಚರೇನ್ನಿಯತಃ ಶುಚಿಃ ।
ಅಮಾನೀ ನಿರಭೀಮಾನಃ ಸರ್ವತೋ ಮುಕ್ತ ಏವ ಸಃ ॥೩॥

ಯಾವನು ನಿಯಮಪರಾಯಣನಾಗಿರುವನೋ, ಶುಚಿಯಾಗಿರುವನೋ, ಎಲ್ಲಪ್ರಾಣಿಗಳನ್ನೂ ತನ್ನಂತೆಯೇಭಾವಿಸುವನೋ, ಸಮ್ಮಾನ ವನ್ನು ಆಶಿಸದಿರುವನೋ, ನಿರಭಿಮಾನಿಯೋ–ಅಂತಹವನು ಎಲ್ಲದ ರಿಂದಲೂ ಮುಕ್ತನೇ ಸರಿ.

ಜೀವಿತಂ ಮರಣಂ ಚೋಭೇ ಸುಖದುಃಖೇ ತಥೈವ ಚ ।
ಲಾಭಾಲಾಭೇ ಪ್ರಿಯದ್ವೇಷ್ಯೇ ಯಃ ಸಮಃ ಸ ಚ ಮುಚ್ಯತೇ ॥೪॥

ಯಾವನಿಗೆ ಹುಟ್ಟು-ಸಾವುಗಳೂ, ಸುಖ-ದುಃಖಗಳೂ ಸಮಾನವೋ, ಯಾವನು ಲಾಭ-ನಷ್ಟಗಳನ್ನೂ, ಪ್ರಿಯರನ್ನೂ ಮತ್ತು ದ್ವೇಷಿಗಳನ್ನೂ ಸಮಾನಭಾವದಿಂದ ಕಾಣುವನೋ–ಅವನು ಮುಕ್ತನಾಗುತ್ತಾನೆ.

ನ ಕಸ್ಯಚಿತ್ಸ್ಪೃಹಯತೇ ನಾವಜಾನಾತಿ ಕಿಂಚನ ।
ನಿರ್ದ್ವನ್ದ್ವೋ ವೀತರಾಗಾತ್ಮಾ ಸರ್ವಥಾ ಮುಕ್ತ ಏವ ಸಃ ॥೫॥

ಯಾವನು ಯಾವನೊಬ್ಬನ ಧನಕ್ಕೂ ಆಸೆಪಡುವುದಿಲ್ಲವೋ, ಯಾವುದನ್ನೂ ಅವಹೇಳನಮಾಡುವುದಿಲ್ಲವೋ, ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳ ಪ್ರಭಾವಕ್ಕೆ ವಿಷಯನಾಗಿರುವುದಿಲ್ಲವೋ, ಆಸಕ್ತಿರಹಿತವಾದ ಮನಸ್ಸಿನಿಂದ ಕೂಡಿರುವನೋ–ಅಂತಹವನು ಸರ್ವಥಾ ಮುಕ್ತನೇ ಸರಿ.

ಅನಮಿತ್ರಶ್ಚ ನಿರ್ಬನ್ಧುರನಪತ್ಯಶ್ಚ ಯಃ ಕ್ವಚಿತ್ ।
ತ್ಯಕ್ತಧರ್ಮಾರ್ಥಕಾಮಶ್ಚ ನಿರಾಕಾಂಕ್ಷೀ ಚ ಮುಚ್ಯತೇ ॥೬॥

ಯಾವನು ಶತ್ರುರಹಿತನೋ, ಬಂಧುಗಳಲ್ಲಿಯೂ ಪುತ್ರರಲ್ಲಿಯೂ ಮಮತೆಯಿಲ್ಲದವನೋ, ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳನ್ನೂ ಪರಿತ್ಯಜಿಸಿ ನಾಲ್ಕನೆಯದಾದ ಮೋಕ್ಷವನ್ನೇ ಆಶ್ರಯಿಸಿರುವನೋ, ನಿರಪೇಕ್ಷನೋ–ಅಂತಹವನು ಸಂಸಾರಸಾಗರದಿಂದ ಮುಕ್ತನಾಗುತ್ತಾನೆ.

ನೈವ ಧರ್ಮೀ ನ ಚಾಧರ್ಮೀ ಪೂರ್ವೋಪಚಿತಹಾಯಕಃ ।
ಧಾತುಕ್ಷಯಪ್ರಶಾನ್ತಾತ್ಮಾ ನಿರ್ದ್ವನ್ದ್ವಃ ಸ ವಿಮುಚ್ಯತೇ ॥೭॥

ಯಾವನಿಗೆ ಧರ್ಮದಲ್ಲಾಗಲೀ ಅಧರ್ಮದಲ್ಲಾಗಲೀ–ಆಸಕ್ತಿಯಿಲ್ಲವೋ, ಯಾವನು ಪೂರ್ವಸಂಚಿತವಾದ ಕರ್ಮಫಲಗಳನ್ನು ಭೋಗದಿಂದ ಕ್ಷಯಗೊಳಿಸುವನೋ, ಶಬ್ದ-ಸ್ಪರ್ಶಾದಿ ಇಂದ್ರಿಯಗಳ ವಿಷಯಗಳನ್ನು ತ್ಯಜಿಸಿರುವುದರಿಂದ ಪ್ರಶಾಂತವಾದ ಮನಸ್ಸುಳ್ಳವನಾಗಿರುವನೋ, ದ್ವಂದ್ವಾತೀತನೋ–ಅಂತಹವನು ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ.

ಅಕರ್ಮವಾನ್ವಿಕಾಂಕ್ಷಶ್ಚ ಪಶ್ಯೇಜ್ಜಗದಶಾಶ್ವತಮ್ ।
ಅಶ್ವತ್ಥಸದೃಶಂ ನಿತ್ಯಂ ಜನ್ಮಮೃತ್ಯುಜರಾಯುತಮ್ ॥೮॥

ವೈರಾಗ್ಯಬುದ್ಧಿಃ ಸತತಮಾತ್ಮದೋಷವ್ಯಪೇಕ್ಷಕಃ ।
ಆತ್ಮಬನ್ಧವಿನಿರ್ಮೋಕ್ಷಂ ಸ ಕರೋತ್ಯಚಿರಾದಿವ ॥೯॥

ಯಾವನು ಕರ್ಮದ ಕರ್ತೃವು ತಾನೆಂದು ಭಾವಿಸಿಕೊಳ್ಳುವುದಿಲ್ಲವೋ (ಕಾಮ್ಯಕರ್ಮಗಳನ್ನೂ ಮಾಡುವುದಿಲ್ಲವೋ ಅಥವಾ ಸಂನ್ಯಾಸಿಯಾಗುವನೋ), ಕಾಮರಹಿತನೋ, ಜಗತ್ತು ಅಶಾಶ್ವತವಾದುದೆಂದೂ, ಅಶ್ವತ್ಥಸದೃಶವಾದುದೆಂದೂ, ಆತ್ಮಸಾಧನೆಗೆ ಪ್ರತಿಕೂಲವಾದುದೆಂದೂ, ನಿತ್ಯವೂ ಹುಟ್ಟು-ಸಾವು-ಮುಪ್ಪುಗಳಿಂದ ಕೂಡಿರತಕ್ಕುದೆಂದೂ ಕಂಡುಕೊಂಡು, ವೈರಾಗ್ಯದ ಬುದ್ಧಿಯನ್ನು ಹೊಂದಿ ತನ್ನಲ್ಲಿರುವ ದೋಷಗಳನ್ನೂ ಕಂಡುಕೊಳ್ಳುವನೋ–ಅಂತಹವನು ಬಹಳ ಬೇಗ ಸಂಸಾರಬಂಧನದಿಂದ ತನ್ನನ್ನು ಬಿಡುಗಡೆಮಾಡಿಕೊಳ್ಳುತ್ತಾನೆ.

ಅಗನ್ಧಮರಸಸ್ಪರ್ಶಮಶಬ್ದಮಪರಿಗ್ರಹಮ್ ।
ಅರೂಪಮನಭಿಜ್ಞೇಯಂ ದೃಷ್ಟ್ವಾತ್ಮಾನಂ ವಿಮುಚ್ಯತೇ ॥೧೦॥

ಗಂಧ-ರಸ-ಸ್ಪರ್ಶ-ಶಬ್ದ-ರೂಪಗಳಿಲ್ಲದ, ಹಿಡಿಯಲು ಮತ್ತು ತಿಳಿಯಲು ಅಸಾಧ್ಯನಾದ ಆತ್ಮನನ್ನು ಹೃದಯಗುಹೆಯಲ್ಲಿ ನೋಡಿದವನು ವಿಮುಕ್ತನಾಗುತ್ತಾನೆ.

ಪಞ್ಚಭೂತಗುಣೈರ್ಹೀನಮಮೂರ್ತಿಮದಹೇತುಕಮ್ ।
ಅಗುಣಂ ಗುಣಭೋಕ್ತಾರಂ ಯಃ ಪಶ್ಯತಿ ಸ ಮುಚ್ಯತೇ ॥೧೧॥

ಐದು ಭೌತಿಕಗುಣಗಳಿಂದ ರಹಿತನಾಗಿರುವ, ನಿರಾಕಾರನಾದ, ಕಾರಣರಹಿತನಾದ, ನಿರ್ಗುಣನಾದ ಪರಮಾತ್ಮನನ್ನು–ಮಾಯೆಯ ಸಂಬಂಧದಿಂದ ಗುಣಗಳ ಭೋಕ್ತೃವಾಗಿರುವನೆಂಬುದನ್ನು ಯಾವನು ಕಂಡುಕೊಂಡಿರುವನೋ–ಅಂತಹ ಮನುಷ್ಯನು ಮುಕ್ತನಾಗುತ್ತಾನೆ.

ವಿಹಾಯ ಸರ್ವಸಂಕಲ್ಪಾನ್ಬುದ್ಧ್ಯಾ ಶಾರೀರಮಾನಸಾನ್ ।
ಶನೈರ್ನಿರ್ವಾಣಮಾಪ್ನೋತಿ ನಿರಿನ್ಧನ ಇವಾನಲಃ ॥೧೨॥

ಯಾವನು ಬುದ್ಧಿಯಿಂದ ವಿಚಾರಮಾಡಿ ಶಾರೀರವಾದ ಮತ್ತು ಮಾನಸವಾದ ಸರ್ವಸಂಕಲ್ಪಗಳನ್ನೂ ಪರಿತ್ಯಾಗಮಾಡುವನೋ–ಅಂತಹವನು ಕಟ್ಟಿಗೆಯಿಲ್ಲದ ಅಗ್ನಿಯಂತೆ–ಕಾಲಾನುಕ್ರಮವಾಗಿ ಶಾಂತಿಯನ್ನು ಹೊಂದುತ್ತಾನೆ.

ಸರ್ವಸಂಸ್ಕಾರನಿರ್ಮುಕ್ತೋ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ।
ತಪಸಾ ಇನ್ದ್ರಿಯಗ್ರಾಮಂ ಯಶ್ಚರೇನ್ಮುಕ್ತ ಏವ ಸಃ ॥೧೩॥

ಸಕಲವಿಧವಾದ ಸಂಸ್ಕಾರಗಳಿಂದಲೂ ಬಿಡುಗಡೆಯನ್ನು ಹೊಂದಿ, ದ್ವಂದ್ವಾತೀತನಾಗಿ, ಪರಿಗ್ರಹರಹಿತನಾಗಿ, ತಪಸ್ಸಿನಿಂದ ಇಂದ್ರಿಯಗಳ ಸಮೂಹವನ್ನು ವಶಪಡಿಸಿಕೊಂಡು (ಅನಾಸಕ್ತನಾಗಿ) ಯಾವನು ಸಂಚರಿಸುತ್ತಿರುವನೋ, ಅಂತಹವನು ಮುಕ್ತನೇ ಸರಿ.

---

*ಸರ್ವಸಂಸ್ಕಾರನಿರ್ಮುಕ್ತಃ= ಬಾಹ್ಯಸಂಸ್ಕಾರಗಳಿಂದ ವಿಮುಕ್ತನಾಗಿ ಎಂದರ್ಥ. ಧ್ಯಾನಸಂಸ್ಕಾರವೊಂದಿದ್ದರೆ ಬಾಹ್ಯಸಂಸ್ಕಾರಗಳೆಲ್ಲವೂ ನಿಂತೇಹೋಗುತ್ತವೆಂದು ಯೋಗಶಾಸ್ತ್ರವು ಹೇಳುತ್ತದೆ.

ವಿಮುಕ್ತಃ ಸರ್ವಸಂಸ್ಕಾರೈಸ್ತತೋ ಬ್ರಹ್ಮ ಸನಾತನಮ್ ।
ಪರಮಾಪ್ನೋತಿ ಸ ಶಾನ್ತಮಚಲಂ ನಿತ್ಯಮಕ್ಷರಮ್ ॥೧೪॥

ಸರ್ವಸಂಸ್ಕಾರಗಳಿಂದಲೂ ವಿಮುಕ್ತನಾದವನು ಶಾಂತನೂ, ಅಚಲನೂ, ನಿತ್ಯನೂ, ಅವಿನಾಶಿಯೂ, ಸನಾತನನೂ ಆದ ಪರಮಾತ್ಮನನ್ನು ಹೊಂದುತ್ತಾನೆ.

ಕಾಶ್ಯಪನೇ! ಇನ್ನು ಮುಂದೆ ನಾನು ಪರಮೋತ್ತಮವಾದ ಯೋಗಶಾಸ್ತ್ರವನ್ನು ಹೇಳುತ್ತೇನೆ. ಯೋಗಿಗಳು ಯೋಗಾಭ್ಯಾಸಮಾಡುತ್ತಾ ಸಾಧಿಸಿಕೊಂಡ ಆತ್ಮನನ್ನು ಹೇಗೆ ನೋಡುತ್ತಾರೆಂಬುದನ್ನು ಹೇಳುತ್ತೇನೆ. ಆ ಯೋಗವಿದ್ಯೆಯ ಉಪದೇಶವನ್ನು ನಿನಗೆ ಯಥಾವತ್ತಾಗಿ ಮಾಡುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ಯೋಗಿಯು ತನ್ನ ಮನಸ್ಸನ್ನು ಸ್ವಾಧೀನಪಡಿಸಿ ಕೊಂಡು ಯಾವ ಮಾರ್ಗಗಳ ಮೂಲಕವಾಗಿ ಸಂಚಾಲನಗೊಳಿಸುತ್ತಾ ತನ್ನ ಶರೀರದಲ್ಲಿಯೇ ಆತ್ಮದರ್ಶನವನ್ನು ಮಾಡುವನೆಂಬುದನ್ನು ಹೇಳುತ್ತೇನೆ.

ಇನ್ದ್ರಿಯಾಣಿ ತು ಸಂಹೃತ್ಯ ಮನ ಆತ್ಮನಿ ಧಾರಯೇತ್ ।
ತೀವ್ರಂ ತಪ್ತ್ವಾ ತತಃ ಪೂರ್ವಂ ಮೋಕ್ಷಯೋಗಂ ಸಮಾಚರೇತ್ ॥

ಇಂದ್ರಿಯಗಳನ್ನು ಅವುಗಳಿಗೆ ಸಂಬಂಧಿಸಿದ ವಿಷಯಗಳಿಂದ ಹಿಂದಿರುಗುವಂತೆ ಮಾಡಿ (ಇಂದ್ರಿಯಗಳನ್ನು ನಿಗ್ರಹಿಸಿ), ಅನಂತರ ಮನಸ್ಸನ್ನು ಆತ್ಮನಲ್ಲಿ ಯೋಜಿಸಬೇಕು. ಹೀಗೆ (ಇಂದ್ರಿಯಗಳನ್ನು ನಿಗ್ರಹಿಸಲು) ಮೊದಲು ತೀವ್ರವಾದ ತಪಸ್ಸನ್ನು ಮಾಡಿ ಅನಂತರ ಮೋಕ್ಷಸಾಧನೆಯ ಉಪಾಯವನ್ನು ಆಶ್ರಯಿಸಬೇಕು.

ತಪಸ್ವೀ ಸತತಂ ಯುಕ್ತೋ ಯೋಗಶಾಸ್ತ್ರಮಥಾಚರೇತ್ ।
ಮನೀಷೀ ಮನಸಾ ವಿಪ್ರಃ ಪಶ್ಯತ್ಯಾತ್ಮಾನಮಾತ್ಮನಿ ॥೧೮॥

ವಿದ್ವಾಂಸನಾದ ಬ್ರಾಹ್ಮಣನು ಸತತವಾಗಿ ತಪಸ್ಸನ್ನು ಮಾಡುತ್ತಾ ಯೋಗಶಾಸ್ತ್ರದಲ್ಲಿ ಹೇಳಿರುವಂತೆ ಅನುಷ್ಠಾನವನ್ನು ಮಾಡಬೇಕು. ಇಂತಹ ಯೋಗಾನುಷ್ಠಾನದಿಂದ ಯೋಗಿಯು ಮನಸ್ಸಿನ ಮೂಲಕವಾಗಿ ಅಂತಃಕರಣದಲ್ಲಿ ಆತ್ಮನನ್ನು ಕಂಡುಕೊಳ್ಳುತ್ತಾನೆ.

ಸ ಚೇಚ್ಛಕ್ನೋತ್ಯಯಂ ಸಾಧುರ್ಯೋಕ್ತುಮಾತ್ಮಾನಮಾತ್ಮನಿ ।
ತತ ಏಕಾನ್ತಶೀಲಃ ಸ ಪಶ್ಯತ್ಯಾತ್ಮಾನಮಾತ್ಮನಿ ॥೧೯॥

ಏಕಾಂತದಲ್ಲಿ ಏಕಾಕಿಯಾಗಿ ಕಾಲಕಳೆಯುವ ಸ್ವಭಾವವುಳ್ಳ ಸಾಧಕನು ಮನಸ್ಸನ್ನು ಆತ್ಮನಲ್ಲಿ ಸೇರಿಸುವ ಪ್ರಯತ್ನದಲ್ಲಿ ಸಫಲಗೊಂಡರೆ ಖಂಡಿತವಾಗಿಯೂ ಅವನು ತನ್ನ ಶರೀರದಲ್ಲಿಯೇ ಆತ್ಮನನ್ನು ದರ್ಶನಮಾಡುತ್ತಾನೆ.

ಸಂಯತಃ ಸತತಂ ಯುಕ್ತ ಆತ್ಮವಾನ್ವಿಜಿತೇನ್ದ್ರಿಯಃ ।
ತಥಾ ಯ ಆತ್ಮನಾತ್ಮಾನಂ ಸಮ್ಪ್ರಯುಕ್ತಃ ಪ್ರಪಶ್ಯತಿ ॥೨೦॥

ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ, ಯೋಗಯುಕ್ತನಾದ, ದೃಢಚಿತ್ತನಾದ, ಜಿತೇಂದ್ರಿಯನಾದ, ಸಮಾಧಿಸ್ಥನಾದ ಸಾಧಕನು ಬುದ್ಧಿಯ ಮೂಲಕವಾಗಿ ಆತ್ಮನನ್ನು ಚೆನ್ನಾಗಿ ನೋಡುತ್ತಾನೆ.

ಯಥಾ ಹಿ ಪುರುಷಃ ಸ್ವಪ್ನೇ ದೃಷ್ಟ್ವಾ ಪಶ್ಯತ್ಯಸಾವಿತಿ ।
ತಥಾ ರೂಪಮಿವಾತ್ಮಾನಂ ಸಾಧುಯುಕ್ತಃ ಪ್ರಪಶ್ಯತಿ ॥೨೧॥

ಯಾವ ರೀತಿಯಲ್ಲಿ ಪುರುಷನು ಸ್ವಪ್ನದಲ್ಲಿ ಯಾವನನ್ನಾದರೂ ನೋಡಿ ಅವನೇ ಇವನೆಂದು ಗುರುತಿಸುವನೋ–ಅದೇ ರೀತಿಯಲ್ಲಿ ಸಾಧನಪರಾಯಣನಾದ ಯೋಗಿಯು ಸೌಂದರ್ಯ-ಲಾವಣ್ಯಗಳಿಂದ ಕೂಡಿದ ಆಕಾರವನ್ನು ಹೊರಗಣ್ಣಿನಿಂದ ನೋಡುವಂತೆ ಶುದ್ಧಾತ್ಮನನ್ನು ಒಳಗಣ್ಣಿನಿಂದ ನೋಡುತ್ತಾನೆ.

ಇಷೀಕಾಂ ಚ ಯಥಾ ಮುಞ್ಜಾತ್ಕಶ್ಚಿನ್ನಿಷ್ಕೃಷ್ಯ ದರ್ಶಯೇತ್ ।
ಯೋಗೀ ನಿಷ್ಕೃಷ್ಯ ಚಾತ್ಮಾನಂ ತಥಾ ಪಶ್ಯತಿ ದೇಹತಃ ॥೨೨॥

ಒಬ್ಬ ಮನುಷ್ಯನು ಯಾವ ರೀತಿಯಲ್ಲಿ ಮುಂಜದ ಹುಲ್ಲಿನಿಂದ ಅದರೊಳಗಿರುವ ಇಷೀಕವನ್ನು (ಕಾಶ ಎಂಬ ಹುಲ್ಲನ್ನು) ತೆಗೆದು ತೋರಿಸುವನೋ–ಅದೇ ರೀತಿಯಲ್ಲಿ ಯೋಗಿಯು ಆತ್ಮನನ್ನು ದೇಹದಿಂದ ಪೃಥಕ್ಕರಿಸಿ ನೋಡುತ್ತಾನೆ.

ಮುಞ್ಜಂ ಶರೀರಮಿತ್ಯಾಹುರಿಷೀಕಾಮಾತ್ಮನಿ ಶ್ರಿತಾಮ್ ।
ಏತನ್ನಿದರ್ಶನಂ ಪ್ರೋಕ್ತಂ ಯೋಗವಿದ್ಭಿರನುತ್ತಮಮ್ ॥೨೩॥

ಮುಂಜವನ್ನೇ ಶರೀರವೆಂದು ಹೇಳುತ್ತಾರೆ. ಇಷೀಕವನ್ನೇ ದೇಹ

ವನ್ನಾಶ್ರಯಿಸಿರುವ ಆತ್ಮಸ್ವರೂಪವೆಂದು ಹೇಳುತ್ತಾರೆ. ದೇಹ ಮತ್ತು ಆತ್ಮಗಳು ಪ್ರತ್ಯೇಕವಾಗಿವೆಯೆಂಬುದಕ್ಕೆ ಯೋಗವಿದ್ಯೆಯನ್ನು ತಿಳಿದ ವಿದ್ವಾಂಸರು ಈ ಉತ್ತಮವಾದ ನಿದರ್ಶನವನ್ನು ಹೇಳಿರುತ್ತಾರೆ.

ಯದಾ ಹಿ ಯುಕ್ತಮಾತ್ಮಾನಂ ಸಮ್ಯಕ್ಪಶ್ಯತಿ ದೇಹಭೃತ್ ।
ನ ತಸ್ಯೇಹೇಶ್ವರಃ ಕಶ್ಚಿತ್ತ್ರೈಲೋಕ್ಯಸ್ಯಾಪಿ ಯಃ ಪ್ರಭುಃ ॥೨೪॥

ದೇಹಧಾರಿಯಾದ ಮನುಷ್ಯನು ಯಾವಾಗ ಯೋಗದ ಮೂಲಕವಾಗಿ ಆತ್ಮನನ್ನು ಒಳಗಣ್ಣಿನಿಂದ ಚೆನ್ನಾಗಿ ನೋಡುವನೋ (ಮನಸ್ಸನ್ನು ಆತ್ಮನಲ್ಲಿ ಲೀನಗೊಳಿಸಿ ತಾನೇ ಆತ್ಮಭಾವದಿಂದಿರುವನೋ)–ಆ ಸಮಯದಲ್ಲಿ ಮೂರು ಲೋಕಗಳಿಗೂ ಪ್ರಭುವಾಗಿರುವವನೂ ಅವನಿಗೆ ಈಶ್ವರನಾಗುವುದಿಲ್ಲ.

ಅನ್ಯಾನ್ಯಾಶ್ಚೈವ ತನವೋ ಯಥೇಷ್ಟಂ ಪ್ರತಿಪದ್ಯತೇ ।
ವಿನಿವೃತ್ಯ ಜರಾಂ ಮೃತ್ಯುಂ ನ ಶೋಚತಿ ನ ಹೃಷ್ಯತಿ ॥೨೫॥

ಯೋಗಿಯಾದವನು ತನ್ನ ಇಚ್ಛಾನುಸಾರವಾಗಿ ನಾನಾವಿಧವಾದ ಶರೀರಗಳನ್ನು ಹೊಂದುತ್ತಾನೆ. ಮುಪ್ಪು-ಸಾವುಗಳನ್ನೂ ದೂರೀಕರಿಸುತ್ತಾನೆ. ಅವನು ಯಾವುದಕ್ಕೇ ಆಗಲೀ ಶೋಕಿಸುವುದೂ ಇಲ್ಲ; ಸಂತೋಷಿಸುವುದೂ ಇಲ್ಲ.

ದೇವಾನಾಮಪಿ ದೇವತ್ವಂ ಯುಕ್ತಃ ಕಾರಯತೇ ವಶೀ ।
ಬ್ರಹ್ಮ ಚಾವ್ಯಯಮಾಪ್ನೋತಿ ಹಿತ್ವಾ ದೇಹಮಶಾಶ್ವತಮ್ ॥೨೬॥

ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವ ಯೋಗಯುಕ್ತನಾದ ಸಿದ್ಧನು ದೇವತೆಗಳಿಗೂ ದೇವತೆಯಾಗಬಲ್ಲನು. ಅಂತಹ ಯೋಗಿಯು ಅನಿತ್ಯವಾದ ಈ ಶರೀರವನ್ನು ತ್ಯಾಗಮಾಡಿ ಅವಿನಾಶಿಯಾದ ಬ್ರಹ್ಮಪದವನ್ನು ಪಡೆಯುತ್ತಾನೆ.

ವಿನಶ್ಯತ್ಸು ಚ ಭೂತೇಷು ನ ಭಯಂ ತಸ್ಯ ಜಾಯತೇ ।
ಕ್ಲಿಶ್ಯಮಾನೇಷು ಭೂತೇಷು ನ ಸ ಕ್ಲಿಶ್ಯತಿ ಕೇನಚಿತ್ ॥೨೭॥

ಯೋಗಸಿದ್ಧನಿಗೆ ಎಲ್ಲ ಪ್ರಾಣಿಗಳೂ ವಿನಾಶಹೊಂದಿದರೂ ಭಯ

ವೇನೂ ಉಂಟಾಗುವುದಿಲ್ಲ. ಎಲ್ಲ ಪ್ರಾಣಿಗಳೂ ಕ್ಲೇಶಗೊಳಿಸಲ್ಪಡುತ್ತಿದ್ದರೂ ಅವನಿಗೆ ಯಾರಿಂದಲೂ ಯಾವ ವಿಧವಾದ ಕ್ಲೇಶವೂ ಉಂಟಾಗುವುದಿಲ್ಲ.

ದುಃಖಶೋಕಭಯೈರ್ಘೋರೈಃ ಸಙ್ಗಸ್ನೇಹಸಮುದ್ಭವೈಃ ।
ನ ವಿಚಾಲ್ಯತಿ ಯುಕ್ತಾತ್ಮಾ ನಿಃಸ್ಪೃಹಃ ಶಾನ್ತಮಾನಸಃ ॥೨೮॥

ಯೋಗಯುಕ್ತನಾದ, ಶಾಂತಚಿತ್ತನಾದ, ಆಸೆಗಳೆಲ್ಲವನ್ನೂ ಸಂಪೂರ್ಣವಾಗಿ ತೊರೆದಿರುವ ಸಿದ್ಧಪುರುಷನು ಆಸಕ್ತಿ ಮತ್ತು ಸ್ನೇಹಗಳಿಂದ ಪ್ರಾಪ್ತವಾಗುವ ಭಯಂಕರವಾದ ದುಃಖ-ಶೋಕ-ಭಯಗಳಿಂದ ವಿಚಲಿತನಾಗುವುದಿಲ್ಲ.

ನೈನಂ ಶಸ್ತ್ರಾಣಿ ಭಿದ್ಯನ್ತೇ ನ ಮೃತ್ಯುಶ್ಚಾಸ್ಯ ವಿದ್ಯತೇ ।
ನಾತಃ ಸುಖತರಂ ಕಿಂಚಿಲ್ಲೋಕೇ ಕ್ವಚನ ದೃಶ್ಯತೇ ॥೨೯॥

ಯೋಗಿಯನ್ನು ಶಸ್ತ್ರಗಳು ಭೇದಿಸಲಾರವು. ಅವನಿಗೆ ಮರಣವೆಂಬುದೇ ಇಲ್ಲ. ಪ್ರಪಂಚದಲ್ಲಿ ಅವನಿಗಿಂತಲೂ ಸುಖತರನಾದವನು ಬೇರೊಬ್ಬನು ಕಾಣಲಾರನು.

ಸಮ್ಯಗ್ಯುಕ್ತ್ವಾ ಸ ಆತ್ಮಾನಮಾತ್ಮನ್ಯೇವ ಪ್ರತಿಷ್ಠತೇ ।
ವಿನಿವೃತ್ತಜರಾದುಃಖಃ ಸುಖಂ ಸ್ವಪಿತಿ ಚಾಪಿ ಸಃ ॥೩೦॥

ಯೋಗಿಯು ಬುದ್ಧಿಯನ್ನು ಆತ್ಮನಲ್ಲಿ ಚೆನ್ನಾಗಿ ಲೀನಗೊಳಿಸಿ (ಸಮಾಧಿಸ್ಥಿತಿಯಲ್ಲಿ) ಆ ಆತ್ಮನಲ್ಲಿಯೇ ಇದ್ದುಬಿಡುತ್ತಾನೆ. ದುಃಖವನ್ನೂ ಮುಪ್ಪನ್ನೂ ದೂರೀಕರಿಸಿ ಸುಖವಾಗಿ ಮಲಗುತ್ತಾನೆ. (ಆತ್ಮನಲ್ಲಿಯೇ ಲೀನನಾಗಿ ಅಕ್ಷಯವಾದ ಬ್ರಹ್ಮಾನಂದವನ್ನು ಅನುಭವಿಸುತ್ತಾನೆ.)

ದೇಹಾನ್ಯಥೇಷ್ಟಮಭ್ಯೇತಿ ಹಿತ್ವೇಮಾಂ ಮಾನುಷೀಂ ತನುಮ್ ।
ನಿರ್ವೇದಸ್ತು ನ ಕರ್ತವ್ಯೋ ಭುಞ್ಜಾನೇನ ಕಥಂಚನ ॥೩೧॥

ಯೋಗಿಯು ಈ ಮಾನುಷಶರೀರವನ್ನು ತ್ಯಾಗಮಾಡಿ ತನ್ನ ಇಚ್ಛಾನುಸಾರವಾಗಿ ಯಾವುದೇ ಶರೀರವನ್ನಾದರೂ ಹೊಂದಬಲ್ಲನು.

ಯೋಗಜನಿತವಾದ ಐಶ್ವರ್ಯವನ್ನು ಉಪಭೋಗಿಸುವ ಯೋಗಿಯು ಯಾವುದೇ ಕಾರಣದಿಂದಲೂ ಯೋಗದಿಂದ ವಿರಕ್ತನಾಗಬಾರದು.

ಸಮ್ಯಗ್ಯುಕ್ತೋ ಯದಾತ್ಮಾನಮಾತ್ಮನ್ಯೇವ ಪ್ರಪಶ್ಯತಿ ।
ತದೈವ ನ ಸ್ಪೃಹಯತೇ ಸಾಕ್ಷಾದಪಿ ಶತಕ್ರತೋಃ ॥೩೨॥

ಯಾವ ಯೋಗಿಯು ಯೋಗಾಭ್ಯಾಸದಲ್ಲಿಯೇ ಸರ್ವದಾ ಆಸಕ್ತನಾಗಿರುತ್ತಿದ್ದು ಸಮಾಧಿಯೋಗದಿಂದ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳುವನೋ–ಅವನು (ಅದರಿಂದಾಗುವ ಬ್ರಹ್ಮಾನಂದಾನುಭವ ದಿಂದಾಗಿ) ಆ ಸಮಯದಲ್ಲಿ ಸಾಕ್ಷಾತ್ ಇಂದ್ರನ ಪದವಿಯನ್ನೂ ಅಪೇಕ್ಷಿಸಿವುದಿಲ್ಲ. (ನಿರಾಕರಿಸುವನು.)

ಏಕಾಂತದಲ್ಲಿಯೇ ಇದ್ದುಕೊಂಡು ಧ್ಯಾನಮಾಡುವ ಮನುಷ್ಯನಿಗೆ ಯೋಗವು ಹೇಗೆ ಸಿದ್ಧಿಸುವುದೆಂಬುದನ್ನು ಹೇಳುವೆನು; ಕೇಳು.

ದೃಷ್ಟಪೂರ್ವಾಂ ದಿಶಂ ಚಿನ್ತ್ಯ ಯಸ್ಮಿನ್ಸನ್ನಿವಸೇತ್ಪುರೇ ।
ಪುರಸ್ಯಾಭ್ಯನ್ತರೇ ತಸ್ಯ ಮನಃ ಸ್ಥಾಪ್ಯಂ ನ ಬಾಹ್ಯತಃ ॥೩೩॥

ಹಿಂದೆ ಗುರುಗಳಿಂದ ಉಪದಿಷ್ಟವಾದಾಗ ನೋಡಿದ್ದ (ಶ್ರುತಿಗಳ ಮೂಲಕವಾಗಿ ಕಂಡುಕೊಂಡ) ಸೂಕ್ಷ್ಮವಾದ ಮಾರ್ಗವನ್ನು ಧ್ಯಾನಿಸುತ್ತಾ ಆತ್ಮನು ಶರೀರದ ಯಾವ ಭಾಗದಲ್ಲಿರುವನೋ ಆ ಶರೀರಭಾಗದಲ್ಲಿಯೇ ಮನಸ್ಸನ್ನು ಯೋಜಿಸಬೇಕು. ಶರೀರದ ಹೊರಭಾಗದಲ್ಲಿ ಮನಸ್ಸನ್ನಿಡ ಬಾರದು.

ಪುರಸ್ಯಾಭ್ಯನ್ತರೇ ತಿಷ್ಠನ್ಯಸ್ಮಿನ್ನಾವಸಥೇ ವಸೇತ್ ।
ತಸ್ಮಿನ್ನಾವಸಥೇ ಧಾರ್ಯಂ ಸ ಬಾಹ್ಯಾಭ್ಯನ್ತರಂ ಮನಃ ॥೩೪॥

ಶರೀರದಲ್ಲಿರುವ ಆ ಆತ್ಮನು ಯಾವ ಚಕ್ರದಲ್ಲಿರುವನೋ–ಆ ಚಕ್ರದಲ್ಲಿಯೇ ಹೊರಗಿನ ಮತ್ತು ಒಳಗಿನ ವಿಷಯಗಳನ್ನು ಅಡಕ ಮಾಡಿಕೊಂಡಿರುವ ಮನಸ್ಸನ್ನು ಧಾರಣೆಮಾಡಿಕೊಳ್ಳಬೇಕು. (ವಿಷಯಗಳನ್ನು ಇಂದ್ರಿಯಗಳಲ್ಲಿಯೂ–ಇಂದ್ರಿಯಗಳನ್ನು ಮನಸ್ಸಿನಲ್ಲಿಯೂ ಲೀನಗೊಳಿಸಿ, ಅನಂತರ ಮನಸ್ಸನ್ನು ಆತ್ಮವಿರುವ ಮೂಲಾಧಾರಾದಿ ಚಕ್ರಗಳಲ್ಲಿ ಲೀನಗೊಳಿಸಬೇಕು.)

ಪ್ರಚ್ಛನ್ನಾವಸಥೇ ಕೃತ್ಸ್ನಂ ಯಸ್ಮಿನ್ಕಾಲೇ ಸ ಪಶ್ಯತಿ ।
ತಸ್ಮಿನ್ಕಾಲೇ ಮನಶ್ಚಾಸ್ಯ ನ ಚ ಕಿಂಚನ ಬಾಹ್ಯತಃ ॥೩೫॥

ಆತ್ಮನಿರುವ ಮೂಲಾಧಾರಾದಿ ಚಕ್ರಗಳಲ್ಲಿ ಮನಸ್ಸನ್ನು ಸಂಪೂರ್ಣವಾಗಿ ಅನುಸಂಧಾನಮಾಡಿ ಧ್ಯಾನಮಾಡುತ್ತಿರುವಾಗ ಯಾವ ಸಮಯದಲ್ಲಿ ಆತ್ಮನ ದರ್ಶನವಾಗುವುದೋ–ಆ ಸಮಯದಲ್ಲಿ ಬಾಹ್ಯವಿಷಯ ಗಳಾವುವೂ ಆತ್ಮನಲ್ಲಿ ಲೀನವಾದ ಆ ಮನಸ್ಸಿನಲ್ಲಿ ಇರುವುದಿಲ್ಲ. ಮನಸ್ಸು ಕನ್ನಡಿಯಂತೆ ಸ್ವಚ್ಛವಾಗಿರುತ್ತದೆ. ಹಾಗೆ ಸ್ವಚ್ಛವಾದಾಗಲೇ ಆತ್ಮದರ್ಶನವು ಸಾಧ್ಯ ವಾಗುವುದು.

ಸಂನಿಯಮ್ಯೇನ್ದ್ರಿಯಗ್ರಾಮಂ ನಿರ್ಘೋಷಂ ನಿರ್ಜನೇ ವನೇ ।
ಕಾಯಮಭ್ಯನ್ತರಂ ಕೃತ್ಸ್ನಮೇಕಾಗ್ರಃ ಪರಿಚಿನ್ತಯೇತ್ ॥೩೬॥

ಇಂದ್ರಿಯಸಮುದಾಯವನ್ನು ನಿಯಮಗೊಳಿಸಿ (ವಶಕ್ಕೆ ತೆಗೆದುಕೊಂಡು), ಜನರಹಿತವಾದ ಅರಣ್ಯದಲ್ಲಿ ಕುಳಿತು, ಶಬ್ದರಹಿತವಾದ ಹೃದಯದ ಅಂತರಾಳದಲ್ಲಿರುವ ಲಕ್ಷ್ಯವನ್ನು (ಆತ್ಮನನ್ನು) ಕುರಿತು ಏಕಾಗ್ರಚಿತ್ತನಾಗಿ ಧ್ಯಾನಮಾಡಬೇಕು.

ದನ್ತಾಂಸ್ತಾಲು ಚ ಜಿಹ್ವಾಂ ಚ ಗಲಂ ಗ್ರೀವಾಂ ತಥೈವ ಚ ।
ಹೃದಯಂ ಚಿನ್ತಯೇಚ್ಚಾಪಿ ತಥಾ ಹೃದಯಬನ್ಧನಮ್ ॥೩೭॥

ಹಲ್ಲುಗಳು, ದವಡೆಗಳು, ನಾಲಿಗೆ, ಗಂಟಲು, ಕೊರಳು, ಹೃದಯ ಮತ್ತು ಹೃದಯಬಂಧನ (ನಾಡೀಮಾರ್ಗ)–ಇವುಗಳಲ್ಲಿಯೂ ಮನಸ್ಸನ್ನು ಕೇಂದ್ರೀಕರಿಸಿ ಧ್ಯಾನಿಸಬೇಕು.”

ಬ್ರಾಹ್ಮಣನು ಹೇಳುತ್ತಾನೆ:

***ಇತ್ಯುಕ್ತಃ ಸ ಮಯಾ ಶಿಷ್ಯೋ ಮೇಧಾವೀ ಮಧುಸೂದನ ।**
ಪಪ್ರಚ್ಛ ಪುನರೇವೇಮಂ ಮೋಕ್ಷಧರ್ಮಂ ಸುದುರ್ವಚಮ್ ॥೩೮॥

---

*ಇತ್ಯುಕ್ತಃ ಸ ಮಯಾ ಶಿಷ್ಯೋ ಮೇಧಾವೀ-ಬ್ರಾಹ್ಮಣನೊಬ್ಬನು ಬಂದು ಶ್ರೀಕೃಷ್ಣ ನೊಡನೆ ಮೇಧಾವಿಯಾದ ಕಾಶ್ಯಪನಿಗೂ ಮತ್ತು ಸಿದ್ಧಪುರುಷನಿಗೂ ನಡೆದ ಸಂಭಾಷಣೆ ಯನ್ನು ಹೇಳುತ್ತಿದ್ದಾನೆ. ಈ ಸಂದರ್ಭದಲ್ಲಿ ಮಯಾ ಇತ್ಯುಕ್ತಃ ಸಃ ಶಿಷ್ಯಃ ಮೇಧಾವೀ

"ಮಧುಸೂದನನೇ! ಹೀಗೆ ನನ್ನಿಂದ ಹೇಳಲ್ಪಟ್ಟ ಶಿಷ್ಯನಾದ ಮೇಧಾವಿಯು, ನಿರೂಪಿಸಲು ಅತ್ಯಂತಕಠಿನವಾದ ಮೋಕ್ಷಧರ್ಮದ ವಿಷಯವಾಗಿ ಪುನಃ ಪ್ರಶ್ನಿಸಿದನು:



ಶಿಷ್ಯನು ಕೇಳುತ್ತಾನೆ;

ಎಂದು ಹೇಳುವ ಸಾಧ್ಯತೆಯಿಲ್ಲ. ಏಕೆಂದರೆ: ಮೇಧಾವಿಯಾದ ಕಾಶ್ಯಪನು ಕೃಷ್ಣನೊಡನೆ ಮಾತನಾಡುತ್ತಿರುವ ಬ್ರಾಹ್ಮಣನ ಶಿಷ್ಯನಲ್ಲ. ಸಿದ್ಧಪುರುಷನ ಶಿಷ್ಯನು. ಆದುದರಿಂದ ಇಲ್ಲಿ **ಇತ್ಯುಕ್ತಃ ಸ ತದಾ ಶಿಷ್ಯಃ** ಎಂದಿದ್ದರೆ ಸಮಂಜಸವಾಗುತ್ತಿತ್ತು. ಆದರೆ ಎಲ್ಲ ಪಾಠಗಳಲ್ಲಿಯೂ **'ಮಯಾ'**-ಎಂಬ ಶಬ್ದವೇ ಇದೆ.

ಭುಕ್ತಂ ಭುಕ್ತಮಿದಂ ಕೋಷ್ಠೇ ಕಥಮನ್ನಂ ವಿಪಚ್ಯತೇ ।
ಕಥಂ ರಸತ್ವಂ ವ್ರಜತಿ ಶೋಣಿತತ್ವಂ ಕಥಂ ಪುನಃ ॥೩೯॥

"ಪ್ರತಿದಿನವೂ ಮನುಷ್ಯರು ತಿನ್ನುವ ಆಹಾರವು ಹೊಟ್ಟೆಯೊಳಗೆ ಹೋದನಂತರ ಹೇಗೆ ಪಚನವಾಗುತ್ತದೆ? ಪಚನವಾದನಂತರ ರಸರೂಪವನ್ನು ಹೇಗೆ ಹೊಂದುತ್ತದೆ? ರಕ್ತದ ರೂಪದಲ್ಲಿ ಹೇಗೆ ಪರಿಣಾಮವನ್ನು ಹೊಂದುತ್ತದೆ?

ತಥಾ ಮಾಂಸಂ ಚ ಮೇದಶ್ಚ ಸ್ನಾಯ್ವಸ್ಥೀನಿ ಚ ಪೋಷತಿ ।
ಕಥಮೇತಾನಿ ಸರ್ವಾಣಿ ಶರೀರಾಣಿ ಶರೀರಿಣಾಮ್ ॥೪೦॥

ವರ್ಧನ್ತೇ ವರ್ಧಮಾನಸ್ಯ ವರ್ಧತೇ ಚ ಕಥಂ ಬಲಮ್ ।
ನಿರೋಧಾನಾಂ ನಿರ್ಗಮನಂ ಮಲಾನಾಂ ಚ ಪೃಥಕ್ ಪೃಥಕ್ ॥೪೧॥

ಹಾಗೆಯೇ ಮನುಷ್ಯನು ತಿನ್ನುವ ಈ ಅನ್ನವು ಮಾಂಸವನ್ನೂ, ಮೇದಸ್ಸನ್ನೂ, ಸ್ನಾಯುಗಳನ್ನೂ (ನರಗಳನ್ನೂ), ಮೂಳೆಗಳನ್ನೂ ಹೇಗೆ ಪೋಷಿಸುತ್ತದೆ? ದೇಹಧಾರಿಗಳಾದ ಮನುಷ್ಯರ ಸಮಸ್ತವಾದ ಶರೀರಗಳೂ ಹೇಗೆ ವೃದ್ಧಿಸುತ್ತವೆ? ವೃದ್ಧಿಸುತ್ತಿರುವ ಮನುಷ್ಯನ ಬಲವೂ ಹೇಗೆ ವೃದ್ಧಿಸುತ್ತದೆ? ಸುತ್ತಲೂ ತಡೆಯಲ್ಪಡುವ ಮಲ-ಮೂತ್ರಾದಿಗಳು ಪ್ರತ್ಯೇಕ-ಪ್ರತ್ಯೇಕವಾಗಿ ಶರೀರದಿಂದ ಹೇಗೆ ಹೊರಗೆ ಹೋಗುತ್ತವೆ?

ಕುತೋ ವಾಯಂ ಪ್ರಶ್ವಸಿತಿ ಉಚ್ಛ್ವಸಿತ್ಯಪಿ ವಾ ಪುನಃ ।
ಕಂ ಚ ದೇಶಮಧಿಷ್ಠಾಯ ತಿಷ್ಠತ್ಯಾತ್ಮಾಯಮಾತ್ಮನಿ ॥೪೨॥

ಏತಕ್ಕಾಗಿ ಜೀವನು ಉಸಿರುಬಿಡುತ್ತಾನೆ ಮತ್ತು ಉಸಿರನ್ನು ಎಳೆದುಕೊಳ್ಳುತ್ತಾನೆ? ಈ ಆತ್ಮನು ಮನುಷ್ಯನ ಶರೀರದಲ್ಲಿ ಯಾವ ಸ್ಥಾನವನ್ನು ಆಶ್ರಯಿಸಿದ್ದಾನೆ?

ಜೀವಃ ಕಥಂ ವಹತಿ ಚ ಚೇಷ್ಟಮಾನಃ ಕಲೇವರಮ್ ।
ಕಿಂ ವರ್ಣಂ ಕೀದೃಶಂ ಚೈವ ನಿವೇಶಯತಿ ವೈ ಪುನಃ ।
ಯಾಥಾತಥ್ಯೇನ ಭಗವನ್ವಕ್ತುಮರ್ಹಸಿ ಮೇಽನಘ ॥೪೩॥

ಚೇಷ್ಟಾಶೀಲನಾದ ಜೀವಾತ್ಮನು ಈ ಶರೀರವನ್ನು ಹೇಗೆ ಧಾರಣ

ಮಾಡಿಕೊಳ್ಳುತ್ತಾನೆ? ಆ ಜೀವನು ಯಾವ ಬಣ್ಣದಲ್ಲಿದ್ದಾನೆ? ಮತ್ತು ಹೇಗಿದ್ದಾನೆ? ನಿಷ್ಪಾಪನೇ! ಪೂಜ್ಯನೇ! ಈ ವಿಷಯವನ್ನು ನನಗೆ ಯಥಾವತ್ತಾಗಿ ಹೇಳು."

*** ಇತಿ ಸಮ್ಪರಿಪೃಷ್ಟೋಽಹಂ ತೇನ ವಿಪ್ರೇಣ ಮಾಧವ ।**
ಪ್ರತ್ಯಬ್ರುವನ್ಮಹಾಬಾಹೋ ಯಥಾಶ್ರುತಮರಿಂದಮ ॥೪೪॥

ಶತ್ರುಸೂದನನೇ! ಮಹಾಬಾಹುವೇ! ಮಾಧವನೇ! ಆ ಬ್ರಾಹ್ಮಣನಿಂದ ಹೀಗೆ ಪ್ರಶ್ನಿಸಲ್ಪಟ್ಟ ನಾನು ಈ ವಿಷಯವಾಗಿ ಹಿಂದೆ ಹೇಗೆ ಹೇಳಿದ್ದೆನೋ ಹಾಗೆಯೇ ಉತ್ತರಿಸಿದೆನು.

ಯಥಾ ಸ್ವಕೋಷ್ಠೇ ಪ್ರಕ್ಷಿಪ್ಯ ಭಾಣ್ಡಂ ಭಾಣ್ಡಮನಾ ಭವೇತ್ ।
ತಥಾ ಸ್ವಕಾಯೇ ಪ್ರಕ್ಷಿಪ್ಯ ಮನೋ ದ್ವಾರೈರನಿಶ್ಚಲೈಃ ॥
ಆತ್ಮಾನಂ ತತ್ರ ಮಾರ್ಗೇತ ಪ್ರಮಾದಂ ಪರಿವರ್ಜಯೇತ್ ॥೪೬॥

ಯಾವ ರೀತಿಯಲ್ಲಿ ಒಬ್ಬ ಮನುಷ್ಯನು ಧನಾದಿಗಳನ್ನು ತನ್ನ ಕೊಠಡಿಯಲ್ಲಿಟ್ಟಿದ್ದರೂ ಅದರ ವಿಷಯವಾಗಿಯೇ ಯೋಚಿಸುತ್ತಿರುವನೋ– ಅದೇ ರೀತಿಯಲ್ಲಿ ಸಾಧಕನು ಚಂಚಲವಾದ ಇಂದ್ರಿಯಗಳ ಮೂಲಕವಾಗಿ ಮನಸ್ಸನ್ನು ತನ್ನ ಶರೀರದಲ್ಲಿರಿಸಿ ಅಲ್ಲಿ ಆತ್ಮನನ್ನು ಆ ಮನಸ್ಸಿನ ಮೂಲಕ ಹುಡುಕಬೇಕು. ಹೀಗೆ ಆತ್ಮನ ಅನುಸಂಧಾನಮಾಡುತ್ತಿರುವಾಗ ಪ್ರಮಾದಕ್ಕೆ ವಶನಾಗಬಾರದು. ಜಾಗ್ರತನಾಗಿರಬೇಕು.

ಏವಂ ಸತತಮುದ್ಯುಕ್ತಃ ಪ್ರೀತಾತ್ಮಾ ನ ಚಿರಾದಿವ ।
ಆಸಾದಯತಿ ತದ್ಬ್ರಹ್ಮ ಯದ್ದೃಷ್ಟ್ವಾ ಸ್ಯಾತ್ಪ್ರಧಾನವಿತ್ ॥೪೭॥

ಹೀಗೆ ಸತತವಾಗಿ ಧ್ಯಾನಪರನಾಗಿರುವವನು ಬಹಳ ಬೇಗ ಪ್ರಸನ್ನವಾದ ಮನಸ್ಸನ್ನು ಹೊಂದಿ ಪರಬ್ರಹ್ಮಪರಮಾತ್ಮನನ್ನು ಹೃದಯಗುಹೆಯಲ್ಲಿ ಕಂಡುಕೊಳ್ಳುತ್ತಾನೆ. ಆತ್ಮಸಾಕ್ಷಾತ್ಕಾರವಾದನಂತರ ಅವನಿಗೆ ಮೂಲಪ್ರಕೃತಿಯ ಸ್ವರೂಪವು ತಿಳಿಯುತ್ತದೆ.

* ಈ ಶ್ಲೋಕದಲ್ಲಿಯೂ ಕೂಡ ೩೮ನೆಯ ಶ್ಲೋಕದಲ್ಲಿರುವ ದೋಷವೇ ಇದೆ. ಆದರೆ ಎಲ್ಲ ಪುಸ್ತಕಗಳಲ್ಲಿಯೂ ಇದೇ ಪಾಠವಿದೆ.

ನ ತ್ವಸೌ ಚಕ್ಷುಷಾ ಗ್ರಾಹ್ಯೋ ನ ಚ ಸರ್ವೈರಪೀನ್ದ್ರಿಯೈಃ ।
ಮನಸೈವ ಪ್ರದೀಪೇನ ಮಹಾನಾತ್ಮಾ ಪ್ರದೃಶ್ಯತೇ ॥೪೮॥

ಪರಬ್ರಹ್ಮಪರಮಾತ್ಮನು ಚರ್ಮದ ಕಣ್ಣುಗಳಿಗೆ ಕಾಣುವವನಲ್ಲ. ಸಮಸ್ತವಾದ ಇಂದ್ರಿಯಗಳಿಗೂ ಅವನು ಸಿಕ್ಕುವುದಿಲ್ಲ. ದೀಪರೂಪವಾದ ಮನಸ್ಸಿನಿಂದ ಮಾತ್ರವೇ ಮಹತ್ತಾದ ಪರಬ್ರಹ್ಮ-ಪರತತ್ತ್ವದ ದರ್ಶನವಾಗುತ್ತದೆ.

ಸರ್ವತಃ ಪಾಣಿಪಾದಾನ್ತಃ ಸರ್ವತೋಽಕ್ಷಿಶಿರೋಮುಖಃ ।
ಸರ್ವತಃ ಶ್ರುತಿಮಾಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೪೯॥

ಪರಬ್ರಹ್ಮಪರಮಾತ್ಮನು ಎಲ್ಲ ಕಡೆಗಳಲ್ಲಿಯೂ ಕೈಗಳನ್ನೂ ಕಾಲುಗಳನ್ನೂ ಹೊಂದಿದವನಾಗಿದ್ದಾನೆ. ಎಲ್ಲ ಕಡೆಗಳಲ್ಲಿಯೂ ಕಣ್ಣುಗಳನ್ನೂ ಶಿರಸ್ಸನ್ನೂ ಮತ್ತು ಮುಖವನ್ನೂ ಹೊಂದಿದವನಾಗಿದ್ದಾನೆ. ಎಲ್ಲಕಡೆಗಳಲ್ಲಿಯೂ ಕಿವಿಗಳುಳ್ಳವನಾಗಿದ್ದಾನೆ. ಅರ್ಥಾತ್ ಅವನು ವಿಶ್ವವನ್ನೇ ಆವರಿಸಿಕೊಂಡು ನಿಂತಿದ್ದಾನೆ.

ದೇವೋ ನಿಷ್ಕ್ರಾನ್ತಮಾತ್ಮಾನಂ ಶರೀರಾತ್ಸಮ್ಪ್ರಪಶ್ಯತಿ ।
ಸ ತಮುತ್ಸೃಜ್ಯ ದೇಹೇ ಸ್ವಂ ಧಾರಯನ್ಬ್ರಹ್ಮ ಕೇವಲಮ್ ॥೫೦॥

ಆತ್ಮಾನಮಾಲೋಕಯತಿ ಮನಸಾ ಪ್ರಹಸನ್ನಿವ ।
ತದೇವಮಾಶ್ರಯಂ ಕೃತ್ವಾ ಮೋಕ್ಷಂ ಯಾತಿ ತತೋ ಮಯಿ ॥೫೧॥

ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡ ಜೀವನು ತಾನು ತನ್ನ ಶರೀರದಿಂದ ಪ್ರತ್ಯೇಕವಾಗಿರುವೆನೆಂಬುದನ್ನು ಅನುಭವದಿಂದ ತಿಳಿಯುತ್ತಾನೆ. ಜೀವನು ಶರೀರದಲ್ಲಿಯೇ ಇದ್ದರೂ ಶರೀರಸಂಬಂಧವಾದ ವಾಸನೆಗಳೆಲ್ಲವನ್ನೂ ಸಂಪೂರ್ಣವಾಗಿ ಪರಿತ್ಯಜಿಸಿ ತನ್ನ ಆತ್ಮಭೂತವಾದ ಪರಬ್ರಹ್ಮಪರಮಾತ್ಮನನ್ನೇ ಧ್ಯಾನಮಾಡುತ್ತಾನೆ. ಹೀಗೆ ಬುದ್ಧಿಯ ಸಹಯೋಗದಿಂದ ತಿರಸ್ಕೃತವಾದ ದೇಹವು ನಗುತ್ತಾ ಹೇಳಿಕೊಳ್ಳುತ್ತದೆ.'ಆ ಜೀವನು ನನ್ನನ್ನೇ ಆಶ್ರಯಿಸಿ ನನ್ನಲ್ಲಿಯೇ ಮೋಕ್ಷವನ್ನು ಹೊಂದುತ್ತಾನೆ. (ಜೀವನ ಅಮೃತತ್ತ್ವಕ್ಕೂ ನಾನೇ ಕಾರಣನು.) (ತದೇವಮಾಶ್ರಯಂ ಎಂಬ ಉತ್ತರಾರ್ಧವು ಭಂ.ರಿ.ಇನ್ಸ್ಟಿಟ್ಯೂಟ್ ರವರ ಪುಸ್ತಕದಲ್ಲಿಲ್ಲ.)

ಇದಂ ಸರ್ವರಹಸ್ಯಂ ತೇ ಮಯಾ ಪ್ರೋಕ್ತಂ ದ್ವಿಜೋತ್ತಮ ।
ಆಪೃಚ್ಛೇ ಸಾಧಯಿಷ್ಯಾಮಿ ಗಚ್ಛ ವಿಪ್ರ ಯಥಾಸುಖಮ್ ॥೫೨॥

ದ್ವಿಜಶ್ರೇಷ್ಠನೇ! ಕಾಶ್ಯಪನೇ! ಜೀವದ ಎಲ್ಲ ರಹಸ್ಯಗಳನ್ನೂ ನಾನು ನಿನಗೆ ಹೇಳಿರುವೆನು. ನಾನಿನ್ನು ಪ್ರಯಾಣಮಾಡಲು ನಿನ್ನ ಅನುಮತಿಯನ್ನು ಬೇಡುತ್ತೇನೆ. ನೀನು ಕೂಡ ಸುಖವಾಗಿ ನಿನ್ನ ನಿವಾಸಕ್ಕೆ ಹೋಗು."[೧]

ಇತ್ಯುಕ್ತಃ ಸ ತದಾ ಕೃಷ್ಣ ಮಯಾ ಶಿಷ್ಯೋ ಮಹಾತಪಾಃ ।
ಆಗಚ್ಛತ ಯಥಾಕಾಮಂ ಬ್ರಾಹ್ಮಣಃ ಸಂಶಿತವ್ರತಃ ॥೫೩॥

ಶ್ರೀಕೃಷ್ಣ! ನಾನು ಹೀಗೆ ಹೇಳಿದನಂತರ ಕಠೋರವ್ರತನಿಷ್ಠನಾದ ಮಹಾತಪಸ್ವಿಯಾದ ಶಿಷ್ಯನಾದ ಕಾಶ್ಯಪಬ್ರಾಹ್ಮಣನು ತನ್ನ ಇಚ್ಛಾನುಸಾರವಾಗಿ ಹೊರಟುಹೋದನು."[೨]

ವಾಸುದೇವನು ಅರ್ಜುನನಿಗೆ ಹೇಳುತ್ತಾನೆ:

"ಅರ್ಜುನ! ಮೋಕ್ಷಧರ್ಮವನ್ನೇ ಸಂಪೂರ್ಣವಾಗಿ ಆಶ್ರಯಿಸಿದ್ದ ಆ ಬ್ರಾಹ್ಮಣಶ್ರೇಷ್ಠನು ನನ್ನೊಡನೆ ಈ ಎಲ್ಲ ಮಾತುಗಳನ್ನೂ ಹೇಳಿ ಅಲ್ಲಿಯೇ ಅಂತರ್ಹಿತನಾದನು. ಈಗಲಾದರೂ ನಾನು ಹೇಳಿದುದನ್ನು ಏಕಾಗ್ರಚಿತ್ತನಾಗಿ ಕೇಳಿದೆಯಾ? ಯುದ್ಧದ ಸಮಯದಲ್ಲಿ ಕೂಡ ರಥದ ಮೇಲಿದ್ದ ನೀನು ಈ ಪರಬ್ರಹ್ಮತತ್ತ್ವವನ್ನೇ ಕೇಳಿರುವೆ. ಬುದ್ಧಿಯಲ್ಲಿ ವ್ಯಗ್ರತೆಯಿದ್ದರೆ (ಏಕಾಗ್ರತೆಯಿಲ್ಲದಿದ್ದರೆ) ಆತ್ಮವಿದ್ಯಾಸಂಪ್ರದಾಯವು ಚೆನ್ನಾಗಿ ತಿಳಿದಿರದಿದ್ದರೆ ಈ ಪರಬ್ರಹ್ಮತತ್ತ್ವವು ಚೆನ್ನಾಗಿ ತಿಳಿಯುವುದೇ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ವಿಶುದ್ಧವಾದ ಅಂತಃಕರಣ ವಿದ್ದವನಿಗೆ ಮಾತ್ರವೇ ಇದು ತಿಳಿಯುವುದು. ಈ ಪರಬ್ರಹ್ಮತತ್ತ್ವವನ್ನು

---

[೧] ೩೯ರಿಂದ ೪೩ನೆಯ ಶ್ಲೋಕದವರೆಗೆ ಕೇಳಿರುವ ಪ್ರಶ್ನೆಗಳು ಚೆನ್ನಾಗಿವೆ. ಆದರೆ ಆ ಪ್ರಶ್ನೆಗಳಿಗೆ ಇಲ್ಲಿ ನೇರವಾದ ಉತ್ತರವಿಲ್ಲ. ಪ್ರಶ್ನೆ ಯಾವುದೆಂಬುದನ್ನು ವಿವಿಕ್ತಿಸದೇ ಕೇವಲ ಅಧ್ಯಾತ್ಮವನ್ನೇ ಹೇಳಿಕೊಂಡು ಹೋದಂತಿದೆ.

[೨] ಈ ಶ್ಲೋಕದಲ್ಲಿಯೂ ಪುನಃ ಮಯಾ ಶಿಷ್ಯಃ ಎಂದೇ ಉಕ್ತವಾಗಿದೆ. ಎಲ್ಲ ಪುಸ್ತಕಗಳಲ್ಲಿಯೂ ಹೀಗೆಯೇ ಇದೆ. ಆದರೆ ಇದು ಆನುಪೂರ್ವಿಯಾಗಿ ಬಂದಿರುವ ಕಥೆಗೆ ಅನುಗುಣವಾಗಿಲ್ಲ. ತೇನ ಶಿಷ್ಯಃ ಎಂಬ ಪಾಠವು ಸಮಂಜಸವಾಗಿ ಹೊಂದಿಕೊಳ್ಳುತ್ತದೆ.

ದೇವತೆಗಳಿಗೆ ಮಾತ್ರವೇ ಹೇಳಿದ್ದೇನೆ. ಈ ಜಗತ್ತಿನಲ್ಲಿ ಯಾವ ಮನುಷ್ಯನೂ ರಹಸ್ಯಪೂರ್ಣವಾದ ಪರಬ್ರಹ್ಮತತ್ತ್ವವನ್ನು ತಿಳಿದಿರುವುದಿಲ್ಲ. ನಿಷ್ಪಾಪನೇ! ಮನುಷ್ಯರಲ್ಲಿ ನಿನ್ನೊಬ್ಬನನ್ನು ಬಿಟ್ಟು ಬೇರೆ ಯಾರೂ ಈ ಪರಬ್ರಹ್ಮತತ್ತ್ವವನ್ನು ಕೇಳಲೂ ಅರ್ಹರಲ್ಲ. ಸಂದೇಹಗ್ರಸ್ತವಾದ ಅಂತರಾತ್ಮವುಳ್ಳವನು ಈ ಪರಬ್ರಹ್ಮತತ್ತ್ವವನ್ನು ಚೆನ್ನಾಗಿ ತಿಳಿಯಲಾರನು. ಕ್ರಿಯಾವಂತರಾದವರಿಂದ ದೇವಲೋಕವು ತುಂಬಿಹೋಗಿದೆ. ಮನುಷ್ಯರು ಅಮರರಾಗುವುದು ದೇವತೆಗಳಿಗೆ ಇಷ್ಟವಿಲ್ಲ.

ಅರ್ಜುನ! ಜೀವನಿಗೆ ಸನಾತನಬ್ರಹ್ಮವೇ ಪರಮಗತಿಯಾಗಿದೆ. ಜ್ಞಾನಿಯಾದವನು ದೇಹವನ್ನು ತ್ಯಾಗಮಾಡಿ ಬ್ರಹ್ಮನಲ್ಲಿಯೇ ಅಮೃತತ್ವವನ್ನು ಪಡೆಯುತ್ತಾನೆ ಮತ್ತು ಸದಾ ಸುಖವಾಗಿರುತ್ತಾನೆ. ಆತ್ಮದರ್ಶನರೂಪವಾದ ಈ ಧರ್ಮವನ್ನು ಆಶ್ರಯಿಸಿ ಸ್ತ್ರೀಯರು, ವೈಶ್ಯರು, ಶೂದ್ರರು ಮತ್ತು ಪಾಪಯೋನಿಗಳಲ್ಲಿ ಹುಟ್ಟಿದ ಯಾರೇ ಆದರೂ ಪರಮಗತಿಯನ್ನು ಹೊಂದುತ್ತಾರೆ. ಹೀಗಿರುವಾಗ ಸ್ವಧರ್ಮನಿರತರಾದ, ಬ್ರಹ್ಮಲೋಕ ಪರಾಯಣರಾದ ಬ್ರಾಹ್ಮಣರೂ ಮತ್ತು ಅನೇಕಶಾಸ್ತ್ರಗಳಲ್ಲಿ ಪಂಡಿತರಾದ ಕ್ಷತ್ರಿಯರೂ ಆತ್ಮಸಾಕ್ಷಾತ್ಕಾರಧರ್ಮವನ್ನು ಆಶ್ರಯಿಸಿ ಪರಮಗತಿಯನ್ನು ಪಡೆಯುವರೇ?– ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಅವರು ಕೂಡ ಆತ್ಮಸಾಕ್ಷಾತ್ಕರಧರ್ಮವನ್ನಾಶ್ರಯಿಸಿ ಪರಮಗತಿಯನ್ನು ಪಡೆದೇ ಪಡೆಯುತ್ತಾರೆ. ಪಾರ್ಥ! ಹೀಗೆ ನಾನು ನಿನಗೆ ಮೋಕ್ಷಧರ್ಮವನ್ನು ಯುಕ್ತಿಯುಕ್ತವಾಗಿ ಉಪದೇಶಿಸಿದ್ದೇನೆ. ಅದರ ಸಾಧನೋಪಾಯವನ್ನೂ ಹೇಳಿದ್ದೇನೆ. ಸಿದ್ಧಿ, ಫಲ, ಮೋಕ್ಷ ಮತ್ತು ದುಃಖ–ಇವುಗಳ ಸ್ವರೂಪಗಳನ್ನೂ ನಿರ್ಣಯಿಸಿ ಹೇಳಿದ್ದೇನೆ. ಇದಕ್ಕಿಂತಲೂ ಮಿಗಿಲಾದ ಮತ್ತು ಸುಖದಾಯಕವಾದ ಧರ್ಮವು ಬೇರೊಂದಿಲ್ಲ. ಬುದ್ಧಿವಂತನಾದ, ಶ್ರದ್ಧಾಳುವಾದ ಮತ್ತು ಪರಾಕ್ರಮಿಯಾದ ಯಾವನು ಲೌಕಿಕಸುಖವನ್ನು ಸಾರಹೀನವಾದುದೆಂದು ತಿಳಿದು, ಎಲ್ಲವನ್ನೂ ಪರಿತ್ಯಜಿಸಿ ನಾನು ಈಗ ಹೇಳಿರುವ ಉಪಾಯಗಳಿಂದ ಸಾಧನೆಯನ್ನು ಮಾಡುವನೋ–ಅವನು ಬಹಳ ಬೇಗ ಪರಮಗತಿಯನ್ನು ಹೊಂದುವನು. ಅರ್ಜುನ! ಆತ್ಮಸಾಕ್ಷಾ

ತ್ಕಾರದ ವಿಷಯದಲ್ಲಿ ಇಷ್ಟು ಮಾತ್ರ ಹೇಳಬಹುದಾಗಿದೆ. ಇದಕ್ಕಿಂತಲೂ ಹೆಚ್ಚು ಹೇಳಬೇಕಾದುದು ಏನೂ ಇಲ್ಲ. ಆರು ತಿಂಗಳವರೆಗೆ ಸತತವಾಗಿ ಯೋಗಾಭ್ಯಾಸಮಾಡುತ್ತಿದ್ದರೆ ಅವನಿಗೆ ಯೋಗದ ಸಿದ್ಧಿಯಾಗುತ್ತದೆ."

೧೯ನೆಯ ಅಧ್ಯಾಯವು ಮುಗಿಯಿತು.

೨೦ನೆಯ ಅಧ್ಯಾಯ ಅನುಗೀತಾಪರ್ವ(ಮುಂದುವರಿದಿದೆ.)

ಬ್ರಾಹ್ಮಣಗೀತಾ-ಬ್ರಾಹ್ಮಣನೊಬ್ಬನು ತನ್ನ ಪತ್ನಿಗೆ ಬ್ರಹ್ಮತ್ತ್ವವನ್ನು ಉಪದೇಶಿಸಿದುದು

ಶ್ರೀಕೃಷ್ಣನು ಹೇಳುತ್ತಾನೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ದಮ್ಪತ್ಯೋಃ ಪಾರ್ಥ ಸಂವಾದೋ ಯೋಽಭವದ್ಭರತರ್ಷಭ ॥೧॥

"ಭರತರ್ಷಭನೇ! ಪಾರ್ಥನೇ! ಈ ವಿಷಯದಲ್ಲಿ ಪತಿ-ಪತ್ನಿಯರ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಜ್ಞಾನ-ವಿಜ್ಞಾನಪಾರಂಗತನಾಗಿದ್ದ ಬ್ರಾಹ್ಮಣನೊಬ್ಬನು ನಿರ್ಜನವಾದ ಪ್ರದೇಶದಲ್ಲಿ ಕುಳಿತಿದ್ದನು. ಅವನು ಹಾಗೆ ಕುಳಿತಿರುವುದನ್ನು ನೋಡಿ ಅವನ ಭಾರ್ಯೆಯು ಪತಿಯ ಬಳಿಗೆ ಹೋಗಿ ವಿನೀತಳಾಗಿ ಪ್ರಶ್ನಿಸಿದಳು:

ಕಂ ನು ಲೋಕಂ ಗಮಿಷ್ಯಾಮಿ ತ್ವಾಮಹಂ ಪತಿಮಾಶ್ರಿತಾ ।
ನ್ಯಸ್ತಕರ್ಮಾಣಮಾಸೀನಂ ಕೀನಾಶಮವಿಚಕ್ಷಣಮ್ ॥೩॥

ಭಾರ್ಯಾಃ ಪತಿಕೃತಾಲ್ಲೋಕಾನಾಪ್ನುವನ್ತೀತಿ ನಃ ಶ್ರುತಮ್ ।
ತ್ವಾಮಹಂ ಪತಿಮಾಸಾದ್ಯ ಕಾಂ ಗಮಿಷ್ಯಾಮಿ ವೈ ಗತಿಮ್ ॥೪॥

"ಪ್ರಾಣನಾಥನೇ! ಯಾವ ಕಾರ್ಯವನ್ನೂ ಮಾಡದೇ ಕುಳಿತಿರುವ, ಕೃಪಣನಾದ, ಅವಿದ್ವಾಂಸನಾದ ನಿನ್ನನ್ನು ಪತಿಯನ್ನಾಗಿ ಹೊಂದಿರುವ ನಾನು ಯಾವ ಲೋಕಕ್ಕೆ ಹೋಗುತ್ತೇನೆ? ಗಂಡಂದಿರು ಸಂಪಾದಿಸಿದ ಪುಣ್ಯಲೋಕಗಳಿಗೆ ಅವರ ಭಾರ್ಯೆಯರ ಹೋಗುವ

ರೆಂಬುದನ್ನು ನಾವು ಕೇಳಿದ್ದೇವೆ. ನಿನ್ನಂತಹವನನ್ನು ಪತಿಯನ್ನಾಗಿ ಪಡೆದುಕೊಂಡ ನನಗೆ ಯಾವ ಗತಿಯು ಸಿಕ್ಕುತ್ತದೆ?

ಪತ್ನಿಯು ಹೀಗೆ ಪ್ರಶ್ನಿಸಲಾಗಿ, ಶಾಂತಾತ್ಮನಾದ ಆ ಬ್ರಾಹ್ಮಣನು ನಗುತ್ತಿರುವನೋ ಎಂಬ ಮುಖಭಾವದಿಂದ ಕೂಡಿ ಪತ್ನಿಗೆ ಹೇಳಿದನು:

ಸುಭಗೇ ನಾಭ್ಯಸೂಯಾಮಿ ವಾಕ್ಯಸ್ಯಾಸ್ಯ ತವಾನಘೇ ॥೫॥
ಗ್ರಾಹ್ಯಂ ದೃಶ್ಯಂ ಚ ಸತ್ಯಂ ವಾ ಯದಿದಂ ಕರ್ಮ ವಿದ್ಯತೇ।
ಏತದೇವ ವ್ಯವಸ್ಯನ್ತಿ ಕರ್ಮ ಕರ್ಮೇತಿ ಕರ್ಮಿಣಃ ॥೬॥

"ಪಾಪರಹಿತಳೇ! ಸೌಭಾಗ್ಯವತಿಯೇ! ನೀನು ಹೇಳುತ್ತಿರುವ ಈ ಮಾತು ದೋಷಯುಕ್ತವಾದುದೆಂದು ನಾನು ಭಾವಿಸುವುದಿಲ್ಲ. ಲೋಕದಲ್ಲಿ ಕೈಗೊಳ್ಳಲು ಯೋಗ್ಯವಾದ ದೀಕ್ಷಾ-ವ್ರತಾದಿಗಳು ಯಾವುಗಳಿವೆಯೋ–ಅವುಗಳೆಲ್ಲವೂ ಕಣ್ಣುಗಳಿಗೆ ಕಾಣಿಸುವ ಮತ್ತು ಸತ್ಯವಾದ ಸ್ಥೂಲಕರ್ಮಗಳಾಗಿವೆ. ಅವುಗಳಿಗೆ 'ಕರ್ಮ' ಎಂಬ ಹೆಸರಿದೆ. ಕರ್ಮಠರು ಅದನ್ನೇ ಕರ್ಮವೆಂದು ಹೇಳುತ್ತಾರೆ.

ಮೋಹಮೇವ ನಿಯಚ್ಛನ್ತಿ ಕರ್ಮಣಾ ಜ್ಞಾನವರ್ಜಿತಾಃ।
ನೈಷ್ಕರ್ಮ್ಯಂ ನ ಚ ಲೋಕೇಽಸ್ಮಿನ್ಮುಹೂರ್ತಮಪಿ ಲಭ್ಯತೇ ॥೭॥

ತಿಳಿವಳಿಕೆಯಿಲ್ಲದವರು ಕರ್ಮದ ಮೂಲಕ ಮೋಹವನ್ನೇ ಸಂಗ್ರಹಿಸಿ ಕೊಳ್ಳುತ್ತಾರೆ. ಈ ಲೋಕದಲ್ಲಿ ಮನುಷ್ಯನಿಗೆ ಮುಹೂರ್ತಕಾಲವಾದರೂ ಕರ್ಮವಿರಾಮವನ್ನು ಹೊಂದುವ ಸಾಧ್ಯತೆಯಿಲ್ಲ.

ಕರ್ಮಣಾ ಮನಸಾ ವಾಚಾ ಶುಭಂ ವಾ ಯದಿ ವಾಶುಭಮ್।
ಜನ್ಮಾದಿಮೂರ್ತಿಭೇದಾನ್ತಂ ಕರ್ಮ ಭೂತೇಷು ವರ್ತತೇ ॥೮॥

ಕರ್ಮ, ಮನಸ್ಸು ಮತ್ತು ಮಾತು–ಇವುಗಳ ಮೂಲಕವಾಗಿ ನಡೆಯುವ ಶುಭಾಶುಭಕರ್ಮಗಳೂ ಮತ್ತು ಹುಟ್ಟು ಮೊದಲ್ಗೊಂಡು ಮರುಹುಟ್ಟು ಪಡೆಯುವವರೆಗಿನ ಕರ್ಮಗಳೂ ಎಲ್ಲ ಪ್ರಾಣಿಗಳಲ್ಲಿಯೂ ಇದ್ದೇ ಇರುತ್ತವೆ.

ರಕ್ಷೋಭಿರ್ವಧ್ಯಮಾನೇಷು ದೃಶ್ಯದ್ರವ್ಯೇಷು ವರ್ತ್ಮಸು ।
ಆತ್ಮಸ್ಥಮಾತ್ಮನಾ ತೇಭ್ಯೋ ದೃಷ್ಟಮಾಯತನಂ ಮಯಾ ॥೯॥

ಹಾದಿ-ಬೀದಿಗಳಲ್ಲಿ ರಾಕ್ಷಸರು ಯಜ್ಞಸಾಮಗ್ರಿಗಳನ್ನು ಧ್ವಂಸಮಾಡ ತೊಡಗಿದರು. ಆಗಲೇ ಕರ್ಮಮಾರ್ಗದ ವಿನಾಶವು ಪ್ರಾರಂಭವಾಯಿತು. ಅದನ್ನು ನೋಡಿದ ನಾನು ಕರ್ಮಗಳಲ್ಲಿ ವಿರಕ್ತಿಯನ್ನು ಹೊಂದಿ ಶರೀರಸ್ಥನಾದ ಆತ್ಮನನ್ನು ಮನಸ್ಸಿನಿಂದ ಅನುಸಂಧಾನಮಾಡತೊಡಗಿದೆನು. ಅಲ್ಲಿಯೇ ನಾನು ನನ್ನ ನೆಲೆಯನ್ನು ಕಂಡುಕೊಂಡೆನು.

ಯತ್ರ ತದ್ಬ್ರಹ್ಮ ನಿರ್ದ್ವನ್ದ್ವಂ ಯತ್ರ ಸೋಮಃ ಸಹಾಗ್ನಿನಾ ।
ವ್ಯವಾಯಂ ಕುರುತೇ ನಿತ್ಯಂ ಧೀರೋ ಭೂತಾನಿ ಧಾರಯನ್ ॥೧೦॥

ಎಲ್ಲಿ ದ್ವಂದ್ವಾತೀತನಾದ ಪರಬ್ರಹ್ಮ-ಪರಮಾತ್ಮನು ವಿರಾಜಮಾನ ನಾಗಿರುವನೋ ಮತ್ತು ಎಲ್ಲಿ ಸೋಮಾಗ್ನಿಗಳ ನಿತ್ಯಸಮಾಗಮವಿರು ವುದೋ–ಅಲ್ಲಿ ಧೀರನಾದ ಜೀವನು ಪಂಚಭೂತಗಳನ್ನೂ ಧಾರಣೆಮಾಡಿಕೊಂಡು ಅವುಗಳ ಮಧ್ಯದಲ್ಲಿ ಸೇರಿಕೊಂಡಿರುತ್ತಾನೆ. (ಸೋಮಃಸಹಾಗ್ನಿನಾ ಎಂಬುದಕ್ಕೆ ವ್ಯಾಖ್ಯಾನಕಾರರು ಸೋಮಃ= ಇಡಾ, ಅಗ್ನಿಃ=ಪಿಙ್ಗಲಾ–ವರಣಾಸೀ ಸಂಜ್ಞೇ-ಸೋಮ ಎಂದರೆ ಇಡಾನಾಡಿಯು; ಅಗ್ನಿ ಎಂದರೆ ಪಿಂಗಲಾನಾಡಿಯು–ಇವುಗಳಿಗೆ ವರಣಾಸೀ ಎಂಬ ಸಂಜ್ಞೆಯಿದೆ. ಎಂದರೆ ಈ ನಾಡಿಗಳು ವರಣಾಯಾಂ = ಎಂದರೆ ಮೂಗಿನ ಮಧ್ಯದಲ್ಲಿ ಪ್ರತಿಷ್ಠಿತವಾಗಿವೆ. ಭ್ರುವೋಃ ಘ್ರಾಣಸ್ಯ ಚ ಯಃ ಸನ್ಧಿಃ ತಸ್ಮಿನ್ಪ್ರತಿಷ್ಠಿತಃ-ಹುಬ್ಬಿಗೂ ಮತ್ತು ಮೂಗಿಗೂ ಇರುವ ಸಂಧಿಸ್ಥಳದಲ್ಲಿ ಇಡಾ-ಪಿಂಗಳಾನಾಡಿಗಳಿವೆ. ಭ್ರೂಮಧ್ಯದಲ್ಲಿ ಜ್ಯೋತಿಯ ದರ್ಶನವಾಗ ಬೇಕಾದರೆ ಇಡಾ-ಪಿಂಗಳಾ ನಾಡಿಗಳನ್ನು ಪ್ರಚೋದಿಸಬೇಕು.)

ಯತ್ರ ಬ್ರಹ್ಮಾದಯೋ ಯುಕ್ತಾಸ್ತದಕ್ಷರಮುಪಾಸತೇ ।
ವಿದ್ವಾಂಸಃ ಸುವ್ರತಾ ಯತ್ರ ಶಾನ್ತಾತ್ಮಾನೋ ಜಿತೇನ್ದ್ರಿಯಾಃ ॥೧೧॥

ಬ್ರಹ್ಮನೇ ಮೊದಲಾದ ದೇವತೆಗಳು ಎಲ್ಲಿರುವರೋ–ಉತ್ತಮವಾದ ಮಹಾವ್ರತಗಳನ್ನು ಪರಿಪಾಲಿಸುವ, ಜಿತೇಂದ್ರಿಯರಾದ, ಶಾಂತಾತ್ಮರಾದ ವಿದ್ವಾಂಸರು ಎಲ್ಲಿರುವರೋ–ಅಲ್ಲಿಯೂ ಕೂಡ ಅವರೆಲ್ಲರೂ ಯೋಗ

ಯುಕ್ತರಾಗಿ ಅವಿನಾಶಿಯಾದ ಪರಬ್ರಹ್ಮನನ್ನು ಉಪಾಸಿಸುತ್ತಾರೆ. (ದೇವತೆಗಳೇ ಆದಿಯಾಗಿ ಸರ್ವರೂ ಪರಬ್ರಹ್ಮ-ಪರಮಾತ್ಮನ ಉಪಾಸನೆಯಲ್ಲಿ ಯುಕ್ತರಾಗಿರುತ್ತಾರೆ.)

ಘ್ರಾಣೇನ ನ ತದಾಘ್ರೇಯಂ ನಾಸ್ವಾದ್ಯಂ ಚೈವ ಜಿಹ್ವಯಾ ।
ಸ್ಪರ್ಶನೇನ ತದಸ್ಪೃಶ್ಯಂ ಮನಸಾ ತ್ವವಗಮ್ಯತೇ ॥೧೨॥

ಅವಿನಾಶಿಯಾದ ಪರಬ್ರಹ್ಮತತ್ತ್ವವನ್ನು ಮೂಗಿನಿಂದ ಮೂಸಲು ಸಾಧ್ಯವಾಗುವುದಿಲ್ಲ. ನಾಲಿಗೆಯಿಂದ ರುಚಿನೋಡಲು ಸಾಧ್ಯವಾಗುವುದಿಲ್ಲ. ಚರ್ಮದ ಮೂಲಕವಾಗಿ ಮುಟ್ಟಲು ಸಾಧ್ಯವಾಗುವುದಿಲ್ಲ . ಆದರೆ ಬುದ್ಧಿಯ ಮೂಲಕವಾಗಿ ಮಾತ್ರವೇ ಅದರ ಅನುಭವವನ್ನು ಪಡೆದು ಕೊಳ್ಳಬಹುದಾಗಿದೆ.

ಚಕ್ಷುಷಾಮವಿಷಹ್ಯಂ ಚ ಯತ್ಕಿಂಚಿಚ್ಛ್ರವಣಾತ್ಪರಮ್ ।
ಅಗನ್ಧಮರಸಸ್ಪರ್ಶಮರೂಪಾಶಬ್ದಲಕ್ಷಣಮ್ ॥೧೩॥

ಪರಬ್ರಹ್ಮವಸ್ತುವು ಕಣ್ಣುಗಳಿಗೆ ವಿಷಯವಾಗುವುದಿಲ್ಲ. (ಚರ್ಮದ ಕಣ್ಣುಗಳಿಂದ ಅದನ್ನು ನೋಡಲು ಸಾಧ್ಯವಿಲ್ಲ.) ಅನಿರ್ವಚನೀಯವಾದ ಆ ಪರಬ್ರಹ್ಮವಸ್ತುವು ಶ್ರವಣೇಂದ್ರಿಯಕ್ಕೂ ಅತೀತವಾಗಿದೆ. ಗಂಧ, ರಸ, ಸ್ಪರ್ಶ, ರೂಪ ಮತ್ತು ಶಬ್ದಗಳೇ ಮೊದಲಾದ ಯಾವ ಲಕ್ಷಣವೂ ಅದಕ್ಕಿರುವುದಿಲ್ಲ. ಅದು ಅಗಂಧವೂ, ಅರಸವೂ, ಅಸ್ಪರ್ಶವೂ, ಅರೂಪವೂ, ಅಶಬ್ದವೂ ಆಗಿರುತ್ತದೆ.

ಯತಃ ಪ್ರವರ್ತತೇ ತನ್ತ್ರಂ ಯತ್ರ ಚ ಪ್ರತಿತಿಷ್ಠತಿ ।
ಪ್ರಾಣೋಽಪಾನಃ ಸಮಾನಶ್ಚ ವ್ಯಾನಶ್ಚೋದಾನ ಏವ ಚ ।
ತತ ಏವ ಪ್ರವರ್ತನ್ತೇ ತದೇವ ಪ್ರವಿಶನ್ತಿ ಚ ॥೧೪॥

ಪರಬ್ರಹ್ಮತತ್ತ್ವದಿಂದಲೇ ಸೃಷ್ಟಿಯ ವಿಸ್ತಾರವಾಗುತ್ತದೆ. ವಿಸ್ತಾರವಾದ ಸೃಷ್ಟಿಯಲ್ಲಿಯೇ ಅದು ಉಪಸ್ಥಿತವಾಗಿರುತ್ತದೆ. ಪ್ರಾಣ-ಅಪಾನ-ಸಮಾನ-ವ್ಯಾನ-ಉದಾನಗಳು ಅದರಿಂದಲೇ ಹುಟ್ಟುತ್ತವೆ. ಅದರಲ್ಲಿಯೇ ಪುನಃ ಲೀನವಾಗುತ್ತವೆ.

ಸಮಾನವ್ಯಾನಯೋರ್ಮಧ್ಯೇ ಪ್ರಾಣಾಪಾನೌ ವಿಚೇರತುಃ ।
ತಸ್ಮಿಲ್ಲೀನೇ ಪ್ರಲೀಯೇತ ಸಮಾನೋ ವ್ಯಾನ ಏವ ಚ ॥೧೫॥

ಅಪಾನಪ್ರಾಣಯೋರ್ಮಧ್ಯೇ ಉದಾನೋ ವ್ಯಾಪ್ಯ ತಿಷ್ಠತಿ ।
ತಸ್ಮಾಚ್ಛಯಾನಂ ಪುರುಷಂ ಪ್ರಾಣಾಪಾನೌ ನ ಮುಞ್ಚತಃ ॥೧೬॥

ನಾಭಿಯಲ್ಲಿರುವ ಸಮಾನವಾಯುವಿನ ಮತ್ತು ಶರೀರದ ಎಲ್ಲೆಡೆಗಳಲ್ಲಿಯೂ ಇರುವ ವ್ಯಾನವಾಯುವಿನ ಮಧ್ಯದಲ್ಲಿ ಹೃದಯದಲ್ಲಿರುವ ಪ್ರಾಣವಾಯುವೂ-ಗುದದಲ್ಲಿರುವ ಅಪಾನವಾಯುವೂ ಸಂಚರಿಸುತ್ತವೆ. ಪ್ರಾಣದಲ್ಲಿ ಅಪಾನವು ಲಯಹೊಂದಿದರೆ ಸಮಾನ-ವ್ಯಾನಗಳೂ ಪ್ರಾಣವಾಯುವಿನಲ್ಲಿಯೇ ಲಯಹೊಂದುತ್ತವೆ. ಅಪಾನ-ಪ್ರಾಣವಾಯುಗಳ ಮಧ್ಯದಲ್ಲಿ ಉದಾನವು ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತದೆ. ಈ ಕಾರಣದಿಂದಲೇ ಮಲಗಿರುವ ಮನುಷ್ಯನನ್ನು ಪ್ರಾಣಾಪಾನಗಳೆರಡೂ ಬಿಟ್ಟಿರುವುದಿಲ್ಲ.

ಪ್ರಾಣಾನಾಮಾಯತತ್ವೇನ ತಮುದಾನಂ ಪ್ರಚಕ್ಷತೇ ।
ತಸ್ಮಾತ್ತಪೋ ವ್ಯವಸ್ಯನ್ತಿ ತದ್ಭವಂ ಬ್ರಹ್ಮವಾದಿನಃ ॥೧೭॥

ಹೀಗೆ ಪ್ರಾಣಿಗಳಿಗೆ ಆಧಾರವಾಗಿರುವುದರಿಂದ ಆ ವಾಯುವನ್ನು ಉದಾನವೆನ್ನುತ್ತಾರೆ. (ಉತ್ಕರ್ಷೇಣ ಆನಯತಿ ಚೇಷ್ಟಯತಿ ಪ್ರಾಣಾನ್ ಇತಿ ಉದಾನಃ –ವಿಶೇಷವಾಗಿ ಪ್ರಾಣಗಳನ್ನು ಚೇಷ್ಟೆಮಾಡಿಸುತ್ತದೆ. ಅವುಗಳ ಕರ್ತವ್ಯದಲ್ಲಿ ತೊಡಗಿಸುತ್ತದೆ. ಅದರಿಂದ ಉದಾನವೆಂದು ಹೆಸರು.) ಪ್ರಾಣಾದಿಗಳು ಉದಾನದಲ್ಲಿ ಹೊಂದುವ ಅಂತರ್ಭಾವವನ್ನೇ ಬ್ರಹ್ಮವಾದಿಗಳು ತಪಸ್ಸೆಂದು ನಿಶ್ಚಯಿಸಿರುತ್ತಾರೆ.

ತೇಷಾಮನ್ಯೋನ್ಯಭಕ್ಷಾಣಾಂ ಸರ್ವೇಷಾಂ ದೇಹಚಾರಿಣಾಮ್।
ಅಗ್ನಿರ್ವೈಶ್ವಾನರೋ ಮಧ್ಯೇ ಸಪ್ತಧಾ ದೀವ್ಯತೇಽನ್ತರಾ ॥೧೮॥

ಒಂದರಲ್ಲಿ ಮತ್ತೊಂದು ಲೀನಗೊಳ್ಳುವ ಸ್ವಭಾವವುಳ್ಳ, ಎಲ್ಲ ಪ್ರಾಣಿಗಳ ದೇಹದಲ್ಲಿಯೂ ಸಂಚರಿಸುವ ಪಂಚವಾಯುಗಳ ಮಧ್ಯದಲ್ಲಿ ನಾಭಿಮಂಡಲದಲ್ಲಿ ಸಮಾನವಾಯುವಿದೆ. ಅದರ ಮಧ್ಯದಲ್ಲಿರುವ ವೈಶ್ವಾನರಾಗ್ನಿಯು ಏಳು ರೂಪಗಳಾಗಿ ಪ್ರಕಾಶಿಸುತ್ತಿದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ಚ ಶ್ರೋತ್ರಂ ಚ ಪಞ್ಚಮಮ್ ।
ಮನೋ ಬುದ್ಧಿಶ್ಚ ಸಪ್ತೈತಾ ಜಿಹ್ವಾ ವೈಶ್ವಾನರಾರ್ಚಿಷಃ ॥೧೯॥

ಘ್ರೇಯಂ ದೃಶ್ಯಂ ಚ ಪೇಯಂ ಚ ಸ್ಪೃಶ್ಯಂ ಶ್ರವ್ಯಂ ತಥೈವ ಚ ।
ಮನ್ತವ್ಯಮಥ ಬೋದ್ಧವ್ಯಂ ತಾಃ ಸಪ್ತ ಸಮಿಧೋ ಮಮ ॥೨೦॥

ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ, ಮನಸ್ಸು ಮತ್ತು ಬುದ್ಧಿ–ಇವು ವೈಶ್ವಾನರಾಗ್ನಿಯ ಏಳು ನಾಲಿಗೆಗಳಾಗಿವೆ. ಮೂಸಲು ಯೋಗ್ಯವಾದ ಗಂಧ, ನೋಡಲು ಯೋಗ್ಯವಾದ ರೂಪ, ಪಾನಮಾಡಲು ಯೋಗ್ಯವಾದ ರಸ, ಮುಟ್ಟಲು ಯೋಗ್ಯವಾದ ಸ್ಪರ್ಶ, ಕೇಳಲು ಯೋಗ್ಯವಾದ ಶಬ್ದ, ಮನಸ್ಸಿನ ಮೂಲಕವಾಗಿ ಮನನಮಾಡುವ ಮತ್ತು ಬುದ್ಧಿಯ ಮೂಲಕವಾಗಿ ತಿಳಿದುಕೊಳ್ಳಲು ಯೋಗ್ಯವಾದ ವಿಷಯ–ಈ ಏಳೂ ನನ್ನ (ವೈಶ್ವಾನರಾಗ್ನಿಯ) ಸಮಿತ್ತುಗಳಾಗಿವೆ.

ಘ್ರಾತಾ ಭಕ್ಷಯಿತಾ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಚ ಪಞ್ಚಮಃ ।
ಮನ್ತಾ ಬೋದ್ಧಾ ಚ ಸಪ್ತೈತೇ ಭವನ್ತಿ ಪರಮರ್ತ್ವಿಜಃ ॥೨೧॥

ಆಘ್ರಾಣಿಸುವವನು, ತಿನ್ನುವವನು, ನೋಡುವವನು, ಮುಟ್ಟುವವನು, ಕೇಳುವವನು, ಮನನಮಾಡುವವನು ಮತ್ತು ತಿಳಿದುಕೊಳ್ಳುವವನು–ಈ ಏಳು ಮಂದಿ ವೈಶ್ವಾನರಾಗ್ನಿಗೆ ಸಂಬಂಧಿಸಿದ ಯಜ್ಞದಲ್ಲಿ ಶ್ರೇಷ್ಠರಾದ ಋತ್ವಿಜರಾಗಿರುತ್ತಾರೆ.

ಘ್ರೇಯೇ ಪೇಯೇ ಚ ದೃಶ್ಯೇ ಚ ಸ್ಪೃಶ್ಯೇ ಶ್ರವ್ಯೇ ತಥೈವ ಚ ।
ಮನ್ತವ್ಯೇಽಪ್ಯಥ ಬೋದ್ಧವ್ಯೇ ಸುಭಗೇ ಪಶ್ಯ ಸರ್ವದಾ ॥೨೨॥

ಸೌಭಾಗ್ಯವತಿಯೇ! ಆಘ್ರಾಣಿಸಲು ಯೋಗ್ಯವಾದ, ಅಸ್ವಾದಿಸಲು ಯೋಗ್ಯವಾದ, ನೋಡಲು ಯೋಗ್ಯವಾದ, ಮುಟ್ಟಲು ಯೋಗ್ಯವಾದ, ಕೇಳಲು ಯೋಗ್ಯವಾದ, ಮನನಮಾಡಲು ಯೋಗ್ಯವಾದ ಮತ್ತು ತಿಳಿದುಕೊಳ್ಳಲು ಯೋಗ್ಯವಾದ ವಿಷಯಗಳಲ್ಲಿ ನೀನು ಯಾವಾಗಲೂ ದೃಷ್ಟಿಯನ್ನಿಡು. (ಇವುಗಳನ್ನು ಹವಿಸ್ಸುಗಳನ್ನಾಗಿ ಭಾವಿಸು.)

ಹವೀಂಷ್ಯಗ್ನಿಷು ಹೋತಾರಃ ಸಪ್ತಧಾ ಸಪ್ತ ಸಪ್ತಸು ।
ಸಮ್ಯಕ್ಪ್ರಕ್ಷಿಪ್ಯ ವಿದ್ವಾಂಸೋ ಜನಯನ್ತಿ ಸ್ವಯೋನಿಷು ॥೨೩॥

ಘ್ರಾತಾ, ಭಕ್ಷಯಿತಾ–ಇವರೇ ಮುಂತಾದ ಏಳು ಹೋತೃಗಳೊಡನೆ ಕೂಡಿ (ಋತ್ವಿಜರು) ಘ್ರೇಯ, ದೃಶ್ಯ–ಇವೇ ಮುಂತಾದ ಏಳು ಸಮಿತ್ತುಗ್ಗಳನ್ನು ಘ್ರಾಣ, ಜಿಹ್ವೆ–ಇವೇ ಮುಂತಾದ ವೈಶ್ವಾನರನ ನಾಲಿಗೆಗಳಲ್ಲಿ (ಜ್ವಾಲೆಗಳಲ್ಲಿ) ವಿದ್ವಾಂಸರು ಚೆನ್ನಾಗಿ ಹೋಮಮಾಡಿ ತಮ್ಮ ಯೋನಿಗಳಲ್ಲಿ (ಪೃಥಿವ್ಯಾದಿಗಳಲ್ಲಿ) ಶಬ್ದಾದಿ ವಿಷಯಗಳನ್ನು ಉತ್ಪತ್ತಿಮಾಡುತ್ತಾರೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ।
ಮನೋ ಬುದ್ಧಿಶ್ಚ ಸಪ್ತೈತಾ ಯೋನಿರಿತ್ಯೇವ ಶಬ್ದಿತಾಃ ॥೨೪॥

ಪೃಥಿವೀ, ವಾಯು, ಆಕಾಶ, ಜಲ, ತೇಜಸ್ಸು, ಮನಸ್ಸು ಮತ್ತು ಬುದ್ಧಿ–ಇವುಗಳನ್ನು ಸಪ್ತಯೋನಿಗಳೆಂದು ಹೇಳುತ್ತಾರೆ.

ಹವಿರ್ಭೂತಾ ಗುಣಾಃ ಸರ್ವೇ ಪ್ರವಿಶನ್ತ್ಯಗ್ನಿಜಂ ಗುಣಮ್।
ಅನ್ತರ್ವಾಸಮುಷಿತ್ವಾ ಚ ಜಾಯನ್ತೇ ಸ್ವಾಸು ಯೋನಿಷು ॥೨೫॥

ಪೃಥಿವಿಯೇ ಮುಂತಾದುವುಗಳಲ್ಲಿ ಯಾವ ಗಂಧಾದಿಗುಣ ಗಳಿವೆಯೋ–ಅವೇ ಹವಿಷ್ಯರೂಪವಾದುವುಗಳು. ಅವೆಲ್ಲವೂ ವೈಶ್ವಾನರಾಗ್ನಿ ಯಿಂದಲೇ ಹುಟ್ಟಿದ ಬುದ್ಧಿಯನ್ನೇ ಪ್ರವೇಶಿಸುತ್ತವೆ. ಆ ಗುಣಗಳೆಲ್ಲವೂ ಬುದ್ಧಿಯೊಳಗೆ ಸೇರಿಕೊಂಡು ವಾಸಮಾಡುತ್ತಿದ್ದು ಸಮಯಾನುಸಾರವಾಗಿ ತಮ್ಮ ತಮ್ಮ ಯೋನಿಗಳಲ್ಲಿ (ಗಂಧವು ಮೂಗಿನಲ್ಲಿ, ರಸವು ನಾಲಿಗೆಯಲ್ಲಿ, ರೂಪವು ಕಣ್ಣಿನಲ್ಲಿ, ಸ್ಪರ್ಶವು ತ್ವಚೆಯಲ್ಲಿ, ಶಬ್ದವು ಕಿವಿಯಲ್ಲಿ) ಜನ್ಮತಾಳುತ್ತವೆ.

ತತ್ರೈವ ಚ ನಿರುಧ್ಯನ್ತೇ ಪ್ರಲಯೇ ಭೂತಭಾವನೇ ।
ತತಃ ಸಂಜಾಯತೇ ಗನ್ಧಸ್ತತಃ ಸಂಜಾಯತೇ ರಸಃ ॥೨೬॥

ಪ್ರಳಯಕಾಲದಲ್ಲಿ ಈ ಗುಣಗಳು ಬುದ್ಧಿಯಲ್ಲಿಯೇ ಬಂಧಿಸಲ್ಪಟ್ಟಿರು ತ್ತವೆ. ಪ್ರಾಣಿಗಳ ಸೃಷ್ಟಿಸಮಯದಲ್ಲಿ ಆ ಬುದ್ಧಿಯ ಮೂಲಕವಾಗಿಯೇ ಗಂಧ-ರಸಾದಿಗಳು ಪ್ರಕಟವಾಗುತ್ತವೆ.

ತತಃ ಸಂಜಾಯತೇ ರೂಪಂ ತತಃ ಸ್ಪರ್ಶೋಽಭಿಜಾಯತೇ ।
ತತಃ ಸಂಜಾಯತೇ ಶಬ್ದಃ ಸಂಶಯಸ್ತತ್ರ ಜಾಯತೇ ।
ತತಃ ಸಂಜಾಯತೇ ನಿಷ್ಠಾ ಜನ್ಮೈತತ್ಸಪ್ತಧಾ ವಿದುಃ ॥೨೭॥

ಅಲ್ಲಿಂದಲೇ ರೂಪ, ಸ್ಪರ್ಶ, ಶಬ್ದ, ಸಂಶಯ ಮತ್ತು ನಿಶ್ಚಯಾತ್ಮಕವಾದ ಬುದ್ಧಿ–ಇವುಗಳೂ ಹುಟ್ಟುತ್ತವೆ. ಹೀಗೆ ಈ ಗುಣಗಳು ಏಳು ಪ್ರಕಾರವಾಗಿ ಹುಟ್ಟುವುವೆಂದು ವಿದ್ವಾಂಸರು ತಿಳಿಯುತ್ತಾರೆ.

ಅನೇನೈವ ಪ್ರಕಾರೇಣ ಪ್ರಗೃಹೀತಂ ಪುರಾತನೈಃ ।
ಪೂರ್ಣಾಹುತಿಭಿರಾಪೂರ್ಣಾಸ್ತ್ರಿಭಿಃ ಪೂರ್ಯನ್ತಿ ತೇಜಸಾ ॥೨೮॥

ಈ ಪ್ರಕಾರವಾಗಿಯೇ ಪುರಾತನರಾದ ಋಷಿಗಳು ಘ್ರಾಣವೇ ಮುಂತಾದುವುಗಳ ಸ್ವರೂಪವನ್ನು ಗ್ರಹಣಮಾಡಿದ್ದಾರೆ. ಜ್ಞಾತಾ-ಜ್ಞಾನ-ಜ್ಞೇಯ ಈ ಮೂರರ ಪೂರ್ಣಾಹುತಿಯಿಂದಲೇ ಸಮಸ್ತಲೋಕಗಳೂ ವ್ಯಾಪ್ತವಾಗಿವೆ. ಈ ತತ್ತ್ವದಿಂದಲೇ ಸಮಸ್ತಲೋಕಗಳೂ ಆತ್ಮಜ್ಯೋತಿಯಿಂದ ತುಂಬಿಹೋಗುತ್ತವೆ.”

೨೦ನೆಯ ಅಧ್ಯಾಯವು ಮುಗಿಯಿತು.

೨೧ನೆಯ ಅಧ್ಯಾಯ ಅನುಗೀತಾಪರ್ವ(ಮುಂದುವರಿದಿದೆ.)

ಹತ್ತು ಮಂದಿ ಋತ್ವಿಜರಿಂದ ಸಂಪನ್ನವಾಗುವ ಯಜ್ಞದ ವರ್ಣನೆ: ಮನಸ್ಸಿನ ಮತ್ತು ಮಾತಿನ ಶ್ರೇಷ್ಠತೆ

ಬ್ರಾಹ್ಮಣನು ಹೇಳುತ್ತಾನೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ನಿಬೋಧ ದಶಹೋತೄಣಾಂ ವಿಧಾನಮಥ ಯಾದೃಶಮ್ ॥೧॥

“ಪ್ರಿಯಳೇ! ಈ ವಿಷಯದಲ್ಲಿ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಹತ್ತು ಮಂದಿ ಹೋತೃಗಳು ಸೇರಿ ಯಾವ ರೀತಿಯಲ್ಲಿ ಯಜ್ಞಮಾಡುವರೆಂಬುದನ್ನು ಹೇಳುವೆನು; ಕೇಳು.

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚರಣೌ ಕರೌ ।
ಉಪಸ್ಥಂ ಪಾಯುರಿತಿ ವಾ ಹೋತೄಣಿ ದಶ ಭಾಮಿನಿ ॥೨॥

ಭಾಮಿನಿಯೇ! ಕಿವಿ, ಚರ್ಮ, ಕಣ್ಣುಗಳು, ನಾಲಿಗೆ, ಮೂಗು, ಎರಡು ಕಾಲುಗಳು, ಎರಡು ಕೈಗಳು, ಜನನೇಂದ್ರಿಯ ಮತ್ತು ಆಸನದ್ವಾರ–ಇವುಗಳೇ ನಾನು ಹೇಳಿದ ಹತ್ತು ಮಂದಿ ಹೋತೃಗಳು.

ಶಬ್ದಸ್ಪರ್ಶೌ ರೂಪರಸೌ ಗನ್ಧೋ ವಾಕ್ಯಂ ಕ್ರಿಯಾ ಗತಿಃ।
ರೇತೋಮೂತ್ರಪುರೀಷಾಣಾಂ ತ್ಯಾಗೋ ದಶ ಹವೀಂಷಿ ಚ ॥೩॥

ಶಬ್ದ, ಸ್ಪರ್ಶ, ರೂಪ, ರಸ, ಗಂಧ, ವಾಣಿ, ಕ್ರಿಯೆ, ಗತಿ, ವೀರ್ಯಮೂತ್ರಗಳ ತ್ಯಾಗ ಮತ್ತು ಮಲತ್ಯಾಗ –ಈ ವಿಷಯಗಳೇ ಹತ್ತು ಹವಿಸ್ಸುಗಳು. (ಶ್ರೋತ್ರೇಂದ್ರಿಯಕ್ಕೆ ಶಬ್ದವು ಹವಿಸ್ಸು, ತ್ವಕ್ಕಿಗೆ ಸ್ಪರ್ಶ, ಕಣ್ಣಿಗೆ ರೂಪ, ಜಿಹ್ವೆಗೆ ರಸ ಮತ್ತು ವಾಣಿ, ನಾಸಿಕೆಗೆ ಗಂಧ, ಕಾಲುಗಳಿಗೆ ಗತಿ, ಕೈಗಳಿಗೆ ಕ್ರಿಯೆ, ಉಪಸ್ಥಕ್ಕೆ ರೇತೋಮೂತ್ರತ್ಯಾಗ, ಪಾಯುವಿಗೆ ಪುರೀಷತ್ಯಾಗ.)

ದಿಶೋ ವಾಯೂ ರವಿಶ್ಚನ್ದ್ರಃ ಪೃಥ್ವ್ಯಗ್ನೀ ವಿಷ್ಣುರೇವ ಚ।
ಇನ್ದ್ರಃ ಪ್ರಜಾಪತಿರ್ಮಿತ್ರಮಗ್ನಯೋ ದಶ ಭಾಮಿನಿ ॥೪॥

ಭಾಮಿನಿಯೇ! ದಿಕ್ಕುಗಳು, ವಾಯು, ಸೂರ್ಯ, ಚಂದ್ರ, ಪೃಥ್ವೀ, ಅಗ್ನಿ, ವಿಷ್ಣು, ಇಂದ್ರ, ಪ್ರಜಾಪತಿ ಮತ್ತು ಮಿತ್ರ–ಈ ದೇವತೆಗಳೇ ಹತ್ತು ಅಗ್ನಿಗಳು.

ದಶೇನ್ದ್ರಿಯಾಣಿ ಹೋತೄಣಿ ಹವೀಂಷಿ ದಶ ಭಾಮಿನಿ।
ವಿಷಯಾ ನಾಮ ಸಮಿಧೋ ಹೂಯನ್ತೇ ತು ದಶಾಗ್ನಿಷು ॥೫॥

ಭಾಮಿನಿ! ಶ್ರೋತ್ರವೇ ಮೊದಲಾದ ಇಂದ್ರಿಯರೂಪರಾದ ದಶಹೋತೃಗಳು ದಿಕ್ಕೇ ಮೊದಲಾದ ಅಗ್ನಿಗಳಲ್ಲಿ, ಶಬ್ದವೇ ಮೊದಲಾದ ವಿಷಯರೂಪಗಳಾದ ಹವಿಸ್ಸುಗಳನ್ನು ಅಥವಾ ಸಮಿತ್ತುಗಳನ್ನು ಹೋಮಮಾಡುತ್ತಾರೆ. (ಹೀಗೆ ನಿರಂತರವಾಗಿ ನನ್ನ ಅಂತರಂಗದಲ್ಲಿ ಈ ಯಜ್ಞವು ನಡೆಯುತ್ತಲೇ ಇರುತ್ತದೆ. ಹೀಗಿರುವಾಗ ನೀನು ನನ್ನನ್ನು ಅಕರ್ಮಣ್ಯನೆಂದು ಹೇಗೆ ಹೇಳುವೆ?)

ಚಿತ್ತಂ ಸ್ರುವಶ್ಚ ವಿತ್ತಂ ಚ ಪವಿತ್ರಂ ಜ್ಞಾನಮುತ್ತಮಮ್।
ಸುವಿಭಕ್ತಮಿದಂ ಸರ್ವಂ ಜಗದಾಸೀದಿತಿ ಶ್ರುತಮ್ ॥೬॥

ಈ ದೇಹಾಂತರದ ಯಜ್ಞದಲ್ಲಿ ಚಿತ್ತವೇ ಹೋಮಮಾಡುವ ಸ್ರುವವೂ, ವಿತ್ತವೂ, ಪವಿತ್ರವೂ ಮತ್ತು ಶ್ರೇಷ್ಠವಾದ ಜ್ಞಾನವೂ ಆಗಿದೆ. ಈ ಎಲ್ಲ ಜಗತ್ತೂ ಹಿಂದೆ ಚೆನ್ನಾಗಿ ವಿಭಾಗಿಸಲ್ಪಟ್ಟಿರುವುದಾಗಿ ನಾವು ಕೇಳಿದ್ದೇವೆ.

ಸರ್ವಮೇವಾಥ ವಿಜ್ಞೇಯಂ ಚಿತ್ತಂ ಜ್ಞಾನಮವೇಕ್ಷತೇ।
ರೇತಃಶರೀರಭೃತ್ಕಾಯೇ ವಿಜ್ಞಾತಾ ತು ಶರೀರಭೃತ್ ॥೭॥

ತಿಳಿಯಲ್ಪಡಬೇಕಾಗಿರುವ ಈ ಎಲ್ಲ ಜಗತ್ತೂ ಚಿತ್ತರೂಪವಾಗಿಯೇ ಇದೆ. ಚಿತ್ತವು ಸ್ವಾಭಾವಿಕವಾಗಿ ಜ್ಞಾನವನ್ನು (ಪ್ರಕಾಶವನ್ನು) ಅಪೇಕ್ಷಿಸುತ್ತದೆ. ವೀರ್ಯದಿಂದ ಹುಟ್ಟುವ ಶರೀರಸಮುದಾಯದಲ್ಲಿರುವ ಶರೀರಧರನಾದ ಜೀವನು ಈ ಚಿತ್ತವನ್ನು ತಿಳಿದಿರುತ್ತಾನೆ.

ಶರೀರಭೃದ್ಗಾರ್ಹಪತ್ಯಸ್ತಸ್ಮಾದನ್ಯಃ ಪ್ರಣೀಯತೇ।
ಮನಶ್ಚಾಹವನೀಯಸ್ತು ತಸ್ಮಿನ್ಪ್ರಕ್ಷಿಪ್ಯತೇ ಹವಿಃ ॥೮॥

ಶರೀರಾಭಿಮಾನಿಯಾದ ಜೀವನೇ ಗಾರ್ಹಪತ್ಯಾಗ್ನಿಯು. ಆ ಗಾರ್ಹಪತ್ಯಾಗ್ನಿಯಿಂದ ಮತ್ತೊಂದು ಅಗ್ನಿಯು ಪ್ರಕಟವಾಗುತ್ತದೆ. ಮನಸ್ಸೇ ಆಹವನೀಯಾಗ್ನಿಯಾಗಿದೆ. ಅದರಲ್ಲಿ ಹವಿಸ್ಸು ಹಾಕಲ್ಪಡುತ್ತದೆ.

ತತೋ ವಾಚಸ್ಪತಿರ್ಜಜ್ಞೇ ಸಮಾನಃ ಪರ್ಯವೇಕ್ಷತೇ ।
ರೂಪಂ ಭವತಿ ವೈ ವ್ಯಕ್ತಂ ಸಮನುದ್ರವತೇ ಮನಃ ॥೯॥

ಆಹವನೀಯಾಗ್ನಿಯಲ್ಲಿ ಹವಿಸ್ಸನ್ನು ಹಾಕುವುದರಿಂದ ವಾಚಸ್ಪತಿಯು (ವೇದವಾಣಿ) ಪ್ರಕಟವಾಗುತ್ತದೆ. ಆ ವೇದವಾಣಿಯನ್ನು ಸಮಾನವೆಂಬ ವಾಯುವು ನೋಡುತ್ತದೆ. ಅನಂತರ ರೂಪದ ಪ್ರಾದುರ್ಭಾವವಾಗುತ್ತದೆ. ಆ ರೂಪವು ಮನಸ್ಸಿನ ಕಡೆಗೆ ಓಡಿಹೋಗುತ್ತದೆ.”

ಬ್ರಾಹ್ಮಣಿಯು ಪ್ರಶ್ನಿಸುತ್ತಾಳೆ:

ಕಸ್ಮಾದ್ವಾಗಭವತ್ಪೂರ್ವಂ ಕಸ್ಮಾತ್ಪಶ್ಚಾನ್ಮನೋಽಭವತ್ ।
ಮನಸಾ ಚಿನ್ತಿತಂ ವಾಕ್ಯಂ ಯದಾ ಸಮಭಿಪದ್ಯತೇ ॥೧೦॥

“ಪ್ರಿಯತಮನೇ! ಯಾವ ಕಾರಣದಿಂದ ವಾಕ್ಕು ಮೊದಲು ಪ್ರಕಟವಾಯಿತು? ವಾಕ್ಕು ಹುಟ್ಟಿದನಂತರ ಮನಸ್ಸು ಏಕೆ ಹುಟ್ಟಿತು? ವ್ಯವಹಾರದಲ್ಲಿ ಮನಸ್ಸು ಯೋಚಿಸಿದನಂತರವೇ ಮಾತು ಹೊರಬರುತ್ತದಲ್ಲವೇ?

ಕೇನ ವಿಜ್ಞಾನಯೋಗೇನ ಮತಿಶ್ಚಿತ್ತಂ ಸಮಾಸ್ಥಿತಾ।
ಸಮುನ್ನೀತಾ ನಾಧ್ಯಗಚ್ಛತ್ಕಾ ವೈ ತಾಂ ಪ್ರತಿಬಾಧತೇ ॥೧೧॥

ಯಾವ ವಿಜ್ಞಾನದ ಪ್ರಭಾವದಿಂದ ಬುದ್ಧಿಯು ಚಿತ್ತವನ್ನು ಆಶ್ರಯಿಸಿದೆ? ಆ ಬುದ್ಧಿಯು ಔನ್ನತ್ಯವನ್ನು ಹೊಂದಿದನಂತರ (ಸುಷುಪ್ತಿಯಲ್ಲಿದ್ದಾಗ) ವಿಷಯಗಳ ಕಡೆಗೆ ಏಕೆ ಹೋಗುವುದಿಲ್ಲ? ಹಾಗೆ ಹೋಗದಿರಲು ಅದನ್ನು ಯಾರು ಪ್ರತಿಬಂಧಿಸುತ್ತಾರೆ? (ಸುಷುಪ್ತಿಯಲ್ಲಿ ಬುದ್ಧಿಯ ಜ್ಞಾನಶಕ್ತಿಯನ್ನು ಯಾರು ತಡೆಯುತ್ತಾರೆ?)"

ಬ್ರಾಹ್ಮಣನು ಹೇಳುತ್ತಾನೆ:

ತಾಮಪಾನಃ ಪತಿರ್ಭೂತ್ವಾ ತಸ್ಮಾತ್ಪ್ರೇಷ್ಯತ್ಯಪಾನತಾಮ್ ।
ತಾಂ ಗತಿಂ ಮನಸಃ ಪ್ರಾಹುರ್ಮನಸಸ್ತಸ್ಮಾದವೇಕ್ಷತೇ ॥೧೨॥

"ಪ್ರಿಯಕರಳೇ! ಮತಿಗೆ ಅಪಾನವು ಪತಿಯಾಗಿ ಮತಿಯನ್ನು ಅಪಾನಭಾವದ ಕಡೆಗೆ ಒಯ್ಯುತ್ತದೆ. ಆ ಅಪಾನದ ಗತಿಯನ್ನೇ ಮನಸ್ಸಿನ ಗತಿಯೆಂದೂ ಹೇಳುತ್ತಾರೆ. ಈ ಕಾರಣದಿಂದಲೇ ಮನಸ್ಸು ವಾಕ್ಕನ್ನು ನೋಡುತ್ತದೆ.

ಪ್ರಶ್ನಂ ತು ವಾಙ್ಮನಸೋರ್ಮಾಂ ಯಸ್ಮಾತ್ತ್ವಮನುಪೃಚ್ಛಸಿ।
ತಸ್ಮಾತ್ತೇ ವರ್ತಯಿಷ್ಯಾಮಿ ತಯೋರೇವ ಸಮಾಹ್ವಯಮ್ ॥೧೩॥

ಭಾಮಿನಿಯೇ! ನೀನು ವಾಕ್ಕು-ಮನಸ್ಸುಗಳ ವಿಷಯವಾಗಿಯೇ ಪ್ರಶ್ನಿಸುತ್ತಿರುವುದರಿಂದ ನಾನು ಅವೆರಡಕ್ಕೂ ಹಿಂದೆ ನಡೆದ ಸಂವಾದವನ್ನೇ ನಿನಗೆ ಹೇಳುತ್ತೇನೆ. ಆ ಸಂವಾದದಲ್ಲಿಯೇ ನಿನಗೆ ಉತ್ತರವು ಸಿಕ್ಕುತ್ತದೆ.

ಒಮ್ಮೆ ವಾಕ್ಕು ಮತ್ತು ಮನಸ್ಸು ಎರಡೂ ಜೀವಾತ್ಮನ ಬಳಿಗೆ ಹೋಗಿ 'ಪ್ರಭುವೇ! ನಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು? ಇದನ್ನು ತಿಳಿಸಿ ನಮ್ಮ ಈ ಸಂದೇಹವನ್ನು ನಿವಾರಣೆ ಮಾಡು'–ಎಂದು ಪ್ರಾರ್ಥಿಸಿದುವು. ಆ ಪ್ರಶ್ನೆಗೆ ಉತ್ತರವಾಗಿ ಜೀವದೇವನು ಮನಸ್ಸೇ ಶ್ರೇಷ್ಠವೆಂದು ಹೇಳಿದನು. ಆ ಮಾತನ್ನು ಕೇಳಿ ವಾಗಧಿದೇವತೆಯಾದ ಸರಸ್ವತಿಯು 'ಜೀವೇಶ್ವರನೇ! ನಾನೇ ನಿನಗೆ ಕಾಮಧೇನುವಾಗಿ ಎಲ್ಲವನ್ನೂ ಒದಗಿಸಿಕೊಡುತ್ತಿದ್ದೇನೆ–ಎಂದು ಹೇಳಿ ತನ್ನ ಶ್ರೇಷ್ಠತೆಯನ್ನು ಜೀವನ ಮುಂದೆ ಪ್ರತಿಪಾದಿಸಿಕೊಂಡಳು.

ಅದಕ್ಕೆ ಜೀವನು ಹೇಳುತ್ತಾನೆ:

ಸ್ಥಾವರಂ ಜಙ್ಗಮಂ ಚೈವ ವಿದ್ಧ್ಯುಭೇ ಮನಸೀ ಮಮ ।
ಸ್ಥಾವರಂ ಮತ್ಸಕಾಶೇ ವೈ ಜಙ್ಗಮಂ ವಿಷಯೇ ತವ ॥೧೬॥

"ಸ್ಥಾವರ ಮತ್ತು ಜಂಗಮ–ಈ ಎರಡೂ ನನ್ನ ಮನಸ್ಸೇ ಆಗಿದೆ. ಬಾಹ್ಯೇಂದ್ರಿಯಗಳಿಂದ ಗ್ರಹಿಸಬಹುದಾದ ಸ್ಥಾವರಜಗತ್ತೆಲ್ಲವೂ ನನ್ನ ಸಮೀಪದಲ್ಲಿದೆ. ಇಂದ್ರಿಯಾತೀತವಾದ ಸ್ವರ್ಗಾದಿ ಜಂಗಮಗಳೆಲ್ಲವೂ ನಿನ್ನ (ವಾಕ್ಕಿನ) ಅಧೀನದಲ್ಲಿವೆ.

ಯಸ್ತು ತಂ ವಿಷಯಂ ಗಚ್ಛೇನ್ಮನ್ತ್ರೋ ವರ್ಣಃ ಸ್ವರೋಽಪಿ ವಾ ।
ತನ್ಮನೋ ಜಙ್ಗಮೋ ನಾಮ ತಸ್ಮಾದಪಿ ಗರೀಯಸೀ ॥೧೭॥

ಮಂತ್ರವಾಗಲೀ, ಸ್ವರವಾಗಲೀ, ವರ್ಣವಾಗಲೀ ಇಂದ್ರಿಯಾತೀತವಾದ ಸ್ವರ್ಗಾದಿಗಳಿಗೆ ಹೋದುದೇ ಆದರೆ–ಮನಸ್ಸೂ ಅದನ್ನೇ ಅನುಸರಿಸಿ ಹೋಗುತ್ತದೆ. ಅತೀಂದ್ರಿಯಜ್ಞಾನವನ್ನು ಪಡೆಯುವ ಮನಸ್ಸಿಗೂ ಜಂಗಮವೆಂಬ ಹೆಸರೇ ಬರುತ್ತದೆ. ಹೀಗೆ ಮನಸ್ಸು ನಿನ್ನಿಂದಲೇ (ವಾಕ್ಕಿನಿಂದಲೇ) ಇಂದ್ರಿಯಾತೀತವಾದ ಸ್ವರ್ಗಾದಿಗಳಿಗೆ ಹೋಗುವುದರಿಂದ ನೀನು ಮನಸ್ಸಿಗಿಂತಲೂ ಶ್ರೇಷ್ಠಳಾಗಿರುವೆ.

ಯಸ್ಮಾದಪಿ ಸಮಾಧಿಸ್ತೇ ಸ್ವಯಮಭ್ಯೇತ್ಯ ಶೋಭನೇ ।
ತಸ್ಮಾದುಚ್ಛ್ವಾಸಮಾಸಾದ್ಯ ಪ್ರವಕ್ಷ್ಯಾಮಿ ಸರಸ್ವತಿ ॥೧೮॥

ಶೋಭನಮಯಿಯಾದ ಸರಸ್ವತಿಯೇ! ನೀನಾಗಿಯೇ ಬಂದು 'ಅಹಂ ವೈ ಕಾಮಧುಕ್ತುಭ್ಯಂ' -'ನಾನೇ ಕಾಮಧೇನುವಿನಂತಾಗಿ ಸಕಲ ವಸ್ತುಗಳನ್ನೂ ನಿನಗೆ ಒದಗಿಸಿಕೊಡುತ್ತಿದ್ದೇನೆ'–ಎಂದು ಹೇಳಿ ನಿನ್ನ ಪಕ್ಷವನ್ನು ಪುಷ್ಟೀಕರಿಸಿಕೊಂಡಿರುವೆ. ನೀನೇ ಬಂದು ಹೀಗೆ ಹೇಳಿದುದು ನನಗೆ ಉಸಿರು ಕಟ್ಟಿದಂತಾಗಿದೆ. ಆದುದರಿಂದ ಸ್ವಲ್ಪ ಉಸಿರೆಳೆದುಕೊಂಡು ಮುಂದೆ ಮಾತನಾಡುತ್ತೇನೆ.

ಪ್ರಾಣಾಪಾನಾನ್ತರೇ ದೇವೀ ವಾಗ್ವೈ ನಿತ್ಯಂ ಸ್ಮ ತಿಷ್ಠತಿ ।
ಪ್ರೇರ್ಯಮಾಣಾ ಮಹಾಭಾಗೇ ವಿನಾ ಪ್ರಾಣಮಪಾನತೀ ।
ಪ್ರಜಾಪತಿಮುಪಾಧಾವತ್ಪ್ರಸೀದ ಭಗವನ್ನಿತಿ ॥೧೯॥

ಮಹಾಭಾಗ್ಯಶಾಲಿನಿಯೇ! ಪ್ರಾಣ ಮತ್ತು ಅಪಾನಗಳ ಮಧ್ಯದಲ್ಲಿ (ನೀನು) ವಾಗ್ದೇವತೆಯು ಯಾವಾಗಲೂ ಉಪಸ್ಥಿತಳಾಗಿರುತ್ತಾಳೆ (ತ್ರೀಯೆ). ಪ್ರಾಣಪ್ರೇರಣೆಯಿಲ್ಲದೇ ವಾಗ್ದೇವಿಯು ಯಾವಾಗ ಅಪಾನದ ಕಡೆಗೆ ಹೋಗುವಳೋ–ಆಗ ಅಲ್ಲಿರುವ ಪ್ರಜಾಪತಿಯ ಬಳಿಗೆ ಹೋಗಿ 'ಪ್ರಸೀದ ಭಗವನ್'–'ಭಗವಂತನೇ ಪ್ರಸನ್ನನಾಗು' ಎಂದು ಪ್ರಾರ್ಥಿಸುತ್ತಾಳೆ.

ತತಃ ಪ್ರಾಣಃ ಪ್ರಾದುರಭೂದ್ವಾಚಮಾಪ್ಯಾಯಯನ್ಪುನಃ ।
ತಸ್ಮಾದುಚ್ಛ್ವಾಸಮಾಸಾದ್ಯ ನ ವಾಗ್ವದತಿ ಕರ್ಹಿಚಿತ್ ॥೨೦॥

ಆ ಸಮಯದಲ್ಲಿ ವಾಣಿಗೆ ಪುಷ್ಟಿಯನ್ನು ಕೊಡುವ ಸಲುವಾಗಿಯೋ ಎಂಬಂತೆ ಪ್ರಾಣವು ಮತ್ತೆ ಪ್ರಕಟವಾಗುತ್ತದೆ. ಆದುದರಿಂದ ಉಸಿರನ್ನು ಎಳೆದುಕೊಳ್ಳುವ ಸಮಯದಲ್ಲಿ ಯಾವುದೇ ಮಾತೂ ಹೊರಡುವುದಿಲ್ಲ.

ಘೋಷಿಣೀ ಜಾತನಿರ್ಘೋಷಾ ನಿತ್ಯಮೇವ ಪ್ರವರ್ತತೇ ।
ತಯೋರಪಿ ಚ ಘೋಷಿಣ್ಯಾ ನಿರ್ಘೋಷೈವ ಗರೀಯಸೀ ॥೨೧॥

ವಾಗ್ದೇವಿಯೇ! ನೀನು ಎರಡು ಪ್ರಕಾರವಾಗಿರುವೆ. ಘೋಷಯುಕ್ತಳಾಗಿರುವೆ. (ಸ್ಪಷ್ಟವಾಗಿ ಕೇಳಿಸಲ್ಪಡುವೆ.) ಘೋಷರಹಿತಳೂ ಆಗಿರುವೆ. (ಶಬ್ದರಹಿತಳಾಗಿರುವೆ.) ಘೋಷರಹಿತವಾದ ನಿನ್ನ ಇರುವಿಕೆಯು ಎಲ್ಲರಲ್ಲಿಯೂ ಸರ್ವಕಾಲದಲ್ಲಿಯೂ ಇರುತ್ತದೆ. ಈ ಎರಡು ಪ್ರಕಾರಗಳಲ್ಲಿ ಘೋಷಯುಕ್ತವಾದ ವಾಣಿಗಿಂತಲೂ ಘೋಷರಹಿತವಾದ ವಾಣಿಯೇ ಶ್ರೇಷ್ಠವಾದುದು. (ಏಕೆಂದರೆ: ಘೋಷಯುಕ್ತವಾದ ವಾಣಿಗೆ ಪ್ರಾಣಶಕ್ತಿಯ ಸಹಾಯವು ಬೇಕಾಗುತ್ತದೆ. ಘೋಷರಹಿತವಾದ ವಾಣಿಯು ಪ್ರಾಣಶಕ್ತಿಯ ಸಹಾಯವಿಲ್ಲದೇ ಸ್ವಾಭಾವಿಕವಾಗಿಯೇ **'ಸೋಽಹಂ'** ಎಂಬ ಹಂಸಮಂತ್ರರೂಪದಿಂದ ಉಚ್ಛ್ವಾಸ-ನಿಃಶ್ವಾಸಗಳಲ್ಲಿಯೇ ಸೇರಿಕೊಂಡು ಉಚ್ಚರಿಸಲ್ಪಡುತ್ತಿರುತ್ತದೆ.)

ಗೌರಿವ ಪ್ರಸವತ್ಯರ್ಥಾನ್ರಸಮುತ್ತಮಶಾಲಿನೀ ।
ಸತತಂ ಸ್ಯನ್ದತೇ ಹ್ಯೇಷಾ ಶಾಶ್ವತಂ ಬ್ರಹ್ಮವಾದಿನೀ ॥೨೨॥

ದಿವ್ಯಾದಿವ್ಯಪ್ರಭಾವೇಣ ಭಾರತೀ ಗೌಃ ಶುಚಿಸ್ಮಿತೇ ।
ಏತಯೋರನನ್ತರಂ ಪಶ್ಯ ಸೂಕ್ಷ್ಮಯೋಃ ಸ್ಯನ್ದಮಾನಯೋಃ ॥೨೩॥



ಶುಚಿಸ್ಮಿತಳೇ! ಘೋಷಯುಕ್ತವಾದ ವೈದಿಕವಾಣಿಯು ಉತ್ತಮ ಗುಣಗಳಿಂದ ಸುಶೋಭಿತಳಾಗಿದ್ದಾಳೆ. ವೇದವಾಣಿಯು ಹಾಲನ್ನು ಕೊಡುವ ಹಸುವಿನಂತೆಯೇ ಮನುಷ್ಯನಿಗೆ ಯಾವಾಗಲೂ ಉತ್ತಮವಾದ ರಸವನ್ನೂ ಮನೋವಾಂಛಿತವಾದ ಪದಾರ್ಥಗಳನ್ನೂ ಸುರಿಸುತ್ತದೆ. ಬ್ರಹ್ಮನನ್ನು ಪ್ರತಿಪಾದಿಸುವ ಉಪನಿಷದ್ವಾಣಿಯು ಶಾಶ್ವತಪರಬ್ರಹ್ಮವಸ್ತುವಿನ ವಿಷಯವಾಗಿ ಬೋಧಿಸುತ್ತದೆ. ಹೀಗೆ ವಾಣೀರೂಪಿಯಾದ ಗೋವು ಸ್ವರ್ಗದ ಪ್ರಭಾವದಿಂದಲೂ ಮತ್ತು ವ್ಯವಹಾರದ ಪ್ರಭಾವದಿಂದಲೂ ಯುಕ್ತವಾಗಿದೆ. ಘೋಷಸಹಿತವಾದ ವಾಣಿ ಮತ್ತು ನಿರ್ಘೋಷವಾಣಿ

ಎರಡೂ ಕೂಡ ಅತಿಸೂಕ್ಷ್ಮವಾಗಿವೆ; ಅಭೀಷ್ಟವಾದ ಪದಾರ್ಥಗಳನ್ನು ಪ್ರಸವಿಸುತ್ತವೆ. ಇವುಗಳಲ್ಲಿ ಯಾವ ಅಂತರವಿರುವುದೆಂಬುದನ್ನು ನೀನೇ ನೋಡು.”

ಬ್ರಾಹ್ಮಣಿಯು ಹೇಳುತ್ತಾಳೆ:

ಅನುತ್ಪನ್ನೇಷು ವಾಕ್ಯೇಷು ಚೋದ್ಯಮಾನಾ ವಿವಕ್ಷಯಾ ।
ಕಿನ್ನು ಪೂರ್ವಂ ತದಾ ದೇವೀ ವ್ಯಾಜಹಾರ ಸರಸ್ವತೀ ॥೨೪॥

“ಪ್ರಾಣನಾಥನೇ! ವಾಕ್ಯಗಳೇ ಹುಟ್ಟದಿದ್ದಾಗ ಏನನ್ನಾದರೂ ಹೇಳಬೇಕೆಂದು ಪ್ರೇರಿತಳಾದ ಸರಸ್ವತೀದೇವಿಯು ಎಲ್ಲಕ್ಕಿಂತಲೂ ಮೊದಲು ಯಾವ ಮಾತನ್ನು ಹೇಳಿದಳು?”

ಬ್ರಾಹ್ಮಣನು ಹೇಳುತ್ತಾನೆ:

ಪ್ರಾಣೇನ ಯಾ ಸಮ್ಭವತೇ ಶರೀರೇ
ಪ್ರಾಣಾದಪಾನಂ ಪ್ರತಿಪದ್ಯತೇ ಚ ।
ಉದಾನಭೂತಾ ಚ ವಿಸೃಜ್ಯ ದೇಹಂ
ವ್ಯಾನೇನ ಸರ್ವಂ ದಿವಮಾವೃಣೋತಿ ॥೨೫॥
ತತಃ ಸಮಾನೇ ಪ್ರತಿತಿಷ್ಠತೀಹ
ಇತ್ಯೇವ ಪೂರ್ವಂ ಪ್ರಜಜಲ್ಪವಾಣೀ ।
ತಸ್ಮಾನ್ಮನಃ ಸ್ಥಾವರತ್ವಾದ್ವಿಶಿಷ್ಟಂ
ತಥಾ ದೇವೀ ಜಙ್ಗಮತ್ವಾದ್ವಿಶಿಷ್ಟಾ ॥೨೬॥

“ಪ್ರಿಯಳೇ! ವಾಗ್ದೇವಿಯು ಪ್ರಾಣದ ಮೂಲಕವಾಗಿ ಶರೀರದಲ್ಲಿ ಪ್ರಕಟವಾಗುತ್ತಾಳೆ. ಪುನಃ ಪ್ರಾಣದಿಂದಲೇ ಅಪಾನಭಾವವನ್ನು ಹೊಂದುತ್ತಾಳೆ. ಅನಂತರ ಉದಾನಸ್ವರೂಪಳಾಗಿ ಶರೀರವನ್ನು ಬಿಟ್ಟು ವ್ಯಾನರೂಪದಿಂದ ಸಂಪೂರ್ಣವಾದ ಆಕಾಶವನ್ನು ವ್ಯಾಪಿಸುತ್ತಾಳೆ. ಅನಂತರ ಸಮಾನ ವಾಯುವಿನಲ್ಲಿ ಪ್ರತಿಷ್ಠಿತಳಾಗುತ್ತಾಳೆ. ಹೀಗೆ ವಾಗ್ದೇವಿಯು ತನ್ನ ಉತ್ಪತ್ತಿಯ ವಿಷಯವನ್ನು ಮೊದಲು ಹೇಳಿದಳು. ಆದುದರಿಂದ ಸ್ಥಾವರತ್ವಕ್ಕಿಂತಲೂ ಮನಸ್ಸು ಶ್ರೇಷ್ಠವಾದುದು. ಜಂಗಮತ್ವಕ್ಕಿಂತಲೂ ವಾಗ್ದೇವಿಯು ಶ್ರೇಷ್ಠಳಾದವಳು.

(ಈ ಶ್ಲೋಕಗಳ ಸಾರಾಂಶವನ್ನು ಹೀಗೆ ಹೇಳಬಹುದಾಗಿದೆ: ಆತ್ಮವು (ಜೀವಾತ್ಮನು) ಮನಸ್ಸನ್ನು ಉಚ್ಛಾರಣೆಮಾಡಲು ಪ್ರೇರಿಸುತ್ತದೆ. ಆಗ ಮನಸ್ಸು ಜಠರಾಗ್ನಿಯನ್ನು ಪ್ರಜ್ವಲಿತಗೊಳಿಸುತ್ತದೆ. ಜಠರಾಗ್ನಿಯು ಪ್ರಜ್ವಲಿತವಾದ ನಂತರ ಅದರ ಪ್ರಭಾವದಿಂದ ಪ್ರಾಣವಾಯುವು ಅಪಾನವಾಯುವಿನೊಡನೆ ಸೇರಿಕೊಳ್ಳುತ್ತದೆ. ಅನಂತರ ಆ ವಾಯುವು ಉದಾನ ವಾಯುವಿನ ಪ್ರಭಾವದಿಂದ ಮೇಲಕ್ಕೆ ಹೋಗಿ ಮಸ್ತಕದಲ್ಲಿ ನಿಲ್ಲುತ್ತದೆ. ಪುನಃ ವ್ಯಾನವಾಯುವಿನ ಪ್ರಭಾವದಿಂದ ಕಂಠ, ತಾಲು ಇವೇ ಮೊದಲಾದ ಸ್ಥಾನಗಳಿಗೆ ಹೋಗಿ ವೇಗವಾಗಿ ವರ್ಣಗಳನ್ನು ಉತ್ಪತ್ತಿಮಾಡುತ್ತಾ ವೈಖರೀರೂಪದಿಂದ ಮನುಷ್ಯನ ಕಿವಿಗಳನ್ನು ಸೇರುತ್ತದೆ. ಪ್ರಾಣವಾಯುವಿನ ವೇಗವು ನಿವೃತ್ತವಾದನಂತರ ಪುನಃ ಅದು ಸಮಾನಭಾವದಿಂದ ಚಲಿಸಲು ಪ್ರಾರಂಭಿಸುತ್ತದೆ. ಇದು ವ್ಯಾಖ್ಯಾನಕಾರರ ವಿವರಣೆಯಾಗಿದೆ.

ಈ ಶ್ಲೋಕದಲ್ಲಿ ಪರಾ, ಪಶ್ಯನ್ತೀ, ಮಧ್ಯಮಾ ಮತ್ತು ವೈಖರಿಗಳೆಂಬ ನಾಲ್ಕು ಅವಸ್ಥೆಗಳನ್ನು ಪರ್ಯಾಯವಾಗಿ ಹೇಳಿದ್ದಾರೆ. ತಾನು ತಿಳಿದುಕೊಂಡ ವಿಷಯವನ್ನು ಇತರರಿಗೆ ಹೇಳಲು ಅದನ್ನು ತಿಳಿಸುವ ಶಬ್ದೋಚ್ಚಾರಣೆಗಾಗಿ ಚೇತನನಿಂದ ಪ್ರೇರಿತವಾದ ಮನಸ್ಸು ಅಥವಾ ಪ್ರಾಣವು ಮೂಲಾಧಾರದಲ್ಲಿರುವ ಅಪಾನವಾಯುವನ್ನು ಚಲಿಸುವಂತೆ ಮಾಡುತ್ತದೆ. ಅದರಿಂದ ಚಲಿತವಾದ ವಾಯುವು ಆ ಜಾಗದಲ್ಲಿರುವ ಅನಲನನ್ನು (ಅಗ್ನಿಯನ್ನು) ಚಲಿಸುವಂತೆ ಮಾಡುತ್ತದೆ. ಹೀಗೆ ವಾಯುವಿನಿಂದ ಚಾಲಿತವಾದ ಅಗ್ನಿಯು ಅಲ್ಲಿರುವ ವಾಯುವನ್ನು ಚಲಿಸುವಂತೆ ಮಾಡುತ್ತದೆ. ಹಾಗೆ ಚಾಲಿತವಾದ ವಾಯುವಿನಿಂದ ಅಲ್ಲಿಯೇ ಸೂಕ್ಷ್ಮವಾದ ಶಬ್ದದ ಉತ್ಪತ್ತಿಯಾಗುತ್ತದೆ. ಇದಕ್ಕೆ ಪರಾವಾಕ್ ಎಂದು ಹೆಸರು. ಇದು ಬಹಳ ಸೂಕ್ಷ್ಮರೂಪವಾದುದರಿಂದ ಇದಕ್ಕೆ ಸೂಕ್ಷ್ಮ ಎಂದೂ ಸಂಜ್ಞೆಯಿದೆ.

ಎರಡನೆಯ ಅವಸ್ಥೆಯೇ ಪಶ್ಯನ್ತೀ. ಪರಾ ಎಂಬ ಸೂಕ್ಷ್ಮರೂಪವಾದ ನಾದವು ನಾಭೀದೇಶದವರೆಗೂ ಚಲಿಸಿದಾಗ ಅದರ ಸಂಬಂಧದಿಂದ ಉಂಟಾದ ಶಬ್ದವು ಪಶ್ಯನ್ತೀ ಎಂದು ಕರೆಯಲ್ಪಡುತ್ತದೆ. **ಪ್ರಾಣೇನ ಯಾ ಸಮ್ಭವತೇ ಶರೀರೇ ಪ್ರಾಣಾದಪಾನಂ ಪ್ರತಿಪದ್ಯತೇ ಚ ।** ಈ ಶ್ಲೋಕಾರ್ಧಕ್ಕೆ ಇದು ಅಭಿಪ್ರಾಯ.

ಅನಂತರ ಆ ನಾದವು ಹೃದಯದೇಶಕ್ಕೆ ಪ್ರಸರಿಸಿದಾಗ ಅದರ ಸಂಬಂಧದಿಂದ ಉತ್ಪನ್ನವಾದ ಶಬ್ದವು ಮಧ್ಯಮಾ ಎಂಬ ಸಂಜ್ಞೆಯನ್ನು ಹೊಂದುತ್ತದೆ. ಇದು ಮೂರನೆಯ ಅವಸ್ಥೆ. ಇದು ಧ್ವನ್ಯಾತ್ಮಕವಾದುದರಿಂದ ಕಿವಿಗಳನ್ನು ಮುಚ್ಚಿಕೊಂಡು ಕೇಳಿದರೆ ಒಮ್ಮೆ ನಮಗೂ ಕೇಳಲು ಸಾಧ್ಯವಾಗಬಹುದು.

ವೈಖರೀ: ಹೃದಯದೇಶಕ್ಕೆ ಪ್ರಸರಿಸಿದನಂತರ ಬಾಯವರೆಗೂ ಬಂದ ಆ ಧ್ವನಿಯು ಕಂಠದೇಶಕ್ಕೆ ಬಂದು ತಲೆಯವರೆಗೂ ಹೋದಾಗ ಕಪಾಲದ ಹೊಡೆತದಿಂದ ಹಿಂದಿರುಗಿ, ಮುಖದಲ್ಲಿ–ತಾನು ಹುಟ್ಟುವ ಎಂಟು ಸ್ಥಾನಗಳಲ್ಲಿ ಆಹತವಾಗಿ–ಹುಟ್ಟುವ ಶಬ್ದವು ವೈಖರೀ ಎಂಬ ಅವಸ್ಥೆಯುಳ್ಳದ್ದು. ಈ ವೈಖರಿಯ ಅವಸ್ಥೆಯಲ್ಲಿ ಶಬ್ದನಿಷ್ಪತ್ತಿಯುಂಟಾಗಿ ಆ ಶಬ್ದವು ಅರ್ಥಬೋಧನಸಮರ್ಥವಾಗುವುದು.

ಉದಾನಭೂತಾ ಚ ವಿಸೃಜ್ಯ ದೇಹಂ ಎಂಬ ಉತ್ತರಾರ್ಧವನ್ನು ಈ ವಿವರಣೆಯಿಂದ ಸಮರ್ಥಿಸುವುದು ಕಷ್ಟ. ವ್ಯಾಖ್ಯಾನಕಾರರೂ ಇದಕ್ಕೆ ಸಮಾಧಾನವನ್ನು ಹೇಳಿಲ್ಲ.

ವಾಕ್ಕಿಗಿಂತಲೂ ಮನಸ್ಸು ಶ್ರೇಷ್ಠವೇ? ಅಥವಾ ಮನಸ್ಸಿಗಿಂತಲೂ ವಾಕ್ ಶ್ರೇಷ್ಠವೇ?-ಎಂಬುದನ್ನು ಹೀಗೆ ಸಮನ್ವಯಿಸಬಹುದಾಗಿದೆ. ಮನಸ್ಸಿಲ್ಲದಿದ್ದರೆ ವಾಣಿಯು ಹುಟ್ಟುವುದಿಲ್ಲ. ಮನಸ್ಸಿನ ಮೂಲಕ ವಾಣಿಯೇ (ವೇದವಾಣಿಯು) ತನ್ನ ಉತ್ಪತ್ತಿಗೆ ಕಾರಣವಾದ ಮನಸ್ಸನ್ನೇ ಉತ್ತಮಸ್ಥಾನಕ್ಕೆ ಒಯ್ಯುತ್ತದೆ. ಮನಸ್ಸು ನಿರ್ಮಲವಾಗಲು ವೇದವಾಣಿಯೇ ಕಾರಣವಾಗುತ್ತದೆ. ಆದುದರಿಂದ ಮನಸ್ಸು ಮತ್ತು ವಾಕ್ಕುಗಳು ಅನ್ಯೋನ್ಯಪೂರಕಗಳು.

೨೬ನೆಯ ಶ್ಲೋಕದಲ್ಲಿ ತಸ್ಮಾನ್ಮನಃ ಸ್ಥಾವರತ್ವಾದ್ವಿಶಿಷ್ಟಂ ಎಂದು ಹೇಳಿದೆ. ೧೯ನೆಯ ಶ್ಲೋಕದಲ್ಲಿ ಬರುವ ಸ್ಥಾವರ-ಜಂಗಮಗಳಿಗೆ ವ್ಯಾಖ್ಯಾನಕಾರರು-ಸ್ಥಾವರಂ ಬಾಹ್ಯೇನ್ದ್ರಿಯಗ್ರಾಹ್ಯಂ-ಎಂದು ಜಙ್ಗಮಂ ಅತೀನ್ದ್ರಿಯಂ=ಸ್ವರ್ಗಂ ಎಂದು ಹೇಳಿದ್ದಾರೆ. ಜಂಗಮವೆಂಬುದಕ್ಕೆ ೧೭ನೆಯ ಶ್ಲೋಕದಲ್ಲಿಯೇ ವ್ಯಾಖ್ಯೆಯೂ ಇದೆ. ಸ್ಥಾವರವೆಂಬುದಕ್ಕೆ

ಇಂದ್ರಿಯಗ್ರಾಮವೆಂದು ಅರ್ಥಮಾಡಿ ಇಂದ್ರಿಯಗ್ರಾಮಕ್ಕಿಂತಲೂ ಶ್ರೇಷ್ಠವಾದುದು ಮನಸ್ಸು–ಎಂದು ಹೇಳಬಹುದು. ಜಂಗಮವೆಂದರೆ ೧೭ನೆಯ ಶ್ಲೋಕದಲ್ಲಿರುವಂತೆ ಅಲೌಕಿಕವಾದ ವಿಷಯಕ್ಕೊಯ್ಯುವ ಮಂತ್ರ-ವರ್ಣ-ಸ್ವರಾದಿಗಳು. ಈ ಮಂತ್ರಾದಿಗಳಿಗೆ ವಾಕ್ಕೇ ಮೂಲ. ಆದುದರಿಂದ ಸ್ಥಾವರಕ್ಕಿಂತಲೂ ವಾಕ್ಕೇ ವಿಶಿಷ್ಟವಾದುದು.

ಈ ಅಧ್ಯಾಯದಲ್ಲಿಯೂ ಬ್ರಾಹ್ಮಣನು ಸರಸ್ವತಿಯೊಡನೆ ಮಾತಾಡುತ್ತಿರುವನೇ? ಜೀವಾತ್ಮನು ಸರಸ್ವತಿಯೊಡನೆ ಮಾತಾಡುತ್ತಿರುವನೇ? ಎಂಬ ಸಂದೇಹಕ್ಕೆ ಅವಕಾಶವಿದೆ. ಜೀವಾತ್ಮನ ಮಾತುಗಳನ್ನೇ ಬ್ರಾಹ್ಮಣನು ಹೇಳುತ್ತಿರುವಾಗ ಇಂತಹ ಪ್ರಸಂಗಗಳು ಸ್ವಾಭಾವಿಕ–ಎಂಬುದೇ ಇದಕ್ಕೆ ಸಮಾಧಾನ.)

ಎ೧ನೆಯ ಅಧ್ಯಾಯವು ಮುಗಿಯಿತು.

ಎಎನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಮನಸ್ಸು, ಬುದ್ಧಿ ಮತ್ತು ಇಂದ್ರಿಯರೂಪಗಳಾದ ಏಳು ಹೋತೃಗಳ ವರ್ಣನೆ: ಮನಸ್ಸು ಮತ್ತು ಇಂದ್ರಿಯಗಳ ಸಂವಾದ

ಬ್ರಾಹ್ಮಣನು ಹೇಳುತ್ತಾನೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ಸುಭಗೇ ಸಪ್ತಹೋತೄಣಾಂ ವಿಧಾನಮಿಹ ಯಾದೃಶಮ್ ॥೧॥

“ಸೌಭಾಗ್ಯವತಿಯೇ! ಈ ವಿಷಯದಲ್ಲಿ ಪುರಾತನವಾದ ಇತಿಹಾಸವೊಂದನ್ನು ವಿದ್ವಾಂಸರು ಉದಾಹರಿಸುತ್ತಾರೆ. ಏಳು ಮಂದಿ ಹೋತೃಗಳ ಯಜ್ಞದ ವಿಧಾನವು ಹೇಗೆಂಬುದನ್ನು ಆ ಇತಿಹಾಸದಲ್ಲಿ ಹೇಳಿದೆ. ಅದನ್ನೇ ನಿನಗೂ ಹೇಳುವೆನು; ಕೇಳು.

ಘ್ರಾಣಶ್ಚಕ್ಷುಶ್ಚ ಜಿಹ್ವಾ ಚ ತ್ವಕ್ಶ್ರೋತ್ರಂ ಚೈವ ಪಞ್ಚಮಮ್ ।
ಮನೋ ಬುದ್ಧಿಶ್ಚ ಸಪ್ತೈತೇ ಹೋತಾರಃ ಪೃಥಗಾಶ್ರಿತಾಃ ॥೨॥

ಸೂಕ್ಷ್ಮೇಽವಕಾಶೇ ತಿಷ್ಠನ್ತೋ ನ ಪಶ್ಯನ್ತೀತರೇತರಮ್ ।
ಏತಾನ್ವೈ ಸಪ್ತಹೋತೄಂಸ್ತ್ವಂ ಸ್ವಭಾವಾದ್ವಿದ್ಧಿ ಶೋಭನೇ ॥೩॥

ಶೋಭನಳೇ! ಮೂಗು, ಕಣ್ಣು, ನಾಲಿಗೆ, ಚರ್ಮ, ಕಿವಿ, ಮನಸ್ಸು ಮತ್ತು ಬುದ್ಧಿ–ಈ ಏಳು ಮಂದಿ ಹೋತೃಗಳು ಪ್ರತ್ಯೇಕ-ಪ್ರತ್ಯೇಕವಾಗಿಯೇ ಇರುತ್ತವೆ. ಅವೆಲ್ಲವೂ ಸೂಕ್ಷ್ಮಶರೀರದಲ್ಲಿ ಇದ್ದರೂ ಒಂದು ಮತ್ತೊಂದನ್ನು ನೋಡುವುದಿಲ್ಲ. ಆ ಏಳು ಮಂದಿ ಹೋತೃಗಳನ್ನು ನೀನು ಅವುಗಳ ಸ್ವಭಾವಗಳಿಂದಲೇ ತಿಳಿಯಬೇಕಾಗಿದೆ.”

ಬ್ರಾಹ್ಮಣಿಯು ಹೇಳುತ್ತಾಳೆ:

ಸೂಕ್ಷ್ಮೇಽವಕಾಶೇ ಸನ್ತಸ್ತೇ ಕಥಂ ನಾನ್ಯೋನ್ಯದರ್ಶಿನಃ ।
ಕಥಂಸ್ವಭಾವಾ ಭಗವನ್ನೇತದಾಚಕ್ಷ್ವ ಮೇ ಪ್ರಭೋ ॥೪॥

“ಪೂಜ್ಯನೇ! ಪ್ರಭುವೇ! ಇವೆಲ್ಲವೂ ಒಂದೇ ಸೂಕ್ಷ್ಮ ಶರೀರದಲ್ಲಿದ್ದರೂ ಒಂದು ಮತ್ತೊಂದನ್ನು ಏಕೆ ನೋಡುವುದಿಲ್ಲ.? (ಒಂದು ಮತ್ತೊಂದರ ವಿಷಯವನ್ನು ಏಕೆ ತಿಳಿದುಕೊಂಡಿಲ್ಲ?) ಅವುಗಳ ಸ್ವಭಾವಗಳೇನು?–ಈ ವಿಷಯವನ್ನು ಹೇಳುವ ಕೃಪೆಮಾಡು.”

ಬ್ರಾಹ್ಮಣನು ಹೇಳುತ್ತಾನೆ:

ಗುಣಾಜ್ಞಾನಮವಿಜ್ಞಾನಂ ಗುಣಜ್ಞಾನಮಭಿಜ್ಞತಾ ।
ಪರಸ್ಪರಂ ಗುಣಾನೇತೇ ನಾಭಿಜಾನನ್ತಿ ಕರ್ಹಿಚಿತ್ ॥೫॥

“ಪ್ರಿಯೇ! ಒಬ್ಬನ ಜೊತೆಯಲ್ಲಿಯೇ ಇದ್ದರೂ ಅವನಲ್ಲಿರುವ ಗುಣಗಳನ್ನು ತಿಳಿದುಕೊಳ್ಳದೇ ಇದ್ದರೆ ಅವನನ್ನು ತಿಳಿದುಕೊಂಡಿಲ್ಲದಂತೆಯೇ ಸರಿ. ಒಬ್ಬನಲ್ಲಿರುವ ಗುಣಗಳನ್ನು ತಿಳಿದುಕೊಂಡರೆ ಅವನನ್ನು ತಿಳಿದುಕೊಂಡಂತೆಯೇ ಸರಿ. ಮೂಗೇ ಮೊದಲಾದ ಈ ಏಳು ಮಂದಿ ಹೋತೃಗಳು ಪರಸ್ಪರವಾಗಿ ಒಂದು ಮತ್ತೊಂದರ ಗುಣವನ್ನು ತಿಳಿದುಕೊಂಡಿರುವುದಿಲ್ಲ. ಮೂಗಿನ ಗುಣವು ಕಣ್ಣಿಗೆ ತಿಳಿಯದು. ಕಣ್ಣಿನ ಗುಣವು ಮೂಗಿಗೆ ತಿಳಿಯದು. ಪರಸ್ಪರವಾದ ಗುಣಗಳ ತಿಳಿವಳಿಕೆಯಿಲ್ಲದ ಕಾರಣ ಒಂದೇ ಸೂಕ್ಷ್ಮ ಶರೀರದಲ್ಲಿದ್ದರೂ ಒಂದನ್ನು ಮತ್ತೊಂದು ತಿಳಿದುಕೊಂಡಿರುವುದಿಲ್ಲ.

ಜಿಹ್ವಾ ಚಕ್ಷುಸ್ತಥಾ ಶ್ರೋತ್ರಂ ತ್ವಙ್ಮನೋ ಬುದ್ಧಿರೇವ ಚ।
ನ ಗನ್ಧಾನಧಿಗಚ್ಛನ್ತಿ ಘ್ರಾಣಸ್ತಾನಧಿಗಚ್ಛತಿ ॥೬॥

ನಾಲಿಗೆ, ಕಣ್ಣು, ಕಿವಿ, ತ್ವಚೆ, ಮನಸ್ಸು ಮತ್ತು ಬುದ್ಧಿ–ಇವು ಗಂಧಗಳನ್ನು ತಿಳಿಯುವುದಿಲ್ಲ. ಆದರೆ ಮೂಗಿಗೆ ಗಂಧಗಳ ಆಸ್ವಾದನೆಯೇ ಸ್ವಾಭಾವಿಕವಾದ ಗುಣವಾಗಿದೆ. ಆದುದರಿಂದ ಮೂಗು ಗಂಧಗಳನ್ನು ಆಘ್ರಾಣಿಸುತ್ತದೆ.

ಘ್ರಾಣಂ ಚಕ್ಷುಸ್ತಥಾ ಶ್ರೋತ್ರಂ ತ್ವಙ್ಮನೋ ಬುದ್ಧಿರೇವ ಚ।
ನ ರಸಾನಧಿಗಚ್ಛನ್ತಿ ಜಿಹ್ವಾ ತಾನಧಿಗಚ್ಛತಿ ॥೭॥

ಮೂಗು, ಕಣ್ಣು, ಕಿವಿ, ತ್ವಕ್, ಮನಸ್ಸು ಮತ್ತು ಬುದ್ಧಿಗಳು ರಸಗಳ ಆಸ್ವಾದನೆಯನ್ನು ಮಾಡಲಾರವು. ಆದರೆ ನಾಲಿಗೆಗೆ ರಸಗಳ ಆಸ್ವಾದನೆಯೇ ಸ್ವಾಭಾವಿಕವಾದ ಗುಣವಾಗಿದೆ. ಆದುದರಿಂದ ನಾಲಿಗೆಯು ರಸವನ್ನು ಆಸ್ವಾದಿಸುತ್ತದೆ.

ಘ್ರಾಣಂ ಜಿಹ್ವಾ ತಥಾ ಶ್ರೋತ್ರಂ ತ್ವಙ್ಮನೋ ಬುದ್ಧಿರೇವ ಚ ।
ನ ರೂಪಾಣ್ಯಧಿಗಚ್ಛನ್ತಿ ಚಕ್ಷುಸ್ತಾನ್ಯಧಿಗಚ್ಛತಿ ॥೮॥

ಮೂಗು, ನಾಲಿಗೆ, ಕಿವಿ, ತ್ವಕ್, ಮನಸ್ಸು ಮತ್ತು ಬುದ್ಧಿ-ಇವುಗಳು ರೂಪಗಳನ್ನು ನೋಡಲಾರವು. ಆದರೆ ಕಣ್ಣಿಗೆ ರೂಪಗಳನ್ನು ನೋಡುವುದೇ ಸ್ವಾಭಾವಿಕವಾದ ಗುಣವಾಗಿದೆ. ಆದುದರಿಂದ ಕಣ್ಣು ರೂಪಗಳನ್ನು ನೋಡುತ್ತದೆ.

ಘ್ರಾಣಂ ಜಿಹ್ವಾ ತತಶ್ಚಕ್ಷುಃ ಶ್ರೋತ್ರಂ ಬುದ್ಧಿರ್ಮನಸ್ತಥಾ ।
ನ ಸ್ಪರ್ಶಾನಧಿಗಚ್ಛನ್ತಿ ತ್ವಕ್ಚ ತಾನಧಿಗಚ್ಛತಿ ॥೯॥

ಮೂಗು, ನಾಲಿಗೆ, ಕಣ್ಣು, ಕಿವಿ, ಬುದ್ಧಿ ಮತ್ತು ಮನಸ್ಸುಗಳು ಸ್ಪರ್ಶವನ್ನು ಅನುಭವಿಸಲಾರವು. ಆದರೆ ಚರ್ಮಕ್ಕೆ ಸ್ಪರ್ಶಾನುಭವವೇ ಸ್ವಾಭಾವಿಕವಾದ ಗುಣವಾಗಿದೆ. ಆದುದರಿಂದ ಚರ್ಮವು ಸ್ಪರ್ಶಾನುಭವವನ್ನು ಪಡೆದುಕೊಳ್ಳುತ್ತದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಙ್ಮನೋ ಬುದ್ಧಿರೇವ ಚ।
ನ ಶಬ್ದಾನಧಿಗಚ್ಛನ್ತಿ ಶ್ರೋತ್ರಂ ತಾನಧಿಗಚ್ಛತಿ ॥೧೦॥

ಮೂಗು, ನಾಲಿಗೆ, ಕಣ್ಣು, ಚರ್ಮ, ಮನಸ್ಸು ಮತ್ತು ಬುದ್ಧಿಗಳು ಶಬ್ದಗಳನ್ನು ಕೇಳಲಾರವು. ಕಿವಿಗೆ ಶಬ್ದಗಳನ್ನು ಕೇಳುವುದೇ ಸ್ವಾಭಾವಿಕವಾದ ಗುಣವಾಗಿದೆ. ಆದುದರಿಂದ ಕಿವಿಯು ಶಬ್ದಗಳನ್ನು ಕೇಳುತ್ತದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ಶ್ರೋತ್ರಂ ಬುದ್ಧಿರೇವ ಚ ।
ಸಂಶಯಂ ನಾಧಿಗಚ್ಛನ್ತಿ ಮನಸ್ತಮಧಿಗಚ್ಛತಿ ॥೧೧॥

ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ ಮತ್ತು ಬುದ್ಧಿ–ಇವುಗಳು ಸಂಶಯವನ್ನು ಹೊಂದುವುದಿಲ್ಲ. (ಇವಕ್ಕೆ ಸಂಕಲ್ಪ-ವಿಕಲ್ಪಗಳಿರುವುದಿಲ್ಲ.) ಆದರೆ ಮನಸ್ಸಿಗೆ ಸಂಕಲ್ಪ-ವಿಕಲ್ಪಗಳನ್ನು ಹೊಂದುವುದೇ ಸ್ವಾಭಾವಿಕವಾದ ಗುಣವಾಗಿದೆ. ಆದುದರಿಂದ ಮನಸ್ಸು ಸಂಶಯವನ್ನು (ಸಂಕಲ್ಪ-ವಿಕಲ್ಪಗಳನ್ನು) ಹೊಂದುತ್ತದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ಶ್ರೋತ್ರಂ ಮನ ಏವ ಚ।
ನ ನಿಷ್ಠಾಮಧಿಗಚ್ಛನ್ತಿ ಬುದ್ಧಿಸ್ತಮಧಿಗಚ್ಛತಿ ॥೧೨॥

ಹೀಗೆಯೇ ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ ಮತ್ತು ಮನಸ್ಸುಗಳು ನಿಶ್ಚಯಾತ್ಮಕವಾದ ಜ್ಞಾನವನ್ನು ಹೊಂದಲಾರವು. ಬುದ್ಧಿಯು ಮಾತ್ರವೇ ನಿಶ್ಚಯಾತ್ಮಕಜ್ಞಾನವನ್ನು ಪಡೆಯುತ್ತದೆ.

ಭಾಮಿನಿಯೇ! ಈ ವಿಷಯದಲ್ಲಿ ಇಂದ್ರಿಯಗಳಿಗೂ ಮತ್ತು ಮನಸ್ಸಿಗೂ ನಡೆದ ಸಂವಾದರೂಪವಾದ, ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು; ಕೇಳು. ಒಮ್ಮೆ ಮನಸ್ಸಿಗೂ ಇಂದ್ರಿಯಗಳಿಗೂ ಯಾರು ಹೆಚ್ಚೆಂಬುದರ ಬಗೆಗೆ ವಿವಾದವುಂಟಾದಾಗ ಮನಸ್ಸು ಇಂದ್ರಿಯಗಳೊಡನೆ ಹೇಳುತ್ತದೆ:

ನಾಘ್ರಾತಿ ಮಾಮೃತೇ ಘ್ರಾಣಂ ರಸಂ ಜಿಹ್ವಾ ನ ವೇತ್ತಿ ಚ ।
ರೂಪಂ ಚಕ್ಷುರ್ನ ಗೃಹ್ಣಾತಿ ತ್ವಕ್ಸ್ಪರ್ಶಂ ನಾವಬುಧ್ಯತೇ ॥೧೪॥

ನ ಶ್ರೋತ್ರಂ ಬುಧ್ಯತೇ ಶಬ್ದಂ ಮಯಾ ಹೀನಂ ಕಥಂಚನ ।
ಪ್ರವರಂ ಸರ್ವಭೂತಾನಾಮಹಮಸ್ಮಿ ಸನಾತನಮ್ ॥೧೫॥

ನನ್ನ ಸಹಯೋಗವಿಲ್ಲದೇ (ಮನಸ್ಸಿಲ್ಲದೇ) ಯಾವುದೇ ಕಾರಣ

ದಿಂದಲೂ ಘ್ರಾಣೇಂದ್ರಿಯವು ವಾಸನೆಯನ್ನು ಆಘ್ರಾಣಿಸುವುದಿಲ್ಲ. ನಾಲಿಗೆಯು ರುಚಿಯನ್ನು ಸವಿಯುವುದಿಲ್ಲ. ಕಣ್ಣು ರೂಪವನ್ನು ಗ್ರಹಿಸುವುದಿಲ್ಲ. ಚರ್ಮವು ಸ್ಪರ್ಶವನ್ನು ತಿಳಿಯುವುದಿಲ್ಲ. ಕಿವಿಯು ಶಬ್ದವನ್ನು ಕೇಳುವುದಿಲ್ಲ. ಆದುದರಿಂದ ನಾನು ಎಲ್ಲ ಪ್ರಾಣಿಗಳಿಗೂ ಶ್ರೇಷ್ಠನೂ ಶಾಶ್ವತನೂ ಆಗಿರುವೆನು.

ಅಗಾರಾಣೀವ ಶೂನ್ಯಾನಿ ಶಾನ್ತಾರ್ಚಿಷ ಇವಾಗ್ನಯಃ।
ಇನ್ದ್ರಿಯಾಣಿ ನ ಭಾಸನ್ತೇ ಮಯಾ ಹೀನಾನಿ ನಿತ್ಯಶಃ ॥೧೬॥

ನನ್ನ ಸಹಯೋಗವಿಲ್ಲದಿದ್ದರೆ ಇಂದ್ರಿಯಗಳೆಲ್ಲವೂ ಶೂನ್ಯವಾದ ಮನೆಗಳಂತೆ ಮತ್ತು ಜ್ವಾಲೆಗಳು ಆರಿಹೋದ ಅಗ್ನಿಗಳಂತೆ–ಯಾವಾಗಲೂ ಪ್ರಕಾಶಿಸುವುದಿಲ್ಲ.

ಕಾಷ್ಠಾನೀವಾರ್ದ್ರಶುಷ್ಕಾಣಿ ಯತಮಾನೈರಪೀನ್ದ್ರಿಯೈಃ ।
ಗುಣಾರ್ಥಾನ್ನಾಧಿಗಚ್ಛನ್ತಿ ಮಾಮೃತೇ ಸರ್ವಜನ್ತವಃ ॥೧೭॥

ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳೂ ಇಂದ್ರಿಯಗಳ ಮೂಲಕವಾಗಿ ವಿಷಯಗಳನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದರೂ ನನ್ನ ಸಹಯೋಗವಿಲ್ಲ ದಿದ್ದರೆ–ಹಸಿಯಾದ ಮತ್ತು ಲೊಡ್ಡಾದ (ಉಪಯೋಗಕ್ಕೆ ಬಾರದ) ಕಟ್ಟಿಗೆಗಳಂತೆ–ವಿಷಯಾನುಭವಗಳನ್ನು ಹೊಂದಲಾರವು.”

ಇಂದ್ರಿಯಗಳು ಹೇಳುತ್ತವೆ:

ಏವಮೇತದ್ಭವೇತ್ಸತ್ಯಂ ಯಥೈತನ್ಮನ್ಯತೇ ಭವಾನ್।
ಋತೇಽಸ್ಮಾನಸ್ಮದರ್ಥಾಂಸ್ತ್ವಂ ಭೋಗಾನ್ಭುಙ್ಕ್ತೇ ಭವಾನ್ಯದಿ ॥೧೮॥

“ಮಹಾಶಯನೇ! ನಮ್ಮಗಳ (ಇಂದ್ರಿಯಗಳ) ಸಹಯೋಗವಿಲ್ಲದೇ ವಿಷಯಭೋಗಗಳನ್ನು ನೀನು ಅನುಭವಿಸಲು ಸಮರ್ಥನಾಗಿದ್ದರೆ–ನೀನು ಭಾವಿಸಿರುವುದೂ ಮತ್ತು ನೀನು ಹೇಳುತ್ತಿರುವುದೂ ಸತ್ಯವಾಗಬಹುದು.

ಯದ್ಯಸ್ಮಾಸು ಪ್ರಲೀನೇಷು ತರ್ಪಣಂ ಪ್ರಾಣಧಾರಣಮ್ ।
ಭೋಗಾನ್ಭುಙ್ಕ್ತೇ ಭವಾನ್ಸತ್ಯಂ ಯಥೈತನ್ಮನ್ಯತೇ ತಥಾ ॥೧೯॥

ನಾವು (ಇಂದ್ರಿಯಗಳು) ಲಯಹೊಂದಿದನಂತರವೂ ನೀನು ತೃಪ್ತನಾಗಿರುವುದಾದರೆ, ಪ್ರಾಣಗಳನ್ನು ಧರಿಸಿಕೊಂಡಿರುವುದಾದರೆ, ಎಲ್ಲ ವಿಧವಾದ ಭೋಗಗಳನ್ನೂ ಅನುಭವಿಸಲು ಸಮರ್ಥನಾಗಿರುವುದಾದರೆ– ನೀನು ನಿನ್ನನ್ನು ಸನಾತನನೆಂದು ಭಾವಿಸಿಕೊಂಡಿರುವುದೂ ಮತ್ತು ನೀನು ಹೇಳುತ್ತಿರುವುದೂ ಸತ್ಯವಾಗಬಹುದು.

ಅಥವಾಸ್ಮಾಸು ಲೀನೇಷು ತಿಷ್ಠತ್ಸು ವಿಷಯೇಷು ಚ ।
ಯದಿ ಸಂಕಲ್ಪಮಾತ್ರೇಣ ಭುಙ್ಕ್ಷೇ ಭೋಗಾನ್ಯಥಾರ್ಥವತ್ ॥೨೦॥

ಅಥ ಚೇನ್ಮನ್ಯಸೇ ಸಿದ್ಧಿಮಸ್ಮದರ್ಥೇಷು ನಿತ್ಯದಾ ।
ಘ್ರಾಣೇನ ರೂಪಮಾದತ್ಸ್ವ ರಸಮಾದತ್ಸ್ವ ಚಕ್ಷುಷಾ ॥೨೧॥

ಶ್ರೋತ್ರೇಣ ಗನ್ಧಾನಾದತ್ಸ್ವ ಸ್ಪರ್ಶನಾದತ್ಸ್ವ ಜಿಹ್ವಯಾ ।
ತ್ವಚಾ ಚ ಶಬ್ದಮಾದತ್ಸ್ವ ಬುದ್ಧ್ಯಾ ಸ್ಪರ್ಶಮಥಾಪಿ ಚ ॥೨೨॥

ಅಥವಾ ನಾವಿಲ್ಲದೇ ವಿಷಯಗಳು (ಶಬ್ದ ಸ್ಪರ್ಶಾದಿಗಳು) ಇದ್ದಾಗ, ಸಂಕಲ್ಪಮಾತ್ರದಿಂದಲೇ ನೀನು ಆ ಭೋಗಗಳನ್ನು ಅನುಭವಿಸಬಲ್ಲೆಯಾದರೆ ನೀನು ಭಾವಿಸಿರುವುದು ಸತ್ಯವಾದೀತು. ನಮ್ಮ (ಇಂದ್ರಿಯಗಳ) ಅರ್ಥ (ವಿಷಯ) ಗಳಲ್ಲಿ ನಿನಗೆ ಸದಾ ಸಿದ್ಧಿಯಿರುವುದೆಂದು ನೀನು ತಿಳಿಯುವೆ ಯಾದರೆ–ಮೂಗಿನಿಂದ ರೂಪವನ್ನು ಗ್ರಹಿಸು. ರಸವನ್ನು ಕಣ್ಣಿನಿಂದ ಆಸ್ವಾದಿಸು. ಕಿವಿಯಿಂದ ಗಂಧಗಳನ್ನು ಆಘ್ರಾಣಿಸು. ನಾಲಿಗೆಯಿಂದ ಸ್ಪರ್ಶಸುಖಗಳನ್ನು ಅನುಭವಿಸು. ತ್ವಚೆಯಿಂದ ಶಬ್ದವನ್ನು ಕೇಳು. ಬುದ್ಧಿಯ ಮೂಲಕವಾಗಿ ಸ್ಪರ್ಶಸುಖವನ್ನು ಅನುಭವಿಸು. ಹೀಗೆ ಮಾಡಲು ನಿನಗೆ ಸಾಧ್ಯವಾಗುವುದೇ?

ಬಲವನ್ತೋ ಹ್ಯನಿಯಮಾ ನಿಯಮಾ ದುರ್ಬಲೀಯಸಾಮ್ ।
ಭೋಗಾನಪೂರ್ವಾನಾದತ್ಸ್ವ ನೋಚ್ಛಿಷ್ಟಂ ಭೋಕ್ತುಮರ್ಹತಿ ॥೨೩॥

ಬಲಿಷ್ಠರು ಯಾವಾಗಲೂ ನಿಯಮಗಳಿಗೆ ಒಳಪಟ್ಟಿರುವುದಿಲ್ಲ. ದುರ್ಬಲರಾದವರಿಗೇ ನೀತಿ-ನಿಯಮಗಳೆಲ್ಲವೂ ವಿಧಿಸಲ್ಪಟ್ಟಿರುತ್ತವೆ. ನೀನು ಬಲಿಷ್ಠನೇ ಆಗಿದ್ದರೆ–ಇನ್ನು ಮುಂದೆ ನಮ್ಮ ಸಹಯೋಗವಿಲ್ಲದೇ

ಅಪೂರ್ವವಾದ ಭೋಗಗಳನ್ನೇ ಉಪಭೋಗಿಸು. ಆದರೆ ನಾವು ಅನುಭವಿಸಿದನಂತರ ಮಿಕ್ಕುಳಿದ ಉಚ್ಛಿಷ್ಟವನ್ನು ಉಪಭೋಗಿಸಬೇಡ.

ಯಥಾ ಹಿ ಶಿಷ್ಯಃ ಶಾಸ್ತಾರಂ ಶ್ರುತ್ಯರ್ಥಮಭಿಧಾವತಿ ।
ತತಃ ಶ್ರುತಮುಪಾದಾಯ ಶ್ರುತ್ಯರ್ಥಮುಪತಿಷ್ಠತಿ ॥೨೪॥

ವಿಷಯಾನೇವಮಸ್ಮಾಭಿರ್ದರ್ಶಿತಾನಭಿಮನ್ಯಸೇ ।
ಅನಾಗತಾನತೀತಾಂಶ್ಚ ಸ್ವಪ್ನೇ ಜಾಗರಣೇ ತಥಾ ॥೨೫॥

ಯಾವ ರೀತಿಯಲ್ಲಿ ಶಿಷ್ಯನೊಬ್ಬನು ಶ್ರುತ್ಯರ್ಥವನ್ನು ತಿಳಿಯುವ ಸಲುವಾಗಿ ಗುರುವಿನ ಬಳಿಗೆ ಹೋಗಿ ಶ್ರುತ್ಯರ್ಥವನ್ನು ತಿಳಿದನಂತರ ಅದರಲ್ಲಿಯೇ ತಲ್ಲೀನನಾಗಿರುವಂತೆ–ಸ್ವಪ್ನದಲ್ಲಾಗಲೀ, ಜಾಗ್ರದವಸ್ಥೆಯಲ್ಲಾಗಲೀ ಹಿಂದೆ ಅಥವಾ ಮುಂದೆ ನಮ್ಮಿಂದಲೇ ತೋರಿಸಲ್ಪಟ್ಟ ವಿಷಯಗಳನ್ನು ನೀನೇ ನೋಡಿದ ಹಾಗೆ ಅಭಿಮಾನಪಟ್ಟುಕೊಳ್ಳುವೆ. (ನಾವಿಲ್ಲದೇ ಮತ್ತು ನಾವು ತೋರಿಸಿಕೊಡದೇ ವಿಷಯಸುಖಗಳನ್ನು ನೀನು ಅನುಭವಿಸಲಾರೆ. ನಮ್ಮ ಮೂಲಕವಾಗಿ ನೀನು ವಿಷಯಸುಖಗಳನ್ನು ಅನುಭವಿಸುತ್ತಿದ್ದರೂ ನಾನೇ ಆ ದೃಶ್ಯವನ್ನು ನೋಡಿದೆನು; ನಾನೇ ಅದರ ರುಚಿಯನ್ನು ಗ್ರಹಿಸಿದೆನು–ಮುಂತಾಗಿ ನೀನು ಭಾವಿಸುವೆ.

ವೈಮನಸ್ಯಂ ಗತಾನಾಂ ಚ ಜನ್ತೂನಾಮಲ್ಪಚೇತಸಾಮ್ ।
ಅಸ್ಮದರ್ಥೇ ಕೃತೇ ಕಾರ್ಯೇ ದೃಶ್ಯತೇ ಪ್ರಾಣಧಾರಣಮ್ ॥೨೬॥

ಮನಸ್ಸೆಂಬುದೇ ಇಲ್ಲದ ಅಲ್ಪಬುದ್ಧಿಯ ಪ್ರಾಣಿಗಳೇ ಆದರೂ ನಮ್ಮ ಸಲುವಾಗಿ ಅಥವಾ ನಮ್ಮನ್ನು ತೃಪ್ತಿಪಡಿಸುವ ಸಲುವಾಗಿ ಮಾಡುವ ಕಾರ್ಯದಿಂದಲೇ ಅವು ಪ್ರಾಣಗಳನ್ನು ಧರಿಸಿವೆಯೆಂಬುದು ಕಂಡುಬರುತ್ತದೆ.

(ಮನಸ್ಸಿಲ್ಲದವನೂ ಕೂಡ ನಾಲಿಗೆಯನ್ನು ತಣಿಸುವ ರಸಾಸ್ವಾದನೆಯನ್ನು ಮಾಡಲೇಬೇಕು. ಹಾಗೆ ಅವನು ಆಹಾರವನ್ನೇ ಸೇವಿಸದಿದ್ದರೆ ಪ್ರಾಣಗಳೇ ಉಳಿಯಲಾರವು. ಆದುದರಿಂದ ಮನಸ್ಸಿರಲಿ; ಮನಸ್ಸಿಲ್ಲದಿರಲಿ–ಪ್ರಾಣಿಯು ತನ್ನ ಪ್ರಾಣಧಾರಣೆಗಾಗಿ ಇಂದ್ರಿಯಗಳನ್ನು ಅವಲಂಬಿಸಿಯೇ ತೀರಬೇಕಾಗುವುದು.)

ಬಹೂನಪಿ ಹಿ ಸಂಕಲ್ಪಾನ್ಮತ್ವಾ ಸ್ವಪ್ನಾನುಪಾಸ್ಯ ಚ ।
ಬುಭುಕ್ಷಯಾ ಪೀಡ್ಯಮಾನೋ ವಿಷಯಾನೇವ ಧಾವತಿ ॥೨೭॥

ಪ್ರಾಣಿಯು ಏಕಮನಸ್ಕನಾಗಿರದೇ ಅನೇಕವಿಧವಾದ ಸಂಕಲ್ಪಗಳನ್ನು ಹೊಂದಿದ್ದರೂ, ಸರ್ವದಾ ಸ್ವಪ್ನಾವಸ್ಥೆಯಲ್ಲಿಯೇ ಇದ್ದರೂ (ಸ್ವಪ್ನದಲ್ಲಿ ಭೋಜನವನ್ನು ಮಾಡಿದ್ದರೂ)–ಹಸಿವಿನಿಂದ ಪೀಡಿತನಾದನೆಂದರೆ ವಿಷಯಗಳ ಕಡೆಗೇ (ನಾಲಿಗೆಯು ಅಪೇಕ್ಷಿಸುವ ರಸದ ಕಡೆಗೇ) ಓಡಿಹೋಗುತ್ತಾನೆ.

ಅಗಾರಮದ್ವಾರಮಿವ ಪ್ರವಿಶ್ಯ
ಸಂಕಲ್ಪಭೋಗಾನ್ವಿಷಯೇ ನಿಬದ್ಧಾನ್ ।
ಪ್ರಾಣಕ್ಷಯೇ ಶಾನ್ತಿಮುಪೈತಿ ನಿತ್ಯಂ
ದಾರುಕ್ಷಯೇಽಗ್ನಿರ್ಜ್ವಲಿತೋ ಯಥೈವ ॥೨೮॥

ಮನಸ್ಸು, ವಿಷಯಗಳಲ್ಲಿಯೇ ಆಸಕ್ತವಾಗಿ ಸಂಕಲ್ಪದಿಂದ ಉಂಟಾದ ಭೋಗಗಳನ್ನು ಅನುಭವಿಸಲು ಬಾಗಿಲೇ ಇಲ್ಲದ ಮನೆಯನ್ನು ಪ್ರವೇಶಿಸುವಂತೆ ಪ್ರವೇಶಿಸಿ ಉಪಭೋಗಿಸುತ್ತಿರುತ್ತದೆ. (ಆದರೆ ಅದು ಕೇವಲ ಮಾನಸಿಕ ಭೋಗವಾಗುತ್ತದೆ. ಅದರಿಂದ ತೃಪ್ತಿಯುಂಟಾಗುವುದಿಲ್ಲ. ತೃಪ್ತಿಯಾಗಬೇಕಾದರೆ ಇಂದ್ರಿಯಗಳೆಂಬ ಬಾಗಿಲುಗಳ ಮೂಲಕವೇ ವಿಷಯಸುಖಗಳನ್ನು ಅನುಭವಿಸಬೇಕು.) ಕಟ್ಟಿಗೆಯು ಉರಿದುಹೋದ ಮೇಲೆ ಅಗ್ನಿಯು ಶಾಂತವಾಗುವಂತೆ–ಪ್ರಾಣವು ಹೊರಟುಹೋದನಂತರ ಮನಸ್ಸೂ ಶಾಂತವಾಗುತ್ತದೆ.

ಮನಸ್ಸೇ! ನಮಗೆ ನಮ್ಮ-ನಮ್ಮ ವಿಷಯಗಳಲ್ಲಿಯೇ ಆಸಕ್ತಿಯಿರಬಹುದು. ನಾವು ಪರಸ್ಪರವಾಗಿ ಒಬ್ಬರು ಮತ್ತೊಬ್ಬರ ಗುಣಗಳನ್ನು ಅಥವಾ ವಿಷಯಗಳನ್ನು ಅರಿಯುವುದೂ ಬೇಡ. ಆದರೆ ನಮ್ಮ ಸಹಯೋಗವಿಲ್ಲದಿದ್ದರೆ ನಿನಗೆ ವಿಷಯಗಳ ಅನುಭವವಾಗುವುದಿಲ್ಲವೆಂಬುದು ಸತ್ಯ. ಆದರೆ ನಿನ್ನ ಸಹಯೋಗವು ನಮಗಿಲ್ಲದಿದ್ದರೆ ನಾವೂ ಹರ್ಷದಿಂದ ವಂಚಿತವಾಗುವೆವು. (ಆದುದರಿಂದ ವಿಷಯೋಪಭೋಗಗಗಳಿಗೆ ಮನಸ್ಸೂ ಮುಖ್ಯ. ಮನಸ್ಸಿನಂತೆ ಇಂದ್ರಿಯಗಳೂ ಮುಖ್ಯ.)"

೨೨ನೆಯ ಅಧ್ಯಾಯವು ಮುಗಿಯಿತು.

ಪ್ರಾಣಾಪಾನಾದಿಗಳ ಸಂವಾದ: ಐದು ವಾಯುಗಳೂ ಶ್ರೇಷ್ಠವೆಂದು ಬ್ರಹ್ಮನಿಂದ ನಿರ್ಣಯ

ಬ್ರಾಹ್ಮಣನು ಹೇಳುತ್ತಾನೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ಸುಭಗೇ ಪಞ್ಚಹೋತೄಣಾಂ ವಿಧಾನಮಿಹ ಯಾದೃಶಮ್ ॥೧॥

"ಸೌಭಾಗ್ಯವತಿಯೇ! ಪಂಚಹೋತೃಗಳ ಯಜ್ಞವಿಧಾನವು ಯಾವ ರೀತಿಯಲ್ಲಿರುವುದೆಂಬುದಕ್ಕೆ ಪುರಾತನವಾದ ಇತಿಹಾಸವೊಂದನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಪ್ರಾಣಾಪಾನಾವುದಾನಶ್ಚ ಸಮಾನೋ ವ್ಯಾನ ಏವ ಚ ।
ಪಞ್ಚಹೋತೄಂಸ್ತಥೈತಾನ್ವೈ ಪರಂ ಭಾವಂ ವಿದುರ್ಬುಧಾಃ ॥೨॥

ಪ್ರಾಣ, ಅಪಾನ, ಉದಾನ, ಸಮಾನ ಮತ್ತು ವ್ಯಾನ -ಈ ಐದೂ ಪಂಚಹೋತೃಗಳು. ಇವುಗಳನ್ನೇ ವಿದ್ವಾಂಸರು ಎಲ್ಲಕ್ಕಿಂತಲೂ ಶ್ರೇಷ್ಠವಾದ ಭಾವಗಳೆಂದು ಹೇಳುತ್ತಾರೆ."

ಬ್ರಾಹ್ಮಣಪತ್ನಿಯು ಕೇಳುತ್ತಾಳೆ:

ಸ್ವಭಾವಾತ್ಸಪ್ತಹೋತಾರೋ ಇತಿ ಮೇ ಪೂರ್ವಿಕಾ ಮತಿಃ ।
ಯಥಾ ವೈ ಪಞ್ಚಹೋತಾರಃ ಪರೋ ಭಾವಸ್ತದುಚ್ಯತಾಮ್ ॥೩॥

"ಪ್ರಾಣನಾಥನೇ! ಈ ಮೊದಲು ಸ್ವಾಭಾವಿಕವಾಗಿ ಏಳು ಹೋತೃಗಳಿರುವರೆಂದು ನಾನು ತಿಳಿದುಕೊಂಡಿದ್ದೆನು. ಆದರೆ ನೀನೀಗ ಪಂಚಹೋತೃಗಳೆಂದು ಹೇಳಿದೆ. ಪಂಚಹೋತೃಗಳು ಹೇಗಾದರು?– ಎಂಬುದನ್ನು ಹೇಳು."

ಬ್ರಾಹ್ಮಣನು ಹೇಳುತ್ತಾನೆ:

ಪ್ರಾಣೇನ ಸಮ್ಭೃತೋ ವಾಯುರಪಾನೋ ಜಾಯತೇ ತತಃ ।
ಅಪಾನೇ ಸಮ್ಭೃತೋ ವಾಯುಸ್ತತೋ ವ್ಯಾನಃ ಪ್ರವರ್ತತೇ ॥೪॥

ವ್ಯಾನೇನ ಸಮ್ಭೃತೋ ವಾಯುಸ್ತತೋದಾನಃ ಪ್ರವರ್ತತೇ ।
ಉದಾನೇ ಸಮ್ಭೃತೋ ವಾಯುಃ ಸಮಾನೋ ನಾಮ ಜಾಯತೇ ॥

ಪ್ರಾಣದಿಂದ ಪುಷ್ಟಿಗೊಂಡ ವಾಯುವು ಅಪಾನವಾಯುವಾಗುತ್ತದೆ. ಅಪಾನದಿಂದ ಪುಷ್ಟಿಗೊಂಡ ವಾಯುವು ವ್ಯಾನವಾಗುತ್ತದೆ. ವ್ಯಾನದಿಂದ ಪುಷ್ಟಿಗೊಂಡ ವಾಯುವು ಉದಾನವಾಗುತ್ತದೆ. ಉದಾನದಿಂದ ಪುಷ್ಟಿಗೊಂಡವಾಯುವು ಸಮಾನವೆಂಬ ಹೆಸರಿನಿಂದ ಹುಟ್ಟುತ್ತದೆ. (ಪ್ರಾಣವಾಯುವಿನಿಂದ ಅಪಾನವೂ, ಅಪಾನದಿಂದ ವ್ಯಾನವೂ, ವ್ಯಾನದಿಂದ ಉದಾನವೂ, ಉದಾನದಿಂದ ಸಮಾನವೂ ಹುಟ್ಟುತ್ತವೆ.)

ಒಮ್ಮೆ ಈ ಐದು ವಾಯುಗಳೂ, ಎಲ್ಲರಿಗೂ ಮೊದಲು ಹುಟ್ಟಿದ ಪಿತಾಮಹನ ಬಳಿಗೆ ಹೋಗಿ "ಪೂಜ್ಯನೇ! ನಮ್ಮಲ್ಲಿ ಶ್ರೇಷ್ಠನು ಯಾರೆಂಬುದನ್ನು ಹೇಳು"–ಎಂದು ಪ್ರಶ್ನಿಸಿದುವು. "ನೀನು ಯಾರನ್ನು ಶ್ರೇಷ್ಠನೆಂದು ಹೇಳುವೆಯೋ ಅವನೇ ನಮ್ಮೆಲ್ಲರಿಗೂ ಶ್ರೇಷ್ಠನಾಗುತ್ತಾನೆ"–ಎಂದು ಅವನ ನಿರ್ಣಯವನ್ನು ಮೊದಲೇ ಒಪ್ಪಿಕೊಂಡುವು. ಪಂಚವಾಯುಗಳ ಪ್ರಶ್ನೆಗೆ ಉತ್ತರವಾಗಿ ಬ್ರಹ್ಮನು ಹೇಳಿದನು:

ಯಸ್ಮಿನ್ಪ್ರಲೀನೇ ಪ್ರಲಯಂ ವ್ರಜನ್ತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಯಸ್ಮಿನ್ಪ್ರಚೀರ್ಣೇ ಚ ಪುನಶ್ಚರನ್ತಿ
ಸ ವೈ ಶ್ರೇಷ್ಠೋ ಗಚ್ಛತ ಯತ್ರ ಕಾಮಃ ॥೭॥

"ಪ್ರಾಣಗಳನ್ನು ಧರಿಸಿರುವ ಶರೀರದಲ್ಲಿ ನಿಮ್ಮ ಐವರಲ್ಲಿ ಯಾವುದು ಲಯಹೊಂದಿದನಂತರ ಉಳಿದೆಲ್ಲ ಪ್ರಾಣಗಳೂ ಲಯಹೊಂದುವುವೋ, ಯಾವುದು ಚಲಿಸಲು ತೊಡಗಿದೊಡನೆಯೇ ಉಳಿದೆಲ್ಲ ಪ್ರಾಣಗಳೂ ಚಲಿಸುವುವೋ–ಅದೇ ಎಲ್ಲರಿಗಿಂತಲೂ ಶ್ರೇಷ್ಠತಮವಾದುದು. ಅದು ಯಾವುದೆಂಬುದನ್ನು ನೀವೇ ನಿಶ್ಚಯಿಸಿಕೊಂಡು ನಿಮ್ಮ ಇಚ್ಛೆಯಿದ್ದಲ್ಲಿಗೆ ಹೋಗಿರಿ." ಬ್ರಹ್ಮನ ಆ ಮಾತನ್ನು ಕೇಳಿ ಪ್ರಾಣವಾಯುವು ಹೇಳಿತು:

ಮಯಿ ಪ್ರಲೀನೇ ಪ್ರಲಯಂ ವ್ರಜನ್ತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।

ಮಯಿ ಪ್ರಚೀರ್ಣೇ ಚ ಪುನಶ್ಚರನ್ತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾಂ ಪ್ರಲೀನಮ್ ॥೯॥

ಅಪಾನಾದಿ ವಾಯುಗಳೇ! ಪ್ರಾಣಿಗಳ ಶರೀರದಲ್ಲಿ ನಾನು ಲೀನವಾದೊಡನೆಯೇ ಉಳಿದೆಲ್ಲ ಪ್ರಾಣಗಳೂ ಲೀನವಾಗುತ್ತವೆ. ನಾನು ಚಲಿಸಲು ತೊಡಗಿದೊಡನೆಯೇ ಉಳಿದೆಲ್ಲ ಪ್ರಾಣಗಳೂ ಚಲಿಸತೊಡಗುತ್ತವೆ. ಆದುದರಿಂದ ನಿಮ್ಮೆಲ್ಲರಿಗೂ ನಾನೇ ಶ್ರೇಷ್ಠನು.

ಈಗ ನೋಡಿರಿ. ನಾನು ಲಯಹೊಂದುತ್ತಿದ್ದೇನೆ. ನೀವೆಲ್ಲರೂ ಅವಶರಾಗಿ ನನ್ನೊಡನೆಯೇ ಲಯಹೊಂದುವಿರಿ."

ಶುಭಾಂಗಿ! ಹೀಗೆ ಹೇಳಿ ಪ್ರಾಣವಾಯುವು ಸ್ವಲ್ಪಹೊತ್ತಿನವರೆಗೆ ಲಯಹೊಂದಿತು. ಅದರೊಡನೆ ಅಪಾನವೂ ಲಯಹೊಂದಿತು. ಸ್ವಲ್ಪಹೊತ್ತು ಕಳೆದನಂತರ ಪ್ರಾಣವಾಯುವು ಚಲಿಸತೊಡಗಿತು. ಆ ಸಮಯದಲ್ಲಿ ಸಮಾನ ಮತ್ತು ಉದಾನವಾಯುಗಳು ಹೀಗೆ ಹೇಳಿದುವು:

ನ ತ್ವಂ ಸರ್ವಮಿದಂ ವ್ಯಾಪ್ಯ ತಿಷ್ಠಸೀಹ ಯಥಾ ವಯಮ್ ।
ನ ತ್ವಂ ಶ್ರೇಷ್ಠೋ ಹಿ ನಃ ಪ್ರಾಣ ಅಪಾನೋ ಹಿ ವಶೇ ತವ ॥೧೦॥

"ಪ್ರಾಣವಾಯುವೇ! ನಾವು ಪ್ರಾಣಿಗಳ ಶರೀರವನ್ನು ವ್ಯಾಪಿಸಿಕೊಂಡಿರುವಂತೆ ನೀನು ವ್ಯಾಪಿಸಿಕೊಂಡಿರುವುದಿಲ್ಲ. ಆದುದರಿಂದ ನೀನು ನಮಗಿಂತಲೂ ಶ್ರೇಷ್ಠನಲ್ಲ. ಆದರೆ ಅಪಾನವು ಮಾತ್ರ ನಿನ್ನ ಅಧೀನದಲ್ಲಿರುವುದು ನಿಜ."

ಪ್ರಾಣವಾಯುವು ಚಲಿಸತೊಡಗಿದನಂತರ ಅಪಾನವಾಯುವು ಹೇಳಿತು:

ಮಯಿ ಪ್ರಲೀನೇ ಪ್ರಲಯಂ ವ್ರಜನ್ತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಮಯಿ ಪ್ರಚೀರ್ಣೇ ಚ ಪುನಶ್ಚರನ್ತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾಂ ಪ್ರಲೀನಮ್ ॥೧೧॥

"ಪ್ರಾಣಿಗಳ ಶರೀರದಲ್ಲಿ ನಾನು ಲಯಹೊಂದಿಬಿಟ್ಟರೆ ಉಳಿದೆಲ್ಲ ಪ್ರಾಣಗಳೂ ಲಯಹೊಂದುತ್ತವೆ. ನಾನು ಚಲಿಸತೊಡಗಿದರೆ ಉಳಿದೆಲ್ಲ

ಪ್ರಾಣಗಳೂ ಚಲಿಸತೊಡಗುತ್ತವೆ. ಆದುದರಿಂದ ನಾನೇ ಶ್ರೇಷ್ಠನು. ಈಗ ನೋಡಿರಿ! ನಾನು ಲಯವನ್ನು ಹೊಂದುವೆನು. ನನ್ನೊಡನೆಯೇ ನೀವೆಲ್ಲರೂ ಲಯಹೊಂದುವಿರಿ.” ಹೀಗೆ ಹೇಳಿ ಅಪಾನವು ಲಯಹೊಂದಿತು. ಅದರೊಡನೆ ಪ್ರಾಣವೂ ಲಯವನ್ನು ಹೊಂದಿತು. ಪುನಃ ಅಪಾನವು ಚಲಿಸತೊಡಗಿತು. ಹೀಗೆ ತಾನೇ ಶ್ರೇಷ್ಠನೆಂದು ಹೇಳಿಕೊಳ್ಳುತ್ತಿದ್ದ ಅಪಾನವಾಯುವನ್ನು ಕುರಿತು ವ್ಯಾನೋದಾನವಾಯುಗಳು ಹೇಳಿದುವು:

ಅಪಾನವಾಯುವೇ! ನೀನು ನಮ್ಮೆಲ್ಲರಿಗಿಂತಲೂ ಶ್ರೇಷ್ಠನಲ್ಲ. ಆದರೆ ಪ್ರಾಣನು ಮಾತ್ರ ನಿನ್ನ ವಶದಲ್ಲಿರುವುದು ನಿಜ.”

ಅಪಾನಃ ಪ್ರಚಚಾರಾಥ ವ್ಯಾನಸ್ತಂ ಪುನರಬ್ರವೀತ್ ।
ಶ್ರೇಷ್ಠೋಹಮಸ್ಮಿ ಸರ್ವೇಷಾಂ ಶ್ರೂಯತಾಂ ಯೇನ ಹೇತುನಾ ॥

ಹಿಂದೆ ಹೇಳಿದಂತೆ ಅಪಾನವು ಚಲಿಸತೊಡಗಿತು. ಬಳಿಕ ವ್ಯಾನವು ಅಪಾನದೊಡನೆ ಹೇಳಿತು. “ನಾನೇ ಎಲ್ಲರಿಗಿಂತಲೂ ಶ್ರೇಷ್ಠನಾದವನು. ಯಾವ ಕಾರಣದಿಂದ ನಾನು ಶ್ರೇಷ್ಠನೆಂಬುವುದನ್ನು ಹೇಳುವೆನು ಕೇಳಿರಿ:

ಮಯಿ ಪ್ರಲೀನೇ ಪ್ರಲಯಂ ವ್ರಜನ್ತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಮಯಿ ಪ್ರಚೀರ್ಣೇ ಚ ಪುನಶ್ಚರನ್ತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾಂ ಪ್ರಲೀನಮ್ ॥೧೪॥

ಪ್ರಾಣಿಗಳ ಶರೀರದಲ್ಲಿ ನಾನು ಲಯಹೊಂದಿದರೆ ಎಲ್ಲ ಪ್ರಾಣಗಳೂ ಲಯಹೊಂದುತ್ತವೆ. ನಾನು ಚಲಿಸಿದರೆ ಎಲ್ಲ ಪ್ರಾಣಗಳೂ ಚಲಿಸುತ್ತವೆ. ಆದುದರಿಂದ ನಾನೇ ಎಲ್ಲರಿಗಿಂತಲೂ ಶ್ರೇಷ್ಠನು. ಈಗ ನಾನು ಲಯಹೊಂದಿದರೆ ಏನಾಗುವುದೆಂಬುದನ್ನು ನೋಡಿರಿ. ನನ್ನೊಡನೆ ನೀವೆಲ್ಲರೂ ಲಯಹೊಂದುವಿರಿ.”

ಹೀಗೆ ಹೇಳಿ ವ್ಯಾನವು ಸ್ವಲ್ಪಕಾಲ ಲಯವನ್ನು ಹೊಂದಿತು. ಅದರ ಜೊತೆಯಲ್ಲಿ ಸಮಾನವೂ ಲಯವನ್ನು ಹೊಂದಿತು. ಪುನಃ ವ್ಯಾನವು ಚಲಿಸತೊಡಗಿತು.

ಆಗ ಪ್ರಾಣ, ಅಪಾನ, ಉದಾನ, ಮತ್ತು ಸಮಾನಗಳು ವ್ಯಾನವನ್ನು ಕುರಿತು ಹೇಳಿದುವು:

ನ ತ್ವಂ ಶ್ರೇಷ್ಠೋಽಸಿ ನೋ ವ್ಯಾನ ಸಮಾನಸ್ತು ವಶೇ ತವ ।

"ವ್ಯಾನವಾಯುವೇ! ನೀನು ನಮಗಿಂತಲೂ ಶ್ರೇಷ್ಠನಲ್ಲ. ಆದರೆ ಸಮಾನವಾಯುವು ಮಾತ್ರ ನಿನ್ನ ವಶದಲ್ಲಿರುವುದು ನಿಜ." ಹಿಂದೆ ಹೇಳಿದಂತೆ ಪುನಃ ವ್ಯಾನವು ಚಲಿಸತೊಡಗಿತು. ಆ ಸಮಯದಲ್ಲಿ ಸಮಾನವು ಹೇಳಿತು:

ಶ್ರೇಷ್ಠೋಽಹಮಸ್ಮಿ ಸರ್ವೇಷಾಂ ಶ್ರೂಯತಾಂ ಯೇನ ಹೇತುನಾ॥

"ನಿಮ್ಮೆಲ್ಲರಿಗಿಂತಲೂ ನಾನೇ ಶ್ರೇಷ್ಠನಾಗಿದ್ದೇನೆ. ಯಾವ ಕಾರಣದಿಂದ ನಾನು ಶ್ರೇಷ್ಠನೆಂಬುವುದನ್ನು ಹೇಳುವೆನು; ಕೇಳಿರಿ:

ಮಯಿ ಪ್ರಲೀನೇ ಪ್ರಲಯಂ ವ್ರಜನ್ತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಮಯಿ ಪ್ರಚೀರ್ಣೇ ಚ ಪುನಶ್ಚರನ್ತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾಂ ಪ್ರಲೀನಮ್ ॥೧೭॥

ಪ್ರಾಣಿಗಳ ಶರೀರದಲ್ಲಿ ನಾನು ಲಯಹೊಂದಿದರೆ ಎಲ್ಲ ಪ್ರಾಣಗಳೂ ಲಯಹೊಂದುತ್ತವೆ. ನಾನು ಚಲಿಸಿದರೆ ಎಲ್ಲ ಪ್ರಾಣಗಳೂ ಚಲಿಸುತ್ತವೆ. ಆದುದರಿಂದ ನಾನೇ ಎಲ್ಲರಿಗಿಂತಲೂ ಶ್ರೇಷ್ಠನಾಗಿದ್ದೇನೆ. ಈಗ ನಾನು ಲಯಹೊಂದಿದರೆ ಏನಾಗುವುದೆಂಬುದನ್ನು ನೋಡಿರಿ. ಅನಿವಾರ್ಯವಾಗಿ ನೀವೆಲ್ಲರೂ ನನ್ನೊಡನೆ ಲಯಹೊಂದುವಿರಿ."

ಹೀಗೆ ಹೇಳಿ ಸಮಾನವಾಯುವು ಲಯಹೊಂದಿತು. ಅದರ ಜೊತೆಯಲ್ಲಿಯೇ ವ್ಯಾನವೂ ಲೀನವಾಯಿತು. ಪುನಃ ಸಮಾನವು ಚಲಿಸತೊಡಗಿತು.ಪ್ರಾಣ-ಅಪಾನ-ಉದಾನ-ವ್ಯಾನಗಳು ಸಮಾನವಾಯುವಿಗೆ ಹೇಳಿದುವು:

ನ ತ್ವಂ ಸಮಾನ ಶ್ರೇಷ್ಠೋಽಸಿ ವ್ಯಾನ ಏವ ವಶೇ ತವ ।

"ಸಮಾನವಾಯುವೇ! ನೀನು ನಮ್ಮೆಲ್ಲರಿಗಿಂತಲೂ ಶ್ರೇಷ್ಠನಲ್ಲ. ಆದರೆ ವ್ಯಾನವಾಯುವು ನಿನ್ನ ವಶದಲ್ಲಿರುವುದು ನಿಜ."

ಹಿಂದೆ ಹೇಳಿದಂತೆ ಸಮಾನವು ಚಲಿಸತೊಡಗಿತು. ಆಗ ಉದಾನವಾಯುವು ಇತರ ವಾಯುಗಳನ್ನು ಕುರಿತು ಹೇಳಿತು:

ಶ್ರೇಷ್ಠೋಽಹಮಸ್ಮಿ ಸರ್ವೇಷಾಂ ಶ್ರೂಯತಾಂ ಯೇನ ಹೇತುನಾ ॥

"ನಾನೇ ನಿಮ್ಮೆಲ್ಲರಿಗೂ ಶ್ರೇಷ್ಠನಾಗಿರುವವನು. ಯಾವ ಕಾರಣದಿಂದ ನಾನು ನಿಮ್ಮೆಲ್ಲರಿಗಿಂತಲೂ ಶ್ರೇಷ್ಠನೆಂಬುವುದನ್ನು ಹೇಳುವೆನು; ಕೇಳಿರಿ:

ಮಯಿ ಪ್ರಲೀನೇ ಪ್ರಲಯಂ ವ್ರಜನ್ತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ।
ಮಯಿ ಪ್ರಚೀರ್ಣೇ ಚ ಪುನಶ್ಚರನ್ತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾಂ ಪ್ರಲೀನಮ್ ॥೧೯॥

ಪ್ರಾಣಿಗಳ ಶರೀರದಲ್ಲಿ ನಾನು ಲಯಹೊಂದಿದರೆ ಎಲ್ಲ ಪ್ರಾಣಗಳೂ ಲಯಹೊಂದುತ್ತವೆ. ನಾನು ಚಲಿಸತೊಡಗಿದರೆ ಉಳಿದೆಲ್ಲ ಪ್ರಾಣಗಳೂ ಚಲಿಸುತ್ತವೆ. ಆದುದರಿಂದ ನಿಮ್ಮೆಲ್ಲರಿಗಿಂತಲೂ ನಾನೇ ಶ್ರೇಷ್ಠನು. ಈಗ ನಾನು ಲಯಹೊಂದಿದರೆ ಏನಾಗುವುದೆಂಬುದನ್ನು ನೋಡಿರಿ. ನೀವೆಲ್ಲರೂ ನನ್ನ ಜೊತೆಯಲ್ಲಿಯೇ ಲಯಹೊಂದುವಿರಿ." ಹೀಗೆ ಹೇಳಿ ಉದಾನವಾಯುವು ಲಯಹೊಂದಿತು. ಅದರ ಜೊತೆಯಲ್ಲಿ ವ್ಯಾನವೂ ಲಯಹೊಂದಿತು. ಪುನಃ ಉದಾನವು ಚಲಿಸತೊಡಗಿತು. ಬಳಿಕ ಪ್ರಾಣಾಪಾನ- ಸಮಾನ-ವ್ಯಾನಗಳು ಉದಾನವಾಯುವನ್ನು ಕುರಿತು ಹೇಳಿದುವು:

ಉದಾನ ನ ತ್ವಂ ಶ್ರೇಷ್ಠೋಽಸಿ ವ್ಯಾನ ಏವ ವಶೇ ತವ ॥೨೦॥

"ಉದಾನವಾಯುವೇ! ನೀನು ನಮ್ಮೆಲ್ಲರಿಗಿಂತಲೂ ಶ್ರೇಷ್ಠನಲ್ಲ. ಆದರೆ ವ್ಯಾನನು ಮಾತ್ರ ನಿನ್ನ ವಶದಲ್ಲಿರುವುದು ನಿಜ."

(ಪ್ರಾಣಕ್ಕೆ ಅಪಾನವು ಅಧೀನ. ಅಪಾನಕ್ಕೆ ಪ್ರಾಣವು ಅಧೀನ. ವ್ಯಾನಕ್ಕೆ ಸಮಾನವು ಅಧೀನ. ಸಮಾನಕ್ಕೆ ವ್ಯಾನವು ಅಧೀನ. ಉದಾನಕ್ಕೆ ವ್ಯಾನವು ಅಧೀನ. ವ್ಯಾನಕ್ಕೆ ಉದಾನವು ಅಧೀನ. ಹೀಗೆ ಈ ವಾಯುಗಳು ಅನ್ಯೋನ್ಯಾಶ್ರಯದಿಂದ ಇರತಕ್ಕುವುಗಳು.)

ಹೀಗೆ ವಾಯುಗಳೆಲ್ಲವೂ ತಮ್ಮ-ತಮ್ಮ ಶಕ್ತಿಗಳನ್ನು ಪ್ರದರ್ಶಿಸಿಕೊಂಡನಂತರ ತನ್ನ ಸಮೀಪಕ್ಕೆ ಜೊತೆಗೂಡಿ ಮತ್ತೆ ಬಂದ ಪಂಚವಾಯುಗಳನ್ನು ಕುರಿತು ಬ್ರಹ್ಮನು ಹೇಳಿದನು:

ಸರ್ವೇ ಶ್ರೇಷ್ಠಾ ನ ವಾ ಶ್ರೇಷ್ಠಾಃ ಸರ್ವೇ ಚಾನ್ಯೋನ್ಯಧರ್ಮಿಣಃ ।
ಸರ್ವೇ ಸ್ವವಿಷಯೇ ಶ್ರೇಷ್ಠಾಃ ಸರ್ವೇ ಚಾನ್ಯೋನ್ಯಧರ್ಮಿಣಃ ॥೨೨॥

"ವಾಯುಗಳೇ! ನೀವೆಲ್ಲರೂ ಶ್ರೇಷ್ಠರಾಗಿಯೇ ಇರುವಿರಿ ಅಥವಾ ಯಾರೊಬ್ಬರೂ ಶ್ರೇಷ್ಠರಲ್ಲ. ನಿಮ್ಮೆಲ್ಲರಲ್ಲಿಯೂ ಇರುವ ಧಾರಣರೂಪವಾದ ಧರ್ಮವು ಒಂದನ್ನೊಂದು ಆಶ್ರಯಿಸಿದೆ. ನಿಮ್ಮ-ನಿಮ್ಮ ಸ್ಥಾನಗಳಲ್ಲಿ ನೀವೇ ಶ್ರೇಷ್ಠರು. ನೀವೆಲ್ಲರೂ ಅನ್ಯೋನ್ಯಧರ್ಮವುಳ್ಳವರಾಗಿರುವಿರಿ. ಒಬ್ಬನಲ್ಲಿರುವ ಧರ್ಮವು ಮತ್ತೊಬ್ಬನಲ್ಲಿಯೂ ಇದೆ. ನಿಮ್ಮ ಕಾರ್ಯಗಳು ಪರಸ್ಪರಾವಲಂಬನೆಯಿಂದ ನಡೆಯುತ್ತವೆ.

ಏಕಃ ಸ್ಥಿರಶ್ಚಾಸ್ಥಿರಶ್ಚ ವಿಶೇಷಾತ್ಪಞ್ಚವಾಯವಃ ।
ಏಕ ಏವ ಮಮೈವಾತ್ಮಾ ಬಹುಧಾಪ್ಯುಪಚೀಯತೇ ॥೨೩॥

ಒಂದೇ ವಾಯುವು ಸ್ಥಿರವಾಗಿಯೂ ಇರುತ್ತದೆ. ಅಸ್ಥಿರವಾಗಿಯೂ ಇರುತ್ತದೆ. ಹೇಗೆ ನನ್ನ ಒಂದೇ ಆತ್ಮವು ಅನೇಕಪ್ರಕಾರವಾಗಿ ವೃದ್ಧಿಯನ್ನು ಹೊಂದುತ್ತದೆಯೋ ಹಾಗೆಯೇ ಒಂದೇ ವಾಯುವು ವಿಶೇಷ ಕಾರಣಗಳಿಂದಾಗಿ (ದೇಹದಲ್ಲಿನ ಕಾರ್ಯಗಳನ್ನು ನಿರ್ವಹಿಸಲು) ಐದು ವಾಯುಗಳಾಗಿ ವಿಂಗಡಿಸಲ್ಪಟ್ಟಿದೆ.

ಪರಸ್ಪರಸ್ಯ ಸುಹೃದೋ ಭಾವಯನ್ತಃ ಪರಸ್ಪರಮ್ ।
ಸ್ವಸ್ತಿ ವ್ರಜತ ಭದ್ರಂ ವೋ ಧಾರಯಧ್ವಂ ಪರಸ್ಪರಮ್ ॥೨೪॥

ವಾಯುಗಳೇ! ನೀವೈವರೂ ಪರಸ್ಪರವಾಗಿ ಒಬ್ಬರು ಮತ್ತೊಬ್ಬರಲ್ಲಿ ವಿಶ್ವಾಸವನ್ನಿಟ್ಟುಕೊಂಡು ಮೈತ್ರಿಯಿಂದಿರಿ ಮತ್ತು ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ಧಾರಣೆಮಾಡಿರಿ (ಪೋಷಿಸಿರಿ.) ನಿಮಗೆ ಮಂಗಳವಾಗಲಿ. ನೀವಿನ್ನು ಹೋಗಿಬನ್ನಿರಿ."

ಿ೨೩ನೆಯ ಅಧ್ಯಾಯವು ಮುಗಿಯಿತು.

ದೇವರ್ಷಿಗಳಾದ ನಾರದರ ಮತ್ತು ದೇವಮತನ ಸಂವಾದ: ಉದಾನವಾಯುವಿನ ಶ್ರೇಷ್ಠತೆ

ಬ್ರಾಹ್ಮಣನು ಹೇಳುತ್ತಾನೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ನಾರದಸ್ಯ ಚ ಸಂವಾದಮೃಷೇರ್ದೇವಮತಸ್ಯ ಚ ॥೧॥

“ಪ್ರಿಯಳೇ! ಈ ವಿಷಯದಲ್ಲಿ ಹಿಂದೆ ದೇವರ್ಷಿಗಳಾದ ನಾರದರಿಗೂ ಮತ್ತು ದೇವಮತಮುನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಒಮ್ಮೆ ದೇವಮತನೂ ಮತ್ತು ನಾರದರೂ ಸಂಧಿಸಿದಾಗ ದೇವಮತನು ನಾರದರನ್ನು ಪ್ರಶ್ನಿಸಿದನು:

ಜನ್ತೋಃ ಸಂಜಾಯಮಾನಸ್ಯ ಕಿಂ ನು ಪೂರ್ವಂ ಪ್ರವರ್ತತೇ ।
ಪ್ರಾಣೋಽಪಾನಃ ಸಮಾನೋ ವಾ ವ್ಯಾನೋ ವೋದಾನ ಏವ ಚ ॥

“ದೇವರ್ಷಿಗಳೇ! ಜೀವನು ಹುಟ್ಟುವ ಸಮಯದಲ್ಲಿ ಪ್ರಾಣ-ಅಪಾನ-ಸಮಾನ-ವ್ಯಾನ-ಉದಾನಗಳೆಂಬ ಪಂಚವಾಯುಗಳಲ್ಲಿ ಯಾವ ವಾಯುವು ಮೊದಲು ಆ ಶರೀರದಲ್ಲಿ ಕಾರ್ಯಪ್ರವೃತ್ತವಾಗುತ್ತದೆ?”

ಯೇನಾಯಂ ಸೃಜ್ಯತೇ ಜನ್ತುಸ್ತತೋಽನ್ಯಃ ಪೂರ್ವಮೇತಿ ತಮ್ ।
ಪ್ರಾಣದ್ವನ್ದ್ವಂ ಹಿ ವಿಜ್ಞೇಯಂ ತಿರ್ಯಗೂರ್ಧ್ವಮಧಶ್ಚ ಯತ್ ॥೪॥

“ದೇವಮತನೇ! ಯಾವ ಕಾರಣದಿಂದ ಒಂದು ಜೀವವು ಹುಟ್ಟುವುದೋ–ಅದೇ ಕಾರಣದಿಂದ ಅದಕ್ಕಿಂತಲೂ ಭಿನ್ನವಾದ ಮತ್ತೊಂದು ಪದಾರ್ಥವೂ ಕಾರಣರೂಪದಿಂದ ಆ ಜೀವವು ಹುಟ್ಟುವ ಮೊದಲೇ ಉಪಸ್ಥಿತವಾಗಿರುತ್ತದೆ. ಅದನ್ನೇ ಪ್ರಾಣದ್ವಂದ್ವವೆಂದು ತಿಳಿಯಬೇಕು. ಅದು ದೇವಲೋಕದಲ್ಲಿಯೂ, ಮನುಷ್ಯಲೋಕದಲ್ಲಿಯೂ ಮತ್ತು ಕೆಳಗಿನ ಲೋಕದಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ.”

ದೇವಮತನು ಪ್ರಶ್ನಿಸುತ್ತಾನೆ:

ಕೇನಾಯಂ ಸೃಜ್ಯತೇ ಜನ್ತುಃ ಕಶ್ಚಾನ್ಯಃ ಪೂರ್ವಮೇತಿ ತಮ್ ।
ಪ್ರಾಣದ್ವನ್ದ್ವಂ ಚ ಮೇ ಬ್ರೂಹಿ ತಿರ್ಯಗೂರ್ಧ್ವಮಧಶ್ಚ ಯತ್ ॥೪॥

"ನಾರದರೇ! ಯಾವ ಕಾರಣದಿಂದ ಜೀವದ ಸೃಷ್ಟಿಯಾಗುತ್ತದೆ? ಬೇರೆ ಯಾವ ವಸ್ತುವು, ಆ ಜೀವವು ಹುಟ್ಟುವ ಮೊದಲೇ ಅಲ್ಲಿ ಕಾರಣರೂಪದಿಂದ ಉಪಸ್ಥಿತವಾಗಿರುತ್ತದೆ? ಪ್ರಾಣದ್ವಂದ್ವವೆಂದರೇನು? ಯಾವುದು ದೇವ-ಮನುಷ್ಯ-ಪಾತಾಳಲೋಕಗಳಲ್ಲಿ ವ್ಯಾಪ್ತವಾಗಿರುತ್ತದೆ.?"

ನಾರದರು ಹೇಳುತ್ತಾರೆ:

ಸಂಕಲ್ಪಾಜ್ಜಾಯತೇ ಹರ್ಷಃ ಶಬ್ದಾದಪಿ ಚ ಜಾಯತೇ ।
ರಸಾತ್ಸಂಜಾಯತೇ ಚಾಪಿ ರೂಪಾದಪಿ ಚ ಜಾಯತೇ ॥೫॥

"ದೇವಮತನೇ! ಸಂಕಲ್ಪದಿಂದಲೇ ಹರ್ಷವುಂಟಾಗುತ್ತದೆ. ಶಬ್ದವನ್ನು ಕೇಳುವುದರಿಂದಲೂ, ರಸದ ಆಸ್ವಾದನೆಯಿಂದಲೂ ರೂಪದ ದರ್ಶನದಿಂದಲೂ ಹರ್ಷವುಂಟಾಗುತ್ತದೆ.

ಸ್ಪರ್ಶಾತ್ಸಂಜಾಯತೇ ಚಾಪಿ ಗನ್ಧಾದಪಿ ಚ ಜಾಯತೇ ।
ಏತದ್ರೂಪಮುದಾನಸ್ಯ ಹರ್ಷೋ ಮಿಥುನಸಂಭವಃ ॥೬॥

ಸ್ಪರ್ಶದಿಂದಲೂ ಹರ್ಷವುಂಟಾಗುತ್ತದೆ. ಗಂಧವನ್ನು ಆಘ್ರಾಣಿಸುವುದರಿಂದಲೂ ಹರ್ಷವುಂಟಾಗುತ್ತದೆ. ಹರ್ಷವು ಯಾವಾಗಲೂ ಪರಸ್ಪರ ಸೇರುವಿಕೆಯಿಂದ ಉಂಟಾಗುತ್ತದೆ. ಈ ಹರ್ಷವು ಉದಾನದ (ಬ್ರಹ್ಮನ) ರೂಪವಾಗಿದೆ.

ಕಾಮಾತ್ಸಂಜಾಯತೇ ಶುಕ್ರಂ ಶುಕ್ರಾತ್ಸಂಜಾಯತೇ ರಜಃ ।
ಸಮಾನವ್ಯಾನಜನಿತೇ ಸಾಮಾನ್ಯೇ ಶುಕ್ರಶೋಣಿತೇ ॥೭॥

ಪ್ರವೃತ್ತಿಯ ಮೂಲವಾದ ಕಾಮದಿಂದ ವೀರ್ಯವು ಹುಟ್ಟುತ್ತದೆ. ವೀರ್ಯದಿಂದ ರಜಸ್ಸಿನ ಉತ್ಪತ್ತಿಯಾಗುತ್ತದೆ. ಸರ್ವಸಾಧಾರಣವಾದ ಈ ಶುಕ್ರ-ಶೋಣಿತಗಳು ಸಮಾನ ಮತ್ತು ವ್ಯಾನವಾಯುಗಳಿಂದ ಹುಟ್ಟುತ್ತವೆ.

ಶುಕ್ರಾಚ್ಛೋಣಿತಸಂಸೃಷ್ಟಾತ್ಪೂರ್ವಂ ಪ್ರಾಣಃ ಪ್ರವರ್ತತೇ ।
ಪ್ರಾಣೇನ ವಿಕೃತೇ ಶುಕ್ರೇ ತತೋಽಪಾನಃ ಪ್ರವರ್ತತೇ ॥೮॥

ರಜಸ್ಸಿನಿಂದ ಮಿಶ್ರವಾದ ವೀರ್ಯದಿಂದ ಮೊದಲು ಪ್ರಾಣವು ಹುಟ್ಟಿ ಅದರಲ್ಲಿ ಕಾರ್ಯವನ್ನು ಆರಂಭಿಸುತ್ತದೆ. ಪ್ರಾಣವಾಯುವಿನ ಕಾರ್ಯದಿಂದ ವೀರ್ಯವು ವಿಕಾರಹೊಂದಿದನಂತರ ಅಪಾನವಾಯುವಿನ ಕಾರ್ಯವು ಆರಂಭವಾಗುತ್ತದೆ. (ಪ್ರಾಣದಿಂದ ಜನ್ಮಾದಿ ವಿಕಾರಗಳು ಉಂಟಾಗುತ್ತವೆ. ಕೊನೆಗೆ ಅಪಾನವಾಯುವಿನಿಂದ ವಿನಾಶವೆಂಬ ವಿಕಾರವು ಸಂಭವಿಸುತ್ತದೆ.)

ಪ್ರಾಣಾಪಾನಾವಿದಂ ದ್ವನ್ದ್ವಮವಾಕ್ಚೋರ್ಧ್ವಂ ಚ ಗಚ್ಛತಃ ।
ವ್ಯಾನಃ ಸಮಾನಶ್ಚೈವೋಭೌ ತಿರ್ಯಗ್ದ್ವನ್ದ್ವತ್ವಮುಚ್ಯತೇ ॥೯॥

ಪ್ರಾಣಾಪಾನಗಳೆರಡೂ ಸೇರಿ ದ್ವಂದ್ವವಾಗುತ್ತದೆ. ಈ ದ್ವಂದ್ವವು ಶರೀರದಲ್ಲಿ ಮೇಲಕ್ಕೂ ಕೆಳಕ್ಕೂ ಚಲಿಸುತ್ತದೆ. ವ್ಯಾನ-ಸಮಾನಗಳೆರಡೂ ಸೇರಿ ದ್ವಂದ್ವವಾಗುತ್ತದೆ. ಇದು ಮಧ್ಯಭಾಗದಲ್ಲಿ ಅಡ್ಡಲಾಗಿ ಚಲಿಸುವ ದ್ವಂದ್ವವಾಗಿದೆ.

ಅಗ್ನಿರ್ವೈ ದೇವತಾಃ ಸರ್ವಾ ಇತಿ ವೇದಸ್ಯ ಶಾಸನಮ್ ।
ಸಂಜಾಯತೇ ಬ್ರಾಹ್ಮಣಸ್ಯ ಜ್ಞಾನಂ ಬುದ್ಧಿಸಮನ್ವಿತಮ್ ॥೧೦॥

ಅಗ್ನಿಯೇ ಸಕಲದೇವತಾಸ್ವರೂಪನೂ ಆಗಿದ್ದಾನೆಂಬುದು ವೇದದ ಶಾಸನವಾಗಿದೆ. ಆದುದರಿಂದ ಅಗ್ನಿಯಿಂದಲೇ ಬ್ರಾಹ್ಮಣನಿಗೆ ಬುದ್ಧಿಯುಕ್ತವಾದ ಜ್ಞಾನವುಂಟಾಗುತ್ತದೆ.

ತಸ್ಯ ಧೂಮಸ್ತಮೋ ರೂಪಂ ರಜೋ ಭಸ್ಮಸು ತೇಜಸಃ ।
ಸತ್ತ್ವಂ ಸಂಜಾಯತೇ ತಸ್ಯ ಯತ್ರ ಪ್ರಕ್ಷಿಪ್ಯತೇ ಹವಿಃ ॥೧೧॥

ಸರ್ವದೇವಾತ್ಮಕನಾದ ಆ ಅಗ್ನಿಯ ಧೂಮವು ತಮೋರೂಪವಾಗಿದೆ. ಭಸ್ಮವು ರಜೋರೂಪವಾಗಿದೆ. ಆದುದರಿಂದ ಅಂತಹ ಯಾವ ಅಗ್ನಿಯಲ್ಲಿ ಹವಿಸ್ಸು ಹಾಕಲ್ಪಡುವುದೋ ಅದರಿಂದ ಸತ್ತ್ವವು ಹುಟ್ಟುತ್ತದೆ.

ಸತ್ತ್ವಾತ್ಸಮಾನೋ ವ್ಯಾನಶ್ಚ ಇತಿ ಯಜ್ಞವಿದೋ ವಿದುಃ ।
ಪ್ರಾಣಾಪಾನಾವಾಜ್ಯಭಾಗೌ ತಯೋರ್ಮಧ್ಯೇ ಹುತಾಶನಃ ॥೧೨॥

ಏತದ್ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ।
ನಿರ್ದ್ವನ್ದ್ವಮಿತಿ ಯತ್ತ್ವೇತತ್ತನ್ಮೇ ನಿಗದತಃ ಶೃಣು ॥೧೩॥

ಸತ್ತ್ವಗುಣದಿಂದ ಸಮಾನ-ವ್ಯಾನಗಳು ಹುಟ್ಟಿವೆಯೆಂದು ಯಜ್ಞವನ್ನು ಬಲ್ಲವರು ತಿಳಿಯುತ್ತಾರೆ. ಪ್ರಾಣಾಪಾನಗಳು ಆಜ್ಯಭಾಗಗಳೆಂಬ ಎರಡು ಆಹುತಿಗಳಿಗೆ ಸಮಾನವಾಗಿವೆ. ಪ್ರಾಣಾಪಾನಗಳ ಮಧ್ಯದಲ್ಲಿ ಅಗ್ನಿಯಿದ್ದಾನೆ. ಇದನ್ನೇ (ಅಗ್ನಿಯನ್ನೇ) ಉದಾನದ (ಬ್ರಹ್ಮನ) ಪರಮಶ್ರೇಷ್ಠವಾದ ರೂಪವೆಂದು ಬ್ರಾಹ್ಮಣರು ತಿಳಿಯುತ್ತಾರೆ. ನಿರ್ದ್ವಂದ್ವವೆಂದು ಯಾವುದನ್ನು ಕರೆಯುವರೋ–ಅದರ ವಿಷಯವಾಗಿಯೂ ಹೇಳುವೆನು; ಕೇಳು:

ಅಹೋರಾತ್ರಮಿದಂ ದ್ವನ್ದ್ವಂ ತಯೋರ್ಮಧ್ಯೇ ಹುತಾಶನಃ ।
ಏತದ್ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೪॥

ಅಹಸ್ಸು ಮತ್ತು ರಾತ್ರಿಗಳನ್ನು ದ್ವಂದ್ವವೆನ್ನುತ್ತಾರೆ. ಈ ಎರಡರ ಮಧ್ಯದಲ್ಲಿಯೇ ನಿರ್ದ್ವಂದ್ವನಾದ ಅದ್ವಿತೀಯನಾದ ಅಗ್ನಿಯಿದ್ದಾನೆ. ಇದನ್ನು ಬ್ರಾಹ್ಮಣರು ಉದಾನದ (ಬ್ರಹ್ಮನ) ಪರಮಶ್ರೇಷ್ಠವಾದ ರೂಪವೆಂದು ತಿಳಿಯುತ್ತಾರೆ.

ಸಚ್ಚಾಸಚ್ಚೈವ ತದ್ದ್ವನ್ದ್ವಂ ತಯೋರ್ಮಧ್ಯೇ ಹುತಾಶನಃ ।
ಏತದ್ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೫॥

ಸತ್ ಮತ್ತು ಅಸತ್ ಈ ಎರಡನ್ನೂ ದ್ವಂದ್ವವೆನ್ನುತ್ತಾರೆ. ಈ ಎರಡರ ಮಧ್ಯದಲ್ಲಿಯೇ ನಿರ್ದ್ವಂದ್ವನಾದ ಅದ್ವಿತೀಯನಾದ ಅಗ್ನಿಯಿದ್ದಾನೆ. ಬ್ರಾಹ್ಮಣರು ಉದಾನದ (ಬ್ರಹ್ಮವಸ್ತುವಿನ) ಈ ರೂಪವನ್ನು ಪರಮೋತ್ಕೃಷ್ಟರೂಪವೆಂದು ತಿಳಿಯುತ್ತಾರೆ.

ಊರ್ಧ್ವಂ ಸಮಾನೋ ವ್ಯಾನಶ್ಚ ವ್ಯಸ್ಯತೇ ಕರ್ಮ ತೇನ ತತ್ ।
ತೃತೀಯಂ ತು ಸಮಾನೇನ ಪುನರೇವ ವ್ಯವಸ್ಯತೇ ॥೧೬॥

ಊರ್ಧ್ವಂ ಎಂದರೆ ಬ್ರಹ್ಮವಸ್ತುವು ಸಂಕಲ್ಪದ ಕಾರಣದಿಂದ ಸಮಾನ-ವ್ಯಾನವಾಯುಗಳಾಗಿ ಪರಿವರ್ತನಹೊಂದುತ್ತದೆ. ಅದರಿಂದಲೇ ಕರ್ಮದ ವಿಸ್ತಾರವಾಗುತ್ತದೆ. ಆದುದರಿಂದ ಸಂಕಲ್ಪವನ್ನು ತ್ಯಜಿಸಬೇಕು. ಜಾಗ್ರತ್ ಮತ್ತು ಸ್ವಪ್ನಗಳಿಂದ ಅತಿರಿಕ್ತವಾದ ಮೂರನೆಯ ಅವಸ್ಥೆಯಿಂದ

ಉಪಲಕ್ಷಿತವಾಗುವ ಬ್ರಹ್ಮವು ಸಮಾನವಾಯುವಿನಿಂದಲೇ ನಿಶ್ಚಯಿಸಲ್ಪಡುತ್ತದೆ.

ಶಾನ್ತ್ಯರ್ಥಂ ವ್ಯಾನಮೇಕಂ ಚ ಶಾನ್ತಿರ್ಬ್ರಹ್ಮ ಸನಾತನಮ್ ।
ಏತದ್ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೭॥

ಏಕಮಾತ್ರ ವ್ಯಾನವು ಇರುವುದು ಶಾಂತಿಗೋಸ್ಕರವೇ. ಶಾಂತಿಯೆಂಬುದು ಸನಾತನಬ್ರಹ್ಮವೇ ಆಗಿದೆ. ಈ ಬ್ರಹ್ಮಸ್ವರೂಪವೇ ಉದಾನವಾಯುವಿನ ಪರಮಶ್ರೇಷ್ಠವಾದ ರೂಪವಾಗಿದೆಯೆಂದು ಬ್ರಹ್ಮಜ್ಞಾನಿಗಳು ತಿಳಿಯುತ್ತಾರೆ.”

೨೪ನೆಯ ಅಧ್ಯಾಯವು ಮುಗಿಯಿತು.

೨೫ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಚಾತುರ್ಹೋತ್ರಯಜ್ಞದ ವರ್ಣನೆ

ಬ್ರಾಹ್ಮಣನು ಹೇಳುತ್ತಾನೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ಚಾತುರ್ಹೋತ್ರವಿಧಾನಸ್ಯ ವಿಧಾನಮಿಹ ಯಾದೃಶಮ್ ॥೧॥

“ಪ್ರಿಯಳೇ! ನಾಲ್ಕು ಹೋತೃಗಳಿಂದ ಸಂಪನ್ನವಾಗುವ ಯಜ್ಞವು ಯಾವ ರೀತಿಯದೆಂಬ ವಿಷಯದಲ್ಲಿ ಪುರಾತನವಾದ ಒಂದು ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ಹೇಳುವೆನು; ಕೇಳು:

ಆ ಎಲ್ಲದರ ವಿಧಾನವೂ ವಿಧಿವತ್ತಾಗಿ ಉಪದೇಶಿಸಲ್ಪಟ್ಟಿದೆ. ಮಂಗಳಸ್ವರೂಪಳೇ! ನಾನು ಹೇಳಲಿರುವ ರಹಸ್ಯವೂ ಅದ್ಭುತವೂ ಆದ ಈ ವಿಷಯವನ್ನು ಕೇಳು.

ಕರಣಂ ಕರ್ಮ ಕರ್ತಾ ಚ ಮೋಕ್ಷ ಇತ್ಯೇವ ಭಾಮಿನಿ ।
ಚತ್ವಾರ ಏತೇ ಹೋತಾರೋ ಯೈರಿದಂ ಜಗದಾವೃತಮ್ ।
ಹೋತೃಣಾಂ ಸಾಧನಂ ಚೈವ ಶೃಣು ಸರ್ವಮಶೇಷತಃ ॥೩॥

ಕರಣ, ಕರ್ಮ, ಕರ್ತಾ ಮತ್ತು ಮೋಕ್ಷ–ಈ ನಾಲ್ವರೇ ಚತುರ್ಹೋತೃಗಳು. ಈ ನಾಲ್ವರಿಂದಲೇ ಜಗತ್ತು ಸಂಪೂರ್ಣವಾಗಿ ಆವರಿಸಲ್ಪ

ಟ್ಟಿದೆ. ಈ ನಾಲ್ವರು ಹೋತೃಗಳಿಗೆ ಸಾಧನವು ಯಾವುದೆಂಬುದನ್ನು ಸಂಪೂರ್ಣವಾಗಿ ಕೇಳು.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ಚ ಶ್ರೋತ್ರಂ ಚ ಪಞ್ಚಮಮ್ ।
ಮನೋ ಬುದ್ಧಿಶ್ಚ ಸಪ್ತೈತೇ ವಿಜ್ಞೇಯಾ ಗುಣಹೇತವಃ ॥೪॥

ಮೂಗು, ನಾಲಿಗೆ, ಕಣ್ಣು, ಚರ್ಮ, ಐದನೆಯದಾದ ಕಿವಿ, ಮನಸ್ಸು ಮತ್ತು ಬುದ್ಧಿ–ಈ ಏಳು ಹೋತೃಗಳ ಗುಣಕ್ಕೆ ಕಾರಣಗಳೆಂದು ತಿಳಿಯಬೇಕು.

ಗನ್ಧೋ ರಸಶ್ಚ ರೂಪಂ ಚ ಶಬ್ದಃ ಸ್ಪರ್ಶಶ್ಚ ಪಞ್ಚಮಃ ।
ಮನ್ತವ್ಯಮಥ ಬೋದ್ಧವ್ಯಂ ಸಪ್ತೈತೇ ಕರ್ಮಹೇತವಃ ॥೫॥

ಗಂಧ, ರಸ, ರೂಪ, ಶಬ್ದ, ಐದನೆಯದಾದ ಸ್ಪರ್ಶ, ಮನನ ಮಾಡುವುದು; ತಿಳಿದುಕೊಳ್ಳುವುದು–ಈ ಏಳು ಕ್ರಿಯೆಗೆ ಕಾರಣಗಳಾಗಿವೆ.

ಘ್ರಾತಾ ಭಕ್ಷಯಿತಾ ದ್ರಷ್ಟಾ ವಕ್ತಾ ಶ್ರೋತಾ ಚ ಪಞ್ಚಮಃ ।
ಮನ್ತಾ ಬೋದ್ಧಾ ಚ ಸಪ್ತೈತೇ ವಿಜ್ಞೇಯಾಃ ಕರ್ತೃಹೇತವಃ ॥೬॥

ಆಘ್ರಾಣಿಸುವವನು, ತಿನ್ನುವವನು, ನೋಡುವವನು, ಮಾತನಾಡುವವನು, ಐದನೆಯವನಾದ ಕೇಳುವವನು, ಮನನಮಾಡುವವನು, ತಿಳಿದುಕೊಳ್ಳುವವನು–ಈ ಏಳು ಮಂದಿಯನ್ನು ಕರ್ತೃರೂಪವಾದ ಕಾರಣವೆಂದು ತಿಳಿಯಬೇಕು.

ಸ್ವಗುಣಂ ಭಕ್ಷಯನ್ತ್ಯೇತೇ ಗುಣವನ್ತಃ ಶುಭಾಶುಭಮ್ ।
ಅಹಂ ಚ ನಿರ್ಗುಣೋಽನನ್ತಃ ಸಪ್ತೈತೇ ಮೋಕ್ಷಹೇತವಃ ॥೭॥

ಘ್ರಾಣವೇ ಮೊದಲಾದ ಇಂದ್ರಿಯಗಳು ಗುಣವುಳ್ಳವುಗಳು. ಆದುದರಿಂದ ಶುಭಾಶುಭಗಳಿಂದ ಕೂಡಿರುವ ತಮ್ಮ-ತಮ್ಮ ಗುಣಗಳನ್ನು ಅವು ಅನುಭವಿಸುತ್ತವೆ. 'ನಾನು ನಿರ್ಗುಣನೂ ಅನಂತನೂ ಆಗಿದ್ದೇನೆ. ಇವುಗಳೊಡನೆ ನನಗೆ ಯಾವ ಸಂಬಂಧವೂ ಇಲ್ಲ'–ಎಂಬ ಸತ್ಯವನ್ನರಿತವನಿಗೆ ಘ್ರಾಣವೇ ಮೊದಲಾದ ಸಪ್ತೇಂದ್ರಿಯಗಳೂ ಮೋಕ್ಷಕ್ಕೆ ಸಾಧಕಗಳಾಗುತ್ತವೆ.

ವಿದುಷಾಂ ಬುಧ್ಯಮಾನಾನಾಂ ಸ್ವಂ ಸ್ವಂ ಸ್ಥಾನಂ ಯಥಾವಿಧಿ ।
ಗುಣಾಸ್ತೇ ದೇವತಾ ಭೂತಾಃ ಸತತಂ ಭುಞ್ಜತೇ ಹವಿಃ ॥೮॥

ತಮ್ಮಲ್ಲಿರುವ ಘ್ರಾಣವೇ ಮೊದಲಾದ ಸ್ಥಾನಗಳನ್ನು ಯಥಾವಿಧಿಯಾಗಿ ತಿಳಿದಿರುವ ವಿದ್ವಾಂಸರಿಗೆ ಈ ಗುಣಗಳೇ ದೇವತೆಗಳಾಗಿ ಸತತವಾಗಿ ಹವಿಸ್ಸನ್ನು ಸೇವಿಸುತ್ತಿರುತ್ತವೆ.

ಅದನ್ನನ್ನಾನ್ಯಥಾ ವಿದ್ವಾನ್ಮಮತ್ವೇನೋಪಪದ್ಯತೇ ।
ಆತ್ಮಾರ್ಥೇ ಪಾಚಯನ್ನನ್ನಂ ಮಮತ್ವೇನೋಪಹನ್ಯತೇ ॥೯॥

ಅಜ್ಞಾನಿಯಾದ ಪುರುಷನು ಭೋಜನಮಾಡುವಾಗ ಆ ಅನ್ನದ ವಿಷಯವಾಗಿ ಮಮತ್ವವನ್ನು ಹೊಂದಿರುತ್ತಾನೆ. ಅದೇ ರೀತಿಯಲ್ಲಿ ತನಗೋಸ್ಕರವಾಗಿಯೇ ಅಡಿಗೆಮಾಡಿಕೊಳ್ಳುವವನೂ ಮಮತ್ವದೋಷದಿಂದ ವಿನಾಶಹೊಂದುತ್ತಾನೆ.

ಅಭಕ್ಷ್ಯಭಕ್ಷಣಂ ಚೈವ ಮದ್ಯಪಾನಂ ಚ ಹನ್ತಿ ತಮ್ ।
ಸ ಚಾನ್ನಂ ಹನ್ತಿ ತಂ ಚಾನ್ನಂ ಸ ಹತ್ವಾ ಹನ್ಯತೇ ಪುನಃ ॥೧೦॥

ತಿನ್ನಬಾರದುದನ್ನು ತಿನ್ನುವುದು ಮತ್ತು ಮದ್ಯಪಾನಮಾಡುವುದು ಮನುಷ್ಯನನ್ನು ನಾಶಗೊಳಿಸುತ್ತದೆ. ಹೇಗೆಂದರೆ: ಅಭಕ್ಷ್ಯಭಕ್ಷ್ಯಕನಾದ ದುರ್ವ್ಯಸನಿಯು ಮೊದಲು ಅನ್ನವನ್ನು ತಿಂದು ಅದನ್ನು ವಿನಾಶಗೊಳಿಸುತ್ತಾನೆ. ಹೀಗೆ ಅನ್ನವನ್ನು ನಾಶಗೊಳಿಸಿ ಅದೇ ಅನ್ನದಿಂದಲೇ ಅವನೂ ವಿನಾಶಹೊಂದುತ್ತಾನೆ. ಹಾಗೆ ತಿಂದು ಹಾಳುಮಾಡಿದ ಅಭಕ್ಷ್ಯ-ಮದ್ಯಾದಿಗಳೇ ತಿಂದು ಹಾಳುಮಾಡಿದವನನ್ನು ವಿನಾಶಗೊಳಿಸುತ್ತವೆ. ಅಂತಹವನು ಭ್ರಷ್ಟನಾಗುತ್ತಾನೆ.

ಹನ್ತಾ ಹ್ಯನ್ನಮಿದಂ ವಿದ್ವಾನ್ಪುನರ್ಜನಯತೀಶ್ವರಃ ।
ನ ಚಾನ್ನಾಜ್ಜಾಯತೇ ತಸ್ಮಿನ್ಸೂಕ್ಷ್ಮೋ ನಾಮ ವ್ಯತಿಕ್ರಮಃ ॥೧೧॥

ಯಾವ ವಿದ್ವಾಂಸನು ಮಮತ್ವವನ್ನು ತೊರೆದು ಅನ್ನವನ್ನು ಭಕ್ಷಿಸುವನೋ–ಅವನು ಈಶ್ವರನೇ ಆಗಿ ಪುನಃ ಶುದ್ಧವಾದ ಅನ್ನವನ್ನು ಸೃಷ್ಟಿಮಾಡುತ್ತಾನೆ. ಆ ವಿದ್ವಾಂಸನಲ್ಲಿ ಅವನು ತಿನ್ನುವ ಅನ್ನದಿಂದ ಅತಿ ಸೂಕ್ಷ್ಮವಾದ ವ್ಯತಿಕ್ರಮವೂ ಉಂಟಾಗುವುದಿಲ್ಲ. ಅವನು ತಿಂದ ಅನ್ನವು ಅವನನ್ನು ನಾಶಗೊಳಿಸುವುದಿಲ್ಲ.

ಮನಸಾ ಗಮ್ಯತೇ ಯಚ್ಚ ಯಚ್ಚ ವಾಚಾ ನಿಗದ್ಯತೇ।
ಶ್ರೋತ್ರೇಣ ಶ್ರೂಯತೇ ಯಚ್ಚ ಚಕ್ಷುಷಾ ಯಚ್ಚ ದೃಶ್ಯತೇ ॥೧೨॥

ಸ್ಪರ್ಶೇನ ಸ್ಪೃಶ್ಯತೇ ಯಚ್ಚ ಘ್ರಾಣೇನ ಘ್ರಾಯತೇ ಚ ಯತ್।
ಮನಃ ಷಷ್ಠಾನಿ ಸಂಯಮ್ಯ ಹವೀಂಷ್ಯೇತಾನಿ ಸರ್ವಶಃ।
ಗುಣವತ್ಪಾವಕೋ ಮಹ್ಯಂ ದೀಪ್ಯತೇಽನ್ತಃಶರೀರಗಃ ॥೧೩॥

ಮನಸ್ಸಿನಿಂದ ಯಾವುದು ಮನನಮಾಡಲ್ಪಡುವುದೋ, ಮಾತಿನಿಂದ ಯಾವುದು ಹೇಳಲ್ಪಡುವುದೋ, ಕಿವಿಯಿಂದ ಯಾವುದು ಕೇಳಲ್ಪಡುವುದೋ, ಕಣ್ಣಿನಿಂದ ಯಾವುದು ನೋಡಲ್ಪಡುವುದೋ, ತ್ವಚೆಯಿಂದ ಯಾವುದು ಮುಟ್ಟಲ್ಪಡುವುದೋ, ಮೂಗಿನಿಂದ ಯಾವುದು ಮೂಸಲ್ಪಡುವುದೋ–ಇವೆಲ್ಲವನ್ನೂ ಆರನೆಯದಾದ ಮನಸ್ಸಿನ ಮೂಲಕವಾಗಿ ಸಂಯಮಮಾಡಿ ಹವಿಸ್ಸಿನ ರೂಪವಾದ ಈ ವಿಷಯಗಳನ್ನು ಶರೀರದ ಮಧ್ಯದಲ್ಲಿರುವ ಅಗ್ನಿಯಲ್ಲಿ ಹೋಮಮಾಡಬೇಕು. (ತಾನು ಇಂದ್ರಿಯಗಳ ಮೂಲಕವಾಗಿ ಅನುಭವಿಸುವ ವಿಷಯಸುಖಗಳೆಲ್ಲವನ್ನೂ ಪರಮಾತ್ಮನಿಗೆ ಸಮರ್ಪಿಸಬೇಕು.) ಇಂತಹ ಹೋಮಕ್ಕೆ ಅಧಿಷ್ಠಾನ ಭೂತವಾಗಿ ಗುಣವಂತನಾದ, ಅಗ್ನಿರೂಪನಾದ, ಶರೀರದ ಮಧ್ಯಭಾಗದಲ್ಲಿರುವ ಪರಮಾತ್ಮನು ಇಂತಹ ಹವಿಸ್ಸಿನಿಂದ ಪ್ರಕಾಶಿಸುತ್ತಾನೆ.

ಯೋಗಯಜ್ಞಃ ಪ್ರವೃತ್ತೋ ಮೇ ಜ್ಞಾನವಹ್ನಿಪ್ರದೋದ್ಭವಃ।
ಪ್ರಾಣಸ್ತೋತ್ರೋಽಪಾನಶಸ್ತ್ರಃ ಸರ್ವತ್ಯಾಗಸುದಕ್ಷಿಣಃ ॥೧೪॥

ಪ್ರಿಯೇ! ಯೋಗರೂಪವಾದ ನನ್ನ ಯಜ್ಞದ ಅನುಷ್ಠಾನವು ಪ್ರಾರಂಭವಾಗಿಬಿಟ್ಟಿದೆ. ಈ ಯಜ್ಞದ ಪ್ರಾದುರ್ಭಾವವು ಜ್ಞಾನರೂಪವಾದ ಅಗ್ನಿಯನ್ನು ಪ್ರಕಾಶಗೊಳಿಸುತ್ತದೆ. ಈ ಯಜ್ಞದಲ್ಲಿ ಪ್ರಾಣವೇ ಸ್ತೋತ್ರವಾಗಿದೆ. ಅಪಾನವೇ ಶಸ್ತ್ರವಾಗಿದೆ. ಸರ್ವಪರಿತ್ಯಾಗವೆಂಬುದೇ ಶ್ರೇಷ್ಠವಾದ ದಕ್ಷಿಣೆಯಾಗಿದೆ.

ಕರ್ತಾನುಮನ್ತಾ ಬ್ರಹ್ಮಾತ್ಮಾ ಹೋತಾಧ್ವರ್ಯುಃ ಕೃತಸ್ತುತಿಃ।
ಋತಂ ಪ್ರಶಾಸ್ತಾ ತಚ್ಛಸ್ತ್ರಮಪವರ್ಗೋಽಸ್ಯ ದಕ್ಷಿಣಾ ॥೧೫॥

ಕರ್ತಾ (ಅಂಹಕಾರ), ಅನುಮಂತಾ (ಮನಸ್ಸು), ಆತ್ಮಾ (ಬುದ್ಧಿ)– ಇವು ಮೂರೂ ಬ್ರಹ್ಮರೂಪಗಳಾಗಿ ಅನುಕ್ರಮವಾಗಿ ಹೋತಾ,

ಅಧ್ವರ್ಯು ಮತ್ತು ಉದ್ಗಾತೃಗಳಾಗುತ್ತವೆ. ಸತ್ಯವೇ ಪ್ರಶಾಸ್ತನ ಶಸ್ತ್ರವಾಗುತ್ತದೆ. ಮೋಕ್ಷವೇ ಆ ಯಜ್ಞದ ದಕ್ಷಿಣೆಯಾಗಿದೆ.

ಋಚಶ್ಚಾಪ್ಯತ್ರ ಶಂಸನ್ತಿ ನಾರಾಯಣವಿದೋ ಜನಾಃ ।
ನಾರಾಯಣಾಯ ದೇವಾಯ ಯದಬಧ್ನನ್ಪಶೂನ್ಪುರಾ ॥೧೬॥

ನಾರಾಯಣನನ್ನು ತಿಳಿದ ಜನರು ಈ ಯೋಗಯಜ್ಞಕ್ಕೆ ಪ್ರಮಾಣ ಭೂತವಾಗಿ ವೇದದ ಋಕ್ಕುಗಳನ್ನು ಉಲ್ಲೇಖಿಸುತ್ತಾರೆ. ಪೂರ್ವಕಾಲದಲ್ಲಿ ನಾರಾಯಣದೇವನನ್ನು ಹೊಂದುವ ಸಲುವಾಗಿ ಭಕ್ತರು ಯೋಗಯಜ್ಞದಲ್ಲಿ ಇಂದ್ರಿಯಗಳನ್ನು ಪಶುಗಳನ್ನಾಗಿ ಭಾವಿಸಿ ಕಟ್ಟಿಹಾಕುತ್ತಿದ್ದರು.

ತತ್ರ ಸಾಮಾನಿ ಗಾಯನ್ತಿ ತತ್ರ ಚಾಹುರ್ನಿದರ್ಶನಮ್ ।
ದೇವಂ ನಾರಾಯಣಂ ಭೀರು ಸರ್ವಾತ್ಮಾನಂ ನಿಬೋಧ ತಮ್ ॥೧೭॥

ಭಗವತ್ಪ್ರಾಪ್ತಿಯಾದನಂತರ ಪರಮಾನಂದದಿಂದ ಪರಿಪೂರ್ಣರಾಗುವ ಭಕ್ತರು ಸಾಮವನ್ನು ಗಾನಮಾಡುತ್ತಾರೆ. ವಿದ್ವಾಂಸರು ಇದರ ದೃಷ್ಟಾಂತವಾಗಿ ತೈತ್ತಿರೀಯೋಪನಿಷತ್ತಿನಲ್ಲಿ ಹೇಳಿರುವ-ಏತತ್ಸಾಮ ಗಾಯನ್ನಾಸ್ತೇ-ಮುಂತಾದ ವಾಕ್ಯಗಳನ್ನು ಉಲ್ಲೇಖಿಸುತ್ತಾರೆ. ನೀನೂ ಕೂಡ ಸರ್ವಾತ್ಮನಾದ ಶ್ರೀಮನ್ನಾರಾಯಣನ ಜ್ಞಾನವನ್ನು ಹೊಂದು."

ಎ೫ನೆಯ ಅಧ್ಯಾಯವು ಮುಗಿಯಿತು.

೨೬ನೆಯ ಅಧ್ಯಾಯ — ಅನುಗೀತಾಪರ್ವ (ಮುಂದುವರಿದಿದೆ.)

ಅಂತರ್ಯಾಮಿಯ ಪ್ರಧಾನತೆ

ಬ್ರಾಹ್ಮಣನು ಹೇಳುತ್ತಾನೆ:

ಏಕಃ ಶಾಸ್ತಾ ನ ದ್ವಿತೀಯೋಽಸ್ತಿ ಶಾಸ್ತಾ
ಯೋ ಹೃಚ್ಛಯಸ್ತಮಹಮನುಬ್ರವೀಮಿ ।
ತೇನೈವ ಯುಕ್ತಃ ಪ್ರವಣಾದಿವೋದಕಂ
ಯಥಾ ನಿಯುಕ್ತೋಽಸ್ಮಿ ತಥಾ ಚರಾಮಿ ॥೧॥

"ಪ್ರಿಯಳೇ! ಜಗತ್ತಿಗೆ ಶಾಸಕನು ಒಬ್ಬನೇ. ಎರಡನೆಯ ಶಾಸಕ ನಿಲ್ಲ. ಯಾರು ಎಲ್ಲರ ಹೃದಯಗಳಲ್ಲಿಯೂ ಪವಡಿಸಿರುವನೋ–ಆ

ಪರಮಾತ್ಮನನ್ನೇ ನಾನು ಶಾಸಕನೆಂದು ಹೇಳುತ್ತೇನೆ. ಇಳಿಜಾರಾಗಿರುವ ಸ್ಥಳದಿಂದಲೇ ನೀರು ಹರಿದುಬರಲು ಆಸಕ್ತವಾಗಿರುವಂತೆ ಅವನಲ್ಲಿಯೇ ನಾನು ಆಸಕ್ತನಾಗಿದ್ದೇನೆ. ಅವನಿಂದ ಹೇಗೆ ನಿಯೋಜಿಸಲ್ಪಡುವೆನೋ ಹಾಗೆಯೇ ಮಾಡುತ್ತೇನೆ.

ಏಕೋ ಗುರುರ್ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನುಬ್ರವೀಮಿ ।
ತೇನಾನುಶಿಷ್ಟಾ ಗುರುಣಾ ಸದೈವ
ಪರಾಭೂತಾ ದಾನವಾಃ ಸರ್ವ ಏವ ॥೨॥

ಅವನೊಬ್ಬನೇ ಗುರು. ಎರಡನೆಯ ಗುರುವೇ ಇಲ್ಲ. ಯಾವನು ಎಲ್ಲ ಪ್ರಾಣಿಗಳ ಹೃದಯಗುಹೆಗಳಲ್ಲಿಯೂ ಪವಡಿಸಿರುವನೋ–ಆ ಪರಮಾತ್ಮನನ್ನೇ ನಾನು ಗುರುವೆಂದು ಹೇಳುತ್ತಿದ್ದೇನೆ. ಆ ಮಹಾಗುರುವಿನ ಅನುಶಾಸನದಿಂದಲೇ ಎಲ್ಲ ದಾನವರೂ ಪರಾಜಿತರಾಗಿ ಹೋದರು.

ಏಕೋ ಬನ್ಧುರ್ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನುಬ್ರವೀಮಿ ।
ತೇನಾನುಶಿಷ್ಟಾ ಬಾನ್ಧವಾ ಬನ್ಧುಮನ್ತಃ
ಸಪ್ತರ್ಷಯಶ್ಚೈವ ದಿವಿ ಪ್ರಭಾನ್ತಿ ॥೩॥

ಅವನೊಬ್ಬನೇ ಬಂಧುವು. ಅವನಿಗಿಂತಲೂ ಎರಡನೆಯ ಬಂಧುವೇ ಇಲ್ಲ. ಯಾವನು ಎಲ್ಲ ಪ್ರಾಣಿಗಳ ಹೃದಯಗುಹೆಗಳಲ್ಲಿಯೂ ಪವಡಿಸಿರುವನೋ–ಆ ಪರಮಾತ್ಮನನ್ನೇ ನಾನು ಬಂಧುವೆಂದು ಹೇಳುತ್ತೇನೆ. ಅವನ ಆಜ್ಞೆಯಂತೆಯೇ ಬಾಂಧವರು ಬಂಧುಗಳನ್ನು ಪಡೆಯುತ್ತಾರೆ ಮತ್ತು ಅವನಿಂದ ಉಪದೇಶಹೊಂದಿಯೇ ಸಪ್ತರ್ಷಿಗಳೂ ಆಕಾಶದಲ್ಲಿ ಪ್ರಕಾಶಿಸುತ್ತಿದ್ದಾರೆ.

ಏಕಃ ಶ್ರೋತಾ ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನುಬ್ರವೀಮಿ ।
ತಸ್ಮಿನ್ಗುರೌ ಗುರುವಾಸಂ ನಿರುಷ್ಯ
ಶಕ್ರೋ ಗತಃ ಸರ್ವಲೋಕಾಮರತ್ವಮ್ ॥೪॥

ಕೇಳುವವನು ಅವನೊಬ್ಬನೇ. ಎರಡನೆಯವನಲ್ಲ. ಯಾವನು ಎಲ್ಲ

ಪ್ರಾಣಿಗಳ ಹೃದಯಗುಹೆಗಳಲ್ಲಿಯೂ ಪವಡಿಸಿರುವನೋ–ಆ ಪರಮಾತ್ಮನನ್ನೇ ನಾನು ಶ್ರೋತೃವೆಂದು ಕರೆಯುತ್ತೇನೆ .ಇಂದ್ರನು ಹೃದಯದಲ್ಲಿ ಪವಡಿಸಿರುವ ಪರಮಾತ್ಮನನ್ನೇ ಗುರುವನ್ನಾಗಿ ಮಾಡಿಕೊಂಡು ಗುರುಕುಲ ವಾಸವನ್ನು ನಿಯಮಪೂರ್ವಕವಾಗಿ ಮುಗಿಸಿ ಅವನಿಗೆ ಶರಣಾಗತನಾದನು. ಆದರಿಂದವನು ಸರ್ವಲೋಕಗಳಿಗೂ ಒಡೆಯನಾಗಿ ಅಮರತ್ವವನ್ನು ಹೊಂದಿದನು.

ಏಕೋ ದ್ವೇಷ್ಟಾ ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನುಬ್ರವೀಮಿ ।
ತೇನಾನುಶಿಷ್ಟಾ ಗುರುಣಾ ಸದೈವ
ಲೋಕೇ ದ್ವಿಷ್ಟಾಃ ಪನ್ನಗಾಃ ಸರ್ವ ಏವ ॥೫॥

ಲೋಕದಲ್ಲಿ ದುಷ್ಟರಾದವರಿಗೆ ಇರುವ ಶತ್ರುವು ಅವನೊಬ್ಬನೇ. ಎರಡನೆಯವನಲ್ಲ. ಯಾವನು ಎಲ್ಲ ಪ್ರಾಣಿಗಳ ಹೃದಯಗುಹೆಗಳಲ್ಲಿಯೂ ಪವಡಿಸಿರುವನೋ–ಆ ಪರಮಾತ್ಮನನ್ನೇ ನಾನು ದುಷ್ಟರ ಏಕಮಾತ್ರ ಶತ್ರುವೆಂದು ಹೇಳುತ್ತೇನೆ. ಗುರುವಾದ ಅವನ ಓಂಕಾರದ ಉಪದೇಶಾನುಸಾರವಾಗಿಯೇ ಲೋಕದಲ್ಲಿ ಎಲ್ಲ ಸರ್ಪಗಳೂ ದ್ವೇಷಭಾವದಿಂದ (ಇತರರನ್ನು ಕಚ್ಚುವ ಸ್ವಭಾವದಿಂದ) ಯುಕ್ತವಾಗಿವೆ. ಸೌಭಾಗ್ಯಶಾಲಿನಿಯೇ! ಈ ವಿಷಯದಲ್ಲಿ ಹಿಂದೆ ಪ್ರಜಾಪತಿಯೊಡನೆ ಸರ್ಪಗಳಿಗೂ ಮತ್ತು ದೇವರ್ಷಿಗಳಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಒಮ್ಮೆ ದೇವತೆಗಳೂ, ಋಷಿಗಳೂ, ನಾಗಗಳೂ ಮತ್ತು ಅಸುರರೂ ಪ್ರಜಾಪತಿಯ ಬಳಿಯಲ್ಲಿ ಕುಳಿತು "ನಮಗೆ ಶ್ರೇಯಸ್ಸು ಹೇಗೆ ಉಂಟಾಗುವುದು ಎಂಬುದನ್ನು ಹೇಳು"–ಎಂದು ಪ್ರಾರ್ಥಿಸಿದರು. ಅವರಿಗೆ ಪೂಜ್ಯನಾದ ಪ್ರಜಾಪತಿಯು ಬ್ರಹ್ಮಸ್ವರೂಪವಾದ ಓಂಕಾರವೆಂಬ ಏಕಾಕ್ಷರವನ್ನು ಉಪದೇಶಿಸಿದನು. ಪ್ರಣವನಾದವನ್ನು ಕೇಳಿದೊಡನೆಯೇ ಅವರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಹೀಗೆ ಅವರು ತಮ್ಮ ಸ್ಥಾನಗಳಿಗೆ ಓಡಿಹೋಗುತ್ತಿದ್ದಾಗ ಪ್ರತಿಯೊಬ್ಬರೂ ತಮಗಾದ ಓಂಕಾರೋಪದೇಶದ ಅರ್ಥವನ್ನು ಚಿಂತಿಸತೊಡಗಿದರು.

'ಓಂ'–ಎಂದರೆ 'ಅಂಗೀಕಾರ'–ಎಂದೂ ಆಗುತ್ತದೆ. ಪ್ರಜಾಪತಿಯು

ಓಂ-ಎಂದು ಹೇಳಿ 'ತಮ್ಮ ಸ್ವಭಾವಗುಣವೇ ಶ್ರೇಯಸ್ಸಿಗೆ ಮೂಲವಾಗಿದೆ'– ಎಂದು ಹೇಳಿದನೆಂದು ಎಲ್ಲರೂ ಭಾವಿಸಿದರು. ಅದರಿಂದಾಗಿ ಸರ್ಪಗಳಿಗೆ ಮತ್ತೊಬ್ಬರನ್ನು ಕಚ್ಚುವುದರಲ್ಲಿಯೇ ಭಾವವುಂಟಾಯಿತು. ಅಸುರರಿಗೆ ಅವರ ಸ್ವಭಾವಗುಣವಾದ ಅಹಂಕಾರದಲ್ಲಿಯೇ ಪ್ರವೃತ್ತಿಯುಂಟಾಯಿತು. ದೇವತೆಗಳಿಗೆ ದಾನಮಾಡುವುದರಲ್ಲಿಯೂ, ಮಹರ್ಷಿಗಳಿಗೆ ಇಂದ್ರಿಯ ಗಳನ್ನು ದಮನಮಾಡುವುದರಲ್ಲಿಯೂ ಪ್ರವೃತ್ತಿ ಯುಂಟಾಯಿತು.

(ಓಂಕಾರವನ್ನು ಉಚ್ಚರಿಸುವಾಗ ತುಟಿಗಳೆರಡನ್ನೂ ತೆರೆದು ಮುಚ್ಚಬೇಕಾಯಿತು. ಸರ್ಪಗಳು ಓಂಕಾರದ ಜಪಮಾಡುವಾಗ ತುಟಿಗಳನ್ನು ತೆರೆದು ಮುಚ್ಚಿಕೊಳ್ಳುತ್ತಾ ಕಚ್ಚುವ ಸ್ವಭಾವವನ್ನು ಮೈಗೂಡಿಸಿಕೊಂಡುವು. ಹಾಗೆಯೇ ಅಸುರರು ಓಷ್ಠಚಾಲನದಲ್ಲಿಯೇ ದೃಷ್ಟಿಯುಳ್ಳವರಾಗಿ ಜಪವನ್ನು ಅಭಿನಯದಂತೆ ತೋರ್ಪಡಿಸುತ್ತಾ ದಂಭವನ್ನು ಮೈಗೂಡಿಸಿಕೊಂಡರು. **ಲೋಕೇ ಪ್ರಾರ್ಥಿತಂ ಓಮಿತ್ಯನುಜಾನನ್ತಿ**–ಲೋಕದಲ್ಲಿ ಪ್ರಾರ್ಥಿಸಿದುದನ್ನು ದೇವತೆಗಳು ಓಂ ಎಂದು ಹೇಳಿ ಅನುಮತಿಸುತ್ತಾರೆ. (ಅನುಗ್ರಹಿಸುತ್ತಾರೆ.) ಎಂಬುದನ್ನು ಜ್ಞಾಪಿಸಿಕೊಂಡು ದೇವತೆಗಳು ದಾನವೇ ಶ್ರೇಯಸ್ಸೆಂದು ನಿಶ್ಚಯಿಸಿದರು. ಓಂಕಾರದ ಉಚ್ಚಾರಣೆಯಲ್ಲಿ ಓಷ್ಠಪ್ರವೃತ್ತಿಯು ಉಪಸಂಹಾರವಾಗುವುದನ್ನು ಗಮನಿಸಿ ಮಹರ್ಷಿಗಳು ಸರ್ವಪ್ರವೃತ್ತಿಯ ಉಪಸಂಹಾರರೂಪವಾದ ದಮವೇ ಶ್ರೇಯಸ್ಸೆಂದು ಬಗೆದರು. ಇದು ವ್ಯಾಖ್ಯಾನಕಾರರ ವಿವರಣೆಯಾಗಿದೆ.)

ಏಕಂ ಶಾಸ್ತಾರಮಾಸಾದ್ಯ ಶಬ್ದೇನೈಕೇನ ಸಂಸ್ಕೃತಾಃ ।
ನಾನಾ ವ್ಯವಸಿತಾಃ ಸರ್ವೇ ಸರ್ಪದೇವರ್ಷಿದಾನವಾಃ ॥೧೧॥

ಹೀಗೆ ಸರ್ಪಗಳೂ, ದೇವತೆಗಳೂ, ಋಷಿಗಳೂ, ದಾನವರೂ ಒಬ್ಬನೇ ಗುರುವಿನ ಬಳಿಗೆ ಹೋಗಿ ಒಂದೇ ಶಬ್ದದ ಉಪದೇಶವನ್ನು ಪಡೆದು ಸಂಸ್ಕೃತರಾದರೂ ಅವರವರ ಸ್ವಭಾವಕ್ಕೆ ಅನುಗುಣವಾಗಿ ನಾನಾ ವಿಧವಾದ ಭಾವನೆಗಳನ್ನು ಮೈಗೂಡಿಸಿಕೊಂಡರು.

ಶೃಣೋತ್ಯಯಂ ಪ್ರೋಚ್ಯಮಾನಂ ಗೃಹ್ಣಾತಿ ಚ ಯಥಾತಥಮ್ ।
ಪೃಚ್ಛತಸ್ತದತೋ ಭೂಯೋ ಗುರುರನ್ಯೋ ನ ವಿದ್ಯತೇ ॥೧೨॥

ಗುರುವು ಹೇಳುವುದನ್ನು ಶಿಷ್ಯನು ಕೇಳುತ್ತಾನೆ. ಗುರುವಿನ ಉಪದೇಶವನ್ನು ಶಿಷ್ಯನು ತನ್ನ ಸ್ವಭಾವಕ್ಕೆ ಅನುಗುಣವಾಗಿ ಅಂಗೀಕರಿಸುತ್ತಾನೆ. (ಅರ್ಥಮಾಡಿಕೊಳ್ಳುತ್ತಾನೆ.) ಆದುದರಿಂದ ಪ್ರಶ್ನೆಗಳನ್ನು ಕೇಳುವ ಶಿಷ್ಯನಿಗೆ ತನ್ನ ಅಂತರ್ಯಾಮಿಗಿಂತಲೂ ಮಿಗಿಲಾದ ಗುರುವು ಬೇರೊಬ್ಬನಿಲ್ಲ.

ತಸ್ಯ ಚಾನುಮತೇ ಕರ್ಮ ತತಃ ಪಶ್ಚಾತ್ಪ್ರವರ್ತತೇ ।
ಗುರುರ್ಬೋದ್ಧಾ ಚ ಶ್ರೋತಾ ಚ ದ್ವೇಷ್ಟಾ ಚ ಹೃದಿ ನಿಃಸೃತಃ ॥೧೩॥

ಮೊದಲು ಅಂತರ್ಯಾಮಿಯು ಒಂದು ಕರ್ಮವನ್ನು ಮಾಡಲು ಅನುಮೋದಿಸುತ್ತಾನೆ. ಅನಂತರ ಜೀವನು ಆ ಕಾರ್ಯದಲ್ಲಿ ತೊಡಗುತ್ತಾನೆ. ಹೀಗೆ ಹೃದಯದಲ್ಲಿ ಪ್ರಕಟನಾಗುವ ಅಂತರ್ಯಾಮಿಯಾದ ಪರಮಾತ್ಮನೇ ಜೀವಿಗೆ ಗುರುವೂ, ಉಪದೇಶಕನೂ, ಕೇಳುವವನೂ ಮತ್ತು ಶತ್ರುವೂ ಆಗುತ್ತಾನೆ.

ಪಾಪೇನ ವಿಚರಲ್ಲೋಕೇ ಪಾಪಚಾರೀ ಭವತ್ಯಯಮ್ ।
ಶುಭೇನ ವಿಚರಲ್ಲೋಕೇ ಶುಭಚಾರೀ ಭವತ್ಯುತ ॥೧೪॥

ಪ್ರಪಂಚದಲ್ಲಿ ಯಾವನು ಪಾಪಮಾಡುತ್ತಲೇ ತಿರುಗುತ್ತಿರುತ್ತಾನೆಯೋ ಅವನು ಪಾಪಚಾರಿಯಾಗುತ್ತಾನೆ. ಪುಣ್ಯಕರ್ಮಗಳನ್ನೇ ಮಾಡುತ್ತಿರುವವನು ಶುಭಚಾರಿಯಾಗುತ್ತಾನೆ.

ಕಾಮಚಾರೀ ತು ಕಾಮೇನ ಯ ಇನ್ದ್ರಿಯಸುಖೇ ರತಃ ।
ಬ್ರಹ್ಮಚಾರೀ ಸದೈವೈಷ ಯ ಇನ್ದ್ರಿಯಜಯೇ ರತಃ ॥೧೫॥

ಇದೇ ರೀತಿಯಲ್ಲಿ ನಾನಾವಿಧವಾದ ಕಾಮನೆಗಳ ಮೂಲಕವಾಗಿ ಇಂದ್ರಿಯಸುಖದಲ್ಲಿಯೇ ಸರ್ವದಾ ನಿರತನಾಗಿರುವವನು ಕಾಮಚಾರಿಯೂ, ಯಾವಾಗಲೂ ಇಂದ್ರಿಯಗಳ ಜಯದಲ್ಲಿ (ಸಂಯಮದಲ್ಲಿ) ನಿರತನಾಗಿರುವವನು ಬ್ರಹ್ಮಚಾರಿಯೂ ಆಗುವನು.

ಅಪೇತವ್ರತಕರ್ಮಾ ತು ಕೇವಲಂ ಬ್ರಹ್ಮಣಿ ಸ್ಥಿತಃ ।
ಬ್ರಹ್ಮಭೂತಶ್ಚರಲ್ಲೋಕೇ ಬ್ರಹ್ಮಚಾರೀ ಭವತ್ಯಯಮ್ ॥೧೬॥

ಯಾವನು ವ್ರತ ಮತ್ತು ಕರ್ಮಗಳನ್ನು ತ್ಯಾಗಮಾಡಿ ಯಾವಾಗಲೂ ಬ್ರಹ್ಮನಲ್ಲಿಯೇ ಮನಸ್ಸನ್ನು ಲೀನಗೊಳಿಸಿ ಬ್ರಹ್ಮಭೂತನಾಗಿ ಪ್ರಪಂಚದಲ್ಲಿ ಸಂಚರಿಸುವನೋ-ಅವನು ಬ್ರಹ್ಮಚಾರೀ–ಎನಿಸಿಕೊಳ್ಳುತ್ತಾನೆ.

ಬ್ರಹ್ಮೈವ ಸಮಿಧಸ್ತಸ್ಯ ಬ್ರಹ್ಮಾಗ್ನಿರ್ಬ್ರಹ್ಮಸಮ್ಭವಃ ।
ಆಪೋ ಬ್ರಹ್ಮ ಗುರುರ್ಬ್ರಹ್ಮ ಸ ಬ್ರಹ್ಮಣಿ ಸಮಾಹಿತಃ ॥೧೭॥

ಅಂತಹ ಬ್ರಹ್ಮಚಾರಿಗೆ ಬ್ರಹ್ಮವೇ ಸಮಿತ್ತಾಗಿರುತ್ತದೆ. ಬ್ರಹ್ಮವೇ ಅಗ್ನಿಯಾಗಿರುತ್ತದೆ. ಆ ಅಗ್ನಿಯೂ ಬ್ರಹ್ಮದಿಂದಲೇ ಹುಟ್ಟಿರುತ್ತದೆ. ಬ್ರಹ್ಮವೇ ಜಲವೂ ಗುರುವೂ ಆಗಿರುತ್ತದೆ. ಸಕಲವೂ ಬ್ರಹ್ಮಮಯವೇ ಆಗಿರುತ್ತದೆ. ಅವನ ಚಿತ್ತವೃತ್ತಿಯು ಯಾವಾಗಲೂ ಬ್ರಹ್ಮವಸ್ತುವಿನಲ್ಲಿಯೇ ಲೀನವಾಗಿರುತ್ತದೆ.

ಏತದೇವೇದೃಶಂ ಸೂಕ್ಷ್ಮಂ ಬ್ರಹ್ಮಚರ್ಯಂ ವಿದುರ್ಬುಧಾಃ ।
ವಿದಿತ್ವಾ ಚಾನ್ವಪದ್ಯನ್ತ ಕ್ಷೇತ್ರಜ್ಞೇನಾನುದರ್ಶಿತಾಃ ॥೧೮॥

ಇದನ್ನೇ ವಿದ್ವಾಂಸರು ಸೂಕ್ಷ್ಮವಾದ ಬ್ರಹ್ಮಚರ್ಯೆಯೆಂದು ತಿಳಿಯುತ್ತಾರೆ. ತತ್ತ್ವದರ್ಶಿಗಳಿಂದ ಉಪದೇಶಪಡೆದ ಆತ್ಮಜ್ಞಾನಿಗಳು ಬ್ರಹ್ಮಚರ್ಯದ ಸ್ವರೂಪವನ್ನು ತಿಳಿದು ಅದೇ ಮಾರ್ಗವನ್ನೇ ಅನುಸರಿಸುತ್ತಿರುವರು."

೨೬ನೆಯ ಅಧ್ಯಾಯವು ಮುಗಿಯಿತು.

೨೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಅಧ್ಯಾತ್ಮರೂಪವಾದ ಮಹಾವನದ ವರ್ಣನೆ

ಬ್ರಾಹ್ಮಣನು ಹೇಳುತ್ತಾನೆ:

ಸಂಕಲ್ಪದಂಶಮಶಕಂ ಶೋಕಹರ್ಷಹಿಮಾತಪಮ್ ।
ಮೋಹಾನ್ಧಕಾರತಿಮಿರಂ ಲೋಭವ್ಯಾಧಿಸರೀಸೃಪಮ್ ॥೧॥

ವಿಷಯೈಕಾತ್ಯಯಾಧ್ವಾನಂ ಕಾಮಕ್ರೋಧವಿರೋಧಕಮ್ ।
ತದತೀತ್ಯ ಮಹಾದುರ್ಗಂ ಪ್ರವಿಷ್ಟೋಽಸ್ಮಿ ಮಹದ್ವನಮ್ ॥೨॥

"ಪ್ರಿಯಳೇ! ಎಲ್ಲಿ ಸಂಕಲ್ಪರೂಪಿಗಳಾದ ಕಾಡುನೊಣಗಳೂ-ಸೊಳ್ಳೆಗಳೂ ಹೇರಳವಾಗಿರುವುವೋ, ಶೋಕ-ಹರ್ಷರೂಪಗಳಾದ ಚಳಿ-ಬಿಸಿಲುಗಳಿವೆಯೋ, ಮೋಹರೂಪವಾದ ಅಂಧಕಾರವು ಕವಿದಿದೆಯೋ, ಲೋಭ ಮತ್ತು ವ್ಯಾಧಿರೂಪಗಳಾದ ಸರ್ಪಗಳೂ ಸಂಚರಿಸುವುವೋ, ಒಬ್ಬನೇ ಅತಿಕ್ರಮಿಸಬೇಕಾದ, ವಿಷಯಗಳೆಂಬ ಅಡಚಣೆಗಳುಳ್ಳ ಮಾರ್ಗದಿಂದ ಕೂಡಿರುವುದೋ, ಕಾಮ-ಕ್ರೋಧಗಳೆಂಬ ವಿರೋಧಿಗಳಿಂದ (ಶತ್ರುಗಳಿಂದ) ಯುಕ್ತವಾಗಿರುವುದೋ ಅಂತಹ ಸಂಸಾರರೂಪವಾದ ದುರ್ಗಮವಾದ ಹಾದಿಯನ್ನು ದಾಟಿ ಈಗ ನಾನು ಬ್ರಹ್ಮರೂಪವಾದ ಮಹಾವನವನ್ನು ಪ್ರವೇಶಿಸಿದ್ದೇನೆ."

ಬ್ರಾಹ್ಮಣಿಯು ಪ್ರಶ್ನಿಸುತ್ತಾಳೆ:

ಕ್ವ ತದ್ವನಂ ಮಹಾಪ್ರಾಜ್ಞ ಕೇ ವೃಕ್ಷಾಃ ಸರಿತಶ್ಚ ಕಾಃ ।
ಗಿರಯಃ ಪರ್ವತಾಶ್ಚೈವ ಕಿಯತ್ಯಧ್ವನಿ ತದ್ವನಮ್ ॥೩॥

"ಮಹಾಪ್ರಾಜ್ಞನೇ! ನೀನು ಹೇಳಿದ ಆ ವನವು ಎಲ್ಲಿದೆ? ಇಲ್ಲಿಗೆ ಎಷ್ಟು ದೂರವಾಗುತ್ತದೆ? ಅಲ್ಲಿರುವ ವೃಕ್ಷಗಳಾವುವು? ಯಾವ ಯಾವ ನದಿಗಳೂ, ಗಿರಿಗಳೂ, ಪರ್ವತಗಳೂ ಅಲ್ಲಿವೆ?–ಈ ಎಲ್ಲ ವಿಷಯಗಳನ್ನೂ ಹೇಳುವ ಕೃಪೆಮಾಡು."

ಬ್ರಾಹ್ಮಣನು ಹೇಳುತ್ತಾನೆ:

ನೈತದಸ್ತಿ ಪೃಥಗ್ಭಾವಃ ಕಿಂಚಿದನ್ಯತ್ತತಃ ಸುಖಮ್ ।
ನೈತದಸ್ತ್ಯಪೃಥಗ್ಭಾವಃ ಕಿಂಚಿದ್ದುಃಖತರಂ ತತಃ ॥೪॥

"ಪ್ರಿಯಳೇ! ನಾನು ಹೇಳಿದ ಆ ವನದಲ್ಲಿ ಭೇದವೂ ಇಲ್ಲ; ಅಭೇದವೂ ಇಲ್ಲ; ಭೇದಾಭೇದಗಳೆರಡರಿಂದಲೂ ಅದು ಅತೀತವಾಗಿದೆ. ಅಲ್ಲಿ ಲೌಕಿಕವಾದ ಸುಖವಾಗಲೀ ದುಃಖವಾಗಲೀ ಇಲ್ಲ.

ತಸ್ಮಾದ್ಧ್ರಸ್ವತರಂ ನಾಸ್ತಿ ನ ತತೋಽಸ್ತಿ ಮಹತ್ತರಮ್ ।
ನಾಸ್ತಿ ತಸ್ಮಾತ್ಸೂಕ್ಷ್ಮತರಂ ನಾಸ್ತ್ಯನ್ಯತ್ತತ್ಸಮಂ ಸುಖಮ್ ॥೫॥

ಅದಕ್ಕಿಂತಲೂ ಚಿಕ್ಕದಾದ ಪದಾರ್ಥವಾಗಲೀ, ದೊಡ್ಡದಾದ

ಪದಾರ್ಥವಾಗಲೀ, ಅತಿಸೂಕ್ಷ್ಮವಾದ ಪದಾರ್ಥವಾಗಲೀ ಯಾವುದೂ ಇಲ್ಲ. ಅಲ್ಲಿ ಲಭಿಸುವ ಸುಖಕ್ಕೆ ಸಮಾನವಾದ ಸುಖವು ಮತ್ತೆಲ್ಲೂ ಲಭಿಸುವುದಿಲ್ಲ.

ನ ತತ್ರಾವಿಶ್ಯ ಶೋಚನ್ತಿ ನ ಪ್ರಹೃಷ್ಯನ್ತಿ ಚ ದ್ವಿಜಾಃ ।
ನ ಚ ಬಿಭ್ಯತಿ ಕೇಷಾಂಚಿತ್ತೇಭ್ಯೋ ಬಿಭ್ಯತಿ ಕೇಚನ ॥೬॥

ಅಲ್ಲಿ ಪ್ರವೇಶಿಸಿದ ಬ್ರಾಹ್ಮಣರು ಶೋಕವನ್ನು ವ್ಯಕ್ತಪಡಿಸುವುದಿಲ್ಲ. ಸಂತೋಷಪಡುವುದೂ ಇಲ್ಲ. ಅಲ್ಲಿರುವ ಯಾವುದೇ ಪ್ರಾಣಿಯಿಂದಲೂ ಭಯಪಡುವುದಿಲ್ಲ. ಅವರಿಂದಲೂ ಯಾವ ಪ್ರಾಣಿಗೂ ಭಯವಿಲ್ಲ.

ತಸ್ಮಿನ್ವನೇ ಸಪ್ತ ಮಹಾದ್ರುಮಾಶ್ಚ
ಫಲಾನಿ ಸಪ್ತಾತಿಥಯಶ್ಚ ಸಪ್ತ ।
ಸಪ್ತಾಶ್ರಮಾಃ ಸಪ್ತ ಸಮಾಧಯಶ್ಚ
ದೀಕ್ಷಾಶ್ಚ ಸಪ್ತೈತದರಣ್ಯರೂಪಮ್ ॥೭॥

ಆ ಮಹಾರಣ್ಯದಲ್ಲಿ ಏಳು ವೃಕ್ಷಗಳಿವೆ. ಆ ಏಳು ವೃಕ್ಷಗಳಲ್ಲಿ ಏಳು ಫಲಗಳಿವೆ. ಆ ಏಳು ಫಲಗಳನ್ನು ತಿನ್ನುವ ಏಳು ಅತಿಥಿಗಳಿದ್ದಾರೆ. ಅಲ್ಲಿ ಏಳು ಆಶ್ರಮಗಳಿವೆ. ಏಳು ವಿಧವಾದ ಸಮಾಧಿಗಳಿವೆ. ಏಳು ಪ್ರಧಾನವಾದ ದೀಕ್ಷೆಗಳಿವೆ. ಇದೇ ನಾನು ಹೇಳಿರುವ ಆ ವನದ ಸ್ವರೂಪವಾಗಿದೆ.

(ಮಹತ್ತು, ಅಹಂಕಾರ ಮತ್ತು ಪಂಚತನ್ಮಾತ್ರೆಗಳೇ ಏಳು ಮಹಾವೃಕ್ಷಗಳೆಂದೂ, ಅವುಗಳ ಸಂಘಾತರೂಪವಾದ ದೇಹವೇ ಇಲ್ಲಿ ನಿರೂಪಿತವಾಗಿರುವುದೆಂದೂ ವ್ಯಾಖ್ಯಾನಕಾರರು ಹೇಳಿರುತ್ತಾರೆ. ೨೫ನೆಯ ಅಧ್ಯಾಯದಲ್ಲಿ ಹೇಳಿರುವಂತೆ ಘ್ರಾಣ, ಜಿಹ್ವೆ, ಚಕ್ಷುಸ್ಸು, ತ್ವಚೆ, ಶ್ರೋತ್ರ, ಮನಸ್ಸು, ಬುದ್ಧಿ–ಇವುಗಳೇ ಏಳು ಮಹಾವೃಕ್ಷಗಳು. ಗಂಧ, ರಸ, ರೂಪ, ಶಬ್ದ, ಸ್ಪರ್ಶ, ಮಂತ್ರ, ಬೋಧ–ಈ ಏಳು ಫಲಗಳು. ಘ್ರಾತಾ, ಭಕ್ಷಯಿತಾ, ದ್ರಷ್ಟಾ, ವಕ್ತಾ, ಶ್ರೋತಾ, ಮಂತಾ ಮತ್ತು ಬೋದ್ಧಾ–ಇವೇ ಏಳು ಅತಿಥಿಗಳು, ಸಪ್ತರ್ಷಿಗಳ ಸಪ್ತಾಶ್ರಮಗಳಿವೆ. ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಶಾಂತಿ, ಅಪೈಶುನ (ಚಾಡಿ ಹೇಳದಿರುವುದು) ಮತ್ತು ಪ್ರಾಣಿಗಳಲ್ಲಿ ದಯೆ–ಈ ಏಳು ದೀಕ್ಷೆಗಳು.)

ಪಞ್ಚವರ್ಣಾನಿ ದಿವ್ಯಾನಿ ಪುಷ್ಪಾಣಿ ಚ ಫಲಾನಿ ಚ ।
ಸೃಜನ್ತ�ః ಪಾದಪಾಸ್ತತ್ರ ವ್ಯಾಪ್ಯ ತಿಷ್ಠನ್ತಿ ತದ್ವನಮ್ ॥೮॥

ಅಲ್ಲಿರುವ ವೃಕ್ಷಗಳು ಐದು ಬಣ್ಣಗಳಿಂದ ಕೂಡಿದ ದಿವ್ಯವಾದ ಪುಷ್ಪಗಳನ್ನೂ ಫಲಗಳನ್ನೂ ಸೃಷ್ಟಿಸುತ್ತಾ ಆ ವನದ ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿಕೊಂಡಿವೆ.

ಸುವರ್ಣಾನಿ ದ್ವಿವರ್ಣಾನಿ ಪುಷ್ಪಾಣಿ ಚ ಫಲಾನಿ ಚ ।
ಸೃಜನ್ತಃ ಪಾದಪಾಸ್ತತ್ರ ವ್ಯಾಪ್ಯ ತಿಷ್ಠನ್ತಿ ತದ್ವನಮ್ ॥೯॥

ಅಲ್ಲಿ ಕೆಲವು ವೃಕ್ಷಗಳು ಸುಂದರವಾದ ಎರಡು ಬಣ್ಣಗಳುಳ್ಳ ಪುಷ್ಪಗಳನ್ನೂ ಫಲಗಳನ್ನೂ ಸೃಷ್ಟಿಸುತ್ತಾ ಆ ವನದ ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿಕೊಂಡಿವೆ.

ಸುರಭೀಣಿ ದ್ವಿವರ್ಣಾನಿ ಪುಷ್ಪಾನಿ ಚ ಫಲಾನಿ ಚ ।
ಸೃಜನ್ತಃ ಪಾದಪಾಸ್ತತ್ರ ವ್ಯಾಪ್ಯ ತಿಷ್ಠನ್ತಿ ತದ್ವನಮ್ ॥೧೦॥

ಮತ್ತೆ ಕೆಲವು ವೃಕ್ಷಗಳು ಸುವಾಸನೆಯಿಂದ ಕೂಡಿರುವ ಎರಡು ಬಣ್ಣಗಳ ಪುಷ್ಪಗಳನ್ನೂ ಮತ್ತು ಫಲಗಳನ್ನೂ ಬಿಡುತ್ತಾ ಆ ವನದ ಎಲ್ಲಕಡೆಗಳಲ್ಲಿಯೂ ವ್ಯಾಪಿಸಿಕೊಂಡಿದೆ.

ಸುರಭೀಣ್ಯೇಕವರ್ಣಾನಿ ಪುಷ್ಪಾಣಿ ಚ ಫಲಾನಿ ಚ ।
ಸೃಜನ್ತಃ ಪಾದಪಾಸ್ತತ್ರ ವ್ಯಾಪ್ಯ ತಿಷ್ಠನ್ತಿ ತದ್ವನಮ್ ॥೧೧॥

ಮತ್ತೆ ಕೆಲವು ವೃಕ್ಷಗಳು ಸುಗಂಧಯುಕ್ತವಾದ ಒಂದೇ ಬಣ್ಣವುಳ್ಳ ಪುಷ್ಪಗಳನ್ನೂ ಫಲಗಳನ್ನೂ ಸೃಷ್ಟಿಸುತ್ತಾ ಆ ವನದ ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿಕೊಂಡಿವೆ.

ಬಹೂನ್ಯವ್ಯಕ್ತವರ್ಣಾನಿ ಪುಷ್ಪಾಣಿ ಚ ಫಲಾನಿ ಚ ।
ವಿಸೃಜನ್ತೌ ಮಹಾವೃಕ್ಷೌ ತದ್ವನಂ ವ್ಯಾಪ್ಯ ತಿಷ್ಠತಃ ॥೧೨॥

ಇವುಗಳೇ ಅಲ್ಲದೇ ಎರಡು ಮಹಾವೃಕ್ಷಗಳು ಅವ್ಯಕ್ತವಾದ ಬಣ್ಣಗಳುಳ್ಳ ಪುಷ್ಪಗಳನ್ನೂ ಫಲಗಳನ್ನೂ ಹೊರಚೆಲ್ಲುತ್ತಾ ಆ ಅರಣ್ಯವನ್ನು ವ್ಯಾಪಿಸಿ ನಿಂತಿವೆ.

ಏಕೋ ವಹ್ನಿಃ ಸುಮನಾ ಬ್ರಾಹ್ಮಣೋಽತ್ರ
ಪಞ್ಚೇನ್ದ್ರಿಯಾಣಿ ಸಮಿಧಶ್ಚಾತ್ರ ಸನ್ತಿ।
ತೇಭ್ಯೋ ಮೋಕ್ಷಾಃ ಸಪ್ತ ಫಲನ್ತಿ ದೀಕ್ಷಾ
ಗುಣಾಃ ಫಲಾನ್ಯತಿಥಯಃ ಫಲಾಶಾಃ ॥೧೩॥

ಆ ಅರಣ್ಯದಲ್ಲಿ ಒಂದೇ ಅಗ್ನಿಯಿದೆ. ಜೀವನೇ ಶುದ್ಧಮನಸ್ಕನಾದ ಬ್ರಾಹ್ಮಣನು. ಸಮಿತ್ತಿನ ರೂಪದಲ್ಲಿ ಪಂಚೇಂದ್ರಿಯಗಳಿವೆ. ಇವುಗಳಿಂದ ಪ್ರಾಪ್ತವಾಗುವ ಮೋಕ್ಷವು ಏಳು ಪ್ರಕಾರವಾಗಿದೆ. ಇಂತಹ ಯಜ್ಞದ ದೀಕ್ಷೆಯು ಅವಶ್ಯವಾಗಿ ಫಲಿಸುತ್ತದೆ. ಗುಣಗಳೇ ಫಲಗಳು. ಏಳು ಅತಿಥಿಗಳೂ ಆ ಫಲಗಳನ್ನು ಭುಂಜಿಸುತ್ತವೆ.

ಆತಿಥ್ಯಂ ಪ್ರತಿಗೃಹ್ಣನ್ತಿ ತತ್ರ ತತ್ರ ಮಹರ್ಷಯಃ।
ಅರ್ಚಿತೇಷು ಪ್ರಲೀನೇಷು ತೇಷ್ವನ್ಯದ್ರೋಚತೇ ವನಮ್ ॥೧೪॥

ಅಲ್ಲಿ ಮಹರ್ಷಿಗಳು ಆತಿಥ್ಯವನ್ನು ಸ್ವೀಕರಿಸುತ್ತಾರೆ. ಪೂಜೆಯನ್ನು ಸ್ವೀಕರಿಸಿದನಂತರ ಅವರು ಲಯಹೊಂದುತ್ತಾರೆ. ಅನಂತರ ಆ ಬ್ರಹ್ಮವನವು ವಿಲಕ್ಷಣರೂಪದಿಂದ ಪ್ರಕಾಶಿಸುತ್ತದೆ.

ಪ್ರಜ್ಞಾವೃಕ್ಷಂ ಮೋಕ್ಷಫಲಂ ಶಾನ್ತಿಚ್ಛಾಯಾಸಮನ್ವಿತಮ್।
ಜ್ಞಾನಾಶ್ರಯಂ ತೃಪ್ತಿತೋಯಮನ್ತಃ ಕ್ಷೇತ್ರಜ್ಞಭಾಸ್ಕರಮ್ ॥೧೫॥

ಆ ವನದಲ್ಲಿ ಪ್ರಜ್ಞಾರೂಪವಾದ ವೃಕ್ಷವು ಶೋಭಿಸುತ್ತಿರುತ್ತದೆ. ಅದರಲ್ಲಿ ಮೋಕ್ಷರೂಪವಾದ ಫಲವು ಬಿಟ್ಟಿರುತ್ತದೆ. ಆ ವೃಕ್ಷವು ಶಾಂತಿಯೆಂಬ ನೆಳಲಿನಿಂದ ಕೂಡಿರುತ್ತದೆ. ಜ್ಞಾನಕ್ಕೆ ಆ ವೃಕ್ಷವು ಆಶ್ರಯಸ್ಥಾನವಾಗಿರುತ್ತದೆ. ತೃಪ್ತಿಯೆಂಬುದೇ ಆ ವೃಕ್ಷಕ್ಕೆ ಹಾಕುವ ನೀರು. ಆ ಪ್ರಜ್ಞಾವೃಕ್ಷದ ಮಧ್ಯಭಾಗದಲ್ಲಿ ಆತ್ಮರೂಪನಾದ ಸೂರ್ಯನು ಬೆಳಗುತ್ತಿರುತ್ತಾನೆ.

ಯೇಽಧಿಗಚ್ಛನ್ತಿ ತಂ ಸನ್ತಸ್ತೇಷಾಂ ನಾಸ್ತಿ ಭಯಂ ಪುನಃ।
ಊರ್ಧ್ವಂ ಚಾಧಶ್ಚ ತಿರ್ಯಕ್ಚ ತಸ್ಯ ನಾನ್ತೋಽಧಿಗಮ್ಯತೇ ॥೧೬॥

ಯಾವ ಶ್ರೇಷ್ಠಪುರುಷರು ಆ ವೃಕ್ಷದಲ್ಲಿ ಆಶ್ರಯವನ್ನು ಹೊಂದುವರೋ-ಅವರಿಗೆ ಪುನಃ ಭಯವೆಂಬುದೇ ಇರುವುದಿಲ್ಲ. ಆ ಜ್ಞಾನವೃಕ್ಷವು

ಮೇಲೆ, ಕೆಳಗೆ ಮತ್ತು ಅಡ್ಡವಾಗಿ ಬೆಳೆದುಕೊಂಡುಬಿಟ್ಟಿದೆ. ಅದಕ್ಕೆ ಕೊನೆಯೆಂಬುದೇ ಇಲ್ಲ.

ಸಪ್ತ ಸ್ತ್ರಿಯಸ್ತತ್ರ ವಸನ್ತಿ ಸದ್ಯ-
ಸ್ತ್ವವಾಙ್ಮುಖಾ ಭಾನುಮತ್ಯೋ ಜನಿತ್ರ್ಯಃ ।
ಊರ್ಧ್ವಂ ರಸಾನಾದದತೇ ಪ್ರಜಾಭ್ಯಃ
ಸರ್ವಾನ್ಯಥಾ ಸತ್ಯಮನಿತ್ಯತಾ ಚ ॥೧೭॥

ಅಲ್ಲಿ ಏಳು ಮಂದಿ ಸ್ತ್ರೀಯರು ವಾಸಮಾಡುತ್ತಿದ್ದಾರೆ. ಕಾಂತಿಯಿಂದ ಯುಕ್ತರಾಗಿರುವ, ಸರ್ವರಿಗೂ ತಾಯಂದಿರಾದ ಅವರು ಬಗ್ಗಿದ ಮುಖವುಳ್ಳವರಾಗಿದ್ದಾರೆ. ಅವರು ಅನಿತ್ಯತೆಯು ಸತ್ಯವನ್ನು ಗ್ರಹಿಸುವಂತೆ ಪ್ರಜೆಗಳಿಂದ ಉತ್ತಮವಾದ ರಸವನ್ನು ಗ್ರಹಿಸುತ್ತಾರೆ. (ಸಪ್ತಸ್ತ್ರೀಯರು ಪ್ರಾಣಾದಿ ವೃತ್ತಿಗಳು) ಸಂಕಲ್ಪಸಿದ್ಧಿಯನ್ನು ಪಡೆದು ರಸಗಳನ್ನು (ವಿಷಯ ಸುಖಗಳ ಆನಂದವನ್ನು) ಉತ್ಕೃಷ್ಟವಾಗಿ ಅನುಭವಿಸುತ್ತಾರೆ. (ನಿತ್ಯಾನಿತ್ಯತೆ ಗಳಿಗಿರುವ ಅಂತರವೇ ಬದ್ಧ-ಮುಕ್ತರಿಗೂ ಇದೆ–ಎಂದು ವ್ಯಾಖ್ಯಾನಕಾರರು ವಿವರಿಸಿದ್ದಾರೆ.)

ತತ್ರೈವ ಪ್ರತಿತಿಷ್ಠನ್ತಿ ಪುನಸ್ತತ್ರೋಪಯನ್ತಿ ಚ ।
ಸಪ್ತ ಸಪ್ತರ್ಷಯಃ ಸಿದ್ಧಾ ವಸಿಷ್ಠಪ್ರಮುಖೈಃ ಸಹ ॥೧೮॥

ಏಳು ಮಂದಿ ಸಿದ್ಧರಾದ ಸಪ್ತರ್ಷಿಗಳು ವಸಿಷ್ಠಾದಿಗಳೊಡನೆ ಆ ವನದಲ್ಲಿಯೇ ಲೀನರಾಗುತ್ತಾರೆ ಮತ್ತು ಅಲ್ಲಿಯೇ ಪುನಃ ಹುಟ್ಟುತ್ತಾರೆ.

ಯಶೋ ವರ್ಚೋ ಭಗಶ್ಚೈವ ವಿಜಯಃ ಸಿದ್ಧಿತೇಜಸಃ ।
ಏವಮೇವಾನುವರ್ತನ್ತೇ ಸಪ್ತ ಜ್ಯೋತೀಂಷಿ ಭಾಸ್ಕರಮ್ ॥೧೯॥

ಹೀಗೆಯೇ ಯಶಸ್ಸು, ಪ್ರಭೆ, ಐಶ್ವರ್ಯ, ವಿಜಯ, ಸಿದ್ಧಿ ಮತ್ತು ತೇಜಸ್ಸುಗಳೂ, ಏಳು ಜ್ಯೋತಿಗಳೂ ಸೂರ್ಯನನ್ನು ಅನುಸರಿಸಿ ಹೋಗುತ್ತವೆ.

ಗಿರಯಃ ಪರ್ವತಾಶ್ಚೈವ ಸನ್ತಿ ತತ್ರ ಸಮಾಸತಃ ।
ನದ್ಯಶ್ಚ ಸರಿತೋ ವಾರಿ ವಹನ್ತ್ಯೋ ಬ್ರಹ್ಮಸಮ್ಭವಮ್ ॥೨೦॥

ಗಿರಿಗಳೂ, ಪರ್ವತಗಳೂ, ಬ್ರಹ್ಮಜನಿತವಾದ ನೀರನ್ನು ಹೊಂದಿ ಪ್ರವಹಿಸುತ್ತಿರುವ ನದಿಗಳೂ ಮತ್ತು ಸರಿತ್ತುಗಳೂ ಆ ಅರಣ್ಯದಲ್ಲಿಯೇ ಇವೆ.

ನದೀನಾಂ ಸಙ್ಗಮಶ್ಚೈವ ವೈತಾನೇ ಸಮುಪಹ್ವರೇ ।
ಸ್ವಾತ್ಮತೃಪ್ತಾ ಯತೋ ಯಾನ್ತಿ ಸಾಕ್ಷಾದೇವ ಪಿತಾಮಹಮ್ ॥೨೧॥

ವಿಸ್ತಾರವಾದ ಮತ್ತು ಅತ್ಯಂತನಿಗೂಢವಾದ ಪ್ರದೇಶದಲ್ಲಿ ನದಿಗಳ ಸಂಗಮಗಳೂ ಇವೆ. ಆತ್ಮಜ್ಞಾನದಿಂದ ತೃಪ್ತರಾದ ಮಹಾತ್ಮರು ಅಲ್ಲಿಂದ ಪಿತಾಮಹನ ಬಳಿಗೆ ಸಾಕ್ಷಾತ್ತಾಗಿಯೇ ಹೋಗುತ್ತಾರೆ.

ಕೃಶಾಶಾಃ ಸುವ್ರತಾಶಾಶ್ಚ ತಪಸಾ ದಗ್ಧಕಿಲ್ಬಿಷಾಃ।
ಆತ್ಮನ್ಯಾತ್ಮಾನಮಾವಿಶ್ಯ ಬ್ರಹ್ಮಾಣಂ ಸಮುಪಾಸತೇ ॥೨೨॥

ಕ್ಷೀಣವಾದ ಆಶೆಯುಳ್ಳವರೂ (ಆಶೆಯನ್ನು ಬಿಟ್ಟವರೂ,) ಉತ್ತಮವಾದ ವ್ರತಗಳನ್ನು ಪಾಲಿಸಬೇಕೆಂಬ ಇಚ್ಛೆಯುಳ್ಳವರೂ, ತಪಸ್ಸಿನಿಂದ ಸುಟ್ಟುಹೋದ ಪಾಪವುಳ್ಳವರೂ ಆದ ಸಾಧಕರು ಮನಸ್ಸನ್ನು ಆತ್ಮನಲ್ಲಿ ಲೀನಗೊಳಿಸಿ ಪರಬ್ರಹ್ಮನನ್ನು ಉಪಾಸಿಸುತ್ತಾರೆ.

ಶಮಮಪ್ಯತ್ರ ಶಂಸನ್ತಿ ವಿದ್ಯಾರಣ್ಯವಿದೋ ಜನಾಃ ।
ತದಾರಣ್ಯಮಭಿಪ್ರೇತ್ಯ ಯಥಾ ಧೀರಭಿಜಾಯತ ॥೨೩॥

ವಿದ್ಯಾರಣ್ಯವನ್ನು (ಜ್ಞಾನದಿಂದ ತಿಳಿಯಲು ಸಾಧ್ಯವಾಗುವ ಬ್ರಹ್ಮಾರಣ್ಯದ ಸ್ವರೂಪವನ್ನು) ತಿಳಿದ ಜನರು ಆ ಅರಣ್ಯವನ್ನು ಹೊಂದಲು ಉದ್ದೇಶಿಸಿ ಮನೋನಿಗ್ರಹವನ್ನೇ ಪ್ರಶಂಸೆಮಾಡುತ್ತಾರೆ. ಅವರ ಬುದ್ಧಿಯೂ ಶಮಪ್ರಧಾನವಾಗಿಯೇ ಇರುತ್ತದೆ.

ಏತದೇವೇದೃಶಂ ಪುಣ್ಯಮರಣ್ಯಂ ಬ್ರಾಹ್ಮಣಾ ವಿದುಃ ।
ವಿದಿತ್ವಾ ಚಾನುತಿಷ್ಠನ್ತಿ ಕ್ಷೇತ್ರಜ್ಞೇನಾನುದರ್ಶಿತಾಃ ॥೨೪॥

ಇಂತಹ ಪವಿತ್ರವಾದ ಅರಣ್ಯವನ್ನು ಬ್ರಾಹ್ಮಣರು ತಿಳಿದಿರುತ್ತಾರೆ. ತತ್ತ್ವದರ್ಶಿಯ ಉಪದೇಶದಿಂದ ಪ್ರಬುದ್ಧರಾದ (ಆತ್ಮಜ್ಞಾನಿಗಳಾದ) ಪುರುಷರು ಬ್ರಹ್ಮವನದ ವಿಷಯವನ್ನು ಯಥಾವತ್ತಾಗಿ ತಿಳಿದುಕೊಂಡು ಬ್ರಹ್ಮಸಾಕ್ಷಾತ್ಕಾರ ವನ್ನು ಪಡೆಯಲು ಶಮ-ದಮಾದಿಗಳನ್ನು ಅನುಷ್ಠಾನ ಮಾಡುತ್ತಾರೆ."

ಎ೭ನೆಯ ಅಧ್ಯಾಯವು ಮುಗಿಯಿತು.

ಜ್ಞಾನಿಯಾದ ಪುರುಷನ ಸ್ಥಿತಿ: ಅಧ್ವರ್ಯು ಮತ್ತು ಯತಿಗಳ ಸಂವಾದ

ಬ್ರಾಹ್ಮಣನು ಹೇಳುತ್ತಾನೆ:

ಗನ್ಧಾನ್ನ ಜಿಘ್ರಾಮಿ ರಸಾನ್ನ ವೇದ್ಮಿ
ರೂಪಂ ನ ಪಶ್ಯಾಮಿ ನ ಚ ಸ್ಪೃಶಾಮಿ ।
ನ ಚಾಪಿ ಶಬ್ದಾನ್ವಿವಿಧಾಞ್ಶೃಣೋಮಿ
ನ ಚಾಪಿ ಸಂಕಲ್ಪಮುಪೈಮಿ ಕಂಚಿತ್ ॥೧॥

“ನಾನು ಗಂಧವನ್ನು ಮೂಸಿನೋಡುವುದಿಲ್ಲ. ರಸಗಳನ್ನು ಆಸ್ವಾದಿಸುವುದಿಲ್ಲ. ರೂಪವನ್ನು ನೋಡುವುದಿಲ್ಲ. ಯಾವ ಪದಾರ್ಥವನ್ನೂ ಮುಟ್ಟುವುದಿಲ್ಲ. ನಾನಾಪ್ರಕಾರವಾದ ಶಬ್ದಗಳನ್ನೂ ಕೇಳುವುದಿಲ್ಲ ಮತ್ತು ಯಾವುದೇ ಸಂಕಲ್ಪವನ್ನೂ ಮಾಡುವುದಿಲ್ಲ.

ಅರ್ಥಾನಿಷ್ಟಾನ್ಕಾಮಯತೇ ಸ್ವಭಾವಃ
ಸರ್ವಾನ್ದ್ವೇಷ್ಯಾನ್ಪ್ರದ್ವಿಷತೇ ಸ್ವಭಾವಃ ।
ಕಾಮದ್ವೇಷಾವುದ್ಭವತಃ ಸ್ವಭಾವಾ-
ತ್ಪ್ರಾಣಾಪಾನೌ ಜನ್ತುದೇಹಾನ್ನಿವೇಶ್ಯ ॥೨॥

ಸ್ವಭಾವವೇ ಅಭೀಷ್ಟವಾದ ಪದಾರ್ಥಗಳನ್ನು ಬಯಸುತ್ತದೆ. ಸ್ವಭಾವವೇ ದ್ವೇಷ್ಯವಸ್ತುಗಳನ್ನು ದ್ವೇಷಿಸುತ್ತದೆ. ಪ್ರಾಣಾಪಾನಗಳು ಸ್ವಾಭಾವಿಕವಾಗಿಯೇ ಪ್ರಾಣಿಗಳ ದೇಹವನ್ನು ಪ್ರವೇಶಿಸಿ ಅನ್ನಪಾಚನಾದಿ ಕಾರ್ಯಗಳನ್ನು ಮಾಡುವಂತೆ–ಸ್ವಭಾವದಿಂದಲೇ ರಾಗ-ದ್ವೇಷಗಳು ಹುಟ್ಟುತ್ತವೆ. (ಬುದ್ಧಿಯೇ ಮೊದಲಾದ ಇಂದ್ರಿಯಗಳಿಗೆ ಸ್ವಭಾವದಿಂದಲೇ ಪದಾರ್ಥಗಳ ಮೇಲೆ ಆಸೆಯಿರುತ್ತದೆ.)

ತೇಭ್ಯಶ್ಚಾನ್ಯಾಂಸ್ತೇಷ್ವನಿತ್ಯಾಂಶ್ಚ ಭಾವಾ-
ನ್ಭೂತಾತ್ಮಾನಂ ಲಕ್ಷಯೇಯಂ ಶರೀರೇ ।
ತಸ್ಮಿಂಸ್ತಿಷ್ಠನ್ನಾಸ್ಮಿ ಸಕ್ತಃ ಕಥಂಚಿ-
ತ್ಕಾಮಕ್ರೋಧಾಭ್ಯಾಂ ಜರಯಾ ಮೃತ್ಯುನಾ ಚ ॥೩॥

ಅವುಗಳಿಗಿಂತಲೂ ಬೇರೆಯದಾದ ಮತ್ತು ಅವುಗಳಲ್ಲಿರುವ ಅನಿತ್ಯವಾದ ಭಾವಗಳನ್ನು (ಸ್ವಪ್ನಾದಿಗಳನ್ನು) ಮತ್ತು ಸರ್ವಪ್ರಾಣಿಗಳಲ್ಲಿಯೂ ಆತ್ಮಸ್ವರೂಪವಾಗಿರುವ ಪರಮಾತ್ಮನನ್ನು ನಾನು ನನ್ನ ಶರೀರದಲ್ಲಿ ಕಾಣುತ್ತೇನೆ. ಪರಮಾತ್ಮನಲ್ಲಿಯೇ ಸುಪ್ರತಿಷ್ಠಿತವಾದ ಮನಸ್ಸನ್ನು ಹೊಂದಿರುವ ನಾನು ಕಾಮ-ಕ್ರೋಧಗಳಿಂದಾಗಲೀ ಮುಪ್ಪು-ಸಾವುಗಳಿಂದಾಗಲೀ ಯಾವುದೇ ಕಾರಣದಿಂದಲೂ ಮುಟ್ಟಲ್ಪಡುವುದಿಲ್ಲ. ಹೃದಯಗುಹೆಯಲ್ಲಿರುವ ಪರಮಾತ್ಮನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿರುವ ನನ್ನನ್ನು ಕಾಮ-ಕ್ರೋಧಗಳಾಗಲೀ ಜರಾ-ಮೃತ್ಯುಗಳಾಗಲೀ ಬಾಧೆಪಡಿಸುವುದಿಲ್ಲ.

ಅಕಾಮಯಾನಸ್ಯ ಚ ಸರ್ವಕಾಮಾ-
ನವಿದ್ವಿಷಾಣಸ್ಯ ಚ ಸರ್ವದೋಷಾನ್ ।
ನ ಮೇ ಸ್ವಭಾವೇಷು ಭವನ್ತಿ ಲೇಪಾ-
ಸ್ತೋಯಸ್ಯ ಬಿನ್ದೋರಿವ ಪುಷ್ಕರೇಷು ॥೪॥

ಯಾವುದೇ ಕಾಮನಾವಸ್ತುಗಳನ್ನೂ ಕಾಮಿಸದೇ ಇರುವ, ಯಾವುದೇ ದ್ವೇಷ್ಯವಸ್ತುಗಳನ್ನೂ ದ್ವೇಷಿಸದೇ ಇರುವ ನನ್ನ ಸ್ವಭಾವಗಳಲ್ಲಿ–ಕಮಲದ ಎಲೆಗಳಲ್ಲಿ ನೀರಿನ ತೊಟ್ಟುಗಳು ಅಂಟಿಕೊಳ್ಳದಂತೆ–ಯಾವ ವಿಧವಾದ ದೋಷಗಳೂ ಅಂಟಿಕೊಳ್ಳುವುದಿಲ್ಲ.

ನಿತ್ಯಸ್ಯ ಚೈತಸ್ಯ ಭವನ್ತ್ಯನಿತ್ಯಾ
ನಿರೀಕ್ಷ್ಯಮಾಣಸ್ಯ ಬಹುಸ್ವಭಾವಾನ್ ।
ನ ಸಜ್ಜತೇ ಕರ್ಮಸು ಭೋಗಜಾಲಂ
ದಿವೀವ ಸೂರ್ಯಸ್ಯ ಮಯೂಖಜಾಲಮ್ ॥೫॥

ಇಂದ್ರಿಯಗಳ ಅನೇಕಪ್ರಕಾರವಾದ ಸ್ವಭಾವಗಳನ್ನು ನಿರೀಕ್ಷಿಸುತ್ತಿರುವ ಈ ನಿತ್ಯನಾದ ಪರಮಾತ್ಮನನ್ನು ಹೃತ್ಕಮಲದಲ್ಲಿ ನೋಡಿದವನಿಗೆ (ಜ್ಞಾನಿಗೆ) ಇಂದ್ರಿಯಸಂಬಂಧವಾದ ಭೋಗಗಳೆಲ್ಲವೂ ಅನಿತ್ಯವಾಗಿ ಕಾಣುತ್ತವೆ. ಆದುದರಿಂದ ಅಂತಹ ಜ್ಞಾನಿಯು ಮಾಡುವ ಕರ್ಮಗಳಲ್ಲಿನ ಭೋಗಸಮೂಹಗಳು–ಆಕಾಶದಲ್ಲಿ ಕಿರಣಸಮೂಹಗಳು ಸೂರ್ಯನನ್ನು ಹೇಗೋ ಹಾಗೆ–ಅವನನ್ನು ಲೇಪಗೊಳಿಸುವುದಿಲ್ಲ.

ಯಶಸ್ವಿನಿಯೇ! ಈ ವಿಷಯದಲ್ಲಿ ಅಧ್ವರ್ಯುವಿಗೂ ಮತ್ತು ಯತಿಯೊಬ್ಬನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ಹೇಳುವೆನು; ಕೇಳು:

ಒಂದು ಯಜ್ಞದಲ್ಲಿ ಪಶುವಿಗೆ ಪ್ರೋಕ್ಷಣೆಮಾಡುತ್ತಿರುವುದನ್ನು ನೋಡಿ ಅಲ್ಲಿಯೇ ಕುಳಿತಿದ್ದ ಯತಿಯು ಆ ಕಾರ್ಯವನ್ನು ಧಿಕ್ಕರಿಸುತ್ತಾ “ಇದು ಹಿಂಸಾಕರ್ಮವಾಗಿದೆ. ಆದುದರಿಂದ ಇದನ್ನು ಮಾಡಕೂಡದು”– ಎಂದು ಹೇಳಿದನು.

ಅದಕ್ಕೆ ಅಧ್ವರ್ಯುವು ಪ್ರತ್ಯುತ್ತರಿಸುತ್ತಾನೆ: “ನಾಯಂ ಛಾಗೋ ವಿನಶ್ಯತಿ”–ಹೀಗೆ ಮಾಡುವುದರಿಂದ ಈ ಆಡೇನೂ ವಿನಾಶಹೊಂದುವುದಿಲ್ಲ.

ಶ್ರೇಯಸಾ ಯೋಕ್ಷ್ಯತೇ ಜನ್ತುರ್ಯದಿ ಶ್ರುತಿರಿಯಂ ತಥಾ ॥೮॥

‘ಪಶುರ್ವೈ ನೀಯಮಾನಃ ಸ ಮೃತ್ಯುಂ ಪ್ರಾಪಶ್ಯತ್ಸ ದೇವಾನ್ನಾನ್ವಕಾಮಯತೈತುಂ ತಂ ದೇವಾ ಅಬ್ರುವನ್ನೇಹಿ ಸ್ವರ್ಗಂ ವೈ ತ್ವಾ ಲೋಕಂ ಗಮಿಷ್ಯಾಮಃ ।’ಇತ್ಯಾದಿ ವೇದವಾಕ್ಯಗಳು ಸತ್ಯವಾದರೆ ಈ ಪ್ರಾಣಿಯು ಶ್ರೇಯಸ್ಸನ್ನೇ ಹೊಂದುತ್ತದೆ.

ಯೋ ಹ್ಯಸ್ಯ ಪಾರ್ಥಿವೋ ಭಾಗಃ ಪೃಥಿವೀಂ ಸ ಗಮಿಷ್ಯತಿ ।
ಯದಸ್ಯ ವಾರಿಜಂ ಕಿಂಚಿದಪಸ್ತತ್ಸಮ್ಪ್ರವೇಕ್ಷ್ಯತಿ ॥೯॥

ಈ ಪ್ರಾಣಿಯ ಶರೀರದ ಪಾರ್ಥಿವಭಾಗವು ಭೂಮಿಯಲ್ಲಿ ಸೇರಿಹೋಗುತ್ತದೆ. ಇದರ ಶರೀರದಲ್ಲಿರುವ ನೀರಿನ ಭಾಗವು ನೀರಿನಲ್ಲಿ ಸೇರಿಹೋಗುತ್ತದೆ.

ಸೂರ್ಯಂ ಚಕ್ಷುರ್ದಿಶಃ ಶ್ರೋತ್ರಂ ಪ್ರಾಣೋಽಸ್ಯ ದಿವಮೇವ ಚ ।
ಆಗಮೇ ವರ್ತಮಾನಸ್ಯ ನ ಮೇ ದೋಷೋಽಸ್ತಿ ಕಶ್ಚನ ॥೧೦॥

ಈ ಪ್ರಾಣಿಯ ಕಣ್ಣುಗಳು ಸೂರ್ಯನಲ್ಲಿಯೂ, ಕಿವಿಗಳು ದಿಕ್ಕುಗಳಲ್ಲಿಯೂ, ಪ್ರಾಣಗಳು ಅಂತರಿಕ್ಷದಲ್ಲಿಯೂ ಲೀನವಾಗುತ್ತವೆ. ಶಾಸ್ತ್ರಗಳ ಆಜ್ಞಾನುಸಾರವಾಗಿ ನಾನು ವ್ಯವಹರಿಸುತ್ತಿರುವುದರಿಂದ ನನಗೆ ಇದರಿಂದ ಯಾವ ದೋಷವೂ ಉಂಟಾಗುವುದಿಲ್ಲ.”

ಯತಿಯು ಹೇಳುತ್ತಾನೆ:

ಪ್ರಾಣೈರ್ವಿಯೋಗೇ ಚ್ಛಾಗಸ್ಯ ಯದಿ ಶ್ರೇಯಃ ಪ್ರಪಶ್ಯತಿ ।
ಛಾಗಾರ್ಥೇ ವರ್ತತೇ ಯಜ್ಞೋ ಭವತಃ ಕಿಂ ಪ್ರಯೋಜನಮ್॥೧೧॥

“ಅಧ್ವರ್ಯುವೇ! ಒಂದು ವೇಳೆ ಪ್ರಾಣಗಳ ವಿಯೋಗದಿಂದ ಆಡಿಗೆ ಶ್ರೇಯಸ್ಸುಂಟಾಗುವುದನ್ನು ನೀನು ಕಾಣುವುದಾದರೆ ಈ ಯಜ್ಞವು ಮೇಕೆಯ ಸಲುವಾಗಿಯೇ (ಮೇಕೆಗೆ ಶ್ರೇಯಸ್ಸನ್ನುಂಟುಮಾಡುವ ಸಲುವಾಗಿಯೇ ಮಾಡಲ್ಪಟ್ಟಿತು.) ಅಂತಹ ಯಜ್ಞದಿಂದ ನಿನಗೇನು ಪ್ರಯೋಜನವಾಯಿತು?

ಅನು ತ್ವಾಂ ಮನ್ಯತಾಂ ಭ್ರಾತಾ ಪಿತಾ ಮಾತಾ ಸಖೇತಿ ಚ ।
ಮನ್ತ್ರಯಸ್ವೈನಮುನ್ನೀಯ ಪರವನ್ತಂ ವಿಶೇಷತಃ ॥೧೨॥

ಆಗಮೋಕ್ತವಾಗಿಯೇ ನೀನು ನಡೆದುಕೊಳ್ಳುವುದಾದರೆ, ಪಶುವಿನ ವಿಷಯದಲ್ಲಿ ಹೇಳುವ ಈ ಮಂತ್ರದಂತೆಯೂ ನಡೆದುಕೊಳ್ಳ ಬೇಕು. ‘ಅನ್ವೇನಂ ಮಾತಾಮನುಮನ್ಯತಾಮನುಪಿತಾಽನುಭ್ರಾತಾ ಸಗರ್ಭ್ಯೋಽನುಸಖಾ ಸಯೂಥ್ಯಃ। ಪಶುವೇ! ಈ ಕಾರ್ಯಕ್ಕೆ ನಿನ್ನ ತಾಯಿ-ತಂದೆ-ಅಣ್ಣ- ತಮ್ಮಂದಿರು, ಸ್ನೇಹಿತರು, ಸಂಗಡಿಗರು–ಎಲ್ಲರೂ ಅನುಮತಿಸಲಿ’–ಎಂಬ ಮಂತ್ರವರ್ಣವಿದೆ. ಈ ಶ್ರುತಿಗೆ ಅನುಸಾರವಾಗಿ ವಿಶೇಷವಾಗಿ ಪರಾಧೀನ ವಾಗಿರುವ ಈ ಮೇಕೆಯನ್ನು ಇದರ ತಾಯಿ, ತಂದೆ, ಅಣ್ಣ-ತಮ್ಮಂದಿರು, ಸ್ನೇಹಿತರು–ಇವರ ಬಳಿಗೆ ಕರೆದುಕೊಂಡು ಹೋಗಿ ಇದರ ಹನನಕ್ಕೆ ಅನುಮತಿಯನ್ನು ಪಡೆದುಕೊಳ್ಳಬೇಕು. ಕೇವಲ ಮಂತ್ರೋಚ್ಚಾರಣೆಯನ್ನು ಮಾಡಿ ಕಾರ್ಯತಃ ಅನುಮತಿಯನ್ನು ಪಡೆದು ಕೊಳ್ಳದಿದ್ದರೆ ಪಶುಹಿಂಸೆಯ ದೋಷವು ಅವಶ್ಯವಾಗಿ ಪ್ರಾಪ್ತವಾಗುತ್ತದೆ.

ಏವಮೇವಾನುಮನ್ಯೇರಂಸ್ತಾನ್ಭವಾನ್ದ್ರಷ್ಟುಮರ್ಹತಿ ।
ತೇಷಾಮನುಮತಂ ಶ್ರುತ್ವಾ ಶಕ್ಯಾ ಕರ್ತುಂ ವಿಚಾರಣಾ ॥೧೩॥

ಮೊದಲು ನೀನು ಪಶುವಿನ ಸಂಬಂಧಿಗಳನ್ನು ಸಂಧಿಸಬೇಕು. ಅವರು ಅದಕ್ಕೆ ಅನುಮತಿಸುವರೇ?–ಎಂಬುದನ್ನು ತಿಳಿದುಕೊಳ್ಳಬೇಕು. ಅವರೇ

ನಾದರೂ ಇದರ ಹನನಕ್ಕೆ ಅನುಮತಿಸುವುದಾದರೆ ಆಗ ಮಾತ್ರ ನೀನು ಯಜ್ಞದಲ್ಲಿ ಇದರ ಹನನಮಾಡುವ ವಿಚಾರಮಾಡಲು ಶಕ್ಯವಿದೆ.

ಪ್ರಾಣಾ ಅಪ್ಯಸ್ಯ ಛಾಗಸ್ಯ ಪ್ರಾಪಿತಾಸ್ತೇ ಸ್ವಯೋನಿಷು ।
ಶರೀರಂ ಕೇವಲಂ ಶಿಷ್ಟಂ ನಿಶ್ಚೇಷ್ಟಮಿತಿ ಮೇ ಮತಿಃ ॥೧೪॥

ಮೇಲಾಗಿ ನೀನು **-ಸೂರ್ಯಂ ತೇ ಚಕ್ಷುರ್ಗಮಯತಾದ್ವಾತಂ ಪ್ರಾಣಮನ್ವವಸೃಜತಾತ್**–ಎಂಬ ಮಂತ್ರವನ್ನು ಪುನಶ್ಚರಣೆಮಾಡಿ, ಅಭಿಮಂತ್ರಿಸಿ ಈ ಮೇಕೆಯ ಇಂದ್ರಿಯಗಳೆಲ್ಲವನ್ನೂ ಅವುಗಳ ಉಗಮಸ್ಥಾನಗಳಲ್ಲಿ ಲೀನಗೊಳಿಸಿಬಿಟ್ಟಿರುವೆ. ವೇದವೇ ಪ್ರಮಾಣಭೂತವಾಗಿದ್ದರೆ ಈಗ ನಿಶ್ಚೇಷ್ಟವಾದ ಮೇಕೆಯ ಶರೀರವು ಮಾತ್ರವೇ ಉಳಿದುಕೊಂಡಿರುವುದೆಂದು ಅಭಿಪ್ರಾಯಪಡುತ್ತೇನೆ.

ಇನ್ಧನಸ್ಯ ತು ತುಲ್ಯೇನ ಶರೀರೇಣ ವಿಚೇತಸಾ ।
ಹಿಂಸಾನಿರ್ವೇಷ್ಟುಕಾಮಾನಾಮಿನ್ಧನಂ ಪಶುಸಂಜ್ಞಿತಮ್ ॥೧೫॥

ಮಂತ್ರದ ಅಭಿಮಂತ್ರಣದಿಂದ ಚೇತಸ್ಸಿನಿಂದ ರಹಿತವಾಗಿರುವ ಶರೀರವುಳ್ಳ ಈ ಮೇಕೆಯು ಕಟ್ಟಿಗೆಗೆ ಸಮಾನವಾಗಿದೆ. ಹಿಂಸೆಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವ ಅಭಿಲಾಷೆಯಿಂದ ಯಜ್ಞಮಾಡುವವನಿಗೆ ಕಟ್ಟಿಗೆಯೇ ಪಶುವಿನ ಸಂಜ್ಞೆಯನ್ನು ಪಡೆದಂತಾಯಿತು. (ಆದುದರಿಂದ ಕಟ್ಟಿಗೆಯಿಂದಲೇ ಯಜ್ಞಕರ್ಮವು ನಡೆಯುವಾಗ ಪಶುವನ್ನೇಕೆ ಹಿಂಸಿಸಬೇಕು?)

ಅಹಿಂಸಾ ಸರ್ವಧರ್ಮಾಣಾಮಿತಿ ವೃದ್ಧಾನುಶಾಸನಮ್ ।
ಯದಹಿಂಸ್ರಂ ಭವೇತ್ಕರ್ಮ ತತ್ಕಾರ್ಯಮಿತಿ ವಿದ್ಮಹೇ ॥೧೬॥

ಎಲ್ಲ ಧರ್ಮಗಳಿಗಿಂತಲೂ ಅಹಿಂಸಾಧರ್ಮವೇ ಶ್ರೇಷ್ಠವಾದುದೆಂದು ಜ್ಞಾನವೃದ್ಧರ ಉಪದೇಶವಾಗಿದೆ. ಯಾವ ಕಾರ್ಯವು ಹಿಂಸೆಯಿಂದ ರಹಿತವಾಗಿರುವುದೋ–ಅಂತಹ ಕಾರ್ಯವೇ ಮಾಡಲು ಯೋಗ್ಯವಾದುದೆಂದು ನಾವು ತಿಳಿಯುತ್ತೇವೆ.

ಅಹಿಂಸೇತಿ ಪ್ರತಿಜ್ಞೇಯಂ ಯದಿ ವಕ್ಷ್ಯಾಮ್ಯತಃ ಪರಮ್ ।
ಶಕ್ಯಂ ಬಹುವಿಧಂ ಕರ್ತುಂ ಭವತಾ ಕಾರ್ಯದೂಷಣಮ್ ॥೧೭॥

ನಾನು ಇನ್ನು ಮುಂದೇನಾದರೂ ಹೇಳುವುದಿದ್ದರೆ ಈ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಎಲ್ಲರಿಂದಲೂ -"ನಾನು ಅಹಿಂಸಾಧರ್ಮವನ್ನು ಪರಿಪಾಲಿಸುತ್ತೇನೆ"–ಎಂಬ ಪ್ರತಿಜ್ಞೆಯನ್ನು ಮಾಡಿಸಬೇಕಾಗಿದೆ. ಹಾಗಿಲ್ಲದಿದ್ದರೆ ನಿಮ್ಮಂತಹವರ ಮೂಲಕವಾಗಿ ಇದೇ ವಿಧವಾದ ಹಿಂಸಾರೂಪವಾದ ದುಷ್ಟಕಾರ್ಯಗಳು ನಡೆಯಲು ಶಕ್ಯವಿದೆ.

ಅಹಿಂಸಾ ಸರ್ವಭೂತಾನಾಂ ನಿತ್ಯಮಸ್ಮಾಸು ರೋಚತೇ ।
ಪ್ರತ್ಯಕ್ಷತಃ ಸಾಧಯಾಮೋ ನ ಪರೋಕ್ಷಮುಪಾಸ್ಮಹೇ ॥೧೮॥

ಯಾವುದೇ ಪ್ರಾಣಿಯನ್ನೂ ಹಿಂಸೆಮಾಡದೇ ಇರುವುದು ಸದಾ ನಮಗೆ ಪ್ರಿಯವಾಗಿದೆ. ಅದನ್ನು ಪ್ರತ್ಯಕ್ಷವಾಗಿಯೇ ಸಾಧಿಸೋಣ. ಪರೋಕ್ಷದ (ಸ್ವರ್ಗಾದಿಗಳ) ಉಪಾಸನೆಯನ್ನು ಮಾಡಲು ಹೋಗುವುದು ಬೇಡ. (ಅದನ್ನು ಉಪಾಸಿಸಲು ಹೋಗಿ ಪ್ರತ್ಯಕ್ಷದಲ್ಲಿ ಪ್ರಾಣಿಗಳನ್ನು ಕೊಲ್ಲುವುದು ಬೇಡ.)"

ಅಧ್ವರ್ಯುವು ಹೇಳುತ್ತಾನೆ:

ಭೂಮೇರ್ಗನ್ಧಗುಣಾನ್ಭುಂಕ್ಷೇ ಪಿಬಸ್ಯಾಪೋಮಯಾನ್ರಸಾನ್ ।
ಜ್ಯೋತಿಷಾಂ ಪಶ್ಯಸೇ ರೂಪಂ ಸ್ಪೃಶಸ್ಯನಿಲಜಾನ್ಗುಣಾನ್ ॥೧೯॥
ಶೃಣೋಷ್ಯಾಕಾಶಜಾಞ್ಶಬ್ದಾನ್ಮನಸಾ ಮನ್ಯಸೇ ಮತಿಮ್ ।
ಸರ್ವಾಣ್ಯೇತಾನಿ ಭೂತಾನಿ ಪ್ರಾಣಾ ಇತಿ ಚ ಮನ್ಯಸೇ ॥೨೦॥

"ಯತೀಶ್ವರನೇ! ನೀನು ಭೂಮಿಯಲ್ಲಿರುವ ಗಂಧವನ್ನು ಉಪಭೋಗಿಸುವೆ. ಜಲಮಯವಾದ ರಸವನ್ನು ಆಸ್ವಾದಿಸುವೆ. ತೇಜಸ್ಸಿನ ಗುಣವಾದ ರೂಪವನ್ನು ನೋಡುವೆ. ವಾಯುವಿನ ಗುಣವಾದ ಸ್ಪರ್ಶವನ್ನು ಅನುಭವಿಸುವೆ. ಆಕಾಶದಿಂದ ಹುಟ್ಟುವ ಶಬ್ದವನ್ನು ಕೇಳುವೆ. ಮನಸ್ಸಿನಿಂದ ಬುದ್ಧಿಯನ್ನು ಮಥಿಸುವೆ. ಆದರೆ ಆ ಎಲ್ಲ ಭೂತಗಳನ್ನೂ ನೀನು ಪ್ರಾಣಗಳುಳ್ಳವುಗಳೆಂದೇ ಭಾವಿಸುವೆ. (ಪ್ರಾಣಗಳುಳ್ಳ ಆ ಭೂತಗಳಿಂದ ಅವುಗಳ ಸಂಬಂಧವಾದ ಗುಣಗಳನ್ನು ಕಿತ್ತುತೆಗೆದರೆ ಆ ಭೂತಗಳಿಗೆ ಹಿಂಸೆಯಾಗುವುದಿಲ್ಲವೇ?)

ಪ್ರಾಣಾದಾನೇ ನಿವೃತ್ತೋಽಸಿ ಹಿಂಸಾಯಾಂ ವರ್ತತೇ ಭವಾನ್ ।
ನಾಸ್ತಿ ಚೇಷ್ಟಾ ವಿನಾ ಹಿಂಸಾಂ ಕಿಂ ವಾ ತ್ವಂ ಮನ್ಯಸೇ ದ್ವಿಜ ॥೨೧॥

ನೀನು ಇತರ ಪ್ರಾಣಿಗಳ ಪ್ರಾಣಾಪಹರಣಕಾರ್ಯದಿಂದ ನಿವೃತ್ತನಾಗಿರುವೆ. ಆದರೆ ಪ್ರಾಣಿಗಳಲ್ಲಿರುವ ಗುಣಗಳನ್ನು ಹೀರುವ ಹಿಂಸಾಕಾರ್ಯದಲ್ಲಿ ತೊಡಗಿರುವೆ. ಯತಿವರ್ಯನೇ! ಯಾವುದೇ ಕಾರ್ಯವಾಗಲೀ, ಹಿಂಸೆಯ ಹೊರತಾಗಿ ನಡೆಯುವುದೇ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಹೀಗಿರುವಾಗ ಅಹಿಂಸೆಯನ್ನು ಪರಿಪಾಲಿಸುವೆನೆಂದು ನೀನು ಹೇಗೆ ತಾನೇ ಭಾವಿಸುವೆ?"

ಯತಿಯು ಹೇಳುತ್ತಾನೆ:

ಅಕ್ಷರಂ ಚ ಕ್ಷರಂ ಚೈವ ದ್ವೈಧೀಭಾವೋಽಯಮಾತ್ಮನಃ ।
ಅಕ್ಷರಂ ತತ್ರ ಸದ್ಭಾವಃ ಸ್ವಭಾವಃ ಕ್ಷರ ಉಚ್ಯತೇ ॥೨೨॥

"ಆತ್ಮನಿಗೆ ಕ್ಷರ-ಅಕ್ಷರ ಎಂಬ ಎರಡು ಭಾವಗಳೂ ಇವೆ. ಯಾವುದರ ಸತ್ತೆಯು ಮೂರು ಕಾಲಗಳಲ್ಲಿಯೂ ನಷ್ಟವಾಗುವುದಿಲ್ಲವೋ, ತ್ರಿಕಾಲಾಬಾಧಿತವಾಗಿರುವುದೋ–ಅಂತಹ ಅವಿನಾಶಿಯಾದ ಸತ್ತ್ವರೂಪವೇ ಅಕ್ಷರವು. ಯಾವುದು ಸರ್ವಥಾ ಅಭಾವವಾಗಿರುವುದೋ ಅಥವಾ ಕ್ಷಣ-ಕ್ಷಣಕ್ಕೂ ವ್ಯತ್ಯಾಸವಾಗುತ್ತಲೇ ಇರುವುದೋ–ಅದು ಕ್ಷರ ಎಂದು ಹೇಳಲ್ಪಡುತ್ತದೆ. (ಅವಿನಾಶಿಯಾದ, ನಿರ್ವಿಕಾರವಾದ, ಸತ್ವಭಾವವು ಯಾವುದಿರುವುದೋ ಅದೇ ಅಕ್ಷರ. ಸತ್ತ್ವರಜಸ್ತಮೋಗುಣಗಳ ಪ್ರಭಾವದಿಂದುಂಟಾಗುವ ಅನಿತ್ಯವಾದ ಸ್ವಭಾವವೇ ಕ್ಷರ.)

ಪ್ರಾಣೋ ಜಿಹ್ವಾ ಮನಃ ಸತ್ತ್ವಂ ಸದ್ಭಾವೋ ರಜಸಾ ಸಹ ।
ಭಾವೈರೇತೈರ್ವಿಮುಕ್ತಸ್ಯ ನಿರ್ದ್ವನ್ದ್ವಸ್ಯ ನಿರಾಶಿಷಃ ॥೨೩॥

ಸಮಸ್ಯ ಸರ್ವಭೂತೇಷು ನಿರ್ಮಮಸ್ಯ ಜಿತಾತ್ಮನಃ ।
ಸಮನ್ತಾತ್ಪರಿಮುಕ್ತಸ್ಯ ನ ಭಯಂ ವಿದ್ಯತೇ ಕ್ವಚಿತ್ ॥೨೪॥

ಪ್ರಾಣ, ಜಿಹ್ವೆ, ಮನಸ್ಸು ಮತ್ತು ಸತ್ತ್ವ–ಇವು ರಜಸ್ಸಿನೊಡನೆ ಸೇರಿದರೆ ಸ್ವಭಾವವಾಗುತ್ತದೆ. (ಕ್ಷರವಾಗುತ್ತದೆ.) ಈ ವಿಧವಾದ ಭಾವನೆಗಳಿಂದ ವಿಮುಕ್ತನೂ, ದ್ವಂದ್ವಗಳಿಂದ ರಹಿತನೂ, ಆಶಾರಹಿತನೂ, ಎಲ್ಲ ಪ್ರಾಣಿಗಳ ವಿಷಯದಲ್ಲಿ ಸಮಭಾವವುಳ್ಳವನೂ, ಮಮತಾರಹಿತನೂ, ಜಿತೇಂದ್ರಿಯನೂ, ಎಲ್ಲ ಕಡೆಗಳಿಂದಲೂ ಮುಕ್ತನೂ ಆಗಿರುವವನಿಗೆ ಸ್ವಲ್ಪವಾದರೂ ಭಯವೆಂಬುದೇ ಇರುವುದಿಲ್ಲ."

ಅಧ್ವರ್ಯುವು ಹೇಳುತ್ತಾನೆ:

ಸದ್ಭಿರೇವೇಹ ಸಂವಾಸಃ ಕಾರ್ಯೋ ಮತಿಮತಾಂ ವರ ।
ಭವತೋ ಹಿ ಮತಂ ಶ್ರುತ್ವಾ ಪ್ರತಿಭಾತಿ ಮತಿರ್ಮಮ ॥೨೫॥

ಭಗವನ್ಭಗವದ್ಬುದ್ಧ್ಯಾ ಪ್ರತಿಪನ್ನೋ ಬ್ರವೀಮ್ಯಹಮ್ ।
ವ್ರತಂ ಮನ್ತ್ರಕೃತಂ ಕರ್ತುರ್ನಾಪರಾಧೋಽಸ್ತಿ ಮೇ ದ್ವಿಜ ॥೨೬॥

"ಬುದ್ಧಿವಂತರಲ್ಲಿ ಶ್ರೇಷ್ಠನಾದ ಯತಿಯೇ! ನಿನ್ನ ಅಭಿಪ್ರಾಯವನ್ನು ಕೇಳಿದನಂತರ ನನ್ನ ಬುದ್ಧಿಗೆ ಹೀಗೆ ಸ್ಫುರಣೆಯಾಗುತ್ತಿದೆ. ಅವಶ್ಯವಾಗಿ ಸತ್ಪುರುಷರ ಸಹವಾಸವನ್ನು ಮಾಡಲೇಬೇಕು. ಪೂಜ್ಯನೇ! ನಿನ್ನ ಬುದ್ಧಿಯಿಂದಲೇ (ಉಪದೇಶದಿಂದಲೇ) ಜ್ಞಾನವನ್ನು ಪಡೆದುಕೊಂಡ ನಾನು ಹೀಗೆ ಹೇಳುತ್ತೇನೆ. ವೇದಮಂತ್ರೋಕ್ತವಾದ ವ್ರತವನ್ನು ಮಾಡುತ್ತಿರುವ ನಾನು ಅಪರಾಧವನ್ನು ಮಾಡಿದಂತಾಗುವುದಿಲ್ಲ."

ಬ್ರಾಹ್ಮಣನು ಹೇಳುತ್ತಾನೆ:

"ಅಧ್ವರ್ಯುವು ಹೇಳಿದ ಯುಕ್ತಿಯುಕ್ತವಾದ ಮಾತನ್ನು ಕೇಳಿ ಯತಿಯು ಮುಂದೆ ಯಾವ ಮಾತನ್ನೂ ಆಡದೇ ಸುಮ್ಮನಾಗಿಬಿಟ್ಟನು. ಅಧ್ವರ್ಯುವೂ ಕೂಡ ಮೋಹರಹಿತನಾಗಿ ಮಹಾಯಾಗದಲ್ಲಿ ತೊಡಗಿದನು.

ಹೀಗೆ ಮೋಕ್ಷವು ಅತ್ಯಂತಸೂಕ್ಷ್ಮಸ್ವರೂಪದ್ದೆಂದು ಬ್ರಾಹ್ಮಣರು ಹೇಳುತ್ತಾರೆ. ಸಾಧಕರು ತತ್ತ್ವದರ್ಶಿಯಾದ ಪುರುಷನ ಉಪದೇಶಕ್ಕೆ ಅನುಸಾರವಾಗಿ ಮೋಕ್ಷಧರ್ಮವನ್ನು ತಿಳಿದುಕೊಂಡು ಅನುಷ್ಠಾನ ಮಾಡುತ್ತಾರೆ. "

೨೮ನೆಯ ಅಧ್ಯಾಯವು ಮುಗಿಯಿತು.

೨೯ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಪರಶುರಾಮನಿಂದ ಕ್ಷತ್ರಿಯಕುಲಸಂಹಾರ

ಬ್ರಾಹ್ಮಣನು ಹೇಳುತ್ತಾನೆ:

"ಭಾಮಿನಿಯೇ! ಈ ವಿಷಯದಲ್ಲಿ ಹಿಂದೆ ಕಾರ್ತವೀರ್ಯನಿಗೂ

ಮತ್ತು ಸಮುದ್ರರಾಜನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.



ಸಾವಿರ ತೋಳುಗಳುಳ್ಳ ಕಾರ್ತವೀರ್ಯನೆಂಬ ರಾಜನಿದ್ದನು. ಅವನು ತನ್ನ ಧನುಸ್ಸಿನ ಬಲದಿಂದಲೇ ಸಾಗರಪರ್ಯಂತವಾದ ಭೂಮಂಡಲವನ್ನು ಜಯಿಸಿದ್ದನು. ಬಲದರ್ಪಿತನಾಗಿದ್ದ ಅವನೊಮ್ಮೆ ಸಮುದ್ರದ ತೀರಪ್ರದೇಶದಲ್ಲಿ ಸಂಚರಿಸುತ್ತಿದ್ದಾಗ ನೂರಾರು ಬಾಣಗಳಿಂದ ಸಮುದ್ರವನ್ನು ಮುಚ್ಚಿಬಿಟ್ಟನೆಂಬುದನ್ನು ನಾವು ಕೇಳಿದ್ದೇವೆ.

ಆಗ ಸಮುದ್ರರಾಜನು ಕಾರ್ತವೀರ್ಯನ ಬಳಿಗೆ ಬಂದು ಅವನಿಗೆ ನಮಸ್ಕರಿಸಿ ಕೈಜೋಡಿಸಿಕೊಂಡು ಹೇಳಿದನು:

ಮಾ ಮುಞ್ಚ ವೀರ ನಾರಾಚಾನ್ಬ್ರೂಹಿ ಕಿಂ ಕರವಾಣಿ ತೇ ।

ಮದಾಶ್ರಯಾಣಿ ಭೂತಾನಿ ತ್ವದ್ವಿಸೃಷ್ಟೈರ್ಮಹೇಷುಭಿಃ ।
ವಧ್ಯನ್ತೇ ರಾಜಶಾರ್ದೂಲ ತೇಭ್ಯೋ ದೇಹ್ಯಭಯಂ ವಿಭೋ ॥೫॥

"ವೀರನೇ! ನನ್ನ ಮೇಲೆ ಬಾಣಗಳನ್ನು ಬಿಡಬೇಡ. ನಿನಗಾಗಿ ನಾನು ಏನು ಮಾಡಬೇಕೆಂಬುದನ್ನು ಹೇಳು. ನನ್ನ ಆಶ್ರಯದಲ್ಲಿರುವ ಪ್ರಾಣಿಗಳೆಲ್ಲವೂ ನೀನು ಬಿಡುವ ಬಾಣಗಳಿಂದ ವಧಿಸಲ್ಪಡುತ್ತಿವೆ. ವಿಭುವೇ! ನನ್ನಲ್ಲಿರುವ ಆ ಪ್ರಾಣಿಗಳಿಗೆ ಅಭಯವನ್ನು ನೀಡು."

ಅರ್ಜುನನು ಹೇಳುತ್ತಾನೆ:

ಮತ್ಸಮೋ ಯದಿ ಸಂಗ್ರಾಮೇ ಶರಾಸನಧರಃ ಕ್ವಚಿತ್ ।
ವಿದ್ಯತೇ ತಂ ಸಮಾಚಕ್ಷ್ವ ಯಃ ಸಮಾಸೀತ ಮಾಂ ಮೃಧೇ ॥೬॥

"ಸಮುದ್ರರಾಜನೇ! ಪ್ರಪಂಚದಲ್ಲಿ ಎಲ್ಲಿಯಾದರೂ ಯುದ್ಧದಲ್ಲಿ ನನಗೆ ಸಮಾನನಾದ ಧನುರ್ಧಾರಿಯು ಇರುವನೇ? ಹಾಗೇನಾದರೂ ಇದ್ದರೆ ಅವನು ನನ್ನೆದುರಾಗಿ ನಿಂತು ಯುದ್ಧಮಾಡುವನೇ? ಅಂತಹವನೇನಾದರೂ ನಿನಗೆ ತಿಳಿದಿದ್ದರೆ ಅವನಾರೆಂಬುದನ್ನು ಹೇಳು."

ಸಮುದ್ರರಾಜನು ಹೇಳುತ್ತಾನೆ:

ಮಹರ್ಷಿರ್ಜಮದಗ್ನಿಸ್ತೇ ಯದಿ ರಾಜನ್ಪರಿಶ್ರುತಃ ।
ತಸ್ಯ ಪುತ್ರಸ್ತವಾತಿಥ್ಯಂ ಯಥಾವತ್ಕರ್ತುಮರ್ಹತಿ ॥೭॥

"ಅರ್ಜುನ! ಜಮದಗ್ನಿಮಹರ್ಷಿಯ ಹೆಸರನ್ನೇನಾದರೂ ಕೇಳಿರುವೆಯಾ? ಕೇಳಿದ್ದರೆ ಅಥವಾ ಅವನು ನಿನಗೆ ತಿಳಿದಿದ್ದರೆ ಅವನ ಆಶ್ರಮಕ್ಕೆ ಹೋಗು. ಅವನ ಮಗನಾದ ಪರಶುರಾಮನು ನಿನಗೆ ಯಥಾವತ್ತಾದ ಆತಿಥ್ಯವನ್ನು ನೀಡಲು ಯೋಗ್ಯನಾಗಿದ್ದಾನೆ." ಸಮುದ್ರನು ಹೀಗೆ ಹೇಳಲಾಗಿ ಕಾರ್ತವೀರ್ಯನು ಕೋಪಾವಿಷ್ಟನಾಗಿ ಜಮದಗ್ನಿಯ ಆಶ್ರಮಕ್ಕೆ ಬಂದು ರಾಮನನ್ನೇ ಸಂಧಿಸಿದನು. ಬಂಧುವರ್ಗದವರೊಡನಿದ್ದ ಅರ್ಜುನನು ಪರಶುರಾಮನಿಗೆ ಪ್ರತಿಕೂಲವಾಗಿಯೇ ವರ್ತಿಸಿದನು. ತನ್ನ ಕುತ್ಸಿತವಾದ ಕಾರ್ಯಗಳಿಂದ ಮಹಾತ್ಮನಾದ ಪರಶುರಾಮನ ಮನಸ್ಸಿನಲ್ಲಿ

ಉದ್ವಿಗ್ನತೆಯನ್ನು ಹುಟ್ಟಿಸಿದನು. ಮಹಾತೇಜಸ್ವಿಯಾದ ಪರಶುರಾಮನ ತೇಜಸ್ಸು ಒಡನೆಯೇ ಭಯಂಕರವಾಗಿ ಪ್ರಜ್ವಲಿಸತೊಡಗಿತು.

ಕಮಲಲೋಚನೆಯೇ! ಆಗ ಪರಶುರಾಮನು ಗಂಡುಗೊಡಲಿಯನ್ನು ಹಿಡಿದು ಶತ್ರುಸೈನ್ಯಗಳನ್ನು ಒಂದು ಕಡೆಯಿಂದ ಸುಟ್ಟುಹಾಕುತ್ತಾ ಕಡೆಗೆ ಸಾವಿರ ತೋಳುಗಳಿದ್ದ ಕಾರ್ತವೀರ್ಯನನ್ನು–ನೂರಾರು ಕೊಂಬೆಗಳುಳ್ಳ ಮರವನ್ನು ಕಡಿಯುವಂತೆ–ಕತ್ತರಿಸಿ ಹಾಕಿದನು. ಕಾರ್ತವೀರ್ಯನು ಸತ್ತು ಕೆಳಗೆ ಬಿದ್ದುದನ್ನು ನೋಡಿ ಅವನ ಬಾಂಧವರೆಲ್ಲರೂ ಒಟ್ಟುಗೂಡಿ ಕತ್ತಿಗಳನ್ನೂ, ಶಕ್ತ್ಯಾಯುಧಗಳನ್ನೂ ಹಿಡಿದು ಪರಶುರಾಮನನ್ನು ಎಲ್ಲಕಡೆಗಳಿಂದಲೂ ಸುತ್ತುಗಟ್ಟಿದರು. ವೇಗವಂತನಾದ ಪರಶುರಾಮನೂ ರಥದಲ್ಲಿ ಕುಳಿತು ಧನುಸ್ಸನ್ನು ಹಿಡಿದು ಬಾಣಗಳ ಮಳೆಗರೆಯುತ್ತಾ ರಾಜನ ಸೈನಿಕರನ್ನು ಧ್ವಂಸಮಾಡಿದನು. ಪರಶುರಾಮನ ಭಯದಿಂದ ಪೀಡಿತರಾದ ಕೆಲವರು ಕ್ಷತ್ರಿಯರು–ಸಿಂಹದಿಂದ ಪೀಡಿಸಲ್ಪಟ್ಟ ಕ್ಷುದ್ರಮೃಗಗಳಂತೆ–ಪರ್ವತಗಳ ಗುಹೆಗಳಲ್ಲಿ ಅಡಗಿಕೊಂಡರು. ಪರಶುರಾಮನ ಭಯದಿಂದ ಕ್ಷತ್ರಿಯರು ಸ್ವವರ್ಣವಿಹಿತವಾದ ಕರ್ಮಗಳನ್ನು ತ್ಯಾಗಮಾಡಿದರು. ಅನೇಕವರ್ಷ ಗಳವರೆಗೆ ಬ್ರಾಹ್ಮಣರನ್ನೇ ಕಾಣದಿದ್ದ ಅವರು ಕರ್ಮಭ್ರಷ್ಟರಾಗಿ ಶೂದ್ರತ್ವವನ್ನೇ ಹೊಂದಿದರು. ಈ ರೀತಿಯಲ್ಲಿ ಕ್ಷತ್ರಿಯರು ದ್ರವಿಡ, ಅಭೀರ, ಪುಂಡ್ರ ಮತ್ತು ಶಬರರ ಸಹವಾಸದಲ್ಲಿದ್ದು ಕ್ಷತ್ರಧರ್ಮಪರಿತ್ಯಾಗದಿಂದ ಶೂದ್ರರೇ ಆದರು. ಕ್ಷತ್ರಿಯವೀರರೆಲ್ಲರೂ ಹೀಗೆ ಪರಶುರಾಮನಿಂದ ಪುನಃ ಪುನಃ ಹತರಾಗಲಾಗಿ, ಬ್ರಾಹ್ಮಣರು ಕ್ಷತ್ರಿಯಸ್ತ್ರೀಯರಲ್ಲಿ ನಿಯೋಗದ ವಿಧಿಗೆ ಅನುಸಾರವಾಗಿ ಪುತ್ರರನ್ನು ಪಡೆದರು. ಹಾಗೆ ಹುಟ್ಟಿದ ಕ್ಷತ್ರಿಯರನ್ನೂ ಪರಶು ರಾಮನು ಸಂಹರಿಸಿದನು. ಹೀಗೆ ಪರಶುರಾಮನು ಭೂಮಂಡಲದಲ್ಲಿದ್ದ ಎಲ್ಲ ಕ್ಷತ್ರಿಯರನ್ನೂ ಇಪ್ಪತ್ತೊಂದು ಬಾರಿ ಸಂಹರಿಸಿದನಂತರ ದಿವ್ಯವಾದ ಮಧುರವಾದ ಅಶರೀರವಾಣಿಯು ಎಲ್ಲ ಜನರೂ ಕೇಳುವಂತೆ ಹೇಳಿತು:

ರಾಮ ರಾಮ ನಿವರ್ತಸ್ವ ಕಂ ಗುಣಂ ತಾತ ಪಶ್ಯಸಿ ।
ಕ್ಷತ್ರಬನ್ಧೂನಿಮಾನ್ಪ್ರಾಣೈರ್ವಿಪ್ರಯೋಜ್ಯ ಪುನಃ ಪುನಃ ॥೧೯॥

“ಪರಶುರಾಮನೇ! ಇಂತಹ ಭಯಂಕರವಾದ ಹನನಕಾರ್ಯದಿಂದ ಪ್ರತಿನಿವೃತ್ತನಾಗು. ಈ ಕ್ಷತ್ರಬಂಧುಗಳನ್ನು ಪುನಃ ಪುನಃ ಸಂಹರಿಸುವುದರಿಂದ ಯಾವ ಪ್ರಯೋಜನವನ್ನು ಕಾಣುತ್ತಿರುವೆ?”

ಅಶರೀರವಾಣಿಯು ಹೀಗೆ ಹೇಳಿದನಂತರ ಮಹಾಭಾಗ್ಯಶಾಲಿಗಳಾದ ಪರಶುರಾಮನ ಪಿತಾಮಹರಾದ ಋಚೀಕನೇ ಮುಂತಾದ ಮಹರ್ಷಿಗಳು ಕೂಡ ಮಹಾತ್ಮನಾದ ಪರಶುರಾಮನಿಗೆ ಕ್ಷತ್ರಿಯರ ಹನನಕ್ರಿಯೆಯಿಂದ ವಿಮುಖನಾಗುವಂತೆ ಹೇಳಿದರು. ಜಮದಗ್ನಿಯ ವಧೆಯಿಂದ ಅತ್ಯಂತ ಕುಪಿತನಾಗಿದ್ದ ಪರಶುರಾಮನು ಪಿತಾಮಹರನ್ನು ಕುರಿತು ಹೇಳಿದನು:



"ಪಿತಾಮಹರೇ! ನೀವು ನನ್ನನ್ನು ದುಷ್ಟರಾದ ಕ್ಷತ್ರಿಯರನ್ನು ಸಂಹರಿಸುವ ಕಾರ್ಯದಿಂದ ವಿಮುಖನಾಗೆಂದು ಹೇಳುವುದು ಯುಕ್ತವಲ್ಲ."

ಪಿತೃಗಳು ಪುನಃ ಹೇಳುತ್ತಾರೆ:

ನಾರ್ಹಸೇ ಕ್ಷತ್ರಬನ್ಧೂಂಸ್ತ್ವಂ ನಿಹನ್ತುಂ ಜಯತಾಂ ವರ ।
ನೇಹ ಯುಕ್ತಂ ತ್ವಯಾ ಹನ್ತುಂ ಬ್ರಾಹ್ಮಣೇನ ಸತಾ ನೃಪಾನ್ ॥

"ವಿಜಯಿಗಳಲ್ಲಿ ಶ್ರೇಷ್ಠನಾದವನೇ! ಕ್ಷತ್ರಬಂಧುಗಳನ್ನು ಸಂಹರಿಸುತ್ತಲೇ ಇರುವುದು ಖಂಡಿತವಾಗಿಯೂ ನಿನಗೆ ಯೋಗ್ಯವಾಗಿ ಕಾಣುವುದಿಲ್ಲ. ನೀನು ಬ್ರಾಹ್ಮಣನಾಗಿದ್ದುಕೊಂಡು (ಲೋಕರಕ್ಷಕರಾದ) ರಾಜರನ್ನು ಸಂಹರಿಸುವುದು ಖಂಡಿತವಾಗಿಯೂ ಯುಕ್ತವಲ್ಲ."

೨೯ನೆಯ ಅಧ್ಯಾಯವು ಮುಗಿಯಿತು.

೩೦ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಅಲರ್ಕನ ಉದಾಹರಣೆಯನ್ನು ಹೇಳಿ ಪಿತಾಮಹರು ಪರಶುರಾಮನನ್ನು ಸಮಾಧಾನಗೊಳಿಸಿದುದು: ಪರಶುರಾಮನು ತಪಸ್ಸಿನ ಮೂಲಕವಾಗಿ ಸಿದ್ಧಿಯನ್ನು ಪಡೆದುದು.

ಪಿತೃಗಳು ಮುಂದುವರಿದು ಪರಶುರಾಮನಿಗೆ ಹೇಳುತ್ತಾರೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ಶ್ರುತ್ವಾ ಚ ತತ್ತಥಾ ಕಾರ್ಯಂ ಭವತಾ ದ್ವಿಜಸತ್ತಮ ॥೧॥

"ದ್ವಿಜಶ್ರೇಷ್ಠನೇ! ಈ ವಿಷಯದಲ್ಲಿ ಪುರಾತನವಾದ ಇತಿಹಾಸವೊಂದನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನು ಕೇಳಿ ಅದರಂತೆಯೇ ನೀನು ಆಚರಿಸಬೇಕು.

ಹಿಂದೆ ಮಹಾತ್ಮನಾದ ಅಲರ್ಕನೆಂಬ ರಾಜರ್ಷಿಯಿದ್ದನು. ಅವನು ಮಹಾತಪಸ್ವಿಯೂ, ಧರ್ಮಜ್ಞನೂ, ಸತ್ಯವಾದಿಯೂ, ದೃಢಪ್ರತಿಜ್ಞನೂ ಆಗಿದ್ದನು. ಅವನು ತನ್ನ ಧನುಸ್ಸಿನ ಸಹಾಯದಿಂದ ಈ ಭೂಮಂಡಲ ವನ್ನೇ ಜಯಿಸಿ ಸುದುಷ್ಕರವಾದ ಕರ್ಮವನ್ನು ಮಾಡಿ ಅನಂತರ ಮನ ಸ್ಸನ್ನು ಸೂಕ್ಷ್ಮತತ್ತ್ವದಲ್ಲಿ ಸ್ಥಿರೀಕರಿಸಿದನು. ಮಹಾಮತಿಯೇ! ಯುದ್ಧ ಮಾಡಿ ರಾಜ್ಯಗಳನ್ನು ಕಟ್ಟುವ ಮಹಾಮಹಾಕರ್ಮಗಳೆಲ್ಲವನ್ನೂ ಬಿಟ್ಟು

ಸೂಕ್ಷ್ಮತತ್ತ್ವವನ್ನರಸುತ್ತಾ ವೃಕ್ಷದ ಬುಡದಲ್ಲಿ ಕುಳಿತಿದ್ದ ಅಲರ್ಕನ ಮನಸ್ಸಿನಲ್ಲಿ ಚಿಂತೆಯೊಂದು ಮೂಡಿತು.

ಮನಸೋ ಮೇ ಬಲಂ ಜಾತಂ ಮನೋ ಜಿತ್ವಾ ಧ್ರುವೋ ಜಯಃ।
ಅನ್ಯತ್ರ ಬಾಣಾನ್ಧಾಸ್ಯಾಮಿ ಶತ್ರುಭಿಃ ಪರಿವಾರಿತಃ ॥೫॥

"ನನ್ನ ಮನಸ್ಸಿಗೆ ಬಹಳ ಬಲವು ಬಂದುಬಿಟ್ಟಿದೆ. ಅದು ಎಲ್ಲಕ್ಕಿಂತಲೂ ಪ್ರಬಲವಾಗಿದೆ. ಅಂತಹ ಮನಸ್ಸನ್ನು ಜಯಿಸಿಬಿಟ್ಟರೆ ನನಗೆ ಶಾಶ್ವತವಾದ ಜಯವು ಲಭಿಸುತ್ತದೆ. ನಾನೀಗ ಇಂದ್ರಿಯರೂಪಿಗಳಾದ ಶತ್ರುಗಳಿಂದ ಸುತ್ತುವರಿಯಲ್ಪಟ್ಟಿದ್ದೇನೆ. ಆದುದರಿಂದ ಹೊರಗಿನ ಶತ್ರುಗಳೊಡನೆ ಯುದ್ಧಮಾಡಲು ಹೋಗದೇ ನನ್ನ ಅಂತರಂಗದಲ್ಲಿರುವ ಶತ್ರುಗಳ ಕಡೆಗೇ ಬಾಣಗಳ ಗುರಿಯನ್ನಿಡುತ್ತೇನೆ.

ಯದಿದಂ ಚಾಪಲಾತ್ಕರ್ಮ ಸರ್ವಾನ್ಮರ್ತ್ಯಾಂಶ್ಚಿಕೀರ್ಷತಿ ।
ಮನಃ ಪ್ರತಿ ಸುತೀಕ್ಷ್ಣಾಗ್ರಾನಹಂ ಮೋಕ್ಷ್ಯಾಮಿ ಸಾಯಕಾನ್ ॥೬॥

ಈ ಮನಸ್ಸು ಚಂಚಲತೆಯ ಕಾರಣದಿಂದ ಎಲ್ಲ ಮನುಷ್ಯರಿಂದಲೂ ಬಗೆ-ಬಗೆಯ ಕರ್ಮಗಳನ್ನು ಮಾಡಿಸುತ್ತಲೇ ಇರುತ್ತದೆ. ಆದುದರಿಂದ ಇದನ್ನು ಜಯಿಸಿ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಆದುದರಿಂದ ನಾನೀಗ ಮನಸ್ಸಿನ ಮೇಲೆಯೇ ಗುರಿಯಿಟ್ಟು ಸುತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತೇನೆ."

ಆಗ ಮನಸ್ಸು ಹೇಳುತ್ತದೆ:

ನೇಮೇ ಬಾಣಾಸ್ತರಿಷ್ಯನ್ತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯನ್ತಿ ಭಿನ್ನಮರ್ಮಾ ಮರಿಷ್ಯಸಿ ।
ಅನ್ಯಾನ್ಬಾಣಾನ್ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೭॥

"ಅಲರ್ಕನೇ! ನಿನ್ನ ಈ ಬಾಣಗಳು ಯಾವುದೇ ರೀತಿಯಿಂದಲೂ ಗುರಿಯನ್ನು (ನನ್ನನ್ನು) ಮುಟ್ಟಲಾರವು. ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಮರ್ಮಸ್ಥಳವು ಭಗ್ನವಾದೊಡನೆಯೇ ನೀನೇ ಮರಣ

ಹೊಂದುವೆ. ಆದುದರಿಂದ ನನ್ನನ್ನು ವಿನಾಶಗೊಳಿಸಲು ಸಮರ್ಥವಾದ ಬೇರೆ ಯಾವುದಾದರೂ ಬಾಣಗಳಿದ್ದರೆ ಪರಿಶೀಲಿಸು."

ಮನಸ್ಸು ಹೇಳಿದ ಆ ಮಾತನ್ನು ಕೇಳಿ ಸ್ವಲ್ಪ ಹೊತ್ತು ಯೋಚಿಸುತ್ತಿದ್ದ ಅಲರ್ಕನು ಹೇಳಿದನು:

ಆಘ್ರಾಯ ಸುಬಹೂನ್ಗಂಧಾಂಸ್ತಾನೇವ ಪ್ರತಿಗೃಧ್ಯತಿ ।
ತಸ್ಮಾದ್ಘ್ರಾಣಂ ಪ್ರತಿ ಶರಾನ್ಪ್ರತಿಮೋಕ್ಷ್ಯಾಮ್ಯಹಂ ಶಿತಾನ್ ॥೯॥

"ನನ್ನ ಈ ಮೂಗು ಅನೇಕವಿಧವಾದ ಸುಗಂಧದ್ರವ್ಯಗಳನ್ನು ಆಘ್ರಾಣಿಸಿದರೂ ಮತ್ತೆ ಮತ್ತೆ ಹೊಸ-ಹೊಸ ವಾಸನೆಗಳನ್ನು ಆಘ್ರಾಣಿಸಲು ಬಯಸುತ್ತಲೇ ಇರುತ್ತದೆ. ಆದುದರಿಂದ ನಾನೀಗ ಮೂಗಿಗೇ ಗುರಿಯಿಟ್ಟು ನಿಶಿತವಾದ ಬಾಣಗಳನ್ನು ಬಿಡುತ್ತೇನೆ."

ಅಲರ್ಕನ ಮಾತನ್ನು ಕೇಳಿ ಘ್ರಾಣೇಂದ್ರಿಯವು (ಮೂಗು) ಹೇಳುತ್ತದೆ:

ನೇಮೇ ಬಾಣಾಸ್ತರಿಷ್ಯನ್ತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯನ್ತಿ ಭಿನ್ನಮರ್ಮಾ ಮರಿಷ್ಯಸಿ ।
ಅನ್ಯಾನ್ಬಾಣಾನ್ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೧೦॥

"ಅಲರ್ಕನೇ! ನೀನು ಬಿಡಲಿರುವ ಈ ಬಾಣಗಳು ಯಾವುದೇ ರೀತಿಯಿಂದಲೂ ಗುರಿಯನ್ನು (ನನ್ನನ್ನು) ಮುಟ್ಟಲಾರವು. ನಿನ್ನ ಮರ್ಮಸ್ಥಳವನ್ನೇ ಅವು ಭೇದಿಸುತ್ತವೆ. ಮರ್ಮಸ್ಥಳವು ಭಗ್ನವಾದೊಡನೆಯೇ ನೀನೇ ಸಾಯುವೆ. ಆದುದರಿಂದ ನನ್ನನ್ನು ವಿನಾಶಗೊಳಿಸಲು ಸಮರ್ಥವಾದ ಬೇರೆ ಯಾವುದಾದರೂ ಬಾಣಗಳಿದ್ದರೆ ಪರಿಶೀಲಿಸು."

ಮೂಗು ಹೇಳಿದ ಆ ಮಾತನ್ನು ಕೇಳಿ ಸ್ವಲ್ಪ ಹೊತ್ತು ಯೋಚಿಸುತ್ತಿದ್ದ ಅಲರ್ಕನು ಹೇಳಿದನು:

ಇಯಂ ಸ್ವಾದೂನ್ರಸಾನ್ಭುಕ್ತ್ವಾ ತಾನೇವ ಪ್ರತಿಗೃಧ್ಯತಿ ।
ತಸ್ಮಾಜ್ಜಿಹ್ವಾಂ ಪ್ರತಿ ಶರಾನ್ಪ್ರತಿಮೋಕ್ಷ್ಯಾಮ್ಯಹಂ ಶಿತಾನ್ ॥೧೨॥

"ಈ ನನ್ನ ನಾಲಿಗೆಯು ರುಚಿಕರವಾದ ರಸಗಳನ್ನು ಸವಿಯುತ್ತಿದ್ದರೂ

ಪುನಃ ಪುನಃ ಅದು ಅಂತಹ ರಸಗಳನ್ನೇ ಬಯಸುತ್ತಿರುತ್ತದೆ. ಆದುದರಿಂದ ನಾನೀಗ ನನ್ನ ನಾಲಿಗೆಯನ್ನೇ ಅನುಲಕ್ಷಿಸಿ ಬಾಣಗಳನ್ನು ಪ್ರಯೋಗಿಸುತ್ತೇನೆ."

ಅಲರ್ಕನ ಮಾತನ್ನು ಕೇಳಿ ನಾಲಿಗೆಯು ಹೇಳುತ್ತದೆ:

"ಅಲರ್ಕನೇ! ನೀನು ಬಿಡಲಿರುವ ಈ ಬಾಣಗಳು ಯಾವುದೇ ಕಾರಣದಿಂದಲೂ ಗುರಿಯನ್ನು (ನನ್ನನ್ನು) ಮುಟ್ಟಲಾರವು. ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಮರ್ಮಸ್ಥಳವು ಭಗ್ನವಾದೊಡನೆಯೇ ನೀನೇ ಸಾಯುವೆ. ಆದುದರಿಂದ ನನ್ನನ್ನು ವಿನಾಶಗೊಳಿಸಲು ಸಮರ್ಥವಾದ ಬೇರೆ ಯಾವುದಾದರೂ ಬಾಣಗಳಿದ್ದರೆ ಪರಿಶೀಲಿಸು."

ನಾಲಿಗೆಯು ಹೇಳಿದ ಮಾತನ್ನು ಕೇಳಿ ಅಲರ್ಕನು ಸ್ವಲ್ಪಹೊತ್ತು ಯೋಚಿಸಿ ಬಳಿಕ ಹೇಳಿದನು:

ಸ್ಪೃಷ್ಟ್ವಾ ತ್ವಗ್ವಿವಿಧಾನ್ಸ್ಪರ್ಶಾಂಸ್ತಾನೇವ ಪ್ರತಿಗೃಧ್ಯತಿ ।
ತಸ್ಮಾತ್ತ್ವಚಂ ಪಾಟಯಿಷ್ಯೇ ವಿವಿಧೈಃ ಕಙ್ಕಪತ್ರಿಭಿಃ ॥೧೫॥

"ನನ್ನ ಈ ತ್ವಚೆಯು ಬಗೆ-ಬಗೆಯ ಸುಖಕರವಾದ ವಸ್ತುಗಳನ್ನು ಮುಟ್ಟುತ್ತಾ ಸ್ಪರ್ಶಸುಖವನ್ನು ಅನುಭವಿಸುತ್ತಿದ್ದರೂ ತೃಪ್ತಿಯನ್ನೇ ಹೊಂದದೇ ಪುನಃ ಪುನಃ ಸ್ಪರ್ಶಸುಖವನ್ನು ಬಯಸುತ್ತಲೇ ಇರುತ್ತದೆ. ಆದುದರಿಂದ ನಾನೀಗ ರಣಹದ್ದುಗಳ ರೆಕ್ಕೆಗಳನ್ನು ಹೊಂದಿರುವ ಬಾಣಗಳಿಂದ ಈ ತ್ವಚೆಯನ್ನೇ ಸೀಳಿಬಿಡುತ್ತೇನೆ."

ಅಲರ್ಕನ ಮಾತನ್ನು ಕೇಳಿ ನಸುನಗುತ್ತಾ ತ್ವಚೆಯು ಹೇಳುತ್ತದೆ:

"ಅಲರ್ಕನೇ! ನಿನ್ನ ಈ ಬಾಣಗಳು ಯಾವುದೇ ಕಾರಣದಿಂದಲೂ ಗುರಿಯನ್ನು (ನನ್ನನ್ನು) ಮುಟ್ಟಲಾರವು. ಅವು ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಮರ್ಮಸ್ಥಳವು ಭಗ್ನವಾದೊಡನೆಯೇ ನೀನೇ ಸಾಯುವೆ. ಆದುದರಿಂದ ನನ್ನನ್ನು ವಿನಾಶಗೊಳಿಸಲು ಸಮರ್ಥವಾದ ಬೇರೆ ಯಾವುದಾದರೂ ಬಾಣಗಳಿರುವುದಾದರೆ ಪರಿಶೀಲಿಸು."

ತ್ವಚೆಯ ಮಾತನ್ನು ಕೇಳಿ ಅಲರ್ಕನು ಸ್ವಲ್ಪಹೊತ್ತು ಯೋಚಿಸಿ ಬಳಿಕ ಹೇಳಿದನು:

ಶ್ರುತ್ವಾ ತು ವಿವಿಧಾಞ್ಶಬ್ದಾಂಸ್ತಾನೇವ ಪ್ರತಿಗೃಧ್ಯತಿ ।
ತಸ್ಮಾಚ್ಛ್ರೋತ್ರಂ ಪ್ರತಿ ಶರಾನ್ಪ್ರತಿಮೋಕ್ಷ್ಯಾಮ್ಯಹಂ ಶಿತಾನ್ ॥೧೯॥

"ಈ ನನ್ನ ಕಿವಿಯು ವಿಧ-ವಿಧವಾದ ಶಬ್ದಗಳನ್ನು ಕೇಳುತ್ತಿದ್ದರೂ ಪುನಃ ಪುನಃ ನಾನಾಬಗೆಯ ಶಬ್ದಗಳನ್ನು ಕೇಳುತ್ತಲೇ ಇರಬೇಕೆಂದು ಆಸೆಪಡುತ್ತಿರುತ್ತದೆ. ಆದುದರಿಂದ ನಾನು ಈ ಕಿವಿಗೇ ಗುರಿಯಿಟ್ಟು ನಿಶಿತವಾದ ಬಾಣಗಳನ್ನು ಪ್ರಯೋಗಿಸುತ್ತೇನೆ."

ಅಲರ್ಕನ ಮಾತನ್ನು ಕೇಳಿ ಕಿವಿಯು ಹೇಳುತ್ತದೆ:

"ಅಲರ್ಕನೇ! ನಿನ್ನ ಈ ಬಾಣಗಳು ಯಾವುದೇ ಕಾರಣದಿಂದಲೂ ಗುರಿಯನ್ನು (ನನ್ನನ್ನು) ಮುಟ್ಟಲಾರವು. ಅವು ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಇದರ ಪರಿಣಾಮವಾಗಿ ಒಡನೆಯೇ ನೀನು ಪ್ರಾಣಗಳನ್ನು ತೊರೆಯುವೆ. ಆದುದರಿಂದ ನನ್ನನ್ನು ವಿನಾಶಗೊಳಿಸಲು ಸಮರ್ಥವಾದ ಬೇರೆ ಯಾವುದಾದರೂ ಬಾಣಗಳಿರುವುದಾದರೆ ಪರಿಶೀಲಿಸು."

ಕಿವಿಯು ಹೇಳಿದ ಮಾತನ್ನು ಕೇಳಿ ಅಲರ್ಕನು ಸ್ವಲ್ಪಹೊತ್ತು ಯೋಚಿಸುತ್ತಿದ್ದು ಬಳಿಕ ಹೇಳಿದನು:

ದೃಷ್ಟ್ವಾ ರೂಪಾಣಿ ಬಹುಶಸ್ತಾನೇವ ಪ್ರತಿಗೃಧ್ಯತಿ ।
ತಸ್ಮಾಚ್ಚಕ್ಷುರ್ಹನಿಷ್ಯಾಮಿ ನಿಶಿತೈಃ ಸಾಯಕೈರಹಮ್ ॥೨೦॥

"ಅನೇಕವಿಧವಾದ ರೂಪಗಳನ್ನು ಹಲವಾರು ಬಾರಿ ನೋಡಿದರೂ, ಈ ನನ್ನ ಕಣ್ಣು ಪುನಃ ಪುನಃ ನಾನಾವಿಧವಾದ ರೂಪಗಳನ್ನೂ ನೋಡುತ್ತಿರಬೇಕೆಂದು ಬಯಸುತ್ತದೆ. ಆದುದರಿಂದ ನಾನು ನನ್ನ ತೀಕ್ಷ್ಣವಾದ ಬಾಣಗಳಿಂದ ಕಣ್ಣನ್ನೇ ಸಂಹರಿಸಿಬಿಡುತ್ತೇನೆ."

ಅಲರ್ಕನ ಮಾತನ್ನು ಕೇಳಿ ಕಣ್ಣು ಹೇಳುತ್ತದೆ:

"ಅಲರ್ಕನೇ! ನಿನ್ನ ಈ ಬಾಣಗಳು ಯಾವುದೇ ಕಾರಣದಿಂದಲೂ ಗುರಿಯನ್ನು (ನನ್ನನ್ನು) ಮುಟ್ಟುವುದಿಲ್ಲ. ಅವು ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಮರ್ಮಸ್ಥಳವು ಭಗ್ನವಾದೊಡನೆಯೇ ನೀನೇ ಸಾಯುವೆ.

ಆದುದರಿಂದ ನನ್ನನ್ನು ಕೊಲ್ಲಲು ಸಮರ್ಥವಾದ ಬೇರೆ ಯಾವುದಾದರೂ ಬಾಣಗಳಿರುವುದಾದರೆ ಪರಿಶೀಲಿಸು.”

ಕಣ್ಣು ಹೇಳಿದ ಮಾತನ್ನು ಕೇಳಿ ಅಲರ್ಕನು ಸ್ವಲ್ಪಹೊತ್ತು ಚಿಂತಿಸುತ್ತಿದ್ದು ಬಳಿಕ ಹೇಳಿದನು:

ಇಯಂ ನಿಷ್ಠಾ ಬಹುವಿಧಾ ಪ್ರಜ್ಞಯಾ ತ್ವಧ್ಯವಸ್ಯತಿ ।
ತಸ್ಮಾದ್ಬುದ್ಧಿಂ ಪ್ರತಿಶರಾನ್ಪ್ರತಿಮೋಕ್ಷ್ಯಾಮ್ಯಹಂ ಶಿತಾನ್ ॥೨೪॥

“ಈ ಬುದ್ಧಿಯು ತನ್ನ ಜ್ಞಾನಶಕ್ತಿಯಿಂದ ಅನೇಕಪ್ರಕಾರವಾದ ನಿಶ್ಚಯಗಳನ್ನು ಮಾಡುತ್ತಲೇ ಇರುತ್ತದೆ. ಆದುದರಿಂದ ನಾನೀಗ ಆ ಬುದ್ಧಿಯನ್ನೇ ಕುರಿತು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತೇನೆ. ”

ಅಲರ್ಕನ ಮಾತುಗಳನ್ನು ಕೇಳಿ ಬುದ್ಧಿಯು ಹೇಳುತ್ತದೆ:

“ಅಲರ್ಕನೇ! ಈ ನಿನ್ನ ಬಾಣಗಳು ಯಾವುದೇ ಕಾರಣದಿಂದಲೂ ಗುರಿಯನ್ನು (ನನ್ನನ್ನು) ಮುಟ್ಟಲಾರವು. ಅವು ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಮರ್ಮಸ್ಥಳವು ಭಗ್ನವಾಗುತ್ತಲೇ ನೀನು ಮರಣಹೊಂದುವೆ. ಆದುದರಿಂದ ನೀನು ನನ್ನನ್ನು ವಿನಾಶಗೊಳಿಸಬಹುದಾದ ಬೇರೆ ಯಾವುದಾದರೂ ಬಾಣಗಳಿರುವುದಾದರೆ ಪರಿಶೀಲಿಸು.”

ಬಳಿಕ ಅಲರ್ಕನು ಪಂಚೇಂದ್ರಿಯಗಳನ್ನೂ, ಬುದ್ಧಿಯನ್ನೂ ಮತ್ತು ಮನಸ್ಸನ್ನೂ ಕೊಲ್ಲಲು ಸಮರ್ಥವಾದ ಬಾಣಗಳ ಪ್ರಾಪ್ತಿಗಾಗಿ ಅದೇ ವೃಕ್ಷದ ಬುಡದಲ್ಲಿಯೇ ಕುಳಿತು ಘೋರವಾದ ತಪಸ್ಸನ್ನು ಮಾಡಿದನು. ಆದರೆ ಮನಸ್ಸು, ಬುದ್ಧಿ ಮತ್ತು ಪಂಚೇಂದ್ರಿಯಗಳಲ್ಲಿ ನೇರವಾಗಿ ಪ್ರವೇಶಿಸಿ ಅವುಗಳನ್ನು ವಿನಾಶಗೊಳಿಸುವಂತಹ ಬಾಣಗಳು ಅವನಿಗೆ ದೊರೆಯಲೇ ಇಲ್ಲ.

ದ್ವಿಜಶ್ರೇಷ್ಠನೇ! ಪರಶುರಾಮ! ಅನಂತರ ಸಮರ್ಥನಾದ ಆ ರಾಜನು ಏಕಾಗ್ರಚಿತ್ತನಾಗಿ ಚಿಂತಿಸತೊಡಗಿದನು. ಬಹಳ ಕಾಲದವರೆಗೆ ಯೋಚಿಸಿದನಂತರ ಬುದ್ಧಿವಂತರಲ್ಲಿ ಶ್ರೇಷ್ಠನಾದ ಅಲರ್ಕನಿಗೆ ಶ್ರೇಯಃಪ್ರಾಪ್ತಿಗೆ ಯೋಗಕ್ಕಿಂತಲೂ ಮಿಗಿಲಾದ ಬೇರೆ ಯಾವ ಸಾಧನವೂ ಕಂಡುಬರಲಿಲ್ಲ. ಅನಂತರ ಅವನು ಮನಸ್ಸನ್ನು ಏಕಾಗ್ರಗೊಳಿಸಿ ಆಸನದಲ್ಲಿ

ಸ್ಥಿರವಾಗಿ ಕುಳಿತು ಧ್ಯಾನಯೋಗವನ್ನೇ ಆಶ್ರಯಿಸಿದನು. ಧ್ಯಾನಯೋಗ ರೂಪವಾದ ಒಂದೇ ಒಂದು ಬಾಣದಿಂದ ವೀರ್ಯವಂತನಾದ ಆ ರಾಜನು ಎಲ್ಲ ಇಂದ್ರಿಯಗಳನ್ನೂ ವಿನಾಶಗೊಳಿಸಿದನು. ಬಳಿಕ ಧ್ಯಾನಯೋಗದ ಮೂಲಕವಾಗಿಯೇ ಮನಸ್ಸನ್ನು ಆತ್ಮನಲ್ಲಿ ಲೀನಗೊಳಿಸಿ ಪರಾಸಿದ್ಧಿಯನ್ನೂ ಪಡೆದುಕೊಂಡನು. ಧ್ಯಾನಯೋಗವೊಂದರಿಂದಲೇ ಎಲ್ಲ ಇಂದ್ರಿಯಗಳೂ ಪರಾಜಿತವಾದುದನ್ನು ಕಂಡು ಅಲರ್ಕನು ವಿಸ್ಮಿತನಾಗಿ ಈ ಶ್ಲೋಕವನ್ನು ಹೇಳಿದನು:

ಅಹೋ ಕಷ್ಟಂ ಯದಸ್ಮಾಭಿಃ ಸರ್ವಂ ಬಾಹ್ಯಮನುಷ್ಠಿತಮ್ ।

ಭೋಗತೃಷ್ಣಾಸಮಾಯುಕ್ತೈಃ ಪೂರ್ವಂ ರಾಜ್ಯಮುಪಾಸಿತಮ್ ।
ಇತಿ ಪಶ್ಚಾನ್ಮಯಾ ಜ್ಞಾತಂ ಯೋಗಾನ್ನಾಸ್ತಿ ಪರಂ ಸುಖಮ್ ॥೩೧॥

"ಕಷ್ಟ; ಕಷ್ಟ! ನಾವು ಇದುವರೆಗೆ ಬಾಹ್ಯಕರ್ಮಗಳಲ್ಲಿಯೇ ಆಸಕ್ತಿಯನ್ನು ಹೊಂದಿದ್ದೆವು. ಭೋಗದ ತೃಷ್ಣೆಯಿಂದ ಕೂಡಿದ್ದ ನಾವು ರಾಜ್ಯವನ್ನೇ ಉಪಾಸಿಸುತ್ತಿದ್ದೆವು. (ಇಂದ್ರಿಯಗಳ ತೃಪ್ತಿಗಾಗಿ ರಾಜ್ಯವನ್ನೇ ಆಶ್ರಯಿಸಿದ್ದೆವು.) ಪರಮಸುಖಕ್ಕೆ ಧ್ಯಾನಯೋಗಕ್ಕಿಂತಲೂ ಉತ್ತಮವಾದ ಸಾಧನವು ಬೇರೆ ಯಾವುದೂ ಇಲ್ಲವೆಂಬುದು ಬಹಳ ಕಾಲಾನಂತರ ನನಗೆ ತಿಳಿಯಿತು."

ಪರಶುರಾಮ! ಈ ವಿಷಯವನ್ನು ನೀನು ಚೆನ್ನಾಗಿ ತಿಳಿದುಕೊ. ಇನ್ನು ಮುಂದೆ ಕ್ಷತ್ರಿಯರನ್ನು ಸಂಹರಿಸಬೇಡ. ಘೋರವಾದ ತಪಸ್ಸನ್ನು ಆಚರಿಸು. ಅದರಿಂದ ನೀನು ಶ್ರೇಯಸ್ಸನ್ನು ಹೊಂದುವೆ."

ಬ್ರಾಹ್ಮಣನು ಬ್ರಾಹ್ಮಣಿಗೆ ಹೇಳುತ್ತಾನೆ:

ಸೌಭಾಗ್ಯವತಿಯೇ! ಋಚೀಕನೇ ಮೊದಲಾದ ಪಿತಾಮಹರು ಹೀಗೆ ಹೇಳಲಾಗಿ ಮಹಾಸೌಭಾಗ್ಯಶಾಲಿಯಾದ, ಜಮದಗ್ನಿಯ ಮಗನಾದ ಪರಶುರಾಮನು ಘೋರವಾದ ತಪಸ್ಸನ್ನು ಮಾಡಿ ಅದರ ಫಲವಾಗಿ ಸಾಮಾನ್ಯರಿಂದ ಹೊಂದಲು ದುಃಸಾಧ್ಯವಾದ ಸಿದ್ಧಿಯನ್ನು ಪಡೆದನು."

೩೦ನೆಯ ಅಧ್ಯಾಯವು ಮುಗಿಯಿತು.

ಅಂಬರೀಷರಾಜನು ಹಾಡಿದ ಆಧ್ಯಾತ್ಮಿಕ ಸ್ವಾರಾಜ್ಯಗೀತೆ

ಬ್ರಾಹ್ಮಣನು ಹೇಳುತ್ತಾನೆ:

ತ್ರಯೋ ವೈ ರಿಪವೋ ಲೋಕೇ ನವಧಾ ಗುಣತಃ ಸ್ಮೃತಾಃ ।
ಪ್ರಹರ್ಷಃ ಪ್ರೀತಿರಾನನ್ದಸ್ತ್ರಯಸ್ತೇ ಸಾತ್ತ್ವಿಕಾ ಗುಣಾಃ ॥೧॥

ತೃಷ್ಣಾ ಕ್ರೋಧೋಽಭಿಸಂರಮ್ಭೋ ರಾಜಸಾಸ್ತೇ ಗುಣಾಃ ಸ್ಮೃತಾಃ ।
ಶ್ರಮಸ್ತನ್ದ್ರಾ ಚ ಮೋಹಶ್ಚ ತ್ರಯಸ್ತೇ ತಾಮಸಾ ಗುಣಾಃ ॥೨॥

“ಶೋಭನೆಯೇ! ಪ್ರಪಂಚದಲ್ಲಿ ಮನುಷ್ಯರಿಗೆ ಸತ್ತ್ವ-ರಜಸ್ಸು-ತಮಸ್ಸುಗಳೆಂಬ ಮೂವರು ಶತ್ರುಗಳಿದ್ದಾರೆ. ಗುಣಗಳ ಭೇದದಿಂದ ಆ ಮೂರೂ ಒಂಬತ್ತು ಪ್ರಕಾರವಾಗಿ ವಿಂಗಡಿಸಲ್ಪಟ್ಟಿವೆ. ಪ್ರಹರ್ಷ, ಪ್ರೀತಿ, ಆನಂದ–ಈ ಮೂರು ಗುಣಗಳೂ ಸತ್ತ್ವಗುಣದ ಪ್ರಭೇದಗಳು. ತೃಷ್ಣೆ, ಕ್ರೋಧ ಮತ್ತು ದ್ವೇಷಭಾವ–ಈ ಮೂರು ರಾಜಸಗುಣದ ಪ್ರಭೇದಗಳು. ಶ್ರಮ, ಆಲಸ್ಯ ಮತ್ತು ಮೋಹ–ಈ ಮೂರು ತಾಮಸಗುಣದ ಪ್ರಭೇದಗಳು.

ಏತಾನ್ನಿಕೃತ್ಯ ಧೃತಿಮಾನ್ಬಾಣಸಂಘೈರತನ್ದ್ರಿತಃ ।
ಜೇತುಂ ಪರಾನುತ್ಸಹತೇ ಪ್ರಶಾನ್ತಾತ್ಮಾ ಜಿತೇನ್ದ್ರಿಯಃ ॥೩॥

ಶಾಂತಚಿತ್ತನಾದ, ಜಿತೇಂದ್ರಿಯನಾದ, ಆಲಸ್ಯಹೀನನಾದ ಮತ್ತು ಧೈರ್ಯವಂತನಾದ ಪುರುಷನು ಶಮ-ದಮಾದಿಗಳೆಂಬ ಬಾಣಗಳ ಮೂಲಕವಾಗಿ ಸತ್ತ್ವಾದಿಗುಣಗಳನ್ನೂ ಮತ್ತು ಅವುಗಳ ಪ್ರಭೇದಗಳನ್ನೂ ಕತ್ತರಿಸಿದರೆ ಇತರ ಶತ್ರುಗಳನ್ನು ಗೆಲ್ಲಬಲ್ಲನು.

ಈ ವಿಷಯದಲ್ಲಿ ಹಿಂದಿನ ಕಲ್ಪವನ್ನು ತಿಳಿದ ಜನರು ಕೆಲವು ಶ್ಲೋಕಗಳನ್ನು ಹೇಳುತ್ತಾರೆ. ಹಿಂದೆ ಶಾಂತಿಪರಾಯಣನಾದ ಅಂಬರೀಷರಾಜನು ಗಾನಮಾಡಿದ ಶ್ಲೋಕಗಳಿವು.

ಲೋಕದಲ್ಲಿ ಅಪರಾಧಗಳು ಹೆಚ್ಚುತ್ತಿರಲಾಗಿ, ಸತ್ಪುರುಷರು ಪೀಡಿಸಲ್ಪಡುತ್ತಿರಲಾಗಿ, ಮಹಾಯಶೋವಂತನಾದ ಅಂಬರೀಷರಾಜನು ಬಹಳ

ಬೇಗ ರಾಜ್ಯವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಅವನು ಮೊದಲು ತನ್ನಲ್ಲಿದ್ದ ದೋಷಗಳೆಲ್ಲವನ್ನೂ ತೊಡೆದು ಹಾಕಿ, ಅನಂತರ ದೇಶದಲ್ಲಿ ನಡೆಯುತ್ತಿದ್ದ ಅಪರಾಧಗಳನ್ನು ನಿಲ್ಲಿಸಿ, ಸತ್ಪುರುಷರನ್ನು ಗೌರವಿಸಿ ಸತ್ಕರಿಸಿ ಮಹಾಸಿದ್ಧಿಯನ್ನು ಪಡೆದುಕೊಂಡನು.

ಆ ಸಮಯದಲ್ಲವನು ಈ ಶ್ಲೋಕಗಳನ್ನು ಹಾಡಿದನು:

ಭೂಯಿಷ್ಠಂ ವಿಜಿತಾ ದೋಷಾ ನಿಹತಾಃ ಸರ್ವಶತ್ರವಃ ।
ಏಕೋ ದೋಷೋ ವರಿಷ್ಠಶ್ಚ ವಧ್ಯಃ ಸ ನ ಹತೋ ಮಯಾ ॥೭॥

"ನಾನು ನನ್ನಲ್ಲಿದ್ದ ಅನೇಕದೋಷಗಳನ್ನು ನಿವಾರಣೆಮಾಡಿಕೊಂಡೆನು. ಎಲ್ಲ ಶತ್ರುಗಳನ್ನೂ ನಿಗ್ರಹಿಸಿದೆನು. ಆದರೆ ಬಹಳ ದೊಡ್ಡದಾದ ಒಂದು ದೋಷವು ಇನ್ನೂ ಹಾಗೆಯೇ ಉಳಿದಿದೆ. ಅದೂ ವಧಾರ್ಹವಾದುದೇ. ಆದರೆ ನಾನದನ್ನು ಸಂಹರಿಸಲು ಸಾಧ್ಯವಾಗಲಿಲ್ಲ.

ಯತ್ಪ್ರಯುಕ್ತೋ ಜನ್ತುರಯಂ ವೈತೃಷ್ಣ್ಯಂ ನಾಧಿಗಚ್ಛತಿ ।
ತೃಷ್ಣಾರ್ತ ಇಹ ನಿಮ್ನಾನಿ ಧಾವಮಾನೋ ನ ಬುಧ್ಯತೇ ॥೮॥

ಆ ದೋಷದ ಪ್ರೇರಣೆಯಿಂದಲೇ ಪ್ರಾಣಿಯು (ಮನುಷ್ಯನು) ವೈರಾಗ್ಯವನ್ನು ಹೊಂದುವುದಿಲ್ಲ. ಆಶೆಗೆ ವಶನಾದ ಮನುಷ್ಯನು ಪ್ರಪಂಚದಲ್ಲಿ ಅತಿಹೀನವಾದ ಕೃತ್ಯಗಳ ಕಡೆಗೂ ಓಡುತ್ತಾನೆ. ತೃಷ್ಣೆಯಿಂದಾಗಿ ತಾನು ಹಾಗೆ ನೀಚವಾದ ಕಾರ್ಯಗಳನ್ನು ಮಾಡುತ್ತಿರುವೆನೆಂಬುದೂ ಅವನಿಗೆ ಭಾಸವಾಗುವುದೇ ಇಲ್ಲ.

ಅಕಾರ್ಯಮಪಿ ಯೇನೇಹ ಪ್ರಯುಕ್ತಃ ಸೇವತೇ ನರಃ ।
ತಂ ಲೋಭಮಸಿಭಿಸ್ತೀಕ್ಷ್ಣೈರ್ನಿಕೃತ್ಯ ಸುಖಮೇಧತೇ ॥೯॥

ಲೋಭದಿಂದ ಪ್ರೇರಿತನಾದ ಮನುಷ್ಯನು ಮಾಡಬಾರದ ಕಾರ್ಯಗಳನ್ನೂ ಮಾಡುತ್ತಾನೆ. ಅಂತಹ ಲೋಭದೋಷವನ್ನು ತೀಕ್ಷ್ಣವಾದ ಜ್ಞಾನಸ್ವರೂಪದ ಕತ್ತರಿಗಳಿಂದ ಕತ್ತರಿಸುವವನು ಸುಖವನ್ನು ಹೊಂದುತ್ತಾನೆ.

ಲೋಭಾದ್ಧಿ ಜಾಯತೇ ತೃಷ್ಣಾ ತತಶ್ಚಿನ್ತಾ ಪ್ರವರ್ತತೇ ।

ಸ ಲಿಪ್ಸಮಾನೋ ಲಭತೇ ಭೂಯಿಷ್ಠಂ ರಾಜಸಾನ್ಗುಣಾನ್ ।
ತದವಾಪ್ತೌ ತು ಲಭತೇ ಭೂಯಿಷ್ಠಂ ತಾಮಸಾನ್ಗುಣಾನ್ ॥೧೦॥

ಲೋಭದಿಂದ ತೃಷ್ಣೆಯೂ, ತೃಷ್ಣೆಯಿಂದ ಚಿಂತೆಯೂ ಹುಟ್ಟುತ್ತದೆ. ಅಧಿಕವಾದ ವಸ್ತು-ವಾಹನ-ಧನಾದಿ ಐಶ್ವರ್ಯಗಳನ್ನು ಅಪೇಕ್ಷಿಸುವ ಲೋಭಿಯು ಮೊದಲು ಅತ್ಯಧಿಕವಾದ ರಾಜಸಗುಣವನ್ನುಹೊಂದಿರುತ್ತಾನೆ. ತಾನಪೇಕ್ಷಿಸಿದ ವಸ್ತುಗಳೆಲ್ಲವನ್ನೂ ಪಡೆದುಕೊಂಡನಂತರ ಅತ್ಯಧಿಕವಾದ ತಾಮಸಗುಣವನ್ನು ಹೊಂದುತ್ತಾನೆ.

ಸ ತೈರ್ಗುಣೈಃ ಸಂಹತದೇಹಬನ್ಧನಃ
ಪುನಃ ಪುನರ್ಜಾಯತಿ ಕರ್ಮ ಚೇಹತೇ ।
ಜನ್ಮಕ್ಷಯೇ ಭಿನ್ನವಿಕೀರ್ಣದೇಹೋ
ಮೃತ್ಯುಂ ಪುನರ್ಗಚ್ಛತಿ ಜನ್ಮನೈವ ॥೧೧॥

ಮನುಷ್ಯನು ಆ ಗುಣಗಳ ಮೂಲಕವಾಗಿಯೇ ದೇಹಬಂಧನಕ್ಕೊಳಗಾಗಿ ಪುನಃ ಪುನಃ ಹುಟ್ಟುತ್ತಲೇ ಇರುತ್ತಾನೆ. ಬಗೆ-ಬಗೆಯ ಕರ್ಮಗಳನ್ನು ಮಾಡುತ್ತಲೇ ಇರುತ್ತಾನೆ. ಒಂದು ಜನ್ಮವು ಕ್ಷಯಿಸಿದನಂತರ ಅವನ ಆ ದೇಹವು ಭಿನ್ನವಾಗಿ ಎಲ್ಲ ಕಡೆಗಳಲ್ಲಿಯೂ ಹರಡಿಹೋದರೂ ಪುನಃ ಆ ಚೇತನನು ಕರ್ಮಕ್ಕೆ ಅನುಸಾರವಾಗಿ ಜನ್ಮವನ್ನು ಪಡೆದು ಸ್ವಲ್ಪಕಾಲದನಂತರ ಸಾಯುತ್ತಾನೆ. ಹುಟ್ಟು-ಸಾವುಗಳೆಂಬ ಚಕ್ರದಲ್ಲಿ ಸುತ್ತುತ್ತಿರುತ್ತಾನೆ.

ತಸ್ಮಾದೇತಂ ಸಮ್ಯಗವೇಕ್ಷ್ಯ ಲೋಭಂ
ನಿಗೃಹ್ಯ ಧೃತ್ಯಾತ್ಮನಿ ರಾಜ್ಯಮಿಚ್ಛೇತ್ ।
ಏತದ್ರಾಜ್ಯಂ ನಾನ್ಯದಸ್ತೀಹ ರಾಜ್ಯ-
ಮಾತ್ಮೈವ ರಾಜಾ ವಿದಿತೋ ಯಥಾವತ್ ॥೧೨॥

ಆದುದರಿಂದ ಈ ಲೋಭದ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು ಅದನ್ನು ಧೈರ್ಯದಿಂದ ವಿನಾಶಗೊಳಿಸಿ ಆತ್ಮರಾಜ್ಯದ ಮೇಲೆ ಅಧಿಕಾರವನ್ನು ಹೊಂದಲು ಬಯಸಬೇಕು. ಅದೇ ವಾಸ್ತವವಾದ ಸ್ವರಾಜ್ಯವಾಗಿದೆ. ರಾಜ್ಯವೆಂಬುದು ಬೇರೆ ಯಾವುದೂ ಇಲ್ಲ. ಆತ್ಮವನ್ನು ಯಥಾವತ್ತಾಗಿ ತಿಳಿದವನೇ (ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡವನೇ) ರಾಜನು.”

ಬ್ರಾಹ್ಮಣಿಯೇ! ಈ ರೀತಿಯಲ್ಲಿ ಆತ್ಮರಾಜ್ಯವನ್ನು ಮುಂದೆ ಮಾಡಿಕೊಂಡು ಏಕಮಾತ್ರಶತ್ರುವಾಗಿದ್ದ ಲೋಭವನ್ನು ನಿಗ್ರಹಿಸಿದ ಯಶೋವಂತನಾದ ಅಂಬರೀಷರಾಜನು ಹಾಡಿದ ಶ್ಲೋಕಗಳಿವು."

ಶ೧ನೆಯ ಅಧ್ಯಾಯವು ಮುಗಿಯಿತು.

ಶ೨ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಬ್ರಾಹ್ಮಣನ ರೂಪವನ್ನು ಧರಿಸಿದ್ದ ಧರ್ಮನಿಗೂ ಜನಕಮಹಾರಾಜನಿಗೂ ಮಮತಾತ್ಯಾಗದ ವಿಷಯದಲ್ಲಿ ಸಂವಾದ

ಬ್ರಾಹ್ಮಣನು ಹೇಳುತ್ತಾನೆ:

ಅತ್ರಾಪ್ಯುದಾಹರನ್ತೀಮಮಿತಿಹಾಸಂ ಪುರಾತನಮ್ ।
ಬ್ರಾಹ್ಮಣಸ್ಯ ಚ ಸಂವಾದಂ ಜನಕಸ್ಯ ಚ ಭಾಮಿನಿ ॥೧॥

"ಭಾಮಿನಿಯೇ! ಈ ವಿಷಯದಲ್ಲಿ ಹಿಂದೆ ಬ್ರಾಹ್ಮಣನಿಗೂ ಮತ್ತು ಜನಕನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಒಮ್ಮೆ ಜನಕರಾಜನು, ಯಾವುದೋ ಅಪರಾಧವನ್ನು ಮಾಡಿ ಸಿಕ್ಕಿಹಾಕಿಕೊಂಡಿದ್ದ ಬ್ರಾಹ್ಮಣನೊಬ್ಬನನ್ನು ಶಿಕ್ಷಿಸುವ ಸಲುವಾಗಿ 'ವಿಷಯೇ ಮೇ ನ ವಸ್ತವ್ಯಂ' 'ನನ್ನ ದೇಶದಲ್ಲಿ ಇರಬಾರದು'-ಎಂದು ಆಜ್ಞೆಮಾಡಿದನು. ಹೀಗೆ ಜನಕನಿಂದ ಆಜ್ಞಪ್ತನಾದ ಬ್ರಾಹ್ಮಣನು ರಾಜಶ್ರೇಷ್ಠನಾದ ಜನಕನನ್ನೇ ಪುನಃ ಪ್ರಶ್ನಿಸಿದನು:

ಆಚಕ್ಷ್ವ ವಿಷಯಂ ರಾಜನ್ಯಾವಾಂಸ್ತವ ವಶೇ ಸ್ಥಿತಃ ॥೨॥

"ಮಹಾರಾಜ! ಎಲ್ಲಿಯವರೆಗೆ ನಿನ್ನ ರಾಜ್ಯದ ಗಡಿಯಿರುವುದೆಂಬುದನ್ನು ಹೇಳು. ವಿಭುವೇ! ಈ ವಿಷಯವು ತಿಳಿದನಂತರ ಬೇರೊಬ್ಬ ರಾಜನ ರಾಜ್ಯದಲ್ಲಿ ವಾಸಮಾಡಿಕೊಂಡಿರಲು ಇಚ್ಛಿಸಿದ್ದೇನೆ. ಮಹೀಪತಿಯೇ! ಶಾಸ್ತ್ರಾನುಸಾರವಾಗಿ ನಿನ್ನ ಮಾತಿನಂತೆ ನಡೆದುಕೊಳ್ಳಲು ಬಯಸುತ್ತೇನೆ."

ಸುಭಗಳೇ! ಯಶೋವಂತನಾದ ಬ್ರಾಹ್ಮಣನು ಹೀಗೆ ಹೇಳಲು ಜನಕರಾಜನು ದೀರ್ಘವಾಗಿ ನಿಟ್ಟುಸಿರುಬಿಟ್ಟನು. ಯಾವ ಮಾತನ್ನೂ

ಆಡಲಿಲ್ಲ. ಆದೇ ವಿಷಯವಾಗಿ ಚಿಂತಿಸುತ್ತಾ ಕುಳಿತಿದ್ದ ಮಹಾತೇಜಸ್ವಿಯಾದ ರಾಜನನ್ನು–ಸೂರ್ಯನನ್ನು ರಾಹುವು ಆವರಿಸುವಂತೆ–ಮೋಹವು ಬಹಳ ಬೇಗ ಆವರಿಸಿಕೊಂಡಿತು. ಸ್ವಲ್ಪಹೊತ್ತು ಕಳೆದನಂತರ ಜನಕನು ಬ್ರಾಹ್ಮಣನೊಡನೆ ಹೇಳಿದನು:



ಪಿತೃಪೈತಾಮಹೇ ರಾಜ್ಯೇ ವಶ್ಯೇ ಜನಪದೇ ಸತಿ ।
ವಿಷಯಂ ನಾಧಿಗಚ್ಛಾಮಿ ವಿಚಿನ್ವನ್ಪೃಥಿವೀಮಹಮ್ ॥೮॥

“ಬ್ರಾಹ್ಮಣನೇ! ತಾತ-ಮುತ್ತಾತಂದಿರಿಗೆ ಸಂಬಂಧಿಸಿದ ಈ ರಾಜ್ಯವೂ ಮತ್ತು ಈ ಮಿಥಿಲಾಪ್ರಾಂತವೂ ಬಹಳ ಕಾಲದಿಂದಲೂ ನನ್ನ

ಅಧೀನದಲ್ಲಿಯೇ ಇದೆ. ಆದರೆ ನಾನು ವಿಚಾರದೃಷ್ಟಿಯಿಂದ ನೋಡಿದಾಗ ಈ ಭೂಮಂಡಲವೆಲ್ಲವನ್ನೂ ಹುಡುಕಿದರೂ ನನಗೆ ನನ್ನ ದೇಶವೆಲ್ಲಿದೆಯೆಂಬುದೇ ತಿಳಿಯುತ್ತಿಲ್ಲ.

ನಾಧ್ಯಗಚ್ಛಂ ಯದಾ ಪೃಥ್ವ್ಯಾಂ ಮಿಥಿಲಾ ಮಾರ್ಗಿತಾ ಮಯಾ ।
ನಾಧ್ಯಗಚ್ಛಂ ಯದಾ ತಸ್ಯಾಂ ಸ್ವಪ್ರಜಾ ಮಾರ್ಗಿತಾ ಮಯಾ ।
ನಾಧ್ಯಗಚ್ಛಂ ಯದಾ ತಾಸು ತದಾ ಮೇ ಕಶ್ಮಲೋಽಭವತ್ ॥೯॥

ಅಖಂಡಭೂಮಂಡಲದಲ್ಲಿ ನನ್ನ ದೇಶವು ಯಾವುದೆಂಬುದನ್ನು ಗುರುತಿಸಲಾಗದಿರಲು ನಾನು ಮಿಥಿಲಾಪ್ರಾಂತದಲ್ಲಿಯೇ ನನ್ನ ವಿಷಯವನ್ನು ಹುಡುಕತೊಡಗಿದೆನು. ಅಲ್ಲಿಯೂ ನನ್ನ ಅಧಿಕಾರಕ್ಕೊಳಪಟ್ಟ ವಿಷಯವು ಸಿಕ್ಕದೇ ಇದ್ದುದರಿಂದ ಪ್ರಜೆಗಳ ಮೇಲಾದರೂ ನನ್ನ ಅಧಿಕಾರವೇನೂ ಇಲ್ಲವೆಂಬುದನ್ನು ತಿಳಿದ ಕೂಡಲೇ ನಾನು ಮೋಹವಶನಾದೆನು. ಪುನಃ ಬಹಳ ಹೊತ್ತು ವಿಚಾರಮಾಡುತ್ತಾ ನಾನು ಆ ನನ್ನ ಮೋಹವನ್ನು ಕಳೆದುಕೊಂಡೆನು. ಆಗ ನನ್ನ ಬುದ್ಧಿಯು ಪುನಃ ಸ್ತಿಮಿತಕ್ಕೆ ಬಂದಿತು.

ತಯಾ ನ ವಿಷಯಂ ಮನ್ಯೇ ಸರ್ವೋ ವಾ ವಿಷಯೋ ಮಮ ।
ಆತ್ಮಾಪಿ ಚಾಯಂ ನ ಮಮ ಸರ್ವಾ ವಾ ಪೃಥಿವೀ ಮಮ ॥೧೧॥

ಯಥಾ ಮಮ ತಥಾನ್ಯೇಷಾಮಿತಿ ಮನ್ಯೇ ದ್ವಿಜೋತ್ತಮ ।
ಉಷ್ಯತಾಂ ಯಾವದುತ್ಸಾಹೋ ಭುಜ್ಯತಾಂ ಯಾವದುಷ್ಯತೇ ॥೧೨॥

ಆ ಬುದ್ಧಿಯಿಂದಾಗಿ ನಾನು ಈ ನಿರ್ಧಾರಕ್ಕೆ ಬಂದೆನು:

“ಎಲ್ಲಿಯೂ ನನ್ನ ರಾಜ್ಯವೆಂಬುದೇ ಇಲ್ಲ ಅಥವಾ ಎಲ್ಲೆಲ್ಲಿಯೂ ಇರುವುದೂ ನನ್ನ ರಾಜ್ಯವೇ. ಒಂದು ದೃಷ್ಟಿಯಿಂದ ಈ ಶರೀರವೂ ನನ್ನದಲ್ಲ. ಮತ್ತೊಂದು ದೃಷ್ಟಿಯಿಂದ ಸಮಸ್ತಭೂಮಂಡಲವೂ ನನ್ನದೇ ಆಗಿದೆ. ಈ ರಾಜ್ಯವು ನನ್ನದು ಹೇಗೋ ಹಾಗೆಯೇ ಬೇರೆಯವರದ್ದೂ ಆಗಿದೆ.’ ಹೀಗೆ ನಾನು ಭಾವಿಸುತ್ತೇನೆ. ಆದುದರಿಂದ ದ್ವಿಜಶ್ರೇಷ್ಠನೇ! ನೀನು ಇಚ್ಛಿಸುವವರೆಗೆ ನೀನು ಇಲ್ಲಿಯೇ ಇರು. ಇಲ್ಲಿರುವವರೆಗೂ ಇಲ್ಲಿಯ ಸುಖಭೋಗಗಳನ್ನೇ ಅನುಭವಿಸುತ್ತಿರು.”

ಬ್ರಾಹ್ಮಣನು ಹೇಳುತ್ತಾನೆ:

ಪಿತೃಪೈತಾಮಹೇ ರಾಜ್ಯೇ ವಶ್ಯೇ ಜನಪದೇ ಸತಿ ।
ಬ್ರೂಹಿ ಕಾಂ ಮತಿಮಾಸ್ಥಾಯ ಮಮತ್ವಂ ವರ್ಜಿತಂ ತ್ವಯಾ ॥೧೩॥

“ಜನಕರಾಜನೇ! ಪಿತೃ-ಪಿತಾಮಹರ ಸಂಬಂಧವಾದ ಈ ರಾಜ್ಯದಲ್ಲಿ ಇಡೀ ದೇಶವೇ ನಿನ್ನ ಅಧೀನದಲ್ಲಿರುವಾಗ ನೀನು ಎಂತಹ ಬುದ್ಧಿಬಲದಿಂದ ಮಮತ್ವವನ್ನು ತ್ಯಾಗಮಾಡಿದೆಯೆಂಬುದನ್ನು ಹೇಳು.

ಕಾಂ ವೈ ಬುದ್ಧಿಂ ಸಮಾಶ್ರಿತ್ಯ ಸರ್ವೋ ವೈ ವಿಷಯಸ್ತವ ।
ನಾವೈಷಿ ವಿಷಯಂ ಯೇನ ಸರ್ವೋ ವಾ ವಿಷಯಸ್ತವ ॥೧೪॥

ನಿಜವಾಗಿ ಈ ದೇಶವೆಲ್ಲವೂ ನಿನ್ನದೇ ಆಗಿದೆ. ಆದರೆ ಯಾವ ವಿಧವಾದ ಬುದ್ಧಿಬಲದಿಂದ–‘ನನಗೆ ರಾಜ್ಯವೆಂಬುದೇ ಇಲ್ಲ’–ಎಂದು ಹೇಳಿದೆ? ಪುನಃ ಯಾವ ಬುದ್ಧಿಯನ್ನು ಆಶ್ರಯಿಸಿ ಇರುವುದೆಲ್ಲವೂ– ‘ನನ್ನ ರಾಜ್ಯವೇ’–ಎಂದು ಹೇಳಿದೆ?”

ಜನಕನು ಹೇಳುತ್ತಾನೆ:

ಅನ್ತವನ್ತ ಇಹಾವಸ್ಥಾ ವಿದಿತಾಃ ಸರ್ವಕರ್ಮಸು ।
ನಾಧ್ಯಗಚ್ಛಮಹಂ ತಸ್ಮಾನ್ಮಮೇದಮಿತಿ ಯದ್ಭವೇತ್ ॥೧೫॥

“ಈ ಪ್ರಪಂಚದಲ್ಲಿ ಕರ್ಮಾನುಸಾರವಾಗಿ ಲಭಿಸುವ ಎಲ್ಲ ಅವಸ್ಥೆಗಳಿಗೂ ಅಂತ್ಯವೆಂಬುದಿದೆ. ಆ ವಿಷಯವು ನನಗೆ ಚೆನ್ನಾಗಿ ತಿಳಿದಿದೆ. ಆದುದರಿಂದಲೇ -‘ನನ್ನದು’ ಎಂಬ ವಸ್ತುವು ಯಾವುದಿರುವುದೆಂಬುದನ್ನು ತಿಳಿಯಲು ನನಗೆ ಸಾಧ್ಯವಾಗಲಿಲ್ಲ. (ಶಾಶ್ವತವಾಗಿ ಯಾವ ವಸ್ತುವೂ ನನ್ನದಾಗಿರುವುದಿಲ್ಲ. ಮನೆಯನ್ನಾಗಲೀ, ಮಠವನ್ನಾಗಲೀ ನನ್ನದು ಎಂದು ಸೀಮಿತಕಾಲದವರೆಗೆ ಮಾತ್ರವೇ ಹೇಳಿಕೊಂಡಿರಬಹುದು. ಅನಂತರ ಬೇರೆಯವರು ಅದನ್ನೇ ನನ್ನದು-ನನ್ನದು ಎನ್ನುತ್ತಾರೆ. ಇದು ಹೀಗೆಯೇ ನಡೆಯುತ್ತಾ ಹೋಗುತ್ತದೆ.)

ಕಸ್ಯೇದಮಿತಿ ಕಸ್ಯ ಸ್ವಮಿತಿ ವೇದವಚಸ್ತಥಾ ।
ನಾಧ್ಯಗಚ್ಛಮಹಂ ಬುದ್ಧ್ಯಾ ಮಮೇದಮಿತಿ ಯದ್ಭವೇತ್ ॥೧೬॥

'ಕಸ್ಯೇದಂ?' 'ಇದು ಯಾರ ವಸ್ತುವು?' 'ಕಸ್ಯ ಸ್ವಂ?' 'ಇದು ಯಾರ ಧನವು?' ಎಂಬ ವೇದವಚನವಿದೆ. (ಅರ್ಥಾತ್ ವಸ್ತುಗಳಾಗಲೀ, ಧನವಾಗಲೀ ಯಾರದ್ದೂ ಅಲ್ಲ.) ಈ ಕಾರಣದಿಂದ ನಾನು ಬುದ್ಧಿಯಿಂದ ವಿಚಾರಮಾಡಿದಾಗ 'ಇದು ನನ್ನದು'–ಎಂದು ಹೇಳಿಕೊಳ್ಳುವ ಯಾವ ಪದಾರ್ಥವಿರುವುದೂ ನನಗೆ ತಿಳಿಯುತ್ತಿಲ್ಲ.

ಏತಾಂ ಬುದ್ಧಿಂ ಸಮಾಶ್ರಿತ್ಯ ಮಮತ್ವಂ ವರ್ಜಿತಂ ಮಯಾ।
ಶೃಣು ಬುದ್ಧಿಂ ಚ ಯಾಂ ಜ್ಞಾತ್ವಾ ಸರ್ವತ್ರ ವಿಷಯೋ ಮಮ ॥೧೭॥

ಈ ವಿಧವಾದ ಬುದ್ಧಿಯನ್ನು ಆಶ್ರಯಿಸಿ ನಾನು ಮಮತ್ವವನ್ನು ತ್ಯಾಗಮಾಡಿದೆನು. ಪುನಃ ನಾನು ಯಾವ ಬುದ್ಧಿಯನ್ನು ಆಶ್ರಯಿಸಿ 'ಎಲ್ಲೆಡೆಗಳಲ್ಲಿಯೂ ನನ್ನ ದೇಶವೇ ಇದೆ'–ಎಂದು ಹೇಳಿದೆನೆಂಬುದನ್ನು ಕೇಳು.

ನಾಹಮಾತ್ಮಾರ್ಥಮಿಚ್ಛಾಮಿ ಗನ್ಧಾನ್ಘ್ರಾಣಗತಾನಪಿ।
ತಸ್ಮಾನ್ಮೇ ನಿರ್ಜಿತಾ ಭೂಮಿರ್ವಶೇ ತಿಷ್ಠತಿ ನಿತ್ಯದಾ ॥೧೮॥

ಗಂಧವು ಮೂಗಿನೊಳಕ್ಕೆ ಹೋದರೂ ಅದನ್ನು ನಾನು ನನ್ನ (ಆತ್ಮಸುಖದ) ಸಲುವಾಗಿ ಆಘ್ರಾಣಿಸುವುದಿಲ್ಲ. ಈ ಕಾರಣದಿಂದ ನಾನು ಗಂಧದ ಉಗಮಸ್ಥಾನವಾದ ಭೂಮಿಯನ್ನು ಜಯಿಸಿದಂತಾಯಿತು. ಆದುದರಿಂದಲೇ ಭೂಮಿಯು ಯಾವಾಗಲೂ ನನ್ನ ವಶದಲ್ಲಿಯೇ ಇರುವುದು.

ನಾಹಮಾತ್ಮಾರ್ಥಮಿಚ್ಛಾಮಿ ರಸಾನಾಸ್ಯೇಽಪಿ ವರ್ತತಃ।
ಆಪೋ ಮೇ ನಿರ್ಜಿತಾಸ್ತಸ್ಮಾದ್ವಶೇ ತಿಷ್ಠನ್ತಿ ನಿತ್ಯದಾ ॥೧೯॥

ಮುಖದ ಮೇಲೆ (ನಾಲಿಗೆಯ ಮೇಲೆ) ಬಿದ್ದಿರುವ ರಸವನ್ನಾದರೂ ನಾನು ನನ್ನ ತೃಪ್ತಿಗಾಗಿ ಆಸ್ವಾದಿಸುವುದಿಲ್ಲ. ಆದುದರಿಂದ ರಸದ ಉಗಮಸ್ಥಾನವಾದ ನೀರನ್ನು ನಾನು ಜಯಿಸಿದಂತಾಯಿತು. ಈ ಕಾರಣದಿಂದಲೇ ಜಲತತ್ತ್ವವು ಯಾವಾಗಲೂ ನನ್ನ ಅಧೀನದಲ್ಲಿರುತ್ತದೆ.

ನಾಹಮಾತ್ಮಾರ್ಥಮಿಚ್ಛಾಮಿ ರೂಪಂ ಜ್ಯೋತಿಶ್ಚ ಚಕ್ಷುಷಃ।
ತಸ್ಮಾನ್ಮೇ ನಿರ್ಜಿತಂ ಜ್ಯೋತಿರ್ವಶೇ ತಿಷ್ಠತಿ ನಿತ್ಯದಾ ॥೨೦॥

ಕಣ್ಣುಗಳಿಗೆ ವಿಷಯಭೂತವಾದ ರೂಪವನ್ನಾಗಲೀ ಜ್ಯೋತಿಯನ್ನಾ

ಗಲೀ ನಾನು ನನ್ನ ಸುಖಕ್ಕಾಗಿ ನೋಡಹೋಗುವುದಿಲ್ಲ. ಇದರಿಂದ ನಾನು ಜ್ಯೋತಿಯನ್ನು (ರೂಪಕ್ಕೆ ಉಗಮಸ್ಥಾನವಾದ ಅಗ್ನಿಯನ್ನು) ಜಯಿಸಿ ದಂತಾಯಿತು. ಈ ಕಾರಣದಿಂದಲೇ ತೇಜಸ್ಸು ಯಾವಾಗಲೂ ನನ್ನ ಅಧೀನದಲ್ಲಿರುತ್ತದೆ.

ನಾಹಮಾತ್ಮಾರ್ಥಮಿಚ್ಛಾಮಿ ಸ್ಪರ್ಶಾಂಸ್ತ್ವಚಿ ಗತಾಶ್ಚ ಯೇ।
ತಸ್ಮಾನ್ಮೇ ನಿರ್ಜಿತೋ ವಾಯುರ್ವಶೇ ತಿಷ್ಠತಿ ನಿತ್ಯದಾ ॥೨೧॥

ತ್ವಚೆಯಲ್ಲಿ (ಚರ್ಮದಲ್ಲಿ) ಸಂಬಂಧಹೊಂದಿದ ಯಾವುದೇ ಪದಾರ್ಥ ದಿಂದಲೂ ನಾನು ಸ್ಪರ್ಶಸುಖವನ್ನು ಬಯಸುವುದಿಲ್ಲ. ಆದುದರಿಂದ ಸ್ಪರ್ಶಕ್ಕೆ ಉಗಮಸ್ಥಾನವಾದ ವಾಯುವನ್ನು ಜಯಿಸಿದಂತಾಯಿತು. ಈ ಕಾರಣದಿಂದಲೇ ವಾಯುವು ಯಾವಾಗಲೂ ನನ್ನ ಅಧೀನದಲ್ಲಿಯೇ ಇರುತ್ತದೆ.

ನಾಹಮಾತ್ಮಾರ್ಥಮಿಚ್ಛಾಮಿ ಶಬ್ದಾಞ್ಶ್ರೋತ್ರಗತಾನಪಿ ।
ತಸ್ಮಾನ್ಮೇ ನಿರ್ಜಿತಾಃ ಶಬ್ದಾ ವಶೇ ತಿಷ್ಠನ್ತಿ ನಿತ್ಯದಾ ॥೨೨॥

ಇಂಪಾಗಿರುವ ಶಬ್ದಗಳು ಕಿವಿಗಳಲ್ಲಿ ಬೀಳುತ್ತಿದ್ದರೂ ನಾನು ನನ್ನ ಸೌಖ್ಯಕ್ಕಾಗಿ ಅದನ್ನು ಬಯಸುವುದಿಲ್ಲ. ಆದುದರಿಂದ ನಾನು ಶಬ್ದಗಳನ್ನು ಜಯಿಸಿದಂತಾಯಿತು. (ಶಬ್ದಕ್ಕೆ ಉಗಮಸ್ಥಾನವಾದ ಆಕಾಶವನ್ನು ಜಯಿಸಿದಂತಾಯಿತು.) ಈ ಕಾರಣದಿಂದಲೇ ಶಬ್ದಗಳು (ಆಕಾಶವು) ನನ್ನ ಅಧೀನದಲ್ಲಿಯೇ ಇರುತ್ತವೆ.

ನಾಹಮಾತ್ಮಾರ್ಥಮಿಚ್ಛಾಮಿ ಮನೋ ನಿತ್ಯಂ ಮನೋಽನ್ತರೇ।
ಮನೋ ಮೇ ನಿರ್ಜಿತಂ ತಸ್ಮಾದ್ವಶೇ ತಿಷ್ಠತಿ ನಿತ್ಯದಾ ॥೨೩॥

ಮನಸ್ಸಿನಲ್ಲಿ ಹುಟ್ಟುವ ಕಾಲ್ಪನಿಕವಿಷಯಗಳನ್ನು ನಾನು ನನ್ನ ಸುಖಕ್ಕಾಗಿ ಬಯಸುವುದಿಲ್ಲ. ಆದುದರಿಂದ ನಾನು ಮನಸ್ಸನ್ನು ಜಯಿಸಿದಂತಾಯಿತು. ಈ ಕಾರಣದಿಂದಲೇ ಮನಸ್ಸು ಯಾವಾಗಲೂ ನನ್ನ ಅಧೀನದಲ್ಲಿಯೇ ಇರುತ್ತದೆ.

ದೇವೇಭ್ಯಶ್ಚ ಪಿತೃಭ್ಯಶ್ಚ ಭೂತೇಭ್ಯೋಽತಿಥಿಭಿಃ ಸಹ।
ಇತ್ಯರ್ಥಂ ಸರ್ವ ಏವೇತಿ ಸಮಾರಮ್ಭಾ ಭವನ್ತಿ ವೈ ॥೨೪॥

ನನ್ನ ಸಮಸ್ತವಾದ ಕಾರ್ಯಗಳೂ ದೇವತೆಗಳ, ಪಿತೃಗಳ, ಭೂತಗಳ ಮತ್ತು ಅತಿಥಿಗಳ ತೃಪ್ತಿಗಾಗಿಯೇ ಆರಂಭವಾಗುತ್ತವೆ.”

ಬ್ರಾಹ್ಮಣಿಯೇ! ಜನಕನು ಹೇಳಿದ ಆ ಮಾತುಗಳನ್ನು ಕೇಳಿ ದೊಡನೆಯೇ ಬ್ರಾಹ್ಮಣನು ನಕ್ಕು ಜನಕನೊಡನೆ ಪುನಃ ಹೇಳಿದನು:

“ಮಹಾರಾಜ! ಆತ್ಮನ ವಿಷಯದಲ್ಲಿ ನಿನ್ನ ಅಭಿಪ್ರಾಯ ವೇನೆಂಬುದನ್ನು ತಿಳಿದುಕೊಳ್ಳುವ ಸಲುವಾಗಿಯೇ ಬಂದಿರುವ ಯಮಧರ್ಮನೇ ನಾನೆಂದು ತಿಳಿ. ಪ್ರಪಂಚದಲ್ಲಿ ಸತ್ತ್ವಗುಣರೂಪವಾದ ಅಂಚಿನಿಂದ (ಪಟ್ಟಿಯಿಂದ) ಕೂಡಿ, ಯಾವುದೇ ಕಾರಣದಿಂದಲೂ ಹಿಂದಕ್ಕೆ ತಿರುಗದೇ, ದುರ್ಲಭವಾಗಿರುವ ಬ್ರಹ್ಮಪ್ರಾಪ್ತಿರೂಪವಾದ ಚಕ್ರವನ್ನು ತಿರುಗಿಸುವವನು ನೀನೊಬ್ಬನೇ.”

ಇ೨ನೆಯ ಅಧ್ಯಾಯವು ಮುಗಿಯಿತು.

ಇಇನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಬ್ರಾಹ್ಮಣನು ಪತ್ನಿಗೆ ತನ್ನ ಜ್ಞಾನನಿಷ್ಠಾಸ್ವರೂಪದ ಪರಿಚಯವನ್ನು ಮಾಡಿಕೊಟ್ಟುದು

ಬ್ರಾಹ್ಮಣನು ಹೇಳುತ್ತಾನೆ:

ನಾಹಂ ತಥಾ ಭೀರು ಚರಾಮಿ ಲೋಕೇ
ಯಥಾ ತ್ವಂ ಮಾಂ ತರ್ಜಯಸೇ ಸ್ವಬುದ್ಧ್ಯಾ ।
ವಿಪ್ರೋಽಸ್ಮಿ ಮುಕ್ತೋಽಸ್ಮಿ ವನೇಚರೋಽಸ್ಮಿ
ಗೃಹಸ್ಥಧರ್ಮಾ ವ್ರತವಾಂಸ್ತಥಾಸ್ಮಿ ॥೧॥
ನಾಹಮಸ್ಮಿ ಯಥಾ ಮಾಂ ತ್ವಂ ಪಶ್ಯಸೇ ಚ ಶುಭಾಶುಭೇ ।
ಮಯಾ ವ್ಯಾಪ್ತಮಿದಂ ಸರ್ವಂ ಯತ್ಕಿಂಚಿಜ್ಜಗತೀಗತಮ್ ॥೨॥

“ಭೀರುವೇ! ನಿನ್ನ ಬುದ್ಧಿಯಿಂದ ಹೇಗೋ ಇರುವೆನೆಂದು ನನ್ನನ್ನು ಭಯಪಡಿಸುತ್ತಿರುವೆಯಲ್ಲವೇ? ಆದರೆ ನಾನು ಹಾಗಿಲ್ಲ. ಇತರ ದೇಹಾಭಿಮಾನಿಗಳಾದ ಮನುಷ್ಯರಂತೆ ಆಚರಿಸುತ್ತಿಲ್ಲ. ನೀನು ನನ್ನನ್ನು ಪಾಪ-ಪುಣ್ಯಕರ್ಮಗಳಲ್ಲಿ ಆಸಕ್ತನಾಗಿರುವವನೆಂದು ಭಾವಿಸಿರುವೆ. ಆದರೆ

ನಾನು ಯಾವುದೇ ಕರ್ಮದಲ್ಲಿಯೂ ಆಸಕ್ತನಾಗಿರುವುದಿಲ್ಲ. ನಾನು ಬ್ರಾಹ್ಮಣನಾಗಿದ್ದೇನೆ. ಜೀವನ್ಮುಕ್ತನಾಗಿದ್ದೇನೆ. ವಾನಪ್ರಸ್ಥನೂ ಆಗಿದ್ದೇನೆ. ಗೃಹಸ್ಥನೂ ಆಗಿದ್ದೇನೆ. ಬ್ರಹ್ಮಜ್ಞಾನಿಯೂ ಆಗಿದ್ದೇನೆ. ವ್ರತನಿಷ್ಠನೂ ಆಗಿದ್ದೇನೆ. ಭೂತಲದಲ್ಲಿ ಯಾವ-ಯಾವ ವಸ್ತುಗಳಿವೆಯೋ–ಆ ಎಲ್ಲ ವಸ್ತುಗಳನ್ನೂ ನಾನು ವ್ಯಾಪಿಸಿಕೊಂಡಿರುವೆನು.

ಯೇ ಕೇಚಿಜ್ಜನ್ತವೋ ಲೋಕೇ ಜಙ್ಗಮಾಃ ಸ್ಥಾವರಾಶ್ಚ ಹ ।
ತೇಷಾಂ ಮಾಮನ್ತಕಂ ವಿದ್ಧಿ ದಾರೂಣಾಮಿವ ಪಾವಕಮ್ ॥೩॥

ಕಟ್ಟಿಗೆಗಳನ್ನು ಭಸ್ಮಮಾಡುವ ಅಗ್ನಿಯಂತೆ–ಪ್ರಪಂಚದಲ್ಲಿರುವ ಸ್ಥಾವರ-ಜಂಗಮಪ್ರಾಣಿಗಳೆಲ್ಲವನ್ನೂ ವಿನಾಶಮಾಡುವ ಮೃತ್ಯುವೆಂದೇ ನನ್ನನ್ನು ತಿಳಿ.

ರಾಜ್ಯಂ ಪೃಥಿವ್ಯಾಂ ಸರ್ವಾಸ್ಯಾಮಥವಾಪಿ ತ್ರಿವಿಷ್ಟಪೇ ।
ತಥಾ ಬುದ್ಧಿರಿಯಂ ವೇತ್ತಿ ಬುದ್ಧಿರೇವ ಧನಂ ಮಮ ॥೪॥

ಅಖಂಡಭೂಮಂಡಲದಲ್ಲಿಯೂ ಮತ್ತು ಸ್ವರ್ಗದಲ್ಲಿಯೂ ಯಾವ ರಾಜ್ಯವಿರುವುದೋ–ಅದನ್ನು ನನ್ನ ಬುದ್ಧಿಯು ತಿಳಿದುಕೊಂಡಿದೆ. ಆದುದರಿಂದ ಬುದ್ಧಿಯೇ ನನ್ನ ಧನವಾಗಿದೆ.

ಏಕಃ ಪನ್ಥಾ ಬ್ರಾಹ್ಮಣಾನಾಂ ತೇನ ಗಚ್ಛನ್ತಿ ತದ್ವಿದಃ ।
ಗೃಹೇಷು ವನವಾಸೇಷು ಗುರುವಾಸೇಷು ಭಿಕ್ಷುಷು ॥೫॥

ಬ್ರಹ್ಮವಿದರಾದ ಬ್ರಾಹ್ಮಣರು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ–ಎಂಬ ಈ ಆಶ್ರಮಗಳಲ್ಲಿ ಯಾವುದನ್ನು ಅನುಸರಿಸಿದರೂ ಜ್ಞಾನವೊಂದೇ ಅವರಿಗೆ ಏಕೈಕಮಾರ್ಗವಾಗಿದೆ. ಅಧ್ಯಾತ್ಮವನ್ನು ತಿಳಿದವರು ಆ ಜ್ಞಾನಮಾರ್ಗದಿಂದಲೇ ಪರಮಪದಕ್ಕೆ ಹೋಗುತ್ತಾರೆ.

ಲಿಙ್ಗೈರ್ಬಹುಭಿರವ್ಯಗ್ರೈರೇಕಾ ಬುದ್ಧಿರುಪಾಸ್ಯತೇ ।
ನಾನಾಲಿಙ್ಗಾಶ್ರಮಸ್ಥಾನಾಂ ಯೇಷಾಂ ಬುದ್ಧಿಃ ಶಮಾತ್ಮಿಕಾ ।
ತೇ ಭಾವಮೇಕಮಾಯಾನ್ತಿ ಸರಿತಃ ಸಾಗರಂ ಯಥಾ ॥೬॥

ಅವರು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸಗಳೆಂಬ ಯಾವುದೇ ಚಿಹ್ನೆಗಳನ್ನು ಹೊಂದಿದ್ದರೂ ಅವರ ಬುದ್ಧಿಯು ಅವ್ಯಗ್ರವಾಗಿರುವುದು. ಅಂತಹ ಬ್ರಹ್ಮಭಾವವಿರುವ ಬುದ್ಧಿಯನ್ನೇ ಅವರು ಆಶ್ರಯಿಸಿರುವರು. ಅವರು ನಾನಾವಿಧವಾದ ಚಿಹ್ನೆಗಳನ್ನು ಹೊಂದಿದ್ದರೂ ಬ್ರಹ್ಮಚರ್ಯಾದಿ ಯಾವುದೇ ಆಶ್ರಮದಲ್ಲಿದ್ದರೂ ಅವರ ಬುದ್ಧಿಯು ಪರಮಶಾಂತಿಯ ಸಾಧನೆಯಲ್ಲಿಯೇ ಸ್ಥಿರವಾಗಿರುವುದು. ನದಿಗಳೆಲ್ಲವೂ ಸಾಗರವನ್ನೇ ಸೇರುವಂತೆ–ಯಾವುದೇ ಆಶ್ರಮಸ್ಥರಾಗಿದ್ದರೂ ಶಮಾತ್ಮಕವಾದ ಬುದ್ಧಿಯಿಂದ ಕೂಡಿರುವವರು ಕಡೆಯಲ್ಲಿ ಬ್ರಹ್ಮಭಾವವನ್ನೇ ಹೊಂದುವರು.

ಬುದ್ಧ್ಯಾಯಂ ಗಮ್ಯತೇ ಮಾರ್ಗಃ ಶರೀರೇಣ ನ ಗಮ್ಯತೇ ।
ಆದ್ಯನ್ತವನ್ತಿ ಕರ್ಮಾಣಿ ಶರೀರಂ ಕರ್ಮಬನ್ಧನಮ್ ॥೭॥

ಇಂತಹ ಮುಕ್ತಿಮಾರ್ಗವು ಬುದ್ಧಿಯಿಂದ ಮಾತ್ರವೇ ಹೊಂದಲ್ಪಡುತ್ತದೆ. ಶರೀರದಿಂದ ಅದನ್ನು ಹೊಂದಲು ಸಾಧ್ಯವಿಲ್ಲ. ಎಲ್ಲ ಕರ್ಮಗಳೂ (ಕರ್ಮಫಲಗಳೂ) ಆದಿ ಮತ್ತು ಅಂತ್ಯವಿರತಕ್ಕುವುಗಳು. ಶರೀರವೂ ಕರ್ಮಗಳಿಂದ ಬಂಧಿಸಲ್ಪಟ್ಟಿರುತ್ತದೆ. (ಶರೀರವನ್ನು ಕರ್ಮದ ಬಂಧನದಿಂದ ಬಿಡಿಸಿಕೊಳ್ಳಬೇಕಾದರೆ ಬುದ್ಧಿಯನ್ನು ಆಶ್ರಯಿಸಿ ಮೋಕ್ಷಮಾರ್ಗವನ್ನು ಹಿಡಿಯಬೇಕು.)

ತಸ್ಮಾತ್ತೇ ಸುಭಗೇ ನಾಸ್ತಿ ಪರಲೋಕಕೃತಂ ಭಯಮ್ ।
ತದ್ಭಾವಭಾವನಿರತಾ ಮಮೈವಾತ್ಮಾನಮೇಷ್ಯಸಿ ॥೮॥

ಸೌಭಾಗ್ಯವತಿಯೇ! ಆದುದರಿಂದ ನಿನಗೆ ಕಾಮ-ಕ್ರೋಧಾದಿ ಶತ್ರುಜನರಿಂದ ಉಂಟಾಗಬಹುದಾದ ಭಯವೇನೂ ಇರುವುದಿಲ್ಲ. ನನ್ನ ಆತ್ಮಭಾವವನ್ನು (ಸ್ವರೂಪವನ್ನು) ಭಾವಿಸುವುದರಲ್ಲಿಯೇ (ಧ್ಯಾನಿಸುವುದರಲ್ಲಿಯೇ) ನಿರತಳಾಗಿರುವ ನೀನು ನನ್ನ ಸ್ವರೂಪವನ್ನೇ ಹೊಂದುವೆ. (ಬ್ರಹ್ಮಭೂತಳಾಗುವೆ.)"

ಽಽನೆಯ ಅಧ್ಯಾಯವು ಮುಗಿಯಿತು.

ಬ್ರಾಹ್ಮಣನು ಬ್ರಾಹ್ಮಣಿಗೆ ಕ್ಷೇತ್ರಜ್ಞನ ರಹಸ್ಯವನ್ನು ಹೇಳಿದುದು: ಬ್ರಾಹ್ಮಣಗೀತೆಯ ಉಪಸಂಹಾರ

ಬ್ರಾಹ್ಮಣಿಯು ಹೇಳುತ್ತಾಳೆ:

ನೇದಮಲ್ಪಾತ್ಮನಾ ಶಕ್ಯಂ ವೇದಿತುಂ ನಾಕೃತಾತ್ಮನಾ ।
ಬಹು ಚಾಲ್ಪಂ ಚ ಸಂಕ್ಷಿಪ್ತಂ ವಿಪ್ಲುತಂ ಚ ಮತಂ ಮಮ ॥೧॥

“ಪ್ರಿಯನೇ! ನೀನು ಹೇಳಿದ ಬ್ರಹ್ಮಜ್ಞಾನವನ್ನು ಜಿತೇಂದ್ರಿಯಳಲ್ಲದ ಅಲ್ಪಬುದ್ಧಿಯುಳ್ಳ ನಾನು ಗ್ರಹಿಸಲು ಅಸಮರ್ಥಳಾಗಿದ್ದೇನೆ. ಮಹಾಬ್ರಹ್ಮ ಜ್ಞಾನದ ವಿಷಯವಾಗಿ ನೀನು ಹೇಳಿದುದು ತುಂಬಾ ಸಂಕ್ಷಿಪ್ತವಾಗಿದೆ ಮತ್ತು ಗೊಂದಲವನ್ನು ಉಂಟುಮಾಡಿದೆಯೆಂದು ನನಗೆ ಅನ್ನಿಸುತ್ತಿದೆ.

ಉಪಾಯಂ ತಂ ಮಮ ಬ್ರೂಹಿ ಯೇನೈಷಾ ಲಭ್ಯತೇ ಮತಿಃ ।
ತನ್ಮನ್ಯೇ ಕಾರಣಂ ತ್ವತ್ತೋ ಯತ ಏಷಾ ಪ್ರವರ್ತತೇ ॥೨॥

ನನ್ನ ಬುದ್ಧಿಯೂ ಹಾಗೆ ಬ್ರಹ್ಮೈಕಾಗ್ರತೆಯನ್ನು ಹೊಂದಲು ಯಾವುದಾದರೂ ಉಪಾಯವನ್ನು ಹೇಳು. ಆ ಉಪಾಯವು ನಿನ್ನಿಂದಲೇ ತಿಳಿಯುವುದೆಂಬ ವಿಶ್ವಾಸವು ನನಗಿದೆ.”

ಬ್ರಾಹ್ಮಣನು ಹೇಳುತ್ತಾನೆ:

ಅರಣೀಂ ಬ್ರಾಹ್ಮಣೀಂ ವಿದ್ಧಿ ಗುರುರಸ್ಯೋತ್ತರಾರಣಿಃ ।
ತಪಃಶ್ರುತೇಽಭಿಮಥ್ನೀತೋ ಜ್ಞಾನಾಗ್ನಿರ್ಜಾಯತೇ ತತಃ ॥೩॥

“ಸೌಭಾಗ್ಯವತಿಯೇ! ನೀನು ಬುದ್ಧಿಯನ್ನು ಕೆಳಗಿನ ಅರಣಿಯ ನ್ನಾಗಿ ಭಾವಿಸು. ಗುರುವನ್ನು (ನನ್ನನ್ನು) ಮೇಲಿನ ಅರಣಿಯನ್ನಾಗಿ ಭಾವಿಸು. ಅಗ್ನಿಯನ್ನು ಕಡೆಯಬೇಕಾದರೆ ಎರಡು ಅರಣಿಗಳು (ಮರದ ತುಂಡುಗಳು) ಇರಬೇಕು. ಬುದ್ಧಿಯೇ ಒಂದು ಮರದ ತುಂಡು. ಗುರುವೇ ಮತ್ತೊಂದು ಮರದ ತುಂಡು. ಇವೆರಡನ್ನೂ ಮಥಿಸಬೇಕು. ತಪಸ್ಸು, ಮತ್ತು ವೇದ-ವೇದಾಂತಶ್ರವಣ-ಮನನಗಳ ಮೂಲಕವಾಗಿ ಬುದ್ಧಿಯೆಂಬ

ಅರಣಿಯನ್ನು ಗುರುವೆಂಬ ಅರಣಿಯಿಂದ ಕಡೆದರೆ ಅದರಿಂದ ಜ್ಞಾನವೆಂಬ ಅಗ್ನಿಯು ಹುಟ್ಟುತ್ತದೆ."

ಬ್ರಾಹ್ಮಣಿಯು ಪ್ರಶ್ನಿಸುತ್ತಾಳೆ:

ಯದಿದಂ ಬ್ರಾಹ್ಮಣೋ ಲಿಙ್ಗಂ ಕ್ಷೇತ್ರಜ್ಞ ಇತಿ ಸಂಜ್ಞಿತಮ್ ।
ಗ್ರಹೀತುಂ ಯೇನ ಯಚ್ಛಕ್ಯಂ ಲಕ್ಷಣಂ ತಸ್ಯ ತತ್ಕ್ವನು ॥೪॥

"ಶರೀರದೊಳಗಿರುವ, ಕ್ಷೇತ್ರಜ್ಞನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ಜೀವಾತ್ಮನನ್ನು ಬ್ರಹ್ಮದ ಗುರುತೆಂದೇ ಹೇಳಲಾಗುತ್ತಿದೆ. ಅದನ್ನು ಯಾವ ಲಕ್ಷಣದಿಂದ ಗ್ರಹಿಸಲು ಸಾಧ್ಯವಾಗುತ್ತದೆ.?"

ಬ್ರಾಹ್ಮಣನು ಹೇಳುತ್ತಾನೆ:

ಅಲಿಙ್ಗೋ ನಿರ್ಗುಣಶ್ಚೈವ ಕಾರಣಂ ನಾಸ್ಯ ಲಕ್ಷ್ಯತೇ ।
ಉಪಾಯಮೇವ ವಕ್ಷ್ಯಾಮಿ ಯೇನ ಗೃಹ್ಯೇತ ವಾ ನ ವಾ ॥೫॥

"ದೇವಿ! ಕ್ಷೇತ್ರಜ್ಞನು ವಾಸ್ತವವಾಗಿ ದೇಹಸಂಬಂಧವಿಲ್ಲದವನೂ ನಿರ್ಗುಣನೂ ಆಗಿರುವನು. ಅವನಿಗೆ ಯಾವ ಕಾರಣವೂ ಕಂಡುಬಂದಿಲ್ಲ. ನಾನು ಉಪಾಯವೊಂದನ್ನು ಹೇಳುತ್ತೇನೆ. ಆ ಉಪಾಯದಿಂದ ಅವನನ್ನು ಗ್ರಹಿಸಲೂಬಹುದು; ಗ್ರಹಿಸದೆಯೂ ಇರಬಹುದು.

ಸಮ್ಯಗಪ್ಯುಪದಿಷ್ಟಸ್ಯ ಭ್ರಮರೈರಿವ ಲಕ್ಷ್ಯತೇ ।
ಕರ್ಮಬುದ್ಧಿರಬುದ್ಧಿತ್ವಾಜ್ಜ್ಞಾನಲಿಙ್ಗೈರಿವಾಶ್ರಿತಮ್ ॥೬॥

ಎಷ್ಟೇ ಚೆನ್ನಾಗಿ ಉಪದೇಶಿಸಿದರೂ ಮನುಷ್ಯನು–ದುಂಬಿಗಳು ವಾಸನೆಯಿಂದ ಪುಷ್ಪರಸವಿರುವುದೆಂಬುದನ್ನು ತಿಳಿದುಕೊಳ್ಳುವಂತೆ–ಬ್ರಹ್ಮನ ಸ್ವರೂಪವನ್ನು ತನ್ನ ಸಂಸ್ಕಾರದಿಂದ ಮಾತ್ರವೇ ತಿಳಿದುಕೊಳ್ಳಬಲ್ಲನು. ಕರ್ಮವಿಷಯಕವಾದ ಬುದ್ಧಿಯು ಒಳ್ಳೆಯ ಬುದ್ಧಿಯೇ ಅಲ್ಲ. ಅದು ಅಬುದ್ಧಿ ಎನಿಸಿಕೊಳ್ಳುತ್ತದೆ. ಇಂತಹ ಅಬುದ್ಧಿಯನ್ನು ಹೊಂದಿರುವ ಮೂರ್ಖರು– ಕ್ಷೇತ್ರಜ್ಞನು ಅಸಂಗನಾಗಿದ್ದರೂ ಬುದ್ಧಿಯೇ ಮೊದಲಾದವುಗಳಿಂದ ಆಶ್ರಯಿಸಲ್ಪಟ್ಟಿರುವುದರಿಂದ ಸಂಗೀ–ಎಂದು ಹೇಳುತ್ತಾರೆ.

ಇದಂ ಕಾರ್ಯಮಿದಂ ನೇತಿ ನ ಮೋಕ್ಷೇಷೂಪದಿಶ್ಯತೇ ।
ಪಶ್ಯತಃ ಶೃಣ್ವತೋ ಬುದ್ಧಿರಾತ್ಮನೋ ಯೇಷು ಜಾಯತೇ ॥೭॥

ಮೋಕ್ಷದ ಸಾಧನೋಪಾಯಗಳಲ್ಲಿ ಇದನ್ನು ಮಾಡಬೇಕು–ಇದನ್ನು ಮಾಡಕೂಡದು–ಎಂದು ವಿಧಿ-ನಿಷೇಧಗಳನ್ನು ಹೇಳಿರುವುದಿಲ್ಲ. ಏಕೆಂದರೆ: ಶ್ರವಣ-ಮನನಗಳನ್ನು ಮಾಡುತ್ತಿದ್ದರೆ ಬುದ್ಧಿಯು ಆತ್ಮಸ್ವರೂಪದಲ್ಲಿಯೇ ಸೇರಿಹೋಗಿರುತ್ತದೆ.

ಯಾವನ್ತ ಇಹ ಶಕ್ಯೇರಂಸ್ತಾವನ್ತೋಽಂಶಾನ್ಪ್ರಕಲ್ಪಯೇತ್ ।
ಅವ್ಯಕ್ತಾನ್ವ್ಯಕ್ತರೂಪಾಂಶ್ಚ ಶತಶೋಽಥ ಸಹಸ್ರಶಃ ॥೮॥

ಅವ್ಯಕ್ತ ಮತ್ತು ವ್ಯಕ್ತರೂಪಗಳಲ್ಲಿ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಸಂಖ್ಯೆಯಲ್ಲಿ ನೂರಾರು ಸಾವಿರಾರು ಅಂಶಗಳಿಂದಲೂ ಬ್ರಹ್ಮವನ್ನೇ ಭಾವಿಸಬೇಕು.

ಸರ್ವಾನ್ನಾನಾರ್ಥಯುಕ್ತಾಂಶ್ಚ ಸರ್ವಾನ್ಪ್ರತ್ಯಕ್ಷಹೇತುಕಾನ್ ।
ಯತಃ ಪರಂ ನ ವಿದ್ಯೇತ ತತೋಽಭ್ಯಾಸೇ ಭವಿಷ್ಯತಿ ॥೯॥

ಬಗೆ-ಬಗೆಯ ವಿಷಯಗಳಿಂದ ಕೂಡಿದ ಪ್ರತ್ಯಕ್ಷಪ್ರಮಾಣದಿಂದ ದೊರೆಯುವ ಯಾವ ಅಂಶಗಳೇ ಬಂದರೂ ಅವೆಲ್ಲವನ್ನೂ ಬ್ರಹ್ಮಭಾವದಿಂದ ನೋಡುತ್ತಾ ಇನ್ನು ಮುಂದೆ ಅವುಗಳಿಗೆ ಗತಿಯಿಲ್ಲ. (ಅವು ಬ್ರಹ್ಮವಲ್ಲ)–ಎನ್ನುವ ಅನುಭವವು ಬರುವವರೆಗೂ ಆ ಸಾಧನೆಯಲ್ಲಿರಬೇಕು. ಇದು ಅಭ್ಯಾಸದಿಂದ ಸಿದ್ಧವಾಗುತ್ತದೆ.”

ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ:

ತತಸ್ತು ತಸ್ಯಾ ಬ್ರಾಹ್ಮಣ್ಯಾ ಮತಿಃ ಕ್ಷೇತ್ರಜ್ಞ ಸಂಕ್ಷಯೇ ।
ಕ್ಷೇತ್ರಜ್ಞಾದೇವ ಪರತಃ ಕ್ಷೇತ್ರಜ್ಞೋಽನ್ಯಃ ಪ್ರವರ್ತತೇ ॥೧೦॥

“ಬ್ರಾಹ್ಮಣನು ಹೀಗೆ ಹೇಳಿದ ಬಳಿಕ ಬ್ರಾಹ್ಮಣಿಯ ಬುದ್ಧಿಯು, ಜೀವಾತ್ಮನು ಪರಮಾತ್ಮನಲ್ಲಿ ವಿಶ್ರಾಂತಿಪಡೆದನಂತರ, ಆ ಜೀವರೂಪವಾದ ಕ್ಷೇತ್ರಜ್ಞನಿಗಿಂತ ಪರದಲ್ಲಿರುವ ಪರಮಾತ್ಮನೆಂಬ ಕ್ಷೇತ್ರಜ್ಞನಿಂದಲೇ

ಜೀವರೂಪನಾದ ಕ್ಷೇತ್ರಜ್ಞನು ನಿಯಮಿಸಲ್ಪಡುತ್ತಾನೆ–ಎಂಬ ನಿಶ್ಚಯಕ್ಕೆ ಬಂದಿತು.”

ಅರ್ಜುನನು ಪ್ರಶ್ನಿಸುತ್ತಾನೆ:

“ಕೃಷ್ಣ! ಆ ಸಿದ್ಧಿಯನ್ನು ಪಡೆದ ದಂಪತಿಗಳಲ್ಲಿ ಬ್ರಾಹ್ಮಣಿಯು ಯಾರು? ಬ್ರಾಹ್ಮಣನು ಯಾರು? ಅವರಿಬ್ಬರ ಪರಿಚಯವನ್ನೂ ಮಾಡಿಕೊಡು.”

ಶ್ರೀಕೃಷ್ಣನು ಹೇಳುತ್ತಾನೆ:

ಮನೋ ಮೇ ಬ್ರಾಹ್ಮಣಂ ವಿದ್ಧಿಂ ಬುದ್ಧಿ ಮೇ ವಿದ್ಧಿ ಬ್ರಾಹ್ಮಣೀಮ್ ।
ಕ್ಷೇತ್ರಜ್ಞ ಇತಿ ಯಶ್ಪೋಕ್ತಃ ಸೋಽಹಮೇವ ಧನಂಜಯ ॥೧೨॥

“ಧನಂಜಯನೇ! ನನ್ನ ಮನಸ್ಸನ್ನೇ ಬ್ರಾಹ್ಮಣನೆಂದು ತಿಳಿ. ನನ್ನ ಬುದ್ಧಿಯನ್ನೇ ಬ್ರಾಹ್ಮಣಿಯೆಂದು ಭಾವಿಸು. ಕ್ಷೇತ್ರಜ್ಞನೆಂದು ಹೇಳಲ್ಪಟ್ಟಿರುವವನೂ ನಾನೇ ಆಗಿದ್ದೇನೆ.”

ಽಳನೆಯ ಅಧ್ಯಾಯವು ಮುಗಿಯಿತು.

ಽಜನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನಿಂದ ಅರ್ಜುನನಿಗೆ ಮೋಕ್ಷಧರ್ಮದ ವರ್ಣನೆ: ಗುರು–ಶಿಷ್ಯರ ಸಂವಾದದಲ್ಲಿ ಬ್ರಹ್ಮ-ಮಹರ್ಷಿಗಳ ಪ್ರಶ್ನೋತ್ತರ

ಅರ್ಜುನನು ಪ್ರಶ್ನಿಸುತ್ತಾನೆ:

ಬ್ರಹ್ಮ ಯತ್ಪರಮಂ ಜ್ಞೇಯಂ ತನ್ಮೇ ವ್ಯಾಖ್ಯಾತುಮರ್ಹಸಿ ।
ಭವತೋ ಹಿ ಪ್ರಸಾದೇನ ಸೂಕ್ಷ್ಮೇ ಮೇ ರಮತೇ ಮತಿಃ ॥೧॥

“ಕೃಷ್ಣ! ನಿನ್ನ ಅನುಗ್ರಹದಿಂದ ಈಗ ನನ್ನ ಬುದ್ಧಿಯು ಸೂಕ್ಷ್ಮವಿಷಯದ ಶ್ರವಣದಲ್ಲಿ ಆಸಕ್ತವಾಗಿದೆ. ಆದುದರಿಂದ ಪರಬ್ರಹ್ಮದ ಸ್ವರೂಪವನ್ನು ವಿವರಿಸಿ ಹೇಳುವ ಕೃಪೆಮಾಡು.”

ವಾಸುದೇವನು ಹೇಳುತ್ತಾನೆ:

"ಅರ್ಜುನ! ಈ ವಿಷಯದಲ್ಲಿ ಹಿಂದೆ ಗುರು-ಶಿಷ್ಯರಿಗೆ ನಡೆದ ಮೋಕ್ಷ ವಿಷಯದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಶತ್ರುಗಳನ್ನು ಸಂತಾಪಗೊಳಿಸುವವನೇ! ಮೇಧಾವಿಯಾದ ಶಿಷ್ಯನೊಬ್ಬನು ಸುಖಾಸನದಲ್ಲಿ ಕುಳಿತಿದ್ದ ಕಠೋರವ್ರತನಿಷ್ಠನಾದ, ಆಚಾರ್ಯನಾದ ಬ್ರಾಹ್ಮಣನನ್ನು ಪ್ರಶ್ನಿಸಿದನು:

"ಪೂಜ್ಯರೇ! ಶಾಶ್ವತವಾದ ಮೋಕ್ಷಸುಖದಲ್ಲಿಯೇ ಶ್ರದ್ಧೆಯುಳ್ಳವನಾಗಿ ಅದನ್ನು ತಿಳಿದುಕೊಳ್ಳಲು ನಿಮ್ಮನ್ನು ಶರಣುಹೊಂದಿದ್ದೇನೆ. ತಲೆಬಾಗಿ ನಮಸ್ಕರಿಸುತ್ತಾ ನಿನ್ನನ್ನು ಬೇಡಿಕೊಳ್ಳುತ್ತೇನೆ. ಶ್ರೇಯಸ್ಸು– ಎಂದರೇನು? ಇದರ ವಿಷಯವಾಗಿ ತಿಳಿಯಹೇಳಿರಿ."

ಅರ್ಜುನ! ಹೀಗೆ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಂಡ ಶಿಷ್ಯನಿಗೆ ಗುರುವು ಹೇಳಿದನು:

ಸರ್ವಂ ತು ತೇ ಪ್ರವಕ್ಷ್ಯಾಮಿ ಯತ್ರ ವೈ ಸಂಶಯೋ ದ್ವಿಜ ॥೫॥

"ಬ್ರಾಹ್ಮಣವಟುವೇ! ನಿನಗೆಲ್ಲಿ ಸಂಶಯವಿದೆಯೆಂಬುದನ್ನು ಹೇಳು. ನಿನ್ನ ಎಲ್ಲ ಸಂಶಯಗಳನ್ನೂ ಪರಿಹಾರಮಾಡಿಕೊಡುತ್ತೇನೆ."

ಮಹಾಮತಿಯೇ! ಕುರುಶ್ರೇಷ್ಠನೇ! ಗುರುಪ್ರಿಯನಾದ ಆ ಶಿಷ್ಯನಿಗೆ ಗುರುವು ಹೀಗೆ ಹೇಳಲಾಗಿ ಆ ಶಿಷ್ಯನು ಕೈ ಜೋಡಿಸಿಕೊಂಡು ಯಾವ ಯಾವ ಪ್ರಶ್ನೆಗಳನ್ನು ಕೇಳಿದನೆಂಬುದನ್ನು ಹೇಳುವೆನು ಕೇಳು.

ಕುತಶ್ಚಾಹಂ ಕುತಶ್ಚ ತ್ವಂ ತತ್ಸತ್ಯಂ ಬ್ರೂಹಿ ಯತ್ಪರಮ್ ।
ಕುತೋ ಜಾತಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ॥೭॥

"ವಿಪ್ರಶ್ರೇಷ್ಠರೇ! ನಾನು ಎಲ್ಲಿಂದ ಬಂದಿರುವೆನು? ನೀವು ಎಲ್ಲಿಂದ ಬಂದಿರುವಿರಿ? ಜಗತ್ತಿನಲ್ಲಿ ಹುಟ್ಟಿರುವ ಈ ಚರಾಚರಪ್ರಾಣಿಗಳೆಲ್ಲವೂ ಎಲ್ಲಿಂದ ಹುಟ್ಟಿವೆ? ಪರಮತತ್ತ್ವವು ಯಾವುದು? ಇದನ್ನು ಯಥಾವತ್ತಾಗಿ ಹೇಳಿರಿ.

ಕೇನ ಜೀವನ್ತಿ ಭೂತಾನಿ ತೇಷಾಮಾಯುಶ್ಚ ಕಿಂ ಪರಮ್ ।
ಕಿಂ ಸತ್ಯಂ ಕಿಂ ತಪೋ ವಿಪ್ರ ಕೇ ಗುಣಾಃ ಸದ್ಭಿರೀರಿತಾಃ ॥೮॥

ಪ್ರಾಣಿಗಳು ಯಾವುದರಿಂದ ಜೀವಿಸುತ್ತವೆ? ಅವುಗಳ ಅತ್ಯಧಿಕವಾದ ಆಯುಷ್ಯವೆಷ್ಟು? ಸತ್ಯ ಮತ್ತು ತಪಸ್ಸು ಎಂದರೇನು? ಸತ್ಪುರುಷರು ಪ್ರಶಂಸಿಸುವ ಗುಣಗಳು ಯಾವುವು?

ಕೇ ಪನ್ಥಾನಃ ಶಿವಾಶ್ಚ ಸ್ಯುಃ ಕಿಂ ಸುಖಂ ಕಿಂ ಚ ದುಷ್ಕೃತಮ್ ।
ಏತಾನ್ಮೇ ಭಗವನ್ಪ್ರಶ್ನಾನ್ಯಾಥಾತಥ್ಯೇನ ಸುವ್ರತ ॥೯॥

ವಕ್ತುಮರ್ಹಸಿ ವಿಪ್ರರ್ಷೇ ಯಥಾವದಿಹ ತತ್ತ್ವತಃ ।
ತ್ವದನ್ಯಃ ಕಶ್ಚ ನ ಪ್ರಶ್ನಾನೇತಾನ್ವಕ್ತುಮಿಹಾರ್ಹತಿ ॥೧೦॥

ಬ್ರೂಹಿ ಧರ್ಮವಿದಾಂ ಶ್ರೇಷ್ಠ ಪರಂ ಕೌತೂಹಲಂ ಮಮ ।
ಮೋಕ್ಷಧರ್ಮಾರ್ಥಕುಶಲೋ ಭವಾಲ್ಲೋಕೇಷು ಗೀಯತೇ ॥೧೧॥

ಮಂಗಳಕರವಾದ ಮಾರ್ಗಗಳು ಯಾವುವು? ಸುಖವೆಂದರೇನು? ಯಾವುದನ್ನು ಪಾಪವೆಂದು ಹೇಳುತ್ತಾರೆ? ಸುವ್ರತರೇ! ವಿಪ್ರರ್ಷಿಗಳೇ! ಪೂಜ್ಯರೇ! ಈ ಪ್ರಶ್ನೆಗಳಿಗೆ ಉತ್ತರವನ್ನು ಯಥಾವತ್ತಾಗಿ ಹೇಳುವ ಕೃಪೆಮಾಡಿರಿ. ನಿಮ್ಮನ್ನು ಬಿಟ್ಟರೆ ಬೇರೆ ಯಾರೂ ಇಂತಹ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾರರು. ಧರ್ಮವಿದರಲ್ಲಿ ಶ್ರೇಷ್ಠರಾದವರೇ! ನನಗೆ ನಿಮ್ಮಿಂದ ಉತ್ತರವನ್ನು ಕೇಳಲು ವಿಶೇಷವಾದ ಕೌತೂಹಲವುಂಟಾಗಿದೆ. ಆದುದರಿಂದ ದಯಮಾಡಿ ಹೇಳುವ ಕೃಪೆಮಾಡಿರಿ. ಲೋಕದಲ್ಲಿ ಮೋಕ್ಷಧರ್ಮವನ್ನು ವಿವರಿಸಿ ಹೇಳುವುದರಲ್ಲಿ ಮಹಾಕುಶಲರೆಂದು ನಿಮ್ಮನ್ನು ಹಾಡಿ ಹೊಗಳುತ್ತಿದ್ದಾರೆ.

ಸರ್ವಸಂಶಯಸಂಛೇತ್ತಾ ತ್ವದನ್ಯೋ ನ ಚ ವಿದ್ಯತೇ ।
ಸಂಸಾರಭೀರವಶ್ಚೈವ ಮೋಕ್ಷಕಾಮಾಸ್ತಥಾ ವಯಮ್ ॥೧೨॥

ನಿಮ್ಮನ್ನು ಬಿಟ್ಟರೆ ಎಲ್ಲ ಸಂಶಯಗಳನ್ನೂ ನಿವಾರಣೆಮಾಡುವವರು ಬೇರೆ ಯಾರೂ ಇಲ್ಲ. ನಾವು ಈ ಅಪಾರವಾದ ಸಂಸಾರದಿಂದ ಭಯಗೊಂಡಿದ್ದೇವೆ. ಆದುದರಿಂದಲೇ ಮೋಕ್ಷವನ್ನು ಬಯಸುತ್ತೇವೆ. ದಯಮಾಡಿ ಮೋಕ್ಷಧರ್ಮವನ್ನು ಹೇಳುವ ಕೃಪೆಮಾಡಿರಿ.”

ಶ್ರೀಕೃಷ್ಣನು ಹೇಳುತ್ತಾನೆ:

“ಕುರುಕುಲಶ್ರೇಷ್ಠನೇ! ಶತ್ರುಸೂದನನೇ! ಅರ್ಜುನ! ಅತ್ಯಂತವಿನೀತನಾಗಿದ್ದ, ಯಥೋಚಿತವಾದ ಪ್ರಶ್ನೆಗಳನ್ನೇ ಕೇಳಿದ್ದ, ಗುಣಶಾಲಿಯಾಗಿದ್ದ. ಶಾಂತನಾಗಿದ್ದ, ಗುರುವಿನ ನೆರಳಿನಂತೆಯೇ ಯಾವಾಗಲೂ ಜೊತೆಯಲ್ಲಿಯೇ ಇದ್ದುಕೊಂಡು ಗುರುವಿಗೆ ಪ್ರಿಯವಾಗುವ ರೀತಿಯಲ್ಲಿ ವ್ಯವಹರಿಸುತ್ತಿದ್ದ, ಜಿತೇಂದ್ರಿಯನಾದ, ಪ್ರಯತ್ನಶೀಲನಾದ, ಬ್ರಹ್ಮಚಾರಿಯ ಆ ಪ್ರಶ್ನೆಗಳಿಗೆ ಮೇಧಾವಿಯಾದ, ವ್ರತನಿಷ್ಠನಾದ ಗುರುವು ಸಮಂಜಸವಾದ ಉತ್ತರಗಳನ್ನು ಹೇಳಿದನು.

ಬ್ರಹ್ಮಣೋಕ್ತಮಿದಂ ಸರ್ವಮೃಷಿಪ್ರವರಸೇವಿತಮ್ ।
ವೇದಾವಿದ್ಯಾಂ ಸಮಾಶ್ರಿತ್ಯ ತತ್ತ್ವಭೂತಾರ್ಥಭಾವನಮ್ ॥೧೫॥

“ಮಗು! ಬ್ರಹ್ಮನು ವೇದವಿದ್ಯೆಯನ್ನೇ ಆಧರಿಸಿ ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೂ ಹಿಂದೆಯೇ ಉತ್ತರವನ್ನು ಹೇಳಿರುವನು. ಋಷಿಶ್ರೇಷ್ಠರೆಲ್ಲರೂ ಬ್ರಹ್ಮನ ಆ ತತ್ತ್ವವನ್ನೇ ಆಶ್ರಯಿಸಿರುವರು. ಬ್ರಹ್ಮನು ಹೇಳಿರುವುದರಲ್ಲಿ ಪರಮಾರ್ಥವಿಷಯಕವಾದ ವಿಚಾರವಿದೆ.

ಜ್ಞಾನಂ ತ್ವೇವ ಪರಂ ವಿದ್ಮಃ ಸಂನ್ಯಾಸಂ ತಪ ಉತ್ತಮಮ್ ।
ಯಸ್ತು ವೇದ ನಿರಾಬಾಧಂ ಜ್ಞಾನತತ್ತ್ವಂ ವಿನಿಶ್ಚಯಾತ್ ।
ಸರ್ವಭೂತಸ್ಥಮಾತ್ಮಾನಂ ಸ ಸರ್ವಗತಿರಿಷ್ಯತೇ ॥೧೬॥

ನಾವು ಜ್ಞಾನವನ್ನೇ ಪರವಸ್ತುವೆಂದೂ-ಸಂನ್ಯಾಸವನ್ನೇ ಶ್ರೇಷ್ಠವಾದ ತಪಸ್ಸೆಂದೂ ತಿಳಿಯುತ್ತೇವೆ. ಯಾವನು ಅಬಾಧಿತವಾದ ಜ್ಞಾನತತ್ತ್ವವಾಗಿ ಸರ್ವಪ್ರಾಣಿಗಳ ಹೃದಯಗಳಲ್ಲಿಯೂ ಇರುವ ಪರಮಾತ್ಮನನ್ನು ನಿಶ್ಚಯವಾಗಿ ತಿಳಿಯುವನೋ-ಅಂತಹವನು ಸರ್ವಗತಿ ಅಥವಾ ಸರ್ವವ್ಯಾಪೀ ಎಂದು ತಿಳಿಯಲ್ಪಡುತ್ತಾನೆ.*

---

*ಸರ್ವಗತಿಃ-ಎಂಬುದಕ್ಕೆ ಶ್ರುತಿಯು ಹೀಗೆ ಹೇಳುತ್ತದೆ: ಏತತ್ಸರ್ವಂ ಸರ್ವಭೂತಸ್ಥಂ ಚ ಆತ್ಮನಃ ಸಂಪ್ರಜ್ಞಾತಾವಸ್ಥಯಾ ವೇದ ಸಃ ಸರ್ವಗತಿಃ ಸರ್ವಕಾಮಭಾಕ್ ಭವತಿ। ಸರ್ವೇಷು ಲೋಕೇಷು ಕಾಮಚಾರೋ ಭವತಿ ॥

ಯೋ ವಿದ್ವಾನ್ಸಹಸಂವಾಸಂ ವಿವಾಸಂ ಚೈವ ಪಶ್ಯತಿ ।
ತಥೈವೈಕತ್ವನಾನಾತ್ವೇ ಸ ದುಃಖಾತ್ಪರಿಮುಚ್ಯತೇ ॥೧೭॥

ಯಾವ ವಿದ್ವಾಂಸನು ಸಂಯೋಗ-ವಿಯೋಗಗಳನ್ನೂ (ಸಂಯೋಗದಲ್ಲಿ ವಿಯೋಗವನ್ನು ವಿಯೋಗದಲ್ಲಿ ಸಂಯೋಗವನ್ನೂ) ಏಕತ್ವ-ನಾನಾತ್ವಗಳನ್ನೂ (ಏಕತೆಯಲ್ಲಿ ಬಹುತ್ವವನ್ನೂ ಬಹುತ್ವದಲ್ಲಿ ಏಕತೆಯನ್ನೂ) ತತ್ತ್ವದೃಷ್ಟಿಯಿಂದ ತಿಳಿದಿರುವನೋ–ಅವನು ದುಃಖದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಯೋ ನ ಕಾಮಯತೇ ಕಿಂಚಿನ್ನ ಕಿಂಚಿದಭಿಮನ್ಯತೇ ।
ಇಹಲೋಕಸ್ಥ ಏವೈಷ ಬ್ರಹ್ಮಭೂಯಾಯ ಕಲ್ಪತೇ ॥೧೮॥

ಯಾವನು ಯಾವುದೇ ವಸ್ತುವನ್ನೂ ಅಪೇಕ್ಷಿಸುವುದಿಲ್ಲವೋ, ಯಾವುದರ ಮೇಲೂ ಅಭಿಮಾನವಿಟ್ಟುಕೊಳ್ಳುವುದಿಲ್ಲವೋ (ಅಹಂಕಾರ ರಹಿತನೋ)–ಅಂತಹವನು ಈ ಲೋಕದಲ್ಲಿದ್ದರೂ ಬ್ರಹ್ಮಭಾವವನ್ನು ಹೊಂದುತ್ತಾನೆ.

ಪ್ರಧಾನಗುಣತತ್ತ್ವಜ್ಞಃ ಸರ್ವಭೂತವಿಧಾನವಿತ್ ।
ನಿರ್ಮಮೋ ನಿರಹಙ್ಕಾರೋ ಮುಚ್ಯತೇ ನಾತ್ರ ಸಂಶಯಃ ॥೧೯॥

ಯಾವನು ಪ್ರಕೃತಿಯ ಸತ್ತ್ವಾದಿಗುಣಗಳ ರಹಸ್ಯವನ್ನು ತಿಳಿದಿರುವನೋ, ಸರ್ವಪ್ರಾಣಿಗಳ ಸೃಷ್ಟಿರಹಸ್ಯವನ್ನು ತಿಳಿದಿರುವನೋ, 'ನಾನು-ನನ್ನದು' ಎಂಬ ಮಮಕಾರವನ್ನು ಬಿಟ್ಟಿರುವನೋ, ನಿರಹಂಕಾರಿಯೋ–ಅವನು ಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಅವ್ಯಕ್ತಬೀಜಪ್ರಭವೋ ಬುದ್ಧಿಸ್ಕನ್ಧಮಯೋ ಮಹಾನ್ ।
ಮಹಾಹಙ್ಕಾರ ವಿಟಪ ಇನ್ದ್ರಿಯಾಙ್ಕುರಕೋಟರಃ ॥೨೦॥

ಮಹಾಭೂತವಿಶೇಷಶ್ಚ ವಿಶೇಷಪ್ರತಿಶಾಖವಾನ್ ।
ಸದಾಪರ್ಣಃ ಸದಾಪುಷ್ಪಃ ಸದಾ ಶುಭಫಲೋದಯಃ ॥೨೧॥

ಆಜೀವಃ ಸರ್ವಭೂತಾನಾಂ ಬ್ರಹ್ಮಬೀಜಃ ಸನಾತನಃ ।
ಏತಜ್ಜ್ಞಾತ್ವಾ ಚ ತತ್ತ್ವಾನಿ ಜ್ಞಾನೇನ ಪರಮಾಸಿನಾ ।
ಛಿತ್ತ್ವಾ ಚಾಮರತಾಂ ಪ್ರಾಪ್ಯ ಜಹಾತಿ ಮೃತ್ಯುಜನ್ಮನೀ ॥೨೨॥

ಈ ದೇಹವು ಒಂದು ಮರದಂತಿದೆ. ಅವ್ಯಕ್ತನಾದ ಬ್ರಹ್ಮಬೀಜದಿಂದ ಇದು ಹುಟ್ಟಿದೆ. ಬುದ್ಧಿಯೆಂಬುದೇ ಕವಲೊಡೆಯುವ ಭಾಗವಾಗಿದೆ. ಅಹಂಕಾರವೆಂಬುದೇ ರೆಂಬೆಗಳಾಗಿವೆ. ಇಂದ್ರಿಯಗಳೇ ಪೊಟರೆಗಳಾಗಿವೆ. ಮಹಾಭೂತಗಳ ವಿಶೇಷಭೇದಗಳೇ ಆ ವೃಕ್ಷದ ಉಪಶಾಖೆಗಳೂ ಆಗಿವೆ. ಆ ವೃಕ್ಷವು ಯಾವಾಗಲೂ ಸಂಕಲ್ಪರೂಪವಾದ ಎಲೆಗಳಿಂದಲೂ ಕರ್ಮ ರೂಪವಾದ ಪುಷ್ಪಗಳಿಂದಲೂ ಭರಿತವಾಗಿರುತ್ತದೆ. ಶುಭಾಶುಭಕರ್ಮ ಗಳಿಂದ ಪ್ರಾಪ್ತವಾಗುವ ಸುಖ-ದುಃಖಾದಿಗಳೇ ಆ ವೃಕ್ಷದಲ್ಲಿ ಸದಾ ಫಲರೂಪದಲ್ಲಿರುತ್ತವೆ. ಹೀಗೆ ಬ್ರಹ್ಮರೂಪಿಯಾದ ಬೀಜದಿಂದ ಪ್ರಕಟವಾಗಿ ಪ್ರವಾಹರೂಪದಲ್ಲಿ ನಿರಂತರವಾಗಿರುವ ದೇಹರೂಪವಾದ ಈ ವೃಕ್ಷವು ಎಲ್ಲ ಪ್ರಾಣಿಗಳೂ ಜೀವಿಸಲು ಆಧಾರಭೂತವಾಗಿದೆ. ಯಾವನು ಶರೀರದ ಈ ತತ್ತ್ವಗಳನ್ನು ಚೆನ್ನಾಗಿ ತಿಳಿದುಕೊಂಡು ಜ್ಞಾನರೂಪವಾದ ಮತ್ತು ಶ್ರೇಷ್ಠವಾದ ಕತ್ತಿಯಿಂದ ಈ ದೇಹವೃಕ್ಷವನ್ನು ಅಥವಾ ಸಂಸಾರವೃಕ್ಷವನ್ನು ಕತ್ತರಿಸಿಹಾಕು ವನೋ–ಅವನು ಅಮರತ್ವವನ್ನು ಹೊಂದಿ ಹುಟ್ಟು-ಸಾವುಗಳ ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಭೂತಭವ್ಯಭವಿಷ್ಯಾದಿ ಧರ್ಮಕಾಮಾರ್ಥನಿಶ್ಚಯಮ್ ।
ಸಿದ್ಧಸಂಘಪರಿಜ್ಞಾತಂ ಪುರಾಕಲ್ಪಂ ಸನಾತನಮ್ ॥೨೩॥
ಪ್ರವಕ್ಷ್ಯೇಽಹಂ ಮಹಾಪ್ರಾಜ್ಞ ಪದಮುತ್ತಮಮದ್ಯ ವೈ ।
ಬುದ್ಧ್ವಾ ಯದಿಹ ಸಂಸಿದ್ಧಾ ಭವನ್ತೀಹ ಮನೀಷಿಣಃ ॥೨೪॥

ಮಹಾಪ್ರಾಜ್ಞನೇ! ಯಾವುದು ಸಿದ್ಧರ ಸಮುದಾಯದಿಂದ ತಿಳಿದು ಬಂದಿರುವುದೋ (ಅಥವಾ ಸಿದ್ಧರ ಸಮುದಾಯಕ್ಕೆ ಮಾತ್ರ ತಿಳಿದಿರು ವುದೋ) ಅಂತಹ ಶಾಶ್ವತವೂ, ಶ್ರೇಷ್ಠವೂ ಆದ ಭೂತ-ಭವಿಷ್ಯದ್ವರ್ತ ಮಾನಗಳಿಗೆ ಸೇರಿದ ಧರ್ಮಾರ್ಥ-ಕಾಮಗಳ ನಿಶ್ಚಯವನ್ನು ಈಗ ಹೇಳು ವೆನು; ಕೇಳು. ಇದನ್ನರಿತ ವಿದ್ವಾಂಸರು ಸಿದ್ಧರೇ ಆಗಿಬಿಡುತ್ತಾರೆ. ಹಿಂದೊಮ್ಮೆ ದಕ್ಷಪ್ರಜಾಪತಿ, ಭರದ್ವಾಜ, ಗೌತಮ, ಭೃಗುವಿನ ಮಗನಾದ ಶುಕ್ರ, ವಸಿಷ್ಠ, ಕಶ್ಯಪ, ವಿಶ್ವಾಮಿತ್ರ ಮತ್ತು ಅತ್ರಿ–ಇವರು ತಮ್ಮ ಕರ್ಮಗಳ ಮೂಲಕ ಸಮಸ್ತಮಾರ್ಗಗಳನ್ನೂ ಅತಿಕ್ರಮಿಸಿ ಹೋಗುತ್ತಾ ಬಹಳವಾಗಿ ಆಯಾಸ ಗೊಂಡರು. ಅವರೆಲ್ಲರೂ ಒಂದೆಡೆಯಲ್ಲಿ ಕುಳಿತು ಪರಸ್ಪರವಾಗಿ ಜಿಜ್ಞಾಸೆ ಮಾಡುತ್ತಿದ್ದರು. ಅವರು ಯಾವ ನಿರ್ಣಯಕ್ಕೂ ಬರಲು ಸಾಧ್ಯವಾಗದ

ಕಾರಣ ವೃದ್ಧನಾದ ಆಂಗೀರಸಮುನಿಯನ್ನು ಮುಂದೆ ಮಾಡಿಕೊಂಡು ಬ್ರಹ್ಮನ ಲೋಕಕ್ಕೆ ಹೋಗಿ ಅಲ್ಲಿ ಪಾಪರಹಿತನಾದ ಬ್ರಹ್ಮನನ್ನು ಸಂದರ್ಶಿಸಿದರು. ಸುಖಾಸನದಲ್ಲಿ ಕುಳಿತಿದ್ದ ಮಹಾತ್ಮನಾದ ಬ್ರಹ್ಮನಿಗೆ ಮಹರ್ಷಿಗಳೆಲ್ಲರೂ ವಿನಯಪೂರ್ವಕವಾಗಿ ನಮಸ್ಕರಿಸಿ ಪರಮಕಲ್ಯಾಣಕ್ಕೆ ಸಾಧನಭೂತವಾದ ಈ ಪ್ರಶ್ನೆಯನ್ನು ಕೇಳಿದರು:

ಕಥಂ ಕರ್ಮ ಕ್ರಿಯಾತ್ಸಾಧು ಕಥಂ ಮುಚ್ಯೇತ ಕಿಲ್ಬಿಷಾತ್।
ಕೇ ನೋ ಮಾರ್ಗಾಃ ಶಿವಾಶ್ಚ ಸ್ಯುಃ ಕಿಂ ಸತ್ಯಂ ಕಿಂ ಚ ದುಷ್ಕೃತಮ್ ॥೨೯॥

"ಪಿತಾಮಹನೇ! ಒಳ್ಳೆಯ ಕರ್ಮವನ್ನು ಹೇಗೆ ಮಾಡಬೇಕು? ಮನುಷ್ಯನು ಪಾಪದಿಂದ ಹೇಗೆ ಮುಕ್ತನಾಗುತ್ತಾನೆ? ಯಾವ ಮಾರ್ಗಗಳು ನಮಗೆ ಕಲ್ಯಾಣವನ್ನುಂಟುಮಾಡತಕ್ಕುವುಗಳು? ಸತ್ಯವೆಂದರೇನು? ಪಾಪವೆಂದರೇನು?

ಕೌ ಚೋಭೌ ಕರ್ಮಣಾಂ ಮಾರ್ಗೌ ಪ್ರಾಪ್ನುಯುರ್ದಕ್ಷಿಣೋತ್ತರೌ।
ಪ್ರಲಯಂ ಚಾಪವರ್ಗಂ ಚ ಭೂತಾನಾಂ ಪ್ರಭವಾಪ್ಯಯೌ ॥೩೦॥

ಕರ್ಮಗಳ ಎರಡು ಮಾರ್ಗಗಳು ಯಾವುವು? ಯಾವುದರಿಂದ ಮನುಷ್ಯನು ದಕ್ಷಿಣಾಯನ ಅಥವಾ ಉತ್ತರಾಯಣಗತಿಯನ್ನು ಹೊಂದುವನು? ಪ್ರಲಯವೆಂದರೇನು? ಮೋಕ್ಷವೆಂದರೇನು? ಪ್ರಾಣಿಗಳ ಹುಟ್ಟು-ಸಾವುಗಳು ಹೇಗೆ ಉಂಟಾಗುತ್ತವೆ?"

ಶಿಷ್ಯನೇ! ಆಂಗೀರಸನೇ ಮೊದಲಾದ ಮುನಿಶ್ರೇಷ್ಠರು ಹೀಗೆ ಕೇಳಲಾಗಿ ಪಿತಾಮಹನಾದ ಬ್ರಹ್ಮನು ಅವರಿಗೆ ಹೇಳಿದುದನ್ನು ನಿನಗೂ ಶಾಸ್ತ್ರಾನುಸಾರವಾಗಿ ಸಮಗ್ರವಾಗಿ ಹೇಳುವೆನು; ಕೇಳು:

ಸತ್ಯಾದ್ಭೂತಾನಿ ಜಾತಾನಿ ಸ್ಥಾವರಾಣಿ ಚರಾಣಿ ಚ ।
ತಪಸಾ ತಾನಿ ಜೀವನ್ತಿ ಇತಿ ತದ್ವಿತ್ತ ಸುವ್ರತಾಃ ।
ಸ್ವಾಂ ಯೋನಿಂ ಸಮತಿಕ್ರಮ್ಯ ವರ್ತನ್ತೇ ಸ್ವೇನ ಕರ್ಮಣಾ ॥೩೧॥

"ಉತ್ತಮವ್ರತಗಳನ್ನು ಪರಿಪಾಲಿಸುವ ಮಹರ್ಷಿಗಳೇ! ಚರಾಚರ ಪ್ರಾಣಿಗಳೆಲ್ಲವೂ ಸತ್ಯಸ್ವರೂಪನಾದ ಪರಮಾತ್ಮನಿಂದಲೇ ಹುಟ್ಟುತ್ತವೆ. ಅವೆಲ್ಲವೂ ತಪೋರೂಪವಾದ ಕರ್ಮಗಳಿಂದ ಜೀವಿಸುತ್ತವೆ. ಅವು ತಮ್ಮ

ಉತ್ಪತ್ತಿಗೆ ಕಾರಣವಾದ ಸತ್ಯಸ್ವರೂಪನಾದ ಪರಮಾತ್ಮನನ್ನೇ ಮರೆತು ತಮ್ಮ-ತಮ್ಮ ಕರ್ಮಾನುಸಾರವಾಗಿ ಹುಟ್ಟು-ಸಾವುಗಳ ಚಕ್ರದಲ್ಲಿ ಸಿಕ್ಕಿ ಸುತ್ತುತ್ತಿರುತ್ತವೆ. ಇದನ್ನು ದೃಢವಾಗಿ ತಿಳಿಯಿರಿ.

ಸತ್ಯಂ ಹಿ ಗುಣಸಂಯುಕ್ತಂ ನಿಯತಂ ಪಞ್ಚಲಕ್ಷಣಮ್ ।

ಗುಣಗಳಿಂದ ಯುಕ್ತವಾದ ಸತ್ಯವು ಕೂಡ ಐದು ಲಕ್ಷಣಗಳಿಂದ ಕೂಡಿರುವುದೆಂಬುದು ನಿಯತವಾಗಿದೆ.

ಬ್ರಹ್ಮ ಸತ್ಯಂ ತಪಃ ಸತ್ಯಂ ಸತ್ಯಂ ಚೈವ ಪ್ರಜಾಪತಿಃ ।
ಸತ್ಯಾದ್ಭೂತಾನಿ ಜಾತಾನಿ ಸತ್ಯಂ ಭೂತಮಯಂ ಜಗತ್ ॥೩೪॥

ಬ್ರಹ್ಮವೂ ಸತ್ಯವಾಗಿದೆ. ತಪಸ್ಸೂ ಸತ್ಯವಾಗಿದೆ. ಪ್ರಜಾಪತಿಯೂ ಸತ್ಯಸ್ವರೂಪನೇ ಆಗಿದ್ದಾನೆ. ಸತ್ಯದಿಂದಲೇ ಎಲ್ಲ ಪ್ರಾಣಿಗಳೂ ಹುಟ್ಟಿವೆ. ಈ ಭೌತಿಕವಾದ ಜಗತ್ತೂ ಸತ್ಯಸ್ವರೂಪವೇ ಆಗಿದೆ.

ತಸ್ಮಾತ್ಸತ್ಯಮಯಾ ವಿಪ್ರಾ ನಿತ್ಯಂ ಯೋಗಪರಾಯಣಾಃ ।
ಅತೀತಕ್ರೋಧಸಂತಾಪಾ ನಿಯತಾ ಧರ್ಮಸೇವಿನಃ ॥೩೫॥

ಈ ಕಾರಣದಿಂದಲೇ ಸದಾ ಯೋಗವನ್ನೇ ಆಶ್ರಯಿಸಿರುವ, ಕ್ರೋಧ-ಸಂತಾಪಗಳಿಂದ ದೂರವಿರುವ, ನಿಯಮಗಳನ್ನು ಪರಿಪಾಲಿಸುವ, ಧರ್ಮಸೇವಿಗಳಾದ ಬ್ರಾಹ್ಮಣರು ಸತ್ಯಸ್ವರೂಪರೇ ಆಗಿರುತ್ತಾರೆ.

ಅನ್ಯೋನ್ಯನಿಯತಾನ್ವೈದ್ಯಾನ್ಧರ್ಮಸೇತುಪ್ರವರ್ತಕಾನ್ ।
ತಾನಹಂ ಸಮ್ಪ್ರವಕ್ಷ್ಯಾಮಿ ಶಾಶ್ವತಾಲ್ಲೋಕಭಾವನಾನ್ ॥೩೬॥

ಧರ್ಮಭೀರುಗಳಾದ, ಪರಸ್ಪರ ಹೊಂದಿಕೊಂಡಿರುವ, ಜ್ಞಾನಿಗಳಾದ, ಧರ್ಮವೆಂಬ ಸೇತುವೆಯನ್ನು (ಲೋಕಮರ್ಯಾದೆಯನ್ನು) ಪ್ರವೃತ್ತಿಗೊಳಿಸುವ ಆ ಬ್ರಾಹ್ಮಣರನ್ನು ಶಾಶ್ವತರಾದ ಲೋಕಕಲ್ಯಾಣಕಾರರನ್ನಾಗಿ ಹೇಳುತ್ತೇನೆ.

ಚಾತುರ್ವಿದ್ಯಂ ತಥಾ ವರ್ಣಾಂಶ್ಚಾತುರಾಶ್ರಮಿಕಾನ್ಪೃಥಕ್ ।
ಧರ್ಮಮೇಕಂ ಚತುಷ್ಪಾದಂ ನಿತ್ಯಮಾಹುರ್ಮನೀಷಿಣಃ ॥೩೭॥

ಹಾಗೆಯೇ ನಾನು ಪ್ರತ್ಯೇಕವಾದ ನಾಲ್ಕು ವರ್ಣಗಳ ಮತ್ತು ನಾಲ್ಕು ಆಶ್ರಮಗಳಿಗೆ ಸಂಬಂಧಪಟ್ಟ ನಾಲ್ಕು ವಿದ್ಯೆಗಳನ್ನು ವಿವರಿಸಿ ಹೇಳುತ್ತೇನೆ.

ವಿದ್ವಾಂಸರು ನಿತ್ಯವಾದ ಒಂದು ಧರ್ಮವೇ ನಾಲ್ಕು ಪಾದಗಳುಳ್ಳದ್ದೆಂದು ಹೇಳುತ್ತಾರೆ.

ಪನ್ಥಾನಂ ವಃ ಪ್ರವಕ್ಷ್ಯಾಮಿ ಶಿವಂ ಕ್ಷೇಮಕರಂ ದ್ವಿಜಾಃ ।
ನಿಯತಂ ಬ್ರಹ್ಮಭಾವಾಯ ಗತಂ ಪೂರ್ವಂ ಮನೀಷಿಭಿಃ ॥೩೮॥

ದ್ವಿಜಶ್ರೇಷ್ಠರೇ! ಹಿಂದೆ ವಿದ್ವಾಂಸರು ಬ್ರಹ್ಮಭಾವವನ್ನು ಹೊಂದುವಸಲುವಾಗಿ ಯಾವ ಕ್ಷೇಮಕರವಾದ ಮಂಗಳಕರವಾದ ಮತ್ತು ನಿಯತವಾದ ಮಾರ್ಗವನ್ನು ಅನುಸರಿಸುತ್ತಿದ್ದರೆಂಬುದನ್ನು ಹೇಳುತ್ತೇನೆ.

ಗದತಸ್ತಂ ಮಮಾದ್ಯೇಹ ಪನ್ಥಾನಂ ದುರ್ವಿದಂ ಪರಮ್ ।
ನಿಬೋಧತ ಮಹಾಭಾಗಾ ನಿಖಿಲೇನ ಪರಂ ಪದಮ್ ॥೩೯॥

ಮಹಾಭಾಗ್ಯಶಾಲಿಗಳಾದ ಮುನಿಗಳೇ! ನಾನೀಗ ಹೇಳಲಿರುವ, ತಿಳಿದುಕೊಳ್ಳಲು ಕಷ್ಟಸಾಧ್ಯವಾದ, ಶ್ರೇಷ್ಠವಾದ ಪರಮಾತ್ಮಸ್ವರೂಪವನ್ನು ಸಮಗ್ರವಾಗಿ ಕೇಳಿರಿ.

ಬ್ರಹ್ಮಚಾರಿಕಮೇವಾಹುರಾಶ್ರಮಂ ಪ್ರಥಮಂ ಪದಮ್ ।
ಗಾರ್ಹಸ್ಥ್ಯಂ ತು ದ್ವಿತೀಯಂ ಸ್ಯಾದ್ವಾನಪ್ರಸ್ಥಮತಃ ಪರಮ್ ।
ತತಃ ಪರಂ ತು ವಿಜ್ಞೇಯಮಧ್ಯಾತ್ಮಂ ಪರಮಂ ಪದಮ್ ॥೪೦॥

ನಾಲ್ಕು ಆಶ್ರಮಗಳಲ್ಲಿ ಬ್ರಹ್ಮಚರ್ಯಾಶ್ರಮವು ಮೊದಲನೆಯದೆಂದು ಹೇಳುತ್ತಾರೆ. ಗೃಹಸ್ಥಾಶ್ರಮವು ಎರಡನೆಯದು. ವಾನಪ್ರಸ್ಥಾಶ್ರಮವು ಮೂರನೆಯದು. ನಾಲ್ಕನೆಯದೇ ಅಧ್ಯಾತ್ಮಿಕವೂ ಶ್ರೇಷ್ಠಗತಿಯೂ ಆದ ಸಂನ್ಯಾಸಾಶ್ರಮವು.

ಜ್ಯೋತಿರಾಕಾಶಮಾದಿತ್ಯೋ ವಾಯುರಿನ್ದ್ರಃ ಪ್ರಜಾಪತಿಃ ।
ನೋಪೈತಿ ಯಾವದಧ್ಯಾತ್ಮಂ ತಾವದೇತಾನ್ನ ಪಶ್ಯತಿ ॥೪೧॥

ಮನುಷ್ಯನಿಗೆ ಎಲ್ಲಿಯವರೆಗೆ ಆಧ್ಯಾತ್ಮಜ್ಞಾನವಾಗುವುದಿಲ್ಲವೋ ಅಲ್ಲಿಯವರೆಗೂ ಅವನಿಗೆ ಜ್ಯೋತಿ, ಆಕಾಶ, ವಾಯು, ಸೂರ್ಯ, ಇಂದ್ರ, ಪ್ರಜಾಪತಿ–ಇವರ ನಿಜಸ್ವರೂಪವು ತಿಳಿಯುವುದಿಲ್ಲ. ಆತ್ಮಜ್ಞಾನ ವಾದ ನಂತರವೇ ಜ್ಯೋತಿರಾಕಾಶದಿಗಳ ಯಥಾರ್ಥಜ್ಞಾನವಾಗುತ್ತದೆ.

ತಸ್ಯೋಪಾಯಂ ಪ್ರವಕ್ಷ್ಯಾಮಿ ಪುರಸ್ತಾತ್ತಂ ನಿಬೋಧತ ।
ಫಲಮೂಲಾನಿಲಭುಜಾಂ ಮುನೀನಾಂ ವಸತಾಂ ವನೇ ॥೪೨॥

ವಾನಪ್ರಸ್ಥಂ ದ್ವಿಜಾತೀನಾಂ ತ್ರಯಾಣಾಮುಪದಿಶ್ಯತೇ ।
ಸರ್ವೇಷಾಮೇವ ವರ್ಣಾನಾಂ ಗಾರ್ಹಸ್ಥ್ಯಂ ತದ್ವಿಧೀಯತೇ ॥೪೩॥

ಆದುದರಿಂದ ನಾನು ಮೊದಲು ಅಧ್ಯಾತ್ಮಜ್ಞಾನವನ್ನು ಪಡೆದುಕೊಳ್ಳುವ ಉಪಾಯವನ್ನು ಹೇಳುವೆನು; ಕೇಳಿರಿ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ–ಈ ಮೂರು ವರ್ಗದವರಿಗೂ ಶಾಸ್ತ್ರವು ವಾನಪ್ರಸ್ಥಾಶ್ರಮವನ್ನು ವಿಧಾಯಕ ಮಾಡಿದೆ. ಮುನಿವೃತ್ತಿಯನ್ನಾಶ್ರಯಿಸಿ ಗೆಡ್ಡೆ-ಗೆಣಸುಗಳನ್ನೂ ಫಲಗಳನ್ನೂ ಮತ್ತು ಸಮಯಗಳಲ್ಲಿ ಗಾಳಿಯನ್ನೂ ಆಹಾರವನ್ನಾಗಿ ಸೇವಿಸುತ್ತಾ ಅರಣ್ಯದಲ್ಲಿ ವಾಸಮಾಡಿಕೊಂಡಿರುವುದೇ ವಾನಪ್ರಸ್ಥಧರ್ಮವಾಗಿದೆ. ನಾಲ್ಕು ವರ್ಣದವರಿಗೂ ಗೃಹಸ್ಥಾಶ್ರಮವು ವಿಹಿತವಾಗಿದೆ.

ಶ್ರದ್ಧಾಲಕ್ಷಣಮಿತ್ಯೇವಂ ಧರ್ಮಂ ಧೀರಾಃ ಪ್ರಚಕ್ಷತೇ ।

ಇತ್ಯೇವಂ ದೇವಯಾನಾ ವಃ ಪನ್ಥಾನಃ ಪರಿಕೀರ್ತಿತಾಃ ।
ಸದ್ಭಿರಧ್ಯಾಸಿತಾ ಧೀರೈಃ ಕರ್ಮಭಿರ್ಧರ್ಮಸೇತವಃ ॥೪೪॥

ವಿದ್ವಾಂಸರು ಶ್ರದ್ಧೆಯೇ ಧರ್ಮದ ಮುಖ್ಯಲಕ್ಷಣವೆಂದು ಹೇಳುತ್ತಾರೆ. ಹೀಗೆ ನಾನು ನಿಮಗೆ ದೇವಯಾನಮಾರ್ಗಗಳ ವಿಷಯವಾಗಿ ಹೇಳಿರುವೆನು. ಧೀರರಾದ ಸತ್ಪುರುಷರು ತಮ್ಮ ಕರ್ಮಗಳಿಂದ ಧರ್ಮದ ಮರ್ಯಾದೆಯಾಗಿರುವ ಈ ಮಾರ್ಗಗಳನ್ನು ಪರಿಪಾಲಿಸುತ್ತಾರೆ.

ಏತೇಷಾಂ ಪೃಥಗಧ್ಯಾಸ್ತೇ ಯೋ ಧರ್ಮಂ ಸಂಶಿತವ್ರತಃ ।
ಕಾಲಾತ್ಪಶ್ಯತಿ ಭೂತಾನಾಂ ಸದೈವ ಪ್ರಭವಾಪ್ಯಯೌ ॥೪೫॥

ಕಠೋರವ್ರತನಿಷ್ಠನಾದ ಯಾವನು ಈ ಧರ್ಮಗಳಲ್ಲಿ ಯಾವುದಾದ ರೊಂದನ್ನು ಪ್ರತ್ಯೇಕವಾಗಿ ಶ್ರದ್ಧೆಯಿಂದ ಅನುಷ್ಠಾನಮಾಡುವನೋ-

ಅವನು ಕಾಲಾನುಕ್ರಮವಾಗಿ ಎಲ್ಲ ಪ್ರಾಣಿಗಳ ಹುಟ್ಟು-ಸಾವುಗಳನ್ನೂ ಯಾವಾಗಲೂ ಪ್ರತ್ಯಕ್ಷವಾಗಿಯೇ ಕಾಣುತ್ತಿರುತ್ತಾನೆ.

ಅತಸ್ತತ್ತ್ವಾನಿ ವಕ್ಷ್ಯಾಮಿ ಯಾಥಾತಥ್ಯೇನ ಹೇತುನಾ ।
ವಿಷಯಸ್ಥಾನಿ ಸರ್ವಾಣಿ ವರ್ತಮಾನಾನಿ ಭಾಗಶಃ ॥೪೬॥

ಈಗ ನಾನು ಯಥಾರ್ಥವಾದ ಯುಕ್ತಿಯ ಮೂಲಕವಾಗಿ ವಿಷಯಗಳಲ್ಲಿ ವಿಭಾಗಪೂರ್ವಕವಾಗಿರುವ ಸಂಪೂರ್ಣತತ್ತ್ವಗಳನ್ನು ಹೇಳುತ್ತೇನೆ.

ಮಹಾನಾತ್ಮಾ ತಥಾವ್ಯಕ್ತಮಹಂಕಾರಸ್ತಥೈವ ಚ ।
ಇನ್ದ್ರಿಯಾಣಿ ದಶೈಕಂ ಚ ಮಹಾಭೂತಾನಿ ಪಞ್ಚ ಚ ॥೪೭॥

ವಿಶೇಷಾಃ ಪಞ್ಚಭೂತಾನಾಮಿತಿ ಸರ್ಗಃ ಸನಾತನಃ ।
ಚತುರ್ವಿಂಶತಿರೇಕಾ ಚ ತತ್ತ್ವಸಂಖ್ಯಾ ಪ್ರಕೀರ್ತಿತಾ ॥೪೮॥

ಅವ್ಯಕ್ತಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು, ಐದು ಮಹಾಭೂತಗಳು, ಶಬ್ದ-ಸ್ಪರ್ಶಾದಿ ಮಹಾಭೂತಗಳ ಐದು ವಿಶೇಷಗುಣಗಳು–ಈ ಇಪ್ಪತ್ತುನಾಲ್ಕು ಸನಾತನಸೃಷ್ಟಿಯಾಗಿದೆ. ಜೀವಾತ್ಮನೂ ಸೇರಿ ತತ್ತ್ವಗಳ ಸಂಖ್ಯೆಯು ಇಪ್ಪತ್ತೈದಾಗುತ್ತದೆ.

ತತ್ತ್ವಾನಾಮಥ ಯೋ ವೇದ ಸರ್ವೇಷಾಂ ಪ್ರಭವಾಪ್ಯಯೌ ।
ಸ ಧೀರಃ ಸರ್ವಭೂತೇಷು ನ ಮೋಹಮಧಿಗಚ್ಛತಿ ॥೪೯॥

ಯಾರು ಈ ಇಪ್ಪತ್ತೈದು ತತ್ತ್ವಗಳ ಉತ್ಪತ್ತಿ ಮತ್ತು ಲಯಗಳನ್ನು ಚೆನ್ನಾಗಿ ತಿಳಿದಿರುವನೋ-ಅವನು ಎಲ್ಲ ಪ್ರಾಣಿಗಳಲ್ಲಿಯೂ ಧೀರನೆನಿಸಿಕೊಳ್ಳುವನು ಮತ್ತು ಅವನು ಎಂದಿಗೂ ಮೋಹವಶನಾಗುವುದಿಲ್ಲ.

ತತ್ತ್ವಾನಿ ಯೋ ವೇದಯತೇ ಯಥಾತಥಂ
ಗುಣಾಂಶ್ಚ ಸರ್ವಾನಖಿಲಾಂಶ್ಚ ದೇವತಾಃ।
ವಿಧೂತಪಾಪ್ಮಾ ಪ್ರವಿಮುಚ್ಯ ಬನ್ಧನಂ
ಸ ಸರ್ವಲೋಕಾನಮಲಾನ್ಸಮಶ್ನುತೇ ॥೫೦॥

ಯಾರು ಈ ಸಂಪೂರ್ಣತತ್ತ್ವಗಳನ್ನೂ, ಗುಣಗಳನ್ನೂ ಮತ್ತು ಸಮಸ್ತ ದೇವತೆಗಳನ್ನೂ ಯಥಾವತ್ತಾಗಿ ತಿಳಿಯುವನೋ-ಅವನು ಪಾಪಗಳನ್ನೆಲ್ಲವನ್ನೂ ಕಳೆದುಕೊಂಡು ಸಂಸಾರಬಂಧನದಿಂದ ಮುಕ್ತನಾಗಿ ಸರ್ವಲೋಕಗಳಲ್ಲಿನ ದಿವ್ಯವಾದ ಸುಖಗಳನ್ನೂ ಅನುಭವಿಸುತ್ತಾನೆ."

ಃ೫ನೆಯ ಅಧ್ಯಾಯವು ಮುಗಿಯಿತು.

ಃ೬ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಬ್ರಹ್ಮನಿಂದ ತಮೋಗುಣ, ಅದರ ಕಾರ್ಯ ಮತ್ತು ಫಲಗಳ ವರ್ಣನೆ

ಬ್ರಹ್ಮನು ಹೇಳುತ್ತಾನೆ:

ತದವ್ಯಕ್ತಮನುದ್ರಿಕ್ತಂ ಸರ್ವವ್ಯಾಪಿ ಧ್ರುವಂ ಸ್ಥಿರಮ್ ।
ನವದ್ವಾರಂ ಪುರಂ ವಿದ್ಯಾತ್ತ್ರಿಗುಣಂ ಪಞ್ಚಧಾತುಕಮ್ ॥೧॥

ಏಕಾದಶಪರಿಕ್ಷೇಪಂ ಮನೋವ್ಯಾಕರಣಾತ್ಮಕಮ್ ।
ಬುದ್ಧಿಸ್ವಾಮಿಕಮಿತ್ಯೇತತ್ಪರಮೇಕಾದಶಂ ಭವೇತ್ ॥೨॥

"ಮಹರ್ಷಿಗಳೇ! ಯಾವಾಗ ಸತ್ತ್ವ-ರಜಸ್ತಮೋಗುಣಗಳ ಸಾಮ್ಯಾವಸ್ಥೆಯಿರುವುದೋ-ಆಗ ಅದು ಅವ್ಯಕ್ತಪ್ರಕೃತಿಯೆನಿಸಿಕೊಳ್ಳುತ್ತದೆ. ಅವ್ಯಕ್ತವು ಸಮಸ್ತವಾದ ಪ್ರಾಕೃತಕಾರ್ಯಗಳಲ್ಲಿಯೂ ವ್ಯಾಪಕವಾಗಿರುತ್ತದೆ. ಅದು ಸ್ಥಿರವಾದುದು ಮತ್ತು ಅವಿನಾಶಿಯಾದುದು. ಸತ್ತ್ವ-ರಜಸ್ತಮೋ ಗುಣಗಳಲ್ಲಿ ಪರಸ್ಪರವಾಗಿ ವಿಷಮತೆಯುಂಟಾದರೆ ಪಂಚಧಾತುಗಳ ಅಥವಾ ಪಂಚಭೂತಗಳ ಆವಿರ್ಭಾವವಾಗುತ್ತದೆ. ಆ ಪಂಚಭೂತ ಗಳಲ್ಲಿಯೇ* ಒಂಬತ್ತು ಬಾಗಿಲುಗಳುಳ್ಳ ನಗರವು (ಶರೀರವು) ನಿರ್ಮಾಣ ವಾಗುತ್ತದೆ. ಆ ಪುರದಲ್ಲಿ ಜೀವಾತ್ಮನನ್ನು ವಿಷಯಗಳ ಕಡೆಗೆ ಪ್ರೇರಿಸುವ ಮನಸ್ಸಿನಿಂದ ಯುಕ್ತವಾದ ಹನ್ನೊಂದು ಇಂದ್ರಿಯಗಳಿವೆ. ಅವುಗಳೆಲ್ಲವೂ

---

*ನವದ್ವಾರಗಳು: ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊಳ್ಳೆಗಳು, ಬಾಯಿ, ಗುದ ಮತ್ತು ಉಪಸ್ಥ.

ಮನಸ್ಸಿನ ಮೂಲಕವೇ ಅಭಿವ್ಯಕ್ತವಾಗುತ್ತವೆ. ಬುದ್ಧಿಯೇ ಆ ಶರೀರನಗರದ ಸ್ವಾಮಿಯು. ಹನ್ನೊಂದನೆಯದಾದ ಮನಸ್ಸೇ ಹತ್ತು ಇಂದ್ರಿಯಗಳಿಗಿಂತಲೂ ಶ್ರೇಷ್ಠವಾದುದು.

ತ್ರೀಣಿ ಸ್ರೋತಾಂಸಿ ಯಾನ್ಯಸ್ಮಿನ್ನಾಪ್ಯಾಯನ್ತೇ ಪುನಃ ಪುನಃ ।
ಪ್ರನಾಡ್ಯಸ್ತಿಸ್ರ ಏವೈತಾಃ ಪ್ರವರ್ತನ್ತೇ ಗುಣಾತ್ಮಿಕಾಃ ॥೩॥

ಇದರಲ್ಲಿ ಯಾವ ಮೂರು ಪ್ರವಾಹಗಳಿವೆಯೋ (ಚಿತ್ತನದಿಗಳ ಪ್ರವಾಹಗಳಿವೆಯೋ)–ಅವು ಮೂರು ಗುಣಗಳನ್ನೊಳಗೊಂಡ ನಾಡಿಗಳ ಮೂಲಕವಾಗಿ ಬಾರಿ-ಬಾರಿಗೂ ತುಂಬಿ-ತುಂಬಿ ಹರಿಯುತ್ತಿರುತ್ತವೆ. (ಸತ್ತ್ವ-ರಜಸ್ತಮೋಗುಣಗಳಿಗೆ ಸಂಬಂಧಿಸಿದ ವಿಷಯಗಳು ಮನಸ್ಸಿನಲ್ಲಿ ಯಾವಾಗಲೂ ತುಂಬಿಕೊಂಡೇ ಇರುತ್ತವೆ.)

ತಮೋ ರಜಸ್ತಥಾ ಸತ್ತ್ವಂ ಗುಣಾನೇತಾನ್ಪ್ರಚಕ್ಷತೇ ।
ಅನ್ಯೋನ್ಯಮಿಥುನಾಃ ಸರ್ವೇ ತಥಾನ್ಯೋನ್ಯಾನುಜೀವಿನಃ ॥೪॥

ಅನ್ಯೋನ್ಯಾಪಾಶ್ರಯಾಶ್ಚಾಪಿ ತಥಾನ್ಯೋನ್ಯಾನುವರ್ತಿನಃ ।
ಅನ್ಯೋನ್ಯವ್ಯತಿಷಕ್ತಾಶ್ಚ ತ್ರಿಗುಣಾಃ ಪಞ್ಚಧಾತವಃ ॥೫॥

ಸತ್ತ್ವ, ರಜಸ್ಸು ಮತ್ತು ತಮಸ್ಸು–ಈ ಮೂರನ್ನು ಗುಣಗಳೆಂದು ಕರೆಯುತ್ತಾರೆ. ಇವುಗಳು ಯಾವಾಗಲೂ ಒಂದಕ್ಕೊಂದು ಸೇರಿಕೊಂಡೇ ಇರುತ್ತವೆ. ಪರಸ್ಪರವಾಗಿ ಒಂದು ಮತ್ತೊಂದನ್ನು ಆಶ್ರಯಿಸಿರುತ್ತದೆ. ಪರಸ್ಪರವಾಗಿ ಒಂದಕ್ಕೆ ಮತ್ತೊಂದು ಪೋಷಕಗಳಾಗಿರುತ್ತವೆ. (ಇವು ಪರಸ್ಪರ ವಿರೋಧಿಗಳೂ ಆಗಿವೆ.) ಪರಸ್ಪರವಾಗಿ ಒಂದು ಗುಣವು ಮತ್ತೊಂದು ಗುಣವನ್ನು ಅನುಸರಿಸಿರುತ್ತದೆ. ಅನ್ಯೋನ್ಯವಾಗಿ ಒಂದು ಗುಣವು ಮತ್ತೊಂದು ಗುಣದೊಡನೆ ಸೇರಿಹೋಗುತ್ತದೆ. ಪಂಚಮಹಾಭೂತಗಳೂ ತ್ರಿಗುಣಾತ್ಮಕ ವಾಗಿವೆ.

ತಮಸೋ ಮಿಥುನಂ ಸತ್ತ್ವಂ ಸತ್ತ್ವಸ್ಯ ಮಿಥುನಂ ರಜಃ ।
ರಜಸಶ್ಚಾಪಿ ಸತ್ತ್ವಂ ಸ್ಯಾತ್ಸತ್ತ್ವಸ್ಯ ಮಿಥುನಂ ತಮಃ ॥೬॥

ತಮಸ್ಸಿಗೆ ಸತ್ತ್ವವು ಜೊತೆಯಾಗಿರುತ್ತದೆ. ಸತ್ತ್ವಕ್ಕೆ ರಜಸ್ಸು ಜೊತೆಯಾಗಿರುತ್ತದೆ. ರಜಸ್ಸಿಗೆ ಸತ್ತ್ವವು ಜೊತೆಯಾಗಿರುತ್ತದೆ. ಸತ್ತ್ವಕ್ಕೆ ತಮಸ್ಸು ಜೊತೆಯಾಗಿರುತ್ತದೆ.*

ನಿಯಮ್ಯತೇ ತಮೋ ಯತ್ರ ರಜಸ್ತತ್ರ ಪ್ರವರ್ತತೇ ।
ನಿಯಮ್ಯತೇ ರಜೋ ಯತ್ರ ಸತ್ತ್ವಂ ತತ್ರ ಪ್ರವರ್ತತೇ ॥೭॥

ತಮೋಗುಣಕ್ಕೆ ತಡೆಯಾದರೆ ರಜೋಗುಣವು ಹುಟ್ಟುತ್ತದೆ. ರಜೋಗುಣಕ್ಕೆ ತಡೆಯಾದರೆ ಸತ್ತ್ವಗುಣವು ಹುಟ್ಟುತ್ತದೆ.

ನೈಶಾತ್ಮಕಂ ತಮೋ ವಿದ್ಯಾತ್ತ್ರಿಗುಣಂ ಮೋಹಸಂಜ್ಞಿತಮ್ ।
ಅಧರ್ಮಲಕ್ಷಣಂ ಚೈವ ನಿಯತಂ ಪಾಪಕರ್ಮಸು ।
ತಾಮಸಂ ರೂಪಮೇತತ್ತು ದೃಶ್ಯತೇ ಚಾಪಿ ಸಙ್ಗತಮ್ ॥೮॥

ತಮೋಗುಣವು ಅಂಧಕಾರರೂಪವಾಗಿದೆ ಮತ್ತು ತ್ರಿಗುಣಮಯ ವಾಗಿಯೂ ಇದೆ. (ಅಲ್ಪಾಂಶದಲ್ಲಿ ಸತ್ತ್ವ-ರಜಸ್ಸುಗಳೂ ಇದರಲ್ಲಿ ಸೇರಿರುತ್ತವೆ.) ಈ ತಮಸ್ಸಿಗೆ ಮೋಹವೆಂಬ ಮತ್ತೊಂದು ಹೆಸರೂ ಇದೆ. ಇದು ಅಧರ್ಮದ ಲಕ್ಷಣವಾಗಿದೆ. ಪಾಪಕರ್ಮಿಗಳಲ್ಲಿ ಈ ತಮೋಗುಣವು ಅವಶ್ಯವಾಗಿ ಇದ್ದೇ ಇರುತ್ತದೆ. ತಮೋಗುಣದ ಈ ಸ್ವರೂಪವು ಇತರ ಎರಡು ಗುಣಗಳೊಡನೆ ಮಿಶ್ರಿತವಾಗಿರುವುದೂ ಕಂಡುಬರುತ್ತದೆ.

ಪ್ರಕೃತ್ಯಾತ್ಮಕಮೇವಾಹೂ ರಜಃ ಪರ್ಯಾಯಕಾರಕಮ್ ।
ಪ್ರವೃತ್ತಂ ಸರ್ವಭೂತೇಷು ದೃಶ್ಯಮುತ್ಪತ್ತಿಲಕ್ಷಣಮ್ ॥೯॥

*ಮಿಥುನಂ ಎಂಬುದಕ್ಕೆ-ದ್ವಂದ್ವ, ಒಂದು ಜೊತೆ ಎಂದು ಅರ್ಥವಾಗುತ್ತದೆ. ಸ್ತ್ರೀಪುಂಸೌ ಮಿಥುನಂ ದ್ವನ್ದ್ವಂ-ಎಂದು ಅಮರಕಾರರು ಸ್ತ್ರೀ-ಪುರುಷರ ಜೋಡಿಗೆ ಮಿಥುನವೆಂದು ಕರೆದಿದ್ದಾರೆ. ಆದರೆ ವ್ಯಾಖ್ಯಾನಕಾರರು ಮಿಥುನವೆಂಬುದಕ್ಕೆ ಮಥ್ನಾತೀತಿ–ಮಿಥುನಂ (ಮಥನವಾಗುತ್ತದೆ-ಮಿಥುನವಾಗುವುದಿಲ್ಲ) ಯೋಗಾದಭಿಭವಂ ತಮಸಃ ಉದ್ರೇಕೇ ಸತ್ತ್ವಂ ನಶ್ಯತಿ-ಮಿಥುನಕ್ಕೆ ಮಥಿಸುವುದು ಎಂದು ಅರ್ಥ ಮಾಡಿ ಉದ್ರೇಕಪರ್ಯಾಯದಲ್ಲಿ ತೆಗೆದುಕೊಂಡಿರುತ್ತಾರೆ. ತಮಸ್ಸಿನ ಉದ್ರೇಕವಾದರೆ ಸತ್ತ್ವವು ನಾಶವಾಗುತ್ತದೆ. ಸತ್ತ್ವದ ಉದ್ರೇಕವಾದರೆ ರಜಸ್ಸು ನಾಶವಾಗುತ್ತದೆ. ತಮಸ್ಸೂ ನಾಶ

ರಜೋಗುಣವನ್ನು ಪ್ರಕೃತಿಯ ರೂಪವೆನ್ನುತ್ತಾರೆ. ಇದು ಸೃಷ್ಟಿಗೆ ಕಾರಣವಾಗಿದೆ. ಎಲ್ಲ ಪ್ರಾಣಿಗಳಲ್ಲಿಯೂ ರಜೋಗುಣದ ಪ್ರವೃತ್ತಿಯಿದೆ. ಕಣ್ಣಿಗೆ ಕಾಣುವ ಈ ಜಗತ್ತೂ ರಜೋಗುಣದ ಸ್ವರೂಪವೇ ಆಗಿದೆ. ಉತ್ಪತ್ತಿಯು ಅಥವಾ ಪ್ರವೃತ್ತಿಯು ಇದರ ಲಕ್ಷಣವಾಗಿದೆ.

ಪ್ರಕಾಶಂ ಸರ್ವಭೂತೇಷು ಲಾಘವಂ ಶ್ರದ್ದಧಾನತಾ ।
ಸಾತ್ತ್ವಿಕಂ ರೂಪಮೇವಂ ತು ಲಾಘವಂ ಸಾಧುಸಮ್ಮಿತಮ್ ॥೧೦॥

ಎಲ್ಲಪ್ರಾಣಿಗಳ ಅಂತರಂಗದಲ್ಲಿಯೂ ಇರುವ ಪ್ರಕಾಶವೇ ಸಾತ್ತ್ವಿಕಸ್ವರೂಪವಾಗಿದೆ. ಲಾಘವ (ನಿರಾಡಂಬರ) ಮತ್ತು ಶ್ರದ್ಧೆ–ಇವು ಸತ್ತ್ವಗುಣದ ರೂಪಗಳಾಗಿವೆ. ನಿರಾಡಂಬರತೆಯನ್ನು ಸಾಧುಗಳು ಪ್ರಶಂಸಿಸುತ್ತಾರೆ.

ಏತೇಷಾಂ ಗುಣತತ್ತ್ವಾನಿ ವಕ್ಷ್ಯನ್ತೇ ತತ್ತ್ವಹೇತುಭಿಃ ।
ಸಮಾಸವ್ಯಾಸಯುಕ್ತಾನಿ ತತ್ತ್ವತಸ್ತಾನಿ ಬೋಧತ ॥೧೧॥

ಮಹರ್ಷಿಗಳೇ! ನಾನೀಗ ತಾತ್ತ್ವಿಕವಾದ ಯುಕ್ತಿಗಳ ಮೂಲಕವಾಗಿ ಸಂಕ್ಷೇಪವಾಗಿಯೂ ಮತ್ತು ವಿಸ್ತಾರವಾಗಿಯೂ ಈ ಮೂರು ಗುಣಗಳ ಕಾರ್ಯಗಳನ್ನೂ ಯಥಾವತ್ತಾಗಿ ಹೇಳುವೆನು; ಕೇಳಿರಿ.

ಸಮ್ಮೋಹೋಽಜ್ಞಾನಮತ್ಯಾಗಃ ಕರ್ಮಣಾಮವಿನಿರ್ಣಯಃ ।
ಸ್ವಪ್ನಃ ಸ್ತಮ್ಭೋ ಭಯಂ ಲೋಭಃ ಸ್ವತಃ ಸುಕೃತದೂಷಣಮ್ ॥೧೨॥
ಅಸ್ಮೃತಿಶ್ಚಾವಿಪಾಕಶ್ಚ ನಾಸ್ತಿಕ್ಯಂ ಭಿನ್ನವೃತ್ತಿತಾ ।
ನಿರ್ವಿಶೇಷತ್ವಮನ್ಧತ್ವಂ ಜಘನ್ಯಗುಣವೃತ್ತಿತಾ ॥೧೩॥
ಅಕೃತೇ ಕೃತಮಾನಿತ್ವಮಜ್ಞಾನೇ ಜ್ಞಾನಮಾನಿತಾ ।
ಮೈತ್ರೀ ವಿಕೃತಾಭಾವೋ ಹ್ಯಶ್ರದ್ಧಾ ಮೂಢಭಾವನಾ ॥೧೪॥

ತ್ತದೆ. ರಜಸ್ಸಿನ ಉದ್ರೇಕವಾದರೆ ಸತ್ತ್ವವು ನಾಶವಾಗುತ್ತದೆ. ಅರ್ಥಾತ್ ತಮಸ್ಸು-ರಜಸ್ಸುಗಳ ಉದ್ರೇಕವಾದರೆ ಸತ್ತ್ವವು ನಾಶಹೊಂದುತ್ತದೆ. ಸತ್ತ್ವವು ಉದ್ರೇಕವಾದರೆ ರಜಸ್ತಮಗಳೆರಡೂ ನಾಶಹೊಂದುತ್ತವೆ. ಹೀಗೆ ಅರ್ಥಮಾಡಿರುತ್ತಾರೆ. ಮೇಲಿನ ಶ್ಲೋಕದಲ್ಲಿ ಪರಸ್ಪರಗುಣಗಳ ವಿಷಯವನ್ನು ಹೇಳಿರುವಾಗ ಈ ಶ್ಲೋಕದಲ್ಲಿಯೂ ಆ ದ್ವಂದ್ವದ ವಿಷಯವೇ ಮುಂದುವರಿದಿರುವುದರಿಂದ ನಾವು ಯಥಾವತ್ತಾದ ಅರ್ಥವನ್ನೇ ಕೊಟ್ಟಿರುತ್ತೇವೆ.

ಅನಾರ್ಜವಮಸಂಜ್ಞತ್ವಂ ಕರ್ಮ ಪಾಪಮಚೇತನಾ ।
ಗುರುತ್ವಂ ಸನ್ನಭಾವತ್ವಮವಶಿತ್ವಮವಾಗ್ಗತಿಃ ॥೧೫॥

ಸರ್ವ ಏತೇ ಗುಣಾ ವೃತ್ತಾಸ್ತಾಮಸಾಃ ಸಮ್ಪ್ರಕೀರ್ತಿತಾಃ ।
ಯೇ ಚಾನ್ಯೇ ವಿಹಿತಾ ಭಾವಾ ಲೋಕೇಽಸ್ಮಿನ್ಮೋಹಸಂಜ್ಞಿತಾಃ ।
ತತ್ರ ತತ್ರ ನಿಯಮ್ಯನ್ತೇ ಸರ್ವೇ ತೇ ತಾಮಸಾ ಗುಣಾಃ ॥೧೬॥

ಮೋಹ, ಅಜ್ಞಾನ, ತ್ಯಾಗಮಾಡದೇ ಇರುವುದು; ಕರ್ಮಗಳ ಬಗೆಗೆ ಸರ್ವದಾ ಅನಿಶ್ಚಯದಿಂದಲೇ ಇರುವುದು; ನಿದ್ರೆಮಾಡುವುದರಲ್ಲಿಯೇ ಆಸಕ್ತಿ; ಗರ್ವ; ಭಯ; ಲೋಭ; ಒಳ್ಳೆಯ ಕಾರ್ಯಗಳನ್ನು ಸ್ವತಃ ದೂಷಿಸುವುದು; ಸ್ಮರಣಶಕ್ತಿಯಿಲ್ಲದೇ ಇರುವುದು; ಕಾರ್ಯದ ಪರಿಣಾಮ ವನ್ನು ಯೋಚಿಸದೇ ಇರುವುದು; ನಾಸ್ತಿಕತೆ; ದುಶ್ಚಾರಿತ್ರ್ಯ; ಒಳ್ಳೆಯದು ಯಾವುದು ಕೆಟ್ಟುದು ಯಾವುದು–ಎಂದು ವಿವೇಚಿಸುವ ಜ್ಞಾನವಿಲ್ಲದಿರು ವುದು; ಇಂದ್ರಿಯಗಳ ಶೈಥಿಲ್ಯ; ಕೀಳುಮಟ್ಟದ ಗುಣವುಳ್ಳ ಕಾರ್ಯಗಳಲ್ಲಿ ಪ್ರವೃತ್ತಿ; ಕರ್ಮವನ್ನು ಮಾಡದಿದ್ದರೂ ತಾನೇ ಆ ಕರ್ಮವನ್ನು ಮಾಡಿದೆನೆಂಬ ದುರಭಿಮಾನವನ್ನು ಹೊಂದುವುದು; ಅಜ್ಞಾನಿಯಾಗಿದ್ದರೂ ಜ್ಞಾನಿಯೆಂದು ಭಾವಿಸಿಕೊಳ್ಳುವುದು; ಎಲ್ಲರೊಡನೆಯೂ ಶತ್ರುತ್ವವನ್ನು ತಾಳುವುದು; ಮಾಡಬೇಕಾದ ಕೆಲಸವನ್ನು ಮಾಡಲು ಮನಸ್ಸಿಲ್ಲದಿರುವುದು; ಮಾಡುವ ಕೆಲಸವನ್ನು ಅಶ್ರದ್ಧೆಯಿಂದ ಮಾಡುವುದು; ಅಜ್ಞತೆಯ ಭಾವನೆಗಳನ್ನು ಹೊಂದಿರುವುದು; ಕುಟಿಲತೆ; ಬುದ್ಧಿಗೆಟ್ಟಿರುವುದು; ಪಾಪಕರ್ಮಗಳನ್ನೇ ಮಾಡುವುದು; ಅಜ್ಞಾನ-ಆಲಸ್ಯಗಳೇ ಮೊದಲಾದ ಕಾರಣಗಳಿಂದ ಮೈ-ಮನಸ್ಸುಗಳು ಭಾರವಾಗಿರುವುದು; ಸದ್ಭಾವವಿಲ್ಲದಿರುವುದು; ಇಂದ್ರಿಯ ಗಳನ್ನು ವಶದಲ್ಲಿ ಇಟ್ಟುಕೊಳ್ಳದೇ ಇರುವುದು; ನೀಚಕರ್ಮಗಳಲ್ಲಿಯೇ ಆಸಕ್ತನಾಗಿರುವುದು-ಈ ಎಲ್ಲ ದುಷ್ಕಾರ್ಯಗಳೂ ತಮೋಗುಣದ ಕಾರ್ಯಗಳೆಂದು ಹೇಳಲ್ಪಟ್ಟಿವೆ. ಇವುಗಳೇ ಅಲ್ಲದೇ ಈ ಲೋಕದಲ್ಲಿ ಇನ್ನು ಯಾವ ಯಾವ ಭಾವಗಳು ಮೋಹಕಗಳೆಂದು ಹೇಳಲ್ಪಟ್ಟಿರುವೆಯೋ-ಅವೆಲ್ಲವೂ ತಾಮಸಿಕವಾದ ಗುಣಗಳೆಂದು ನಿಶ್ಚಯಿಸಲ್ಪಟ್ಟಿವೆ.

ಪರಿವಾದಕಥಾ ನಿತ್ಯಂ ದೇವಬ್ರಾಹ್ಮಣವೈದಿಕೀ ॥೧೭॥

ಅತ್ಯಾಗಶ್ಚಾಭಿಮಾನಶ್ಚ ಮೋಹೋ ಮನ್ಯುಸ್ತಥಾಕ್ಷಮಾ ।
ಮತ್ಸರಶ್ಚೈವ ಭೂತೇಷು ತಾಮಸಂ ವೃತ್ತಮಿಷ್ಯತೇ ॥೧೮॥

ದೇವತೆಗಳನ್ನೂ ಬ್ರಾಹ್ಮಣರನ್ನೂ ಮತ್ತು ವೇದವನ್ನೂ ಸದಾ ನಿಂದಿಸುವುದು, ದಾನವನ್ನು ಮಾಡದಿರುವುದು, ಅಭಿಮಾನಿಯಾಗಿರುವುದು, ಮೋಹ, ಕೋಪ, ಅಸಹನೆ, ಇತರರ ವಿಷಯದಲ್ಲಿ ಹೊಟ್ಟೇಕಿಚ್ಚು-ಇವು ತಾಮಸಿಕವ್ಯವಹಾರಗಳೆಂದು ಹೇಳಲ್ಪಟ್ಟಿವೆ.

ವೃಥಾರಮ್ಭಾ ಹಿ ಯೇ ಕೇಚಿದ್ವೃಥಾ ದಾನಾನಿ ಯಾನಿ ಚ ।
ವೃಥಾ ಭಕ್ಷಣಮಿತ್ಯೇತತ್ತಾಮಸಂ ವೃತ್ತಮಿಷ್ಯತೇ ॥೧೯॥

ಶಾಸ್ತ್ರಗಳಲ್ಲಿರುವ ವಿಧಿ-ನಿಷೇಧಗಳನ್ನು ಪರಿಗಣಿಸದೇ ಅಶ್ರದ್ಧೆಯಿಂದ ಮನಸ್ಸಿಗೆ ತೋರಿದಂತೆ ಕಾರ್ಯವನ್ನು ಆರಂಭಿಸುವುದು, ದೇಶ-ಕಾಲ-ಪಾತ್ರ ಗಳ ವಿವೇಚನೆಯಿಲ್ಲದೇ ಅಶ್ರದ್ಧೆಯಿಂದ ಅವಹೇಳನಪೂರ್ವಕವಾಗಿ ವ್ಯರ್ಥ ವಾಗಿ ದಾನಮಾಡುವುದು, ದೇವತಾತಿಥಿಗಳಿಗೆ ಅರ್ಪಿಸದೇ ವ್ಯರ್ಥವಾಗಿ ತಿನ್ನುವುದು, (ಅಭಕ್ಷ್ಯಭೋಜನ ಇತ್ಯಾದಿಗಳು) ತಾಮಸಕಾರ್ಯಗಳಾಗಿವೆ.

ಅತಿವಾದೋಽತಿತಿಕ್ಷಾ ಚ ಮಾತ್ಸರ್ಯಮಭಿಮಾನಿತಾ ।
ಅಶ್ರದ್ದಧಾನತಾ ಚೈವ ತಾಮಸಂ ವೃತ್ತಮಿಷ್ಯತೇ ॥೨೦॥

ಹೆಚ್ಚು ಮಾತನಾಡುವುದು, ಕ್ಷಮೆಯಿಲ್ಲದಿರುವುದು, ಮಾತ್ಸರ್ಯ, ಅಹಂಭಾವ ಮತ್ತು ಅಶ್ರದ್ಧೆ–ಇವು ತಾಮಸಿಕವ್ಯವಹಾರಗಳೆಂದು ಹೇಳುತ್ತಾರೆ. ಲೋಕದಲ್ಲಿ ಈ ರೀತಿಯಲ್ಲಿ ಪಾಪಕರ್ಮಿಗಳಾದ, ಧರ್ಮಮರ್ಯಾದೆ ಯನ್ನು ಮೀರಿರುವ ಜನರು ತಾಮಸರೆಂದು ಹೇಳಲ್ಪಡುತ್ತಾರೆ. ಅಂತಹ ತಮೋಗುಣಪ್ರಧಾನರಾದ ಪಾಪಿಷ್ಠರು ಮರುಹುಟ್ಟಿನಲ್ಲಿ ಯಾವ ಯೋನಿಯಲ್ಲಿ ಹುಟ್ಟುವರೆಂಬುದು ನಿಶ್ಚಿತವಾಗಿಯೇ ಇದೆ. ಇವರಲ್ಲಿ ಕೆಲವರು ಅತ್ಯಂತನೀಚವಾದ ನರಕದಲ್ಲಿ ಬೀಳುತ್ತಾರೆ. ಮತ್ತೆ ಕೆಲವರು ತಿರ್ಯಗ್ಯೋನಿಗಳಲ್ಲಿ ಹುಟ್ಟುತ್ತಾರೆ.

ಸ್ಥಾವರಾಣಿ ಚ ಭೂತಾನಿ ಪಶವೋ ವಾಹನಾನಿ ಚ ।
ಕ್ರವ್ಯಾದಾ ದನ್ದಶೂಕಾಶ್ಚ ಕೃಮಿಕೀಟವಿಹಂಗಮಾಃ ॥೨೧॥

ಅಣ್ಡಜಾ ಜನ್ತವಶ್ಚೈವ ಸರ್ವೇ ಚಾಪಿ ಚತುಷ್ಪದಾಃ।
ಉನ್ಮತ್ತಾ ಬಧಿರಾ ಮೂಕಾ ಯೇ ಚಾನ್ಯೇ ಪಾಪರೋಗಿಣಃ ॥೨೪॥

ಮಗ್ನಾಸ್ತಮಸಿ ದುರ್ವೃತ್ತಾಃ ಸ್ವಕರ್ಮಕೃತಲಕ್ಷಣಾಃ।
ಅವಾಕ್ಸ್ರೋತಸ ಇತ್ಯೇತೇ ಮಗ್ನಾಸ್ತಮಸಿ ತಾಮಸಾಃ ॥೨೫॥

ವೃಕ್ಷ-ಪರ್ವತಾದಿ ಸ್ಥಾವರಜೀವಿಗಳು, ಪಶುಗಳು, ಆನೆ-ಕುದುರೆ ಮೊದಲಾದ ವಾಹನಗಳು, ರಾಕ್ಷಸರು, ಮಾಂಸಭಕ್ಷಕಜಂತುಗಳು, ಸರ್ಪಗಳು, ಕ್ರಿಮಿ-ಕೀಟಗಳು, ಪಕ್ಷಿಗಳು, ಮೊಟ್ಟೆಯಿಂದ ಹುಟ್ಟುವ ಪ್ರಾಣಿಗಳು, ನಾಲ್ಕು ಕಾಲಿನ ಪ್ರಾಣಿಗಳು, ಹುಚ್ಚರು, ಕಿವುಡರು, ಮೂಗರು, ಪಾಪಮಯವಾದ ರೋಗಗಳಿಂದ ತೊಳಲುತ್ತಿರುವವರು, ಇವರೆಲ್ಲರೂ ತಮೋಗುಣದಲ್ಲಯೇ ಮುಳುಗಿರುತ್ತಾರೆ. ತಮ್ಮ-ತಮ್ಮ ಕರ್ಮಾನುಸಾರವಾಗಿ ದುರ್ಲಕ್ಷಣಗಳನ್ನು ಹೊಂದಿರುವ ದುರಾಚಾರಿಗಳಾದ ಇವರ ಚಿತ್ತವೃತ್ತಿಯು ಕೆಳಮುಖವಾಗಿಯೇ ಇರುವುದರಿಂದ ಇವರೆಲ್ಲರನ್ನೂ ಅವಾಕ್ಸ್ರೋತಸರೆಂದೇ ಕರೆಯುತ್ತಾರೆ. ತಮೋಗುಣದಲ್ಲಿಯೇ ಮುಳುಗಿರುವ ಎಲ್ಲ ಪ್ರಾಣಿಗಳೂ ತಾಮಸಗಳೇ ಆಗಿವೆ.

ತೇಷಾಮುತ್ಕರ್ಷಮುದ್ರೇಕಂ ವಕ್ಷ್ಯಾಮ್ಯಹಮತಃ ಪರಮ್।
ಯಥಾ ತೇ ಸುಕೃತಾಲ್ಲೋಕಾಲ್ಲಭನ್ತೇ ಪುಣ್ಯಕರ್ಮಿಣಃ ॥೨೬॥

ಇನ್ನು ಮುಂದೆ ನಾನು ಆ ತಾಮಸಪ್ರಾಣಿಗಳೂ ಹೇಗೆ ಉತ್ಕರ್ಷವನ್ನು (ಮೇಲ್ಮೆಯನ್ನು) ಮತ್ತು ಸಮೃದ್ಧಿಯನ್ನೂ ಹೊಂದುತ್ತವೆ–ಎಂಬುದನ್ನೂ ಪುಣ್ಯಕರ್ಮಿಗಳಾಗಿ ಪುಣ್ಯಲೋಕಗಳನ್ನು ಹೇಗೆ ಹೊಂದುತ್ತವೆಯೆಂಬುದನ್ನೂ ಹೇಳುತ್ತೇನೆ.

ಅನ್ಯಥಾ ಪ್ರತಿಪನ್ನಾಸ್ತು ವಿವೃದ್ಧಾ ಯೇ ಚ ಕರ್ಮಣಃ।
ಸ್ವಕರ್ಮನಿರತಾನಾಂ ಚ ಬ್ರಾಹ್ಮಣಾನಾಂ ಶುಭೈಷಿಣಾಮ್ ॥೨೭॥

ಸಂಸ್ಕಾರೇಣೋರ್ಧ್ವಮಾಯಾನ್ತಿ ಯತಮಾನಾಃ ಸಲೋಕತಾಮ್।
ಸ್ವರ್ಗೇ ಗಚ್ಛನ್ತಿ ದೇವಾನಾಮಿತ್ಯೇಷಾ ವೈದಿಕೀ ಶ್ರುತಿಃ ॥೨೮॥

ತಿರ್ಯಕ್-ಸ್ಥಾವರಯೋನಿಗಳನ್ನು ಪಡೆದ ಪ್ರಾಣಿಗಳು ಬ್ರಾಹ್ಮಣರಿಂದ ಅಗ್ನಿಹೋತ್ರವೇ ಮೊದಲಾದ ಕರ್ಮಗಳ ಸಲುವಾಗಿ ಬಳಸಲ್ಪಟ್ಟು

ಉತ್ತಮವಾದ ಸಂಸ್ಕಾರವನ್ನು ಹೊಂದಿ ಊರ್ಧ್ವಲೋಕಗಳಿಗೆ ಹೋಗಿ ಅನಂತರ ಸ್ವಕರ್ಮನಿರತರಾದ ಶುಭಕಾಮಿಗಳಾದ ಬ್ರಾಹ್ಮಣರ ಮನೆಗಳಲ್ಲಿ ಹುಟ್ಟಿ ಸತ್ಕರ್ಮಗಳ ಮೂಲಕವಾಗಿ ಸತತವಾಗಿ ಪ್ರಯತ್ನಿಸುತ್ತಾ ಕಡೆಗೆ ಸ್ವರ್ಗದಲ್ಲಿ ದೇವತೆಗಳ ಸಾಮ್ಯವನ್ನೇ ಹೊಂದುವರೆಂದು ವೇದವಚನವೇ ಇದೆ.

ಅನ್ಯಥಾ ಪ್ರತಿಪನ್ನಾಸ್ತೇ ವಿಬುದ್ಧಾಃ ಸ್ವೇಷು ಕರ್ಮಸು ।
ಪುನರಾವೃತ್ತಿಧರ್ಮಾಣಸ್ತೇ ಭವನ್ತೀಹ ಮಾನುಷಾಃ ॥೨೯॥

ಹೀಗೆ ದೇವತೆಗಳಿಗೆ ಸಮರಾಗಿ ಸ್ವರ್ಗದಲ್ಲಿ ಸ್ವಲ್ಪಕಾಲ ವಾಸಿಸಿರುವ ಅವರು ಕರ್ಮಾನುಸಾರವಾಗಿ ತಮ್ಮ ತಮ್ಮ ಕೆಲಸಗಳಲ್ಲಿ ಪ್ರಜ್ಞೆಯನ್ನು ಹೊಂದಿದವರಾಗಿ ಪುನರಾವೃತ್ತಿಧರ್ಮವುಳ್ಳ ಮನುಷ್ಯರಾಗಿ ಪುನಃ ಈ ಲೋಕದಲ್ಲಿ ಹುಟ್ಟುತ್ತಾರೆ.

ಪಾಪಯೋನಿಂ ಸಮಾಪನ್ನಾಶ್ಚಾಣ್ಡಾಲಾ ಮೂಕಚೂಚುಕಾಃ ।
ವರ್ಣಾನ್ಪರ್ಯಾಯಶಶ್ಚಾಪಿ ಪ್ರಾಪ್ನುವನ್ತ್ಯುತ್ತರೋತ್ತರಮ್ ॥೩೦॥

ಅವರಲ್ಲಿ ಕೆಲವರು (ಪಾಪಕರ್ಮಫಲವನ್ನು ಉಳಿಸಿಕೊಂಡಿರುವವರು) ಪಾಪಯೋನಿಗಳನ್ನು ಹೊಂದಿ ಚಾಂಡಾಲರೂ, ಮೂಕರೂ, ತೊದಲರೂ ಆಗುತ್ತಾರೆ. ಇಂತಹವರೂ ಕೂಡ ಉತ್ತರೋತ್ತರ ಉಚ್ಚವರ್ಣಗಳಲ್ಲಿ ಜನಿಸುತ್ತಾರೆ.

ಶೂದ್ರಯೋನಿಮತಿಕ್ರಮ್ಯ ಯೇ ಚಾನ್ಯೇ ತಾಮಸಾ ಗುಣಾಃ।
ಸ್ರೋತೋಮಧ್ಯೇ ಸಮಾಗಮ್ಯ ವರ್ತನ್ತೇ ತಾಮಸೇ ಗುಣೇ ॥೩೧॥

ಶೂದ್ರಯೋನಿಯನ್ನು ಅತಿಕ್ರಮಿಸಿ ಮುಂದೆ ಉಚ್ಚವರ್ಣದಲ್ಲಿ ಹುಟ್ಟಿದ್ದರೂ ಯಾರು ತಾಮಸಗುಣವನ್ನೇ ಹೊಂದಿರುವರೋ–ಅವರು ಆ ಪ್ರವಾಹದಲ್ಲಿಯೇ ಬಿದ್ದು ತಮೋಗುಣದಲ್ಲಿಯೇ ವ್ಯವಹರಿಸುತ್ತಿರುತ್ತಾರೆ. (ಅಂತಹವರು ಮುಂದೆ ತಾಮಸಿಕವಾದ ಕರ್ಮಗಳ ಫಲವನ್ನೇ ಅನುಭವಿಸುತ್ತಾರೆ.)

ಅಭಿಷ್ವಙ್ಗಸ್ತು ಕಾಮೇಷು ಮಹಾಮೋಹ ಇತಿ ಸ್ಮೃತಃ ।
ಋಷಯೋ ಮುನಯೋ ದೇವಾ ಮುಹ್ಯನ್ತ್ಯತ್ರ ಸುಖೇಪ್ಸವಃ ॥೩೨॥

ಕಾಮೋಪಭೋಗಗಳಲ್ಲಿನ ಆಸಕ್ತಿಯು *ಮಹಾಮೋಹವೆನಿಸಿಕೊಳ್ಳುತ್ತದೆ. ಋಷಿಗಳೂ, ಮುನಿಗಳೂ ಮತ್ತು ದೇವತೆಗಳೂ ಕೂಡ ಈ ಮಹಾಮೋಹದಲ್ಲಿ ಸಿಕ್ಕಿ ಮೂಢರಾಗುತ್ತಾರೆ. (ಹೀಗಿರುವಾಗ ಸಾಧಾರಣಮನುಷ್ಯರ ವಿಷಯವಾಗಿ ಹೇಳತಕ್ಕದ್ದೇನಿದೆ?)

ತಮೋ ಮೋಹೋ ಮಹಾಮೋಹಸ್ತಾಮಿಸ್ರಃ ಕ್ರೋಧಸಂಜ್ಞಿತಃ ।
ಮರಣಂ ತ್ವನ್ಧತಾಮಿಸ್ರಸ್ತಾಮಿಸ್ರಃ ಕ್ರೋಧ ಉಚ್ಯತೇ ॥೩೩॥

ತಮಸ್ಸು (ಅವಿದ್ಯೆ), ಮೋಹ (ಅಹಂಭಾವ), *ಮಹಾಮೋಹ (ಮೈಥುನಾಸಕ್ತಿ), ಕ್ರೋಧವೆಂಬ ಹೆಸರಿನ ತಾಮಿಸ್ರ, ಮೃತ್ಯುರೂಪವಾದ ಅಂಧತಾಮಿಸ್ರ– ಈ ಐದನ್ನು ತಾಮಸೀಪ್ರಕೃತಿಗಳೆಂದು ಹೇಳುತ್ತಾರೆ. ಕ್ರೋಧವನ್ನೇ ತಾಮಿಸ್ರವೆಂದು ಹೇಳುತ್ತಾರೆ. (ತಾಮಿಸ್ರ-ಅಂಧತಾಮಿಸ್ರಗಳು ನರಕಗಳೆಂದು ಮನುವಚನವಿದೆ. **ಸ ಪರ್ಯಾಯೇಣ ಯಾತೀಮಾನ್ನರಕಾನೇಕವಿಂಶತಿಮ್ । ತಾಮಿಸ್ರಮನ್ಧತಾಮಿಸ್ರಂ ಮಹಾರೌರವರೌರವೌ॥** ಮನು ೪-೮೮)

ವರ್ಣತೋ ಗುಣತಶ್ಚೈವ ಯೋನಿತಶ್ಚೈವ ತತ್ತ್ವತಃ ।
ಸರ್ವಮೇತತ್ತಮೋ ವಿಪ್ರಾಃ ಕೀರ್ತಿತಂ ವೋ ಯಥಾವಿಧಿ ॥೩೪॥

ವಿಪ್ರಶ್ರೇಷ್ಠರೇ! ನಾನು ನಿಮಗೆ ವರ್ಣ, ಗುಣ, ಯೋನಿ ಮತ್ತು ತತ್ತ್ವ–ಇವುಗಳಿಗೆ ಅನುಸಾರವಾಗಿ ತಮೋಗುಣದ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳಿದ್ದೇನೆ.

ಕೋನ್ವೇತದ್ಬುಧ್ಯತೇ ಸಾಧು ಕೋನ್ವೇತತ್ಸಾಧು ಪಶ್ಯತಿ ।
ಅತತ್ತ್ವೇ ತತ್ತ್ವದರ್ಶೀ ಯಸ್ತಮಸಸ್ತತ್ತ್ವಲಕ್ಷಣಮ್ ॥೩೫॥

ಅತತ್ತ್ವದಲ್ಲಿ ತತ್ತ್ವದೃಷ್ಟಿಯುಳ್ಳ ಯಾವನು ತಾನೇ ಈ ವಿಷಯವನ್ನು ಚೆನ್ನಾಗಿ ತಿಳಿಯುತ್ತಾನೆ ಮತ್ತು ತತ್ತ್ವವನ್ನು ಕಂಡುಕೊಳ್ಳುತ್ತಾನೆ?

---

*ಮಹಾಮೋಹಃ : **ತಮೋಽವಿವೇಕೋ ಮೋಹಃ ಸ್ಯಾದನ್ತಃಕರಣವಿಭ್ರಮಃ। ಮಹಾಮೋಹಸ್ತು ವಿಜ್ಞೇಯೋ ಗ್ರಾಮ್ಯಭೋಗಸುಖೈಷಿಣಾ॥** ಅಜ್ಞಾನ ಮತ್ತು ಅವಿವೇಕವೇ ಮೋಹ. ಗ್ರಾಮ್ಯಸುಖವನ್ನು (ಮೈಥುನಸುಖವನ್ನು)ಸದಾ ಬಯಸುವುದಕ್ಕೆ ಮಹಾಮೋಹವೆಂದು ಹೆಸರು.

ಎಲ್ಲ ವಿಷಯಗಳಲ್ಲಿಯೂ ವಿಪರೀತವಾದ ದೃಷ್ಟಿಯಿರುವುದು ತಮಸ್ತತ್ತ್ವದ ಮುಖ್ಯಲಕ್ಷಣವಾಗಿದೆ.

ತಮೋಗುಣಾ ಬಹುವಿಧಾ ಪ್ರಕೀರ್ತಿತಾ
ಯಥಾವದುಕ್ತಂ ಚ ತಮಃ ಪರಾವರಮ್ ।
ನರೋ ಹಿ ವೇದ ಗುಣಾನಿಮಾನ್ಸದಾ
ಸ ತಾಮಸೈಃ ಸರ್ವಗುಣೈಃ ಪ್ರಮುಚ್ಯತೇ ॥೩೬॥

ಬ್ರಾಹ್ಮಣಶ್ರೇಷ್ಠರೇ! ಹೀಗೆ ತಮೋಗುಣದ ಸ್ವರೂಪ ಮತ್ತು ಬಹುಪ್ರಕಾರವಾದ ಅದರ ಗುಣಗಳು, ತಮೋಗುಣದಿಂದ ಪ್ರಾಪ್ತವಾಗುವ ಉಚ್ಚ-ನೀಚಯೋನಿಗಳು–ಈ ಎಲ್ಲವನ್ನೂ ನಿಮಗೆ ಯಥಾವತ್ತಾಗಿ ಹೇಳಿದುದಾಯಿತು. ಯಾವ ಮನುಷ್ಯನು ತಮೋಗುಣದ ಈ ಗುಣಗಳನ್ನೂ ಮತ್ತು ಅದರಿಂದ ಪ್ರಾಪ್ತವಾಗುವ ದುರ್ದಶೆಯನ್ನೂ ತಿಳಿದುಕೊಂಡಿರುವನೋ–ಅವನು ಸಕಲವಿಧವಾದ ತಾಮಸಗುಣಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ."

ಇ೬ನೆಯ ಅಧ್ಯಾಯವು ಮುಗಿಯಿತು .

ಇ೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ರಜೋಗುಣದ ಕಾರ್ಯದ ವರ್ಣನೆ: ಅದನ್ನು ತಿಳಿಯುವುದರಿಂದ ಉಂಟಾಗುವ ಫಲ

ಬ್ರಹ್ಮನು ಹೇಳುತ್ತಾನೆ:

ರಜೋಽಹಂ ವಃ ಪ್ರವಕ್ಷ್ಯಾಮಿ ಯಾಥಾತಥ್ಯೇನ ಸತ್ತಮಾಃ ।
ನಿಬೋಧತ ಮಹಾಭಾಗಾ ಗುಣವೃತ್ತಂ ಚ ರಾಜಸಮ್ ॥೧॥

"ಮಹಾಭಾಗ್ಯಶಾಲಿಗಳಾದ ಮುನಿಶ್ರೇಷ್ಠರೇ! ಈಗ ನಾನು ನಿಮಗೆ ರಜೋಗುಣದ ವಿಷಯವನ್ನು ಯಥಾವತ್ತಾಗಿ ಹೇಳುತ್ತೇನೆ. ರಜೋಗುಣಕ್ಕೆ ಸಂಬಂಧಿಸಿದ ಗುಣವೃತ್ತಗಳನ್ನು ಕೇಳಿರಿ.

ಸನ್ತಾಪೋ ರೂಪಮಾಯಾಸಃ ಸುಖದುಃಖೇ ಹಿಮಾತಪೌ ।
ಐಶ್ವರ್ಯಂ ವಿಗ್ರಹಃ ಸನ್ಧಿರ್ಹೇತುವಾದೋಽರತಿಃ ಕ್ಷಮಾ ॥೨॥

ಬಲಂ ಶೌರ್ಯಂ ಮದೋ ರೋಷೋ ವ್ಯಾಯಾಮಕಲಹಾವಪಿ ।
ಈರ್ಷ್ಯೇಪ್ಸಾ ಪಿಶುನಂ ಯುದ್ಧಂ ಮಮತ್ವಂ ಪರಿಪಾಲನಮ್ ॥೩॥

ವಧಬನ್ಧಪರಿಕ್ಲೇಶಾಃ ಕ್ರಯೋ ವಿಕ್ರಯ ಏವ ಚ ।
ನಿಕೃನ್ತ ಛಿನ್ಧಿ ಭಿನ್ಧೀತಿ ಪರಮರ್ಮಾವಕರ್ತನಮ್ ॥೪॥

ಉಗ್ರಂ ದಾರುಣಮಾಕ್ರೋಶಃ ಪರಚ್ಛಿದ್ರಾನುಶಾಸನಮ್ ।
ಲೋಕಚಿನ್ತಾನುಚಿನ್ತಾ ಚ ಮತ್ಸರಃ ಪರಿಭಾವನಃ ॥೫॥

ಮೃಷಾ ವಾದೋ ಮೃಷಾ ದಾನಂ ವಿಕಲ್ಪಃ ಪರಿಭಾಷಣಮ್ ।
ನಿನ್ದಾ ಸ್ತುತಿಃ ಪ್ರಶಂಸಾ ಚ ಪ್ರಸ್ತಾವಃ ಪಾರಧರ್ಷಣಮ್ ॥೬॥
ಪರಿಚರ್ಯಾನುಶುಶ್ರೂಷಾ ಸೇವಾ ತೃಷ್ಣಾ ವ್ಯಪಾಶ್ರಯಃ ।
ವ್ಯೂಹೋ ನಯಃ ಪ್ರಮಾದಶ್ಚ ಪರಿವಾದಃ ಪರಿಗ್ರಹಃ ॥೭॥

ಸಂತಾಪ, ರೂಪ, ಆಯಾಸ, ಸುಖ-ದುಃಖಗಳು, ಚಳಿ, ಬಿಸಿಲು, ಐಶ್ವರ್ಯ, ಕಲಹ, ಸಂಧಿ, ಹೇತುವಾದ (ತರ್ಕ), ಅಪ್ರಸನ್ನತೆ, ಸಹನಶಕ್ತಿ, ಬಲ, ಶೌರ್ಯ, ಮದ, ರೋಷ, ವ್ಯಾಯಾಮ, ಈರ್ಷ್ಯೆ, ಇಚ್ಛೆ, ಚಾಡಿ, ಯುದ್ಧ, ಮಮತೆ, ಕುಟುಂಬಪಾಲನೆ, ವಧೆ, ಬಂಧನ, ಕ್ಲೇಶ, ಕ್ರಯ-ವಿಕ್ರಯಗಳು, ಕತ್ತರಿಸು- ಒಡೆ-ಸೀಳು-ಇತ್ಯಾದಿ ವ್ಯವಹಾರ ಗಳಿಂದ ಇತರರ ಮರ್ಮಸ್ಥಳಗಳನ್ನು ಭೇದಿಸುವುದು, ಉಗ್ರತೆ, ನಿಷ್ಠುರತೆ, ಕೂಗಾಡುವುದು, ಇತರರಲ್ಲಿ ದೋಷಗಳನ್ನು ಹೇಳುವುದು, ಲೋಕಚಿಂತೆ, ಪಶ್ಚಾತ್ತಾಪ, ಮಾತ್ಸರ್ಯ, ನಾನಾವಿಧವಾದ ಸಾಂಸಾರಿಕಭಾವನೆಗಳಿಂದ ಭಾವಿತನಾಗಿರುವುದು, ಅಸತ್ಯಭಾಷಣ, ಮಿಥ್ಯಾದಾನ, ಸಂಶಯಪೂರ್ಣ ವಾಗಿ ವಿಚಾರಮಾಡುವುದು, ತಿರಸ್ಕಾರಪೂರ್ವಕವಾಗಿ ಮಾತನಾಡುವುದು, ನಿಂದೆ, ಸ್ತುತಿ, ಪ್ರಶಂಸೆ, ಕಾರ್ಯೋಪಕ್ರಮ, ಬಲಾತ್ಕಾರ, ಉಪಚರಿಸುವುದು, ಶುಶ್ರೂಷೆ, ಸೇವೆ, ತೃಷ್ಣೆ, ಇತರರಿಗೆ ಆಶ್ರಯವನ್ನು ಕೊಡುವುದು, ವ್ಯವಹಾರಕುಶಲತೆ, ನೀತಿ, ಪ್ರಮಾದ (ಗಮನವಿಲ್ಲದೇ ಇರುವುದು), ತೆಗಳಿಕೆ, ಪರಿಗ್ರಹ–ಇವೆಲ್ಲವೂ ರಜೋಗುಣದ ಕಾರ್ಯಗಳು.

ಸಂಸ್ಕಾರಾ ಯೇ ಚ ಲೋಕೇಷು ಪ್ರವರ್ತನ್ತೇ ಪೃಥಕ್ಪೃಥಕ್ ।
ನೃಷು ನಾರೀಷು ಭೂತೇಷು ದ್ರವ್ಯೇಷು ಶರಣೇಷು ಚ ॥೮॥

ಪ್ರಪಂಚದಲ್ಲಿ ಸ್ತ್ರೀಯರು, ಪುರುಷರು, ಪ್ರಾಣಿಗಳು, ದ್ರವ್ಯ, ಗೃಹ–ಇವುಗಳಿಗೆ ಯಾವ ಸಂಸ್ಕಾರಗಳಾಗುವುವೋ ಅವೆಲ್ಲವೂ ರಜೋಗುಣದ ಪ್ರೇರಣೆಯಿಂದಲೇ ಆಗುತ್ತವೆ.

ಸನ್ತಾಪೋಽಪ್ರತ್ಯಯಶ್ಚೈವ ವ್ರತಾನಿ ನಿಯಮಾಶ್ಚ ಯೇ।
ಆಶೀರ್ಯುಕ್ತಾನಿ ಕರ್ಮಾಣಿ ಪೌರ್ತಾನಿ ವಿವಿಧಾನಿ ಚ ॥೯॥

ಸ್ವಾಹಾಕಾರೋ ನಮಸ್ಕಾರಃ ಸ್ವಧಾಕಾರೋ ವಷಟ್ ಕ್ರಿಯಾ ।
ಯಾಜನಾಧ್ಯಾಪನೇ ಚೋಭೇ ಯಜನಾಧ್ಯಯನೇ ಅಪಿ ।
ದಾನಂ ಪ್ರತಿಗ್ರಹಶ್ಚೈವ ಪ್ರಾಯಶ್ಚಿತ್ತಾನಿ ಮಙ್ಗಲಮ್ ॥೧೦॥

ಸಂತಾಪ, ಅವಿಶ್ವಾಸ, ವ್ರತ-ನಿಯಮಾದಿಗಳು, ಇಷ್ಟವಾದುದನ್ನು ಪ್ರಾರ್ಥಿಸುವ ಕರ್ಮಗಳು (ಕಾಮ್ಯಕರ್ಮಗಳು), ನಾನಾಪ್ರಕಾರವಾದ ಇಷ್ಟಾಪೂರ್ತಕರ್ಮಗಳು (ಬಾವಿ-ತಟಾಕ-ಕೆರೆಕಟ್ಟೆಗಳನ್ನು ನಿರ್ಮಿಸುವುದು, ಸಾಲುಮರಗಳನ್ನು ನೆಡಿಸುವುದು, ಮಂಟಪಗಳನ್ನು ಕಟ್ಟಿಸುವುದು ಇತ್ಯಾದಿ ಪುಣ್ಯಕರ್ಮಗಳು), ಸ್ವಾಹಾಕಾರ (ದೇವತೆಗಳಿಗಾಗಿ), ನಮಸ್ಕಾರ (ಅತಿಥಿ ಗಳಿಗಾಗಿ), ಸ್ವಧಾಕಾರ (ಪಿತೃಗಳಿಗಾಗಿ), ವಷಟ್ಕಾರ, ಯಜ್ಞವನ್ನು ಮಾಡಿಸುವುದು ಮತ್ತು ಮಾಡುವುದು, ಅಧ್ಯಯನವನ್ನು ಮಾಡುವುದು ಮತ್ತು ಮಾಡಿಸುವುದು, ದಾನವನ್ನು ಕೊಡುವುದು ಮತ್ತು ಪ್ರತಿ ಗ್ರಹಿಸುವುದು, ಪ್ರಾಯಶ್ಚಿತ್ತ ಮತ್ತು ಶುಭಕರ್ಮಗಳು–ಇವೆಲ್ಲವೂ ರಾಜಸ ಗುಣದಿಂದ ಪ್ರೇರಿತವಾದುವುಗಳೆಂದು ಹೇಳಲ್ಪಟ್ಟಿವೆ.

ಇದಂ ಮೇ ಸ್ಯಾದಿದಂ ಮೇ ಸ್ಯಾತ್ಸ್ನೇಹೋ ಗುಣಸಮುದ್ಭವಃ ॥೧೧॥

'ಈ ವಸ್ತುವು ನನಗಿರಲಿ; ಇದು ನನಗಿರಲಿ'–ಎಂದು ಹೇಳಿಕೊಳ್ಳುವ ವಸ್ತುಗಳ ಮೇಲಿನ ಆಸಕ್ತಿಯು ರಜೋಗುಣದಿಂದ ಉಂಟಾದುದು.

ಅಭಿದ್ರೋಹಸ್ತಥಾ ಮಾಯಾ ನಿಕೃತಿರ್ಮಾನ ಏವ ಚ ।
ಸ್ತೈನ್ಯಂ ಹಿಂಸಾ ಜುಗುಪ್ಸಾ ಚ ಪರಿತಾಪಃ ಪ್ರಜಾಗರಃ ॥೧೨॥

ದಮ್ಭೋ ದರ್ಪೋಽಥ ರಾಗಶ್ಚ ಭಕ್ತಿಃ ಪ್ರೀತಿಃ ಪ್ರಮೋದನಮ್ ।
ದ್ಯೂತಂ ಚ ಜನವಾದಶ್ಚ ಸಮ್ಬನ್ಧಾಃ ಸ್ತ್ರೀಕೃತಾಶ್ಚ ಯೇ ॥೧೩॥

ನೃತ್ಯವಾದಿತ್ರಗೀತಾನಾಂ ಪ್ರಸಙ್ಗಾ ಯೇ ಚ ಕೇಚನ ।
ಸರ್ವ ಏತೇ ಗುಣಾ ವಿಪ್ರಾ ರಾಜಸಾಃ ಸಮ್ಪ್ರಕೀರ್ತಿತಾಃ ॥೧೪॥



ವಿಪ್ರಶ್ರೇಷ್ಠರೇ! ದ್ರೋಹ, ಮೋಸ, ತಿರಸ್ಕಾರ, ಅಭಿಮಾನ, ಚೌರ್ಯ, ಹಿಂಸೆ, ಜುಗುಪ್ಸೆ, ಪರಿತಾಪ, ಜಾಗರಣ, ದಂಭ, ದರ್ಪ, ಅನುರಾಗ, ಕಾಮ್ಯಭಕ್ತಿ, ವಿಷಯಪ್ರೀತಿ, ಪ್ರಮೋದ, ದ್ಯೂತ, ಲೋಕ ವಿವಾದ, ಸ್ತ್ರೀಯರೊಡನೆ ಹೆಚ್ಚಿನ ಸಂಬಂಧ, ನೃತ್ಯ-ವಾದ್ಯ-ಗಾಯನಗಳಲ್ಲಿ ಆಸಕ್ತಿ–ಈ ಎಲ್ಲವೂ ರಾಜಸಕರ್ಮಗಳೆಂದು ಹೇಳಲ್ಪಟ್ಟಿವೆ.

ಭೂತಭವ್ಯಭವಿಷ್ಯಾಣಾಂ ಭಾವಾನಾಂ ಭುವಿ ಭಾವನಾಃ ।
ತ್ರಿವರ್ಗನಿರತಾ ನಿತ್ಯಂ ಧರ್ಮೋಽರ್ಥಃ ಕಾಮ ಇತ್ಯಪಿ ॥೧೫॥

ಕಾಮವೃತ್ತಾಃ ಪ್ರಮೋದನ್ತೇ ಸರ್ವಕಾಮಸಮೃದ್ಧಿಭಿಃ ।
ಅರ್ವಾಕ್ಸ್ರೋತಸ ಇತ್ಯೇತೇ ಮನುಷ್ಯಾ ರಜಸಾ ವೃತಾಃ ॥೧೬॥

ಯಾರು ಈ ಪ್ರಪಂಚದಲ್ಲಿ ಹಿಂದಿನದು, ಈಗಿನದು ಮತ್ತು ಮುಂದಿನದನ್ನು ಕುರಿತು ಯೋಚಿಸುವರೋ, ಧರ್ಮಾರ್ಥ-ಕಾಮಗಳೆಂಬ ತ್ರಿವರ್ಗದ ಸೇವನೆಯಲ್ಲಿಯೇ ನಿರತರಾಗಿರುವರೋ, ಸ್ವೇಚ್ಛಾಚಾರಿಗಳಾಗಿ ಸಮಸ್ತವಾದ ಭೋಗಸಮೃದ್ಧಿಗಳಿಂದಲೇ ಆನಂದಪಡುವರೋ– ಅಂತಹವರೇ ರಜೋಗುಣದಿಂದ ಆವೃತರಾದ ಮನುಷ್ಯರು. ಅವರು ಅರ್ವಾಕ್ಸ್ರೋತಸರು; ಭೂಮಿಯಿಂದ ಮೇಲಕ್ಕೆ (ಸ್ವರ್ಗದ ಕಡೆಗೆ) ಪ್ರವಾಹವುಳ್ಳವರು ಎಂದು ಕರೆಯಲ್ಪಡುತ್ತಾರೆ.

ಅಸ್ಮಿಲ್ಲೋಕೇ ಪ್ರಮೋದನ್ತೇ ಜಾಯಮಾನಾಃ ಪುನಃ ಪುನಃ ।
ಪ್ರೇತ್ಯ ಭಾವಿಕಮೀಹನ್ತೇ ಐಹಲೋಕಿಕಮೇವ ಚ ।
ದದತಿ ಪ್ರತಿಗೃಹ್ಣನ್ತಿ ತರ್ಪಯನ್ತ್ಯಥ ಜುಹ್ವತಿ ॥೧೭॥

ಇಂತಹ ಜನರು ಈ ಭೂಲೋಕದಲ್ಲಿಯೇ ಪುನಃ ಪುನಃ ಹುಟ್ಟುತ್ತಾ ವಿಷಯಜನಿತವಾದ ಆನಂದದಲ್ಲಿಯೇ ಮಗ್ನರಾಗಿರುತ್ತಾರೆ. ಹಾಗೆಯೇ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವನ್ನು ಪಡೆಯಲು ನಾನಾಪ್ರಕಾರವಾದ ಕರ್ಮಗಳ ಮೂಲಕವಾಗಿ ಪ್ರಯತ್ನಿಸುತ್ತಿರುತ್ತಾರೆ. ಆದುದರಿಂದಲೇ ಅವರು ಸಕಾಮಭಾವದಿಂದ ದಾನಮಾಡುತ್ತಾರೆ. ಪ್ರತಿಗ್ರಹಿಸುತ್ತಾರೆ. ಅತಿಥಿಗಳನ್ನು ತೃಪ್ತಿಗೊಳಿಸುತ್ತಾರೆ. ಯಜ್ಞಗಳನ್ನು ಮಾಡುತ್ತಾರೆ.

ರಜೋಗುಣಾ ವೋ ಬಹುಧಾನುಕೀರ್ತಿತಾ
ಯಥಾವದುಕ್ತಂ ಗುಣವೃತ್ತಮೇವ ಚ ।
ನರೋಽಪಿ ಯೋ ವೇದ ಗುಣಾನಿಮಾನ್ಸದಾ
ಸ ರಾಜಸೈಃ ಸರ್ವಗುಣೈರ್ವಿಮುಚ್ಯತೇ ॥೧೮॥

ಮುನಿಶ್ರೇಷ್ಠರೇ! ನಾನು ನಿಮಗೆ ರಜೋಗುಣದ ನಾನಾಪ್ರಕಾರ

ವಾದ ಸ್ವರೂಪಗಳನ್ನೂ ಮತ್ತು ಆ ಗುಣದ ಮೂಲಕವಾಗಿ ನಡೆಯುವ ಕರ್ಮಗಳನ್ನೂ ಯಥಾವತ್ತಾಗಿ ಹೇಳಿದ್ದೇನೆ. ಯಾವ ಮನುಷ್ಯನು ರಜಸ್ಸಿಗೆ ಸಂಬಂಧಿಸಿದ ಈ ಎಲ್ಲ ಗುಣಗಳನ್ನೂ ತಿಳಿದುಕೊಂಡಿರುವನೋ– ಅವನು ರಜೋಗುಣಕ್ಕೆ ಸಂಬಂಧಿಸಿದ ಸಕಲಗುಣಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

೩೭ನೆಯ ಅಧ್ಯಾಯವು ಮುಗಿಯಿತು.

೩೮ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಸತ್ತ್ವಗುಣದ ಕಾರ್ಯದ ಮತ್ತು ಫಲದ ವರ್ಣನೆ

ಬ್ರಹ್ಮನು ಹೇಳುತ್ತಾನೆ:

ಅತಃ ಪರಂ ಪ್ರವಕ್ಷ್ಯಾಮಿ ತೃತೀಯಂ ಗುಣಮುತ್ತಮಮ್ ।
ಸರ್ವಭೂತಹಿತಂ ಲೋಕೇ ಸತಾಂ ಧರ್ಮಮನಿನ್ದಿತಮ್ ॥೧॥

“ಮಹರ್ಷಿಗಳೇ! ನಾನು ಇನ್ನು ಮುಂದೆ ಸರ್ವಪ್ರಾಣಿಗಳಿಗೂ ಹಿತಕರವಾದ, ಅನಿಂದ್ಯವಾದ, ಸತ್ಪುರುಷರು ಆಶ್ರಯಿಸಲು ಯೋಗ್ಯವಾದ, ಶ್ರೇಷ್ಠವಾದ ಮೂರನೆಯ ಗುಣವನ್ನು (ಸತ್ತ್ವಗುಣವನ್ನು) ಹೇಳುತ್ತೇನೆ.

ಆನನ್ದಃ ಪ್ರೀತಿರುದ್ರೇಕಃ ಪ್ರಾಕಾಶ್ಯಂ ಸುಖಮೇವ ಚ ।
ಅಕಾರ್ಪಣ್ಯಮಸಂರಮ್ಭಃ ಸನ್ತೋಷಃ ಶ್ರದ್ದಧಾನತಾ ॥೨॥

ಕ್ಷಮಾ ಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್ ।
ಅಕ್ರೋಧಶ್ಚಾನಸೂಯಾ ಚ ಶೌಚಂ ದಾಕ್ಷ್ಯಂ ಪರಾಕ್ರಮಃ ॥೩॥

ಆನಂದ, ಪ್ರಸನ್ನತೆ, ಉನ್ನತಿ, ಪ್ರಕಾಶ, ಸುಖ, ಕೃಪಣತೆಯಿಲ್ಲದಿರುವಿಕೆ, ನಿರ್ಭಯತೆ, ಸಂತೋಷ, ಶ್ರದ್ಧೆ, ಕ್ಷಮೆ, ಧೈರ್ಯ, ಅಹಿಂಸೆ, ಸಮತೆ, ಸತ್ಯ, ಸರಳತೆ, ಕ್ರೋಧವಿಲ್ಲದಿರುವುದು, ಯಾರಲ್ಲಿಯೂ ದೋಷವೆಣಿಸದೇ ಇರುವುದು, ಪವಿತ್ರತೆ, ಚತುರತೆ ಮತ್ತು ಪರಾಕ್ರಮ–ಇವು ಸತ್ತ್ವಗುಣದ ಕಾರ್ಯಗಳಾಗಿವೆ.

ಮುಧಾ ಜ್ಞಾನಂ ಮುಧಾ ವೃತ್ತಂ ಮುಧಾ ಸೇವಾ ಮುಧಾ ಶ್ರಮಃ ।
ಏವಂ ಯೋ ಯುಕ್ತಧರ್ಮಃ ಸ್ಯಾತ್ಸೋಽಮುತ್ರಾತ್ಯನ್ತಮಶ್ನುತೇ ॥೪॥

ನಾನಾಪ್ರಕಾರವಾದ ಲೌಕಿಕಜ್ಞಾನವು ವ್ಯರ್ಥ, ಲೌಕಿಕವ್ಯವಹಾರವೂ ವ್ಯರ್ಥ, ಅನೀತಿವಂತರ ಸೇವೆಯು ವ್ಯರ್ಥ, ಭೌತಿಕಸುಖಕ್ಕಾಗಿ ಪಡುವ ಶ್ರಮವೂ ವ್ಯರ್ಥ–ಎಂದು ಭಾವಿಸಿ ಯಾವನು ಸತ್ವಗುಣಯುಕ್ತವಾದ ಧರ್ಮದಲ್ಲಿಯೇ ನಿರತನಾಗಿರುವನೋ-ಅಂತಹವನು ಪರಲೋಕದಲ್ಲಿ ಅಕ್ಷಯವಾದ ಸುಖವನ್ನು ಉಪಭೋಗಿಸುತ್ತಾನೆ.

ನಿರ್ಮಮೋ ನಿರಹಙ್ಕಾರೋ ನಿರಾಶೀಃ ಸರ್ವತಃ ಸಮಃ ।
ಅಕಾಮಭೂತ ಇತ್ಯೇವ ಸತಾಂ ಧರ್ಮಃ ಸನಾತನಃ ॥೫॥

ಮಮತೆ, ಅಹಂಕಾರ ಮತ್ತು ಆಶೆಗಳಿಂದ ರಹಿತನಾಗಿ, ಎಲ್ಲರಲ್ಲಿಯೂ ಸಮಭಾವವನ್ನಿಟ್ಟುಕೊಂಡು ನಿಷ್ಕಾಮಭಾವದಿಂದಿರುವುದೇ ಸತ್ಪುರುಷರ ಸನಾತನಧರ್ಮವಾಗಿದೆ.

ವಿಶ್ರಮ್ಭೋ ಹ್ರೀಸ್ತಿತಿಕ್ಷಾ ಚ ತ್ಯಾಗಃ ಶೌಚಮತನ್ದ್ರಿತಾ।
ಆನೃಶಂಸ್ಯಮಸಮ್ಮೋಹೋ ದಯಾ ಭೂತೇಷ್ವಪೈಶುನಮ್ ॥೬॥

ಹರ್ಷಸ್ತುಷ್ಟಿರ್ವಿಸ್ಮಯಶ್ಚ ವಿನಯಃ ಸಾಧುವೃತ್ತಿತಾ ।
ಶಾನ್ತಿಕರ್ಮಣಿ ಶುದ್ಧಿಶ್ಚ ಶುಭಾ ಬುದ್ಧಿರ್ವಿಮೋಚನಮ್ ॥೭॥

ಉಪೇಕ್ಷಾ ಬ್ರಹ್ಮಚರ್ಯಂ ಚ ಪರಿತ್ಯಾಗಶ್ಚ ಸರ್ವಶಃ ।
ನಿರ್ಮಮತ್ವಮನಾಶೀಷ್ಟ್ವಮಪರಿಕ್ಷತಧರ್ಮತಾ ॥೮॥

ವಿಶ್ವಾಸ, ಲಜ್ಜೆ, ಸಹನೆ, ತ್ಯಾಗ, ಪವಿತ್ರತೆ, ಅನಾಲಸ್ಯ, ಕಾರುಣ್ಯ, ಮೋಹವಿಲ್ಲದಿರುವುದು, ಪ್ರಾಣಿಗಳಲ್ಲಿ ದಯೆ, ಚಾಡಿಹೇಳದಿರುವುದು, ಹರ್ಷ, ತುಷ್ಟಿ, ಗರ್ವವಿಲ್ಲದಿರುವುದು, ವಿನಯ, ಸದ್ವ್ಯವಹಾರ, ಶಾಂತಿಕರ್ಮಗಳಲ್ಲಿ ಶುದ್ಧಮನಸ್ಸಿನಿಂದ ಪ್ರವರ್ತಿಸುವುದು, ಉತ್ತಮವಾದ ಬುದ್ಧಿ, ಭವಬಂಧವಿಮೋಚನೆ, ಲೌಕಿಕವ್ಯವಹಾರದಲ್ಲಿ ಉಪೇಕ್ಷೆ, ಬ್ರಹ್ಮಚರ್ಯೆ, ಸರ್ವಪರಿತ್ಯಾಗ, ನಿರ್ಮಮತೆ, ನಿಷ್ಕಾಮನೆ, ವಿಚ್ಛಿತ್ತಿಯಿಲ್ಲದೇ ಧರ್ಮಕಾರ್ಯವನ್ನು ನಿರಂತರವಾಗಿ ಮಾಡುವುದು–ಇವು ಸತ್ವಗುಣದ ಕಾರ್ಯಗಳು.

ಮುಧಾ ದಾನಂ ಮುಧಾ ಯಜ್ಞೋ ಮುಧಾಧೀತಂ ಮುಧಾ ವ್ರತಮ್ ।
ಮುಧಾ ಪ್ರತಿಗ್ರಹಶ್ಚೈವ ಮುಧಾ ಧರ್ಮೋ ಮುಧಾ ತಪಃ ॥೯॥

ಏವಂ ವೃತ್ತಾಸ್ತು ಯೇ ಕೇಚಿಲ್ಲೋಕೇಽಸ್ಮಿನ್ಸತ್ತ್ವಸಂಶ್ರಯಾಃ ।
ಬ್ರಾಹ್ಮಣಾ ಬ್ರಹ್ಮಯೋನಿಸ್ಥಾಸ್ತೇ ಧೀರಾಃ ಸಾಧುದರ್ಶಿನಃ ॥೧೦॥

ಸಕಾಮಗಳಾದ ದಾನ, ಯಜ್ಞ, ಅಧ್ಯಯನ, ವ್ರತ, ಪರಿಗ್ರಹ, ಧರ್ಮ ಮತ್ತು ತಪಸ್ಸು–ಈ ಎಲ್ಲವೂ ವ್ಯರ್ಥವಾದುವುಗಳೆಂದು ಭಾವಿಸಿ ಯಾರು ವಿಶ್ವಾಸ, ಲಜ್ಜೆ–ಇವೇ ಮುಂತಾದ ಸತ್ತ್ವಗುಣದ ಕಾರ್ಯಗಳನ್ನು ಮಾಡುವರೋ, ಲೋಕದಲ್ಲಿ ಸಂಪೂರ್ಣವಾಗಿ ಸತ್ತ್ವಗುಣವನ್ನೇ ಆಶ್ರಯಿಸಿ ಕೊಂಡಿರುವರೋ, ವೇದಗಳ ಉತ್ಪತ್ತಿಗೆ ಸ್ಥಾನಭೂತವಾದ ಪರಬ್ರಹ್ಮ ಪರಮಾತ್ಮನಲ್ಲಿಯೇ ನಿಷ್ಠೆಯುಳ್ಳವರಾಗಿರುವರೋ–ಅಂತಹ ಬ್ರಾಹ್ಮಣರೇ ಧೀರರೂ, ಸಾಧುದರ್ಶಿಗಳೂ ಆಗಿರುತ್ತಾರೆ.

ಹತ್ವಾ ಸರ್ವಾಣಿ ಪಾಪಾನಿ ನಿಃಶೋಕಾ ಹ್ಯಥ ಮಾನವಾಃ ।
ದಿವಂ ಪ್ರಾಪ್ಯ ತು ತೇ ಧೀರಾಃ ಕುರ್ವತೇ ವೈ ತತಸ್ತನೂಃ ॥೧೧॥

ಧೀರರಾದ ಇಂತಹ ಬ್ರಾಹ್ಮಣರು ಎಲ್ಲ ಪಾಪಗಳನ್ನೂ ಹೋಗಲಾಡಿಸಿಕೊಂಡು ಶೋಕರಹಿತರಾಗುತ್ತಾರೆ. ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗಿ ಅಲ್ಲಿಯ ಭೋಗಗಳನ್ನು ಉಪಭೋಗಿಸಲು ಅನೇಕ ಶರೀರಗಳನ್ನು ಧರಿಸುತ್ತಾರೆ.

ಈಶಿತ್ವಂ ಚ ವಶಿತ್ವಂ ಚ ಲಘುತ್ವಂ ಮನಸಶ್ಚ ತೇ ।
ವಿಕುರ್ವತೇ ಮಹಾತ್ಮಾನೋ ದೇವಾಸ್ತ್ರಿದಿವಗಾ ಇವ ।
ಊರ್ಧ್ವಸ್ರೋತಸ ಇತ್ಯೇತೇ ದೇವಾ ವೈಕಾರಿಕಾಃ ಸ್ಮೃತಾಃ ॥೧೨॥

ಸತ್ತ್ವಗುಣಸಂಪನ್ನರಾದ ಮಹಾತ್ಮರು ಸ್ವರ್ಗವಾಸಿಗಳಾದ ದೇವತೆಗಳಂತೆ ಈಶಿತ್ವ, ವಶಿತ್ವ, ಲಘುತ್ವಗಳೇ ಮೊದಲಾದ ಮಾನಸಿಕಸಿದ್ಧಿಗಳನ್ನು ಹೊಂದಿರುತ್ತಾರೆ. ಇವರು ಊರ್ಧ್ವಸ್ರೋತಸರೆಂದೂ ವೈಕಾರಿಕ ದೇವತೆಗಳೆಂದೂ ಕರೆಯಲ್ಪಡುತ್ತಾರೆ.

ವಿಕುರ್ವನ್ತಃ ಪ್ರಕೃತ್ಯಾ ವೈ ದಿವಂ ಪ್ರಾಪ್ತಾಸ್ತತಸ್ತತಃ।
ಯದ್ಯದಿಚ್ಛನ್ತಿ ತತ್ಸರ್ವಂ ಭಜನ್ತೇ ವಿಭಜನ್ತಿ ಚ ॥೧೩॥

ಯೋಗಬಲದಿಂದ ಸ್ವರ್ಗಕ್ಕೆ ಹೋದನಂತರ ಅವರ ಮನಸ್ಸು ಅಲ್ಲಲ್ಲಿನ ಭೋಗಜನಿತವಾದ ಸಂಸ್ಕಾರಗಳಿಂದ ವಿಕಾರಗೊಳ್ಳುತ್ತದೆ. ಆ ಸಮಯದಲ್ಲಿ ಅವರು ಏನೇನನ್ನು ಇಚ್ಛಿಸುವರೋ ಅವೆಲ್ಲವನ್ನೂ ಹೊಂದುತ್ತಾರೆ. ತಾವೂ ಹೊಂದುವುದಲ್ಲದೇ ಪ್ರಾರ್ಥಿಸಿದವರಿಗೂ ವಿಭಾಗಮಾಡಿಕೊಡುತ್ತಾರೆ.

ಬ್ರಾಹ್ಮಣಶ್ರೇಷ್ಠರೇ! ಸತ್ತ್ವಗುಣದ ಈ ಕಾರ್ಯಗಳನ್ನು ನಿಮಗೆ ಹೇಳಿದ್ದೇನೆ. ಯಾವಾತನು ಈ ಸತ್ತ್ವಗುಣವನ್ನು ಚೆನ್ನಾಗಿ ತಿಳಿಯುವನೋ ಅವನು ಅಪೇಕ್ಷಿಸಿದ ವಸ್ತುಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ.

ಸತ್ತ್ವಗುಣದ ವಿಷಯಗಳನ್ನು ನಾನು ವಿಶೇಷವಾಗಿ ಹೇಳಿದ್ದೇನೆ. ಸತ್ತ್ವಗುಣದ ಕಾರ್ಯಗಳನ್ನೂ ಯಥಾವತ್ತಾಗಿ ಹೇಳಿದ್ದೇನೆ. ಯಾವ ಮನುಷ್ಯನು ಈ ಗುಣಗಳನ್ನು ತಿಳಿದುಕೊಳ್ಳುವನೋ-ಅವನು ಸತ್ವಗುಣಯೋಗ್ಯವಾದ ಫಲಗಳನ್ನೇ ಪಡೆಯುತ್ತಾನೆ ಮತ್ತು ಮುಂದೆ ಯಾವುದೇ ಗುಣಗಳಿಂದಲೂ ಬಂಧಿಸಲ್ಪಡುವುದಿಲ್ಲ."

ಇ೮ನೆಯ ಅಧ್ಯಾಯವು ಮುಗಿಯಿತು.

ಇ೯ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಸತ್ತ್ವಾದಿ ಗುಣಗಳ ಮತ್ತು ಪ್ರಕೃತಿಯ ನಾಮವಿಶೇಷಗಳು

ಬ್ರಹ್ಮನು ಹೇಳುತ್ತಾನೆ:

ನೈವ ಶಕ್ಯಾ ಗುಣಾ ವಕ್ತುಂ ಪೃಥಕ್ತ್ವೇನೈವ ಸರ್ವಶಃ।
ಅವಿಚ್ಛಿನ್ನಾನಿ ದೃಶ್ಯನ್ತೇ ರಜಃ ಸತ್ತ್ವಂ ತಮಸ್ತಥಾ ॥೧॥

"ಮಹರ್ಷಿಗಳೇ! ಸತ್ತ್ವರಜಸ್ತಮೋಗುಣಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ನಿರೂಪಿಸುವುದು ಸರ್ವಥಾ ಶಕ್ಯವಿಲ್ಲ. ಏಕೆಂದರೆ: ಈ ಮೂರು ಗುಣಗಳೂ ಯಾವಾಗಲೂ ಮನುಷ್ಯರಲ್ಲಿ ಎಡಬಿಡದೇ ಸೇರಿಕೊಂಡೇ ಇರುತ್ತವೆ.

ಅನ್ಯೋನ್ಯಮಥರಜ್ಯನ್ತೇ ಹ್ಯನ್ಯೋನ್ಯಂ ಚಾರ್ಥಜೀವಿನಃ ।
ಅನ್ಯೋನ್ಯಮಾಶ್ರಿತಾಃ ಸರ್ವೇ ತಥಾನ್ಯೋನ್ಯಾನುವರ್ತಿನಃ ॥೨॥

ಈ ಗುಣಗಳು ಒಂದಕ್ಕೊಂದು ಸೇರಿಕೊಂಡೇ ರಂಜಿಸುತ್ತವೆ. ಒಂದಕ್ಕೊಂದು ಸೇರಿಕೊಂಡೇ ಜೀವಿಸುತ್ತವೆ. ಎಲ್ಲ ಗುಣಗಳೂ ಪರಸ್ಪರವಾಗಿ ಒಂದನ್ನೊಂದು ಆಶ್ರಯಿಸಿಯೇ ಇರುತ್ತವೆ. ಪರಸ್ಪರವಾಗಿ ಎಲ್ಲ ಗುಣಗಳೂ ಒಂದನ್ನೊಂದು ಅನುಸರಿಸಿಯೇ ಹೋಗುತ್ತವೆ.

ಯಾವತ್ಸತ್ತ್ವಂ ರಜಸ್ತಾವದ್ವರ್ತತೇ ನಾತ್ರ ಸಂಶಯಃ ।
ಯಾವತ್ತಮಶ್ಚ ಸತ್ತ್ವಂಚ ರಜಸ್ತಾವದಿಹೋಚ್ಯತೇ ॥೩॥

ಈ ಜಗತ್ತಿನಲ್ಲಿ ಎಲ್ಲಿಯವರೆಗೆ ಸತ್ತ್ವಗುಣವಿರುವುದೋ ಅಲ್ಲಿಯವರೆಗೂ ರಜೋಗುಣವೂ ಇದ್ದೇ ಇರುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಹೀಗೆಯೇ ಎಲ್ಲಿಯವರೆಗೆ ತಮೋಗುಣ-ಸತ್ತ್ವಗುಣಗಳಿರುತ್ತವೆಯೋ– ಅಲ್ಲಿಯವರೆಗೂ ರಜೋಗುಣವೂ ಇದ್ದೇ ಇರುತ್ತದೆ.

ಸಂಹತ್ಯ ಕುರ್ವತೇ ಯಾತ್ರಾಂ ಸಹಿತಾಃ ಸಂಘಚಾರಿಣಃ ।
ಸಂಘಾತವೃತ್ತಯೋ ಹ್ಯೇತೇ ವರ್ತನ್ತೇ ಹೇತ್ವಹೇತುಭಿಃ ॥೪॥

ಈ ಮೂರು ಗುಣಗಳೂ ಸನಿಮಿತ್ತ ಅಥವಾ ಅನಿಮಿತ್ತವಾಗಿ ಸಾಮೂಹಿಕವಾಗಿಯೇ ಯಾತ್ರೆಹೋಗುತ್ತವೆ. ಒಟ್ಟಾಗಿ ಸೇರಿಕೊಂಡೇ ಸಂಚರಿಸುತ್ತವೆ. ಇವು ಯಾವಾಗಲೂ ಪರಸ್ಪರವಾಗಿ ಸೇರಿಕೊಂಡೇ ಶರೀರದಲ್ಲಿರುತ್ತವೆ.

ಉದ್ರೇಕವ್ಯತಿರಿಕ್ತಾನಾಂ ತೇಷಾಮನ್ಯೋನ್ಯವರ್ತಿನಾಮ್ ।
ವಕ್ಷ್ಯತೇ ತದ್ಯಥಾ ನ್ಯೂನಂ ವ್ಯತಿರಿಕ್ತಂ ಚ ಸರ್ವಶಃ ॥೫॥

ಹೀಗೆ ಈ ಗುಣಗಳು ಪರಸ್ಪರವಾಗಿ ಒಟ್ಟಾಗಿಯೇ ಇದ್ದರೂ ಉನ್ನತಿ ಮತ್ತು ಅವನತಿಗಳ ಸ್ವಭಾವವುಳ್ಳವುಗಳು. ಒಂದು ಗುಣವು ಮತ್ತೊಂದು ಗುಣವನ್ನು ಅನುಸರಿಸಿಕೊಂಡಿದ್ದರೂ ಕೆಲವು ಸಮಯಗಳಲ್ಲಿ ಒಂದು ಗುಣವು ಮತ್ತೊಂದು ಗುಣಕ್ಕಿಂತಲೂ ಹೆಚ್ಚಾಗಿರುವುದೂ ಕಮ್ಮಿಯಾಗಿರುವುದೂ ಕಂಡುಬರುತ್ತದೆ. ಇದು ಹೇಗಾಗುವುದೆಂಬುದನ್ನು ಕೇಳಿರಿ.

ವ್ಯತಿರಿಕ್ತಂ ತಮೋ ಯತ್ರ ತಿರ್ಯಗ್ಭಾವಗತಂ ಭವೇತ್ ।
ಅಲ್ಪಂ ತತ್ರ ರಜೋ ಜ್ಞೇಯಂ ಸತ್ತ್ವಮಲ್ಪತರಂ ತಥಾ ॥೬॥

ತಿರ್ಯಗ್ಯೋನಿಗಳಲ್ಲಿ (ಪಶು-ಪಕ್ಷಿಗಳಲ್ಲಿ) ತಮೋಗುಣವು ಅಧಿಕವಾಗಿರುತ್ತದೆ. ಅವುಗಳಲ್ಲಿ ರಜೋಗುಣವು ಅಲ್ಪವಾಗಿಯೂ ಸತ್ತ್ವ ಗುಣವು ಅತ್ಯಲ್ಪವಾಗಿಯೂ ಇರುತ್ತದೆ.

ಉದ್ರಿಕ್ತಂ ಚ ರಜೋ ಯತ್ರ ಮಧ್ಯಸ್ರೋತೋಗತಂ ಭವೇತ್ ।
ಅಲ್ಪಂ ತತ್ರ ತಮೋ ಜ್ಞೇಯಂ ಸತ್ತ್ವಮಲ್ಪತರಂ ತಥಾ ॥೭॥

*ಮಧ್ಯಸ್ರೋತವಿರುವ ಮನುಷ್ಯರಲ್ಲಿ ರಜೋಗುಣವು ಅಧಿಕವಾಗಿರುತ್ತದೆ. ತಮೋಗುಣವು ಅಲ್ಪವಾಗಿರುತ್ತದೆ. ಸತ್ತ್ವಗುಣವು ಅತ್ಯಲ್ಪವಾಗಿರುತ್ತದೆ.

ಉದ್ರಿಕ್ತಂ ಚ ಯದಾ ಸತ್ತ್ವಮೂರ್ಧ್ವಸ್ರೋತೋಗತಂ ಭವೇತ್ ।
ಅಲ್ಪಂ ತತ್ರ ತಮೋಜ್ಞೇಯಂ ರಜಶ್ಚಾಲ್ಪತರಂ ತಥಾ ॥೮॥

ಊರ್ಧ್ವರೇತಸ್ಕನಾದ ಯೋಗಿಯಲ್ಲಿರುವ ಸತ್ತ್ವಗುಣವು ಅಧಿಕವಾದಾಗ ಅವನಲ್ಲಿ ತಮೋಗುಣವು ಅಲ್ಪವಾಗಿಯೂ ರಜೋಗುಣವು ಅತ್ಯಲ್ಪವಾಗಿಯೂ ಇರುತ್ತದೆ.

ಸತ್ತ್ವಂ ವೈಕಾರಿಕೀ ಯೋನಿರಿನ್ದ್ರಿಯಾಣಾಂ ಪ್ರಕಾಶಿಕಾ ।
ನ ಹಿ ಸತ್ತ್ವಾತ್ಪರೋ ಧರ್ಮಃ ಕಶ್ಚಿದನ್ಯೋ ವಿಧೀಯತೇ ॥೯॥

ಸತ್ತ್ವಗುಣವು ಇಂದ್ರಿಯಗಳಿಗೆ ಕಾರಣಭೂತವಾಗಿದೆ. ಯೋನಿಭೂತವಾಗಿರುವ ಆ ಸತ್ತ್ವಗುಣವು ಇಂದ್ರಿಯಗಳನ್ನು ಪ್ರಕಾಶಗೊಳಿಸುವುದೂ ಮತ್ತು ಅವುಗಳ ಸ್ವಭಾವವನ್ನು ಮಾರ್ಪಡಿಸುವುದೂ ಆಗಿದೆ. ಸತ್ತ್ವಗುಣಕ್ಕಿಂತಲೂ ದೊಡ್ಡದಾದ ಬೇರೆಯ ಧರ್ಮವೇ ಮತ್ತೊಂದಿಲ್ಲ.

---

*ತಿರ್ಯಕ್ ಸ್ರೋತಸರು ಪಶುಗಳು; ಮಧ್ಯಸ್ರೋತಸರು ಮನುಷ್ಯರು. ತಿಂದ ಆಹಾರವು ಹೊಟ್ಟೆಯಲ್ಲಿ ತಿರ್ಯಗ್ಗತಿ (ಅಡ್ಡಡ್ಡವಾಗಿ) ಸಂಚರಿಸುವುದರಿಂದ ಪ್ರಾಣಿಗಳಿಗೆ ತಿರ್ಯಕ್ಸ್ರೋತಗಳೆಂದೂ, ಮಧ್ಯದಲ್ಲಿ ಸಂಚರಿಸುವುದರಿಂದ ಮನುಷ್ಯರಿಗೆ ಮಧ್ಯಸ್ರೋತಸರೆಂದೂ ಹೆಸರು. ಊರ್ಧ್ವಸ್ರೋತಸಃ=ಊರ್ಧ್ವಂ-ಊರ್ಧ್ವಗತಂ ಸ್ರೋತಃ ರೇತಃ ಪ್ರವಾಹಃ ಯಸ್ಯ ಸಃ=ಊರ್ಧ್ವಸ್ರೋತಾಃ, ರೇತಸ್ಸಿನ ಪ್ರವಾಹವನ್ನು ಕೆಳಮುಖವಾಗಿ ಬಿಡದೇ ಮೇಲ್ಮುಖವಾಗಿ ತಡೆದು ನಿಲ್ಲಿಸುವ ಯೋಗಿಯು.

ಊರ್ಧ್ವಂ ಗಚ್ಛನ್ತಿ ಸತ್ತ್ವಸ್ಥಾಃ ಮಧ್ಯೇ ತಿಷ್ಠನ್ತಿ ರಾಜಸಾಃ ।
ಜಘನ್ಯಗುಣಸಂಯುಕ್ತಾ ಯಾನ್ತ್ಯಧಸ್ತಾಮಸಾ ಜನಾಃ ॥೧೦॥

ಸತ್ತ್ವಗುಣವೇ ಹೆಚ್ಚಾಗಿರುವವರು ಸ್ವರ್ಗಾದಿ ಉಚ್ಚಲೋಕಗಳಿಗೆ ಹೋಗುತ್ತಾರೆ. ರಜೋಗುಣವೇ ಹೆಚ್ಚಾಗಿರುವವರು ಮಧ್ಯಮಲೋಕದಲ್ಲಿಯೇ (ಮನುಷ್ಯಲೋಕದಲ್ಲಿಯೇ) ಹುಟ್ಟುತ್ತಿರುತ್ತಾರೆ. ನಿದ್ರಾಲಸ್ಯ- ಪ್ರಮಾದಾದಿ ಕೆಳಮಟ್ಟದ ಗುಣಗಳನ್ನೇ ಹೊಂದಿರುವ ತಮೋಗುಣಪ್ರಧಾನರಾದ ಮನುಷ್ಯರು ಅಧೋಗತಿಯನ್ನು ಹೊಂದುತ್ತಾರೆ. (ನೀಚಯೋನಿಗಳಲ್ಲಿ ಜನ್ಮತಾಳುತ್ತಾರೆ ಅಥವಾ ನರಕಕ್ಕೆ ಹೋಗುತ್ತಾರೆ.)

ತಮಃ ಶೂದ್ರೇ ರಜಃ ಕ್ಷತ್ರೇ ಬ್ರಾಹ್ಮಣೇ ಸತ್ತ್ವಮುತ್ತಮಮ್ ।
ಇತ್ಯೇವಂ ತ್ರಿಷು ವರ್ಣೇಷು ವಿವರ್ತನ್ತೇ ಗುಣಾಸ್ತ್ರಯಃ ॥೧೧॥

ಶೂದ್ರನಲ್ಲಿ ತಮೋಗುಣವೂ, ಕ್ಷತ್ರಿಯನಲ್ಲಿ ರಜೋಗುಣವೂ ಬ್ರಾಹ್ಮಣನಲ್ಲಿ ಸತ್ತ್ವಗುಣವೂ ಪ್ರಧಾನವಾಗಿರುತ್ತದೆ. ಹೀಗೆ ಈ ಮೂರು ವರ್ಣದವರಲ್ಲಿ ಸತ್ತ್ವರಜಸ್ತಮೋಗುಣಗಳು ವಿಶೇಷವಾಗಿರುತ್ತವೆ.

ದೂರಾದಪಿ ಹಿ ದೃಶ್ಯನ್ತೇ ಸಹಿತಾಃ ಸಂಘಚಾರಿಣಃ।
ತಮಃ ಸತ್ತ್ವಂ ರಜಶ್ಚೈವ ಪೃಥಕ್ತ್ವೇನಾನುಶುಶ್ರುಮ ॥೧೨॥

ಈ ಮೂರು ಗುಣಗಳೂ ಜೊತೆ-ಜೊತೆಯಲ್ಲಿಯೇ ಸಂಚರಿಸುತ್ತಾ ಪರಸ್ಪರವಾಗಿ ಸೇರಿಕೊಂಡಿರುವುದನ್ನು ನಾವು ದೂರದಿಂದಲೂ ಕಾಣಬಹುದು. ಆದರೆ ಸತ್ತ್ವ-ರಜಸ್ತಮೋಗುಣಗಳು ಪ್ರತ್ಯೇಕ-ಪ್ರತ್ಯೇಕವಾಗಿರುವುದನ್ನು ನಾವು ಕೇಳಿಯೇ ಇಲ್ಲ.

ದೃಷ್ಟ್ವಾತ್ವಾದಿತ್ಯಮುದ್ಯನ್ತಂ ಕುಚರಾಣಾಂ ಭಯಂ ಭವೇತ್ ।
ಅಧ್ವಗಾಃ ಪರಿತಪ್ಯೇರಂಸ್ತೃಷ್ಣಾರ್ತಾ ದುಃಖಭಾಗಿನಃ ॥೧೩॥

ಸೂರ್ಯನು ಹುಟ್ಟುತ್ತಿರುವುದನ್ನು ನೋಡಿದೊಡನೆಯೇ ದುರಾಚಾರಿಗಳಾದ ಮನುಷ್ಯರಿಗೆ ಭಯವುಂಟಾಗುತ್ತದೆ. ಬಾಯಾರಿಕೆಯಿಂದ ಪೀಡಿತರಾದ ಮತ್ತು ದುಃಖಿತರಾದ ದಾರಿಹೋಕರು ಪರಿತಪಿಸುತ್ತಾರೆ.

ಆದಿತ್ಯಃ ಸತ್ತ್ವಮುದ್ರಿಕ್ತಂ ಕುಚರಾಸ್ತು ತಥಾ ತಮಃ ।
ಪರಿತಾಪೋಽಧ್ವಗಾನಾಂ ಚ ರಜಸೋ ಗುಣ ಉಚ್ಯತೇ ॥೧೪॥

ಸೂರ್ಯೋದಯವೆಂಬುದೇ ಸತ್ತ್ವಗುಣದ ಆವಿರ್ಭಾವ. ದುರಾಚಾರಿಗಳ ಭಯವೆಂಬುದೇ ತಮೋಗುಣದ ಕಾರ್ಯ. ದಾರಿಹೋಕರ ಪರಿತಾಪವೆಂಬುದೇ ರಜೋಗುಣದ ಕಾರ್ಯ.

ಪ್ರಾಕಾಶ್ಯಂ ಸತ್ತ್ವಮಾದಿತ್ಯೇ ಸಂತಾಪೋ ರಾಜಸೋ ಗುಣಃ ।
ಉಪಪ್ಲವಸ್ತು ವಿಜ್ಞೇಯಸ್ತಾಮಸಸ್ತಸ್ಯ ಪರ್ವಸು ॥೧೫॥

ಸೂರ್ಯನಲ್ಲಿರುವ ಪ್ರಕಾಶವೇ ಸತ್ತ್ವಗುಣ. ಅವನಿಂದ ಉಂಟಾಗುವ ಸಂತಾಪವೇ ರಜೋಗುಣ. ಸೂರ್ಯೋಪರಾಗಪರ್ವಕಾಲಗಳಲ್ಲಿ ಅವನಿಗೆ ಆಗುವ ಗ್ರಹಣವೇ ತಮೋಗುಣವೆಂದು ತಿಳಿಯಬೇಕು.

ಏವಂ ಜ್ಯೋತಿಃಷು ಸರ್ವೇಷು ನಿವರ್ತನ್ತೇ ಗುಣಾಸ್ತ್ರಯಃ ।
ಪರ್ಯಾಯೇಣ ಚ ವರ್ತನ್ತೇ ತತ್ರ ತತ್ರ ತಥಾ ತಥಾ ॥೧೬॥

ಹೀಗೆ ಎಲ್ಲ ಜ್ಯೋತಿಗಳಲ್ಲಿಯೂ ಮೂರು ಗುಣಗಳೂ ಕ್ರಮವಾಗಿ ಅಲ್ಲಲ್ಲಿ ಅದೇ ಪ್ರಕಾರವಾಗಿ ಪ್ರಕಟವಾಗುತ್ತವೆ ಮತ್ತು ಲೀನವಾಗುತ್ತವೆ.

ಸ್ಥಾವರೇಷು ಚ ಭಾವೇಷು ತಿರ್ಯಗ್ಭಾವಗತಂ ತಮಃ ।
ರಾಜಸಾಸ್ತು ವಿವರ್ತನ್ತೇ ಸ್ನೇಹಭಾವಸ್ತು ಸಾತ್ತ್ವಿಕಃ ॥೧೭॥

ಸ್ಥಾವರಪ್ರಾಣಿಗಳಲ್ಲಿ ತಮೋಗುಣವು ಅಧಿಕವಾಗಿರುತ್ತದೆ. ಅದರಲ್ಲಿ ಬದಲಾವಣೆಹೊಂದುವ ಗುಣವಿರುವುದೇ ರಾಜಸಗುಣ. ನುಣುಪಾಗಿರುವುದೇ ಸಾತ್ತ್ವಿಕಗುಣ.

ಅಹಸ್ತ್ರಿಧಾ ತು ವಿಜ್ಞೇಯಂ ತ್ರಿಧಾ ರಾತ್ರಿರ್ವಿಧೀಯತೇ ।
ಮಾಸಾರ್ಧಮಾಸವರ್ಷಾಣಿ ಋತವಃ ಸಂಧಯಸ್ತಥಾ ॥೧೮॥

ಗುಣಗಳ ಪ್ರಭೇದದಿಂದಲೇ ಹಗಲು ಮೂರು ಪ್ರಕಾರವಾಗಿರುತ್ತದೆ. ರಾತ್ರಿಯೂ ಮೂರು ಪ್ರಕಾರವಾಗಿರುತ್ತದೆ. ಮಾಸ, ಪಕ್ಷ, ವರ್ಷ, ಋತು, ಸಂಧಿಗಳೂ ಮೂರು ಪ್ರಕಾರವಾಗಿರುತ್ತವೆ.

ತ್ರಿಧಾ ದಾನಾನಿ ದೀಯನ್ತೇ ತ್ರಿಧಾ ಯಜ್ಞಃ ಪ್ರವರ್ತತೇ ।
ತ್ರಿಧಾ ಲೋಕಾಸ್ತ್ರಿಧಾ ದೇವಾಸ್ತ್ರಿಧಾ ವಿದ್ಯಾಸ್ತ್ರಿಧಾ ಗತಿಃ ॥೧೯॥

ಗುಣಗಳ ಭೇದಕ್ಕೆ ಅನುಸಾರವಾಗಿ ಮೂರು ಪ್ರಕಾರವಾದ ದಾನಗಳು ಕೊಡಲ್ಪಡುತ್ತವೆ. ಮೂರು ಪ್ರಕಾರವಾದ ಯಜ್ಞಗಳೂ ನಡೆಯುತ್ತವೆ. ಮೂರು ಪ್ರಕಾರವಾದ ಲೋಕಗಳೂ ಇವೆ. ಮೂರು ಪ್ರಕಾರವಾದ ದೇವತೆಗಳಿದ್ದಾರೆ. ಮೂರು ಪ್ರಕಾರವಾದ ವಿದ್ಯೆಗಳಿವೆ. ಮೂರು ಪ್ರಕಾರವಾದ ಮಾರ್ಗಗಳೂ ಇವೆ.

ಭೂತಂ ಭವ್ಯಂ ಭವಿಷ್ಯಂ ಚ ಧರ್ಮೋಽರ್ಥಃ ಕಾಮ ಏವ ಚ ।
ಪ್ರಾಣಾಪಾನಾವುದಾನಶ್ಚಾಪ್ಯೇತ ಏವ ತ್ರಯೋ ಗುಣಾಃ ॥೨೦॥

ಭೂತ-ವರ್ತಮಾನ-ಭವಿಷ್ಯಗಳೂ, ಧರ್ಮಾರ್ಥ-ಕಾಮಗಳೂ, ಪ್ರಾಣ-ಅಪಾನ ಮತ್ತು ಉದಾನಗಳೂ ತ್ರಿಗುಣಾತ್ಮಕವಾಗಿಯೇ ಇವೆ.

ಪರ್ಯಾಯೇಣ ಪ್ರವರ್ತನ್ತೇ ತತ್ರ ತತ್ರ ತಥಾ ತಥಾ ।
ಯತ್ಕಿಂಚಿದಿಹ ಲೋಕೇಽಸ್ಮಿನ್ಸರ್ವಮೇತೇ ತ್ರಯೋ ಗುಣಾಃ ॥೨೧॥

ಈ ಲೋಕದಲ್ಲಿ ಯಾವುದೇ ವಸ್ತುವಿನಲ್ಲಿಯೂ ಮೂರು ಗುಣಗಳೂ ಅಲ್ಲಲ್ಲಿ ಅದೇ ರೀತಿಯಲ್ಲಿ ಪರ್ಯಾಯವಾಗಿ ಪ್ರಕಟವಾಗುತ್ತವೆ.

ತ್ರಯೋ ಗುಣಾಃ ಪ್ರವರ್ತನ್ತೇ ಹ್ಯವ್ಯಕ್ತಾ ನಿತ್ಯಮೇವ ತು ।
ಸತ್ತ್ವಂ ರಜಸ್ತಮಶ್ಚೈವ ಗುಣಸರ್ಗಃ ಸನಾತನಃ ॥೨೨॥

ಮೂರು ಗುಣಗಳೂ ಪ್ರತಿಯೊಂದು ಕಾರ್ಯದಲ್ಲಿಯೂ ತೊಡಗಿರುತ್ತವೆ. ಇವು ಅವ್ಯಕ್ತವೂ ಆಗಿವೆ; ನಿತ್ಯವೂ ಆಗಿವೆ. ಸತ್ತ್ವ-ರಜಸ್ತಮೋಗುಣಗಳ ಸೃಷ್ಟಿಯು ಸನಾತನವಾದುದು.

ತಮೋ ವ್ಯಕ್ತಂ ಶಿವಂ ಧಾಮ ರಜೋ ಯೋನಿಃ ಸನಾತನಃ ।
ಪ್ರಕೃತಿರ್ವಿಕಾರಃ ಪ್ರಲಯಃ ಪ್ರಧಾನಂ ಪ್ರಭವಾಪ್ಯಯೌ ॥೨೩॥

ಅನುದ್ರಿಕ್ತಮನೂನಂ ವಾಪ್ಯಕಮ್ಪಮಚಲಂ ಧ್ರುವಮ್ ।
ಸದಸಚ್ಚೈವ ತತ್ಸರ್ವಮವ್ಯಕ್ತಂ ತ್ರಿಗುಣಂ ಸ್ಮೃತಮ್ ।
ಜ್ಞೇಯಾನಿ ನಾಮಧೇಯಾನಿ ನರೈರಧ್ಯಾತ್ಮಚಿನ್ತಕೈಃ ॥೨೪॥

ಪ್ರಕೃತಿಗೆ-ತಮಸ್ಸು, ವ್ಯಕ್ತ, ಶಿವ, ಧಾಮ, ರಜಸ್ಸು, ಯೋನಿ, ಸನಾತನ, ಪ್ರಕೃತಿ, ವಿಕಾರ, ಪ್ರಲಯ, ಪ್ರಧಾನ, ಪ್ರಭವ, ಅಪ್ಯಯ,

ಅನುದ್ರಿಕ್ತ, ಅನೂನ, ಅಕಂಪ, ಅಚಲ, ಧ್ರುವ, ಸತ್, ಅಸತ್, ಅವ್ಯಕ್ತ ಮತ್ತು ತ್ರಿಗುಣ–ಎಂಬ ಇಪ್ಪತ್ತೆರಡು ನಾಮಧೇಯಗಳಿವೆ. ಅಧ್ಯಾತ್ಮತತ್ತ್ವಚಿಂತಕರು ಪ್ರಕೃತಿಯ ಈ ಇಪ್ಪತ್ತೆರಡು ನಾಮಧೇಯಗಳನ್ನೂ ತಿಳಿದುಕೊಂಡಿರಬೇಕು.

ಅವ್ಯಕ್ತನಾಮಾನಿ ಗುಣಾಂಶ್ಚ ತತ್ತ್ವತೋ
ಯೋ ವೇದ ಸರ್ವಾಣಿ ಗತೀಶ್ಚ ಕೇವಲಾಃ ।
ವಿಮುಕ್ತದೇಹಃ ಪ್ರವಿಭಾಗತತ್ತ್ವವಿ-
ತ್ಸ ಮುಚ್ಯತೇ ಸರ್ವಗುಣೈರ್ನಿರಾಮಯಃ ॥೨೫॥

ಯಾವ ಮನುಷ್ಯನು ಅವ್ಯಕ್ತಪ್ರಕೃತಿಯ ಈ ಇಪ್ಪತ್ತೆರಡು ನಾಮಧೇಯಗಳನ್ನೂ, ಸತ್ತ್ವಾದಿಗುಣಗಳನ್ನೂ, ವಿಶುದ್ಧವಾದ ಗತಿಗಳನ್ನೂ ಚೆನ್ನಾಗಿ ತಿಳಿದುಕೊಂಡಿರುವನೋ-ಅಂತಹ ಗುಣವಿಭಾಗಗಳ ತತ್ತ್ವಜ್ಞನಾದ ಸಾಧಕನು ಯಾವ ವಿಧವಾದ ಸಾಂಸಾರಿಕವಾದ ಉಪದ್ರವಗಳೂ ಇಲ್ಲದವನಾಗಿ ದೇಹದಿಂದ ಬಿಡುಗಡೆಹೊಂದಿ ತ್ರಿಗುಣಗಳಿಂದ ಮುಕ್ತನಾಗುತ್ತಾನೆ.”

ಌ೯ನೆಯ ಅಧ್ಯಾಯವು ಮುಗಿಯಿತು.

೪೦ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಮಹತ್ತತ್ತ್ವದ ನಾಮಧೇಯಗಳು: ಪರಮಾತ್ಮತತ್ತ್ವದ ಮಹಿಮೆ

ಬ್ರಹ್ಮನು ಹೇಳುತ್ತಾನೆ:

ಅವ್ಯಕ್ತಾತ್ಪೂರ್ವಮುತ್ಪನ್ನೋ ಮಹಾನಾತ್ಮಾ ಮಹಾಮತಿಃ ।
ಆದಿರ್ಗುಣಾನಾಂ ಸರ್ವೇಷಾಂ ಪ್ರಥಮಂ ಸರ್ಗ ಉಚ್ಯತೇ ॥೧॥

“ಮಹರ್ಷಿಗಳೇ! ಅವ್ಯಕ್ತಪ್ರಕೃತಿಯು ಹುಟ್ಟುವುದಕ್ಕೆ ಮೊದಲು ಮಹತ್ತಾದ ಆತ್ಮರೂಪವಾಗಿರುವ ಮಹಾಬುದ್ಧಿತತ್ತ್ವವು ಹುಟ್ಟಿತು. ಆ ಬುದ್ಧಿತತ್ತ್ವವೇ ಎಲ್ಲ ಗುಣಗಳಿಗೂ ಮೊದಲು ಹುಟ್ಟಿದುದೆಂದು ಹೇಳುತ್ತಾರೆ.

ಮಹಾನಾತ್ಮಾ ಮತಿರ್ವಿಷ್ಣುರ್ಜಿಷ್ಣುಃ ಶಮ್ಭುಶ್ಚ ವೀರ್ಯವಾನ್ ।
ಬುದ್ಧಿಃ ಪ್ರಜ್ಞೋಪಲಬ್ಧಿಶ್ಚ ತಥಾ ಖ್ಯಾತಿರ್ಧೃತಿಃ ಸ್ಮೃತಿಃ ॥೨॥

ಪರ್ಯಾಯವಾಚಕೈಃ ಶಬ್ದೈರ್ಮಹಾನಾತ್ಮಾ ವಿಭಾವ್ಯತೇ ।
ತಂ ಜಾನನ್ಬ್ರಾಹ್ಮಣೋ ವಿದ್ವಾನ್ನಪ್ರಮೋಹಂ ನಾಧಿಗಚ್ಛತಿ ॥೩॥

ಮಹಾನ್, ಆತ್ಮಾ, ಮತಿ, ವಿಷ್ಣು, ಜಿಷ್ಣು, ಶಂಭು, ವೀರ್ಯವಂತ, ಬುದ್ಧಿ, ಪ್ರಜ್ಞಾ, ಉಪಲಬ್ಧಿ, ಖ್ಯಾತಿ, ಧೃತಿ, ಸ್ಮೃತಿ–ಈ ಪರ್ಯಾಯಶಬ್ದಗಳಿಂದಲೂ ಮಹತ್ತಾದ ಆತ್ಮವು ಭಾವಿಸಲ್ಪಡುತ್ತದೆ. ಈ ತತ್ತ್ವವನ್ನು ತಿಳಿದ ವಿದ್ವಾಂಸನಾದ ಬ್ರಾಹ್ಮಣನು ಮೋಹವಶನಾಗುವುದಿಲ್ಲ.

ಸರ್ವತಃ ಪಾಣಿಪಾದಶ್ಚ ಸರ್ವತೋಽಕ್ಷಿಶಿರೋಮುಖಃ ।
ಸರ್ವತಃ ಶ್ರುತಿಮಾಲ್ಲೋಕೇ ಸರ್ವಂ ವ್ಯಾಪ್ಯ ಸ ತಿಷ್ಠತಿ ॥೪॥

ಪರಮಾತ್ಮನು ಎಲ್ಲ ಕಡೆಗಳಲ್ಲಿಯೂ ಕೈ-ಕಾಲುಗಳುಳ್ಳವನೂ, ಎಲ್ಲ ಕಡೆಗಳಲ್ಲಿಯೂ ಕಣ್ಣು-ಶಿರಸ್ಸು-ಮುಖಗಳುಳ್ಳವನೂ, ಎಲ್ಲ ಕಡೆಗಳಲ್ಲಿಯೂ ಕಿವಿಗಳುಳ್ಳವನೂ ಆಗಿರುವನು. ಅವನು ಪ್ರಪಂಚದಲ್ಲಿ ಎಲ್ಲವನ್ನೂ ವ್ಯಾಪಿಸಿಕೊಂಡಿರುವನು.

ಮಹಾಪ್ರಭಾವಃ ಪುರುಷಃ ಸರ್ವಸ್ಯ ಹೃದಿ ನಿಶ್ಚಿತಃ ।
ಅಣಿಮಾ ಲಘಿಮಾ ಪ್ರಾಪ್ತಿರೀಶಾನೋ ಜ್ಯೋತಿರವ್ಯಯಃ ॥೫॥

ಎಲ್ಲರ ಹೃದಯಗಳಲ್ಲಿಯೂ ವಿರಾಜಮಾನನಾಗಿರುವ ಪರಮಪುರುಷ ಪರಮಾತ್ಮನು ಮಹಾಪ್ರಭಾವವುಳ್ಳವನು. ಅಣಿಮಾ, ಲಘಿಮಾ, ಪ್ರಾಪ್ತಿ–ಇವೇ ಮುಂತಾದ ಅಷ್ಟಮಸಿದ್ಧಿಗಳು ಅವನ ಸ್ವರೂಪಗಳೇ ಆಗಿವೆ. ಅವನು ಎಲ್ಲವನ್ನೂ ಶಾಸನಮಾಡತಕ್ಕವನೂ, ಜ್ಯೋತಿರ್ಮಯನೂ, ಅವಿನಾಶಿಯೂ ಆಗಿರುವನು.

ತತ್ರ ಬುದ್ಧಿವಿದೋ ಲೋಕಾಃ ಸದ್ಭಾವನಿರತಾಶ್ಚ ಯೇ ।
ಧ್ಯಾನಿನೋ ನಿತ್ಯ ಯೋಗಾಶ್ಚ ಸತ್ಯಸಂಧಾ ಜಿತೇನ್ದ್ರಿಯಾಃ ॥೬॥

ಜ್ಞಾನವನ್ತಶ್ಚ ಯೇ ಕೇಚಿದಲುಬ್ಧಾ ಜಿತಮನ್ಯವಃ ।
ಪ್ರಸನ್ನಮನಸೋ ಧೀರಾ ನಿರ್ಮಮಾ ನಿರಹಂಕೃತಾಃ ॥೭॥

ವಿಮುಕ್ತಾಃ ಸರ್ವ ಏವೈತೇ ಮಹತ್ತ್ವಮುಪಯಾನ್ತ್ಯುತ ।
ಆತ್ಮನೋ ಮಹತೋ ವೇದ ಯಃ ಪುಣ್ಯಾಂ ಗತಿಮುತ್ತಮಾಮ್ ॥೮॥

ಪ್ರಪಂಚದಲ್ಲಿ ಬುದ್ಧಿವಂತರೂ, ಸದ್ಭಾವನಿರತರೂ, ಧ್ಯಾನಯೋಗ

ನಿಷ್ಣಾತರೂ, ನಿತ್ಯಯೋಗಿಗಳೂ, ಸತ್ಯಸಂಧರೂ, ಜಿತೇಂದ್ರಿಯರೂ, ಜ್ಞಾನವಂತರೂ, ಲೋಭರಹಿತರೂ, ಕ್ರೋಧವನ್ನು ಜಯಿಸಿರುವವರೂ, ಪ್ರಸನ್ನವಾದ ಮನಸ್ಸುಳ್ಳವರೂ, ಧೀರರೂ, ಮಮಕಾರವಿಲ್ಲದವರೂ, ಅಹಂಕಾರವಿಲ್ಲದವರೂ ಆಗಿರುವ ಜನರು ಮುಕ್ತರಾಗಿ ಪರಮಾತ್ಮನನ್ನು ಹೊಂದುತ್ತಾರೆ. ಯಾರು ಸರ್ವಶ್ರೇಷ್ಠನಾದ ಪರಮಾತ್ಮನ ಮಹಿಮೆಯನ್ನು ತಿಳಿದಿರುವರೋ–ಅವರು ಪುಣ್ಯದಾಯಕವಾದ ಉತ್ತಮಗತಿಯನ್ನು ಹೊಂದುತ್ತಾರೆ.

ಅಹಂಕಾರಾತ್ಪ್ರಸೂತಾನಿ ಮಹಾಭೂತಾನಿ ಪಞ್ಚ ವೈ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ॥೯॥

ಪೃಥಿವೀ, ವಾಯು, ಆಕಾಶ, ಜಲ ಮತ್ತು ತೇಜಸ್ಸುಗಳೆಂಬ ಪಂಚಮಹಾಭೂತಗಳು ಅಹಂಕಾರತತ್ತ್ವದಿಂದ ಹುಟ್ಟಿವೆ.

ತೇಷು ಭೂತಾನಿ ಯುಜ್ಯನ್ತೇ ಮಹಾಭೂತೇಷು ಪಞ್ಚಸು ।
ತೇ ಶಬ್ದಸ್ಪರ್ಶರೂಪೇಷು ರಸಗನ್ಧಕ್ರಿಯಾಸು ಚ ॥೧೦॥

ಈ ಪಂಚಮಹಾಭೂತಗಳನ್ನೂ ಅವುಗಳ ಕಾರ್ಯಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳನ್ನೂ ಎಲ್ಲ ಪ್ರಾಣಿಗಳೂ ಹೊಂದಿರುತ್ತವೆ.

ಮಹಾಭೂತವಿನಾಶಾನ್ತೇ ಪ್ರಲಯೇ ಪ್ರತ್ಯುಪಸ್ಥಿತೇ ।
ಸರ್ವಪ್ರಾಣಭೃತಾಂ ಧೀರಾ ಮಹದುತ್ಪದ್ಯತೇ ಭಯಮ್ ।
ಸ ಧೀರಃ ಸರ್ವಲೋಕೇಷು ನ ಮೋಹಮಧಿಗಚ್ಛತಿ ॥೧೧॥

ಧೈರ್ಯಶಾಲಿಗಳಾದ ಮುನಿಗಳೇ! ಯಾವಾಗ ಪಂಚಭೂತಗಳ ವಿನಾಶಕವಾದ ಪ್ರಲಯಕಾಲವು ಪ್ರಾಪ್ತವಾಗುವುದೋ–ಆ ಸಮಯದಲ್ಲಿ ಎಲ್ಲ ಪ್ರಾಣಿಗಳಿಗೂ ಮಹಾಭಯವುಂಟಾಗುತ್ತದೆ. ಆದರೆ ಸಮಸ್ತಲೋಕ ಗಳಲ್ಲಿಯೂ ಆತ್ಮಜ್ಞಾನಿಯಾದ ಯಾವ ಧೀರಪುರುಷನಿರುವನೋ–ಅವನು ಅಂತಹ ಸಮಯದಲ್ಲಿಯೂ ವಿಮೋಹಗೊಳ್ಳುವುದಿಲ್ಲ.

ವಿಷ್ಣುರೇವಾದಿಸರ್ಗೇಷು ಸ್ವಯಮ್ಭೂರ್ಭವತಿ ಪ್ರಭುಃ ॥೧೨॥

ಏವಂ ಹಿ ಯೋ ವೇದ ಗುಹಾಶಯಂ ಪ್ರಭುಂ
ಪರಂ ಪುರಾಣಂ ಪುರುಷಂ ವಿಶ್ವರೂಪಮ್ ।
ಹಿರಣ್ಮಯಂ ಬುದ್ಧಿಮತಾಂ ಪರಾಂ ಗತಿಂ
ಸ ಬುದ್ಧಿಮಾನ್ಬುದ್ಧಿಮತೀತ್ಯ ತಿಷ್ಠತಿ ॥೧೩॥

'ಪ್ರಭುವಾದ ವಿಷ್ಣುವೇ ಆದಿಸೃಷ್ಟಿಯಲ್ಲಿ ಬ್ರಹ್ಮನಾಗುತ್ತಾನೆ'–ಯಾವನು ಹೀಗೆ ಬುದ್ಧಿರೂಪವಾದ ಗುಹೆಯಲ್ಲಿದ್ದುಕೊಂಡು ವಿಶ್ವರೂಪನೂ, ಪುರಾಣ ಪುರುಷನೂ, ಹಿರಣ್ಮಯದೇವನೂ, ಜ್ಞಾನಿಗಳಿಗೆ ಪರಮಗತಿ ಸ್ವರೂಪನೂ ಆದ ಪರಮಾತ್ಮನನ್ನು ತಿಳಿಯುವನೋ–ಅಂತಹ ಬುದ್ಧಿವಂತನು ಬುದ್ಧಿಯ ಎಲ್ಲೆಯನ್ನು ಮೀರಿ ನಿಲ್ಲುತ್ತಾನೆ."

೪೦ನೆಯ ಅಧ್ಯಾಯವು ಮುಗಿಯಿತು.

೪೧ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಅಹಂಕಾರದ ಉತ್ಪತ್ತಿ ಮತ್ತು ಅದರ ಸ್ವರೂಪದ ವರ್ಣನೆ

ಬ್ರಹ್ಮನು ಹೇಳುತ್ತಾನೆ:

ಯ ಉತ್ಪನ್ನೋ ಮಹಾನ್ಪೂರ್ವಮಹಂಕಾರಃ ಸ ಉಚ್ಯತೇ ।
ಅಹಮಿತ್ಯೇವ ಸಮ್ಭೂತೋ ದ್ವಿತೀಯಃ ಸರ್ಗ ಉಚ್ಯತೇ ॥೧॥

"ಮೊದಲು ಯಾವ ಮಹತ್ತತ್ತ್ವವು ಹುಟ್ಟಿತೋ-ಅದನ್ನು ಅಹಂಕಾರವೆಂದೂ ಕರೆಯುತ್ತಾರೆ. ಅದು ಅಹಂರೂಪವಾಗಿಯೇ ಹುಟ್ಟಿದುದರಿಂದ ಅದನ್ನು ಎರಡನೆಯ ಸೃಷ್ಟಿಯೆಂದು ಹೇಳುತ್ತಾರೆ.

ಅಹಂಕಾರಶ್ಚ ಭೂತಾದಿರ್ವೈಕಾರಿಕ ಇತಿ ಸ್ಮೃತಃ ।
ತೈಜಸಶ್ಚೇತನಾ ಧಾತುಃ ಪ್ರಜಾಸರ್ಗಃ ಪ್ರಜಾಪತಿಃ ॥೨॥

ಅಹಂಕಾರವು ಪ್ರಾಣಿಗಳೇ ಮೊದಲಾದ ವಿಕಾರಗಳಿಗೆ ಕಾರಣವಾಗಿದೆ. ಆದುದರಿಂದ ಅಹಂಕಾರವನ್ನು ವೈಕಾರಿಕ–ಎಂದೂ ಕರೆಯುತ್ತಾರೆ. ಇದು ರಜೋಗುಣದ ಸ್ವರೂಪವಾಗಿದೆ. ಆದುದರಿಂದ ಇದನ್ನು ತೈಜಸವೆಂದೂ ಕರೆಯುತ್ತಾರೆ. ಚೇತನವೇ ಇದಕ್ಕೆ ಆಧಾರಭೂತವಾಗಿದೆ. ಪ್ರಜಾಸೃಷ್ಟಿಯು

ಇದರಿಂದಲೇ ಆಗುವುದರಿಂದ ಇದನ್ನು ಪ್ರಜಾಪತಿಯೆಂದೂ ಕರೆಯುತ್ತಾರೆ.

ದೇವಾನಾಂ ಪ್ರಭವೋ ದೇವೋ ಮನಸಶ್ಚ ತ್ರಿಲೋಕಕೃತ್ ।
ಅಹಮಿತ್ಯೇವ ತತ್ಸರ್ವಮಭಿಮನ್ತಾ ಸ ಉಚ್ಯತೇ ॥೩॥

ಅಹಂಕಾರರೂಪವಾದ ಈ ಚೇತನವು ಶ್ರೋತ್ರಾದಿ ಇಂದ್ರಿಯ ರೂಪಗಳಾದ ದೇವತೆಗಳಿಗೆ ಮತ್ತು ಮನಸ್ಸಿಗೆ ಉತ್ಪತ್ತಿಸ್ಥಾನವಾಗಿದೆ. ತಾನೂ ದೇವಸ್ವರೂಪವೇ ಆಗಿದೆ. ಆದುದರಿಂದ ಇದನ್ನು ತ್ರಿಲೋಕಕರ್ತೃವೆಂದೂ ಹೇಳುತ್ತಾರೆ. ಇದು ಎಲ್ಲ ಜಗತ್ತಿಗೂ ಅಹಂಕಾರಸ್ವರೂಪವಾಗಿದೆ. ಆದುದರಿಂದ ಇದನ್ನು 'ಅಭಿಮಂತಾ' ಎಂದೂ ಕರೆಯುತ್ತಾರೆ.

ಅಧ್ಯಾತ್ಮಜ್ಞಾನತೃಪ್ತಾನಾಂ ಮುನೀನಾಂ ಭಾವಿತಾತ್ಮನಾಮ್ ।
ಸ್ವಾಧ್ಯಾಯಕ್ರತುಸಿದ್ಧಾನಾಮೇಷ ಲೋಕಃ ಸನಾತನಃ ॥೪॥

ಅಧ್ಯಾತ್ಮಜ್ಞಾನರೂಪದಿಂದ ತೃಪ್ತರಾಗಿ, ಅಧ್ಯಾತ್ಮಚಿಂತನೆಯನ್ನು ಮಾಡುವ, ಸ್ವಾಧ್ಯಾಯರೂಪವಾದ ಯಜ್ಞದಲ್ಲಿ ಸಿದ್ಧಿಹೊಂದಿದ ಮುನಿಗಳಿಗೆ ಸನಾತನವಾದ ಈ ಲೋಕವು ಪ್ರಾಪ್ತವಾಗುತ್ತದೆ.

ಅಹಂಕಾರೇಣಾಹರತೋ ಗುಣಾನಿಮಾ-
ನ್ಭೂತಾದಿರೇವಂ ಸೃಜತೇ ಸ ಭೂತಕೃತ್ ।
ವೈಕಾರಿಕಃ ಸರ್ವಮಿದಂ ವಿಚೇಷ್ಟತೇ
ಸ್ವತೇಜಸಾ ರಞ್ಜಯತೇ ಜಗತ್ತಥಾ ॥೫॥

ಸಮಸ್ತಭೂತಗಳಿಗೂ ಆದಿಯಾದ, ಎಲ್ಲವನ್ನೂ ಸೃಷ್ಟಿಸುವ ಅಹಂಕಾರಕ್ಕೆ ಆಧಾರಭೂತನಾದ ಜೀವಾತ್ಮನು ಅಹಂಕಾರದ ಮೂಲಕವಾಗಿಯೇ ಎಲ್ಲ ಗುಣಗಳನ್ನೂ ಸೃಷ್ಟಿಸುತ್ತಾನೆ ಮತ್ತು ಅವುಗಳನ್ನೇ ಉಪಭೋಗಿಸುತ್ತಾನೆ. ಜಗತ್ತಿನಲ್ಲಿ ನಡೆಯುವ ಎಲ್ಲ ಚೇಷ್ಟೆಗಳೂ ವಿಕಾರಕ್ಕೆ ಕಾರಣಭೂತವಾದ ಅಹಂಕಾರದ ಸ್ವರೂಪಗಳೇ ಆಗಿವೆ. ಆ ಅಹಂಕಾರವೇ

ತನ್ನ ಪ್ರಭಾವದಿಂದ ಎಲ್ಲ ಜಗತ್ತನ್ನೂ ರಜೋಮಯವನ್ನಾಗಿ (ಭೋಗೇಚ್ಛುವನ್ನಾಗಿ) ಮಾಡಿರುವುದು.”

೪೧ನೆಯ ಅಧ್ಯಾಯವು ಮುಗಿಯಿತು.

೪೨ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಅಹಂಕಾರದಿಂದ ಪಂಚಭೂತಗಳ ಮತ್ತು ಇಂದ್ರಿಯಗಳ ಸೃಷ್ಟಿ: ಅಧ್ಯಾತ್ಮ-ಅಧಿಭೂತ-ಅಧಿದೈವತೆಗಳ ವರ್ಣನೆ: ನಿವೃತ್ತಿಮಾರ್ಗದ ಉಪದೇಶ

ಬ್ರಹ್ಮನು ಹೇಳುತ್ತಾನೆ:

ಅಹಂಕಾರಾತ್ಪ್ರಸೂತಾನಿ ಮಹಾಭೂತಾನಿ ಪಞ್ಚ ವೈ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ॥೧॥

“ಮಹರ್ಷಿಗಳೇ! ಪೃಥಿವೀ, ವಾಯು, ಆಕಾಶ, ಜಲ ಮತ್ತು ಜ್ಯೋತಿಗಳೆಂಬ ಪಂಚಭೂತಗಳು ಅಹಂಕಾರದಿಂದ ಹುಟ್ಟಿವೆ.

ತೇಷು ಭೂತಾನಿ ಮುಹ್ಯನ್ತಿ ಮಹಾಭೂತೇಷು ಪಞ್ಚಸು ।
ಶಬ್ದಸ್ಪರ್ಶನರೂಪೇಷು ರಸಗನ್ಧಕ್ರಿಯಾಸು ಚ ॥೨॥

ಆ ಪಂಚಭೂತಗಳಲ್ಲಿ ಅರ್ಥಾತ್ ಅವುಗಳಿಂದ ಹುಟ್ಟಿದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ವಿಷಯಗಳಲ್ಲಿ ಎಲ್ಲ ಪ್ರಾಣಿಗಳೂ ವಿಮೋಹಗೊಳ್ಳುತ್ತವೆ.

ಮಹಾಭೂತವಿನಾಶಾನ್ತೇ ಪ್ರಲಯೇ ಪ್ರತ್ಯುಪಸ್ಥಿತೇ ।
ಸರ್ವಪ್ರಾಣಭೃತಾಂ ಧೀರಾ ಮಹದಭ್ಯುದ್ಯತೇ ಭಯಮ್ ॥೩॥

ಮಹಾಭೂತಗಳೆಲ್ಲವೂ ವಿನಾಶಹೊಂದುತ್ತಿರುವ ಸಮಯದಲ್ಲಿ ಪ್ರಳಯವು ಸನ್ನಿಹಿತವಾದಾಗ ಎಲ್ಲ ಪ್ರಾಣಿಗಳಿಗೂ ಮಹಾಭಯ ವುಂಟಾಗುತ್ತದೆ.

ಯದ್ಯಸ್ಮಾಜ್ಜಾಯತೇ ಭೂತಂ ತತ್ರ ತತ್ಪ್ರವಿಲೀಯತೇ ।
ಲೀಯನ್ತೇ ಪ್ರತಿಲೋಮಾನಿ ಜಾಯನ್ತೇ ಚೋತ್ತರೋತ್ತರಮ್ ॥೪॥

ಯಾವ ಭೂತವು ಯಾವುದರಿಂದ ಹುಟ್ಟಿತೋ–ಅದರಲ್ಲಿಯೇ ಅದು ವಿಲೀನಹೊಂದುತ್ತದೆ. ಈ ಭೂತಗಳು ಅನುಲೋಮಕ್ರಮದಿಂದ ಒಂದಾದಮೇಲೊಂದು ಹುಟ್ಟುತ್ತವೆ. ವಿಲೋಮಕ್ರಮದಿಂದ ತಮ್ಮ-ತಮ್ಮ ಕಾರಣದಲ್ಲಿ ಲಯವನ್ನು ಹೊಂದುತ್ತವೆ. (ವಿಲೋಮಕ್ರಮದಿಂದ ಲೀನವಾಗುವುದೆಂದರೆ ಪೃಥ್ವಿಯು ಜಲದಲ್ಲಿಯೂ, ಜಲವು ಅಗ್ನಿಯಲ್ಲಿಯೂ, ಅಗ್ನಿಯು ವಾಯುವಿನಲ್ಲಿಯೂ, ವಾಯುವು ಆಕಾಶದಲ್ಲಿಯೂ ಲೀನಹೊಂದುವುದು. ಅನುಲೋಮಕ್ರಮದಿಂದ ಹುಟ್ಟುವುದೆಂದರೆ **ಆಕಾಶಾದ್ವಾಯುಃ।ವಾಯೋರಗ್ನಿಃ।ಅಗ್ನೇರಾಪಃ।ಅದ್ಭ್ಯಃ ಪೃಥಿವೀ।** ಎಂಬ ಶ್ರುತಿವಚನದಂತೆ ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ನೀರೂ, ನೀರಿನಿಂದ ಭೂಮಿಯೂ ಹುಟ್ಟುತ್ತದೆ.)

ತತಃ ಪ್ರಲೀನೇ ಸರ್ವಸ್ಮಿನ್ಭೂತೇ ಸ್ಥಾವರಜಙ್ಗಮೇ।
ಸ್ಮೃತಿಮನ್ತಸ್ತದಾ ಧೀರಾ ನ ಲೀಯನ್ತೇ ಕದಾಚನ ॥೫॥

ಹೀಗೆ ಸಂಪೂರ್ಣಚರಾಚರಪ್ರಾಣಿಗಳು ಲೀನವಾಗಿ ಹೋದರೂ ಸ್ಮರಣಶಕ್ತಿಸಂಪನ್ನರಾದ ಧೀರರಾದ ಯೋಗಿಗಳು ಯಾವುದೇ ಕಾರಣ ದಿಂದಲೂ ಲೀನರಾಗುವುದಿಲ್ಲ.

ಶಬ್ದಃ ಸ್ಪರ್ಶಸ್ತಥಾ ರೂಪಂ ರಸೋ ಗನ್ಧಶ್ಚ ಪಞ್ಚಮಃ।
ಕ್ರಿಯಾಃ ಕರಣನಿತ್ಯಾಃ ಸ್ಯುರನಿತ್ಯಾ ಮೋಹಸಂಜ್ಞಿತಾಃ ॥೬॥

ಶಬ್ದ, ಸ್ಪರ್ಶ, ರೂಪ, ರಸ ಮತ್ತು ಐದನೆಯದಾದ ಗಂಧ ಮತ್ತು ಇವುಗಳ ಕ್ರಿಯೆಗಳು ಮನೋಮಾತ್ರವಾದ ರೂಪಗಳುಳ್ಳವುಗಳಾದುದರಿಂದ ನಿತ್ಯವಾದುವುಗಳು. (ಪ್ರಳಯಕಾಲದಲ್ಲಿ ಇವು ಲೀನವಾಗುವುದಿಲ್ಲ.) ಸ್ಥೂಲ ಪದಾರ್ಥಗಳು ಅನಿತ್ಯವಾದುವುಗಳು. ಇವುಗಳಿಗೆ 'ಮೋಹ'ವೆಂಬ ನಾಮಧೇಯವೂ ಇದೆ.

ಲೋಭಪ್ರಜನಸಮ್ಭೂತಾ ನಿರ್ವಿಶೇಷಾ ಹ್ಯಕಿಂಚನಾಃ।
ಮಾಂಸಶೋಣಿತಸಂಘಾತಾ ಅನ್ಯೋನ್ಯಸ್ಯೋಪಜೀವಿನಃ।
ಬಹಿರಾತ್ಮಾನ ಇತ್ಯೇತೇ ದೀನಾಃ ಕೃಪಣಜೀವಿನಃ ॥೭॥

ಲೋಭ ಮತ್ತು ಸ್ತ್ರೀ-ಪುರುಷರ ಸಂಯೋಗದಿಂದ ಹುಟ್ಟಿರುವ, ಸ್ವಲ್ಪವೂ ವ್ಯತ್ಯಾಸವಿಲ್ಲದೇ ಸಮಾನವಾಗಿರುವ, ಪರಸ್ಪರಸಹಕಾರದಿಂದ ಬೆಳೆಯುವ ಮಾಂಸ-ರಕ್ತಸಮೂಹಗಳು ಆತ್ಮನ ಹೊರಭಾಗದಲ್ಲಿ ಶರೀರದಲ್ಲಡಗಿವೆ. ಇವೆಲ್ಲವೂ ಸ್ಥೂಲವಾದುದರಿಂದ ಅನಿತ್ಯಗಳು. ಆದುದರಿಂದಲೇ ಇವುಗಳನ್ನು ದೀನಗಳೆಂದೂ ಕೃಪಣಜೀವಿಗಳೆಂದೂ ಕರೆಯುತ್ತಾರೆ.

ಪ್ರಾಣಾಪಾನವುದಾನಶ್ಚ ಸಮಾನೋ ವ್ಯಾನ ಏವ ಚ ॥೮॥
ಅನ್ತರಾತ್ಮನಿ ಚಾಪ್ಯೇತೇ ನಿಯತಾಃ ಪಞ್ಚ ವಾಯವಃ ।
ವಾಙ್ಮನೋಬುದ್ಧಿಭಿಃ ಸಾರ್ಧಮಿದಮಷ್ಟಾತ್ಮಕಂ ಜಗತ್ ॥೯॥

ಪ್ರಾಣ, ಅಪಾನ, ಉದಾನ, ಸಮಾನ ಮತ್ತು ವ್ಯಾನಗಳೆಂಬ ಐದು ವಾಯುಗಳು ನಿಯತವಾಗಿ ಅಂತರಾತ್ಮನಲ್ಲಿ ನಿವಾಸಮಾಡಿಕೊಂಡಿವೆ. (ಇವು ಸೂಕ್ಷ್ಮವಾಗಿರುವುದರಿಂದ ನಿತ್ಯಗಳು.) ಮನಸ್ಸು, ವಾಕ್ ಮತ್ತು ಬುದ್ಧಿ-ಇವುಗಳೂ ಸೇರಿ ಈ ಜಗತ್ತು ಅಷ್ಟಾತ್ಮಕವಾಗಿದೆ. (ಎಂಟು ಸೂಕ್ಷ್ಮಗಳುಳ್ಳದ್ದಾಗಿದೆ.)

ತ್ವಗ್ಘ್ರಾಣಶ್ರೋತ್ರಚಕ್ಷೂಂಷಿ ರಸನಾ ವಾಕ್ಚ ಸಂಯುತಾಃ ।
ವಿಶುದ್ಧಂ ಚ ಮನೋ ಯಸ್ಯ ಬುದ್ಧಿಶ್ಚಾವ್ಯಭಿಚಾರಿಣೀ ॥೧೦॥

ಅಷ್ಟೌ ಯಸ್ಯಾಗ್ನಯೋ ಹ್ಯೇತೇ ನ ದಹನ್ತೇ ಮನಃ ಸದಾ ।
ಸ ತದ್ಬ್ರಹ್ಮ ಶುಭಂ ಯಾತಿ ತಸ್ಮಾದ್ಭೂಯೋ ನ ವಿದ್ಯತೇ ॥೧೧॥

ಚರ್ಮ, ಮೂಗು, ಕಿವಿ, ಕಣ್ಣು, ನಾಲಿಗೆ ಮತ್ತು ಮಾತು–ಈ ಇಂದ್ರಿಯಗಳು ಯಾವನ ವಶದಲ್ಲಿವೆಯೋ, ಯಾವನ ಮನಸ್ಸು ಶುದ್ಧವಾಗಿದೆಯೋ, ಯಾವನ ಬುದ್ಧಿಯು ನಾನಾವಿಷಯಗಳಲ್ಲಿ ಪ್ರವೇಶಿಸದೇ ಪರಮಾತ್ಮನಲ್ಲಿಯೇ ಏಕಾಗ್ರವಾಗಿರುವುದೋ, ಯಾವನ ಮನಸ್ಸನ್ನು ಇಂದ್ರಿಯರೂಪಗಳಾದ ಎಂಟು ಅಗ್ನಿಗಳು (ಚರ್ಮ, ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊಳ್ಳೆಗಳು, ನಾಲಿಗೆ) ಸಂತಾಪಗೊಳಿಸುವುದಿಲ್ಲವೋ-ಅಂತಹ ಜ್ಞಾನಿಯಾದ ಪುರುಷನು ಕಲ್ಯಾಣಮಯ

ವಾದ ಪರಬ್ರಹ್ಮವಸ್ತುವನ್ನು ಹೊಂದುತ್ತಾನೆ. ಬ್ರಹ್ಮವಸ್ತುವಿಗಿಂತಲೂ ಅಧಿಕವಾದುದು ಬೇರೆ ಯಾವುದೂ ಇಲ್ಲ.

ದ್ವಿಜಶ್ರೇಷ್ಠರೇ! ಅಹಂಕಾರದಿಂದ ಹುಟ್ಟಿರುವ ಮನಸ್ಸಿನಿಂದ ಕೂಡಿರುವ ಹನ್ನೊಂದು ಇಂದ್ರಿಯಗಳು ಯಾವುಗಳಿವೆಯೋ–ಅವೆಲ್ಲವನ್ನೂ ವಿಶಿಷ್ಟವಾದ ರೀತಿಯಲ್ಲಿ ಹೇಳುತ್ತಿದ್ದೇನೆ.

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಞ್ಚಮೀ ।
ಪಾದೌ ಪಾಯುರುಪಸ್ಥಶ್ಚ ಹಸ್ತೌ ವಾಗ್ದಶಮೀ ಭವೇತ್ ॥೧೩॥

ಇನ್ದ್ರಿಯಗ್ರಾಮ ಇತ್ಯೇಷ ಮನ ಏಕಾದಶಂ ಭವೇತ್ ।
ಏತಂ ಗ್ರಾಮಂ ಜಯೇತ್ಪೂರ್ವಂ ತತೋ ಬ್ರಹ್ಮ ಪ್ರಕಾಶತೇ ॥೧೪॥

ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು, ಕೈಗಳು, ಕಾಲುಗಳು, ಗುದ, ಜನನೇಂದ್ರಿಯ ಮತ್ತು ವಾಕ್ಕು–ಈ ಹತ್ತು ಕರ್ಮೇಂದ್ರಿಯ-ಜ್ಞಾನೇಂದ್ರಿಯಗಳು. ಇವುಗಳ ಸಮೂಹಕ್ಕೆ ಇಂದ್ರಿಯಗ್ರಾಮವೆಂದು ಹೆಸರು. ಇವುಗಳನಂತರ ಮನಸ್ಸೆಂಬುದು ಹನ್ನೊಂದನೆಯದಾಗುತ್ತದೆ. ಮೊದಲು ಈ ಇಂದ್ರಿಯಗ್ರಾಮವನ್ನು ಜಯಿಸಬೇಕು. ಬಳಿಕ ಬ್ರಹ್ಮಸಾಕ್ಷಾತ್ಕಾರವಾಗುತ್ತದೆ.

ಬುದ್ಧೀನ್ದ್ರಿಯಾಣಿ ಪಞ್ಚಾಹುಃ ಪಞ್ಚ ಕರ್ಮೇನ್ದ್ರಿಯಾಣಿ ಚ ।
ಶ್ರೋತ್ರಾದೀನ್ಯಪಿ ಪಞ್ಚಾಹುರ್ಬುದ್ಧಿಯುಕ್ತಾನಿ ತತ್ತ್ವತಃ ॥೧೫॥

ಅವಿಶೇಷಾಣಿ ಚಾನ್ಯಾನಿ ಕರ್ಮಯುಕ್ತಾನಿ ಯಾನಿ ತು ।
ಉಭಯತ್ರ ಮನೋ ಜ್ಞೇಯಂ ಬುದ್ಧಿಸ್ತು ದ್ವಾದಶೀ ಭವೇತ್ ॥೧೬॥

ಈ ಹತ್ತು ಇಂದ್ರಿಯಗಳಲ್ಲಿ ಐದು ಜ್ಞಾನೇಂದ್ರಿಯಗಳು ಮತ್ತು ಐದು ಕರ್ಮೇಂದ್ರಿಯಗಳು. ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು–ಈ ಐದನ್ನು ಜ್ಞಾನೇಂದ್ರಿಯವೆನ್ನುತ್ತಾರೆ. ಉಳಿದ ಪಾದವೇ ಮುಂತಾದುವು ಕರ್ಮೇಂದ್ರಿಯಗಳು. ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳೆರಡಕ್ಕೂ ಮನಸ್ಸಿನ ಸಂಬಂಧವಿದೆ. ಮನಸ್ಸೂ ಸೇರಿ ಹನ್ನೊಂದು ಇಂದ್ರಿಯಗಳಲ್ಲದೇ ಬುದ್ಧಿ ಎಂಬ ಇಂದ್ರಿಯವೂ ಇದೆ. ಇದು ಹನ್ನೆರಡನೆಯದಾಗುತ್ತದೆ.

ಇತ್ಯುಕ್ತಾನೀನ್ದ್ರಿಯಾಣ್ಯೇತಾನ್ಯೇಕಾದಶ ಯಥಾಕ್ರಮಮ್ ।
ಮನ್ಯನ್ತೇ ಕೃತಮಿತ್ಯೇವಂ ವಿದಿತ್ವಾ ತಾನಿ ಪಣ್ಡಿತಾಃ ॥೧೭॥

ಹೀಗೆ ಕ್ರಮವಾಗಿ ಹನ್ನೊಂದು ಇಂದ್ರಿಯಗಳನ್ನೂ ಹೇಳಿದ್ದಾಯಿತು. ಈ ಇಂದ್ರಿಯಗ್ರಾಮದ ತತ್ತ್ವವನ್ನು ಚೆನ್ನಾಗಿ ತಿಳಿದ ವಿದ್ವಾಂಸರು ತಾವು ಕೃತಕೃತ್ಯರಾದೆವೆಂದು ಭಾವಿಸುತ್ತಾರೆ. ಇನ್ನು ಮುಂದೆ ನಾನು ಇಂದ್ರಿಯಗಳಿಗೆ ಸಂಬಂಧಿಸಿದಂತೆ ಬಗೆ-ಬಗೆಯ ವಿಷಯಗಳನ್ನು ಹೇಳುತ್ತೇನೆ.

ಆಕಾಶಂ ಪ್ರಥಮಂ ಭೂತಂ ಶ್ರೋತ್ರಮಧ್ಯಾತ್ಮಮುಚ್ಯತೇ ।
ಅಧಿಭೂತಂ ತಥಾ ಶಬ್ದೋ ದಿಶಸ್ತತ್ರಾಧಿದೈವತಮ್ ॥೧೮॥

ಪಂಚಮಹಾಭೂತಗಳಲ್ಲಿ ಆಕಾಶವೇ ಮೊದಲನೆಯ ಭೂತವಾಗಿದೆ. ಶ್ರೋತ್ರೇಂದ್ರಿಯವು ಅದರ ಅಧ್ಯಾತ್ಮ (ಇಂದ್ರಿಯ)ವಾಗಿದೆ. ಶಬ್ದವೇ ಅದರ ಅಧಿಭೂತ (ವಿಷಯ) ವಾಗಿದೆ. ದಿಕ್ಕುಗಳೇ ಆಕಾಶಕ್ಕೆ ಅಧಿದೈವತವಾಗಿದೆ. (ಅಧಿಷ್ಠಾತೃವಾದ ದೇವತೆಯಾಗಿದೆ.)

ದ್ವಿತೀಯಂ ಮಾರುತೋ ಭೂತಂ ತ್ವಗಧ್ಯಾತ್ಮಂ ಚ ವಿಶ್ರುತಾ ।
ಸ್ಪ್ರಷ್ಟವ್ಯಮಧಿಭೂತಂ ಚ ವಿದ್ಯುತ್ತತ್ರಾಧಿದೈವತಮ್ ॥೧೯॥

ಎರಡನೆಯದು ವಾಯುಭೂತ. ತ್ವಚೆಯೇ ಅದರ ಅಧ್ಯಾತ್ಮ. ಸ್ಪರ್ಶವು ಅಧಿಭೂತ ಮತ್ತು ವಿದ್ಯುತ್ತು ಅಧಿದೈವತ. (ಅಧಿಷ್ಠಾತೃದೇವತೆ.)

ತೃತೀಯಂ ಜ್ಯೋತಿರಿತ್ಯಾಹುಶ್ಚಕ್ಷುರಧ್ಯಾತ್ಮಮುಚ್ಯತೇ ।
ಅಧಿಭೂತಂ ತತೋ ರೂಪಂ ಸೂರ್ಯಸ್ತತ್ರಾಧಿದೈವತಮ್ ॥೨೦॥

ಮೂರನೆಯದು ಜ್ಯೋತಿರ್ಭೂತವೆಂದು ಹೇಳುತ್ತಾರೆ. ಅದಕ್ಕೆ ಕಣ್ಣೇ ಅಧ್ಯಾತ್ಮ. ರೂಪವು ಅಧಿಭೂತ. ಸೂರ್ಯನೇ ಜ್ಯೋತಿರ್ಭೂತದ ಅಧಿದೈವತ.(ಅಧಿಷ್ಠಾತೃದೇವತೆ.)

ಚತುರ್ಥಮಾಪೋ ವಿಜ್ಞೇಯಂ ಜಿಹ್ವಾಚಾಧ್ಯಾತ್ಮಮುಚ್ಯತೇ ।
ಅಧಿಭೂತಂ ರಸಶ್ಚಾತ್ರ ಸೋಮಸ್ತತ್ರಾಧಿದೈವತಮ್ ॥೨೧॥

ನಾಲ್ಕನೆಯದು ಅಪ್ ಭೂತವೆಂದು ತಿಳಿಯಬೇಕು. ನಾಲಿಗೆಯೇ ಅದರ ಅಧ್ಯಾತ್ಮ. ರಸವು ಅದರ ಅಧಿಭೂತವಾಗಿದೆ. ಸೋಮನು ಅಪ್ ಭೂತದ ಅಧಿಷ್ಠಾತೃದೇವತೆಯಾಗಿದ್ದಾನೆ.

ಪೃಥಿವೀ ಪಞ್ಚಮಂ ಭೂತಂ ಘ್ರಾಣಾಶ್ಚಾಧ್ಯಾತ್ಮಮುಚ್ಯತೇ।
ಅಧಿಭೂತಂ ತಥಾ ಗನ್ಧೋ ವಾಯುಸ್ತತ್ರಾಧಿದೈವತಮ್ ॥೨೨॥

ಪೃಥಿವಿಯು ಐದನೆಯ ಭೂತ. ಘ್ರಾಣವೇ ಅಧ್ಯಾತ್ಮ. ಗಂಧವು ಅಧಿಭೂತ. ವಾಯುವು ಪೃಥಿವೀಭೂತದ ಅಧಿದೇವತೆ.

ಏಷು ಪಞ್ಚಸು ಭೂತೇಷು ತ್ರಿಷು ಯಶ್ಚ ವಿಧಿಃ ಸ್ಮೃತಃ ॥೨೩॥

ಹೀಗೆ ಈ ಪಂಚಭೂತಗಳಲ್ಲಿ ಅಧ್ಯಾತ್ಮ, ಅಧಿಭೂತ ಮತ್ತು ಅಧಿದೈವತಗಳೆಂಬ ಮೂರು ಭೇದಗಳಿವೆ.

ಇನ್ನು ಮುಂದೆ ನಾನು ಕರ್ಮೇಂದ್ರಿಯಗಳ ಬಗೆ-ಬಗೆಯ ವಿಷಯಗಳನ್ನು ನಿರೂಪಿಸುತ್ತೇನೆ.

ಪಾದಾವಧ್ಯಾತ್ಮಮಿತ್ಯಾಹುರ್ಬ್ರಾಹ್ಮಣಾಸ್ತತ್ತ್ವದರ್ಶಿನಃ ।
ಅಧಿಭೂತಂ ತು ಗನ್ತವ್ಯಂ ವಿಷ್ಣುಸ್ತತ್ರಾಧಿದೈವತಮ್ ॥೨೪॥

ತತ್ತ್ವದರ್ಶಿಗಳಾದ ಬ್ರಾಹ್ಮಣರು ಎರಡು ಕಾಲುಗಳನ್ನು ಅಧ್ಯಾತ್ಮವೆಂದು ಹೇಳುತ್ತಾರೆ. ಹೋಗಬೇಕಾದ ಸ್ಥಾನವನ್ನೇ ಅಧಿಭೂತವೆಂದೂ ವಿಷ್ಣುವೇ ಪಾದಗಳಿಗೆ ಅಧಿಷ್ಠಾತೃದೇವತೆಯೆಂದೂ ಹೇಳುತ್ತಾರೆ.

ಅವಾಗ್ಗತಿರಪಾನಶ್ಚ ಪಾಯುರಧ್ಯಾತ್ಮಮುಚ್ಯತೇ ।
ಅಧಿಭೂತಂ ವಿಸರ್ಗಶ್ಚ ಮಿತ್ರಸ್ತತ್ರಾಧಿದೈವತಮ್ ॥೨೫॥

ಕೆಳಮುಖವಾಗಿ ಸಂಚರಿಸುವ ಅಪಾನವೂ ಮತ್ತು ಗುದವೂ ಅಧ್ಯಾತ್ಮವೆಂದು ಹೇಳಲ್ಪಟ್ಟಿದೆ. ಮಲತ್ಯಾಗವೆಂಬುದೇ ಅಧಿಭೂತ. ಮಿತ್ರನೇ ಅಧಿದೇವತೆ.

ಪ್ರಜನಃ ಸರ್ವಭೂತಾನಾಮುಪಸ್ಥೋಽಧ್ಯಾತ್ಮಮುಚ್ಯತೇ ।
ಅಧಿಭೂತಂ ತಥಾ ಶುಕ್ರಂ ದೈವತಂ ಚ ಪ್ರಜಾಪತಿಃ ॥೨೬॥

ಸಕಲಪ್ರಾಣಿಗಳ ಉತ್ಪತ್ತಿಗೆ ಕಾರಣವಾದ ಸ್ತ್ರೀ-ಪುರುಷರ ಜನನೇಂದ್ರಿಯಗಳು ಅಧ್ಯಾತ್ಮವೆಂದು ಹೇಳಲ್ಪಟ್ಟಿವೆ. ವೀರ್ಯವೇ ಅಧಿಭೂತ. ಪ್ರಜಾಪತಿಯು ಅಧಿದೇವತೆ.

ಹಸ್ತಾವಧ್ಯಾತ್ಮಮಿತ್ಯಾಹುರಧ್ಯಾತ್ಮವಿದುಷೋ ಜನಾಃ ।
ಅಧಿಭೂತಂ ಚ ಕರ್ಮಾಣಿ ಶಕ್ರಸ್ತತ್ರಾಧಿದೈವತಮ್ ॥೨೭॥

ಅಧ್ಯಾತ್ಮವನ್ನು ಅರಿತ ಜನರು ಕೈಗಳನ್ನು ಅಧ್ಯಾತ್ಮವೆನ್ನುತ್ತಾರೆ. ಕೈಗಳ ಮೂಲಕವಾಗಿ ನಡೆಯುವ ಕಾರ್ಯವನ್ನು ಅಧಿಭೂತವೆಂದೂ, ಇಂದ್ರನೇ ಅಧಿದೇವತೆಯೆಂದೂ ಹೇಳುತ್ತಾರೆ.

ವೈಶ್ವದೇವೀ ತತಃ ಪೂರ್ವಾ ವಾಗಧ್ಯಾತ್ಮಮಿಹೋಚ್ಯತೇ ।
ವಕ್ತವ್ಯಮಧಿಭೂತಂ ಚ ವಹ್ನಿಸ್ತತ್ರಾಧಿದೈವತಮ್ ॥೨೮॥

ವಿಶ್ವಕ್ಕೇ ದೇವಿಯಾದ, ಮೊದಲನೆಯವಳಾದ ವಾಕ್ಕು (ವಾಗ್ದೇವತೆಯು) ಅಧ್ಯಾತ್ಮವೆಂದು ಕರೆಯಲ್ಪಡುತ್ತಾಳೆ. 'ಹೇಳಲ್ಪಡುವುದು'– ಎಂಬುದೇ ವಾಕ್ಕಿಗೆ ಅಧಿಭೂತವು. ಅಗ್ನಿಯೇ ಅಧಿದೇವತೆಯು.

ಅಧ್ಯಾತ್ಮಂ ಮನ ಇತ್ಯಾಹುಃ ಪಞ್ಚಭೂತಾತ್ಮಚಾರಕಮ್ ।
ಅಧಿಭೂತಂ ಚ ಸಂಕಲ್ಪಶ್ಚನ್ದ್ರಮಾಶ್ಚಾಧಿದೈವತಮ್ ॥೨೯॥

ಪಂಚಭೂತಗಳನ್ನೂ ಸಂಚಾಲನಗೊಳಿಸುವ ಮನಸ್ಸನ್ನು ಅಧ್ಯಾತ್ಮವೆಂದು ಹೇಳುತ್ತಾರೆ. ಸಂಕಲ್ಪವೆಂಬುದೇ ಮನಸ್ಸಿಗೆ ಅಧಿಭೂತ. ಚಂದ್ರನೇ ಅಧಿದೇವತೆ.

ಅಹಂಕಾರಸ್ತಥಾಧ್ಯಾತ್ಮಂ ಸರ್ವಸಂಸಾರಕಾರಕಮ್ ।
ಅಭಿಮಾನೋಽಧಿಭೂತಂ ಚ ರುದ್ರಸ್ತತ್ರಾಧಿದೈವತಮ್ ॥೩೦॥

ಸಕಲಸಂಸಾರಗಳ ನಿರ್ಮಾಪಕವಾದ ಅಹಂಕಾರವೇ ಅಧ್ಯಾತ್ಮ. ಅಭಿಮಾನವೆಂಬುದೇ ಅಧಿಭೂತ. ರುದ್ರನೇ ಅಧಿದೇವತೆ.

ಅಧ್ಯಾತ್ಮಂ ಬುದ್ಧಿರಿತ್ಯಾಹುಃ ಷಡಿನ್ದ್ರಿಯವಿಚಾರಿಣೀ ।
ಅಧಿಭೂತಂ ತು ಮನ್ತವ್ಯಂ ಬ್ರಹ್ಮಾ ತತ್ರಾಧಿದೈವತಮ್ ॥೩೧॥

ಮನಸ್ಸಿನಿಂದ ಕೂಡಿರುವ ಆರು ಇಂದ್ರಿಯಗಳನ್ನೂ ತಿಳಿದಿರುವ ಬುದ್ಧಿಯನ್ನು ಅಧ್ಯಾತ್ಮವೆನ್ನುತ್ತಾರೆ. 'ತಿಳಿಯಲ್ಪಡುವುದು' ಎಂಬುದೇ ಅಧಿಭೂತವಾಗಿದೆ. ಬ್ರಹ್ಮನೇ ಅಧಿದೇವತೆ.

ತ್ರೀಣಿ ಸ್ಥಾನಾನಿ ಭೂತಾನಾಂ ಚತುರ್ಥಂ ನೋಪಪದ್ಯತೇ ।
ಸ್ಥಲಮಾಪಸ್ತಥಾಕಾಶಂ ಜನ್ಮ ಚಾಪಿ ಚತುರ್ವಿಧಮ್ ॥೩೨॥

ಅಣ್ಡಜೋದ್ಭಿಜ್ಜಸಂಸ್ವೇದಜರಾಯುಜಮಥಾಪಿ ಚ ।
ಚತುರ್ಧಾ ಜನ್ಮ ಇತ್ಯೇತದ್ಭೂತಗ್ರಾಮಸ್ಯ ಲಕ್ಷ್ಯತೇ ॥೩೩॥

ಪ್ರಾಣಿಗಳು ವಾಸಮಾಡಲು ಇರುವ ಮೂರು ಸ್ಥಾನಗಳೆಂದರೆ ಭೂಮಿ, ನೀರು ಮತ್ತು ಆಕಾಶ. ನಾಲ್ಕನೆಯ ಜಾಗವೇ ಇಲ್ಲ. ಪ್ರಾಣಿಗಳಿಗೆ ಅಂಡಜ (ಮೊಟ್ಟೆಯಿಂದ ಹುಟ್ಟತಕ್ಕುವುಗಳು), ಉದ್ಭಿಜ್ಜ (ನೆಲವನ್ನು ಸೀಳಿಕೊಂಡು ಹೊರಬರುವ ಗಿಡ-ಮರ-ಬಳ್ಳಿಗಳು), ಸ್ವೇದಜ (ಬೆವರಿನಿಂದ ಹುಟ್ಟುವ ಕ್ರಿಮಿ-ಕೀಟಗಳು), ಜರಾಯುಜ (ಗರ್ಭಾಶಯದಿಂದ ಹುಟ್ಟುವ ಮನುಷ್ಯರು ಮತ್ತು ಪಶುಗಳು) ಎಂಬ ನಾಲ್ಕು ವಿಧವಾದ ಜನ್ಮವಿದೆ. ಪ್ರಾಣಿಗಳ ಸಮುದಾಯಕ್ಕೆ ಈ ನಾಲ್ಕು ವಿಧವಾದ ಜನ್ಮಗಳು ಮಾತ್ರವೇ ಇರುವುದು ಕಂಡುಬರುತ್ತದೆ.

ಅಪರಾಣ್ಯಥ ಭೂತಾನಿ ಖೇಚರಾಣಿ ತಥೈವ ಚ।
ಅಣ್ಡಜಾನಿ ವಿಜಾನೀಯಾತ್ಸರ್ವಾಂಶ್ಚೈವ ಸರೀಸೃಪಾನ್ ॥೩೪॥

ಇವುಗಳೇ ಅಲ್ಲದೇ ಅಂತರಿಕ್ಷಚಾರಿಗಳಾದ ಪ್ರಾಣಿಗಳೂ ಮತ್ತು ಎಲ್ಲ ಬಗೆಯ ಹರಿದಾಡುವ ಸರ್ಪವೇ ಮೊದಲಾದ ಪ್ರಾಣಿಗಳೂ ಮೊಟ್ಟೆಯಮೂಲಕವಾಗಿ ಹುಟ್ಟುವುವೆಂದು ತಿಳಿಯಬೇಕು.

ಸ್ವೇದಜಾಃ ಕೃಮಯಃ ಪ್ರೋಕ್ತಾ ಜನ್ತವಶ್ಚ ಯಥಾಕ್ರಮಮ್ ।
ಜನ್ಮ ದ್ವಿತೀಯಮಿತ್ಯೇತಜ್ಜಘನ್ಯತರಮುಚ್ಯತೇ ॥೩೫॥

ಬೆವರಿನಿಂದ ಹುಟ್ಟುವ ಪ್ರಾಣಿಗಳನ್ನು ಕೃಮಿಗಳೆಂದೂ ಜಂತುಗಳೆಂದೂ ಅನುಕ್ರಮವಾಗಿ ಕರೆಯುತ್ತಾರೆ. ಮರುಹುಟ್ಟಿನ ವಿಷಯದಲ್ಲಿ ಹೇಳುವಾಗ ಕೃಮಿಜನ್ಮಕ್ಕಿಂತಲೂ ಜಂತುವಿನ ಜನ್ಮವು ಅತಿನೀಚವಾದುದೆಂದು ಹೇಳುತ್ತಾರೆ.

ಭಿತ್ತ್ವಾ ತು ಪೃಥಿವೀಂ ಯಾನಿ ಜಾಯನ್ತೇ ಕಾಲಪರ್ಯಯಾತ್ ।
ಉದ್ಭಿಜ್ಜಾನಿ ತಾನ್ಯಾಹುರ್ಭೂತಾನಿ ದ್ವಿಜಸತ್ತಮಾಃ ॥೩೬॥

ಕಾಲವು ಪಕ್ವವಾದನಂತರ ಭೂಮಿಯನ್ನು ಸೀಳಿಕೊಂಡು ಹೊರಬರುವ ಪ್ರಾಣಿಗಳನ್ನು (ಮರ-ಗಿಡ-ಬಳ್ಳಿಗಳನ್ನು) ಉದ್ಭಿಜ್ಜಗಳೆಂದು ಕರೆಯುತ್ತಾರೆ.

ದ್ವಿಪಾದಬಹುಪಾದಾನಿ ತಿರ್ಯಗ್ಗತಿಮತೀನಿ ಚ।
ಜರಾಯುಜಾನಿ ಭೂತಾನಿ ವಿಕೃತಾನ್ಯಪಿ ಸತ್ತಮಾಃ ॥೩೭॥

ಬ್ರಾಹ್ಮಣಶ್ರೇಷ್ಠರೇ! ದ್ವಿಪಾದಿಗಳು, ಬಹುಪಾದಿಗಳು, ವಕ್ರವಾದ ನಡಿಗೆಯುಳ್ಳವುಗಳು, ವಕ್ರವಾದ ಬುದ್ಧಿಯುಳ್ಳವುಗಳು ಮತ್ತು ವಿಕಾರವಾದ ರೂಪವುಳ್ಳ ಪ್ರಾಣಿಗಳು–ಇವೆಲ್ಲವೂ ಜರಾಯುಜಪ್ರಾಣಿಗಳೆಂದು ಹೇಳಲ್ಪಟ್ಟಿವೆ.

ದ್ವಿವಿಧಾ ಖಲು ವಿಜ್ಞೇಯಾ ಬ್ರಹ್ಮಯೋನಿಃ ಸನಾತನೀ ।
ತಪಃ ಕರ್ಮ ಚ ಯತ್ಪುಣ್ಯಮಿತ್ಯೇಷ ವಿದುಷಾಂ ನಯಃ ॥೩೮॥

ಬ್ರಾಹ್ಮಣತ್ವಕ್ಕೆ ಸನಾತನವಾದ ಕಾರಣವು ಎರಡು ಪ್ರಕಾರಗಳಾಗಿವೆಯೆಂದು ತಿಳಿಯಬೇಕು. ತಪಸ್ಸು ಮತ್ತು ಪುಣ್ಯಕರ್ಮಗಳ ಅನುಷ್ಠಾನ– ಇವೆರಡರಿಂದ ಬ್ರಾಹ್ಮಣತ್ವವು ಪ್ರಾಪ್ತವಾಗುವುದೆಂಬುದು ವಿದ್ವಾಂಸರ ನಿಶ್ಚಯವಾಗಿದೆ.

ವಿವಿಧಂ ಕರ್ಮ ವಿಜ್ಞೇಯಮಿಜ್ಯಾ ದಾನಂ ಚ ತನ್ಮಖೇ ।
ಜಾತಸ್ಯಾಧ್ಯಯನಂ ಪುಣ್ಯಮಿತಿ ವೃದ್ಧಾನುಶಾಸನಮ್ ॥೩೯॥

ಕರ್ಮಗಳಲ್ಲಿ ಬಗೆ-ಬಗೆಯ ಕರ್ಮಗಳಿವೆ. ಇವುಗಳಲ್ಲಿ ಪೂಜೆ, ಧ್ಯಾನ ಮತ್ತು ಯಜ್ಞಗಳಲ್ಲಿ ಹೋಮಮಾಡುವುದು –ಇವು ಪ್ರಧಾನವಾದ ಕರ್ಮಗಳು. ಬ್ರಾಹ್ಮಣನ ಕುಲದಲ್ಲಿ ಹುಟ್ಟಿದವನು ವೇದಗಳ ಅಧ್ಯಯನವನ್ನು ಮಾಡುವುದು ಪುಣ್ಯಕಾರ್ಯವೆಂಬುದು ವೃದ್ಧರ ಅನುಶಾಸನವಾಗಿದೆ.

ಏತದ್ಯೋ ವೇತ್ತಿ ವಿಧಿವದ್ಯುಕ್ತಃ ಸ ಸ್ಯಾದ್ದ್ವಿಜರ್ಷಭಾಃ।
ವಿಮುಕ್ತಃ ಸರ್ವಪಾಪೇಭ್ಯ ಇತಿ ಚೈವ ನಿಬೋಧತ ॥೪೦॥

ದ್ವಿಜಶ್ರೇಷ್ಠರೇ! ಯಾವ ಮನುಷ್ಯನು ಈ ವಿಷಯವನ್ನು ವಿಧಿಪೂರ್ವಕವಾಗಿ ತಿಳಿದಿರುವನೋ–ಅವನು ಎಲ್ಲ ಪಾಪಗಳಿಂದಲೂ ವಿಮುಕ್ತನಾಗಿ ಯೋಗಿಯೇ ಆಗುತ್ತಾನೆ.

ಯಥಾವದಧ್ಯಾತ್ಮವಿಧಿರೇಷ ವಃ ಕೀರ್ತಿತೋ ಮಯಾ ।
ಜ್ಞಾನಮಸ್ಯ ಹಿ ಧರ್ಮಜ್ಞಾಃ ಪ್ರಾಪ್ತಂ ಜ್ಞಾನವತಾಮಿಹ ॥೪೧॥

ಹೀಗೆ ನಾನು ನಿಮಗೆ ಅಧ್ಯಾತ್ಮವಿಧಿಯನ್ನು ಯಥಾವಿಧಿಯಾಗಿ ಹೇಳಿರುವೆನು. ಧರ್ಮಜ್ಞರೇ! ಜ್ಞಾನಿಗಳಾದವರಿಗೆ ಈ ವಿಷಯದ ಜ್ಞಾನವು ಚೆನ್ನಾಗಿ ಆಗುತ್ತದೆ.

ಇನ್ದ್ರಿಯಾಣೀನ್ದ್ರಿಯಾರ್ಥಾಶ್ಚ ಮಹಾಭೂತಾನಿ ಪಞ್ಚ ಚ।
ಸರ್ವಾಣ್ಯೇತಾನಿ ಸಂಧಾಯ ಮನಸಾ ಸಂಪ್ರಧಾರಯೇತ್ ॥೪೨॥

ಇಂದ್ರಿಯಗಳು, ಇಂದ್ರಿಯಾರ್ಥಗಳು (ವಿಷಯಗಳು), ಪಂಚಮಹಾ ಭೂತಗಳು–ಈ ಎಲ್ಲವನ್ನೂ ಒಟ್ಟಾಗಿ ಸೇರಿಸಿ ಮನಸ್ಸಿನಲ್ಲಿ ಚೆನ್ನಾಗಿ ಧಾರಣೆಮಾಡಿಕೊಳ್ಳಬೇಕು. (ಇಂದ್ರಿಯಗಳಿಗಿಂತ ಬೇರೆಯಾದ ಇಂದ್ರಿಯಾರ್ಥಗಳಿಲ್ಲವೆಂದು ಭಾವಿಸಿ ಇಂದ್ರಿಯಗಳನ್ನು ಮನಸ್ಸಿನಲ್ಲಿ ಸೇರಿಸಿ ಮನಸ್ಸನ್ನು ಆತ್ಮನಲ್ಲಿಡಬೇಕು–ಎಂದು ವ್ಯಾಖ್ಯಾನಕಾರರು ವಿವರಿಸಿದ್ದಾರೆ.)

ಕ್ಷೀಣೇ ಮನಸಿ ಸರ್ವಸ್ಮಿನ್ನ ಜನ್ಮಸುಖಮಿಷ್ಯತೇ ।
ಜ್ಞಾನಸಂಪನ್ನಸತ್ತ್ವಾನಾಂ ತತ್ಸುಖಂ ವಿದುಷಾಂ ಮತಮ್ ॥೪೩॥

ಇಂದ್ರಿಯಸಂಬಂಧವಾದ ಎಲ್ಲ ವಿಷಯಗಳಲ್ಲಿಯೂ ಮನಸ್ಸು ಕ್ಷೀಣಿಸಿಬಿಟ್ಟರೆ (ಮನಸ್ಸು ಇಂದ್ರಿಯವಿಷಯಗಳನ್ನು ಅಪೇಕ್ಷಿಸದಿದ್ದರೆ) ಜನ್ಮಸುಖವು ಉಂಟಾಗುವುದಿಲ್ಲ. (ಲೌಕಿಕವಾದ ಸುಖಭೋಗಾದಿಗಳ ಅನುಭವವಾಗುವುದಿಲ್ಲ.) ಆದರೆ ಯಾರ ಅಂತಃಕರಣವು ಜ್ಞಾನದಿಂದ ಸಂಪನ್ನವಾಗಿರುವುದೋ–ಅಂತಹ ವಿದ್ವಾಂಸರಿಗೆ ಮನಸ್ಸನ್ನು ಇಂದ್ರಿಯ ವಿಷಯಗಳಿಂದ ಹಿಂದಕ್ಕೆ ತೆಗೆದುಕೊಳ್ಳುವುದರಲ್ಲಿಯೇ ಪರಮಸುಖದ ಅನುಭವವಾಗುತ್ತದೆ. ಇದನ್ನೇ ಜ್ಞಾನಿಗಳು ಪರಮಸುಖವೆಂದು ಭಾವಿಸುತ್ತಾರೆ. ಮುನಿಗಳೇ! ಇನ್ನು ಮುಂದೆ ಸಕಲ ಪ್ರಾಣಿಗಳಲ್ಲಿಯೂ ಮೃದುಭಾವದಿಂದಲೂ ಕಠಿನಭಾವದಿಂದಲೂ ಇರುವ, ಮನಸ್ಸಿಗೆ ಸೂಕ್ಷ್ಮಭಾವವನ್ನುಂಟು ಮಾಡುವ ಮಂಗಳಕರವಾದ ನಿವೃತ್ತಿಯ ವಿಷಯವಾಗಿ ಹೇಳುತ್ತೇನೆ.

ಗುಣಾಗುಣಮನಾಸಙ್ಗಮೇಕಚರ್ಯಮನನ್ತರಮ್ ।
ಏತದ್ಬ್ರಹ್ಮಮಯಂ ವೃತ್ತಮಾಹುರೇಕಪದಂ ಸುಖಮ್ ॥೪೪॥

ಶೌರ್ಯ, ಔದಾರ್ಯ, ವಿದ್ವತ್ತುಗಳೇ ಮುಂತಾದ ದರ್ಪಕ್ಕೆ

ಕಾರಣಗಳಾದ ಗುಣಗಳಿದ್ದರೂ ಆ ಯಾವಗುಣಗಳೂ ಇಲ್ಲದವನಂತೆ ಇರುವುದು, ನಿಸ್ಸಂಗನಾಗಿರುವುದು, ಯಾವುದರಲ್ಲಿಯೂ ಭೇದದೃಷ್ಟಿ ಯಿಲ್ಲದೇ ಇರುವುದು-ಇವುಗಳನ್ನು ಬ್ರಹ್ಮಮಯವ್ಯವಹಾರವೆಂದು ಹೇಳುತ್ತಾರೆ. ಈ ಬ್ರಹ್ಮಮಯ ವೃತ್ತವು ಪರಮಸುಖಕ್ಕೆ ಏಕಮಾತ್ರ ಮಾರ್ಗವಾಗಿದೆ.

ವಿದ್ವಾನ್ಕೂರ್ಮ ಇವಾಙ್ಗಾನಿ ಕಾಮಾನ್ಸಂಹೃತ್ಯ ಸರ್ವಶಃ ।
ವಿರಜಾಃ ಸರ್ವತೋ ಮುಕ್ತೋ ಯೋ ನರಃ ಸ ಸುಖೀ ಸದಾ ॥೪೬॥

ಆಮೆಯು ತನ್ನ ಅವಯವಗಳನ್ನು ಬೆನ್ನುಚಿಪ್ಪಿನ ಒಳಕ್ಕೆ ಎಳೆದುಕೊಳ್ಳು ವಂತೆ–ಯಾವ ವಿದ್ವಾಂಸನು ಇಂದ್ರಿಯಕಾಮನೆಗಳೆಲ್ಲವನ್ನೂ ಹಿಂದಕ್ಕೆ ಸೆಳೆದುಕೊಂಡು ಸಂಕೋಚಗೊಳಿಸುವನೋ ಮತ್ತು ರಜೋಗುಣದಿಂದ ರಹಿತನಾಗಿರುವನೋ–ಅವನು ಎಲ್ಲ ಪ್ರಕಾರವಾದ ಬಂಧನಗಳಿಂದಲೂ ಮುಕ್ತನಾಗಿ ಸದಾ ಸುಖಿಯಾಗಿರುತ್ತಾನೆ.

ಕಾಮಾನಾತ್ಮನಿ ಸಂಯಮ್ಯ ಕ್ಷೀಣತೃಷ್ಣಃ ಸಮಾಹಿತಃ ।
ಸರ್ವಭೂತಸುಹೃನ್ಮಿತ್ರೋ ಬ್ರಹ್ಮಭೂಯಾಯ ಕಲ್ಪತೇ ॥೪೭॥

ಯಾವನು ಕಾಮನೆಗಳೆಲ್ಲವನ್ನೂ ಮನಸ್ಸಿನಲ್ಲಿ ಲೀನಗೊಳಿಸಿ, ಆಶಾರಹಿತನಾಗಿ, ಎಲ್ಲ ಪ್ರಾಣಿಗಳಿಗೂ ಸುಹೃದನೂ ಮಿತ್ರನೂ ಆಗಿ, ಏಕಾಗ್ರಚಿತ್ತನಾಗಿ ಸದಾ ಬ್ರಹ್ಮನಿಧಿಧ್ಯಾಸನದಲ್ಲಿಯೇ ಇರುವನೋ–ಅಂತಹ ವನು ಬ್ರಹ್ಮಪ್ರಾಪ್ತಿಗೆ ಯೋಗ್ಯನಾಗುತ್ತಾನೆ.

ಇನ್ದ್ರಿಯಾಣಾಂ ನಿರೋಧೇನ ಸರ್ವೇಷಾಂ ವಿಷಯೈಷಿಣಾಮ್ ।
ಮುನೇರ್ಜನಪದತ್ಯಾಗಾದಧ್ಯಾತ್ಮಾಗ್ನಿಃ ಸಮಿಧ್ಯತೇ ॥೪೮॥

ವಿಷಯಸುಖಗಳನ್ನು ಅಪೇಕ್ಷಿಸುವ ಸಮಸ್ತವಾದ ಇಂದ್ರಿಯಗಳನ್ನೂ ಮನಸ್ಸಿನ ಮೂಲಕವಾಗಿ ನಿರೋಧಿಸಿ, ಜನಸಮುದಾಯವನ್ನು ಬಿಟ್ಟು ಏಕಾಂತದಲ್ಲಿರುವ ಮುನಿಯ ಅಧ್ಯಾತ್ಮರೂಪವಾದ ಅಗ್ನಿಯು ಚೆನ್ನಾಗಿ ಹೊತ್ತಿ ಉರಿಯುತ್ತದೆ. (ಅಂತಹ ಮುನಿಗೆ ಅಧ್ಯಾತ್ಮಜ್ಞಾನವಾಗುತ್ತದೆ.)

ಯಥಾಗ್ನಿರಿನ್ಧನೈರಿದ್ಧೋ ಮಹಾಜ್ಯೋತಿಃ ಪ್ರಕಾಶತೇ ।
ತಥೇನ್ದ್ರಿಯನಿರೋಧೇನ ಮಹಾನಾತ್ಮಾ ಪ್ರಕಾಶತೇ ॥೪೯॥

ಯಾವ ರೀತಿಯಲ್ಲಿ ಕಟ್ಟಿಗೆಗಳಿಂದ ಉರಿಸಲ್ಪಟ್ಟ ಅಗ್ನಿಯು ಮಹಾ ಜ್ಯೋತಿಯಾಗಿ ಪ್ರಾಕಾಶಿಸುವುದೋ–ಹಾಗೆಯೇ ಇಂದ್ರಿಯಗಳನ್ನು ನಿರೋಧಿಸುವುದರಿಂದ ಪರಮಾತ್ಮನು ಹೃದಯಗುಹೆಯಲ್ಲಿ ಪ್ರಕಾಶಿಸುತ್ತಾನೆ.

ಯದಾ ಪಶ್ಯತಿ ಭೂತಾನಿ ಪ್ರಸನ್ನಾತ್ಮಾತ್ಮನೋ ಹೃದಿ ।
ಸ್ವಯಂ ಜ್ಯೋತಿಸ್ತದಾ ಸೂಕ್ಷ್ಮಾತ್ಸೂಕ್ಷ್ಮಂ ಪ್ರಾಪ್ನೋತ್ಯನುತ್ತಮಮ್ ॥೫೦॥

ಯಾವಾಗ ಯೋಗಿಯು ಪ್ರಸನ್ನಚಿತ್ತನಾಗಿ ಸ್ವಯಂಜ್ಯೋತಿಸ್ವರೂಪ ನಾಗಿ ಎಲ್ಲ ಪ್ರಾಣಿಗಳೂ (ಎಲ್ಲ ಪ್ರಾಣಿಗಳ ಆತ್ಮವೂ) ತನ್ನ ಅಂತಃಕರಣ ದಲ್ಲಿಯೇ ಇರುವುದನ್ನು ಕಾಣುವನೋ–ಆ ಸಮಯದಲ್ಲವನು ಸೂಕ್ಷ್ಮಕ್ಕೂ ಸೂಕ್ಷ್ಮನಾದ ಸರ್ವೋತ್ತಮನಾದ ಪರಮಾತ್ಮನನ್ನು ಹೊಂದುತ್ತಾನೆ. (ತನ್ನಲ್ಲಿರುವ ಪರಮಾತ್ಮನೇ ಎಲ್ಲ ಪ್ರಾಣಿಗಳ ಹೃದಯದಲ್ಲಿಯೂ ಇರುವುದನ್ನೂ ಮತ್ತು ಎಲ್ಲ ಪ್ರಾಣಿಗಳ ಹೃದಯಗಳಲ್ಲಿರುವ ಪರಮಾತ್ಮನೇ ತನ್ನ ಹೃದಯದಲ್ಲಿರುವುದನ್ನೂ ಕಾಣುವುದು–ಇದೇ ಪರಮೋಚ್ಚವಾದ ಅಧ್ಯಾತ್ಮವಿದ್ಯೆ. ಇದರ ಸಾಧನೆಯಾಗಬೇಕಾದರೆ ಆತ್ಮಸಾಕ್ಷಾತ್ಕಾರವಾಗಬೇಕು. ಆತ್ಮಸಾಕ್ಷಾತ್ಕಾರವಾದನಂತರ ಎಲ್ಲ ಪ್ರಾಣಿಗಳ ಹೃದಯಗಳಲ್ಲಿಯೂ ತನ್ನಲ್ಲಿರುವ ಆತ್ಮನಂತೆಯೇ ಆತ್ಮನಿರುವನೆಂಬುದನ್ನು ಅಥವಾ ತನ್ನ ಆತ್ಮವೇ ಅಲ್ಲಿಯೂ ಇರುವುದೆಂಬುದನ್ನೂ ಕಂಡುಕೊಳ್ಳಬಹುದು. ಅಂತೆಯೇ ಎಲ್ಲ ಪ್ರಾಣಿಗಳ ಆತ್ಮವೂ ತನ್ನಲ್ಲಿಯೇ ಇರುವುದನ್ನು ಭಾವಿಸಿಕೊಳ್ಳಬಹುದು. ಪ್ರಾಣಿಗಳನ್ನು ಆತ್ಮದಲ್ಲಿ ಕಾಣುವುದೆಂದರೆ ಪ್ರಾಣಿಗಳ ಆತ್ಮವನ್ನು ತನ್ನ ಆತ್ಮನಲ್ಲಿಯೂ ಕಾಣುವುದು ಎಂದರ್ಥ.)

ಅಗ್ನೀ ರೂಪಂ ಪಯಃ ಸ್ರೋತೋ ವಾಯುಃ ಸ್ಪರ್ಶನಮೇವ ಚ ।
ಮಹೀ ಪಙ್ಕಧರಂ ಘೋರಮಾಕಾಶಶ್ರವಣಂ ತಥಾ ॥೫೧॥

ರೋಗಶೋಕಸಮಾವಿಷ್ಟಂ ಪಞ್ಚಸ್ರೋತಃಸಮಾವೃತಮ್ ।
ಪಞ್ಚಭೂತಸಮಾಯುಕ್ತಂ ನವದ್ವಾರಂ ದ್ವಿದೈವತಮ್ ॥೫೨॥

ರಜಸ್ವಲಮಥಾದೃಶ್ಯಂ ತ್ರಿಗುಣಂ ಚ ತ್ರಿಧಾತುಕಮ್ ।
ಸಂಸರ್ಗಾಭಿರತಂ ಮೂಢಂ ಶರೀರಮಿತಿ ಧಾರಣಾ ॥೫೩॥

ಅಗ್ನಿಭೂತವೇ ರೂಪವಾಗಿರುವ ಅಬ್ಭೂತವೇ (ರಕ್ತದ) ಪ್ರವಾಹ ವಾಗಿರುವ, ವಾಯುಭೂತವೇ ಸ್ಪರ್ಶವಾಗಿರುವ, ಪೃಥಿವೀಭೂತವೇ ಘೋರವಾಸನೆಯಿಂದ ಕೂಡಿರುವ ಮಾಂಸಾಸ್ಥಿಗಳ ರೂಪವಾಗಿರುವ, ಆಕಾಶಭೂತವೇ ಶ್ರವಣರೂಪವಾಗಿರುವ, ರೋಗ-ಶೋಕಗಳಿಂದ ಸುತ್ತು ವರಿಯಲ್ಪಟ್ಟಿರುವ, ಪ್ರವಾಹರೂಪವಾದ ಐದು ಇಂದ್ರಿಯಗಳಿಂದ ಸಮಾವೃತವಾಗಿರುವ, ಪಂಚಭೂತಗಳಿಂದ ಕೂಡಿರುವ, ಒಂಬತ್ತು ಬಾಗಿಲು ಗಳುಳ್ಳ, ಜೀವೇಶ್ವರರೆಂಬ ಎರಡು ಅಧಿದೇವತೆಗಳನ್ನು ಹೊಂದಿರುವ, ರಜೋಗುಣಮಯವಾದ, ವಿನಾಶಹೊಂದುವ, ಸುಖ-ದುಃಖ- ಮೋಹ ಗಳೆಂಬ ಮೂರುಗುಣಗಳಿಂದ ಕೂಡಿರುವ, ವಾತ-ಪಿತ್ತ-ಕಫಗಳೆಂಬ ಮೂರು ಧಾತುಗಳಿಂದ ಕೂಡಿರುವ, ಅನ್ನಾದಿಗಳಲ್ಲಿಯೇ ಆಸಕ್ತವಾದ ಜಡವಾದ ವಸ್ತುವನ್ನು ಶರೀರವೆಂದು ಕರೆಯುತ್ತಾರೆ.

ದುಶ್ಚರಂ ಸರ್ವಲೋಕೇಽಸ್ಮಿನ್ಸತ್ತ್ವಂ ಪ್ರತಿ ಸಮಾಶ್ರಿತಮ್।
ಏತದೇವ ಹಿ ಲೋಕೇಽಸ್ಮಿನ್ಕಾಲಚಕ್ರಂ ಪ್ರವರ್ತತೇ ॥೫೪॥

ಈ ಜೀವಲೋಕದಲ್ಲಿ ಬುದ್ಧಿಯನ್ನೇ ಆಶ್ರಯಿಸಿರುವ ಈ ಶರೀರವು (ರೋಗಾದಿಗಳಿಗೆ ತುತ್ತಾಗಿ) ಕಾಲವನ್ನು ಬಹಳ ದುಃಖದಿಂದ ಕಳೆಯುತ್ತದೆ. ಶರೀರದ ವಿಷಯವಿಷ್ಟೇ. ಈ ಲೋಕದಲ್ಲಿ ಕಾಲಚಕ್ರವು ಹೀಗೆ ಉರುಳುತ್ತಿರುತ್ತದೆ.*

ಏತನ್ಮಹಾರ್ಣವಂ ಘೋರಮಗಾಧಂ ಮೋಹಸಂಜ್ಞಿತಮ್।
ವಿಕ್ಷಿಪೇತ್ಸಂಕ್ಷಿಪೇಚ್ಚೈವ ಬೋಧಯೇತ್ಸಾಮರಂ ಜಗತ್ ॥೫೫॥

ಈ ಕಾಲಚಕ್ರವು (ಶರೀರವು) ಘೋರವಾದ ಮತ್ತು ಅಗಾಧವಾದ ಮಹಾಸಮುದ್ರದಂತಿದೆ. ಇದನ್ನು (ಶರೀರವನ್ನು) ವಿಮೋಹವೆಂದೂ ಹೇಳುತ್ತಾರೆ. ಇದು (ಈ ಶರೀರವು) ದೇವತೆಗಳಿಂದ ಸಹಿತವಾದ ಸಮಸ್ತ ಜಗತ್ತನ್ನೂ ಸಂಕ್ಷೇಪಗೊಳಿಸುತ್ತದೆ, ವಿಸ್ತಾರಗೊಳಿಸುತ್ತದೆ ಮತ್ತು ಜಾಗ್ರತಗೊಳಿಸುತ್ತದೆ.

---

*ಕಾಲಚಕ್ರವೆಂದರೆ ಬಾಲ್ಯಯೌವನಾದ್ಯವಸ್ಥೆಗಳುಳ್ಳ ಶರೀರವೆಂದು ವ್ಯಾಖ್ಯಾನ ಕಾರರು ವ್ಯಾಖ್ಯಾನಿಸಿದ್ದಾರೆ. ಏತದೇವ ಬಾಲ್ಯಾದ್ಯವಸ್ಥಾಪನ್ನಂ ಕಾಲಃ ನ ತು ಕಾಲೋ ನಾಮ ಷಷ್ಠಃ ಪದಾರ್ಥಃ ಕಶ್ಚಿದಸ್ತಿ. ಮುಂದಿನ ಶ್ಲೋಕಗಳಿಗೂ ಅವರು ಹೀಗೆಯೇ ಅರ್ಥಮಾಡಿದ್ದಾರೆ.

ಕಾಮಂ ಕ್ರೋಧಂ ಭಯಂ ಲೋಭಮಭಿದ್ರೋಹಮಥಾನೃತಮ್।
ಇನ್ದ್ರಿಯಾಣಾಂ ನಿರೋಧೇನ ಸದಾ ತ್ಯಜತಿ ದುಸ್ತ್ಯಜಾನ್ ॥೫೭॥

ಮನುಷ್ಯನು (ಸಾಧಕನು) ಇಂದ್ರಿಯಗಳನ್ನು ನಿರೋಧಿಸುವುದರಿಂದ ಬಿಡಲು ಅತಿಕಷ್ಟವಾದ ಕಾಮ, ಕ್ರೋಧ, ಭಯ, ಲೋಭ, ದ್ರೋಹ ಮತ್ತು ಅಸತ್ಯ–ಈ ಅವಗುಣಗಳೆಲ್ಲವನ್ನೂ ತ್ಯಜಿಸಲು ಸಮರ್ಥನಾಗುತ್ತಾನೆ.

ಯಸ್ಯೈತೇ ನಿರ್ಜಿತಾ ಲೋಕೇ ತ್ರಿಗುಣಾಃ ಪಞ್ಚಧಾತವಃ।
ವ್ಯೋಮ್ನಿ ತಸ್ಯ ಪರಂ ಸ್ಥಾನಮಾನನ್ತ್ಯಮಥ ಲಭ್ಯತೇ ॥೫೮॥

ಯಾವನು ಈ ಲೋಕದಲ್ಲಿ ಸತ್ತ್ವರಜಸ್ತಮಸ್ಸುಗಳೆಂಬ ಮೂರುಗುಣಗಳಿಂದ ಕೂಡಿರುವ ಪಾಂಚಭೌತಿಕವಾದ ಶರೀರದ ವಿಷಯದಲ್ಲಿ ಅಭಿಮಾನವನ್ನು ತೊರೆಯುವನೋ–ಅವನು ಹೃದಯಾಕಾಶದಲ್ಲಿ ಪರಬ್ರಹ್ಮರೂಪವಾದ ಉತ್ತಮಸ್ಥಾನವನ್ನು ಹೊಂದುತ್ತಾನೆ ಮತ್ತು ಅಂತಿಮವಾದ ಮೋಕ್ಷರೂಪವಾದ ಸುಖವನ್ನೂ ಹೊಂದುತ್ತಾನೆ.

ಪಞ್ಚೇನ್ದ್ರಿಯಮಹಾಕೂಲಾಂ ಮನೋವೇಗಮಹೋದಕಾಮ್।
ನದೀಂ ಮೋಹಹ್ರದಾಂ ತೀರ್ತ್ವಾ ಕಾಮಕ್ರೋಧಾವುಭೌ ಜಯೇತ್।
ಸ ಸರ್ವದೋಷನಿರ್ಮುಕ್ತಸ್ತತಃ ಪಶ್ಯತಿ ತತ್ಪರಮ್ ॥೫೯॥

ಪಂಚೇಂದ್ರಿಯಗಳೆಂಬ ದೊಡ್ಡದಾದ ತೀರಗಳಿಂದ ಕೂಡಿರುವ, ಮನೋವೇಗವೆಂಬ ಮಹಾಪೂರದಿಂದ ಸಮೃದ್ಧವಾಗಿರುವ, ಮೋಹವೆಂಬ ಮಡುವುಗಳಿಂದ ಯುಕ್ತವಾಗಿರುವ ದೇಹರೂಪವಾದ ನದಿಯನ್ನು ದಾಟಿ ಕಾಮ-ಕ್ರೋಧಗಳೆರಡನ್ನೂ ಜಯಿಸಬೇಕು. ಪಂಚೇಂದ್ರಿಯಗಳನ್ನೂ ಮನಸ್ಸನ್ನೂ ಮೋಹವನ್ನೂ ಅತಿಕ್ರಮಿಸಿ ಕಾಮ-ಕ್ರೋಧಗಳನ್ನು ಜಯಿಸಿದವನು ಸಮಸ್ತಪಾಪಗಳಿಂದಲೂ ಮುಕ್ತನಾಗಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಮನೋ ಮನಸಿ ಸಂಧಾಯ ಪಶ್ಯನ್ನಾತ್ಮಾನಮಾತ್ಮನಿ।
ಸರ್ವವಿತ್ಸರ್ವಭೂತೇಷು ವಿನ್ದತ್ಯಾತ್ಮಾನಮಾತ್ಮನಿ ॥೬೦॥

ಯಾವನು ಮನಸ್ಸನ್ನು ಹೃದಯಗುಹೆಯಲ್ಲಿರುವ ಪರಮಾತ್ಮನಲ್ಲಿ

ಸಂಯೋಜಿಸಿ ತನ್ನ ಶರೀರದಲ್ಲಿಯೇ ಜ್ಯೋತಿಃಸ್ವರೂಪನಾದ ಪರಮಾತ್ಮನನ್ನು ಕಂಡುಕೊಳ್ಳಲು ಪ್ರಯತ್ನಿಸುವನೋ–ಅವನೇ ಎಲ್ಲ ಪ್ರಾಣಿಗಳಲ್ಲಿಯೂ ಸರ್ವಜ್ಞನೆನಿಸಿಕೊಳ್ಳುತ್ತಾನೆ. ತನ್ನ ಅಂತಃಕರಣದಲ್ಲಿಯೇ ಪರಮಾತ್ಮಾನುಭವವನ್ನು ಪಡೆದುಕೊಳ್ಳುತ್ತಾನೆ.

ಯಾವ ರೀತಿಯಲ್ಲಿ ಒಂದೇ ದೀಪದಿಂದ ನೂರಾರು ದೀಪಗಳನ್ನು ಹೊತ್ತಿಸಲು ಸಾಧ್ಯವಾಗುವುದೋ–ಅದೇ ರೀತಿಯಲ್ಲಿ ಒಬ್ಬನೇ ಪರಮಾತ್ಮನು ಅನೇಕರೂಪಗಳಿಂದ ಪ್ರಕಟವಾಗುತ್ತಾನೆ–ಎಂದು ನಿಶ್ಚಯಿಸಿ ಸಾಧಕನು ಎಲ್ಲ ರೂಪಗಳೂ ಪರಮಾತ್ಮನೊಬ್ಬನಿಂದಲೇ ಹುಟ್ಟಿರುವುದನ್ನಾಗಿ ಕಂಡುಕೊಳ್ಳುತ್ತಾನೆ.

ಸ ವೈ ವಿಷ್ಣುಶ್ಚ ಮಿತ್ರಶ್ಚ ವರುಣೋಽಗ್ನಿಃ ಪ್ರಜಾಪತಿಃ।
ಸ ಹಿ ಧಾತಾ ವಿಧಾತಾ ಚ ಸ ಪ್ರಭುಃ ಸರ್ವತೋಮುಖಃ।
ಹೃದಯಂ ಸರ್ವಭೂತಾನಾಂ ಮಹಾನಾತ್ಮಾ ಪ್ರಕಾಶತೇ ॥೬೨॥

ವಾಸ್ತವವಾಗಿ ಅವನೇ ವಿಷ್ಣುವೂ, ಮಿತ್ರನೂ, ವರುಣನೂ, ಅಗ್ನಿಯೂ, ಪ್ರಜಾಪತಿಯೂ, ಧಾತೃವೂ, ವಿಧಾತೃವೂ, ಪ್ರಭುವೂ, ಸರ್ವವ್ಯಾಪಿಯೂ ಆಗಿದ್ದು ಎಲ್ಲ ಪ್ರಾಣಿಗಳ ಹೃದಯಗಳಲ್ಲಿಯೂ ಜ್ಯೋತಿರ್ಮಯನಾದ ಪರಮಾತ್ಮರೂಪದಿಂದ ಪ್ರಕಾಶಿಸುತ್ತಾನೆ.

ತಂ ವಿಪ್ರಸಂಘಾಶ್ಚ ಸುರಾಸುರಾಶ್ಚ
ಯಕ್ಷಾಃ ಪಿಶಾಚಾಃ ಪಿತರೋ ವಯಾಂಸಿ।
ರಕ್ಷೋಗಣಾ ಭೂತಗಣಾಶ್ಚ ಸರ್ವೇ
ಮಹರ್ಷಯಶ್ಚೈವ ಸದಾ ಸ್ತುವನ್ತಿ ॥೬೩॥

ಬ್ರಾಹ್ಮಣಸಂಘಗಳು, ದೇವತೆಗಳು, ಅಸುರರು, ಯಕ್ಷರು, ಭೂತಗಣಗಳು, ಎಲ್ಲ ಮಹರ್ಷಿಗಳು–ಇವರೆಲ್ಲರೂ ಪರಮಪುರುಷ ಪರಮಾತ್ಮನನ್ನು ಸದಾ ಸ್ತೋತ್ರಮಾಡುತ್ತಿರುತ್ತಾರೆ.”

ಀ೨ನೆಯ ಅಧ್ಯಾಯವು ಮುಗಿಯಿತು.

ಚರಾಚರಪ್ರಾಣಿಗಳ ಅಧಿಪತಿಗಳು: ಧರ್ಮವೇ ಮೊದಲಾದುವುಗಳ ಲಕ್ಷಣಗಳು: ವಿಷಯಾನುಭೂತಿಯ ಸಾಧನಗಳ ವರ್ಣನೆ: ಕ್ಷೇತ್ರಜ್ಞನ ವಿಲಕ್ಷಣತೆ

ಬ್ರಹ್ಮನು ಹೇಳುತ್ತಾನೆ:

ಮನುಷ್ಯಾಣಾಂ ತು ರಾಜನ್ಯಃ ಕ್ಷತ್ರಿಯೋ ಮಧ್ಯಮೋ ಗುಣಃ ।
ಕುಞ್ಜರೋ ವಾಹನಾನಾಂ ಚ ಸಿಂಹಶ್ಚಾರಣ್ಯವಾಸಿನಾಮ್ ॥೧॥

ಅವಿಃ ಪಶೂನಾಂ ಸರ್ವೇಷಾಮಹಿಸ್ತು ಬಿಲವಾಸಿನಾಮ್ ।
ಗವಾಂ ಗೋವೃಷಭಶ್ಚೈವ ಸ್ತ್ರೀಣಾಂ ಪುರುಷ ಏವ ಚ ॥೨॥

"ಮಹರ್ಷಿಗಳೇ! ಮನುಷ್ಯರಲ್ಲಿ ರಜೋಗುಣಯುಕ್ತನಾದ, ಕ್ಷತ್ರಿಯನಾದ ರಾಜನೇ ಶ್ರೇಷ್ಠನು. ಕುದುರೆ, ಕತ್ತೆ, ಆನೆ, ಹೇಸರಗತ್ತೆ –ಇವೇ ಮುಂತಾದ ವಾಹನಗಳಲ್ಲಿ ಆನೆಯು ಶ್ರೇಷ್ಠವಾದುದು. ಅರಣ್ಯವಾಸಿಗಳಾದ ಪ್ರಾಣಿಗಳಲ್ಲಿ ಸಿಂಹವು ಶ್ರೇಷ್ಠವಾದುದು. ಸಮಸ್ತಪಶುಗಳಲ್ಲಿ ಟಗರೇ ಶ್ರೇಷ್ಠವಾದುದು. ಬಿಲದಲ್ಲಿ ವಾಸಮಾಡುವ ಪ್ರಾಣಿಗಳಲ್ಲಿ ಸರ್ಪವು ಶ್ರೇಷ್ಠವಾದುದು. ಗೋವುಗಳಲ್ಲಿ ಎತ್ತು ಶ್ರೇಷ್ಠವಾದುದು. ಸ್ತ್ರೀಪುರುಷರಲ್ಲಿ ಪುರುಷನು ಶ್ರೇಷ್ಠನು.

ನ್ಯಗ್ರೋಧೋ ಜಮ್ಬುವೃಕ್ಷಶ್ಚ ಪಿಪ್ಪಲಃ ಶಾಲ್ಮಲಿಸ್ತಥಾ ।
ಶಿಂಶಪಾ ಮೇಷಶೃಙ್ಗಶ್ಚ ತಥಾ ಕೀಚಕವೇಣವಃ ।
ಏತೇ ದ್ರುಮಾಣಾಂ ರಾಜಾನೋ ಲೋಕೇಽಸ್ಮಿನ್ನಾತ್ರಸಂಶಯಃ ॥೩॥

ಆಲ, ನೇರಳೆ, ಅರಳಿ, ಬೂರುಗ, ಅಗುರು, ಕುರುಟಿಗ, ಒಳಗೆ ಟೊಳ್ಳಾಗಿರುವ ಬಿದಿರು–ಈ ವೃಕ್ಷಗಳು ಈ ಲೋಕದಲ್ಲಿ ಉಳಿದೆಲ್ಲ ವೃಕ್ಷಗಳಿಗಿಂತಲೂ ಶ್ರೇಷ್ಠವಾದುವುಗಳೆಂಬುದರಲ್ಲಿ ಸಂಶಯವೇ ಇಲ್ಲ.

ಹಿಮವಾನ್ಪಾರಿಯಾತ್ರಶ್ಚ ಸಹ್ಯೋ ವಿನ್ಧ್ಯಸ್ತ್ರಿಕೂಟವಾನ್ ।
ಶ್ವೇತೋ ನೀಲಶ್ಚ ಭಾಸಶ್ಚ ಕೋಷ್ಠವಾಂಶ್ಚೈವ ಪರ್ವತಃ ॥೪॥

ಗುರುಸ್ಕನ್ಧೋ ಮಹೇನ್ದ್ರಶ್ಚ ಮಾಲ್ಯವಾನ್ಪರ್ವತಸ್ತಥಾ ।
ಏತೇ ಪರ್ವತರಾಜಾನೋ ಗಣಾನಾಂ ಮರುತಸ್ತಥಾ ॥೫॥

ಹಿಮವಂತ, ಪಾರಿಯಾತ್ರ, ಸಹ್ಯ, ತ್ರಿಕೂಟ, ವಿಂಧ್ಯ, ಶ್ವೇತ, ನೀಲ, ಭಾಸ, ಕೋಷ್ಠವಂತ, ಗುರುಸ್ಕಂಧ, ಮಹೇಂದ್ರ ಮತ್ತು ಮಾಲ್ಯವಂತ–ಈ ಪರ್ವತಗಳು ಉಳಿದೆಲ್ಲ ಪರ್ವತಗಳಿಗಿಂತಲೂ ಶ್ರೇಷ್ಠವಾದುವುಗಳು. ಗಣಗಳಲ್ಲಿ ಮರುದ್ಗಣಗಳು ಶ್ರೇಷ್ಠವಾದುವುಗಳು.

ಸೂರ್ಯೋ ಗ್ರಹಾಣಾಮಧಿಪೋ ನಕ್ಷತ್ರಾಣಾಂ ಚ ಚನ್ದ್ರಮಾಃ ।
ಯಮಃ ಪಿತೄಣಾಮಧಿಪಃ ಸರಿತಾಮಥ ಸಾಗರಃ ॥೬॥

ಅಮ್ಭಸಾಂ ವರುಣೋ ರಾಜಾ ಮರುತಾಮಿನ್ದ್ರ ಉಚ್ಯತೇ ॥೭॥

ಗ್ರಹಗಳಿಗೆ ಸೂರ್ಯನು ಅಧಿಪತಿಯು. ನಕ್ಷತ್ರಗಳಿಗೆ ಚಂದ್ರನು ಅಧಿಪತಿಯು. ಪಿತೃಗಳಿಗೆ ಯಮನು ಅಧಿಪತಿಯು. ನದಿಗಳಿಗೆ ಸಾಗರನು ಒಡೆಯನು. ಜಲಾಶಯಗಳಿಗೆ ವರುಣನು ರಾಜನು. ಇಂದ್ರನು ಮರುತ್ತುಗಳಿಗೆ ಒಡೆಯನು.

ಅರ್ಕೋಽಧಿಪತಿರುಷ್ಣಾನಾಂ ಜ್ಯೋತಿಷಾಮಿನ್ದುರುಚ್ಯತೇ ।
ಅಗ್ನಿರ್ಭೂತಪತಿರ್ನಿತ್ಯಂ ಬ್ರಾಹ್ಮಣಾನಾಂ ಬೃಹಸ್ಪತಿಃ ॥೮॥

ಉಷ್ಣವಾದ ಪದಾರ್ಥಗಳಿಗೆಲ್ಲಕ್ಕೂ ಸೂರ್ಯನೇ ಅಧಿಪತಿಯು. ಚಂದ್ರನು ಎಲ್ಲ ತಾರೆಗಳಿಗೂ ಸ್ವಾಮಿಯು. ಎಲ್ಲ ಪ್ರಾಣಿಗಳಿಗೂ ಅಗ್ನಿಯೇ ಅಧಿಪತಿಯಾಗಿದ್ದಾನೆ. ಬ್ರಾಹ್ಮಣರಿಗೆ ಬೃಹಸ್ಪತಿಯು ಸ್ವಾಮಿಯು.

ಓಷಧೀನಾಂ ಪತಿಃ ಸೋಮೋ ವಿಷ್ಣುರ್ಬಲವತಾಂ ವರಃ ।
ತ್ವಷ್ಟಾಧಿರಾಜೋ ರೂಪಾಣಾಂ ಪಶೂನಾಮೀಶ್ವರಃ ಶಿವಃ ॥೯॥

ಓಷಧಿಗಳಿಗೆ ಸೋಮನು ಒಡೆಯನು. ಬಲಿಷ್ಠರಿಗೆ ವಿಷ್ಣುವು ಅಧಿಪತಿಯು. ರೂಪಕರ್ಮರಿಗೆ (ಶಿಲ್ಪಿಗಳಿಗೆ) ವಿಶ್ವಕರ್ಮನು ಅಥವಾ ರೂಪಗಳಿಗೆ ಸೂರ್ಯನು ಅಧಿಪತಿಯು. ಪಶುಗಳಿಗೆ ಶಿವನು ಒಡೆಯನು.

ದೀಕ್ಷಿತಾನಾಂ ಯಥಾ ಯಜ್ಞೋ ದೈವಾನಾಂ ಮಘವಾ ತಥಾ ।
ದಿಶಾಮುದೀಚೀ ವಿಪ್ರಾಣಾಂ ಸೋಮೋ ರಾಜಾ ಪ್ರತಾಪವಾನ್॥

ದೀಕ್ಷೆಯನ್ನು ಸ್ವೀಕರಿಸಿರುವವರಿಗೆ ಯಜ್ಞವೇ ಅಧಿಪತಿಯು. ದೇವತೆಗಳಿಗೆ ಇಂದ್ರನು ಅಧಿಪತಿಯು, ದಿಕ್ಕುಗಳಿಗೆ ಉತ್ತರದಿಕ್ಕೇ ಸ್ವಾಮಿಯು. ಬ್ರಾಹ್ಮಣರಿಗೆ ಪ್ರತಾಪವಂತನಾದ ಸೋಮನೇ ರಾಜನು.

ಕುಬೇರಃ ಸರ್ವರತ್ನಾನಾಂ ದೇವತಾನಾಂ ಪುರನ್ದರಃ ।
ಏಷಭೂತಪತಿಃ ಸರ್ಗಃ ಪ್ರಜಾನಾಂ ಚ ಪ್ರಜಾಪತಿಃ ॥೧೧॥

ಸರ್ವರತ್ನಗಳಿಗೂ ಕುಬೇರನೇ ಅಧಿಪತಿಯು. ಇಂದ್ರನು ದೇವತೆಗಳಿಗೆ ಸ್ವಾಮಿಯು. ಪ್ರಜೆಗಳಿಗೆ ಪ್ರಜಾಪತಿಯು ಸ್ವಾಮಿಯು. ಇದು ಪ್ರಾಣಿಗಳ ಅಧಿಪತಿಗಳ ಸರ್ಗವಾಗಿದೆ.

ಸರ್ವೇಷಾಮೇವ ಭೂತಾನಾಮಹಂ ಬ್ರಹ್ಮಮಯೋ ಮಹಾನ್ ।
ಭೂತಂ ಪರತರಂ ಮತ್ತೋ ವಿಷ್ಣೋರ್ವಾಪಿ ನ ವಿದ್ಯತೇ ॥೧೨॥

ನಾನೇ ಎಲ್ಲ ಪ್ರಾಣಿಗಳಿಗೂ ಅಧೀಶ್ವರನೂ ಮತ್ತು ಬ್ರಹ್ಮಮಯನೂ ಆಗಿರುವೆನು. ನನಗಿಂತಲೂ ಅಥವಾ ವಿಷ್ಣುವಿಗಿಂತಲೂ ಶ್ರೇಷ್ಠರಾದವರು ಯಾರೂ ಇರುವುದಿಲ್ಲ.

ರಾಜಾಧಿರಾಜಃ ಸರ್ವೇಷಾಂ ವಿಷ್ಣುರ್ಬ್ರಹ್ಮಮಯೋ ಮಹಾನ್।
ಈಶ್ವರತ್ವಂ ವಿಜಾನೀಧ್ವಂ ಕರ್ತಾರಮಕೃತಂ ಹರಿಮ್ ॥೧೩॥

ಬ್ರಹ್ಮಮಯನಾದ ಮಹಾವಿಷ್ಣುವೇ ಎಲ್ಲರಿಗೂ ರಾಜಾಧಿರಾಜನಾಗಿರುವನು. ಅವನನ್ನೇ ಸರ್ವೇಶ್ವರನೆಂದು ತಿಳಿಯಿರಿ. ಶ್ರೀಹರಿಯೇ ಎಲ್ಲಕ್ಕೂ ಕರ್ತೃವಾಗಿದ್ದಾನೆ. ಆದರೆ ಅವನಿಗೆ ಕರ್ತೃವು ಯಾರೂ ಇಲ್ಲ.

ನರಕಿನ್ನರಯಕ್ಷಾಣಾಂ ಗನ್ಧರ್ವೋರಗರಕ್ಷಸಾಮ್ ।
ದೇವದಾನವನಾಗಾನಾಂ ಸರ್ವೇಷಾಮೀಶ್ವರೋ ಹಿ ಸಃ ॥೧೪॥

ಮನುಷ್ಯರು, ಕಿನ್ನರರು, ಯಕ್ಷರು, ಗಂಧರ್ವರು, ನಾಗರು, ರಾಕ್ಷಸರು, ದೇವತೆಗಳು, ದಾನವರು, ಸರ್ಪಗಳು–ಇವರೆಲ್ಲರಿಗೂ ಮಹಾವಿಷ್ಣುವೇ ಈಶ್ವರನು.

ಭಗದೇವಾನುಯಾತಾನಾಂ ಸರ್ವಾಸಾಂ ವಾಮಲೋಚನಾ ।
ಮಾಹೇಶ್ವರೀ ಮಹಾದೇವೀ ಪ್ರೋಚ್ಯತೇ ಪಾರ್ವತೀ ಹಿ ಸಾ ॥೧೫॥

ಉಮಾಂ ದೇವೀಂ ವಿಜಾನೀಧ್ವಂ ನಾರೀಣಾಮುತ್ತಮಾಂ ಶುಭಾಮ್ ।
ರತೀನಾಂ ವಸುಮತ್ಯಸ್ತು ಸ್ತ್ರೀಣಾಮಪ್ಸರಸಸ್ತಥಾ ॥೧೬॥

ಭಗದೇವನಿಂದ (ಸೂರ್ಯನಿಂದ) ಅನುಸರಿಸಲ್ಪಟ್ಟ ಸರ್ವಸ್ತ್ರೀಯರಲ್ಲಿಯೂ ಸುಂದರವಾದ ಕಣ್ಣುಗಳನ್ನು ಹೊಂದಿರುವ ಮಾಹೇಶ್ವರಿಯೇ ಶ್ರೇಷ್ಠಳಾದವಳು. ಮಹಾದೇವಿಯೆಂದೂ ಕರೆಯಲ್ಪಡುವ ಅವಳೇ ಪಾರ್ವತಿಯೂ ಆಗಿದ್ದಾಳೆ. ಸ್ತ್ರೀಯರಲ್ಲಿ ಉಮಾದೇವಿಯು ಶ್ರೇಷ್ಠಳೆಂದೂ ಮಂಗಳಸ್ವರೂಪಳೆಂದೂ ತಿಳಿಯಿರಿ. ರಮಿಸಲು ಯೋಗ್ಯರಾದ ಸ್ತ್ರೀಯರಲ್ಲಿ ಸರ್ವಾಭರಣಭೂಷಿತೆಯರಾದ ಅಪ್ಸರೆಯರೇ ಶ್ರೇಷ್ಠರು.

ಧರ್ಮಕಾಮಾಶ್ಚ ರಾಜಾನೋ ಬ್ರಾಹ್ಮಣಾ ಧರ್ಮಸೇತವಃ ।
ತಸ್ಮಾದ್ರಾಜಾ ದ್ವಿಜಾತೀನಾಂ ಪ್ರಯತೇತ ಸ್ಮ ರಕ್ಷಣೇ ॥೧೭॥

ರಾಜರು ಧರ್ಮವನ್ನು ಪರಿಪಾಲಿಸಬೇಕೆಂಬ ಇಚ್ಛೆಯುಳ್ಳವರಾಗಿದ್ದಾರೆ. ಬ್ರಾಹ್ಮಣರು ಧರ್ಮಕ್ಕೆ ಸೇತುವೆಗಳಂತಿದ್ದಾರೆ. ಆದುದರಿಂದ ರಾಜನು ಬ್ರಾಹ್ಮಣರನ್ನು ರಕ್ಷಿಸಲು ಸತತವಾಗಿ ಪ್ರಯತ್ನಿಸಬೇಕು.

ರಾಜ್ಞಾಂ ಹಿ ವಿಷಯೇ ಯೇಷಾಮವಸೀದನ್ತಿ ಸಾಧವಃ ।
ಹೀನಾಸ್ತೇ ಸ್ವಗುಣೈಃ ಸರ್ವೈಃ ಪ್ರೇತ್ಯ ಚೋನ್ಮಾರ್ಗಗಾಮಿನಃ ॥೧೮॥

ಯಾವ ರಾಜನ ರಾಜ್ಯದಲ್ಲಿ ಸತ್ಪುರುಷರು ವಿನಾಶಹೊಂದುವರೋ (ಕಷ್ಟಪಡುವರೋ)–ಅಂತಹ ರಾಜರು ರಾಜೋಚಿತವಾದ ಸಮಸ್ತಗುಣಗಳಿಂದಲೂ ಹೀನರಾಗಿ ಅವಸಾನಾನಂತರದಲ್ಲಿ ದುರ್ಗತಿಯನ್ನು ಹೊಂದುತ್ತಾರೆ.

ರಾಜ್ಞಾಂ ಹಿ ವಿಷಯೇ ಯೇಷಾಂ ಸಾಧವಃ ಪರಿರಕ್ಷಿತಾಃ ।
ತೇಽಸ್ಮಿಲ್ಲೋಕೇ ಪ್ರಮೋದನ್ತೇ ಸುಖಂ ಪ್ರೇತ್ಯ ಚ ಭುಞ್ಜತೇ ।
ಪ್ರಾಪ್ನುವನ್ತಿ ಮಹಾತ್ಮಾನ ಇತಿ ವಿತ್ತ ದ್ವಿಜರ್ಷಭಾಃ ॥೧೯॥

ಬ್ರಾಹ್ಮಣಶ್ರೇಷ್ಠರೇ! ಯಾವ ರಾಜನ ರಾಜ್ಯದಲ್ಲಿ ಸತ್ಪುರುಷರು

ರಕ್ಷಿಸಲ್ಪಡುವರೋ–ಅಂತಹ ಮಹಾತ್ಮರಾದ ರಾಜರು ಈ ಲೋಕದಲ್ಲಿಯೂ ಆನಂದವಾಗಿರುತ್ತಾರೆ. ಅವಸಾನಾನಂತರದಲ್ಲಿ ಸದ್ಗತಿಯನ್ನೂ ಹೊಂದುತ್ತಾರೆ–ಎಂದು ತಿಳಿಯಿರಿ.

ಮಹರ್ಷಿಗಳೇ! ಇನ್ನು ಮುಂದೆ ನಾನು ಧರ್ಮದ ಲಕ್ಷಣವನ್ನು ಹೇಳುತ್ತೇನೆ.

ಅಹಿಂಸಾ ಪರಮೋ ಧರ್ಮೋ ಹಿಂಸಾ ಚಾಧರ್ಮಲಕ್ಷಣಾ ।
ಪ್ರಕಾಶಲಕ್ಷಣಾ ದೇವಾ ಮನುಷ್ಯಾ ಕರ್ಮಲಕ್ಷಣಾಃ ॥೨೧॥

ಅಹಿಂಸೆಯೇ ಎಲ್ಲ ಧರ್ಮಗಳಿಗಿಂತಲೂ ಪರಮಶ್ರೇಷ್ಠವಾದ ಧರ್ಮವಾಗಿದೆ. ಹಿಂಸೆಯೇ ಅಧರ್ಮದ ಲಕ್ಷಣವಾಗಿದೆ. ಯಜ್ಞಾದಿ ಕರ್ಮಗಳನ್ನು ಮಾಡುವುದು ಮನುಷ್ಯರ ಲಕ್ಷಣವಾಗಿದೆ.

ಶಬ್ದಲಕ್ಷಣಮಾಕಾಶಂ ವಾಯುಸ್ತು ಸ್ಪರ್ಶಲಕ್ಷಣಃ ।
ಜ್ಯೋತಿಷಾಂ ಲಕ್ಷಣಂ ರೂಪಮಾಪಶ್ಚ ರಸಲಕ್ಷಣಾಃ ॥೨೨॥

ಶಬ್ದವು ಆಕಾಶದ ಲಕ್ಷಣವಾಗಿದೆ. ಸ್ಪರ್ಶವು ವಾಯುವಿನ ಲಕ್ಷಣವಾಗಿದೆ. ರೂಪವು ತೇಜಸ್ಸುಗಳ ಲಕ್ಷಣವಾಗಿದೆ. ರಸವು ನೀರಿನ ಲಕ್ಷಣವಾಗಿದೆ.

ಧಾರಿಣೀ ಸರ್ವಭೂತಾನಾಂ ಪೃಥಿವೀ ಗನ್ಧಲಕ್ಷಣಾ ।
ಸ್ವರವ್ಯಞ್ಜನಸಂಸ್ಕಾರಾ ಭಾರತೀ ಶಬ್ದಲಕ್ಷಣಾ ॥೨೩॥

ಸರ್ವಪ್ರಾಣಿಗಳನ್ನೂ ಧರಿಸಿರುವ ಭೂಮಿಯು ಗಂಧವೇ ಲಕ್ಷಣವಾಗಿ ಉಳ್ಳದ್ದಾಗಿದೆ. ಸ್ವರ-ವ್ಯಂಜನಗಳಿಂದ ಸಂಸ್ಕೃತವಾದ ವಾಕ್ಕು ಶಬ್ದವೇ ಲಕ್ಷಣವಾಗಿ ಉಳ್ಳದ್ದಾಗಿದೆ.

ಮನಸೋ ಲಕ್ಷಣಂ ಚಿನ್ತಾ ಚಿನ್ತೋಕ್ತಾ ಬುದ್ಧಿಲಕ್ಷಣಾ ।
ಮನಸಾ ಚಿನ್ತಿತಾನರ್ಥಾನ್ಬುಧ್ಯಾ ಚೇಹ ವ್ಯವಸ್ಯತಿ ।
ಬುದ್ಧಿರ್ಹಿ ವ್ಯವಸಾಯೇನ ಲಕ್ಷ್ಯತೇ ನಾತ್ರ ಸಂಶಯಃ ॥೨೪॥

ಚಿಂತನೆಯೇ ಮನಸ್ಸಿನ ಲಕ್ಷಣವಾಗಿದೆ. ನಿಶ್ಚಯವೇ ಬುದ್ಧಿಯ ಲಕ್ಷಣವಾಗಿದೆ. ಏಕೆಂದರೆ: ಈ ಪ್ರಪಂಚದಲ್ಲಿ ಮನಸ್ಸಿನಿಂದ ಆಲೋಚಿಸುವ

ವಿಷಯಗಳನ್ನು ಬುದ್ಧಿಯು ಇತ್ಯರ್ಥಗೊಳಿಸುತ್ತದೆ. ಬುದ್ಧಿಯು ಯಾವಾಗಲೂ ನಿಶ್ಚಯಾತ್ಮಕವಾದುದು. ಕಾರ್ಯಶೀಲತೆಯಿಂದ ಬುದ್ಧಿಯು ಲಕ್ಷ್ಯಕ್ಕೆ ಬರುತ್ತದೆ. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ಲಕ್ಷಣಂ ಮನಸೋ ಧ್ಯಾನಮವ್ಯಕ್ತಂ ಸಾಧುಲಕ್ಷಣಮ್ ॥೨೫॥

ಪ್ರವೃತ್ತಿಲಕ್ಷಣೋ ಯೋಗೋ ಜ್ಞಾನಂ ಸಂನ್ಯಾಸಲಕ್ಷಣಮ್ ।
ತಸ್ಮಾಜ್ಜ್ಞಾನಂ ಪುರಸ್ಕೃತ್ಯ ಸಂನ್ಯಸ್ಯೇದಿಹ ಬುದ್ಧಿಮಾನ್ ॥೨೬॥

ಮನಸ್ಸಿನ ಮತ್ತೊಂದು ಲಕ್ಷಣವೇ ಧ್ಯಾನ. ಲೌಕಿಕವಿಷಯಗಳಲ್ಲಿ ಬಹಿಃಪ್ರಪಂಚಕ್ಕೆ ತೋರಿಕೊಳ್ಳದೇ ಇರುವುದು ಸಾಧುಪುರುಷರ ಲಕ್ಷಣವಾಗಿದೆ. ಪ್ರವೃತ್ತಿಯು ಕರ್ಮಯೋಗದ ಲಕ್ಷಣವಾಗಿದೆ. ಜ್ಞಾನವು ಸಂನ್ಯಾಸದ ಲಕ್ಷಣವಾಗಿದೆ. ಆದುದರಿಂದ ಬುದ್ಧಿವಂತನಾದವನು ಜ್ಞಾನವನ್ನೇ ಆಶ್ರಯಿಸಿ ಸಂನ್ಯಾಸವನ್ನು ಗ್ರಹಣಮಾಡಬೇಕು.

ಸಂನ್ಯಾಸೀ ಜ್ಞಾನಸಂಯುಕ್ತಃ ಪ್ರಾಪ್ನೋತಿ ಪರಮಾಂ ಗತಿಮ್ ।
ಅತೀತೋ ದ್ವನ್ದ್ವಮಭ್ಯೇತಿ ತಮೋ ಮೃತ್ಯುಜರಾತಿಗಃ ॥೨೭॥

ಜ್ಞಾನಯುಕ್ತನಾದ ಸಂನ್ಯಾಸಿಯು ಶೀತೋಷ್ಣ-ಸುಖ-ದುಃಖಾದಿಗಳಿಂದ ಅತೀತನಾಗಿ ಅಜ್ಞಾನ-ಮುಪ್ಪು-ಸಾವುಗಳನ್ನು ದಾಟಿ ಪರಮಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತಾನೆ.

ಮಹರ್ಷಿಗಳೇ! ಇದುವರೆಗೆ ನಾನು ನಿಮಗೆ ಲಕ್ಷಣಗಳಿಂದ ಯುಕ್ತವಾದ ಧರ್ಮವನ್ನು ವಿಧಿವತ್ತಾಗಿ ಹೇಳಿದೆನು. ಇನ್ನು ಮುಂದೆ ಯಾವ-ಯಾವ ಗುಣಗಳನ್ನು ಯಾವ-ಯಾವ ಇಂದ್ರಿಯಗಳು ಗ್ರಹಿಸುತ್ತವೆಯೆಂಬುದನ್ನು ಹೇಳುವೆನು.

ಪಾರ್ಥಿವೋ ಯಸ್ತು ಗನ್ಧೋ ವೈ ಘ್ರಾಣೇನ ಹಿ ಸ ಗೃಹ್ಯತೇ ।
ಘ್ರಾಣಸ್ಥಶ್ಚ ತಥಾ ವಾಯುರ್ಗನ್ಧಜ್ಞಾನೇ ವಿಧೀಯತೇ ॥೨೮॥

ಪೃಥಿವಿಗೆ ಗಂಧವೆಂಬ ಯಾವ ಗುಣವಿರುವುದೋ ಅದನ್ನು ಮೂಗು ಗ್ರಹಿಸುತ್ತದೆ. ಮೂಗಿನಲ್ಲಿರುವ ವಾಯುವು ಗಂಧವನ್ನು ಆಘ್ರಾಣಿಸಲು ಅನುವುಮಾಡಿಕೊಡುತ್ತದೆ.

ಅಪಾಂ ಧಾತೂ ರಸೋ ನಿತ್ಯಂ ಜಿಹ್ವಯಾ ಸ ತು ಗೃಹ್ಯತೇ।
ಜಿಹ್ವಾಸ್ಥಶ್ಚ ತಥಾ ಸೋಮೋ ರಸಜ್ಞಾನೇ ವಿಧೀಯತೇ ||೩೦||

ರಸವು ನೀರಿನ ಸ್ವಾಭಾವಿಕವಾದ ಗುಣ. ಅದನ್ನು ನಾಲಿಗೆಯು ಗ್ರಹಿಸುತ್ತದೆ. ನಾಲಿಗೆಯಲ್ಲಿರುವ ಸೋಮನು ರಸಾಸ್ವಾದನೆಗೆ ಅನುವುಮಾಡಿಕೊಡುತ್ತಾನೆ.

ಜ್ಯೋತಿಷಶ್ಚ ಗುಣೋ ರೂಪಂ ಚಕ್ಷುಷಾ ತಚ್ಚ ಗೃಹ್ಯತೇ।
ಚಕ್ಷುಃಸ್ಥಶ್ಚ ಸದಾದಿತ್ಯೋ ರೂಪಜ್ಞಾನೇ ವಿಧೀಯತೇ ||೩೧||

ರೂಪವು ತೇಜಸ್ಸಿನ ಗುಣವಾಗಿದೆ. ಕಣ್ಣು ಅದನ್ನು ಗ್ರಹಿಸುತ್ತದೆ. ಕಣ್ಣಿನಲ್ಲಿರುವ ಸೂರ್ಯನು ರೂಪಜ್ಞಾನದಲ್ಲಿ ಸಹಾಯಕನಾಗುತ್ತಾನೆ.

ವಾಯವ್ಯಸ್ತು ಸದಾ ಸ್ಪರ್ಶಸ್ತ್ವಚಾ ಪ್ರಜ್ಞಾಯತೇ ಚ ಸಃ।
ತ್ವಕ್ಸ್ಥಶ್ಚೈವ ಸದಾ ವಾಯುಃ ಸ್ಪರ್ಶನೇ ಸ ವಿಧೀಯತೇ ||೩೨||

ವಾಯುವಿನ ಸ್ವಾಭಾವಿಕಗುಣವು ಸ್ಪರ್ಶವಾಗಿದೆ. ಚರ್ಮವು ಆ ಗುಣವನ್ನು ಗ್ರಹಿಸುತ್ತದೆ. ಚರ್ಮದಲ್ಲಿರುವ ವಾಯುವು ಸ್ಪರ್ಶಾನುಭವಕ್ಕೆ ಅನುವಾಗುತ್ತಾನೆ.

ಆಕಾಶಸ್ಯ ಗುಣೋ ಘೋಷಃ ಶ್ರೋತ್ರೇಣ ಸ ತು ಗೃಹ್ಯತೇ।
ಶ್ರೋತ್ರಸ್ಥಾಶ್ಚ ದಿಶಃ ಸರ್ವಾಃ ಶಬ್ದಜ್ಞಾನೇ ಪ್ರಕೀರ್ತಿತಾಃ ||೩೩||

ಶಬ್ದವು ಆಕಾಶದ ಸ್ವಾಭಾವಿಕಗುಣವಾಗಿದೆ. ಕಿವಿಯು ಆ ಶಬ್ದವನ್ನು ಗ್ರಹಿಸುತ್ತದೆ. ಕಿವಿಯಲ್ಲಿರುವ ದಿಗ್ದೇವತೆಗಳು ಶಬ್ದಜ್ಞಾನಕ್ಕೆ ಸಹಾಯಕರಾಗುತ್ತಾರೆಂದು ಹೇಳುತ್ತಾರೆ.

ಮನಸಶ್ಚ ಗುಣಶ್ಚಿನ್ತಾ ಪ್ರಜ್ಞಯಾ ಸ ತು ಗೃಹ್ಯತೇ।
ಹೃದಿಸ್ಥಶ್ಚೇತನೋ ಧಾತುರ್ಮನೋಜ್ಞಾನೇ ವಿಧೀಯತೇ ||೩೪||

ಚಿಂತಿಸುವುದು ಮನಸ್ಸಿನ ಗುಣವಾಗಿದೆ. ಬುದ್ಧಿಯು ಅದನ್ನು ಗ್ರಹಿಸುತ್ತದೆ. ಹೃದಯದಲ್ಲಿರುವ ಚೇತನವು (ಆತ್ಮವು) ಚಿಂತನೆಯ ಕಾರ್ಯದಲ್ಲಿ ಸಹಾಯಕವಾಗುತ್ತದೆ.

ಬುದ್ಧಿರಧ್ಯವಸಾಯೇನ ಜ್ಞಾನೇನ ಚ ಮಹಾಂಸ್ತಥಾ ।
ನಿಶ್ಚಿತ್ಯ ಗ್ರಹಣಾದ್ವ್ಯಕ್ತಮವ್ಯಕ್ತಂ ನಾತ್ರ ಸಂಶಯಃ ॥೩೫॥

ನಿರ್ಣಯದ ಮೂಲಕವಾಗಿ ಬುದ್ಧಿಯು ಗ್ರಹಿಸಲ್ಪಡುತ್ತದೆ. (ನಿರ್ಣಯಮಾಡುವುದರಿಂದಲೇ ಬುದ್ಧಿಯ ಅಸ್ತಿತ್ವವು ತಿಳಿದುಬರುತ್ತದೆ.) ಜ್ಞಾನದಿಂದ ಮಹತ್ತತ್ತ್ವವು ಗ್ರಹಿಸಲ್ಪಡುತ್ತದೆ. (ಜ್ಞಾನದಿಂದ ಮಹತ್ತತ್ತ್ವದ ಅಸ್ತಿತ್ವವು ತಿಳಿದುಬರುತ್ತದೆ.) ಬುದ್ಧಿ ಮತ್ತು ಮಹತ್ತತ್ತ್ವಗಳು ಅವುಗಳ ಕಾರ್ಯದಿಂದಲೇ ಇವೆಯೆಂದು ತಿಳಿಯುತ್ತದೆ. ಆದರೆ ವಾಸ್ತವವಾಗಿ ಅವು ಇಂದ್ರಿಯಗಳಿಂದ ಅತೀತವಾಗಿರುವುದರಿಂದ ಯಾವಾಗಲೂ ಅವ್ಯಕ್ತ ವಾಗಿಯೇ ಇರುತ್ತವೆ. ಇದರಲ್ಲಿ ಸಂಶಯವಿಲ್ಲ.

ಅಲಿಙ್ಗಗ್ರಹಣೋನಿತ್ಯಃ ಕ್ಷೇತ್ರಜ್ಞೋ ನಿರ್ಗುಣಾತ್ಮಕಃ ।
ತಸ್ಮಾದಲಿಙ್ಗಃ ಕ್ಷೇತ್ರಜ್ಞಃ ಕೇವಲಂ ಜ್ಞಾನಲಕ್ಷಣಃ ॥೩೬॥

ನಿತ್ಯನಾದ ಕ್ಷೇತ್ರಜ್ಞನಾದ ಆತ್ಮನಿಗೆ ಯಾವುದೇ ರೀತಿಯ ಜ್ಞಾಪಕವಾದ ಚಿಹ್ನೆಯೂ ಇರುವುದಿಲ್ಲ. ಏಕೆಂದರೆ ಅವನು ಸ್ವಯಂಪ್ರಕಾಶನು ಮತ್ತು ನಿರ್ಗುಣನು. ಆದುದರಿಂದ ಕ್ಷೇತ್ರಜ್ಞನು ಯಾವುದೇ ವಿಧವಾದ ಲಕ್ಷಣಗಳಿಂದಲೂ ರಹಿತನಾಗಿದ್ದಾನೆ. ಕೇವಲಜ್ಞಾನವೇ ಅವನ ಲಕ್ಷಣ ಅಥವಾ ಸ್ವರೂಪವಾಗಿದೆ.

ಅವ್ಯಕ್ತಂ ಕ್ಷೇತ್ರಮುದ್ದಿಷ್ಟಂ ಗುಣಾನಾಂ ಪ್ರಭವಾಪ್ಯಯಮ್ ।
ಸದಾ ಪಶ್ಯಾಮ್ಯಹಂ ಲೀನೋ ವಿಜಾನಾಮಿ ಶೃಣೋಮಿ ಚ ॥೩೭॥

ಗುಣಗಳ ಉತ್ಪತ್ತಿ ಮತ್ತು ಲಯಗಳಿಗೆ ಕಾರಣಭೂತವಾದ ಅವ್ಯಕ್ತಪ್ರಕೃತಿಯನ್ನು ಕ್ಷೇತ್ರವೆಂದು ಕರೆಯುತ್ತಾರೆ. ನಾನು ಆ ಅವ್ಯಕ್ತಪ್ರಕೃತಿಯಲ್ಲಿಯೇ ಲೀನನಾಗಿದ್ದುಕೊಂಡು ಅದರ ಸ್ವರೂಪವನ್ನು ತಿಳಿಯುತ್ತೇನೆ ಮತ್ತು ಕೇಳುತ್ತೇನೆ.

ಪುರುಷಸ್ತದ್ವಿಜಾನೀತೇ ತಸ್ಮಾತ್ ಕ್ಷೇತ್ರಜ್ಞ ಉಚ್ಯತೇ ।
ಗುಣವೃತ್ತಂ ತಥಾ ವೃತ್ತಂ ಕ್ಷೇತ್ರಜ್ಞಃ ಪರಿಪಶ್ಯತಿ ॥೩೮॥

ಆದಿಮಧ್ಯಾವಸಾನಾನ್ತಂ ಸೃಜ್ಯಮಾನಮಚೇತಸಮ್ ।
ನ ಗುಣಾ ವಿದುರಾತ್ಮಾನಂ ಸೃಜ್ಯಮಾನಾಃ ಪುನಃ ಪುನಃ ॥೩೯॥

ಅಂತರ್ಯಾಮಿಯಾಗಿರುವ ಪುರುಷನು ಅವ್ಯಕ್ತಪ್ರಕೃತಿಯಾದ ಕ್ಷೇತ್ರವನ್ನು ತಿಳಿದಿರುತ್ತಾನೆ. ಆದುದರಿಂದಲೇ ಅವನನ್ನು ಕ್ಷೇತ್ರಜ್ಞನೆಂದು ಕರೆಯುತ್ತಾರೆ. ಆದಿ, ಮಧ್ಯ ಮತ್ತು ಅಂತಗಳಿಂದ ಕೂಡಿರುವ ತನ್ನಿಂದಲೇ ಸೃಷ್ಟಿಸಲ್ಪಡುವ ಅಚೇತನಗಳಾದ ಗುಣಗಳನ್ನೂ ಮತ್ತು ಅವುಗಳ ಕಾರ್ಯಗಳನ್ನೂ ಕ್ಷೇತ್ರಜ್ಞನು ಚೆನ್ನಾಗಿ ತಿಳಿದಿರುತ್ತಾನೆ. ಆದರೆ ಪುನಃ ಪುನಃ ಸೃಷ್ಟಿಸಲ್ಪಡುವ ಆ ಗುಣಗಳು ಆತ್ಮನನ್ನು ತಿಳಿಯಲಾರವು.

ನ ಸತ್ಯಂ ವಿನ್ದತೇ ಕಶ್ಚಿತ್ಕ್ಷೇತ್ರಜ್ಞಸ್ತ್ವೇವ ವಿನ್ದತಿ ।
ಗುಣಾನಾಂ ಗುಣಭೂತಾನಾಂ ಯತ್ಪರಂ ಪರಮಂ ಮಹತ್ ॥೪೦॥

ಯಾವನು ಅಪ್ರಧಾನವಾದ ಗುಣಗಳಿಗಿಂತಲೂ ಗುಣಗಳ ಕಾರ್ಯಗಳಿಗಿಂತಲೂ ಆಚೆ ಇರುವನೋ–ಅಂತಹ ಸತ್ಯಸ್ವರೂಪನಾದ ಮಹತ್ತಮನಾದ ಕ್ಷೇತ್ರಜ್ಞನನ್ನು ಯಾವನೂ ಹೊಂದಲಾರನು. ಆದರೆ ಅವನು ಎಲ್ಲವನ್ನೂ ಹೊಂದುತ್ತಾನೆ.

ತಸ್ಮಾದ್ಗುಣಾಂಶ್ಚ ಸತ್ತ್ವಂ ಚ ಪರಿತ್ಯಜ್ಯೇಹ ಧರ್ಮವಿತ್ ।
ಕ್ಷೀಣದೋಷೋ ಗುಣಾತೀತಃ ಕ್ಷೇತ್ರಜ್ಞಂ ಪ್ರವಿಶತ್ಯಥ ॥೪೧॥

ಆದುದರಿಂದ ಯಾವನ ಪಾಪಗಳೆಲ್ಲವೂ ಕ್ಷಯಿಸಿವೆಯೋ ಅಂತಹ ಗುಣಾತೀತನಾದ ಧರ್ಮಜ್ಞನಾದ ಪುರುಷನು ಸತ್ತ್ವವನ್ನೂ (ಬುದ್ಧಿಯನ್ನೂ) ಮತ್ತು ಗುಣಗಳನ್ನೂ ಪರಿತ್ಯಾಗಮಾಡಿ ಶುದ್ಧಸ್ವರೂಪನಾದ ಕ್ಷೇತ್ರಜ್ಞನನ್ನು ಪ್ರವೇಶಿಸುತ್ತಾನೆ. (ಆತ್ಮನಲ್ಲಿ ಲೀನನಾಗುತ್ತಾನೆ.)

ನಿರ್ದ್ವನ್ದ್ವೋ ನಿರ್ನಮಸ್ಕಾರೋ ನಿಃಸ್ವಾಹಾಕಾರ ಏವ ಚ ।
ಅಚಲಶ್ಚಾನಿಕೇತಶ್ಚ ಕ್ಷೇತ್ರಜ್ಞಃ ಸ ಪರೋ ವಿಭುಃ ॥೪೨॥

ಕ್ಷೇತ್ರಜ್ಞನು ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾದವನು. ಯಾರಿಗೂ ನಮಸ್ಕರಿಸದೇ ಇರುವವನು. ಸ್ವಾಹಾಕಾರರೂಪವಾದ ಯಜ್ಞಗಳನ್ನು ಮಾಡದೇ ಇರುವವನು. (ಕರ್ಮರಹಿತನು.) ಅಚಲನು ಮತ್ತು ಮನೆಯೇ ಇಲ್ಲದವನು. ಅವನೇ ಶ್ರೇಷ್ಠನಾದ ವಿಭುವೂ (ಸರ್ವವ್ಯಾಪಿಯೂ) ಆಗಿದ್ದಾನೆ.”

ಳ೩ನೆಯ ಅಧ್ಯಾಯವು ಮುಗಿಯಿತು.

ಎಲ್ಲ ವಸ್ತುಗಳೂ ಆದ್ಯಂತಗಳುಳ್ಳವು; ಜ್ಞಾನವು ನಿತ್ಯವಾದುದು-ಎಂಬುದರ ನಿರೂಪಣೆ

ಬ್ರಹ್ಮನು ಹೇಳುತ್ತಾನೆ:

ಯದಾದಿಮಧ್ಯಪರ್ಯನ್ತಂ ಗ್ರಹಣೋಪಾಯಮೇವ ಚ ।
ನಾಮಲಕ್ಷಣಸಂಯುಕ್ತಂ ಸರ್ವಂ ವಕ್ಷ್ಯಾಮಿ ತತ್ತ್ವತಃ ॥೧॥

"ಮಹರ್ಷಿಗಳೇ! ನಾನೀಗ ಎಲ್ಲ ಪದಾರ್ಥಗಳ ನಾಮ-ಲಕ್ಷಣ ಸಹಿತವಾದ ಆದಿ-ಮಧ್ಯ ಮತ್ತು ಅಂತಗಳನ್ನೂ ಹಾಗೆಯೇ ಅವುಗಳನ್ನು ಗ್ರಹಿಸುವ ಉಪಾಯಗಳನ್ನೂ ಯಥಾವತ್ತಾಗಿ ಹೇಳುತ್ತೇನೆ.

ಅಹಃ ಪೂರ್ವಂ ತತೋ ರಾತ್ರಿರ್ಮಾಸಾಃ ಶುಕ್ಲಾದಯಃ ಸ್ಮೃತಾಃ ।
ಶ್ರವಣಾದೀನಿ ಋಕ್ಷಾಣಿ ಋತವಃ ಶಿಶಿರಾದಯಃ ॥೨॥

ಹಗಲು ಮೊದಲು ಹುಟ್ಟಿತು. ಅನಂತರ ರಾತ್ರಿಯು ಹುಟ್ಟಿತು. ಮಾಸಗಳು ಶುಕ್ಲಪಕ್ಷದಿಂದ ಪ್ರಾರಂಭವಾದುವು. ನಕ್ಷತ್ರಗಳು ಶ್ರವಣನಕ್ಷತ್ರ ದಿಂದ ಪ್ರಾರಂಭವಾದುವು. ಋತುಗಳು ಶಿಶಿರರ್ತುವಿನಿಂದ ಪ್ರಾರಂಭ ವಾದುವು.

ಭೂಮಿರಾದಿಸ್ತು ಗನ್ಧಾನಾಂ ರಸಾನಾಮಾಪ ಏವ ಚ ।
ರೂಪಾಣಾಂ ಜ್ಯೋತಿರಾದಿತ್ಯಃ ಸ್ಪರ್ಶಾನಾಂ ವಾಯುರುಚ್ಯತೇ ।
ಶಬ್ದಸ್ಯಾದಿಸ್ತಥಾಕಾಶಮೇಷಭೂತಕೃತೋ ಗುಣಃ ॥೩॥

ಗಂಧಗಳಿಗೆ ಆದಿಕಾರಣವಾದುದು ಭೂಮಿಯು. ರಸಗಳಿಗೆ ಆದಿಕಾರಣವಾದುದು ನೀರು. ರೂಪಗಳಿಗೆ ಆದಿಕಾರಣವಾದುದು ಆದಿತ್ಯಜ್ಯೋತಿ. ಸ್ಪರ್ಶಗಳಿಗೆ ಆದಿಕಾರಣವಾದುದು ವಾಯುವು. ಶಬ್ದಗಳಿಗೆ ಆದಿಯಾದುದು ಆಕಾಶ. ಹೀಗೆ ಗಂಧಾದಿಗಳು ಪಂಚಭೂತಗಳಿಂದ ಹುಟ್ಟಿದ ಗುಣಗಳಾಗಿವೆ.

ಇನ್ನು ಮುಂದೆ ನಾನು ಭೂತಗಳ ಉತ್ತಮವಾದ ಆದಿಯನ್ನು ಹೇಳುತ್ತೇನೆ.

ಆದಿತ್ಯೋ ಜ್ಯೋತಿಷಾಮಾದಿರಗ್ನಿರ್ಭೂತಾದಿರುಚ್ಯತೇ ।
ಸಾವಿತ್ರೀ ಸರ್ವವಿದ್ಯಾನಾಂ ದೇವತಾನಾಂ ಪ್ರಜಾಪತಿಃ ॥೪॥

ಸಮಸ್ತತೇಜಸ್ಸುಗಳಿಗೂ (ಗ್ರಹಗಳಿಗೂ) ಸೂರ್ಯನು ಆದಿಯು. ಸರ್ವಭೂತಗಳಿಗೂ ಜಠರಾಗ್ನಿಯೇ ಆದಿಯು. ಸರ್ವವಿದ್ಯೆಗಳಿಗೂ ಸಾವಿತ್ರಿಯೇ ಆದಿಯು. ಸಕಲದೇವತೆಗಳಿಗೂ ಪ್ರಜಾಪತಿಯೇ (ನಾನೇ) ಆದಿಯು.

ಓಂಕಾರಃ ಸರ್ವವೇದಾನಾಂ ವಚಸಾಂ ಪ್ರಾಣ ಏವ ಚ ।
ಯದಸ್ಮಿನ್ನಿಯತಂ ಲೋಕೇ ಸರ್ವಂ ಸಾವಿತ್ರಿರುಚ್ಯತೇ ॥೬॥

ಓಂಕಾರವು ಸರ್ವವೇದಗಳಿಗೂ ಆದಿಯು. ವಾಕ್ಕುಗಳಿಗೆ ಪ್ರಾಣವು ಆದಿಯು. ಈ ಪ್ರಪಂಚದಲ್ಲಿ ನಿಯತವಾದ ಉಚ್ಚಾರಣೆಯು ಯಾವುದಿರುವುದೋ ಆ ಎಲ್ಲವನ್ನೂ ಸಾವಿತ್ರಿಯೆಂದು ಹೇಳುತ್ತಾರೆ.

ಗಾಯತ್ರೀ ಛನ್ದಸಾಮಾದಿಃ ಪ್ರಜಾನಾಂ ಸರ್ಗ ಉಚ್ಯತೇ ।
ಗಾವಶ್ಚತುಷ್ಪದಾಮಾದಿರ್ಮನುಷ್ಯಾಣಾಂ ದ್ವಿಜಾತಯಃ ॥೭॥

ಛಂದಸ್ಸುಗಳಲ್ಲಿ ಗಾಯತ್ರೀಛಂದಸ್ಸೇ ಮೊದಲನೆಯದು. ಸೃಷ್ಟಿಯೇ ಪ್ರಜೆಗಳ ಆದಿಯು. ಗೋವುಗಳೇ ನಾಲ್ಕು ಪಾದಗಳುಳ್ಳ ಪ್ರಾಣಿಗಳಿಗೆ ಮೊದಲನೆಯವು. ಮನುಷ್ಯರಲ್ಲಿ ಬ್ರಾಹ್ಮಣರೇ ಮೊದಲಿಗರು.

ಶ್ಯೇನಃ ಪತತ್ರಿಣಾಮಾದಿರ್ಯಜ್ಞಾನಾಂ ಹುತಮುತ್ತಮಮ್ ।
ಸರೀಸೃಪಾಣಾಂ ಸರ್ವೇಷಾಂ ಜ್ಯೇಷ್ಠಃ ಸರ್ಪೋ ದ್ವಿಜೋತ್ತಮಾಃ ॥೮॥

ಬ್ರಾಹ್ಮಣಶ್ರೇಷ್ಠರೇ! ಪಕ್ಷಿಗಳಲ್ಲಿ ಗಿಡಗವು ಮೊದಲನೆಯದು. ಯಜ್ಞಗಳಲ್ಲಿ ಆಹುತಿಯು ಮೊದಲನೆಯದು. ಹರಿದಾಡುವ ಪ್ರಾಣಿಗಳಲ್ಲಿ ಸರ್ಪವು ಹಿರಿಯದು.

ಕೃತಮಾದಿರ್ಯುಗಾನಾಂ ಚ ಸರ್ವೇಷಾಂ ನಾತ್ರ ಸಂಶಯಃ ।
ಹಿರಣ್ಯಂ ಸರ್ವರತ್ನಾನಾಮೋಷಧೀನಾಂ ಯವಾಸ್ತಥಾ ॥೯॥

ಯುಗಗಳಲ್ಲಿ ಕೃತಯುಗವೇ ಮೊದಲನೆಯದೆಂಬುದರಲ್ಲಿ ಸಂಶಯವೇ ಇಲ್ಲ. ಸರ್ವರತ್ನಗಳಿಗೂ ಸುವರ್ಣವು ಮೊದಲನೆಯದು. ಓಷಧಿಗಳಲ್ಲಿ ಯವಧಾನ್ಯವೇ (ಗೋಧಿಯೇ) ಮೊದಲನೆಯದು.

ಸರ್ವೇಷಾಂ ಭಕ್ಷ್ಯಭೋಜ್ಯಾನಾಮನ್ನಂ ಪರಮಮುಚ್ಯತೇ ।
ದ್ರವಾಣಾಂ ಚೈವ ಸರ್ವೇಷಾಂ ಪೇಯಾನಾಮಾಪ ಉತ್ತಮಾಃ ॥೧೦॥

ಸಮಸ್ತವಾದ ಭಕ್ಷ್ಯಭೋಜ್ಯಗಳಿಗೂ ಅನ್ನವೇ ಮೊದಲನೆಯದು ಮತ್ತು ಶ್ರೇಷ್ಠವಾದುದು. ಎಲ್ಲ ವಿಧವಾದ ದ್ರವವಸ್ತುಗಳಿಗೂ ಮತ್ತು ಪಾನೀಯಗಳಿಗೂ ನೀರೇ ಮೊದಲನೆಯದು ಮತ್ತು ಶ್ರೇಷ್ಠವಾದುದು.

ಸ್ಥಾವರಾಣಾಂ ತು ಭೂತಾನಾಂ ಸರ್ವೇಷಾಮವಿಶೇಷತಃ।
ಬ್ರಹ್ಮಕ್ಷೇತ್ರಂ ಸದಾ ಪುಣ್ಯಂ ಪ್ಲಕ್ಷಃ ಪ್ರಥಮತಃ ಸ್ಮೃತಃ ॥೧೦॥

ಸಮಸ್ತವಾದ ಸ್ಥಾವರಗಳಲ್ಲಿ ಬ್ರಹ್ಮಕ್ಷೇತ್ರವು (ಪುಷ್ಕರಕ್ಷೇತ್ರವು) ಸದಾಕಾಲದಲ್ಲಿಯೂ ಅತ್ಯಂತ ಪುಣ್ಯಕರವಾದುದು. ಅಲ್ಲಿರುವ ಅಶ್ವತ್ಥವೃಕ್ಷವು ವೃಕ್ಷಗಳಲ್ಲಿ ಮೊದಲನೆಯದೆಂದು ಹೇಳಲ್ಪಟ್ಟಿದೆ.

ಅಹಂ ಪ್ರಜಾಪತೀನಾಂ ಚ ಸರ್ವೇಷಾಂ ನಾತ್ರ ಸಂಶಯಃ।
ಮಮ ವಿಷ್ಣುರಚಿನ್ತ್ಯಾತ್ಮಾ ಸ್ವಯಮ್ಭೂರಿತಿ ಸ ಸ್ಮೃತಃ ॥೧೧॥

ಎಲ್ಲ ಪ್ರಜಾಪತಿಗಳಿಗೂ ನಾನೇ ಮೊದಲಿಗನು. ಇದರಲ್ಲಿ ಸಂಶಯವೇ ಇಲ್ಲ. ನನಗಿಂತಲೂ ಮೊದಲಿಗನು ಅಚಿಂತ್ಯಾತ್ಮನಾದ ವಿಷ್ಣುವೇ ಆಗಿದ್ದಾನೆ. ಅವನನ್ನು ಸ್ವಯಂಭೂ ಎಂದೂ ಕರೆಯುತ್ತಾರೆ.

ಪರ್ವತಾನಾಂ ಮಹಾಮೇರುಃ ಸರ್ವೇಷಾಮಗ್ರಜಃ ಸ್ಮೃತಃ।
ದಿಶಾಂ ಪ್ರದಿಶಾಂ ಚೋರ್ಧ್ವಂ ದಿಕ್ಪೂರ್ವಾ ಪ್ರಥಮಾ ತಥಾ ॥೧೨॥

ಪರ್ವತಗಳಲ್ಲಿ ಮಹಾಮೇರುವು ಮೊದಲನೆಯದು. ಆದುದರಿಂದಲೇ ಅದನ್ನು ಪರ್ವತಗಳ ಅಗ್ರಜನೆಂದು ಹೇಳುತ್ತಾರೆ. ದಿಕ್ಕುಗಳಿಗೂ ಉಪದಿಕ್ಕುಗಳಿಗೂ ಪೂರ್ವದಿಕ್ಕು ಮೊದಲನೆಯದು ಮತ್ತು ಶ್ರೇಷ್ಠವಾದುದು.

ತಥಾ ತ್ರಿಪಥಗಾ ಗಙ್ಗಾ ನದೀನಾಮಗ್ರಜಾ ಸ್ಮೃತಾ।
ತಥಾ ಸರೋದಪಾನಾನಾಂ ಸರ್ವೇಷಾಂ ಸಾಗರೋಗ್ರಜಃ ॥೧೩॥

ಹಾಗೆಯೇ ಎಲ್ಲ ನದಿಗಳಿಗೂ ಮೂರು ಪ್ರವಾಹಗಳುಳ್ಳ ಗಂಗಾನದಿಯು ಮೊದಲು ಹುಟ್ಟಿದುದೆಂದು ಹೇಳುತ್ತಾರೆ. ಎಲ್ಲ ಸರೋವರಗಳಿಗೂ ಮತ್ತು ಜಲಾಶಯಗಳಿಗೂ ಮೊದಲು ಸಾಗರವು ಹುಟ್ಟಿತು.

ದೇವದಾನವಭೂತಾನಾಂ ಪಿಶಾಚೋರಗರಕ್ಷಸಾಮ್ ।
ನರಕಿನ್ನರಯಕ್ಷಾಣಾಂ ಸರ್ವೇಷಾಮೀಶ್ವರಃ ಪ್ರಭುಃ ॥೧೪॥

ದೇವ, ದಾನವ, ಭೂತ, ಪಿಶಾಚ, ಉರಗ, ರಾಕ್ಷಸ, ಮನುಷ್ಯ, ಕಿನ್ನರ ಮತ್ತು ಯಕ್ಷ-ಇವರೆಲ್ಲರಿಗೂ ಭಗವಾನ್ ಶಂಕರನೇ ಸ್ವಾಮಿಯು.

ಆದಿರ್ವಿಶ್ವಸ್ಯ ಜಗತೋ ವಿಷ್ಣುರ್ಬ್ರಹ್ಮಮಯೋ ಮಹಾನ್ ।
ಭೂತಂ ಪರತರಂ ಯಸ್ಮಾತ್ತ್ರೈಲೋಕ್ಯೇ ನೇಹ ವಿದ್ಯತೇ ॥೧೬॥

ಬ್ರಹ್ಮಸ್ವರೂಪನಾದ ಮಹಾವಿಷ್ಣುವು ಸಕಲಜಗತ್ತಿಗೂ ಆದಿಕಾರಣನಾಗಿರುವನು. ಮೂರು ಲೋಕಗಳಲ್ಲಿ ಮಹಾವಿಷ್ಣುವಿಗಿಂತಲೂ ಅಧಿಕರಾದವರು ಬೇರೆ ಯಾರೂ ಇಲ್ಲ.

ಆಶ್ರಮಾಣಾಂ ಚ ಸರ್ವೇಷಾಂ ಗಾರ್ಹಸ್ಥ್ಯಂ ನಾತ್ರ ಸಂಶಯಃ ।
ಲೋಕಾನಾಮಾದಿರವ್ಯಕ್ತಂ ಸರ್ವಸ್ಯಾನ್ತಸ್ತದೇವ ಚ ॥೧೭॥

ಎಲ್ಲ ಆಶ್ರಮಗಳಿಗೂ ಮೊದಲನೆಯದು ಮತ್ತು ಶ್ರೇಷ್ಠವಾದುದು ಗೃಹಸ್ಥಾಶ್ರಮವೇ ಆಗಿದೆ. ಇದರಲ್ಲಿ ಸಂಶಯವೇ ಇಲ್ಲ. ಸಮಸ್ತಜಗತ್ತುಗಳಿಗೂ ಆದಿ ಮತ್ತು ಅಂತ್ಯವು ಅವ್ಯಕ್ತಪ್ರಕೃತಿಯೇ ಆಗಿದೆ.

ಅಹಾನ್ಯಸ್ತಮಯಾನ್ತಾನಿ ಉದಯಾನ್ತಾ ಚ ಶರ್ವರೀ ।
ಸುಖಸ್ಯಾನ್ತಂ ಸದಾ ದುಃಖಂ ದುಃಖಸ್ಯಾನ್ತಂ ಸದಾ ಸುಖಮ್ ॥೧೮॥

ಹಗಲಿಗೆ ಸೂರ್ಯಾಸ್ತವೇ ಕೊನೆ. ರಾತ್ರಿಗೆ ಸೂರ್ಯೋದಯವೇ ಕೊನೆ. ಸುಖದ ಅಂತವೇ ಸದಾ ದುಃಖವು. ದುಃಖದ ಅಂತವೇ ಸದಾ ಸುಖವು.

ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾಶ್ಚ ವಿಯೋಗಾನ್ತಾ ಮರಣಾನ್ತಂ ಚ ಜೀವಿತಮ್ ॥೧೯॥

ಸಮಸ್ತವಾದ ಸಂಗ್ರಹಕ್ಕೂ ಕೊನೆಯು ವಿನಾಶವೇ ಆಗಿದೆ. ಉಚ್ಛ್ರಾಯ ಸ್ಥಿತಿಗೆ ಅಧಃಪತನವೇ ಅಂತಿಮವಾಗಿದೆ. ಸೇರುವಿಕೆಗೆ ವಿಯೋಗವೇ ಅಂತಿಮವಾಗಿದೆ. ಜೀವನಕ್ಕೆ ಮರಣವೇ ಅಂತಿಮದೆಶೆಯಾಗಿದೆ.

ಸರ್ವಂ ಕೃತಂ ವಿನಾಶಾನ್ತಂ ಜಾತಸ್ಯ ಮರಣಂ ಧ್ರುವಮ್।
ಅಶಾಶ್ವತಂ ಹಿ ಲೋಕೇಽಸ್ಮಿನ್ಸದಾ ಸ್ಥಾವರಜಙ್ಗಮಮ್ ॥೨೦॥

ಯಾವ ಯಾವ ವಸ್ತುಗಳು ನಿರ್ಮಾಣವಾಗಿರುವುವೋ ಅವೆಲ್ಲವೂ ವಿನಾಶದಲ್ಲಿಯೇ ಕೊನೆಗೊಳ್ಳುತ್ತವೆ. ಹುಟ್ಟಿದವನಿಗೆ ಮರಣವೆಂಬುದು ನಿಶ್ಚಿತವಾದುದು. ಈ ಜಗತ್ತಿನಲ್ಲಿ ಸ್ಥಾವರವೇ ಆಗಲೀ ಜಂಗಮವೇ ಆಗಲೀ ಶಾಶ್ವತವಾಗಿ ಇರತಕ್ಕುವುಗಳಲ್ಲ.

ಇಷ್ಟಂ ದತ್ತಂ ತಪೋಧೀತಂ ವ್ರತಾನಿ ನಿಯಮಾಶ್ಚ ಯೇ ।
ಸರ್ವಮೇತದ್ವಿನಾಶಾನ್ತಂ ಜ್ಞಾನಸ್ಯಾನ್ತೋ ನ ವಿದ್ಯತೇ ॥೨೧॥

ಯಾವುದೇ ಯಜ್ಞವಾಗಲೀ, ದಾನವಾಗಲೀ, ಅಧ್ಯಯನವಾಗಲೀ, ವ್ರತವಾಗಲೀ, ನಿಯಮಗಳಾಗಲೀ–ಇವೆಲ್ಲವೂ (ಇವುಗಳ ಫಲಗಳೆಲ್ಲವೂ) ಕಡೆಯಲ್ಲಿ ವಿನಾಶವಾಗತಕ್ಕುವುಗಳೇ ಆಗಿವೆ. ಆದರೆ ಜ್ಞಾನಕ್ಕೆ ಕೊನೆಯಂಬುದಿಲ್ಲ.

ತಸ್ಮಾಜ್ಜ್ಞಾನೇನ ಶುದ್ಧೇನ ಪ್ರಶಾನ್ತಾತ್ಮಾ ಜಿತೇನ್ದ್ರಿಯಃ ।
ನಿರ್ಮಮೋ ನಿರಹಂಕಾರೋ ಮುಚ್ಯತೇ ಸರ್ವಪಾಪ್ಮಭಿಃ ॥೨೨॥

ಆದುದರಿಂದ ಯಾವನು ಪ್ರಶಾಂತವಾದ ಮನಸ್ಸುಳ್ಳವನಾಗಿರುವನೋ, ಜಿತೇಂದ್ರಿಯನೋ, ಅಹಂಕಾರರಹಿತನೋ–ಅವನು ವಿಶುದ್ಧವಾದ ಜ್ಞಾನದ ಮೂಲಕವಾಗಿ ಸಮಸ್ತವಾದ ಪಾಪಗಳಿಂದಲೂ ಬಿಡುಗಡೆಹೊಂದುತ್ತಾನೆ.”

ಳಳನೆಯ ಅಧ್ಯಾಯವು ಮುಗಿಯಿತು.

ಳಚನೆಯ ಅಧ್ಯಾಯ. ಅನುಗೀತಾಪರ್ವ (ಮುಂದುವರಿದಿದೆ.)

ದೇವರೂಪಿಯಾದ ಕಾಲಚಕ್ರ, ಗೃಹಸ್ಥ ಮತ್ತು ಬ್ರಾಹ್ಮಣ ಇವರ ಧರ್ಮಗಳು

ಬ್ರಹ್ಮನು ಹೇಳುತ್ತಾನೆ:

ಬುದ್ಧಿಸಾರಂ ಮನಸ್ತಮ್ಭಮಿನ್ದ್ರಿಯಗ್ರಾಮಬನ್ಧನಮ್ ।
ಮಹಾಭೂತಪರಿಸ್ಕನ್ಧಂ ನಿವೇಶಪರಿವೇಶನಮ್ ॥೧॥

ಜರಾಶೋಕಸಮಾವಿಷ್ಟಂ ವ್ಯಾಧಿವ್ಯಸನಸಮ್ಭವಮ್ ।
ದೇಶಕಾಲವಿಚಾರೀದಂ ಶ್ರಮವ್ಯಾಯಾಮನಿಸ್ವನಮ್ ॥೨॥

ಅಹೋರಾತ್ರಪರೀಕ್ಷೇಪಂ ಶೀತೋಷ್ಣಪರಿಮಣ್ಡಲಮ್ ।
ಸುಖದುಃಖಾನ್ತಸಂಕ್ಲೇಶಂ ಕ್ಷುತ್ಪಿಪಾಸಾವಕೀಲಕಮ್ ॥೩॥

ಛಾಯಾತಪವಿಲೇಖಂ ಚ ನಿಮೇಷೋನ್ಮೇಷವಿಹ್ವಲಮ್ ।
ಘೋರಮೋಹಜಲಾಕೀರ್ಣಂ ವರ್ತಮಾನಮಚೇತನಮ್ ॥೪॥

ಮಾಸಾರ್ಧಮಾಸಗಣಿತಂ ವಿಷಮಂ ಲೋಕಸಂಚರಮ್ ।
ತಮೋನಿಚಯಪಙ್ಕಂ ಚ ರಜೋವೇಗಪ್ರವರ್ತಕಮ್ ॥೫॥

ಮಹಾಹಙ್ಕಾರದೀಪ್ತಂ ಚ ಗುಣಸಂಜಾತವರ್ತನಮ್ ।
ಅರತಿಗ್ರಹಣಾನೀಕಂ ಶೋಕಸಂಹಾರವರ್ತನಮ್ ॥೬॥

ಕ್ರಿಯಾಕರಣಸಂಯುಕ್ತಂ ರಾಗವಿಸ್ತಾರಮಾಯತಮ್ ।
ಲೋಭೇಪ್ಸಾಪರಿವಿಕ್ಷೋಭಂ ವಿಚಿತ್ರಾಜ್ಞಾನಸಂಭವಮ್ ॥೭॥

ಭಯಮೋಹಪರೀವಾರಂ ಭೂತಸಮ್ಮೋಹಕಾರಕಮ್ ।
ಆನನ್ದಪ್ರೀತಿಚಾರಂ ಚ ಕಾಮಕ್ರೋಧಪರಿಗ್ರಹಮ್ ॥೮॥

ಮಹದಾದಿವಿಶೇಷಾನ್ತಮಸಕ್ತಂ ಪ್ರಭವಾಪ್ಯಯಮ್ ।
ಮನೋಜವಂ ಮನಃಕಾನ್ತಂ ಕಾಲಚಕ್ರಂ ಪ್ರವರ್ತತೇ ॥೯॥

"ಮಹರ್ಷಿಗಳೇ! ಮನೋವೇಗಕ್ಕೆ ಸಮಾನವಾದ ವೇಗವುಳ್ಳ ದೇಹರೂಪಿಯಾದ ಕಾಲಚಕ್ರವು ನಿರಂತರವಾಗಿ ತಿರುಗುತ್ತಲೇ ಇರುತ್ತದೆ. ಈ ಕಾಲಚಕ್ರವು ಮಹತ್ತತ್ತ್ವದಿಂದ ಹಿಡಿದು ಸ್ಥೂಲಪಂಚಭೂತಗಳವರೆಗಿನ ಇಪ್ಪತ್ತು ನಾಲ್ಕು ತತ್ತ್ವಗಳಿಂದ ಮಾಡಲ್ಪಟ್ಟಿದೆ. ಇದರ ಗತಿಗೆ ಯಾವ ತಡೆಯೂ ಇಲ್ಲ. ಇದು ಸಂಸಾರಬಂಧನಕ್ಕೆ ಅನಿವಾರ್ಯವಾದ ಕಾರಣ ವಾಗಿದೆ. ಮುಪ್ಪಿನಿಂದಲೂ ಶೋಕದಿಂದಲೂ ಆವರಿಸಲ್ಪಟ್ಟಿದೆ. ರೋಗ ಗಳಿಗೂ ವ್ಯಸನಕ್ಕೂ ಉತ್ಪತ್ತಿಸ್ಥಾನವಾಗಿದೆ. ದೇಶ ಮತ್ತು ಕಾಲಗಳಿಗೆ ಅನುಸಾರವಾಗಿ ಸಂಚರಿಸುತ್ತಿರುತ್ತದೆ. ಬುದ್ಧಿಯೇ ಕಾಲಚಕ್ರರೂಪಿ ಯಾದ ಈ ದೇಹದ ಸಾರವಾಗಿದೆ. ಮನಸ್ಸೇ ಇದರ ಸ್ತಂಭವಾಗಿದೆ.

ಇಂದ್ರಿಯಸಮುದಾಯಗಳೇ ಇದರ ಬಂಧನಗಳಾಗಿವೆ. ಪಂಚಮಹಾಭೂತಗಳೇ ಇದರ ಕಾಂಡಗಳಾಗಿವೆ. ಅಜ್ಞಾನವೇ ಇದರ ಆವರಣವಾಗಿದೆ. ಶ್ರಮ ಮತ್ತು ವ್ಯಾಯಾಮಗಳೇ ಇದರ ಮಹಾಶಬ್ದವಾಗಿದೆ. ರಾತ್ರಿ ಮತ್ತು ಹಗಲುಗಳು ಈ ಕಾಲಚಕ್ರವನ್ನು ಸಂಚಾಲನಗೊಳಿಸುತ್ತವೆ. ಶೀತೋಷ್ಣಗಳು ಇದನ್ನು ಆವರಿಸಿಕೊಂಡಿವೆ. ಸುಖ-ದುಃಖಗಳೇ ಶರೀರವೆಂಬ ಕಾಲಚಕ್ರದ ಸಂಧಿಗಳಾಗಿವೆ. ಹಸಿವು-ಬಾಯಾರಿಕೆಗಳು ಇದರ ಕೀಲಕಗಳಾಗಿವೆ. ಛಾಯೆ ಮತ್ತು ಆತಪಗಳು ಇದರ ರೇಖೆಗಳಾಗಿವೆ. ಕಣ್ಣುಗಳ ಮುಚ್ಚುವಿಕೆ ಮತ್ತು ತೆರೆಯುವಿಕೆಗಳು ಇದರ ವ್ಯಾಕುಲರೂಪದಲ್ಲಿವೆ. ಘೋರಮೋಹರೂಪವಾದ ಜಲದಿಂದ (ಶೋಕಾಶ್ರುವಿನಿಂದ) ಇದು ವ್ಯಾಪ್ತವಾಗಿದೆ. ಇದು ಸದಾ ಗತಿಶೀಲವಾಗಿಯೂ ಮತ್ತು ಅಚೇತನವಾಗಿಯೂ ಇರುತ್ತದೆ. ಪಕ್ಷ ಮತ್ತು ಮಾಸಗಳ ಮೂಲಕ ಇದರ ಆಯುಷ್ಯದ ಗಣನೆಯಾಗುತ್ತಿರುತ್ತದೆ. ಇದು ಯಾವಾಗಲೂ ಒಂದೇ ಅವಸ್ಥೆಯಲ್ಲಿರುವುದಿಲ್ಲ. ಮೇಲಿನ, ಮಧ್ಯದ ಮತ್ತು ಕೆಳಗಿನ ಲೋಕಗಳಲ್ಲಿ ಇದು ಯಾವಾಗಲೂ ಮರುಹುಟ್ಟುಗಳ ಮೂಲಕವಾಗಿ ತಿರುಗುತ್ತಲೇ ಇರುತ್ತದೆ. ತಮೋಗುಣದ ವಶವಾಗಿ ಇದು ಒಮ್ಮೆ ಪಾಪದ ಕೆಸರಿನಲ್ಲಿ ಮುಳುಗಿರುತ್ತದೆ. ರಜೋಗುಣದ ವೇಗವು ಶರೀರರೂಪಿಯಾದ ಈ ಕಾಲಚಕ್ರವನ್ನು ಬಗೆ-ಬಗೆಯ ಕರ್ಮಗಳಲ್ಲಿ ತೊಡಗಿಸುತ್ತದೆ. ರಜೋಗುಣವೇ ಇದರಲ್ಲಿ ಮಹಾಹಂಕಾರವನ್ನು ಉದ್ದೀಪನಗೊಳಿಸುತ್ತದೆ. ಮೂರು ಗುಣಗಳಿಗೆ ಅನುಸಾರವಾಗಿ ಇದರ ಪ್ರವೃತ್ತಿಯಿರುತ್ತದೆ. ಇಷ್ಟವಾದ ವಸ್ತುವು ಲಭಿಸದೇ ಇರುವುದರಿಂದ ಉಂಟಾಗುವ ಮಾನಸಿಕಚಿಂತೆಯೇ ಕಾಲಚಕ್ರದ ಬಂಧನಪಟ್ಟಿಯಾಗಿದೆ. ಇದು ಯಾವಾಗಲೂ ಶೋಕಕ್ಕೂ ಮೃತ್ಯುವಿಗೂ ಅಧೀನವಾಗಿರುತ್ತದೆ. ದೀರ್ಘವೂ ಮತ್ತು ವಿಸ್ತಾರವೂ ಆಗಿರುವ ಅನುರಾಗವನ್ನು (ವಿಷಯಗಳ ಮೇಲಿನ ಆಸಕ್ತಿಯನ್ನು) ಇದು ಹೊಂದಿದೆ. ಲೋಭ ಮತ್ತು ತೃಷ್ಣೆಗಳೇ ಈ ಚಕ್ರವು ಮೇಲಿನಿಂದ ಕೆಳಕ್ಕೂ ಕೆಳಗಿನಿಂದ ಮೇಲಕ್ಕೂ ಹೋಗಲು ಕಾರಣವಾಗಿದೆ. ಭಯ ಮತ್ತು ಮೋಹಗಳು ಇದನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದಿವೆ. ಇದು ಪ್ರಾಣಿಗಳನ್ನು ವಿಮೋಹಗೊಳಿಸುತ್ತದೆ. ಆನಂದ ಮತ್ತು ಪ್ರೀತಿಯ ವಿಷಯವಾಗಿ ಇದು ಯಾವಾಗಲೂ ವಿಚಾರಮಾಡುತ್ತಲೇ ಇರುತ್ತದೆ.

ಕಾಮ-ಕ್ರೋಧಗಳನ್ನು ಈ ಕಾಲಚಕ್ರವು ಸದಾ ಸಂಗ್ರಹಿಸುತ್ತಲೇ ಇರುತ್ತದೆ. ಇಂತಹ ದೇಹರೂಪಿಯಾದ ಕಾಲಚಕ್ರವು ಸದಾ ಸುತ್ತುತ್ತಲೇ ಇರುತ್ತದೆ.

ಏತದ್ದ್ವನ್ದ್ವಸಮಾಯುಕ್ತಂ ಕಾಲಚಕ್ರಮಚೇತನಮ್ ।
ವಿಸೃಜೇತ್ಸಂಕ್ಷಿಪೇಚ್ಚಾಪಿ ಬೋಧಯೇತ್ಸಾಮರಂ ಜಗತ್ ॥೧೧॥

ರಾಗ-ದ್ವೇಷಾದಿ ದ್ವಂದ್ವಗಳಿಂದ ಯುಕ್ತವಾದ ಜಡದೇಹರೂಪಿಯಾದ ಕಾಲಚಕ್ರವು ದೇವತೆಗಳೇ ಆದಿಯಾಗಿ ಸಮಸ್ತರಿಂದ ಕೂಡಿದ ಜಗತ್ತನ್ನೂ ಸೃಷ್ಟಿಸುತ್ತದೆ ಮತ್ತು ವಿನಾಶಗೊಳಿಸುತ್ತದೆ. ತತ್ತ್ವಜ್ಞಾನದ ಪ್ರಾಪ್ತಿಗೂ ಇದು ಸಾಧನವಾಗಿದೆ.

ಕಾಲಚಕ್ರಪ್ರವೃತ್ತಿಂ ಚ ನಿವೃತ್ತಿಂ ಚೈವ ತತ್ತ್ವತಃ ।
ಯಸ್ತು ವೇದ ನರೋ ನಿತ್ಯಂ ನ ಸ ಭೂತೇಷು ಮುಹ್ಯತಿ ॥೧೧॥

ಯಾವ ಮನುಷ್ಯನು ದೇಹಮಯವಾದ ಕಾಲಚಕ್ರದ ಪ್ರವೃತ್ತಿಯನ್ನೂ ಮತ್ತು ನಿವೃತ್ತಿಯನ್ನೂ ಯಾವಾಗಲೂ ತಾತ್ತ್ವಿಕವಾಗಿ ಮನನಮಾಡುವನೋ ಅವನು ಎಂದಿಗೂ ಮೋಹಗೊಳ್ಳುವುದಿಲ್ಲ.

ವಿಮುಕ್ತಃ ಸರ್ವಸಂಸ್ಕಾರೈಃ ಸರ್ವದ್ವನ್ದ್ವವಿವರ್ಜಿತಃ ।
ವಿಮುಕ್ತಃ ಸರ್ವಪಾಪೇಭ್ಯಃ ಪ್ರಾಪ್ನೋತಿ ಪರಮಾಂ ಗತಿಮ್ ॥೧೨॥

ಕಾಲಚಕ್ರದ ಪ್ರವೃತ್ತಿಯನ್ನೂ ಮತ್ತು ನಿವೃತ್ತಿಯನ್ನೂ ಚೆನ್ನಾಗಿ ತಿಳಿದವನು ಸಂಪೂರ್ಣವಾದ ವಾಸನೆಗಳಿಂದಲೂ, ಸಮಸ್ತದ್ವಂದ್ವಗಳಿಂದಲೂ, ಸಮಸ್ತ ಪಾಪಗಳಿಂದಲೂ ಬಿಡುಗಡೆ ಹೊಂದಿ ಪರಮಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ಗೃಹಸ್ಥೋ ಬ್ರಹ್ಮಚಾರೀ ಚ ವಾನಪ್ರಸ್ಥೋಽಥಭಿಕ್ಷುಕಃ।
ಚತ್ವಾರ ಆಶ್ರಮಾಃ ಪ್ರೋಕ್ತಾಃ ಸರ್ವೇ ಗಾರ್ಹಸ್ಥ್ಯಮೂಲಕಾಃ ॥೧೩॥

ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸಗಳೆಂಬ ನಾಲ್ಕು ಆಶ್ರಮಧರ್ಮಗಳು ಶಾಸ್ತ್ರದಲ್ಲಿ ಹೇಳಲ್ಪಟ್ಟಿವೆ. ಈ ನಾಲ್ಕು ಆಶ್ರಮಗಳಿಗೂ ಗೃಹಸ್ಥಾಶ್ರಮವೇ ಮೂಲವಾದುದು.

ಯಃ ಕಶ್ಚಿದಿಹ ಲೋಕೇಽಸ್ಮಿನ್ನಾಗಮಃ ಪರಿಕೀರ್ತಿತಃ ।
ತಸ್ಯಾನ್ತಗಮನಂ ಶ್ರೇಯಃ ಕೀರ್ತಿರೇಷಾ ಸನಾತನೀ ॥೧೪॥

ಈ ಪ್ರಪಂಚದಲ್ಲಿ ಯಾವ-ಯಾವ ಆಗಮಗಳುಂಟೋ (ವಿದ್ಯೆ

ಗಳುಂಟೋ) ಅವೆಲ್ಲದರ ಸಿದ್ಧಾಂತವನ್ನೂ ತಿಳಿದುಕೊಳ್ಳುವುದು ಶ್ರೇಯಸ್ಕರವೆಂದು ಸನಾತನವಾದ ಉಕ್ತಿಯೇ ಇದೆ.

ಸಂಸ್ಕಾರೈಃ ಸಂಸ್ಕೃತಃ ಪೂರ್ವಂ ಯಥಾವಚ್ಚರಿತವ್ರತಃ।
ಜಾತೌ ಗುಣವಿಶಿಷ್ಟಾಯಾಂ ಸಮಾವರ್ತೇತ ತತ್ತ್ವವಿತ್ ॥೧೫॥

ಮೊದಲು ಉಪನಯನವೇ ಮೊದಲಾದ ಎಲ್ಲ ಪ್ರಕಾರವಾದ ಸಂಸ್ಕಾರಗಳಿಂದಲೂ ಸಂಸ್ಕೃತನಾಗಿ, ವೇದೋಕ್ತವಾದ ವಿಧಿಯಿಂದ ಅಧ್ಯಯನವನ್ನು ಮಾಡಿ, ಬ್ರಹ್ಮಚರ್ಯವ್ರತವನ್ನು ಪರಿಪಾಲಿಸಬೇಕು. ಅನಂತರ ತತ್ತ್ವವನ್ನರಿತವನು ಸಮಾವರ್ತನಸಂಸ್ಕಾರವನ್ನು ಮಾಡಿಕೊಂಡು ಉತ್ತಮಗುಣಗಳಿಂದ ಯುಕ್ತವಾದ ಕುಲದಲ್ಲಿ ಹುಟ್ಟಿರುವ ಕನ್ಯೆಯನ್ನು ವಿವಾಹಮಾಡಿಕೊಳ್ಳಬೇಕು.

ಸ್ವದಾರನಿರತೋ ನಿತ್ಯಂ ಶಿಷ್ಟಾಚಾರೋ ಜಿತೇನ್ದ್ರಿಯಃ।
ಪಞ್ಚಭಿಶ್ಚ ಮಹಾಯಜ್ಞೈಃ ಶ್ರದ್ದಧಾನೋ ಯಜೇದಿಹ ॥೧೬॥

ಅನಂತರ ಅವನು ತನ್ನ ಪತ್ನಿಯಲ್ಲಿ ಅನುರಾಗದಿಂದಿರುತ್ತಾ ಸತ್ಪುರುಷರ ಆಚಾರವನ್ನು ಪರಿಪಾಲಿಸಬೇಕು. ಜಿತೇಂದ್ರಿಯನಾಗಿರಬೇಕು. ಐದು ಮಹಾಯಜ್ಞಗಳ ಮೂಲಕವಾಗಿ ದೇವತೆಗಳನ್ನೂ, ಪಿತೃಗಳನ್ನೂ, ಅತಿಥಿಗಳನ್ನೂ, ಋಷಿಗಳನ್ನೂ, ಭೂತಗಳನ್ನೂ ಶ್ರದ್ಧೆಯಿಂದ ಸತ್ಕರಿಸಬೇಕು.

ದೇವತಾತಿಥಿಶಿಷ್ಟಾಶೀ ನಿರತೋ ವೇದಕರ್ಮಸು।
ಇಜ್ಯಾಪ್ರದಾನಯುಕ್ತಶ್ಚ ಯಥಾಶಕ್ತಿ ಯಥಾಸುಖಮ್ ॥೧೭॥

ಗೃಹಸ್ಥನಾದವನು ಮೊದಲು ದೇವತೆಗಳಿಗೆ ನಿವೇದನಮಾಡಿ ಅನಂತರ ಅತಿಥಿಗಳನ್ನು ಸತ್ಕರಿಸಿ, ಉಳಿದ ಅನ್ನವನ್ನು ಊಟಮಾಡಬೇಕು. ವೇದೋಕ್ತವಾದ ಕರ್ಮಗಳಲ್ಲಿ ನಿರತನಾಗಿರಬೇಕು. ತನ್ನ ಶಕ್ತಿಗೆ ಅನುಸಾರವಾಗಿ ಪ್ರಸನ್ನತೆಯಿಂದ ಯಜ್ಞವನ್ನು ಮಾಡಬೇಕು. ದಾನಮಾಡಬೇಕು.

ನ ಪಾಣಿಪಾದಚಪಲೋ ನ ನೇತ್ರಚಪಲೋ ಮುನಿಃ।
ನ ಚ ವಾಗಙ್ಗಚಪಲ ಇತಿ ಶಿಷ್ಟಸ್ಯ ಗೋಚರಃ ॥೧೮॥

ಮನನಶೀಲನಾದ ಗೃಹಸ್ಥನು ಕೈ, ಕಾಲು, ಕಣ್ಣು, ಮಾತು ಮತ್ತು ಶರೀರಗಳ ಮೂಲಕವಾಗಿ ಆಗುವ ಚಪಲತೆಗಳನ್ನು ಪರಿತ್ಯಾಗಮಾಡ

ಬೇಕು. ಅರ್ಥಾತ್ ಈ ಕರಣಗಳ ಮೂಲಕವಾಗಿ ಯಾವ ಅನುಚಿತವಾದ ಕಾರ್ಯಗಳೂ ನಡೆಯದಂತೆ ಎಚ್ಚರದಿಂದಿರಬೇಕು. ಇದು ಶಿಷ್ಟಾಚಾರ ವಾಗಿದೆ.

ನಿತ್ಯಂ ಯಜ್ಞೋಪವೀತೀ ಸ್ಯಾಚ್ಛುಕ್ಲವಾಸಾಃ ಶುಚಿವ್ರತಃ ।
ನಿಯತೋ ಯಮದಾನಾಭ್ಯಾಂ ಸದಾಶಿಷ್ಟೈಶ್ಚ ಸಂವಿಶೇತ್ ॥೧೯॥

ಗೃಹಸ್ಥನು ಯಾವಾಗಲೂ ಯಜ್ಞೋಪವೀತಿಯಾಗಿರಬೇಕು. ಶುದ್ಧ ವಾದ ಮತ್ತು ಬಿಳುಪಾದ ವಸ್ತ್ರಗಳನ್ನುಡಬೇಕು. ಉತ್ತಮವಾದ ವ್ರತಗಳನ್ನು ಅನುಷ್ಠಾನಮಾಡಬೇಕು. ಶೌಚ-ಸಂತೋಷಾದಿ ನಿಯಮಗಳನ್ನೂ, ಸತ್ಯ-ಅಹಿಂಸಾದಿ ಯಮಗಳನ್ನೂ ಪರಿಪಾಲಿಸುತ್ತಾ ಯಥಾಶಕ್ತಿ ದಾನವನ್ನು ಮಾಡುತ್ತಿರಬೇಕು. ಯಾವಾಗಲೂ ಸತ್ಪುರುಷರ ಸಹವಾಸದಲ್ಲಿರಬೇಕು.

ಜಿತಶಿಶ್ನೋದರೋ ಮೈತ್ರಃ ಶಿಷ್ಟಾಚಾರಸಮನ್ವಿತಃ ।
ವೈಣವೀಂ ಧಾರಯೇದ್ಯಷ್ಟಿಂ ಸೋದಕಂ ಚ ಕಮಣ್ಡಲುಮ್ ॥೨೦॥

ಶಿಶ್ನೋದರಪರಾಯಣನಾಗಿರದೇ ಅವೆರಡನ್ನೂ ಹತೋಟಿಯಲ್ಲಿಟ್ಟು ಕೊಂಡು, ಎಲ್ಲರೊಡನೆಯೂ ಮೈತ್ರಿಯಿಂದಿರುತ್ತಾ ಶಿಷ್ಟಾಚಾರವನ್ನು ಪರಿಪಾಲಿಸುತ್ತಿರಬೇಕು. ಬಿದಿರಿನ ದಂಡವನ್ನೂ ಮತ್ತು ನೀರುತುಂಬಿದ ಕಮಂಡಲುವನ್ನೂ ಇಟ್ಟುಕೊಂಡಿರಬೇಕು.

ಅಧೀತ್ಯಾಧ್ಯಾಪನಂ ಕುರ್ಯಾತ್ತಥಾ ಯಜನಯಾಜನೇ ।
ದಾನಂ ಪ್ರತಿಗ್ರಹಂ ಚಾಪಿ ಷಡ್ಗುಣಾಂ ವೃತ್ತಿಮಾಚರೇತ್ ॥೨೧॥

ಬ್ರಾಹ್ಮಣನು ಅಧ್ಯಯನ-ಅಧ್ಯಾಪನ, ಯಜನ-ಯಾಜನ ಮತ್ತು ದಾನ-ಪ್ರತಿಗ್ರಹಗಳೆಂಬ ಆರು ಪ್ರಕಾರವಾದ ವೃತ್ತಿಗಳನ್ನಿಟ್ಟುಕೊಂಡಿರಬೇಕು.

ತ್ರೀಣಿ ಕರ್ಮಾಣಿ ಜಾನೀತ ಬ್ರಾಹ್ಮಣಾನಾಂ ತು ಜೀವಿಕಾ ।
ಯಜನಾಧ್ಯಾಪನೇ ಚೋಭೇ ಶುದ್ಧಾಚ್ಚಾಪಿ ಪ್ರತಿಗ್ರಹಃ ॥೨೨॥

ಇವುಗಳಲ್ಲಿ ಯಜ್ಞಮಾಡಿಸುವುದು, ಅಧ್ಯಯನಮಾಡಿಸುವುದು, ಶುದ್ಧನಾದವನಿಂದ ದಾನವನ್ನು ಪ್ರತಿಗ್ರಹಿಸುವುದು–ಈ ಮೂರು ಕರ್ಮಗಳೂ ಬ್ರಾಹ್ಮಣರ ಜೀವಿಕೆಗೆ ಸಾಧನಗಳಾಗಿವೆಯೆಂದು ತಿಳಿಯಿರಿ.

ಅಥ ಶೇಷಾಣಿ ಚಾನ್ಯಾನಿ ತ್ರೀಣಿ ಕರ್ಮಾಣಿ ಯಾನಿ ತು ।
ದಾನಮಧ್ಯಯನಂ ಯಜ್ಞೋ ಧರ್ಮಯುಕ್ತಾನಿ ತಾನಿ ತು ॥೨೩॥

ಉಳಿದ ದಾನ, ಅಧ್ಯಯನ ಮತ್ತು ಯಜ್ಞಾನುಷ್ಠಾನಗಳೆಂಬ ಇತರ ಮೂರು ಕರ್ಮಗಳೂ ಧರ್ಮಯುಕ್ತವಾಗಿವೆ. ಅವು ಮೂರೂ ಧರ್ಮೋಪಾರ್ಜನೆಗೆ ಸಾಧಕಗಳಾಗಿವೆ.

ತೇಷ್ವಪ್ರಮಾದಂ ಕುರ್ವೀತ ತ್ರಿಷು ಕರ್ಮಸು ಧರ್ಮವಿತ್ ।
ದಾನ್ತೋ ಮೈತ್ರಃ ಕ್ಷಮಾಯುಕ್ತಃ ಸರ್ವಭೂತಸಮೋ ಮುನಿಃ ॥೨೪॥

ಸರ್ವಮೇತದ್ಯಥಾಶಕ್ತಿ ವಿಪ್ರೋ ನಿರ್ವರ್ತಯಞ್ಶುಚಿಃ ।
ಏವಂ ಯುಕ್ತೋ ಜಯೇತ್ಸ್ವರ್ಗಂ ಗೃಹಸ್ಥಃ ಸಂಶಿತವ್ರತಃ ॥೨೫॥

ಧರ್ಮವನ್ನು ತಿಳಿದಿರುವ ಬ್ರಾಹ್ಮಣನು ಅಧ್ಯಯನ, ದಾನ, ಯಜ್ಞ ಈ ಮೂರು ಕರ್ಮಗಳನ್ನು ಮಾಡುವುದರಲ್ಲಿ ಅಜಾಗರೂಕನಾಗಿರಬಾರದು. ಜಿತೇಂದ್ರಿಯನಾದ, ಎಲ್ಲರಲ್ಲಿಯೂ ಮೈತ್ರಭಾವವನ್ನು ಹೊಂದಿರುವ, ಕ್ಷಮಾವಂತನಾದ, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಮಾನಭಾವದಿಂದಿರುವ, ಮನನಶೀಲನಾದ, ಕಠೋರವ್ರತನಿಷ್ಠನಾದ, ಪವಿತ್ರಾತ್ಮನಾದ ಗೃಹಸ್ಥನು ತನ್ನ ಶಕ್ತಿಗೆ ಅನುಸಾರವಾಗಿ ಈ ನಿಯಮಗಳನ್ನು ಪರಿಪಾಲಿಸುತ್ತಿದ್ದರೆ ಸ್ವರ್ಗಲೋಕವನ್ನು ಜಯಿಸುತ್ತಾನೆ. (ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.)"

ಳ೫ನೆಯ ಅಧ್ಯಾಯವು ಮುಗಿಯಿತು.

ಳ೬ನೆಯ ಅಧ್ಯಾಯ — ಅನುಗೀತಾಪರ್ವ (ಮುಂದುವರಿದಿದೆ.)

ಬ್ರಹ್ಮಚಾರಿಯ, ವಾನಪ್ರಸ್ಥನ ಮತ್ತು ಸಂನ್ಯಾಸಿಯ ಧರ್ಮಗಳ ನಿರೂಪಣೆ

ಬ್ರಹ್ಮನು ಹೇಳುತ್ತಾನೆ:

ಏವಮೇತೇನ ಮಾರ್ಗೇಣ ಪೂರ್ವೋಕ್ತೇನ ಯಥಾ ವಿಧಿ ।
ಅಧೀತವಾನ್ಯಥಾಶಕ್ತಿ ತಥೈವ ಬ್ರಹ್ಮಚರ್ಯವಾನ್ ॥೧॥

ಸ್ವಧರ್ಮನಿರತೋ ವಿದ್ವಾನ್ಸರ್ವೇನ್ದ್ರಿಯಯತೋ ಮುನಿಃ ।
ಗುರೋಃ ಪ್ರಿಯಹಿತೇ ಯುಕ್ತಃ ಸತ್ಯಧರ್ಮಪರಃ ಶುಚಿಃ ॥೨॥

"ಮಹರ್ಷಿಗಳೇ! ಹಿಂದೆ ಹೇಳಿದ ಈ ಮಾರ್ಗದಲ್ಲಿಯೇ ಬ್ರಹ್ಮಚಾರಿಯು ಯಥಾವಿಧಿಯಾಗಿ ಕರ್ಮಗಳನ್ನು ಆಚರಿಸಬೇಕು. ಯಥಾಶಕ್ತಿಅಧ್ಯಯನಮಾಡುತ್ತಾ, ಬ್ರಹ್ಮಚರ್ಯಪಾಲಕನಾದ ವಿದ್ವಾಂಸನು ಸ್ವಧರ್ಮ ನಿರತನಾಗಿ, ಎಲ್ಲ ಇಂದ್ರಿಯಗಳನ್ನೂ ಸ್ವಾಧೀನದಲ್ಲಿಟ್ಟುಕೊಂಡು, ಮನನಶೀಲನಾಗಿ, ಗುರುವಿಗೆ ಹಿತವನ್ನೂ ಪ್ರಿಯವನ್ನೂ ಉಂಟು ಮಾಡುವುದರಲ್ಲಿಯೇ ಆಸಕ್ತನಾಗಿದ್ದುಕೊಂಡು ಸತ್ಯಧರ್ಮಪರಾಯಣ ನಾಗಿಯೂ ಶುಚಿಯಾಗಿಯೂ ಇರಬೇಕು.

ಗುರುಣಾ ಸಮನುಜ್ಞಾತೋ ಭುಞ್ಜೀತಾನ್ನಮಕುತ್ಸಯನ್ ।
ಹವಿಷ್ಯಭೈಕ್ಷ್ಯಭುಕ್ಚಾಪಿ ಸ್ಥಾನಾಸನವಿಹಾರವಾನ್ ॥೩॥

ಗುರುವಿನ ಆಜ್ಞೆಯನ್ನು ಪಡೆದು ಭೋಜನಮಾಡಬೇಕು. ಊಟಮಾಡುವಾಗ ಅನ್ನವನ್ನು ನಿಂದಿಸಬಾರದು. ಭಿಕ್ಷಾನ್ನವನ್ನೇ ಹವಿಸ್ಸೆಂದು ಭಾವಿಸಿ ಭಕ್ಷಿಸಬೇಕು. ಸರಿಯಾದ ಜಾಗದಲ್ಲಿರಬೇಕು. ಸರಿಯಾದ ಆಸನದಲ್ಲಿ ಕುಳಿತುಕೊಳ್ಳಬೇಕು. ಸರಿಯಾದ ಆಚಾರವುಳ್ಳವನಾಗಿರಬೇಕು.

ದ್ವಿಕಾಲಮಗ್ನಿಂ ಜುಹ್ವಾನಃ ಶುಚಿರ್ಭೂತ್ವಾ ಸಮಾಹಿತಃ ।
ಧಾರಯೀತ ಸದಾ ದಣ್ಡಂ ಬೈಲ್ವಂ ಪಾಲಾಶಮೇವ ವಾ ॥೪॥

ಶುಚಿಯಾಗಿ ಮತ್ತು ಏಕಾಗ್ರಚಿತ್ತನಾಗಿ ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಅಗ್ನಿಕಾರ್ಯವನ್ನು ಮಾಡಬೇಕು. ಮುತ್ತುಗ ಅಥವಾ ಬಿಲ್ವದ ದಂಡವನ್ನು ಯಾವಾಗಲೂ ಧರಿಸಿರಬೇಕು.

ಕ್ಷೌಮಂ ಕಾರ್ಪಾಸಕಂ ಚಾಪಿ ಮೃಗಾಜಿನಮಥಾಪಿ ವಾ ।
ಸರ್ವಂ ಕಾಷಾಯರಕ್ತಂ ವಾ ವಾಸೋ ವಾಪಿ ದ್ವಿಜಸ್ಯ ಹ ॥೫॥

ಬ್ರಹ್ಮಚಾರಿಯಾದವನು ರೇಷ್ಮೆಯವಸ್ತ್ರ, ಹತ್ತಿಯಬಟ್ಟೆ ಅಥವಾ ಮೃಗಚರ್ಮವನ್ನು ಧಾರಣೆಮಾಡಬೇಕು. ಬ್ರಾಹ್ಮಣನು ಪೂರ್ಣವಾಗಿ ಕಾವಿಬಣ್ಣಹಾಕಿದ ವಸ್ತ್ರವನ್ನಾದರೂ ಧರಿಸಬಹುದು.

ಮೇಖಲಾ ಚ ಭವೇನ್ಮೌಞ್ಜೀ ಜಟೀ ನಿತ್ಯೋದಕಸ್ತಥಾ ।
ಯಜ್ಞೋಪವೀತೀ ಸ್ವಾಧ್ಯಾಯೀ ಅಲುಬ್ಧೋ ನಿಯತವ್ರತಃ ॥೬॥

ಬ್ರಹ್ಮಚಾರಿಯು ಮುಂಜಹುಲ್ಲಿನ (ನೊಜೆಯ) ಉಡಿದಾರವನ್ನು ಕಟ್ಟಿಕೊಳ್ಳಬೇಕು. ಜಟೆಯನ್ನು ಧರಿಸಬೇಕು. ನಿತ್ಯವೂ ಸ್ನಾನಮಾಡಬೇಕು. ಸರ್ವದಾ ಯಜ್ಞೋಪವೀತಿಯಾಗಿರಬೇಕು. ವೇದಾಧ್ಯಯನವನ್ನು ಮಾಡುತ್ತಿದ್ದು ಯಾವವಿಧವಾದ ಆಸೆಯೂ ಇಲ್ಲದೇ ನಿಯಮಪೂರ್ವಕವಾಗಿ ಈ ವ್ರತಗಳನ್ನು ಪರಿಪಾಲಿಸುತ್ತಿರಬೇಕು.

ಪೂತಾಭಿಶ್ಚ ತಥೈವಾದ್ಭಿಃ ಸದಾ ದೈವತತರ್ಪಣಮ್ ।
ಭಾವೇನ ನಿಯತಃ ಕುರ್ವನ್ಬ್ರಹ್ಮಚಾರೀ ಪ್ರಶಸ್ಯತೇ ॥೭॥

ಸದಾ ನಿಯಮಪರಾಯಣನಾಗಿ, ಶ್ರದ್ಧೆಯಿಂದ ಕೂಡಿದವನಾಗಿ, ಶುದ್ಧವಾದ ನೀರಿನಿಂದ ದೇವತೆಗಳಿಗೆ ತರ್ಪಣವನ್ನು ಕೊಡುವ ಬ್ರಹ್ಮಚಾರಿಯು ಸದಾ ಪ್ರಶಂಸೆಗೆ ಪಾತ್ರನಾಗುತ್ತಾನೆ.

ಏವಂ ಯುಕ್ತೋ ಜಯೇಲ್ಲೋಕಾನ್ವಾನಪ್ರಸ್ಥೋ ಜಿತೇನ್ದ್ರಿಯಃ ।
ನ ಸಂಸರತಿ ಜಾತೀಷು ಪರಮಾಂ ಸ್ಥಾನಮಾಶ್ರಿತಃ ॥೮॥

ಹೀಗೆಯೇ ಮುಂದೆ ಹೇಳುವ ಉತ್ತಮಗುಣಯುಕ್ತನಾದ, ಜಿತೇಂದ್ರಿಯನಾದ, ವಾನಪ್ರಸ್ಥನಾದ ಪುರುಷನು ಉತ್ತಮವಾದ ಲೋಕಗಳನ್ನು ಜಯಿಸುತ್ತಾನೆ. ಅವನು ಪರಮಶ್ರೇಷ್ಠವಾದ ಸ್ಥಾನವನ್ನು ಹೊಂದಿದಮೇಲೆ ಪುನಃ ಸಂಸಾರದಲ್ಲಿ ಜನ್ಮವನ್ನು ತಾಳುವುದಿಲ್ಲ.

ಸಂಸ್ಕೃತಃ ಸರ್ವಸಂಸ್ಕಾರೈಸ್ತಥೈವ ಬ್ರಹ್ಮಚರ್ಯವಾನ್ ।
ಗ್ರಾಮಾನ್ನಿಷ್ಕ್ರಮ್ಯ ಚಾರಣ್ಯೇ ಮುನಿಃ ಪ್ರವ್ರಜಿತೋ ವಸೇತ್ ॥೯॥

ಸಮಸ್ತವಾದ ಸಂಸ್ಕಾರಗಳಿಂದಲೂ ಸಂಸ್ಕೃತನಾದ, ಬ್ರಹ್ಮಚರ್ಯವ್ರತ ನಿಷ್ಠನಾದ ವಾನಪ್ರಸ್ಥನು ಸಂಸಾರದ ಮೇಲಿನ ಮಮತೆಯನ್ನು ತೊರೆದು ಗ್ರಾಮದಿಂದ ಹೊರಬಿದ್ದು ಅರಣ್ಯದಲ್ಲಿ ವಾಸಮಾಡಬೇಕು.

ಚರ್ಮವಲ್ಕಲಸಂವಾಸೀ ಸಾಯಂ ಪ್ರಾತರುಪಸ್ಪೃಶೇತ್ ।
ಅರಣ್ಯಗೋಚರೋ ನಿತ್ಯಂ ನ ಗ್ರಾಮಂ ಪ್ರವಿಶೇತ್ಪುನಃ ॥೧೦॥

ವಾನಪ್ರಸ್ಥನು ಮೃಗಚರ್ಮವನ್ನು ಅಥವಾ ನಾರುಮಡಿಯನ್ನು ಉಡಬೇಕು. ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಸ್ನಾನಮಾಡಬೇಕು. ಯಾವಾಗಲೂ ಅರಣ್ಯದಲ್ಲೇ ಇರಬೇಕು. ವಾಸಕ್ಕಾಗಿ ಪುನಃ ಗ್ರಾಮವನ್ನು ಪ್ರವೇಶಿಸಬಾರದು.

ಅರ್ಚಯನ್ನತಿಥೀನ್ಕಾಲೇ ದದ್ಯಾಚ್ಚಾಪಿ ಪ್ರತಿಶ್ರಯಮ್ ।
ಫಲಪತ್ರಾವರೈರ್ಮೂಲೈಃ ಶ್ಯಾಮಾಕೇನ ಚ ವರ್ತಯನ್ ॥೧೧॥

ಅರಣ್ಯದಲ್ಲಿರುವಾಗಲೂ ಅತಿಥಿಗಳಾಗಿ ಬಂದವರಿಗೆ ಆಶ್ರಯವನ್ನು ಕೊಡಬೇಕು. ಸಮಯಗಳಲ್ಲಿ ಅವರನ್ನು ಸತ್ಕರಿಸಬೇಕು. ಅರಣ್ಯದಲ್ಲಿ ಸಿಕ್ಕುವ ಹಣ್ಣುಗಳನ್ನೂ, ಗೆಡ್ಡೆಗೆಣಸುಗಳನ್ನೂ, ಎಲೆಗಳನ್ನೂ, ಸಾಮೇಅಕ್ಕಿಯ ಅನ್ನವನ್ನೂ ತಿಂದುಕೊಂಡು ಜೀವನವನ್ನು ನಿರ್ವಹಿಸಬೇಕು.

ಪ್ರವೃತ್ತಮುದಕಂ ವಾಯುಂ ಸರ್ವಂ ವಾನೇಯಮಾಶ್ರಯೇತ್ ।
ಪ್ರಾಶ್ನೀಯಾದಾನುಪೂರ್ವ್ಯೇಣ ಯಥಾದೀಕ್ಷಮತನ್ದ್ರಿತಃ ॥೧೨॥

ಹರಿಯುವ ನೀರು, ಬೀಸುವಗಾಳಿ-ಇವೇ ಮುಂತಾದ ಅರಣ್ಯದಲ್ಲಿ ಸಿಕ್ಕುವ ವಸ್ತುಗಳನ್ನೇ ಸೇವಿಸಬೇಕು. ತನ್ನ ವ್ರತದ ನಿಯಮಾನುಸಾರವಾಗಿ ಅಲಸಿಕೆಯಿಲ್ಲದೇ ಅರಣ್ಯದಲ್ಲಿ ಸಿಕ್ಕುವ ಆಹಾರವನ್ನೇ ಅನುಕ್ರಮವಾಗಿ ತಿನ್ನಬೇಕು.

ಸಮೂಲಫಲಭಿಕ್ಷಾಭಿರರ್ಚೇದತಿಥಿಮಾಗತಮ್ ।
ಯದ್ಭಕ್ಷ್ಯಂ ಸ್ಯಾತ್ತತೋ ದದ್ಯಾದ್ಭಿಕ್ಷಾಂ ನಿತ್ಯಮತನ್ದ್ರಿತಃ ॥೧೩॥

ಆಶ್ರಮಕ್ಕೆ ಆಗಮಿಸಿದ ಅತಿಥಿಯನ್ನು ಫಲಮೂಲಭಿಕ್ಷೆಗಳಿಂದ ಸತ್ಕರಿಸಬೇಕು. ಸ್ವಲ್ಪವಾದರೂ ಅಲಸಿಕೆಯಿಲ್ಲದೇ ತನ್ನ ಭೋಜನಕ್ಕಾಗಿ ಯಾವುದು ಸಿದ್ಧವಾಗಿರುವುದೋ ಅದರಲ್ಲಿಯೇ ಸ್ವಲ್ಪಭಾಗವನ್ನು ಅತಿಥಿಗೂ ಕೊಟ್ಟು ಅವನನ್ನು ಸತ್ಕರಿಸಬೇಕು.

ದೇವತಾತಿಥಿಪೂರ್ವಂ ಚ ಸದಾ ಪ್ರಾಶ್ನೀತ ವಾಗ್ಯತಃ ।
ಅಸ್ಪರ್ಧಿತಮನಾಶ್ಚೈವ ಲಘ್ವಾಶೀ ದೇವತಾಶ್ರಯಃ ॥೧೪॥

ಪ್ರತಿನಿತ್ಯವೂ ದೇವತೆಗಳಿಗೆ ಅನ್ನವನ್ನು ನಿವೇದನೆಮಾಡಿ ಅತಿಥಿಗಳಿಗೆ ಭೋಜನಮಾಡಿಸಿದ ಬಳಿಕ ತಾನು ಮೌನವಾಗಿದ್ದು ಭೋಜನಮಾಡಬೇಕು. ಯಾರೊಡನೆಯೂ ಸ್ಪರ್ಧೆಯುಳ್ಳ ಮನಸ್ಸಿನವನಾಗಿರಬಾರದು. ಅಲ್ಪಾಹಾರಿಯಾಗಿರಬೇಕು. ದೇವತೆಗಳನ್ನೇ ಆಶ್ರಯಿಸಬೇಕು.

ದಾನ್ತೋ ಮೈತ್ರಃ ಕ್ಷಮಾಯುಕ್ತಃ ಕೇಶಾಶ್ಮಶ್ರು ಚ ಧಾರಯನ್ ।
ಜುಹ್ವನ್ಸ್ವಾಧ್ಯಾಯಶೀಲಶ್ಚ ಸತ್ಯಧರ್ಮಪರಾಯಣಃ ॥೧೫॥

ಇಂದ್ರಿಯಗಳನ್ನು ನಿಗ್ರಹಿಸಿ ಎಲ್ಲರೊಡನೆಯೂ ಮೈತ್ರಿಯಿಂದಿರಬೇಕು. ಕ್ಷಮಾಶೀಲನಾಗಿರಬೇಕು. ಗಡ್ಡ-ಮೀಸೆಗಳನ್ನೂ ತಲೆಗೂದಲನ್ನೂ ಬಿಟ್ಟಿರಬೇಕು. ಆಯಾಸಮಯಗಳಲ್ಲಿ ಅಗ್ನಿಹೋತ್ರವನ್ನು ಮಾಡಬೇಕು. ಸದಾ ಸ್ವಾಧ್ಯಾಯಶೀಲನಾಗಿರಬೇಕು. ಸತ್ಯ-ಧರ್ಮಪರಾಯಣನಾಗಿರಬೇಕು.

ಶುಚಿದೇಹಃ ಸದಾ ದಕ್ಷೋ ವನನಿತ್ಯಃ ಸಮಾಹಿತಃ ।
ಏವಂ ಯುಕ್ತೋ ಜಯೇತ್ಸ್ವರ್ಗಂ ವಾನಪ್ರಸ್ಥೋ ಜಿತೇನ್ದ್ರಿಯಃ ॥೧೬॥

ಶುಚಿಯಾದ ಶರೀರವನ್ನು ಹೊಂದಿರುವ, ಧರ್ಮಕಾರ್ಯಗಳಲ್ಲಿ ಕುಶಲನಾಗಿರುವ, ಅರಣ್ಯದಲ್ಲಿದ್ದು ಪರಮಾತ್ಮನಲ್ಲಿಯೇ ಏಕಾಗ್ರಚಿತ್ತ ನಾಗಿರುವ, ಜಿತೇಂದ್ರಿಯನಾದ ವಾನಪ್ರಸ್ಥನು ಸ್ವರ್ಗವನ್ನು ಜಯಿಸುತ್ತಾನೆ.

ಗೃಹಸ್ಥೋ ಬ್ರಹ್ಮಚಾರೀ ಚ ವಾನಪ್ರಸ್ಥೋಽಥ ವಾ ಪುನಃ ।
ಯ ಇಚ್ಛೇನ್ಮೋಕ್ಷಮಾಸ್ಥಾತುಮುತ್ತಮಾಂ ವೃತ್ತಿಮಾಶ್ರಯೇತ್ ॥೧೭॥

ಮೋಕ್ಷವನ್ನು ಅಪೇಕ್ಷಿಸುವ ಬ್ರಹ್ಮಚಾರಿಯಾಗಲೀ, ಗೃಹಸ್ಥನಾಗಲೀ, ವಾನಪ್ರಸ್ಥನೇ ಆಗಲೀ ಉತ್ತಮವಾದ ಸಂನ್ಯಾಸವೃತ್ತಿಯನ್ನು ಆಶ್ರಯಿಸಬೇಕು.

ಅಭಯಂ ಸರ್ವಭೂತೇಭ್ಯೋ ದತ್ತ್ವಾ ನೈಷ್ಕರ್ಮ್ಯಮಾಚರೇತ್ ।
ಸರ್ವಭೂತಸುಖೋ ಮೈತ್ರಃ ಸರ್ವೇನ್ದ್ರಿಯಯತೋ ಮುನಿಃ ॥೧೮॥

ಎಲ್ಲ ಪ್ರಾಣಿಗಳಿಗೂ ಅಭಯವನ್ನಿತ್ತು ಕರ್ಮತ್ಯಾಗರೂಪವಾದ ಸಂನ್ಯಾಸಧರ್ಮವನ್ನು ಪಾಲಿಸಬೇಕು. ಸರ್ವಪ್ರಾಣಿಗಳಿಗೂ ಸುಖವನ್ನು

ಬಯಸಬೇಕು. ಎಲ್ಲರಿಗೂ ಮಿತ್ರನಾಗಿರಬೇಕು. ಎಲ್ಲ ಇಂದ್ರಿಯಗಳನ್ನೂ ತಡೆಹಿಡಿದು ಮುನಿವೃತ್ತಿಯನ್ನು ಅವಲಂಬಿಸಬೇಕು.

ಅಯಾಚಿತಮಸಂಕ್ಲೃಪ್ತಮುಪಪನ್ನಂ ಯದೃಚ್ಛಯಾ ।
ಕೃತ್ವಾ ಪ್ರಾಹ್ಣೇ ಚರೇದ್ಭೈಕ್ಷ್ಯಂ ವಿಧೂಮೇ ಭುಕ್ತವಜ್ಜನೇ ।
ವೃತ್ತೇ ಶರಾವಸಮ್ಪಾತೇ ಭೈಕ್ಷ್ಯಂ ಲಿಪ್ಸೇತ ಮೋಕ್ಷವಿತ್ ॥೧೯॥

ಯಾಚನೆಯನ್ನೂ ಸಂಕಲ್ಪವನ್ನೂ ಮಾಡದೇ ದೈವೇಚ್ಛೆಯಿಂದ ಲಬ್ಧವಾದ ಅನ್ನದಲ್ಲಿಯೇ ತೃಪ್ತಿಯನ್ನು ಹೊಂದಬೇಕು. ಪ್ರಾತಃಕಾಲದಲ್ಲಿ ಮಾಡಬೇಕಾದ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಗೃಹಸ್ಥನ ಮನೆಯಲ್ಲಿ ಒಲೆಯಿಂದ ಹೊರಬರುವ ಹೊಗೆಯು ನಿಂತುಹೋದನಂತರ (ಒಲೆಯಾರಿದನಂತರ), ಮನೆಯವರೆಲ್ಲರೂ ಊಟಮಾಡಿದನಂತರ, ಅಡಿಗೆಯ ಪಾತ್ರೆಗಳೆಲ್ಲವನ್ನೂ ತೊಳೆದಿಟ್ಟನಂತರ, ಮೋಕ್ಷಧರ್ಮವನ್ನು ತಿಳಿದಿರುವ ಸಂನ್ಯಾಸಿಯು ಭಿಕ್ಷೆಗೆ ಹೋಗಲು ನಿಶ್ಚಯಿಸಬೇಕು.

ಲಾಭೇನ ಚ ನ ಹೃಷ್ಯೇತ ನಾಲಾಭೇ ವಿಮನಾ ಭವೇತ್ ।
ನ ಚಾತಿಭಿಕ್ಷಾಂ ಭಿಕ್ಷೇತ ಕೇವಲಂ ಪ್ರಾಣಯಾತ್ರಿಕಃ ॥೨೦॥

ಭಿಕ್ಷೆಯು ಸಿಕ್ಕಿದರೆ ಸಂತೋಷಪಡಬಾರದು. ಸಿಕ್ಕದೆಯೇ ಇದ್ದರೆ ವಿಷಾದಿಸಲೂಬಾರದು. ಪ್ರಾಣವುಳಿಸಿಕೊಳ್ಳಲು ಬೇಕಾಗುವಷ್ಟು ಆಹಾರವನ್ನು ಮಾತ್ರವೇ ಭಿಕ್ಷೆಬೇಡಿ ಪಡೆದುಕೊಳ್ಳಬೇಕು.

ಯಾತ್ರಾರ್ಥೀ ಕಾಲಮಾಕಾಂಕ್ಷಂಶ್ಚರೇದ್ಭೈಕ್ಷ್ಯಂ ಸಮಾಹಿತಃ ।
ಲಾಭಂ ಸಾಧಾರಣಂ ನೇಚ್ಛೇನ್ನ ಭುಞ್ಜೀತಾಭಿಪೂಜಿತಃ ।
ಅಭಿಪೂಜಿತಲಾಭಾದ್ಧಿ ವಿಜುಗುಪ್ಸೇತ ಭಿಕ್ಷುಕಃ ॥೨೧॥

ಸಂನ್ಯಾಸಿಯು ಜೀವನನಿರ್ವಹಣಕ್ಕಾಗಿ ಮಾತ್ರವೇ ಭಿಕ್ಷೆಯನ್ನು ಮಾಡಬೇಕು. ಉಚಿತವಾದ ಸಮಯದವರೆಗೆ ಮಾತ್ರವೇ ಭಿಕ್ಷಾಟನೆ ಮಾಡಬೇಕು. ಏಕಾಗ್ರಚಿತ್ತನಾಗಿರಬೇಕು. ಬೇರೆಯ ಸಂನ್ಯಾಸಿಗಳ ಭಿಕ್ಷೆಯನ್ನು ತಾನು ಉಪಯೋಗಿಸಿಕೊಳ್ಳಬಾರದು. ಮನೆಗೆ ಕರೆದು ಗೌರವಿಸಿ ಮಾಡಿಸುವ ಭೋಜನದ ವಿಷಯದಲ್ಲಿ ಜುಗುಪ್ಸೆತಾಳಬೇಕು. (ಅದನ್ನು

ಅಪೇಕ್ಷಿಸಬಾರದು.) ಮಾನ, ಮರ್ಯಾದೆ, ಗೌರವ-ಇತ್ಯಾದಿಗಳ ವಿಷಯದಲ್ಲಿ ಸಂನ್ಯಾಸಿಯು ಜುಗುಪ್ಸೆಯನ್ನು ಹೊಂದಬೇಕು.

ಶುಕ್ತಾನ್ಯಾಮ್ಲಾನಿ ತಿಕ್ತಾನಿ ಕಷಾಯಕಟುಕಾನಿ ಚ ।
ನಾಸ್ವಾದಯೀತ ಭುಞ್ಜಾನೋ ರಸಾಂಶ್ಚ ಮಧುರಾಂಸ್ತಥಾ ॥೨೨॥

ಯಾತ್ರಾಮಾತ್ರಂ ತು ಭುಞ್ಜೀತ ಕೇವಲಂ ಪ್ರಾಣಧಾರಣಮ್ ॥೨೩॥

ಹೆಚ್ಚು ಗಟ್ಟಿಯಾಗಿರುವ ಪದಾರ್ಥಗಳನ್ನೂ, ಹೆಚ್ಚು ಹುಳಿಯಾದ ಪದಾರ್ಥಗಳನ್ನೂ, ಹೆಚ್ಚು ಕಹಿಯಾದ ಪದಾರ್ಥಗಳನ್ನೂ, ತುಂಬಾ ಒಗಚಾದ ಪದಾರ್ಥಗಳನ್ನೂ, ಹೆಚ್ಚು ಖಾರವಾದ ಪದಾರ್ಥಗಳನ್ನೂ, ತಂಬಾ ಸಿಹಿಯಾದ ರಸಗಳನ್ನೂ ಸಂನ್ಯಾಸಿಯಾದವನು ತಿನ್ನಬಾರದು. (ಊಟಮಾಡುವಾಗ ಅವುಗಳ ರಸವನ್ನು ತುಂಬಾ ಸವಿಯಬಾರದು.) ಜೀವನವನ್ನು ಸಾಗಿಸಿಕೊಂಡುಹೋಗುವುದಕ್ಕೆ ಮಾತ್ರವೇ ಸಂನ್ಯಾಸಿಯು ಭೋಜನಮಾಡಬೇಕು. ಊಟಮಾಡುವುದರಲ್ಲಿ ಪ್ರಾಣಧಾರಣವೇ ಅವನ ಉದ್ದೇಶವಾಗಿರಬೇಕು. (ಶರೀರದ ಪುಷ್ಟಿಗಾಗಿ ಭೋಜನಮಾಡಬಾರದು.)

ಅಸಂರೋಧೇನ ಭೂತಾನಾಂ ವೃತ್ತಿಂ ಲಿಪ್ಸೇತ ಮೋಕ್ಷವಿತ್ ।
ನ ಚಾನ್ಯಮನ್ನಂ ಲಿಪ್ಸೇತ ಭಿಕ್ಷಮಾಣಃ ಕಥಂಚನ ॥೨೪॥

ಮೋಕ್ಷಧರ್ಮವನ್ನು ತಿಳಿದಿರುವ ಸಂನ್ಯಾಸಿಯು ಇತರ ಪ್ರಾಣಿಗಳ ಜೀವನಕ್ಕೆ ಬಾಧೆಯುಂಟಾಗದರೀತಿಯಲ್ಲಿ ಸಿಕ್ಕುವ ಭಿಕ್ಷೆಯಿಂದಲೇ ಜೀವನ ವನ್ನು ನಿರ್ವಹಿಸಬೇಕು. ಸಂನ್ಯಾಸಿಯು ಭಿಕ್ಷೆಮಾಡುತ್ತಿರುವಾಗ ಭಿಕ್ಷಾನ್ನವನ್ನು ಹೊರತಾಗಿ ಬೇರೆ ಯಾವ ಅನ್ನವನ್ನೂ ಯಾವುದೇ ಕಾರಣದಿಂದಲೂ ಬಯಸಬಾರದು.

ನ ಸಂನಿಕಾಶಯೇದ್ಧರ್ಮಂ ವಿವಿಕ್ತೇ ಚಾರಜಾಶ್ಚರೇತ್ ।
ಶೂನ್ಯಾಗಾರಮರಣ್ಯಂ ವಾ ವೃಕ್ಷಮೂಲಂ ನದೀಂ ತಥಾ ॥೨೫॥
ಪ್ರತಿಶ್ರಯಾರ್ಥಂ ಸೇವೇತ ಪಾರ್ವತೀಂ ವಾ ಪುನರ್ಗುಹಾಮ್ ।
ಗ್ರಾಮೈಕರಾತ್ರಿಕೋ ಗ್ರೀಷ್ಮೇ ವರ್ಷಾಸ್ವೇಕತ್ರ ವಾ ವಸೇತ್ ॥೨೬॥

ಸಂನ್ಯಾಸಿಯಾದವನು ತಾನು ಆಚರಿಸುವ ಧರ್ಮವನ್ನು ಪ್ರದರ್ಶ ನಾರ್ಥವಾಗಿ ಮಾಡಬಾರದು. ರಜೋಗುಣದಿಂದ ರಹಿತನಾಗಿ ಏಕಾಂತ

ಸ್ಥಳದಲ್ಲಿ ವಾಸಮಾಡಬೇಕು. ಸಂನ್ಯಾಸಿಯಾದವನು ರಾತ್ರಿತಂಗಲು ಜನರಿಲ್ಲದ ಶೂನ್ಯಗೃಹವನ್ನಾಗಲೀ, ಅರಣ್ಯವನ್ನಾಗಲೀ, ವೃಕ್ಷದ ಬುಡವನ್ನಾಗಲೀ, ನದಿಯತೀರವನ್ನಾಗಲೀ, ಪರ್ವತದ ಗುಹೆಯನ್ನಾಗಲೀ ಆಶ್ರಯಿಸಬೇಕು. ಗ್ರೀಷ್ಮರ್ತುವಿನಲ್ಲಿ ಒಂದು ಗ್ರಾಮದಲ್ಲಿ ಒಂದು ರಾತ್ರಿಗಿಂತಲೂ ಹೆಚ್ಚು ಕಾಲ ಉಳಿದುಕೊಳ್ಳಬಾರದು. ವರ್ಷರ್ತುವಿನಲ್ಲಿ ಮಾತ್ರ ಒಂದೇ ಸ್ಥಳದಲ್ಲಿ ಉಳಿದುಕೊಳ್ಳಬಹುದು.

ಅಧ್ವಾ ಸೂರ್ಯೇಣ ನಿರ್ದಿಷ್ಟಃ ಕೀಟವಚ್ಚ ಚರೇನ್ಮಹೀಮ್ ।
ದಯಾರ್ಥಂ ಚೈವ ಭೂತಾನಾಂ ಸಮೀಕ್ಷ್ಯ ಪೃಥಿವೀಂ ಚರೇತ್ ।
ಸಂಚಯಾಂಶ್ಚ ನ ಕುರ್ವೀತ ಸ್ನೇಹವಾಸಂ ಚ ವರ್ಜಯೇತ್ ॥೨೭॥

ಆಕಾಶದಲ್ಲಿ ಸೂರ್ಯನು ಇರುವವರೆಗೂ (ಸೂರ್ಯಾಸ್ತಮಯದವರೆಗೂ) ಸಂನ್ಯಾಸಿಯು ಪ್ರಯಾಣಮಾಡಬೇಕು. (ಸೂರ್ಯಾಸ್ತಕ್ಕೆ ಸರಿಯಾಗಿ ಸಿಕ್ಕುವ ಗ್ರಾಮದಲ್ಲಿ ತಂಗಬೇಕು.) ಹುಳುವಿನಂತೆ ನಿಧಾನವಾಗಿಯೇ ಹೆಜ್ಜೆಗಳನ್ನಿಡುತ್ತಾ ಪ್ರಪಂಚವನ್ನು ಸುತ್ತಬೇಕು. ಹಾಗೆ ಸಂಚರಿಸುವಾಗ ಪ್ರಾಣಿಗಳ ಮೇಲಿನ ದಯೆಯಿಂದ ಭೂಮಿಯಲ್ಲಿ ಹರಿದಾಡುವ ಕ್ರಿಮಿಗಳು ಕಾಲಿಗೆ ಸಿಕ್ಕಿ ತೊಂದರೆಪಡದ ರೀತಿಯಲ್ಲಿ ನೆಲವನ್ನು ಚೆನ್ನಾಗಿ ನೋಡಿಕೊಂಡು ಹೆಜ್ಜೆಯಿಡುತ್ತಾ ಪ್ರಯಾಣಮಾಡಬೇಕು. ಗ್ರಾಮಗಳ ಮೂಲಕವಾಗಿ ಸಂಚರಿಸುವಾಗ ದ್ರವ್ಯವನ್ನಾಗಲೀ ಪದಾರ್ಥವನ್ನಾಗಲೀ ಸಂಗ್ರಹಿಸಬಾರದು. ಆಸಕ್ತಿಯಿಂದ ಕೂಡಿ ಎಲ್ಲಿಯೂ ವಾಸಮಾಡಬಾರದು. ಯಾವುದೇ ಸ್ಥಳದಲ್ಲಿಯೂ ಆಸಕ್ತಿಯನ್ನು ಹೊಂದಬಾರದು.

ಪೂತಾಭಿರದ್ಭಿರ್ನಿತ್ಯಂ ವೈ ಕಾರ್ಯಂ ಕುರ್ವೀತ ಮೋಕ್ಷವಿತ್ ।
ಉಪಸ್ಪೃಶೇದುದ್ಧೃತಾಭಿರದ್ಭಿಶ್ಚ ಪುರುಷಃ ಸದಾ ॥೨೮॥

ಮೋಕ್ಷಧರ್ಮವನ್ನು ತಿಳಿದ ಸಂನ್ಯಾಸಿಯು ಯಾವಾಗಲೂ ಶೋಧಿಸಲ್ಪಟ್ಟ ಪವಿತ್ರವಾದ ನೀರಿನಿಂದಲೇ ಕರ್ಮಗಳನ್ನು ಮಾಡಬೇಕು. ಬಾವಿಯಿಂದ ಸೇದಿತಂದ ಅಥವಾ ನದಿಯಿಂದ ತಂದ ನೀರಿನಿಂದಲೇ ಸಂನ್ಯಾಸಿಯು ಪ್ರತಿನಿತ್ಯವೂ ಸ್ನಾನ-ಆಚಮನಾದಿಗಳನ್ನು ಮಾಡಬೇಕು.

ಅಹಿಂಸಾ ಬ್ರಹ್ಮಚರ್ಯಂ ಚ ಸತ್ಯಮಾರ್ಜವಮೇವ ಚ ।
ಅಕ್ರೋಧಶ್ಚಾನಸೂಯಾ ಚ ದಮೋ ನಿತ್ಯಮಪೈಶುನಮ್ ।
ಅಷ್ಟಸ್ವೇತೇಷು ಯುಕ್ತಃ ಸ್ಯಾದ್ವ್ರತೇಷು ನಿಯತೇನ್ದ್ರಿಯಃ ॥೩೦॥

ಅಹಿಂಸೆ, ಬ್ರಹ್ಮಚರ್ಯ, ಸತ್ಯ, ಸರಳತೆ, ಕ್ರೋಧವಿಲ್ಲದಿರುವುದು, ದೋಷದೃಷ್ಟಿಯಿಲ್ಲದಿರುವುದು, ಇಂದ್ರಿಯಸಂಯಮ, ಚಾಡಿಹೇಳದಿರುವುದು–ಈ ಎಂಟು ವ್ರತಗಳಲ್ಲಿ ನಿರತನಾಗಿರಬೇಕು. ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಿರಬೇಕು.

ಅಪಾಪಮಶಠಂ ವೃತ್ತಮಜಿಹ್ಮಂ ನಿತ್ಯಮಾಚರೇತ್ ।
ಜೋಷಯೇತ ಸದಾ ಭೋಜ್ಯಂ ಗ್ರಾಸಮಾಗತಮಸ್ಪೃಹಃ ॥೩೧॥

ಪಾಪರಹಿತವಾದ, ಮೋಸವಿಲ್ಲದ, ಕುಟಿಲತೆಯಿಲ್ಲದ ವ್ಯವಹಾರವನ್ನೇ ಮಾಡಬೇಕು. ಯಾವ ಅನ್ನವು ಅಪ್ರಾರ್ಥಿತವಾಗಿ ಲಬ್ಧವಾಗುವುದೋ ಅದನ್ನು ಮಾತ್ರವೇ ಸ್ವೀಕರಿಸಬೇಕು. ಅದಕ್ಕಾಗಿ ಆಸೆಪಡಬಾರದು.

ಯಾತ್ರಾ ಮಾತ್ರಂ ಚ ಭುಞ್ಜೀತ ಕೇವಲಂ ಪ್ರಾಣಯಾತ್ರಿಕಮ್ ।
ಧರ್ಮಲಬ್ಧಮಥಾಶ್ನೀಯಾನ್ನ ಕಾಮಮನುವರ್ತಯೇತ್ ॥೩೨॥

ಪ್ರಾಣಯಾತ್ರೆಯ ನಿರ್ವಾಹಕ್ಕೆ ಎಷ್ಟು ಅವಶ್ಯಕವೋ ಅಷ್ಟನ್ನು (ಅನ್ನವನ್ನು) ಮಾತ್ರವೇ ತಿನ್ನಬೇಕು. ಅದರಲ್ಲಿಯೂ ಧರ್ಮದಿಂದ ಲಭಿಸಿದುದನ್ನು ಮಾತ್ರವೇ ತಿನ್ನಬೇಕು. ಮನಸ್ಸಿನ ಆಸೆಯನ್ನು ಅನುಸರಿಸಿ ಸಿಕ್ಕಿದುದನ್ನು ತಿನ್ನಬಾರದು.

ಗ್ರಾಸಾದಾಚ್ಛಾದನಾದನ್ಯನ್ನ ಗೃಹ್ಣೀಯಾತ್ಕಥಂಚನ।
ಯಾವದಾಹಾರಯೇತ್ತಾವತ್ಪ್ರತಿಗೃಹ್ಣೀತ ನಾಧಿಕಮ್ ॥೩೩॥

ಪ್ರಾಣಧಾರಣೆಗಾಗಿ ಬೇಕಾದಷ್ಟು ಅನ್ನ, ಶರೀರವನ್ನು ಮುಚ್ಚಿಕೊಳ್ಳಲು ಬೇಕಾದಷ್ಟು ವಸ್ತ್ರ–ಇವೆರಡನ್ನೂ ಬಿಟ್ಟು ಬೇರೆ ಯಾವುದನ್ನೂ ಸಂನ್ಯಾಸಿಯಾದವನು ಪ್ರತಿಗ್ರಹಿಸಬಾರದು. ಭಿಕ್ಷೆಯನ್ನು ಕೂಡ ಹೊಟ್ಟೆಗೆ ಎಷ್ಟು ಬೇಕಾಗುವುದೋ ಅಷ್ಟನ್ನು ಮಾತ್ರವೇ ಪಡೆದುಕೊಳ್ಳಬೇಕು. ಬೇಕಾದುದಕ್ಕಿಂತಲೂ ಅಧಿಕವಾಗಿ ಅನ್ನವನ್ನು ಸಂಗ್ರಹಿಸಬಾರದು.

ಪರೇಭ್ಯೋ ನ ಪ್ರತಿಗ್ರಾಹ್ಯಂ ನ ಚ ದೇಯಂ ಕದಾಚನ ।
ದೈನ್ಯಭಾವಾಚ್ಚ ಭೂತಾನಾಂ ಸಂವಿಭಜ್ಯ ಸದಾ ಬುಧಃ ॥೩೪॥

ಬುದ್ಧಿವಂತನಾದ ಸಂನ್ಯಾಸಿಯು ಬೇರೆಯವರಿಗಾಗಿ ಭಿಕ್ಷೆಯನ್ನು ಬೇಡಬಾರದು. ಬೇರೆಯವರಿಂದ ಯಾವುದನ್ನೂ (ದಾನಾದಿಗಳನ್ನು) ಪ್ರತಿಗ್ರಹಿಸಬಾರದು. ಪ್ರಾಣಿಗಳ ಮೇಲಿನ ದಯಾಭಾವದಿಂದ ತನ್ನಲ್ಲಿರುವುದನ್ನು ಹಂಚಿಕೊಡಲೂ ಹೋಗಬಾರದು.

ನಾದದೀತ ಪರಸ್ವಾನಿ ನ ಗೃಹ್ಣೀಯಾದಯಾಚಿತಃ ।
ನ ಕಿಂಚಿದ್ವಿಷಯಂ ಭುಕ್ತ್ವಾ ಸ್ಪೃಹಯೇತ್ತಸ್ಯ ವೈ ಪುನಃ ॥೩೫॥

ಬೇರೆಯವರ ಸ್ವತ್ತನ್ನು ತೆಗೆದುಕೊಳ್ಳಬಾರದು. ಯಾಚಿಸದೇ ಬಂದ ವಸ್ತುವನ್ನು ಪರಿಗ್ರಹಿಸಬಾರದು. ಯಾವುದಾದರೂ ಒಳ್ಳೆಯ ವಸ್ತುವನ್ನು ಉಪಭೋಗಿಸಿದನಂತರ ಪುನಃ ಅಂತಹುದನ್ನೇ ಪಡೆದುಕೊಳ್ಳಬೇಕೆಂದು ಆಸೆಪಡಬಾರದು.

ಮೃದಮಾಪಸ್ತಥಾನ್ನಾನಿ ಪತ್ರಪುಷ್ಪಫಲಾನಿ ಚ ।
ಅಸಂವೃತಾನಿ ಗೃಹ್ಣೀಯಾತ್ಪ್ರವೃತ್ತಾನಿ ಚ ಕಾರ್ಯವಾನ್ ॥೩೬॥

ಮಣ್ಣು, ನೀರು, ಅನ್ನ, ಪತ್ರ, ಪುಷ್ಪ ಮತ್ತು ಫಲಗಳು ಬೇರೆಯವರಿಗೆ ಸೇರಿಲ್ಲದಿದ್ದರೆ ಕಾರ್ಯಶೀಲನಾದ ಸಂನ್ಯಾಸಿಯು ಅವಶ್ಯಕತೆಯು ಒದಗಿಬಂದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳಬಹುದು.

ನ ಶಿಲ್ಪಜೀವಿಕಾಂ ಜೀವೇದ್ಧಿರಣ್ಯಂ ನೋತ ಕಾಮಯೇತ್ ।
ನದ್ವೇಷ್ಟಾ ನೋಪದೇಷ್ಟಾ ಚ ಭವೇಚ್ಚ ನಿರುಪಸ್ಕೃತಃ ॥೩೭॥

ಸಂನ್ಯಾಸಿಯಾದವನು ಶಿಲ್ಪಕಾರ್ಯವನ್ನು ಮಾಡಿ ಅದರಿಂದ ಜೀವನ ನಿರ್ವಹಣೆಮಾಡಬಾರದು. ಚಿನ್ನಕ್ಕೆ ಆಸೆಪಡಬಾರದು. ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳಬಾರದು. ಯಾರಿಗೂ ಉಪದೇಶಕ ನಾಗಬಾರದು. ಯಾವುದನ್ನೂ ಸಂಗ್ರಹಿಸಬಾರದು ಅಥವಾ ಅಲಂಕಾರಮಾಡಿಕೊಳ್ಳಬಾರದು.

ಶ್ರದ್ಧಾಪೂತಾನಿ ಭುಂಜೀತ ನಿಮಿತ್ತಾನಿ ಚ ವರ್ಜಯೇತ್ ।
ಸುಧಾವೃತ್ತಿರಸಕ್ತಶ್ಚ ಸರ್ವಭೂತೈರಸಂವಿದಮ್ ॥೩೮॥

ಶ್ರದ್ಧೆಯಿಂದ ಸಿದ್ಧಪಡಿಸಿದ ಪವಿತ್ರವಾದ ಅನ್ನವನ್ನು ತಿನ್ನಬೇಕು. ಶುಭಾಶುಭನಿಮಿತ್ತಗಳನ್ನು ವರ್ಜಿಸಬೇಕು. (ಶಕುನಗಳನ್ನು ನೋಡಬಾರದು. ಹೇಳಬಾರದು. ಅವುಗಳಿಗೆ ಗಮನಕೊಡಬಾರದು. ಅಥವಾ ನಿಮಿತ್ತಗಳಿಂದ (ದೇವ-ಪಿತೃಪ್ರೀತ್ಯರ್ಥವಾಗಿ) ಕೊಡುವ ಅನ್ನವನ್ನು ತಿನ್ನಬಾರದು.) ಎಲ್ಲರೊಡನೆಯೂ ಅಮೃತಕ್ಕೆ ಸಮಾನವಾದ ಮಧುರವಾದ ವ್ಯವಹಾರ ವನ್ನಿಟ್ಟುಕೊಳ್ಳಬೇಕು. ಆದರೆ ಯಾರ ಮೇಲೂ ಅನುರಾಗವಾಗಲೀ ಆಸಕ್ತಿಯಾಗಲೀ ಇರಬಾರದು. ಯಾವುದೇ ಪ್ರಾಣಿ ಯನ್ನಾಗಲೀ ಹೆಚ್ಚು ಪರಿಚಯಮಾಡಿಕೊಳ್ಳಬಾರದು. (ಹೆಚ್ಚು ಪರಿಚಯವು ಆಸಕ್ತಿಗೆ ಕಾರಣವಾಗುತ್ತದೆ.)

ಆಶೀರ್ಯುಕ್ತಾನಿ ಸರ್ವಾಣಿ ಹಿಂಸಾಯುಕ್ತಾನಿ ಯಾನಿ ಚ ।
ಲೋಕಸಂಗ್ರಹಧರ್ಮಂ ಚ ನೈವ ಕುರ್ಯಾನ್ನ ಕಾರಯೇತ್ ॥೩೯॥

ಸಂನ್ಯಾಸಿಯು ಕಾಮ್ಯಕರ್ಮಗಳನ್ನೂ, ಹಿಂಸೆಯಿಂದ ಯುಕ್ತವಾದ ಕರ್ಮಗಳನ್ನೂ, ಲೋಕಸಂಗ್ರಹಕರ್ಮಗಳನ್ನೂ ತಾನೂ ಮಾಡಬಾರದು. ಬೇರೆಯವರಿಂದಲೂ ಮಾಡಿಸಬಾರದು.

ಸರ್ವಭಾವಾನತಿಕ್ರಮ್ಯ ಲಘುಮಾತ್ರಃ ಪರಿವ್ರಜೇತ್ ।
ಸಮಃ ಸರ್ವೇಷು ಭೂತೇಷು ಸ್ಥಾವರೇಷು ಚರೇಷು ಚ ॥೪೦॥

ಸಮಸ್ತಪದಾರ್ಥಗಳಲ್ಲಿಯೂ ಆಸಕ್ತಿಯನ್ನು ಪರಿತ್ಯಜಿಸಿ, ಅಲ್ಪಸಂತುಷ್ಟ ನಾಗಿ ಭೂಮಿಯ ಎಲ್ಲೆಡೆಗಳಲ್ಲಿಯೂ ಸಂಚರಿಸುತ್ತಿರಬೇಕು. ಎಲ್ಲ ಚರಾಚರಪ್ರಾಣಿಗಳ ವಿಷಯದಲ್ಲಿಯೂ ಸಮಭಾವದಿಂದಿರಬೇಕು.

ಪರಂ ನೋದ್ವೇಜಯೇತ್ಕಂಚಿನ್ನ ಚ ಕಸ್ಯಚಿದುದ್ವಿಜೇತ್ ।
ವಿಶ್ವಾಸ್ಯಃ ಸರ್ವಭೂತಾನಾಮಗ್ರ್ಯೋ ಮೋಕ್ಷವಿದುಚ್ಯತೇ ॥೪೧॥

ಯಾವುದೇ ಪ್ರಾಣಿಗೂ ಉದ್ವೇಗವನ್ನುಂಟುಮಾಡಬಾರದು. ಯಾವುದೇ ಸಮಯದಲ್ಲಿಯೂ ತಾನೂ ಕೂಡ ಇತರರಿಂದ ಉದ್ವೇಗಗೊಳ್ಳಬಾರದು. ಎಲ್ಲ ಪ್ರಾಣಿಗಳ ವಿಶ್ವಾಸಕ್ಕೂ ಪಾತ್ರನಾಗಿರಬೇಕು. ಅಂತಹವನನ್ನು ಸರ್ವಶ್ರೇಷ್ಠನೆಂದೂ ಮೋಕ್ಷಧರ್ಮವನ್ನು ತಿಳಿದವನೆಂದೂ ಹೇಳುತ್ತಾರೆ.

ಅನಾಗತಂ ಚ ನ ಧ್ಯಾಯೇನ್ನಾತೀತಮನುಚಿನ್ತಯೇತ್।
ವರ್ತಮಾನಮುಪೇಕ್ಷೇತ ಕಾಲಾಕಾಂಕ್ಷೀ ಸಮಾಹಿತಃ ॥೪೨॥

ಸಂನ್ಯಾಸಿಯಾದವನು ಮುಂದೇನಾಗುವುದೆಂಬುದನ್ನು ಯೋಚಿಸಬಾರದು. ಹಿಂದೆ ಕಳೆದುಹೋದುದನ್ನು ಚಿಂತಿಸಬಾರದು. ಈಗ (ವರ್ತಮಾನಕಾಲದಲ್ಲಿ) ನಡೆಯುವುದನ್ನೂ ಉಪೇಕ್ಷಿಸಬೇಕು. ಯಾವಾಗಲೂ ಪರಬ್ರಹ್ಮನಲ್ಲಿಯೇ ಏಕಾಗ್ರಚಿತ್ತನಾಗಿರುತ್ತಾ ಆತ್ಮಸಾಕ್ಷಾತ್ಕಾರದ ಕಾಲವನ್ನು ಪ್ರತೀಕ್ಷಿಸುತ್ತಿರಬೇಕು.

ನ ಚಕ್ಷುಷಾ ನ ಮನಸಾ ನ ವಾಚಾ ದೂಷಯೇತ್ಕ್ವಚಿತ್ ।
ನ ಪ್ರತ್ಯಕ್ಷಂ ಪರೋಕ್ಷಂ ವಾ ಕಿಂಚಿದ್ದುಷ್ಟಂ ಸಮಾಚರೇತ್ ॥೪೩॥

ಕಣ್ಣಿನಿಂದಾಗಲೀ, ಮಾತಿನಿಂದಾಗಲೀ, ಮನಸ್ಸಿನಿಂದಾಗಲೀ ಎಲ್ಲಿಯೂ ಯಾರನ್ನೂ ದೂಷಿಸಬಾರದು. ಪ್ರತ್ಯಕ್ಷವಾಗಿಯೇ ಆಗಲೀ ಪರೋಕ್ಷವಾಗಿಯೇ ಆಗಲೀ ಯಾವುದೇವಿಧವಾದ ಕೆಟ್ಟಕೆಲಸವನ್ನೂ ಮಾಡಬಾರದು.

ಇನ್ದ್ರಿಯಾಣ್ಯುಪಸಂಹೃತ್ಯ ಕೂರ್ಮೋಽಙ್ಗಾನೀವ ಸರ್ವಶಃ ।
ಕ್ಷೀಣೇನ್ದ್ರಿಯಮನೋಬುದ್ಧಿರ್ನಿರೀಹಃ ಸರ್ವತತ್ತ್ವವಿತ್ ॥೪೪॥

ಆಮೆಯು ಎಲ್ಲಕಡೆಗಳಿಂದಲೂ ತನ್ನ ಅಂಗಗಳನ್ನು ಒಳಕ್ಕೆ ಸೆಳೆದುಕೊಳ್ಳುವಂತೆ–ಸರ್ವತತ್ತ್ವಗಳನ್ನೂ ತಿಳಿದ ಸಂನ್ಯಾಸಿಯು ಇಂದ್ರಿಯಗಳನ್ನು ಉಪಸಂಹರಿಸಿಕೊಂಡು (ವಿಷಯಗಳಿಂದ ಹಿಂದಕ್ಕೆ ತೆಗೆದುಕೊಂಡು) ಯಾವ ಅಪೇಕ್ಷೆಯೂ ಇಲ್ಲದವನಾಗಿ ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳನ್ನು ದುರ್ಬಲಗೊಳಿಸಬೇಕು.

ನಿರ್ದ್ವನ್ದ್ವೋ ನಿರ್ನಮಸ್ಕಾರೋ ನಿಃಸ್ವಾಹಾಕಾರ ಏವ ಚ ।
ನಿರ್ಮಮೋ ನಿರಹಂಕಾರೋ ನಿರ್ಯೋಗಕ್ಷೇಮ ಆತ್ಮವಾನ್ ॥೪೫॥

ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿರಬೇಕು. ಯಾವನಿಗೂ ತಲೆತಗ್ಗಿಸಬಾರದು. ಅಗ್ನಿಹೋತ್ರಾದಿಗಳನ್ನು ಪರಿತ್ಯಜಿಸಬೇಕು. ಅಹಂಕಾರ-ಮಮಕಾರರಹಿತನಾಗಿರಬೇಕು. ತನ್ನ ಯೋಗಕ್ಷೇಮದ ವಿಷಯವಾಗಿ ಚಿಂತಿಸಬಾರದು. ಮನಸ್ಸನ್ನು ನಿಗ್ರಹಿಸಬೇಕು.

ನಿರಾಶೀರ್ನಿರ್ಗುಣಃ ಶಾನ್ತೋ ನಿರಾಸಕ್ತೋ ನಿರಾಶ್ರಯಃ ।
ಆತ್ಮಸಙ್ಗೀ ಚ ತತ್ತ್ವಜ್ಞೋ ಮುಚ್ಯತೇ ನಾತ್ರ ಸಂಶಯಃ ॥೪೬॥

ನಿಷ್ಕಾಮನೂ, ನಿರ್ಗುಣನೂ, ಶಾಂತನೂ, ಅನಾಸಕ್ತನೂ, ನಿರಾಶ್ರ

ಯನೂ, ಆತ್ಮಪರಾಯಣನೂ ಮತ್ತು ಅಧ್ಯಾತ್ಮತತ್ತ್ವವನ್ನು ತಿಳಿದವನೂ ಆದ ಸಂನ್ಯಾಸಿಯು ಸಂಸಾರಬಂಧನದಿಂದ ಮುಕ್ತನಾಗುವನೆಂಬುದರಲ್ಲಿ ಸಂಶಯವೇ ಇಲ್ಲ.

ಅಪಾದಪಾಣಿಪೃಷ್ಠಂ ತದಶಿರಸ್ಕಮನೂದರಮ್ ।
ಪ್ರಹೀಣಗುಣಕರ್ಮಾಣಂ ಕೇವಲಂ ವಿಮಲಂ ಸ್ಥಿರಮ್ ॥೪೭॥
ಅಗನ್ಧಮರಸಸ್ಪರ್ಶಮರೂಪಾಶಬ್ದಮೇವ ಚ ।
ಅನುಗಮ್ಯಮನಾಸಕ್ತಮಮಾಂಸಮಪಿ ಚೈವ ಯತ್ ॥೪೮॥
ನಿಶ್ಚಿನ್ತಮವ್ಯಯಂ ದೈವಂ ಕೂಟಸ್ಥಮಪಿ ಸರ್ವದಾ ।
ಸರ್ವಭೂತಸ್ಥಮಾತ್ಮಾನಂ ಯೇ ಪಶ್ಯನ್ತಿ ನ ತೇ ಮೃತಾಃ ॥೪೯॥

ಯಾವ ಮನುಷ್ಯರು, ಕೈ-ಕಾಲು-ಬೆನ್ನುಗಳಾಗಲೀ, ಶಿರಸ್ಸು ಮತ್ತು ಹೊಟ್ಟೆಗಳಾಗಲೀ ಇಲ್ಲದ, ಗುಣಕರ್ಮಗಳಿಂದ ರಹಿತನಾದ, ಅದ್ವಿತೀಯನಾದ, ನಿರ್ಮಲನಾದ, ಸ್ಥಿರನಾದ, ಗಂಧ-ರಸ-ರೂಪ-ಶಬ್ದಗಳಿಂದ ರಹಿತನಾದ, ತಿಳಿಯಲ್ಪಡತಕ್ಕವನಾದ, ಅನಾಸಕ್ತನಾದ, ಅಸ್ಥಿ-ಮಾಂಸಗಳಿಂದ ರಹಿತನಾದ (ಅಶರೀರನಾದ), ನಿಶ್ಚಿಂತನಾದ, ಅವಿನಾಶಿಯಾದ, ದಿವ್ಯನಾದ, ನಿಶ್ಚಲನಾದ, ಸಕಲಪ್ರಾಣಿಗಳಲ್ಲಿಯೂ ಇರುವ ಆತ್ಮನನ್ನು ತಮ್ಮ ಹೃದಯಗುಹೆಗಳಲ್ಲಿ ಕಂಡುಕೊಳ್ಳುವರೋ–ಅಂತಹವರಿಗೆ ಮರಣವಿಲ್ಲ.

ನ ತತ್ರ ಕ್ರಮತೇ ಬುದ್ಧಿರ್ನೇನ್ದ್ರಿಯಾಣಿ ನ ದೇವತಾಃ ।
ವೇದಾ ಯಜ್ಞಾಶ್ಚ ಲೋಕಾಶ್ಚ ನ ತಪೋ ನ ವ್ರತಾನಿ ಚ ॥೫೦॥
ಯತ್ರ ಜ್ಞಾನವತಾಂ ಪ್ರಾಪ್ತಿರಲಿಙ್ಗಗ್ರಹಣಾ ಸ್ಮೃತಾ ।
ತಸ್ಮಾದಲಿಙ್ಗಧರ್ಮಜ್ಞೋ ಧರ್ಮತತ್ತ್ವಮುಪಾಚರೇತ್ ॥೫೧॥

ಹೃದಯಗುಹೆಯಲ್ಲಿ ಕುಳಿತಿರುವ ಪರಮಾತ್ಮನಲ್ಲಿಗೆ ಬುದ್ಧಿಯಾಗಲೀ, ಇಂದ್ರಿಯಗಳಾಗಲೀ, ದೇವತೆಗಳಾಗಲೀ ಹೋಗುವುದಿಲ್ಲ. ವೇದಗಳಾಗಲೀ, ಯಜ್ಞಗಳಾಗಲೀ, ಲೋಕಗಳಾಗಲೀ, ತಪಸ್ಸಾಗಲೀ, ವ್ರತಗಳಾಗಲೀ ಅಲ್ಲಿಗೆ ಹೋಗಲಾರವು. ಆತ್ಮವಿದರಿಗೆ ಮಾತ್ರವೇ ಅಲ್ಲಿಗೆ ಪ್ರವೇಶಿಸಲು ಅವಕಾಶವಿದೆ. ಏಕೆಂದರೆ: ಆತ್ಮನು ಬಾಹ್ಯಚಿಹ್ನೆಗಳಿಂದ ರಹಿತನಾಗಿರುವವನು. ಆದುದರಿಂದ ಹೊರಗಿನ ಗುರುತುಗಳು ಯಾವುದೂ ಇಲ್ಲದ ಆತ್ಮಧರ್ಮವನ್ನು ತಿಳಿದಿರುವವನು ಮಾತ್ರವೇ ಆತ್ಮತತ್ತ್ವದ ಕಡೆಗೆ ಹೋಗುತ್ತಾನೆ.

ಗೂಢಧರ್ಮಾಶ್ರಿತೋ ವಿದ್ವಾನ್ವಿಜ್ಞಾನಚರಿತಂ ಚರೇತ್ ।
ಅಮೂಢೋ ಮೂಢರೂಪೇಣ ಚರೇದ್ಧರ್ಮಮದೂಷಯನ್ ॥೫೨॥

ಅತ್ಯಂತರಹಸ್ಯವಾದ ಬ್ರಹ್ಮತತ್ತ್ವರೂಪವಾದ ಧರ್ಮವನ್ನು ಆಶ್ರಯಿಸಿರುವ ವಿದ್ವಾಂಸನು ಅಜ್ಞಾತನಾಗಿಯೇ ಇದ್ದುಕೊಂಡು ಸಾಧನೆಯನ್ನು ಮಾಡಬೇಕು. ಮೂರ್ಖನಾಗಿರದಿದ್ದರೂ ಮೂರ್ಖನಂತೆ ವ್ಯವಹರಿಸಬೇಕು. ಆದರೆ ಹಾಗೆ ವ್ಯವಹರಿಸುವಾಗ ಧರ್ಮದ ದೂಷಣೆಯನ್ನು ಮಾಡಬಾರದು. (ಧರ್ಮವನ್ನು ಕೆಡಿಸಬಾರದು.)

ತಥೈನಮವಮನ್ಯೇರನ್ಪರೇ ಸತತಮೇವ ಹಿ ।
ಯಥಾ ವೃತ್ತಶ್ಚರೇಚ್ಛಾನ್ತಃ ಸತಾಂ ಧರ್ಮಾನಕುತ್ಸಯನ್ ।
ಯ ಏವಂ ವೃತ್ತಸಂಪನ್ನಃ ಸ ಮುನಿಃ ಶ್ರೇಷ್ಠ ಉಚ್ಯತೇ ॥೫೩॥

ಹಾಗಿದ್ದರೆ ಸಮಾಜದ ಇತರ ಜನರು ಇವನನ್ನು ಅನಾದರಣೆಯಿಂದ ಕಾಣಬಹುದು. ಆದರೂ ಇವನು ಶಾಂತನಾಗಿದ್ದುಕೊಂಡು ಅಂತಹ ಕಾರ್ಯವನ್ನು ಮಾಡಬೇಕು. ಆದರೆ ಸತ್ಪುರುಷರ ಧರ್ಮವನ್ನು ನಿಂದಿಸಬಾರದು. ಇಂತಹ ವ್ಯವಹಾರಸಂಪನ್ನನನ್ನು ಶ್ರೇಷ್ಠನಾದ ಮುನಿಯೆಂದು ಹೇಳುತ್ತಾರೆ.

ಇನ್ದ್ರಿಯಾಣೀನ್ದ್ರಿಯಾರ್ಥಾಶ್ಚ ಮಹಾಭೂತಾನಿ ಪಞ್ಚ ಚ ।
ಮನೋ ಬುದ್ಧಿರಹಂಕಾರಮವ್ಯಕ್ತಂ ಪುರುಷಂ ತಥಾ ॥೫೪॥

ಏತತ್ಸರ್ವಂ ಪ್ರಸಂಖ್ಯಾಯ ಯಥಾವತ್ತತ್ತ್ವನಿಶ್ಚಯಾತ್ ।
ತತಃ ಸ್ವರ್ಗಮವಾಪ್ನೋತಿ ವಿಮುಕ್ತಃ ಸರ್ವಬನ್ಧನೈಃ ॥೫೫॥

ಯಾವ ಮನುಷ್ಯನು–ಇಂದ್ರಿಯಗಳು, ಅವುಗಳಿಗೆ ಸಂಬಂಧಿಸಿದ ವಿಷಯಗಳು, ಐದು ಮಹಾಭೂತಗಳು, ಮನಸ್ಸು-ಬುದ್ಧಿ- ಅಹಂಕಾರಗಳು, ಅವ್ಯಕ್ತಪ್ರಕೃತಿ ಮತ್ತು ಪುರುಷ–ಈ ಎಲ್ಲವನ್ನೂ ಚೆನ್ನಾಗಿ ವಿಚಾರಮಾಡಿ ಅವುಗಳ ತತ್ತ್ವವನ್ನು ಯಥಾವತ್ತಾಗಿ ತಿಳಿಯುವನೋ–ಅವನು ಸಕಲವಿಧವಾದ ಬಂಧನಗಳಿಂದಲೂ ಮುಕ್ತನಾಗಿ ಸ್ವರ್ಗವನ್ನು (ಮೋಕ್ಷವನ್ನು) ಹೊಂದುತ್ತಾನೆ.

ಏತಾವದನ್ತವೇಲಾಯಾಂ ಪರಿಸಂಖ್ಯಾಯ ತತ್ತ್ವವಿತ್ ।
ಧ್ಯಾಯೇದೇಕಾನ್ತಮಾಸ್ಥಾಯ ಮುಚ್ಯತೇಽಥ ನಿರಾಶ್ರಯಃ ॥೫೬॥

ನಿರ್ಮುಕ್ತಃ ಸರ್ವಸಙ್ಗೇಭ್ಯೋ ವಾಯುರಾಕಾಶಗೋ ಯಥಾ ।
ಕ್ಷೀಣಕೋಶೋ ನಿರಾತಙ್ಕಸ್ತಥೇದಂ ಪ್ರಾಪ್ನುಯಾತ್ಪರಮ್ ॥೫೭॥

ಬ್ರಹ್ಮತತ್ತ್ವವನ್ನು ತಿಳಿದ ಯಾವ ಮನುಷ್ಯನು ಕಡೆಗಾಲದಲ್ಲಿ ನಿಯಮಪೂರ್ವಕವಾಗಿ ಏಕಾಂತದಲ್ಲಿ ಕುಳಿತು ಹೃದಯಕಮಲದಲ್ಲಿರುವ ಪರಮಾತ್ಮನನ್ನು ಧ್ಯಾನಮಾಡುವನೋ–ಅಂತಹವನು ಆಕಾಶದಲ್ಲಿ ಸಂಚರಿಸುವ ವಾಯುವಿನಂತೆ–ಎಲ್ಲ ವಿಧವಾದ ಆಸಕ್ತಿಗಳಿಂದಲೂ ಮುಕ್ತನಾಗಿ ಪಂಚಕೋಶಗಳಿಂದ ರಹಿತನಾಗಿ, ನಿರಾತಂಕನಾಗಿ ಮತ್ತು ನಿರಾಶ್ರಯನಾಗಿ ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾನೆ."

೪೬ನೆಯ ಅಧ್ಯಾಯವು ಮುಗಿಯಿತು.

೪೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಮುಕ್ತಿಯ ಸಾಧನಗಳು: ದೇಹರೂಪಿಯಾದ ವೃಕ್ಷವನ್ನು ಜ್ಞಾನಖಡ್ಗದಿಂದ ಕತ್ತರಿಸುವ ವಿಧಾನ

ಬ್ರಹ್ಮನು ಹೇಳುತ್ತಾನೆ:

ಸಂನ್ಯಾಸಂ ತಪ ಇತ್ಯಾಹುರ್ವೃದ್ಧಾ ನಿಶ್ಚಿತವಾದಿನಃ ।
ಬ್ರಹ್ಮಣಾ ಬ್ರಹ್ಮಯೋನಿಸ್ಥಾ ಜ್ಞಾನಂ ಬ್ರಹ್ಮ ಪರಂ ವಿದುಃ ॥೧॥

"ಇದು ಹೀಗೆಯೇ ಸರಿ–ಎಂದು ನಿರ್ಣಯಮಾಡಿ ಹೇಳಲು ಸಮರ್ಥರಾದ, ವೇದಗಳಿಗೆ ಕಾರಣರೂಪರಾದ, ಪರಮಾತ್ಮನಲ್ಲಿಯೇ ಸ್ಥಿರಗೊಳಿಸಿದ ಮನಸ್ಸುಳ್ಳ, ಜ್ಞಾನವೃದ್ಧರಾದ ಬ್ರಾಹ್ಮಣರು ಸಂನ್ಯಾಸವೇ ತಪಸ್ಸೆಂದು ಹೇಳುತ್ತಾರೆ. ಜ್ಞಾನವೇ ಶ್ರೇಷ್ಠವಾದುದೆಂದೂ ಪರಬ್ರಹ್ಮಸ್ವರೂಪವೆಂದೂ ಹೇಳುತ್ತಾರೆ.

ಅತಿದೂರಾತ್ಮಕಂ ಬ್ರಹ್ಮ ವೇದವಿದ್ಯಾವ್ಯಪಾಶ್ರಯಮ್ ।
ನಿರ್ದ್ವನ್ದ್ವಂ ನಿರ್ಗುಣಂ ನಿತ್ಯಮಚಿನ್ತ್ಯಗುಣಮುತ್ತಮಮ್ ।
ಜ್ಞಾನೇನ ತಪಸಾ ಚೈವ ಧೀರಾಃ ಪಶ್ಯನ್ತಿ ತತ್ಪರಮ್ ॥೨॥

ವೇದವಿದ್ಯೆಗೆ ಆಧಾರಭೂತವಾದ ಈ ಪರಬ್ರಹ್ಮತತ್ತ್ವವು ಅಜ್ಞಾನಿಗಳಿಗೆ ಬಹಳ ದೂರವಾಗಿದೆ. ಅದು ಸುಖ-ದುಃಖಾದಿ ದ್ವಂದ್ವರಹಿತವೂ,

ಸತ್ತ್ವಾದಿ ಗುಣರಹಿತವೂ, ಶಾಶ್ವತವೂ, ಯೋಚಿಸಲು ಸಾಧ್ಯವಾಗದಷ್ಟು ಗುಣಗಳಿಂದ ಕೂಡಿದುದೂ, ಸರ್ವಶ್ರೇಷ್ಠವೂ ಆಗಿದೆ. ಧೀರರಾದ ಪುರುಷರು ಜ್ಞಾನದಿಂದಲೂ ಮತ್ತು ಸಂನ್ಯಾಸರೂಪವಾದ ತಪಸ್ಸಿನಿಂದಲೂ ಪರಬ್ರಹ್ಮಪರಮಾತ್ಮನನ್ನು ತಮ್ಮ ಹೃದಯಗುಹೆಯಲ್ಲಿ ಕಂಡುಕೊಳ್ಳುತ್ತಾರೆ.

ನಿರ್ಣಿಕ್ತಮನಸಃ ಪೂತಾ ವ್ಯುತ್ಕ್ರಾನ್ತರಜಸೋಽಮಲಾಃ ।
ತಪಸಾ ಕ್ಷೇಮಮಧ್ವಾನಂ ಗಚ್ಛನ್ತಿ ಪರಮೇಶ್ವರಮ್ ॥೩॥

ಸಂನ್ಯಾಸನಿರತಾ ನಿತ್ಯಂ ಯೇ ಚ ಬ್ರಹ್ಮವಿದೋ ಜನಾಃ ॥೪॥

ತೊಳೆಯಲ್ಪಟ್ಟ ಮನಸ್ಸುಳ್ಳ (ಪರಿಶುದ್ಧವಾದ ಮನಸ್ಸಿನಿಂದ ಕೂಡಿರುವ), ಸಂನ್ಯಾಸಧರ್ಮದಲ್ಲಿಯೇ ನಿರತರಾದ, ಬ್ರಹ್ಮವಿದರಾದ ಸಾಧಕರು ತಪಸ್ಸಿನ ಮೂಲಕವಾಗಿ ಕ್ಷೇಮಕರವಾದ ಮಾರ್ಗವನ್ನು ಆಶ್ರಯಿಸಿ ಪರಮೇಶ್ವರನನ್ನು ಹೊಂದುತ್ತಾರೆ.

ತಪಃ ಪ್ರದೀಪ ಇತ್ಯಾಹುರಾಚಾರೋ ಧರ್ಮಸಾಧಕಃ ।
ಜ್ಞಾನಂ ವೈ ಪರಮಂ ವಿದ್ಯಾತ್ಸಂನ್ಯಾಸಂ ತಪ ಉತ್ತಮಮ್ ॥೫॥

ಧರ್ಮಸಾಧಕರು ತಪಸ್ಸನ್ನು–ಪರಮಾತ್ಮತತ್ತ್ವವನ್ನು ಪ್ರಕಾಶನಗೊಳಿಸುವ ದೀಪವೆಂದು ಹೇಳುತ್ತಾರೆ. ಆಚಾರವೇ ಮೋಕ್ಷಧರ್ಮದ ಸಾಧನವಾಗಿದೆ. ಜ್ಞಾನವೇ ಶ್ರೇಷ್ಠತಮವಾದ ಪದಾರ್ಥವು. ಸಂನ್ಯಾಸ ಧರ್ಮಾಚರಣೆಯೇ ಶ್ರೇಷ್ಠವಾದ ತಪಸ್ಸಾಗಿದೆ.

ಯಸ್ತು ವೇದ ನಿರಾಧಾರಂ ಜ್ಞಾನಂ ತತ್ತ್ವವಿನಿಶ್ಚಯಾತ್।
ಸರ್ವಭೂತಸ್ಥಮಾತ್ಮಾನಂ ಸ ಸರ್ವಗತಿರಿಷ್ಯತೇ ॥೬॥

ಯಾವನು ಬ್ರಹ್ಮತತ್ತ್ವವು ಯಾವುದೆಂಬುದನ್ನು ಸಂಪೂರ್ಣವಾಗಿ ವಿವೇಚಿಸಿ ನಿಶ್ಚಯಿಸಿ, ಜ್ಞಾನಸ್ವರೂಪನಾದ, ನಿರಾಧಾರನಾದ, ಸರ್ವಪ್ರಾಣಿಗಳ ಹೃದಯದಲ್ಲಿಯೂ ವಿರಾಜಮಾನನಾಗಿರುವ ಆತ್ಮನನ್ನು ತಿಳಿದುಕೊಳ್ಳುವನೋ–ಅವನು ಸರ್ವವ್ಯಾಪಕನಾಗುತ್ತಾನೆ.

ಯೋ ವಿದ್ವಾನ್ಸಹವಾಸಂ ಚ ವಿವಾಸಂ ಚೈವ ಪಶ್ಯತಿ ।
ತಥೈವೈಕತ್ವನಾನಾತ್ವೇ ಸ ದುಃಖಾತ್ಪ್ರತಿಮುಚ್ಯತೇ ॥೭॥

ಯಾವ ವಿದ್ವಾಂಸನು ಸಂಯೋಗವನ್ನೂ ವಿಯೋಗರೂಪವನ್ನಾಗಿಯೇ ಕಾಣುವನೋ, ಹಾಗೆಯೇ ನಾನಾತ್ವದಲ್ಲಿ ಏಕತ್ವವನ್ನು ಕಾಣುವನೋ–ಅವನು ದುಃಖದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಯೋ ನ ಕಾಮಯತೇ ಕಿಂಚಿನ್ನ ಕಿಂಚಿದವಮನ್ಯತೇ ।
ಇಹ ಲೋಕಸ್ಯ ಏವೈಷ ಬ್ರಹ್ಮಭೂಯಾಯ ಕಲ್ಪತೇ ॥೮॥

ಯಾವನು ಯಾವುದೇ ವಸ್ತುವನ್ನೂ ಅಪೇಕ್ಷಿಸುವುದಿಲ್ಲವೋ, ಯಾವುದನ್ನೂ ಅವಹೇಳನಮಾಡುವುದಿಲ್ಲವೋ–ಅಂತಹವನು ಈ ಲೋಕದಲ್ಲಿಯೇ ಇದ್ದರೂ ಬ್ರಹ್ಮಸ್ವರೂಪವನ್ನು ಹೊಂದಲು ಸಮರ್ಥನಾಗುತ್ತಾನೆ.

ಪ್ರಧಾನಗುಣತತ್ತ್ವಜ್ಞಃ ಸರ್ವಭೂತಪ್ರಧಾನವಿತ್ ।
ನಿರ್ಮಮೋ ನಿರಹಂಕಾರೋ ಮುಚ್ಯತೇ ನಾತ್ರ ಸಂಶಯಃ ॥೯॥

ಯಾವನು ಸರ್ವಪ್ರಾಣಿಗಳಿಗೂ ಪ್ರಧಾನಭೂತವಾದ ಪರಬ್ರಹ್ಮ ತತ್ತ್ವವನ್ನು ತಿಳಿದಿರುವನೋ ಪ್ರಕೃತಿಯ ಗುಣ ಮತ್ತು ತತ್ತ್ವವನ್ನು ತಿಳಿದಿರುವನೋ, ಅಹಂಕಾರ-ಮಮಕಾರರಹಿತನಾಗಿರುವನೋ– ಅಂತಹವನು ಮುಕ್ತನಾಗುವನೆಂಬುದರಲ್ಲಿ ಸಂಶಯವೇ ಇಲ್ಲ.

ನಿರ್ದ್ವನ್ದ್ವೋ ನಿರ್ನಮಸ್ಕಾರೋ ನಿಃಸ್ವಧಾಕಾರ ಏವ ಚ ।
ನಿರ್ಗುಣಂ ನಿತ್ಯಮದ್ವನ್ದ್ವಂ ಪ್ರಶಮೇನೈವ ಗಚ್ಛತಿ ॥೧೦॥

ಯಾವನು ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿರುವನೋ, ಯಾರಿಗೂ ತಲೆಬಾಗುವುದಿಲ್ಲವೋ, ಪಿತೃಕಾರ್ಯಗಳನ್ನು ಮಾಡುವುದಿಲ್ಲವೋ–ಅಂತಹ ಸಂನ್ಯಾಸಿಯು ಶಾಂತಿಯಿಂದಲೇ (ಇಂದ್ರಿಯವಿಷಯಗಳನ್ನೂ ಮನಸ್ಸನ್ನೂ ಉಪಶಮನಗೊಳಿಸುವುದರಿಂದಲೇ) ನಿರ್ಗುಣನಾದ, ಶಾಶ್ವತನಾದ, ದ್ವಂದ್ವಾತೀತನಾದ ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾನೆ.

ಹಿತ್ವಾ ಗುಣಮಯಂ ಸರ್ವಂ ಕರ್ಮ ಜನ್ತುಃ ಶುಭಾಶುಭಮ್ ।
ಉಭೇ ಸತ್ಯಾನೃತೇ ಹಿತ್ವಾ ಮುಚ್ಯತೇ ನಾತ್ರ ಸಂಶಯಃ ॥೧೧॥

ಸಂನ್ಯಾಸಿಯು ತ್ರಿಗುಣಾತ್ಮಕವಾದ ಎಲ್ಲ ಶುಭಾಶುಭಕರ್ಮಗಳನ್ನೂ ಸತ್ಯಾನೃತಗಳನ್ನೂ ಬಿಟ್ಟು ಭವಬಂಧನದಿಂದ ಮುಕ್ತನಾಗುವನೆಂಬುದರಲ್ಲಿ ಸಂಶಯವೇ ಇಲ್ಲ.

ಅವ್ಯಕ್ತಯೋನಿಪ್ರಭವೋ ಬುದ್ಧಿಸ್ಕನ್ಧಮಯೋ ಮಹಾನ್ ।
ಮಹಾಹಂಕಾರವಿಟಪ ಇನ್ದ್ರಿಯಾಙ್ಕುರಕೋಟರಃ ॥೧೨॥

ಮಹಾಭೂತವಿಶಾಲಶ್ಚ ವಿಶೇಷಯತಿ ಶಾಖಿನಃ ।
ಸದಾಪತ್ರಃ ಸದಾಪುಷ್ಪಃ ಶುಭಾಶುಭಫಲೋದಯಃ ॥೧೩॥

ಆಜೀವ್ಯಃ ಸರ್ವಭೂತಾನಾಂ ಬ್ರಹ್ಮವೃಕ್ಷಃ ಸನಾತನಃ ।
ಏನಂ ಛಿತ್ತ್ವಾ ಚ ಭಿತ್ತ್ವಾ ಚ ತತ್ತ್ವಜ್ಞಾನಾಸಿನಾ ಬುಧಃ ॥೧೪॥

ಹಿತ್ವಾ ಸಙ್ಗಮಯಾನ್ಪಾಶಾನ್ಮೃತ್ಯುಜನ್ಮಜರೋದಯಾನ್ ।
ನಿರ್ಮಮೋ ನಿರಹಂಕಾರೋ ಮುಚ್ಯತೇ ನಾತ್ರ ಸಂಶಯಃ ॥೧೫॥

ಒಂದು ವೃಕ್ಷಕ್ಕೆ ಸಮಾನವಾಗಿರುವ ಈ ದೇಹವು ಅವ್ಯಕ್ತಪ್ರಕೃತಿಯಿಂದ ಹುಟ್ಟಿದೆ. ಬುದ್ಧಿಯೇ ಇದಕ್ಕೆ ಕಾಂಡವಾಗಿದೆ. ಅಹಂಕಾರವು ದೇಹವೃಕ್ಷದ ರೆಂಬೆಗಳಾಗಿವೆ. ಇಂದ್ರಿಯಗಳೇ ಮೊಳಕೆಗಳು ಮತ್ತು ಪೊಟರೆಗಳಾಗಿವೆ. ಮಹಾಭೂತಗಳು ಈ ದೇಹವೃಕ್ಷವನ್ನು ವಿಸ್ತಾರಗೊಳಿಸಿವೆ ಮತ್ತು ದೇಹವೃಕ್ಷವನ್ನು ವಿಶೇಷವಾಗಿ ಶೋಭಾಯಮಾನಗೊಳಿಸಿವೆ. ಈ ದೇಹವೃಕ್ಷದಲ್ಲಿ ಯಾವಾಗಲೂ ಸಂಕಲ್ಪರೂಪವಾದ ಎಲೆಗಳೂ ಕಾಮರೂಪವಾದ ಫಲಗಳೂ ಬಿಡುತ್ತಿರುತ್ತವೆ. ಶುಭಾಶುಭಕರ್ಮಗಳಿಂದ ಪ್ರಾಪ್ತವಾಗುವ ಸುಖ-ದುಃಖಾದಿ ಫಲಗಳು ಈ ದೇಹವೃಕ್ಷದಲ್ಲಿ ಸರ್ವಕಾಲದಲ್ಲಿಯೂ ಇರುತ್ತವೆ. ಹೀಗೆ ಬ್ರಹ್ಮರೂಪವಾದ ಬೀಜದಿಂದ (ಅವ್ಯಕ್ತಪ್ರಕೃತಿಯಿಂದ) ಪ್ರಕಟವಾದ ಸನಾತನವಾದ ಈ ದೇಹವೃಕ್ಷವು ಸಕಲಪ್ರಾಣಿಗಳಿಗೂ ಆಧಾರಭೂತವಾಗಿದೆ. ಬುದ್ಧಿವಂತನಾದ ಪುರುಷನು ಯಾವಾಗ ತತ್ತ್ವಜ್ಞಾನರೂಪವಾದ ಕತ್ತಿಯಿಂದ ಈ ದೇಹವೃಕ್ಷವನ್ನು ಕತ್ತರಿಸುವನೋ ಆಗ ಹುಟ್ಟು-ಸಾವು-ಮುಪ್ಪುಗಳನ್ನುಂಟುಮಾಡುವ (ಆಸಕ್ತಿರೂಪವಾದ) ಪಾಶಗಳನ್ನು ಬಿಡಿಸಿಕೊಂಡು ಅಹಂಕಾರ-ಮಮಕಾರಗಳಿಂದ ರಹಿತನಾಗಿ ಭವಬಂಧನದಿಂದ ಮುಕ್ತನಾಗುವನೆಂಬುದರಲ್ಲಿ ಸಂಶಯವೇ ಇಲ್ಲ.

ದ್ವಾವಿಮೌ ಪಕ್ಷಿಣೌ ನಿತ್ಯೌ ಸಂಕ್ಷೇಪೌ ಚಾಪ್ಯಚೇತನೌ।
ಏತಾಭ್ಯಾಂ ತು ಪರೋ ಯೋಽನ್ಯಶ್ಚೇತನಾವಾನ್ಸ ಉಚ್ಯತೇ ॥೧೬॥

ಈ ದೇಹವೃಕ್ಷದಲ್ಲಿ ಮನಸ್ಸು-ಬುದ್ಧಿಗಳೆಂಬ ಎರಡು ಪಕ್ಷಿಗಳಿವೆ. ಅವು ಯಾವಾಗಲೂ ಕ್ರಿಯಾಶೀಲವಾಗಿದ್ದರೂ ಅಚೇತನಗಳಾಗಿವೆ. ಈ ಎರಡಕ್ಕಿಂತಲೂ ಬೇರೆಯದಾದ ಮತ್ತು ಶ್ರೇಷ್ಠವಾದ ಆತ್ಮವಿದೆ. ಅದನ್ನು ಜ್ಞಾನಸ್ವರೂಪವೆಂದು ಹೇಳುತ್ತಾರೆ.

ಅಚೇತನಃ ಸತ್ತ್ವಸಂಖ್ಯಾವಿಮುಕ್ತಃ
ಸತ್ತ್ವಾತ್ಪರಂ ಚೇತಯತೇಽನ್ತರಾತ್ಮಾ ।
ಸ ಕ್ಷೇತ್ರವಿತ್ಸರ್ವಸಂಖ್ಯಾತಬುದ್ಧಿ-
ರ್ಗುಣಾತಿಗೋ ಮುಚ್ಯತೇ ಸರ್ವಪಾಪೈಃ ॥೧೭॥

ಸಂಖ್ಯೆಗಳ (ತತ್ತ್ವಗಳ) ಲೆಕ್ಕಕ್ಕೆ ಸೇರದಿರುವ ಯಾವ ಮೂಲಪ್ರಕೃತಿಯಿರುವುದೋ–ಅದು ಅಚೇತನವಾಗಿದೆ. ಮೂಲಪ್ರಕೃತಿಗಿಂತಲೂ ಭಿನ್ನವಾದ ಯಾವ ಜೀವಾತ್ಮವಿರುವುದೋ–ಅದನ್ನು ಪರಮಾತ್ಮನು ಜ್ಞಾನಸಂಪನ್ನನನ್ನಾಗಿ ಮಾಡುತ್ತಾನೆ. ಕ್ಷೇತ್ರವನ್ನು ತಿಳಿದ (ಕ್ಷೇತ್ರಜ್ಞನೇ ಆಗುವ) ಆ ಜೀವನು ಯಾವಾಗ ಎಲ್ಲ ತತ್ತ್ವವನ್ನೂ ತಿಳಿಯುವನೋ–ಆಗ ಅವನು ಗುಣಾತೀತನಾಗಿ ಸಕಲಪಾಪಗಳಿಂದಲೂ ಮುಕ್ತನಾಗುತ್ತಾನೆ.*

೪೭ನೆಯ ಅಧ್ಯಾಯವು ಮುಗಿಯಿತು.

೪೮ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಜೀವಾತ್ಮ-ಪರಮಾತ್ಮರ ಸ್ವರೂಪವಿವೇಚನೆ

ಬ್ರಹ್ಮನು ಹೇಳುತ್ತಾನೆ:

ಕೇಚಿದ್ಬ್ರಹ್ಮಮಯಂ ವೃಕ್ಷಂ ಕೇಚಿದ್ಬ್ರಹ್ಮವನಂ ಮಹತ್ ।

ಕೇಚಿತ್ತು ಬ್ರಹ್ಮ ಚಾವ್ಯಕ್ತಂ ಕೇಚಿತ್ಪರಮನಾಮಯಮ್।
ಮನ್ಯನ್ತೇ ಸರ್ವಮಪ್ಯೇತದವ್ಯಕ್ತಪ್ರಭವಾವ್ಯಯಮ್ ॥೧॥

---

*ಈ ಅಧ್ಯಾಯದಲ್ಲಿ ಬಂದಿರುವ ಅನೇಕಶ್ಲೋಕಗಳು ೩೩ನೆಯ ಅಧ್ಯಾಯದಲ್ಲಿಯೂ ಯಥಾವತ್ತಾಗಿ ಅಥವಾ ಸ್ವಲ್ಪವ್ಯತ್ಯಾಸವಾಗಿ ಬಂದಿವೆ.

“ಕೆಲವರು ಈ ಇಡೀ ಸಂಸಾರವೃಕ್ಷವು ಬ್ರಹ್ಮಮಯ, ಬ್ರಹ್ಮರೂಪ ಎಂದು ತಿಳಿಯುತ್ತಾರೆ. ಮತ್ತೆ ಕೆಲವರು ಬ್ರಹ್ಮವು ದೊಡ್ಡಅರಣ್ಯವೆಂದು ಭಾವಿಸುತ್ತಾರೆ. (ಜಗತ್ತಿನ ಚರಾಚರಪ್ರಾಣಿಗಳು ಆ ಅರಣ್ಯದ ಅಂಶಗಳಾದ ಅಥವಾ ಅವಯವಗಳಾದ ವೃಕ್ಷಗಳಂತೆ.) ಕೆಲವರ ಅಭಿಪ್ರಾಯದಲ್ಲಿ ಅವ್ಯಕ್ತವೇ ಬ್ರಹ್ಮ. ಅದೇ ಜಗದ್ರೂಪದಲ್ಲಿ ಪರಿಣಾಮಹೊಂದಿದೆ. ಇನ್ನೂ ಕೆಲವರ ಮತದಲ್ಲಿ ಪರಬ್ರಹ್ಮವು ನಿರ್ವಿಕಾರವಾದುದು. (ಈ ಎಲ್ಲಕ್ಕಿಂತಲೂ ಪ್ರತ್ಯೇಕವಾಗಿ ಸರ್ವಾತೀತವಾದುದು.) ಈ ಎಲ್ಲದರ ಉತ್ಪತ್ತಿಲಯಗಳೂ ಅವ್ಯಕ್ತವಾದ ಆ ಪರಬ್ರಹ್ಮದಿಂದಲೇ ಉಂಟಾಗುತ್ತವೆ. ಈ ನಾನಾ ಅಭಿಪ್ರಾಯಗಳಿಗೆ ಪೋಷಕವಾದ ಶಾಸ್ತ್ರವಾಕ್ಯಗಳು ಹೀಗಿವೆ. ‘ಸರ್ವಂ ಖಲ್ವಿದಂ ಬ್ರಹ್ಮ।’ ‘ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ।’‘ಜಗತ್ಸರ್ವಂ ಶರೀರಂ ತೇ’ ‘ಬ್ರಹ್ಮವನಂ ಬ್ರಹ್ಮ ಸ ವೃಕ್ಷ ಆಸೀತ್।’

ಉಚ್ಛ್ವಾಸಮಾತ್ರಮಪಿ ಚೇದ್ಯೋಽನ್ತಕಾಲೇ ಸಮೋ ಭವೇತ್ ।
ಆತ್ಮಾನಮುಪಸಂಗಮ್ಯ ಸೋಽಮೃತತ್ವಾಯ ಕಲ್ಪತೇ ॥೨॥

ಮನುಷ್ಯನು ಮರಣಸಮಯದಲ್ಲಿ ಉಸಿರನ್ನು ಮೇಲಕ್ಕೆ ಎಳೆದುಕೊಳ್ಳುವಷ್ಟು ಕಾಲವಾದರೂ ಬುದ್ಧಿಯನ್ನು ಆತ್ಮನಲ್ಲಿ ಲೀನಗೊಳಿಸಿ ಸಮತ್ವವನ್ನು ಹೊಂದಿದ್ದೇ ಆದರೆ–ಅವನು ಮೋಕ್ಷಪ್ರಾಪ್ತಿಗೆ ಅಧಿಕಾರಿಯಾಗುತ್ತಾನೆ.

ನಿಮೇಷಮಾತ್ರಮಪಿ ಚೇತ್ಸಂಯಮ್ಯಾತ್ಮಾನಮಾತ್ಮನಿ ।
ಗಚ್ಛತ್ಯಾತ್ಮಪ್ರಸಾದೇನ ವಿದುಷಾಂ ಪ್ರಾಪ್ತಿಮವ್ಯಯಾಮ್ ॥೩॥

ಕಣ್ಣುಮುಚ್ಚಿತೆಗೆಯುವಷ್ಟು ಕಾಲವಾದರೂ ಮನಸ್ಸನ್ನು ಆತ್ಮನಲ್ಲಿ ಸಮಾವೇಶಗೊಳಿಸಿದ್ದೇ ಆದರೆ ಅದರಿಂದ ಲಭಿಸುವ ಮನಸ್ಸಿನ ಪ್ರಸನ್ನತೆಯಿಂದ ವಿದ್ವಾಂಸರು ಹೊಂದುವ ಅಕ್ಷಯಗತಿಯನ್ನು ಅವನು ಹೊಂದುತ್ತಾನೆ.

ಪ್ರಾಣಾಯಾಮೈರಥ ಪ್ರಾಣಾನ್ಸಂಯಮ್ಯ ಸ ಪುನಃ ಪುನಃ ।
ದಶದ್ವಾದಶಭಿರ್ವಾಪಿ ಚತುರ್ವಿಂಶಾತ್ಪರಂ ತತಃ ॥೪॥

ಹತ್ತು ಅಥವಾ ಹನ್ನೆರಡು ಪ್ರಾಣಾಯಾಮಗಳ ಮೂಲಕವಾಗಿ ಪುನಃ ಪುನಃ ಪ್ರಾಣಗಳನ್ನು ಸಂಯಮದಲ್ಲಿರಿಸುವ ಸಾಧಕನೂ ಕೂಡ ಇಪ್ಪತ್ತು ನಾಲ್ಕು ತತ್ತ್ವಗಳಿಂದ ಆಚೆಗೆ ಇರುವ ಇಪ್ಪತ್ತೈದನೆಯದಾದ ಆತ್ಮನನ್ನು ಹೊಂದುತ್ತಾನೆ.

ಏವಂ ಪೂರ್ವಂ ಪ್ರಸನ್ನಾತ್ಮಾ ಲಭತೇ ಯದ್ಯದಿಚ್ಛತಿ ।
ಅವ್ಯಕ್ತಾತ್ಸತ್ತ್ವಮುದ್ರಿಕ್ತಮಮೃತತ್ವಾಯ ಕಲ್ಪತೇ ।
ಸತ್ತ್ವಾತ್ಪರತರಂ ನಾನ್ಯತ್ಪ್ರಶಂಸನ್ತೀಹ ತದ್ವಿದಃ ॥೫॥

ಹೀಗೆ ಮೊದಲು ಯಾವನು ತನ್ನ ಅಂತಃಕರಣವನ್ನು ಶುದ್ಧಿಗೊಳಿಸುವನೋ ಅವನು ತಾನು ಅಪೇಕ್ಷಿಸಿದ ವಸ್ತುಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ. ಅವ್ಯಕ್ತಕ್ಕಿಂತಲೂ ಶ್ರೇಷ್ಠನಾದ ಯಾವ ಸತ್ತ್ವರೂಪನಾದ ಆತ್ಮನಿರುವನೋ ಅವನು ಅಮೃತತ್ತ್ವವನ್ನು ಪಡೆದುಕೊಳ್ಳಲು ಸಮರ್ಥನು. ಸತ್ತ್ವರೂಪನಾದ ಆತ್ಮನ ಸ್ವರೂಪವನ್ನು ತಿಳಿದ ವಿದ್ವಾಂಸರು, ಈ ಜಗತ್ತಿನಲ್ಲಿ ಸತ್ತ್ವಕ್ಕಿಂತಲೂ (ಚೇತನಕ್ಕಿಂತಲೂ) ಮಿಗಿಲಾದ ವಸ್ತುವು ಬೇರೆಯಾವುದೂ ಇಲ್ಲವೆಂದು ಹೇಳುತ್ತಾರೆ.

ಅನುಮಾನಾದ್ವಿಜಾನೀಮಃ ಪುರುಷಂ ಸತ್ತ್ವಸಂಶ್ರಯಮ್ ।
ನ ಶಕ್ಯಮನ್ಯಥಾ ಗನ್ತುಂ ಪುರುಷಂ ದ್ವಿಜಸತ್ತಮಾಃ ॥೬॥

ದ್ವಿಜಶ್ರೇಷ್ಠರೇ! ನಾವು ಅನುಮಾನಪ್ರಮಾಣದ ಮೂಲಕವಾಗಿ ಪುರುಷನು ಸತ್ತ್ವರೂಪವಾದ ಪ್ರಕೃತಿಯನ್ನು ಆಶ್ರಯಿಸಿದ್ದಾನೆಂಬುದನ್ನು ಚೆನ್ನಾಗಿ ತಿಳಿದಿರುತ್ತೇವೆ. ಈ ತತ್ತ್ವವನ್ನು ತಿಳಿಯದೇ ಪುರುಷನನ್ನು ತಿಳಿಯಲು ಶಕ್ಯವಿಲ್ಲ.

ಕ್ಷಮಾ ಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್ ।
ಜ್ಞಾನಂ ತ್ಯಾಗೋಽಥ ಸಂನ್ಯಾಸಃ ಸಾತ್ತ್ವಿಕಂ ವೃತ್ತಮಿಷ್ಯತೇ ॥೭॥

ಕ್ಷಮೆ, ಧೈರ್ಯ, ಅಹಿಂಸೆ, ಸಮತ್ವ, ಸತ್ಯ, ಸರಳತೆ, ಜ್ಞಾನ, ತ್ಯಾಗ ಮತ್ತು ಸಂನ್ಯಾಸ–ಇವುಗಳನ್ನು ಸಾತ್ತ್ವಿಕವ್ಯವಹಾರಗಳೆಂದು ಹೇಳುತ್ತಾರೆ.

ಏತೇನೈವಾನುಮಾನೇನ ಮನ್ಯನ್ತೇ ವೈ ಮನೀಷಿಣಃ।
ಸತ್ತ್ವಂ ಚ ಪುರುಷಶ್ಚೈವ ತತ್ರ ನಾಸ್ತಿ ವಿಚಾರಣಾ ॥೮॥

ವಿದ್ವಾಂಸರಾದ ಪುರುಷರು ಈ ಯುಕ್ತಿಯಿಂದಲೂ ಸತ್ತ್ವ ಮತ್ತು ಪುರುಷ ಎರಡನ್ನೂ ತಿಳಿಯುತ್ತಾರೆ. ಇದರಲ್ಲಿ ಪುನಃ ವಿಚಾರಿಸಬೇಕಾದ ಪ್ರಮೇಯವೇ ಇಲ್ಲ.

ಆಹುರೇಕೇ ಚ ವಿದ್ವಾಂಸೋ ಯೇ ಜ್ಞಾನಪರಿನಿಷ್ಠಿತಾಃ।
ಕ್ಷೇತ್ರಜ್ಞಸತ್ತ್ವಯೋರೈಕ್ಯಮಿತ್ಯೇತನ್ನೋಪಪದ್ಯತೇ ॥೯॥

ಪೃಥಗ್ಭೂತಂ ತತಃ ಸತ್ತ್ವಮಿತ್ಯೇತದವಿಚಾರಿತಮ್।
ಪೃಥಗ್ಭಾವಶ್ಚ ವಿಜ್ಞೇಯಃ ಸಹಜಶ್ಚಾಪಿ ತತ್ತ್ವತಃ ॥೧೦॥

ಜ್ಞಾನದಲ್ಲಿಯೇ ಮುಳುಗಿರುವ ಕೆಲವರು ವಿದ್ವಾಂಸರು ಕ್ಷೇತ್ರಜ್ಞ ಮತ್ತು ಸತ್ತ್ವಗಳ ಏಕತೆಯು ಯುಕ್ತಿಯುಕ್ತವಾಗಿಲ್ಲವೆಂದು ಹೇಳುತ್ತಾರೆ. ಸತ್ತ್ವವು ಪುರುಷನಿಗಿಂತಲೂ ಪ್ರತ್ಯೇಕವಾಗಿದೆ ಎಂಬ ಬಗೆಗೆ ವಿಚಾರಮಾಡಲೇ ಬೇಕಾಗಿಲ್ಲ. ತತ್ತ್ವತಃ ಇವು ಬೇರೆ-ಬೇರೆಯೇ ಆಗಿವೆ–ಎಂದು ತಿಳಿಯಬೇಕು.

ತಥೈವೈಕತ್ವನಾನಾತ್ವಮಿಷ್ಯತೇ ವಿದುಷಾಂ ನಯಃ।
ಮಶಕೋದುಮ್ಬರೇಚೈಕ್ಯಂ ಪೃಥಕ್ತ್ವಮಪಿದೃಶ್ಯತೇ ॥೧೧॥

ಹಾಗೆಯೇ ವಿದ್ವಾಂಸರು ಆತ್ಮನಲ್ಲಿ ಏಕತ್ವವೂ ಮತ್ತು ನಾನಾತ್ವವೂ ಸೇರಿಯೇ ಇರುವುದೆಂದು ಉದಾಹರಣಪೂರ್ವಕವಾಗಿ ನಿರ್ಣಯಿಸಿದ್ದಾರೆ. ಸೊಳ್ಳೆಗಳು (ಅತ್ತಿಯ ಹಣ್ಣಿನಲ್ಲಿರುವ ಹುಳುಗಳು) ಅತ್ತಿಯ ಹಣ್ಣು ಒಂದಾಗಿಯೇ ಇರುತ್ತವೆ. ಸೊಳ್ಳೆಗಳನ್ನು ಬಿಟ್ಟು ಅತ್ತಿಯ ಹಣ್ಣಿರುವುದಿಲ್ಲ. ಅತ್ತಿಯಹಣ್ಣನ್ನು ಬಿಟ್ಟು ಸೊಳ್ಳೆಗಳಿರುವುದಿಲ್ಲ. ಆದುದರಿಂದ ಇದು ಏಕತ್ವಕ್ಕೆ ಉದಾಹರಣೆಯಾಯಿತು. ಅತ್ತಿಯ ಹಣ್ಣಿನಲ್ಲಿ ಸೊಳ್ಳೆಗಳನ್ನು ನಾವು ಪ್ರತ್ಯೇಕವಾಗಿ ಕಾಣಬಹುದಾದುದರಿಂದ ನಾನಾತ್ವವೂ ಇದ್ದಂತಾಯಿತು.

ಮತ್ಸ್ಯೋ ಯಥಾನ್ಯಃ ಸ್ಯಾದಪ್ಸು ಸಮ್ಪ್ರಯೋಗಸ್ತಥಾ ತಯೋಃ।
ಸಮ್ಬನ್ಧಸ್ತೋಯಬಿನ್ದೂನಾಂ ಪರ್ಣೇ ಕೋಕನದಸ್ಯ ಚ ॥೧೨॥

ನೀರಿನಲ್ಲಿ ಮೀನು ಪ್ರತ್ಯೇಕವಾಗಿಯೇ ಕಾಣುತ್ತದೆ. ಆದರೆ ಮೀನು ನೀರಿನೊಡನೆ ಸೇರಿಯೇ ಇರಬೇಕು. ಅವುಗಳನ್ನು ಪ್ರತ್ಯೇಕಿಸುವ ಸಾಧ್ಯತೆಯಿಲ್ಲ. ಹಾಗೆಯೇ ಕಮಲದ ಎಲೆಯ ಮೇಲೆ ನೀರಿನ ತೊಟ್ಟುಗಳಿರುತ್ತವೆ. ನೀರಿನ ತೊಟ್ಟಿಗೂ ಎಲೆಗೂ ಸಂಬಂಧವಿಲ್ಲದಂತೆ ಅವು ಪ್ರತ್ಯೇಕ-ಪ್ರತ್ಯೇಕವಾಗಿಯೇ ಕಾಣುತ್ತಿದ್ದರೂ ಜಲಬಿಂದುಗಳೂ ಮತ್ತು ಎಲೆಗಳೂ ಒಟ್ಟಾಗಿಯೇ ಇರುತ್ತವೆ."

ಗುರುವು ಹೇಳುತ್ತಾನೆ:

"ಶಿಷ್ಯನೇ! ಬ್ರಹ್ಮನು ಹೀಗೆ ಹೇಳಿದನಂತರ ಅವನ ಸುತ್ತಲೂ ಇದ್ದ ದಕ್ಷಪ್ರಜಾಪತಿಯೇ ಮೊದಲಾದ ಮುನಿಶ್ರೇಷ್ಠರು ಪುನಃ ಸಂಶಯಗೊಂಡವರಾಗಿ ಲೋಕಪಿತಾಮಹನಾದ ಬ್ರಹ್ಮನನ್ನು ಪ್ರಶ್ನಿಸಿದರು."

ಳಲನೆಯ ಅಧ್ಯಾಯವು ಮುಗಿಯಿತು.

೪೯ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಧರ್ಮದ ನಿರ್ಣಯವನ್ನು ತಿಳಿಯುವ ಸಲುವಾಗಿ ಋಷಿಗಳ ಪ್ರಶ್ನೆ

ಮುನಿಗಳು ಪ್ರಶ್ನಿಸುತ್ತಾರೆ:

ಕೋ ವಾ ಸ್ವಿದಿಹ ಧರ್ಮಾಣಾಮನುಷ್ಠೇಯತಮೋ ಮತಃ।
ವ್ಯಾಹತಾಮಿವ ಪಶ್ಯಾಮೋ ಧರ್ಮಸ್ಯ ವಿವಿಧಾಂ ಗತಿಮ್ ॥೧॥

"ದೇವಶ್ರೇಷ್ಠನೇ! ಈ ಜಗತ್ತಿನಲ್ಲಿರುವ ಧರ್ಮಗಳಲ್ಲಿ ಯಾವ ಧರ್ಮವು ಅನುಷ್ಠಾನಮಾಡಲು ಅತ್ಯುತ್ತಮವಾಗಿದೆಯೆಂದು ನೀನು ಭಾವಿಸುವೆ? ಇದನ್ನು ದಯಮಾಡಿ ಹೇಳು. ಏಕೆಂದರೆ: ಧರ್ಮದ ವಿವಿಧಮಾರ್ಗಗಳು ಒಂದನ್ನೊಂದು ಘರ್ಷಿಸುತ್ತಿರುವಂತೆ ನಾವು ಕಾಣುತ್ತಿದ್ದೇವೆ.

ಊರ್ಧ್ವಂ ದೇಹಾದ್ವದನ್ತ್ಯೇಕೇ ನೈತದಸ್ತೀತಿ ಚಾಪರೇ।
ಕೇಚಿತ್ಸಂಶಯಿತಂ ಸರ್ವಂ ನಿಃಸಂಶಯಮಥಾಪರೇ ॥೨॥

ದೇಹಾವಸಾನಾನಂತರವೂ ಕರ್ಮಫಲಗಳು ಇರುತ್ತವೆಯೆಂದೂ ಆ ಕರ್ಮಫಲಗಳಿಗೆ ಅನುಸಾರವಾಗಿ ಜೀವಿಯು ಫಲವನ್ನು ಅನುಭವಿಸ

ಬೇಕಾಗುವುದೆಂದೂ ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ದೇಹಾವಸಾನವಾದ ಬಳಿಕ ಈ ಶರೀರವು ಪಂಚಭೂತಗಳಲ್ಲಿಯೇ ಸೇರಿಹೋಗು ವುದರಿಂದ ಕರ್ಮಫಲವೆಂಬುದು ಯಾವುದೂ ಇರುವುದಿಲ್ಲವೆಂದೂ ಹೇಳುತ್ತಾರೆ. ಇನ್ನೂ ಕೆಲವರು, ಎಲ್ಲ ಧರ್ಮಗಳೂ ಸಂಶಯದಿಂದಲೇ ಕೂಡಿರುವುವೆಂದೂ ಹೇಳುತ್ತಾರೆ. ಮತ್ತೆ ಕೆಲವರು ಧರ್ಮಗಳಲ್ಲಿ ಯಾವ ಸಂಶಯವೂ ಇಲ್ಲವೆಂದೂ ಹೇಳುತ್ತಾರೆ.

ಅನಿತ್ಯಂ ನಿತ್ಯಮಿತ್ಯೇಕೇ ನಾಸ್ತ್ಯಸ್ತೀತ್ಯಪಿ ಚಾಪರೇ ।
ಏಕರೂಪಂ ದ್ವಿಧೇತ್ಯೇಕೇ ವ್ಯಾಮಿಶ್ರಮಿತಿ ಚಾಪರೇ ॥೪॥

ಕೆಲವರು ಧರ್ಮವು ಅನಿತ್ಯವಾದುದೆಂದು ಹೇಳುತ್ತಾರೆ. ಕೆಲವರು ನಿತ್ಯವಾದುದೆಂದು ಹೇಳುತ್ತಾರೆ. ಮತ್ತೆ ಕೆಲವರು ಧರ್ಮವೆಂಬ ವಸ್ತುವೇ ಯಾವುದೂ ಇಲ್ಲವೆನ್ನುತ್ತಾರೆ. ಕೆಲವರು ಧರ್ಮವು ಅವಶ್ಯವಾಗಿ ಇದ್ದೇ ಇದೆ ಎನ್ನುತ್ತಾರೆ. ಒಂದೇ ಧರ್ಮವು ಎರಡು ಪ್ರಕಾರವಾಗಿದೆಯೆಂದೂ ಹೇಳುತ್ತಾರೆ. ಕೆಲವರು ಧರ್ಮವು ಮಿಶ್ರಿತವಾಗಿದೆ ಎನ್ನುತ್ತಾರೆ.

ಮನ್ಯನ್ತೇ ಬ್ರಾಹ್ಮಣಾ ಏವ ಬ್ರಹ್ಮಜ್ಞಾಸ್ತತ್ತ್ವದರ್ಶಿನಃ ।
ಏಕಮೇಕೇ ಪೃಥಕ್ಚಾನ್ಯೇ ಬಹುತ್ವಮಿತಿ ಚಾಪರೇ ॥೪॥

ವೇದಶಾಸ್ತ್ರಗಳನ್ನು ತಿಳಿದಿರುವ ತತ್ತ್ವಜ್ಞರಾದ ಬ್ರಾಹ್ಮಣರು 'ಏಕಮೇವಾದ್ವಿತೀಯಂ ಬ್ರಹ್ಮ' 'ಇರುವವನು ಒಬ್ಬನೇ ಅದ್ವಿತೀಯನಾದ ಬ್ರಹ್ಮ'–ಎನ್ನುತ್ತಾರೆ. ಕೆಲವರು ಜೀವ ಮತ್ತು ಈಶ್ವರರು ಪ್ರತ್ಯೇಕ ವಾಗಿರುವರೆಂದು ಹೇಳುತ್ತಾರೆ. ಕೆಲವರು ಪರಮಾತ್ಮನು ಬಹುಪ್ರಕಾರ ನಾಗಿರುವನೆಂದು ಹೇಳುತ್ತಾರೆ.

ದೇಶಕಾಲಾವುಭೌ ಕೇಚಿನ್ನೈತದಸ್ತೀತಿ ಚಾಪರೇ ।
ಜಟಾಜಿನಧರಾಶ್ಚಾನ್ಯೇ ಮುಣ್ಡಾಃ ಕೇಚಿದಸಂವೃತಾಃ ॥೫॥

ದೇಶ-ಕಾಲಗಳೆರಡೂ ನಿತ್ಯವಾದುವೆಂದು ಕೆಲವರು ಹೇಳುತ್ತಾರೆ. ದೇಶ-ಕಾಲಗಳು ಅನಿತ್ಯವಾದುವೆಂದು ಮತ್ತೆ ಕೆಲವರು ಹೇಳುತ್ತಾರೆ. ಧರ್ಮಮಾರ್ಗಾನುಸಾರಿಗಳಲ್ಲಿಯೇ ಕೆಲವರು ಜಟೆಯನ್ನೂ ಮೃಗಚರ್ಮ

ವನ್ನೂ ಧರಿಸಿರುತ್ತಾರೆ. ಕೆಲವರು ತಲೆಯನ್ನು ಮುಂಡನ ಮಾಡಿಸಿಕೊಂಡಿರುತ್ತಾರೆ. ಮತ್ತೆ ಕೆಲವರು ದಿಗಂಬರರಾಗಿರುತ್ತಾರೆ.

ಅಸ್ನಾನಂ ಕೇಚಿದಿಚ್ಛನ್ತಿ ಸ್ನಾನಮಪ್ಯಪರೇ ಜನಾಃ ।
ಮನ್ಯನ್ತೇ ಬ್ರಾಹ್ಮಣಾ ದೇವಾ ಬ್ರಹ್ಮಜ್ಞಾಸ್ತತ್ತ್ವದರ್ಶಿನಃ ॥೬॥

ಕೆಲವರು ಸ್ನಾನವೇ ಬೇಕಿಲ್ಲವೆಂದು ಹೇಳುತ್ತಾರೆ. ವೇದಜ್ಞರಾದ ಮತ್ತು ತತ್ತ್ವವನ್ನು ತಿಳಿದಿರುವ ಬ್ರಾಹ್ಮಣರು ಸ್ನಾನಮಾಡುವುದು ಶ್ರೇಷ್ಠವೆಂದು ಹೇಳುತ್ತಾರೆ.

ಆಹಾರಂ ಕೇಚಿದಿಚ್ಛನ್ತಿ ಕೇಚಿಚ್ಚಾನಶನೇ ರತಾಃ ।
ಕರ್ಮ ಕೇಚಿತ್ಪ್ರಶಂಸನ್ತಿ ಪ್ರಶಾನ್ತಿಂ ಚಾಪರೇ ಜನಾಃ ॥೭॥

ಕೆಲವರು ಭೋಜನಮಾಡುವುದು ಒಳ್ಳೆಯದೆಂದು ಹೇಳುತ್ತಾರೆ. ಕೆಲವರು ಭೋಜನಮಾಡದೇ ಇರುವುದರಲ್ಲಿಯೇ ಅಭಿರುಚಿಯುಳ್ಳವ ರಾಗಿರುತ್ತಾರೆ. ಕೆಲವರು ಕರ್ಮಗಳನ್ನು ಪ್ರಶಂಸೆಮಾಡುತ್ತಾರೆ. ಕೆಲವರು ಪರಮಶಾಂತಿಯನ್ನೇ ಪ್ರಶಂಸೆಮಾಡುತ್ತಾರೆ.

ಕೇಚಿನ್ಮೋಕ್ಷಂ ಪ್ರಶಂಸನ್ತಿ ಕೇಚಿದ್ಭೋಗಾನ್ಪೃಥಗ್ವಿಧಾನ್।
ಧನಾನಿ ಕೇಚಿದಿಚ್ಛನ್ತಿ ನಿರ್ಧನತ್ವಮಥಾಪರೇ।
ಉಪಾಸ್ಯ ಸಾಧನಂ ತ್ವೇಕೇ ನೈತದಸ್ತೀತಿ ಚಾಪರೇ ॥೮॥

ಕೆಲವರು ಮೋಕ್ಷವನ್ನು ಪ್ರಶಂಸೆಮಾಡುತ್ತಾರೆ. ಮತ್ತೆ ಕೆಲವರು ನಾನಾವಿಧವಾದ ಭೋಗಗಳನ್ನು ಪ್ರಶಂಸಿಸುತ್ತಾರೆ. ಕೆಲವರು ಅಪಾರವಾದ ಧನವನ್ನು ಅಪೇಕ್ಷಿಸುತ್ತಾರೆ. ಮತ್ತೆ ಕೆಲವರು ನಿರ್ಧನರಾಗಿಯೇ ಇರುವುದು ಒಳ್ಳೆಯದೆಂದು ಭಾವಿಸುತ್ತಾರೆ. ಉಪಾಸನೆಯನ್ನು ಮಾಡಿ ದೇವತೆಗಳ ಅನುಗ್ರಹವನ್ನು ಸಂಪಾದಿಸಬೇಕೆಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು 'ಉಪಾಸನೆ '–ಎಂಬುದೇ ಇಲ್ಲವೆನ್ನುತ್ತಾರೆ.

ಅಹಿಂಸಾನಿರತಾಶ್ಚಾನ್ಯೇ ಕೇಚಿದ್ಧಿಂಸಾಪರಾಯಣಾಃ ।
ಪುಣ್ಯೇನ ಯಶಸಾ ಚಾನ್ಯೇ ನೈತದಸ್ತೀತಿ ಚಾಪರೇ ॥೯॥

ಕೆಲವರು ಅಹಿಂಸಾವ್ರತಪರಾಯಣರಾಗಿರುತ್ತಾರೆ. ಕೆಲವರು ಹಿಂಸೆ

ಯಲ್ಲಿಯೇ ನಿರತರಾಗಿರುತ್ತಾರೆ. ಮತ್ತೆ ಕೆಲವರು ಪುಣ್ಯಕರ್ಮಗಳಿಂದಲೂ ಯಶಸ್ಸಿನಿಂದಲೂ ಸಂಪನ್ನರಾಗಿರುತ್ತಾರೆ. ಉಳಿದ ಕೆಲವರು ಇವಾವುವೂ ಇಲ್ಲವೆಂದೇ ಹೇಳುತ್ತಾರೆ.

ಸದ್ಭಾವನಿರತಾಶ್ಚಾನ್ಯೇ ಕೇಚಿತ್ಸಂಶಯಿತೇ ಸ್ಥಿತಾಃ ।
ದುಃಖಾದನ್ಯೇ ಸುಖಾದನ್ಯೇ ಧ್ಯಾನಮಿತ್ಯಪರೇ ಜನಾಃ ॥೧೦॥

ಲೋಕದಲ್ಲಿ ಕೆಲವರು ಸದ್ಭಾವನೆಯಲ್ಲಿಯೇ ನಿರತರಾಗಿರುತ್ತಾರೆ. ಕೆಲವರು ಎಲ್ಲ ವಿಷಯಗಳಲ್ಲಿಯೂ ಸಂಶಯವುಳ್ಳವರಾಗಿಯೇ ಇರುತ್ತಾರೆ. ಕೆಲವರು ಕಷ್ಟಪಟ್ಟು ಕಾಯಕ್ಲೇಶದ ತಪಸ್ಸನ್ನು ಮಾಡುತ್ತಾರೆ. ಕೆಲವರು ಕಾಯಕ್ಲೇಶವಿಲ್ಲದ ಸುಖವಾದ ತಪಸ್ಸನ್ನು ಹೇಳುತ್ತಾರೆ. ಕೆಲವರು ಧ್ಯಾನವೊಂದನ್ನೇ ಹೇಳುತ್ತಾರೆ.

ಯಜ್ಞಮಿತ್ಯಪರೇ ವಿಪ್ರಾಃ ಪ್ರದಾನಮಿತಿ ಚಾಪರೇ ।
ತಪಸ್ತ್ವನ್ಯೇ ಪ್ರಶಂಸನ್ತಿ ಸ್ವಾಧ್ಯಾಯಮಪರೇ ಜನಾಃ ॥೧೧॥

ಕೆಲವು ಬ್ರಾಹ್ಮಣರು ಯಜ್ಞಮಾಡುವುದೇ ಶ್ರೇಷ್ಠವೆನ್ನುತ್ತಾರೆ. ಮತ್ತೆ ಕೆಲವರು ದಾನವೇ ಶ್ರೇಷ್ಠವೆನ್ನುತ್ತಾರೆ. ಕೆಲವರು ತಪಸ್ಸನ್ನು ಪ್ರಶಂಸೆ ಮಾಡುತ್ತಾರೆ. ಮತ್ತೆ ಕೆಲವರು ಅಧ್ಯಯನ-ಅಧ್ಯಾಪನಗಳನ್ನು ಪ್ರಶಂಸೆಮಾಡುತ್ತಾರೆ.

ಜ್ಞಾನಂ ಸಂನ್ಯಾಸಮಿತ್ಯೇಕೇ ಸ್ವಭಾವಂ ಭೂತಚಿನ್ತಕಾಃ।
ಸರ್ವಮೇಕೇ ಪ್ರಶಂಸನ್ತಿ ನ ಸರ್ವಮಿತಿ ಚಾಪರೇ ॥೧೨॥

ಕೆಲವರು ಜ್ಞಾನವೇ ಸಂನ್ಯಾಸವೆನ್ನುತ್ತಾರೆ. ಭೌತಿಕವಾದ ವಿಚಾರವುಳ್ಳ ಜನರು ಸ್ವಭಾವವೇ ಮುಖ್ಯವಾದುದೆಂದೂ ಹೇಳುತ್ತಾರೆ. ಕೆಲವರು ಎಲ್ಲ ರೀತಿಯ ಮಾರ್ಗಗಳನ್ನೂ ಪ್ರಶಂಸೆಮಾಡುತ್ತಾರೆ. ಮತ್ತೆ ಕೆಲವರು ಎಲ್ಲವನ್ನೂ ಪ್ರಶಂಸಿಸುವುದಿಲ್ಲ.

ಏವಂ ವ್ಯುತ್ಥಾಪಿತೇ ಧರ್ಮೇ ಬಹುಧಾ ವಿಪ್ರಬೋಧಿತೇ।
ನಿಶ್ಚಯಂ ನಾಧಿಗಚ್ಛಾಮಃ ಸಮ್ಮೂಢಾ ಸುರಸತ್ತಮ ॥೧೩॥

ಸುರಶ್ರೇಷ್ಠನಾದ ಚತುರ್ಮುಖನೇ! ಹೀಗೆ ಧರ್ಮವ್ಯವಸ್ಥೆಯು ಅನೇಕಪ್ರಕಾರವಾಗಿ ಮತ್ತು ಪರಸ್ಪರವಿರುದ್ಧವಾಗಿ ಹೇಳಲ್ಪಟ್ಟಿರುವುದರಿಂದ

ನಾವು ಧರ್ಮದ ವಿಷಯದಲ್ಲಿ ವಿಮೋಹಗೊಂಡಿದ್ದೇವೆ. ಯಾವುದೇ ನಿಶ್ಚಯಕ್ಕೆ ಬರಲು ಅಸಮರ್ಥರಾಗಿದ್ದೇವೆ.

ಇದಂ ಶ್ರೇಯ ಇದಂ ಶ್ರೇಯ ಇತ್ಯೇವಂ ವ್ಯುತ್ಥಿತೋ ಜನಃ ।
ಯೋ ಹಿ ಯಸ್ಮಿನ್ರತೋ ಧರ್ಮೇ ಸ ತಂ ಪೂಜಯತೇ ಸದಾ ॥

'ಈ ಮಾರ್ಗವೇ ಶ್ರೇಯಸ್ಕರವಾದುದು', 'ಈ ಮಾರ್ಗವೇ ಶ್ರೇಯಸ್ಕರವಾದುದು'–ಹೀಗೆ ಹೇಳಿಕೊಂಡು ಜನರು ಒಬ್ಬರು ಮತ್ತೊಬ್ಬರ ಧರ್ಮವನ್ನು ವಿರೋಧಿಸುತ್ತಿದ್ದಾರೆ. ಯಾವನು ಯಾವಧರ್ಮದಲ್ಲಿ ನಿರತನಾಗಿರುವನೋ–ಅವನು ಆ ಧರ್ಮವನ್ನು ಮಾತ್ರವೇ ಯಾವಾಗಲೂ ಗೌರವಿಸುತ್ತಾನೆ.

ತೇನ ನೋಽವಹಿತಾ ಪ್ರಜ್ಞಾ ಮನಶ್ಚ ಬಹುಲೀಕೃತಮ್ ।
ಏತದಾಖ್ಯಾತುಮಿಚ್ಛಾಮಃ ಶ್ರೇಯಃ ಕಿಮಿತಿ ಸತ್ತಮ ॥೧೫॥

ಈ ಕಾರಣದಿಂದ ನಮ್ಮ ಬುದ್ಧಿಯು ವಿಚಲಿತವಾಗಿ ಹೋಗಿದೆ. ಅಲ್ಲದೆ ಅನೇಕವಿಧವಾದ ಸಂಕಲ್ಪ-ವಿಕಲ್ಪಗಳಲ್ಲಿ ತೊಡಗಿ ನಮ್ಮ ಮನಸ್ಸೂ ಚಂಚಲವಾಗಿದೆ. ದೇವೋತ್ತಮನೇ! ಈ ಸಮಯದಲ್ಲಿ ನಮಗೆ ನಿಶ್ಚಿತವಾದ ಕಲ್ಯಾಣಕರವಾದ ಮಾರ್ಗವು ಯಾವುದು?–ಎಂಬುದನ್ನು ನಿನ್ನಿಂದ ಕೇಳಿ ತಿಳಿಯಬೇಕೆಂದಿರುತ್ತೇವೆ. ದಯಮಾಡಿ ಹೇಳು.

ಅತಃ ಪರಂ ತು ಯದ್ಗುಹ್ಯಂ ತದ್ಭವಾನ್ವಕ್ತುಮರ್ಹತಿ।
ಸತ್ತ್ವಕ್ಷೇತ್ರಜ್ಞಯೋಶ್ಚಾಪಿ ಸಮ್ಬನ್ಧಃ ಕೇನ ಹೇತುನಾ ॥೧೬॥

ಆದುದರಿಂದ ಪರಮರಹಸ್ಯವಾದ ತತ್ತ್ವವು ಯಾವುದಿರುವುದೋ ಅದನ್ನು ನಮಗೆ ಹೇಳುವ ಕೃಪೆಮಾಡು. ಯಾವ ಕಾರಣದಿಂದ ಚೇತನನಿಗೂ ಮತ್ತು ಕ್ಷೇತ್ರಜ್ಞನಿಗೂ ಸಂಬಂಧವಿರುವುದೆಂಬುದನ್ನು ಹೇಳು."

ದಕ್ಷಪ್ರಜಾಪತಿಪ್ರಮುಖರಾದ ಬ್ರಾಹ್ಮಣರು ಬ್ರಹ್ಮನೊಡನೆ ಹೀಗೆ ಹೇಳಲಾಗಿ ಪೂಜ್ಯನಾದ, ಜಗತ್ತಿನ ಸೃಷ್ಟಿಗೆ ಕಾರಣನಾದ, ಧರ್ಮಾತ್ಮನಾದ, ಬುದ್ಧಿವಂತನಾದ ಬ್ರಹ್ಮನು ಅವರ ಎಲ್ಲ ಪ್ರಶ್ನೆಗಳಿಗೂ ಯಥಾವತ್ತಾಗಿ ಉತ್ತರಿಸತೊಡಗಿದನು."

೪೯ನೆಯ ಅಧ್ಯಾಯವು ಮುಗಿಯಿತು.

ಸತ್ತ್ವ ಮತ್ತು ಪುರುಷರ ಭಿನ್ನತೆ: ಬುದ್ಧಿವಂತರ ಪ್ರಶಂಸೆ: ಪಂಚಭೂತಗಳ ಗುಣಗಳ ವರ್ಣನೆ: ಪರಮಾತ್ಮನ ಶ್ರೇಷ್ಠತೆಯ ಪ್ರತಿಪಾದನೆ

ಬ್ರಹ್ಮನು ಹೇಳುತ್ತಾನೆ:

ಹನ್ತ ವಃ ಸಂಪ್ರವಕ್ಷ್ಯಾಮಿ ಯನ್ಮಾಂ ಪೃಚ್ಛತ ಸತ್ತಮಾಃ।
ಗುರುಣಾ ಶಿಷ್ಯಮಾಸಾದ್ಯ ಯದುಕ್ತಂ ತನ್ನಿಬೋಧತ ॥೧॥

"ಋಷಿಶ್ರೇಷ್ಠರೇ! ನೀವು ಯಾವ-ಯಾವ ವಿಷಯವಾಗಿ ಪ್ರಶ್ನಿಸಿರುವಿರೋ–ಆ ಎಲ್ಲ ಪ್ರಶ್ನೆಗಳಿಗೂ ನಾನೀಗ ಉತ್ತರಿಸುತ್ತೇನೆ. ಗುರುವು ಯೋಗ್ಯನಾದ ಶಿಷ್ಯನಿಗೆ ಯಾವ ಉಪದೇಶವನ್ನು ನೀಡಿದನೋ–ಅದನ್ನೇ ನಿಮಗೂ ಹೇಳುವೆನು; ಕೇಳಿರಿ. ನಾನು ಹೇಳುವುದೆಲ್ಲವನ್ನೂ ಸಂಪೂರ್ಣವಾಗಿ ಕೇಳಿ ಅದನ್ನು ಚೆನ್ನಾಗಿ ಧಾರಣೆಮಾಡಿಕೊಳ್ಳಿರಿ.

ಅಹಿಂಸಾ ಸರ್ವಭೂತಾನಾಮೇತತ್ಕೃತ್ಯತಮಂ ಮಹತ್।
ಏತತ್ಪದಮನುದ್ವಿಗ್ನಂ ವರಿಷ್ಠಂ ಧರ್ಮಲಕ್ಷಣಮ್ ॥೨॥

ಯಾವುದೇ ಪ್ರಾಣಿಯನ್ನಾಗಲೀ ಹಿಂಸಿಸದೇ ಇರುವುದು ಮನುಷ್ಯನ ಸರ್ವೋತ್ತಮವಾದ ಕರ್ತವ್ಯವಾಗಿದೆ. ಅಹಿಂಸಾವ್ರತದ ಸಾಧನೆಯು ಉದ್ವೇಗರಹಿತವೂ ಸರ್ವಶ್ರೇಷ್ಠವೂ ಆಗಿದೆ. ಅಹಿಂಸೆಯೆಂಬುದು ಧರ್ಮದ ಒಂದು ಮುಖ್ಯಲಕ್ಷಣವಾಗಿದೆ.

ಜ್ಞಾನಂ ನಿಃಶ್ರೇಯ ಇತ್ಯಾಹುರ್ವೃದ್ಧಾ ನಿಶ್ಚಿತದರ್ಶಿನಃ।
ತಸ್ಮಾಜ್ಜ್ಞಾನೇನ ಶುದ್ಧೇನ ಮುಚ್ಯತೇ ಸರ್ವಕಿಲ್ಬಿಷೈಃ ॥೩॥

ನಿಶ್ಚಿತವಾದ ಸಿದ್ಧಾಂತವನ್ನು ಕಂಡುಕೊಂಡ ವೃದ್ಧರು ಜ್ಞಾನವೇ ಪರಮಕಲ್ಯಾಣಕ್ಕೆ ಸಾಧನವೆಂದು ಹೇಳುತ್ತಾರೆ. ಆದುದರಿಂದ ಪರಮಶುದ್ಧವಾದ ಜ್ಞಾನದ ಮೂಲಕವಾಗಿ ಮನುಷ್ಯನು ಸಕಲಪಾಪಗಳಿಂದಲೂ ಬಿಡುಗಡೆಹೊಂದುತ್ತಾನೆ.

ಹಿಂಸಾಪರಾಶ್ಚ ಯೇ ಕೇಚಿದ್ಯೇ ಚ ನಾಸ್ತಿಕವೃತ್ತಯಃ ।
ಲೋಭಮೋಹಸಮಾಯುಕ್ತಾಸ್ತೇ ವೈ ನಿರಯಗಾಮಿನಃ ॥೪॥

ಯಾರು ಪ್ರಾಣಿಗಳನ್ನು ಹಿಂಸಿಸುವರೋ, ನಾಸ್ತಿಕವೃತ್ತಿಯಿಂದ ಜೀವನವನ್ನು ನಿರ್ವಹಿಸುವರೋ, ಲೋಭ-ಮೋಹಗಳಿಂದ ಕೂಡಿರುವರೋ–ಅವರೆಲ್ಲರೂ ನರಕದಲ್ಲಿ ಬೀಳುತ್ತಾರೆ.

ಆಶೀರ್ಯುಕ್ತಾನಿ ಕರ್ಮಾಣಿ ಕುರ್ವತೇ ಯೇ ತ್ವತನ್ದ್ರಿತಾಃ।
ತೇಽಸ್ಮಿಲ್ಲೋಕೇ ಪ್ರಮೋದನ್ತೇ ಜಾಯಮಾನಾಃ ಪುನಃ ಪುನಃ ॥೫॥

ಯಾರು ಆಲಸ್ಯವಿಲ್ಲದೇ ಸಕಾಮಕರ್ಮಗಳನ್ನು ಅನುಷ್ಠಾನಮಾಡುವರೋ–ಅವರು ಈ ಲೋಕದಲ್ಲಿಯೇ ಪುನಃ ಪುನಃ ಹುಟ್ಟುತ್ತಾ ಆನಂದವಾಗಿರುತ್ತಾರೆ.

ಕುರ್ವತೇ ಯೇ ತು ಕರ್ಮಾಣಿ ಶ್ರದ್ದಧಾನಾ ವಿಪಶ್ಚಿತಃ ।
ಅನಾಶೀರ್ಯೋಗಸಂಯುಕ್ತಾಸ್ತೇ ಧೀರಾಃ ಸಾಧುದರ್ಶಿನಃ ॥೬॥

ಯಾವ ವಿದ್ವಾಂಸರು ಶ್ರದ್ಧಾವಂತರಾಗಿ ನಿಷ್ಕಾಮಕರ್ಮಗಳನ್ನು ಮಾಡುತ್ತಾ ಧ್ಯಾನಯೋಗದಲ್ಲಿ ನಿರತರಾಗಿರುವರೋ–ಅವರು ಧೀರರೂ ಶ್ರೇಷ್ಠವಾದ ಜ್ಞಾನವುಳ್ಳವರೂ ಆಗಿರುತ್ತಾರೆ.

ವಿಪ್ರಶ್ರೇಷ್ಠರೇ! ನಾನು ಇನ್ನು ಮುಂದೆ ಸತ್ತ್ವಕ್ಕೂ (ಬುದ್ಧಿಗೂ) ಕ್ಷೇತ್ರಜ್ಞನಿಗೂ ಇರುವ ಸಂಯೋಗ-ವಿಯೋಗಗಳನ್ನು ಹೇಳುತ್ತೇನೆ; ಏಕಾಗ್ರಚಿತ್ತರಾಗಿ ಕೇಳಿರಿ:

ವಿಷಯೋ ವಿಷಯಿತ್ವಂ ಚ ಸಮ್ಬನ್ಧೋಽಯಮಿಹೋಚ್ಯತೇ ।
ವಿಷಯೀ ಪುರುಷೋ ನಿತ್ಯಂ ಸತ್ತ್ವಂ ಚ ವಿಷಯಃ ಸ್ಮೃತಃ ॥೭॥

ಸತ್ತ್ವ-ಕ್ಷೇತ್ರಜ್ಞರಲ್ಲಿ ವಿಷಯ-ವಿಷಯೀಭಾವದ ಸಂಬಂಧವಿರುವುದೆಂದು ಹೇಳುತ್ತಾರೆ. ಕ್ಷೇತ್ರಜ್ಞ ಅಥವಾ ಪುರುಷನೇ ವಿಷಯೀ. ಸತ್ತ್ವವು ವಿಷಯ.

ವ್ಯಾಖ್ಯಾತಂ ಪೂರ್ವಕಲ್ಪೇನ ಮಶಕೋದುಮ್ಬರಂ ಯಥಾ ।
ಭುಜ್ಯಮಾನಂ ಚ ಜಾನೀತೇ ನಿತ್ಯಂ ಸತ್ವಮಚೇತನಮ್ ।
ಯಸ್ತ್ವೇವಂ ತು ವಿಜಾನೀತೇ ಯೋ ಭುಙ್ಕ್ತೇ ಯಶ್ಚ ಭುಜ್ಯತೇ॥

ಹಿಂದಿನ ಅಧ್ಯಾಯದಲ್ಲಿ ಸೊಳ್ಳೆ ಮತ್ತು ಅತ್ತಿಹಣ್ಣಿನ ಉದಾಹರಣೆಯನ್ನು ಕೊಟ್ಟು ಸತ್ತ್ವ-ಕ್ಷೇತ್ರಜ್ಞರ ಅವಿಭಕ್ತವಾದ ಸಂಬಂಧವನ್ನು ನಿರೂಪಿಸಿಯಾಗಿದೆ. ಭೋಗಿಸಲ್ಪಡುವ ಅಚೇತನವಾದ ಸತ್ತ್ವವು ನಿತ್ಯವಾದ ಕ್ಷೇತ್ರಜ್ಞನನ್ನು ತಿಳಿದಿಲ್ಲ. ಆದರೆ ಭೋಗಿಸುವವನು ಆತ್ಮನೆಂದೂ ಭೋಗಿಸಲ್ಪಡುವುದು ಸತ್ತ್ವವೆಂದೂ ಕ್ಷೇತ್ರಜ್ಞನು ತಿಳಿದಿದ್ದಾನೆ.

ನಿತ್ಯಂ ದ್ವನ್ದ್ವಸಮಾಯುಕ್ತಂ ಸತ್ತ್ವಮಾಹುರ್ಮನೀಷಿಣಃ ।
ನಿರ್ದನ್ದ್ವೋ ನಿಷ್ಕಲೋ ನಿತ್ಯಃ ಕ್ಷೇತ್ರಜ್ಞೋ ನಿರ್ಗುಣಾತ್ಮಕಃ ॥೧೦॥

ವಿದ್ವಾಂಸರು ಸತ್ತ್ವವನ್ನು ಸುಖ-ದುಃಖಾದಿ ದ್ವಂದ್ವಗಳಿಂದ ಯುಕ್ತವಾದುದೆಂದು ಹೇಳುತ್ತಾರೆ. ಆದರೆ ಕ್ಷೇತ್ರಜ್ಞನು ನಿರ್ದ್ವಂದ್ವನು. ಸುಖ-ದುಃಖಾದಿಗಳಿಂದ ರಹಿತನು. ಅವಯವಗಳಿಲ್ಲದವನು. ನಿತ್ಯನು ಮತ್ತು ನಿರ್ಗುಣಸ್ವರೂಪನು.

ಸಮಂ ಸಂಜ್ಞಾನುಗಶ್ಚೈವ ಸ ಸರ್ವತ್ರ ವ್ಯವಸ್ಥಿತಃ ।
ಉಪಭುಙ್ಕ್ತೇ ಸದಾ ಸತ್ತ್ವಮಪಃ ಪುಷ್ಕರಪರ್ಣವತ್ ॥೧೧॥

ಸರ್ವತ್ರ ವ್ಯಾಪಿಸಿರುವ, ಸತ್ತ್ವದ ಸಂಜ್ಞೆಯನ್ನು ಹೊಂದಿರುವ ಮತ್ತು ಸತ್ತ್ವದೊಡನೆ ಸಮನಾಗಿರುವಂತೆ ತೋರುವ ಕ್ಷೇತ್ರಜ್ಞನು–ಸರೋವರದಲ್ಲಿರುವ ಕಮಲದ ಎಲೆಯು ನಿರ್ಲಿಪ್ತವಾಗಿ ತನ್ನ ಮೇಲಿರುವ ಜಲಬಿಂದುಗಳನ್ನು ಉಪಭೋಗಿಸುವಂತೆ (ಧರಿಸಿರುವಂತೆ) ಸತ್ತ್ವವನ್ನು ಸರ್ವಕಾಲದಲ್ಲಿಯೂ ಉಪಭೋಗಿಸುತ್ತಿರುತ್ತಾನೆ.

ಸರ್ವೈರಪಿ ಗುಣೈರ್ವಿದ್ವಾನ್ವ್ಯತಿಷಿಕ್ತೋ ನ ಲಿಪ್ಯತೇ ।
ಜಲಬಿನ್ದುರ್ಯಥಾ ಲೋಲಃ ಪದ್ಮಿನೀಪತ್ರಸಂಸ್ಥಿತಃ ।
ಏವಮೇವಾಪ್ಯಸಂಯುಕ್ತಃ ಪುರುಷಸ್ಸ್ಯಾನ್ನಸಂಶಯಃ ॥೧೨॥

ಯಾವ ರೀತಿಯಲ್ಲಿ ಕಮಲದ ಎಲೆಯ ಮೇಲೆ ಬಿದ್ದಿರುವ ಚಂಚಲವಾದ ನೀರಿನ ತೊಟ್ಟು ಕಮಲಪತ್ರದ ಲೇಪವನ್ನು ಹೊಂದುವುದಿಲ್ಲವೋ–ಅದೇ ರೀತಿಯಲ್ಲಿ ವಿದ್ವಾಂಸನು ಸಮಸ್ತಗುಣಗಳೊಡನೆಯೂ ಸಂಬಂಧವನ್ನಿಟ್ಟುಕೊಂಡಿದ್ದರೂ ಅವುಗಳಿಂದ ಲಿಪ್ತನಾಗುವುದಿಲ್ಲ.

ಹೀಗೆಯೇ ಕ್ಷೇತ್ರಜ್ಞನು ಅಸಂಗನು. ಸತ್ತ್ವದಿಂದ ಆವೃತನಾಗಿದ್ದರೂ ಲಿಪ್ತನಾಗುವುದಿಲ್ಲ. ಇದರಲ್ಲಿ ಸಂಶಯವೇ ಇಲ್ಲ.

ದ್ರವ್ಯಮಾತ್ರಮಭೂತ್ಸತ್ತ್ವಂ ಪುರುಷಸ್ಯೇತಿ ನಿಶ್ಚಯಃ ।
ಯಥಾ ದ್ರವ್ಯಂ ಚ ಕರ್ತಾ ಚ ಸಂಯೋಗೋಽಪ್ಯನಯೋಸ್ತಥಾ॥

ಪುರುಷನಿಗೆ ಅಥವಾ ಕ್ಷೇತ್ರಜ್ಞನಿಗೆ ಉಪಭೋಗಿಸಲು ಯೋಗ್ಯವಾದ ದ್ರವ್ಯಕ್ಕೆ ಸತ್ತ್ವವೆಂಬ ಸಂಜ್ಞೆಯಿದೆಯೆಂಬುದು ನಿಶ್ಚಯ. ದ್ರವ್ಯಕ್ಕೂ ಮತ್ತು ಕರ್ತೃವಿಗೂ ಯಾವ ಸಂಬಂಧವಿರುವುದೋ–ಅದೇ ಸಂಬಂಧವು ಪುರುಷನಿಗೂ ಮತ್ತು ಸತ್ತ್ವಕ್ಕೂ ಇದೆ.

ಯಥಾ ಪ್ರದೀಪಮಾದಾಯ ಕಶ್ಚಿತ್ತಮಸಿ ಗಚ್ಛತಿ ।
ತಥಾ ಸತ್ತ್ವಪ್ರದೀಪೇನ ಗಚ್ಛನ್ತಿ ಪರಮೈಷಿಣಃ ॥೧೪॥

ಯಾವರೀತಿಯಲ್ಲಿ ಮನುಷ್ಯನು ದೀಪವನ್ನು ಹಿಡಿದುಕೊಂಡು ಕತ್ತಲಿನಲ್ಲಿ ಹೋಗುವನೋ–ಅದೇ ರೀತಿಯಲ್ಲಿ ಪರಮಪದವನ್ನು ಹೊಂದಲಿಚ್ಛಿಸುವವರು ಸತ್ತ್ವವೆಂಬ ದೀಪವನ್ನು ಹಿಡಿದುಕೊಂಡು ಹೋಗುತ್ತಾರೆ. (ಸತ್ತ್ವವೆಂಬುದು ಪರಮಪದದ ಮಾರ್ಗದಲ್ಲಿ ಪ್ರಯಾಣಮಾಡಲು ಸಾಧಕರಿಗೆ ದೀಪರೂಪವಾಗಿದೆ.)

ಯಾವದ್ದ್ರವ್ಯಂ ಗುಣಾಸ್ತಾವತ್ಪ್ರದೀಪಃ ಸಮ್ಪ್ರಕಾಶತೇ ।
ಕ್ಷೀಣೇ ದ್ರವ್ಯೇ ಗುಣೇ ಜ್ಯೋತಿರನ್ತರ್ಧಾನಾಯ ಗಚ್ಛತಿ ॥೧೫॥

ಎಲ್ಲಿಯವರೆಗೆ ದೀಪದಲ್ಲಿ ಎಣ್ಣೆ (ದ್ರವ್ಯ) ಮತ್ತು ಬತ್ತಿ (ಗುಣ) ಗಳಿರುತ್ತವೆಯೋ ಅಲ್ಲಿಯವರೆಗೂ ದೀಪವು ಬೆಳಗುತ್ತಲೇ ಇರುತ್ತದೆ. ದ್ರವ್ಯವೂ ಮತ್ತು ಗುಣವೂ ಕ್ಷೀಣಿಸಿದನಂತರ ಜ್ಯೋತಿಯು ಆರಿಹೋಗುತ್ತದೆ. ಎಲ್ಲಿಯವರೆಗೆ ಸತ್ತ್ವದಲ್ಲಿ ದ್ರವ್ಯಗಳು (ಪೃಥ್ವಿಯೇ ಮೊದಲಾದ ದ್ರವ್ಯಗಳಿಗೆ ಸಂಬಂಧಿಸಿದ ರೂಪ-ರಸಾದಿಗಳು) ಗುಣಗಳು (ಸತ್ತ್ವ-ರಜಸ್ತಮೋ ಗುಣಗಳು) ಇರುತ್ತವೆಯೋ ಅಲ್ಲಿಯವರೆಗೂ ಅದು ಬೆಳಗುತ್ತಿರುತ್ತದೆ. ಅವುಗಳಿಂದ ವಿಹೀನವಾದನಂತರ ಸತ್ತ್ವವು ಆತ್ಮನಲ್ಲಿ ಲೀನವಾಗಿ ಹೋಗುತ್ತದೆ.)

ವ್ಯಕ್ತಃ ಸತ್ತ್ವಗುಣಸ್ತ್ವೇವಂ ಪುರುಷೋಽವ್ಯಕ್ತ ಇಷ್ಯತೇ।
ಏತದ್ವಿಪ್ರಾ ವಿಜಾನೀತ ಹನ್ತ ಭೂಯೋ ಬ್ರವೀಮಿ ವಃ ॥೧೬॥

ಹೀಗೆ ಸತ್ತ್ವಗುಣವು ವ್ಯಕ್ತವಾಗಿದೆ. ಪುರುಷನು ಅವ್ಯಕ್ತನೆಂದು ಹೇಳಲ್ಪಡುತ್ತಾನೆ. ಬ್ರಹ್ಮರ್ಷಿಗಳೇ! ಸತ್ತ್ವದ ಮತ್ತು ಪುರುಷನ ಲಕ್ಷಣಗಳನ್ನು ನೀವು ಹೀಗೆ ತಿಳಿದುಕೊಳ್ಳಿರಿ. ಇದೇ ವಿಷಯವಾಗಿ ಮತ್ತೂ ನಿಮಗೆ ಹೇಳುತ್ತೇನೆ.

ಸಹಸ್ರೇಣಾಪಿ ದುರ್ಮೇಧಾ ನ ಬುದ್ಧಿಮಧಿಗಚ್ಛತಿ।
ಚತುರ್ಥೇನಾಪ್ಯಥಾಂಶೇನ ಬುದ್ಧಿಮಾನ್ಸುಖಮೇಧತೇ ॥೧೭॥

ಮಂದಬುದ್ಧಿಯುಳ್ಳವನು ಸಾವಿರ ಉಪದೇಶಗಳಿಂದಲೂ-ಉಪಾಯಗಳಿಂದಲೂ ಜ್ಞಾನವನ್ನು ಹೊಂದುವುದಿಲ್ಲ. ಬುದ್ಧಿವಂತನಾದವನು ನಾಲ್ಕನೆಯ ಒಂದು ಭಾಗದ ಉಪದೇಶದಿಂದ ಅಥವಾ ಪ್ರಯತ್ನದಿಂದ ಜ್ಞಾನವನ್ನು ಪಡೆದು ಪರಮಸುಖವನ್ನು ಅನುಭವಿಸುತ್ತಾನೆ.

ಏವಂ ಧರ್ಮಸ್ಯ ವಿಜ್ಞೇಯಂ ಸಂಸಾಧನಮುಪಾಯತಃ।
ಉಪಾಯಜ್ಞೋ ಹಿ ಮೇಧಾವೀ ಸುಖಮತ್ಯನ್ತಮಶ್ನುತೇ ॥೧೮॥

ಹೀಗೆ ವಿಚಾರಮಾಡಿ ಯಾವುದಾದರೂ ಉಪಾಯದಿಂದ ಧರ್ಮಸಾಧನೆಯ ಜ್ಞಾನವನ್ನು ಪಡೆದುಕೊಳ್ಳಬೇಕು. ಉಪಾಯವನ್ನು ತಿಳಿದಿರುವ ಮೇಧಾವಿಯಾದ ಮನುಷ್ಯನು ಅತ್ಯಂತಸುಖವನ್ನು (ಪರಮಸುಖವನ್ನು) ಅನುಭವಿಸುವನು.

ಯಥಾಧ್ವಾನಮಪಾಥೇಯಃ ಪ್ರಪನ್ನೋ ಮನುಜಃ ಕ್ವಚಿತ್।
ಕ್ಲೇಶೇನ ಯಾತಿ ಮಹತಾ ವಿನಶ್ಯೇದನ್ತರಾಪಿ ಚ ॥೧೯॥

ತಥಾ ಕರ್ಮಸು ವಿಜ್ಞೇಯಂ ಫಲಂ ಭವತಿ ವಾ ನ ವಾ।
ಪುರುಷಸ್ಯಾತ್ಮನಿಃಶ್ರೇಯಃ ಶುಭಾಶುಭನಿದರ್ಶನಮ್ ॥೨೦॥

ಯಾತ್ರಿಕನೊಬ್ಬನು ಆಹಾರದ ಬುತ್ತಿಯನ್ನು ಕಟ್ಟಿಕೊಳ್ಳದೆ ಮಾರ್ಗದಲ್ಲಿ ಹೊರಟರೆ ಮಹಾಕ್ಲೇಶಕ್ಕೆ ಗುರಿಯಾಗುತ್ತಾನೆ. ಅವನು ಮಾರ್ಗ

ಮಧ್ಯದಲ್ಲಿಯೇ ವಿನಾಶವನ್ನು ಹೊಂದಬಹುದು. ಅದೇ ರೀತಿಯಲ್ಲಿ ಕರ್ಮಫಲವನ್ನು ತಿಳಿಯಬೇಕು. ಶುಭಕರ್ಮಫಲವೆಂಬ ಬುತ್ತಿಯನ್ನು ಕಟ್ಟಿಕೊಂಡು ಹೋದರೆ ಪರಲೋಕದಲ್ಲಿ ಸುಖವಾಗಿರುತ್ತಾನೆ. ಇಲ್ಲದಿದ್ದರೆ ಕಷ್ಟಕ್ಕೆ ಗುರಿಯಾಗಿ ನಾಶಹೊಂದುತ್ತಾನೆ. ಮನುಷ್ಯನಿಗೆ ಆತ್ಮಕಲ್ಯಾಣಕ್ಕೂ ಹೀಗೆಯೇ ಶುಭಕರ್ಮಗಳು ಸಾಧನಗಳಾಗುತ್ತವೆ ಮತ್ತು ಅಶುಭಕರ್ಮಗಳು ಕಾರಣವಾಗುವುದಿಲ್ಲವೆಂಬುದನ್ನು ತಿಳಿಯಬೇಕು.

ಯಥಾ ಚ ದೀರ್ಘಮಧ್ವಾನಂ ಪದ್ಭ್ಯಾಮೇವ ಪ್ರಪದ್ಯತೇ ।

ಅದೃಷ್ಟಪೂರ್ವಂ ಸಹಸಾ ಸತ್ತ್ವದರ್ಶನವರ್ಜಿತಃ ॥೨೧॥

ಯಾವ ರೀತಿಯಲ್ಲಿ ಹಿಂದೆಂದೂ ಕಾಣದ ಸುದೀರ್ಘವಾದ ಹಾದಿಯನ್ನು ಕಾಲ್ನಡಿಗೆಯಲ್ಲಿಯೇ ಪ್ರಯಾಣಮಾಡಬೇಕೆಂದು ಹೊರಟವನು ತಾನು ಸೇರಬೇಕಾಗಿರುವ ಸ್ಥಾನವನ್ನು ತಲುಪುವುದೇ ಇಲ್ಲವೋ–ಅದೇ ರೀತಿಯಲ್ಲಿ ತತ್ತ್ವಜ್ಞಾನದಿಂದ ರಹಿತನಾದವನು ತಲುಪಬೇಕಾದ ಪರಮಪದವನ್ನು ಎಂದಿಗೂ ಸೇರುವುದೇ ಇಲ್ಲ.

ತಮೇವ ಚ ಯಥಾಧ್ವಾನಂ ರಥೇನೇಹಾಶುಗಾಮಿನಾ ।
ಗಚ್ಛತ್ಯಶ್ವಪ್ರಯುಕ್ತೇನ ತಥಾ ಬುದ್ಧಿಮತಾಂ ಗತಿಃ ।
ಊರ್ಧ್ವಂ ಪರ್ವತಮಾರುಹ್ಯ ನಾನ್ವವೇಕ್ಷೇತ ಭೂತಲಮ್ ॥೨೨॥

ಆದರೆ ಅದೇ ಸುದೀರ್ಘವಾದ ಮತ್ತು ಹಿಂದೆಂದೂ ಕಾಣದ ಮಾರ್ಗವನ್ನು ಶೀಘ್ರವಾಗಿ ಹೋಗುವ ಕುದುರೆಗಳನ್ನು ಹೂಡಿರುವ ರಥದಲ್ಲಿ ಕುಳಿತು ಬಹಳ ಶೀಘ್ರವಾಗಿ ದಾಟಿಕೊಂಡು ಹೋಗಬೇಕಾದ ಸ್ಥಾನಕ್ಕೆ ಹೋಗುವವನ ಪ್ರಯಾಣದಂತಿದೆ ಬುದ್ಧಿವಂತರ ಗಮನ. (ಬುದ್ಧಿವಂತರಾದ ತತ್ತ್ವದರ್ಶಿಗಳು ಗುರಿಯನ್ನು ಬಹಳ ಬೇಗ ಮುಟ್ಟುತ್ತಾರೆ.)

ಎತ್ತರವಾದ ಪರ್ವತವನ್ನು ಹತ್ತಿದನಂತರ ಬಹಳ ಕೆಳಗಿರುವ ಭೂಮಿಯನ್ನು ನೋಡದಂತೆ–ಜ್ಞಾನಿಗಳಾದವರು ಮೋಕ್ಷರೂಪವಾದ ಪರಮೋಚ್ಚಸ್ಥಾನಕ್ಕೆ ಹೋದನಂತರ ಪ್ರಪಂಚದ ಕಡೆಗೆ ನೋಡುವುದಿಲ್ಲ.

ರಥೇನ ರಥಿನಂ ಪಶ್ಯ ಕ್ಲಿಶ್ಯಮಾನಮಚೇತನಮ್ ॥೨೩॥

ಯಾವದ್ರಥಪಥಸ್ತಾವದ್ರಥೇನ ಸ ತು ಗಚ್ಛತಿ ।
ಕ್ಷೀಣೇ ರಥಪಥೇ ವಿದ್ವಾನ್ರಥಮುತ್ಸೃಜ್ಯ ಗಚ್ಛತಿ ॥೨೪॥

ರಥವಿದ್ದರೂ ಮೂರ್ಖನಾದ ಮನುಷ್ಯನು ಸೇರಬೇಕಾದ ಸ್ಥಾನವನ್ನು ಸೇರಿಯೇ ತೀರುವನೆಂಬ ನಿಯಮವಿಲ್ಲ. ರಥದಲ್ಲಿ ಪ್ರಯಾಣ ಮಾಡುತ್ತಿದ್ದರೂ ಪರ್ವತವೊಂದು ಎದುರಾದೊಡನೆಯೇ ಮುಂದೆ ಪ್ರಯಾಣಮಾಡಲು ಸಾಧ್ಯವಾಗದೇ ಕಷ್ಟಕ್ಕೆ ಸಿಕ್ಕಿಕ್ಕೊಳ್ಳುವುದನ್ನೂ ಕಾಣಬಹುದಾಗಿದೆ. (ಹಾಗೆಯೇ ವಿದ್ವಾಂಸನೂ ಯೋಗಮಾರ್ಗದಲ್ಲಿ ಹೋಗುತ್ತಿರುವಾಗ ಪರಮೋನ್ನತವಾದ ಸ್ಥಾನಕ್ಕೆ ಹೋಗುವ ಸಮಯದಲ್ಲಿ ಭ್ರಮಿಸುವುದು ಸ್ವಾಭಾವಿಕ.) ಆದುದರಿಂದ ವಿದ್ವಾಂಸನಾದ ಯಾತ್ರಿಕನು ರಥದ ಹಾದಿಯಿರುವವರೆಗೂ ರಥದಲ್ಲಿಯೇ ಹೋಗುತ್ತಾನೆ. ರಥದ ಹಾದಿಯು ಮುಗಿದು ರಥವು ಮುಂದೆ ಸಾಗದಂತಾದಾಗ ರಥವನ್ನು ಪರಿತ್ಯಜಿಸಿ ಕಾಲ್ನಡಿಗೆಯಲ್ಲಿಯೇ ತಾನು ತಲುಪಬೇಕಾದ ಸ್ಥಳಕ್ಕೆ ಹೋಗುತ್ತಾನೆ.

ಏವಂ ಗಚ್ಛತಿ ಮೇಧಾವೀ ತತ್ತ್ವಯೋಗವಿಧಾನವಿತ್ ।
ಪರಿಜ್ಞಾಯ ಗುಣಜ್ಞಶ್ಚ ಉತ್ತರಾದುತ್ತರೋತ್ತರಮ್ ॥೨೫॥

ಹೀಗೆಯೇ ಮೇಧಾವಿಯಾದವನು ತತ್ತ್ವವನ್ನೂ ಮತ್ತು ಯೋಗವಿಧಾನಗಳನ್ನೂ, ಗುಣಗಳ ಸ್ವರೂಪವನ್ನೂ, ಮುಂದು-ಮುಂದಿನ ಹಾದಿಯನ್ನೂ ತಿಳಿದುಕೊಂಡು ಪರಮಪದದ ಗುರಿಯನ್ನು ಮುಟ್ಟುತ್ತಾನೆ.

ಯಥಾರ್ಣವಂ ಮಹಾಘೋರಮಪ್ಲವಃ ಸಮ್ಪ್ರಗಾಹತೇ ।
ಬಾಹುಭ್ಯಾಮೇವ ಸಮ್ಮೋಹಾದ್ವಧಂ ವಾಞ್ಛತ್ಯಸಂಶಯಮ್ ॥೨೬॥

ಮಹಾಘೋರವಾದ (ವಿಸ್ತಾರವಾದ) ಸಮುದ್ರವನ್ನು ನಾವೆಯಿಲ್ಲದೇ ಮೋಹವಶವಾಗಿ ಎರಡೂ ಕೈಗಳಿಂದಲೇ ಈಜಿಕೊಂಡು ದಾಟಲಿಚ್ಛಿಸಿ ಸಮುದ್ರದಲ್ಲಿ ಬೀಳುವವನು ತನ್ನ ವಿನಾಶವನ್ನೇ ಆಶಿಸಿ ಹಾಗೆ ಮಾಡುವನೆಂಬುದರಲ್ಲಿ ಸಂಶಯವೇ ಇಲ್ಲ. ಹಾಗೆಯೇ ಭವಸಾಗರವನ್ನು ದಾಟಲು ಇಚ್ಛಿಸುವವನು, ಜ್ಞಾನದ ಆಶ್ರಯವಿಲ್ಲದೇ ಅಜ್ಞಾನದಿಂದಲೇ ದಾಟುವುದಾಗಿ ನಿಶ್ಚಯಿಸಿ, ಮಹಾಘೋರವಾದ ಸಂಸಾರಸಾಗರದಲ್ಲಿ ಬೀಳುವವನು ವಿನಾಶವನ್ನೇ ಹೊಂದುತ್ತಾನೆ. ಸಮುದ್ರವನ್ನು ದಾಟಲು

ನಾವೆಯನ್ನು ಆಶ್ರಯಿಸುವಂತೆ–ಭವಸಾಗರವನ್ನು ದಾಟಲು ಜ್ಞಾನವನ್ನು ಆಶ್ರಯಿಸಬೇಕು.

ನಾವಾ ಚಾಪಿ ಯಥಾ ಪ್ರಾಜ್ಞೋ ವಿಭಾಗಜ್ಞಃ ಸ್ವರಿತ್ರಯಾ ।
ಆಶ್ರಾನ್ತಃ ಸಲಿಲೇ ಗಚ್ಛೇಚ್ಛೀಘ್ರಂ ಸಂತರತೇ ಹ್ರದಮ್ ॥೨೭॥

ತೀರ್ಣೋ ಗಚ್ಛೇತ್ಪರಂ ಪಾರಂ ನಾವಮುತ್ಸೃಜ್ಯ ನಿರ್ಮಮಃ ।
ವ್ಯಾಖ್ಯಾತಂ ಪೂರ್ವಕಲ್ಪೇನ ಯಥಾ ರಥಪದಾತಿನೋಃ ॥೨೮॥

ಯಾವ ರೀತಿಯಲ್ಲಿ ಸಮುದ್ರಮಾರ್ಗದ ವಿಭಾಗಗಳನ್ನು ತಿಳಿದಿರುವ ಬುದ್ಧಿವಂತನಾದ ನಾವಿಕನು, ಸುಂದರವಾದ ಹುಟ್ಟಿನಿಂದ (ನಾವೆಯನ್ನು ನಡೆಸುವ ಜಲ್ಲೆಯಿಂದ) ಕೂಡಿರುವ ನಾವೆಯ ಮೂಲಕ ಅನಾಯಾಸವಾಗಿ ಸಮುದ್ರದಲ್ಲಿ ಪ್ರಯಾಣವನ್ನು ಮಾಡುತ್ತಾ, ಬಹಳ ಶೀಘ್ರವಾಗಿ ಸಮುದ್ರವನ್ನು ದಾಟಿ ಆಚೆಯ ದಡವನ್ನು ಸೇರಿದನಂತರ ನಾವೆಯ ಮೇಲೆ ಯಾವ ಮಮತೆಯನ್ನೂ ಇಟ್ಟುಕೊಳ್ಳದೇ ಅದನ್ನು ಬಿಟ್ಟು ಹೊರಟು ಹೋಗುತ್ತಾನೆಯೋ–ಅದೇ ರೀತಿಯಲ್ಲಿ ಸಂಸಾರಸಾಗರವನ್ನು ದಾಟಿದ ನಂತರ ಅದಕ್ಕೆ ಸಾಧನಭೂತವಾದ ಕರ್ಮಗಳ ಮೇಲಿನ ವ್ಯಾಮೋಹವನ್ನು ಜ್ಞಾನಿಯು ತ್ಯಜಿಸುತ್ತಾನೆ. ಈ ವಿಷಯವನ್ನೇ ರಥದಲ್ಲಿ ಹೋಗುವವನ ಮತ್ತು ಕಾಲ್ನಡಿಗೆಯಲ್ಲಿ ಪ್ರಯಾಣಮಾಡುವವನ ಉದಾಹರಣೆಗಳನ್ನು ಕೊಟ್ಟು ಈ ಹಿಂದೆ ಹೇಳಲಾಗಿದೆ.

ಸ್ನೇಹಾತ್ಸಮ್ಮೋಹಮಾಪನ್ನೋ ನಾವಿ ದಾಶೋ ಯಥಾ ತಥಾ ।
ಮಮತ್ವೇನಾಭಿಭೂತಃ ಸಂಸ್ತತ್ರೈವ ಪರಿವರ್ತತೇ ॥೨೯॥

ಆದರೆ ಹಡಗಿನಲ್ಲಿಯೇ ಆಸಕ್ತಿಯನ್ನು ಹೊಂದಿ ಅದರಲ್ಲಿಯೇ ವ್ಯಾಮೋಹವುಳ್ಳವನಾಗಿ ಅದು ತನ್ನದೆಂಬ ಅಭಿಮಾನವನ್ನು ಹೊಂದಿರುವ ಅಂಬಿಗನು ಯಾವಾಗಲೂ ಸಮುದ್ರದಲ್ಲಿಯೇ ಸುತ್ತುತ್ತಿರುವಂತೆ–ದೇಹದಲ್ಲಿಯೇ ಆಸಕ್ತಿಯನ್ನು ಹೊಂದಿ ದೇಹವು ತನ್ನದೆಂಬ ಮಮಕಾರದಿಂದ ಕೂಡಿರುವ ಮನುಷ್ಯನು ಸಂಸಾರಚಕ್ರದಲ್ಲಿ ಅನವರತವಾಗಿ ಸುತ್ತುತ್ತಲೇ ಇರುತ್ತಾನೆ.

ನಾವಂ ನ ಶಕ್ಯಮಾರುಹ್ಯ ಸ್ಥಲೇ ವಿಪರಿವರ್ತಿತುಮ್ ।
ತಥೈವ ರಥಮಾರುಹ್ಯ ನಾಪ್ಸು ಚರ್ಯಾ ವಿಧೀಯತೇ ॥೩೦॥

ಏವಂ ಕರ್ಮ ಕೃತಂ ಚಿತ್ರಂ ವಿಷಯಸ್ಥಂ ಪೃಥಕ್ಪೃಥಕ್ ।
ಯಥಾ ಕರ್ಮ ಕೃತಂ ಲೋಕೇ ತಥೈತಾನುಪಪದ್ಯತೇ ॥೩೧॥

ನಾವೆಯಲ್ಲಿ ಕುಳಿತವನು ನೆಲದ ಮೇಲೆ ಸಂಚರಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ರಥದಲ್ಲಿ ಕುಳಿತವನು ಸಮುದ್ರದಲ್ಲಿ ಯಾನಮಾಡಲು ಸಾಧ್ಯವಾಗುವುದಿಲ್ಲ. ಹೀಗೆ ವಿಚಿತ್ರವಾದ ಒಂದೊಂದು ಕರ್ಮವೂ ಒಂದೊಂದು ಸ್ಥಾನಕ್ಕೆ ಪ್ರತ್ಯೇಕ-ಪ್ರತ್ಯೇಕವಾಗಿ ಮನುಷ್ಯನನ್ನು ಒಯ್ಯುತ್ತದೆ. ಪ್ರಪಂಚದಲ್ಲಿ ಮನುಷ್ಯನು ಯಾವ ಮಾರ್ಗವನ್ನು ಆಶ್ರಯಿಸಿ ಯಾವ ಕರ್ಮವನ್ನು ಮಾಡುವನೋ-ಅಂತಹ ಕರ್ಮಕ್ಕೆ ಅನುರೂಪವಾದ ಫಲವನ್ನೇ ಪಡೆಯುತ್ತಾನೆ.

ಯನ್ನೈವ ಗನ್ಧಿನೋ ರಸ್ಯಂ ನ ರೂಪಸ್ಪರ್ಶಶಬ್ದವತ್।
ಮನ್ಯನ್ತೇ ಮುನಯೋ ಬುದ್ಧ್ಯಾ ತತ್ಪ್ರಧಾನಂ ಪ್ರಚಕ್ಷತೇ ॥೩೨॥

ಯಾವುದು ಗಂಧ-ರಸ-ರೂಪ-ಸ್ಪರ್ಶ ಮತ್ತು ಶಬ್ದಗಳಿಂದ ಯುಕ್ತವಾಗಿಲ್ಲವೋ, ಮುನಿಗಳು ಬುದ್ಧಿಯ ಮೂಲಕವಾಗಿ ಯಾವುದನ್ನು ತಿಳಿದುಕೊಳ್ಳುತ್ತಾರೆಯೋ–ಅದನ್ನೇ ಪ್ರಧಾನ ಅಥವಾ ಮೂಲಪ್ರಕೃತಿ ಎನ್ನುತ್ತಾರೆ.

ತತ್ರ ಪ್ರಧಾನಮವ್ಯಕ್ತಮವ್ಯಕ್ತಸ್ಯ ಗುಣೋ ಮಹಾನ್ ।
ಮಹತ್ಪ್ರಧಾನಭೂತಸ್ಯ ಗುಣೋಽಹಂಕಾರ ಏವ ಚ ॥೩೩॥

ಈ ಪ್ರಧಾನವನ್ನೇ ಅವ್ಯಕ್ತವೆಂದೂ ಹೇಳುತ್ತಾರೆ. ಅವ್ಯಕ್ತದ ಕಾರ್ಯವು ಮಹತ್ತತ್ತ್ವವಾಗಿದೆ. ಅವ್ಯಕ್ತಪ್ರಕೃತಿಯಿಂದ ಹುಟ್ಟಿದ ಮಹತ್ತತ್ತ್ವದ ಕಾರ್ಯವು ಅಹಂಕಾರವಾಗಿದೆ.

ಅಹಂಕಾರಾತ್ತು ಸಮ್ಭೂತೋ ಮಹಾಭೂತಕೃತೋಗುಣಃ ।
ಪೃಥಕ್ತ್ವೇನ ಹಿ ಭೂತಾನಾಂ ವಿಷಯಾ ವೈ ಗುಣಾಃ ಸ್ಮೃತಾಃ ॥೩೪॥

ಪಂಚಮಹಾಭೂತಗಳಿಂದ ಪ್ರಕಟಗೊಳ್ಳುವ ಶಬ್ದ-ಸ್ಪರ್ಶಾದಿ ಗುಣ

ಗಳು ಅಹಂಕಾರದಿಂದಲೇ ಹುಟ್ಟಿವೆ. ಪಂಚಭೂತಗಳ ವಿಷಯಗಳು ಪ್ರತ್ಯೇಕ-ಪ್ರತ್ಯೇಕವಾಗಿ ಶಬ್ದ-ಸ್ಪರ್ಶಾದಿ ಗುಣಗಳೆಂದು ಹೇಳಲ್ಪಟ್ಟಿವೆ.

ಬೀಜಧರ್ಮಂ ತಥಾವ್ಯಕ್ತಂ ಪ್ರಸವಾತ್ಮಕಮೇವ ಚ ।
ಬೀಜಧರ್ಮಾ ಮಹಾನಾತ್ಮಾ ಪ್ರಸವಶ್ಚೇತಿ ನಃ ಶ್ರುತಮ್ ॥೩೫॥

ಅವ್ಯಕ್ತಪ್ರಕೃತಿಯು ಅಥವಾ ಪ್ರಧಾನವು ಕಾರಣವೂ ಆಗಿದೆ; ಕಾರ್ಯವೂ ಆಗಿದೆ. ಹೀಗೆಯೇ ಅವ್ಯಕ್ತಪ್ರಕೃತಿಯಿಂದ ಹುಟ್ಟಿದ ಮಹತ್ತತ್ತ್ವವೂ ಕಾರಣವೂ ಆಗಿದೆ; ಕಾರ್ಯವೂ ಆಗಿದೆಯೆಂಬುದನ್ನು ನಾವು ಕೇಳಿದ್ದೇವೆ.

ಬೀಜಧರ್ಮಸ್ತ್ವಹಂಕಾರಃ ಪ್ರಸವಶ್ಚ ಪುನಃ ಪುನಃ ।
ಬೀಜಪ್ರಸವಧರ್ಮಾಣಿ ಮಹಾಭೂತಾನಿ ಪಞ್ಚ ವೈ ॥೩೬॥

ಮಹತ್ತತ್ತ್ವದಿಂದ ಹುಟ್ಟಿದ ಅಹಂಕಾರವು ಕೂಡ ಕಾರಣವೂ ಆಗಿದೆ; ಕಾರ್ಯವೂ ಆಗಿದೆ. ಅಹಂಕಾರದಿಂದ ಹುಟ್ಟಿದ ಪಂಚಮಹಾಭೂತಗಳೂ ಕಾರ್ಯವೂ ಆಗಿವೆ; ಕಾರಣವೂ ಆಗಿವೆ.

ಬೀಜಧರ್ಮಿಣ ಇತ್ಯಾಹುಃ ಪ್ರಸವಂ ಚ ಪ್ರಕುರ್ವತೇ ।
ವಿಶೇಷಾಃ ಪಞ್ಚಭೂತಾನಾಂ ತೇಷಾಂ ಚಿತ್ತಂ ವಿಶೇಷಣಮ್ ॥೩೭॥

ಈ ಪಂಚಮಹಾಭೂತಗಳೂ ಬೀಜಧರ್ಮವುಳ್ಳವುಗಳೆಂದೂ (ಕಾರ್ಯಗಳೆಂದೂ) ಪ್ರಸವಧರ್ಮಗಳುಳ್ಳವುಗಳೆಂದೂ (ಕಾರಣಗಳೆಂದೂ) ಹೇಳುತ್ತಾರೆ. ಪಂಚಮಹಾಭೂತಗಳ ವಿಶೇಷವಾದ ಕಾರ್ಯವು ಶಬ್ದ-ಸ್ಪರ್ಶಾದಿ ವಿಷಯವೇ ಆಗಿವೆ. ಈ ವಿಷಯಗಳನ್ನು ನಡೆಸುವುದು ಮಾತ್ರ ಚಿತ್ತವಾಗಿದೆ.

ತತ್ರೈಕಗುಣಮಾಕಾಶಂ ದ್ವಿಗುಣೋ ವಾಯುರುಚ್ಯತೇ ।
ತ್ರಿಗುಣಂ ಜ್ಯೋತಿರಿತ್ಯಾಹುರಾಪಶ್ಚಾಪಿ ಚತುರ್ಗುಣಾಃ ॥೩೮॥

ಪೃಥ್ವೀ ಪಞ್ಚಗುಣಾ ಜ್ಞೇಯಾ ಚರಸ್ಥಾವರಸಂಕುಲಾ ।
ಸರ್ವಭೂತಕರೀ ದೇವೀ ಶುಭಾಶುಭನಿದರ್ಶಿನೀ ॥೩೯॥

ಪಂಚಮಹಾಭೂತಗಳಲ್ಲಿ ಆಕಾಶವು ಒಂದೇ ಗುಣವನ್ನು ಹೊಂದಿದೆ.

ವಾಯುವಿಗೆ ಎರಡು ಗುಣಗಳಿವೆ. ತೇಜಸ್ಸಿಗೆ ಮೂರು ಗುಣಗಳಿವೆ. ನೀರಿಗೆ ನಾಲ್ಕು ಗುಣಗಳಿವೆ. ಸ್ಥಾವರ-ಜಂಗಮಗಳಿಂದ ಸಮಾಕುಲವಾಗಿರುವ ಪೃಥ್ವಿಗೆ ಐದು ಗುಣಗಳಿವೆ. ಪೃಥ್ವೀದೇವಿಯು ಎಲ್ಲ ಪ್ರಾಣಿಗಳಿಗೂ ಜನ್ಮವೀಯುವವಳೂ-ಶುಭಾಶುಭಕರ್ಮಗಳನ್ನು ನಿರ್ದೇಶಮಾಡುವವಳೂ ಆಗಿದ್ದಾಳೆ.

ಶಬ್ದಃ ಸ್ಪರ್ಶಸ್ತಥಾ ರೂಪಂ ರಸೋ ಗನ್ಧಶ್ಚ ಪಞ್ಚಮಃ ।
ಏತೇ ಪಞ್ಚಗುಣಾ ಭೂಮೇರ್ವಿಜ್ಞೇಯಾ ದ್ವಿಜಸತ್ತಮಾಃ ॥೪೦॥

ವಿಪ್ರಶ್ರೇಷ್ಠರೇ! ಶಬ್ದ, ಸ್ಪರ್ಶ, ರೂಪ, ರಸ, ಐದನೆಯದಾದ ಗಂಧ ಈ ಐದು ಗುಣಗಳೂ ಪೃಥ್ವಿಗೆ ಇರುವುವೆಂದು ತಿಳಿಯಬೇಕು.

ಪಾರ್ಥಿವಶ್ಚ ಸದಾ ಗನ್ಧೋ ಗನ್ಧಶ್ಚ ಬಹುಧಾ ಸ್ಮೃತಃ।
ತಸ್ಯ ಗನ್ಧಸ್ಯ ವಕ್ಷ್ಯಾಮಿ ವಿಸ್ತರೇಣ ಬಹೂನ್ಗುಣಾನ್ ॥೪೧॥

ಆದರೆ ಪೃಥ್ವಿಯು ಮುಖ್ಯವಾಗಿ ಗಂಧಗುಣವುಳ್ಳದ್ದು. ಆ ಗಂಧವೂ ಅನೇಕಪ್ರಕಾರವಾಗಿರುವುದೆಂದು ಹೇಳುತ್ತಾರೆ. ನಾನು ಗಂಧದ ಅನೇಕ ಪ್ರಕಾರವಾದ ಗುಣಗಳನ್ನು ಸವಿಸ್ತರವಾಗಿ ಹೇಳುತ್ತೇನೆ.

ಇಷ್ಟಶ್ಚಾನಿಷ್ಟಗನ್ಧಶ್ಚ ಮಧುರೋಽಮ್ಲಃ ಕಟುಸ್ತಥಾ ।
ನಿರ್ಹಾರೀ ಸಂಹತಃ ಸ್ನಿಗ್ಧೋ ರೂಕ್ಷೋ ವಿಶದ ಏವ ಚ ।
ಏವಂ ದಶವಿಧೋ ಜ್ಞೇಯಃ ಪಾರ್ಥಿವೋ ಗನ್ಧ ಇತ್ಯುತ ॥೪೨॥

ಇಷ್ಟಗಂಧ(ಸುಗಂಧ), ಅನಿಷ್ಟಗಂಧ (ದುರ್ಗಂಧ), ಮಧುರ, ಹುಳಿ, ಕಟು (ಕಾರ), ನಿರ್ಹಾರೀ (ಬಹಳ ದೂರದವರೆಗೂ ವ್ಯಾಪಿಸುವುದು), ಮಿಶ್ರಿತ, ಸ್ನಿಗ್ಧ, ರೂಕ್ಷ (ಕಠಿನ), ವಿಶದ (ನಿರ್ಮಲ)–ಹೀಗೆ ಗಂಧವು ಹತ್ತು ವಿಧಗಳೆಂದು ಹೇಳುತ್ತಾರೆ.

ಶಬ್ದಃ ಸ್ಪರ್ಶಸ್ತಥಾ ರೂಪಂ ದ್ರವಶ್ಚಾಪಾಂ ಗುಣಾಃ ಸ್ಮೃತಾಃ ।
ರಸಜ್ಞಾನಂ ತು ವಕ್ಷ್ಯಾಮಿ ರಸಸ್ತು ಬಹುಧಾ ಸ್ಮೃತಃ ॥೪೩॥

ಶಬ್ದ-ಸ್ಪರ್ಶ-ರೂಪ-ರಸಗಳೆಂಬ ನೀರಿನ ಗುಣಗಳು ನಾಲ್ಕು. ಅವುಗಳಲ್ಲಿ ರಸವೇ ನೀರಿನ ಮುಖ್ಯಗುಣವಾಗಿದೆ. ರಸಗಳೂ ಬಹುಪ್ರಕಾರವಾಗಿವೆ. ಇನ್ನು ಮುಂದೆ ರಸವಿಜ್ಞಾನವನ್ನು ಹೇಳುತ್ತೇನೆ.

ಮಧುರೋಽಮ್ಲ ಕಟುಸ್ತಿಕ್ತಃ ಕಷಾಯೋ ಲವಣಸ್ತಥಾ ।
ಏಷ ಷಡ್ವಿಧವಿಸ್ತಾರೋ ರಸೋ ವಾರಿಮಯಃ ಸ್ಮೃತಃ ॥೪೪॥

ಮಧುರ (ಸಿಹಿ), ಆಮ್ಲ (ಹುಳಿ), ಕಟು (ಕಾರ), ತಿಕ್ತ (ಕಹಿ), ಕಷಾಯ (ಒಗರು) ಮತ್ತು ಲವಣ (ಉಪ್ಪು) - ಹೀಗೆ ಜಲಮಯವಾದ ರಸವು ಆರು ಪ್ರಕಾರವಾಗಿ ಹೇಳಲ್ಪಟ್ಟಿದೆ.

ಶಬ್ದಃ ಸ್ಪರ್ಶಸ್ತಥಾ ರೂಪಂ ತ್ರಿಗುಣಂ ಜ್ಯೋತಿರುಚ್ಯತೇ ।
ಜ್ಯೋತಿಷಶ್ಚ ಗುಣೋ ರೂಪಂ ರೂಪಂ ಚ ಬಹುಧಾ ಸ್ಮೃತಮ್ ॥೪೫॥

ತೇಜಸ್ಸಿಗೆ ಶಬ್ದ, ಸ್ಪರ್ಶ ಮತ್ತು ರೂಪಗಳೆಂಬ ಮೂರು ಗುಣಗಳಿವೆ. ಆದರೆ ರೂಪವು ತೇಜಸ್ಸಿನ ಮುಖ್ಯವಾದ ಗುಣ. ರೂಪವು ಬಹುಪ್ರಕಾರವಾಗಿರುವುದೆಂದು ಹೇಳಲ್ಪಟ್ಟಿದೆ.

ಶುಕ್ಲಂ ಕೃಷ್ಣಂ ತಥಾ ರಕ್ತಂ ನೀಲಂ ಪೀತಾರುಣಂ ತಥಾ ।
ಹ್ರಸ್ವಂ ದೀರ್ಘಂ ಕೃಶಂ ಸ್ಥೂಲಂ ಚತುರಸ್ರಂ ತು ವೃತ್ತವತ್ ॥೪೬॥

ಏವಂ ದ್ವಾದಶ ವಿಸ್ತಾರಂ ತೇಜಸೋ ರೂಪಮುಚ್ಯತೇ ।
ವಿಜ್ಞೇಯಂ ಬ್ರಾಹ್ಮಣೈರ್ವೃದ್ಧೈರ್ಧರ್ಮಜ್ಞೈಃ ಸತ್ಯವಾದಿಭಿಃ ॥೪೭॥

ಬಿಳುಪು, ಕಪ್ಪು, ಕೆಂಪು, ನೀಲಿ, ಹಳದಿ, ಅರುಣ, ಹ್ರಸ್ವ, ದೀರ್ಘ, ಕೃಶ, ಸ್ಥೂಲ, ಚಚ್ಚೌಕ ಮತ್ತು ದುಂಡು–ಈ ಹನ್ನೆರಡೂ ರೂಪದ ಬಹುರೂಪಗಳು. ಇವುಗಳ ಸ್ವರೂಪವನ್ನು ಸತ್ಯವಾದಿಗಳಾದ, ವೃದ್ಧರಾದ, ಧರ್ಮಜ್ಞರಾದ ಬ್ರಾಹ್ಮಣರು ತಿಳಿದುಕೊಳ್ಳಬೇಕು.

ಶಬ್ದಸ್ಪರ್ಶೌ ಚ ವಿಜ್ಞೇಯೌ ದ್ವಿಗುಣೋ ವಾಯುರುಚ್ಯತೇ ।
ವಾಯೋಶ್ಚಾಪಿ ಗುಣಃ ಸ್ಪರ್ಶ ಸ್ಪರ್ಶಶ್ಚ ಬಹುಧಾ ಸ್ಮೃತಃ ॥೪೮॥

ಶಬ್ದ ಮತ್ತು ಸ್ಪರ್ಶ–ಈ ಎರಡೂ ವಾಯುವಿನ ಗುಣಗಳಾಗಿವೆ. ಸ್ಪರ್ಶವು ವಾಯುವಿನ ಮುಖ್ಯವಾದ ಗುಣ. ಸ್ಪರ್ಶದ ಗುಣಗಳೂ ನಾನಾ ಪ್ರಕಾರವಾಗಿದೆಯೆಂದು ಹೇಳುತ್ತಾರೆ.

ಉಷ್ಣಃ ಶೀತಃ ಸುಖೋ ದುಃಖಃ ಸ್ನಿಗ್ಧೋ ವಿಶದ ಏವ ಚ ।
ಕಠಿನಶ್ಚಿಕ್ಕಣಃ ಶ್ಲಕ್ಷ್ಣಃ ಪಿಚ್ಛಿಲೋ ದಾರುಣೋ ಮೃದುಃ ॥೪೯॥

ಏವಂ ದ್ವಾದಶವಿಸ್ತಾರೋ ವಾಯವ್ಯೋ ಗುಣ ಉಚ್ಯತೇ ।
ವಿಧಿವದ್ಬ್ರಾಹ್ಮಣೈಃ ಸಿದ್ಧೈರ್ಧರ್ಮಜ್ಞೈಸ್ತತ್ತ್ವದರ್ಶಿಭಿಃ ॥೫೦॥

ಶೀತ, ಉಷ್ಣ, ಸುಖ, ದುಃಖ, ಸ್ನಿಗ್ಧ, ವಿಶದ, ಕಠಿನ, ಚಿಕ್ಕಣ (ನುಣುಪು), ಶ್ಲಕ್ಷ್ಣ, ಪಿಚ್ಛಿಲ (ಜಿಡ್ಡು), ದಾರುಣ ಮತ್ತು ಕೋಮಲ-ಈ ಹನ್ನೆರಡೂ ವಾಯುವಿನ ಗುಣವಾದ ಸ್ಪರ್ಶದ ವಿಸ್ತಾರವೆಂದು ಧರ್ಮಜ್ಞರಾದ, ತತ್ತ್ವದರ್ಶಿಗಳಾದ, ಸಿದ್ಧರಾದ ಬ್ರಾಹ್ಮಣರು ವಿಧಿವತ್ತಾಗಿ ಹೇಳುತ್ತಾರೆ.

ತತ್ರೈಕಗುಣಮಾಕಾರಂ ಶಬ್ದ ಇತ್ಯೇವ ಚ ಸ್ಮೃತಃ ॥೫೧॥

ಇವುಗಳಲ್ಲಿ ಆಕಾಶವು ಒಂದೇ ಗುಣವನ್ನು ಹೊಂದಿದೆ. 'ಶಬ್ದ'-ಎಂದೇ ಆ ಗುಣಕ್ಕೆ ಹೆಸರು. ಶಬ್ದವು ಅನೇಕಪ್ರಕಾರವಾಗಿದೆ. ಅದಕ್ಕಿರುವ ಅನೇಕಗುಣಗಳನ್ನು ಹೇಳುತ್ತೇನೆ.

ಷಡ್ಜರ್ಷಭಃ ಸ ಗಾನ್ಧಾರೋ ಮಧ್ಯಮಃ ಪಞ್ಚಮಸ್ತಥಾ ।
ಅತಃ ಪರಂ ತು ವಿಜ್ಞೇಯೋ ನಿಷಾದೋ ಧೈವತಸ್ತಥಾ ॥೫೨॥

ಇಷ್ಟಶ್ಚಾನಿಷ್ಟಶಬ್ದಶ್ಚ ಸಂಹತಃ ಪ್ರವಿಭಾಗವಾನ್ ।
ಏವಂ ದಶವಿಧೋ ಜ್ಞೇಯಃ ಶಬ್ದ ಆಕಾಶಸಮ್ಭವಃ ॥೫೩॥

ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ನಿಷಾದ, ಧೈವತ, ಇಷ್ಟ (ಪ್ರಿಯ), ಅನಿಷ್ಟ (ಅಪ್ರಿಯ), ಸಂಹತ (ಶ್ಲಿಷ್ಟ)-ಹೀಗೆ ಆಕಾಶದಿಂದ ಹುಟ್ಟಿದ ಶಬ್ದವು ಹತ್ತು ಭಾಗಗಳಾಗಿ ವಿಸ್ತಾರಗೊಂಡಿದೆ.

ಆಕಾಶಮುತ್ತಮಂ ಭೂತಮಹಂಕಾರಸ್ತತಃ ಪರಃ ।
ಅಹಂಕಾರತ್ಪರಾ ಬುದ್ಧಿರ್ಬುದ್ಧೇರಾತ್ಮಾ ತತಃ ಪರಃ ॥೫೪॥

ತಸ್ಮಾತ್ತು ಪರಮವ್ಯಕ್ತಮವ್ಯಕ್ತಾತ್ಪುರುಷಃ ಪರಃ ॥೫೫॥

ಆಕಾಶವೇ ಎಲ್ಲ ಭೂತಗಳಿಗಿಂತಲೂ ಶ್ರೇಷ್ಠವಾದುದು. ಅದಕ್ಕಿಂತಲೂ ಶ್ರೇಷ್ಠವಾದುದು ಅಹಂಕಾರ. ಅಹಂಕಾರಕ್ಕಿಂತಲೂ ಶ್ರೇಷ್ಠವಾದುದು ಬುದ್ಧಿ. ಬುದ್ಧಿಗಿಂತಲೂ ಶ್ರೇಷ್ಠವಾದುದು ಆತ್ಮಾ. ಆತ್ಮಕ್ಕಿಂತಲೂ ಶ್ರೇಷ್ಠವಾದುದು ಅವ್ಯಕ್ತಪ್ರಕೃತಿ. ಅವ್ಯಕ್ತಪ್ರಕೃತಿಗಿಂತಲೂ ಶ್ರೇಷ್ಠನಾದವನು ಪುರುಷ.

ಪರಾವರಜ್ಞೋ ಭೂತಾನಾಂ ವಿಧಿಜ್ಞಃ ಸರ್ವಕರ್ಮಣಾಮ್ ।
ಸರ್ವಭೂತಾತ್ಮಭೂತಾತ್ಮಾ ಗಚ್ಛತ್ಯಾತ್ಮಾನಮವ್ಯಯಮ್ ॥೫೬॥

ಭೂತಗಳಲ್ಲಿ ಯಾವುದು ಶ್ರೇಷ್ಠ? ಯಾವುದು ಕೆಳಮಟ್ಟದ್ದು?–ಎಂಬುದನ್ನು ತಿಳಿದಿರುವ, ಎಲ್ಲ ಕರ್ಮಗಳ ಆಚಾರ-ವಿಧಿ-ನಿಯಮಗಳನ್ನೂ ತಿಳಿದಿರುವ, ಸರ್ವಪ್ರಾಣಿಗಳನ್ನೂ ಆತ್ಮಭಾವದಿಂದ ಕಾಣುವ ಸಾಧಕನು ಅವಿನಾಶಿಯಾದ ಪರಮಾತ್ಮನನ್ನು ಹೊಂದುತ್ತಾನೆ.”

೫೦ನೆಯ ಅಧ್ಯಾಯವು ಮುಗಿಯಿತು.

೫೧ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ತಪಸ್ಸಿನ ಪ್ರಭಾವ: ಆತ್ಮನ ಸ್ವರೂಪ: ಜ್ಞಾನದ ಮಹಿಮೆ: ಅನುಗೀತೆಯ ಉಪಸಂಹಾರ

ಬ್ರಹ್ಮನು ಹೇಳುತ್ತಾನೆ:

ಭೂತಾನಾಮಥ ಪಞ್ಚಾನಾಂ ಯಥೈಷಾಮೀಶ್ವರಂ ಮನಃ ।
ನಿಯಮೇ ಚ ವಿಸರ್ಗೇ ಚ ಭೂತಾತ್ಮಾ ಮನ ಏವ ಚ ॥೧॥

“ಮಹರ್ಷಿಗಳೇ! ಈ ಪಂಚಭೂತಗಳ ಸೃಷ್ಟಿ ಮತ್ತು ನಿಯಮಗಳಲ್ಲಿ ಮನಸ್ಸು ಸಾಮರ್ಥ್ಯವನ್ನು ಹೊಂದಿರುವಂತೆಯೇ ಅದು ಪಂಚಭೂತಗಳ ಆತ್ಮವೂ ಆಗಿದೆ.

ಅಧಿಷ್ಠಾನಾ ಮನೋ ನಿತ್ಯಂ ಭೂತಾನಾಂ ಮಹತಾಂ ತಥಾ ।
ಬುದ್ಧಿರೈಶ್ವರ್ಯಮಾಚಷ್ಟೇ ಕ್ಷೇತ್ರಜ್ಞಶ್ಚ ಸ ಉಚ್ಯತೇ ॥೨॥

ಪಂಚಮಹಾಭೂತಗಳಿಗೆ ನಿತ್ಯಾಶ್ರಯವೂ ಮನಸ್ಸೇ ಆಗಿದೆ. ಬುದ್ಧಿಯು ಯಾವನ ಐಶ್ವರ್ಯವನ್ನು ಪ್ರಕಾಶಗೊಳಿಸುವುದೋ–ಅವನನ್ನು ಕ್ಷೇತ್ರಜ್ಞನೆಂದು ಕರೆಯುತ್ತಾರೆ.

ಇನ್ದ್ರಿಯಾಣಿ ಮನೋ ಯುಙ್ಕ್ತೇ ಸದಾಶ್ವಾನಿವ ಸಾರಥಿಃ ।
ಇನ್ದ್ರಿಯಾಣಿ ಮನೋ ಬುದ್ಧಿಃ ಕ್ಷೇತ್ರಜ್ಞೇ ಯುಜ್ಯತೇ ಸದಾ ॥೩॥

ನಿಪುಣನಾದ ಸಾರಥಿಯು ಪಳಗಿದ ಕುದುರೆಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ನಡೆಸುವಂತೆ–ಮನಸ್ಸು ಎಲ್ಲ ಇಂದ್ರಿಯಗಳನ್ನೂ ತನ್ನ ಹತೋಟಿಯಲ್ಲಿಟ್ಟುಕೊಂಡು ನಡೆಸುತ್ತದೆ. ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಗಳು ಯಾವಾಗಲೂ ಕ್ಷೇತ್ರಜ್ಞನಲ್ಲಿ ಸೇರಿಕೊಂಡಿರುತ್ತವೆ.

ಮಹದಶ್ವಸಮಾಯುಕ್ತಂ ಬುದ್ಧಿ ಸಂಯಮನಂ ರಥಮ್ ।
ಸಮಾರುಹ್ಯ ಸ ಭೂತಾತ್ಮಾ ಸಮನ್ತಾತ್ಪರಿಧಾವತಿ ॥೪॥

ಯಾವುದಕ್ಕೆ ಇಂದ್ರಿಯರೂಪವಾದ ಕುದುರೆಗಳು ಕಟ್ಟಲ್ಪಟ್ಟಿವೆಯೋ ಮತ್ತು ಯಾವುದನ್ನು ಬುದ್ಧಿರೂಪನಾದ ಸಾರಥಿಯು ನಿಯಂತ್ರಿಸುತ್ತಿರುವನೋ-ಅಂತಹ ದೇಹರೂಪವಾದ ರಥವನ್ನು ಏರಿದವನಾಗಿ ಭೂತಾತ್ಮನಾದ ಕ್ಷೇತ್ರಜ್ಞನು ಎಲ್ಲ ಕಡೆಗಳಲ್ಲಿಯೂ ತಿರುಗುತ್ತಿರುತ್ತಾನೆ.

ಇನ್ದ್ರಿಯಗ್ರಾಮಸಂಯುಕ್ತೋ ಮನಃಸಾರಥಿರೇವ ಚ ।
ಬುದ್ಧಿಸಂಯಮನೋ ನಿತ್ಯಂ ಮಹಾನ್ಬ್ರಹ್ಮಮಯೋ ರಥಃ ॥೫॥

ಇಂದ್ರಿಯಸಮೂಹದಿಂದ ಕೂಡಿರುವ ಶರೀರವೇ ದೊಡ್ಡ ಬ್ರಹ್ಮರಥ. ಏಕಾಗ್ರತೆಯುಳ್ಳ ಮನಸ್ಸೇ ಅದನ್ನು ನಡೆಸುವ ಸಾರಥಿಯು. ಬುದ್ಧಿಯು ಅವನ ಚಾವಟಿಯಂತೆ.

ಏವಂ ಯೋ ವೇತ್ತಿ ವಿದ್ವಾನ್ವೈ ಸದಾ ಬ್ರಹ್ಮಮಯಂ ರಥಮ್ ।
ಸ ಧೀರಃ ಸರ್ವಭೂತೇಷು ನ ಮೋಹಮಧಿಗಚ್ಛತಿ ॥೬॥

ಯಾವ ವಿದ್ವಾಂಸನು ಬ್ರಹ್ಮಮಯವಾದ ಇಂತಹ ರಥವನ್ನು ಹೀಗೆ ತಿಳಿದುಕೊಳ್ಳುವನೋ–ಅವನೇ ಎಲ್ಲ ಪ್ರಾಣಿಗಳಲ್ಲಿಯೂ ಧೀರನೆನಿಸಿಕೊಳ್ಳುವನು. ಅಂತಹವನು ಎಂದಿಗೂ ಮೋಹಕ್ಕೆ ವಶನಾಗುವುದಿಲ್ಲ.

ಅವ್ಯಕ್ತಾದಿ ವಿಶೇಷಾನ್ತಂ ಸಹಸ್ಥಾವರಜಙ್ಗಮಮ್ ।
ಸೂರ್ಯಚನ್ದ್ರಪ್ರಭಾಲೋಕಂ ಗ್ರಹನಕ್ಷತ್ರಮಣ್ಡಿತಮ್ ॥೭॥

ನದೀಪರ್ವತಜಾಲೈಶ್ಚ ಸರ್ವತಃ ಪರಿಭೂಷಿತಮ್ ।
ವಿವಿಧಾಭಿಸ್ತಥಾ ಚಾದ್ಭಿಃ ಸತತಂ ಸಮಲಂಕೃತಮ್ ॥೮॥

ಅಜೀವಂ ಸರ್ವಭೂತಾನಾಂ ಸರ್ವಪ್ರಾಣಭೃತಾಂ ಗತಿಃ ।
ಏತದ್ಬ್ರಹ್ಮವನಂ ನಿತ್ಯಂ ತಸ್ಮಿಂಶ್ಚರತಿ ಕ್ಷೇತ್ರವಿತ್ ॥೯॥

ಈ ಜಗತ್ತು ಒಂದು ಬ್ರಹ್ಮವನವಾಗಿದೆ. ಅವ್ಯಕ್ತಪ್ರಕೃತಿಯೇ ಇದರ ಆದಿಯು. ಐದು ಮಹಾಭೂತಗಳು, ಹತ್ತು ಇಂದ್ರಿಯಗಳು ಮತ್ತು ಮನಸ್ಸು ಈ ಹದಿನಾರು ತತ್ತ್ವಗಳವರೆಗೂ ಮೂಲಪ್ರಕೃತಿಯು ವ್ಯಾಪಿಸಿಕೊಂಡಿದೆ. ಬ್ರಹ್ಮವನರೂಪವಾಗಿರುವ ಈ ಜಗತ್ತು ಚರಾಚರಪ್ರಾಣಿಗಳಿಂದ ಸಂಪನ್ನವಾಗಿದೆ. ಇದು ಸೂರ್ಯ-ಚಂದ್ರರಿಂದ ಪ್ರಕಾಶಿತವಾಗಿದೆ. ಗ್ರಹ-ನಕ್ಷತ್ರಗಳಿಂದ ಸಮಲಂಕೃತವಾಗಿದೆ. ನದಿಗಳಿಂದಲೂ ಪರ್ವತಗಳಿಂದಲೂ ಎಲ್ಲೆಡೆಗಳಲ್ಲೂ ವಿಭೂಷಿತವಾಗಿದೆ. ವಿಧ-ವಿಧವಾದ ತೀರ್ಥಗಳಿಂದ ಶೋಭಾಯಮಾನವಾಗಿದೆ. ಸರ್ವಪ್ರಾಣಿಗಳ ಜೀವನಾಧಾರವೂ ಮತ್ತು ಸರ್ವಪ್ರಾಣಿಗಳಿಗೆ ಸದ್ಗತಿಪ್ರದವೂ ಆಗಿದೆ. ಬ್ರಹ್ಮವನರೂಪವಾದ ಈ ಜಗತ್ತಿನಲ್ಲಿ ಕ್ಷೇತ್ರಜ್ಞನು ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿದ್ದಾನೆ.

ಲೋಕೇಽಸ್ಮಿನ್ಯಾನಿ ಸತ್ತ್ವಾನಿ ತ್ರಸಾನಿ ಸ್ಥಾವರಾಣಿ ಚ ।
ತಾನ್ಯೇವಾಗ್ರೇ ಪ್ರಲೀಯನ್ತೇ ಪಶ್ಚಾದ್ಭೂತಕೃತಾ ಗುಣಾಃ ।
ಗುಣೇಭ್ಯಃ ಪಞ್ಚಭೂತಾನಿ ಏಷ ಭೂತಸಮುಚ್ಛ್ರಯಃ ॥೧೦॥

ಈ ಲೋಕದಲ್ಲಿ ಯಾವ ಸ್ಥಾವರ-ಜಂಗಮಪ್ರಾಣಿಗಳಿವೆಯೋ ಅವೆಲ್ಲವೂ ಪ್ರಳಯಕಾಲವು ಬಂದೊಡನೆಯೇ ಮೊದಲು ಮೂಲಪ್ರಕೃತಿಯಲ್ಲಿ ಲೀನವಾಗುತ್ತವೆ. ಅನಂತರ ಪಂಚಮಹಾಭೂತಗಳ ಕಾರ್ಯವೂ ಲೀನವಾಗುತ್ತದೆ. ಕಾರ್ಯರೂಪವಾದ ಗುಣಗಳು ಲೀನವಾದನಂತರ ಪಂಚಮಹಾಭೂತಗಳೂ ಮೂಲಪ್ರಕೃತಿಯಲ್ಲಿ ಲೀನವಾಗುತ್ತವೆ.

ದೇವಾ ಮನುಷ್ಯಾ ಗನ್ಧರ್ವಾಃ ಪಿಶಾಚಾಸುರರಾಕ್ಷಸಾಃ ।
ಸರ್ವೇ ಸ್ವಭಾವತಃ ಸೃಷ್ಟಾ ನ ಕ್ರಿಯಾಭ್ಯೋ ನ ಕಾರಣಾತ್ ॥೧೧॥

ದೇವತೆಗಳೂ, ಮನುಷ್ಯರೂ, ಗಂಧರ್ವರೂ, ಪಿಶಾಚರೂ, ಅಸುರರೂ, ರಾಕ್ಷಸರೂ ಸ್ವಭಾವದಿಂದಲೇ ಸೃಷ್ಟಿಸಲ್ಪಟ್ಟಿದ್ದಾರೆ. ಯಾವುದೇ ಕಾರ್ಯದಿಂದಾಗಲೀ ಕಾರಣದಿಂದಾಗಲೀ ಇವರು ಸೃಷ್ಟಿಸಲ್ಪಟ್ಟಿಲ್ಲ.

ಏತೇ ವಿಶ್ವಸೃಜೋ ವಿಪ್ರಾ ಜಾಯನ್ತೀಹ ಪುನಃ ಪುನಃ ।
ತೇಭ್ಯಃ ಪ್ರಸೂತಾಸ್ತೇಷ್ವೇವ ಮಹಾಭೂತೇಷು ಪಞ್ಚಸು ।
ಪ್ರಲೀಯನ್ತೇ ಯಥಾಕಾಲಮೂರ್ಮಯಃ ಸಾಗರೇ ಯಥಾ ॥೧೨॥

ವಿಶ್ವವನ್ನು ಸೃಷ್ಟಿಸುವ ಮರೀಚಿಯೇ ಮೊದಲಾದ ಬ್ರಾಹ್ಮಣರು ಸಮುದ್ರದ ಅಲೆಗಳಂತೆ ಪುನಃ ಪುನಃ ಪಂಚಮಹಾಭೂತಗಳಿಂದ ಹುಟ್ಟುತ್ತಲೇ ಇರುತ್ತಾರೆ. ಸೃಷ್ಟಿಕಾರ್ಯವು ಮುಗಿದೊಡನೆಯೇ ಕಾಲಾನುಗುಣವಾಗಿ ಪಂಚಭೂತಗಳಲ್ಲಿಯೇ ಲೀನರಾಗುತ್ತಾರೆ.

ವಿಶ್ವಸೃಗ್ಭ್ಯಸ್ತು ಭೂತೇಭ್ಯೋ ಮಹಾಭೂತಾಸ್ತು ಸರ್ವಶಃ ।
ಭೂತೇಭ್ಯಶ್ಚಾಪಿ ಪಞ್ಚೇಭ್ಯೋ ಮುಕ್ತೋ ಗಚ್ಛೇತ್ಪರಾಂ ಗತಿಮ್ ॥

ವಿಶ್ವವನ್ನು ಸೃಷ್ಟಿಸುವ ಸ್ಥೂಲಭೂತಗಳಿಂದ ಆಚೆ ಪಂಚ ಮಹಾಭೂತಗಳು ಸೂಕ್ಷ್ಮ ರೂಪದಲ್ಲಿ ಸರ್ವತ್ರ ವ್ಯಾಪಿಸಿಕೊಂಡಿವೆ. ಹೀಗೆ ಸೂಕ್ಷ್ಮರೂಪದಲ್ಲಿರುವ ಪಂಚಭೂತಗಳಿಂದಲೂ ಮುಕ್ತನಾದವನು ಪರಮಗತಿಯನ್ನು ಹೊಂದುತ್ತಾನೆ.

ಪ್ರಜಾಪತಿರಿದಂ ಸರ್ವಂ ತಪಸೈವಾಸೃಜತ್ಪ್ರಭುಃ।
ತಥೈವ ದೇವಾನೃಷಯಸ್ತಪಸಾ ಪ್ರತಿಪೇದಿರೇ ॥೧೪॥

ಶಕ್ತಿಸಂಪನ್ನನಾದ ಪ್ರಜಾಪತಿಯು ತಪಸ್ಸಿನಿಂದಲೇ ಈ ಸಂಪೂರ್ಣಜಗತ್ತನ್ನೂ ಸೃಷ್ಟಿಸಿದನು. ಅದೇ ರೀತಿಯಲ್ಲಿ ಋಷಿಗಳು ತಪಸ್ಸಿನಿಂದ ದೇವತ್ವವನ್ನು ಪಡೆದುಕೊಂಡರು.

ತಪಸಶ್ಚಾನುಪೂರ್ವ್ಯೇಣ ಫಲಮೂಲಾಶಿನಸ್ತಥಾ ।
ತ್ರೈಲೋಕ್ಯಂ ತಪಸಾ ಸಿದ್ಧಾಃ ಪಶ್ಯನ್ತೀಹ ಸಮಾಹಿತಾಃ ॥೧೫॥

ಕಂದ-ಮೂಲ-ಫಲಗಳನ್ನೇ ತಿಂದು ಜೀವಿಸುವ ಸಿದ್ಧರು ತಪಸ್ಸಿನ ಪ್ರಭಾವದಿಂದಲೇ ಮನಸ್ಸನ್ನು ಏಕಾಗ್ರಗೊಳಿಸಿ ಮೂರು ಲೋಕಗಳನ್ನೂ ಮೊದಲಿನಿಂದ ಕಡೆಯವರಿಗೂ ಪ್ರತ್ಯಕ್ಷವಾಗಿಯೇ ನೋಡುವ ಸಾಮರ್ಥ್ಯವನ್ನು ಹೊಂದಿರುವರು.

ಓಷಧಾನ್ಯಗದಾದೀನಿ ನಾನಾವಿದ್ಯಾಶ್ಚ ಸರ್ವಶಃ ।
ತಪಸೈವ ಪ್ರಸಿಧ್ಯನ್ತಿ ತಪೋಮೂಲಂ ಹಿ ಸಾಧನಮ್ ॥೧೬॥

ಆರೋಗ್ಯಕ್ಕೆ ಸಾಧನಭೂತವಾದ ಔಷಧಗಳೂ ಮತ್ತು ಸಮಸ್ತ ವಿದ್ಯೆಗಳೂ ತಪಸ್ಸಿನಿಂದಲೇ ಸಿದ್ಧಿಸುತ್ತವೆ. ಎಲ್ಲ ವಿಧವಾದ ಸಾಧನೆಗಳಿಗೂ ತಪಸ್ಸೇ ಮೂಲವಾಗಿದೆ.

ಯದ್ದುರಾಪಂ ದುರಾಮ್ನಾಯಂ ದುರಾಧರ್ಷಂ ದುರನ್ವಯಮ್ ।
ತತ್ಸರ್ವಂ ತಪಸಾ ಸಾಧ್ಯಂ ತಪೋ ಹಿ ದುರತಿಕ್ರಮಮ್ ॥೧೭॥

ಯಾವುದು ಹೊಂದಲು ಅಸಾಧ್ಯವಾಗಿ ತೋರುವುದೋ, ಯಾವುದು ಅಭ್ಯಾಸಮಾಡಲು ಅತಿಕಷ್ಟವಾಗಿ ತೋರುವುದೋ, ಯಾವುದು ಎದುರಿಸಲು ಕಷ್ಟವಾಗಿರುವುದೋ, ಯಾವುದು ಸಂಬಂಧವನ್ನು ಹೊಂದಲು ಅತಿ ಕಷ್ಟವಾಗಿ ಕಾಣುವುದೋ –ಅಂತಹುದೆಲ್ಲವನ್ನೂ ತಪಸ್ಸಿನಿಂದಲೇ ಸಾಧಿಸಿಕೊಳ್ಳಬಹುದು. (ಪಡೆಯಲು ಅಸಾಧ್ಯವಾದುದನ್ನು ತಪಸ್ಸಿನಿಂದ ಪಡೆದುಕೊಳ್ಳಬಹುದು. ಕಲಿಯಲು ಅಸಾಧ್ಯವಾದುದನ್ನು ಕಲಿಯಬಹುದು. ಖಎದುರಿಸಲು ಅಸಾಧ್ಯರಾದ ಶತ್ರುಗಳನ್ನು ತಪಸ್ಸಿನ ಬಲದಿಂದ ಎದುರಿಸಬಹುದು. ಸಂಬಂಧವಿಲ್ಲದವರನ್ನು ಸಂಬಂಧಿಸಿಕೊಳ್ಳಬಹುದು.) ಏಕೆಂದರೆ: ತಪಸ್ಸಿನ ಪ್ರಭಾವವು ದುರ್ಲಂಘ್ಯವಾದುದು.

ಸುರಾಪೋ ಬ್ರಹ್ಮಹಾ ಸ್ತೇಯೀ ಭ್ರೂಣಹಾ ಗುರುತಲ್ಪಗಃ ।
ತಪಸೈವ ಸುತಪ್ತೇನ ಮುಚ್ಯತೇ ಕಿಲ್ಬಿಷಾತ್ತತಃ ॥೧೮॥

ಸುರೆಯನ್ನು ಕುಡಿದವನು, ಬ್ರಹ್ಮಹತ್ಯೆಯನ್ನು ಮಾಡಿದವನು, ಕಳ್ಳನು, ಭ್ರೂಣಹತ್ಯೆಯನ್ನು ಮಾಡಿದವನು, ಗುರುಪತ್ನಿಯೊಡನೆ ಸಮಾಗಮವನ್ನು ಮಾಡಿದವನು–ಇಂತಹ ಪಾಪಿಷ್ಠರೂ ಕೂಡ ಶ್ರದ್ಧೆಯಿಂದ ತಪಸ್ಸನ್ನು ಮಾಡಿ ಮಹಾಪಾಪಗಳಿಂದ ಮುಕ್ತರಾಗುತ್ತಾರೆ.

ಮನುಷ್ಯಾಃ ಪಿತರೋ ದೇವಾಃ ಪಶವೋ ಮೃಗಪಕ್ಷಿಣಃ ।
ಯಾನಿ ಚಾನ್ಯಾನಿ ಭೂತಾನಿ ತ್ರಸಾನಿ ಸ್ಥಾವರಾಣಿ ಚ ॥೧೯॥

ತಪಃ ಪರಾಯಣಾ ನಿತ್ಯಂ ಸಿದ್ಧ್ಯನ್ತೇ ತಪಸಾ ಸದಾ ।
ತಥೈವ ತಪಸಾ ದೇವಾ ಮಹಾಭಾಗಾ ದಿವಂ ಗತಾಃ ॥೨೦॥

ಮನುಷ್ಯರು, ಪಿತೃಗಳು, ದೇವತೆಗಳು, ಪಶುಗಳು, ಮೃಗ-ಪಕ್ಷಿಗಳು ಮತ್ತು ಇತರ ಯಾವುದೇ ಚರಾಚರಪ್ರಾಣಿಗಳೂ ಕೂಡ, ನಿತ್ಯವೂ ತಪಸ್ಸನ್ನೇ ಆಶ್ರಯಿಸಿ ಅನವರತವಾಗಿ ತಪಸ್ಸನ್ನು ಮಾಡುತ್ತಿದ್ದರೆ ಅದರಿಂದಲೇ ಸಿದ್ಧಿಯನ್ನು ಪಡೆಯುತ್ತಾರೆ. ತಪಸ್ಸಿನ ಬಲದಿಂದಲೇ ಮಹಾಭಾಗ್ಯಶಾಲಿಗಳಾದ ದೇವತೆಗಳು ಸ್ವರ್ಗಕ್ಕೆ ಹೋಗಿರುವರು.

ಆಶೀರ್ಯುಕ್ತಾನಿ ಕರ್ಮಾಣಿ ಕುರ್ವತೇ ಯೇತ್ವತನ್ದ್ರಿತಾಃ ।
ಅಹಂಕಾರಸಮಾಯುಕ್ತಾಸ್ತೇ ಸಕಾಶೇ ಪ್ರಜಾಪತೇಃ ॥೨೧॥

ಯಾರು ಆಲಸ್ಯವಿಲ್ಲದೇ ಅಹಂಕಾರ-ಮಮಕಾರಗಳಿಂದ ಯುಕ್ತರಾಗಿ ಸಕಾಮಕರ್ಮಗಳನ್ನು ಶ್ರದ್ಧೆಯಿಂದ ಮಾಡುವರೋ–ಅವರು ಪ್ರಜಾಪತಿಯ ಲೋಕಕ್ಕೆ ಹೋಗುತ್ತಾರೆ.

ಧ್ಯಾನಯೋಗೇನ ಶುದ್ಧೇನ ನಿರ್ಮಮಾ ನಿರಹಂಕೃತಾಃ ।
ಆಪ್ನುವನ್ತಿ ಮಹಾತ್ಮಾನೋ ಮಹಾನ್ತಂ ಲೋಕಮುತ್ತಮಮ್ ॥೨೨॥

ಅಹಂಕಾರ-ಮಮಕಾರಗಳಿಂದ ರಹಿತರಾಗಿ ಯಾರು ಶುದ್ಧವಾದ ಧ್ಯಾನಯೋಗದಲ್ಲಿ ನಿರತರಾಗಿರುವರೋ–ಅಂತಹ ಮಹಾತ್ಮರು ಮಹತ್ತರವೂ ಶ್ರೇಷ್ಠವೂ ಆದ ಲೋಕಗಳನ್ನು ಹೊಂದುತ್ತಾರೆ.

ಧ್ಯಾನಯೋಗಮುಪಾಗಮ್ಯ ಪ್ರಸನ್ನಮತಯಃ ಸದಾ ।
ಸುಖೋಪಚಯಮವ್ಯಕ್ತಂ ಪ್ರವಿಶನ್ತ್ಯಾತ್ಮವಿತ್ತಮಾಃ ॥೨೩॥

ಧ್ಯಾನಯೋಗವನ್ನಾಶ್ರಯಿಸಿ ಆತ್ಮದರ್ಶನವನ್ನು ಮಾಡಿಕೊಂಡು ಪ್ರಸನ್ನಚಿತ್ತರಾಗಿರುವ, ಆತ್ಮವಿದರಲ್ಲಿ ಶ್ರೇಷ್ಠರಾದ ಜ್ಞಾನಿಗಳು ಸುಖಕ್ಕೆ ರಾಶಿಯರೂಪದಲ್ಲಿರುವ ಅವ್ಯಕ್ತಪರಮಾತ್ಮನಲ್ಲಿ ಲೀನರಾಗುತ್ತಾರೆ.

ಧ್ಯಾನಯೋಗಾದುಪಾಗಮ್ಯ ನಿರ್ಮಮಾ ನಿರಹಂಕೃತಾಃ ।
ಅವ್ಯಕ್ತಂ ಪ್ರವಿಶನ್ತೀಹ ಮಹತಾಂ ಲೋಕಮುತ್ತಮಮ್ ॥೨೪॥

ಅಹಂಕಾರ-ಮಮಕಾರರಹಿತರಾದ ಸಾಧಕರು ಧ್ಯಾನಯೋಗದಿಂದ ಸಿದ್ಧಿಯನ್ನು ಪಡೆದವರಾಗಿ ಈ ಲೋಕದಲ್ಲಿಯೇ ಅವ್ಯಕ್ತನಾದ ಆತ್ಮನನ್ನು

ಪ್ರವೇಶಿಸುತ್ತಾರೆ (ಆತ್ಮಸಾಕ್ಷಾತ್ಕಾರಮಾಡಿಕೊಳ್ಳುತ್ತಾರೆ.) ಅವಸಾನಾ ನಂತರದಲ್ಲಿ ಮಹಾಪುರುಷರ ಶ್ರೇಷ್ಠವಾದ ಲೋಕಗಳಿಗೆ ಹೋಗುತ್ತಾರೆ.

ಅವ್ಯಕ್ತಾದೇವ ಸಂಭೂತಃ ಸಮಸಂಜ್ಞಾಂ ಗತಃ ಪುನಃ ।
ತಮೋ ರಜೋಭ್ಯಾಂ ನಿರ್ಮುಕ್ತಃ ಸತ್ತ್ವಮಾಸ್ಥಾಯ ಕೇವಲಮ್ ॥೨೫॥

ಪುನಃ ಅವ್ಯಕ್ತದಿಂದಲೇ ಹುಟ್ಟಿದ ಜೀವಿಯು ಕೇವಲ ಸತ್ತ್ವಗುಣ ವನ್ನಾಶ್ರಯಿಸಿ ಗುಣಸಾಮ್ಯವನ್ನು ಪಡೆದು ತಮೋಗುಣ-ರಜೋಗುಣಗಳಿಂದ ಮುಕ್ತನಾಗುತ್ತಾನೆ.

ನಿರ್ಮುಕ್ತಃ ಸರ್ವಪಾಪೇಭ್ಯಃ ಸರ್ವಂ ಸೃಜತಿ ನಿಷ್ಕಲಮ್ ।
ಕ್ಷೇತ್ರಜ್ಞ ಇತಿ ತಂ ವಿದ್ಯಾದ್ಯಸ್ತಂ ವೇದ ಸ ವೇದವಿತ್ ॥೨೬॥

ಹೀಗೆ ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ಎಲ್ಲವನ್ನೂ ವಿಕಾರರಹಿತವನ್ನಾಗಿ ಮಾಡಿಕೊಂಡವನನ್ನು ಕ್ಷೇತ್ರಜ್ಞನೆಂದು ತಿಳಿಯಬೇಕು. ಆ ಕ್ಷೇತ್ರಜ್ಞನನ್ನು ಅರಿತವನೇ ವೇದಜ್ಞನು.

ಚಿತ್ತಂ ಚಿತ್ತಾದುಪಾಗಮ್ಯ ಮುನಿರಾಸೀತ ಸಂಯತಃ ।
ಯಚ್ಚಿತ್ತಂ ತನ್ಮಯೋ ವಶ್ಯಂ ಗುಹ್ಯಮೇತತ್ಸನಾತನಮ್ ॥೨೭॥

ಮುನಿಯಾದವನು ಚಿತ್ತವನ್ನು (ಜ್ಞಾನಸ್ವರೂಪನಾದ ಪರಬ್ರಹ್ಮ ಪರಮಾತ್ಮನನ್ನು) ಚಿತ್ತದ (ಚಿಂತೆಯ) ಮೂಲಕವಾಗಿ ಹೊಂದಿ (ಏಕಾಗ್ರಚಿತ್ತ ನಾಗಿ), ಅವನಲ್ಲಿಯೇ ಸಂಲಗ್ನನಾಗಬೇಕು. ಚಿತ್ತವು ಯಾವುದರಲ್ಲಿ ಸಂಲಗ್ನ ವಾಗುವುದೋ ಅದರಂತೆಯೇ ಆಗಿಬಿಡುತ್ತದೆ. ಅದೇ ಆಕಾರದ ವೃತ್ತಿಯನ್ನು ಹೊಂದುತ್ತದೆ.(ಚಿತ್ತವು ಪರಬ್ರಹ್ಮಪರಮಾತ್ಮನಂತೆಯೇ ಆಗಿಬಿಡುತ್ತದೆ.) ಇದು ಗುಹ್ಯವಾದ ಸನಾತನರಹಸ್ಯವಾಗಿದೆ.

ಅವ್ಯಕ್ತಾದಿವಿಶೇಷಾನ್ತಮವಿದ್ಯಾಲಕ್ಷಣಂ ಸ್ಮೃತಮ್ ।
ನಿಬೋಧತ ತಥಾಹೀದಂ ಗುಣೈರ್ಲಕ್ಷಣಮಿತ್ಯುತ ॥೨೮॥

ಅವ್ಯಕ್ತಪ್ರಕೃತಿಯಿಂದ ಹಿಡಿದು ಮಹಾಭೂತಾದಿ ಹದಿನಾರು ತತ್ತ್ವಗಳವರೆಗೂ ಇರುವುದನ್ನು ಅವಿದ್ಯಾಲಕ್ಷಣವೆನ್ನುತ್ತಾರೆ. ಇವುಗಳಲ್ಲಿ ಗುಣ

ಗಳು ಸೇರಿರುವುದರಿಂದಲೇ ಇವುಗಳನ್ನು ಹೀಗೆ ಹೇಳುತ್ತಾರೆಂಬುದನ್ನು ತಿಳಿಯಿರಿ.

ದ್ವ್ಯಕ್ಷರಸ್ತು ಭವೇನ್ಮೃತ್ಯುಸ್ತ್ರ್ಯಕ್ಷರಂ ಬ್ರಹ್ಮಶಾಶ್ವತಮ್ ।
ಮಮೇತಿ ಚ ಭವೇನ್ಮೃತ್ಯುರ್ನಮಮೇತಿ ಚ ಶಾಶ್ವತಮ್ ॥೨೯॥

ಎರಡಕ್ಷರದ ಪದವು ಮೃತ್ಯುವಾಗಿ ಪರಿಣಮಿಸುತ್ತದೆ. ಮೂರಕ್ಷರದ ಪದಪುಂಜವು ಶಾಶ್ವತವಾದ ಬ್ರಹ್ಮಪದವನ್ನು ದೊರಕಿಸುತ್ತದೆ. 'ಮಮ'-'ನನ್ನದು' ಎಂಬುದೇ ಆ ಎರಡಕ್ಷರದ ಪದ. ಮಮಕಾರದಿಂದ ಮೃತ್ಯುವು ಪ್ರಾಪ್ತವಾಗುತ್ತದೆ. 'ನ ಮಮ' 'ನನ್ನದಲ್ಲ'–ಎಂಬುದೇ ಮೂರಕ್ಷರದ ಶ್ರೇಷ್ಠವಾದ ಪದಪುಂಜ. (ಪ್ರಪಂಚದಲ್ಲಿರುವ ಯಾವುದೂ) ನನ್ನದಲ್ಲ–ಎಂಬ ಭಾವನೆಯಿಂದ ಶಾಶ್ವತವಾದ ಬ್ರಹ್ಮಪದವು ಸಿದ್ಧಿಸುತ್ತದೆ.

ಕರ್ಮ ಕೇಚಿತ್ಪ್ರಶಂಸನ್ತಿ ಮನ್ದಬುದ್ಧಿರತಾ ನರಾಃ ।
ಯೇ ತು ವೃದ್ಧಾ ಮಹಾತ್ಮಾನೋ ನ ಪ್ರಶಂಸನ್ತಿ ಕರ್ಮ ತೇ ॥೩೦॥

ಮಂದಬುದ್ಧಿಯುಳ್ಳ ಕೆಲವರು ಸ್ವರ್ಗಾದಿ ಫಲಗಳನ್ನು ಕೊಡುವ ಕಾಮ್ಯಕರ್ಮಗಳನ್ನು ಪ್ರಶಂಸಿಸುತ್ತಾರೆ. ಆದರೆ ಮಹಾತ್ಮರಾದ ಜ್ಞಾನವೃದ್ಧರು ಕಾಮ್ಯಕರ್ಮಗಳನ್ನು ಪ್ರಶಂಸೆಮಾಡುವುದಿಲ್ಲ.

ಕರ್ಮಣಾ ಜಾಯತೇ ಜನ್ತುರ್ಮೂರ್ತಿಮಾನ್ಷೋಡಶಾತ್ಮಕಃ ।
ಪುರುಷಂ ಗ್ರಸತೇಽವಿದ್ಯಾ ತದ್ಗ್ರಾಹ್ಯಮಮೃತಾಶಿನಾಮ್ ॥೩೧॥

ಸಕಾಮಕರ್ಮಗಳನ್ನು ಮಾಡುವುದರಿಂದ ಜೀವನು ಹದಿನಾರು ವಿಕಾರಗಳಿಂದ ಕೂಡಿದ ಸ್ಥೂಲಶರೀರವನ್ನು ಧರಿಸಿ ಜನ್ಮತಾಳುತ್ತಾನೆ. ಅವಿದ್ಯೆಯೆಂಬುದು ಅಂತಹ ಪುರುಷನನ್ನು ನುಂಗಿಹಾಕುತ್ತದೆ. ಇಷ್ಟು ಮಾತ್ರವಲ್ಲದೇ ಅಂತಹ ಕಾಮ್ಯಕರ್ಮಗಳನ್ನು ಮಾಡುವ ಮನುಷ್ಯನು ದೇವತೆಗಳ ಉಪಭೋಗಕ್ಕೂ ವಿಷಯನಾಗುತ್ತಾನೆ.

ತಸ್ಮಾತ್ಕರ್ಮಸು ನಿಸ್ನೇಹಾ ಯೇ ಕೇಚಿತ್ಪಾರದರ್ಶಿನಃ ।
ವಿದ್ಯಾಮಯೋಽಯಂ ಪುರುಷೋ ನ ತು ಕರ್ಮಮಯಃ ಸ್ಮೃತಃ॥

ಈ ಕಾರಣದಿಂದಲೇ ಸಂಸಾರದ ದಡವನ್ನು (ಬ್ರಹ್ಮಸ್ವರೂಪವನ್ನು)

ಕಂಡುಕೊಂಡಿರುವ ಮಹಾತ್ಮರು ಕರ್ಮಗಳಲ್ಲಿ ಅನಾಸಕ್ತರಾಗಿರುತ್ತಾರೆ. ಏಕೆಂದರೆ: ಪುರುಷನು (ಆತ್ಮನು) ವಿದ್ಯಾ (ಜ್ಞಾನ) ಮಯನೇ ಹೊರತು ಕರ್ಮಮಯನಲ್ಲ.

ಯ ಏವಮಮೃತಂ ನಿತ್ಯಮಗ್ರಾಹ್ಯಂ ಶಶ್ವದಕ್ಷರಮ್ ।
ವಶ್ಯಾತ್ಮಾನಮಸಂಕ್ಲಿಷ್ಟಂ ಯೋ ವೇದ ನ ಮೃತೋ ಭವೇತ್ ॥೩೩॥

ಹೀಗೆ ಯಾವನು ಚೇತನನನ್ನು ಅಮೃತಸ್ವರೂಪನೆಂದೂ, ನಿತ್ಯನೆಂದೂ, ಇಂದ್ರಿಯಗಳಿಂದ ಗ್ರಹಿಸಲ್ಪಡತಕ್ಕವನಲ್ಲವೆಂದೂ, ಸನಾತನನೆಂದೂ, ಅಜನೆಂದೂ, ಜಿತಾತ್ಮನೆಂದೂ, ಅಸಂಗನೆಂದೂ ತಿಳಿಯುವನೋ–ಅವನು ಮೃತ್ಯುವಿನ ಬಂಧನಕ್ಕೆ ಸಿಕ್ಕಿಕೊಳ್ಳುವುದಿಲ್ಲ.

ಅಪೂರ್ವಮಕೃತಂ ನಿತ್ಯಂ ಯ ಏನಮವಿಚಾರಿಣಮ್ ।
ಯ ಏನಂ ವಿನ್ದೇದಾತ್ಮಾನಮಗ್ರಾಹ್ಯಮಮೃತಾಶನಮ್ ।
ಅಗ್ರಾಹ್ಯೋಽಮೃತೋ ಭವತಿ ಸ ಏಭಿಃ ಕಾರಣೈರ್ಧ್ರುವಃ ॥೩೪॥

ಅನಾದಿಯೂ, ಜನ್ಮರಹಿತನೂ, ಶಾಶ್ವತನೂ, ನಿಶ್ಚಲನೂ, ಇಂದ್ರಿಯಗಳಿಗೆ ನಿಲುಕದವನೂ, ಅಮೃತಭೋಜಿಯೂ ಆದ ಆತ್ಮನನ್ನು ಹೀಗೆ ಪಡೆದುಕೊಂಡವನು –ಈ ಕಾರಣಗಳಿಂದ (ಆತ್ಮಜ್ಞಾನದ ಫಲವಾಗಿ) ತಾನೂ ಕೂಡ ಇಂದ್ರಯಾತೀತನೂ, ಅಮೃತನೂ, ಶಾಶ್ವತನೂ ಆಗಿಬಿಡುತ್ತಾನೆ.

ಆಯೋಜ್ಯ ಸರ್ವಸಂಸ್ಕಾರಾನ್ಸಂಯಮ್ಯಾತ್ಮಾನಮಾತ್ಮನಿ ।
ಸ ತದ್ಬ್ರಹ್ಮ ಶುಭಂ ವೇತ್ತಿ ಯಸ್ಮಾದ್ಭೂಯೋ ನ ವಿದ್ಯತೇ ॥೩೫॥

ಯಾವನು ಎಲ್ಲ ಸಂಸ್ಕಾರಗಳನ್ನೂ ಒಂದುಗೂಡಿಸಿಕೊಂಡು ಮನಸ್ಸನ್ನು ಆತ್ಮನಲ್ಲಿ ಸಂಯಮಗೊಳಿಸುವನೋ-ಅವನು ಪರಮಕಲ್ಯಾಣಸ್ವರೂಪವಾದ ಬ್ರಹ್ಮವಸ್ತುವನ್ನು ತಿಳಿದುಕೊಳ್ಳುತ್ತಾನೆ.

ಪ್ರಸಾದೇ ಚೈವ ತತ್ತ್ವಸ್ಯ ಪ್ರಸಾದಂ ಸಮವಾಪ್ನುಯಾತ್ ।
ಲಕ್ಷಣಂ ಹಿ ಪ್ರಸಾದಸ್ಯ ಯಥಾ ಸ್ಯಾತ್ಸ್ವಪ್ನದರ್ಶನಮ್ ॥೩೬॥

ಸಾಧಕನು ಬುದ್ಧಿಯ ಪ್ರಸನ್ನತೆಯಿಂದಲೇ ಅಂತಃಕರಣದಲ್ಲಿ

ಪ್ರಸನ್ನತೆಯನ್ನು ಹೊಂದುತ್ತಾನೆ. ಯಾವ ರೀತಿಯಲ್ಲಿ ದೇಹವ್ಯಾಪಾರಗಳ ಸಂಬಂಧವಿಲ್ಲದೇ ಸ್ವಪ್ನದ ದರ್ಶನವಾಗುವುದೋ ಹಾಗೆಯೇ ಧ್ಯಾನಯೋಗದಲ್ಲಿದ್ದಾಗ ದೇಹದ ಸಂಬಂಧವಿಲ್ಲದೆ (ದೇಹವಿರುವುದೆಂಬ ಅರಿವಿಲ್ಲದೆ) ಆತ್ಮದರ್ಶನವಾಗುವುದೇ ಪ್ರಸನ್ನತೆಯ ಲಕ್ಷಣವಾಗಿದೆ.

ಗತಿರೇಷಾ ತು ಮುಕ್ತಾನಾಂ ಯೇ ಜ್ಞಾನಪರಿನಿಷ್ಠಿತಾಃ ।
ಪ್ರವೃತ್ತಯಶ್ಚ ಯಾಃ ಸರ್ವಾಃ ಪಶ್ಯನ್ತಿ ಪರಿಣಾಮಜಾಃ ॥೩೭॥

ಜ್ಞಾನನಿಷ್ಠರಾದ, ಜೀವನ್ಮುಕ್ತರಾದ, ಇಂತಹ ಮಹಾತ್ಮರಿಗೆ ಆತ್ಮದರ್ಶನವೇ ಪರಮಗತಿಯಾಗಿದೆ. ಏಕೆಂದರೆ: ಅವರು ಪ್ರವೃತ್ತಿಮಾರ್ಗದಲ್ಲಿರುವ ಎಲ್ಲ ಕರ್ಮಗಳಲ್ಲಿಯೂ ಶುಭಾಶುಭಕರ್ಮಗಳ ಪರಿಣಾಮಗಳನ್ನು ಕಂಡುಕೊಂಡಿರುತ್ತಾರೆ.

ಏಷಾ ಗತಿರ್ವಿರಕ್ತಾನಾಮೇಷಧರ್ಮಃ ಸನಾತನಃ ।
ಏಷಾ ಜ್ಞಾನವತಾಂ ಪ್ರಾಪ್ತಿರೇತದ್ವೃತ್ತಮನಿನ್ದಿತಮ್ ॥೩೮॥

ವಿರಕ್ತರಾದ ಸಾಧಕರಿಗೆ ಇದು ಪರಮಾಶ್ರಯವಾಗಿದೆ. ಇದೇ ಸನಾತನಧರ್ಮವೂ ಆಗಿದೆ. ಜ್ಞಾನಿಗಳು ಹೊಂದಬೇಕಾದ ಸ್ಥಾನವೂ ಆಗಿದೆ. ಇದು ಯಾವ ದೋಷವೂ ಇಲ್ಲದ ಆಚಾರವೂ ಆಗಿದೆ.

ಸಮೇನ ಸರ್ವಭೂತೇಷು ನಿಃಸ್ಪೃಹೇಣ ನಿರಾಶಿಷಾ ।
ಶಕ್ಯಾ ಗತಿರಿಯಂ ಗನ್ತುಂ ಸರ್ವತ್ರ ಸಮದರ್ಶಿನಾ ॥೩೯॥

ಯಾವನು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಮಭಾವವನ್ನು ಹೊಂದಿರುವನೋ, ನಿಃಸ್ಪೃಹನೋ, ನಿಷ್ಠಾವಂತನೋ, ಸರ್ವತ್ರ ಸಮವಾದ ದೃಷ್ಟಿಯುಳ್ಳವನೋ–ಅಂತಹ ಜ್ಞಾನಿಯು ಮಾತ್ರವೇ ಸತತಪ್ರಯತ್ನದಿಂದ ಈ ಪರಮಗತಿಯನ್ನು ಹೊಂದಬಹುದಾಗಿದೆ.

ಬ್ರಹ್ಮರ್ಷಿಗಳೇ! ಈ ಎಲ್ಲ ವಿಷಯಗಳನ್ನೂ ನಿಮಗೆ ವಿಸ್ತಾರವಾಗಿಯೇ ಹೇಳಿರುತ್ತೇನೆ. ನಾನು ಹೇಳಿರುವಂತೆಯೇ ನೀವೂ ಆಚರಿಸಿರಿ.ಅದರಿಂದ ನೀವು ಬಹಳ ಶೀಘ್ರವಾಗಿ ಸಿದ್ಧಿಯನ್ನು ಪಡೆಯುವಿರಿ."

ಗುರುವು ಹೇಳುತ್ತಾನೆ:

"ಶಿಷ್ಯನೇ! ಗುರುವಾದ ಬ್ರಹ್ಮನು ಹೀಗೆ ಹೇಳಿದನಂತರ ಮಹಾತ್ಮರಾದ ಮುನಿಗಳು ಬ್ರಹ್ಮನು ಹೇಳಿದಂತೆಯೇ ಆಚರಿಸಿ ಉತ್ತಮವಾದ ಲೋಕಗಳನ್ನು ಹೊಂದಿದರು. ಮಹಾಭಾಗ್ಯಶಾಲಿಯೇ! ಶುದ್ಧಾತ್ಮನೇ! ನಾನು ಹೇಳಿದ ಬ್ರಹ್ಮನ ವಚನವನ್ನು ಶ್ರದ್ಧೆಯಿಂದ ಆಚರಿಸು. ನೀನೂ ಕೂಡ ಆ ಮುನಿಗಳಂತೆಯೇ ಸಿದ್ಧಿಯನ್ನು ಪಡೆಯುವೆ."

ವಾಸುದೇವನು ಹೇಳುತ್ತಾನೆ:

"ಅರ್ಜುನ! ಗುರುವು ಈ ಧರ್ಮಸಮ್ಮತವಾದ ಮಾತನ್ನು ಹೇಳಿದನಂತರ ಶಿಷ್ಯನು ಗುರುವು ಹೇಳಿದಂತೆಯೇ ಎಲ್ಲವನ್ನೂ ಆಚರಿಸಿದನು. ಅದರ ಫಲವಾಗಿ ಸಂಸಾರಬಂಧನದಿಂದಲೂ ಮುಕ್ತನಾದನು. ಕುರುಕುಲ ಶ್ರೇಷ್ಠನೇ! ಶಿಷ್ಯನು ಹೀಗೆ ಕೃತಕೃತ್ಯನಾಗಿ–ಎಲ್ಲಿಗೆ ಹೋದರೆ ಯಾರೂ ಶೋಕಿಸಬೇಕಾಗಿಲ್ಲವೋ–ಅಂತಹ ಬ್ರಹ್ಮಪದವನ್ನು ಹೊಂದಿದನು."

ಅರ್ಜುನನು ಪ್ರಶ್ನಿಸುತ್ತಾನೆ:

ಕೋ ನ್ವಸೌ ಬ್ರಹ್ಮಣಃ ಕೃಷ್ಣ ಕಶ್ಚ ಶಿಷ್ಯೋ ಜನಾರ್ದನ ।
ಶ್ರೋತವ್ಯಂ ಚೇನ್ಮಯೈತದ್ವೈ ತತ್ತ್ವಮಾಚಕ್ಷ್ವ ಮೇ ವಿಭೋ ॥೪೫॥

"ಜನಾರ್ದನನೇ! ಶ್ರೀಕೃಷ್ಣ! ಬ್ರಹ್ಮನಿಷ್ಠನಾದ ಆ ಗುರುವು ಯಾರು? ಆ ಶಿಷ್ಯನು ಯಾರು? ವಿಭುವೇ! ಈ ವಿಷಯವನ್ನು ನಾನು ಕೇಳಬಹುದಾಗಿದ್ದರೆ ಯಥಾವತ್ತಾಗಿ ಹೇಳುವ ಕೃಪೆಮಾಡು."

ವಾಸುದೇವನು ಹೇಳುತ್ತಾನೆ:

ಅಹಂ ಗುರುರ್ಮಹಾಬಾಹೋ ಮನಃ ಶಿಷ್ಯಂ ಚ ವಿದ್ಧಿ ಮೇ ।
ತ್ವತ್ಪ್ರೀತ್ಯಾ ಗುಹ್ಯಮೇತಚ್ಚ ಕಥಿತಂ ತೇ ಧನಂಜಯ ॥೪೬॥

"ಮಹಾಬಾಹುವೇ! ನಾನೇ ಆ ಗುರುವು. ನನ್ನ ಮನಸ್ಸೇ ಆ ಶಿಷ್ಯನೆಂದು ತಿಳಿ. ಧನಂಜಯನೇ! ನಿನ್ನಲ್ಲಿರುವ ವಿಶ್ವಾಸದಿಂದ ರಹಸ್ಯವಾದ ಈ ವಿಷಯವನ್ನು ನಿನಗೆ ಹೇಳಿದೆನು.

ಮಯಿ ಚೇದಸ್ತಿ ತೇ ಪ್ರೀತಿರ್ನಿತ್ಯಂ ಕುರುಕುಲೋದ್ವಹ ।
ಅಧ್ಯಾತ್ಮಮೇತಚ್ಛ್ರುತ್ವಾ ತ್ವಂ ಸಮ್ಯಗಾಚರ ಸುವ್ರತ ॥೪೭॥

ಸುವ್ರತನೇ! ಕುರುಕುಲಾವತಂಸನೇ! ನಿನಗೆ ನನ್ನ ಮೇಲೆ ಪ್ರೀತಿಯಿರುವುದಾದರೆ ನೀನು ಕೇಳಿದ ಈ ಅಧ್ಯಾತ್ಮವಿದ್ಯೆಯನ್ನು ನಿತ್ಯವೂ ಚೆನ್ನಾಗಿ ಆಚರಿಸು.

ತತಸ್ತ್ವಂ ಸಮ್ಯಗಾಚೀರ್ಣೇ ಧರ್ಮೇಽಸ್ಮಿನ್ನರಿಕರ್ಷಣ ।
ಸರ್ವಪಾಪವಿನಿರ್ಮುಕ್ತೋ ಮೋಕ್ಷಂ ಪ್ರಾಪ್ಸ್ಯಸಿ ಕೇವಲಮ್ ॥೪೮॥

ಶತ್ರುಸೂದನನೇ! ಈ ಮೋಕ್ಷಧರ್ಮವನ್ನು ಸಂಪೂರ್ಣವಾಗಿ ಆಚರಿಸಿದ್ದೇ ಆದರೆ ನೀನು ಎಲ್ಲ ಪಾಪಗಳಿಂದಲೂ ಬಿಡುಗಡೆಹೊಂದಿ ವಿಶುದ್ಧವಾದ ಮೋಕ್ಷವನ್ನು ಹೊಂದುವೆ.

ಪೂರ್ವಮಪ್ಯೇತದೇವೋಕ್ತಂ ಯುದ್ಧಕಾಲ ಉಪಸ್ಥಿತೇ ।
ಮಯಾ ತವ ಮಹಾಬಾಹೋ ತಸ್ಮಾದತ್ರ ಮನಃ ಕುರು ॥೪೯॥

ಮಹಾಬಾಹುವೇ! ಹಿಂದೆಯೂ ಕೂಡ ಯುದ್ಧವು ಸನ್ನಿಹಿತವಾಗಿದ್ದಾಗ ಅಧ್ಯಾತ್ಮದ ಈ ಉಪದೇಶವನ್ನೇ ನಿನಗೆ ಮಾಡಿದ್ದೆನು. (ಅದನ್ನು ನೀನು ಮರೆತುಬಿಟ್ಟೆ) ಆದುದರಿಂದ ಈಗಲಾದರೂ ನೀನು ನಾನು ಹೇಳಿರುವುದನ್ನು ಮನನಮಾಡು.

ಭರತಶ್ರೇಷ್ಠನೇ! ಅರ್ಜುನ! ಪ್ರಭುವಾದ ನನ್ನ ತಂದೆಯನ್ನು ನೋಡಿ ಬಹಳ ಕಾಲವಾಯಿತು. ನಾನೀಗ ನಿನ್ನ ಸಮ್ಮತಿಯನ್ನು ಪಡೆದು ಅವನನ್ನು ನೋಡಲು ದ್ವಾರಕೆಗೆ ಹೋಗಲು ಬಯಸುತ್ತೇನೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಹೇಳಿದ ಕೃಷ್ಣನೊಡನೆ ಅರ್ಜುನನು ಹೇಳಿದನು:

"ಕೃಷ್ಣ! ಈಗ ನಾವು ಹಸ್ತಿನಾಪಟ್ಟಣಕ್ಕೆ ಹೋಗೋಣ. ಅಲ್ಲಿ ಧರ್ಮಾತ್ಮನಾದ ಯುಧಿಷ್ಠಿರನೊಡನೆ ಕಲೆತು ಸಮಾಲೋಚಿಸಿ, ಅವನ ಅನುಮತಿಯನ್ನು ಪಡೆದು ನೀನು ನಿನ್ನ ಪಟ್ಟಣಕ್ಕೆ ಹೋಗಬಹುದು."

೫೧ನೆಯ ಅಧ್ಯಾಯವು ಮುಗಿಯಿತು.

ಶ್ರೀಕೃಷ್ಣನು ಅರ್ಜುನನೊಡನೆ ಹಸ್ತಿನಾಪುರಕ್ಕೆ ಬಂದುದು: ಯುಧಿಷ್ಠಿರನ ಅನುಮತಿಯನ್ನು ಪಡೆದು ಸುಭದ್ರೆಯೊಡನೆ ದ್ವಾರಕೆಗೆ ಪ್ರಯಾಣಮಾಡಿದುದು

ವೈಶಂಪಾಯರು ಹೇಳುತ್ತಾರೆ:

ತತೋಽಭ್ಯನೋದಯತ್ಕೃಷ್ಣೋ ಯುಜ್ಯತಾಮಿತಿ ದಾರುಕಮ್ ।
ಮುಹೂರ್ತಾದಿವ ಚಾಚಷ್ಟ ಯುಕ್ತಮಿತ್ಯೇವ ದಾರುಕಃ ॥೧॥

ಜನಮೇಜಯ! ಬಳಿಕ ಕೃಷ್ಣನು ರಥಕ್ಕೆ ಕುದುರೆಗಳನ್ನು ಹೂಡುವಂತೆ (ದಾರುಕನಿಗೆ) ಆಜ್ಞಾಪಿಸಿದನು. ಸ್ವಲ್ಪಹೊತ್ತಿನಲ್ಲಿಯೇ ದಾರುಕನು ಬಂದು ರಥವು ಸಿದ್ಧವಾಗಿರುವುದೆಂದು ಹೇಳಿದನು.

ಹಾಗೆಯೇ ಅರ್ಜುನನು ಕೂಡ ತನ್ನ ಸೇವಕರಿಗೆ –'ಹಸ್ತಿನಾಪಟ್ಟಣಕ್ಕೆ ಹೋಗೋಣ. ರಥಗಳನ್ನು ಸಜ್ಜುಗೊಳಿಸಿರಿ'–ಎಂದು ಆಜ್ಞಾಪಿಸಿದನು. ಹೀಗೆ ಆಜ್ಞಪ್ತರಾದ ಸೈನಿಕರು ಒಡನೆಯೇ ಹೊರಡಲು ಸಜ್ಜಾಗಿ ಮಹಾತೇಜಸ್ವಿಯಾದ ಅರ್ಜುನನಿಗೆ, ಪ್ರಯಾಣಹೊರಡಲು ಎಲ್ಲವೂ ಸಿದ್ಧವಾಗಿರುವುದೆಂದು ಹೇಳಿದರು. ಸೈನಿಕರು ಹಾಗೆ ಹೇಳಿದ ಬಳಿಕ ಕೃಷ್ಣಾರ್ಜುನರು ರಥದಲ್ಲಿ ಕುಳಿತು ಪ್ರಯಾಣಹೊರಟರು. ಆ ಸಮಯದಲ್ಲವರು ಪರಸ್ಪರವಾಗಿ ಚಿತ್ರ-ವಿಚಿತ್ರವಾದ ಪ್ರಸಂಗಗಳನ್ನು ಕುರಿತು ಮಾತನಾಡಿಕೊಳ್ಳುತ್ತಾ ಪ್ರಸನ್ನಚಿತ್ತರಾಗಿ ಪ್ರಯಾಣಮಾಡುತ್ತಿದ್ದರು. ಮಹಾತೇಜಸ್ವಿಯಾದ ಧನಂಜಯನು ರಥದಲ್ಲಿ ಕುಳಿತಿದ್ದ ವಾಸುದೇವನೊಡನೆ ಪುನಃ ಈ ಮಾತನ್ನು ಹೇಳಿದನು:

"ವೃಷ್ಣಿಕುಲಾವತಂಸನೇ! ನಿನ್ನ ಅನುಗ್ರಹದಿಂದಲೇ ಯುಧಿಷ್ಠಿರಮಹಾರಾಜನಿಗೆ ವಿಜಯವು ದೊರಕಿತು. ಶತ್ರುಗಳ ದಮನವಾಗಿ ನಿಷ್ಕಂಟಕವಾದ ರಾಜ್ಯವೂ ಲಭಿಸಿತು. ಮಧುಸೂದನನೇ! ನಿನ್ನಿಂದ ನಾವು ಸನಾಥರಾದೆವು. ನಿನ್ನನ್ನೇ ನೌಕೆಯನ್ನಾಗಿ ಮಾಡಿಕೊಂಡು ಕುರುಸೇನಾಸಾಗರವನ್ನು ದಾಟಿದೆವು.

ವಿಶ್ವಕರ್ಮನ್ನಮಸ್ತೇऽಸ್ತು ವಿಶ್ವಾತ್ಮನ್ವಿಶ್ವಸತ್ತಮ ।
ತಥಾ ತ್ವಾಮಭಿಜಾನಾಮಿ ಯಥಾ ಚಾಹಂ ಭವನ್ಮತಃ ॥೮॥

ವಿಶ್ವಕರ್ಮಸ್ವರೂಪನೇ! ವಿಶ್ವಕ್ಕೆಲ್ಲ ಆತ್ಮಪ್ರಾಯನಾಗಿರುವವನೇ! ವಿಶ್ವದಲ್ಲಿಯೇ ಶ್ರೇಷ್ಠನಾದವನೇ! ನಿನಗೆ ನಮಸ್ಕಾರಮಾಡುತ್ತೇನೆ. ನಾನು ನಿನಗೆ ತುಂಬಾ ಬೇಕಾದವನೆಂಬುದನ್ನು ತಿಳಿದುಕೊಂಡೆನು.

ತ್ವತ್ತೇಜಃ ಸಮ್ಭವೋ ನಿತ್ಯಂ ಭೂತಾತ್ಮಾ ಮಧುಸೂದನ ।
ರತಿಃ ಕ್ರೀಡಾಮಯೀ ತುಭ್ಯಂ ಮಾಯಾ ತೇ ರೋದಸೀ ವಿಭೋ ॥

ಮಧುಸೂದನನೇ! ನಿನ್ನ ತೇಜಸ್ಸಿನಿಂದಲೇ ಸತತವಾಗಿ ಎಲ್ಲ ಪ್ರಾಣಿಗಳ ಉತ್ಪತ್ತಿಯಾಗುತ್ತಿದೆ. ನೀನು ಎಲ್ಲ ಪ್ರಾಣಿಗಳ ಆತ್ಮನೂ ಆಗಿರುವೆ. ವಿಭುವೇ! ಕ್ರೀಡಾಮಯವಾದ ಈ ಭೂಮಿಯೇ ನಿನಗೆ ಮನೋರಂಜನೆಯ ಸ್ಥಾನವಾಗಿದೆ. ಆಕಾಶ ಮತ್ತು ಭೂಮಿಗಳು ನಿನ್ನ ಮಾಯೆಯೇ ಆಗಿವೆ.

ತ್ವಯಿ ಸರ್ವಮಿದಂ ವಿಶ್ವಂ ಯದಿದಂ ಸ್ಥಾಣು ಜಙ್ಗಮಮ್ ।
ತ್ವಂ ಹಿ ಸರ್ವಂ ವಿಕುರುಷೇ ಭೂತಗ್ರಾಮಂ ಚತುರ್ವಿಧಮ್ ॥೧೦॥

ಪೃಥಿವೀಂ ಚಾನ್ತರಿಕ್ಷಂ ಚ ದ್ಯಾಂ ಚೈವ ಮಧುಸೂದನ ।
ಹಸಿತಂ ತೇऽಮಲಾ ಜ್ಯೋತ್ಸ್ನಾ ಋತವಶ್ಚೇನ್ದ್ರಿಯಾಣಿ ಚ ॥೧೧॥

ಸ್ಥಾವರ-ಜಂಗಮಾತ್ಮಕವಾದ ಈ ವಿಶ್ವವೂ ನಿನ್ನಲ್ಲಿಯೇ ನೆಲೆಗೊಂಡಿದೆ. ನಾಲ್ಕುವಿಧವಾದ ಸಮಸ್ತಪ್ರಾಣಿಸಮುದಾಯವನ್ನೂ ನೀನೇ ಸೃಷ್ಟಿಸುವೆ. ಮಧುಸೂದನನೇ! ಪೃಥವೀ, ಅಂತರಿಕ್ಷ ಮತ್ತು ಆಕಾಶ– ಇವೆಲ್ಲದರ ಸೃಷ್ಟಿಯೂ ನಿನ್ನಿಂದಲೇ ಆಗಿದೆ. ನಿರ್ಮಲವಾದ ಬೆಳದಿಂಗಳೇ ನಿನ್ನ ಮಂದಹಾಸವಾಗಿದೆ. ಋತುಗಳೇ ನಿನ್ನ ಇಂದ್ರಿಯಗಳಾಗಿವೆ.

ಪ್ರಾಣೋ ವಾಯುಃ ಸತತಗಃ ಕ್ರೋಧೋ ಮೃತ್ಯುಃ ಸನಾತನಃ ।
ಪ್ರಸಾದೇ ಚಾಪಿ ಪದ್ಮಾ ಶ್ರೀರ್ನಿತ್ಯಂ ತ್ವಯಿ ಮಹಾಮತೇ ॥೧೨॥

ಸದಾ ಚಲಿಸುವ ವಾಯುವೇ ನಿನ್ನ ಪ್ರಾಣವಾಗಿದೆ. ಸನಾತನವಾದ

ಮೃತ್ಯುವೇ ನಿನ್ನ ಕ್ರೋಧಸ್ವರೂಪವಾಗಿದೆ. ಮಹಾಮತಿಯೇ! ನಿನ್ನ ಪ್ರಸನ್ನತೆಯಲ್ಲಿ ಲಕ್ಷ್ಮಿಯು ಸದಾ ನೆಲೆಸಿದ್ದಾಳೆ.

ರತಿಸ್ತುಷ್ಟಿರ್ಧೃತಿಃ ಕ್ಷಾನ್ತಿರ್ಮತಿಃ ಕಾನ್ತಿಶ್ಚರಾಚರಮ್ ।
ತ್ವಮೇವೇಹ ಯುಗಾನ್ತೇಷು ನಿಧನಂ ಪ್ರೋಚ್ಯಸೇಽನಘ ॥೧೩॥

ನಿಷ್ಪಾಪನೇ! ನಿನ್ನಲ್ಲಿಯೇ ರತಿ, ತುಷ್ಟಿ, ಧೃತಿ, ಕ್ಷಾಂತಿ, ಮತಿ, ಕಾಂತಿ ಮತ್ತು ಚರಾಚರಜಗತ್ತೂ ನೆಲೆಗೊಂಡಿವೆ. ನಿನ್ನನ್ನೇ ಯುಗಗಳ ಕಡೆಯಲ್ಲಿ ಸಕಲಜಗತ್ತುಗಳನ್ನೂ ನಾಶಪಡಿಸುವ ಮೃತ್ಯುವೆಂದೂ ಹೇಳುತ್ತಾರೆ.

ಸುದೀರ್ಘೇಣಾಪಿ ಕಾಲೇನ ನ ತೇ ಶಕ್ಯಾ ಗುಣಾ ಮಯಾ ।
ಆತ್ಮಾ ಚ ಪರಮಾತ್ಮಾ ಚ ನಮಸ್ತೇ ನಲಿನೇಕ್ಷಣ ॥೧೪॥

ಸುದೀರ್ಘಕಾಲದವರೆಗೆ ನಿನ್ನ ಗುಣವನ್ನೇ ಹೇಳುತ್ತಿದ್ದರೂ ನಿನ್ನ ಆ ಗುಣಗಳ ಪಾರವನ್ನು ಕಾಣುವುದು ನನಗಂತೂ ಶಕ್ಯವಿಲ್ಲವಾಗಿದೆ. ಕಮಲನಯನನೇ! ನೀನು ಆತ್ಮನೂ ಪರಮಾತ್ಮನೂ ಆಗಿರುವೆ. ನಿನಗೆ ನಮಸ್ಕರಿಸುತ್ತೇನೆ.

ದುರ್ಧರ್ಷನೇ! ದೇವರ್ಷಿಗಳಾದ ನಾರದರಿಂದಲೂ, ದೇವಲ ರಿಂದಲೂ, ಕೃಷ್ಣದ್ವೈಪಾಯನರಿಂದಲೂ, ಕುರುಕುಲಪಿತಾಮಹನಾದ ಭೀಷ್ಮನಿಂದಲೂ ನಿನ್ನ ಮಾಹಾತ್ಮ್ಯವನ್ನು ತಿಳಿದುಕೊಂಡಿದ್ದೇನೆ.

ತ್ವಯಿ ಸರ್ವಂ ಸಮಾಸಕ್ತಂ ತ್ವಮೇವೈಕೋ ಜನೇಶ್ವರಃ ।
ಯಚ್ಚಾನುಗ್ರಹಸಂಯುಕ್ತಮೇತದುಕ್ತಂ ತ್ವಯಾನಘ ।
ಏತತ್ಸರ್ವಮಹಂ ಸಮ್ಯಗಾಚರಿಷ್ಯೇ ಜನಾರ್ದನ ॥೧೬॥

ಅನಘನೇ! ಸಮಸ್ತವಾದ ಜಗತ್ತೂ ನಿನ್ನಲ್ಲಿಯೇ ಸೇರಿಹೋಗಿದೆ. ನೀನೊಬ್ಬನೇ ಸಮಸ್ತಜನರಿಗೂ ಅಧೀಶ್ವರನಾಗಿರುವೆ. ಜನಾರ್ದನನೇ! ನೀನು ನನ್ನ ಮೇಲೆ ಕೃಪೆಯಿಟ್ಟು ಯಾವುದನ್ನು ಉಪದೇಶಿಸಿರುವೆಯೋ ಅದೆಲ್ಲವನ್ನೂ ನಾನು ಚೆನ್ನಾಗಿ ಪರಿಪಾಲಿಸುತ್ತೇನೆ. ನಮಗೆ ಪ್ರಿಯ

ವನ್ನುಂಟುಮಾಡುವ ಇಚ್ಛೆಯಿಂದ ನೀನು ಪರಮಾದ್ಭುತವಾದ ಕಾರ್ಯವನ್ನೇ ಮಾಡಿರುವೆ. ಧೃತರಾಷ್ಟ್ರನ ಮಗನಾದ ಕುರುಕುಲಕಳಂಕನಾದ ಪಾಪಿಷ್ಠನಾದ ದುರ್ಯೋಧನನು ಯುದ್ಧದಲ್ಲಿ ಹತನಾದನು. ಆ ಕೌರವಸೈನ್ಯವು ನಿನ್ನ ತೇಜಸ್ಸಿನಿಂದಲೇ ದಗ್ಧವಾಗಿದ್ದಿತು. ಅನಂತರ ನಾನು ಅದನ್ನು ಯುದ್ಧದಲ್ಲಿ ಜಯಿಸಿದೆನು. ಆ ಸಮಯದಲ್ಲಿ ಶತ್ರುವಿಧ್ವಂಸನಕ್ರಿಯೆಯನ್ನು ನೀನೇ ಮಾಡಿದೆ. ಆದುದರಿಂದಲೇ ನನಗೆ ಜಯವು ಲಭಿಸಿತು. ಅಂದು ನಡೆದ ಯುದ್ಧದಲ್ಲಿ ನಿನ್ನ ಬುದ್ಧಿಯ ಸಾಮರ್ಥ್ಯದಿಂದಲೇ ದುರ್ಯೋಧನ, ಕರ್ಣ, ಪಾಪಿಷ್ಠನಾದ ಜಯದ್ರಥ ಮತ್ತು ಭೂರಿಶ್ರವಸ-ಇವರ ವಧೋಪಾಯವು ತಿಳಿಯಿತು. ದೇವಕೀನಂದನನೇ! ನೀನು ಪ್ರೇಮಪೂರ್ವಕವಾಗಿ ಯಾವ ಕಾರ್ಯವನ್ನು ಮಾಡಲು ಹೇಳಿರುವೆಯೋ–ಅದನ್ನು ಯಥಾವತ್ತಾಗಿ ಮಾಡುತ್ತೇನೆ. ಇದನ್ನು ಪುನಃ ಆಲೋಚಿಸಬೇಕಾಗಿಯೇ ಇಲ್ಲ. ಧರ್ಮಜ್ಞನೇ! ದೋಷರಹಿತನೇ! ಜನಾರ್ದನನೇ! ನಾನೀಗಲೇ ಧರ್ಮಾತ್ಮನಾದ ಯುಧಿಷ್ಠಿರನ ಬಳಿಗೆ ಹೋಗಿ, ದ್ವಾರಾವತಿಗೆ ಹೋಗಲು ನಿನಗೆ ಅನುಮತಿಯನ್ನು ನೀಡಬೇಕೆಂದು ಪ್ರೇರಿಸುತ್ತೇನೆ. ಈಗ ನೀನು ದ್ವಾರಕೆಗೆ ಹೋಗಿ ನನ್ನ ಸೋದರಮಾವನನ್ನೂ (ವಸುದೇವನನ್ನೂ), ದುರ್ಧರ್ಷನಾದ ಬಲದೇವನನ್ನೂ, ಇತರ ವೃಷ್ಣಿಶ್ರೇಷ್ಠರನ್ನೂ ನೋಡುವುದು ನನಗೂ ಸಮ್ಮತವಿದೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಮಾತನಾಡುತ್ತಿರುವಾಗಲೇ ಅವರು ಹಸ್ತಿನಾಪುರವನ್ನು ತಲುಪಿದರು. ಬಳಿಕ ಇಬ್ಬರೂ ಹೃಷ್ಟ-ಪುಷ್ಟರಾದ ಪ್ರಜೆಗಳಿಂದ ತುಂಬಿಹೋಗಿದ್ದ ನಗರವನ್ನು ಪ್ರವೇಶಿಸಿದರು. ಅನಂತರ ಅವರು ಇಂದ್ರಭವನಕ್ಕೆ ಸಮಾನವಾಗಿದ್ದ ಧೃತರಾಷ್ಟ್ರನ ಅರಮನೆಯನ್ನು ಪ್ರವೇಶಿಸಿ ಅಲ್ಲಿ ಜನೇಶ್ವರನಾದ ಧೃತರಾಷ್ಟ್ರರಾಜನನ್ನೂ, ಮಹಾಬುದ್ಧಿಶಾಲಿಯಾದ ವಿದುರನನ್ನೂ, ಯುಧಿಷ್ಠಿರರಾಜನನ್ನೂ ಸಂದರ್ಶಿಸಿದರು. ಅನಂತರ ಅವರು

ಅನುಕ್ರಮವಾಗಿ ದುರ್ಜಯನಾದ ಭೀಮಸೇನನನ್ನೂ, ನಕುಲ-ಸಹದೇವರನ್ನೂ, ಧೃತರಾಷ್ಟ್ರನ ಸೇವೆಯಲ್ಲಿ ನಿರತನಾಗಿದ್ದ ಅಪರಾಜಿತನಾದ ಯುಯುತ್ಸುವನ್ನೂ, ಮಹಾಪ್ರಾಜ್ಞಳಾದ ಗಾಂಧಾರಿಯನ್ನೂ, ಕುಂತಿಯನ್ನೂ, ಕಾಂತಿಯುಕ್ತಳಾದ ದ್ರೌಪದಿಯನ್ನೂ, ಸುಭದ್ರೆಯೇ ಮೊದಲಾದ ಇತರ ಭರತಕುಲಸ್ತ್ರೀಯರನ್ನೂ, ಗಾಂಧಾರಿಯ ಪರಿಚಾರಿಕೆಯರನ್ನೂ ಕಂಡು ಮಾತನಾಡಿಸಿದರು. ಬಳಿಕ ಶತ್ರುಗಳನ್ನು ದಮನಮಾಡುವ ಸಾಮರ್ಥ್ಯವುಳ್ಳ ಅವರು, ಧೃತರಾಷ್ಟ್ರನ ಬಳಿಗೆ ಹೋಗಿ ತಮ್ಮ ತಮ್ಮ ನಾಮಧೇಯಗಳನ್ನು ಹೇಳಿಕೊಂಡು ಅಭಿವಾದನಪೂರ್ವಕವಾಗಿ ಅವನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದರು. ಹಾಗೆಯೇ ಮಹಾತ್ಮರಾದ ಅವರು ಗಾಂಧಾರೀ, ಕುಂತೀ, ಧರ್ಮರಾಜ, ಭೀಮಸೇನ-ಇವರ ಪಾದಗಳನ್ನೂ ಮುಟ್ಟಿ ನಮಸ್ಕರಿಸಿದರು. ವಿದುರನ ಬಳಿಗೂ ಹೋಗಿ ಅವನ ಯೋಗಕ್ಷೇಮವನ್ನೂ ವಿಚಾರಿಸಿದರು. ಬಳಿಕ ವಿದುರಾದಿಗಳೊಡನೆ ಧೃತರಾಷ್ಟ್ರನ ಬಳಿಗೆ ಹೋದರು. ಬಹಳ ಹೊತ್ತಿನವರೆಗೆ ಪರಸ್ಪರವಾಗಿ ಮಾತುಕತೆಗಳಾದ ಬಳಿಕ ರಾತ್ರಿಯಲ್ಲಿ ಮೇಧಾವಿಯಾದ ಧೃತರಾಷ್ಟ್ರನು ಜನಾರ್ದನನನ್ನೂ ಧರ್ಮರಾಜನೇ ಮೊದಲಾದ ಕುರುಶ್ರೇಷ್ಠರನ್ನೂ ಅವರವರ ಮನೆಗಳಿಗೆ ಕಳುಹಿಸಿಕೊಟ್ಟನು. ರಾಜನ ಅನುಜ್ಞೆಯನ್ನು ಪಡೆದು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ವೀರ್ಯವಂತನಾದ ಶ್ರೀಕೃಷ್ಣನು ಧನಂಜಯನ ಅರಮನೆಗೆ ಹೋದನು. ಅಲ್ಲಿ ಅರ್ಜುನನು ಅವನನ್ನು ಸಕಲವಿಧವಾದ ಅಭೀಷ್ಟವಾದ ಪದಾರ್ಥಗಳಿಂದ ಯಥೋಚಿತವಾಗಿ ಸತ್ಕರಿಸಿದನು. ಭೋಜನಾನಂತರ ಮೇಧಾವಿಯಾದ ಶ್ರೀಕೃಷ್ಣನು ಧನಂಜಯನೊಡನೆ ಮಲಗಿದನು. ರಾತ್ರಿಯು ಕಳೆದು ಪ್ರಾತಃಕಾಲವಾಗುತ್ತಲೇ ಪರಮಪೂಜಿತರಾದ ಕೃಷ್ಣಾರ್ಜುನರು ಹಾಸಿಗೆಯಿಂದೆದ್ದು ಶೌಚ-ಮುಖಮಾರ್ಜನ-ಸ್ನಾನ-ಸಂಧ್ಯಾವಂದನಾದಿ ಪ್ರಾತಃಕಾಲದ ಕ್ರಿಯೆಗಳೆಲ್ಲವನ್ನೂ ಮುಗಿಸಿಕೊಂಡು ಧರ್ಮರಾಜನ ಅರಮನೆಗೆ ತೆರಳಿದರು. ಆ ವೇಳೆಗೆ ಸರಿಯಾಗಿ ಮಹಾಬಲ

ನಾದ ಯುಧಿಷ್ಠಿರನು ಅಮಾತ್ಯರೊಡನೆ ಕುಳಿತಿದ್ದನು. ಮಹಾತ್ಮರಾದ ಕೃಷ್ಣಾರ್ಜುನರು ಸುಸಜ್ಜಿತವಾಗಿದ್ದ ಧರ್ಮರಾಜನ ಅರಮನೆಯನ್ನು ಪ್ರವೇಶಿಸಿ–ದೇವರಾಜನಾದ ಇಂದ್ರನನ್ನು ಅಶ್ವಿನೀದೇವತೆಗಳು ಸಂದರ್ಶಿಸು ವಂತೆ–ಯುಧಿಷ್ಠಿರನನ್ನು ಸಂದರ್ಶಿಸಿದರು. ತಮ್ಮನ್ನು ನೋಡಿ ಪರಮಪ್ರೀತ ನಾದ ಧರ್ಮರಾಜನ ಅನುಜ್ಞೆಯನ್ನು ಪಡೆದು ಶುಭಾಸನಗಳಲ್ಲಿ ಕೃಷ್ಣಾರ್ಜುನರು ಕುಳಿತುಕೊಂಡರು. ಮೇಧಾವಿಯಾದ, ರಾಜಶ್ರೇಷ್ಠನಾದ, ವಾಗ್ಮಿಗಳಲ್ಲಿ ಶ್ರೇಷ್ಠನಾದ ಯುಧಿಷ್ಠಿರನು, ಕೃಷ್ಣಾರ್ಜುನರು ಯಾವುದೋ ವಿಷಯವನ್ನು ಹೇಳಲು ಬಯಸಿರುವರೆಂಬುದನ್ನು ಅವರ ಮುಖಭಾವ ದಿಂದಲೇ ಊಹಿಸಿ ಹೀಗೆಂದನು:

"ಯದು-ಕುರುಕುಲಶ್ರೇಷ್ಠರೇ! ವೀರರೇ! ನೀವಿಬ್ಬರೂ ಏನನ್ನೋ ಹೇಳಲು ಬಯಸಿ ಬಂದಿರುವಿರಿ. ನಿಮ್ಮ ಆಶಯವೇನೆಂಬುದನ್ನು ಹೇಳಿರಿ. ಬಹಳ ಶೀಘ್ರವಾಗಿಯೇ ನಿಮ್ಮ ಕಾರ್ಯವನ್ನು ಮಾಡಿಕೊಡುತ್ತೇನೆ. ನೀವು ನಿಮ್ಮ ಆಶಯವನ್ನು ತಿಳಿಸುವುದರಲ್ಲಿ ಹಿಂದೆ-ಮಂದೆ ನೋಡಬೇಕಾಗಿಯೇ ಇಲ್ಲ."

ಯುಧಿಷ್ಠಿರನು ಹೀಗೆ ಹೇಳಲಾಗಿ, ಮಾತನಾಡುವುದರಲ್ಲಿ ಕುಶಲನಾದ ಅರ್ಜುನನು ಧರ್ಮರಾಜನ ಸಮೀಪಕ್ಕೆ ಹೋಗಿ ವಿನಯಭಾವದಿಂದ ಅವನಿಗೆ ಹೇಳಿದನು:

"ಮಹಾರಾಜ! ಪ್ರತಾಪವಂತನಾದ ಈ ನಮ್ಮ ಕೃಷ್ಣನು ಅನೇಕ ದಿವಸಗಳಿಂದಲೂ ಇಲ್ಲಿಯೇ ಇದ್ದುಬಿಟ್ಟಿದ್ದಾನೆ. ನಿನ್ನ ಅನುಮತಿಯನ್ನು ಪಡೆದು ತಂದೆಯಾದ ವಸುದೇವನನ್ನು ನೋಡುವ ಸಲುವಾಗಿ ದ್ವಾರಕೆಗೆ ಪ್ರಯಾಣಮಾಡಲು ಅಪೇಕ್ಷಿಸಿದ್ದಾನೆ. ಈ ಮಹಾವೀರನು ದ್ವಾರಕೆಗೆ ಹೋಗುವುದು ಉಚಿತವೆಂದು ನೀನೂ ಭಾವಿಸಿ ಅನುಜ್ಞೆಯನ್ನು ನೀಡುವೆಯಾದರೆ ಅವನು ದ್ವಾರಕೆಗೆ ಹೋಗಿಬರುವನು. ಆದುದರಿಂದ ಶ್ರೀಕೃಷ್ಣನು ದ್ವಾರಕೆಗೆ ಪ್ರಯಾಣಮಾಡಲು ಅನುಮತಿಸು."

ಯುಧಿಷ್ಠಿರನು ಹೇಳುತ್ತಾನೆ:

"ಪುಂಡರೀಕಾಕ್ಷನೇ! ನಿನಗೆ ಮಂಗಳವಾಗಲಿ. ಪ್ರಭುವೇ! ನೀನೀಗಲೇ ಶೂರನ ಮಗನಾದ ವಸುದೇವನನ್ನು ಕಾಣುವ ಸಲುವಾಗಿ ದ್ವಾರಕೆಗೆ ಪ್ರಯಾಣಮಾಡು. ಈ ಸಮಯದಲ್ಲಿ ನೀನು ಅಲ್ಲಿಗೆ ಹೋಗುವುದು

ನನಗೂ ಸಮುಚಿತವಾಗಿ ತೋರುತ್ತದೆ. ನನ್ನ ಸೋದರಮಾವನನ್ನೂ ಮತ್ತು ಸೋದರತ್ತೆಯಾದ ದೇವಕಿಯನ್ನೂ ನೀನು ನೋಡಿ ಬಹಳ ದಿವಸಗಳೇ ಆದುವು. ಮಾನಪ್ರದನೇ! ಮಹಾಪ್ರಾಜ್ಞನೇ! ನೀನು ನನ್ನ ಸೋದರಮಾವನಾದ ವಸುದೇವನನ್ನೂ ಮತ್ತು ನಿನ್ನ ಅಣ್ಣನಾದ ಬಲಭದ್ರನನ್ನೂ ಸಂಧಿಸಿ, ನನ್ನ ಪರವಾಗಿ ಅವರನ್ನು ಯಥಾಯೋಗ್ಯವಾಗಿ ಸತ್ಕರಿಸು. ಭಕ್ತರ ಮಾನವನ್ನು ಕಾಪಾಡುವ ಕರುಣಾಮಯನೇ! ನೀನು ದ್ವಾರಕೆಗೆ ಹೋದ ನಂತರವೂ ನನ್ನನ್ನೂ, ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮಸೇನನನ್ನೂ, ಅರ್ಜುನ-ನಕುಲ-ಸಹದೇವರುಗಳನ್ನೂ ಜ್ಞಾಪಿಸಿಕೊಳ್ಳುತ್ತಲೇ ಇರಬೇಕು. ದೋಷರಹಿತನೇ! ಅನರ್ತದೇಶದ ಪ್ರಜೆಗಳನ್ನೂ, ನಿನ್ನ ತಂದೆಯನ್ನೂ, ವೃಷ್ಣಿಶ್ರೇಷ್ಠರನ್ನೂ ನೋಡಿ ನಾನು ಮಾಡಲಿರುವ ಅಶ್ವಮೇಧಯಾಗಕ್ಕೆ ಪುನಃ ಆಗಮಿಸಬೇಕು. ಸಾತ್ವತನೇ! ವಿಧ-ವಿಧವಾದ ರತ್ನಗಳನ್ನೂ ಐಶ್ವರ್ಯಗಳನ್ನೂ, ನಿನಗೆ ಪ್ರಿಯವಾದ ಮನೋಜ್ಞವಾದ ಯಾವುದೇ ಇತರ ವಸ್ತುಗಳನ್ನು ಬೇಕಾದರೂ ತೆಗೆದುಕೊಂಡು ಪ್ರಯಾಣಮಾಡು. ಕೇಶವನೇ! ನಿನ್ನ ಅನುಗ್ರಹದಿಂದಾಗಿ ಈ ಅಖಂಡಭೂಮಂಡಲವೂ ನಮಗೆ ಸೇರಿತು. ಶತ್ರುಗಳೂ ಹತರಾದರು."

ವೈಶಂಪಾಯನರು ಹೇಳುತ್ತಾರೆ:

ಮಹಾರಾಜ! ಕುರುಶ್ರೇಷ್ಠನಾದ ಧರ್ಮಜನಾದ ಯುಧಿಷ್ಠಿರನು ಹೀಗೆ ಹೇಳುತ್ತಿರಲಾಗಿ ಪುರುಷಶ್ರೇಷ್ಠನಾದ ವಾಸುದೇವನು ಹೇಳಿದನು:

ತವೈವ ರತ್ನಾನಿ ಧನಂ ಚ ಕೇವಲಂ
ಧರಾ ತು ಕೃತ್ಸ್ನಾತು ಮಹಾಭುಜಾದ್ಯ ವೈ ।
ಯದಸ್ತಿ ಚಾನ್ಯದ್ದ್ರವಿಣಂ ಗೃಹೇ ಮಮ
ತ್ವಮೇವ ತಸ್ಯೇಶ್ವರ ನಿತ್ಯಮೀಶ್ವರಃ ॥೫೨॥

"ಮಹಾಭುಜನೇ! ನರೇಶ್ವರನೇ! ರತ್ನಗಳು, ಧನ, ಸಮಗ್ರವಾದ ಭೂಮಂಡಲ-ಈ ಎಲ್ಲವೂ ನಿನ್ನವೇ ಆಗಿವೆ. ಇಷ್ಟೇ ಅಲ್ಲ. ಬೇರೆ ಯಾವುದಾದರೂ ಐಶ್ವರ್ಯವು ನನ್ನ ಮನೆಯಲ್ಲಿ ಇದ್ದುದೇ ಆದರೆ ಅಂತಹ ಸಕಲೈಶ್ವರ್ಯಕ್ಕೂ ನೀನೇ ನಿತ್ಯೇಶ್ವರನಾಗಿರುವೆ."

ಶ್ರೀಕೃಷ್ಣನು ಹೀಗೆ ಹೇಳಿದನಂತರ ಯುಧಿಷ್ಠಿರನು-'ತಥಾಸ್ತು'

‘ಹಾಗೆಯೇ ಆಗಲಿ’-ಎಂದು ಹೇಳಿ ಶ್ರೀಕೃಷ್ಣನ ಮಾತನ್ನು ಪುರಸ್ಕರಿಸಿದನು. ಹೀಗೆ ಯುಧಿಷ್ಠಿರನಿಂದ ಸಮ್ಮಾನಿತನಾದ, ವೀರ್ಯವಂತನಾದ, ಗದನಿಗೆ ಅಣ್ಣನಾದ ಶ್ರೀಕೃಷ್ಣನು, ತನ್ನ ತಂದೆಯ ತಂಗಿಯಾದ ಕುಂತಿಯ ಬಳಿಗೆ ಹೋಗಿ, ಅವಳೊಡನೆ ಯಥೋಚಿತವಾಗಿ ಮಾತುಗಳನ್ನಾಡಿ, ಅವಳಿಂದ ಯಥಾವಿಧಿಯಾಗಿ ಸತ್ಕಾರವನ್ನು ಪಡೆದು ಅವಳಿಗೆ ಪ್ರದಕ್ಷಿಣ-ನಮಸ್ಕಾರವನ್ನು ಮಾಡಿದನು. ಚತುರ್ಭುಜಧರನಾದ ಭಗವಾನ್ ಶ್ರೀಕೃಷ್ಣನು ಕುಂತಿಯಿಂದಲೂ ಮತ್ತು ವಿದುರನೇ ಮೊದಲಾದ ಸಮಸ್ತರಿಂದಲೂ ಅಭಿನಂದಿಸಲ್ಪಟ್ಟವನಾಗಿ ಅವರೆಲ್ಲರ ಅನುಮತಿಯನ್ನೂ ಪಡೆದು ದಿವ್ಯವಾದ ರಥದಲ್ಲಿ ಕುಳಿತು ನಾಗಪುರದಿಂದ (ಹಸ್ತಿನಾಪುರದಿಂದ) ಹೊರಟನು. ಪಟ್ಟಣಿಗರಿಂದ ಸಮಾವೃತನಾಗಿದ್ದ ಮಹಾಭುಜನಾದ ಆ ಶ್ರೀಕೃಷ್ಣನು ಕುಂತಿಯ ಮತ್ತು ಯುಧಿಷ್ಠಿರನ ಅನುಮತಿಯನ್ನು ಪಡೆದು ಪತಿವ್ರತೆಯಾದ ಸುಭದ್ರೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹಸ್ತಿನಾಪುರದಿಂದ ಪ್ರಯಾಣ ಮಾಡಿದನು. ಶ್ರೀಕೃಷ್ಣನ ರಥವು ಹೊರಡುತ್ತಲೇ ಕಪಿಧ್ವಜನಾದ ಅರ್ಜುನನೂ, ಸಾತ್ಯಕಿಯೂ, ನಕುಲ-ಸಹದೇವರೂ, ಮಹಾಬುದ್ಧಿಶಾಲಿಯಾದ ವಿದುರನೂ, ಗಜರಾಜವಿಕ್ರಮನಾದ ಭೀಮಸೇನನೂ ಸ್ವಲ್ಪ ದೂರದವರೆಗೆ ಶ್ರೀಕೃಷ್ಣನನ್ನು ಹಿಂಬಾಲಿಸಿದರು. ಅನಂತರ ವೀರ್ಯವಂತನಾದ ಶ್ರೀಕೃಷ್ಣನು ಕುರುರಾಷ್ಟ್ರವರ್ಧನರಾದ ಭೀಮಾದಿಗಳನ್ನೂ, ವಿದುರನನ್ನೂ ಮತ್ತು ತನ್ನನ್ನು ಅನುಸರಿಸಿ ಬಂದ ಸಮಸ್ತರನ್ನೂ ಸವಿಮಾತುಗಳಿಂದ ಹಿಂದಕ್ಕೆ ಕಳುಹಿಸಿ, ದಾರುಕನಿಗೂ ಮತ್ತು ಸಾತ್ಯಕಿಗೂ ಕುದುರೆಗಳನ್ನು ವೇಗವಾಗಿ ನಡೆಸಿಕೊಂಡು ಹೋಗುವಂತೆ ಆಜ್ಞಾಪಿಸಿದನು. ಶತಕ್ರತುವಾದ ಪ್ರತಾಪವಂತನಾದ ಇಂದ್ರನು ಶತ್ರುಗಳ ಸಮೂಹವನ್ನು ಸಂಹರಿಸಿ ಸ್ವರ್ಗಕ್ಕೆ ಹೋಗುವಂತೆ–ಶತ್ರುಗಣಸಂಹಾರಕನಾದ ಜನಾರ್ದನನು ಶಿನಿಪ್ರವೀರನಾದ ಸಾತ್ಯಕಿಯಿಂದ ಹಿಂಬಾಲಿಸಲ್ಪಟ್ಟು ದ್ವಾರಕೆಗೆ ಪ್ರಯಾಣಮಾಡಿದನು.”

೫೨ನೆಯ ಅಧ್ಯಾಯವು ಮುಗಿಯಿತು.

೫೩ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಮಾರ್ಗದಲ್ಲಿ ಶ್ರೀಕೃಷ್ಣನಿಂದ ಕೌರವರ ವಿನಾಶವಾರ್ತೆಯನ್ನು ಕೇಳಿ ಉತ್ತಂಕಮುನಿಯು ಕುಪಿತನಾದುದು: ಶ್ರೀಕೃಷ್ಣನು ಉತ್ತಂಕನನ್ನು ಸಮಾಧಾನಪಡಿಸಿದುದು.

ವೈಶಂಪಾಯನರು ಹೇಳುತ್ತಾರೆ:

ತಥಾ ಪ್ರಯನ್ತಂ ವಾರ್ಷ್ಣೇಯಂ ದ್ವಾರಕಾಂ ಭರತರ್ಷಭಾಃ।
ಪರಿಷ್ವಜ್ಯ ನ್ಯವರ್ತನ್ತ ಸಾನುಯಾತ್ರಾಃ ಪರಂತಪಾಃ ॥೧॥

ಜನಮೇಜಯ! ಹೀಗೆ ದ್ವಾರಕೆಗೆ ಪ್ರಯಾಣಹೊರಟ ಶ್ರೀಕೃಷ್ಣನನ್ನು ಭರತಶ್ರೇಷ್ಠರಾದ, ಶತ್ರುಗಳನ್ನು ಪರಿತಾಪಗೊಳಿಸುವ ಭೀಮಾದಿಗಳು ಗಾಢವಾಗಿ ಆಲಿಂಗಿಸಿ ಬೀಳ್ಕೊಟ್ಟು ಸೇವಕರೊಡನೆ ಹಸ್ತಿನಾಪುರಿಗೆ ಹಿಂದಿರುಗಿದರು. ಅರ್ಜುನನು ಪ್ರಿಯಸಖನಾದ ವೃಷ್ಣಿಕುಲಾವತಂಸನಾದ ಶ್ರೀಕೃಷ್ಣನನ್ನು ಮತ್ತೆ-ಮತ್ತೆ ತಬ್ಬಿಕೊಂಡನು. ಬೀಳ್ಕೊಟ್ಟನಂತರ ಕಣ್ಣುಗಳ ದೃಷ್ಟಿಯು ಎಟುಕುವವರೆಗೂ ಶ್ರೀಕೃಷ್ಣನನ್ನು ನೋಡುತ್ತಲೇ ಇದ್ದನು. ಗೋವಿಂದನಲ್ಲಿಯೇ ನೆಟ್ಟದೃಷ್ಟಿಯುಳ್ಳವನಾಗಿದ್ದ ಅರ್ಜುನನು ರಥವು ಬಹಳ ದೂರಕ್ಕೆ ಹೋಗುತ್ತಲೇ ಅನಿವಾರ್ಯವಾಗಿ ತನ್ನ ದೃಷ್ಟಿಯನ್ನು ಹಿಂತೆಗೆದುಕೊಂಡನು. ಅಪರಾಜಿತನಾದ ಶ್ರೀಕೃಷ್ಣನ ಸ್ಥಿತಿಯೂ ಅದೇ ಆಗಿದ್ದಿತು. ಮಹಾತ್ಮನಾದ ಶ್ರೀಕೃಷ್ಣನ ಪ್ರಯಾಣಸಮಯದಲ್ಲಿ ಎಂತಹ ಅದ್ಭುತವಾದ ಶಕುನಗಳು ಕಂಡುಬಂದುವೆಂಬುದನ್ನು ಹೇಳುವೆನು; ಕೇಳು:

ವಾಯುರ್ವೇಗೇನ ಮಹತಾ ರಥಸ್ಯ ಪುರತೋ ವವೌ ।
ಕುರ್ವನ್ನಿಃಶರ್ಕರಂ ಮಾರ್ಗಂ ವಿರಜಸ್ಕಮಕಣ್ಟಕಮ್ ॥೨॥

ಗಾಳಿಯು, ಮಾರ್ಗವನ್ನು ಕಲ್ಲುಗಳಿಂದಲೂ ಧೂಳಿನಿಂದಲೂ ಮತ್ತು ಮುಳ್ಳುಗಳಿಂದಲೂ ರಹಿತವನ್ನಾಗಿ ಮಾಡುತ್ತಾ ಶ್ರೀಕೃಷ್ಣನ ರಥದ ಮುಂಭಾಗದಲ್ಲಿ ವೇಗವಾಗಿ ಬೀಸುತ್ತಿದ್ದಿತು.

ವವರ್ಷ ವಾಸವಶ್ಚೈವ ತೋಯಂ ಶುಚಿ ಸುಗನ್ಧಿ ಚ ।
ದಿವ್ಯಾನಿ ಚೈವ ಪುಷ್ಪಾಣಿ ಪುರತಃ ಶಾರ್ಙ್ಗಧನ್ವನಃ ॥೬॥

ಇಂದ್ರನೂ ಕೂಡ ಶುಭ್ರವೂ ಸುಗಂಧಯುಕ್ತವೂ ಆಗಿದ್ದ ನೀರನ್ನೂ, (ಮಳೆಯನ್ನೂ) ದಿವ್ಯವಾದ ಪುಷ್ಪಗಳನ್ನೂ ಶ್ರೀಕೃಷ್ಣನ ಮುಂಭಾಗದಲ್ಲಿ ಸುರಿಸಿದನು.

ಶ್ರೀಕೃಷ್ಣನು ಹೀಗೆ ದ್ವಾರಕೆಗೆ ಅಭಿಮುಖವಾಗಿ ಸಮತಟ್ಟಾದ ನೆಲದಲ್ಲಿಯೂ ಮರುಭೂಮಿಯಲ್ಲಿಯೂ ಪ್ರಯಾಣಮಾಡುತ್ತಿದ್ದಾಗ ಮಹಾತೇಜಸ್ವಿಯಾದ ಮುನಿಶ್ರೇಷ್ಠನಾದ ಉತ್ತಂಕನನ್ನು ನೋಡಿದನು. ವಿಶಾಲಾಕ್ಷನಾದ, ತೇಜಸ್ವಿಯಾದ ಶ್ರೀಕೃಷ್ಣನು ಉತ್ತಂಕನನ್ನು ಯಥೋಚಿತವಾಗಿ ಸಂಪೂಜಿಸಿದನು. ಅದಕ್ಕೆ ಪ್ರತಿಯಾಗಿ ಉತ್ತಂಕನೂ ಶ್ರೀಕೃಷ್ಣನನ್ನು ಯಥೋಚಿತವಾಗಿ ಗೌರವಿಸಿದನು. ಅನಂತರ ಶ್ರೀಕೃಷ್ಣನು ಉತ್ತಂಕನ ಯೋಗಕ್ಷೇಮವನ್ನು ವಿಚಾರಿಸಿದನು. ಹೀಗೆ ಕುಶಲಪ್ರಶ್ನೆಗಳನ್ನು ಕೇಳಿದ ಮಧುಸೂದನನನ್ನು ಬ್ರಾಹ್ಮಣಶ್ರೇಷ್ಠನಾದ ಉತ್ತಂಕನು ಸತ್ಕರಿಸಿ ಪ್ರಶ್ನಿಸಿದನು:

“ಶೌರಿಯೇ! ನೀನು ಕುರು-ಪಾಂಡವರ ಸದನಗಳಿಗೆ ಹೋಗಿ ಅವರಿಬ್ಬರಲ್ಲಿಯೂ ಒಳ್ಳೆಯ ಭ್ರಾತೃಭಾವವನ್ನು ಉಂಟು ಮಾಡಿಬಂದೆಯಾ? ಈ ವಿಷಯವನ್ನು ವಿಸ್ತಾರವಾಗಿ ಹೇಳುವ ಕೃಪೆಮಾಡು. ಕೇಶವನೇ! ನಿನಗೆ ಸಂಬಂಧಿಗಳೂ ಪ್ರಿಯರೂ ಆಗಿರುವ ಕೌರವ-ಪಾಂಡವರಲ್ಲಿ ಸಂಧಾನವನ್ನೇರ್ಪಡಿಸಿ ಹಿಂದಿರುಗುತ್ತಿರುವೆಯಾ? ಐವರು ಪಾಂಡವರು ಮತ್ತು ಧೃತರಾಷ್ಟ್ರನ ಮಕ್ಕಳೂ ಒಟ್ಟಾಗಿ ಸೇರಿ ನಿನ್ನೊಡನೆ ಸುಖ-ಸಂತೋಷಗಳಿಂದ ಲೋಕದಲ್ಲಿ ವಿಹರಿಸುತ್ತಿರುವರೇ? ಎಲ್ಲರಿಗೂ ಸ್ವಾಮಿಯಾದ ನೀನು ಕೌರವ-ಪಾಂಡವರಲ್ಲಿ ಶಾಂತಿಸಂಧಾನವನ್ನೇರ್ಪಡಿಸಿದ ನಂತರ ಆ ರಾಜರೆಲ್ಲರೂ ತಮ್ಮ-ತಮ್ಮ ರಾಜ್ಯಗಳಲ್ಲಿ ಸುಖದಿಂದಿರುವರೇ? ಕೃಷ್ಣ! ನೀನು ಕೌರವ-ಪಾಂಡವರಲ್ಲಿ ಶಾಂತಿಸಂಧಾನವನ್ನು ಏರ್ಪಡಿಸುವೆಯೆಂಬ ಸಂಪೂರ್ಣವಾದ ಸದ್ಭಾವನೆಯು ನನಗಿದ್ದಿತು. ಏಕೆಂದರೆ: ಭಾರತರ (ಪಾಂಡವ-ಕೌರವರ) ವಿಷಯದಲ್ಲಿ ನಿನಗೆ ಪರಿಪೂರ್ಣವಾದ ಕೃಪೆಯಿದೆ. ಆ ನಿನ್ನ ಸಂಧಿಯ ಪ್ರಯತ್ನವು ಫಲಿಸಿತೇ?”

ಶ್ರೀಕೃಷ್ಣನು ಹೇಳುತ್ತಾನೆ:

“ಮಹಾಮುನಿಯೇ! ನಾನು ಮೊದಲು ಕೌರವರ ಬಳಿಗೆ ಹೋಗಿ ಶಾಂತಿಸಂಧಾನವನ್ನೇರ್ಪಡಿಸಲು ಬಹಳವಾಗಿಯೇ ಪ್ರಯತ್ನಿಸಿದೆನು. ಆದರೆ ಅವರನ್ನು ಯಾವುದೇ ವಿಧಾನದಿಂದಲೂ ಸಂಧಿಗೆ ಒಪ್ಪಿಸಲು ಸಾಧ್ಯವಾಗಲಿಲ್ಲ. ಯಾವಾಗ ಅವರು ಪಾಂಡವರೊಡನೆ ಸಮತಾಭಾವದಿಂದ ಶಾಂತಿಯನ್ನು ಮಾಡಿಕೊಳ್ಳಲು ಒಪ್ಪಲಿಲ್ಲವೋ–ಆಗ ಯುದ್ಧವು ಅನಿವಾರ್ಯವಾಯಿತು. ಪುತ್ರ-ಮಿತ್ರ-ಬಂಧುಗಳ ಸಮೇತರಾಗಿ ಅವರೆಲ್ಲರೂ ಯುದ್ಧದಲ್ಲಿ ನಿಧನಹೊಂದಿದರು.

ನ ದಿಷ್ಟಮಪ್ಯತಿಕ್ರಾನ್ತುಂ ಶಕ್ಯಂ ಬುದ್ಧ್ಯಾ ಬಲೇನ ವಾ ।।೧೬।।

ವಿಧಿನಿಯಮವನ್ನು ಅತಿಕ್ರಮಿಸಿ ನಡೆಯಲು ಬುದ್ಧಿಯಿಂದಾಗಲೀ ಬಲದಿಂದಾಗಲೀ ಸಾಧ್ಯವಿಲ್ಲ. ಕೌರವರು ನನ್ನ, ಭೀಷ್ಮನ ಮತ್ತು ವಿದುರನ ಬುದ್ಧಿವಾದಗಳನ್ನು ತಿರಸ್ಕರಿಸಿದರೆಂಬುದು ನಿನಗೂ ಚೆನ್ನಾಗಿ ತಿಳಿದೇ ಇದೆ.

ಅನಂತರ ಅವರೆಲ್ಲರೂ ಪರಸ್ಪರವಾಗಿ ಹೊಡೆದಾಡಿ ಯಮನ ಲೋಕಕ್ಕೆ ಹೊರಟುಹೋದರು. ಮಿತ್ರರನ್ನೂ ಪುತ್ರರನ್ನೂ ಕಳೆದುಕೊಂಡು ಐವರು ಪಾಂಡವರು ಮಾತ್ರವೇ ಈಗ ಉಳಿದುಕೊಂಡಿದ್ದಾರೆ. ಧೃತರಾಷ್ಟ್ರನ ಎಲ್ಲ ಮಕ್ಕಳೂ ಪುತ್ರರ ಮತ್ತು ಬಂಧುಗಳ ಸಹಿತರಾಗಿ ಮರಣಹೊಂದಿದರು.”

ಶ್ರೀಕೃಷ್ಣನು ಹೀಗೆ ಹೇಳುತ್ತಿದ್ದಂತೆಯೇ ಉತ್ತಂಕನು ಕೋಪಾವಿಷ್ಟನಾದನು. ಕೋಪದಿಂದಾಗಿ ಅವನ ಕಣ್ಣುಗಳು ಅರಳಿದವು. ಕಣ್ಣುಗಳನ್ನು ಅರಳಿಸಿಕೊಂಡು ಶ್ರೀಕೃಷ್ಣನಿಗೆ ಹೇಳಿದನು:

ಯಸ್ಮಾಚ್ಛಕ್ತೇನ ತೇ ಕೃಷ್ಣ ನ ತ್ರಾತಾಃ ಕುರುಪುಙ್ಗವಾಃ ।
ಸಮ್ಬನ್ಧಿನಃ ಪ್ರಿಯಾಸ್ತಸ್ಮಾಚ್ಛಪ್ಸ್ಯೇಽಹಂ ತ್ವಾಮಸಂಶಯಮ್॥

“ಕೃಷ್ಣ! ಶಕ್ತನಾಗಿದ್ದರೂ ನೀನು ಸಂಬಂಧಿಗಳೂ ಮತ್ತು ಪ್ರಿಯರೂ ಆಗಿದ್ದ ಕೌರವಶ್ರೇಷ್ಠರನ್ನು ರಕ್ಷಿಸಲಿಲ್ಲ. ಆದುದರಿಂದ ನಿನ್ನನ್ನೀಗ ಶಪಿಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.

ನ ಚ ತೇ ಪ್ರಸಭಂ ಯಸ್ಮಾತ್ತೇ ನಿಗೃಹ್ಯ ನಿವಾರಿತಾಃ ।
ತಸ್ಮಾನ್ಮನ್ಯುಪರೀತಸ್ತ್ವಾಂ ಶಪ್ಸ್ಯಾಮಿ ಮಧುಸೂದನ ॥೨೧॥

ಮಧುಸೂದನನೇ! ಬಲಾತ್ಕಾರದಿಂದಾದರೂ ನೀನು ಅವರನ್ನು ತಡೆಯಬಹುದಾಗಿದ್ದಿತು. ವಿನಾಶದಿಂದ ಪಾರುಮಾಡಬಹುದಾಗಿದ್ದಿತು. ಆದರೆ ನೀನು ಹಾಗೆ ಮಾಡಲಿಲ್ಲ. ಇದರಿಂದ ಕುಪಿತನಾಗಿರುವ ನಾನು ನಿನ್ನನ್ನು ಶಪಿಸುತ್ತೇನೆ.

ತ್ವಯಾ ಶಕ್ತೇನ ಹಿ ಸತಾ ಮಿಥ್ಯಾಚಾರೇಣ ಮಾಧವ ।
ತೇ ಪರೀತಾಃ ಕುರುಶ್ರೇಷ್ಠಾ ನಶ್ಯಂತಃ ಸ್ಮ ಹ್ಯುಪೇಕ್ಷಿತಾಃ ॥೨೨॥

ಮಾಧವ! ನೀನು ಆ ಯುದ್ಧವನ್ನು ತಡೆಯಲು ಸಮರ್ಥನಾಗಿದ್ದೆ. ಕ್ರೋಧಪರೀತರಾಗಿದ್ದ ಕುರುಶ್ರೇಷ್ಠರು ಪರಸ್ಪರವಾಗಿ ಯುದ್ಧಮಾಡಿ ವಿನಾಶಹೊಂದುತ್ತಿದ್ದರೂ ಕಪಟಾಚರಣೆಯಿಂದ ನೀನು ಅವರೆಲ್ಲರನ್ನೂ ಉಪೇಕ್ಷಿಸಿದೆ.”

ವಾಸುದೇವನು ಹೇಳುತ್ತಾನೆ:

ಶೃಣು ಮೇ ವಿಸ್ತರೇಣೇದಂ ಯದ್ವಕ್ಷ್ಯೇ ಭೃಗುನಂದನ ।
ಗೃಹಾಣಾನುನಯಂ ಚಾಪಿ ತಪಸ್ವೀ ಹ್ಯಸಿ ಭಾರ್ಗವ ॥೨೩॥

“ಭಾರ್ಗವನೇ! ನೀನು ತಪಸ್ವಿಯಾಗಿರುವೆ. ಕೋಪಗೊಳ್ಳಬೇಡ. ನಾನು ಹೇಳುವ ವಿಷಯವನ್ನು ಸಮಗ್ರವಾಗಿ ಸಾವಧಾನಚಿತ್ತನಾಗಿ ಕೇಳು. ನನ್ನ ಪ್ರಾರ್ಥನೆಯನ್ನು ಅಂಗೀಕರಿಸು.

ಶ್ರುತ್ವಾ ಚ ಮೇ ತದಧ್ಯಾತ್ಮಂ ಮುಂಚೇಥಾಃ ಶಾಪಮದ್ಯ ವೈ ।
ನ ಚ ಮಾಂ ತಪಸಾಲ್ಪೇನ ಶಕ್ತೋಽಭಿಭವಿತುಂ ಪುಮಾನ್ ।
ನ ಚ ತೇ ತಪಸೋ ನಾಶಮಿಚ್ಛಾಮಿ ತಪತಾಂ ವರ ॥೨೪॥

ನನ್ನಿಂದ ಅಧ್ಯಾತ್ಮತತ್ತ್ವವನ್ನು ಕೇಳಿದನಂತರ ನೀನು ನನಗೆ ಶಾಪವನ್ನು ಕೊಡಬಹುದಾಗಿದೆ. ಯಾವ ಮನುಷ್ಯನೇ ಆಗಲೀ ಅಲ್ಪವಾದ ತಪಸ್ಸಿನಿಂದ ನನ್ನನ್ನು ತಿರಸ್ಕರಿಸಲಾರನು. (ಶಪಿಸಲಾರನು.) ತಪಸ್ವಿಗಳಲ್ಲಿ ಶ್ರೇಷ್ಠನಾದವನೇ! ನಿನ್ನ ತಪಸ್ಸು ವ್ಯರ್ಥವಾಗಿ ನಾಶವಾಗುವುದನ್ನು ನಾನು ಬಯಸುವುದಿಲ್ಲ.

ತಪಸ್ತೇ ಸುಮಹದ್ದೀಪ್ತಂ ಗುರವಶ್ಚಾಪಿ ತೋಷಿತಾಃ ।
ಕೌಮಾರಂ ಬ್ರಹ್ಮಚರ್ಯಂ ತೇ ಜಾನಾಮಿ ದ್ವಿಜಸತ್ತಮ ॥೨೫॥

ದುಃಖಾರ್ಜಿತಸ್ಯ ತಪಸಸ್ತಸ್ಮಾನ್ನೇಚ್ಛಾಮಿ ತೇ ವ್ಯಯಮ್ ॥೨೬॥

ನಿನ್ನ ತಪಸ್ಸು ಅತ್ಯಂತತೇಜೋವಿಶಿಷ್ಟವಾಗಿದೆ. ನೀನು ಗುರುಜನರನ್ನು ಸೇವಿಸಿ ಅವರನ್ನು ತೃಪ್ತಿಗೊಳಿಸಿರುವೆ. ನೀನು ಬಾಲ್ಯಾವಸ್ಥೆಯಿಂದಲೇ ಬ್ರಹ್ಮಚರ್ಯವನ್ನು ಪರಿಪಾಲಿಸಿರುವೆ. ಈ ಎಲ್ಲ ವಿಷಯಗಳನ್ನೂ ನಾನು ತಿಳಿದಿರುವೆನು. ಈ ಕಾರಣದಿಂದಲೇ ಬಹಳ ಕಷ್ಟದಿಂದ ಸಂಪಾದಿಸಿರುವ ನಿನ್ನ ತಪಸ್ಸಿನ ಫಲವು ನಾಶವಾಗುವುದನ್ನು ನಾನು ಇಷ್ಟಪಡುವುದಿಲ್ಲ."

ಐಐನೆಯ ಅಧ್ಯಾಯವು ಮುಗಿಯಿತು.

ಐಳನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಪೂಜ್ಯನಾದ ಶ್ರೀಕೃಷ್ಣನು ಉತ್ತಂಕನಿಗೆ ಅಧ್ಯಾತ್ಮತತ್ತ್ವವನ್ನು ಹೇಳಿದುದು: ದುರ್ಯೋಧನನ ಅಪರಾಧದಿಂದಲೇ ಕೌರವರ ವಿನಾಶವಾಯಿತೆಂಬುದನ್ನು ಸ್ಪಷ್ಟಪಡಿಸಿದುದು.

ಉತ್ತಂಕನು ಹೇಳುತ್ತಾನೆ:

ಬ್ರೂಹಿ ಕೇಶವ ತತ್ತ್ವೇನ ತ್ವಮಧ್ಯಾತ್ಮಮನಿನ್ದಿತಮ್ ।
ಶ್ರುತ್ವಾ ಶ್ರೇಯೋಽಭಿಧಾಸ್ಯಾಮಿ ಶಾಪಂ ವಾ ತೇ ಜನಾರ್ದನ ॥೧॥

"ಕೇಶವ! ಜನಾರ್ದನ! ನೀನು ಯಥಾವತ್ತಾಗಿ ನಿರ್ದುಷ್ಟವಾದ ಅಧ್ಯಾತ್ಮತತ್ತ್ವವನ್ನು ಹೇಳು. ಅದನ್ನು ಕೇಳಿದನಂತರ ನಿನ್ನ ಕಲ್ಯಾಣಕ್ಕಾಗಿ ಆಶೀರ್ವಾದವನ್ನಾದರೂ ಮಾಡುತ್ತೇನೆ; ಶಾಪವನ್ನಾದರೂ ಕೊಡುತ್ತೇನೆ."

ವಾಸುದೇವನು ಹೇಳುತ್ತಾನೆ:

ತಮೋ ರಜಶ್ಚ ಸತ್ತ್ವಂ ಚ ವಿದ್ಧಿ ಭಾವಾನ್ಮದಾಶ್ರಯಾನ್ ।
ತಥಾ ರುದ್ರಾನ್ವಸೂನ್ಚಾಪಿ ವಿದ್ಧಿ ಮತ್ಪ್ರಭವಾನ್ದ್ವಿಜ ॥೨॥

"ವಿಪ್ರರ್ಷಿಯೇ! ತಮೋಗುಣ, ರಜೋಗುಣ ಮತ್ತು ಸತ್ತ್ವಗುಣಗಳು ನನ್ನನ್ನೇ ಆಶ್ರಯಿಸಿರುವ ನನ್ನ ಭಾವಗಳೇ ಆಗಿವೆ. ಹಾಗೆಯೇ ರುದ್ರರೂ ಮತ್ತು ವಸುಗಳೂ ನನ್ನಿಂದಲೇ ಪ್ರಾದುರ್ಭವಿಸಿರುವರು.

ಮಯಿ ಸರ್ವಾಣಿ ಭೂತಾನಿ ಸರ್ವಭೂತೇಷು ಚಾಪ್ಯಹಮ್ ।
ಸ್ಥಿತ ಇತ್ಯಭಿಜಾನೀಹಿ ಮಾ ತೇಽಭೂದತ್ರ ಸಂಶಯಃ ॥೩॥

ಎಲ್ಲ ಪ್ರಾಣಿಗಳೂ ನನ್ನಲ್ಲಿಯೇ ಇವೆ. ಎಲ್ಲ ಪ್ರಾಣಿಗಳಲ್ಲಿಯೂ ನಾನೇ ಇರುವೆನು-ಈ ವಿಷಯವನ್ನು ನೀನು ಚೆನ್ನಾಗಿ ತಿಳಿದುಕೊ. ಈ ವಿಷಯದಲ್ಲಿ ನೀನು ಸಂಶಯಪಡುವ ಕಾರಣವಿಲ್ಲ.

ತಥಾ ದೈತ್ಯಗಣಾನ್ಸರ್ವಾನ್ಯಕ್ಷಗನ್ಧರ್ವರಾಕ್ಷಸಾನ್ ।
ನಾಗಾನಪ್ಸರಸಶ್ಚೈವ ವಿದ್ಧಿ ಮತ್ಪ್ರಭವಾನ್ದ್ವಿಜ ॥೪॥

ದ್ವಿಜಶ್ರೇಷ್ಠನೇ! ಹಾಗೆಯೇ ದೈತ್ಯಗಣಗಳು, ಯಕ್ಷರು, ಗಂಧರ್ವರು, ರಾಕ್ಷಸರು, ನಾಗಗಳು, ಅಪ್ಸರೆಯರು-ಇವರೆಲ್ಲರೂ ನನ್ನಿಂದಲೇ ಹುಟ್ಟಿರುವರೆಂಬುದನ್ನು ತಿಳಿ.

ಸದಸಚ್ಚೈವ ಯತ್ಪ್ರಾಹುರವ್ಯಕ್ತಂ ವ್ಯಕ್ತಮೇವ ಚ ।
ಅಕ್ಷರಂ ಚ ಕ್ಷರಂ ಚೈವ ಸರ್ವಮೇತನ್ಮದಾತ್ಮಕಮ್ ॥೫॥

ವಿದ್ವಾಂಸರು ಯಾವುದನ್ನು ಸತ್-ಅಸತ್ ಎಂಬುದಾಗಿಯೂ, ವ್ಯಕ್ತ-ಅವ್ಯಕ್ತ ಎಂಬುದಾಗಿಯೂ, ಕ್ಷರ-ಅಕ್ಷರ ಎಂಬುದಾಗಿಯೂ ಹೇಳುವರೋ–ಆ ಎಲ್ಲವೂ ನನ್ನ ಸ್ವರೂಪಗಳೇ ಆಗಿವೆ.

ಯೇ ಚಾಶ್ರಮೇಷು ವೈ ಧರ್ಮಾಶ್ಚತುರ್ಧಾ ವಿದಿತಾ ಮುನೇ ।
ವೈದಿಕಾನಿ ಚ ಸರ್ವಾಣಿ ವಿದ್ಧಿ ಸರ್ವಂ ಮದಾತ್ಮಕಮ್ ॥೬॥

ಮುನಿವರನೇ! ನಾಲ್ಕು ಆಶ್ರಮಗಳಲ್ಲಿ ಯಾವ ನಾಲ್ಕು ಪ್ರಕಾರವಾದ ಪ್ರಸಿದ್ಧವಾದ ಧರ್ಮಗಳಿವೆಯೋ ಮತ್ತು ಯಾವ ವೇದೋಕ್ತಕರ್ಮಗಳಿವೆಯೋ-ಅವೆಲ್ಲವೂ ನನ್ನ ಸ್ವರೂಪಗಳೆಂದು ತಿಳಿ.

ಅಸಚ್ಚ ಸದಸಚ್ಚೈವ ಯದ್ವಿಶ್ವಂ ಸದಸತ್ಪರಮ್ ।
ಮತ್ತಃ ಪರತರಂ ನಾಸ್ತಿ ದೇವದೇವಾತ್ಸನಾತನಾತ್ ॥೭॥

ಅಸತ್ತು (ಅವ್ಯಕ್ತ), ಸದಸತ್ತು (ವ್ಯಕ್ತಾವ್ಯಕ್ತ), ಇದಕ್ಕಿಂತಲೂ (ವ್ಯಕ್ತಾವ್ಯಕ್ತಕ್ಕಿಂತಲೂ) ಆಚೆ ಇರುವ ಜಗತ್ತು–ಇವೆಲ್ಲವೂ ದೇವದೇವನಾದ, ಸನಾತನನಾದ ನನ್ನಿಂದ ಬೇರೆ ಇರುವುದಿಲ್ಲ. (ಅಸತ್ತು ಮತ್ತು

ಸದಸದಾತ್ಮಕವಾದ ಯಾವ ವಿಶ್ವವುಂಟೋ-ಅದು ಯಾವುದೂ ನನ್ನಿಂದ ಬೇರೆಯಲ್ಲ.)

ಓಂಕಾರಪ್ರಮುಖಾನ್ವೇದಾನ್ವಿದ್ಧಿ ಮಾಂ ತ್ವಂ ಭೃಗೂದ್ವಹ।
ಯೂಪಂ ಸೋಮಂ ಚರುಂ ಹೋಮಂ
ತ್ರಿದಶಾಪ್ಯಾಯನಂ ಮಖೇ ॥೮॥

ಹೋತಾರಮಪಿ ಹವ್ಯಂ ಚ ವಿದ್ಧಿ ಮಾಂ ಭೃಗುನನ್ದನ।
ಅಧ್ವರ್ಯುಃ ಕಲ್ಪಕಶ್ಚಾಪಿ ಹವಿಃ ಪರಮಸಂಸ್ಕೃತಮ್ ॥೯॥

ಭೃಗುಶ್ರೇಷ್ಠನೇ! ಓಂಕಾರದಿಂದ ಪ್ರಾರಂಭವಾಗುವ ನಾಲ್ಕು ವೇದಗಳೂ ನಾನೆಂದು ತಿಳಿ. ಯಜ್ಞಗಳಲ್ಲಿರುವ ಯೂಪ, ಸೋಮ, ಚರು, ದೇವತೆಗಳಿಗೆ ತೃಪ್ತಿಯನ್ನುಂಟುಮಾಡುವ ಹೋಮ, ಹೋತೃ, ಹವನಸಾಮಗ್ರಿಗಳು, ಅಧ್ವರ್ಯು, ನಿರ್ಮಾಪಕ ಮತ್ತು ಶ್ರೇಷ್ಠವಾದ ರೀತಿಯಲ್ಲಿ ಸಂಸ್ಕೃತವಾದ ಹವಿಸ್ಸು–ಇವೆಲ್ಲವೂ ನನ್ನ ಸ್ವರೂಪಗಳೇ ಆಗಿವೆ.

ಉದ್ಗಾತಾ ಚಾಪಿ ಮಾಂ ಸ್ತೌತಿ ಗೀತಘೋಷೈರ್ಮಹಾಧ್ವರೇ।
ಪ್ರಾಯಶ್ಚಿತ್ತೇಷು ಮಾಂ ಬ್ರಹ್ಮಞ್ಶಾನ್ತಿಮಙ್ಗಲವಾಚಕಾಃ ॥೧೦॥

ಸ್ತುವನ್ತಿ ವಿಶ್ವಕರ್ಮಾಣಂ ಸತತಂ ದ್ವಿಜಸತ್ತಮ।
ಮಮ ವಿದ್ಧಿ ಸುತಂ ಧರ್ಮಮಗ್ರಜಂ ದ್ವಿಜಸತ್ತಮ।
ಮಾನಸಂ ದಯಿತಂ ವಿಪ್ರ ಸರ್ವಭೂತದಯಾತ್ಮಕಮ್ ॥೧೧॥

ದೊಡ್ಡ-ದೊಡ್ಡ ಯಜ್ಞಗಳಲ್ಲಿ ಉದ್ಗಾತೃವು ಉಚ್ಚಸ್ವರದಲ್ಲಿ ಸಾಮವನ್ನು ಗಾನಮಾಡುತ್ತಾ ನನ್ನನ್ನೇ ಸ್ತೋತ್ರಮಾಡುತ್ತಾನೆ. ದ್ವಿಜಶ್ರೇಷ್ಠನೇ! ಪ್ರಾಯಶ್ಚಿತ್ತಕರ್ಮಗಳಲ್ಲಿ ಶಾಂತಿಸೂಕ್ತಗಳನ್ನೂ ಮಂಗಳಸೂಕ್ತಗಳನ್ನೂ ಹೇಳುವ ಬ್ರಾಹ್ಮಣರು ವಿಶ್ವಕರ್ಮನಾದ ನನ್ನನ್ನೇ ಸ್ತೋತ್ರಮಾಡುತ್ತಾರೆ. ಸರ್ವಪ್ರಾಣಿಗಳ ವಿಷಯದಲ್ಲಿಯೂ ದಯಾಭಾವವನ್ನು ಹೊಂದಿರುವ ಧರ್ಮನು ನನ್ನ ಮನಃಸಂಕಲ್ಪದಿಂದ ಹುಟ್ಟಿದ ಪರಮಪ್ರಿಯನಾದ ಹಿರಿಯ ಮಗನೆಂದು ತಿಳಿ.

ತತ್ರಾಹಂ ವರ್ತಮಾನೈಶ್ಚ ನಿವೃತ್ತೈಶ್ಚೈವ ಮಾನವೈಃ ।
ಬಹ್ವೀಃ ಸಂಸರಮಾಣೋ ವೈ ಯೋನೀರ್ವರ್ತಾಮಿ ಸತ್ತಮ ॥೧೨॥

ಧರ್ಮಸಂರಕ್ಷಣಾರ್ಥಾಯ ಧರ್ಮಸಂಸ್ಥಾಪನಾಯ ಚ ।
ತೈಸ್ತೈರ್ವೇಷೈಶ್ಚ ರೂಪೈಶ್ಚ ತ್ರಿಷು ಲೋಕೇಷು ಭಾರ್ಗವ ॥೧೩॥

ಭಾರ್ಗವನೇ! ಯಾರು ಈ ಪ್ರವೃತ್ತಿಧರ್ಮದಲ್ಲಿ ತೊಡಗಿರುವರೋ ಮತ್ತು ಯಾರು ನಿವೃತ್ತಿಧರ್ಮದಲ್ಲಿರುವರೋ–ಅವರೆಲ್ಲರೊಡನೆಯೂ ನಾನಿರುತ್ತೇನೆ. ಸತ್ಪುರುಷರಲ್ಲಿ ಶ್ರೇಷ್ಠನಾದವನೇ! ನಾನು ಧರ್ಮದ ರಕ್ಷಣೆಗಾಗಿ ಮತ್ತು ಧರ್ಮದ ಸಂಸ್ಥಾಪನೆಗಾಗಿ ಮೂರು ಲೋಕಗಳಲ್ಲಿಯೂ ಬಹುವಿಧವಾದ ಯೋನಿಗಳಲ್ಲಿ ಅವತರಿಸಿ ಆಯಾ ಯೋನಿಗಳಿಗೆ ಅನುರೂಪವಾದ ರೂಪಗಳಿಂದಲೂ, ವೇಷಗಳಿಂದಲೂ, ವ್ಯವಹಾರಗಳಿಂದಲೂ ಧರ್ಮದ ರಕ್ಷಣೆಯನ್ನೂ ಮತ್ತು ಸಂಸ್ಥಾಪನೆಯನ್ನೂ ಮಾಡುತ್ತೇನೆ.

ಅಹಂ ವಿಷ್ಣುರಹಂ ಬ್ರಹ್ಮಾ ಶಕ್ರೋಽಥ ಪ್ರಭವಾಪ್ಯಯಃ ।
ಭೂತಗ್ರಾಮಸ್ಯ ಸರ್ವಸ್ಯ ಸ್ರಷ್ಟಾ ಸಂಹಾರ ಏವ ಚ ॥೧೪॥

ನಾನೇ ವಿಷ್ಣುವು, ನಾನೇ ಬ್ರಹ್ಮನು, ನಾನೇ ಇಂದ್ರನೂ ಆಗಿದ್ದೇನೆ. ಎಲ್ಲ ಪ್ರಾಣಿಗಳ ಉತ್ಪತ್ತಿಗೂ ಮತ್ತು ವಿನಾಶಕ್ಕೂ ನಾನೇ ಕಾರಣನಾಗಿದ್ದೇನೆ. ಸಮಸ್ತಪ್ರಾಣಿಸಮುದಾಯದ ಸೃಷ್ಟಿ-ಸಂಹಾರಗಳೂ ನನ್ನ ಮೂಲಕವಾಗಿಯೇ ನಡೆಯುತ್ತವೆ.

ಅಧರ್ಮೇ ವರ್ತಮಾನಾನಾಂ ಸರ್ವೇಷಾಮಹಮಚ್ಯುತಃ ।
ಧರ್ಮಸ್ಯ ಸೇತುಂ ಬಧ್ನಾಮಿ ಚಲಿತೇ ಚಲಿತೇ ಯುಗೇ ॥೧೫॥

ತಾಸ್ತಾಃ ಯೋನೀಃ ಪ್ರವಿಶ್ಯಾಹಂ ಪ್ರಜಾನಾಂ ಹಿತಕಾಮ್ಯಯಾ ॥

ಅಧರ್ಮಮಾರ್ಗದಲ್ಲಿರುವ ಎಲ್ಲ ಮನುಷ್ಯರನ್ನೂ ಶಿಕ್ಷಿಸುವವನೂ ಮತ್ತು ಧರ್ಮದ ಮರ್ಯಾದೆಯಿಂದ ಯಾವಾಗಲೂ ಚ್ಯುತನಾಗದೆ ಇರುವವನೂ ನಾನೇ ಆಗಿದ್ದೇನೆ. ಯುಗದ ಪರಿವರ್ತನವು ಆದಾಗಲೆಲ್ಲಾ ನಾನು ಪ್ರಜೆಗಳ ಹಿತದ ಬಯಕೆಯಿಂದ ಭಿನ್ನ-ಭಿನ್ನವಾದ ಯೋನಿಗಳಲ್ಲಿ ಪ್ರವೇಶಿಸಿ ಆಯಾ ಯೋನಿಗಳಿಗೆ ಅನುರೂಪವಾದ ಶರೀರವನ್ನು ಧಾರಣೆ

ಮಾಡಿಕೊಂಡು ಧರ್ಮದ ಸೇತುವೆಯನ್ನು ಕಟ್ಟುತ್ತೇನೆ. (ಧರ್ಮದ ಮರ್ಯಾದೆಯನ್ನು ಸ್ಥಾಪಿಸುತ್ತೇನೆ.)

ಯದಾ ತ್ವಹಂ ದೇವಯೋನೌ ವರ್ತಾಮಿ ಭೃಗುನನ್ದನ ।
ತದಾಹಂ ದೇವವತ್ಸರ್ವಮಾಚರಾಮಿ ನ ಸಂಶಯಃ ॥೧೭॥

ಭೃಗುನಂದನನೇ! ನಾನು ದೇವಯೋನಿಯಲ್ಲಿ ಅವತಾರಮಾಡಿದಾಗ ದೇವತೆಯಂತೆಯೇ ಸಮಸ್ತವಾದ ವ್ಯವಹಾರಗಳನ್ನೂ ನಡೆಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.

ಯದಾ ಗನ್ಧರ್ವಯೋನೌ ವಾ ವರ್ತಾಮಿ ಭೃಗುನನ್ದನ ।
ತದಾ ಗನ್ಧರ್ವವತ್ಸರ್ವಮಾಚರಾಮಿ ನ ಸಂಶಯಃ ॥೧೮॥

ಗಂಧರ್ವಯೋನಿಯಲ್ಲಿ ಅವತರಿಸಿದಾಗ ಗಂಧರ್ವನಂತೆಯೇ ಸಮಸ್ತವಾದ ವ್ಯವಹಾರಗಳನ್ನೂ ನಡೆಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.

ನಾಗಯೋನೌ ಯದಾ ಚೈವ ತದಾ ವರ್ತಾಮಿ ನಾಗವತ್ ।
ಯಕ್ಷರಾಕ್ಷಸಯೋರ್ನ್ಯೋಸ್ತು ಯಥಾವದ್ವಿಚರಾಮ್ಯಹಮ್ ॥೧೯॥

ನಾಗಯೋನಿಯಲ್ಲಿ ಹುಟ್ಟಿದಾಗ ನಾಗನಂತೆಯೇ ವ್ಯವಹರಿಸುತ್ತೇನೆ. ಯಕ್ಷ-ರಾಕ್ಷಸರ ಯೋನಿಗಳಲ್ಲಿ ಹುಟ್ಟಿದಾಗ ಯಕ್ಷ-ರಾಕ್ಷಸರಂತೆಯೇ ವ್ಯವಹರಿಸುತ್ತೇನೆ.

ಮಾನುಷ್ಯೇ ವರ್ತಮಾನೇ ತು ಕೃಪಣಂ ಯಾಚಿತಾ ಮಯಾ ।
ನ ಚ ತೇ ಜಾತಸಮ್ಮೋಹಾ ವಚೋಽಗೃಹ್ಣನ್ತ ಮೇ ಹಿತಮ್ ॥೨೦॥

ನಾನೀಗ ಮನುಷ್ಯಯೋನಿಯಲ್ಲಿ ಅವತರಿಸಿದ್ದೇನೆ. ಈ ಕಾರಣ ದಿಂದಲೇ ನಾನು ಮನುಷ್ಯಸಹಜವಾದ ದೀನತೆಯಿಂದಲೇ ಪಾಂಡವರೊಡನೆ ಸಂಧಿಮಾಡಿಕೊಳ್ಳುವಂತೆ ಕೌರವರನ್ನು ಪ್ರಾರ್ಥಿಸಿದೆನು. ಆದರೆ ಅವರು ಮೋಹಗ್ರಸ್ತರಾಗಿದ್ದ ಕಾರಣ ನನ್ನ ಹಿತಕರವಾದ ಸಲಹೆಯನ್ನು ಅಂಗೀಕರಿಸಲಿಲ್ಲ.

ಭಯಂ ಚ ಮಹದುದ್ದಿಶ್ಯ ತ್ರಾಸಿತಾಃ ಕುರವೋ ಮಯಾ ।
ಕ್ರುದ್ಧೇನ ಭೂತ್ವಾ ತು ಪುನರ್ಯಥಾವದನುದರ್ಶಿತಾಃ ॥೨೧॥

ತೇಽಧರ್ಮೇಣೇಹ ಸಂಯುಕ್ತಾಃ ಪರೀತಾಃ ಕಾಲಧರ್ಮಣಾ।
ಧರ್ಮೇಣ ನಿಹತಾ ಯುದ್ಧೇ ಗತಾಃ ಸ್ವರ್ಗಂ ನ ಸಂಶಯಃ ॥೨೨॥

ಯುದ್ಧದ ಪರಿಣಾಮವಾಗಿ ಮುಂದಾಗುವ ಮಹಾಭಯವನ್ನು ನಿರೂಪಿಸಿ ಕೌರವರನ್ನು ಭಯಪಡಿಸಿದೆನು. ಅನಂತರ ನಾನು ಬಹಳ ಕೋಪಗೊಂಡು ಯಥಾವತ್ತಾಗಿ ಯುದ್ಧದ ದುಷ್ಪರಿಣಾಮಗಳನ್ನೂ ನಿದರ್ಶನಪೂರ್ವಕವಾಗಿ ವಿವರಿಸಿ ಹೇಳಿದೆನು. ಆದರೆ ಅವರು ಅಧರ್ಮಿಗಳಾಗಿದ್ದುದರಿಂದಲೂ ಕಾಲನಿಂದ ಗ್ರಸ್ತರಾಗಿದ್ದುದರಿಂದಲೂ ನನ್ನ ಹಿತವಚನಗಳನ್ನು ಕೇಳಲಿಲ್ಲ. ಯುದ್ಧಧರ್ಮಾನುಸಾರವಾಗಿ ಅವರೆಲ್ಲರೂ ರಣಾಂಗಣದಲ್ಲಿ ಕೊಲ್ಲಲ್ಪಟ್ಟು ಸ್ವರ್ಗವನ್ನು ಸೇರಿದರು. ಇದರಲ್ಲಿ ಸಂಶಯವೇ ಇಲ್ಲ.

ಲೋಕೇಷು ಪಾಣ್ಡವಾಶ್ಚೈವ ಗತಾಃ ಖ್ಯಾತಿಂ ದ್ವಿಜೋತ್ತಮ।
ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೩॥

ದ್ವಿಜಶ್ರೇಷ್ಠನೇ! ಪಾಂಡವರು ತಮ್ಮ ಧರ್ಮಾಚರಣೆಯಿಂದ ಮೂರು ಲೋಕಗಳಲ್ಲಿಯೂ ವಿಖ್ಯಾತರಾದರು. ನೀನು ಕೇಳಿದ ಪ್ರಶ್ನೆಗೆ ಅನುಸಾರವಾಗಿ ಎಲ್ಲ ವಿಷಯಗಳನ್ನೂ ಹೇಳಿರುತ್ತೇನೆ."

ಐವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು.

೫೫ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನು ಉತ್ತಂಕನಿಗೆ ವಿಶ್ವರೂಪವನ್ನು ತೋರಿಸಿದುದು: ಮರುಭೂಮಿಯಲ್ಲಿ ನೀರು ಸಿಕ್ಕುವಂತೆ ವರನೀಡಿದುದು

ಉತ್ತಂಕನು ಹೇಳುತ್ತಾನೆ:

ಅಭಿಜಾನಾಮಿ ಜಗತಃ ಕರ್ತಾರಂ ತ್ವಾಂ ಜನಾರ್ದನ।
ನೂನಂ ಭವತ್ಪ್ರಸಾದೋಽಯಮಿತಿ ಮೇ ನಾಸ್ತಿ ಸಂಶಯಃ ॥೧॥

"ಜನಾರ್ದನನೇ! ನೀನೇ ಈ ಜಗತ್ತಿಗೆ ಕರ್ತೃವೆಂಬುದನ್ನು ನಾನು ತಿಳಿದಿರುವೆನು. ಅಧ್ಯಾತ್ಮತತ್ತ್ವದ ಉಪದೇಶವು ನನಗೆ ಲಭಿಸಿದುದು ನಿಶ್ಚಯವಾಗಿಯೂ ನಿನ್ನ ಪರಮಾನುಗ್ರಹವೇ ಸರಿ. ಇದರಲ್ಲಿ ಸಂಶಯವೇ ಇಲ್ಲ.

ಅಚ್ಯುತನೇ! ನಿನ್ನ ಮೇಲಿನ ಭಕ್ತಿಭಾವದಿಂದ ಪೂರ್ಣವಾಗಿರುವ ನನ್ನ ಮನಸ್ಸು ಈಗ ಸುಪ್ರಸನ್ನವಾಗಿದೆ. ನಿನಗೆ ಶಾಪಕೊಡಲು ಈಗ ನನ್ನ ಮನಸ್ಸು ಬಯಸುತ್ತಿಲ್ಲ. ಜನಾರ್ದನನೇ! ನಿನ್ನ ಅನುಗ್ರಹವನ್ನು ಪಡೆಯುವ ಯೋಗ್ಯತೆಯೇನಾದರೂ ನನಗೆ ಅಲ್ಪಸ್ವಲ್ಪವಿದ್ದರೆ ನಿನ್ನ ಈಶ್ವರೀಯ ರೂಪವನ್ನು (ವಿಶ್ವರೂಪವನ್ನು) ನೋಡಲು ಅಪೇಕ್ಷಿಸುತ್ತೇನೆ. ದಯಮಾಡಿ ತೋರಿಸು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಉತ್ತಂಕನು ಹೀಗೆ ಪ್ರಾರ್ಥಿಸಲಾಗಿ, ಧೀಮಂತನಾದ ಉತ್ತಂಕನ ವಿಷಯದಲ್ಲಿ ಪ್ರೀತಾತ್ಮನಾದ ಶ್ರೀಕೃಷ್ಣನು–ಧನಂಜಯನು ಯಾವ ವಿಶ್ವರೂಪವನ್ನು ಸಂದರ್ಶಿಸಿದ್ದನೋ–ಅಂತಹ ಸನಾತನವಾದ ವೈಷ್ಣವ ವಿಶ್ವರೂಪವನ್ನೇ ಉತ್ತಂಕನಿಗೂ ತೋರಿಸಿದನು.

ಉತ್ತಂಕನು ಮಹಾಭುಜಗಳಿಂದ ಯುಕ್ತವಾದ, ಸಹಸ್ರಸೂರ್ಯರ ಪ್ರಕಾಶಕ್ಕೆ ಸಮಾನವಾದ ಪ್ರಕಾಶದಿಂದ ಕಂಗೊಳಿಸುತ್ತಿದ್ದ, ಯಜ್ಞೇಶ್ವರ ನಂತೆಯೇ ದೇದೀಪ್ಯಮಾನವಾಗಿದ್ದ ವಿಶ್ವರೂಪವನ್ನು ನೋಡಿದನು.

ಸಮಸ್ತವಾದ ಆಕಾಶವನ್ನೂ ಆವರಿಸಿಕೊಂಡು ನಿಂತಿದ್ದ, ಎಲ್ಲ ಕಡೆಗಳಲ್ಲಿಯೂ ಮುಖಗಳನ್ನು ಹೊಂದಿದ್ದ ವಿಷ್ಣುವಿನ ಪರಮಾದ್ಭುತವಾದ ಮತ್ತು ಪರಮೋತ್ಕೃಷ್ಟವಾದ ವೈಷ್ಣವರೂಪವನ್ನು ನೋಡಿ ಉತ್ತಂಕನು ಬಹಳವಾಗಿ ವಿಸ್ಮಯಗೊಂಡು ಭಕ್ತಿಪರವಶನಾಗಿ ಸ್ತೋತ್ರಮಾಡಿದನು:

ವಿಶ್ವಕರ್ಮನ್ನಮಸ್ತೇಽಸ್ತು ವಿಶ್ವಾತ್ಮನ್ವಿಶ್ವಸಮ್ಭವ ।
ಪದ್ಭ್ಯಾಂ ತೇ ಪೃಥಿವೀ ವ್ಯಾಪ್ತಾ ಶಿರಸಾ ಚಾವೃತಂ ನಭಃ ॥೭॥

"ವಿಶ್ವದ ಉತ್ಪತ್ತಿಗೆ ಸ್ಥಾನಭೂತವಾಗಿರುವವನೇ! ವಿಶ್ವವೇ ಆತ್ಮವಾಗಿರುವವನೇ! ವಿಶ್ವಕರ್ಮಸ್ವರೂಪನೇ! ನಿನಗೆ ನಮಸ್ಕರಿಸುತ್ತೇನೆ. ನಿನ್ನೆರಡು ಕಾಲುಗಳಿಂದ ಪೃಥ್ವಿಯೂ, ತಲೆಯಿಂದ ಆಕಾಶವೂ ವ್ಯಾಪಿಸಲ್ಪಟ್ಟಿದೆ.

ದ್ಯಾವಾಪೃಥಿವ್ಯೋರ್ಯನ್ಮಧ್ಯಂ ಜಠರೇಣ ತವಾವೃತಮ್ ।
ಭುಜಾಭ್ಯಾಮಾವೃತಾಶ್ಚಾಶಾಸ್ತ್ವಮಿದಂ ಸರ್ವಮಚ್ಯುತ ॥೮॥

ಆಕಾಶ ಮತ್ತು ಭೂಮಿಗಳ ಮಧ್ಯಭಾಗವೆಲ್ಲವೂ ನಿನ್ನ ಜಠರದಿಂದಲೇ ವ್ಯಾಪ್ತವಾಗಿದೆ. ನಿನ್ನೆರಡು ಭುಜಗಳಿಂದ ಎಲ್ಲ ದಿಕ್ಕುಗಳೂ ವ್ಯಾಪ್ತವಾಗಿವೆ. ಹೀಗೆ ನೀನು ಸಂಪೂರ್ಣವಾಗಿ ಈ ವಿಶ್ವವನ್ನು ಆವರಿಸಿರುವುದರಿಂದ ಈ ವಿಶ್ವವೆಲ್ಲವೂ ನೀನೇ ಆಗಿರುವೆ.

ಸಂಹರಸ್ವ ಪುನರ್ದೇವ ರೂಪಮಕ್ಷಯ್ಯಮುತ್ತಮಮ್ ।
ಪುನಸ್ತ್ವಾಂ ಸ್ವೇನ ರೂಪೇಣ ದ್ರಷ್ಟುಮಿಚ್ಛಾಮಿ ಶಾಶ್ವತಮ್ ॥೯॥

ದೇವದೇವನೇ! ಈ ನಿನ್ನ ಸರ್ವಶ್ರೇಷ್ಠವಾದ ಮತ್ತು ಅವಿನಾಶಿಯಾದ ಸ್ವರೂಪವನ್ನು ಉಪಸಂಹರಿಸಿಕೊ. ಸನಾತನನಾದ ನಿನ್ನನ್ನು ನಾನು ನಿನ್ನ ಹಿಂದಿನ ರೂಪದಿಂದಲೇ ನೋಡಲು ಬಯಸುತ್ತೇನೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹಾಗೆ ಪ್ರಾರ್ಥಿಸಿದ ಉತ್ತಂಕನಿಗೆ ಗೋವಿಂದನು ಪ್ರಸನ್ನಾತ್ಮನಾಗಿ ವರವನ್ನು ಕೇಳುವಂತೆ ಹೇಳಿದನು. ಅದಕ್ಕೆ ಉತ್ತರವಾಗಿ ಉತ್ತಂಕನು:

ಪರ್ಯಾಪ್ತ ಏಷ ಏವಾದ್ಯ ವರಸ್ತ್ವತ್ತೋ ಮಹಾದ್ಯುತೇ ।
ಯತ್ತೇ ರೂಪಮಿದಂ ಕೃಷ್ಣ ಪಶ್ಯಾಮಿ ಪುರುಷೋತ್ತಮ ॥೧೧॥

"ಮಹಾದ್ಯುತಿಯೇ! ಪುರುಷೋತ್ತಮನೇ! ಕೃಷ್ಣ! ನಾನು ನಿನ್ನ ಅನುಗ್ರಹದಿಂದ ನಿನ್ನ ಈ ದಿವ್ಯವಾದ ವಿಶ್ವರೂಪವನ್ನು ನೋಡುತ್ತಿರುವೆನಲ್ಲವೇ? ಈ ವರವೇ ನನಗೆ ಸಾಕು"–ಎಂದು ಹೇಳಿದನು. ಆ ಮಾತಿಗೆ ಪ್ರತಿಯಾಗಿ ಪುನಃ ಶ್ರೀಕೃಷ್ಣನು ಹೇಳಿದನು: "ನೀನು ಈ ವಿಷಯವಾಗಿ ಏನನ್ನೂ ವಿಚಾರಮಾಡಬೇಡ. ಈಗ ವರವನ್ನು ಕೇಳುವುದು ನಿನ್ನ ಅವಶ್ಯಕರ್ತವ್ಯವೇ ಆಗಿದೆ. ಏಕೆಂದರೆ: ನನ್ನ ಈ ವಿಶ್ವರೂಪದರ್ಶನವು ಅಮೋಘವಾದುದು."

ಉತ್ತಂಕನು ಹೇಳುತ್ತಾನೆ:

"ಪ್ರಭುವೇ! ನೀನು ಅವಶ್ಯವಾಗಿ ವರವನ್ನು ಕೇಳಲೇಬೇಕೆನ್ನುವುದಾದರೆ, ಅದು ಕರ್ತವ್ಯವೆಂದೇ ಭಾವಿಸುವೆಯಾದರೆ–ಬಯಸಿದ ಜಾಗದಲ್ಲಿ

ನೀರನ್ನು ಪಡೆಯಲು ನಾನು ಅಪೇಕ್ಷಿಸುತ್ತೇನೆ. ಮರುಭೂಮಿಯಲ್ಲಿ ನೀರು ಅತ್ಯಂತದುರ್ಲಭವಾಗಿದೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಉತ್ತಂಕನು ಹೀಗೆ ಹೇಳಿದನಂತರ ಶ್ರೀಕೃಷ್ಣನು ತನ್ನ ತೇಜೋಮಯವಾದ ವಿಶ್ವರೂಪವನ್ನು ಉಪಸಂಹರಿಸಿ ಉತ್ತಂಕನಿಗೆ ಹೇಳಿದನು: ‘ಏಷ್ಟವ್ಯೇ ಸತಿ ಚಿನ್ತ್ಯೋಽಹಂ’–‘ಮುನಿಯೇ! ನಿನಗೆ ಯಾವಾಗ ನೀರಿನ ಬಯಕೆಯುಂಟಾಗುವುದೋ–ಆಗ ನನ್ನನ್ನು ಸ್ಮರಿಸು’–ಎಂದು ಹೇಳಿ ದ್ವಾರಕೆಗೆ ಪ್ರಯಾಣಮಾಡಿದನು.

ಕೆಲವು ದಿವಸಗಳನಂತರ ಒಮ್ಮೆ ಪೂಜ್ಯನಾದ ಉತ್ತಂಕನು ಬಾಯಾರಿದವನಾಗಿ ನೀರಿನ ಬಯಕೆಯಿಂದ ಮರುಭೂಮಿಯ ಸುತ್ತಲೂ ನೀರಿಗಾಗಿ ಹುಡುಕಾಡುತ್ತಾ ಶ್ರೀಕೃಷ್ಣನನ್ನು ಸ್ಮರಿಸಿದನು. ಶ್ರೀಕೃಷ್ಣನನ್ನು ಸ್ಮರಿಸುತ್ತಲೇ ಧೀಮಂತನಾದ ಉತ್ತಂಕನು ದಿಗಂಬರನಾಗಿದ್ದ, ಕೆಸರಿನಿಂದ ವ್ಯಾಪ್ತನಾಗಿದ್ದ, ನಾಯಿಗಳಿಂದ ಪರಿವೃತನಾಗಿದ್ದ ಒಬ್ಬ ಮಾತಂಗನನ್ನು (ಚಾಂಡಾಲನನ್ನು) ನೋಡಿದನು. ಅವನು ನೋಡಲು ಬಹಳ ಭಯಂಕರನಾಗಿ ಕಾಣುತ್ತಿದ್ದನು. ಸೊಂಟಕ್ಕೆ ಕತ್ತಿಯನ್ನು ಬಿಗಿದಿದ್ದನು. ಧನುರ್ಬಾಣಗಳನ್ನು ಧರಿಸಿದ್ದನು. ಅವನು ನಿಂತಿದ್ದ ಜಾಗದಲ್ಲಿ ಒಂದು ಝರಿಯಿಂದ ಅಪಾರವಾದ ನೀರು ಹೊರಬರುತ್ತಿದ್ದುದನ್ನು ದ್ವಿಜಶ್ರೇಷ್ಠನಾದ ಉತ್ತಂಕನು ನೋಡಿದನು. ಉತ್ತಂಕನು ಶ್ರೀಕೃಷ್ಣನನ್ನು ಸ್ಮರಿಸುತ್ತಿದ್ದಂತೆಯೇ ಮಾತಂಗನು ನಗುತ್ತಿರುವನೋ ಎಂಬಂತೆ ಮುಖಭಾವವನ್ನು ಹೊಂದಿ ಉತ್ತಂಕನಿಗೆ ಹೇಳಿದನು:

ಏಹ್ಯುತ್ತಙ್ಕ ಪ್ರತೀಚ್ಛಸ್ವ ಮತ್ತೋ ವಾರಿ ಭೃಗೂದ್ವಹ ।
ಕೃಪಾ ಹಿ ಮೇ ಸುಮಹತೀ ತ್ವಾಂ ದೃಷ್ಟ್ವಾ ತೃಟ್ಸಮಾಶ್ರಿತಮ್ ॥

“ಭೃಗುಶ್ರೇಷ್ಠನೇ! ಉತ್ತಂಕನೇ! ಇತ್ತ ಬಾ. ನಾನು ಕೊಡುವ ನೀರನ್ನು ಸ್ವೀಕರಿಸು. ಬಾಯಾರಿಕೆಯಿಂದ ಪೀಡಿತನಾಗಿರುವ ನಿನ್ನನ್ನು ನೋಡಿ ನನಗೆ ನಿನ್ನ ವಿಷಯದಲ್ಲಿ ಬಹಳವಾದ ಕನಿಕರವುಂಟಾಗಿದೆ.”

ಮಾತಂಗನು ಹೀಗೆ ಹೇಳಿದರೂ ಉತ್ತಂಕನು ಆ ನೀರನ್ನು ಪುರಸ್ಕರಿಸಲಿಲ್ಲ. ಸ್ಮರಿಸಿದೊಡನೆಯೇ ನೀರು ಸಿಕ್ಕುವಂತೆ ಮಾಡುವೆನೆಂದು

ವರವನ್ನು ಕೊಟ್ಟು ಶ್ರೀಕೃಷ್ಣನು ಈಗ ಮಾತಂಗನ ಮೂಲಕ ನೀರನ್ನು ಒದಗಿಸುತ್ತಿರುವುದಕ್ಕಾಗಿ ಧೀಮಂತನಾದ ಉತ್ತಂಕನು ಶ್ರೀಕೃಷ್ಣನನ್ನು ಕಠೋರವಾದ ಮಾತುಗಳಿಂದ ನಿಂದಿಸಿದನು. ಆದರೆ ಮಾತಂಗನು ಮಾತ್ರ ಮತ್ತೆ-ಮತ್ತೆ ನೀರನ್ನು ಕುಡಿಯುವಂತೆ ಉತ್ತಂಕನಿಗೆ ಹೇಳುತ್ತಲೇ ಇದ್ದನು. ಆದರೂ ಉತ್ತಂಕನು ನೀರನ್ನು ಕುಡಿಯಲಿಲ್ಲ. ಬಹಳವಾಗಿ ಕೋಪಗೊಂಡನು. ಅವನ ಮನಸ್ಸೂ ಕಲಕಿಹೋಗಿದ್ದಿತು. ಮಹಾತ್ಮನಾದ ಉತ್ತಂಕನು ನೀರನ್ನು ಕುಡಿಯಬಾರದೆಂಬ ನಿಶ್ಚಯದಿಂದ ಮಾತಂಗನ ಮಾತನ್ನು ತಿರಸ್ಕರಿಸಿದನು.

ಜನಮೇಜಯ! ಉತ್ತಂಕನು ಹಾಗೆ ತಿರಸ್ಕರಿಸಿದೊಡನೆಯೇ ನಾಯಿಗಳೊಡನೆ ಮಾತಂಗನೂ ಮಾಯವಾದನು. ಮಾತಂಗನು ಮಾಯವಾದುದನ್ನು ನೋಡಿ ಉತ್ತಂಕನಿಗೆ ನಾಚಿಕೆಯಾಯಿತು. ಶತ್ರುಘಾತಕನಾದ ಶ್ರೀಕೃಷ್ಣನೇ ಹೀಗೆ ತನಗೆ ವಂಚಿಸಿರಬಹುದೆಂದು ಅವನು ಭಾವಿಸಿದನು. ಬಳಿಕ ಅದೇ ಮಾರ್ಗದಿಂದಲೇ ಶಂಖ-ಚಕ್ರ-ಗದಾಧರನಾದ ಶ್ರೀಕೃಷ್ಣನು ಆಗಮಿಸಿದನು. ಶ್ರೀಕೃಷ್ಣನನ್ನು ನೋಡಿ ಉತ್ತಂಕನು ಹೇಳಿದನು:

ನ ಯುಕ್ತಂ ತಾದೃಶಂ ದಾತುಂ ತ್ವಯಾ ಪುರುಷಸತ್ತಮ ।
ಸಲಿಲಂ ವಿಪ್ರಮುಖ್ಯೇಭ್ಯೋ ಮಾತಙ್ಗಸ್ರೋತಸಾ ವಿಭೋ ॥೨೪॥

"ಪುರುಷೋತ್ತಮನೇ! ವಿಭುವೇ! ಚಾಂಡಾಲನಿಗೆ ಸಂಬಂಧಿಸಿದ ಚಿಲುಮೆಯಿಂದ ಬಂದ ಅಪವಿತ್ರವಾದ ನೀರನ್ನು ಬ್ರಾಹ್ಮಣಶ್ರೇಷ್ಠರಿಗೆ ಕೊಡಿಸುವುದು ಯುಕ್ತವಲ್ಲ."

ಉತ್ತಂಕನು ಹೀಗೆ ಹೇಳಲಾಗಿ ಮಹಾಬುದ್ಧಿಯಾದ ಜನಾರ್ದನನು ಮಧುರವಾದ ಮಾತುಗಳಿಂದ ಅವನನ್ನು ಸಂತೈಸುತ್ತಾ ಹೇಳಿದನು:

ಯಾದೃಶೇನೇಹ ರೂಪೇಣ ಯೋಗ್ಯಂ ದಾತುಂ ಧೃತೇನ ವೈ ।
ತಾದೃಶಂ ಖಲು ತೇ ದತ್ತಂ ಯಚ್ಚ ತ್ವಂ ನಾವಬುಧ್ಯಥಾಃ ॥೨೬॥

"ಮಹರ್ಷಿಯೇ! ಈ ಮರುಭೂಮಿಯಲ್ಲಿ ಯಾವ ರೂಪವನ್ನು ಧರಿಸಿ ನಿನಗೆ ನೀರನ್ನು ಕೊಡುವುದು ಉಚಿತವಾಗಿದ್ದಿತೋ–ಅದೇ ರೂಪವನ್ನು ಧರಿಸಿಯೇ ಅವನು (ಇಂದ್ರನು) ನಿನಗೆ ನೀರನ್ನು ಕುಡಿಯಲು

ಕೊಟ್ಟನು. ಆದರೆ ನೀನು ಈ ರಹಸ್ಯವನ್ನು ತಿಳಿದುಕೊಳ್ಳಲಿಲ್ಲ. ನಿನ್ನ ಸಲುವಾಗಿಯೇ ನಾನು ವಜ್ರಪಾಣಿಯಾದ ಪುರಂದರನನ್ನು ನಿನಗೆ ನೀರಿನ ರೂಪದಲ್ಲಿ ಅಮೃತವನ್ನು ಕೊಡುವಂತೆ ಪ್ರಾರ್ಥಿಸಿದ್ದೆನು. ಅದಕ್ಕುತ್ತರವಾಗಿ ಇಂದ್ರನು–'ಮನುಷ್ಯರಿಗೆ ಅಮೃತವನ್ನು ಕೊಡಬಾರದು. ಏಕೆಂದರೆ: ಅವರು ಅಮೃತವನ್ನು ಕುಡಿದು ಅಮರ್ತ್ಯರಾಗಿಬಿಡುತ್ತಾರೆ. ಆದುದರಿಂದ ಬೇರೆ ಯಾವುದಾದರೂ ವರವನ್ನು ಕೊಡು'–ಎಂದು ಇಂದ್ರನು ನನ್ನನ್ನು ಬಾರಿ-ಬಾರಿಗೂ ಒತ್ತಾಯಿಸಿದನು. ಆದರೆ ನಾನು ಮಾತ್ರ ಅಮೃತವನ್ನೇ ನಿನಗೆ ಕೊಡಬೇಕೆಂದು ಹಠಹಿಡಿದೆನು. ಆಗ ಇಂದ್ರನು ನನ್ನನ್ನು ಸವಿಮಾತುಗಳಿಂದ ಪ್ರಸನ್ನಗೊಳಿಸಿ ಹೀಗೆ ಹೇಳಿದನು:

"ಮಹಾಮತಿಯೇ! ಶ್ರೀಕೃಷ್ಣ! ಉತ್ತಂಕನಿಗೆ ಅಮೃತವನ್ನು ಕೊಡಲೇ ಬೇಕಾಗಿದ್ದರೆ ನಾನು ಮಾತಂಗನ ರೂಪವನ್ನು ಧರಿಸಿ ಮಹಾತ್ಮನಾದ ಭಾರ್ಗವನಿಗೆ ಅಮೃತವನ್ನು ಕೊಡುತ್ತೇನೆ. ಮಾತಂಗರೂಪಧರನಾದ ನನ್ನಿಂದ ಅವನು ಅಮೃತವನ್ನು ಈಗ ತೆಗೆದುಕೊಳ್ಳುವುದಾದರೆ ಈಗಲೇ ನಾನು ಅವನಿಗೆ ಅಮೃತವನ್ನು ಕೊಡಲು ಹೋಗುತ್ತೇನೆ. ಅವನೇನಾದರೂ ನನ್ನನ್ನು ತಿರಸ್ಕರಿಸಿದರೆ ಅವನಿಗೆ ನಾನು ಖಂಡಿತವಾಗಿಯೂ ಅಮೃತವನ್ನು ಕೊಡುವುದಿಲ್ಲ."

ಹೀಗೆ ಇಂದ್ರನು ನನ್ನೊಡನೆ ನಿಬಂಧನೆಮಾಡಿಕೊಂಡು ಮಾತಂಗನ ರೂಪವನ್ನು ಧರಿಸಿ ನಿನಗೆ ಅಮೃತವನ್ನು ಕೊಡಲಿದ್ದಾಗ ನೀನು ಅದನ್ನು ತಿರಸ್ಕರಿಸಿದೆ.

ಚಾಂಡಾಲರೂಪವನ್ನು ಧರಿಸಿದ್ದ ಪೂಜ್ಯನಾದ ಇಂದ್ರನ ವಿಷಯದಲ್ಲಿ ನೀನು ಮಹಾಪರಾಧವನ್ನೇ ಮಾಡಿರುವೆ. ಆದರೂ ನಿನ್ನ ಬಯಕೆಯಂತೆ ನನ್ನಿಂದ ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇನೆ. ನಿನ್ನ ಅತ್ಯಂತತೀವ್ರವಾಗಿರುವ ನೀರಿನ ಬಯಕೆಯನ್ನು ಸಫಲಗೊಳಿಸುತ್ತೇನೆ.

ಯೇಷ್ವಹಃಸು ಚ ತೇ ಬ್ರಹ್ಮನ್ಸಲಿಲೇಪ್ಸಾ ಭವಿಷ್ಯತಿ ।
ತದಾ ಮರೌ ಭವಿಷ್ಯನ್ತಿ ಜಲ ಪೂರ್ಣಾಃ ಪಯೋಧರಾಃ ॥೩೫॥

ರಸವಚ್ಚ ಪ್ರದಾಸ್ಯನ್ತಿ ತೋಯಂ ತೇ ಭೃಗುನನ್ದನ ।
ಉತ್ತಙ್ಕಮೇಘಾ ಇತ್ಯುಕ್ತಾಃ ಖ್ಯಾತಿಂ ಯಾಸ್ಯನ್ತಿ ಚಾಪಿ ತೇ ॥೩೬॥

ನಿನಗೆ ಯಾವ ದಿನ ನೀರನ್ನು ಕುಡಿಯಲು ಅಪೇಕ್ಷೆಯಾಗುವುದೋ–ಆ ದಿನ ಈ ಮರುಭೂಮಿಯಲ್ಲಿ ಜಲಪೂರ್ಣವಾದ ಮೋಡಗಳು ಕವಿಯುತ್ತವೆ. ಆ ಮೋಡಗಳು ನಿನಗೆ ರಸವತ್ತಾದ ನೀರನ್ನು ಕೊಡುತ್ತವೆ ಮತ್ತು ಅವುಗಳು ಉತ್ತಂಕಮೇಘಗಳೆಂದೇ ಹೆಸರನ್ನು ಪಡೆದು ಜಗತ್ತಿನಲ್ಲಿ ವಿಖ್ಯಾತವಾಗುತ್ತವೆ.”

ಜನಮೇಜಯ! ಶ್ರೀಕೃಷ್ಣನು ಹೀಗೆ ಹೇಳಿದನಂತರ ಉತ್ತಂಕನು ಪ್ರಸನ್ನನಾದನು. ಶ್ರೀಕೃಷ್ಣನ ವರಪ್ರದಾನದಂತೆ ಈಗಲೂ ಕೂಡ ಮರುಭೂಮಿಯಲ್ಲಿ ಉತ್ತಂಕಮೇಘಗಳು ಮಳೆಗರೆಯುತ್ತವೆ.”

೫೫ನೆಯ ಅಧ್ಯಾಯವು ಮುಗಿಯಿತು.

೫೬ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಉತ್ತಂಕನ ಗುರುಭಕ್ತಿಯ ವರ್ಣನೆ: ಗುರುಪುತ್ರಿಯೊಡನೆ ಉತ್ತಂಕನ ವಿವಾಹ: ಗುರುಪತ್ನಿಯ ಆಜ್ಞೆಯಂತೆ ದಿವ್ಯಕುಂಡಲಗಳನ್ನು ತರಲು ಉತ್ತಂಕನು ಸೌದಾಸನ ಬಳಿಗೆ ಹೋದುದು

ಜನಮೇಜಯನು ವೈಶಂಪಾಯನರನ್ನು ಪ್ರಶ್ನಿಸುತ್ತಾನೆ:

ಉತ್ತಙ್ಕಃ ಕೇನ ತಪಸಾ ಸಂಯುಕ್ತೋ ವೈ ಮಹಾಮನಾಃ ।
ಯಃ ಶಾಪಂ ದಾತುಕಾಮೋಽಭೂದ್ವಿಷ್ಣವೇ ಪ್ರಭವಿಷ್ಣವೇ ॥೧॥

“ಬ್ರಾಹ್ಮಣಶ್ರೇಷ್ಠರೇ! ಎಲ್ಲ ಪ್ರಾಣಿಗಳ ಉತ್ಪತ್ತಿಗೂ ಕಾರಣನಾದ ಮಹಾವಿಷ್ಣುವಿಗೂ ಉತ್ತಂಕಮಹಾಮುನಿಯು ಶಾಪಕೊಡಲು ಬಯಸಿದ್ದನು. ಶ್ರೀಕೃಷ್ಣನಿಗೂ ಅವನು ಶಾಪಕೊಡಲು ಸಿದ್ಧನಾಗಬೇಕಾದರೆ ಅವನೊಬ್ಬ ಮಹಾತಪಸ್ವಿಯೇ ಆಗಿರಬೇಕು. ಮಹಾತ್ಮನಾದ ಉತ್ತಂಕನು ಎಂತಹ ಮಹಾತಪಸ್ಸಿನಿಂದ ಯುಕ್ತನಾಗಿದ್ದನು? ಈ ವಿಷಯವನ್ನು ನನಗೆ ಹೇಳಿರಿ.”

ವೈಶಂಪಾಯನರು ಹೇಳುತ್ತಾರೆ:

“ಜನಮೇಜಯ! ಉತ್ತಂಕನು ಮಹಾತಪಸ್ವಿಯೂ, ಗುರುಭಕ್ತನೂ,

ಮಹಾತೇಜಸ್ವಿಯೂ ಆಗಿದ್ದನು. ಗುರುವನ್ನು ಬಿಟ್ಟು ಬೇರೆ ಯಾವ ದೇವತೆಯನ್ನೂ ಅವನು ಆರಾಧಿಸುತ್ತಿರಲಿಲ್ಲ. ಗುರುಕುಲದಲ್ಲಿದ್ದಾಗ ಅವನ ಜೊತೆಯಲ್ಲಿದ್ದ ಎಲ್ಲ ಋಷಿಕುಮಾರರಿಗೂ ಉತ್ತಂಕನ ಗುರುಭಕ್ತಿಗೆ ಸಮಾನವಾದ ಗುರುಭಕ್ತಿಯನ್ನೇ ತಾವೂ ಪಡೆಯಬೇಕೆಂಬ ಅಭಿಲಾಷೆಯಿದ್ದಿತು. ಉತ್ತಂಕನ ಗುರುಭಕ್ತಿಯು ಅಷ್ಟು ಆದರ್ಶವಾಗಿದ್ದಿತು. ಆ ಸಮಯದಲ್ಲಿ ಕುಲಪತಿಗಳಾದ ಗೌತಮರಿಗೆ ಅನೇಕಶಿಷ್ಯರಿದ್ದರು. ಆದರೆ ಅವರಿಗೆ ಉತ್ತಂಕನಲ್ಲಿಯೇ ಅಧಿಕವಾದ ಪ್ರೀತಿಯೂ ಸ್ನೇಹವೂ ಇದ್ದಿತು. ಗೌತಮರು ಉತ್ತಂಕನ ಇಂದ್ರಿಯಸಂಯಮ, ಅಂತಃಶುದ್ಧಿ, ಬಹಿಃಶುದ್ಧಿ, ಪರಾಕ್ರಮ, ಶ್ರದ್ಧೆಯಿಂದ ಕೆಲಸಮಾಡುವಿಕೆ ಮತ್ತು ಸೇವೆ-ಇವುಗಳಿಂದ ಪರಮಪ್ರೀತರಾಗಿದ್ದರು. ವಿದ್ಯಾಭ್ಯಾಸವು ಮುಗಿದನಂತರ ಗೌತಮರು ತಮ್ಮ ಸಾವಿರಾರು ಶಿಷ್ಯರಿಗೂ ತಮ್ಮ-ತಮ್ಮ ಮನೆಗಳಿಗೆ ಹೋಗಲು ಅನುಮತಿಯನ್ನಿತ್ತರು. ಆದರೆ ಪರಮಪ್ರೀತಿಯ ಕಾರಣದಿಂದಾಗಿ ಉತ್ತಂಕನಿಗೆ ಮಾತ್ರ ಮನೆಗೆ ಹೋಗಲು ಅನುಮತಿಯನ್ನೀಯಲು ಇಚ್ಛೆಪಡಲಿಲ್ಲ. ಕಾಲಕಳೆದಂತೆ ಉತ್ತಂಕನಿಗೆ ಮುಪ್ಪುಬಂದಿತು. ಆದರೆ ಗುರುವತ್ಸಲನಾದ ಉತ್ತಂಕನಿಗೆ ತನಗೆ ಮುಪ್ಪು ಬಂದಿರುವುದೆಂಬ ಅರಿವೂ ಉಂಟಾಗಲಿಲ್ಲ.

ಜನಮೇಜಯ! ಒಮ್ಮೆ ಉತ್ತಂಕನು ಕಟ್ಟಿಗೆಯನ್ನು ತರಲು ಕಾಡಿಗೆ ಹೋದನು. ಅಲ್ಲಿ ಅವನು ಸೌದೆಯನ್ನು ಸಂಗ್ರಹಿಸಿ ದೊಡ್ಡದಾದ ಹೊರೆಯನ್ನು ಕಟ್ಟಿ ಅದನ್ನು ಹೊತ್ತುಕೊಂಡು ಆಶ್ರಮದ ಕಡೆ ಹೊರಟನು. ಹೊರೆಯ ಭಾರದಿಂದ ಬಳಲಿದ್ದನು. ತಲೆಯ ಮೇಲಿದ್ದ ಹೊರೆಯನ್ನು ಕೆಳಗಿಡಲು ಉತ್ತಂಕನು ಪ್ರಯತ್ನಿಸಿದಾಗ ತಲೆಯ ಮೇಲೆ ಹೊತ್ತಿದ್ದ ಹೊರೆಯೊಳಗೆ ಬೆಳ್ಳಿಯ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ ಅವನ ಜಟೆಯೂ ಸೇರಿಕೊಂಡಿದ್ದ ಕಾರಣ ಸೌದೆ ಹೊರೆಯ ಜೊತೆಯಲ್ಲಿಯೇ ಉತ್ತಂಕನು ಭೂಮಿಯ ಮೇಲೆ ಬಿದ್ದುಬಿಟ್ಟನು. ಆ ಸಮಯದಲ್ಲವನು ಸೌದೆಯ ಹೊರೆಯನ್ನು ಮೇಲೆ ಕೆಡವಿಕೊಂಡು ಅದರ ಭಾರದಿಂದ ಜಜ್ಜಿಹೋಗಿದ್ದನು. ಹಸಿವಿನಿಂದ ಬಳಲಿದ್ದನು. ತನ್ನ ತಲೆಯ ಬಿಳಿಗೂದಲನ್ನು ಕಂಡು, ತನ್ನ ಅಂತಹ ಅವಸ್ಥೆಯನ್ನು ನೋಡಿ ಉತ್ತಂಕನು

ಆರ್ತನಾದಮಾಡುತ್ತಾ ಅಳತೊಡಗಿದನು. ಆ ಸಮಯದಲ್ಲಿ ಕಮಲಪತ್ರ ದಂತೆ ವಿಶಾಲವಾದ ಮುಖವನ್ನು ಹೊಂದಿದ್ದ, ಧರ್ಮಜ್ಞಳಾಗಿದ್ದ, ಸುಂದರಿಯಾಗಿದ್ದ, ಗುರುಗಳಾದ ಗೌತಮರ ಪುತ್ರಿಯು ತಲೆಯನ್ನು ತಗ್ಗಿಸಿಕೊಂಡು ತಂದೆಯ ಆಜ್ಞೆಯಂತೆ ಉತ್ತಂಕನ ಕಣ್ಣೀರನ್ನು ಬೊಗಸೆಯಿಂದ ಆಂತುಕೊಂಡಳು. ಒಡನೆಯೇ ಗುರುಪುತ್ರಿಯ ಕೈಗಳು ಸುಟ್ಟುಹೋಗಿ ಕಣ್ಣೀರಿನೊಂದಿಗೆ ಕೆಳಗೆ ಬಿದ್ದುವು. ಹಾಗೆ ಕೈಗಳೊಡನೆ ಕೆಳಕ್ಕೆ ಬಿದ್ದ ಅಶ್ರುಬಿಂದುಗಳನ್ನು ಧರಿಸಲು ಭೂದೇವಿಗೂ ಸಾಧ್ಯವಾಗಲಿಲ್ಲ. ಗೌತಮರು ಪ್ರಸನ್ನಚಿತ್ತರಾಗಿ ಉತ್ತಂಕನಿಗೆ ಹೇಳಿದರು: "ಮಗು! ಇಂದು ನಿನ್ನ ಮನಸ್ಸೇಕೆ ಶೋಕದಿಂದ ವ್ಯಾಕುಲವಾಗಿದೆ? ವಿಪ್ರರ್ಷಿಯೇ! ಬೇಗ ಹೇಳು. ಶೋಕದ ಕಾರಣವನ್ನು ಯಥಾವತ್ತಾಗಿ ಕೇಳಬೇಕೆಂದಿರುವೆನು."

ಉತ್ತಂಕನು ಹೇಳುತ್ತಾನೆ:

ಭವದ್ಗತೇನ ಮನಸಾ ಭವತ್ಪ್ರಿಯಚಿಕೀರ್ಷಯಾ ।
ಭವದ್ಭಕ್ತಿಗತೇನೇಹ ಭವದ್ಭಾವಾನುಗೇನ ಚ ॥೧೫॥

ಜರೇಯಂ ನಾವಬುದ್ಧಾ ಮೇ ನಾಭಿಜ್ಞಾತಂ ಸುಖಂ ಚ ಮೇ ।
ಶತವರ್ಷೋಷಿತಂ ಮಾಂ ಹಿ ನ ತ್ವಮಭ್ಯನುಜಾನಿಥಾಃ ॥೧೬॥

"ಗುರುದೇವನೇ! ನಿಮಗೆ ಪ್ರಿಯವನ್ನುಂಟುಮಾಡಬೇಕೆನ್ನುವ ಇಚ್ಛೆಯಿಂದ ನಾನು ನಿರಂತರವಾಗಿ ನಿಮ್ಮ ಸೇವೆಯಲ್ಲಿಯೇ ತೊಡಗಿದ್ದೇನೆ. ನಿಮ್ಮ ಮೇಲಿನ ಭಕ್ತಿಯಿಂದಾಗಿ ನನ್ನ ಮನಸ್ಸು ನಿಮ್ಮ ಭಾವವನ್ನೇ ಅನುಸರಿಸಿದೆ. ನಿಮ್ಮ ಮನಸ್ಸಿನ ಅಭಿಪ್ರಾಯವನ್ನೇ ತಿಳಿದು ಅದರಂತೆ ನಡೆಯುತ್ತಿರುವ ನನಗೆ ಮುಪ್ಪು ಬಂದುದೇ ತಿಳಿಯಲಿಲ್ಲ. ಲೌಕಿಕವಾದ ಸುಖವೆಂದರೇನೆಂಬುದೇ ನನಗೆ ಗೊತ್ತಿಲ್ಲ. ನಾನು ನಿಮ್ಮ ಆಶ್ರಮಕ್ಕೆ ಬಂದು ನೂರು ವರ್ಷಗಳು ಕಳೆದು ಹೋದರೂ ನೀವು ನನಗೆ ಮನೆಗೆ ಹೋಗಲು ಅನುಜ್ಞೆಯನ್ನು ಕೊಡಲಿಲ್ಲ. ನನಗಿಂತಲೂ ಇತ್ತೀಚೆಗೆ ಬಂದ ಸಾವಿರಾರು ಶಿಷ್ಯರು ವಿದ್ಯಾಸಂಪನ್ನರಾಗಿ ನಿಮ್ಮ ಅನುಜ್ಞೆಯನ್ನು ಪಡೆದು ತಮ್ಮ-ತಮ್ಮ ಊರುಗಳಿಗೆ ಹೊರಟುಹೋದರು."

ಗೌತಮರು ಹೇಳುತ್ತಾರೆ:

"ಮಗು, ಉತ್ತಂಕ! ಶ್ರದ್ಧೆಯಿಂದ ನೀನು ಮಾಡಿದ ಅನವರತವಾದ ಶುಶ್ರೂಷೆಯಿಂದ ನಿನ್ನ ವಿಷಯದಲ್ಲಿ ಅತ್ಯಂತ ಪ್ರೀತಿಯುಕ್ತನಾಗಿದ್ದ ನನಗೆ ನೀನು ಬಂದು ಬಹಳ ಕಾಲವಾಯಿತೆಂಬುದರ ಅರಿವೇ ಉಂಟಾಗಲಿಲ್ಲ. ಈಗ ನಿನಗೆ ನಿನ್ನ ಊರಿಗೆ ಹೋಗುವುದರಲ್ಲಿಯೇ ಶ್ರದ್ಧೆಯಿದ್ದರೆ ನನ್ನ ಅನುಜ್ಞೆಯನ್ನು ಪಡೆದು ತಡಮಾಡದೇ ನಿನ್ನ ಮನೆಗೆ ಹೋಗಬಹುದು."

ಉತ್ತಂಕನು ಹೇಳುತ್ತಾನೆ:

"ದ್ವಿಜಶ್ರೇಷ್ಠರೇ! ನಾನು ತಮಗೆ ಗುರುದಕ್ಷಿಣೆಯಾಗಿ ಏನನ್ನು ಕೊಡಲಿ? ಈ ವಿಷಯವನ್ನು ದಯಮಾಡಿ ಹೇಳಿರಿ. ತಾವು ಹೇಳಿದುದನ್ನು ತಂದು ತಮಗೊಪ್ಪಿಸಿ ಅನಂತರ ತಮ್ಮ ಅನುಮತಿಯನ್ನು ಪಡೆದು ನನ್ನ ಮನೆಗೆ ಹೋಗುತ್ತೇನೆ."

ಗೌತಮರು ಹೇಳುತ್ತಾರೆ:

ದಕ್ಷಿಣಾಪರಿತೋಷೋ ವೈ ಗುರೂಣಾಂ ಸದ್ಭಿರುಚ್ಯತೇ ।
ತವ ಹ್ಯಾಚರತೋ ಬ್ರಹ್ಮಂಸ್ತುಷ್ಟೋಽಹಂ ವೈ ನ ಸಂಶಯಃ ॥೨೧॥

"ಉತ್ತಂಕನೇ! ಶುಶ್ರೂಷೆಯೇ ಮೊದಲಾದುವುಗಳಿಂದ ಗುರುಜನರನ್ನು ತೃಪ್ತಿಗೊಳಿಸುವುದೇ ಪರಮೋತ್ಕೃಷ್ಟವಾದ ಗುರುದಕ್ಷಿಣೆಯೆಂದು ಸತ್ಪುರುಷರು ಹೇಳುತ್ತಾರೆ. ನೀನು ಗುರುಸೇವೆಯನ್ನು ಚೆನ್ನಾಗಿಯೇ ಮಾಡಿರುವೆ. ಇದರಿಂದಲೇ ನಾನು ಸಂತುಷ್ಟನಾಗಿದ್ದೇನೆ. ಇದರಲ್ಲಿ ಸಂಶಯವೇ ಇಲ್ಲ.

ಇತ್ಥಂ ಚ ಪರಿತುಷ್ಟಂ ಮಾಂ ವಿಜಾನೀಹಿ ಭೃಗೂದ್ವಹ ।
ಯುವಾ ಷೋಡಶವರ್ಷೋ ಹಿ ಯದ್ಯದ್ಯ ಭವಿತಾ ಭವಾನ್ ॥೨೨॥

ದದಾನಿ ಪತ್ನೀಂ ಕನ್ಯಾಂ ಚ ಸ್ವಾಂ ತೇ ದುಹಿತರಂ ದ್ವಿಜ ।
ಏತಾಮೃತೇಽಙ್ಗನಾ ನಾನ್ಯಾ ತ್ವತ್ತೇಜೋಽರ್ಹತಿ ಸೇವಿತುಮ್ ॥೨೩॥

ಭೃಗುನಂದನನೇ! ನೀನೀಗಲೇ ನನ್ನ ಅನುಗ್ರಹದಿಂದ ಹದಿನಾರು ವರ್ಷಗಳ ಪ್ರಾಯದವನಾಗುವೆ. ನನ್ನ ಮಗಳನ್ನು ನಿನಗೆ ಮದುವೆ ಮಾಡಿಕೊಡುತ್ತೇನೆ. ನಾನು ನಿನ್ನ ವಿಷಯದಲ್ಲಿ ಇಷ್ಟರ ಮಟ್ಟಿಗೆ ಸಂತುಷ್ಟ

ನಾಗಿರುವೆನೆಂದು ತಿಳಿ. ನನ್ನ ಮಗಳೊಬ್ಬಳ ಹೊರತಾಗಿ ಬೇರೆ ಯಾರೇ ಆದರೂ ತೇಜೋವಿಶಿಷ್ಟನಾದ ನಿನ್ನನ್ನು ಉಪಚರಿಸಲಾರರು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಕುಲಪತಿಗಳಾದ ಗೌತಮರ ಅನುಗ್ರಹದಿಂದಾಗಿ ಉತ್ತಂಕನು ಹದಿನಾರು ವರ್ಷದ ನವಯುವಕನಾದನು. ಯಶೋವತಿಯಾದ ಗುರುಪುತ್ರಿಯನ್ನು ಮದುವೆಯಾದನು. ಬಳಿಕ ಗೌತಮರ ಅನುಜ್ಞೆಯನ್ನು ಪಡೆದು ಅವರ ಪತ್ನಿಯ ಬಳಿಗೆ ಹೋಗಿ ಹೇಳಿದನು:

ಕಂ ಭವತ್ಯೈ ಪ್ರಯಚ್ಛಾಮಿ ಗುರ್ವರ್ಥಂ ವಿನಿಯುಂಕ್ಷ್ವ ಮಾಮ್।
ಪ್ರಿಯಂ ಹಿತಂ ಚ ಕಾಂಕ್ಷಾಮಿ ಪ್ರಾಣೈರಪಿ ಧನೈರಪಿ ॥೨೫॥

"ತಾಯೇ! ಗುರುದಕ್ಷಿಣಾರೂಪವಾಗಿ ನಿನಗೆ ಏನನ್ನು ತಂದುಕೊಡಲಿ? ದಯಮಾಡಿ ಆಜ್ಞಾಪಿಸು. ಪ್ರಾಣಗಳನ್ನೇ ಒತ್ತೆಯನ್ನಾಗಿಟ್ಟು ಸೇವೆಮಾಡುವುದರಿಂದಾಗಲೀ-ಐಶ್ವರ್ಯಗಳಿಂದಾಗಲೀ ನಿನಗೆ ಪ್ರಿಯವನ್ನೂ ಹಿತವನ್ನೂ ಮಾಡಲು ಬಯಸಿದ್ದೇನೆ.

ಯದ್ದುರ್ಲಭಂ ಹಿ ಲೋಕೇಽಸ್ಮಿನ್ರತ್ನಮತ್ಯದ್ಭುತಂ ಮಹತ್ ।
ತದಾನಯೇಯಂ ತಪಸಾ ನ ಹಿ ಮೇಽತ್ರಾಸ್ತಿ ಸಂಶಯಃ ॥೨೬॥

ಈ ಲೋಕದಲ್ಲಿ ಯಾವ ಅತ್ಯಂತ ದುರ್ಲಭವೂ, ಅದ್ಭುತವೂ, ಮಹತ್ತ್ವಪೂರ್ಣವೂ ಆದ ರತ್ನವಿರುವುದೋ–ಅದನ್ನೇ ಬೇಕಾದರೂ ತಪಸ್ಸಿನಿಂದ ಸಂಪಾದಿಸಿ ತಂದುಕೊಡುತ್ತೇನೆ.ಇದರಲ್ಲಿ ಸಂಶಯವೇ ಇಲ್ಲ."

ಅಹಲ್ಯೆಯು ಹೇಳುತ್ತಾಳೆ:

"ಪಾಪರಹಿತನೇ! ವಿಪ್ರನೇ! ನಿತ್ಯವೂ ನೀನು ಭಕ್ತಿಪೂರ್ವಕವಾಗಿ ಮಾಡುತ್ತಿದ್ದ ಸೇವೆಯಿಂದಲೇ ನಾನು ಸಂತುಷ್ಟಳಾಗಿದ್ದೇನೆ. ಇದೇ ನನಗೆ ಯಥೇಷ್ಟವಾದ ಗುರುದಕ್ಷಿಣೆಯಾಗಿದೆ. ಇನ್ನು ನೀನು ನಿನ್ನ ಇಚ್ಛೆಯಿದ್ದೆಡೆಗೆ ಪ್ರಯಾಣಮಾಡಬಹುದು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಅಹಲ್ಯೆಯ ಮಾತಿಗೆ ಉತ್ತಂಕನು ಒಪ್ಪಲಿಲ್ಲ.

"ತಾಯೇ! ಆಜ್ಞಾಪಿಸು. ನಿನಗೆ ಪ್ರಿಯವಾದುದನ್ನು ತಂದುಕೊಡುವುದು ನನ್ನ ಕರ್ತವ್ಯವಾಗಿದೆ."-ಎಂದು ಬಾರಿ-ಬಾರಿಗೂ ಹೇಳುತ್ತಲೇ ಇದ್ದನು. ಆಗ ಅಹಲ್ಯೆಯು ಹೇಳಿದಳು:

ಸೌದಾಸಪತ್ನ್ಯಾ ವಿಧೃತೇ ದಿವ್ಯೇ ಯೇ ಮಣಿಕುಣ್ಡಲೇ ।
ತೇ ಸಮಾನಯ ಭದ್ರಂ ತೇ ಗುರ್ವರ್ಥಃ ಸುಕೃತೋ ಭವೇತ್ ॥೨೯॥

"ಉತ್ತಂಕನೇ! ನಿನಗೆ ಮಂಗಳವಾಗಲಿ. ರಾಜನಾದ ಸೌದಾಸನ ಪತ್ನಿಯು ಎರಡು ದಿವ್ಯವಾದ ರತ್ನಮಯವಾದ ಕರ್ಣಕುಂಡಲಗಳನ್ನು ಧರಿಸಿದ್ದಾಳೆ. ಅವುಗಳನ್ನು ತಂದುಕೊಡು. ಆಗ ನೀನು ಗುರುವಿನ ಸಲುವಾಗಿ ಒಳ್ಳೆಯ ಕಾರ್ಯವನ್ನೇ ಮಾಡಿದಂತಾಗುತ್ತದೆ."

ಜನಮೇಜಯ! ಅನಂತರ ಉತ್ತಂಕನು ಹಾಗೆಯೇ ಆಗಲೆಂದು ಹೇಳಿ ಗುರುಪತ್ನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಕರ್ಣಕುಂಡಲಗಳನ್ನು ತರಲು ಹೊರಟುಹೋದನು. ಬ್ರಾಹ್ಮಣಶ್ರೇಷ್ಠನಾದ ಉತ್ತಂಕನು ಕುಂಡಲಗಳನ್ನು ಯಾಚಿಸುವ ಸಲುವಾಗಿ ರಾಕ್ಷಸಭಾವವನ್ನು ಹೊಂದಿದ್ದ ನರಭಕ್ಷಕನಾಗಿದ್ದ ಸೌದಾಸನ ಬಳಿಗೆ ಅವಸರದಿಂದ ಹೊರಟನು. ಇತ್ತಲಾಗಿ ಗೌತಮರು 'ಉತ್ತಂಕನೆಲ್ಲಿ ಕಾಣುತ್ತಿಲ್ಲವಲ್ಲಾ?'–ಎಂಬುದಾಗಿ ಪತ್ನಿಯನ್ನು ಕೇಳಿದರು. ಸೌದಾಸನ ಪತ್ನಿಯಿಂದ ಕರ್ಣಕುಂಡಲಗಳನ್ನು ತರುವ ಸಲುವಾಗಿ ಹೋಗಿರುವನೆಂದು ಅಹಲ್ಯೆಯು ಗೌತಮರಿಗೆ ಹೇಳಿದಳು. ಆ ಮಾತನ್ನು ಕೇಳಿದೊಡನೆಯೇ ಗೌತಮರು ವಿಷಣ್ಣಭಾವದಿಂದ ಹೇಳಿದರು:

"ದೇವಿ! ನೀನು ಚೆನ್ನಾಗಿ ಯೋಚಿಸಿ ಅವನಿಗೆ ಆಜ್ಞಾಪಿಸಲಿಲ್ಲ. ಸೌದಾಸನು ಶಾಪದ ಕಾರಣದಿಂದಾಗಿ ರಾಕ್ಷಸನಾಗಿದ್ದಾನೆ. ಉತ್ತಂಕನನ್ನು ಅವನು ತಿಂದೇಬಿಡುತ್ತಾನೆ."

ಅಹಲ್ಯೆಯು ಹೇಳುತ್ತಾಳೆ:

"ಪೂಜ್ಯರೇ! ನಾನು ಈ ವಿಷಯವನ್ನು ತಿಳಿಯದೇ ಸೌದಾಸನ ಪತ್ನಿಯಿಂದ ಕರ್ಣಕುಂಡಲಗಳನ್ನು ತರಲು ಉತ್ತಂಕನಿಗೆ ಹೇಳಿಬಿಟ್ಟೆನು. ಆದರೆ ನಿಮ್ಮ ಅನುಗ್ರಹವಿರುವಾಗ ಉತ್ತಂಕನಿಗೆ ಯಾವ ತೊಂದರೆಯೂ ಆಗದೆಂಬ ವಿಶ್ವಾಸವು ನನಗಿದೆ."

ಅಹಲ್ಯೆಯು ಹೀಗೆ ಹೇಳಲಾಗಿ ಗೌತಮರು 'ಹಾಗೆಯೇ ಆಗಲಿ. ಉತ್ತಂಕನಿಗೆ ಸೌದಾಸನಿಂದ ಯಾವ ತೊಂದರೆಯೂ ಆಗದಿರಲಿ'–ಎಂದು ಹೇಳಿದರು. ಅತ್ತಲಾಗಿ ಉತ್ತಂಕನು ನಿರ್ಜನವಾದ ಒಂದು ಅರಣ್ಯಪ್ರದೇಶದಲ್ಲಿ ಸೌದಾಸರಾಜನನ್ನು ಕಂಡನು."

ಮಃನೆಯ ಅಧ್ಯಾಯವು ಮುಗಿಯಿತು.

ಮ೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಉತ್ತಂಕನು ಪತ್ನಿಯ ಕರ್ಣಕುಂಡಲಗಳನ್ನು ಗುರುದಕ್ಷಿಣಾರ್ಥವಾಗಿ ಕೊಡಿಸುವಂತೆ ಸೌದಾಸನನ್ನು ಕೇಳಿದುದು: ಸೌದಾಸನ ಮಾತಿನಂತೆ ಉತ್ತಂಕನು ಮದಯಂತಿಯ ಬಳಿಗೆ ಹೋದುದು

ವೈಶಂಪಾಯನರು ಹೇಳುತ್ತಾರೆ:

ಸ ತಂ ದೃಷ್ಟ್ವಾ ತಥಾಭೂತಂ ರಾಜಾನಂ ಘೋರದರ್ಶನಮ್ ।
ದೀರ್ಘಶ್ಮಶ್ರುಧರಂ ನೃಣಾಂ ಶೋಣಿತೇನ ಸಮುಕ್ಷಿತಮ್ ॥೧॥

ಚಕಾರ ನ ವ್ಯಥಾಂ ವಿಪ್ರೋ ರಾಜಾ ತ್ವೇನಮಥಾಬ್ರವೀತ್ ।
ಪ್ರತ್ಯುತ್ಥಾಯ ಮಹಾತೇಜಾ ಭಯಕರ್ತಾ ಯಮೋಪಮಃ ॥೨॥

ಜನಮೇಜಯ! ಮಹಾಭಯಂಕರನಾಗಿ ಕಾಣುತ್ತಿದ್ದ, ದೀರ್ಘವಾದ ಗಡ್ಡ-ಮೀಸೆಗಳನ್ನು ಬಿಟ್ಟಿದ್ದ, ಮನುಷ್ಯರಕ್ತದಿಂದ ತೋಯ್ದುಹೋಗಿದ್ದ ರಾಕ್ಷಸನಂತೆಯೇ ಕಾಣುತ್ತಿದ್ದ ಸೌದಾಸರಾಜನನ್ನು ನೋಡಿ ವಿಪ್ರಶ್ರೇಷ್ಠನಾದ ಉತ್ತಂಕನು ಗಾಬರಿಗೊಳ್ಳಲಿಲ್ಲ. ಉತ್ತಂಕನು ತನ್ನ ಸಮೀಪಕ್ಕೆ ಬಂದೊಡನೆಯೇ ಭಯವನ್ನು ಉಂಟುಮಾಡುವವನಾಗಿದ್ದ, ಸಾಕ್ಷಾತ್ ಯಮನಂತೆಯೇ ಕಾಣುತ್ತಿದ್ದ, ಮಹಾತೇಜಸ್ವಿಯಾದ ಸೌದಾಸನು ಉತ್ತುಂಕನನ್ನು ಇದಿರ್ಗೊಂಡು ಹೇಳಿದನು:

"ಕಲ್ಯಾಣಸ್ವರೂಪನಾದ ವಿಪ್ರಶ್ರೇಷ್ಠನೇ! ದಿನದ ಆರನೆಯ ಭಾಗ ದಲ್ಲಿ ನನ್ನ ಸೌಭಾಗ್ಯದ ಕಾರಣದಿಂದಲೇ ನೀನು ಇಲ್ಲಿಗೆ ಆಗಮಿಸಿರುವೆ.

ನಾನು ಆಹಾರವನ್ನು ಹುಡುಕಿಕೊಂಡು ಅಲೆಯುತ್ತಿದ್ದ ಸಮಯಕ್ಕೆ ಸರಿಯಾಗಿ ನೀನು ಸಿಕ್ಕಿರುವೆ.”

ರಾಜನ ಆ ಮಾತನ್ನು ಕೇಳಿ ಸ್ವಲ್ಪವೂ ಭ್ರಾಂತನಾಗದೇ ಉತ್ತಂಕನು ಹೇಳಿದನು:

“ಮಹಾರಾಜ! ನಾನು ಗುರುದಕ್ಷಿಣೆಯನ್ನು ಸಂಗ್ರಹಿಸುವ ಸಲುವಾಗಿ ಅಲ್ಲಲ್ಲಿ ತಿರುಗಾಡುತ್ತಾ ಕಡೆಗೆ ಈ ಸ್ಥಳಕ್ಕೆ ಬಂದಿರುವೆನೆಂಬುದನ್ನು ತಿಳಿ. ಗುರುದಕ್ಷಿಣಾರ್ಥವಾಗಿ ಹೊರಟಿರುವವನನ್ನು ಹಿಂಸಿಸಬಾರದೆಂದು ವಿದ್ವಾಂಸರು ಹೇಳುತ್ತಾರೆ.”

ರಾಜನು ಹೇಳುತ್ತಾನೆ:

“ದ್ವಿಜಶ್ರೇಷ್ಠನೇ! ದಿವಸದ ಆರನೆಯ ಭಾಗದಲ್ಲಿ ನಾನು ಆಹಾರವನ್ನು ತೆಗೆದುಕೊಳ್ಳುವುದು ವಿಹಿತವಾಗಿದೆ. ಇದು ಅದೇ ಸಮಯವೇ ಆಗಿದೆ. ಈಗ ನಾನು ಹಸಿವಿನಿಂದ ಪೀಡಿತನೂ ಆಗಿದ್ದೇನೆ. ಆದುದರಿಂದ ಈ ಸಮಯದಲ್ಲಿ ನೀನು ನನ್ನಿಂದ ಬಿಡಿಸಿಕೊಂಡು ಹೋಗಲು ಶಕ್ಯವೇ ಇಲ್ಲ.”

ಉತ್ತಂಕನು ಹೇಳುತ್ತಾನೆ:

“ಮಹಾರಾಜ! ಹಾಗಾದರೆ, ನಾವಿಬ್ಬರೂ ಒಂದು ನಿರ್ಣಯಕ್ಕೆ ಬರೋಣ. ಗುರುದಕ್ಷಿಣೆಯನ್ನು ಸಂಗ್ರಹಿಸಿ ಗುರುಪತ್ನಿಗೊಪ್ಪಿಸಿ ನಾನು ಪುನಃ ನಿನ್ನ ಬಳಿಗೆ ಬರುತ್ತೇನೆ.

ಮೇಲಾಗಿ ನಾನು ಗುರುಗಳಿಗೆ ಯಾವ ವಸ್ತುವನ್ನು ತಂದು ಕೊಡುವುದಾಗಿ ಪ್ರತಿಜ್ಞೆಮಾಡಿರುವೆನೋ–ಅದಾದರೂ ನಿನ್ನ ಅಧೀನದಲ್ಲಿಯೇ ಇದೆ. ನಿನ್ನಿಂದ ಆ ವಸ್ತುವನ್ನು ನಾನು ಬೇಡುತ್ತೇನೆ. ನೀನು ನಿತ್ಯವೂ ವಿಪ್ರಶ್ರೇಷ್ಠರಿಗೆ ನಾನಾವಿಧವಾದ ರತ್ನಗಳನ್ನು ದಾನಮಾಡುತ್ತಲೇ ಇರುವೆ. ನರಶ್ರೇಷ್ಠನೇ! ನೀನು ಈ ಪೃಥ್ವಿಯಲ್ಲಿ ಒಬ್ಬ ಶ್ರೇಷ್ಠದಾನಿಯೆಂದು ಪ್ರಸಿದ್ಧನಾಗಿರುವೆ. ದಾನತೆಗೆದುಕೊಳ್ಳುವುದರಲ್ಲಿ ನಾನೂ ಸತ್ಪಾತ್ರನಾಗಿರುವೆನೆಂಬುದನ್ನು ನೀನು ತಿಳಿದುಕೊ. ಅರಿಂದಮನೇ! ಗುರುಗಳಿಗೆ ಬೇಕಾದ,

ನಿನ್ನ ಅಧೀನದಲ್ಲಿರುವ ವಸ್ತುವನ್ನು ತೆಗೆದುಕೊಂಡು ಅದನ್ನು ಗುರುಗಳಿಗೆ ಅರ್ಪಿಸಿ ಪ್ರತಿಜ್ಞೆಗೆ ಅನುಸಾರವಾಗಿ ನಾನು ಪುನಃ ಇಲ್ಲಿಗೇ ಬಂದು ನಿನಗೆ ಅಧೀನನಾಗುತ್ತೇನೆ. ಮಹಾರಾಜ! ನಾನು ಸತ್ಯವಾಗಿ ಈ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ. ನಾನು ಹೇಳುವುದರಲ್ಲಿ ಸುಳ್ಳಿನ ಲೇಶವೂ ಇಲ್ಲ. ನಾನು ಈ ಹಿಂದೆ ಪರಿಹಾಸಕ್ಕಾದರೂ ಸುಳ್ಳುಹೇಳಿದವನಲ್ಲ. ಹೀಗಿರುವಾಗ ಬೇರೆ ಸಮಯದಲ್ಲಿ ನಾನು ಹೇಗೆ ತಾನೇ ಸುಳ್ಳನ್ನು ಹೇಳುವೆನು?"

ಸೌದಾಸ:

"ನೀನು ಗುರುಗಳಿಗೆ ಅರ್ಪಿಸಬೇಕಾದ ವಸ್ತುವು ನನ್ನ ಅಧೀನದಲ್ಲಿಯೇ ಇರುವುದಾದರೆ ಅದು ನಿನಗೆ ದೊರೆಯಿತೆಂದೇ ತಿಳಿದುಕೊ. ಆದರೆ ನಾನು 'ದಾನೀ'–ಎಂದು ಅಂಗೀಕರಿಸಲು ಯೋಗ್ಯನಾಗಿದ್ದೇನೆಯೇ? ಈ ವಿಷಯವನ್ನು ನನಗೆ ಮೊದಲು ಹೇಳು."

ಉತ್ತಂಕ:

"ಪುರುಷಶ್ರೇಷ್ಠನೇ! ನೀನು ಯಾವಾಗಲೂ 'ದಾನೀ'–ಎಂದು ಪ್ರತಿಗ್ರಹಿಸಲು (ಎಂಬುದನ್ನು ಒಪ್ಪಿಕೊಳ್ಳಲು) ಯೋಗ್ಯನಾಗಿಯೇ ಇದ್ದೀಯೆ–ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ಕಾರಣದಿಂದಲೇ ನಾನು ಎರಡು ಮಣಿಕುಂಡಲಗಳನ್ನು ಬೇಡಲು ನಿನ್ನ ಬಳಿಗೆ ಬಂದಿರುವೆನು."

ಸೌದಾಸ:

"ವಿಪ್ರರ್ಷಿಯೇ! ನೀನು ಬಯಸಿರುವ ಆ ಮಣಿಕುಂಡಲಗಳು ನನ್ನ ರಾಣಿಯಲ್ಲಿಯೇ ಇರಲು ಯೋಗ್ಯವಾಗಿವೆ. ಆದುದರಿಂದ ಸುವ್ರತನೇ! ನೀನು ಬೇರೆ ಯಾವುದಾದರೂ ವಸ್ತುವನ್ನು ಕೇಳು. ಅದನ್ನು ಅವಶ್ಯಕವಾಗಿ ಕೊಡುವೆನು."

ಉತ್ತಂಕ:

"ಪಾರ್ಥಿವನೇ! ನೆಪಹೇಳುವುದನ್ನು ಸಾಕುಮಾಡು. ನನ್ನಲ್ಲಿ ನಿನಗೆ ನಂಬಿಕೆಯಿದ್ದರೆ ಸತ್ಯವಾದಿಗಳೆಂದು ನಮ್ಮನ್ನು ನೀನು ಭಾವಿಸಿದ್ದರೆ –ನಿನ್ನ ಪತ್ನಿಯ ಕರ್ಣಕುಂಡಲಗಳನ್ನು ಗುರುದಕ್ಷಿಣಾರ್ಥವಾಗಿ ನನಗೆ ಕೊಡು. ನೀನೂ ಸತ್ಯವಾದಿಯಾಗು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಉತ್ತಂಕನು ಹೀಗೆ ಹೇಳಲು ರಾಜನು ಉತ್ತಂಕನಿಗೆ ಪುನಃ ಹೇಳಿದನು:

“ಬ್ರಾಹ್ಮಣಶ್ರೇಷ್ಠನೇ! ನೀನು ನನ್ನ ರಾಣಿಯ ಬಳಿಗೆ ಹೋಗು. ನನ್ನ ಮಾತಿನಂತೆ ಕರ್ಣಕುಂಡಲಗಳನ್ನು ಕೊಡಲು ಹೇಳು. ನಾನು ಹೇಳಿರುವೆನೆಂದು ನೀನು ಅವಳೊಡನೆ ಹೇಳಿದ್ದೇ ಆದರೆ ಶುಚಿವ್ರತಳಾದ ಅವಳು ನಿಶ್ಚಯವಾಗಿಯೂ ನಿನಗೆ ತನ್ನ ಎರಡು ಕರ್ಣಕುಂಡಲಗಳನ್ನೂ ಕೊಟ್ಟುಬಿಡುತ್ತಾಳೆ. ಇದರಲ್ಲಿ ಸಂಶಯವೇ ಇಲ್ಲ.”

ಉತ್ತಂಕ:

“ನರೇಶ್ವರನೇ! ನಿನ್ನ ಪತ್ನಿಯನ್ನು ನಾನು ಎಲ್ಲಿ ನೋಡಲು ಸಾಧ್ಯವಾಗುತ್ತದೆ? ನೀನಾದರೂ ನಿನ್ನ ಪತ್ನಿಯ ಸಮೀಪಕ್ಕೆ ಏಕೆ ಹೋಗುತ್ತಿಲ್ಲ?”

ಸೌದಾಸ:

“ನೀನು ಅವಳನ್ನೀಗ ಈ ಅರಣ್ಯದಲ್ಲಿರುವ ಒಂದು ಚಿಲುಮೆಯ ಸಮೀಪದಲ್ಲಿ ಕಾಣುವೆ. ಇದು ದಿನದ ಆರನೆಯ ಭಾಗವಾಗಿ ನಾನು ಆಹಾರವನ್ನು ಹುಡುಕುತ್ತಿರುವುದರಿಂದ ಈಗ ನಾನು ಅವಳನ್ನು ನೋಡಲು ಶಕ್ಯವಿಲ್ಲ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಸೌದಾಸನು ಉತ್ತಂಕನಿಗೆ ಹೀಗೆ ಹೇಳಿದನಂತರ ಅವನು ಮದಯಂತಿಯನ್ನು ಅರಸಿಕೊಂಡು ಹೋದನು. ರಾಜನು ಹೇಳಿದ್ದಂತೆ ಅರಣ್ಯದ ಚಿಲುಮೆಯೊಂದರ ಸಮೀಪದಲ್ಲಿ ಮದಯಂತಿಯನ್ನು ಕಂಡು, ತನ್ನ ಆಗಮನದ ಪ್ರಯೋಜನವನ್ನು ಅವಳಿಗೆ ತಿಳಿಸಿದನು. ವಿಶಾಲಾಕ್ಷಿಯಾದ ಮದಯಂತಿಯು ಸೌದಾಸನ ಸಂದೇಶವನ್ನು ಉತ್ತಂಕನಿಂದ ಕೇಳಿ ಮಹಾಬುದ್ಧಿಯಾದ ಉತ್ತಂಕನನ್ನು ಕುರಿತು ಹೇಳಿದಳು:

“ಮಹಾಬ್ರಾಹ್ಮಣನೇ! ನೀನು ಹೇಳಿದಂತೆಯೇ ಆಗಲಿ. ನೀನು

ಯಾವಾಗಲೂ ಸುಳ್ಳು ಹೇಳುವವನಲ್ಲ. ಆದರೆ ನನ್ನ ಪತಿಯೇ ಈ ಸಂದೇಶವನ್ನು ಕಳುಹಿಸಿರುವನೆಂಬುವುದಕ್ಕೆ ಅವನಿಂದ ಯಾವುದಾದರೂ ಒಂದು ಗುರುತನ್ನು ತರಬೇಕಾಗಿದೆ.

ಇಮೇ ಹಿ ದಿವ್ಯೇ ಮಣಿಕುಣ್ಡಲೇ
ಮೇ ದೇವಾಶ್ಚ ಯಕ್ಷಾಶ್ಚ ಮಹರ್ಷಯಶ್ಚ।
ತೈಸ್ತೈರುಪಾಯೈರಪಹರ್ತುಕಾಮಾ-
ಶ್ಛಿದ್ರೇಷು ನಿತ್ಯಂ ಪರಿತರ್ಕಯನ್ತಿ ॥೨೨॥

ಉತ್ತಂಕನೇ! ಇವೇ ನನ್ನ ಎರಡು ದಿವ್ಯವಾದ ಮಣಿಕುಂಡಲಗಳು. ದೇವತೆಗಳೂ, ಯಕ್ಷರೂ, ಮಹರ್ಷಿಗಳೂ ನಾನಾವಿಧವಾದ ಉಪಾಯ ಗಳಿಂದ ಇವುಗಳನ್ನು ಅಪಹರಿಸುವ ಅಭಿಲಾಷೆಯುಳ್ಳವರಾಗಿದ್ದಾರೆ. ಅದಕ್ಕಾಗಿ ನಿತ್ಯವೂ ಅವರು ನನ್ನಲ್ಲಿ ದೋಷಗಳನ್ನು ಕಂಡುಹಿಡಿ ಯುವುದರಲ್ಲಿಯೇ ಮಗ್ನರಾಗಿದ್ದಾರೆ.

ನಿಕ್ಷಿಪ್ತಮೇತದ್ಭುವಿ ಪನ್ನಗಾಸ್ತು
ರತ್ನಂ ಸಮಾಸಾದ್ಯ ಪರಾಮೃಶೇಯುಃ।
ಯಕ್ಷಾಸ್ತಥೋಚ್ಛಿಷ್ಟಧೃತಂ ಸುರಾಶ್ಚ
ನಿದ್ರಾವಶಾದ್ವಾ ಪರಿಧರ್ಷಯೇಯುಃ ॥೨೩॥

ಈ ಕುಂಡಲಗಳನ್ನೇನಾದರೂ ನೆಲದಲ್ಲಿರಿಸಿದರೆ ಒಡನೆಯೇ ಸರ್ಪಗಳು ಇವುಗಳನ್ನು ಕೊಂಡೊಯ್ಯುತ್ತವೆ. ಅಶುಚಿಯಾಗಿ ಕುಂಡಲಗಳನ್ನೇನಾದರೂ ಧಾರಣೆಮಾಡಿದರೆ ಅಥವಾ ಈ ಕುಂಡಲಗಳನ್ನು ತೊಟ್ಟುಕೊಂಡು ನಿದ್ರೆಮಾಡಿಬಿಟ್ಟರೆ ಯಕ್ಷರೂ ದೇವತೆಗಳೂ ಇದನ್ನು ಬಲಾತ್ಕಾರವಾಗಿ ಅಪಹರಿಸಿಕೊಂಡು ಹೋಗುತ್ತಾರೆ.

ಛಿದ್ರೇಷ್ವೇತೇಷ್ವಿಮೇ ನಿತ್ಯಂ ಹ್ರಿಯೇತೇ ದ್ವಿಜಸತ್ತಮ।
ದೇವರಾಕ್ಷಸನಾಗಾನಾಮಪ್ರಮತ್ತೇನ ಧಾರ್ಯತೇ ॥೨೪॥

ಇಂತಹ ದೋಷವಿರುವ ಸಮಯದಲ್ಲಿ ದೇವ-ರಾಕ್ಷಸ (ಯಕ್ಷ)–ಸರ್ಪಗಳಿಂದ ಈ ಕರ್ಣಕುಂಡಲಗಳು ಅಪಹರಿಸಲ್ಪಡುತ್ತವೆ. ಆದುದರಿಂದ ಸದಾ ಜಾಗರೂಕನಾಗಿರುವವನು ಮಾತ್ರವೇ ಇವುಗಳನ್ನು ಧರಿಸಬಲ್ಲನು.

ಸ್ಯನ್ದೇತೇ ಹಿ ದಿವಾ ರುಕ್ಮಂ ರಾತೌ ಚ ದ್ವಿಜಸತ್ತಮ ।
ನಕ್ತಂ ನಕ್ಷತ್ರತಾರಾಣಾಂ ಪ್ರಭಾಮಾಕ್ಷಿಪ್ಯ ವರ್ತತಃ ॥೨೫॥

ಈ ಕರ್ಣಕುಂಡಲಗಳು ಹಗಲು-ರಾತ್ರಿ ದ್ರವರೂಪವಾದ ಚಿನ್ನವನ್ನು ಸುರಿಸುತ್ತವೆ. ರಾತ್ರಿಯಲ್ಲಿ ನಕ್ಷತ್ರ-ತಾರೆಗಳ ಪ್ರಭೆಯನ್ನೂ ಮಸಕು ಗೊಳಿಸುತ್ತವೆ. (ನಕ್ಷತ್ರತಾರೆಗಳನ್ನೂ ಮೀರಿ ಬೆಳಗುತ್ತವೆ.)

ಏತೇ ಹ್ಯಾಮುಚ್ಯ ಭಗವನ್ ಕ್ಷುತ್ಪಿಪಾಸಾಭಯಂ ಕುತಃ ।
ವಿಷಾಗ್ನಿಶ್ವಾಪದೇಭ್ಯಶ್ಚ ಭಯಂ ಜಾತು ನ ವಿದ್ಯತೇ ॥೨೬॥

ಪೂಜ್ಯನೇ! ಇವುಗಳನ್ನು ಧರಿಸಿದರೆ ಹಸಿವು-ಬಾಯಾರಿಕೆಗಳ ಬಾಧೆಯು ಎಲ್ಲಿರುತ್ತದೆ? (ಹಸಿವು-ಬಾಯಾರಿಕೆಗಳ ಬಾಧೆಯೇ ಇರುವುದಿಲ್ಲ) ಇದನ್ನು ಧರಿಸಿದವರಿಗೆ ಅಗ್ನಿಯಿಂದಾಗಲೀ, ವಿಷದಿಂದಾಗಲೀ, ಮಾಂಸಾಹಾರಿಗಳಾದ ಪ್ರಾಣಿಗಳಿಂದಾಗಲೀ ಭಯವಿರುವುದಿಲ್ಲ.

ಹ್ರಸ್ವೇನ ಚೈತೇ ಆಮುಕ್ತೇ ಭವತೋ ಹ್ರಸ್ವಕೇ ತದಾ ।
ಅನುರೂಪೇಣ ಚಾಮುಕ್ತೇ ಜಾಯೇತೇ ತತ್ಪ್ರಮಾಣಕೇ ॥೨೭॥

ಹ್ರಸ್ವವಾದ ಆಕಾರವುಳ್ಳ ಮನುಷ್ಯನೇನಾದರೂ (ಕುಳ್ಳಾದ ಮನುಷ್ಯ ನೇನಾದರೂ) ಈ ಕರ್ಣಕುಂಡಲಗಳನ್ನು ಧರಿಸಿದರೆ ಇವೂ ಹ್ರಸ್ವಾಕಾರವನ್ನೇ ಹೊಂದುತ್ತವೆ. ದೊಡ್ಡದಾದ ಆಕಾರವುಳ್ಳ ಮನುಷ್ಯನು ಧರಿಸಿದರೆ ಇವೂ ದೊಡ್ಡವುಗಳಾಗುತ್ತವೆ. ಮನುಷ್ಯನ ಗಾತ್ರಕ್ಕೆ ಅನುಗುಣವಾಗಿ ಈ ಕುಂಡಲಗಳೂ ಚಿಕ್ಕವು ಅಥವಾ ದೊಡ್ಡವುಗಳಾಗುತ್ತವೆ.

ಏವಂ ವಿಧೇ ಮಮೈತೇ ವೈ ಕುಣ್ಡಲೇ ಪರಮಾರ್ಚಿತೇ ।
ತ್ರಿಷು ಲೋಕೇಷು ವಿಜ್ಞಾತೇ ತದಭಿಜ್ಞಾನಮಾನಯ ॥೨೮॥

ಇಂತಹ ಗುಣಗಳಿಂದ ಕೂಡಿರುವುದರಿಂದ ಈ ನನ್ನ ಕರ್ಣಕುಂಡಲಗಳು ಮೂರು ಲೋಕಗಳಲ್ಲಿಯೂ ಪ್ರಶಂಸಿಸಲ್ಪಡುತ್ತವೆ ಮತ್ತು ಪ್ರಸಿದ್ಧವಾಗಿವೆ. ಆದುದರಿಂದ ನೀನು ಇವುಗಳನ್ನು ಒಯ್ಯಲು ನನ್ನ ಪತಿಯಿಂದ ಯಾವುದಾದರೂ ಗುರುತನ್ನು ತೆಗೆದುಕೊಂಡು ಬಾ."

ಶ೭ನೆಯ ಅಧ್ಯಾಯವು ಮುಗಿಯಿತು.

ಉತ್ತಂಕನು ಕುಂಡಲಗಳನ್ನು ತೆಗೆದುಕೊಂಡು ಗುರುಗಳ ಆಶ್ರಮಕ್ಕೆ ಹಿಂದಿರುಗಿದುದು: ಹಾದಿಯಲ್ಲಿ ಕುಂಡಲಗಳ ಅಪಹರಣ: ಇಂದ್ರಾಗ್ನಿಗಳ ಕೃಪೆಯಿಂದ ಕುಂಡಲಗಳನ್ನು ಪುನಃ ಪಡೆದು ಉತ್ತಂಕನು ಗುರುಪತ್ನಿಗೆ ಅರ್ಪಿಸಿದುದು

ವೈಶಂಪಾಯನರು ಹೇಳುತ್ತಾರೆ:

ಸ ಮಿತ್ರಸಹಮಾಸಾದ್ಯ ಅಭಿಜ್ಞಾನಮಯಾಚತ ।
ತಸ್ಮೈ ದದಾವಭಿಜ್ಞಾನಂ ಸ ಚೇಕ್ಷ್ವಾಕುವರಸ್ತದಾ ॥೧॥

ಜನಮೇಜಯ! ಮದಯಂತಿಯು ಹೇಳಿದಂತೆ ಉತ್ತಂಕನು ಮಿತ್ರಸಹನ (ಸೌದಾಸನ) ಬಳಿಗೆ ಹೋಗಿ ಅಭಿಜ್ಞಾನವನ್ನು (ಗುರುತನ್ನು) ಪ್ರಾರ್ಥಿಸಿದನು.ಇಕ್ಷ್ವಾಕುಶ್ರೇಷ್ಠನಾದ ಸೌದಾಸನು ಉತ್ತಂಕನಿಗೆ ಗುರುತೊಂದನ್ನು ಕೊಟ್ಟನು.

ನ ಚೈವೈಷಾ ಗತಿಃ ಕ್ಷೇಮ್ಯಾ ನ ಚಾನ್ಯಾ ವಿದ್ಯತೇ ಗತಿಃ ।
ಏತನ್ಮೇ ಮತಮಾಜ್ಞಾಯ ಪ್ರಯಚ್ಛ ಮಣಿಕುಣ್ಡಲೇ ॥೨॥

“ಪ್ರಿಯೇ! ನಾನೀಗ ಇರುವ ದುಃಸ್ಥಿತಿಯು ಕಲ್ಯಾಣಕರವಾದುದೇನೂ ಅಲ್ಲ. ಈಗಂತೂ ಬೇರೆ ಯಾವ ಮಾರ್ಗವೂ ಇಲ್ಲವಾಗಿದೆ. ಈ ನನ್ನ ಅಭಿಪ್ರಾಯವನ್ನು ತಿಳಿದುಕೊಂಡು ಈ ಬ್ರಾಹ್ಮಣನಿಗೆ ನಿನ್ನಲ್ಲಿರುವ ಮಣಿಕುಂಡಲಗಳನ್ನು ಕೊಟ್ಟುಬಿಡು.”

ಜನಮೇಜಯ! ಸೌದಾಸನು ಹೇಳಿದ ಈ ಮಾತನ್ನೇ ಅಭಿಜ್ಞಾನವನ್ನಾಗಿಟ್ಟುಕೊಂಡು ಉತ್ತಂಕನು ಮದಯಂತಿಯ ಬಳಿಗೆ ಹೋಗಿ ಆ ಮಾತುಗಳನ್ನು ಪುನರುಚ್ಚರಿಸಿದನು. ಪತಿಯ ಆ ಮಾತನ್ನು ಕೇಳುತ್ತಲೇ ರಾಣಿಯು ಸ್ವಲ್ಪವೂ ವಿಚಾರಮಾಡದೇ ತನ್ನ ಕಿವಿಗಳಲ್ಲಿದ್ದ ಮಣಿಕುಂಡಲಗಳನ್ನು ತೆಗೆದು ಉತ್ತಂಕನಿಗೆ ಕೊಟ್ಟುಬಿಟ್ಟಳು. ಆ ಕುಂಡಲಗಳನ್ನು ಪಡೆದುಕೊಂಡು ಉತ್ತಂಕನು ಪುನಃ ಸೌದಾಸನ ಬಳಿಗೆ ಬಂದು ಪ್ರಶ್ನಿಸಿದನು:

ಕಿಮೇತದ್ಗುಹ್ಯವಚನಂ ಶ್ರೋತುಮಿಚ್ಛಾಮಿ ಪಾರ್ಥಿವ ॥೪॥

"ಪಾರ್ಥಿವನೇ! ರಾಣಿಗೆ ನೀನು ಹೇಳಿದ ಮಾತಿನ ಗೂಢಾರ್ಥವೇನೆಂಬುದನ್ನು ತಿಳಿಯಬಯಸುತ್ತೇನೆ."

ಸೌದಾಸ:

ಪ್ರಜಾನಿಸರ್ಗಾದ್ವಿಪ್ರಾನ್ವೈ ಕ್ಷತ್ರಿಯಾಃ ಪೂಜಯನ್ತಿ ಹ ।
ವಿಪ್ರೇಭ್ಯಶ್ಚಾಪಿ ಬಹವೋ ದೋಷಾಃ ಪ್ರಾದುರ್ಭವನ್ತಿ ವೈ ॥೫॥

"ಸೃಷ್ಟಿಯ ಪ್ರಾರಂಭದ ಕಾಲದಿಂದಲೂ ಕ್ಷತ್ರಿಯರು ಬ್ರಾಹ್ಮಣರನ್ನು ಪೂಜಿಸುತ್ತಲೇ (ಗೌರವಿಸುತ್ತಲೇ) ಬಂದಿದ್ದಾರೆ. ಆದರೂ ಕೆಲವು ಸಮಯಗಳಲ್ಲಿ ಬ್ರಾಹ್ಮಣರಿಂದಲೂ ಅನೇಕ ದೋಷಗಳು ಉಂಟಾಗುತ್ತವೆ. (ಬ್ರಾಹ್ಮಣರು ಶಾಪಗಳನ್ನು ಕೊಟ್ಟುಬಿಡುತ್ತಾರೆ.)

ಸೋಽಹಂ ದ್ವಿಜೇಭ್ಯಃ ಪ್ರಣತೋ ವಿಪ್ರಾದ್ದೋಷಮವಾಪ್ತವಾನ್ ।
ಗತಿಮನ್ಯಾಂ ನ ಪಶ್ಯಾಮಿ ಮದಯನ್ತೀಸಹಾಯವಾನ್ ॥೬॥

ನಾನು ಯಾವಾಗಲೂ ಬ್ರಾಹ್ಮಣರಿಗೆ ವಿನೀತನಾಗಿಯೇ ಇರುತ್ತಿದ್ದೆನು. ಆದರೆ ಬ್ರಾಹ್ಮಣನಿಂದಲೇ ದೋಷವನ್ನು (ಶಾಪವನ್ನು) ಪಡೆದು ಈ ದುರ್ಗತಿಯನ್ನು ಅನುಭವಿಸುತ್ತಿದ್ದೇನೆ. ಮದಯಂತಿಯೊಬ್ಬಳು ಮಾತ್ರ ಸಹಾಯಕಳಾಗಿರುವ ನನಗೆ ಈ ಸಮಯದಲ್ಲಿ ಬೇರೆ ಯಾವ ಮಾರ್ಗವೂ ಕಾಣುತ್ತಿಲ್ಲ.

ನ ಚಾನ್ಯಾಮಪಿ ಪಶ್ಯಾಮಿ ಗತಿಂ ಗತಿಮತಾಂ ವರ ।
ಸ್ವರ್ಗದ್ವಾರಸ್ಯ ಗಮನೇ ಸ್ಥಾನೇ ಚೇಹ ದ್ವಿಜೋತ್ತಮ ॥೭॥

ಜಂಗಮಪ್ರಾಣಿಗಳಲ್ಲಿ ಶ್ರೇಷ್ಠನಾದ ವಿಪ್ರಶ್ರೇಷ್ಠನೇ! ಈಗ ಈ ಲೋಕದಲ್ಲಿ ಸುಖವಾಗಿರುವುದಕ್ಕಾಗಲೀ, ಪರಲೋಕದಲ್ಲಿ ಸ್ವರ್ಗೀಯಸುಖ ವನ್ನು ಹೊಂದುವುದಕ್ಕಾಗಲೀ ಸತ್ಪಾತ್ರನಾದ ನಿನಗೆ ದಾನಕೊಡುವುದಕ್ಕಿಂತಲೂ ಬೇರೆಯ ಮಾರ್ಗವನ್ನೇ ನಾನು ಕಾಣದವನಾಗಿದ್ದೇನೆ.

ನ ಹಿ ರಾಜ್ಞಾ ವಿಶೇಷೇಣ ವಿರುದ್ಧೇನ ದ್ವಿಜಾತಿಭಿಃ ।
ಶಕ್ಯಂ ಹಿ ಲೋಕೇ ಸ್ಥಾತುಂ ವೈ ಪ್ರೇತ್ಯ ವಾ ಸುಖಮೇಧಿತುಮ್॥

ಬ್ರಾಹ್ಮಣರೊಡನೆ ದ್ವೇಷಕಟ್ಟಿಕೊಂಡವನು ಅದರಲ್ಲಿಯೂ ವಿಶೇಷವಾಗಿ ರಾಜನು ಈ ಲೋಕದಲ್ಲಿರಲೂ ಸಾಧ್ಯವಾಗುವುದಿಲ್ಲ; ಪರಲೋಕಕ್ಕೆ ಹೋಗಿ ಅಲ್ಲಿಯಾದರೂ ಸುಖವಾಗಿರಲು ಸಾಧ್ಯವಾಗುವುದಿಲ್ಲ. (ಇದೇ ನನ್ನ ರಹಸ್ಯಸಂದೇಶದ ತಾತ್ಪರ್ಯವಾಗಿದೆ.)

ತದಿಷ್ಟೇ ತೇ ಮಯಾ ದತ್ತೇ ಏತೇ ಸ್ವೇ ಮಣಿಕುಣ್ಡಲೇ ।
ಯಃ ಕೃತಸ್ತೇಽದ್ಯ ಸಮಯಃ ಸಫಲಂ ತಂ ಕುರುಷ್ವ ಮೇ ॥೯॥

ನಿನಗೆ ಇಷ್ಟವಾಗಿದ್ದ ಈ ನನ್ನ ಮಣಿಕುಂಡಲಗಳನ್ನು ನಿನಗೆ ಕೊಟ್ಟಿರುವೆನು. ನಿನ್ನ ನಿಬಂಧನೆಯ ಪ್ರಕಾರ ನೀನು ಮಾಡಬೇಕಾಗಿರುವುದನ್ನು ಸಫಲಗೊಳಿಸು."

ಉತ್ತಂಕ:

"ಮಹಾರಾಜ! ಹಾಗೆಯೇ ಆಗಲಿ. ನಾನು ಹೇಳಿರುವಂತೆಯೇ ಮಾಡುವೆನು. ಈ ಕರ್ಣಕುಂಡಲಗಳನ್ನು ಗುರುಗಳಿಗೊಪ್ಪಿಸಿ ಪುನಃ ಇಲ್ಲಿಗೆ ಬಂದು ನಿನಗೆ ಅಧೀನನಾಗುತ್ತೇನೆ. ನಿನ್ನನ್ನು ಒಂದು ಮುಖ್ಯವಾದ ಪ್ರಶ್ನೆಯನ್ನು ಕೇಳುವ ಸಲುವಾಗಿಯೂ ನಾನು ಪುನಃ ನಿನ್ನ ಬಳಿಗೆ ಬರುತ್ತೇನೆ."

ಸೌದಾಸ:

"ವಿಪ್ರಶ್ರೇಷ್ಠನೇ! ನಿನ್ನ ಅಪೇಕ್ಷೆಯಂತೆ ಕೇಳು. ಅದಕ್ಕೆ ನಾನು ಉತ್ತರಿಸುತ್ತೇನೆ. ನಿನ್ನ ಸಂಶಯವನ್ನೂ ನಿವಾರಿಸುತ್ತೇನೆ. ಈ ವಿಷಯದಲ್ಲಿ ನಾನು ವಿಚಾರಮಾಡಬೇಕಾದುದೇ ಇಲ್ಲ."

ಉತ್ತಂಕ:

ಪ್ರಾಹುರ್ವಾಕ್ಸಂಯತಂ ವಿಪ್ರಂ ಧರ್ಮನೈಪುಣ್ಯದರ್ಶಿನಃ ।
ಮಿತ್ರೇಷು ಯಶ್ಚ ವಿಷಯಃ ಸ್ತೇನ ಇತ್ಯೇವ ತಂ ವಿದುಃ ॥೧೦॥

"ಧರ್ಮಶಾಸ್ತ್ರದಲ್ಲಿ ನಿಪುಣರಾದ ವಿದ್ವಾಂಸರು ಮಾತಿನಲ್ಲಿ ಸಂಯಮ (ಹಿಡಿತ) ವಿರುವವನನ್ನು ಬ್ರಾಹ್ಮಣನೆಂದು ಹೇಳುತ್ತಾರೆ. ಯಾವನು ಮಿತ್ರನ ವಿಷಯದಲ್ಲಿ ಪ್ರತಿಕೂಲವಾಗಿ ವ್ಯವಹರಿಸುವನೋ–ಅಂತಹವನನ್ನು ಚೋರನೆಂದೇ ವಿದ್ವಾಂಸರು ತಿಳಿಯುತ್ತಾರೆ.

ಸ ಭವಾನ್ಮಿತ್ರತಾಮದ್ಯ ಸಮ್ಪ್ರಾಪ್ತೋ ಮಮ ಪಾರ್ಥಿವ ।
ಸ ಮೇ ಬುದ್ಧಿಂ ಪ್ರಯಚ್ಛಸ್ವ ಸಮ್ಮತಾಂ ಪುರುಷರ್ಷಭ ॥೧೩॥

ಪೃಥ್ವೀನಾಥನೇ! ಪುರುಷಶ್ರೇಷ್ಠನೇ! ಈಗ ನೀನು ನನ್ನೊಡನೆ ಸ್ನೇಹಭಾವವನ್ನು ಹೊಂದಿರುವೆ. ಆದುದರಿಂದ ನೀನು ನನಗೆ ಒಳ್ಳೆಯ ಬುದ್ಧಿವಾದವನ್ನು ಹೇಳು.

ಅವಾಪ್ತಾರ್ಥೋಽಹಮದ್ಯೇಹ ಭವಾಂಶ್ಚ ಪುರುಷಾದಕಃ ।
ಭವತ್ಸಕಾಶಮಾಗನ್ತುಂ ಕ್ಷಮಂ ಮಮ ನ ವೇತಿ ವೈ ॥೧೪॥

ನಾನು ಇಲ್ಲಿಗೆ ಬಂದು ನನ್ನ ಮನೋರಥವನ್ನು ಈಡೇರಿಸಿಕೊಂಡಿದ್ದೇನೆ. ನೀನಾದರೋ ನರಭಕ್ಷಕನಾದ ರಾಕ್ಷಸನಾಗಿರುವೆ. ಈ ಪರಿಸ್ಥಿತಿಯಲ್ಲಿ ಪುನಃ ನಾನು ನಿನ್ನ ಬಳಿಗೆ ಬರುವುದು ಉಚಿತವೇ?”

ಸೌದಾಸ:

ಕ್ಷಮಂ ಚೇದಿಹ ವಕ್ತವ್ಯಂ ತವ ದ್ವಿಜವರೋತ್ತಮ ।
ಮತ್ಸಮೀಪಂ ದ್ವಿಜಶ್ರೇಷ್ಠ ನಾಗನ್ತವ್ಯಂ ಕಥಂಚನ ॥೧೫॥

“ದ್ವಿಜಶ್ರೇಷ್ಠನೇ! ನಾನು ಈ ವಿಷಯದಲ್ಲಿ ಸಮುಚಿತವಾದ ಮಾತನ್ನೇ ಹೇಳಬೇಕೆನ್ನುವುದಾದರೆ –ಹೀಗೆ ಹೇಳುತ್ತೇನೆ: ‘ದ್ವಿಜಶ್ರೇಷ್ಠನೇ! ನನ್ನ ಬಳಿಗೆ ಯಾವುದೇ ಕಾರಣದಿಂದಲೂ ನೀನು ಬರಬಾರದು.’

ಏವಂ ತವ ಪ್ರಪಶ್ಯಾಮಿ ಶ್ರೇಯೋ ಭೃಗುಕುಲೋದ್ವಹ ।
ಆಗಚ್ಛತೋ ಹಿ ತೇ ವಿಪ್ರ ಭವೇನ್ಮೃತ್ಯುರ್ನ ಸಂಶಯಃ ॥೧೬॥

ಭೃಗುಕುಲಾವತಂಸನೇ! ಹೀಗೆ ಮಾಡುವುದರಿಂದಲೇ (ನೀನು ಇಲ್ಲಿಗೆ ಬರದೇ ಇರುವುದರಿಂದಲೇ) ನಿನಗೆ ಶ್ರೇಯಸ್ಸುಂಟಾಗುವುದೆಂಬುದನ್ನು ನಾನು ಕಾಣುತ್ತಿದ್ದೇನೆ. ನೀನೇದರೂ ಇಲ್ಲಿಗೆ ಬಂದುದೇ ಆದರೆ ನೀನು ಮರಣಹೊಂದುವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಬುದ್ಧಿವಂತನಾದ ಸೌದಾಸನು ಉಚಿತವೂ ಹಿತಕರವೂ ಆದ ಮಾತನ್ನು ಹೇಳಿದನಂತರ ಉತ್ತಂಕನು ಅವನ ಅನುಜ್ಞೆ

ಯನ್ನು ಪಡೆದು ಅಹಲ್ಯೆಯಿದ್ದ ಆಶ್ರಮದ ಕಡೆಗೆ ಪ್ರಯಾಣಮಾಡಿದನು. ಗುರುಪತ್ನಿಗೆ ಪ್ರಿಯವನ್ನುಂಟುಮಾಡುವುದರಲ್ಲಿಯೇ ಅತ್ಯಂತಾಸಕ್ತನಾಗಿದ್ದ ಉತ್ತಂಕನು ದಿವ್ಯವಾದ ಆ ಎರಡು ಕರ್ಣಕುಂಡಲಗಳನ್ನೂ ತೆಗೆದುಕೊಂಡು ಬಹಳ ಶೀಘ್ರವಾಗಿ ಗೌತಮರ ಆಶ್ರಮದ ಕಡೆಗೆ ಹೋದನು. ರಾಣಿಯಾದ ಮದಯಂತಿಯು ಆ ಕರ್ಣಕುಂಡಲಗಳ ರಕ್ಷಣೆಯನ್ನು ಕುರಿತು ಯಾವ ವಿಧಿ-ವಿಧಾನಗಳನ್ನು ಹೇಳಿದ್ದಳೋ–ಅದೇ ರೀತಿಯಲ್ಲಿಯೇ ಕುಂಡಲಗಳನ್ನು ಕೃಷ್ಣಾಜಿನದಲ್ಲಿ ಭದ್ರವಾಗಿ ಕಟ್ಟಿ ತೆಗೆದು ಕೊಂಡುಹೋಗುತ್ತಿದ್ದನು. ಹೀಗೆ ಪ್ರಯಾಣಮಾಡುತ್ತಿರುವಾಗ ಉತ್ತಂಕನು ಹಸಿವಿನಿಂದ ಪೀಡಿತನಾದನು. ಆ ಸಮಯದಲ್ಲಿ ಫಲಭರಿತವಾಗಿದ್ದ ಒಂದು ಬಿಲ್ವದ ಮರವನ್ನು ನೋಡಿದನು. ಬ್ರಹ್ಮರ್ಷಿಯು ಹಣ್ಣುಗಳನ್ನು ಕೀಳಲು ಮರವನ್ನು ಹತ್ತಿ, ಒಂದು ರೆಂಬೆಗೆ ಕರ್ಣಕುಂಡಲಗಳಿದ್ದ ಕೃಷ್ಣಾಜಿನವನ್ನು ಬಿಗಿದನು. ಬಿಲ್ವಫಲಗಳನ್ನು ಯಥೇಚ್ಛ ವಾಗಿ ಕೆಳಕ್ಕೆ ಉದುರಿಸಿದನು. ಹೀಗೆ ಅವನು ವೃಕ್ಷದ ಎಲ್ಲೆಡೆಗಳಲ್ಲಿಯೂ ಇದ್ದ ಫಲಗಳನ್ನು ಉದುರಿಸುತ್ತಿದ್ದಾಗ ಅವನ ದೃಷ್ಟಿಯೆಲ್ಲವೂ ಫಲಗಳ ಕಡೆಗೇ ಇದ್ದಿತು. ಒಂದಾದಮೇಲೆ ಮತ್ತೊಂದನ್ನು ಉದುರಿಸುತ್ತಿದ್ದಾಗ ಕೆಲವು ಹಣ್ಣು ಗಳು ರೆಂಬೆಯೊಂದಕ್ಕೆ ಬಿಗಿದಿದ್ದ ಕುಂಡಲಗಳನ್ನೊಳಗೊಂಡ ಕೃಷ್ಣಾಜಿನದ ಮೇಲೂ ಬಿದ್ದುವು. ಹಣ್ಣುಗಳು ಬಿದ್ದ ರಭಸಕ್ಕೆ ಕುಂಡಲಗಳೊಡನೆ ಕೃಷ್ಣಾಜಿನವೂ ರೆಂಬೆಯಿಂದ ಕಳಚಿಕೊಂಡು ಬಹಳ ಬೇಗ ಕೆಳಕ್ಕೆ ಬಿದ್ದಿತು. ಕಟ್ಟುಬಿಚ್ಚಿಕೊಂಡು ಕೃಷ್ಣಾಜಿನವು ನೆಲದಮೇಲೆ ಬಿದ್ದುದನ್ನು ಐರಾವತನ ಕುಲ ದಲ್ಲಿ ಹುಟ್ಟಿದ್ದ ತಕ್ಷಕವೆಂಬ ಸರ್ಪವು ನೋಡಿತು. ಮರುಕ್ಷಣದಲ್ಲಿಯೇ ಅದು ಕೃಷ್ಣಾಜಿನದಲ್ಲಿದ್ದ ಕರ್ಣಕುಂಡಲಗಳನ್ನೂ ನೋಡಿತು. ಒಡನೆಯೇ ಅವು ಗಳನ್ನು ಬಾಯಿಯಿಂದ ಕಚ್ಚಿಕೊಂಡು ಬಹಳ ಶೀಘ್ರವಾಗಿ ಬಿಲದೊಳಗೆ ನುಸುಳಿತು. ಸರ್ಪವು ಕುಂಡಲಗಳನ್ನು ಅಪಹರಿಸಿಕೊಂಡು ಹೋಗುತ್ತಿರುವು ದನ್ನು ಮರದ ಮೇಲಿದ್ದ ಉತ್ತಂಕನು ನೋಡಿ ಉದ್ವೇಗಗೊಂಡು ನೆಲದಮೇಲೆ ಬಿದ್ದನು. ಆ ಸಮಯದಲ್ಲಿ ಅತ್ಯಂತಕೋಪಾವಿಷ್ಟನಾಗಿದ್ದ ಉತ್ತಂಕನು ದುಃಖದಿಂದ ಒಂದು ಕೋಲನ್ನು ತೆಗೆದುಕೊಂಡು ಸರ್ಪವು ನುಸುಳಿದ್ದ ಹುತ್ತವನ್ನು ಅಗೆಯತೊಡಗಿದನು. ಕೋಪದಿಂದಲೂ ಮತ್ತು ಅಸಹನೆಯಿಂದಲೂ ಪರಿತಪಿಸುತ್ತಿದ್ದ ಬ್ರಾಹ್ಮಣಶ್ರೇಷ್ಠನಾದ ಉತ್ತಂಕನು ಮೂವತ್ತೈದು ದಿವಸಗಳ ಪರ್ಯಂತವಾಗಿ ಏಕಾಗ್ರತೆಯಿಂದ ಆ ಹುತ್ತವನ್ನು

ಅಗೆಯುತ್ತಲೇ ಇದ್ದನು. ಸಹಿಸಲು ಅಸಾಧ್ಯವಾದ ಉತ್ತಂಕನ ವೇಗವನ್ನು ಭೂದೇವಿಯು ತಡೆದುಕೊಳ್ಳಲಾರದೇ ಹೋದಳು. ಮರದ ದೊಣ್ಣೆಯ ಪೆಟ್ಟಿನಿಂದ ಘಾಸಿಗೊಂಡ ಭೂಮಾತೆಯು ವ್ಯಾಕುಲಗೊಂಡು ನಡುಗತೊಡಗಿದಳು. ನಾಗಲೋಕಕ್ಕೇ ಮಾರ್ಗವನ್ನು ಕಲ್ಪಿಸಿಬಿಡಬೇಕೆಂದು ನಿಶ್ಚಯಿಸಿ ಉತ್ತಂಕನು ದಂಡದ ಮೂಲಕವಾಗಿ ಭೂಮಿಯನ್ನು ರಭಸದಿಂದ ಅಗೆಯುತ್ತಿರುವಾಗ ಮಹಾತೇಜಸ್ವಿಯಾದ, ವಜ್ರಪಾಣಿಯಾದ ಇಂದ್ರನು ಕುದುರೆಗಳನ್ನು ಹೂಡಿದ್ದ ರಥದಲ್ಲಿ ಕುಳಿತು ಉತ್ತಂಕನು ಭೂಮಿಯನ್ನು ಅಗೆಯುತ್ತಿದ್ದ ಅದೇ ಪ್ರದೇಶಕ್ಕೆ ಬಂದನು. ದ್ವಿಜಶ್ರೇಷ್ಠನಾದ ಉತ್ತಂಕನನ್ನು ನೋಡಿ ತಾನೂ ದುಃಖಿತನಾಗಿ ಬ್ರಾಹ್ಮಣನ ವೇಷವನ್ನು ಧರಿಸಿ ಅವನ ಬಳಿಗೆ ಹೋಗಿ ಹೇಳಿದನು: "ಉತ್ತಂಕ! ನೀನು ಈ ನಿನ್ನ ದೊಣ್ಣೆಯಿಂದ ಅಗೆದು ನಾಗಲೋಕಕ್ಕೆ ಮಾರ್ಗವನ್ನು ಮಾಡಲು ಸಾಧ್ಯವಿಲ್ಲ. ಇಲ್ಲಿಂದ ನಾಗಲೋಕಕ್ಕೆ ಸಾವಿರಾರು ಯೋಜನಗಳ ದೂರವಿದೆ. ಅಷ್ಟು ದೂರದ ಮಾರ್ಗವನ್ನು ಕಲ್ಪಿಸುವ ಈ ಕಾರ್ಯವು ಕಾಷ್ಠದಂಡದಿಂದ ಸಾಧ್ಯವಾಗುವುದೆಂದು ನಾನು ಭಾವಿಸುವುದಿಲ್ಲ. "

ಉತ್ತಂಕನು ಹೇಳುತ್ತಾನೆ:

"ಬ್ರಾಹ್ಮಣಶ್ರೇಷ್ಠನೇ! ಈ ಕಾಷ್ಠದಂಡದ ಮೂಲಕವಾಗಿಯೇ ಮಾರ್ಗವನ್ನು ಕಲ್ಪಿಸಿಕೊಂಡು ನಾಗಲೋಕಕ್ಕೆ ಹೋಗಿ ಕುಂಡಲಗಳನ್ನು ತರಲು ಸಾಧ್ಯವಾಗದಿದ್ದರೆ–ನೀನು ನೋಡುತ್ತಿರುವಂತೆಯೇ ಪ್ರಾಣಗಳನ್ನು ಬಿಟ್ಟುಬಿಡುತ್ತೇನೆ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಯಾವಾಗ ಇಂದ್ರನಿಗೆ ಉತ್ತಂಕನ ನಿಶ್ಚಯವನ್ನು ಬದಲಾಯಿಸಲು ಸಾಧ್ಯವಾಗಲಿಲ್ಲವೋ–ಆಗ ವಜ್ರಪಾಣಿಯಾದ ಇಂದ್ರನು ಕಾಷ್ಠದಂಡದೊಡನೆ ವಜ್ರಾಯುಧವನ್ನು ಸಂಯೋಜಿಸಿದನು. ಸತತವಾದ ವಜ್ರಾಯುಧಪ್ರಹಾರದಿಂದ ಸೀಳಲ್ಪಟ್ಟ ಭೂಮಿಯು ಬಹಳ ಬೇಗ ನಾಗಲೋಕಕ್ಕೆ ಹಾದಿಯನ್ನು ಮಾಡಿಕೊಟ್ಟಿತು. ಆ ಮಾರ್ಗದಲ್ಲಿಯೇ ಉತ್ತಂಕನು ನಾಗಲೋಕವನ್ನು ಪ್ರವೇಶಿಸಿ ಸಾವಿರ ಯೋಜನಗಳ ವಿಸ್ತೀರ್ಣವಿದ್ದ ನಾಗಲೋಕವನ್ನು ನೋಡಿದನು. ಆ ನಾಗಲೋಕವು ಸುವರ್ಣಮಯ

ವಾದ ಮಣಿ-ಮಾಣಿಕ್ಯಗಳಿಂದಲೂ, ಮುತ್ತುಗಳಿಂದಲೂ ಅಲಂಕರಿಸಲ್ಪಟ್ಟ ಪ್ರಾಕಾರಗಳ ಸಮೂಹಗಳಿಂದ ಕೂಡಿದ್ದಿತು. ಸ್ಫಟಿಕಮಯವಾದ ಸೋಪಾನಗಳಿಂದ ಕೂಡಿದ್ದ ಬಾವಿಗಳನ್ನೂ, ವಿಮಲವಾದ ನೀರಿನಿಂದ ಕೂಡಿದ್ದ ನದಿಗಳನ್ನೂ, ಪಕ್ಷಿಗಳ ಸಮೂಹಗಳಿಂದ ನಿಬಿಡವಾಗಿದ್ದ ಅನೇಕ ವೃಕ್ಷಗಳನ್ನೂ ಉತ್ತಂಕನು ಅಲ್ಲಿ ನೋಡಿದನು. ಭೃಗುಕುಲತಿಲಕನಾದ ಉತ್ತಂಕನು ಐದು ಯೋಜನಗಳಷ್ಟು ವಿಸ್ತಾರವಾಗಿಯೂ, ನೂರು ಯೋಜನಗಳಷ್ಟು ಉದ್ದವಾಗಿಯೂ ಇದ್ದ ನಾಗಲೋಕದ ಮಹಾದ್ವಾರವನ್ನು ನೋಡಿದನು. ಅಷ್ಟು ವಿಸ್ತಾರವಾಗಿದ್ದ ನಾಗಲೋಕವನ್ನು ನೋಡಿ ಕಳೆದು ಹೋದ ಮಣಿಯನ್ನು ಎಲ್ಲಿ ಹುಡುಕಬೇಕೆಂಬುದೇ ತಿಳಿಯದೇ ಉತ್ತಂಕನ ಉತ್ಸಾಹವೇ ಉಡುಗಿತು. ಕುಂಡಲಗಳನ್ನು ಪಡೆದುಕೊಳ್ಳುವುದರಲ್ಲಿ ಅವನಿಗೆ ನಿರಾಶೆಯೂ ಉಂಟಾಯಿತು. ಆ ಸಮಯಕ್ಕೆ ಸರಿಯಾಗಿ ಕಪ್ಪು ಮತ್ತು ಬಿಳಿಯ ಕೂದಲುಗಳುಳ್ಳ ಬಾಲದಿಂದಲೂ, ಕೆಂಪಾದ ಮುಖದಿಂದಲೂ ಮತ್ತು ಕಣ್ಣುಗಳಿಂದಲೂ ಕೂಡಿದ್ದ, ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವುದೋ ಎಂಬಂತೆ ಕಾಣಿಸುತ್ತಿದ್ದ ಒಂದು ಕುದುರೆಯು ಉತ್ತಂಕನ ಬಳಿಗೆ ಬಂದು ಅವನಿಗೆ ಹೇಳಿತು:

ಧಮಸ್ವಾಪಾನಮೇತನ್ಮೇ ತತಸ್ತ್ವಂ ವಿಪ್ರ ಲಪ್ಸ್ಯಸೇ ।
ಐರಾವತ ಸುತೇನೇಹ ತವಾನೀತೇ ಹಿ ಕುಣ್ಡಲೇ ॥೪೩॥

“ವಿಪ್ರಶ್ರೇಷ್ಠನೇ! ನನ್ನ ಅಪಾನಸ್ಥಳವನ್ನು ಗಟ್ಟಿಯಾಗಿ ಊದು. ಹೀಗೆ ಮಾಡುವುದರಿಂದ ಐರಾವತನಾಗನ ಮಗನು ತೆಗೆದುಕೊಂಡು ಹೋಗಿರುವ ನಿನ್ನ ಕುಂಡಲಗಳನ್ನು ನೀನು ಹಿಂದಕ್ಕೆ ಪಡೆದುಕೊಳ್ಳುವೆ. ನೀನು ಹೀಗೆ ಮಾಡಲು ಜುಗುಪ್ಸೆಪಟ್ಟುಕೊಳ್ಳಬೇಡ. ಗೌತಮರ ಆಶ್ರಮದಲ್ಲಿದ್ದಾಗ ನೀನು ಹಲವಾರು ಬಾರಿ ಹೀಗೆ ಮಾಡಿರುವೆ.”

ಉತ್ತಂಕ:

“ಅಶ್ವಶ್ರೇಷ್ಠನೇ! ಉಪಾಧ್ಯಾಯರ ಆಶ್ರಮದಲ್ಲಿ ನಾನು ಯಾವಾಗ ನಿನ್ನನ್ನು ನೋಡಿದ್ದೆನು? ನಿನ್ನ ಅಪಾನಸ್ಥಳವನ್ನು ನಾನು ಯಾವಾಗ ಊದಿದ್ದೆನು? ಈ ವಿಷಯವನ್ನು ತಿಳಿಯಲು ಬಯಸುತ್ತೇನೆ.

ಅಶ್ವವು ಹೇಳುತ್ತದೆ:

ಗುರೋರ್ಗುರಂ ಮಾಂ ಜಾನೀಹಿ ಜ್ವಲನಂ ಜಾತವೇದಸಮ್ ।
ತ್ವಯಾ ಹ್ಯಹಂ ಸದಾ ವಿಪ್ರ ಗುರೋರರ್ಥೇಽಭಿಪೂಜಿತಃ ॥೪೬॥

ವಿಧಿವತ್ಸತತಂ ವಿಪ್ರ ಶುಚಿನಾ ಭೃಗುನನ್ದನ ।
ತಸ್ಮಾಚ್ಛ್ರೇಯೋ ವಿಧಾಸ್ಯಾಮಿ ತವೈವಂ ಕುರು ಮಾ ಚಿರಮ್॥

“ಭೃಗುನಂದನನೇ! ವಿಪ್ರೋತ್ತಮನೇ! ನನ್ನನ್ನು ನಿನ್ನ ಗುರುವಿಗೂ ಗುರುವಾದ ಪ್ರಜ್ವಲಿಸುವ ಅಗ್ನಿಯೆಂದು ತಿಳಿ. ಗುರುವಿನ ಸಲುವಾಗಿ ಯಾವಾಗಲೂ ಶುಚಿಯಾಗಿರುತ್ತಾ ಹೋಮಾದಿಗಳಿಂದ ವಿಧಿಪೂರ್ವಕವಾಗಿ ನನ್ನನ್ನು ಸಂಪೂಜಿಸುತ್ತಿದ್ದೆ. ಆದುದರಿಂದ ನಿನಗೆ ಶ್ರೇಯಸ್ಸನ್ನು ಮಾಡುತ್ತೇನೆ. ನಾನು ಹೇಳಿದಂತೆ ಶೀಘ್ರವಾಗಿ ಮಾಡು.” ಅಶ್ವವು ಹೀಗೆ ಹೇಳಿದನಂತರ ಉತ್ತಂಕನು ಅದು ಹೇಳಿದಂತೆಯೇ ಮಾಡಿದನು. ತುಪ್ಪದಿಂದ ಯುಕ್ತವಾದ ಜ್ವಾಲೆಯುಳ್ಳ ಅಗ್ನಿಯು ಇದರಿಂದ ಸುಪ್ರೀತನಾಗಿ ನಾಗಲೋಕವನ್ನು ಸುಟ್ಟುಹಾಕುವ ಇಚ್ಛೆಯಿಂದ ಧಗ-ಧಗನೆ ಪ್ರಜ್ವಲಿಸತೊಡಗಿದನು. ಉತ್ತಂಕನು ಅಪಾನಸ್ಥಳದಲ್ಲಿ ಊದುತ್ತಿದ್ದಂತೆ ಕುದುರೆಯ ರೋಮಕೂಪಗಳಿಂದ ದಟ್ಟವಾದ ಹೊಗೆಯು ಹೊರಹೊಮ್ಮಿತು. ಆ ಅದ್ಭುತವಾದ ಹೊಗೆಯು ನಾಗಲೋಕಕ್ಕೆ ಭಯವನ್ನುಂಟುಮಾಡುತ್ತಿದ್ದಿತು. ಕ್ಷಣ-ಕ್ಷಣಕ್ಕೂ ಆ ಹೊಗೆಯು ಹೆಚ್ಚುತ್ತಲೇ ಇದ್ದುದರಿಂದ ನಾಗಲೋಕದ ಯಾವ ಭಾಗದಲ್ಲಿ ಏನಿದೆ?–ಎಂಬುದು ಯಾರಿಗೂ ತಿಳಿಯಲಿಲ್ಲ. ಸರ್ಪರಾಜನಾದ ಐರಾವತನ ಅರಮನೆಯ ಎಲ್ಲ ಕಡೆಗಳಿಂದಲೂ ಹಾಹಾಕಾರವು ಕೇಳಿಬರುತ್ತಿದ್ದಿತು. ಹೊಗೆಯಿಂದ ಆವರಿಸಲ್ಪಟ್ಟ ವಾಸುಕಿಪ್ರಮುಖರಾದ ನಾಗಗಳ ಅರಮನೆಗಳೊಂದೂ ಕಾಣುತ್ತಲೇ ಇರಲಿಲ್ಲ. ಮಂಜಿನಿಂದ ಮುಚ್ಚಲ್ಪಟ್ಟ ಅರಣ್ಯಗಳಂತೆಯೂ ಮತ್ತು ಪರ್ವತಗಳಂತೆಯೂ ಆ ಅರಮನೆಗಳು ಕಾಣುತ್ತಿದ್ದುವು. ಹೊಗೆಯು ತುಂಬಿಕೊಂಡು ಕೆಂಗಣ್ಣರಾಗಿದ್ದ, ಬೆಂಕಿಯ ಜ್ವಾಲೆಯಿಂದ ಪರಿತಪಿಸುತ್ತಿದ್ದ

ನಾಗಗಳೆಲ್ಲವೂ ಒಟ್ಟಾಗಿ ಸೇರಿ ಮಹಾತ್ಮನಾದ ಉತ್ತಂಕನ ನಿರ್ಧಾರವೇನೆಂಬುದನ್ನು ತಿಳಿದುಕೊಳ್ಳಲು ಅವನ ಬಳಿಗೆ ಬಂದುವು.

ಮಹಾತೇಜಸ್ವಿಯಾದ ಉತ್ತಂಕಮಹರ್ಷಿಯ ನಿರ್ಧಾರವೇನೆಂಬುದನ್ನು ತಿಳಿದು ಆ ಸರ್ಪಗಳೆಲ್ಲವೂ ಭ್ರಾಂತವಾದ ಮನಸ್ಸಿನಿಂದ ಕೂಡಿ ಉತ್ತಂಕನನ್ನು ಯಥೋಚಿತವಾಗಿ ಸತ್ಕರಿಸಿದುವು. ಮುದುಕರು, ಮಕ್ಕಳು ಮೊದಲ್ಗೊಂಡು ಎಲ್ಲ ಸರ್ಪಗಳೂ ತಲೆಬಾಗಿ ಉತ್ತಂಕನಿಗೆ ನಮಸ್ಕರಿಸಿ ಕೈಗಳನ್ನು ಜೋಡಿಸಿಕೊಂಡು 'ಪೂಜ್ಯನೇ! ಪ್ರಸನ್ನನಾಗು'–ಎಂದು ಕೇಳಿಕೊಂಡುವು. ಅರ್ಘ್ಯ-ಪಾದ್ಯಾದಿಗಳನ್ನಿತ್ತು ಯಥಾವಿಧಿಯಾಗಿ ಸತ್ಕರಿಸಿ ಅವನನ್ನು ಪ್ರಸನ್ನಗೊಳಿಸಿ ಪರಮಪೂಜಿತವಾದ ಮಣಿಕುಂಡಲಗಳನ್ನು ಉತ್ತಂಗನಿಗೆ ಒಪ್ಪಿಸಿದುವು. ಹೀಗೆ ಪ್ರತಾಪಶಾಲಿಯಾದ ಉತ್ತಂಕನು ಸರ್ಪಗಳಿಂದ ಪೂಜಿಸಲ್ಪಟ್ಟವನಾಗಿ, ಅಗ್ನಿಯನ್ನು ಪ್ರದಕ್ಷಿಣೆಮಾಡಿ ಗುರುಗಳ ಆಶ್ರಮದ ಕಡೆಗೆ ಪ್ರಯಾಣಮಾಡಿದನು.

ಜನಮೇಜಯ! ಉತ್ತಂಕನು ಬಹಳ ಬೇಗ ಗೌತಮರ ಆಶ್ರಮಕ್ಕೆ ಹೋಗಿ ದಿವ್ಯವಾದ ಮಣಿಕುಂಡಲಗಳನ್ನು ಅಹಲ್ಯೆಗೆ ಅರ್ಪಿಸಿದನು. ವಾಸುಕಿಪ್ರಮುಖರಾದ ನಾಗಗಳಿದ್ದ ನಾಗಲೋಕದಲ್ಲಿ ಏನೇನು ನಡೆಯಿತೆಂಬುದನ್ನು ದ್ವಿಜಶ್ರೇಷ್ಠನಾದ ಉತ್ತಂಕನು ಗುರುಗಳಾದ ಗೌತಮರಿಗೆ ಯಥಾವತ್ತಾಗಿ ಹೇಳಿದನು. ಜನಮೇಜಯ! ಹೀಗೆ ಮಹಾತ್ಮನಾದ ಉತ್ತಂಕನು ಮೂರು ಲೋಕಗಳನ್ನೂ ತಿರುಗಿ ದಿವ್ಯವಾದ ಮಣಿಕುಂಡಲಗಳನ್ನು ಗುರುಗಳಿಗಾಗಿ ತಂದನು. ಭರತರ್ಷಭನೇ! ಜನಮೇಜಯ! ಮಹತ್ತರವಾದ ತಪಸ್ಸಿನಿಂದ ಯುಕ್ತನಾಗಿದ್ದ ಉತ್ತಂಕಮುನಿಯು ಇಷ್ಟು ಪ್ರಭಾವಶಾಲಿಯಾಗಿದ್ದನು. ಉತ್ತಂಕನ ಮಹತ್ತ್ವದ ವಿಷಯವಾಗಿ ನೀನು ಪ್ರಶ್ನಿಸಿದುದುಕ್ಕೆ ಯಥಾವತ್ತಾಗಿ ಉತ್ತರಿಸಿರುವೆನು."

೫೮ನೆಯ ಅಧ್ಯಾಯವು ಮುಗಿಯಿತು.

೫೫ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನು ದ್ವಾರಕೆಗೆ ಹೋಗಿ ರೈವತಕಪರ್ವತದಲ್ಲಿ ನಡೆಯುತ್ತಿದ್ದ ಮಹೋತ್ಸವದಲ್ಲಿ ಭಾಗವಹಿಸಿದುದು

ಜನಮೇಜಯನು ಪ್ರಶ್ನಿಸುತ್ತಾನೆ:

ಉತ್ತಙ್ಕಸ್ಯ ವರಂ ದತ್ತ್ವಾ ಗೋವಿನ್ದೋ ದ್ವಿಜಸತ್ತಮ ।
ಅತ ಊರ್ಧ್ವಂ ಮಹಾಬಾಹುಃ ಕಿಂ ಚಕಾರ ಮಹಾಯಶಾಃ ॥೧॥

"ದ್ವಿಜಶ್ರೇಷ್ಠರಾದ ವೈಶಂಪಾಯನರೇ! ಮಹಾಬಾಹುವಾದ ಗೋವಿಂದನು ಉತ್ತಂಕನಿಗೆ, ಮರುಭೂಮಿಯಲ್ಲಿ ಅಪೇಕ್ಷಿಸಿದಾಗ ಉತ್ತಂಕವೆಂಬ ಹೆಸರಿನ ಮೋಡಗಳ ಮೂಲಕವಾಗಿ ನೀರು ಸಿಕ್ಕುವಂತೆ ವರವನ್ನು ಕೊಟ್ಟನಂತರ ಮುಂದೇನು ಮಾಡಿದನು? ದಯಮಾಡಿ ಹೇಳಿರಿ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಶ್ರೀಕೃಷ್ಣನು ಹೀಗೆ ಉತ್ತಂಕನಿಗೆ ವರಪ್ರದಾನಮಾಡಿ ಶೀಘ್ರವಾದ ವೇಗವುಳ್ಳ ಕುದುರೆಗಳಿಂದ ಯುಕ್ತವಾಗಿದ್ದ ರಥದಲ್ಲಿ ಕುಳಿತು ಸಾತ್ಯಕಿಯೊಡನೆ ದ್ವಾರಕೆಗೆ ಹೋದನು. ಹಾದಿಯಲ್ಲಿ ಸಿಕ್ಕಿದ ಸರೋವರಗಳನ್ನೂ, ನದಿಗಳನ್ನೂ, ಅರಣ್ಯಗಳನ್ನೂ, ಗಿರಿ-ಪರ್ವತಗಳನ್ನೂ ದಾಟಿಕೊಂಡು ಶ್ರೀಕೃಷ್ಣನು ಸಾತ್ಯಕಿಯೊಡನೆ ದ್ವಾರಕಾಪಟ್ಟಣವನ್ನು ಸೇರಿದನು. ಶ್ರೀಕೃಷ್ಣನು ದ್ವಾರಕೆಗೆ ಹೋದ ಆ ಸಮಯದಲ್ಲಿ ರೈವತಕಪರ್ವತದಲ್ಲಿ ಒಂದು ಉತ್ಸವಸಮಾರಂಭವು ನಡೆಯುತ್ತಿದ್ದಿತು. ಪುಂಡರೀಕಾಕ್ಷನು ಸಾತ್ಯಕಿಯೊಡನೆ ಅಲ್ಲಿಗೇ ಹೋದನು.

ಆ ಸಮಯದಲ್ಲಿ ರೈವತಕಪರ್ವತವು ನಾನಾವಿಧವಾದ ಆಕಾರಗಳುಳ್ಳ, ಚಿತ್ರಿತವಾದ, ಸುವರ್ಣಮಯವಾದ ಡೇರೆಗಳಿಂದ ಸಮಾವೃತವಾಗಿದ್ದು ಶೋಭಾಯಮಾನವಾಗಿದ್ದಿತು. ರೈವತಕಪರ್ವತವನ್ನು ಶ್ರೇಷ್ಠವಾದ ಮತ್ತು ಸುವರ್ಣಮಯವಾದ ಹಾರಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ವಸ್ತ್ರಗಳಿಂದಲೂ ಅಲಂಕರಿಸಿದ್ದರು. ಆ ಪರ್ವತವು ಕಲ್ಪವೃಕ್ಷಗಳಿಂದಲೂ ಆವರಿಸಲ್ಪಟ್ಟಿದ್ದಿತು. ಸುವರ್ಣಮಯವಾದ ದೀಪವೃಕ್ಷಗಳಿಂದ ನಿರಂತರವಾಗಿ ಪರಿಶೋಭಿಸುತ್ತಿದ್ದುದರಿಂದ ಆ ಪರ್ವತದ

ಗುಹೆಗಳಲ್ಲಿ ಮತ್ತು ಚಿಲುಮೆಗಳಿದ್ದ ಪ್ರದೇಶಗಳಲ್ಲಿ ಸದಾ ಹಗಲಾಗಿರುವಂತೆಯೇ ಕಾಣುತ್ತಿದ್ದಿತು. ಘಂಟೆಗಳಿಂದ ಕೂಡಿ ಸುತ್ತಲೂ ಹಾರಾಡುತ್ತಿದ್ದ ವಿಚಿತ್ರವಾದ ಪತಾಕೆಗಳಿಂದಲೂ, ಸ್ತ್ರೀಯರು ಮತ್ತು ಪುರುಷರು ಉಚ್ಚರಿಸುತ್ತಿದ್ದ ಸುಮಧುರಶಬ್ದಗಳಿಂದಲೂ ಕೂಡಿದ್ದ ಆ ಪರ್ವತವು ಸಂಗೀತಮಯವಾಗಿರುವಂತೆಯೇ ಕಾಣುತ್ತಿದ್ದಿತು. ಮೇರುಪರ್ವತವು ಮುನಿಗಳಿಗೆ ಪ್ರೇಕ್ಷಣೀಯಸ್ಥಳವಾಗಿರುವಂತೆ–ದ್ವಾರಕಾವಾಸಿಗಳಾದ ಜನರಿಗೆ ರೈವತಕಪರ್ವತವು ಅತ್ಯಂತ ಪ್ರೇಕ್ಷಣೀಯಸ್ಥಳವಾಗಿದ್ದಿತು. ಶ್ರೇಷ್ಠವಾದ ಆ ಪರ್ವತದ ಶಿಖರದಲ್ಲಿ ಗಾನಮಾಡುತ್ತಿದ್ದ ಹರ್ಷೋನ್ಮತ್ತರಾಗಿದ್ದ ಸ್ತ್ರೀ-ಪುರುಷರ ನಿನಾದವು ಆಕಾಶವನ್ನೇ ವ್ಯಾಪಿಸಿರುವುದೋ ಎಂಬಂತೆ ಕಾಣುತ್ತಿದ್ದಿತು. ಕ್ರೀಡಾವಿಹಾರಗಳಲ್ಲಿಯೇ ಆಸಕ್ತರಾಗಿ ಇತರ ಕಾರ್ಯಗಳಲ್ಲಿ ಅನಾಸಕ್ತರಾಗಿದ್ದ ಜನರ ಶಬ್ದಗಳಿಂದಲೂ, ಹರ್ಷದಿಂದ ಮದಿಸಿ ನಗುತ್ತಿದ್ದವರ ಶಬ್ದಗಳಿಂದಲೂ, ಮದ್ಯಾದಿಗಳನ್ನು ಕುಡಿದು ಪ್ರಮತ್ತರಾದವರ ಅಸ್ತವ್ಯಸ್ತವಾದ ಮಾತುಗಳ ಶಬ್ದಗಳಿಂದಲೂ, ಪರಸ್ಪರಸೆಣೆಸಾಟದ ಶಬ್ದಗಳಿಂದಲೂ, ಕಿಲ-ಕಿಲಾಶಬ್ದಗಳಿಂದಲೂ ಕೂಡಿದ್ದ ಆ ಪರ್ವತವು ಮನೋಹರವಾಗಿ ಕಾಣುತ್ತಿದ್ದಿತು. ಆ ರೈವತಕಪರ್ವತದ ಮೇಲೆ ನಡೆಯುತ್ತಿದ್ದ ಮಹೋತ್ಸವವು ಪರಮಕಲ್ಯಾಣಮಯವಾಗಿ ಕಾಣುತ್ತಿದ್ದಿತು. ಆ ಮಹೋತ್ಸವವು ಅಂಗಡಿಗಳಿಂದಲೂ, ಮುಂಗಟ್ಟುಗಳಿಂದಲೂ ತುಂಬಿ ರಮ್ಯವಾಗಿದ್ದಿತು. ಅಲ್ಲಿ ಭಕ್ಷ್ಯ-ಭೋಜ್ಯಾದಿಗಳು ಯಥೇಚ್ಛವಾಗಿದ್ದುವು. ವಸ್ತ್ರಗಳೂ, ಮಾಲಿಕೆಗಳೂ ರಾಶಿ-ರಾಶಿಯಾಗಿ ಬಿದ್ದಿದ್ದುವು. ವೀಣೆ ಮತ್ತು ಮೃದಂಗಗಳ ವಾದನವಾಗುತ್ತಿದ್ದಿತು. ಸುರಾ-ಮೈರೇಯಮಿಶ್ರವಾದ ಭಕ್ಷ್ಯ-ಭೋಜ್ಯಗಳನ್ನು ದೀನರಿಗೂ, ಕುರುಡರಿಗೂ, ಕೃಪಣರಿಗೂ ನಿರಂತರವಾಗಿ ಕೊಡುತ್ತಿದ್ದುದರಿಂದ ಆ ಉತ್ಸವವು ಮತ್ತಷ್ಟು ಶೋಭಾಯಮಾನವಾಗಿ ಕಾಣುತ್ತಿದ್ದಿತು.

ಆ ಪರ್ವತದಲ್ಲಿ ಪುಣ್ಯಕಾರ್ಯಗಳ ಅನುಷ್ಠಾನಕ್ಕಾಗಿ ನಿರ್ಮಿಸಿದ್ದ ಮನೆಗಳಲ್ಲಿಯೂ ಆಶ್ರಮಗಳಲ್ಲಿಯೂ ಪುಣ್ಯಾತ್ಮರು ವಾಸಮಾಡುತ್ತಿದ್ದರು. ರೈವತಕಪರ್ವತದಲ್ಲಿ ನಡೆಯುತ್ತಿದ್ದ ಆ ಮಹೋತ್ಸವದಲ್ಲಿ ವೃಷ್ಣಿವೀರರಿಗೆ ವಿಹಾರಸ್ಥಾನಗಳು ನಿರ್ಮಿತವಾಗಿದ್ದುವು. ಬಹುಸಂಖ್ಯಾತವಾದ ಮನೆಗಳಿಂದ ವ್ಯಾಪ್ತವಾಗಿದ್ದ ಆ ಪರ್ವತವು ದೇವಲೋಕದಂತೆಯೇ ಪ್ರಕಾಶಿಸುತ್ತಿದ್ದಿತು. ಆ ಸಮಯದಲ್ಲಿ ಶ್ರೀಕೃಷ್ಣನ ಸಾನ್ನಿಧ್ಯವನ್ನು ಹೊಂದಿದ್ದ ಆ

ರೈವತಕಪರ್ವತವು ಇಂದ್ರನ ಅರಮನೆಯಂತೆಯೇ ದೇದೀಪ್ಯಮಾನವಾಗಿ ಬೆಳಗಿತು. ವೃಷ್ಣಿಗಳೆಲ್ಲರಿಂದಲೂ ಸಮ್ಮಾನಿತನಾದ ಶ್ರೀಕೃಷ್ಣನು ತನ್ನ ಸುಂದರವಾದ ಅರಮನೆಯನ್ನು ಪ್ರವೇಶಿಸಿದನು. ಅಂತೆಯೇ ಸಾತ್ಯಕಿಯೂ ತನ್ನ ಅರಮನೆಗೆ ಹೋದನು. ಇಂದ್ರನು ದಾನವರ ವಿಷಯದಲ್ಲಿ ಪರಾಕ್ರಮವನ್ನು ತೋರಿ ವಿಜಯಿಯಾಗಿ ಹಿಂದಿರುಗುತ್ತಿದ್ದಂತೆ–ಶ್ರೀಕೃಷ್ಣನೂ ದುಷ್ಕರವಾದ ಕರ್ಮವನ್ನು ಮಾಡಿ (ಪಾಂಡವರ ಮೂಲಕ ದುರ್ಯೋಧನಾದಿಗಳನ್ನು ಜಯಿಸಿ) ಅತಿದೀರ್ಘವಾದ ಪ್ರವಾಸಾನಂತರ ಸಂತುಷ್ಟಹೃದಯನಾಗಿ ತನ್ನ ಅರಮನೆಯನ್ನು ಪ್ರವೇಶಿಸಿದನು. ವಿಜಯಿಯಾಗಿ ಬಂದ ದೇವೇಂದ್ರನನ್ನು ದೇವತೆಗಳು ಮುಂದೆ ಹೋಗಿ ಸ್ವಾಗತಿಸುವಂತೆ–ದೀರ್ಘಕಾಲದ ಜೈತ್ರಯಾತ್ರೆಯಿಂದ ಆಗಮಿಸಿದ ಶ್ರೀಕೃಷ್ಣನನ್ನು ಭೋಜರು, ವೃಷ್ಣಿಗಳು ಮತ್ತು ಅಂಧಕರು –ಇವರೇ ಮೊದಲಾದ ಎಲ್ಲ ಯಾದವಶ್ರೇಷ್ಠರೂ ಮುನ್ನಡೆದು ಸ್ವಾಗತಿಸಿದರು. ಮೇಧಾವಿಯಾದ ಶ್ರೀಕೃಷ್ಣನು ತನಗೆ ಹಾರ್ದಿಕವಾದ ಸ್ವಾಗತವನ್ನಿತ್ತವರೆಲ್ಲರನ್ನೂ ಯಥೋಚಿತವಾಗಿ ಅಭಿನಂದಿಸಿ ಅವರ ಕುಶಲಪ್ರಶ್ನೆಗಳನ್ನು ಕೇಳಿದ ಬಳಿಕ ತಂದೆ-ತಾಯಿಗಳನ್ನು ನೋಡಿ ಪರಮಪ್ರೀತನಾಗಿ ಅವರಿಗೆ ಅಭಿವಾದನ ಪೂರ್ವಕವಾಗಿ ನಮಸ್ಕರಿಸಿದನು. ತಂದೆ-ತಾಯಿಗಳಿಬ್ಬರೂ ಮಹಾಭುಜನಾದ ಶ್ರೀಕೃಷ್ಣನನ್ನು ತಬ್ಬಿಕೊಂಡು ಸಂತೈಸಿದರು. ತಂದೆ-ತಾಯಿಗಳ ಸಮೀಪದಲ್ಲಿ ಕುಳಿತ ಶ್ರೀಕೃಷ್ಣನನ್ನು ಸುತ್ತುವರಿದು ವೃಷ್ಣಿವೀರರೆಲ್ಲರೂ ಕುಳಿತುಕೊಂಡರು. ಬಳಿಕ ಶ್ರೀಕೃಷ್ಣನು ತಂದೆಯ ಅನುಮತಿಯನ್ನು ಪಡೆದು ಕೈಕಾಲುಗಳನ್ನು ತೊಳೆದುಕೊಂಡು ಸ್ವಲ್ಪಹೊತ್ತು ವಿಶ್ರಮಿಸಿಕೊಂಡನು. ಅನಂತರ ತಂದೆಯು ಪ್ರಶ್ನಿಸಲಾಗಿ ಮಹಾಯುದ್ಧದ ಎಲ್ಲ ಘಟನೆಗಳನ್ನೂ ಹೇಳತೊಡಗಿದನು.”

೫೯ನೆಯ ಅಧ್ಯಾಯವು ಮುಗಿಯಿತು.

ವಸುದೇವನ ಕೋರಿಕೆಯಂತೆ ಶ್ರೀಕೃಷ್ಣನು ಮಹಾಭಾರತ ಯುದ್ಧಪ್ರಸಂಗವನ್ನು ಸಂಕ್ಷೇಪವಾಗಿ ವಿವರಿಸಿದುದು

ಜನಮೇಜಯ! ವಸುದೇವನು ಹೇಳುತ್ತಾನೆ:

ಶ್ರುತವಾನಸ್ಮಿ ವಾರ್ಷ್ಣೇಯ ಸಂಗ್ರಾಮಂ ಪರಮಾದ್ಭುತಮ್ ।
ನರಾಣಾಂ ವದತಾಂ ತತ್ರ ಕಥಂ ವಾ ತೇಷು ನಿತ್ಯಶಃ ॥೧॥

"ವೃಷ್ಣಿಕುಮಾರನೇ! ಮಹಾಭಾರತಯುದ್ಧವು ಪರಮಾದ್ಭುತವಾಗಿತ್ತೆಂದು ಜನರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದುದನ್ನು ನಾನೂ ಕೇಳಿರುವೆನು. ಪಾಂಡವ-ಕೌರವರ ನಡುವೆ ಅನುದಿನವೂ ಯುದ್ಧವು ಹೇಗೆ ನಡೆಯುತ್ತಿದ್ದಿತು?–ಎಂಬುದನ್ನು ಹೇಳು. ಮಹಾಭುಜನೇ! ದೋಷರಹಿತನೇ! ನೀನು ಯುದ್ಧದ ಪ್ರತ್ಯಕ್ಷದರ್ಶಿಯಾಗಿದ್ದೆ. ಮೇಲಾಗಿ ನೀನು ಅದರ ಸ್ವರೂಪವನ್ನೂ ತಿಳಿದವನು. ಆದುದರಿಂದ ಯುದ್ಧವು ಹೇಗೆ ನಡೆಯಿತೆಂಬುದನ್ನು ಯಥಾವತ್ತಾಗಿ ಹೇಳು. ಮಹಾತ್ಮರಾದ ಪಾಂಡವರೊಡನೆ ಭೀಷ್ಮ-ದ್ರೋಣ-ಕರ್ಣ-ಕೃಪ-ಶಲ್ಯಾದಿಗಳ ಪರಮಶ್ರೇಷ್ಠವಾದ ಯುದ್ಧವು ಹೇಗೆ ನಡೆಯಿತು? ನಾನಾದೇಶದ ನಿವಾಸಿಗಳಾದ, ನಾನಾವಿಧವಾದ ವೇಷ-ಭೂಷಣಗಳನ್ನು ಧರಿಸಿದ್ದ, ನಾನಾಪ್ರಕಾರವಾದ ಆಕೃತಿಯುಳ್ಳವರಾಗಿದ್ದ, ಅಸ್ತ್ರವಿದ್ಯಾಕುಶಲರಾದ, ಬಹುಸಂಖ್ಯಾತರಾದ, ಪಾಂಡವರ ಕಡೆಗೂ ಮತ್ತು ಕೌರವರ ಕಡೆಗೂ ಸೇರಿಕೊಂಡು ಯುದ್ಧಮಾಡುತ್ತಿದ್ದ ಕ್ಷತ್ರಿಯರ ನಡುವೆ ಯುದ್ಧವು ಹೇಗೆ ನಡೆಯಿತು?–ಈ ಎಲ್ಲ ವಿಷಯಗಳನ್ನೂ ವಿಶದವಾಗಿ ಹೇಳು "

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ತಂದೆಯಾದ ವಸುದೇವನು ಹೀಗೆ ಪ್ರಶ್ನಿಸಲಾಗಿ, ತಾಯಿಯ ಬಳಿಯಲ್ಲಿಯೇ ಕುಳಿತಿದ್ದ ಪುಂಡರೀಕಾಕ್ಷನಾದ ಶ್ರೀಕೃಷ್ಣನು ಯುದ್ಧದಲ್ಲಿ ಕೌರವರ ನಿಧನವು ಹೇಗಾಯಿತೆಂಬುದನ್ನು ಹೇಳತೊಡಗಿದನು:

"ತಂದೆಯೇ! ಆ ಮಹಾಯುದ್ಧದಲ್ಲಿ ಮಹಾತ್ಮರಾದ ಕ್ಷತ್ರಿಯರು

ತೋರಿದ ಸಾಹಸಕರ್ಮವು ಪರಮಾದ್ಭುತವಾಗಿದ್ದಿತು. ಅಂತಹ ಸಾಹಸಕರ್ಮಗಳು ಅಸಂಖ್ಯಾತವಾದುದರಿಂದ ನೂರು ವರ್ಷಗಳು ಸತತವಾಗಿ ಹೇಳಿದರೂ ಅವುಗಳನ್ನು ಹೇಳಿ ಮುಗಿಸಲು ಸಾಧ್ಯವಾಗುವುದಿಲ್ಲ. ದೇವತೆಗಳ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿರುವವನೇ! ನಾನು ಮುಖ್ಯ-ಮುಖ್ಯಘಟನೆಗಳನ್ನು ಮಾತ್ರ ಸಂಕ್ಷೇಪವಾಗಿ ಹೇಳುತ್ತೇನೆ. ಪೃಥವೀಪಾಲರ ಸಾಹಸಕರ್ಮಗಳನ್ನು ಯಥಾವತ್ತಾಗಿ ಕೇಳು.

ಇಂದ್ರನು ದೇವತೆಗಳ ನಾಯಕನಾಗಿರುವಂತೆ–ಕುರುಶ್ರೇಷ್ಠನಾದ, ಹನ್ನೊಂದು ಅಕ್ಷೌಹಿಣೀಸೈನ್ಯಕ್ಕೂ ಒಡೆಯನಾದ ಭೀಷ್ಮನು, ಕೌರವಸೈನ್ಯಕ್ಕೆ ಮೊದಲನೆಯ ದಂಡನಾಯಕನಾದನು. ಏಳು ಅಕ್ಷೌಹಿಣೀಸೈನ್ಯಕ್ಕೆ ಒಡೆಯನಾಗಿದ್ದ ಶಿಖಂಡಿಯು ಪಾಂಡವರಿಗೆ ನಾಯಕನಾಗಿದ್ದನು. ಬುದ್ಧಿವಂತನಾದ ಶಿಖಂಡಿಯನ್ನು ಶ್ರೀಮಂತನಾದ ಅರ್ಜುನನು ಯುದ್ಧದಲ್ಲಿ ರಕ್ಷಿಸುತ್ತಿದ್ದನು. ಭೀಷ್ಮನು ಸೇನಾಪತಿಯಾಗಿದ್ದಾಗ ಮಹಾತ್ಮರಾದ ಪಾಂಡವ-ಕೌರವರಿಗೆ ರೋಮಾಂಚಕಾರಿಯಾದ ಯುದ್ಧವು ಹತ್ತು ದಿವಸಗಳವರೆಗೆ ನಡೆಯಿತು.*ಮಹಾಸಂಗ್ರಾಮಭೂಮಿಯಲ್ಲಿ ಯುದ್ಧಮಾಡುತ್ತಿದ್ದ ಗಂಗಾಪುತ್ರನಾದ ಭೀಷ್ಮನನ್ನು ಶಿಖಂಡಿಯು ಅರ್ಜುನನೊಡನೆ ಅನೇಕ ಬಾಣಗಳಿಂದ ಪ್ರಹರಿಸಿದನು. ಬಾಣಗಳ ಪ್ರಹಾರದಿಂದ ಭೀಷ್ಮನಿಗೆ ಪ್ರಾಣೋತ್ಕ್ರಮಣಾವಸ್ಥೆಯು ಸನ್ನಿಹಿತವಾಗಿದ್ದರೂ ಸ್ವೇಚ್ಛಾಮರಣಿಯಾದ ಭೀಷ್ಮನು ಬಾಣಗಳ ಹಾಸಿಗೆಯಲ್ಲಿ ಮಲಗಿ ದಕ್ಷಿಣಾಯನವು ಕಳೆದು ಉತ್ತರಾಯಣವು ಬಂದನಂತರ ಅದು ತನ್ನ ಅಂತ್ಯಕಾಲವೆಂಬುದನ್ನು ನಿಶ್ಚಯಿಸಿಕೊಂಡನು.

ಹೀಗೆ ಭೀಷ್ಮನು ಅವಸಾನಹೊಂದಿದ ಬಳಿಕ–ದೈತ್ಯಪತಿಯಾದ ಬಲಿಗೆ

---

*ಮಹಾಭಾರತದ ಯುದ್ಧದಲ್ಲಿ ಮೊದಲಿನಿಂದ ಕಡೆಯವರಿಗೂ ಧೃಷ್ಟದ್ಯುಮ್ನನೇ ಪಾಂಡವರ ಏಕಮಾತ್ರದಂಡನಾಯಕನಾಗಿದ್ದನು. ಆದರೆ ಭೀಷ್ಮನನ್ನು ಸಂಹರಿಸಲು ಶಿಖಂಡಿಯನ್ನು ಭೀಷ್ಮನಿಗೆ ಎದುರಾಗಿ ನಿಲ್ಲಿಸುತ್ತಾರೆ. ಶಿಖಂಡಿಯಿಂದ ಭೀಷ್ಮನ ವಧೆಯಾದುದರಿಂದ ಈ ಪ್ರಸಂಗದಲ್ಲಿ ಕೃಷ್ಣನು ಶಿಖಂಡಿಯೇ ಪಾಂಡವರ ನಾಯಕನಾಗಿದ್ದನೆಂದು ಹೇಳುತ್ತಾನೆ.

ಶುಕ್ರಾಚಾರ್ಯರು ಮಾರ್ಗದರ್ಶಕರಾಗಿರುವಂತೆ–ಮಹಾವೀರರಾದ, ಅಸ್ತ್ರವಿದ್ಯೆಯನ್ನು ತಿಳಿದವರಲ್ಲಿ ಶ್ರೇಷ್ಠರಾದ ಆಚಾರ್ಯ ದ್ರೋಣರು ಕೌರವೇಂದ್ರನಾದ ದುರ್ಯೋಧನನಿಗೆ ಸೇನಾಪತಿಗಳಾದರು. ಯುದ್ಧ ಪ್ರಶಂಸಕರಾದ ದ್ರೋಣರು ಅಳಿದುಳಿದಿದ್ದ ಒಂಬತ್ತು ಅಕ್ಷೌಹಿಣೀ ಸೇನೆ ಯಿಂದ ಪರಿವೃತರಾಗಿ ಕೃಪ-ಕರ್ಣಾದಿಗಳಿಂದ ರಕ್ಷಿಸಲ್ಪಡುತ್ತಿದ್ದರು. ಆ ಸಮಯದಲ್ಲಿ ಮಹಾಸ್ತ್ರಗಳನ್ನು ತಿಳಿದಿದ್ದ ಧೃಷ್ಟದ್ಯುಮ್ನನು ಪಾಂಡವರ ನಾಯಕನಾಗಿದ್ದನು. ಮಿತ್ರನು ವರುಣನನ್ನು ರಕ್ಷಿಸುವಂತೆ–ಭೀಮಸೇನನು ಮೇಧಾವಿಯಾದ ಧೃಷ್ಟದ್ಯುಮ್ನನನ್ನು ರಕ್ಷಿಸುತ್ತಿದ್ದನು. ಪಾಂಡವರ ಸೈನ್ಯದಿಂದ ಪರಿವೃತರಾಗಿದ್ದ, ಮಹಾತ್ಮರಾದ ದ್ರೋಣರನ್ನು ಸೆರೆಹಿಡಿಯಲು ಬಯಸಿದ್ದ ಧೃಷ್ಟದ್ಯುಮ್ನನು –ತನ್ನ ತಂದೆಯಾದ ದ್ರುಪದನಿಗೆ ಮಾಡಿದ ಅಪಮಾನವನ್ನು ಸ್ಮರಿಸಿ–ಯುದ್ಧದಲ್ಲಿ ಮಹಾಪರಾಕ್ರಮವನ್ನು ಪ್ರದರ್ಶಿಸಿದನು.

ಧೃಷ್ಟದ್ಯುಮ್ನನಿಗೂ ಮತ್ತು ದ್ರೋಣರಿಗೂ ನಡೆದ ಆ ಸಂಗ್ರಾಮದಲ್ಲಿ ನಾನಾದಿಕ್ಕುಗಳಿಂದ (ನಾನಾದೇಶಗಳಿಂದ)ಆಗಮಿಸಿದ್ದ ವೀರರಾದ ರಾಜ ರೆಲ್ಲರೂ ಪ್ರಾಯಶಃ ನಿಧನಹೊಂದಿದರು. ದ್ರೋಣರು ಕೌರವಸೈನ್ಯದ ದಂಡನಾಯಕತ್ವವನ್ನು ವಹಿಸಿದನಂತರ ಐದು ದಿವಸಗಳವರೆಗೆ ಪರಮ ಘೋರವಾದ ಮಹಾಯುದ್ಧವು ನಡೆಯಿತು. ಆ ಬಳಿಕ ದ್ರೋಣರು ಆಯಾಸಗೊಂಡು ಧೃಷ್ಟದ್ಯುಮ್ನನ ವಶರಾದರು. (ಧೃಷ್ಟದ್ಯುಮ್ನನಿಂದ ಮರಣ ಹೊಂದಿದರು.) ದ್ರೋಣರು ಮರಣಹೊಂದಿದನಂತರ ದುರ್ಯೋಧನನ ಸೈನ್ಯಕ್ಕೆ ಕರ್ಣನು ಸೇನಾಪತಿಯಾದನು. ಕರ್ಣನು ಕೌರವರ ಬಳಿ ಉಳಿದಿದ್ದ ಐದು ಅಕ್ಷೌಹಿಣೀಸೈನ್ಯದಿಂದ ಪರಿವೃತನಾಗಿ ಯುದ್ಧಮಾಡುತ್ತಿದ್ದನು.

ಪಾಂಡವರ ಕಡೆಯಲ್ಲಿ ಆಗ ಮೂರು ಅಕ್ಷೌಹಿಣೀಸೈನ್ಯವು ಮಾತ್ರವೇ ಉಳಿದಿದ್ದಿತು. ಅದನ್ನು ಅರ್ಜುನನು ರಕ್ಷಿಸುತ್ತಿದ್ದನು. ಆ ವೇಳೆಗೆ ಅನೇಕ ಪ್ರಮುಖವೀರರೆಲ್ಲರೂ ಹತರಾಗಿದ್ದರು. ಉಳಿದವರು ಕೆಚ್ಚಿನಿಂದಲೇ

ಯುದ್ಧಸನ್ನದ್ಧರಾಗುತ್ತಿದ್ದರು. ದುರ್ಯೋಧನನ ದಂಡನಾಯಕತ್ವವನ್ನು ವಹಿಸಿದ ಎರಡನೆಯ ದಿನ ಶತ್ರುಭಯಂಕರನಾಗಿದ್ದ ಕರ್ಣನು –ಪತಂಗದ ಹುಳುವು ಬೆಂಕಿಯ ಬಳಿಗೆ ಹೋಗಿ ವಿನಾಶಹೊಂದುವಂತೆ– ಅರ್ಜುನನೊಡನೆ ಯುದ್ಧಮಾಡಲು ಹೋಗಿ ಮರಣಹೊಂದಿದನು. ಕರ್ಣನು ನಿಧನಹೊಂದಿದನಂತರ ದುರ್ಯೋಧನಾದಿ ಕೌರವರು ನಿರುತ್ಸಾಹರೂ ನಿಸ್ತೇಜರೂ ಆದರು. ಕರ್ಣನನಂತರ ದುರ್ಯೋಧನನು ಮದ್ರೇಶನಾದ ಶಲ್ಯನಿಗೆ ಸೇನಾಪತಿಯ ಪಟ್ಟಗಟ್ಟಿದನು. ಕೌರವರು ಮೂರು ಅಕ್ಷೌಹಿಣೀಸೈನ್ಯದೊಂದಿಗೆ ಸೇನಾಪತಿಯಾದ ಶಲ್ಯನನ್ನು ಸುತ್ತುವರಿದು ನಿಂತರು. ಇತ್ತಕಡೆ ಪಾಂಡವರು ಕೂಡ ಅಸಂಖ್ಯಾತವಾಹನಗಳನ್ನು (ಸೈನ್ಯವನ್ನು) ಕಳೆದುಕೊಂಡಿದ್ದು ಯುದ್ಧದಲ್ಲಿಯೇ ನಿರುತ್ಸಾಹಿಗಳಾಗಿದ್ದರು. ತಮ್ಮ ಕಡೆಯಲ್ಲಿ ಉಳಿದಿದ್ದ ಒಂದು ಅಕ್ಷೌಹಿಣೀಸೈನ್ಯದೊಡನೆ ಯುಧಿಷ್ಠಿರನನ್ನು ಸುತ್ತುವರಿದು ನಿಂತರು. ಆ ಸಮಯದಲ್ಲಿ ನಡೆದ ಅರ್ಧದಿವಸದ ಯುದ್ಧದಲ್ಲಿ ಕುರುರಾಜನಾದ ಯುಧಿಷ್ಠಿರನು ದುಷ್ಕರವಾದ ಪರಾಕ್ರಮವನ್ನು ತೋರುತ್ತಾ ಮದ್ರರಾಜನಾದ ಶಲ್ಯನನ್ನು ಸಂಹರಿಸಿದನು.

ಶಲ್ಯನು ಮರಣಹೊಂದಿದನಂತರ ಮಹಾಪರಾಕ್ರಮಿಯಾದ ಮತ್ತು ಮಹಾತ್ಮನಾದ ಸಹದೇವನು, ಭಾರತದ ಆ ಮಹಾಯುದ್ಧಕ್ಕೆ ಮೂಲಕಾರಣನಾಗಿದ್ದ ಶಕುನಿಯನ್ನು ಸಂಹರಿಸಿದನು. ಶಕುನಿಯೂ ನಿಧನಹೊಂದಿದನಂತರ ದುರ್ಯೋಧನರಾಜನ ಮನಸ್ಸು ಬಹಳವಾಗಿ ದುಃಖಗೊಂಡಿತು. ಅಸಂಖ್ಯಾತರಾದ ಸೈನಿಕರನ್ನು ಕಳೆದುಕೊಂಡು ದುರ್ಯೋಧನನು ಗದಾಪಾಣಿಯಾಗಿ ರಣರಂಗವನ್ನು ಬಿಟ್ಟು ಹೊರಟುಹೋದನು. ಪ್ರತಾಪವಂತನಾದ ಭೀಮಸೇನನು ಅತ್ಯಂತಕ್ರುದ್ಧನಾಗಿ ಅವನನ್ನೇ ಹಿಂಬಾಲಿಸಿಹೋದನು. ದ್ವೈಪಾಯನಸರೋವರದಲ್ಲಿ ನೀರಿನ ಮಧ್ಯದಲ್ಲಿ ಅಡಗಿಕೊಂಡಿದ್ದ ದುರ್ಯೋಧನನನ್ನು ಭೀಮನು ಕಂಡುಹಿಡಿದನು. ಬಳಿಕ ಬಹಳ ಸಂತೋಷಗೊಂಡ ಪಾಂಡವರೂ ಅಳಿದುಳಿದ ಸೈನ್ಯದಿಂದ ಸರೋವರದಲ್ಲಿ ಮುಳುಗಿದ್ದ ದುರ್ಯೋಧನನನ್ನು ಸುತ್ತುಗಟ್ಟಿ ಸುತ್ತಲೂ ನಿಂತರು. ನೀರಿನಲ್ಲಿಳಿದು ಭೀಮಸೇನನು ಪ್ರಹರಿಸುತ್ತಿದ್ದ ವಾಗ್ಬಾಣಗಳಿಂದ (ಮಾತಿನ ರೂಪವಾದ ಬಾಣಗಳಿಂದ) ಗಾಸಿಗೊಂಡು

ದುರ್ಯೋಧನನು ಒಡನೆಯೇ ನೀರಿನಿಂದ ಮೇಲಕ್ಕೆ ಬಂದು ಗದೆಯನ್ನು ಕೈಯಲ್ಲಿ ಹಿಡಿದು ಯುದ್ಧಕ್ಕೆ ಸಜ್ಜಾಗಿ ನಿಂತನು. ಆಗ ನಡೆದ ಮಹಾಯುದ್ಧದಲ್ಲಿ ಎಲ್ಲ ರಾಜರೂ ನೋಡುತ್ತಿದ್ದಂತೆ ಭೀಮಸೇನನು ಅತುಲವಾದ ಪರಾಕ್ರಮವನ್ನು ತೋರಿ ಧೃತರಾಷ್ಟ್ರನ ಮಗನಾದ ದುರ್ಯೋಧನನನ್ನು ಸಂಹರಿಸಿದನು. ಅದಾದ ಬಳಿಕ ರಾತ್ರಿಯಲ್ಲಿ ಶಿಬಿರಗಳಲ್ಲಿ ಮಲಗಿದ್ದ ಅಳಿದುಳಿದಿದ್ದ ಪಾಂಡವರ ಸೈನ್ಯವನ್ನು, ತಂದೆಯ ಮರಣವನ್ನು ಸಹಿಸದೇ ಇದ್ದ ಅಶ್ವತ್ಥಾಮನು ಸಂಪೂರ್ಣವಾಗಿ ನಾಶಗೊಳಿಸಿದನು. ಅದರ ಪರಿಣಾಮವಾಗಿ ಪಾಂಡವರ ಪುತ್ರರು, ಮಿತ್ರರು ಮತ್ತು ಸೈನಿಕರು–ಎಲ್ಲರೂ ನಿಧನಹೊಂದಿದರು. ನನ್ನ ಮತ್ತು ಸಾತ್ಯಕಿಯೊಡನೆ ಐವರು ಪಾಂಡವರು ಮಾತ್ರವೇ ಉಳಿದುಕೊಂಡರು. ಕೌರವರ ಪಕ್ಷದಲ್ಲಿ ಕೃಪ, ಕೃತವರ್ಮಾ ಮತ್ತು ಅಶ್ವತ್ಥಾಮರು ಯುದ್ಧವೆಂಬ ದಾವಾಗ್ನಿಯಿಂದ ಮುಕ್ತರಾಗಿ ಜೀವಂತರಾಗಿ ಉಳಿದರು. ಪಾಂಡವರ ಆಶ್ರಯವನ್ನು ಹೊಂದಿದ ಕಾರಣ ಧೃತರಾಷ್ಟ್ರನ ವೈಶ್ಯಾಪುತ್ರನಾದ ಯುಯುತ್ಸುವೂ ಉಳಿದುಕೊಂಡನು. ಕೌರವೇಂದ್ರನಾದ ಸುಯೋಧನನು ಬಂಧು-ಬಾಂಧವರಸಮೇತನಾಗಿ ನಿಧನಹೊಂದಿದನಂತರ ವಿದುರ-ಸಂಜಯರು ಧರ್ಮರಾಜನನ್ನೇ ಆಶ್ರಯಿಸಿದರು. ವಿಭುವೇ! ಹೀಗೆ ಭಾರತದ ಆ ಮಹಾಯುದ್ಧವು ಹದಿನೆಂಟು ದಿವಸಗಳು ನಡೆಯಿತು. ಆ ಮಹಾಯುದ್ಧದಲ್ಲಿ ನಿಧನಹೊಂದಿದ ರಾಜರೆಲ್ಲರೂ ಸ್ವರ್ಗವನ್ನು ಸೇರಿದರು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ರೋಮಕೋಟಿಗಳನ್ನು ನಿಮಿರಿ ನಿಲ್ಲುವಂತೆ ಮಾಡುವ ಆ ಮಹಾಯುದ್ಧದ ವಾರ್ತೆಯನ್ನು ಕೇಳಿ ವೃಷ್ಣಿವಂಶದ ಜನರೆಲ್ಲರೂ ಶೋಕದಿಂದ ವ್ಯಾಕುಲಗೊಂಡರು.

೬೦ನೆಯ ಅಧ್ಯಾಯವು ಮುಗಿಯಿತು.

ಸುಭದ್ರೆಯ ಮಾತಿನಂತೆ ಶ್ರೀಕೃಷ್ಣನು ಅಭಿಮನ್ಯುವಿನ ಮರಣದ ವಾರ್ತೆಯನ್ನು ವಸುದೇವನಿಗೆ ಹೇಳಿದುದು

ವೈಶಂಪಾಯನರು ಹೇಳುತ್ತಾರೆ:

ಕಥೆಯನ್ನೇವ ತು ತದಾ ವಾಸುದೇವಃ ಪ್ರತಾಪವಾನ್ ।
ಮಹಾಭಾರತಯುದ್ಧಂ ತತ್ಕಥಾನ್ತೇ ಪಿತುರಗ್ರತಃ ॥೧॥

ಅಭಿಮನ್ಯೋರ್ವಧಂ ವೀರಃ ಸೋಽತ್ಯಕ್ರಾಮನ್ಮಹಾಮತಿಃ ।
ಅಪ್ರಿಯಂ ವಸುದೇವಸ್ಯ ಮಾ ಭೂದಿತಿ ಮಹಾಮತಿಃ ॥೨॥

ಜನಮೇಜಯ! ಪ್ರತಾಪವಂತನಾದ, ವೀರನಾದ, ಮಹಾಮತಿಯಾದ ವಾಸುದೇವನು ಮಹಾಭಾರತಯುದ್ಧದ ಕಥೆಯನ್ನು ತಂದೆಯ ಮುಂದೆ ಹೇಳುತ್ತಿರುವಾಗ ಕಥೆಯ ಮಧ್ಯದಲ್ಲಿ ಅಭಿಮನ್ಯುವಧೆಯ ಪ್ರಸಂಗವನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟು ಮಂದುವರಿಸಿದನು. ವಸುದೇವನಿಗೆ ಅಪ್ರಿಯವಾಗುವ ಮಾತನ್ನು ಹೇಳಬಾರದೆಂಬುದೇ ಮಹಾಮತಿಯಾದ ಶ್ರೀಕೃಷ್ಣನ ಅಭಿಪ್ರಾಯವಾಗಿದ್ದಿತು. ಸಹಿಸಿಕೊಳ್ಳಲು ಅತಿಕಷ್ಟಕರವಾದ ಮೊಮ್ಮಗನ ಮರಣವಾರ್ತೆಯನ್ನು ಕೇಳಿ ತಂದೆಯಾದ ವಸುದೇವನು ದುಃಖ-ಶೋಕಗಳಿಂದ ಪರಿತಪಿಸಬಾರದೆಂಬುದು ಮಹಾಮತಿಯಾದ ಶ್ರೀಕೃಷ್ಣನ ಇಂಗಿತವಾಗಿದ್ದಿತು.

ಆದರೆ ಅಲ್ಲಿಯೇ ಕುಳಿತಿದ್ದ ಸುಭದ್ರೆಯು ತನ್ನ ಮಗನ ಮರಣವೃತ್ತಾಂತವನ್ನೇ ಶ್ರೀಕೃಷ್ಣನು ಹೇಳಲಿಲ್ಲವೆಂಬುದನ್ನು ಗಮನಿಸಿ-'**ಅಚಕ್ಷ್ವ ಕೃಷ್ಣ ಸೌಭದ್ರವಧಂ**' 'ಕೃಷ್ಣ! ಅಭಿಮನ್ಯುವಿನ ವಧೆಯ ವಾರ್ತೆಯನ್ನೂ ಹೇಳು'–ಎಂದು ಹೇಳುತ್ತಿದ್ದಂತೆಯೇ ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು. ವಸುದೇವನು ತನ್ನ ಮಗಳಾದ ಸುಭದ್ರೆಯು ಮೂರ್ಛಿತಳಾಗಿ ಭೂಮಿಯಲ್ಲಿ ಬಿದ್ದುದನ್ನು ನೋಡಿದೊಡನೆಯೇ ತಾನೂ ಕೂಡ ದುಃಖದಿಂದ ವಿಮೋಹಗೊಂಡು ನೆಲದಲ್ಲಿ ಬಿದ್ದನು. ಸ್ವಲ್ಪ ಹೊತ್ತಾದನಂತರ ಎಚ್ಚರಗೊಂಡು ಮೊಮ್ಮಗನು ಯುದ್ಧದಲ್ಲಿ ಮರಣಹೊಂದಿದನೆಂಬ

ವಾರ್ತೆಯನ್ನು ಕೇಳಿ ದುಃಖದಿಂದಲೂ ಶೋಕದಿಂದಲೂ ವ್ಯಾಪ್ತನಾಗಿದ್ದ ವಸುದೇವನು ಶ್ರೀಕೃಷ್ಣನಿಗೆ ಹೇಳಿದನು:

ನನು ತ್ವಂ ಪುಣ್ಡರೀಕಾಕ್ಷ ಸತ್ಯವಾಗ್ಭುವಿ ವಿಶ್ರುತಃ।
ಯದ್ದೌಹಿತ್ರವಧಂ ಮೇಽದ್ಯ ನ ಖ್ಯಾಪಯಿಸಿ ಶತ್ರುಹನ್।
ತದ್ಭಾಗಿನೇಯನಿಧನಂ ತತ್ತ್ವೇನಾಚಕ್ಷ್ವ ಮೇ ಪ್ರಭೋ ॥೮॥

"ಪುಂಡರೀಕಾಕ್ಷನೇ! ನೀನು ಸತ್ಯವಾದಿಯೆಂದು ವಿಶ್ವದಲ್ಲಿ ವಿಖ್ಯಾತನಾಗಿರುವೆಯಲ್ಲವೇ? ಶತ್ರುಸೂದನನೇ! ನೀನು ಯಾವ ಕಾರಣದಿಂದ ನನಗೆ ಅಭಿಮನ್ಯುವಿನ ಮರಣವಾರ್ತೆಯನ್ನು ಹೇಳಲಿಲ್ಲ? ಪ್ರಭಾವಶಾಲಿಯೇ! ನಿನ್ನ ಸೋದರಳಿಯನ ವಧೆಯ ವೃತ್ತಾಂತವನ್ನು ಯಥಾವತ್ತಾಗಿ ಹೇಳು.

ವಾರ್ಷ್ಣೇಯನೇ! ನಿನ್ನ ಕಣ್ಣುಗಳಂತೆಯೇ ಅಭಿಮನ್ಯುವಿನ ಕಣ್ಣುಗಳೂ ಬಹಳ ಸುಂದರವಾಗಿದ್ದುವು. ಅಯ್ಯೋ! ಯುದ್ಧದಲ್ಲಿ ಅವನನ್ನು ಶತ್ರುಗಳು ಹೇಗೆ ಸಂಹರಿಸಿದರು? ಕಾಲವು ಸನ್ನಿಹಿತವಾಗದಿದ್ದರೆ ಮರಣಹೊಂದುವುದು ಕಷ್ಟವೆಂದೇ ತೋರುತ್ತದೆ. ಏಕೆಂದರೆ: ದೌಹಿತ್ರನ ಮರಣವಾರ್ತೆಯಿಂದ ಉಂಟಾಗುವ ಮಹಾದುಃಖದ ಕಾರಣದಿಂದಲೂ ನನ್ನ ಹೃದಯವು ನೂರಾರು ಹೋಳುಗಳಾಗಿ ಸೀಳಿಹೋಗದೇ ಹಾಗೆಯೇ ಉಳಿದುಕೊಂಡಿದೆಯಲ್ಲವೆ? ಕಮಲನಯನನೇ! ರಣಭೂಮಿಯಲ್ಲಿ ಅಭಿಮನ್ಯುವು ನಿನಗೇನೆಂದು ಹೇಳಿದನು? ತಾಯಿಯಾದ ಸುಭದ್ರೆಗೆ ಯಾವ ಸಂದೇಶವನ್ನು ಹೇಳಿ ಕಳುಹಿಸಿದ್ದಾನೆ? ನನಗೂ ಹೇಳುವಂತೆ ಏನನ್ನಾದರೂ ಹೇಳಿರುವನೇ? ಚಂಚಲವಾದ ಕಣ್ಣುಗಳಿಂದ ಕೂಡಿದ್ದ ಅವನು ನನಗೆ ಬಹಳ ಪ್ರಿಯನಾಗಿದ್ದನು. ಬೆನ್ನು ತಿರುಗಿಸಿಕೊಂಡು ಯುದ್ಧದಿಂದ ಓಡಿಹೋಗುವಾಗ ಶತ್ರುಗಳು ಅವನನ್ನು ಸಂಹರಿಸಲಿಲ್ಲ ತಾನೇ? ಭಯದಿಂದ ಅವನ ಮುಖವು ವಿಕಾರಗೊಳ್ಳಲಿಲ್ಲ ತಾನೇ? ಕೃಷ್ಣ! ಮಹಾತೇಜಸ್ವಿಯಾಗಿದ್ದ ಮತ್ತು ಪ್ರಭಾವಶಾಲಿಯಾಗಿದ್ದ ಆ ನಮ್ಮ ಅಭಿಮನ್ಯುವು ಬಾಲಭಾವದಿಂದ ನನ್ನ ಮುಂದೆ ತನ್ನ ಪರಾಕ್ರಮವನ್ನು ವಿನಯದಿಂದಲೇ ಶ್ಲಾಘಿಸಿಕೊಳ್ಳುತ್ತಿದ್ದನು. ನನ್ನ ಮಗಳ ಮಗನಾದ ಅಭಿಮನ್ಯುವು ದ್ರೋಣರನ್ನೂ, ಭೀಷ್ಮರನ್ನೂ, ಬಲಿಷ್ಠರಲ್ಲಿ ಶ್ರೇಷ್ಠನಾದ

ಕರ್ಣನನ್ನೂ ಯುದ್ಧದಲ್ಲಿ ನಿತ್ಯವೂ ಸ್ಪರ್ಧಿಸುವುದಾಗಿಯೇ ಹೇಳಿಕೊಳ್ಳುತ್ತಿದ್ದನು. ಅಂತಹ ವೀರಬಾಲನು ದ್ರೋಣ-ಕರ್ಣ-ಕೃಪಾದಿಗಳಿಂದ ವಂಚನೆಯಿಂದ ಕೊಲ್ಲಲ್ಪಟ್ಟು ಭೂಮಿಯಲ್ಲಿ ಬೀಳಲಿಲ್ಲ ತಾನೇ? ಕೇಶವ! ಈ ಎಲ್ಲ ವಿಷಯಗಳನ್ನೂ ನನಗೆ ಹೇಳು."

ಹೀಗೆ ದುಃಖಿತನಾಗಿ ಬಹಳವಾಗಿ ವಿಲಪಿಸುತ್ತಿದ್ದ ತಂದೆಯನ್ನು ಕುರಿತು ಅತ್ಯಂತದುಃಖಿತನಾಗಿದ್ದ ಗೋವಿಂದನು ಹೀಗೆ ಹೇಳಿದನು:

ನ ತೇನ ವಿಕೃತಂ ವಕ್ತ್ರಂ ಕೃತಂ ಸಂಗ್ರಾಮಮೂರ್ಧನಿ ।
ನ ಪೃಷ್ಠತಃ ಕೃತಶ್ಚಾಪಿ ಸಂಗ್ರಾಮಸ್ತೇನ ದುಸ್ತರಃ ॥೧೬॥

"ತಂದೆಯೇ! ರಣರಂಗದ ಅಗ್ರಭಾಗದಲ್ಲಿ ಯುದ್ಧಮಾಡುತ್ತಿದ್ದ ಅಭಿಮನ್ಯುವು ಯಾವಾಗಲೂ ತನ್ನ ಮುಖವನ್ನು (ಸಂಕಟದ ಕಾರಣದಿಂದಾಗಲೀ, ಆಯಾಸದ ಕಾರಣದಿಂದಾಗಲೀ, ಅಧೀನತೆಯ ಕಾರಣದಿಂದಾಗಲೀ) ವಿಕಾರಗೊಳಿಸಲಿಲ್ಲ. ಸಾಧಾರಣಮನುಷ್ಯರಿಂದ ದಾಟಲು ಅಸಾಧ್ಯವಾದ ಆ ಸಮರಾಂಗಣವನ್ನು ಅಭಿಮನ್ಯುವು ಯಾವಾಗಲೂ ತನ್ನ ಹಿಂಭಾಗಕ್ಕೆ ಮಾಡಿಕೊಳ್ಳಲಿಲ್ಲ. (ಯುದ್ಧವನ್ನು ಬಿಟ್ಟು ಬೆನ್ನುತಿರುಗಿಸಿಕೊಂಡು ಯಾವಾಗಲೂ ಓಡಿಹೋಗಲಿಲ್ಲ.) ಲಕ್ಷ-ಲಕ್ಷ ರಾಜರ ಸಮೂಹಗಳನ್ನು ಸಂಹರಿಸಿ ದ್ರೋಣ-ಕರ್ಣರೊಡನೆ ಯುದ್ಧಮಾಡುವಾಗ ಆಯಾಸಗೊಂಡು ಕಟ್ಟಕಡೆಗೆ ದುಃಶಾಸನನ ಮಗನಿಂದ ಹತನಾದನು. ಒಬ್ಬ ವೀರನನ್ನು ಒಬ್ಬ ವೀರನೇ ಎದುರಿಸಬೇಕು. ಒಬ್ಬನ ಮೇಲೆ ಇಬ್ಬರು ಮೂವರು ಯುದ್ಧಮಾಡಬಾರದು-ಎಂಬ ಧರ್ಮವನ್ನನುಸರಿಸಿ ಅಭಿಮನ್ಯುವು ಒಬ್ಬೊಬ್ಬ ವೀರನೊಡನೆಯೇ ಯುದ್ಧಮಾಡುತ್ತಿದ್ದುದೇ ಆಗಿದ್ದರೆ–ವಜ್ರಪಾಣಿಯಾದ ಇಂದ್ರನಿಂದಲೂ ಅವನನ್ನು ಸಂಹರಿಸಲು ಸಾಧ್ಯವಾಗುತ್ತಿರಲಿಲ್ಲ. ಪಾರ್ಥನು ಸಂಶಪ್ತಕರೊಡನೆ ಯುದ್ಧಮಾಡಲು ಸಂಗ್ರಾಮಭೂಮಿಯಿಂದ ಬಹಳ ದೂರಕ್ಕೆ ಹೊರಟುಹೋಗಿದ್ದನು. ಆ ಸಮಯದಲ್ಲಿ ಬಹುಮಂದಿ ಕ್ರುದ್ಧರಾದ ದ್ರೋಣಾದಿಗಳು ಅಭಿಮನ್ಯುವನ್ನು ಸುತ್ತುಗಟ್ಟಿದರು. ತಂದೆಯೇ! ಆ ಸಮಯದಲ್ಲಿ ನಿನ್ನ ದೌಹಿತ್ರನಾದ ಅಭಿಮನ್ಯುವು ಅನೇಕ ಮಹಾ-ಮಹಾ ವೀರರಿಂದ ಸುತ್ತುಗಟ್ಟಲ್ಪಟ್ಟಿದ್ದರೂ ಅಪಾರಸಂಖ್ಯೆಯಲ್ಲಿ ಶತ್ರುಗಳನ್ನು ಸಂಹರಿಸಿ ಕಟ್ಟಕಡೆಗೆ ದುಃಶಾಸನನ ಪುತ್ರನಿಗೆ ವಶನಾದನು.

ನೂನಂ ಚ ಸ ಗತಃ ಸ್ವರ್ಗಂ ಜಹಿ ಶೋಕಂ ಮಹಾಮತೇ ।
ನ ಹಿ ವ್ಯಸನಮಾಸಾದ್ಯ ಸೀದನ್ತಿ ಕೃತಬುದ್ಧಯಃ ॥೨೧॥

ಮಹಾಮತಿಯೇ! ನಿಶ್ಚಯವಾಗಿಯೂ ನಿನ್ನ ದೌಹಿತ್ರನು ಸ್ವರ್ಗಕ್ಕೆ ಹೋಗಿರುವನು. ಸಂಸ್ಕೃತವಾದ ಬುದ್ಧಿಯುಳ್ಳ ಸತ್ಪುರುಷರು ವ್ಯಸನದಲ್ಲಿ ಸಿಲುಕಿಕೊಂಡರೂ ಖಿನ್ನರಾಗುವುದಿಲ್ಲ. ಮಹೇಂದ್ರಸದೃಶರಾದ ದ್ರೋಣ-ಕರ್ಣಾದಿಗಳು ಒಟ್ಟಾಗಿ ಸೇರಿ ಬಾಲಕನೊಬ್ಬನ ಮೇಲೆ ಯುದ್ಧಮಾಡಿದರೆ ಅವನು ಸ್ವರ್ಗಕ್ಕೆ ಹೇಗೆ ತಾನೇ ಹೋಗದಿದ್ದಾನು? ದುರ್ಧರ್ಷನೇ! ಶೋಕವನ್ನು ಬಿಡು. ಶತ್ರುಗಳ ಪಟ್ಟಣವನ್ನು ಜಯಿಸುವ ಸಾಮರ್ಥ್ಯವನ್ನು ಹೊಂದಿದ್ದ ಆ ನಮ್ಮ ಅಭಿಮನ್ಯುವು ಶಸ್ತ್ರಾಘಾತದಿಂದ ಪವಿತ್ರರಾದವರಿಗೆ ಸಿಕ್ಕುವ ಉತ್ತಮವಾದ ಗತಿಯನ್ನು ಹೊಂದಿದ್ದಾನೆ. ವೀರನಾದ ಅಭಿಮನ್ಯುವು ಹತನಾದನಂತರ ಅವನ ತಾಯಿಯೂ ಮತ್ತು ನನ್ನ ತಂಗಿಯೂ ಆದ ಈ ಸುಭದ್ರೆಯು ತನ್ನ ಮಗನ ಬಳಿಗೆ ಹೋಗಿ ಕುರರಿಯಂತೆ ರೋದನಮಾಡತೊಡಗಿದಳು.

ದ್ರೌಪದಿಯನ್ನು ಕೂಡ ಸಂಧಿಸಿ ಅತಿದುಃಖಿತಳಾಗಿ ಪ್ರಶ್ನಿಸಿದಳು: "ಆರ್ಯಳೇ! ನಮ್ಮ ಮಕ್ಕಳೆಲ್ಲರೂ ಎಲ್ಲಿ ಹೋಗಿದ್ದಾರೆ? ಅವರೆಲ್ಲರನ್ನೂ ನಾನು ನೋಡಲು ಇಚ್ಛಿಸುತ್ತೇನೆ." ಸುಭದ್ರೆಯ ಆ ಮಾತನ್ನು ಕೇಳಿ ಎಲ್ಲ ಕುರುಕುಲಸ್ತ್ರೀಯರೂ ಅವಳ ಕೈಗಳನ್ನು ಹಿಡಿದುಕೊಂಡು ಅತ್ಯಂತ ದುಃಖಿತರಾಗಿ ಅಳತೊಡಗಿದರು. ಬಳಿಕ ಇವಳು ಉತ್ತರೆಯನ್ನು ಕುರಿತು-"ಮಂಗಳಾಂಗಿಯೇ! ನಿನ್ನ ಗಂಡನು ಎಲ್ಲಿಗೆ ಹೋಗಿರುವನು? ಅವನ ಬರುವಿಕೆಯನ್ನು ಬೇಗನೆ ನನಗೆ ಬಂದು ಹೇಳಬೇಕು"–ಎಂದು ಹೇಳಿದಳು.

ನನು ನಾಮಾದ್ಯ ವೈರಾಟಿ ಶ್ರುತ್ವಾ ಮಮ ಗಿರಂ ಸದಾ ।
ಭವನಾನ್ನಿಷ್ಪತತ್ಯಾಶು ಕಸ್ಮಾನ್ನಾಭ್ಯೇತಿ ತೇ ಪತಿಃ ॥೨೯॥

"ವಿರಾಟರಾಜಕುಮಾರಿಯೇ! ಯಾವನು ಯಾವಾಗಲೂ ನನ್ನ ಧ್ವನಿಯನ್ನು ಕೇಳಿದೊಡನೆಯೇ ಬಹಳ ಬೇಗ ನಿನ್ನ ಅಂತಃಪುರದಿಂದ ಹೊರಕ್ಕೆ ಬಂದುಬಿಡುತ್ತಿದ್ದನೋ–ಆ ನಿನ್ನ ಪತಿಯೀಗ ಏಕೆ ಹೊರಬರುತ್ತಿಲ್ಲ?"–ಎಂದು ಸುಭದ್ರೆಯು ವಿಲಪಿಸಿದಳು.

ಅಭಿಮನ್ಯೋ ಕುಶಲಿನೋ ಮಾತುಲಾಸ್ತೇ ಮಹಾರಥಾಃ ।
ಕುಶಲಂ ಚಾಬ್ರುವನ್ಸರ್ವೇ ತ್ವಾಂ ಯುಯುತ್ಸುಮಿಹಾಗತಮ್ ॥೩೦॥

"ಅಭಿಮನ್ಯುವೇ! ಮಹಾರಥರಾದ ನಿನ್ನ ಮಾವಂದಿರೆಲ್ಲರೂ ಕುಶಲಿಗಳಾಗಿದ್ದಾರೆ. ಯುದ್ಧಮಾಡಲು ಇಲ್ಲಿಗೆ ಆಗಮಿಸಿದ ನಿನ್ನನ್ನು ಅವರು ಕುಶಲಪ್ರಶ್ನೆಗಳನ್ನು ಕೇಳಿರುತ್ತಾರೆ"–ಎಂದೂ ಇವಳು ಗೋಳಿಟ್ಟಳು.

ಆಚಕ್ಷ್ವ ಮೇಽದ್ಯ ಸಂಗ್ರಾಮಂ ಯಥಾಪೂರ್ವಮರಿಂದಮ ।
ಕಸ್ಮಾದೇವಂ ವಿಲಪತೀಂ ನಾದ್ಯೇಹ ಪ್ರತಿಭಾಷಸೇ ॥೩೧॥

"ಅರಿಂದಮನೇ! ಹಿಂದೆ ನೀನು ಯುದ್ಧದ ವಿಷಯವಾಗಿ ಹೇಳುತ್ತಿದ್ದಂತೆ ಈಗಲೂ ಹೇಳು. ಹೀಗೆ ನಾನು ವಿಲಪಿಸುತ್ತಿದ್ದರೂ ನೀನೇಕೆ ಪ್ರತ್ಯುತ್ತರಿಸುತ್ತಿಲ್ಲ ?"–ಎಂದೂ ಹೇಳಿಕೊಂಡು ಸುಭದ್ರೆಯು ಗೋಳಾಡಿದಳು.

ಇದೇ ಮುಂತಾಗಿ ಹೇಳಿಕೊಂಡು ವಿಲಪಿಸುತ್ತಿದ್ದ ಸುಭದ್ರೆಯ ಗೋಳಾಟವನ್ನು ಕೇಳಿ ಮೊಮ್ಮಗನ ಮರಣದಿಂದ ಅತಿ ದುಃಖಪೀಡಿತಳಾಗಿದ್ದ ಕುಂತಿಯು ಸುಭದ್ರೆಯನ್ನು ಸಂತೈಸುತ್ತಾ ಮೆಲ್ಲನೆ ಈ ಮಾತನ್ನು ಹೇಳಿದಳು: "ಸುಭದ್ರೇ! ಶ್ರೀಕೃಷ್ಣ, ಸಾತ್ಯಕಿ ಮತ್ತು ತಂದೆಯಾದ ಅರ್ಜುನನಿಂದ ಲಾಲಿಸಲ್ಪಡುತ್ತಿದ್ದ ಬಾಲಕನಾದ ಅಭಿಮನ್ಯುವು ಕಾಲಧರ್ಮದಿಂದ ಹತನಾದನು. (ಅವನ ಆಯುಷ್ಯವು ಕಳೆದುಹೋಗಿದ್ದುದರಿಂದ ಮೃತ್ಯುವಶನಾದನು.)

ಯದುನಂದಿನಿಯೇ! ಮರ್ತ್ಯಧರ್ಮವೇ ಇಂತಹುದು. ಮನುಷ್ಯಲೋಕದಲ್ಲಿ ಹುಟ್ಟಿದವನು ಸಾಯಲೇಬೇಕು. ಆದುದರಿಂದ ಶೋಕಿಸಬೇಡ. ನಿನ್ನ ಮಗನು ಮಹಾವೀರರಿಂದಲೂ ಎದುರಿಸಲೂ ಅಸಾಧ್ಯನಾಗಿದ್ದನು. ಯುದ್ಧದಲ್ಲಿ ಮಡಿದು ಶ್ರೇಷ್ಠವಾದ ಗತಿಯನ್ನು ಹೊಂದಿರುತ್ತಾನೆ. ಮಹಾತ್ಮರಾದ ಕ್ಷತ್ರಿಯರ ಮಹಾಕುಲದಲ್ಲಿ ಹುಟ್ಟಿರುವೆ. ಪದ್ಮಪತ್ರಕ್ಕೆ ಸದೃಶವಾದ ಕಣ್ಣುಗಳುಳ್ಳವಳೇ! ಚಂಚಲವಾದ ಕಣ್ಣುಗಳನ್ನು ಹೊಂದಿದ್ದ

ಅಭಿಮನ್ಯುವಿಗಾಗಿ ನೀನು ಶೋಕಪಡಬೇಡ. ಗರ್ಭಿಣಿಯಾಗಿರುವ ನಿನ್ನ ಸೊಸೆ ಉತ್ತರೆಯನ್ನಾದರೂ ನೋಡಿಕೊಂಡು ನೀನು ದುಃಖವನ್ನು ಪರಿತ್ಯಜಿಸು. ಭಾಮಿನಿಯಾದ ಈ ಉತ್ತರೆಯು ಅಭಿಮನ್ಯುವಿನ ಮಗುವಿಗೆ ಬಹಳ ಬೇಗ ಜನ್ಮಕೊಡುತ್ತಾಳೆ."

ಯದುಕುಲತಿಲಕನೇ! ತಂದೆಯೇ! ಹೀಗೆ ಕುಂತೀದೇವಿಯು ಸುಭದ್ರೆಯನ್ನು ಸಂತೈಸಿ ದುಸ್ತರವಾದ ಶೋಕವನ್ನು ತಾನೂ ತ್ಯಾಗಮಾಡಿ ಅಭಿಮನ್ಯುವಿನ ಶ್ರಾದ್ಧಕ್ಕೆ ಸಿದ್ಧತೆಯನ್ನು ಮಾಡಿದಳು. ಧರ್ಮಜ್ಞನಾದ ಯುಧಿಷ್ಠಿರನ, ಭೀಮಸೇನನ ಮತ್ತು ಯಮನಿಗೆ ಸಮಾನವಾದ ಪರಾಕ್ರಮವುಳ್ಳ ನಕುಲ-ಸಹದೇವರ ಅನುಮತಿಯನ್ನು ಪಡೆದು ಕುಂತೀದೇವಿಯು ಅಭಿಮನ್ಯುವಿಗೆ ಸದ್ಗತಿಯು ಲಭಿಸಲೆಂಬ ಉದ್ದೇಶದಿಂದ ಅನೇಕ ಪ್ರಕಾರವಾದ ದಾನಗಳನ್ನು ಸತ್ಪಾತ್ರರಿಗೆ ಕೊಟ್ಟಳು. ಬ್ರಾಹ್ಮಣರಿಗೆ ಬಹು ಸಂಖ್ಯಾತವಾದ ಗೋವುಗಳನ್ನು ದಾನವಾಗಿ ಕೊಟ್ಟು ಸಮಾಧಾನ ಮಾಡಿಕೊಂಡಳು. ಅನಂತರ ಉತ್ತರೆಯನ್ನು ಕುರಿತು ಹೇಳಿದಳು:

"ನಿಷ್ಕಳಂಕಳೇ! ಸುಂದರಿಯೇ! ವಿರಾಟಪುತ್ರಿಯೇ! ಇನ್ನು ನೀನು ನಿನ್ನ ಪತಿಯ ಸಲುವಾಗಿ ದುಃಖಿಸಬಾರದು. ಗರ್ಭದಲ್ಲಿರುವ ಶಿಶುವನ್ನು ಸಂರಕ್ಷಿಸು."

ಮಹಾದ್ಯುತಿಯೇ! ಕುಂತಿಯು ಉತ್ತರೆಗೆ ಹೀಗೆ ಹೇಳಿ ವಿರಮಿಸಿದಳು. ಅವಳ ಅನುಮತಿಯನ್ನು ಪಡೆದು ನಾನು ಸುಭದ್ರೆಯನ್ನು ಇಲ್ಲಿಗೆ ಕರೆತಂದೆನು. ಮಾನದನೇ! ಹೀಗೆ ನಿನ್ನ ಮೊಮ್ಮಗನು ಯುದ್ಧದಲ್ಲಿ ಮರಣವನ್ನು ಹೊಂದಿದನು. ದುರ್ಧರ್ಷನೇ! ಸಂತಾಪವನ್ನು ತ್ಯಜಿಸು. (ಶೋಕಮಗ್ನನಾಗ ಬೇಡ.)"

ಽ೧ನೆಯ ಅಧ್ಯಾಯವು ಮುಗಿಯಿತು.

ವಸುದೇವನೇ ಮೊದಲಾದ ಯಾದವರು ಅಭಿಮನ್ಯುವಿಗೆ ಶ್ರಾದ್ಧವನ್ನು ಮಾಡಿದುದು: ವ್ಯಾಸರು ಉತ್ತರೆಯನ್ನೂ ಅರ್ಜುನನನ್ನೂ ಸಂತೈಸಿ ಯುಧಿಷ್ಠಿರನಿಗೆ ಅಶ್ವಮೇಧಯಾಗವನ್ನು ಮಾಡಲು ಹೇಳಿದುದು

ವೈಶಂಪಾಯನರು ಹೇಳುತ್ತಾರೆ:

ಏತಚ್ಛ್ರುತ್ವಾ ತು ಪುತ್ರಸ್ಯ ವಚಃ ಶೂರಾತ್ಮಜಸ್ತದಾ ।
ವಿಹಾಯ ಶೋಕಂ ಧರ್ಮಾತ್ಮಾ ದದೌ ಶ್ರಾದ್ಧಮನುತ್ತಮಮ್ ॥೧॥

ಪಾರಿಕ್ಷಿತ! ಶೂರಸೇನನ ಮಗನಾದ ಧರ್ಮಾತ್ಮನಾದ ವಸುದೇವನು ಮಗನು ಹೇಳಿದ ಮಾತನ್ನು ಕೇಳಿ, ಶೋಕವನ್ನು ಪರಿತ್ಯಜಿಸಿ, ಅಭಿಮನ್ಯುವಿನ ಸಲುವಾಗಿ ಉತ್ತಮವಾದ ರೀತಿಯಲ್ಲಿ ಶ್ರಾದ್ಧವನ್ನು ಮಾಡಿದನು.

ಹಾಗೆಯೇ ಶ್ರೀಕೃಷ್ಣನು ಕೂಡ ತಂಗಿಯ ಮಗನಾದ, ಮಹಾತ್ಮನಾದ, ತಂದೆಗೆ ಪರಮಪ್ರಿಯನಾದ ಅಭಿಮನ್ಯುವಿಗೆ ಔರ್ಧ್ವದೈಹಿಕಕ್ರಿಯೆಗಳನ್ನು (ಅಪರಕ್ರಿಯೆಗಳನ್ನು) ಮಾಡಿದನು. ಮಹಾತೇಜಸ್ವಿಗಳಾದ ಅರವತ್ತು ಲಕ್ಷ ಬ್ರಾಹ್ಮಣರಿಗೆ ಸಮಸ್ತಗುಣಗಳಿಂದಲೂ ಪರಿಪೂರ್ಣವಾಗಿದ್ದ ಅನ್ನವನ್ನು ವಿಧಿವತ್ತಾಗಿ ಭೋಜನಮಾಡಿಸಿದನು. ಆ ಸಮಯದಲ್ಲಿ ಮಹಾಬಾಹುವಾದ ಶ್ರೀಕೃಷ್ಣನು ಬ್ರಾಹ್ಮಣರಿಗೆ ವಸ್ತ್ರಗಳನ್ನು ಹೊದ್ದಿಸಿ-ಮುಂದೆ ಅವರಿಗೆ ಹಣದ ಆಸೆಯೇ ಉಂಟಾಗದ ರೀತಿಯಲ್ಲಿ ಅಪಾರವಾದ ಧನವನ್ನು ದಾನಮಾಡಿದನು. ನಿಶ್ಚಯವಾಗಿಯೂ ಶ್ರೀಕೃಷ್ಣನ ಆ ಔದಾರ್ಯವು ರೋಮಾಂಚನವನ್ನುಂಟುಮಾಡುವುದಾಗಿದ್ದಿತು. ಸುವರ್ಣವನ್ನೂ, ಗೋವುಗಳನ್ನೂ, ಹಾಸಿಗೆ-ಹೊದ್ದಿಕೆಗಳನ್ನೂ ದಾನಮಾಡುತ್ತಿದ್ದಾಗ ಬ್ರಾಹ್ಮಣರು–'ವರ್ಧತಾಂ' 'ನಿನ್ನ ಕೀರ್ತಿಯು ವರ್ಧಿಸಲಿ'–ಎಂಬುದಾಗಿ ಶ್ರೀಕೃಷ್ಣನಿಗೆ ಆಶೀರ್ವಾದ ಮಾಡಿದರು. ಹೀಗೆ ವಾಸುದೇವನು ಅಭಿಮನ್ಯುವಿನ ಶ್ರಾದ್ಧವನ್ನು ಮಾಡಿ ಮುಗಿಸಿದನಂತರ ದಶಾರ್ಹಕುಲತಿಲಕನಾದ ಬಲಭದ್ರ, ಸಾತ್ಯಕಿ ಮತ್ತು ಸತ್ಯಕ–ಇವರುಗಳೂ ಅಭಿಮನ್ಯುವಿನ ಶ್ರಾದ್ಧವನ್ನು ಯಥಾವಿಧಿಯಾಗಿ ಮಾಡಿದರು. ಎಷ್ಟೇ

ಸಮಾಧಾನವನ್ನು ತಂದುಕೊಂಡರೂ ಅಭಿಮನ್ಯುವಿನ ವಧೆಯಿಂದ ದುಃಖತಪ್ತರಾಗಿದ್ದ ಯಾದವರು ಮನಶ್ಶಾಂತಿಯನ್ನು ಹೊಂದಲಿಲ್ಲ. ಹಾಗೆಯೇ ಹಸ್ತಿನಾಪುರದಲ್ಲಿದ್ದ, ಅಭಿಮನ್ಯುವಿನ ವಿಯೋಗದಿಂದ ದುಃಖಿತರಾಗಿದ್ದ, ವೀರರಾದ ಪಾಂಡವರಿಗೂ ಕೂಡ ಮನಶ್ಶಾಂತಿಯು ದೊರೆಯಲಿಲ್ಲ.

ಜನಮೇಜಯ! ವಿರಾಟನ ಮಗಳಾದ ಉತ್ತರೆಯು ಪತಿಯ ವಿರಹ ದುಃಖದಿಂದ ಪೀಡಿತಳಾಗಿ ಅನೇಕ ದಿವಸಗಳವರೆಗೆ ಊಟವನ್ನೇ ಮಾಡಲಿಲ್ಲ. ನಿಶ್ಚಯವಾಗಿಯೂ ಅದು ಅತ್ಯಂತಕರುಣಾಜನಕವಾಗಿದ್ದಿತು. ಗರ್ಭಿಣಿಯಾಗಿದ್ದ ಉತ್ತರೆಯು ಅನೇಕದಿವಸಗಳವರೆಗೆ ಊಟವನ್ನು ಮಾಡದೆಯೇ ಇದ್ದುದರಿಂದ ಗರ್ಭಸ್ಥವಾಗಿದ್ದ ಶಿಶುವೂ ದಿನ-ದಿನಕ್ಕೂ ಕ್ಷೀಣಿಸತೊಡಗಿತು.

ದಿವ್ಯದೃಷ್ಟಿಯಿಂದ ಆ ವಿಷಯವನ್ನು ತಿಳಿದ ವ್ಯಾಸರು ಹಸ್ತಿನಾಪಟ್ಟಣಕ್ಕೆ ಆಗಮಿಸಿದರು. ಧೀಮಂತರಾದ ಮಹಾತೇಜಸ್ವಿಗಳಾದ ವ್ಯಾಸರು ವಿಶಾಲಾಕ್ಷಿಯಾದ ಕುಂತಿಯನ್ನೂ ಮತ್ತು ಉತ್ತರೆಯನ್ನೂ ಸಂಧಿಸಿ ಶೋಕವನ್ನು ಪರಿತ್ಯಜಿಸುವಂತೆ ಹೇಳಿದರು. ಉತ್ತರೆಯನ್ನು ಕುರಿತು–"ಯಶಸ್ವಿನಿಯೇ! ಮಹಾತೇಜೋವಂತನಾದ ಮಗನು ನಿನಗೆ ಹುಟ್ಟುತ್ತಾನೆ. ಆದುದರಿಂದ ಇನ್ನು ಮುಂದೆ ಶೋಕಪಡಬೇಡ. ವಿರಾಟರಾಜಕುಮಾರಿ! ವಾಸುದೇವನ ಪ್ರಭಾವದಿಂದಲೂ ನನ್ನ ಆಶೀರ್ವಾದದಿಂದಲೂ ನಿನ್ನಲ್ಲಿ ಹುಟ್ಟುವ ಪುತ್ರನು ಪಾಂಡವರನಂತರ ಈ ಭೂಮಂಡಲವನ್ನು ಪಾಲಿಸುತ್ತಾನೆ"–ಎಂದು ಹೇಳಿದರು.

ಜನಮೇಜಯ! ವ್ಯಾಸರು ಹೀಗೆ ಉತ್ತರೆಯನ್ನು ಸಂತೈಸಿ ಅರ್ಜುನನ ಕಡೆ ನೋಡಿ ಅವನನ್ನು ಸಂತೋಷಗೊಳಿಸುವ ಮುಖಭಾವದಿಂದ ಧರ್ಮರಾಜನಿಗೂ ಕೇಳಿಸುವಂತೆ ಈ ಮಾತನ್ನು ಹೇಳಿದರು:

"ಕುರುಶ್ರೇಷ್ಠನೇ! ನಿನಗೆ ಮಹಾಭಾಗ್ಯಶಾಲಿಯಾದ ಮಹಾತ್ಮನಾದ ಮೊಮ್ಮಗನು ಹುಟ್ಟುತ್ತಾನೆ. ಸಾಗರಪರ್ಯಂತವಾದ ಈ ಭೂಮಂಡಲವನ್ನವನು ಧರ್ಮದಿಂದ ಆಳುತ್ತಾನೆ. ಆದುದರಿಂದ ನೀನು ಪುತ್ರನ ನಿಧನದಿಂದುಂಟಾದ ಶೋಕವನ್ನು ಬಿಡು. 'ನಿಶ್ಚಯವಾಗಿಯೂ ಅಂತಹ

ಮೊಮ್ಮಗನು ಹುಟ್ಟುವನೇ?'–ಎಂದು ನೀನು ವಿಚಾರಮಾಡಬೇಕಾಗಿಯೇ ಇಲ್ಲ. ನಾನು ಹೇಳಿರುವುದು ಸತ್ಯವಾಗುತ್ತದೆ. ಕುರುನಂದನನೇ! ವೃಷ್ಣಿವಂಶದ ವೀರನಾದ ಶ್ರೀಕೃಷ್ಣನು ಹಿಂದೆ ಏನು ಹೇಳಿದ್ದನೋ ಅದೆಲ್ಲವೂ ಹಾಗೆಯೇ ನಡೆಯುತ್ತದೆ. ಈ ವಿಷಯವಾಗಿ ನೀನು ಬೇರೆ ವಿಚಾರಮಾಡಲೇ ಬೇಡ. ವೀರನಾದ ಅಭಿಮನ್ಯುವು ಪರಾಕ್ರಮದಿಂದ ತಾನೇ ಸಂಪಾದಿಸಿದ ದೇವತೆಗಳ ಅಕ್ಷಯಲೋಕಗಳಿಗೆ ಹೋಗಿದ್ದಾನೆ. ಆದುದರಿಂದ ನೀನಾಗಲೀ ಇತರ ಕುರುವಂಶೀಯರೇ ಆಗಲೀ ವೀರನಾದ ಅಭಿಮನ್ಯುವಿನ ಸಲುವಾಗಿ ಶೋಕಪಡಬಾರದು."

ಜನಮೇಜಯ! ಹೀಗೆ ಕುರುಕುಲಪಿತಾಮಹರಾದ ವ್ಯಾಸರು ಹೇಳಲಾಗಿ ಧರ್ಮಾತ್ಮನಾದ ಧನಂಜಯನು ಶೋಕವನ್ನು ಸಂಪೂರ್ಣವಾಗಿ ಪರಿತ್ಯಜಿಸಿ ವೀರನಾದ ಮಹಾತೇಜಸ್ವಿಯಾದ ಮೊಮ್ಮಗನು ಹುಟ್ಟುವನೆಂದು ಸಂತಸಗೊಂಡನು.

ಧರ್ಮಜ್ಞನೇ! ಜನಮೇಜಯ! ನಿನ್ನ ತಂದೆಯೂ ಕೂಡ ಉತ್ತರೆಯ ಗರ್ಭದಲ್ಲಿ ಶುಕ್ಲಪಕ್ಷದ ಚಂದ್ರನಂತೆ ದಿನ-ದಿನಕ್ಕೂ ಯಥೇಷ್ಟವಾಗಿ ವರ್ಧಿಸತೊಡಗಿದನು.

ಬಳಿಕ ವ್ಯಾಸರು ಧರ್ಮನ ಮಗನಾದ ಯುಧಿಷ್ಠಿರನಿಗೆ ಅಶ್ವಮೇಧಯಾಗವನ್ನು ಮಾಡುವಂತೆ ಹುರಿದುಂಬಿಸಿ ಮಾಯವಾದರು. ಮೇಧಾವಿಯಾದ ಯುಧಿಷ್ಠಿರನು ವ್ಯಾಸರು ಹೇಳಿದ ಮಾತನ್ನು ಕೇಳಿ ಐಶ್ವರ್ಯವನ್ನು ತರುವ ಸಲುವಾಗಿ ಹಿಮಾಲಯಕ್ಕೆ ಹೋಗಲು ವಿಚಾರಮಾಡಿದನು."

೬೨ನೆಯ ಅಧ್ಯಾಯವು ಮುಗಿಯಿತು.

೬೩ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಯುಧಿಷ್ಠಿರನು ತನ್ನ ತಮ್ಮಂದಿರೊಡನೆ ಸಮಾಲೋಚಿಸಿ ಐಶ್ವರ್ಯವನ್ನು ತರಲು ಎಲ್ಲರೊಡನೆ ಯಾತ್ರೆ ಹೊರಟುದು

ಜನಮೇಜಯನು ಪ್ರಶ್ನಿಸುತ್ತಾನೆ:

ಶ್ರುತ್ವೈತದ್ವಚನಂ ಬ್ರಹ್ಮನ್ವ್ಯಾಸೇನೋಕ್ತಂ ಮಹಾತ್ಮನಾ ।
ಅಶ್ವಮೇಧಂ ಪ್ರತಿ ತದಾ ಕಿಂ ಭೂಯಃ ಪ್ರಚಕಾರ ಹ ॥೧॥

ರತ್ನಂ ಚ ಯನ್ಮರುತ್ತೇನ ನಿಹಿತಂ ವಸುಧಾತಲೇ ।
ತದಾವಾಪ ಕಥಂ ಚೇತಿ ತನ್ಮೇ ಬ್ರೂಹಿ ದ್ವಿಜೋತ್ತಮ ॥೨॥

"ಬ್ರಾಹ್ಮಣೋತ್ತಮರೇ! ಮಹಾತ್ಮರಾದ ವ್ಯಾಸರಿಂದ ಯಜ್ಞಮಾಡಬೇಕೆಂಬ ಆದೇಶವನ್ನು ಕೇಳಿ ಯುಧಿಷ್ಠಿರನು ಅಶ್ವಮೇಧದ ಸಂಬಂಧವಾಗಿ ಯಾವ ಕಾರ್ಯವನ್ನು ಮಾಡಿದನು? ಮರುತ್ತನು ಭೂಮಿಯ ಅಡಿಯಲ್ಲಿ ಹುಗಿಯಲ್ಪಟ್ಟಿದ್ದ ರತ್ನವನ್ನು (ಐಶ್ವರ್ಯವನ್ನು) ಯುಧಿಷ್ಠಿರನು ಹೇಗೆ ಪಡೆದುಕೊಂಡನು? ಈ ವಿಷಯವನ್ನು ನನಗೆ ಹೇಳಿರಿ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಕೃಷ್ಣದ್ವೈಪಾಯನರ ಮಾತನ್ನು ಕೇಳಿ ಯುಧಿಷ್ಠಿರನು ತನ್ನ ಅನುಜರಾದ ಭೀಮಾರ್ಜುನ-ನಕುಲ-ಸಹದೇವರನ್ನು ಕರೆಸಿ ಸಮಯೋಚಿತವಾದ ಈ ಮಾತನ್ನು ಹೇಳಿದನು:

"ವೀರರೇ! ಕುರುಗಳಿಗೆ ಯಾವಾಗಲೂ ಹಿತವನ್ನೇ ಬಯಸುವ ಬುದ್ಧಿವಂತರಾದ, ಮಹಾತ್ಮರಾದ ವ್ಯಾಸರು ಸಹೃದಯತೆಯಿಂದ ಹೇಳಿರುವ ಮಾತನ್ನು ನೀವೆಲ್ಲರೂ ಕೇಳಿರುವಿರಿ. ಸುಹೃದರ ಅಭ್ಯುದಯವನ್ನೇ ಬಯಸುವ ತಪೋವೃದ್ಧರಾದ, ಮಹಾತ್ಮರಾದ, ಧರ್ಮಶೀಲರಾದ ವ್ಯಾಸರೂ ಅದ್ಭುತ ಪರಾಕ್ರಮಿಯಾದ ಭೀಷ್ಮನೂ, ಮಹಾಪ್ರಾಜ್ಞನಾದ ಮತ್ತು ಬುದ್ಧಿಶಾಲಿಯಾದ ಶ್ರೀಕೃಷ್ಣನೂ ಹಲವಾರು ಸಮಯಗಳಲ್ಲಿ ನೀಡಿರುವ ಸಲಹೆಗಳನ್ನು ಸ್ಮರಿಸಿ ಅಂತಹ ಅಮೋಘವಾದ ಸಲಹೆಗಳನ್ನು ಚೆನ್ನಾಗಿ ಕಾರ್ಯರೂಪಕ್ಕೆ ತರಲು ಇಚ್ಛೆಸಿದ್ದೇನೆ. ಪಾಂಡುಪುತ್ರರೇ! ಮಹಾತ್ಮರಾದ ವ್ಯಾಸ-ಭೀಷ್ಮ-ಕೃಷ್ಣರ ಅಮೋಘವಾದ ಸಲಹೆಗಳು ಭವಿಷ್ಯ ಮತ್ತು ವರ್ತಮಾನಗಳೆರಡರಲ್ಲಿಯೂ ನಮಗೆ ಹಿತವನ್ನೇ ಉಂಟುಮಾಡತಕ್ಕುವುಗಳಾಗಿವೆ. ಬ್ರಹ್ಮಚಾರಿಗಳಾದ, ಮಹಾತ್ಮರಾದ ವ್ಯಾಸರ ವಚನವು ಪರಿಣಾಮದಲ್ಲಿ ನಮಗೆ ಕಲ್ಯಾಣವನ್ನೇ ಉಂಟುಮಾಡುತ್ತದೆ. ಈ ಸಮಯದಲ್ಲಿ ಭೂಮಂಡಲದಲ್ಲಿರುವ ಎಲ್ಲ ರಾಜ್ಯಗಳೂ ಐಶ್ವರ್ಯವನ್ನು ಕಳೆದುಕೊಂಡು ಬಿಟ್ಟಿವೆ. ನಮ್ಮ ಆರ್ಥಿಕಪರಿಸ್ಥಿತಿಯೂ ಹದಗೆಟ್ಟಿದೆ. ಇದನ್ನು ಸರಿಪಡಿಸುವ ಸಲುವಾಗಿ ವ್ಯಾಸರು ಮರುತ್ತನ ಐಶ್ವರ್ಯದ ವಿಷಯವಾಗಿ ಹೇಳಿದ್ದಾರೆ. ನೀವೆಲ್ಲರೂ ಮರುತ್ತನು ಇಟ್ಟಿರುವ

ಐಶ್ವರ್ಯವು ಸಾಕೆಂದು ತಿಳಿಯುವಿರಾದರೆ, ಅದನ್ನು ತರುವ ಸಾಮರ್ಥ್ಯವಿರುವುದೆಂದೂ ನೀವು ಭಾವಿಸುವಿರಾದರೆ, ವ್ಯಾಸರು ಹೇಳಿರುವಂತೆ ಮರುತ್ತನ ಆ ಐಶ್ವರ್ಯವನ್ನು ಧರ್ಮದಿಂದ ಪಡೆದುಕೊಳ್ಳಲು ಪ್ರಯತ್ನಿಸಿರಿ.

ಭೀಮಸೇನ! ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?"

ಕುರುಕುಲಶಿರೋಮಣಿಯಾದ ಜನಮೇಜಯನೇ! ಯುಧಿಷ್ಠಿರನು ಹೀಗೆ ಪ್ರಶ್ನಿಸಲಾಗಿ ಭೀಸೇನನು ಕೈಜೋಡಿಸಿಕೊಂಡು ಯುಧಿಷ್ಠಿರನಿಗೆ ಹೇಳಿದನು: "ಮಹಾಬಾಹುವೇ! ವ್ಯಾಸರು ಹೇಳಿದ ಮರುತ್ತನ ಐಶ್ವರ್ಯವನ್ನು ತರುವ ವಿಷಯದಲ್ಲಿ ನೀನು ಹೇಳಿದ ಮಾತು ನನಗೆ ರುಚಿಸಿದೆ. ಪ್ರಭುವೇ! ನಾವು ಮರುತ್ತನ ಐಶ್ವರ್ಯವನ್ನು ಪಡೆದುಕೊಂಡುದೇ ಆದರೆ ನಮ್ಮ ಯಜ್ಞಕ್ಕೆ ಸಂಬಂಧಿಸಿದ ಸಕಲಕಾರ್ಯಗಳೂ ಮುಗಿದಂತೆಯೇ ಸರಿ. ಇದು ನನ್ನ ಅಭಿಪ್ರಾಯವಾಗಿದೆ. ಮಹಾರಾಜ! ನಿನಗೆ ಮಂಗಳವಾಗಲಿ. ನಾವು ಮಹಾತ್ಮನಾದ ಗಿರೀಶನಿಗೆ ನಮಸ್ಕರಿಸಿ, ಜಟಾಜೂಟಧರನಾದ ಮಹೇಶ್ವರನನ್ನು ಚೆನ್ನಾಗಿ ಪೂಜಿಸಿ ಅವನ ಅನುಗ್ರಹದಿಂದ ಆ ಐಶ್ವರ್ಯವನ್ನು ತರೋಣ. ನಾವು ಮನಸ್ಸು, ಮಾತು ಮತ್ತು ಕ್ರಿಯೆಗಳ ಮೂಲಕವಾಗಿ ದೇವದೇವನಾದ ಮಹಾದೇವನನ್ನೂ ಮತ್ತು ಅವನ ಅನುಚರರನ್ನೂ ಆರಾಧಿಸಿ ಅವರೆಲ್ಲರನ್ನೂ ಪ್ರಸನ್ನಗೊಳಿಸಿ ಆ ಐಶ್ವರ್ಯವನ್ನು ನಮ್ಮದನ್ನಾಗಿ ಮಾಡಿಕೊಳ್ಳೋಣ. ಪೂಜ್ಯನಾದ, ವೃಷಭಧ್ವಜನಾದ ಶಂಕರನು ನಮ್ಮ ಆರಾಧನೆಯಿಂದ ಪ್ರಸನ್ನನಾಗಿಬಿಟ್ಟರೆ ಮರುತ್ತನ ಐಶ್ವರ್ಯವನ್ನು ರಕ್ಷಿಸುತ್ತಿರುವ, ಭಯಂಕರರಾಗಿ ಕಾಣುವ ಕಿಂಕರರೂ ನಮ್ಮ ಅಧೀನರಾಗುತ್ತಾರೆ."

ಜನಮೇಜಯ! ಭೀಮಸೇನನ ಆ ಮಾತುಗಳನ್ನು ಕೇಳಿ ಧರ್ಮ ರಾಜನಿಗೆ ಹೆಚ್ಚು ಸಂತೋಷವಾಯಿತು. ಅರ್ಜುನ-ನಕುಲ-ಸಹದೇವರೂ ಹಾಗೆಯೇ ಆಗಲೆಂದು ಹೇಳಿ ತಮ್ಮ ಸಮ್ಮತಿಯನ್ನು ಸೂಚಿಸಿದರು. ಹೀಗೆ ಮರುತ್ತನ ಐಶ್ವರ್ಯವನ್ನು ತರಲು ನಿಶ್ಚಯಿಸಿದ ಪಾಂಡವರು, ಶುಭನಕ್ಷತ್ರದಿಂದ ಕೂಡಿದ ಶುಭದಿನದಲ್ಲಿ ಸೇನೆಗೆ ಸಜ್ಜಾಗುವಂತೆ

ಆಜ್ಞೆಮಾಡಿದರು. ಆನಂತರ ಪಾಂಡವರು ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಪ್ರಾರಂಭದಲ್ಲಿಯೇ ಸುರಶ್ರೇಷ್ಠನಾದ ಮಹೇಶ್ವರನನ್ನು ಆರಾಧಿಸಿ, ಕಡುಬುಗಳಿಂದಲೂ, ಪಾಯಸದಿಂದಲೂ, ಮಾಂಸಾಪೂಪ ದಿಂದಲೂ ಅವನನ್ನು ತೃಪ್ತಿಪಡಿಸಿ ಅವನ ಆಶೀರ್ವಾದವನ್ನು ಪಡೆದು ಆನಂದಭರಿತರಾಗಿ ಯಾತ್ರೆಯನ್ನಾರಂಭಿಸಿದರು. ಪಾಂಡವರು ಯಾತ್ರೆ ಹೊರಟ ಆ ಸಮಯದಲ್ಲಿ ಸಂತುಷ್ಟವಾದ ಮನಸ್ಸುಳ್ಳ ಬ್ರಾಹ್ಮಣರೂ ಮತ್ತು ನಾಗರಿಕರೂ ಅವರಿಗೆ ಮಂಗಳಾಶಾಸನವನ್ನು ಮಾಡಿ ಶುಭವನ್ನು ಕೋರಿದರು. ಬಳಿಕ ಅವರು ಅಗ್ನಿಸಹಿತರಾಗಿದ್ದ ಬ್ರಾಹ್ಮಣರಿಗೆ ಪ್ರದಕ್ಷಿಣೆಮಾಡಿ ಅಭಿವಾದನಪೂರ್ವಕವಾಗಿ ತಲೆಬಾಗಿ ನಮಸ್ಕರಿಸಿ ಹಸ್ತಿನಾಪಟ್ಟಣದಿಂದ ನಿರ್ಗಮಿಸಿದರು. ಯಾತ್ರೆಹೊರಡುವ ಮೊದಲು ಪುತ್ರಶೋಕದಿಂದ ವ್ಯಾಕುಲರಾಗಿದ್ದ ಧೃತರಾಷ್ಟ್ರ-ಗಾಂಧಾರಿಯರ ಮತ್ತು ಕುಂತಿಯ ಅನುಜ್ಞೆಯನ್ನು ಪಡೆದುಕೊಂಡರು. ಧೃತರಾಷ್ಟ್ರನ ಮಗನಾದ, ಕುರುಶ್ರೇಷ್ಠನಾದ ಯುಯುತ್ಸು ವನ್ನು ರಾಜ್ಯದಲ್ಲಿರಿಸಿ, ವಿದ್ವಾಂಸರಾದ ಬ್ರಾಹ್ಮಣರಿಂದಲೂ ನಾಗರಿಕ ರಿಂದಲೂ ಸಂಪೂಜಿತರಾಗಿ ವೀರರಾದ ಪಾಂಡವರು ಹಸ್ತಿನಾಪಟ್ಟಣದಿಂದ ಹೊರಟರು.

ಅಶ್ವಮೇಧಿಕ ಪರ್ವ: ೬೩ನೆಯ ಅಧ್ಯಾಯವು ಮುಗಿಯಿತು.

೬೪ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಪಾಂಡವರು ಹಿಮವತ್ಪರ್ವತದಲ್ಲಿ ಬೀಡುಬಿಟ್ಟುದು: ರಾತ್ರಿಯನ್ನು ಉಪವಾಸದಿಂದ ಕಳೆದುದು

ವೈಶಂಪಾಯನರು ಹೇಳುತ್ತಾರೆ:

ತತಸ್ತೇ ಪ್ರಯಯುರ್ಹೃಷ್ಟಾಃ ಪ್ರಹೃಷ್ಟನರವಾಹನಾಃ ।
ರಥಘೋಷೇಣ ಮಹತಾ ಪೂರಯನ್ತೋ ವಸುನ್ಧರಾಮ್ ॥೧॥

ಜನಮೇಜಯ! ಸಂತುಷ್ಟರಾದ ಮನುಷ್ಯರಿಂದಲೂ, ವಾಹನಗಳಿಂದಲೂ ಕೂಡಿ ಪ್ರಹೃಷ್ಟರಾದ ಪಾಂಡವರು ರಥಗಳ ಶಬ್ದದಿಂದ ಭೂಮಿಯನ್ನು ತುಂಬುತ್ತಾ ಪ್ರಯಾಣಮಾಡಿದರು. ಸೂತ-ಮಾಗಧ-

ವಂದಿಗಳಿಂದ ಹೊಗಳಿಸಿಕೊಳ್ಳುತ್ತಿದ್ದ ಪಾಂಡವರು–ದ್ವಾದಶಾದಿತ್ಯರು ತಮ್ಮ ಕಿರಣಗಳಿಂದ ಪ್ರಕಾಶಿಸುವಂತೆ–ತಮ್ಮ ಸೈನ್ಯಗಳಿಂದ ಪರಿವೃತರಾಗಿ ಪ್ರಕಾಶಿಸುತ್ತಿದ್ದರು. ತಲೆಯ ಮೇಲೆ ಧರಿಸಿದ್ದ ಬೆಳ್ಗೊಡೆಯಿಂದ ಯುಧಿಷ್ಠಿರನು–ಹುಣ್ಣಿಮೆಯಂದು ಬೆಳದಿಂಗಳಿನಿಂದ ಆವೃತನಾದ ಚಂದ್ರನಂತೆ ಪ್ರಕಾಶಿಸುತ್ತಿದ್ದನು. ಪುರುಷಶ್ರೇಷ್ಠನಾದ ಯುಧಿಷ್ಠಿರನು ಪ್ರಯಾಣಮಾಡುತ್ತಿದ್ದಾಗ ಹಾದಿಯಲ್ಲಿ ಪ್ರಹೃಷ್ಟರಾದ ಜನರು ಮಾಡುತ್ತಿದ್ದ ಜಯಕಾರಪೂರ್ವಕವಾದ ಆಶೀರ್ವಾದಗಳನ್ನು ಯಥಾವತ್ತಾಗಿ ನ್ಯಾಯೋಚಿತ ವಾದ ರೀತಿಯಲ್ಲಿ ಪ್ರತಿಗ್ರಹಿಸುತ್ತಿದ್ದನು. ಅನೇಕ ಸೈನಿಕರು ಯುಧಿಷ್ಠಿರನನ್ನು ಅನುಸರಿಸಿ ಹೋಗುತ್ತಿದ್ದರು. ಅವರ ಕೋಲಾಹಲಶಬ್ದವು ಆಕಾಶವನ್ನು ಸ್ತಬ್ಧಗೊಳಿಸಿ ಅಲ್ಲಿಯೇ ಸ್ಥಿರವಾಗಿ ಉಳಿಯಿತು. ಯುಧಿಷ್ಠಿರನು ಹೀಗೆ ಸಪರಿವಾರನಾಗಿ ಅನೇಕ ಸರೋವರಗಳನ್ನೂ, ನದಿಗಳನ್ನೂ, ವನಗಳನ್ನೂ, ಉಪವನಗಳನ್ನೂ, ಪರ್ವತಗಳನ್ನೂ ದಾಟಿ ಕಡೆಗೆ ಮರುತ್ತನು ದ್ರವ್ಯವನ್ನಿಟ್ಟಿದ್ದ ಸ್ಥಳವನ್ನು ಸೇರಿದನು. ವೇದವೇದಾಂಗಪಾರಂಗತರಾದ ಧೌಮ್ಯರನ್ನೂ, ತಪಸ್ವಿಗಳೂ ವಿದ್ವಾಂಸರೂ ಜಿತೇಂದ್ರಿಯರೂ ಆಗಿದ್ದ ಬ್ರಾಹ್ಮಣರನ್ನೂ ಮುಂದೆ ಮಾಡಿಕೊಂಡು ಯುಧಿಷ್ಠಿರನು ಶುಭಕರವಾದ ಮತ್ತು ಸಮತಟ್ಟಾದ ಸ್ಥಳದಲ್ಲಿ ಸೈನ್ಯದೊಡನೆ ಬಿಡಾರಮಾಡಿದನು. ಯುಧಿಷ್ಠಿರನೊಡನೆ ಬಂದಿದ್ದ ರಾಜರೂ, ಪುರೋಹಿತಸಹಿತರಾದ ಬ್ರಾಹ್ಮಣರೂ ಯಥಾವಿಧಿಯಾಗಿ ಶಾಂತಿಕರ್ಮವನ್ನು ಮಾಡಿ ಮಧ್ಯದಲ್ಲಿ ಯುಧಿಷ್ಠಿರನನ್ನೂ ಮತ್ತು ಮಂತ್ರಿಗಳನ್ನೂ ಕುಳ್ಳಿರಿಸಿ ತಾವು ಸುತ್ತಲೂ ಕುಳಿತುಕೊಂಡರು. ಬ್ರಾಹ್ಮಣರು ಅಲ್ಲಿ ಆರು ರಾಜಮಾರ್ಗಗಳನ್ನೂ ಮತ್ತು ಒಂಬತ್ತು ನಿವೇಶನಗಳ ಗುಂಪುಗಳನ್ನೂ ರಚಿಸಿದರು. ಮದಿಸಿದ ಆನೆಗಳಿಗೂ ನಿವೇಶನಗಳನ್ನು ಯಥಾವಿಧಿಯಾಗಿ ನಿರ್ಮಿಸಿ ರಾಜೇಂದ್ರನಾದ ಯುಧಿಷ್ಠಿರನು ಬ್ರಾಹ್ಮಣರಿಗೆ ಹೀಗೆ ಹೇಳಿದನು:

“ವಿಪ್ರಶ್ರೇಷ್ಠರೇ! ಧನವನ್ನು ತರುವ ಕಾರ್ಯಸಿದ್ಧಿಗಾಗಿ ಯಾವ ನಕ್ಷತ್ರದಲ್ಲಿ ಯಾವ ದಿನದಂದು ಯಾವ ಶುಭಕರ್ಮವನ್ನು ಮಾಡ ಬೇಕೆಂದು ನೀವು ಭಾವಿಸುವಿರೋ–ಆ ಕರ್ಮವನ್ನು ಆ ಶುಭನಕ್ಷತ್ರ-ಶುಭ ದಿವಸದಲ್ಲಿ ಮಾಡಿರಿ. ಇಲ್ಲಿಯೇ ಹೆಚ್ಚು ಸಮಯವಿರುವಂತಾಗಿ ನಮ್ಮ

ಕಾಲವು ಹಾಳಾಗದ ರೀತಿಯಲ್ಲಿ ಸಾಧ್ಯವಾದಷ್ಟು ಬೇಗ ಆ ಕರ್ಮವನ್ನು ಮಾಡಬೇಕು. ವಿಪ್ರೇಂದ್ರರೇ! ಕಾರ್ಯಸಿದ್ಧಿಯು ಬಹಳ ಶೀಘ್ರವಾಗಿ ಆಗುವಂತೆ ನಿಶ್ಚಯಿಸಿ ಯಾವುದನ್ನು ಮಾಡಬೇಕಾಗಿರುವುದೋ ಅದನ್ನು ಮಾಡಿರಿ."

ಜನಮೇಜಯ! ಯುಧಿಷ್ಠಿರನ ಆ ಮಾತನ್ನು ಕೇಳಿ ಧರ್ಮರಾಜನಿಗೆ ಪ್ರಿಯವನ್ನುಂಟುಮಾಡುವ ಇಚ್ಛೆಯುಳ್ಳವರಾಗಿದ್ದ ಪುರೋಹಿತರಿಂದ ಕೂಡಿದ್ದ ಬ್ರಾಹ್ಮಣರು ಪರಮಸಂತುಷ್ಟರಾಗಿ ಹೇಳಿದರು:

ಅದ್ಯೈವ ನಕ್ಷತ್ರಮಹಶ್ಚ ಪುಣ್ಯಂ
ಯತಾಮಹೇ ಶ್ರೇಷ್ಠತಮಕ್ರಿಯಾಸು ।
ಅಮ್ಭೋಭಿರದ್ಯೇಹ ವಸಾಮ ರಾಜ-
ನ್ನುಪೋಷ್ಯತಾಂ ಚಾಪಿ ಭವದ್ಭಿರದ್ಯ ॥೧೪॥

"ಮಹಾರಾಜ! ಇಂದಿನ ದಿನವೇ ಪವಿತ್ರವಾದ ನಕ್ಷತ್ರದಿಂದ ಕೂಡಿರುವ ಶುಭದಿನವಾಗಿದೆ.ಆದುದರಿಂದ ಇಂದಿನಿಂದಲೇ ನಾವು ಶ್ರೇಷ್ಠತಮವಾದ ಕರ್ಮವನ್ನು ಮಾಡಲು ಪ್ರಯತ್ನಿಸುತ್ತೇವೆ. ನಾವು ಇಂದು ನೀರನ್ನು ಮಾತ್ರವೇ ಕುಡಿಯುತ್ತೇವೆ. ಬೇರೆ ಯಾವ ಆಹಾರವನ್ನೂ ತೆಗೆದುಕೊಳ್ಳುವುದಿಲ್ಲ. ನೀವು ಕೂಡ ಈ ದಿನ ಉಪವಾಸದಿಂದಿರಬೇಕು."

ಜನಮೇಜಯ! ದ್ವಿಜಶ್ರೇಷ್ಠರು ಹೇಳಿದ ಈ ಮಾತನ್ನು ಕೇಳಿ ಸಂತಸಗೊಂಡ ಪಾಂಡವರೈವರೂ ಉಪವಾಸವಿದ್ದು ದರ್ಭೆಯ ಆಸ್ತರಣಗಳಲ್ಲಿ ಮಲಗಿ ರಾತ್ರಿಯನ್ನು ಕಳೆದರು. ದರ್ಭೆಯ ಆಸ್ತರಣಗಳಲ್ಲಿ ಮಲಗಿದ್ದ ಪಾಂಡವರು ಯಜ್ಞದಲ್ಲಿ ಪ್ರಜ್ವಲಿಸುವ ಪಂಚಾಗ್ನಿಗಳಂತೆಯೇ ಕಾಣುತ್ತಿದ್ದರು. ಬ್ರಾಹ್ಮಣರು ಹೇಳುತ್ತಿದ್ದ ಸುಮಧುರವಾದ ಮಾತನ್ನು ಕೇಳುತ್ತಲೇ ಮಹಾತ್ಮರಾದ ಪಾಂಡವರಿಗೆ ಆ ರಾತ್ರಿಯು ಕಳೆದುಹೋಯಿತು. ನಿರ್ಮಲವಾದ ಪ್ರಭಾತಸಮಯದಲ್ಲಿ ಬ್ರಾಹ್ಮಣಶ್ರೇಷ್ಠರು ನರಾಧಿಪನಾದ ಯುಧಿಷ್ಠಿರನ ಬಳಿಗೆ ಬಂದು ಹೇಳಿದರು.

೬೪ನೆಯ ಅಧ್ಯಾಯವು ಮುಗಿಯಿತು.

ಬ್ರಾಹ್ಮಣರ ಆಜ್ಞೆಯಂತೆ ಯುಧಿಷ್ಠಿರನು ಈಶ್ವರನನ್ನೂ ಮತ್ತು ಭೂತಗಣಗಳನ್ನೂ ಅರ್ಚಿಸಿದುದು: ಭೂಮಿಯನ್ನಗೆದು ಧನರಾಶಿಯನ್ನು ತುಂಬಿಕೊಂಡು ಹಸ್ತಿನೆಗೆ ಪ್ರಯಾಣಮಾಡಿದುದು

ಬ್ರಾಹ್ಮಣರು ಹೇಳುತ್ತಾರೆ:

ಕ್ರಿಯತಾಮುಪಹಾರೋಽದ್ಯ ತ್ರ್ಯಮ್ಬಕಸ್ಯ ಮಹಾತ್ಮನಃ ।
ದತ್ತ್ವೋಪಹಾರಂ ನೃಪತೇ ತತಃ ಸ್ವಾರ್ಥಂ ಯತಾಮಹೇ ॥೧॥

"ನರೇಶ್ವರನೇ! ಈಗ ಮೊದಲು ಮಹಾತ್ಮನಾದ ಶಂಕರನಿಗೆ ಬಲಿಯನ್ನು ಸಮರ್ಪಿಸು. ಅನಂತರ ನಮ್ಮ ಕಾರ್ಯದ ಸಿದ್ಧಿಗಾಗಿ ಪ್ರಯತ್ನಿಸೋಣ."

ಜನಮೇಜಯ! ಬ್ರಾಹ್ಮಣರು ಹೇಳಿದ ಮಾತನ್ನು ಕೇಳಿ ಯುಧಿಷ್ಠಿರನು ಶಂಕರನಿಗೆ ಯಥಾವಿಧಿಯಾಗಿ ಪೂಜೆಯನ್ನೂ ನೈವೇದ್ಯವನ್ನೂ ಅರ್ಪಿಸಿದನು. ಬಳಿಕ ಪುರೋಹಿತರು ವಿಧಿಪೂರ್ವಕವಾಗಿ ಸಂಸ್ಕರಿಸಿದ ತುಪ್ಪದಿಂದ ಅಗ್ನಿದೇವನನ್ನು ತೃಪ್ತಿಗೊಳಿಸಿ ಮಂತ್ರಪೂರ್ವಕವಾಗಿ ಚರುವನ್ನು ಸಿದ್ಧಮಾಡಿಕೊಂಡು ಬಲಿಯನ್ನು ಕೊಡುವ ಸಲುವಾಗಿ ದೇವತೆಯ (ಶಿವನ) ಬಳಿಗೆ ಹೋದರು. ಪುರೋಹಿತರು ಮಂತ್ರಪೂತವಾದ ಪುಷ್ಪಗಳನ್ನು ಕೈಯಲ್ಲಿ ಹಿಡಿದುಕೊಂಡು ಮೋದಕಗಳಿಂದಲೂ, ಪಾಯಸದಿಂದಲೂ, ಮಾಂಸಗಳಿಂದಲೂ, ವಿಚಿತ್ರವಾದ ಪುಷ್ಪಗಳಿಂದಲೂ, ಅರಳುಗಳಿಂದಲೂ, ನಾನಾಪ್ರಕಾರವಾದ ವಸ್ತುಗಳಿಂದಲೂ ಬಲಿ ಸಮರ್ಪಣಮಾಡಿದರು. ವೇದಪಾರಂಗತರಾದ ವಿದ್ವಾಂಸರಾದ ಪುರೋಹಿತರು ವಿಧಿಪೂರ್ವಕವಾಗಿ ಶಿವನಿಗೆ ಪ್ರಿಯವಾಗುವ ಎಲ್ಲ ಕರ್ಮಗಳನ್ನೂ ಮಾಡಿದನಂತರ ಶಿವನ ಕಿಂಕರರಿಗೆ ಶ್ರೇಷ್ಠವಾದ ಬಲಿಯನ್ನು ಸಮರ್ಪಿಸಿದರು. ಅನಂತರ ಯಕ್ಷರಾಜನಾದ ಕುಬೇರನಿಗೂ, ಮಣಿಭದ್ರನಿಗೂ, ಇತರ ಯಕ್ಷರಿಗೂ, ಭೂತಗಳ ಅಧಿಪತಿಗಳಿಗೂ ಎಳ್ಳನ್ನದಿಂದಲೂ, ಮಾಂಸದಿಂದಲೂ, ಎಳ್ಳಿನಿಂದ ಕೂಡಿದ ನೀರಿನಿಂದಲೂ ಬಲಿಯನ್ನು ಅರ್ಪಿಸಿದರು.

ಪುರೋಹಿತರು ಅನ್ನವನ್ನು ಕುಂಭಗಳಲ್ಲಿ ತುಂಬಿ ದೇವತೆಗಳಿಗೂ, ಕಿಂಕರರಿಗೂ, ಯಕ್ಷಾದಿಗಳಿಗೂ ಬಲಿಯಾಗಿ ಅರ್ಪಿಸಿದರು. ಪುರೋಹಿತರ ನಿರ್ದೇಶದಂತೆ ಯುಧಿಷ್ಠಿರನು ಬ್ರಾಹ್ಮಣರಿಗೆ ಸಾವಿರಾರು ಗೋವುಗಳನ್ನು ದಾನವಾಗಿ ಕೊಟ್ಟು ರಾತ್ರಿಯಲ್ಲಿ ಸಂಚರಿಸುವ ಭೂತಗಣಗಳಿಗೂ ಬಲಿಯನ್ನು ಅರ್ಪಿಸಿದನು.

ಜನಮೇಜಯ! ದೇವದೇವನಾದ ಈಶ್ವರನ ಆ ಸ್ಥಳವು ಧೂಪದ ಸುಗಂಧದಿಂದಲೂ ಸುಮನೋಹರವಾದ ಮತ್ತು ಸುಗಂಧಯುಕ್ತವಾದ ಹೂಗಳಿಂದಲೂ ವ್ಯಾಪ್ತವಾಗಿದ್ದು ಅತ್ಯಂತ ಪ್ರಕಾಶಮಾನವಾಗಿ ಕಾಣುತ್ತಿದ್ದಿತು.

ಹೀಗೆ ಯುಧಿಷ್ಠಿರನು ರುದ್ರನಿಗೂ ಸಮಸ್ತಭೂತಗಣಗಳಿಗೂ ವಿಧ್ಯುಕ್ತವಾಗಿ ಪೂಜೆಯನ್ನು ಮಾಡಿ ವ್ಯಾಸರನ್ನು ಮುಂದೆ ಮಾಡಿಕೊಂಡು ಮರುತ್ತನ ರತ್ನನಿಧಿಯಿದ್ದ ಪ್ರದೇಶಕ್ಕೆ ಹೋದನು. ಅಲ್ಲಿ ಯುಧಿಷ್ಠಿರನು ಪುರೋಹಿತರ ನಿರ್ದೇಶದಂತೆ ವಿಚಿತ್ರವಾದ ಪುಷ್ಪಗಳಿಂದಲೂ, ಅಪೂಪ ಗಳಿಂದಲೂ, ಎಳ್ಳನ್ನದಿಂದಲೂ, ಧನಾಧ್ಯಕ್ಷನಾದ ಕುಬೇರನನ್ನು ಪೂಜಿಸಿ ಅಭಿವಾದನಪೂರ್ವಕವಾಗಿ ನಮಸ್ಕರಿಸಿದನು. ಬಳಿಕ ಅದೇ ಪೂಜಾಸಾಮಗ್ರಿ ಗಳಿಂದ ಶಂಖವೇ ಮೊದಲಾದ ನಿಧಿಗಳನ್ನೂ, ಸಮಸ್ತನಿಧಿಗಳ ಅಧಿಪತಿ ಗಳನ್ನೂ ಪೂಜಿಸಿ ನಮಸ್ಕರಿಸಿದನು. ಬ್ರಾಹ್ಮಣರನ್ನು ಸತ್ಕರಿಸಿ ಅವರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡನು. ಬ್ರಾಹ್ಮಣರ ಪುಣ್ಯಾಹಘೋಷ ದಿಂದಲೂ ಮತ್ತು ತೇಜಸ್ಸಿನಿಂದಲೂ ಯುಕ್ತನಾಗಿದ್ದ ಕುರುಶ್ರೇಷ್ಠನಾದ ಯುಧಿಷ್ಠಿರನು ಪ್ರಸನ್ನಚಿತ್ತನಾಗಿ ಧನದ ಸಲುವಾಗಿ ಭೂಮಿಯನ್ನು ಅಗೆಯ ತೊಡಗಿದನು. ಸ್ವಲ್ಪಹೊತ್ತಿನಲ್ಲಿಯೇ ಬಹುಪ್ರಕಾರವಾದ ಆಕಾರಗಳಿಂದ ಕೂಡಿದ್ದ, ಮನೋಹರವಾಗಿದ್ದ ದೊಡ್ಡ-ದೊಡ್ಡಪಾತ್ರೆಗಳೂ, ಸಣ್ಣ-ಸಣ್ಣ ತಂಬಿಗೆಗಳೂ, ಸುವರ್ಣಮಯವಾದ ಕಡಾಯಿಗಳೂ, ಕಲಶಗಳೂ, ಶರಾವೆ ಗಳೂ, ವಿಚಿತ್ರವಾದ ಪಾತ್ರೆಗಳೂ ಸಾವಿರಾರು ಸಂಖ್ಯೆಯಲ್ಲಿ ಅವನಿಗೆ ಸಿಕ್ಕಿ ದುವು. ಯುಧಿಷ್ಠಿರನು ಅವೆಲ್ಲವನ್ನೂ ಹೊರತಂದನು. ಅವುಗಳನ್ನು ಸುರಕ್ಷಿತ ವಾಗಿಡಲು ಅಲ್ಲಿ ದೊಡ್ಡ ದೊಡ್ಡ ಸಂದೂಕಗಳೂ ಇದ್ದುವು. ಮುಚ್ಚಲ್ಪಟ್ಟಿದ್ದ ಆ ಪಾತ್ರೆಗಳಲ್ಲಿ ಒಂದೊಂದೂ ಅರ್ಧ ತುಲೆ*ಯಷ್ಟು ಭಾರವಾಗಿದ್ದಿತು.

---

* ತುಲಾ=೧೦೦ ಪಲಕಗಳು. ೫ ಗುಲಗಂಜಿಗಳ ತೂಕ ೧ ಆರ್ಯಮಾಪಕ. ೧೬ ಆರ್ಯಮಾಪಕಗಳು ೧ ಪಲ. ೧೦೦ ಪಲಗಳು ೧ ತುಲಾ. ೨೦ ತುಲೆಗಳು ೧ ಭಾರ.

ಆ ಪಾತ್ರೆಗಳೆಲ್ಲವನ್ನೂ ಹೊತ್ತುಕೊಂಡು ಹೋಗಲು ಪಾಂಡುಪುತ್ರನಾದ ಯುಧಿಷ್ಠಿರನ ವಾಹನಗಳು ಅಲ್ಲಿ ಸಿದ್ಧವಾಗಿ ನಿಂತಿದ್ದುವು. ಅರುವತ್ತು ಲಕ್ಷ ಒಂಟೆಗಳೂ, ಒಂದು ಕೋಟಿ ಎಪ್ಪತ್ತು ಲಕ್ಷ ಕುದುರೆಗಳೂ, ಒಂದು ಲಕ್ಷಆನೆಗಳೂ, ಒಂದು ಲಕ್ಷ ಗಾಡಿಗಳೂ, ಒಂದು ಲಕ್ಷ ರಥಗಳೂ, ಒಂದು ಲಕ್ಷ ಹೆಣ್ಣಾನೆಗಳೂ ಯುಧಿಷ್ಠಿರನ ಐಶ್ವರ್ಯವನ್ನು ಸಾಗಿಸುವ ಸಲುವಾಗಿ ಅಲ್ಲಿ ಉಪಸ್ಥಿತವಾಗಿದ್ದುವು. ಮನುಷ್ಯರ ಮತ್ತು ಕತ್ತೆಗಳ ಸಂಖ್ಯೆಯಂತೂ ಗಣನೆಗೆ ಸಿಕ್ಕದಷ್ಟು ಹೆಚ್ಚಾಗಿದ್ದಿತು. (ಒಂಟೆಯು ಹದಿನಾರು ಸಾವಿರ ಸುವರ್ಣವನ್ನು ಹೊರುವುದೆಂದೂ, ಕುದುರೆಯು ಎಂಟು ಸಾವಿರ ಸುವರ್ಣವನ್ನು ಹೊರುವುದೆಂದೂ, ಆನೆಯೂ ಮತ್ತು ಗಾಡಿಯೂ ಇಪ್ಪತ್ತುನಾಲ್ಕು ಸಾವಿರ ಸುವರ್ಣವನ್ನು ಹೊರುವುದೆಂದೂ ಭಾರಲಕ್ಷಣವನ್ನು ತಿಳಿದವರು ಹೇಳುತ್ತಾರೆ.) ಒಂಟೆಯೇ ಮೊದಲಾದ ವಾಹನಗಳಲ್ಲಿ ಅಲ್ಲಿ ಸಿಕ್ಕಿದ ಅಪಾರದ್ರವ್ಯವನ್ನು ಯುಧಿಷ್ಠಿರನು ತುಂಬಿಸಿಕೊಂಡು, ಪುನಃ ಮಹಾದೇವನನ್ನು ಪೂಜಿಸಿ, ಕೃಷ್ಣದ್ವೈಪಾಯನರ ಅನುಮತಿಯನ್ನು ಪಡೆದು ಪುರೋಹಿತರನ್ನು ಮುಂದೆಮಾಡಿಕೊಂಡು ಹಸ್ತಿನಾಪಟ್ಟಣದ ಕಡೆಗೆ ಪ್ರಯಾಣಹೊರಟನು. ಸುವರ್ಣದ ಭಾರವು ಅಧಿಕವಾಗಿದ್ದುದರಿಂದ ಪುರುಷಶ್ರೇಷ್ಠನಾದ ಯುಧಿಷ್ಠಿರನು ಪ್ರತಿಗಾವುದದ ಪ್ರಯಾಣಕ್ಕೂ ಸೈನಿಕರ ವಿಶ್ರಾಂತಿಗಾಗಿ ಬೀಡುಬಿಡುತ್ತಿದ್ದನು. ಹಸ್ತಿನಾಪಟ್ಟಣದ ಅಭಿಮುಖವಾಗಿ ಹೊರಟಿದ್ದ ಯುಧಿಷ್ಠಿರನ ಆ ಮಹಾಸೈನ್ಯವು ದ್ರವ್ಯಧನದಿಂದ ಪೀಡಿಸಲ್ಪಡುತ್ತಿದ್ದರೂ ಕುರುರಾಜಕುಮಾರರನ್ನು ಸಂತೋಷಗೊಳಿಸುತ್ತಾ ಬಹಳ ಕಷ್ಟದಿಂದ ಆ ಮಹೈಶ್ವರ್ಯವನ್ನು ಹೊತ್ತು ಹಸ್ತಿನಾಪುರಕ್ಕೆ ಪ್ರಯಾಣಮಾಡಿತು.”

೬೫ನೆಯ ಅಧ್ಯಾಯವು ಮುಗಿಯಿತು.

(ಇದು ಚಿನ್ನದ ತೂಕ.) ಷೋಡಶಾಷ್ಟೌ ಚತುರ್ವಿಂಶತ್ಸಹಸ್ರಂ ಭಾರಲಕ್ಷಣಮ್ । ಎಂಬ ಶ್ಲೋಕದ ಉತ್ತರಾರ್ಧಕ್ಕೆ ಹಿಂದಿ ವ್ಯಾಖ್ಯಾನಕಾರರು ೧೬,೦೮,೨೪,೦೦೦ ಭಾರ ಸುವರ್ಣವು ಅಲ್ಲಿ ಸಿಕ್ಕಿತೆಂದು ಅರ್ಥಮಾಡಿದ್ದಾರೆ. ೨೦೦೦ ಪಲಗಳು= ೧ ಭಾರ. ನಾವು ಕೊಟ್ಟಿರುವ ಅರ್ಥವು ನೀಲಕಂಠರ ವ್ಯಾಖ್ಯೆಗೆ ಅನುಗುಣವಾಗಿದೆ.

ಹಸ್ತಿನಾಪಟ್ಟಣಕ್ಕೆ ಶ್ರೀಕೃಷ್ಣನ ಆಗಮನ: ಉತ್ತರೆಯ ಮೃತಪುತ್ರನನ್ನು ಬದುಕಿಸಲು ಕುಂತಿಯು ಶ್ರೀಕೃಷ್ಣನನ್ನು ಪ್ರಾರ್ಥಿಸಿದುದು

ವೈಶಂಪಾಯನರು ಹೇಳುತ್ತಾರೆ:

ಏತಸ್ಮಿನ್ನೇವ ಕಾಲೇ ತು ವಾಸುದೇವೋಽಪಿ ವೀರ್ಯವಾನ್ ।
ಉಪಾಯಾದ್ವೃಷ್ಣಿಭಿಃ ಸಾರ್ಧಂ ಪುರಂ ವಾರಣಸಾಹ್ವಯಮ್ ॥೧॥

ಜನಮೇಜಯ! ಅದೇ ಸಮಯಕ್ಕೆ ಸರಿಯಾಗಿ ವೀರ್ಯವಂತನಾದ ವಾಸುದೇವನು ವೃಷ್ಣಿಬಂಧುಗಳೊಡನೆ ಹಸ್ತಿನಾಪಟ್ಟಣಕ್ಕೆ ಆಗಮಿಸಿದನು. ಪುರುಷಶ್ರೇಷ್ಠನಾದ ಶ್ರೀಕೃಷ್ಣನು ಹಿಂದೆ ದ್ವಾರಕೆಗೆ ಹಿಂದಿರುಗುವಾಗ ಧರ್ಮರಾಜನಿಂದ ಅಶ್ವಮೇಧಯಾಗದ ಸಮಯವನ್ನು ತಿಳಿದುಕೊಂಡು ಪ್ರಯಾಣಮಾಡಿದ್ದನು. ಯಜ್ಞವು ಶೀಘ್ರದಲ್ಲಿಯೇ ನಡೆಯಲಿದೆಯೆಂದು ತಿಳಿದ ಶ್ರೀಕೃಷ್ಣನು ರುಕ್ಮಿಣಿಯ ಮಗನಾದ ಪ್ರದ್ಯುಮ್ನ, ಸಾತ್ಯಕಿ, ಚಾರುದೇಷ್ಣ, ಸಾಂಬ, ಗದ, ಕೃತವರ್ಮಾ, ಸಾರಣ, ವೀರನಾದ ನಿಶಠ ಮತ್ತು ಉಲ್ಮುಕರೊಡನೆ ಬಲಭದ್ರನನ್ನು ಮುಂದೆಮಾಡಿಕೊಂಡು ಸುಭದ್ರಾಸಹಿತನಾಗಿ ಯುಧಿಷ್ಠಿರನ ಅರಮನೆಗೆ ಆಗಮಿಸಿದನು. ದ್ರೌಪದಿಯನ್ನೂ ಉತ್ತರೆಯನ್ನೂ ಮತ್ತು ಕುಂತಿಯನ್ನೂ ನೋಡಿ ಅವರ ಯೋಗ-ಕ್ಷೇಮಗಳನ್ನು ವಿಚಾರಿಸುವುದು ಮತ್ತು ಪತಿಗಳನ್ನು ಕಳೆದುಕೊಂಡ ಕ್ಷತ್ರಿಯಸ್ತ್ರೀಯರನ್ನು ಸಮಾಧಾನಗೊಳಿಸುವುದು–ಇದೇ ಶ್ರೀಕೃಷ್ಣನು ಬಂದುದರ ಮುಖ್ಯವಾದ ಉದ್ದೇಶವಾಗಿದ್ದಿತು. ಬಲರಾಮ ಪ್ರಮುಖರಾಗಿ ಹೀಗೆ ಆಗಮಿಸಿದ ವೃಷ್ಣಿಕುಲವೀರರನ್ನು ಮಹೀಪತಿಯಾದ ಧೃತರಾಷ್ಟ್ರನೂ ಮತ್ತು ಮಹಾಮತಿಯಾದ ವಿದುರನೂ ನೋಡುತ್ತಲೇ ಮುಂದೆ ಹೋಗಿ ಆದರದಿಂದ ಯಥಾವಿಧಿಯಾಗಿ ಸ್ವಾಗತಿಸಿದರು. ವಿದುರನಿಂದಲೂ ಮತ್ತು ಯುಯುತ್ಸುವಿನಿಂದಲೂ ಸತ್ಕೃತನಾದ ಮಹಾತೇಜಸ್ವಿಯಾದ ಶ್ರೀಕೃಷ್ಣನು ಅಲ್ಲಿಯೇ ಸ್ವಲ್ಪ ದಿವಸಗಳವರೆಗೆ

ವಾಸಮಾಡಿಕೊಂಡಿದ್ದನು. ಶ್ರೀಕೃಷ್ಣನೊಡನೆ ಆಗಮಿಸಿದ್ದ ವೃಷ್ಣಿವೀರರೂ ಅಲ್ಲಿಯೇ ಇದ್ದರು. ಜನಮೇಜಯ! ವೃಷ್ಣಿವೀರರು ಹಸ್ತಿನಾಪಟ್ಟಣದಲ್ಲಿ ವಾಸಮಾಡುತ್ತಿರುವಾಗಲೇ ಶತ್ರುಹಂತಕನಾದ ನಿನ್ನ ತಂದೆ ಪರಿಕ್ಷಿತನ ಜನನವಾಯಿತು. ಅಶ್ವತ್ಥಾಮನು ಪ್ರಯೋಗಿಸಿದ್ದ ಬ್ರಹ್ಮಾಸ್ತ್ರದಿಂದ ಪೀಡಿತ ವಾಗಿದ್ದ ಆ ಶಿಶುವು ಹೊರಬರುತ್ತಲೇ ಚೇಷ್ಟಾರಹಿತವಾದ ಶವದಂತಾಗಿ ಬಂಧುಗಳಿಗೆ ಏಕಕಾಲದಲ್ಲಿ ಹರ್ಷವನ್ನೂ, ದುಃಖವನ್ನೂ ಹೆಚ್ಚಿಸಿತು. ಮೊದಲು ರಾಜಪುತ್ರನು ಹುಟ್ಟಿದನೆಂಬ ಸಮಾಚಾರವನ್ನು ಕೇಳಿ ಹೃಷ್ಟರಾದ ಪ್ರಜೆಗಳು ಮಾಡಿದ ಸಿಂಹನಾದವು ದಿಕ್ಕು-ದಿಕ್ಕುಗಳನ್ನು ವ್ಯಾಪಿಸಿತು. ಮರುಕ್ಷಣದಲ್ಲಿಯೇ ಶಿಶುವು ಮರಣಹೊಂದಿತೆಂಬುದನ್ನು ಕೇಳಿ ಹರ್ಷವು ಶಾಂತವಾಗಿಬಿಟ್ಟಿತು.

ಆ ಸಮಯದಲ್ಲಿ ವ್ಯಾಕುಲಕೊಂಡ ಇಂದ್ರಿಯ ಮತ್ತು ಮನಸ್ಸುಗಳಿಂದ ಕೂಡಿದ್ದ ಶ್ರೀಕೃಷ್ಣನು ಸಾತ್ಯಕಿಯೊಡನೆ ಅವಸರದಿಂದ ಅಂತಃಪುರವನ್ನು ಪ್ರವೇಶಿಸಿದನು. ಆಗ ಸೋದರತ್ತೆಯಾದ ಕುಂತಿಯು ಶ್ರೀಕೃಷ್ಣನನ್ನು ಕುರಿತು ಬಾರಿ-ಬಾರಿಗೂ 'ಅಭಿಧಾವ' -'ಓಡಿಹೋಗು' ಎಂದು ಕೂಗಿಕೊಳ್ಳುತ್ತಿದ್ದಳು. ಕುಂತಿಯ ಹಿಂದೆಯೇ ಕರುಣಾಜನಕವಾದ ರೀತಿಯಲ್ಲಿ ರೋದನಮಾಡುತ್ತಿದ್ದ ದ್ರೌಪದಿಯನ್ನೂ, ಯಶೋವತಿಯಾದ ಸುಭದ್ರೆಯನ್ನೂ, ಇತರ ಬಂಧುಸ್ತ್ರೀಯರನ್ನೂ ಶ್ರೀಕೃಷ್ಣನು ನೋಡಿದನು. ಜನಮೇಜಯ! ಬಳಿಕ ಭೋಜರಾಜನ ಮಗಳಾದ ಕುಂತಿಯು ಶ್ರೀಕೃಷ್ಣನ ಬಳಿಗೆ ಬಂದು ಕಣ್ಣೀರು ಸುರಿಸುತ್ತಾ ಗದ್ಗದಧ್ವನಿಯಿಂದ ಹೇಳಿದಳು:

ವಾಸುದೇವ ಮಹಾಬಾಹೋ ಸುಪ್ರಜಾ ದೇವಕೀ ತ್ವಯಾ ।
ತ್ವಂ ನೋ ಗತಿಃ ಪ್ರತಿಷ್ಠಾ ಚ ತ್ವದಾಯತ್ತಮಿದಂ ಕುಲಮ್ ॥೧೫॥

"ಮಹಾಬಾಹುವೇ! ವಾಸುದೇವನೇ! ದೇವಕೀದೇವಿಯು ನಿನ್ನಿಂದ ಸುಪ್ರಜಳಾದಳು. (ಸುಪುತ್ರಿಯಾದಳು.) ನೀನೇ ನಮಗೆ ಆಶ್ರಯನೂ ಆಧಾರಭೂತನೂ ಆಗಿರುವೆ. ಈ ಕುಲದ ರಕ್ಷಣೆಯು ನಿನ್ನ ಅಧೀನದಲ್ಲಿದೆ.

ಯದುಪ್ರವೀರ ಯೋಽಯಂ ತೇ ಸ್ವಸ್ರೀಯಸ್ಯಾತ್ಮಜಃ ಪ್ರಭೋ ।
ಅಶ್ವತ್ಥಾಮ್ನಾ ಹತೋ ಜಾತಸ್ತಮುಜ್ಜೀವಯ ಕೇಶವ ॥೧೬॥

ಯದುಪ್ರವೀರನೇ! ಇದು ನಿನ್ನ ಸೋದರಳಿಯನ ಮಗು. ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ಮರಣಹೊಂದಿಯೇ ಜನಿಸಿದೆ. ಕೇಶವನೇ! ಇದನ್ನು ಬದುಕಿಸು.

ತ್ವಯಾ ಹ್ಯೇತತ್ಪ್ರತಿಜ್ಞಾತಮೈಷೀಕೇ ಯದುನನ್ದನ ।
ಅಹಂ ಸಂಜೀವಯಿಷ್ಯಾಮಿ ಮೃತಂ ಜಾತಮಿತಿ ಪ್ರಭೋ ॥೧೭॥

ಯದುನಂದನನೇ! ಅಶ್ವತ್ಥಾಮನು ಜೊಂಡನ್ನು (ಇಷೀಕವನ್ನು) ಬ್ರಹ್ಮಾಸ್ತ್ರವನ್ನಾಗಿ ಅಭಿಮಂತ್ರಿಸಿ ಪಾಂಡವಕುಲವನ್ನೇ ಲಕ್ಷ್ಯವನ್ನಾಗಿಟ್ಟುಕೊಂಡು ಪ್ರಯೋಗಿಸಿದಾಗ-'ಮೃತಂ ಜಾತಂ ಅಹಂ ಸಂಜೀವಯಿಷ್ಯಾಮಿ-ಸತ್ತುಹುಟ್ಟುವ ಮಗುವನ್ನು ನಾನು ಬದುಕಿಸುವೆನು'– ಎಂಬುದಾಗಿ ನೀನು ಪ್ರತಿಜ್ಞೆಯನ್ನು ಮಾಡಿದ್ದೆ.

ಸೋಽಯಂ ಜಾತೋ ಮೃತಸ್ತಾತ ಪಶ್ಯೈನಂ ಪುರುಷರ್ಷಭ ।

ಪುರುಷಶ್ರೇಷ್ಠನೇ! ಈ ಶಿಶುವನ್ನು ನೋಡು. ಇದು ಮೃತವಾಗಿಯೇ ಜನಿಸಿದೆ. ಇದರ ಮೇಲೆ ಕೃಪಾದೃಷ್ಟಿಯನ್ನಿಡು. ಈ ಶಿಶುವನ್ನು ಬದುಕಿಸಿಕೊಟ್ಟು ಉತ್ತರೆಯನ್ನೂ, ಸುಭದ್ರೆಯನ್ನೂ, ದ್ರೌಪದಿಯನ್ನೂ, ಧರ್ಮಪುತ್ರ-ಭೀಮ, ಅರ್ಜುನ-ನಕುಲ-ಸಹದೇವರನ್ನೂ ಸಂರಕ್ಷಿಸು. ಈ ಸಮಯದಲ್ಲಿ ನಮ್ಮೆಲ್ಲರನ್ನೂ ಈ ಮಹಾಸಂಕಟದಿಂದ ಉದ್ಧರಿಸುವುದು ನಿನಗೆ ಯೋಗ್ಯವಾಗಿದೆ. ನನ್ನ ಮತ್ತು ಪಾಂಡವರ ಪ್ರಾಣಗಳು ಈ ಶಿಶುವಿನ ಅಧೀನದಲ್ಲಿವೆ. ನನ್ನ ಮಾವನಾದ ವಿಚಿತ್ರವೀರ್ಯನಿಗೂ ಮತ್ತು ಪತಿಯಾದ ಪಾಂಡುವಿಗೂ ಕೊಡಬೇಕಾದ ಪಿಂಡದಾನವು ಈ ಶಿಶುವನ್ನೇ ಅವಲಂಬಿಸಿದೆ.

ಜನಾರ್ದನನೇ! ನಿನಗೆ ಮಂಗಳವಾಗಲಿ. ನಿನಗೆ ಅತ್ಯಂತಪ್ರಿಯನೂ, ನಿನಗೆ ಸಮಾನನೂ, ಸುಂದರನೂ ಆಗಿದ್ದ ಈಗ ಪರಲೋಕದಲ್ಲಿರುವ ಅಭಿಮನ್ಯುವಿಗೂ ನೀನು ಈ ಶಿಶುವನ್ನು ಬದುಕಿಸುವುದರ ಮೂಲಕ ಪ್ರಿಯವನ್ನುಂಟುಮಾಡು. ಶತ್ರುಸೂದನನೇ! ಕೃಷ್ಣ! ಉತ್ತರೆಯೂ– ಹಿಂದೆ ಅಭಿಮನ್ಯುವು ಅವಳೊಡನೆ ಹೇಳಿದ್ದ ಮಾತುಗಳನ್ನು–ಆ ಮಾತುಗಳು ಅತ್ಯಂತಪ್ರಿಯವಾಗಿದ್ದುದರಿಂದ ನನ್ನೊಡನೆ ಬಾರಿ-ಬಾರಿಗೂ ಹೇಳುತ್ತಿದ್ದಳು. ಆ ಮಾತುಗಳು ಅತ್ಯಂತಪ್ರಿಯವಾಗಿದ್ದುವೆಂಬುದರಲ್ಲಿ

ಸಂಶಯವೇ ಇಲ್ಲ. ಅರ್ಜುನನ ಮಗನಾದ ಅಭಿಮನ್ಯುವು ವಿರಾಟನ ಮಗಳಾದ ಉತ್ತರೆಗೆ ಹೀಗೆ ಹೇಳುತ್ತಿದ್ದನಂತೆ:

ಮಾತುಲಸ್ಯ ಕುಲಂ ಭದ್ರೇ ತವ ಪುತ್ರೋ ಗಮಿಷ್ಯತಿ ।
ಗತ್ವಾ ವೃಷ್ಣ್ಯನ್ಧಕಕುಲಂ ಧನುರ್ವೇದಂ ಗ್ರಹೀಷ್ಯತಿ ।
ಅಸ್ತ್ರಾಣಿ ಚ ವಿಚಿತ್ರಾಣಿ ನೀತಿಶಾಸ್ತ್ರಂ ಚ ಕೇವಲಮ್ ॥೨೪॥

“ಕಲ್ಯಾಣಿ! ನಿನ್ನ ಮಗನು ನನ್ನ ಸೋದರಮಾವನ (ಶ್ರೀಕೃಷ್ಣನ) ಮನೆಗೆ ಹೋಗುತ್ತಾನೆ. ವೃಷ್ಣಿ ಮತ್ತು ಅಂಧಕರ ಮನೆಗೆ ಹೋಗಿ ಧನುರ್ವೇದವನ್ನೂ, ನಾನಾಪ್ರಕಾರವಾದ ವಿಚಿತ್ರವಾದ ಅಸ್ತ್ರ-ಶಸ್ತ್ರಗಳನ್ನೂ, ಸಮಗ್ರವಾದ ನೀತಿಶಾಸ್ತ್ರವನ್ನೂ ಪಡೆದುಕೊಳ್ಳುತ್ತಾನೆ.”

ಕೃಷ್ಣ! ಇದೇ ಮುಂತಾಗಿ ಶತ್ರುವೀರಹಂತಕನಾದ, ಶತ್ರುಗಳಿಂದ ಎದುರಿಸಲು ಅಸಾಧ್ಯನಾಗಿದ್ದ ಅಭಿಮನ್ಯುವು ತನ್ನ ಪತ್ನಿಯಾದ ಉತ್ತರೆ ಯೊಡನೆ ಪ್ರೇಮಪೂರ್ವಕವಾಗಿ ಹೇಳುತ್ತಿದ್ದನು. ಇದರಲ್ಲಿ ಸಂದೇಹವೇ ಇಲ್ಲ.

ತಾಸ್ತ್ವಾಂ ವಯಂ ಪ್ರಣಮ್ಯೇಹ ಯಾಚಾಮೋ ಮಧುಸೂದನ ।
ಕುಲಸ್ಯಾಸ್ಯ ಹಿತಾರ್ಥಂ ತಂ ಕುರು ಕಲ್ಯಾಣಮುತ್ತಮಮ್ ॥೨೬॥

ಮಧುಸೂದನನೇ! ಈ ಕುರುಕುಲಕ್ಕೆ ಸೇರಿರುವ ಸ್ತ್ರೀಯರೆಲ್ಲರೂ ನಿನ್ನ ಪಾದಗಳಿಗೆ ನಮಿಸಿ ಬೇಡಿಕೊಳ್ಳುತ್ತೇವೆ. ಈ ಕುರುಕುಲದ ಹಿತಾರ್ಥವಾಗಿ ಈ ಶಿಶುವನ್ನು ಬದುಕಿಸಿಕೊಡುವ ಶ್ರೇಷ್ಠವಾದ ಮಂಗಳಕಾರ್ಯವನ್ನು ಮಾಡು.”

ಜನಮೇಜಯ! ವಿಶಾಲಾಕ್ಷಿಯಾದ ಕುಂತಿಯು ಶ್ರೀಕೃಷ್ಣನಿಗೆ ಹೀಗೆ ಹೇಳಿ ದುಃಖಪೀಡಿತಳಾಗಿ ಕೈಗಳೆರಡನ್ನೂ ಮೇಲಕ್ಕೆತ್ತಿಕೊಂಡು ಧೊಪ್ಪನೆ ಬಿದ್ದುಬಿಟ್ಟಳು. ಅವಳ ಜೊತೆಯಲ್ಲಿಯೇ ದ್ರೌಪದಿಯೇ ಮೊದಲಾದ ಇತರ ಸ್ತ್ರೀಯರೂ ಬಿದ್ದುಬಿಟ್ಟರು. ಅರಮನೆಯಲ್ಲಿದ್ದವರೆಲ್ಲರೂ ಕಣ್ಣೀರು ಸುರಿಸುತ್ತಾ–‘ಅಯ್ಯೋ! ಶ್ರೀಕೃಷ್ಣನ ಸೋದರಿಯ ಮೊಮ್ಮಗನು ಸತ್ತುಹುಟ್ಟಿರುವನಲ್ಲಾ!’–ಎಂದು ಕೂಗಿಕೊಳ್ಳುತ್ತಿದ್ದರು. ಅವರೆಲ್ಲರ ಮಾತುಗಳನ್ನೂ ಕೇಳಿದ ಶ್ರೀಕೃಷ್ಣನು ಭೂಮಿಯಲ್ಲಿ ಬಿದ್ದಿದ್ದ ತನ್ನ

ಸೋದರತ್ತೆಯಾದ ಕುಂತಿಯನ್ನು ಹಿಡಿದೆಬ್ಬಿಸಿ ಕುಳ್ಳಿರಿಸಿ ಸವಿಮಾತುಗಳಿಂದ ಸಂತೈಸಿದನು.

೬೬ನೆಯ ಅಧ್ಯಾಯವು ಮುಗಿಯಿತು.

೬೭ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಶಿಶುವನ್ನು ಬದುಕಿಸುವಂತೆ ಸುಭದ್ರೆಯು ಶ್ರೀಕೃಷ್ಣನನ್ನು ಪ್ರಾರ್ಥಿಸಿದುದು.

ವೈಶಂಪಾಯನರು ಹೇಳುತ್ತಾರೆ:

ಉತ್ಥಿತಾಯಾಂ ಪೃಥಾಯಾಂ ತು ಸುಭದ್ರಾ ಭ್ರಾತರಂ ತದಾ ।
ದೃಷ್ಟ್ವಾ ಚುಕ್ರೋಶ ದುಃಖಾರ್ತಾ ವಚನಂ ಚೇದಮಬ್ರವೀತ್ ॥೧॥

ನೆಲದಲ್ಲಿ ಬಿದ್ದಿದ್ದ ಕುಂತಿಯು ಎದ್ದುಕುಳಿತನಂತರ ಸುಭದ್ರೆಯು ತನ್ನ ಅಣ್ಣನಾದ ಶ್ರೀಕೃಷ್ಣನನ್ನು ನೋಡಿ ದುಃಖಪೀಡಿತಳಾಗಿ ಅಳುತ್ತಳುತ್ತಲೇ ಶ್ರೀಕೃಷ್ಣನಿಗೆ ಹೇಳಿದಳು:

ಪುಣ್ಡರೀಕಾಕ್ಷ ಪಶ್ಯ ತ್ವಂ ಪೌತ್ರಂ ಪಾರ್ಥಸ್ಯ ಧೀಮತಃ ।
ಪರಿಕ್ಷೀಣೇಷು ಕುರುಷು ಪರಿಕ್ಷೀಣಂ ಗತಾಯುಷಮ್ ॥೨॥

“ಪುಂಡರೀಕಾಕ್ಷನೇ! ಕುರುವಂಶೀಯರೆಲ್ಲರೂ ಸಂತಾನವಿಲ್ಲದೇ ಕ್ಷಯಿಸುತ್ತಿರಲಾಗಿ ಆಯುಷ್ಯವನ್ನೇ ಕಳೆದುಕೊಂಡು ನತದೃಷ್ಟನಾಗಿ ಹುಟ್ಟಿರುವ ಧೀಮಂತನಾದ ಅರ್ಜುನನ ಈ ಮೊಮ್ಮಗನನ್ನು ನೋಡು.

ಇಷೀಕಾ ದ್ರೋಣಪುತ್ರೇಣ ಭೀಮಸೇನಾರ್ಥಮುದ್ಯತಾ ।
ಸೋತ್ತರಾಯಾಂ ನಿಪತಿತಾ ವಿಜಯೇ ಮಯಿ ಚೈವ ಹ ॥೩॥

ದ್ರೋಣನ ಮಗನಾದ ಅಶ್ವತ್ಥಾಮನು ಭೀಮಸೇನನನ್ನು ಸಂಹರಿಸುವ ಸಲುವಾಗಿ ಪ್ರಯೋಗಿಸಿದ ಇಷೀಕಾಸ್ತ್ರವು ಉತ್ತರೆಯ ಮೇಲೂ ನನ್ನ ಮೇಲೂ ಮತ್ತು ಅರ್ಜುನನ ಮೇಲೂ ಬಿದ್ದಿತು.

ಸೇಯಂ ವಿದೀರ್ಣೇ ಹೃದಯೇ ಮಯಿ ತಿಷ್ಠತಿ ಕೇಶವ ।
ಯನ್ನ ಪಶ್ಯಾಮಿ ದುರ್ಧರ್ಷ ಸಹಪುತ್ರಂ ತು ತಂ ವಿಭೋ ॥೪॥

ದುರ್ಧರ್ಷನೇ! ಕೇಶವನೇ! ಪ್ರಭುವೇ! ಆ ಇಷೀಕಾಸ್ತ್ರವು ಈಗಲೂ ಸೀಳಿಹೋಗಿರುವ ಈ ನನ್ನ ಹೃದಯದಲ್ಲಿ ಸ್ಥಿರವಾಗಿ ನಿಂತಿದೆ. (ನಿಂತು ಸಂಕಟವನ್ನುಂಟುಮಾಡುತ್ತಿದೆ.) ಪುತ್ರಸಹಿತನಾದ ಅಭಿಮನ್ಯುವನ್ನು ನಾನೀಗ ಕಾಣುತ್ತಿಲ್ಲ. ಇದಕ್ಕಿಂತಲೂ ದುಃಖಕರವಾದುದು ಬೇರೆ ಯಾವುದಿದೆ?

ಕಿಂ ನ ವಕ್ಷ್ಯತಿ ಧರ್ಮಾತ್ಮಾ ಧರ್ಮರಾಜೋ ಯುಧಿಷ್ಠಿರಃ ।
ಭೀಮಸೇನಾರ್ಜುನೌ ಚಾಪಿ ಮಾದ್ರವತ್ಯಾಃ ಸುತೌ ಚ ತೌ ॥೫॥

ಶ್ರುತ್ವಾಭಿಮನ್ಯೋಸ್ತನಯಂ ಜಾತಂ ಚ ಮೃತಮೇವ ಚ ।
ಮುಷಿತಾ ಇವ ವಾರ್ಷ್ಣೇಯ ದ್ರೋಣಪುತ್ರೇಣ ಪಾಣ್ಡವಾಃ ॥೬॥

ಅಭಿಮನ್ಯುವಿನ ಮಗನು ಹುಟ್ಟುತ್ತಲೇ ಸತ್ತುಹೋಗಿರುವನೆಂಬ ವಾರ್ತೆಯನ್ನು ಕೇಳಿ ಯುಧಿಷ್ಠಿರನು ಏನೆಂದು ಹೇಳುವನು? ಭೀಮಾರ್ಜುನ-ನಕುಲ-ಸಹದೇವರಾದರೂ ಏನೆನ್ನುತ್ತಾರೆ? ವಾರ್ಷ್ಣೇಯನೇ! ನಿಜವಾಗಿ ಹೇಳುವುದಾದರೆ ದ್ರೋಣರ ಮಗನಾದ ಅಶ್ವತ್ಥಾಮನು ಪಾಂಡವರ ಸರ್ವಸ್ವವನ್ನೂ ಕೊಳ್ಳೆಹೊಡೆದುಬಿಟ್ಟನು.

ಅಭಿಮನ್ಯುಃ ಪ್ರಿಯಃ ಕೃಷ್ಣ ಭ್ರಾತೄಣಾಂ ನಾತ್ರ ಸಂಶಯಃ ।
ತೇ ಶ್ರುತ್ವಾ ಕಿಂ ನು ವಕ್ಷ್ಯನ್ತಿ ದ್ರೋಣಪುತ್ರಾಸ್ತ್ರನಿರ್ಜಿತಾಃ ॥೭॥

ಕೃಷ್ಣ! ಅಭಿಮನ್ಯುವು ಪಾಂಡವರೈವರಿಗೂ ಅತ್ಯಂತಪ್ರಿಯನಾದವನೇ ಸರಿ. ಇದರಲ್ಲಿ ಸಂಶಯವೇ ಇಲ್ಲ. ಅಂತಹವನಿಗೆ ಇಂತಹ ಮೃತಪುತ್ರನು ಹುಟ್ಟಿರುವನೆಂಬುದನ್ನು ಕೇಳಿದ ದ್ರೋಣಪುತ್ರನ ಅಸ್ತ್ರದಿಂದ ಪರಾಜಿತರಾಗಿರುವ ಪಾಂಡವರೇನು ಹೇಳುವರು?

ಭವಿತಾತಃ ಪರಂ ದುಃಖಂ ಕಿಂ ತದನ್ಯಜ್ಜನಾರ್ದನ ।
ಅಭಿಮನ್ಯೋಃ ಸುತಾತ್ಕೃಷ್ಣ ಮೃತಾಜ್ಜಾದರಿಂದಮ ॥೮॥

ಶತ್ರುಸೂದನನೇ! ಜನಾರ್ದನ! ಅಭಿಮನ್ಯುವಿಗೆ ಮೃತಪುತ್ರನು ಹುಟ್ಟಿರುವುದಕ್ಕಿಂತಲೂ ಮಿಗಿಲಾದ ದುಃಖವು ಯಾವುದು ತಾನೇ ಇರುವುದು?

ಸಾಹಂ ಪ್ರಸಾದಯೇ ಕೃಷ್ಣ ತ್ವಾಮದ್ಯ ಶಿರಸಾ ನತಾ ।
ಪೃಥೇಯಂ ದ್ರೌಪದೀ ಚೈವ ತಾಃ ಪಶ್ಯ ಪುರುಷೋತ್ತಮ ॥೯॥

ಪುರುಷೋತ್ತಮನೇ! ಶ್ರೀಕೃಷ್ಣ! ಈಗ ನಾನು ತಲೆಬಾಗಿ ನಮಸ್ಕರಿಸುತ್ತಾ ಪ್ರಸನ್ನನಾಗುವಂತೆ ನಿನ್ನನ್ನು ಬೇಡಿಕೊಳ್ಳುತ್ತೇನೆ. ಈ ನಮ್ಮ ಅತ್ತೆಯಾದ ಕುಂತಿಯೂ ದ್ರೌಪದಿಯೂ ಅಂಗಲಾಚಿ ಬೇಡಿಕೊಳ್ಳುತ್ತಿರುವುದನ್ನು ನೋಡು. ದಯೆತೋರು.

ಯದಾ ದ್ರೋಣಸುತೋ ಗರ್ಭಾನ್ಪಾಣ್ಡೂನಾಂ ಹನ್ತಿ ಮಾಧವ ।
ತದಾ ಕಿಲ ತ್ವಯಾ ದ್ರೌಣಿಃ ಕ್ರುದ್ಧೇನೋಽಕ್ತೋಽರಿಮರ್ದನ ॥೧೦॥

ಮಾಧವನೇ! ದ್ರೋಣರ ಮಗನಾದ ಅಶ್ವತ್ಥಾಮನು ಪಾಂಡುಪುತ್ರರ ಗರ್ಭವನ್ನು ನಾಶಗೊಳಿಸಲು ಯತ್ನಿಸಿದಾಗ ನೀನು ಕ್ರುದ್ಧನಾಗಿ ಅವನಿಗೆ ಹೀಗೆ ಹೇಳಿದ್ದೆ:

ಅಕಾಮಂ ತ್ವಾಂ ಕರಿಷ್ಯಾಮಿ ಬ್ರಹ್ಮಬನ್ಧೋ ನರಾಧಮ ।
ಅಹಂ ಸಂಜೀವಯಿಷ್ಯಾಮಿ ಕಿರೀಟಿತನಯಾತ್ಮಜಮ್ ॥೧೧॥

"ಬ್ರಹ್ಮಬಂಧುವೇ! ನರಾಧಮನೇ! ನಿನ್ನ ಅಪೇಕ್ಷೆಯು ನೆರವೇರದಂತೆ ಮಾಡುತ್ತೇನೆ. ಅರ್ಜುನನ ಮೊಮ್ಮಗನನ್ನು ನಾನು ಬದುಕಿಸುತ್ತೇನೆ."

ಶತ್ರುಗಳಿಂದ ಎದುರಿಸಲು ಅಸಾಧ್ಯನಾದವನೇ! ಅಶ್ವತ್ಥಾಮನೊಡನೆ ನೀನು ಹೇಳಿದ ಆ ಮಾತನ್ನು ಕೇಳಿದಾಗಲೇ ನಾನು ನಿನ್ನ ಬಲವೆಷ್ಟೆಂಬುದನ್ನು ಅರಿತುಕೊಂಡೆನು. ಕೃಷ್ಣ! ನಿನ್ನನ್ನು ನಾನು ಪುನಃ ಪುನಃ ಬೇಡಿಕೊಳ್ಳುತ್ತೇನೆ. ಅಶ್ವತ್ಥಾಮನಿಗೆ ನೀನು ಹೇಳಿದಂತೆ ನಿನ್ನ ಪ್ರಭಾವದಿಂದ ಅಭಿಮನ್ಯುಪುತ್ರನು ಜೀವಿಸಲಿ.

ಯದ್ಯೇತತ್ತ್ವಂ ಪ್ರತಿಶ್ರುತ್ಯ ನ ಕರೋಷಿ ವಚಃ ಶುಭಮ್ ।
ಸಕಲಂ ವೃಷ್ಣಿಶಾರ್ದೂಲ ಮೃತಾಂ ಮಾಮವಧಾರಯ ॥೧೩॥

ವೃಷ್ಣಿಕುಲಸಿಂಹನೇ! 'ಅಹಂ ಸಂಜೀವಯಿಷ್ಯಾಮಿ'–ಎಂದು ಹಿಂದೆ ಮಾಡಿರುವ ಆ ಶುಭಪ್ರತಿಜ್ಞೆಯನ್ನು ಸಂಪೂರ್ಣವಾಗಿ ಪಾಲಿಸದಿದ್ದರೆ ನನ್ನನ್ನೂ ಮೃತಳಾದಳೆಂದೇ ಭಾವಿಸು. ನಾನು ಕೂಡ ಪ್ರಾಣತ್ಯಾಗಮಾಡುತ್ತೇನೆ.

ಅಭಿಮನ್ಯೋಃ ಸುತೋ ವೀರ ನ ಸಂಜೀವತಿ ಯದ್ಯಯಮ್ ।
ಜೀವತಿ ತ್ವಯಿ ದುರ್ಧರ್ಷ ಕಿಂ ಕರಿಷ್ಯಾಮ್ಯಹಂ ತ್ವಯಾ ॥೧೪॥

ದುರ್ಧರ್ಷನೇ! ವೀರನೇ! ನೀನು ಜೀವಿಸಿದ್ದೂ ಅಭಿಮನ್ಯುವಿನ ಈ ಮಗನು ಬದುಕದೇ ಇದ್ದರೆ ನಿನ್ನನ್ನು ಕಟ್ಟಿಕೊಂಡು ನಾನೇನು ಮಾಡಲಿ?

ಸಂಜೀವಯೈನಂ ದುರ್ಧರ್ಷ ಮೃತಂ ತ್ವಮಭಿಮನ್ಯುಜಮ್ ।
ಸದೃಶಾಕ್ಷಸುತಂ ವೀರ ಸಸ್ಯಂ ವರ್ಷನ್ನಿವಾಮ್ಬುದಃ ॥೧೫॥

ದುರ್ಧರ್ಷನೇ! ಮೃತನಾಗಿರುವ ಈ ಅಭಿಮನ್ಯುವಿನ ಮಗನನ್ನು ಬದುಕಿಸು. ಮೇಘವು ಮಳೆಗರೆದು ಸೊರಗಿಹೋದ ಸಸ್ಯವನ್ನು ಚೇತನಗೊಳಿಸುವಂತೆ-ನಿನ್ನ ಕಣ್ಣುಗಳಿಗೆ ಸದೃಶವಾದ ಕಣ್ಣುಗಳನ್ನು ಹೊಂದಿದ್ದ ಅಭಿಮನ್ಯುವಿನ ಮಗನನ್ನು ಚೇತನಗೊಳಿಸು.

ತ್ವಂ ಹಿ ಕೇಶವ ಧರ್ಮಾತ್ಮಾ ಸತ್ಯವಾನ್ಸತ್ಯವಿಕ್ರಮಃ ।
ಸ ತಾಂ ವಾಚಮೃತಾಂ ಕರ್ತುಮರ್ಹಸಿ ತ್ವಮರಿಂದಮ ॥೧೬॥

ಕೇಶವ! ನೀನು ಧರ್ಮಾತ್ಮನು. ಸತ್ಯವಂತನು. ಸತ್ಯಪರಾಕ್ರಮನು. ಅರಿಂದಮನೇ! ಅಂದು ಅಶ್ವತ್ಥಾಮನಿಗೆ ಹೇಳಿದ್ದ ಮಾತನ್ನು ಸತ್ಯವಾಗಿಸು.

ಇಚ್ಛನ್ನಪಿ ಹಿ ಲೋಕಾಂಸ್ತ್ರೀಞ್ಜೀವಯೇಥಾ ಮೃತಾನಿಮಾನ್ ।
ಕಿಂ ಪುನರ್ದಯಿತಂ ಜಾತಂ ಸ್ವಸ್ರೀಯಸ್ಯಾತ್ಮಜಂ ಮೃತಮ್ ॥೧೭॥

ಮಾಧವ! ನೀನು ಅಪೇಕ್ಷಿಸಿದ್ದೇ ಆದರೆ ಮೃತ್ಯುಮುಖವಾಗಿರುವ ಮೂರು ಲೋಕಗಳನ್ನೂ (ಮೂರುಲೋಕದ ಜನರನ್ನೂ) ಬದುಕಿಸಬಲ್ಲೆ. ಅಂತಹ ಸಾಮರ್ಥ್ಯವು ನಿನಗಿದೆ. ಹೀಗಿರುವಾಗ ಸತ್ತುಹುಟ್ಟಿರುವ, ನಿನ್ನ ಪ್ರೀತಿಗೆ ಪಾತ್ರನಾದ ಈ ಸೋದರಳಿಯನ ಮಗನನ್ನು ಬದುಕಿಸಲಾರೆಯಾ?

ಪ್ರಭಾವಜ್ಞಾಸ್ಮಿ ತೇ ಕೃಷ್ಣ ತಸ್ಮಾತ್ತ್ವಾಂ ಯಾಚಯಾಮ್ಯಹಮ್ ।
ಕುರುಷ್ವ ಪಾಣ್ಡುಪುತ್ರಾಣಾಮಿಮಂ ಪರಮನುಗ್ರಹಮ್ ॥೧೮॥

ಕೃಷ್ಣ! ನಿನ್ನ ಪ್ರಭಾವವನ್ನು ನಾನು ತಿಳಿದಿರುವೆನು. ಆದುದರಿಂದಲೇ

ನಿನ್ನನ್ನು ಬೇಡಿಕೊಳ್ಳುತ್ತಿದ್ದೇನೆ. ನೀನೀಗ ಈ ಮೃತಬಾಲಕನನ್ನು ಬದುಕಿಸಿ ಪಾಂಡುವಿನ ಮಕ್ಕಳನ್ನು ಅನುಗ್ರಹಿಸು.

ಸ್ವಸೇತಿ ವಾ ಮಹಾಬಾಹೋ ಹತಪುತ್ರೇತಿ ವಾ ಪುನಃ।
ಪ್ರಪನ್ನಾ ಮಾಮಿಯಂ ಚೇತಿ ದಯಾಂ ಕರ್ತುಮಿಹಾರ್ಹಸಿ ॥೧೯॥

ಮಹಾಬಾಹುವೇ! ಕೃಷ್ಣ! ತಂಗಿಯೆಂದಾದರೂ ನನ್ನ ಮೇಲೆ ದಯೆತೋರು. 'ಇದ್ದೊಬ್ಬ ವೀರಪುತ್ರನನ್ನು ಯುದ್ಧದಲ್ಲಿ ಕಳೆದುಕೊಂಡುಬಿಟ್ಟಿರುವಳಲ್ಲಾ'-ಎಂದಾದರೂ ಮರುಕಗೊಂಡು ನಿನ್ನ ಪ್ರತಿಜ್ಞೆಯಂತೆ ನಡೆದುಕೊ. 'ನನ್ನನ್ನೇ ಶರಣುಹೊಂದಿದ್ದಾಳೆ'-ಎಂಬ ದಯಾಭಾವದಿಂದಲಾದರೂ ನನ್ನ ಮೊಮ್ಮಗನನ್ನು ಬದುಕಿಸಿಕೊಡು."

ಿ೬೭ನೆಯ ಅಧ್ಯಾಯವು ಮುಗಿಯಿತು.

೬೮ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಪ್ರಸೂತಿಗೃಹಕ್ಕೆ ಶ್ರೀಕೃಷ್ಣನ ಪ್ರವೇಶ: ಉತ್ತರೆಯ ವಿಲಾಪ: ಮಗನನ್ನು ಬದುಕಿಸಿಕೊಡುವಂತೆ ಉತ್ತರೆಯ ಪ್ರಾರ್ಥನೆ

ವೈಶಂಪಾಯನರು ಹೇಳುತ್ತಾರೆ:

ಏವಮುಕ್ತಸ್ತು ರಾಜೇನ್ದ್ರ ಕೇಶಿಹಾ ದುಃಖಮೂರ್ಛಿತಃ।
ತಥೇತಿ ವ್ಯಾಜಹಾರೋಚ್ಚೈರ್ಹ್ಲಾದಯನ್ನಿವ ತಂ ಜನಮ್ ॥೧॥

ಜನಮೇಜಯ! ಸುಭದ್ರೆಯು ಕೃಷ್ಣನಿಗೆ ಹೀಗೆ ಹೇಳಿದನಂತರ ಅತಿ ದುಃಖಿತನಾದ ಕೇಶಿಹಂತಕನಾದ ಕೇಶವನು ಅಲ್ಲಿ ನೆರೆದಿದ್ದವರೆಲ್ಲರನ್ನೂ ಅಹ್ಲಾದಗೊಳಿಸುವನೋ ಎಂಬಂತೆ ಸುಭದ್ರೆಗೆ ಗಟ್ಟಿಯಾಗಿ ಹೇಳಿದನು: "ಹಾಗೆಯೇ ಆಗಲಿ, ತಂಗಿ! ನನ್ನ ಪ್ರತಿಜ್ಞೆಯಂತೆ ನಿನ್ನ ಮೊಮ್ಮಗನನ್ನು ಬದುಕಿಸುವೆನು."

ಜನಮೇಜಯ! ಬೇಸಿಗೆಯ ಬಿಸಿಲಿನಿಂದ ಬಳಲಿದವನಿಗೆ ನೀರನ್ನು ಕೊಟ್ಟು ಸಂತಸಗೊಳಿಸುವಂತೆ–ಆ ಒಂದೇ ಮಾತಿನಿಂದ ಪುರುಷಶ್ರೇಷ್ಠನಾದ, ವಿಭುವಾದ ಶ್ರೀಕೃಷ್ಣನು ಅಲ್ಲಿದ್ದ ಸುಭದ್ರೆಯೇ ಮೊದಲಾದ ಎಲ್ಲರನ್ನೂ ಆಹ್ಲಾದಗೊಳಿಸಿದನು. ಅನಂತರ ಅತಿಶೀಘ್ರವಾಗಿಯೇ

ಶ್ರೀಕೃಷ್ಣನು ಬಿಳಿಯ ಹೂಗಳಿಂದ ಪೂಜಿಸಲ್ಪಟ್ಟು ಅಲಂಕರಿಸಲಾಗಿದ್ದ ನಿನ್ನ ತಂದೆಯಿದ್ದ ಪ್ರಸೂತಿಗೃಹವನ್ನು ಪ್ರವೇಶಿಸಿದನು.

ಅಪಾಂ ಕುಮ್ಭೈಃ ಸುಪೂರ್ಣೈಶ್ಚ ವಿನ್ಯಸ್ತೈಃ ಸರ್ವತೋದಿಶಮ್।
ಘೃತೇನ ತಿನ್ದುಕಾಲಾತೈಃ ಸರ್ಷಪೈಶ್ಚ ಮಹಾಭುಜ ॥೪॥

ಮಹಾಬಾಹುವೇ! ಆ ಪ್ರಸೂತಿಗೃಹದಲ್ಲಿ ಎಲ್ಲ ಕಡೆಗಳಲ್ಲಿಯೂ ಜಲಪೂರ್ಣವಾದ ಕುಂಭಗಳಿದ್ದುವು. ತುಪ್ಪದಲ್ಲಿ ನೆನೆದ ತುಂಬೇಗಿಡದ ಪಂಜುಗಳು ಬೆಳಗುತ್ತಿದ್ದುವು. ಪ್ರಸೂತಿಗೃಹದ ಸುತ್ತಲೂ ಬಿಳೀಸಾಸಿವೆಯನ್ನು ಎರಚಿದ್ದರು.

ಅಸ್ತ್ರೈಶ್ಚ ವಿಮಲೈರ್ನ್ಯಸ್ತೈಃ ಪಾವಕೈಶ್ಚ ಸಮನ್ತತಃ ।
ವೃದ್ಧಾಭಿಶ್ಚಾಪಿ ರಾಮಾಭಿಃ ಪರಿಚಾರಾರ್ಥಮಾವೃತಮ್ ।
ದಕ್ಷೈಶ್ಚ ಪರಿತೋ ಧೀರ ಭಿಷಗ್ಭಿಃ ಕುಶಲೈಸ್ತಥಾ ॥೫॥

ಶುಭ್ರವಾದ ಥಳಥಳಿಸುತ್ತಿದ್ದ ಅಸ್ತ್ರಗಳನ್ನು ಪ್ರಸೂತಿಗೃಹದ ಸುತ್ತಲೂ ಇಟ್ಟಿದ್ದರು. ಸುತ್ತಲೂ ಅಗ್ನಿಗಳು ಪ್ರಜ್ವಲಿಸುತ್ತಿದ್ದುವು. ರಾಜಪುತ್ರಿಯನ್ನು ಉಪಚರಿಸುವ ಸಲುವಾಗಿ ನೇಮಿಸಿದ್ದ ವೃದ್ಧಸ್ತ್ರೀಯರಿಂದ ಆ ಪ್ರಸೂತಿಗೃಹವು ತುಂಬಿಹೋಗಿದ್ದಿತು. ದಕ್ಷರಾದ ಮತ್ತು ಕುಶಲರಾದ ವೈದ್ಯರೂ ಸುತ್ತಲೂ ನಿಂತಿದ್ದರು.

ದದರ್ಶ ಚ ತೇಜಸ್ವೀ ರಕ್ಷೋಘ್ನಾನ್ಯಪಿ ಸರ್ವಶಃ ।
ದ್ರವ್ಯಾಣಿ ಸ್ಥಾಪಿತಾನಿ ಸ್ಮ ವಿಧಿವತ್ಕುಶಲೈರ್ಜನೈಃ ॥೬॥

ವ್ಯವಸ್ಥಾಕುಶಲರಾದ ಜನರು, ರಾಕ್ಷಸರನ್ನು ವಿನಾಶಗೊಳಿಸಲು ಸಮರ್ಥವಾದ ಪದಾರ್ಥಗಳನ್ನು ಪ್ರಸೂತಿಗೃಹದ ಸುತ್ತಲೂ ವಿಧಿವತ್ತಾಗಿ ಇಟ್ಟಿರುವುದನ್ನೂ ತೇಜಸ್ವಿಯಾದ ಶ್ರೀಕೃಷ್ಣನು ನೋಡಿದನು.

ನಿನ್ನ ತಂದೆಯ ಆ ಜನ್ಮಸ್ಥಳವು ಹೀಗೆ ಅವಶ್ಯಕವಾದ ವಸ್ತುಗಳಿಂದ ಸಂಪನ್ನವಾಗಿದ್ದುದನ್ನು ನೋಡಿ ಹೃಷೀಕೇಶನಿಗೆ ಸಂತೋಷವಾಯಿತು. 'ಸಾಧು! ಸಾಧು! ವ್ಯವಸ್ಥೆಯು ಬಹಳ ಚೆನ್ನಾಗಿದೆ'–ಎಂದೂ ಹೊಗಳಿದನು. ಶ್ರೀಕೃಷ್ಣನು ಅರಳಿದ ನಗುಮುಖದಿಂದ ಹೀಗೆ ಹೇಳುತ್ತಿರುವಾಗ ದ್ರೌಪದಿಯು ಅವಸರದಿಂದ ಹೋಗಿ ಉತ್ತರೆಗೆ ಹೀಗೆ ಹೇಳಿದಳು:

ಅಯಮಾಯಾತಿ ತೇ ಭದ್ರೇ ಶ್ವಶುರೋ ಮಧುಸೂದನಃ।
ಪುರಾಣರ್ಷಿರಚಿನ್ತ್ಯಾತ್ಮಾ ಸಮೀಪಮಪರಾಜಿತಃ ॥೯॥

"ಕಲ್ಯಾಣಿಯೇ! ಇದೋ ಇಲ್ಲಿ ನೋಡು. ನಿನ್ನ ಮಾವನಾದ ಅಚಿಂತ್ಯರೂಪನಾದ, ಅಪರಾಜಿತನಾದ, ಪುರಾತನಮಹರ್ಷಿಯಾದ, ಪೂಜ್ಯನಾದ ಮಧುಸೂದನನು ನಿನ್ನ ಬಳಿಗೆ ಬರುತ್ತಿದ್ದಾನೆ."

ಜನಮೇಜಯ! ದ್ರೌಪದಿಯ ಈ ಮಾತನ್ನು ಕೇಳಿ ಉತ್ತರೆಯು ಅಳುವುದನ್ನು ನಿಲ್ಲಿಸಿ ಕಣ್ಣೀರನ್ನೊರೆಸಿಕೊಳ್ಳುತ್ತಾ ಸೀರೆಯನ್ನು ಸರಿಪಡಿಸಿಕೊಂಡಳು. ದೇವಿಯಾದ ಉತ್ತರೆಯು ಶ್ರೀಕೃಷ್ಣನನ್ನು ದೇವರೆಂದೇ ಭಾವಿಸಿದ್ದಳು. ಶೋಚನೀಯಸ್ಥಿತಿಯಲ್ಲಿದ್ದ ಆ ಉತ್ತರೆಯು ಗೋವಿಂದನು ಬರುತ್ತಿರುವುದನ್ನು ನೋಡಿ, ದುಃಖದಿಂದ ಪೀಡಿತವಾಗಿದ್ದ ಹೃದಯದಿಂದ ಕೂಡಿದವಳಾಗಿ ದೈನ್ಯದಿಂದ ಬಿಕ್ಕಿ-ಬಿಕ್ಕಿ ಅಳುತ್ತಾ ಶ್ರೀಕೃಷ್ಣನಿಗೆ ಹೇಳಿದಳು:

ಪುಣ್ಡರೀಕಾಕ್ಷ ಪಶ್ಯಾವಾಂ ಬಾಲೇನ ಹಿ ವಿನಾಕೃತೌ।
ಅಭಿಮನ್ಯುಂ ಚ ಮಾಂ ಚೈವ ಹತೌ ತುಲ್ಯಂ ಜನಾರ್ದನ ॥೧೨॥

"ಕಮಲನಯನನೇ! ಜನಾರ್ದನ! ನಾನು ಮತ್ತು ನನ್ನ ಪತಿ ಇಬ್ಬರೂ ಸಂತಾನಹೀನರಾದುದನ್ನು ನೋಡು. ಅಭಿಮನ್ಯುವೂ ಮತ್ತು ನಾನೂ ಇಬ್ಬರೂ ಹತರಾದೆವು. (ಅಭಿಮನ್ಯುವು ಯುದ್ಧದಲ್ಲಿ ಮಡಿದನು. ನಾನು ಸತ್ತಮಗನನ್ನು ಪಡೆದು ಪುತ್ರಶೋಕದಿಂದ ಮೃತಪ್ರಾಯಳಾಗಿದ್ದೇನೆ.)

ವಾರ್ಷ್ಣೇಯ ಮಧುಹನ್ವೀರ ಶಿರಸಾ ತ್ವಾಂ ಪ್ರಸಾದಯೇ।
ದ್ರೋಣಪುತ್ರಾಸ್ತ್ರನಿರ್ದಗ್ಧಂ ಜೀವಯೈನಂ ಮಮಾತ್ಮಜಮ್ ॥೧೩॥

ವೃಷ್ಣಿನಂದನನೇ! ಮಧುಸೂದನನೇ! ವೀರನೇ! ತಲೆಬಾಗಿ ನಮಸ್ಕರಿಸುತ್ತಾ ನಿನ್ನನ್ನು ಬೇಡಿಕೊಳ್ಳುತ್ತೇನೆ. ದ್ರೋಣಪುತ್ರನ ಇಷೀಕಾಸ್ತ್ರದಿಂದ ಬೆಂದುಹೋಗಿರುವ ಈ ನನ್ನ ಮಗನನ್ನು ಬದುಕಿಸು.

ಯದಿ ಸ್ಮ ಧರ್ಮರಾಜ್ಞಾ ವಾ ಭೀಮಸೇನೇನ ವಾ ಪುನಃ ।
ತ್ವಯಾ ವಾ ಪುಣ್ಡರೀಕಾಕ್ಷ ವಾಕ್ಯಮುಕ್ತಮಿದಂ ಭವೇತ್ ॥೧೪॥

ಅಜಾನತೀಮಿಷೀಕೇಯಂ ಜನಿತ್ರೀಂ ಹನ್ತ್ವಿತಿ ಪ್ರಭೋ ।
ಅಹಮೇವ ವಿನಷ್ಟಾ ಸ್ಯಾಂ ನೈತದೇವಂಗತೇ ಭವೇತ್ ॥೧೫॥

ಪುಂಡರೀಕಾಕ್ಷನೇ! ಧರ್ಮರಾಜನಾಗಲೀ, ಭೀಮಸೇನನಾಗಲೀ, ನೀನಾಗಲೀ-"ಅಶ್ವತ್ಥಾಮನು ಬಿಟ್ಟ ಇಷೀಕಾಸ್ತ್ರವು ಅರಿವಿಲ್ಲದ ತಾಯಿಯನ್ನೇ ಕೊಲ್ಲಲಿ"–ಎಂದು ಹೇಳಿಬಿಟ್ಟಿದ್ದರೆ, ನಾನೇ ಮರಣಹೊಂದುತ್ತಿದ್ದೆನು. ಮೃತಪುತ್ರನನ್ನು ನೋಡುವ ಈ ದುಃಸ್ಥಿತಿಯು ನನಗೆ ಬರುತ್ತಿರಲಿಲ್ಲ.

ಗರ್ಭಸ್ಥಸ್ಯಾಸ್ಯ ಬಾಲಸ್ಯ ಬ್ರಹ್ಮಾಸ್ತ್ರೇಣ ನಿಪಾತನಮ್ ।
ಕೃತ್ವಾ ನೃಶಂಸಂ ದುರ್ಬುದ್ಧಿರ್ದ್ರೌಣಿಃ ಕಿಂ ಫಲಮಶ್ನುತೇ ॥೧೬॥

ಹೊಟ್ಟೆಯಲ್ಲಿದ್ದ ಈ ಬಾಲಕನನ್ನು ಬ್ರಹ್ಮಾಸ್ತ್ರದಿಂದ ಸಂಹರಿಸುವ ಮೂಲಕ ಅತ್ಯಂತ ಕ್ರೂರವಾದ ಕರ್ಮವನ್ನು ಮಾಡಿದ್ದರಿಂದ ದುರ್ಬುದ್ಧಿಯಾದ ಅಶ್ವತ್ಥಾಮನಿಗಾದ ಪ್ರಯೋಜನವಾದರೂ ಏನು?

ಸಾ ತ್ವಾಂ ಪ್ರಸಾದ್ಯ ಶಿರಸಾ ಯಾಚೇ ಶತ್ರುನಿಬರ್ಹಣಮ್ ।
ಪ್ರಾಣಾಂಸ್ತ್ಯಕ್ಷ್ಯಾಮಿ ಗೋವಿನ್ದ ನಾಯಂ ಸಂಜೀವತೇ ಯದಿ ॥೧೭॥

ಗೋವಿಂದ! ಶತ್ರುಗಳನ್ನು ವಿನಾಶಗೊಳಿಸುವ ಸಾಮರ್ಥ್ಯವುಳ್ಳ ನಿನ್ನನ್ನು ತಲೆಬಾಗಿ ನಮಸ್ಕರಿಸಿ ಬೇಡಿಕೊಳ್ಳುತ್ತೇನೆ. ದಯಮಾಡಿ ಈ ನನ್ನ ಮಗುವನ್ನು ಬದುಕಿಸಿಕೊಡು. ಒಂದು ವೇಳೆ ಈ ಶಿಶುವನ್ನು ನೀನು ಬದುಕಿಸದಿದ್ದರೆ ಖಂಡಿತವಾಗಿಯೂ ನಾನು ಪ್ರಾಣಗಳನ್ನು ತ್ಯಜಿಸುತ್ತೇನೆ.

ಅಸ್ಮಿನ್ಹಿ ಬಹವಃ ಸಾಧೋ ಯೇ ಮಮಾಸನ್ಮನೋರಥಾಃ।
ತೇ ದ್ರೋಣಪುತ್ರೇಣ ಹತಾಃ ಕಿಂ ನು ಜೀವಾಮಿ ಕೇಶವ ॥೧೮॥

ಸತ್ಪುರುಷನೇ! ಈ ನನ್ನ ಮಗನಲ್ಲಿಯೇ ನಾನು ನನ್ನ ಮನಸ್ಸಿನ ಆಕಾಂಕ್ಷೆಗಳೆಲ್ಲವನ್ನೂ ಇಟ್ಟುಕೊಂಡಿದ್ದೆನು. ಆ ನನ್ನ ಮನೋರಥಗಳೆಲ್ಲವೂ ದ್ರೋಣನ ಮಗನಿಂದ ನುಚ್ಚುನೂರಾಗಿ ಹೋದುವು. ನಾನಿನ್ನೇಕೆ ಜೀವಿಸಿರಲಿ? ಕೇಶವ!

ಆಸೀನ್ಮಮ ಮತಿಃ ಕೃಷ್ಣ ಪುತ್ರೋತ್ಸಙ್ಗಾ ಜನಾರ್ದನ ।
ಅಭಿವಾದಯಿಷ್ಯೇ ಹೃಷ್ಯೇತಿ ತದಿದಂ ವಿಥತೀಕೃತಮ್ ॥೧೯॥

ಕೃಷ್ಣ! ಈ ನನ್ನ ಪುಟ್ಟಕಂದನನ್ನು ಕಂಕುಳಿನಲ್ಲೆತ್ತಿಕೊಂಡು ಸಂತೋಷಭರಿತಳಾಗಿ ನಿನ್ನನ್ನು ನಮಸ್ಕರಿಸಬೇಕೆಂದು ಬಹಳ ಆಶಿಸಿದ್ದೆನು. ಆದರೆ ಆ ನನ್ನ ಆಶಯವೆಲ್ಲವೂ ಮಣ್ಣುಪಾಲಾಗಿಹೋಯಿತು.

ಚಪಲಾಕ್ಷಸ್ಯ ದಾಯಾದೇ ಮೃತೇಽಸ್ಮಿನ್ಪುರುಷರ್ಷಭ ।
ವಿಫಲಾ ಮೇ ಕೃತಾಃ ಕೃಷ್ಣ ಹೃದಿ ಸರ್ವೇ ಮನೋರಥಾಃ ॥೨೦॥

ಪುರುಷಶ್ರೇಷ್ಠನೇ! ಕೃಷ್ಣ! ಚಂಚಲಾಕ್ಷನಾದ ನನ್ನ ಪತಿಯ ಈ ಪುತ್ರನು ಸತ್ತುಹೋಗಲಾಗಿ ನನ್ನ ಮನಸ್ಸಿನಲ್ಲಿದ್ದ ಎಲ್ಲ ವಿಧವಾದ ಆಸೆ-ಆಕಾಂಕ್ಷೆಗಳೂ ನಿಷ್ಫಲವಾಗಿ ಹೋದುವು.

ಚಪಲಾಕ್ಷಃ ಕಿಲಾತೀವ ಪ್ರಿಯಸ್ತೇ ಮಧುಸೂದನ ।
ಸುತಂ ಪಶ್ಯ ತ್ವಮಸ್ಯೈನಂ ಬ್ರಹ್ಮಾಸ್ತ್ರೇಣ ನಿಪಾತಿತಮ್ ॥೨೧॥

ಮಧುಸೂದನನೇ! ಚಂಚಲನೇತ್ರನಾದ ನನ್ನ ಪತಿಯು ನಿನಗೆ ಅತಿಪ್ರಿಯನಾಗಿರಲಿಲ್ಲವೇ? ಅಂತಹವನ ಮಗನೀಗ ಬ್ರಹ್ಮಾಸ್ತ್ರದ ಪ್ರಹಾರದಿಂದ ಸತ್ತುಬಿದ್ದಿರುವುದನ್ನಾದರೂ ನೋಡು.

ಕೃತಘ್ನೋಽಯಂ ನೃಶಂಸೋಽಯಂ ಯಥಾಸ್ಯ ಜನಕಸ್ತಥಾ।
ಯಃ ಪಾಣ್ಡವೀಂ ಶ್ರಿಯಂ ತ್ಯಕ್ತ್ವಾ ಗತೋಽದ್ಯ ಯಮಸಾದನಮ್॥

ಈ ಬಾಲಕನೂ ಕೂಡ ಇವನ ತಂದೆಯಂತೆಯೇ ಕೃತಘ್ನನೂ ಕ್ರೂರಿಯೂ ಆಗಿದ್ದಾನೆ. ಏಕೆಂದರೆ: ತಂದೆಯಂತೆಯೇ ಇವನು ಕೂಡ ಪಾಂಡವರ ರಾಜ್ಯಲಕ್ಷ್ಮಿಯನ್ನು ಪರಿತ್ಯಜಿಸಿ ಯಮಲೋಕಕ್ಕೆ ಹೊರಟುಹೋದನು.

ಮಯಾಚೈತತ್ಪ್ರತಿಜ್ಞಾತಂ ರಣಮೂರ್ಧನಿ ಕೇಶವ ।
ಅಭಿಮನ್ಯೌ ಹತೇ ವೀರ ತ್ವಾಮೇಷ್ಯಾಮ್ಯಚಿರಾದಿವ ॥೨೩॥

ಕೇಶವ! ನಾನು ರಣಾಂಗಣದಲ್ಲಿ ಅಭಮನ್ಯುವಿಗೆ–'ವೀರನೇ! ನೀನೇನಾದರೂ ಹತನಾದರೆ ನಾನೂ ಕೂಡ ಬಹಳ ಬೇಗ ನಿನ್ನ ಬಳಿಗೆ ಬಂದುಬಿಡುತ್ತೇನೆ.'–ಎಂದು ಪ್ರತಿಜ್ಞೆಯನ್ನು ಮಾಡಿ ಹೇಳಿದ್ದೆನು.

ತಚ್ಚ ನಾಕರವಂ ಕೃಷ್ಣ ನೃಶಂಸಾ ಜೀವಿತಪ್ರಿಯಾ।
ಇದಾನೀಂ ಮಾಂ ಗತಾಂ ತತ್ರ ಕಿಂ ನು ವಕ್ಷ್ಯತಿ ಫಾಲ್ಗುಣಿಃ ॥೨೪॥

ಆದರೆ ನಿರ್ದಯಳಾದ, ಜೀವಿತದಲ್ಲಿ ಆಸೆಯಿರುವ ನಾನು ನನ್ನ ಪತಿಗೆ ಮಾಡಿಕೊಟ್ಟ ಪ್ರತಿಜ್ಞೆಯಂತೆ ನಡೆದುಕೊಳ್ಳಲಿಲ್ಲ. ಈ ಸಮಯದಲ್ಲಿ ನಾನೇನಾದರೂ ಪರಲೋಕಕ್ಕೆ ಹೋದರೆ ಅಭಿಮನ್ಯುವು ನನಗೆ ಏನೆಂದು ಹೇಳುವನು? (ನನ್ನನ್ನು ಹೀಯಾಳಿಸುವುದಿಲ್ಲವೇ?)"

ಒಲನೆಯ ಅಧ್ಯಾಯವು ಮುಗಿಯಿತು.

ಓ೯ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಉತ್ತರೆಯ ವಿಲಾಪ: ಶ್ರೀಕೃಷ್ಣನು ಮೃತಶಿಶುವಿಗೆ ಜೀವದಾನ ಮಾಡಿದುದು

ವೈಶಂಪಾಯನರು ಹೇಳುತ್ತಾರೆ:

ಸೈವಂ ವಿಲಪ್ಯ ಕರುಣಂ ಸೋನ್ಮಾದೇವ ತಪಸ್ವಿನೀ।
ಉತ್ತರಾ ನ್ಯಪತದ್ಭೂಮೌ ಕೃಪಣಾ ಪುತ್ರಗೃದ್ಧಿನೀ ॥೧॥

ಜನಮೇಜಯ! ಪುತ್ರಪ್ರಿಯಳಾಗಿದ್ದ, ಶೋಚನೀಯಳಾಗಿದ್ದ ಉತ್ತರೆಯು ಹೀಗೆ ಕರುಣಾಜನಕವಾದ ರೀತಿಯಲ್ಲಿ ವಿಲಪಿಸುತ್ತಾ ಹುಚ್ಚು ಹಿಡಿದವಳಂತೆ ಭೂಮಿಯಮೇಲೆ ಬಿದ್ದುಬಿಟ್ಟಳು.

ಪುತ್ರನನ್ನೂ ಬಂಧುಗಳನ್ನೂ ಕಳೆದುಕೊಂಡಿದ್ದ ಉತ್ತರೆಯು ಕೆಳಗೆ ಬಿದ್ದುದನ್ನು ಕಂಡು ದುಃಖಪೀಡಿತಳಾಗಿದ್ದ ಕುಂತಿಯೂ ಮತ್ತು ಭರತವಂಶದ ಸ್ತ್ರೀಯರೂ ಗಟ್ಟಿಯಾಗಿ ಗೋಳಾಡತೊಡಗಿದರು. ಮುಹೂರ್ತಕಾಲ ಪಾಂಡವರ ಆ ಅರಮನೆಯಲ್ಲಿ ಗೋಳಾಟದ ಧ್ವನಿಯೇ ಪ್ರತಿಧ್ವನಿಸುತ್ತಿದ್ದುದರಿಂದ ಅದನ್ನು ನೋಡಲಾಗುತ್ತಿರಲಿಲ್ಲ. ಪುತ್ರಮರಣದ ಶೋಕದಿಂದ ಪೀಡಿತಳಾಗಿದ್ದ ವಿರಾಟರಾಜಕುಮಾರಿಯು ಮುಹೂರ್ತಕಾಲ ಮೂರ್ಛಿತಳಾಗಿಯೇ ಬಿದ್ದಿದ್ದಳು. ಸ್ವಲ್ಪಹೊತ್ತು ಕಳೆದನಂತರ ಎಚ್ಚರಗೊಂಡು ಸತ್ತುಹೋಗಿದ್ದ ಆ ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡು ಹೇಳತೊಡಗಿದಳು:

ಧರ್ಮಜ್ಞಸ್ಯ ಸುತಃ ಸ ತ್ವಮಧರ್ಮಂ ನಾವಬುಧ್ಯಸೇ ।
ಯಸ್ತ್ವಂ ವೃಷ್ಣಿಪ್ರವೀರಸ್ಯ ಕುರುಷೇ ನಾಭಿವಾದನಮ್ ॥೬॥

"ಮಗುವೇ! ನೀನು ಧರ್ಮಜ್ಞನಾದ ತಂದೆಯ ಮಗನಾಗಿರುವೆ. ಆದರೂ ನೀನು ಈಗ ಮಾಡುತ್ತಿರುವುದು ಅಧರ್ಮಕಾರ್ಯವೆಂಬುದನ್ನು ತಿಳಿದವನಾಗಿಲ್ಲ. ವೃಷ್ಣಿವಂಶಶ್ರೇಷ್ಠನಾದ, ಪೂಜ್ಯನಾದ ಶ್ರೀಕೃಷ್ಣನು ನಿನ್ನ ಸಮೀಪದಲ್ಲಿಯೇ ಇದ್ದಾನೆ. ಆದರೂ ನೀನವನಿಗೆ ಧರ್ಮಾನುಸಾರವಾಗಿ ನಮಸ್ಕಾರಮಾಡುತ್ತಿಲ್ಲ.

ಮಗು! ನೀನು ಪರಲೋಕಕ್ಕೆ ಹೋಗಿ ನಾನು ಹೇಳಲಿರುವ ಈ ಮಾತುಗಳನ್ನು ನಿನ್ನ ತಂದೆಯೊಡನೆ ಹೇಳು:

ದುರ್ಮರಂ ಪ್ರಾಣಿನಾಂ ವೀರ ಕಾಲೇಽಪ್ರಾಪ್ತೇ ಕಥಂಚನ ॥೭॥

ಯಾಹಂ ತ್ವಯಾ ವಿನಾದ್ಯೇಹ ಪತ್ಯಾ ಪುತ್ರೇಣ ಚೈವ ಹ ।
ಮರ್ತವ್ಯೇ ಸತಿ ಜೀವಾಮಿ ಹತಸ್ವಸ್ತಿರಕಿಂಚನಾ ॥೮॥

"ಪ್ರಾಣನಾಥನೇ! ಕಾಲವು ಸನ್ನಿಹಿತವಾಗದೇ ಪ್ರಾಣಿಗಳಿಗೆ ಮರಣವು ಸಂಭವಿಸುವುದು ಅಸಾಧ್ಯವೇ ಸರಿ. ನಾನೀಗ ನಿನ್ನಂತಹ ಪತಿಯಿಂದಲೂ ಇವನಂತಹ ಪುತ್ರನಿಂದಲೂ ವಿಹೀನಳಾಗಿದ್ದೇನೆ. ಇಂತಹ ಸಮಯದಲ್ಲಿ ಅಕಿಂಚನಳೂ ಮತ್ತು ಕಲ್ಯಾಣಶೂನ್ಯಳೂ ಆಗಿರುವ ನಾನು ಸಾಯಬೇಕಾಗಿದ್ದರೂ ಇನ್ನೂ ಬದುಕಿಯೇ ಇದ್ದೇನೆ."

ಪುನಃ ಮಗನನ್ನು ನೋಡುತ್ತಾ ಉತ್ತರೆಯು ಹೇಳುತ್ತಾಳೆ: "ಮಹಾಬಾಹುವೇ! ನಾನೀಗ ಧರ್ಮರಾಜನ ಅನುಜ್ಞೆಯನ್ನು ಪಡೆದು ಘೋರವಾದ ವಿಷವನ್ನಾದರೂ ಕುಡಿಯುತ್ತೇನೆ. ಬೆಂಕಿಯಲ್ಲಾದರೂ ಬೀಳುತ್ತೇನೆ. ಮಗು! ಮನುಷ್ಯನು ಮರಣಹೊಂದುವುದು ಬಹಳ ಕಠಿಣವೆಂದೇ ನನಗೆ ತೋರುತ್ತದೆ. ಏಕೆಂದರೆ: ಪತಿಯಿಂದಲೂ ಮತ್ತು ಪುತ್ರನಿಂದಲೂ ವಿಹೀನಳಾಗಿದ್ದರೂ ನನ್ನ ಹೃದಯವು ನೂರುಭಾಗಗಳಾಗಿ ಇನ್ನೂ ಸೀಳಿಹೋಗಲಿಲ್ಲವಲ್ಲವೇ?

ಎದ್ದೇಳು, ಮಗು! ದುಃಖಿತಳಾಗಿರುವ, ಆರ್ತಳಾಗಿರುವ, ದೀನ ಳಾಗಿರುವ, ದುಃಖಪೀಡಿತಳಾಗಿರುವ, ಶೋಕಸಾಗರದಲ್ಲಿ ಮುಳುಗಿ

ಹೋಗುತ್ತಿರುವ ಈ ನಿನ್ನ ಮುತ್ತಜ್ಜಿಯನ್ನು ನೋಡು. ಆರ್ಯೆಯಾದ ಪಾಂಚಾಲಿಯನ್ನು ನೋಡು. ದುಃಖದಿಂದ ಬಹಳವಾಗಿ ಪರಿತಪಿಸುತ್ತಿರುವ ಸುಭದ್ರೆಯನ್ನು ನೋಡು. ಬಾಣದಿಂದ ಹೊಡೆಯಲ್ಪಟ್ಟ ಹೆಣ್ಣುಜಿಂಕೆಯಂತೆ ದುಃಖದಿಂದ ಸಂಕಟಪಡುತ್ತಿರುವ ನನ್ನನ್ನಾದರೂ ನೋಡು, ಕಂದ! ಎದ್ದೇಳು, ಮಗುವೇ! ಧೀಮಂತನಾದ, ಲೋಕನಾಥನಾದ ಶ್ರೀಕೃಷ್ಣನ ದಿವ್ಯವಾದ ಮುಖವನ್ನು ನೋಡು. ಹಿಂದೆ ನಾನು ಚಂಚಲಾಕ್ಷನಾದ ನನ್ನ ಪತಿಯನ್ನು ನೋಡುತ್ತಿದ್ದಂತೆ ನೀನೀಗ ನಿನ್ನ ಸಮೀಪದಲ್ಲಿಯೇ ಇರುವ, ಕಮಲದ ಎಲೆಯಂತೆ ವಿಶಾಲವಾದ ಕಣ್ಣುಗಳಿಂದ ಕೂಡಿರುವ ಮಾಧವನನ್ನು ನೋಡು, ಕಂದ!"

ಜನಮೇಜಯ! ಹೀಗೆ ಹೇಳಿಕೊಂಡು ರೋದನಮಾಡುತ್ತಿದ್ದ ಉತ್ತರೆಯು ಪುನಃ ಭೂಮಿಯಮೇಲೆ ಬಿದ್ದುದನ್ನು ಕಂಡು ಭರತಕುಲದ ಸ್ತ್ರೀಯರೆಲ್ಲರೂ ಪುನಃ ಅವಳನ್ನು ಎತ್ತಿ ಕುಳ್ಳಿರಿಸಿದರು. ಮತ್ಸ್ಯದೇಶದರಸನ ಮಗಳಾದ ಉತ್ತರೆಯು ಎದ್ದುಕುಳಿತು ಧೈರ್ಯವನ್ನವಲಂಬಿಸಿ ಕೈಜೋಡಿಸಿ ಕೊಂಡು ಕುಳಿತಿದ್ದಂತೆಯೇ ವಾಸುದೇವನಿಗೆ ಪ್ರಣಾಮಮಾಡಿದಳು.

ಪುರುಷಶ್ರೇಷ್ಠನಾದ ಶ್ರೀಕೃಷ್ಣನು ಅವಳ ಅಪಾರವಾದ ಗೋಳಾಟವನ್ನು ಕೇಳಿ, ದಯಾರ್ದ್ರಹೃದಯನಾಗಿ, ಆಚಮನಮಾಡಿ ಅಶ್ವತ್ಥಾಮನು ಪ್ರಯೋಗಿಸಿದ್ದ ಬ್ರಹ್ಮಾಸ್ತ್ರದ ಪ್ರಭಾವವನ್ನು ಶಾಂತಗೊಳಿಸಿದನು. ವಿಶುದ್ಧಹೃದಯನಾದ, ಕೊಟ್ಟಮಾತಿನಿಂದ ಎಂದಿಗೂ ಚ್ಯುತನಾಗದ, ದಶಾರ್ಹಕುಲಾವತಂಸನಾದ ಶ್ರೀಕೃಷ್ಣನು ಎಲ್ಲರಿಗೂ ಕೇಳಿಸುವಂತೆ ಮೃತಬಾಲಕ ನನ್ನು ಬದುಕಿಸುವುದಾಗಿ ಪುನಃ ಪ್ರತಿಜ್ಞೆಮಾಡಿದನು:

ನ ಬ್ರವೀಮ್ಯುತ್ತರೇ ಮಿಥ್ಯಾ ಸತ್ಯಮೇತದ್ಭವಿಷ್ಯತಿ ।
ಏಷ ಸಂಜೀವಯಾಮ್ಯೇನಂ ಪಶ್ಯತಾಂ ಸರ್ವದೇಹಿನಾಮ್ ॥೧೮॥

"ಉತ್ತರೇ! ನಾನು ಯಾವಾಗಲೂ ಸುಳ್ಳುಹೇಳುವವನಲ್ಲ. ನಾನು ಹೇಳಿದುದು ನಿಜವಾಗಿಯೇ ಪರಿಣಮಿಸುತ್ತದೆ. ದೇಹಧಾರಿಗಳಾದ ಸಮಸ್ತಪ್ರಾಣಿಗಳೂ ನೋಡುತ್ತಿದ್ದಂತೆಯೇ ಮೃತನಾಗಿರುವ ಈ ಬಾಲಕನನ್ನು ಬದುಕಿಸುತ್ತೇನೆ.

ನೋಕ್ತಪೂರ್ವಂ ಮಯಾ ಮಿಥ್ಯಾ ಸ್ವೈರೇಷ್ವಪಿ ಕದಾಚನ ।
ನ ಚ ಯುದ್ಧಾತ್ಪರಾವೃತ್ತಸ್ತಥಾ ಸಂಜೀವತಾಮಯಮ್ ॥೧೯॥

ಸ್ವೇಚ್ಛೆಯಿಂದ ಆಟ-ಪಾಟಗಳನ್ನಾಡುತ್ತಿರುವಾಗಲೂ ಪರಿಹಾಸಕ್ಕಾದರೂ ನಾನು ಹಿಂದೆಂದೂ ಸುಳ್ಳುಹೇಳಿದವನಲ್ಲ. ಯುದ್ಧದಿಂದ ಎಂದೂ ಹಿಮ್ಮೆಟ್ಟಿದವನೂ ಅಲ್ಲ. ನನ್ನ ಆ ಸತ್ಯನಿಷ್ಠೆ ಮತ್ತು ಯುದ್ಧದಿಂದ ಹಿಂದಿರುಗದೇ ಇರುವಿಕೆ–ಈ ಎರಡು ಶ್ರೇಷ್ಠಧರ್ಮಗಳ ಆಚರಣೆಯ ಫಲವಾಗಿ ಈ ಶಿಶುವು ಜೀವಂತವಾಗಲಿ.

ಯಥಾ ಮೇ ದಯಿತೋ ಧರ್ಮೋ ಬ್ರಾಹ್ಮಣಾಶ್ಚ ವಿಶೇಷತಃ ।
ಅಭಿಮನ್ಯೋಃ ಸುತೋ ಜಾತೋ ಮೃತೋ ಜೀವತ್ವಯಂ ತಥಾ॥

ನನಗೆ ಧರ್ಮವು ಬಹಳ ಪ್ರಿಯವಾಗಿದೆ. ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರು ನನಗೆ ಅತ್ಯಂತಪ್ರಿಯರು. ಈ ಸತ್ಯದ ಫಲವಾಗಿ ಸತ್ತು ಹುಟ್ಟಿರುವ ಅಭಿಮನ್ಯುವಿನ ಈ ಮಗನು ಬದುಕಲಿ.

ಯಥಾಹಂ ನಾಭಿಜಾನಾಮಿ ವಿಜಯೇ ತು ಕದಾಚನ ।
ವಿರೋಧಂ ತೇನ ಸತ್ಯೇನ ಮೃತೋ ಜೀವತ್ವಯಂ ಶಿಶುಃ ॥೨೧॥

ಪಾರ್ಥನ ವಿಷಯದಲ್ಲಿ ನಾನು ಎಂದಿಗೂ ವಿರೋಧವೆಂಬುದನ್ನೇ ಎಣಿಸಿಲ್ಲ. ಆ ಸತ್ಯದ ಪ್ರಭಾವದಿಂದ ಈ ಶಿಶುವು ಬದುಕಲಿ.

ಯಥಾ ಸತ್ಯಂ ಚ ಧರ್ಮಶ್ಚ ಮಯಿ ನಿತ್ಯಂ ಪ್ರತಿಷ್ಠಿತೌ ।
ತಥಾ ಮೃತಃ ಶಿಶುರಯಂ ಜೀವತಾಮಭಿಮನ್ಯುಜಃ ॥೨೨॥

ನನ್ನಲ್ಲಿ ಸತ್ಯ-ಧರ್ಮಗಳು ನಿರಂತರವಾಗಿ ನೆಲೆಗೊಂಡಿವೆ. ಆ ಸತ್ಯ-ಧರ್ಮಗಳ ಫಲವಾಗಿ ಅಭಿಮನ್ಯುವಿನ ಈ ಮೃತಶಿಶುವು ಜೀವಂತವಾಗಲಿ.

ಯಥಾ ಕಂಸಶ್ಚ ಕೇಶೀ ಚ ಧರ್ಮೇಣ ನಿಹತೌ ಮಯಾ ।
ತೇನ ಸತ್ಯೇನ ಬಾಲೋಽಯಂ ಪುನರುಜ್ಜೀವತಾಮಿಹ ॥೨೩॥

ಕಂಸನನ್ನೂ ಮತ್ತು ಕೇಶಿಯನ್ನೂ ನಾನು ಕ್ಷತ್ರಿಯಯೋಗ್ಯವಾದ ಧರ್ಮದಿಂದ ಸಂಹರಿಸಿರುವುದು ಸತ್ಯವಾದರೆ–ಅಂತಹ ಸತ್ಯದ ಪ್ರಭಾವದಿಂದ ಈ ಶಿಶುವು ಜೀವಂತವಾಗಲಿ.

ಯದಿ ಮೇ ಬ್ರಹ್ಮಚರ್ಯಂ ಸ್ಯಾತ್ಸತ್ಯಂ ಚ ಮಯಿ ತಿಷ್ಠತಿ।
ಅವ್ಯಾಹತಂ ಮಮೈಶ್ವರ್ಯಂ ತೇನ ಜೀವತು ಬಾಲಕಃ ॥೨೪॥

ನನ್ನಲ್ಲಿ ಬ್ರಹ್ಮಚರ್ಯವು ಇರುವ ಪಕ್ಷದಲ್ಲಿ, ಸತ್ಯವು ನೆಲೆಗೊಂಡಿರುವ ಪಕ್ಷದಲ್ಲಿ ನನ್ನ ಐಶ್ವರ್ಯವು ಅಪ್ರತಿಹತವಾಗಿರುವ ಪಕ್ಷದಲ್ಲಿ ಅವುಗಳ ಬಲದಿಂದ ಈ ಬಾಲಕನು ಬದುಕಿಕೊಳ್ಳಲಿ."

ವೈಶಂಪಾಯನರು ಹೇಳುತ್ತಾರೆ:

ಪಾದೇನ ಕಮಲಾಭೇನ ಬ್ರಹ್ಮರುದ್ರಾರ್ಚಿತೇನ ಚ ।
ಪಸ್ಪರ್ಶ ಪುಣ್ಡರೀಕಾಕ್ಷಃ ಆಪಾದತಲಮಸ್ತಕಮ್ ॥೨೬॥

ಜನಮೇಜಯ! ಹೀಗೆ ಹೇಳಿ ಪುಂಡರೀಕಾಕ್ಷನು ಬ್ರಹ್ಮ-ರುದ್ರಾದಿಗಳಿಂದ ಪೂಜಿಸಲ್ಪಟ್ಟ ಕಮಲಸದೃಶವಾದ ತನ್ನ ಪಾದದಿಂದ ಆ ಮೃತಶಿಶುವನ್ನು ಅಡಿಯಿಂದ ಮುಡಿಯವರೆಗೂ ಸ್ಪರ್ಶಮಾಡಿದನು. ವಾಸುದೇವನು ಹೀಗೆ ಮಾಡಲು, ಸತ್ತು ಬಿದ್ದಿದ್ದ ಆ ಶಿಶುವು ಚೈತನ್ಯವನ್ನು ಹೊಂದಿ ಮೆಲ್ಲ-ಮೆಲ್ಲಗೆ ತನ್ನ ಅವಯವಗಳನ್ನು ಆಡಿಸತೊಡಗಿತು."

೬೯ನೆಯ ಅಧ್ಯಾಯವು ಮುಗಿಯಿತು.

೭೦ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಶಿಶುವಿಗೆ ಶ್ರೀಕೃಷ್ಣನು ನಾಮಕರಣಮಾಡಿದುದು: ಪಾಂಡವರು ಹಸ್ತಿನಾಪಟ್ಟಣದ ಬಳಿಗೆ ಆಗಮಿಸಿದುದು

ವೈಶಂಪಾಯನರು ಹೇಳುತ್ತಾರೆ:

ಬ್ರಹ್ಮಾಸ್ತ್ರಂ ತು ಯದಾ ರಾಜನ್ಕೃಷ್ಣೇನ ಪ್ರತಿಸಂಹೃತಮ್।
ತದಾ ತದ್ವೇಶ್ಮ ತ್ವತ್ಪಿತ್ರಾ ತೇಜಸಾಭಿವಿದೀಪಿತಮ್ ॥೧॥

ಜನಮೇಜಯ! ಶ್ರೀಕೃಷ್ಣನು ಬ್ರಹ್ಮಾಸ್ತ್ರವನ್ನು ಉಪಶಮನಗೊಳಿಸಿದ ಕೂಡಲೇ ಪ್ರಸೂತಿಗೃಹವು ನಿನ್ನ ತಂದೆಯ ತೇಜಸ್ಸಿನಿಂದ ಬೆಳಗತೊಡಗಿತು.

ಬಾಲಕರನ್ನು ವಿನಾಶಗೊಳಿಸುವ ರಾಕ್ಷಸರೆಲ್ಲರೂ ಆ ಅರಮನೆಯನ್ನು ಪರಿತ್ಯಜಿಸಿ ಹೊರಟುಹೋದರು. ಅಂತರಿಕ್ಷದ ಕಡೆಯಿಂದ 'ಸಾಧು ಕೇಶವ! ಸಾಧು!' ಎಂಬ ಮಾತು ಕೇಳಿಸಿತು. ಪ್ರಜ್ವಲಿಸುತ್ತಿದ್ದ ಆ ಬ್ರಹ್ಮಾಸ್ತ್ರವೂ ಬ್ರಹ್ಮನ ಬಳಿಗೆ ಹೊರಟುಹೋಯಿತು. ಹೀಗೆ ನಿನ್ನ ತಂದೆಯು

ಮತ್ತೆ ಜೀವವನ್ನು ಪಡೆದುಕೊಂಡನು. ಅಭಿಮನ್ಯುವಿನ ಆ ಮಗುವು ಉತ್ಸಾಹ ಮತ್ತು ಬಲಗಳಿಗೆ ಅನುಸಾರವಾಗಿ ಆಟವಾಡತೊಡಗಿತು. ಆ ಬಾಲಕನನ್ನು ನೋಡಿ ಭರತವಂಶದ ಸ್ತ್ರೀಯರೆಲ್ಲರೂ ಸಂತೋಷಭರಿತರಾದರು. ಅವರು ಶ್ರೀಕೃಷ್ಣನ ಆಜ್ಞಾನುಸಾರವಾಗಿ ಬ್ರಾಹ್ಮಣರಿಂದ ಸ್ವಸ್ತಿವಾಚನಗಳನ್ನು ಮಾಡಿಸಿದರು. ಪ್ರಮುದಿತರಾದ ಆ ಎಲ್ಲ ಕುರುಕುಲಸ್ತ್ರೀಯರೂ ಶ್ರೀಕೃಷ್ಣನನ್ನು ಬಹಳವಾಗಿ ಪ್ರಶಂಸಿಸಿದರು. ನದಿಯನ್ನು ದಾಟಲು ಇಚ್ಛಿಸುವವರು ದೋಣಿಯನ್ನು ನೋಡಿ ಸಂತೋಷಪಡುವಂತೆ–ಭರತಶ್ರೇಷ್ಠರಾದ ಪಾಂಡವರ ಪತ್ನಿಯರೂ, ಕುಂತೀ, ದ್ರೌಪದೀ, ಸುಭದ್ರೆ, ಉತ್ತರೆ–ಇವರೇ ಮೊದಲಾದವರೂ ವಂಶೋದ್ಧಾರಕನಾದ ಪುತ್ರನನ್ನು ನೋಡಿ ಪ್ರಸನ್ನಚಿತ್ತರಾದರು. ಬಳಿಕ ಮಲ್ಲರೂ, ನಟರೂ, ಜ್ಯೌತಿಷಿಗಳೂ, ಸುಖದ ಸಮಾಚಾರವನ್ನು ಹೇಳುವ ಸೇವಕರೂ, ಸೂತ-ಮಾಗಧರೂ ಕುರುವಂಶದ ಸ್ತುತಿ ಮತ್ತು ಆಶೀರ್ವಾದಗಳೊಡನೆ ಶ್ರೀಕೃಷ್ಣನನ್ನು ಸ್ತೋತ್ರಮಾಡಿದರು. ಶಿಶುವು ಜೀವಂತವಾದ ಕಾರಣ ಪರಮಪ್ರೀತಳಾದ ಉತ್ತರೆಯು ಮೇಲೆದ್ದು ಮಗುವನ್ನು ಕಂಕುಳಿನಲ್ಲೆತ್ತಿಕೊಂಡು ಯದುನಂದನನಾದ ಶ್ರೀಕೃಷ್ಣನಿಗೆ ಅಭಿವಾದನಮಾಡಿದಳು.

ಪ್ರಹೃಷ್ಟನಾದ ಶ್ರೀಕೃಷ್ಣನು ಆ ಬಾಲಕನಿಗೆ ಅಪಾರವಾದ ರತ್ನಗಳನ್ನು ಬಹುಮಾನವಾಗಿ ಕೊಟ್ಟನು. ಅವನನ್ನೇ ಅನುಸರಿಸಿ ಇತರ ವೃಷ್ಣಿವಂಶದ ಬಂಧುಗಳೂ ಆ ಮಗುವಿಗೆ ಅಪಾರವಾದ ಮತ್ತು ಅಮೂಲ್ಯವಾದ ಪಾರಿತೋಷಿಕಗಳನ್ನು ಕೊಟ್ಟರು. ಅನಂತರ ಸತ್ಯಸಂಧನಾದ, ಪ್ರಭುವಾದ ಜನಾರ್ದನನು ನಿನ್ನ ತಂದೆಗೆ ನಾಮಕರಣವನ್ನು ಮಾಡಿದನು.

ಪರಿಕ್ಷೀಣೇ ಕುಲೇ ಯಸ್ಮಾಜ್ಜಾತೋಽಯಮಭಿಮನ್ಯುಜಃ ।
ಪರಿಕ್ಷಿದಿತಿ ನಾಮಾಸ್ಯ ಭವತ್ವಿತ್ಯಬ್ರವೀತ್ತದಾ ॥೧೧॥

"ಕುರುವಂಶವು ಕ್ಷೀಣಿಸುತ್ತಿರುವ ಸಮಯದಲ್ಲಿ ಅಭಿಮನ್ಯುವಿನ ಈ ಶಿಶುವು ಹುಟ್ಟಿರುವ ಕಾರಣ ಇದಕ್ಕೆ 'ಪರಿಕ್ಷಿತ್'–ಎಂದೇ ಹೆಸರಾಗಲಿ"–ಎಂದು ಶ್ರೀಕೃಷ್ಣನು ಹೇಳಿದನು.

ಜನಾಧಿಪನೇ! ಕಾಲಾನುಕ್ರಮವಾಗಿ ನಿನ್ನ ತಂದೆಯು ಬೆಳೆಯ

ತೊಡಗಿದನು. ಸಮಸ್ತರಿಗೂ ಅವನು ಆಹ್ಲಾದವನ್ನುಂಟುಮಾಡುತ್ತಿದ್ದನು. ಆ ಬಾಲಕನಿಗೆ ಒಂದು ಮಾಸವು ತುಂಬುವ ವೇಳೆಗೆ ಸರಿಯಾಗಿ ಪಾಂಡವರು ಅಪಾರವಾದ ರತ್ನರಾಶಿಯನ್ನು ತೆಗೆಸಿಕೊಂಡು ಹಸ್ತಿನಾಪುರಕ್ಕೆ ಆಗಮಿಸಿದರು. ಪಾಂಡವರು ನಗರಾಭಿಮುಖವಾಗಿ ಬರುತ್ತಿರುವರೆಂಬುದನ್ನು ತಿಳಿದು ವೃಷ್ಣಿಶ್ರೇಷ್ಠರು ಅವರನ್ನು ಇದಿರ್ಗೊಳ್ಳಲು ಹಸ್ತಿನಾಪಟ್ಟಣದ ಮಹಾದ್ವಾರದ ಬಳಿಗೆ ಹೋದರು. ಪುರವಾಸಿಗಳು ಹಸ್ತಿನಾಪಟ್ಟಣವನ್ನು ಪುಷ್ಪಮಾಲೆಗಳ ರಾಶಿಯಿಂದ ಅಲಂಕರಿಸಿದರು. ವಿಚಿತ್ರವಾದ ಪತಾಕೆಗಳಿಂದಲೂ ವಿಧ-ವಿಧವಾದ ಧ್ವಜಗಳಿಂದಲೂ ಪಟ್ಟಣವನ್ನು ಸಿಂಗರಿಸಿದರು. ನಾಗರೀಕರು ತಮ್ಮ ತಮ್ಮ ಮನೆಗಳನ್ನೂ ನಯನಮನೋಹರವಾಗಿ ಅಲಂಕರಿಸಿದರು. ವಿದುರನು ಪಾಂಡವರಿಗೆ ಒಳ್ಳೆಯದಾಗಲೆಂಬ ಅಭಿಲಾಷೆಯಿಂದ ದೇವಸ್ಥಾನಗಳಲ್ಲಿ ನಾನಾಪ್ರಕಾರವಾದ ಪೂಜೆಗಳು ನಡೆಯುವಂತೆ ಆಜ್ಞಾಪಿಸಿದನು. ರಾಜಮಾರ್ಗಗಳೆಲ್ಲವೂ ಸುಗಂಧಯುಕ್ತವಾದ ಪುಷ್ಪಮಾಲೆಗಳಿಂದ ಸಿಂಗರಿಸಲ್ಪಟ್ಟಿದ್ದುವು. ನರ್ತನ ಮಾಡುತ್ತಿದ್ದ ನಟರ ಝುಣ-ಝುಣ ಶಬ್ದಗಳಿಂದಲೂ ವ್ಯಾಪ್ತವಾಗಿದ್ದ ಆ ಪಟ್ಟಣವು– ಸಮುದ್ರದ ಜಲರಾಶಿಯ ಭೋರ್ಗರೆಯುವ ಶಬ್ದಕ್ಕೆ ಸಮಾನವಾದ ಶಬ್ದದಿಂದ ಕೂಡಿದ್ದು ಪ್ರಕಾಶಮಾನವಾಗಿದ್ದಿತು.

ಜನಮೇಜಯ! ಆ ಸಮಯದಲ್ಲಿ ಹಸ್ತಿನಾಪಟ್ಟಣವು ಕುಬೇರನ ಅಲಕಾಪಟ್ಟಣಕ್ಕೆ ಸಮಾನವಾಗಿ ಕಾಣುತ್ತಿದ್ದಿತು. ಪಟ್ಟಣದ ಎಲ್ಲ ಕಡೆ ಗಳಲ್ಲಿಯೂ ಏಕಾಂತಸ್ಥಳಗಳಲ್ಲಿ ಸ್ತ್ರೀಸಹಿತರಾದ ವಂದಿ-ಮಾಗಧರು ನಿಂತಿದ್ದರು. ಅವರಿಂದ ಹಸ್ತಿನಾಪಟ್ಟಣವು ಶೋಭಾಯಮಾನವಾಗಿ ಕಾಣುತ್ತಿದ್ದಿತು. ನಗರದ ಎಲ್ಲೆಡೆಗಳಲ್ಲಿಯೂ ಗಾಳಿಯ ರಭಸದಿಂದ ಪತಾಕೆಗಳು ಪಟ-ಪಟನೆ ಹಾರಾಡುತ್ತಿದ್ದವು. ದಕ್ಷಿಣ ಮತ್ತು ಉತ್ತರ ಕುರುದೇಶಗಳ ಶೋಭೆಯನ್ನು ಆ ಸಮಯದಲ್ಲಿ ಹಸ್ತಿನಾಪಟ್ಟಣದಲ್ಲಿಯೇ ಕಾಣಬಹುದಾಗಿದ್ದಿತು. ರಾಜಕಾರ್ಯತತ್ಪರರಾಗಿದ್ದ ರಾಜಪುರುಷರು- 'ಇಂದು ರಾಜ್ಯೋತ್ಸವವಾಗಿದೆ. ಸ್ತ್ರೀ-ಪುರುಷರೆಲ್ಲರೂ ಉತ್ತಮೋತ್ತಮವಾದ ರತ್ನಾಭರಣಗಳನ್ನು ತೊಟ್ಟುಕೊಂಡು ಬಹುಮೂಲ್ಯವಾದ ವಸ್ತ್ರಗಳನ್ನು

ಧರಿಸಿ ಈ ರಾಷ್ಟ್ರೋತ್ಸವದಲ್ಲಿ ಭಾಗವಹಿಸಿರಿ'–ಎಂದು ನಗರದ ಎಲ್ಲ ಕಡೆಗಳಲ್ಲಿಯೂ ಸಾರುತ್ತಿದ್ದರು.

೭೦ನೆಯ ಅಧ್ಯಾಯವು ಮುಗಿಯಿತು.

೭೧ನೆಯ ಅಧ್ಯಾಯ ಅನುಗೀತಾಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನು ಸಂಗಡಿಗರೊಡನೆ ಪಾಂಡವರನ್ನು ಸ್ವಾಗತಿಸಿದುದು: ಪಾಂಡವರ ಆಗಮನ: ವ್ಯಾಸ-ಕೃಷ್ಣರು ಯುಧಿಷ್ಠಿರನಿಗೆ ಯಾಗಮಾಡಲು ಆದೇಶವನ್ನಿತ್ತುದು

ವೈಶಂಪಾಯನರು ಹೇಳುತ್ತಾರೆ:

ತಾನ್ಸಮೀಪಗತಾಞ್ಶ್ರುತ್ವಾ ಪಾಣ್ಡವಾಞ್ಶತ್ರುಕರ್ಶನಃ ।
ವಾಸುದೇವಃ ಸಹಾಮಾತ್ಯಃ ಪ್ರಯಯೌ ಸಸುಹೃದ್ಗಣಃ ॥೧॥

ಪಾಂಡವರು ಹಸ್ತಿನಾಪಟ್ಟಣದ ಸಮೀಪಕ್ಕೆ ಬಂದಿರುವರೆಂಬುದನ್ನು ತಿಳಿದು ಶತ್ರುಸೂದನನಾದ ಶ್ರೀಕೃಷ್ಣನು ಮಿತ್ರರಿಂದಲೂ ಅಮಾತ್ಯರಿಂದಲೂ ಕೂಡಿಕೊಂಡು ಪಾಂಡವರನ್ನು ಸ್ವಾಗತಿಸುವ ಸಲುವಾಗಿ ಹಸ್ತಿನಾಪಟ್ಟಣದ ಮಹಾದ್ವಾರದ ಬಳಿಗೆ ಹೋದನು. ಹೀಗೆ ವೃಷ್ಣಿಶ್ರೇಷ್ಠರೂ ಅಂಧಕಶ್ರೇಷ್ಠರೂ ಪಾಂಡವರನ್ನು ನೋಡಲು ಮುಂದೆ ಹೋಗಿ ಹಾರ್ದಿಕವಾಗಿ ಸ್ವಾಗತಿಸಿದರು. ನ್ಯಾಯೋಚಿತವಾಗಿ ಧರ್ಮಾನುಸಾರವಾಗಿ ಇಬ್ಬರೂ ಕಲೆತು ಜೊತೆಯಲ್ಲಿಯೇ ಹಸ್ತಿನಾಪಟ್ಟಣವನ್ನು ಪ್ರವೇಶಿಸಿದರು.

ಪಾಂಡವರ ಆ ಮಹಾಸೈನ್ಯದ ಶಬ್ದದಿಂದಲೂ, ಕುದುರೆಗಳ ಗೊರಸಿನ ಮತ್ತು ರಥಗಳ ಚಕ್ರಗಳ ಶಬ್ದಗಳಿಂದಲೂ ಭೂಮಿಗೂ ಸ್ವರ್ಗಕ್ಕೂ ಮಧ್ಯಭಾಗದಲ್ಲಿರುವ ಆಕಾಶವು ತುಂಬಿಹೋಯಿತು. ಪ್ರಸನ್ನಚಿತ್ತರಾಗಿದ್ದ ಪಾಂಡವರು ಅಮಾತ್ಯರೊಡನೆಯೂ ಸುಹೃದರೊಡನೆಯೂ ಹಿಮವತ್ಪರ್ವತದಿಂದ ತಂದಿದ್ದ ರತ್ನಗಳಿಂದ ತುಂಬಿದ್ದ ಪೆಟ್ಟಿಗೆಗಳನ್ನು ಮುಂದೆ ಮಾಡಿಕೊಂಡು ಹಸ್ತಿನಾಪಟ್ಟಣವನ್ನು ಪ್ರವೇಶಿಸಿದರು. ಅರಮನೆಯನ್ನು ಸೇರಿದ ಬಳಿಕ ಐವರು ಪಾಂಡವರೂ ಒಟ್ಟಾಗಿ ಸೇರಿ ಜನಾಧಿಪನಾದ ಧೃತರಾಷ್ಟ್ರನ ಬಳಿಗೆ ಹೋಗಿ ನ್ಯಾಯೋಚಿತವಾದ ರೀತಿಯಲ್ಲಿ ತಮ್ಮ-ತಮ್ಮ

ಹೆಸರುಗಳನ್ನು ಹೇಳಿಕೊಂಡು ಅವನ ಪಾದಗಳಿಗೆ ನಮಸ್ಕರಿಸಿದರು. ಧೃತರಾಷ್ಟ್ರನಿಗೆ ನಮಿಸಿದನಂತರ ಸುಬಲನ ಮಗಳಾದ ಗಾಂಧಾರಿಯ ಬಳಿಗೂ ಮತ್ತು ಕುಂತಿಯ ಬಳಿಗೂ ಹೋಗಿ ಅವರಿಗೂ ನಮಸ್ಕರಿಸಿದರು. ವಿದುರನನ್ನು ಗೌರವಿಸಿ, ವೈಶ್ಯಾಪುತ್ರನಾದ ಯುಯುತ್ಸುವನ್ನು ಕಂಡು ಅವನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡರು. ಎಲ್ಲರಿಂದಲೂ ಸಮ್ಮಾನಿತ ರಾದ ಪಾಂಡವರು ಆ ಸಮಯದಲ್ಲಿ ಬಹಳವಾಗಿ ಪ್ರಕಾಶಿಸಿದರು. ಅನಂತರ ವೀರಶಿರೋಮಣಿಗಳಾದ ಪಾಂಡವರು ಪರಮಾಶ್ಚರ್ಯಕರವಾದ, ವಿಚಿತ್ರವಾದ ಮತ್ತು ಪರಮಾದ್ಭುತವಾದ ನಿನ್ನ ತಂದೆಯ ಜನ್ಮವೃತ್ತಾಂತವನ್ನು ಕೇಳಿದರು. ಧೀಮಂತನಾದ ವಾಸುದೇವನ ಅಲೌಕಿಕವಾದ ಕಾರ್ಯವನ್ನು ಕೇಳಿ ದೇವಕೀಪುತ್ರನಾದ ಪೂಜಾರ್ಹನಾದ ಶ್ರೀಕೃಷ್ಣನನ್ನು ಯಥಾಯೋಗ್ಯವಾಗಿ ಸಂಪೂಜಿಸಿದರು.

ಅದಾಗಿ ಕೆಲವು ದಿವಸಗಳು ಕಳೆದನಂತರ ಸತ್ಯವತಿಯ ಮಕ್ಕಳಾದ, ಮಹಾತೇಜಸ್ವಿಗಳಾದ ವ್ಯಾಸರು ಹಸ್ತಿನಾಪುರಕ್ಕೆ ಆಗಮಿಸಿದರು. ಕುರುಕುಲತಿಲಕರಾದ ಎಲ್ಲ ಪಾಂಡವರೂ ವ್ಯಾಸರನ್ನು ಯಥೋಚಿತವಾಗಿ ಸತ್ಕರಿಸಿದರು. ವೃಷ್ಣಿಶ್ರೇಷ್ಠರೊಡನೆಯೂ ಅಂಧಕಶ್ರೇಷ್ಠರೊಡನೆಯೂ ಕೂಡಿಕೊಂಡು ಪಾಂಡವರು ವ್ಯಾಸರ ಸೇವೆಯಲ್ಲಿ ನಿರತರಾಗಿದ್ದಾಗ ಯುಧಿಷ್ಠಿರನು ಸಮಯೋಚಿತವಾಗಿ ನಾನಾಪ್ರಕಾರವಾದ ಮಾತು ಗಳನ್ನಾಡುತ್ತಾ ವ್ಯಾಸರಿಗೆ ಹೇಳಿದನು:

"ಪೂಜ್ಯರೇ! ನಿಮ್ಮ ಅನುಗ್ರಹದಿಂದ ಈ ಮಹೈಶ್ವರ್ಯವನ್ನು ತಂದಿರುತ್ತೇವೆ. ಅಶ್ವಮೇಧಮಹಾಯಜ್ಞಕ್ಕಾಗಿ ಈ ಐಶ್ವರ್ಯವನ್ನು ಉಪಯೋಗಿಸಬೇಕೆಂದಿರುತ್ತೇನೆ. ಇದಕ್ಕೆ ತಾವು ದಯಮಾಡಿ ಅನುಮತಿಸಿರಿ. ತಮ್ಮ ಅನುಮತಿಯನ್ನು ಪಡೆದುಕೊಂಡು ನಾನು ಈ ಮಹಾಯಾಗಕ್ಕೆ ತೊಡಗಬೇಕೆಂದಿರುತ್ತೇನೆ. ಏಕೆಂದರೆ: ನಾವೆಲ್ಲರೂ ನಿಮ್ಮ ಮತ್ತು ಮಹಾತ್ಮನಾದ ಶ್ರೀಕೃಷ್ಣನ ಅಧೀನರಾಗಿದ್ದೇವೆ."

ವ್ಯಾಸರು ಹೇಳುತ್ತಾರೆ:

"ಮಹಾರಾಜ! ನಿನಗೆ ಯಜ್ಞಮಾಡಲು ಅನುಮತಿಯನ್ನು ಕೊಡು

ತ್ತಿದ್ದೇನೆ. ಮುಂದೆ ಮಾಡಬೇಕಾಗಿರುವ ಕಾರ್ಯಗಳನ್ನು ಶೀಘ್ರವಾಗಿ ಮಾಡು. ವಿಧಿವತ್ತಾದ ಬಹುದಕ್ಷಿಣೆಗಳಿಂದ ಕೂಡಿರುವ ಅಶ್ವಮೇಧಯಾಗದಿಂದ ದೇವತೆಗಳನ್ನು ಸಂಪೂಜಿಸು.

ಅಶ್ವಮೇಧೋ ಹಿ ರಾಜೇನ್ದ್ರ ಪಾವನಃ ಸರ್ವಪಾಪ್ಮನಾಮ್।
ತೇನೇಷ್ಟ್ವಾ ತ್ವಂ ವಿಪಾಪ್ಮಾ ವೈ ಭವಿತಾ ನಾತ್ರ ಸಂಶಯಃ ॥೧೬॥

ಅಶ್ವಮೇಧಯಾಗವು ಸಮಸ್ತವಾದ ಪಾಪಗಳನ್ನೂ ವಿನಾಶಗೊಳಿಸಿ ಯಜಮಾನನನ್ನು ಪಾವನಗೊಳಿಸುತ್ತದೆ. ಅಶ್ವಮೇಧದ ಮೂಲಕವಾಗಿ ನೀನು ದೇವತೆಗಳನ್ನು ತೃಪ್ತಿಗೊಳಿಸಿ ಪಾಪರಹಿತನಾಗುವೆ. ಇದರಲ್ಲಿ ಸಂಶಯವೇ ಇಲ್ಲ."

ವೈಶಂಪಾಯನರು ಹೇಳುತ್ತಾರೆ:

ವ್ಯಾಸರು ಹೀಗೆ ಹೇಳಿದನಂತರ ಧರ್ಮಜ್ಞನಾದ, ಕುರುರಾಜನಾದ ಯುಧಿಷ್ಠಿರನು ಅಶ್ವಮೇಧಯಜ್ಞವನ್ನು ಮಾಡಲು ನಿರ್ಧರಿಸಿದನು. ಕೃಷ್ಣ ದ್ವೈಪಾಯನವ್ಯಾಸರಿಂದ ಎಲ್ಲ ಕಾರ್ಯಗಳಿಗೂ ಅನುಮತಿಯನ್ನು ಪಡೆದುಕೊಂಡು ವಾಕ್ಚತುರನಾದ ಯುಧಿಷ್ಠಿರನು ವಾಸುದೇವನ ಬಳಿಗೆ ಹೋಗಿ ಹೇಳಿದನು:

"ಪುರುಷಶ್ರೇಷ್ಠನೇ! ಮಹಾಬಾಹುವೇ! ಅಚ್ಯುತನೇ! ನಿನ್ನನ್ನು ಪಡೆದು ದೇವಕೀದೇವಿಯು ಉತ್ತಮಸಂತಾನವತಿಯಾದಳು. ನಾನು ನಿನಗೆ ಯಾವ ಕಾರ್ಯವನ್ನು ಹೇಳುವೆನೋ ಅದನ್ನು ನೀನಿಲ್ಲಿ ಮಾಡಬೇಕು. ನಿನ್ನ ಪ್ರಭಾವದಿಂದ ಸಂಪಾದಿಸಿದ ಭೋಗಗಳನ್ನೇ ನಾವೀಗ ಉಪಭೋಗಿಸುತ್ತಿದ್ದೇವೆ. ಪರಾಕ್ರಮದಿಂದಲೂ ಮತ್ತು ಬುದ್ಧಿಚಾತುರ್ಯದಿಂದಲೂ ನೀನೇ ಈ ಭೂಮಂಡಲವನ್ನು ಜಯಿಸಿರುವೆ. ನೀನೇ ನನಗೆ ಪರಮಗುರುವಾಗಿರುವೆ. ಆದುದರಿಂದ ನೀನೇ ಈ ಅಶ್ವಮೇಧಯಜ್ಞಕ್ಕೆ ದೀಕ್ಷಿತನಾಗು. ನೀನು ಯಾಜಮಾನ್ಯವನ್ನು ವಹಿಸಿ ಈ ಮಹಾಯಾಗವನ್ನು ಮಾಡಿದರೆ ನಾನು ಪಾಪರಹಿತನಾಗುತ್ತೇನೆ.

ತ್ವಂ ಹಿ ಯಜ್ಞೋಽಕ್ಷರಃ ಸರ್ವಸ್ತ್ವಂ ಧರ್ಮಸ್ತ್ವಂ ಪ್ರಜಾಪತಿಃ।
ತ್ವಂ ಗತಿಃ ಸರ್ವಭೂತಾನಾಮಿತಿ ಮೇ ನಿಶ್ಚಿತಾ ಮತಿಃ ॥೨೨॥

ನೀನೇ ಯಜ್ಞಸ್ವರೂಪನು. ನೀನೇ ಅಕ್ಷರನು. ನೀನೇ ಸರ್ವಸ್ವರೂಪನು. ಧರ್ಮವೂ ನೀನೇ ಆಗಿರುವೆ. ಪ್ರಜಾಪತಿಯೂ ನೀನೇ. ಸಕಲ ಪ್ರಾಣಿಗಳಿಗೂ ನೀನೇ ಆಶ್ರಯನಾಗಿರುವೆ. ಇದು ನನ್ನ ನಿಶ್ಚಿತವಾದ ಬುದ್ಧಿಯಾಗಿದೆ. (ನಿರ್ಧಾರವಾಗಿದೆ.) ಆದುದರಿಂದ ನೀನೇ ಈ ಯಜ್ಞವನ್ನು ಮಾಡುವುದು ಸಾಧುವಾಗಿದೆ "

ಶ್ರೀಕೃಷ್ಣನು ಹೇಳುತ್ತಾನೆ:

"ಮಹಾಬಾಹುವೇ! ಅರಿಂದಮನೇ! ನಿನ್ನಂತಹವನು ಇಂತಹ ಮಾತುಗಳನ್ನು ಹೇಳುವುದು ಯೋಗ್ಯವಾಗಿಯೇ ಇದೆ. ಆದರೆ

ತ್ವಂ ಗತಿಃ ಸರ್ವಭೂತಾನಾಮಿತಿ ಮೇ ನಿಶ್ಚಿತಾ ಮತಿಃ ॥೨೬॥

ಸಕಲಪ್ರಾಣಿಗಳಿಗೂ ನೀನೇ ಆಶ್ರಯನೆಂಬುದು ನನ್ನ ನಿಶ್ಚಿತವಾದ ಬುದ್ಧಿಯಾಗಿದೆ. (ಅಭಿಪ್ರಾಯವಾಗಿದೆ.)

ತ್ವಂ ಚಾದ್ಯ ಕುರುವೀರಾಣಾಂ ಧರ್ಮೇಣ ಹಿ ವಿರಾಜಸೇ ।
ಗುಣೀಭೂತಾಃ ಸ್ಮ ತೇ ರಾಜಂಸ್ತ್ವಂ ನೋ ರಾಜಾ ಗುರುರ್ಮತಃ॥

ಸಮಸ್ತಕುರುವೀರರಲ್ಲಿ ನೀನೊಬ್ಬನೇ ಧರ್ಮದಿಂದ ಸುಶೋಭಿತನಾಗಿರುವೆ. ನಾವೆಲ್ಲರೂ ನಿನ್ನ ಅನುಯಾಯಿಗಳಾಗಿದ್ದೇವೆ. ಯುಧಿಷ್ಠಿರ! ನೀನು ನಮಗೆ ರಾಜನಾಗಿರುವುದು ಮಾತ್ರವಲ್ಲದೇ ಗುರುವೂ ಆಗಿರುವೆ.

ಯಜಸ್ವ ಮದನುಜ್ಞಾತಃ ಪ್ರಾಪ್ಯ ಏಷ ಕ್ರತುಸ್ತ್ವಯಾ ।
ಯುನಕ್ತು ನೋ ಭವಾನ್ಕಾರ್ಯೇ ಯತ್ರ ವಾಞ್ಛಸಿ ಭಾರತ ॥೨೫॥

ನನ್ನ ಅನುಮತಿಯಂತೆ ನೀನು ಯಜ್ಞವನ್ನು ಮಾಡು. ಈ ಅಶ್ವಮೇಧಯಜ್ಞವನ್ನು ನೀನೇ ಮಾಡಬೇಕು. ನಿನಗೆ ನಮ್ಮಿಂದ ಯಾವ ಕಾರ್ಯವನ್ನು ಮಾಡಿಸಿಕೊಳ್ಳುವ ಇಚ್ಛೆಯಿರುವುದೋ ಆ ಕಾರ್ಯಕ್ಕೆ ನಮ್ಮನ್ನು ನಿಯೋಜಿಸು.

ಅನಘನೇ! ನರೇಶ್ವರನೇ! ನೀನು ಹೇಳಿದ ಕಾರ್ಯಗಳೆಲ್ಲವನ್ನೂ ಮಾಡುವೆನೆಂದು ನಾನು ನಿನಗೆ ಸತ್ಯಪ್ರತಿಜ್ಞೆಯನ್ನು ಮಾಡಿಕೊಡುತ್ತೇನೆ. ನೀನು ಯಜ್ಞಮಾಡಿದರೆ ಭೀಮಾರ್ಜುನ ನಕುಲ-ಸಹದೇವರೂ ಯಜ್ಞ

ವನ್ನು ಮಾಡಿದಂತಾಗುತ್ತದೆ. ಅವರೂ ಯಜ್ಞದ ಫಲವನ್ನು ಪಡೆದುಕೊಳ್ಳುತ್ತಾರೆ. ಆದುದರಿಂದ ಅಶ್ವಮೇಧಯಾಗವನ್ನು ಈ ಕೂಡಲೇ ಪ್ರಾರಂಭಿಸು.”

೭೧ನೆಯ ಅಧ್ಯಾಯವು ಮುಗಿಯಿತು.

೩೦ನೆಯ ಸಂಪುಟವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು॥
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್॥
ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತುತೇ॥

ಶ್ರೀಕೃಷ್ಣಾರ್ಪಣಮಸ್ತು

ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.